


ಸಿಂಗಾರ

ಶ್ರೀ ಕೆ. ಸಿಂಗಾರಿಗೌಡ ಗೌರವಗ್ರಂಥ



ಸಿಂಗಾರ

ಶ್ರೀ ಕೆ ಸಿಂಗಾರಿಗೌಡ ಅಭಿನಂದನ ಗ್ರಂಥ

ಸಂಪಾದನ ಸಮಿತಿ

ಪ್ರಧಾನ ಸಂಪಾದಕರು

ಶ್ರೀ ಕೆ. ವಿ. ಶಂಕರಗೌಡ

ಸಂಪಾದಕ

ಶ್ರೀ ಹ. ಕ. ರಾಜೇಗೌಡ

ಸದಸ್ಯರು

ಡಾ : ದೇ. ಜವರೇಗೌಡ

ಡಾ : ಹಾ. ಮಾ. ನಾಯಕ

ಡಾ : ಜೀ. ಶಂ. ಪರಮಶಿವಯ್ಯ

ಶ್ರೀ ಪಿ. ಎಸ್. ಜವರಪ್ಪಗೌಡ

ಶ್ರೀ ಕೆ. ಸಿಂಗಾರಿಗೌಡ ಅಭಿನಂದನ ಗ್ರಂಥ

ಸಿಂಗಾರ

ಸಂಪಾದಕ

ಹ. ಕ. ರಾಜೇಗೌಡ

ಪ್ರಕಾಶಕರು

ಶ್ರೀ ಕೆ. ಸಿಂಗಾರಿಗೌಡ ಅಭಿನಂದನ ಸಮಿತಿ

ಮಂಡ್ಯ

SINGARA : A Felicitation Volume, Presented to Sri K. Singari Gowda, The first chairman of Mandya Zilla parishat on his 70th birth day. Editor H. K. Raje Gowda Institute of Kannada Studies Manasa Gangothri Mysore – 570 006. Published by Sri K. Singari Gowda Felicitation Committee Mandya. First Edition 1988. pp. xvi + 520 Price Rs. 100–00.

ಬೆಲೆ : ಒಂದು ನೂರು ರೂಪಾಯಿ

ಮುದ್ರಕರು :
ಶ್ರೀ ವಿಾರಾ ಪ್ರಿಂಟರ್ಸ್, ಶಿವರಾಂಪೇಟೆ, ಮೈಸೂರು–570001

ಪ್ರಧಾನ ಸಂಪಾದಕರ ಮಾತು

ಸನ್ಮಿತ್ರರಾದ ಶ್ರೀ ಕೆ. ಸಿಂಗಾರಿಗೌಡರ ನಿಕಟ ಸಂಪರ್ಕ ನನಗೆ ಲಭಿಸಿದ್ದು 1948 ರಲ್ಲಿ. ಅಲ್ಲಿಂದೀಚೆಗೆ ಆ ನಿಕಟ ಸಂಪರ್ಕದಲ್ಲಿ ಯಾವ ಕೊರತೆಯೂ ಕಂಡು ಬಂದಿಲ್ಲ. ನನ್ನ ರಾಜಕೀಯ ಹಾಗೂ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ಸಹಾಯ, ಸಹಕಾರ ಮಾತ್ರವಲ್ಲ ವಿಷಮ ಪರಿಸ್ಥಿತಿಯಲ್ಲಿ ಸೂಕ್ತ ಮಾರ್ಗ ನಿರ್ದೇಶನ ಮಾಡಿ ಕಾವೇರಿದ್ದ ನನ್ನ ಜೀವನದಲ್ಲಿ ತಂಪನ್ನೆರೆದ ನೈಜ ಮಿತ್ರರಾಗಿ ಇಲ್ಲಿಯವರೆಗೂ ನಡೆದು ಕೊಂಡು ಬಂದಿದ್ದಾರೆ, ನೊಂದಾಗ ಸಂತೈಸಿದ್ದಾರೆ. ನಲಿವಿದ್ದಾಗ ಮತ್ಸರ ವಿದೂರರಾಗಿ ಆ ನನ್ನ ನಲಿವಿಗೆ ಮತ್ತಷ್ಟು ಮೆರಗು ನೀಡಿದ್ದಾರೆ, ಆದರೂ ಅದನ್ನು ಎತ್ತಿ ತೋರಿಸಿಕೊಳ್ಳುವ ಪ್ರವೃತ್ತಿಯಲ್ಲಿ ನಿರ್ಲಿಪ್ತರಂತೆ ಕಂಡು ಬಂದರೂ, ಅಂತ ರಾತ್ಮದಲ್ಲಿ ಪ್ರವರ್ತಕರು.

ಅವರ ರಾಜಕೀಯ ಜೀವನ ಹಾಗೂ ಸಮಾಜಸೇವಾ ಕಾರ್ಯದಲ್ಲಿ ಅಬ್ಬರಾತಿಶಯಗಳು ಪ್ರದರ್ಶನಗೊಂಡಿಲ್ಲ. ಗುಪ್ತಗಾಮಿಯಂತೆ, ಪ್ರಶಾಂತವಾಗಿ ಸಾಗುವ ಸಲಿಲ ತೀರ್ಥದಂತೆ ಹರಿದು ಬಂದಿದೆ. ತೋರಿಕೆಯಿಂದ ದೂರವಿರುವ ಪ್ರವೃತ್ತಿ. ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ಕುಗ್ಗದೆ ಪ್ರಶಾಂತವಾಗಿ ತಮ್ಮ ಕರ್ತವ್ಯ ವನ್ನು ಜನ ಮೆಚ್ಚುವ ರೀತಿಯಲ್ಲಿ ನಡೆಸಿಕೊಂಡು ಬಂದಿರುವ ವ್ಯಕ್ತಿತ್ವ ಅವರದು. ನನ್ನೆಲ್ಲಾ ಸಾಹಸಕೃತ್ಯಗಳಲ್ಲಿಯೂ, ಅವರು ಸದಾ ಶ್ರೀ ರಕ್ಷೆಯಾಗಿ ನಿಂತು ಅವುಗಳ ಗೆಲುವಿಗೆ ಬಹುಮಟ್ಟಿಗೆ ಕಾರಣವಾಗಿದ್ದಾರೆ.

ನಿರಹಂಕಾರ, ನಿರ್ಮಾತ್ಸರ, ನಿರ್ವಿಕಲ್ಪಬುದ್ಧಿ, ನಿಶ್ಚಲ ಮನೋಧರ್ಮ ಅವರ ಹುಟ್ಟುಗುಣ, ಅವರನ್ನು ಮಿತ್ರರೆನ್ನುವುದಕ್ಕಿಂತ ಕಿರಿಯ ಸೋದರರೆಂದೇ ಹೆಸರಿಸ ಬೇಕಾಗಿದೆ. ಹಿರಿಯ ಸೋದರನಿಗೆ ಸಲ್ಲಬೇಕಾದ ಗೌರವ ಮಾನ್ಯತೆಗಳಿಗೆ ಅವರಿಂದ ಎಂದು ಚ್ಯುತಿಬಂದಿಲ್ಲ. ಇಂತಹ ಉತ್ತಮ ವ್ಯಕ್ತಿಯೋರ್ವರು ಸದಾ ನನ್ನ ಬೆಂಬಲಕ್ಕಿದ್ದುದರಿಂದಲೇ ನನ್ನ ಜೀವನ ತಕ್ಕಮಟ್ಟಿಗೆ ಸಾರ್ಥಕತೆಯನ್ನು ಕಂಡಿದೆಯೆಂದರೆ ಉತ್ಪ್ರೇಕ್ಷೆಯ ಮಾತಾಗಲಾರದು. ಅವರಿಗೆ ಬಿರುದು—ಬಿನ್ನಾಣ ಬೇಕಾಗಿಲ್ಲ—ಎಲೆಮರೆ ಕಾಯಿಯಂತೆ ಇದ್ದು ಫಲಭರಿತ ಹಣ್ಣಾಗಿ ತಮ್ಮ ಪರಿಸರದ ಎಲ್ಲರಿಗೂ ಅದರ ಸವಿಯನ್ನು ಹಂಚುವ ಕಾರ್ಯದಲ್ಲಿ ಕೃತಕೃತ್ಯರಾಗಿದ್ದಾರೆ.

ಇಂತಹ ಉತ್ತಮ ಮಿತ್ರರ 70 ನೆಯ ಜನ್ಮ ದಿನೋತ್ಸವವನ್ನು ಅವರ ಹುಟ್ಟುಹಬ್ಬವೆಂದು ಆಚರಿಸಬೇಕೆಂಬ ಸಲಹೆ ನನ್ನ ಮತ್ತೊಬ್ಬ ಸನ್ಮಿತ್ರರಾದ ಶ್ರೀ ಪಿ. ಎನ್. ಜವರಪ್ಪಗೌಡರಿಂದ ಬಂದಾಗ ನನಗೆ ಅತ್ಯಂತ ಸಂತೋಷವಾಯಿತು. ನನ್ನ

ಮನಸ್ಸಿನಲ್ಲಿಯೂ ಇದ್ದ ಸುಪ್ತ ಬಯಕೆ ಅವರ ಸೂಚನೆಯಿಂದ ಸುವ್ಯಕ್ತವಾಗುವ ಸ್ಥಿತಿ ಸಂಪ್ರಾಪ್ತವಾಯಿತು. ತತ್ಪರಿಣಾಮವಾಗಿ ಅವರ ಹುಟ್ಟು ಹಬ್ಬದ ನೆನಪಿಗಾಗಿ ಉತ್ತಮ ಲೇಖನಗಳನ್ನೊಳಗೊಂಡ ಒಂದು ಅಭಿನಂದನಾ ಗ್ರಂಥವನ್ನು ಹೊರ ತರುವುದಕ್ಕಾಗಿ, ಸ್ವಾಗತ ಸಮಿತಿಯ ಅಧ್ಯಕ್ಷನಾಗಲು ಒಪ್ಪಿಕೊಂಡೆ. ಸುದೈವೋ ಎಂಬಂತೆ ಅನೇಕ ಸನ್ಮಿತ್ರರಿಂದ ಅಭಿನಂದನಾ ಗ್ರಂಥಕ್ಕೆ ಬೇಕಾದ ಮೊಬಲಗೂ ಸಂಗ್ರಹವಾಯಿತು.

ಆದರೆ ಅಂತಹ ಗ್ರಂಥವನ್ನು ಹೊರತರಲು ನನಗೆ ಸಹಾಯ ಮಾಡುವ ಸಂಪಾದಕರ ಮಂಡಲಿಯೊಂದು ಬೇಕಷ್ಟೆ! ಅಂತೆಯೇ ವಿವಿಧ ಲೇಖನಗಳನ್ನು ಸಂಗ್ರಹಿಸಿ ಗ್ರಂಥವನ್ನು ಸಂಪಾದಿಸುವ ಜವಾಬ್ದಾರಿಯನ್ನು ಹೊರುವ ಕ್ರಿಯಾಶೀಲ ವ್ಯಕ್ತಿಯೊಬ್ಬರು ಬೇಕಷ್ಟೆ, ಅಂತಹ ಕ್ರಿಯಾಶೀಲವ್ಯಕ್ತಿಯನ್ನು ನಾನು ಶ್ರೀ ಹ. ಕ. ರಾಜೇಗೌಡರ ವ್ಯಕ್ತಿತ್ವದಲ್ಲಿ ಗುರುತಿಸಿದೆ. ಅವರು ಇಂತಹ ಕಾರ್ಯದಲ್ಲಿ ಬಹಳ ಹೆಸರುಗಳಿಸಿರತಕ್ಕಂತಹ ವ್ಯಕ್ತಿಯಾಗಿದ್ದಾರೆ. ಅವರು ಮತ್ತು ಶ್ರೀ ಪಿ. ಎನ್. ಜವರಪ್ಪಗೌಡರೊಡನೆ ಸಮಾಲೋಚಿಸಿ ಸಂಪಾದಕ ಮಂಡಲಿಯೊಂದನ್ನ ರಚಿಸು ವಂತಾಯಿತು. ಅದರಲ್ಲಿ ಸಾಹಿತ್ಯಲೋಕದ ಅನೇಕ ಗಣ್ಯ ಮಹನೀಯರು ಸದಸ್ಯರಾಗಲು ಒಪ್ಪಿದರು, ಶ್ರೀ ಹ. ಕ. ರಾಜೇಗೌಡರ ಪರಿಶ್ರಮದಿಂದ ಮತ್ತು ಸಂಪಾದಕ ಮಂಡಲಿಯ ಇನ್ನಿತರ ಮಿತ್ರರ ಸಂದರ್ಭೋಚಿತ ಬೆಂಬಲದಿಂದ ಅತಿ ಶೀಘ್ರವಾಗಿ ಉತ್ತಮ ಲೇಖನಗಳು ದೊರಕಿದರೂ, ಹುಟ್ಟು ಹಬ್ಬದ ದಿನಾಚರಣೆಯ ವೇಳೆಗೆ ಸಾಕಷ್ಟು ನಿಧಿ ಸಂಗ್ರಹವಾಗದುದರ ಪ್ರಯುಕ್ತ ಅವರ ಹುಟ್ಟು ಹಬ್ಬದಂದು. ಅಭಿನಂದನಾ ಗ್ರಂಥವನ್ನು ಹೊರತರಲಾಗದುದಕ್ಕೆ ನನ್ನ ಮನಸ್ಸು ತುಂಬಾ ನೊಂದಿದೆ. ಆದರೂ ಹುಟ್ಟಿದ ಹಬ್ಬವನ್ನು ಆಚರಿಸುವ ದಿನ ಮುಖ್ಯವಲ್ಲ—ಶ್ರೀ ಸಿಂಗಾರಿಗೌಡರ ಜೀವನ ಪರಿಚಯ ಮತ್ತು ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುವ ಲೇಖನ ಗಳನ್ನೊಳಗೊಂಡ ಅಭಿನಂದನಗ್ರಂಥವನ್ನು ಹೊರತರುವುದು ಮುಖ್ಯ ವಿಷಯ. ಸುದೈವದಿಂದ ಅನೇಕ ಅಡೆತಡೆಗಳನ್ನು ದಾಟಿ ಆ ಗ್ರಂಥ ಹೊರಬರುವಂತೆ ಮಾಡಿ ದ್ದಾರೆ ಶ್ರೀ ಹ. ಕ. ರಾಜೇಗೌಡರು. ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ.

ಲೇಖನಗಳನ್ನು ಕೊಟ್ಟು ಉಪಕರಿಸಿದ ಎಲ್ಲಾ ಮಹನೀಯರಿಗೂ ನಾನು ಕೃತಜ್ಞತೆ ಯಿಂದ ಸ್ಮರಿಸಿಕೊಳ್ಳಬೇಕಾಗಿದೆ. ಗ್ರಂಥವನು ಅಂದವಾಗಿ ಮುದ್ರಿಸಿದ ಮೈಸೂರಿನ ಶ್ರೀಮೀರಾ ಪ್ರಿಂಟರ್ಸ್‌ನ ಮಾಲೀಕರ ನೆರವನ್ನು ನಾನು ಮರೆಯುವಂತಿಲ್ಲ. ಮೇಲಾಗಿ ಈ ಜನ್ಮದಿನಾಚರಣೆಗೆ ಒಪ್ಪಿಗೆಯನ್ನಿತ್ತ ಸನ್ಮಿತ್ರ ಕೆ. ಸಿಂಗಾರಿಗೌಡರಿಗೂ ನನ್ನ ವಂದನೆಗಳು ಸಲ್ಲುತ್ತವೆ.

ಮಂಡ್ಯ
26–8–1988

ಕೆ. ವಿ. ಶಂಕರಗೌಡ

ಸಂಪಾದಕನ ಮಾತು

ಕನ್ನಡ ನಾಡಿನ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಇತಿಹಾಸದಲ್ಲಿ ಮಂಡ್ಯ ಜಿಲ್ಲೆಯದು ಅತ್ಯಂತ ವಿಶಿಷ್ಟವೂ ಮಹತ್ವಪೂರ್ಣವೂ ಆದ ಸ್ಥಾನವೆಂದು ಹೇಳಬಹುದು. ಯಾವುದೇ ಒಂದು ವೈಶಿಷ್ಟ್ಯವನ್ನು ಕುರಿತು ಹೇಳುವಾಗಲೆಲ್ಲಾ ನೆಲದ ಗುಣ ಎಂಬ ಮಾತನ್ನು ಹೇಳುವುದುಂಟು. ಅಂತಹ ಒಂದು ಗುಣವನ್ನು ಈ ಭಾಗದ ನೆಲ ಹೊಂದಿದೆ ಎಂಬುದನ್ನು ಇಲ್ಲಿನ ಇತಿಹಾಸದ ಅಧ್ಯಯನದಿಂದ ಕಾಣಬಹುದು. 1939 ರಷ್ಟು ಈಚೆಗೆ ಈ ಪ್ರದೇಶ ಒಂದು ಜಿಲ್ಲೆಯೆಂಬ ಆಧುನಿಕ ಆಡಳಿತ ಘಟಕಕ್ಕೆ ಒಳಪಟ್ಟಿತು ಎಂದು ಹೇಳುವವರು ಸರಿಸುಮಾರು ಮೂರನೇ ಶತಮಾನದಿಂದ ಟಿಪ್ಪುಸುಲ್ತಾನ್ ಇಂಗ್ಲಿಷರಿಗೆ ಸೋಲುವವರೆಗೆ ಈ ಭಾಗ ಅತ್ಯಂತ ಪ್ರಮುಖವಾದ ಆಡಳಿತ ಘಟಕವಾಗಿತ್ತೆಂಬುದನ್ನು ಮರೆಯಬಾರದು. ತಲಕಾಡಿನ ಗಂಗರಿಗೆ ಚಿಕ್ಕಗಂಗವಾಡಿ ಎಂಬ ಹೆಸರಿನಿಂದ ಈ ಪ್ರದೇಶ ಆಡಳಿತ ಕೇಂದ್ರವಾಗಿತ್ತು. ಈ ಚಿಕ್ಕಗಂಗವಾಡಿ ಲೋಕಪಾವನಿ ನದಿಯ ದಡದಲ್ಲಿದೆ. ಈಗ ಪಾಂಡವಪುರ ತಾಲ್ಲೂಕಿನಲ್ಲಿರುವ ತೊಣ್ಣೂರು ಹೊಯ್ಸಳರ ಕಾಲದಲ್ಲಿ ತೊಂಡನೂರೆಂದು ಅವರ ಉಪರಾಜಧಾನಿಯಾಗಿತ್ತು. ಇತಿಹಾಸ ಪ್ರಸಿದ್ಧ ಹೊಯ್ಸಳ ವಿಷ್ಣುವರ್ಧನ ಆಗ ಯುವರಾಜನಾಗಿದ್ದು ತೊಂಡನೂರಿನಿಂದ ಆಳುತ್ತಿದ್ದ. ವಿಜಯನಗರದ ಕಾಲದಲ್ಲಿ ನಾಗಮಂಗಲ ಈ ಭಾಗದ ಆಡಳಿತ ಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತು. ಇಲ್ಲಿನ ತಿಮ್ಮಣ್ಣ ಮುಂದೆ ವಿಜಯನಗರದ ಪ್ರಧಾನರಲ್ಲಿ ಒಬ್ಬನಾಗಿ ಪ್ರಸಿದ್ಧ ಚಕ್ರವರ್ತಿ ಕೃಷ್ಣದೇವರಾಯನಿಗೆ ಹತ್ತಿರದವನಾಗಿದ್ದನು. ಮೈಸೂರು ಅರಸರ ಕಾಲದಲ್ಲಿ ಈ ಭಾಗದ ಶ್ರೀರಂಗಪಟ್ಟಣವೇ ರಾಜಧಾನಿಯಾಗಿತ್ತು. 1799ರಲ್ಲಿ ಇದು ಮೈಸೂರಿಗೆ ಸ್ಥಳಾಂತರಗೊಂಡಿತು.

ಧಾರ್ಮಿಕವಾಗಿ ಈ ಪ್ರದೇಶ ಅತ್ಯಂತ ಪ್ರಾಚೀನವೂ ಮಹತ್ವವೂ ಆದ ನೆಲೆಗಳನ್ನೊಳಗೊಂಡಿದೆ. ಕ್ರಿಸ್ತ ಪೂರ್ವದಿಂದಲೂ ಭಾರತದ ಮತ್ತು ಏಷ್ಯಾದ ಪ್ರಮುಖ ಧರ್ಮವಾಗಿದ್ದ ಶೈವ ಧರ್ಮದ ನೆಲೆ ಶ್ರೀ ಆದಿಚುಂಚನಗಿರಿ ಈ ಪ್ರದೇಶದಲ್ಲಿದೆ ಶ್ರವಣಬೆಳಗೊಳದಲ್ಲಿ ಜಗದ್ವಿಖ್ಯಾತ ಗೊಮ್ಮಟಮೂರ್ತಿಯನ್ನು ಕೆತ್ತಿಸಿ ಜೈನಧರ್ಮದ ಉನ್ನತಿಗೆ ಕಾರಣನಾದ ಚಾವುಂಡರಾಯ ಇಲ್ಲಿನವನು. ಈ ಭಾಗದ ಚಿಕ್ಕಗಂಗವಾಡಿ, ಕಂಬದಹಳ್ಳಿ, ಹಳೇಬೀಡು ಪ್ರಸಿದ್ಧ ಜೈನಕ್ಷೇತ್ರಗಳು. ಶ್ರೀ ವೈಷ್ಣವ ಧರ್ಮ ಸಂಸ್ಥಾಪಕ ಶ್ರೀ ರಾಮಾನುಜಾಚಾರ್ಯ ಇದ್ದುದು ಈ ಪ್ರದೇಶದ ತೊಣ್ಣೂರಿನಲ್ಲಿ.

ಇಲ್ಲಿನ ಮೇಲುಕೋಟೆ ಇಂದಿಗೂ ಶ್ರೀ ವೈಷ್ಣವರ ಧಾರ್ಮಿಕ ನೆಲೆಯಾಗಿದೆ. ಧಾರ್ಮಿಕ ಪ್ರಾಮುಖ್ಯತೆಯ ಮೈಲಾರಲಿಂಗ, ಮಂಟೇಸ್ವಾಮಿ ಕ್ಷೇತ್ರಗಳು ಈ ಭಾಗದಲ್ಲಿ ಅಪಾರ ವಾಗಿವೆ. ಧಾರ್ಮಿಕ ವೈವಿಧ್ಯತೆ ಮತ್ತು ಸಮನ್ವಯ ದೃಷ್ಟಿಯಿಂದ ಇದು ಹೆಸರಾಂತ ನೆಲವಾಗಿದೆ.

ಅತ್ಯಂತ ಪ್ರಾಚೀನ ಕಾಲದಿಂದಲೂ ಈ ನೆಲ ಅನೇಕ ಶೂರರನ್ನು, ರಾಜಕೀಯ ಮುತ್ಸದ್ದಿಗಳನ್ನು, ಕವಿ, ಕಲಾವಿದರನ್ನು ಈ ನಾಡಿಗೆ ಕಾಣಿಕೆಯಾಗಿ ನೀಡಿದೆ. ಗಂಗದೊರೆ ಮುಮ್ಮಡಿ ಮಾರಸಿಂಹನ ಪ್ರಧಾನಿ ಚಾವುಂಡರಾಯ ಇಲ್ಲಿಯವನು. ಹೊಯ್ಸಳರ ಸುಪ್ರಸಿದ್ಧ ಪ್ರಧಾನಿ ಗಂಗರಾಜ ಮತ್ತು ದಂಡನಾಯಕ ಮರಿಯಣ್ಣ ಈ ಭಾಗದವರು. ವಿಜಯನಗರದ ಕೃಷ್ಣದೇವರಾಯನ ಅಷ್ಟಪ್ರಧಾನರಲ್ಲಿ ಒಬ್ಬನಾದ ನಾಗಮಂಗಲದ ತಿಮ್ಮಣ್ಣ ಇಲ್ಲಿನವನು. ಈತ ಶ್ರೀರಂಗಪಟ್ಟಣ ಮತ್ತು ಮೇಲುಕೋಟೆಗಳನ್ನು ನಿರ್ಮಿಸಿ ದವನು. ತಿಮ್ಮಣ್ಣನ ತಮ್ಮ ದೇವರಾಜ ಸುಮಾರು ಹದಿನಾಲ್ಕನೆಯ ಶತಮಾನದಲ್ಲಿ ಕಾವೇರಿ ನದಿಗೆ ಈಗಿನ ಕನ್ನಂಬಾಡಿಯ ಹತ್ತಿರ ಅಣೆಕಟ್ಟೆ ಕಟ್ಟಿಸಿ ಮಂಡ್ಯ ಜಿಲ್ಲೆಗೆ ನೀರು ಹರಿಸಲು ಯತ್ನಿಸಿದವನು. ಈತ ಮುಂದೆ ಮಂಗಳೂರು ಪ್ರಾಂತದ ವಿಜಯನಗರದ ಅಧಿಪತಿಯಾಗಿ ಆಳಿದ. ವಿಜಯನಗರದ ಅವನತಿಯನಂತರ 1610ರಿಂದ ಮೈಸೂರು ಅರಸರು ರಣಧೀರ ಕಂಠೀರವ, ಚಿಕ್ಕದೇವರಾಜ ಮುಂತಾದವರು ಆಳಿದರು. 1799ರಲ್ಲಿ ಟಿಪ್ಪುವಿನ ಪತನಾನಂತರ ರಾಜಧಾನಿ ಮೈಸೂರಿಗೆ ಬದಲಾವಣೆ ಹೊಂದಿದ ಮೇಲೂ ಶ್ರೀರಂಗಪಟ್ಟಣ ಪಾಶ್ಚಿಮಾತ್ಯರ ಆಡಳಿತನೆಲೆಯಾಗಿದ್ದಿತು.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದಂತೆ ಆಗಿನ ಮೈಸೂರು ರಾಜ್ಯದಲ್ಲಿ ಈ ಹೋರಾಟಕ್ಕೆ ಚಾಲನೆ ದೊರೆತುದು ಮೊಟ್ಟ ಮೊದಲಿಗೆ ಮಂಡ್ಯಜಿಲ್ಲೆಯಿಂದಲೆ. 1938ರಲ್ಲಿ ಮಂಡ್ಯಜಿಲ್ಲೆಯ ಮದ್ದೂರಿನ ಶಿವಪುರದಲ್ಲಿ ನಡೆದ ರಾಷ್ಟ್ರಕೂಟ ಮತ್ತು ಧ್ವಜ ಸತ್ಯಾಗ್ರಹಗಳು ಭಾರತದ ದಾಸ್ಯ ವಿಮೋಚನೆಯೊಂದಿಗೆ ಮೈಸೂರು ಮುಕ್ತ ವಾಗಲು ನಾಂದಿಯಾಯಿತು ಈ ಜಿಲ್ಲೆಯಲ್ಲಿ ಸಾವಿರಾರುಮಂದಿ ಸ್ವಾತಂತ್ರ್ಯ ಸಂಗ್ರಾಮ ದಲ್ಲಿ ಪಾಲುಗೊಂಡವರ ರೋಚಕ ಸಂಗತಿಗಳು ದೊರೆಯುತ್ತವೆ. ಅನೇಕರು ಸರ್ಕಾರ ದಿಂದ ಗಡೀಪಾರು ಶಿಕ್ಷೆಗೆ ಗುರಿಯಾದವರಿದ್ದಾರೆ. ತಮ್ಮ ಅದಮ್ಯ ರಾಷ್ಟ್ರಪ್ರೇಮದಿಂದ ಈ ಚಳುವಳಿಯಲ್ಲಿ ಧುಮುಕಿ ಹುತಾತ್ಮರಾದವರು ಅನೇಕರಿದ್ದಾರೆ. 1947 ಆಗಸ್ಟ್ 15 ರಂದು ಸ್ವಾತಂತ್ರ್ಯ ದೊರೆತ ಮೇಲೆಯೂ ರಾಜಕೀಯದಲ್ಲಿ ಮಂಡ್ಯಜಿಲ್ಲೆ ಪ್ರಾಮು ಖ್ಯತೆಯನ್ನು ಪಡೆದಿತ್ತು ಮೈಸೂರು ರಾಜ್ಯದ ಆಡಳಿತದ ಏರು ಪೇರುಗಳು ಮಂಡ್ಯ ಜಿಲ್ಲೆಯನ್ನು ಅವಲಂಬಿಸಿದ್ದ ಕಾಲವೊಂದಿತ್ತು. ಸಾಹುಕಾರ್ ಚನ್ನಯ್ಯ,ಟಿ. ಮರಿಯಪ್ಪ ಕೆ. ವಿ. ಶಂಕರಗೌಡ, ಎಚ್. ಕೆ. ವೀರಣ್ಣಗೌಡ ಮುಂತಾದ ಅನೇಕರು ಈ ರಾಜ್ಯದ ರಾಜಕೀಯವನ್ನು ಮಹತ್ವದ್ದನ್ನಾಗಿ ರೂಪಿಸುವುದವರು; ತಮ್ಮ ಶಕ್ತಿಯನ್ನು ವ್ಯಯಿಸಿ ದವರು. ಈಗ ಈ ಸಂಗತಿಗಳೆಲ್ಲ ಇತಿಹಾಸದ ಕಥೆಗಳಾಗಿ ಪರಿಣಮಿಸಿವೆ. ಸ್ವಾತಂತ್ರ್ಯ

ಸಮರದ ಕಾಲದಲ್ಲಿ ಯುವಕರಾಗಿದ್ದು ಅದರಲ್ಲಿ ಸಕ್ರಿಯವಾಗಿ ಪಾಲುಗೊಂಡ ಸರ್ವಶ್ರೀಗಳಾದ ಕೆ. ವಿ. ಶಂಕರಗೌಡ, ಕೆ. ಸಿಂಗಾರಿಗೌಡ, ಕೆ. ಪುಟ್ಟಸ್ವಾಮಿ, ಎಸ್. ಎಂ. ಲಿಂಗಪ್ಪ, ಬಿ. ವೈ. ನೀಲೇಗೌಡ, ಎ. ಜಿ. ಬಂದೀಗೌಡ, ಎಚ್. ಕೆ. ವೀರಣ್ಣಗೌಡ ಮುಂತಾದವರು ಮುಂದೆ ರಾಜಕೀಯದಲ್ಲೂ ಪ್ರವೇಶಿಸಿ ಅದಕ್ಕೊಂದು ಘನತೆಯನ್ನು ತಂದು ಕೊಟ್ಟವರು. ಹೀಗೆ ಕ್ರಿ. ಶ. 350 ರಿಂದ ಇಲ್ಲಿಯವರೆಗೆ ಈ ನೆಲ ಅನೇಕಾನೇಕ ರಾಜಕೀಯ ಪಟುಗಳನ್ನು ಈ ನಾಡಿಗೆ ನೀಡುತ್ತಾ ಬಂದಿದೆ.

ಮಂಡ್ಯಜಿಲ್ಲೆಯ ಧೀಮಂತ ರಾಜಕಾರಣಿಗಳಲ್ಲಿ ಶ್ರೀ ಕೆ. ಸಿಂಗಾರಿಗೌಡರು ಒಬ್ಬ ಪ್ರಮುಖರು. ಸಿಂಗಾರಿಗೌಡರ ತಂದೆ ಕರಡಹಳ್ಳಿ ಕೃಷ್ಣಪ್ಪಗೌಡರು ಶ್ರೀಮಂತಿಕೆ ಯಲ್ಲಿ ಹುಟ್ಟಿ ಬೆಳೆದು ರಾಜರಿಗೆ ನಿಷ್ಠರಾಗಿರಬೇಕಾದವರು. ಇವರು ಈ ನಾಡಿನ ದಾಸ್ಯವಿಮುಕ್ತಿಯ ಮುಂಚೂಣಿಯ ಹೋರಾಟಗಾರರಾದುದು ಒಂದು ಮಹತ್ವದ ಸಂಗತಿ. ಕೃಷ್ಣಪ್ಪಗೌಡರ ಹಾವಳಿಯನ್ನು ತಡೆಯಲಾರದ ಸರ್ಕಾರ ಅವರನ್ನು ಗಡೀಪಾರು ಮಾಡಿ ಆಜ್ಞೆ ಹೊರಡಿಸಿದ್ದುಂಟು. ಇಂತಹ ಕ್ರಾಂತಿಕಾರಕ ಹೋರಾಟ ಗಾರರ ಮಗ ಸಿಂಗಾರಿಗೌಡರು. ತಂದೆಗೂ ಮಗನಿಗೂ ಎರಡು ಧ್ರುವ. ತಂದೆ ಉರಿಯುವ ಬೆಂಕಿ, ಮಗ ಕಲ್ಲಿದ್ದಲ ಬೆಂಕಿ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಂದೆಯೇ ನಾಯಕರಾಗಿದ್ದಾಗ ಮಾತಿಗೆ ಬರುತ್ತಿದ್ದ ಎಲ್ಲಾ ರೀತಿಯ ಹೋರಾಟಗಾರರಿಂದ ಕಲಿತ ಸಿಂಗಾರಿಗೌಡರು ಅತ್ಯಂತ ಗಂಭೀರವಾದ ರಾಜಕಾರಣಿ. ತಾಲ್ಲೂಕು, ಜಿಲ್ಲೆ, ರಾಜ್ಯಮಟ್ಟದ ರಾಜಕಾರಣಿಯಾಗಿ ಶ್ರೀ ಗೌಡರು ತಮ್ಮತನವನ್ನು ಉಳಿಸಿಕೊಂಡವರು. ರಾಜಕೀಯ ಕದಡಿ ರಾಡಿಯಾದಾಗ ತಮ್ಮ ಪಾಡಿಗೆ ತಾವು ದೂರ ಉಳಿದವರು. ಜನ ನಿಮ್ಮ ಅವಶ್ಯಕತೆಯಿದೆ ಬನ್ನಿ ಎಂದಾಗ ಯಾವುದೇ ಹಮ್ಮು ಬಿಮ್ಮು ತೋರದೆ ಬಂದವರು.

ಕರ್ನಾಟಕ ಸರ್ಕಾರದ ಜನತೆಯ ಕೈಗೆ ಅಧಿಕಾರವನ್ನು ಕೊಡುವ ಯೋಜನೆ ಯಂತೆ ಮಂಡಲ ಪಂಚಾಯಿತಿ, ಜಿಲ್ಲಾಪರಿಷತ್ತುಗಳು ಜಾರಿಗೆ ಬಂದಾಗ ಶ್ರೀ ಕೆ. ಸಿಂಗಾರಿಗೌಡರು ಮಂಡ್ಯ ಜಿಲ್ಲಾ ಪರಿಷತ್ತಿನ ಪ್ರಥಮ ಅಧ್ಯಕ್ಷರಾಗಿ ಆಯ್ಕೆಗೊಂಡರು. ಶ್ರೀ ಗೌಡರು ಅಧ್ಯಕ್ಷರಾದುದು ಎಲ್ಲಾ ಹಿರಿ ಕಿರಿಯ ರಾಜಕಾರಣಿಗಳಿಗೂ ಸಂತೋಷ ವನ್ನು ನೆಮ್ಮದಿಯನ್ನು ನೀಡಿತೆನ್ನಬೇಕು. ಆ ಹಿನ್ನೆಲೆಯಲ್ಲಿ ಹಿರಿಯರಾದ ಶ್ರೀ ಪಿ. ಎಸ್. ಜವರಪ್ಪಗೌಡರಿಂದ ಶ್ರೀ ಕೆ. ಸಿಂಗಾರಿಗೌಡರಿಗೆ ಅಭಿನಂದನೆ ಸಲ್ಲಿಸುವ ಸಲುವಾಗಿ ಪತ್ರವೊಂದು ಬಂದಿತು. ಶ್ರೀ ಗೌಡರ ಅಭಿಮಾನಿಗಳಲ್ಲೊಬ್ಬನಾದ ನಾನೂ ಆ ಸಭೆಗೆ ಹೋಗಿದ್ದೆ. ಹಿರಿಯರಾದ ಶ್ರೀ ಕೆ. ವಿ. ಶಂಕರಗೌಡರ ಅಧ್ಯಕ್ಷತೆಯಲ್ಲಿ ನಡೆದ ಆ ಸಭೆಗೆ ಎರಡು ತಲೆಮಾರಿನ ಅನೇಕರು ಎಲ್ಲ ರಂಗದ ಜನರೂ ಸೇರಿದ್ದರು. ಗೌರವ ಗ್ರಂಥ ವೊಂದನ್ನು ಅರ್ಪಿಸುವುದರ ಮೂಲಕ ಸಿಂಗಾರಿಗೌಡರನ್ನು ಅಭಿನಂದಿಸಲು ತೀರ್ಮಾನಿಸ ಲಾಯಿತು. ಹೊಣೆಯನ್ನು ನನಗೆ ವಹಿಸಲಾಯಿತು.

ಚಿಕ್ಕಂದಿನಿಂದಲೂ ನಾನು ಶ್ರೀ ಕೆ ಸಿಂಗಾರಿಗೌಡರನ್ನು ಅನೇಕ ಕಾರಣಗಳಿಗಾಗಿ ಮೆಚ್ಚಿಕೊಂಡವನು. ನಾನು ಪ್ರೌಢಶಾಲೆಯ ಮೊದಲ ತರಗತಿಯಲ್ಲಿದ್ದಾಗ ನಮ್ಮ ತಾಲ್ಲೂಕಿನ ವಿಧಾನಸಭಾ ಸದಸ್ಯರ ರುಜುವಿನ ಅಗತ್ಯವಿತ್ತು. ನನಗೆ ಕರಡಹಳ್ಳಿ ಸಿಂಗಾರಿಗೌಡರು ನಮ್ಮ ತಾಲ್ಲೂಕಿನ ವಿಧಾನಸಭಾ ಸದಸ್ಯರೆಂದು ತಿಳಿದಿತ್ತೇ ವಿನಹ ಅವರನ್ನು ನಾನು ಕಂಡೇ ಇರಲಿಲ್ಲ. ಸಹಿಯ ಅವಶ್ಯಕತೆಯಿದ್ದ ಅರ್ಜಿಯನ್ನು ಕೈಯಲ್ಲಿ ಹಿಡಿದು ನಮ್ಮ ತಂದೆಯವರ ಸೂಚನೆಯಂತೆ ಕರಡಹಳ್ಳಿಗೆ ಬಸ್ಸು ಹತ್ತಿದೆ. ಗೌಡರ ಮನೆಯ ಹತ್ತಿರ ಹೋದಂತೆಲ್ಲಾ ನಾನು ಸಂಕೋಚದಿಂದ ಹೆದರಿದ್ದೆ. ನಾನಾ ರೀತಿಯ ಜನರು ತಮ್ಮ ತಮ್ಮ ಅಹವಾಲುಗಳೊಂದಿಗೆ ಅಲ್ಲಿ ಕಾದಿದ್ದರು ಕೊಕ್ಕರೆ ಬಿಳೀ ಖಾದಿ ಉಡುಪಿನ ಅಷ್ಟೇ ಸ್ವಚ್ಛ ಬಣ್ಣದ ಎತ್ತರದ ನಿಲುವಿನ, ನಗ ಮುಖದ ಸಿಂಗಾರಿಗೌಡರು ಹೊರಬಂದರು. ಜನ ಅವರನ್ನು ಸುತ್ತುವರಿದರು. ನಾನು ಒಂದು ರೀತಿಯಲ್ಲಿ ದಿಙ್ಮೂಢನಾಗಿ ನಿಂತೆ. ಅವರೊಳಗೆ ನುಗ್ಗಿ ಮಾತನಾಡಿಸುವ ಧೈರ್ಯ ನನಗಿರಲಿಲ್ಲ. ತೆಪ್ಪಗೆ ಊರಿಗೆ ಹೊರಡುವುದೆ ? ಅಪ್ಪ ಬೈದರೊ ? ಹೆಡ್ಮಾಸ್ಟರು ಏನೆನ್ನುವರೊ ? ಇತ್ಯಾದಿ ತುಮುಲದಲ್ಲಿ ಮುಳುಗಿದ್ದೆ. ಇದ್ದಕ್ಕಿದ್ದ ಹಾಗೆ "ಏನಣ್ಣ ನಿಂದೇನು ? ತಾ ಇಲ್ಲಿ" ಎಂಬ ಮಾತು ಕೇಳಿ ಸುತ್ತ ನೋಡಿದೆ. ಕಡೆಗೆ ಕರೆದದ್ದು ನನ್ನನ್ನೇ ಎಂಬ ಅರಿವಾಗಿ ನನ್ನ ಅರ್ಜಿಯನ್ನು ಗೌಡರ ಮುಂದೆ ಹಿಡಿದೆ. ಅವರು ಅದಕ್ಕೆ ಸಹಿಮಾಡಿ ನನ್ನ ಬೆನ್ನು ತಟ್ಟಿ "ಚೆನ್ನಾಗಿ ಓದಬೇಕಣ್ಣ" ಎಂದರು. ಅಂದಿನಿಂದ ಶ್ರೀ ಗೌಡರ ನನ್ನ ಪರಿಚಯ, ಸಂಬಂಧ ಅನೇಕ ಮುಖವಾಗಿ ಬೆಳೆದಿದೆ. ಆದರೆ ಅವರ ಆ ಸೌಜನ್ಯದ ನಡೆ ಇಂದಿಗೂ ಹಾಗೆಯೇ ಇದೆ. ಈ ಗ್ರಂಥಕ್ಕೆ ಮಾಹಿತಿ ಸಂಗ್ರಹಣೆಗೆ ನಾನು ಕರಡಹಳ್ಳಿಗೆ ಇತ್ತೀಚೆಗೆ ಹೋದಾಗ ಸಹ ನನಗೆ ಆ ದಿನದ ನೆನಪು ಹಸುರಾಗಿತ್ತು. ಆ ದೊಡ್ಡತನದ ಕೃತಜ್ಞತೆಗಾಗಿಯೇ ನಾನು ಈ ಗೌರವ ಗ್ರಂಥದ ಹೊಣೆಯನ್ನು ಅತ್ಯಂತ ಹೆಮ್ಮೆ ಮತ್ತು ಸಂತೋಷದಿಂದ ಒಪ್ಪಿ ನಿರ್ವಹಿಸಿದ್ದೇನೆ.

ಗೌರವ ಗ್ರಂಥದ ಜವಾಬ್ದಾರಿಯನ್ನು ವಹಿಸಿಕೊಂಡೆನಾದರೂ ಅದರ ಸ್ವರೂಪ ಹೇಗಿರಬೇಕೆಂಬುದು ನನಗೆ ಸಮಸ್ಯೆಯಾಯಿತು. ಈಗ ಅಭಿನಂದನ ಗ್ರಂಥಗಳ ಸುಗ್ಗಿ ಕನ್ನಡ ಭಾಷೆಗೆ ಸಂಬಂಧಿಸಿದಂತೆ. ಉಪಯುಕ್ತವೂ ಅರ್ಥಪೂರ್ಣವೂ ಆದ ಗ್ರಂಥವೊಂದನ್ನು ಸಿದ್ಧಪಡಿಸುವುದು ತುಂಬಾ ಕಾಲ ತೆಗೆದುಕೊಳ್ಳುವ ಮತ್ತು ಶ್ರಮದ ಕೆಲಸ. ನಾನು ಬೇರೆ ಬೇರೆ ಕೆಲಸಗಳಿಗಾಗಿ ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಕೆಲಸ ಮಾಡುವಾಗಲೆಲ್ಲಾ ಈ ನೆಲದ ವೈವಿಧ್ಯಮಯ ಬದುಕಿನ ಹಲವು ಮುಖಗಳ ಪರಿಚಯವಾಗುತ್ತಿತ್ತು. ನನ್ನ ಮೇಲೆ ಪ್ರಭಾವ ಬೀರಿದ ಅನೇಕ ರಾಜರು, ಮಂತ್ರಿಗಳು, ದಂಡನಾಯಕರು, ಬರಹಗಾರರು ಇವರೆಲ್ಲ ಅತ್ಯಂತ ಪ್ರತಿಭಾಶಾಲಿಗಳೆನಿಸಿತು. ಇದರೊಂದಿಗೆ ನಮ್ಮ ನಾಡಿನ ಬೇರೆಲ್ಲೂ ಕಾಣದಂತಹ ವಿಶಿಷ್ಟ

ರಾಜಕಾರಣಿಗಳನ್ನು ನಾನು ಇಲ್ಲಿ ಕಂಡಿದ್ದೇನೆ, ಕೇಳಿದ್ದೇನೆ. ಈ ಹಿನ್ನೆಲೆಯಲ್ಲಿ ಸಿಂಗಾರಿಗೌಡ ಗೌರವ ಗ್ರಂಥವನ್ನು ಮಂಡ್ಯ ಜಿಲ್ಲೆಯ ರಾಜಕೀಯ ಕೊಡುಗೆ ನಿರೂಪಿಸುವ ಗ್ರಂಥವಾಗಿ ಏಕೆ ಮಾಡಬಾರದೆನಿಸಿತು. ಅದರಂತೆ ಮೊದಲನೆಯ ಭಾಗದಲ್ಲಿ ಶ್ರೀ ಸಿಂಗಾರಿಗೌಡರ ಜೀವನ ಸಾಧನೆಯನ್ನು ಕುರಿತ ಬರಹಗಳಿರಬೇಕೆಂದೂ ಎರಡನೆಯ ಭಾಗದಲ್ಲಿ ಮಂಡ್ಯ ಜಿಲ್ಲೆಯ ರಾಜಕೀಯ ಕೊಡುಗೆ ಇರತಕ್ಕದ್ದೆಂದೂ ನಿರ್ಧರಿಸಲಾಯಿತು. ರಾಜಕೀಯ ಕೊಡುಗೆಯ ಭಾಗದಲ್ಲಿ ಪ್ರಾಚೀನ ರಾಜಕೀಯ ಕೊಡುಗೆ, ಸ್ವಾತಂತ್ರ್ಯ ಸಂಗ್ರಾಮದ ತಾಲ್ಲೂಕು ಸಮೀಕ್ಷೆ ಮತ್ತು ಕೆಲವು ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಜೀವನ ಚಿತ್ರಗಳಿವೆ. ಈ ಕೆಲಸದಲ್ಲಿ ತೊಡಗಿದ ಮೇಲೆ ಈ ರೀತಿಯ ಸಂಪುಟಗಳು ಪ್ರತಿ ಜಿಲ್ಲೆ ತಾಲ್ಲೂಕುಗಳಿಗೂ ಬಂದರೆ ನಮ್ಮ ಜನಜೀವನದ ಎಲ್ಲಾ ಅಂಶಗಳೂ ದಾಖಲಾಗುತ್ತವೆ ಅನ್ನಿಸಿತು. ಈ ದೃಷ್ಟಿಯಿಂದ ಈ ಗ್ರಂಥ ಒಂದು ಹೊಸ ಪ್ರಯೋಗವೆಂದು ಭಾವಿಸಿದ್ದೇನೆ.

ಈ ಸಂಪುಟದ ಲೇಖಕರನ್ನು ನಾನು ಮರೆಯುವಂತಿಲ್ಲ. ಪ್ರಾಚೀನ ರಾಜಕೀಯ ಕೊಡುಗೆ ಶಾಸನಗಳನ್ನು ಅವಲಂಬಿಸಿದ್ದರೆ, ಸ್ವಾತಂತ್ರ್ಯಸಂಗ್ರಾಮದ ತಾಲ್ಲೂಕು ಸಮೀಕ್ಷೆಗಳು ಕ್ಷೇತ್ರಕಾರ್ಯವನ್ನು ಅವಲಂಬಿಸಿದಂತಹವು. ಇನ್ನು ಸ್ವಾತಂತ್ರ್ಯ ಹೋರಾಟಗಾರರ ಬದುಕಿನ ಮಾಹಿತಿ ಸಂಗ್ರಹಣೆ ಅತ್ಯಂತ ಕ್ಲಿಷ್ಟಕರವಾದುದು. ಈ ಎಲ್ಲಾ ತೊಂದರೆಗಳನ್ನು ನಿಭಾಯಿಸಿಕೊಂಡು ಈ ಸಂಪುಟದ ಲೇಖಕರು ತಮ್ಮ ಲೇಖನಗಳನ್ನು ಉಪಯುಕ್ತವೂ ಮಾಹಿತಿಪೂರ್ಣವೂ ಆಗಿ ಮಾಡಿದ್ದಾರೆಂಬ ಧೈರ್ಯ ನನಗಿದೆ. ಈ ಹಿರಿ ಕಿರಿಯ ಲೇಖಕರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ.

ಕನ್ನಡ ನಾಡು ನುಡಿಗಳಿಗೆ ಸಂಬಂಧಿಸಿದಂತೆ ಮಹತ್ವದವರೂ ನನಗೆ ಪೂಜ್ಯರೂ ಆದ ಡಾ. ದೇ ಜವರೇಗೌಡರು ಮತ್ತು ಡಾ. ಹಾ. ಮಾ. ನಾಯಕರು ಈ ಸಂಪುಟದ ಸಲಹಾ ಸಮಿತಿಯಲ್ಲಿರಲು ಒಪ್ಪಿ ನನಗೆ ಸ್ಫೂರ್ತಿ ಶಕ್ತಿಗಳನ್ನು ನೀಡಿದ್ದಾರೆ. ಡಾ. ಹಾ.ಮಾ. ನಾಯಕರು ಈ ಗ್ರಂಥದ ಕೆಲಸದ ಉದ್ದಕ್ಕೂ ನನಗೆ ಮಾರ್ಗದರ್ಶನ ಮಾಡಿ ದ್ದಾರೆ. ಈ ಗ್ರಂಥದ ಹೆಸರು 'ಸಿಂಗಾರ' ಅವರು ನೀಡಿದ್ದು. ಸಿಂಗಾರ ಎಂದರೆ ಅಡಕೆಯ ಹೂವು. ನಮಗೆ ಮಂಗಳದ ದ್ಯೋತಕ. ನಮ್ಮ ಕಲಶ, ಕನ್ನಡಿಗಳಿಗೆ, ಗ್ರಾಮದೇವತೆಗೆ ಪ್ರಿಯವಾದ ಹೂವು ಸಿಂಗಾರಿಗೌಡರ ಬದುಕಿಗೂ ಈ ಸಿಂಗಾರಕ್ಕೂ ಧ್ವನಿಪೂರ್ಣ ಹೊಂದಿಕೆಯಿದೆ. ಈ ದೃಷ್ಟಿಯಿಂದ ಸಿಂಗಾರಿಗೌಡರ ಅಡಕೆಯ ತೋಟವನ್ನೇ ಈ ಗ್ರಂಥದ ಮುಖಪುಟವಾಗಿ ಉಪಯೋಗಿಸಲಾಗಿದೆ. ಈ ಪೂಜ್ಯರಿಬ್ಬರಿಗೂ ನನ್ನ ನಮಸ್ಕಾರಗಳು ಸಲ್ಲುತ್ತವೆ.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ ವಿ, ಶಂಕರಗೌಡರು ಮತ್ತು ಸಂಚಾಲಕರಾದ ಶ್ರೀ ಪಿ. ಎನ್. ಜವರಪ್ಪ ಗೌಡರ ನೆರವನ್ನು ನಾನು ಮರೆಯಲಾರೆ. ಮಾನ್ಯ ಶಂಕರ ಗೌಡರು ಅಚಲವಾಗಿ ನಿಲ್ಲದಿದ್ದರೆ ಈ ಗ್ರಂಥ ಬರುತ್ತಲೇ ಇರಲಿಲ್ಲ

ಎಂದು ನನಗೆ ಅನೇಕ ಸಂದರ್ಭದಲ್ಲಿ ಅನ್ನಿಸಿದೆ. ಶ್ರೀ ಜವರಪ್ಪಗೌಡರು ನನ್ನ ಎಲ್ಲಾ ಕಿರಿಕಿರಿಯನ್ನೂ ಸಹಿಸಿ ನನಗೆ ನೆರವಾಗಿದ್ದಾರೆ. ಈ ಇಬ್ಬರು ಹಿರಿಯರನ್ನು ನಾನು ಅತ್ಯಂತ ಗೌರವದಿಂದ ನೆನೆಯುತ್ತೇನೆ.

ಡಾ. ಜೀ. ಶಂ. ಪರಮಶಿವಯ್ಯ ಅವರು ಮತ್ತು ನಾನು ಮಂಡ್ಯ ಜಿಲ್ಲೆಗೆ ಸಂಬಂಧಿಸಿದ ಅನೇಕ ಕೆಲಸಗಳನ್ನು ಒಟ್ಟಿಗೇ ಮಾಡಿದ್ದೇವೆ. ಈ ಗ್ರಂಥದ ಸಲಹಾ ಸಮಿತಿಯಲ್ಲಿದ್ದು ನನಗೆ ಅನೇಕ ರೀತಿಯ ಸಹಾಯ ಮಾಡಿದ ಡಾ. ಜೀಶಂಪ ಅವರಿಗೆ ನಾನು ಋಣಿಯಾಗಿದ್ದೇನೆ.

ಸಿಂಗಾರ ಸಂಪುಟದ ಕೆಲಸದಲ್ಲಿ ಅನೇಕರ ಸಹಾಯ ಸಹಕಾರಗಳು ನನಗೆ ನೆರವಾಗಿವೆ. ಸಿಂಗಾರಿಗೌಡರ ಅಳಿಯಂದಿರು, ಮಕ್ಕಳು, ವಿಶೇಷವಾಗಿ ಹೆಣ್ಣು ಮಕ್ಕಳು ಇಲ್ಲಿನ ಬಹುತೇಕ ಚಿತ್ರಗಳನ್ನು ಒದಗಿಸಿದ್ದಾರೆ. ಶ್ರೀ ಜಯಪ್ರಕಾಶಗೌಡ ಮತ್ತು ಶ್ರೀ ಎಸ್. ಬಿ. ಶಂಕರೇಗೌಡ ನನ್ನೊಂದಿಗಿದ್ದು ಲೇಖನ ಸಂಗ್ರಹಣೆಯಿಂದ ಹಿಡಿದು ಪ್ರತಿ ಹಂತದಲ್ಲೂ ನೆರವಾಗಿದ್ದಾರೆ. ಈ ಗ್ರಂಥದ ಲೇಖನ ಸಂಗ್ರಹಣ, ಸಂಸ್ಕರಣ ಮತ್ತು ಕರಡು ತಿದ್ದುವಿಕೆಯಲ್ಲಿ ನನ್ನ ಸಹೋದ್ಯೋಗಿಗಳಾದ ಶ್ರೀಮತಿ ವೈ. ಸಿ. ಭಾನುಮತಿ, ಡಾ. ಪದ್ಮಾವತಿ, ಡಾ. ಸೋಮಶೇಖರಗೌಡ ಮತ್ತು ಜಿ. ಜಿ. ಮಂಜುನಾಥನ್ ಅವರ ನೆರವನ್ನು ಮರೆಯಲಾರೆ. ನನ್ನ ಎಲ್ಲ ಕಿರುಕುಳಗಳನ್ನು ಸಹಿಸಿ ಈ ಗ್ರಂಥವನ್ನು ಮುದ್ರಿಸಿಕೊಟ್ಟವರು ಶ್ರೀ ವಿಶಾರಾ ಪ್ರಿಂಟರ್ಸ್ ಮಾಲೀಕರೂ ನನ್ನ ಮಿತ್ರರೂ ಆದ ಶ್ರೀ ಕೆ.ಪಿ. ಪುಟ್ಟಸ್ವಾಮಿ ಮತ್ತು ವೆಂಕಟೇಶ್ ನೇತೃತ್ವದ ಕೆಲಸಗಾರರು. ಒಂದು ಮಾತಿನಲ್ಲಿ ಹೇಳಬೇಕೆಂದರೆ ಇನ್ನೆಷ್ಟೋ ಜನರ ಅಪ್ರತ್ಯಕ್ಷ ಸಹಾಯವೂ ಈ ಕೆಲಸಕ್ಕೆ ಸಂದಿರಬೇಕು. ಈ ಎಲ್ಲರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

26–8-1988
ಮೈಸೂರು

ಹ. ಕ. ರಾಜೇಗೌಡ

ಲೇಖನಸೂಚಿ

ಜೀವನ-ಸಾಧನೆ

ನಾನು ಕಂಡಂತೆ ಸಿಂಗಾರಿಗೌಡ

ಮಂಡ್ಯ ಜಿಲ್ಲೆಯ ಪ್ರಾಚೀನ ರಾಜಕೀಯ ಕೊಡುಗೆ

ಮಂಡ್ಯ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮ


ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು



ಶ್ರೀಮತಿ ಸರಸ್ವತಮ್ಮ ಸಿಂಗಾರಿಗೌಡ



ತಾತ ಮರೀಗೌಡರು



ತಂದೆ ಕೆ. ಎಂ. ಕೃಷ್ಣಪ್ಪಗೌಡರು



ಮಹಾರಾಜ ಕಾಲೇಜ್ ಕನ್ನಡ ಸಂಘದ ಕಾರ್ಯದರ್ಶಿ (ಮೊದಲ ಸಾಲಿನಲ್ಲಿ ನಿಂತಿರುವವರಲ್ಲಿ ಎಡದಿಂದ ಮೊದಲನೆಯವರು ಸಿಂಗಾರಿಗೌಡರು)



ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳೊಂದಿಗೆ ಸಿಂಗಾರಿಗೌಡರು



ಮಹಾಕವಿ ಕುವೆಂಪು ಅವರೊಡನೆ



ಬೇಸಾಯದ ಬದುಕಿನಲ್ಲಿ



ವಿಧಾನ ಸಭಾ ಸದಸ್ಯರಾಗಿ ಚುನಾಯಿತರಾದಾಗ ನಾಗಮಂಗಲ ಪುರಸಭೆ ಸನ್ಮಾನ ಸಮಾರಂಭದಲ್ಲಿ



ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಮೂರನೆಯ ಜಾನಪದ ಸಮ್ಮೇಳನದಲ್ಲಿ

ಜೀವನ - ಸಾಧನೆ

(ಭಾಗ : ಒಂದು)

ಬಾಳ್ವೆಯ ಗೆರೆಗಳು

(ಶ್ರೀ ಕೆ. ಸಿಂಗಾರಿಗೌಡರ ಜೀವನ ಚಿತ್ರ)

ಹ. ಕ. ರಾಜೇಗೌಡ

೧. ಹಿನ್ನೆಲೆ

ಯಾವುದೇ ಫಸಲಿನ ಸಫಲತೆ ವಿಫಲತೆಗಳಿಗೆ ಮಣ್ಣಿನ ಗುಣ ಕಾರಣ ಎಂದು ಹೇಳುತ್ತಾರೆ. ಆಯಾ ಪ್ರದೇಶದ ಮಣ್ಣಿನಲ್ಲಿರುವ ವಿಶೇಷ ಶಕ್ತಿಗಳು ಆ ಫಸಲಿನಲ್ಲಿ ಕಂಡುಬರುತ್ತವೆಂಬುದು ಸ್ವಲ್ಪ ಮಟ್ಟಿಗೆ ವೈಜ್ಞಾನಿಕ ಸತ್ಯವೂ ಹೌದು. ಆಧುನಿಕವಾಗಿ ಮಣ್ಣು ಪರೀಕ್ಷೆ ಮಾಡಿಯೇ ಅದರಲ್ಲಿ ಯಾವ ಅಂಶದ ಕೊರತೆ ಕಂಡುಬರುತ್ತದೆಯೋ ಅದನ್ನು ಕೊಡುವ ಸಂಪ್ರದಾಯವಿದೆ. ಇದರಿಂದ ಒಂದೇ ಭೂಮಿಯ ಬೇರೆ ಬೇರೆ ಸ್ಥಳದ ಮಣ್ಣಿನಲ್ಲಿ ಬೇರೆ ಬೇರೆ ರೀತಿಯ ಸತ್ವಗಳಿದ್ದು ಅವು ಅಲ್ಲಿ ಬೆಳೆಯುವ ಬೆಳೆಯ ಮೇಲೆ ತಮ್ಮ ಪ್ರಭಾವವನ್ನು ಬೀರುವುದು ಕಂಡುಬರುತ್ತದೆ. ಸಾಹಿತ್ಯ, ಕಲೆಗಳಲ್ಲಿ ಸಹ ಈ ಮಣ್ಣಿನ ಗುಣವನ್ನು ಕಾಣಬಹುದೆಂದು ಹೇಳುವುದುಂಟು. ಪ್ರಾಣಿಪಕ್ಷಿಗಳಲ್ಲಿ ಕೂಡ ಮಣ್ಣಿನ ಪ್ರಭಾವವನ್ನು ಗುರುತಿಸುತ್ತಾರೆ. ಹೀಗೆ ಬದುಕಿನ ಎಲ್ಲಾ ಅಂಗಗಳ ಮೇಲೂ ಆ ಪ್ರದೇಶದ ಮಣ್ಣಿನ ಗುಣವನ್ನು ಗುರುತಿಸುತ್ತೇವೆ. ಸ್ವಾಭಾವಿಕವಾಗಿಯೇ ಆ ಗುಣ ಮನುಷ್ಯ ಜೀವನದ ಮೇಲೂ ತನ್ನ ಪ್ರಭಾವವನ್ನು ಬೀರುತ್ತದೆಂದು ಕಾಣುತ್ತದೆ.

ಜಗತ್ತಿನ ಇತಿಹಾಸವನ್ನು ಗಮನಿಸಿದರೆ ಅದರ ಕೆಲವು ಭಾಗಗಳಿಂದ ಚರಿತ್ರೆಯನ್ನು ಸೃಷ್ಟಿಸುವ ಸಾಹಸಿಗರು ಹುಟ್ಟಿಬಂದಿರುವುದು ಕಂಡುಬರುತ್ತದೆ. ಪ್ರಾಗೈತಿಹಾಸಿಕ ಕಾಲದಿಂದಲೂ ವಿಜ್ಞಾನಿಗಳು ಇಂತಹ ಪ್ರಾದೇಶಿಕ ಮಹತ್ವವನ್ನು ಗುರುತಿಸುತ್ತಾ ಬಂದಿದ್ದಾರೆ. ಪ್ರಪಂಚದ ಅತ್ಯಂತ ಪುರಾತನವಾದ ಹರಪ್ಪ, ಮೊಹಂಜದಾರೋ, ಈಜಿಪ್ಟ್, ಮೆಸಪಟೋಮಿಯ, ಸಿಂಧು ನದೀತೀರ-ಮುಂತಾದ ಸಂಸ್ಕೃತಿ ನೆಲೆಗಳೂ ಇದನ್ನು ದೃಢಪಡಿಸುತ್ತವೆ. ಅನಂತರದ ಭಾರತ, ಗ್ರೀಕ್ ನಾಗರಿಕತೆಗಳೂ ಇದನ್ನೇ ಹೇಳುತ್ತವೆ. ಒಂದು ಮಣ್ಣು ಅಶೋಕ, ಹರ್ಷ, ಪುಲಿಕೇಶಿಯಂತಹವರನ್ನೂ ಮತ್ತೊಂದು ಮಣ್ಣು ಜೂಲಿಯಸ್‌ಸೀಸರ್, ಆಂಟನಿ, ನೀರೋ ಇಂತಹವರನ್ನೂ ಸೃಷ್ಟಿಸಿದೆ. ಅದರ ಪರಂಪರೆ ಮುಂದುವರಿದು ಒಂದುಕಡೆ ಗಾಂಧಿ, ವಿನೋಬ ಇಂತಹವರೂ ಮತ್ತೊಂದುಕಡೆ ಹಿಟ್ಲರ್ ನೆಪೋಲಿಯನ್ನರೂ ಸೃಷ್ಟಿಯಾಗಿದ್ದಾರೆ. ಆದುದರಿಂದ ಯಾವುದೇ ಮಣ್ಣಿನ ಗುಣ ನಿರಂತರವಾಗಿ ಅಲ್ಲಿನ ಬದುಕನ್ನು ನಿಯಂತ್ರಿಸುವುದು ಮತ್ತು ಪರಂಪರೆಯನ್ನು ಸೃಷ್ಟಿಸುತ್ತಾ ಹೋಗುವುದು ಕಂಡುಬರುತ್ತದೆ.

ಮಂಡ್ಯ ಜಿಲ್ಲೆಯ ಪಶ್ಚಿಮದಲ್ಲಿ ದಕ್ಷಿಣಕ್ಕೆ ಪಾಂಡವಪುರ, ಪಶ್ಚಿಮಕ್ಕೆ ಚನ್ನರಾಯ

ಪಟ್ಟಣ, ಉತ್ತರಕ್ಕೆ ತುರುವೇಕೆರೆ ಈ ತಾಲ್ಲೂಕುಗಳ ಮಧ್ಯೆ ಈಗಿನ ನಾಗಮಂಗಲ ತಾಲ್ಲೂಕು ಇದೆ. ಈಗ ಇದು ಕೇವಲ ಒಂದು ತಾಲ್ಲೂಕು. ಆದರೆ ಇದೊಂದು ಸಾಮಂತ ರಾಜ್ಯವೇ ಆಗಿತ್ತು ಎಂದು ಪ್ರಾಚೀನ ಇತಿಹಾಸ ಹೇಳುತ್ತದೆ. ತಲಕಾಡಿನ ಗಂಗರು, ಹೊಯ್ಸಳರು, ವಿಜಯನಗರದ ಅರಸರ ಕಾಲದಲ್ಲಿ ಈ ಪ್ರಾಂತ್ಯದ್ದು ಮಹತ್ತರವಾದ ಪಾತ್ರವಾಗಿತ್ತು. ಆ ಕಾಲದಲ್ಲಿ ನಾಗಮಂಗಲ ಒಂದು ಪ್ರಬಲವಾದ ಸಾಮಂತ ಪ್ರದೇಶವಾಗಿದ್ದು ಈಗಿನ ಮಂಡ್ಯ, ಮೈಸೂರು, ಹಾಸನದ ಪೂರ್ವಭಾಗ, ತುಮಕೂರಿನ ದಕ್ಷಿಣ ಭಾಗ ನಾಗಮಂಗಲದ ಆಡಳಿತಕ್ಕೆ ಒಳಪಟ್ಟಿದ್ದವು. ಮೈಸೂರು ಮಂಡ್ಯ ಜಿಲ್ಲೆಗಳಂತೂ ಸಂಪೂರ್ಣವಾಗಿ ನಾಗಮಂಗಲಕ್ಕೆ ಸೇರಿದ್ದವು. ಗಂಗರ ಕಾಲದಲ್ಲಿ ಈ ಭಾಗದ ಬಸ್ತಿ ಕಂಬದಹಳ್ಳಿ ಆಡಳಿತ ಮುಖ್ಯ ಕೇಂದ್ರವಾಗಿತ್ತು. ಹೊಯ್ಸಳರ ಕಾಲದಲ್ಲಿ ಈ ಪ್ರದೇಶದ ತೊಂಡನೂರು ಉಪರಾಜಧಾನಿಯೇ ಆಗಿತ್ತು. ವಿಜಯನಗರದ ಕಾಲದಲ್ಲಿ ಸ್ವತಃ ನಾಗಮಂಗಲವೇ ಮುಖ್ಯ ಆಡಳಿತ ಕೇಂದ್ರವಾಗಿತ್ತು. ಮುಂದೆ ನಾಗಮಂಗಲದ ತಿಮ್ಮಣ್ಣನೇ ಶ್ರೀರಂಗಪಟ್ಟಣ ದ್ವೀಪದಲ್ಲಿ ಕೋಟೆಯನ್ನು ನಿರ್ಮಿಸಿ ಆಡಳಿತ ಕೇಂದ್ರವನ್ನು ಅಲ್ಲಿಗೆ ಬದಲಾಯಿಸಿದ. ತೊಂಡನೂರಿನ ಮಹಾಜನರಿಗೆ ಮುಸಲ್ಮಾನರಿಂದ ರಕ್ಷಣೆಯೊದಗಿಸಲು ಮೇಲುಕೋಟೆಯನ್ನು ನಿರ್ಮಿಸಿದವರೂ ನಾಗಮಂಗಲದ ಪ್ರಭುಗಳೇ. ಇವಕ್ಕೆಲ್ಲಾ ಶಾಸನ ಆಧಾರಗಳಿವೆ. ಮುಂದೆ ವಿಜಯನಗರ ಪತನವಾದ ಮೇಲೆ ಈ ಸಾಮಂತ ರಾಜ್ಯ ಕುಸಿಯುತ್ತಾ ನಡೆದು, ಹೈದರ್, ಟಿಪ್ಪು ಕಾಲದಲ್ಲಿ ದಿಕ್ಕಾಪಾಲಾಗಿ, ಬ್ರಿಟಿಷರ ಕಾಲದಲ್ಲಿ ಹರಿದು ಹಂಚಿ ಮತ್ತೆ 1939ರಲ್ಲಿ ಒಂದು ತಾಲ್ಲೂಕಾಗಿ ಪರಿಣಮಿಸಿದೆ.

ಧಾರ್ಮಿಕವಾಗಿ ನಾಗಮಂಗಲ ಪ್ರದೇಶ ವಿಶಿಷ್ಟವಾದ ಪಾತ್ರವಹಿಸಿದೆ. ಭಾರತದಲ್ಲಿ ಅತ್ಯಂತ ಪ್ರಾಚೀನ ಕಾಲದಲ್ಲಿಯೇ ಶೈವಧರ್ಮ ಅಭ್ಯುದಯಸ್ಥಿತಿಯಲ್ಲಿದ್ದುದು ಕಂಡು ಬರುತ್ತದೆ. ಕ್ರಿ. ಪೂ. 3000 ವರ್ಷ ಹಿಂದೆಯೇ ಈ ಧರ್ಮ ತನ್ನ ಬೆಳವಣಿಗೆಯ ಎಲ್ಲಾ ಹಂತಗಳನ್ನೂ ಮುಗಿಸಿ ಇಡೀ ಭಾರತ ಖಂಡದ ಏಕೈಕ ಧರ್ಮವಾಗಿತ್ತೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಅಂತಹ ಪ್ರಾಚೀನ ಶೈವ ನೆಲೆಗಳಲ್ಲೊಂದು ಶ್ರೀ ಆದಿ ಚುಂಚನಗಿರಿ. ಗಂಗರು ಜಾತೀಯವಾಗಿ ಒಕ್ಕಲಿಗರು. ಆದರೆ ಜೈನ ಧರ್ಮವನ್ನು ಪೋಷಿಸಿದವರು. ಇಂದಿಗೂ ಈ ಪ್ರದೇಶಾದ್ಯಂತ ಅನೇಕ ಜೈನ ಬಸದಿಗಳಿವೆ. ಕಂಬದಹಳ್ಳಿ ಒಂದು ಜೈನ ಧಾರ್ಮಿಕ ಕೇಂದ್ರವೂ ಆಗಿತ್ತು. ಅನಂತರ ಮುಮ್ಮಡಿ ಮಾರಸಿಂಹನ ಮಂತ್ರಿ ಚಾವುಂಡರಾಯ ಶ್ರವಣಬೆಳಗೊಳದ ಬೆಟ್ಟದ ಮೇಲೆ ಗೊಮ್ಮಟೇಶ್ವರ ವಿಗ್ರಹವನ್ನು ಕೆತ್ತಿಸಿದ. ಆಮೇಲೆ ಕಂಬದಹಳ್ಳಿಯ ಪ್ರಾಮುಖ್ಯತೆ ಕುಗ್ಗಿತು. ಶ್ರೀ ವೈಷ್ಣವ ಧರ್ಮ ಸಂಸ್ಥಾಪಕ ರಾಮಾನುಜಾಚಾರ್ಯ ಕಂಚಿಯಿಂದ ಓಡಿ ಬಂದು ಆಶ್ರಯ ಪಡೆದದ್ದು ನಾಗಮಂಗಲದ ಹತ್ತಿರವಿರುವ ಪಡುವಲ ಪಟ್ಟಣದ ಪಾಂಡವರ ಗುಹೆಯಲ್ಲಿ. ಅಲ್ಲಿ ಅವರು ತಪಸ್ಸು ಮಾಡುತ್ತಿದ್ದ ಬಗ್ಗೆ ಕಟ್ಟಿದ ಆಯಗಾರ ಹಾಕಿಸಿದ ಎರಡು

ಶಾಸನಗಳಿವೆ. ಮುಂದೆ ಅವರು ಸುಪ್ರಸಿದ್ಧ ಹೊಯ್ಸಳ ದೊರೆ ಬಿಟ್ಟಿದೇವನನ್ನು ಸಂಪರ್ಕಿಸಿ ಅವನ ಆಶ್ರಯ ದೊರೆತ ಮೇಲೆ ತೊಂಡನೂರಿಗೆ ಹೋದರು. ಮುಂದೆ ಬಿಟ್ಟಿದೇವ ಶ್ರೀ ವೈಷ್ಣವ ಧರ್ಮ ಸ್ವೀಕರಿಸಿ ಅದರ ಪ್ರಚಾರಕ್ಕೆ ಅನುವು ಮಾಡಿಕೊಟ್ಟ. ವಿಜಯನಗರ ಕಾಲದಲ್ಲಿ ಹಿಂದೂ ಧರ್ಮದ ಪುನರುತ್ಥಾನ ಕಾರ್ಯಕ್ಕೆ ನಾಗಮಂಗಲದ ಕೊಡುಗೆ ಅಪಾರವಾದುದು.

ರಾಜಕೀಯವಾಗಿ ನಾಗಮಂಗಲ ನಾಡಿನ ಕೊಡುಗೆ ಮಹತ್ವವಾದುದು. ಗಂಗರ ಕಾಲದಲ್ಲಿ ಆ ವಂಶದ ಅನೇಕರು ತೊಂಡನೂರು. ಕಂಬದಹಳ್ಳಿ. ವಡಿಗ ಮುಂತಾದ ಕಡೆಗಳಿಂದ ಆಳುತ್ತಿದ್ದರು. ಹೊಯ್ಸಳರ ಸುಪ್ರಸಿದ್ಧ ದಂಡನಾಯಕನಾದ ಮರಿಯಣ್ಣ ದಂಡನಾಯಕ ನಾಗಮಂಗಲದ ಆಳಿಯಸಮುದ್ರದವನು. ಹೊಯ್ಸಳ ಮನೆತನದ ಉನ್ನತಿಗ ಮರಿಯಣ್ಣ ದಂಡನಾಯಕ ಮತ್ತು ಅವನ ಮಕ್ಕಳ ಕೊಡುಗೆ ಮಹತ್ತರವಾದುದು. ಹೊಯ್ಸಳ ಒಂದನೆಯ ಬಲ್ಲಾಳ ಈ ಮರಿಯಣ್ಣ ದಂಡನಾಯಕನ ಮೂವರು ಹೆಣ್ಣು ಮಕ್ಕಳನ್ನು ಒಂದೇ ಹಸೆಯ ಮೇಲೆ ಮದುವೆಯಾದ. ನಾಗಲಾದೇವಿ. ಬೊಪ್ಪಲಾದೇವಿ ಮುಂತಾದ ಹೊಯ್ಸಳ ರಾಣಿಯರು ಈ ಭಾಗದವರು. ಹೊಯ್ಸಳರ ಸುಪ್ರಸಿದ್ಧ ಪ್ರಧಾನಿ ಗಂಗರಾಜ ಈ ಭಾಗದಲ್ಲಿ ಆಳುತ್ತಿದ್ದವನು. ಅವನ ಮಗ ಸಹ ಕಂಬದಹಳ್ಳಿಯಲ್ಲಿ ಅಧಿಕಾರಿಯಾಗಿದ್ದ. ವಿಜಯನಗರದ ಆಡಳಿತಕಾಲದಲ್ಲಿ ನಾಗಮಂಗಲದ ತಿಮ್ಮಣ್ಣ ಕೃಷ್ಣದೇವರಾಯನ ಅಷ್ಟ ಪ್ರಧಾನರಲ್ಲಿ ಒಬ್ಬನಾಗಿ ಆಯ್ಕೆಯಾಗಿ ಅಪೂರ್ವ ಸೇವೆ ಸಲ್ಲಿಸಿದ. ದೇವರಾಜ ಮಂಗಳೂರು ಪ್ರಾಂತದ ಸಾಮಂತನಾಗಿ ನೇಮಕಗೊಂಡ. ಮೈಸೂರು ಅರಸರ ಕಾಲದಲ್ಲಿ ಸಹ ಈ ಭಾಗದ ಅನೇಕ ಪಾಳೆಯಗಾರರು. ನಾಡಗೌಡರು ಹೆಸರಾಂತವರಾಗಿದ್ದರು.

ಬ್ರಿಟಿಷರು ಮೈಸೂರು ರಾಜ್ಯವನ್ನು ತಮ್ಮ ವಶಕ್ಕೆ ತೆಗೆದುಕೊಂಡ ಮೇಲೆ ಹಿಂದಿನ ಪ್ರಬಲ ಆಡಳಿತ ಕೇಂದ್ರಗಳನ್ನು ಒಡೆದು ಛಿದ್ರ ಛಿದ್ರಮಾಡಿದರು. ಈ ಸಾಮಂತರು. ಪಾಳೆಯಗಾರರು. ನಾಡಗೌಡರು ಮತ್ತೆ ಬಗುರಿಕೊಂಡಾರೆಂಬ ಭಯವೇ ಇದಕ್ಕೆ ಕಾರಣ. ಹೀಗಾಗಿ ಒಂದೊಂದಾಗಿ ಇಂತಹ ಆಡಳಿತ ಪ್ರದೇಶಗಳನ್ನು ಒಡೆದು ಬೇರೆ ಬೇರೆ ಪ್ರದೇಶಗಳಿಗೆ ಸೇರಿಸಲಾಯಿತು. ಅಂತೆಯೇ ನಾಗಮಂಗಲನಾಡು. ಮೈಸೂರು, ಬೆಂಗಳೂರು, ತುಮಕೂರು ಮತ್ತು ಹಾಸನ ಜಿಲ್ಲೆಗಳಿಗೆ ವರ್ಗವಾಯಿತು. 1939 ರಲ್ಲಿ ಜಿಲ್ಲಾ ಪುನರ್ವಿಂಗಡಣಾ ಯೋಜನೆಯಂತೆ ಮಂಡ್ಯ ಜಿಲ್ಲೆಯಾಗಿ ರೂಪಿತವಾದಾಗ ನಾಗಮಂಗಲ ಒಂದು ತಾಲ್ಲೂಕಾಗಿ ಅಸ್ತಿತ್ವಕ್ಕೆ ಬಂದಿತು. ಮುಂದೆ ಸ್ವಾತಂತ್ರ್ಯ ಹೋರಾಟ ಸಮಯದಲ್ಲಿ ಈ ಭಾಗದಿಂದ ಅನೇಕ ಮಹನೀಯರು ಈ ರಾಷ್ಟ್ರ ಸಮರದಲ್ಲಿ ಧುಮುಕಿದರು. ಅದಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟರು. ಅಂತಹ ಹಿರಿಯರಲ್ಲಿ ಕರಡಹಳ್ಳಿಯ ಕೃಷ್ಣಪ್ಪಗೌಡರೂ ಒಬ್ಬರು.

೨. ನೆಲ-ಜಲ

ನಾಗಮಂಗಲದ ಪ್ರದೇಶ ಒಂದು ಕಾಲದಲ್ಲಿ ಬೃಹದಾಕಾರದ ಮರಗಿಡಗಳಿಂದ ಕೂಡಿದ ಅರಣ್ಯ ಪ್ರದೇಶವಾಗಿತ್ತೆಂದು ಸ್ಥಳದ ಪುರಾಣಗಳು ಹೇಳುತ್ತವೆ. ದಂಡಕಾರಣ್ಯವಾಗಿತ್ತೆಂಬುದರ ಕುರುಹಾಗಿ ಇಂದು ಪ್ರೌಢವಾಗಿ ಬೆಳೆದ ಹಂಗರ ಮೆಳೆಯ ಸುಮಾರು ನೂರಿಪ್ಪತ್ತು ಅಡಿ ಉದ್ದದ ತೊಲೆಯೊಂದು ನಾಗಮಂಗಲದ ಶ್ರೀ ನರಸಿಂಹಸ್ವಾಮಿ ದೇವಾಲಯದಲ್ಲಿ ಪೂರ್ವದ ಗೋಡೆಯಿಂದ ಪಶ್ಚಿಮ ಗೋಡೆವರೆಗಿದೆ. ದೇವಾಲಯ ಕಟ್ಟುವಾಗ ಇದನ್ನು ಬಳಸಿಕೊಂಡಿತ್ತೆಂದು ಹೇಳಲಾಗಿದೆ. ಈಗ ಬಸವನಬೆಟ್ಟ, ಆದಿ ಚುಂಚನಗಿರಿ, ಹಸುಬಿನ ಕಾವಲು. ನಾರಾಯಣದುರ್ಗ ಇಂತಹ ಸಾಧಾರಣವಾದ ಕಾಡುಗಳಿವೆ. ಅದೂ ಕೆಲವು ಎಕರೆಗಳಷ್ಟು ಮಾತ್ರ. ನಾಗಮಂಗಲ ಪ್ರದೇಶ ಗೊಂಡಾರಣ್ಯವಾಗಿದ್ದಿತಂತೆ. ಅಂತಹ ಸಮಯದಲ್ಲಿ ಉತ್ತರದ ಕಡೆಯಿಂದ ಯೋಧನೊಬ್ಬ ಬಂದು ಈಗಿನ ನಾಗಮಂಗಲ ನಗರದಿಂದ ಉತ್ತರಕ್ಕೆ ಕೆಲವು ಮೈಲಿಗಳ ದೂರದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದನಂತೆ. ಅವನಿಗೆ ಹಾಗೆಯೇ ನಿದ್ರೆ ಬಂದಿತು. ಆಗ ಕನಸಿನಲ್ಲಿ ಸಾಧು ಪುರುಷನೊಬ್ಬ ಕಾಣಿಸಿಕೊಂಡು ಅಲ್ಲಿಂದ ದಕ್ಷಿಣಕ್ಕೆ ಮರವೊಂದರಡಿಯಲ್ಲಿ ಹುತ್ತವೊಂದಿರುವುದಾಗಿಯೂ ಅದರೊಳಗೆ ದೇವರು ಮೂಡಿರುವುದಾಗಿಯೂ ಅಲ್ಲಿ ನಗರವೊಂದನ್ನು ನಿರ್ಮಿಸಿ ರಾಜ್ಯ ಕಟ್ಟುವಂತೆಯೂ ಹೇಳಿದನಂತೆ. ಎಚ್ಚರಗೊಂಡ ಆ ಯೋಧ ಆಶ್ಚರ್ಯದಿಂದ ಸಾಧುಪುರುಷನು ಕನಸಿನಲ್ಲಿ ತಿಳಿಸಿದ್ದ ಸ್ಥಳವನ್ನು ಅರಸುತ್ತಾ ಕಾಡಿನಲ್ಲಿ ಹೊರಟ. ಅಲೆದಲೆದು ಸಾಕಾಗಿ ಕಡೆಗೆ ಮರವೊಂದರ ಕೆಳಗೆ ಬೃಹದಾಕಾರದ ಹುತ್ತವೊಂದನ್ನು ಕಂಡ. ಅವನು ನೋಡುತ್ತಿದ್ದ ಹಾಗೆಯೇ ಸರ್ಪವೊಂದು ಹುತ್ತದ ಸುತ್ತ ಮಂಡಲಾಕಾರವಾಗಿ ಸುತ್ತಿ ಮಾಯವಾಯಿತಂತೆ. ಕನಸಿನಲ್ಲಿ ಸಾಧುಪುರುಷ ಹೇಳಿದ ಸ್ಥಳ ಅದೇ ಎಂದು ನಿರ್ಧರಿಸಿ ಆ ಯೋಧ ಅಲ್ಲಿಯೇ ನೆಲೆನಿಂತ. ಆತನೆ ನಾಗಮಂಗಲ ಪ್ರಭುಗಳ ಮೊದಲಿಗ.

ಒಂದು ಎತ್ತರವಾದ ಹಂಗರು ಮರ. ಅದರ ಕೆಳಗೆ ಹುತ್ತ. ಯೋಧ ಸುತ್ತಲ ಜಾಗದ ಮರಗಿಡಗಳನ್ನು ಕಡಿಸಿ. ಮೊದಲು ಅಲ್ಲಿ ಒಂದು ದೇವಾಲಯ ನಿರ್ಮಿಸಿದ ಆ ಹುತ್ತದ ಮೇಲೆ ಬೆಳೆದು ನೆರಳಾಶ್ರಯ ನೀಡುತ್ತಿದ್ದ ಹಂಗರು ಮರ ಕಡಿದು ಆ ದೇವಾಲಯದಲ್ಲಿ ಇರಿಸಿದ. ಅದೇ ನಾಗಮಂಗಲದ ಈಗಿನ ನರಸಿಂಹದೇವಾಲಯ. ಅಲ್ಲಿ ಆಗ ಕಡಿದಿಟ್ಟಿದ್ದೆಂದು ಹೇಳುವ ಹಂಗರು ಮರವಿದೆ. ಆದರೆ ಈಗ ಹಂಗರು

ಎಂಬುದು ಒಂದು ಜಾತಿಯ ಗಿಡ ಮಾತ್ರವಾಗಿ ಐದಾರು ಅಡಿ ಕೂಡ ಬೆಳೆಯಲಾರದು. ನಾಗರಹಾವು ಮಂಡಲಾಕಾರವಾಗಿ ಸುತ್ತಿದುದರಿಂದ ಇದಕ್ಕೆ ನಾಗಮಂಡಲವೆಂದು ಹೆಸರಾಗಿ. ಕಾಲಾನುಕಾಲದಲ್ಲಿ ಜನರ ಬಾಯಲ್ಲಿ ನಾಗಮಂಗಲವಾಯಿತು. ಈ ಕಥೆಯ ಸತ್ಯಾಸತ್ಯಗಳೇನೇ ಇರಲಿ ಈ ಭಾಗ ಅರಣ್ಯಗಳಿಂದ ಕೂಡಿ ಸಂಮೃದ್ಧವಾಗಿತ್ತು ಎಂಬ ಬಗ್ಗೆ ಆಧಾರಗಳಿವೆ. ತೀರಾ ಇತ್ತೀಚೆಗೆ ಹೈದರಾಲಿ ಮತ್ತು ಟಿಪ್ಪು ಕಾಲದಲ್ಲಿ ಈ ಮಾರ್ಗವಾಗಿ ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿ ಬಂದ ಹೈದರಾಬಾದು ನಿಜಾಮ ಮತ್ತು ಮರಾಠ ಸೇನೆಗಳು ನಾಶಮಾಡಿದ ಗಿಡಮರಗಳ ವಿವರ ಓದಿದರೆ ಇಲ್ಲಿ ವೃಕ್ಷ ಸಂಪತ್ತು ಹೇರಳವಾಗಿತ್ತೆಂದು ತಿಳಿಯಬಹುದು. ಮುಂದೆ ಎರಡು ಭೀಕರ ಕ್ಷಾಮಗಳು; ಒಂದು ಏಳು ವರ್ಷಗಳ ಕಾಲ ಮತ್ತೊಂದು ಮೂರು ವರ್ಷಗಳ ಕಾಲ ಅಲ್ಲಿನ ಅರಣ್ಯ ಸಂಪತ್ತು ನಾಶವಾಗಲು ಕಾರಣವೆಂದು ತಿಳಿದುಬರುತ್ತದೆ. ಯಾವಾಗ ವೃಕ್ಷಸಂಪತ್ತು ನಾಶವಾಯಿತೋ ಮಳೆ ಕಡಿಮೆಯಾಯಿತು. ಮುಂದೆ ಬೆಂಗಾಡು ಪ್ರದೇಶವೆನಿಸಿತು.

ನಾಗಮಂಗಲ ಪ್ರದೇಶದಲ್ಲಿ ಯಾವುದೇ ಪ್ರಧಾನವಾದ ನದಿ ಹರಿಯುವುದಿಲ್ಲ. ಸಾತೇನಹಳ್ಳಿ ಹತ್ತಿರದ ನರಸಿಂಹಸ್ವಾಮಿ ಬೆಟ್ಟದಲ್ಲಿ ಲೋಕಪಾವನಿ ಮತ್ತು ವೀರವೈಷ್ಣವೀ ನದಿಗಳ ಉಗಮ ಸ್ಥಾನಗಳಿವೆ. ನಾಗಮಂಗಲ. ಪಾಂಡವಪುರ ತಾಲ್ಲೂಕುಗಳಲ್ಲಿ ಹರಿದು ಶ್ರೀರಂಗಪಟ್ಟಣದ ಹತ್ತಿರ ಕಾವೇರಿ ಸೇರುವ ಲೋಕಪಾವನಿ ಎಂಬ ಸಣ್ಣ ನದಿಯೊಂದನ್ನು ಬಿಟ್ಟರೆ ಮಿಕ್ಕೆಲ್ಲವೂ ತೊರೆಗಳೆ. ಆದರೂ ಹಿರಿಯಕೆರೆ. ಬಿಂಡಿಗನವಿಲೆಕೆರೆ. ದಡಿಗದಹಾಸನಕೆರೆ. ಸೂಳೆಕೆರೆ. ಮಂಚಪಟ್ಟಣದಕೆರೆ ಹೀಗೆ ಗಂಗರು ಮತ್ತು ಹೊಯ್ಸಳರ ಕಾಲದ ಅನೇಕ ದೊಡ್ಡ ಕೆರೆಗಳಿವೆ. ಆದರೆ ಸಾವಿರಾರು ವರ್ಷಗಳಿಂದ ಇವುಗಳ ಹೂಳು ತೆಗೆಯದೆ ಅವೂ ಸಹ ನಿರುಪಯೋಗಿ ಸ್ಥಿತಿ ತಲುಪುತ್ತಿವೆ. ಹದಿನೈದನೆಯ ಶತಮಾನದಲ್ಲಿಯೇ ನಾಗಮಂಗಲದ ದೇವರಾಜ ಈಗಿನ ಕನ್ನಂಬಾಡಿ ಕಟ್ಟೆಯ ಸ್ಥಳದಲ್ಲಿಯೇ ಕಾವೇರಿಗೆ ಅಡ್ಡಗಟ್ಟೆ ನಿರ್ಮಿಸಿ ನಾಗಮಂಗಲಕ್ಕೆ ನೀರು ತರುವ ಯತ್ನ ಮಾಡಿದ ಪಳೆಯುಳಿಕೆಗಳಿವೆ. ಈಗ ಈ ನೆಲವನ್ನು ತಣಿಸಲು ಕನಿಷ್ಠಪಕ್ಷ ಕೆಲವು ಕಡೆಗಾದರೂ ಹೇಮಾವತಿ ಆಗಮಿಸುತ್ತಿದ್ದಾಳೆಂಬುದು ಸಂತಸದ ಸಂಗತಿ. ಈ ನೆಲ ಮಳೆಯಿಂದ ವಂಚಿತವಾದರೂ ಇತ್ತೀಚೆಗೆ ತೆಂಗುಬೆಳೆಯಿಂದಾಗಿ ಮತ್ತೆ ತನ್ನ ಹಸುರಿನ ಸಿರಿಯನ್ನು ಪಡೆಯುತ್ತಿದೆ ಅನ್ನಿಸುತ್ತದೆ. ಈ ನೆಲ ತನ್ನ ಒಡಲಲ್ಲಿ ಅನೇಕ ಹಳ್ಳಿಗಳನ್ನು ಸಮೀಕರಿಸಿಕೊಂಡಿದೆ. ಅಂತಹವುಗಳಲ್ಲಿ ಕರಡಹಳ್ಳಿಯೂ ಒಂದು.

ಮಂಡ್ಯಕ್ಕೆ ಹೋಗುವ ಮುಖ್ಯರಸ್ತೆಯ ಬಲ ಭಾಗದ ತಗ್ಗು ಪ್ರದೇಶದಲ್ಲಿ ನಾಗಮಂಗಲದಿಂದ ಐದು ಮೈಲಿ ದೂರದಲ್ಲಿ ಕರಡಹಳ್ಳಿ ಇದೆ. ಇದು ಸುಮಾರು ಹದಿನೈದನೆಯ ಶತಮಾನದ ಒಂದು ಊರಾಗಿರಬಹುದೆಂದು ಊಹಿಸಲು ಅವಕಾಶವಿದೆ. ಏಕೆಂದರೆ ಈ ಪ್ರದೇಶದಲ್ಲಿ ಗಂಗರ. ಹೊಯ್ಸಳರ ಕಾಲದ ಶಾಸನಗಳು ದೊರೆ

ಯುತ್ತವೆ. ಅಂತಹ ಯಾವ ಶಾಸನವೂ ಕರಡಹಳ್ಳಿಯಲ್ಲಿ ಕಂಡುಬರುವುದಿಲ್ಲ. ಕೆಲವೇ ವರ್ಷಗಳ ಹಿಂದೆ ರಸ್ತೆಯಲ್ಲಿ ಹೋಗುವವರಿಗೆ ಕರಡಹಳ್ಳಿ ಎಂಬ ಊರಿನ ಹೆಸರಿನ ಕಲ್ಲು ಮಾತ್ರ ಕಾಣುತ್ತಿತ್ತು. ಊರೆಲ್ಲಿತ್ತೋ ತಿಳಿಯುತ್ತಿರಲಿಲ್ಲ. ಆ ಊರಿನ ಸುತ್ತ ಬೆಳೆದಿದ್ದ ಹಲಸು. ಬೇವು. ಹುಣಿಸೆ ಮರಗಳ ನೆರಳಲ್ಲಿ ಆಗ ಇದ್ದ ಇಪ್ಪತ್ತೋ ಇಪ್ಪತ್ತೈದೋ ಮನೆಗಳು ಹುದುಗಿ ಹೋಗಿರುತ್ತಿದ್ದುವೆಂದು ಕಾಣುತ್ತದೆ. ಈಗ ಊರು ಬೆಳೆದಿದೆ ಸಾಕಷ್ಟು ಮುಂದುವರಿದೂ ಇದೆ ಎಂದು ಹೇಳಬಹುದು. ಊರಿಗೆ ಇಂದು ಟಾರು ರಸ್ತೆಯಿದೆ. ನೀರು ಸರಬರಾಜು ಯೋಜನೆ ಬಂದು ಹೆಣ್ಣುಮಕ್ಕಳು ದೂರದ ತೊರೆಯಿಂದಲೋ ಊರಿಗೆಲ್ಲಾ ಒಂದೇ ಆಗಿದ್ದ ಕಲ್ಯಾಣಿಯಿಂದಲೋ ಚೌರಿಗೆ. ಬಿಂದಿಗೆಗಳಲ್ಲಿ ನೀರು ಹೊರುವುದು ತಪ್ಪಿದೆ. ನೀರು ಕೊಳಾಯಿಗಳ ಮೂಲಕ ಅವರಿರುವಲ್ಲಿಗೇ ಹರಿಯುತ್ತದೆ. ಶೈಕ್ಷಣಿಕವಾಗಿಯೂ ಊರು ಮುಂದುವರಿದಿದೆ. ಕೂಲಿ ಮತದ ಕಾಲ ಹೋಗಿ ಶಿಶುವಿಹಾರ. ಮಾಧ್ಯಮಿಕ ಶಾಲೆಗಳು ಬಂದಿವೆ. ಅಭಿವೃದ್ಧಿಯ ಸಂಕೇತವಾಗಿ ಸಹಕಾರಸಂಘ. ಹಾಲು ಉತ್ಪಾದಕರ ಸಂಘಗಳಿವೆ. ಆರೋಗ್ಯ ಸಂರಕ್ಷಣೆಗಾಗಿ ಆರೋಗ್ಯ ಕೇಂದ್ರವಿದೆ. ಇವೆಲ್ಲವುಗಳಿಂದಾಗಿ ಊರು ಇಪ್ಪತ್ತು ಮಾಳಿಗೆ ಮತ್ತು ನಾಡ ಹೆಂಚಿನ ಮನೆಗಳಿಂದ ಸೀಮೆ ಹೆಂಚಿನ. ತಾರಸಿಯ ನೂರಾರು ಮನೆಗಳ ಹಳ್ಳಿಯಾಗಿ. ಆಧುನಿಕವಾಗಿದೆ ಎಂದು ಹೇಳಲಡ್ಡಿಯಿಲ್ಲ.

ಊರಿಗೆ ಕರಡಹಳ್ಳಿ ಎಂದು ಏಕೆ ಹೆಸರು ಬಂದಿತೆಂದು ಖಚಿತವಾಗಿ ಹೇಳುವುದು ಕಷ್ಟ. ಜನರು ಇದನ್ನು ಕಂಡಳ್ಳಿ ಎಂದು ಸಹ ಕರೆಯುತ್ತಾರೆ. ಅಂದರೆ ಕಂಡಳ್ಳಿ ಕರಡಹಳ್ಳಿಯ ಗ್ರಾಮ್ಯರೂಪ ಎಂದು ಹೇಳಬಹುದು. ನಮ್ಮ ನಾಡಿನ ಹಳ್ಳಿಗಳ ಹೆಸರುಗಳು ದೇವರು. ವ್ಯಕ್ತಿ. ಮತ್ತು ಪ್ರಕೃತಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿವೆ ಎಂಬುದು ಈಗ ಖಚಿತವಾಗಿ ತೀರ್ಮಾನವಾಗಿರುವ ಸಂಗತಿ. ಪ್ರತಿಯೊಂದು ಊರಿಗೂ ಕಾಲಕ್ರಮೇಣ ಹುಟ್ಟಿಕೊಂಡಿರುವ ಸ್ಥಳಗತೆಗಳು ಅನೇಕ ವೇಳೆ ತಪ್ಪಾಗಿರುತ್ತವೆ. ಉದಾಹರಣೆಗೆ ಕರಡಹಳ್ಳಿಯಿಂದ ಮುಂದೆ ಕೆಲವು ಮೈಲಿಗಳಲ್ಲಿ ಇರುವ ಬಸರಾಳು ಗ್ರಾಮ ಬಸುರಿಯೊಬ್ಬಳ ಬಲಿದಾನದಿಂದ ಬಂದುದೆಂದು ಅನೇಕರು ನಂಬಿ ಹಾಗೆಯೇ ಬರೆದಿದ್ದರು. ಆದರೆ ಬಸರಿಹಾಳು ಅಂದರೆ ಬಸರಿ ಮರದ ಹೊಲ. ಆ ಹೊಲದ ಹತ್ತಿರ ಕಟ್ಟಿದ ಮನೆ ಬಸರಿಹಾಳಿನ ಮನೆಯಾಗಿ ಅದು ಊರಾಗಿ ಬೆಳೆದನಂತರ ಬಸರಿಹಾಳಾಗಿ ಬಸರಾಳಾಗಿದೆ. ಕರಡಹಳ್ಳಿ ಅಥವಾ ಕರಡಿಹಳ್ಳಿ ಎಂಬ ಹೆಸರು ಎರಡು ಕಾರಣಗಳಿಂದ ಬಂದಿರಬಹುದು. ಒಂದು ದೇವರಿಗೆ ಕನ್ನಂಕರಡಿ ಎಂಬ ಲಾಂಛನ ವಿಶೇಷ ಹಿಡಿಯುತ್ತಾರೆ. ಅದನ್ನು ಹಿಡಿಯುವವರ ಹಳ್ಳಿ ಅಂದರೆ ಕನ್ನಂಕರಡಿಯರಹಳ್ಳಿ ಮುಂದೆ ಕರಡಿಹಳ್ಳಿಯಾಗಿರಬಹುದು. ಅಥವಾ ಶೈವಸಂಪ್ರದಾಯದ ಕರಡೆ ಎಂಬ ವಾದ್ಯ ವಿಶೇಷದಿಂದಲೂ ಅದು ಬಂದಿರಬಹುದು. ಏಕೆಂದರೆ ಇದು ಭೈರವನ ಒಂದು ವಾದ್ಯ ಎಂಬ ನಂಬಿಕೆಯಿದೆ. ನಾಗಮಂಗಲ ತಾಲ್ಲೂಕಿನಲ್ಲಿಯೇ ಬಿರಡ್ಯ ಅಥವಾ ಬಿಂಡ್ಯ ಎಂಬ

ಮತ್ತೊಂದು ಹಳ್ಳಿಯೂ ಇದೆ. ಇನ್ನೊಂದು ಇದು ಕುರುಚಲು ಗಿಡದ ಕಾಡುಪ್ರದೇಶವಾಗಿದ್ದು ಕರಡಿಗಳೂ ಇದ್ದಿರಬಹುದು. ಅವುಗಳಿಂದಲೂ ಈ ಹೆಸರು ಬಂದಿರಲು ಸಾಧ್ಯ. ಆದರೆ ಶಿವನವಾದ್ಯ ಕರಡೆಯಿಂದ ಬಂದಿರುವುದೇ ಹೆಚ್ಚು ಸಾಧ್ಯವೆಂದೆನಿಸುತ್ತದೆ.

ಧಾರ್ಮಿಕವಾಗಿ ಊರು ಸಮನ್ವಯವನ್ನು ಸಾರುತ್ತಿದೆ. ಊರು ಹುಟ್ಟಿದಾಗ ಸ್ಥಾಪಿಸಿದುದೆನ್ನಲಾದ ಬದನವಾಳು ಬೋರಪ್ಪನ ಗುಡಿ ಇದೆ. ಈ ಬೋರಪ್ಪನೂ ಭೈರಪ್ಪ ಅರ್ಥಾತ್ ಭೈರವನೆ. ಇವಲ್ಲದೆ ಆಂಜನೇಯ. ಚೆನ್ನಕೇಶವ. ಮಾರಮ್ಮ ಭೈರವ. ಪಟ್ಟಲದಮ್ಮನ ಗುಡಿಗಳಿವೆ. ಈ ದೇವತೆಗಳಿಗೆ ಸಂಬಂಧಿಸಿದಂತೆ ವಿಶೇಷವಾಗಿ ಮಾರಮ್ಮ ಪಟ್ಟಲದಮ್ಮನಿಗೆ ಸಂಬಂಧಿಸಿದಂತೆ ವರ್ಷಕ್ಕೊಮ್ಮೆ ಹಬ್ಬಗಳು ನಡೆಯುತ್ತವೆ. ಅದರ ಅಂಗವಾಗಿ ಸಿಡಿ. ಕೊಂಡ. ಪೂಜೆಗಳು ಇದ್ದೇ ಇರುತ್ತವೆ. ಆದರೆ ನಾಗರಿಕತೆ ಬೆಳೆದಂತೆಲ್ಲಾ ಇವುಗಳ ಬಗ್ಗೆ ಜನರಲ್ಲಿ ಆಸಕ್ತಿ ಕುಂದುತ್ತಿದೆ ಎಂದೆನಿಸುವುದು ಸ್ವಾಭಾವಿಕ.

ಗ್ರಾಮದ ಆಡಳಿತ ಹಿಂದೆ ಮೂವರು ಹಿರಿಯರ ಕೈಯಲ್ಲಿದ್ದಿತು. ಅದು ಪರಂಪರೆಯಿಂದ ನಡೆದು ಬಂದ ಪದ್ಧತಿ. ನಮ್ಮ ದೇಶ ಹಿಂದೆ ಗ್ರಾಮ ಘಟಕವಾಗಿ ಆಡಳಿತ ನಡೆಸುತ್ತಿತ್ತು. ಅದುದರಿಂದಲೇ ಊರಗೌಡ. ಕಟ್ಟೇಮನೆಗೌಡ. ನಾಡಗೌಡ ಈ ಅಧಿಕಾರದ ಸಂಕೇತಗಳು. ನಾಡಗೌಡನನ್ನು ಮೀರಿದ್ದು ರಾಜನಿಗೇ ಹೋಗುತ್ತಿತ್ತು. ಈಗ ಆಧುನಿಕ ನ್ಯಾಯ ಮತ್ತು ಆಡಳಿತ ಪದ್ಧತಿ ಬಂದಿದೆ. ಆದರೂ ಧಾರ್ಮಿಕ ಮತ್ತಿತರ ನೈತಿಕ ಗ್ರಾಮ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಊರಿನ ಹಿರಿಯರ ತೀರ್ಮಾನವನ್ನು ಮಾನ್ಯ ಮಾಡುವುದು ಉಂಟು. ಅಂದು ಇವೆಲ್ಲಾ ನಿಷ್ಪಕ್ಷಪಾತವಾಗಿ ನಡೆಯುತ್ತಿದ್ದುವು. ನ್ಯಾಯಾಸ್ಥಾನದಲ್ಲಿ ಕುಳಿತವನು ಪೂರ್ವಾಗ್ರಹ ಪೀಡಿತನಾಗಿರುತ್ತಿರಲಿಲ್ಲ. ಇಂದು ಇವು ನಮ್ಮ ಬದುಕಿನ ಎಲ್ಲಾ ಅಂಗಗಳಲ್ಲಿಯೂ ಕಣ್ಮರೆಯಾಗುತ್ತಿವೆ. ಆದರೂ ಕೆಲವು ಹಳ್ಳಿಗಳು ಈ ಪ್ರಾಚೀನ ಪದ್ಧತಿಗಳಲ್ಲಿ ಉತ್ತಮವಾದುವನ್ನು ಉಳಿಸಿಕೊಂಡು ಬರುತ್ತಿವೆ. ಅಂತಹವುಗಳಲ್ಲಿ ಕರಡಹಳ್ಳಿಯೂ ಒಂದು ಎಂದು ಹೇಳಬಹುದಾಗಿದೆ.

ಮಳೆಯೇ ಇಂದಿಗೂ ನಮ್ಮ ವ್ಯವಸಾಯದ ಆಶಾಕಿರಣ. ನಾಗಮಂಗಲ ಪ್ರದೇಶವಂತೂ ಬಹುತೇಕ ಮಳೆಯನ್ನೇ ಅವಲಂಬಿಸಿಕೊಂಡಿದೆ. ಈ ಪ್ರದೇಶದಲ್ಲಿ ಪ್ರಧಾನವಾಗಿ ರಾಗಿ. ಜೋಳ ಬೆಳೆಯುತ್ತಾರೆ. ಕೆರೆಗಳ ಹಿಂದೆ ತಗ್ಗು. ಪ್ರದೇಶಗಳಲ್ಲಿ ಮಾತ್ರ ಅಷ್ಟಿಷ್ಟು ಭತ್ತ ಬೆಳೆಯುತ್ತದೆ. ಉಪಬೆಳೆಗಳಾಗಿ ಅವರೆ. ಹುರುಳಿ. ಹುಚ್ಚೆಳ್ಳು ಬೆಳೆಯುತ್ತವೆ. ನಮ್ಮ ಜನರು ಇನ್ನೂ ಹಣದ ಬೆಳೆಗಳಿಗೆ ಮಾರುಹೋಗಿಲ್ಲ. ಆಹಾರ ಧಾನ್ಯಗಳನ್ನು ಬೆಳೆಯುವುದು ನಮ್ಮ ಕರ್ತವ್ಯ ಎಂದೇ ನಂಬಿದವರಿದ್ದಾರೆ. ಈಗ ತೆಂಗು ವ್ಯಾಪಕವಾದ ಬೆಳೆಯಾಗಿ ಪರಿಣಮಿಸುತ್ತಿದೆ. ರೇಷ್ಮೆ ಮತ್ತೊಂದು ಆಧುನಿಕ ಬೆಳೆಯಾಗಿ ಪ್ರಚಾರಗೊಳ್ಳುತ್ತಿದೆ. ಕರಡಹಳ್ಳಿಯ ಮಳೆ ಬೆಳೆಗಳು ಈ ಒಟ್ಟು ಪ್ರದೇಶದಿಂದ ಭಿನ್ನವಾಗೇನೂ ಕಂಡುಬರುವುದಿಲ್ಲ.

೩. ಪೂರ್ವೀಕರು

ಕರಡಹಳ್ಳಿ ಒಂದು ಜೋಡಿ ಗ್ರಾಮ. ಜೋಡಿಕರಡಹಳ್ಳಿ ಎಂದೂ ಕರೆಯುವುದುಂಟು. ಜೋಡಿಯೆಂದರೆ ಇಬ್ಬರ ಅಧಿಕಾರ ಎಂಬ ಅರ್ಥವಿರಬಹುದು. ಸರ್ಕಾರ ತನ್ನ ಕೃಪಾಪೋಷಿತರಾದವರಿಗೆ ಧಾರ್ಮಿಕ, ರಾಜಕೀಯ ಕಾರಣಗಳಿಗೆ ದಾನ, ಧರ್ಮ, ದತ್ತಿ, ಜಹಗೀರಿ, ಜೋಡಿ ಕೊಡುತ್ತಿದ್ದ ಪದ್ಧತಿ ನಮ್ಮ ದೇಶದಲ್ಲಿ ಅತ್ಯಂತ ಪ್ರಾಚೀನ ಕಾಲದಿಂದಲೂ ನಡೆದು ಬಂದಿದೆ. ಹೀಗೆ ಕೊಡಲಾದವುಗಳು ವಂಶ ಪಾರಂಪರ್ಯವಾಗಿ ನಡೆಯುತ್ತಿದ್ದವು. ಉದಾಹರಣೆಗೆ ವೇದಶಾಸ್ತ್ರ ಪಾರಂಗತನೆಂದು ಕೊಟ್ಟ ದತ್ತಿ ಇದರ ಗಂಧವೂ ಇಲ್ಲದ ಆತನ ವಂಶಸ್ಥರಿಗೂ ಸಲ್ಲುತ್ತಿತ್ತು. ಕರಡಹಳ್ಳಿ ಬಹಳ ಹಿಂದೆಯೇ ಶ್ರೀ ವೈಷ್ಣವರೊಬ್ಬರಿಗೆ ನೀಡಿದ ಜೋಡಿಗ್ರಾಮವಾಗಿತ್ತು. ಆ ವಂಶದ ಕೊನೆಯ ವ್ಯಕ್ತಿ ಶಿಲ್ಪ ಸಿಳ್ಳಿ ಐಯ್ಯಂಗಾರ್. ಅವರು ಬಿ.ಎ., ಬಿ.ಎಲ್ ಪದವೀಧರರಾಗಿ ಹಾಸನದಲ್ಲಿ ವಕೀಲ ವೃತ್ತಿಯನ್ನು ನಡೆಸುತ್ತಿದ್ದುದನ್ನು ಈಗಿನ ಹಿರಿಯರು ಕಂಡಿದ್ದರು. ಅದಕ್ಕೂ ಹಿಂದೆ ಈ ಮನೆತನದವರು ಹಾಸನ ಜಿಲ್ಲೆಯ ಗೊರೂರಿನಲ್ಲಿ ಇದ್ದರು. ಇದು ಕರಡಹಳ್ಳಿಯ ಜೋಡೀದಾರಿಕೆಯ ಕಥೆ.

ಪ್ರತಿಯೊಂದು ಊರಿನ ನಿರ್ಮಾಣದ ಹಿಂದೆಯೂ ಒಂದು ಕಥೆ. ಅನೇಕ ವೇಳೆ ದುರಂತ ಕಥೆ ಇರುವುದು ಕಂಡುಬರುತ್ತದೆ. ಅಂತೆಯೇ ಕರಡಹಳ್ಳಿಯದೂ ಒಂದು ಕಥೆ. ನಂಜನಗೂಡು ಸೀಮೆಯ ಬದನವಾಳು ಗ್ರಾಮದ ಪಾಳೆಯಗಾರ ಅಲ್ಲಿನ ಗೌಡರ ಮಗಳನ್ನು ಮದುವೆಯಾಗುವುದಾಗಿ ಕೇಳಿದ. ಅವನು ತೊರೆಯರ ಜಾತಿಯವನು. ತೊರೆಯರವನು ಗೌಡರ ಮಗಳನ್ನು ಕೇಳುವುದು ಕಾಲಕೆಟ್ಟ ಸೂಚನೆ. ಈ ಪಾಳೆಯಗಾರನನ್ನು ಎದುರಿಸಿ ಕೊಂದುಹಾಕಿದರು ಗೌಡ ಮನೆತನದವರು. ಆದರೆ ಅವನ ಹಿಂಬಾಲಕರು ಮತ್ತು ಸೇನೆ ಇವರನ್ನು ಸುಮ್ಮನೆ ಬಿಟ್ಟೀತೆ. ಸರಿ ಇವರೆಲ್ಲಾ ರಾತ್ರೋರಾತ್ರಿ ಊರು ಬಿಟ್ಟು ಹೊರಟರು. ಯಾವ ಕಡೆಗೆಂಬುವರ ಗುರಿ ಇರಲಿಲ್ಲವಾದರೂ ತಮ್ಮವರೇ ಆಡಳಿತ ನಡೆಸುತ್ತಿದ್ದ ನಾಗಮಂಗಲ ಸೀಮೆಯತ್ತ ಹೊರಟರು.

ತಮ್ಮ ಪಾಳೆಯಗಾರನನ್ನು ಗೌಡರ ಕಡೆಯವರು ಕೊಂದಿರುವುದನ್ನು ತಿಳಿದು ಕೂಡಲೇ ಅವರನ್ನು ಸಂಹರಿಸಲು ಸೇನೆ ಹೊರಟಿತು. ರಾತ್ರಿಯಲ್ಲಿ ಊರು ಬಿಟ್ಟ ಗೌಡರು ಮತ್ತು ಅವರ ಪರಿವಾರದವರ ಗಾಡಿಗಳು ಬೆಳಕು ಹರಿಯುವಷ್ಟರಲ್ಲಿ ಕಾವೇರಿಯ ತೀರವನ್ನು ತಲುಪಿದ್ದುವು. ನದಿ ತುಂಬಿಹರಿಯುತ್ತಿತ್ತು. ಗೌಡರ ಪರಿವಾರ

ಬೇರೆ ದಾರಿಕಾಣದೆ ಅಲ್ಲಿ ನಿಲ್ಲಬೇಕಾಯಿತು. ಈ ಹೊತ್ತಿಗೆ ಪಾಳೆಯಗಾರನ ಕಡೆಯವರು ಹಿಂಬಾಲಿಸಿ ಬರುತ್ತಿರುವುದು ತಿಳಿಯಿತು. ಆಗ ಅವರು ಎದುರಿಗೆ ಕಾಣುತ್ತಿದ್ದ ಮೇಲುಕೋಟೆಯ ಕುಂಟಬೆಂಗ್ರಬೆಟ್ಟದ ಮೇಲಿನ ನರಸಿಂಹದೇವರಿಗೆ ಕೈಮುಗಿದು ನೀರಿಗಿಳಿದರು. ನದಿ ಇವರಿಗೆ ದಾರಿಮಾಡಿಕೊಟ್ಟಿತು. ಎಲ್ಲರೂ ಸುರಕ್ಷಿತವಾಗಿ ಆಚೆಯ ದಡ ಸೇರಿದರು. ಮತ್ತೆ ನದಿ ಎಂದಿನಂತೆ ಹರಿಯತೊಡಗಿತು. ಪಾಳೆಯಗಾರನ ಕಡೆಯವರು ನಿರಾಸೆಯಿಂದ ಹಿಂತಿರುಗಬೇಕಾಯಿತು.

ಒಂದಲ್ಲ ಒಂದು ದಿನ ತಮ್ಮನ್ನು ಅರಸಿ ಪಾಳೆಯಗಾರನ ಕಡೆಯವರು ಬಂದೇ ಬರುತ್ತಾರೆ. ಆಗ ಘರ್ಷಣೆಯಾಗುತ್ತದೆ. ಸಾವು ನೋವುಗಳಾಗುತ್ತವೆ. ತೊಂದರೆಯೇ ಬೇಡ ಎಂಬುದು ಗೌಡರ ಅಭಿಪ್ರಾಯವಾಗಿತ್ತು. ಆದುದರಿಂದ ಗುಂಪು ಇನ್ನೂ ಎರಡು ಮೂರು ಪಯಣ ಮುಂದುವರಿಸಿತು. ಕಡೆಗೆ ಕುರುಚಲು ಕಾಡಿನ ಮರವೊಂದರ ಕೆಳಗೆ ಒಂದು ದಿನ ತಂಗಿ ಅಲ್ಲಿ ಅಟ್ಟುಂಡರು. ಊರು ಬಿಟ್ಟು ಬರುವಾಗ ಅವರು ತಮ್ಮ ವಸ್ತುಗಳೊಂದಿಗೆ ಪೆಡಗೆಯೊಂದರಲ್ಲಿ ಬದನವಾಳು ಬೋರಪ್ಪನನ್ನು ಪೂಜಿಸಲು ತಂದಿದ್ದರಷ್ಟೆ. ಮರು ಪಯಣಕ್ಕೆ ಎಲ್ಲವನ್ನು ಸಜ್ಜುಗೊಳಿಸಿ ದೇವರ ಪೆಡಗೆಯನ್ನು ಎತ್ತಲು ಹೋದರೆ ಅದು ಮೇಲೇಳಲೇ ಒಲ್ಲದು. ಎಲ್ಲರೂ ಪ್ರಯತ್ನಿಸಿದರು ಆಗಲಿಲ್ಲ. ಕಡಗೆ ಸ್ವತಃ ಗೌಡರೇ ದೇವರ ಪೆಡಗೆ ಎತ್ತಿನೋಡಿದರು. ಅಲ್ಲಾಡಲಿಲ್ಲ. ಏನಾದರೂ ತಪ್ಪಾಗಿರಬಹುದೆಂದು ಭಕ್ತಿಯಿಂದ ಪೂಜಿಸಿ ತಪ್ಪು ಕಾಣಿಕೆ ನೀಡಿದರು. ಪೆಡಗೆ ಅಲುಗಾಡಲಿಲ್ಲ. ತಮ್ಮ ಪಯಣವನ್ನು ನಿಲ್ಲಿಸಿ ದೇವರ ಅನುಮತಿಗಾಗಿ ಕಾಯ್ದು ನೋಡಿದರು. ಪ್ರಯೋಜನವಾಗಲಿಲ್ಲ. ಕಡೆಗೆ ಆ ಪೆಡಗೆಯ ಸುತ್ತ ಹುತ್ತ ಬೆಳೆಯತೊಡಗಿತು. ಆಗ ಗೌಡರು ತಾವು ಈ ಸ್ಥಳದಲ್ಲಿಯೇ ನೆಲಸಲೆಂಬುದು ದೈವೇಚ್ಛೆ ಇರಬೇಕೆಂದು ನಿರ್ಧರಿಸಿದರು. ತಮ್ಮ ಪರಿವಾರವನ್ನು ಕಟ್ಟಿಕೊಂಡು ಕಾಡುಕಡಿದು, ತರಗನ್ನು ಗುಡಿಸಿ ವಾಸಸ್ಥಳವನ್ನು ಏರ್ಪಡಿಸಿಕೊಂಡರು. ಅದೇ ಇಂದಿನ ಕರಡಹಳ್ಳಿ. ಪೆಡಗೆ ಇಟ್ಟಿದ್ದ ಸ್ಥಳದಲ್ಲಿ ಈಗಲೂ ಹುತ್ತವೊಂದಿದೆ. ಅದಕ್ಕೆ ಕಲ್ಲುಚಪ್ಪಡಿ ಹೊದಿಸಿ ನೆರಳು ಮಾಡಲಾಗಿದೆ. ಯುಗಾದಿ ಹಬ್ಬದ ರಾತ್ರಿ ಊರಿನವರೆಲ್ಲ ಮಂಗಳವಾದ್ಯ ಸಮೇತ ಅಲ್ಲಿಗೆ ಹೋಗಿ ಪೂಜೆ ಸಲ್ಲಿಸಿ ಬರುತ್ತಾರೆ.

ಬರೆದಿಡುವ ಪದ್ಧತಿಯಿಲ್ಲದ ಯಾವುದೇ ಮನೆತನದ ಚರಿತ್ರೆ ಮೂರು ನಾಲ್ಕು ತಲೆಮಾರಿಗಿಂತ ಹಿಂದಕ್ಕೆ ದೊರೆಯುವುದಿಲ್ಲ. ಹಾಗೆ ದೊರೆಯುವುದೂ ಕೇವಲ ಹೆಸರುಗಳೇ ವಿನಃ ಅಂತಹವರ ಜೀವನ ವಿವರಗಳು ದೊರೆಯುವುದು ವಿರಳ. ಯಾರೇನಾದರೂ ಸುಪ್ರಸಿದ್ಧ ವ್ಯಕ್ತಿಗಳಾಗಿದ್ದರೆ ಅಂತಹವರ ಕೆಲವು ಪ್ರಸಂಗಗಳು ಜನರ ಮನದಲ್ಲಿ ನಿಂತು ಬಾಯಿಂದ ಬಾಯಿಗೆ ಹರಿದು ಬಂದಿರುತ್ತವೆ. ಅಂತಹವುಗಳ ಆಧಾರದಿಂದ ಕೆಲವೊಂದು ಸಂಗತಿಗಳನ್ನು ಸೇರಿಸಬಹುದು. ಬದನವಾಳಿನಿಂದ ಮೊದಲಿಗೆ ಬಂದು ಕರಡಹಳ್ಳಿಯಲ್ಲಿ ನೆಲೆನಿಂತ ಗೌಡರ ಹೆಸರು ವಿವರಗಳೇನೂ

ದೊರೆಯುವುದಿಲ್ಲ. ಎಷ್ಟೋ ತಲೆಮಾರುಗಳು ಕಳೆದುಹೋಗಿರಬಹುದು. ಈ ವಂಶದಲ್ಲಿ ಸಿಂಗಾರಿಗೌಡರೆಂಬುವರಿದ್ದರು. ಅವರು ಧರ್ಮವಂತರೆಂದು ಪ್ರಸಿದ್ಧಿ. ಬದನವಾಳಿನಿಂದ ಬಂದಾಗ ಇವರು ಶೈವರಾಗಿದ್ದವರು. ಪ್ರಾಯಶಃ ಬದನವಾಳು ಸಿದ್ಧೇಶ್ವರ ಇವರ ಮನೆ ದೇವರಿರಬೇಕು. ಆದರೆ ಕಷ್ಟಕಾಲದಲ್ಲಿ ಮೇಲುಕೋಟೆಯ ನರಸಿಂಹಸ್ವಾಮಿಯ ಮೊರೆಹೊಕ್ಕರು. ಅದರಿಂದ ಈ ಮನೆತನದವರಿಗೆ ಅನುಕೂಲವಾಯಿತು. ಆದುದರಿಂದ ಆ ದೇವರಿಗೆ ನಡೆದುಕೊಳ್ಳಲಾರಂಭಿಸಿದರು. ಸಿಂಗಾರಿಗೌಡ ಎಂಬುದು ಶೃಂಗಾರಗೌಡದ ಅಪಭ್ರಂಶ. ಆದರೆ ಮೇಲುಕೋಟೆಯ ನರಸಿಂಹಸ್ವಾಮಿ ಬೆಟ್ಟಕ್ಕೆ ಕುಂಟಸಿಂಗ್ರ ಬೆಟ್ಟ ಎಂದು ಹೆಸರಿದ್ದುದೂ ಆ ಅಂಕಿತದಲ್ಲಿ ಈ ದೇವರ ಭಕ್ತರು ತಮ್ಮ ಮಕ್ಕಳಿಗೆ ಹೆಸರಿಡುವುದೂ ಸಂಪ್ರದಾಯ. ಇಂದಿಗೂ ಈ ಪದ್ಧತಿ ನಾಗಮಂಗಲದ ಗ್ರಾಮಾಂತರ ಪ್ರದೇಶದಲ್ಲಿ ಜಾರಿಯಲ್ಲಿದೆ.

ಈ ಮನೆತನದಲ್ಲಿ ದೊರೆಯುವ ಪೂರ್ವಿಕರ ಹೆಸರೆಂದರೆ ಸಿಂಗಾರಿಗೌಡ ಎಂಬುವರದು. ಇವರು ಬಹಳ ಧರ್ಮವಂತರು. ಯಾವುದೇ ಲೌಕಿಕ ಈತಿ ಬಾಧೆಗಳಿಗೆ ಇವರು ಗಮನ ಕೊಡುತ್ತಿರಲಿಲ್ಲ. ಸರ್ವವನ್ನೂ ನಡೆಸುವವನು ಭಗವಂತ, ಎಲ್ಲವೂ ಐಮತು ನಿಯತಿಯಂತೆಯೇ ನಡೆಯಬೇಕು ನಡೆಯುತ್ತದೆ ಎಂದು ನಂಬಿದವರು. ಗೋವುಗಳನ್ನು ಸಾಕುವುದು ಇವರ ಪ್ರಧಾನ ಹವ್ಯಾಸ. ಗುಜಮಾವು. ಸಣ್ಣಮಲ್ಲಿಗೆ ಎಂಬ ಎರಡು ವರ್ಗದ ಸುಮಾರು ಮುನ್ನೂರು, ನಾನೂರು ಹಸುಗಳನ್ನು ಸಾಕಿದ್ದರು. ಅವುಗಳಿಗೆ ಹಗ್ಗ ಮೂಗುದಾರವಿಲ್ಲ. ಕುರಿಗಳನ್ನು ಕೂಡಿದಂತೆ ಹಟ್ಟಿಯಲ್ಲಿ ಕೂಡುವುದು, ಮೇಯಲು ಕಾವಲಿಗೆ ಅಟ್ಟುವುದು. ಆಳುಗಳದೆ ಎಲ್ಲಾ ಕಾರುಬಾರು. ಪ್ರಮಾಣಿಕತೆಯ ಕಾಲ. ಯಾವ ಮೋಸವೂ ಆಗುತ್ತಿರಲಿಲ್ಲ: ಬಿಂದಿಗೆಗಳಲ್ಲಿ ಹಾಲು ಕರೆದು ಮನೆಗೆ ಸಾಗಿಸುತ್ತಿದ್ದರು. ಹಾಲು ಮೊಸರು ಮಾರಾಟ ಮಾಡುವುದು ಆಗ ಅಧಾರ್ಮಿಕವೂ, ಅಸಾಮಾಜಿಕವೂ ಆಗಿದ್ದ ಕಾಲ. ಊರಿನ ಮಕ್ಕಳಿಗೆಲ್ಲಾ ಕುಡಿಕೆಗಳಲ್ಲಿ ಹಾಲು ಹೋಗುತ್ತಿತ್ತು. ದೇವಾಲಯ ಮತ್ತು ಬ್ರಾಹ್ಮಣರಿಗೆ ಹಂಚುತ್ತಿದ್ದರು. ಗೌಡರ ಮನೆಯಲ್ಲೂ ಹಾಲು, ಮೊಸರು, ಬೆಣ್ಣೆ, ತುಪ್ಪಗಳು ಧಾರಾಳವಾಗಿ ಉಪಯೋಗವಾಗುತ್ತಿದ್ದುವು. ಸಿಂಗಾರಿಗೌಡರದು ಒಂದು ರೀತಿಯ ನಿರ್ಲಿಪ್ತ ಜೀವನ ಎಂದು ಹೇಳುತ್ತಾರೆ. ಬೇಸಾಯದ ಬಗ್ಗೆ ಅವರಿಗೇನೂ ಆಸಕ್ತಿ ಇರಲಿಲ್ಲವಂತೆ. ಒಂದು ರೀತಿಯ ಏಕಾಂತತೆ. ಪ್ರಾಣಿ ಪಕ್ಷಿಗಳ ಬಗೆಗೆ ಅಪಾರ ದಯೆ. ಗೌಜಲ ಹಕ್ಕಿಗಳನ್ನು ಗೂಡುಗಳಲ್ಲಿ ಸಾಕುವ ಪರಿಪಾಠ. ಅವುಗಳಿಗೆ ತಾವೇ ಆಹಾರ ಹಾಕುತ್ತಿದ್ದರಂತೆ. ಕಣದಲ್ಲಿ ರಾಗಿಯ ರಾಶಿ ಮಳೆ ಬಿದ್ದು ತೇಲಿ ಹೋದರೂ ಇವರು ಅದರ ಬಗ್ಗೆ ಅಷ್ಟೇನೂ ತಲೆಕೆಡಿಸಿಕೊಂಡವರಲ್ಲ. ಕೊಟ್ಟವನೇ ತೆಗೆದುಕೊಂಡ ಎಂಬ ತಾತ್ವಿಕ ನಿಲುವು ಗೌಡರದು! ಎಲ್ಲಾ ಕೆಲಸ ಅವರ ಆಪ್ತಸೇವಕರವು. ಅವರ ಬಗ್ಗೆ ಗೌಡರಿಗೆ ಅಚಲವಾದ ನಂಬಿಕೆ. ಅವರೂ ಅದನ್ನು ಉಳಿಸಿಕೊಂಡಿದ್ದರು. ಈ

ಸಿಂಗಾರಿಗೌಡರಿಗೆ ಇಬ್ಬರು ಗಂಡು ಮಕ್ಕಳು. ಮೊದಲನೆಯವರು ಮರೀಗೌಡ. ಎರಡನೆಯವರು ಜವರೇಗೌಡ.

ಹಿರಿಯಮಗನಾಗಿ ಮರೀಗೌಡರು ಮನೆತನದ ಜವಾಬ್ದಾರಿ ಹೊತ್ತವರು. ಅದು ಒಟ್ಟು ಕುಟುಂಬಗಳ ಕಾಲ. ಮನೆಯ ಜನ ಸಂಖ್ಯೆಯ ಮೇಲೆ ಅವರ ಶಕ್ತಿ ನಿರ್ಧಾರವಾಗುತ್ತಿತ್ತು. ಮರೀಗೌಡರ ಕಾಲಕ್ಕೆ ಮನೆತನ ಸಾಕಷ್ಟು ಬೆಳೆದಿತ್ತು. ಅಭಿವೃದ್ಧಿಯ ಪಥದಲ್ಲಿ ಸಾಗಿತ್ತು. ಉತ್ತಮ ತಳಿಯ ದನಕರುಗಳ ಸಾಕಣಿಕೆಗೆ ನಾಗಮಂಗಲ ಸೀಮೆಯಲ್ಲಿ ಹೆಸರುವಾಸಿಯಾದ ಮನೆತನ. ಮರೀಗೌಡರು ತಂದೆಯ ಕಾಲದ ಹಸುಗಳೊಂದಿಗೆ ಹಳ್ಳಿಕಾರ ತಳಿಯ ಹೋರಿಗಳನ್ನು ಅಭಿವೃದ್ಧಿ ಪಡಿಸುವ ಯೋಜನೆಯನ್ನು ಆರಂಭಿಸಿದರು. ತಮ್ಮ ಮನೆಯ ಮುಂದಿನ ಜಗಲಿಯ ಇಕ್ಕೆಲದ ದಾವಣಿಗಳಲ್ಲಿ ಕಟ್ಟಿದ ಹೋರಿಗಳು. ಅದು ಗೌಡಿಕೆಯ ಸಂಕೇತ. ರೈತ ಎದ್ದು ದನಕರುಗಳ ಮುಖ ನೋಡಬೇಕೆಂದು ಅಚಲವಾಗಿ ನಂಬಿದ್ದ ಕಾಲ. ಒಂದೇ ಮನೆಯ ಮುಂಭಾಗ ದನಕರುಗಳಿಗೆ. ಹಿಂಭಾಗ ತಮಗೆ ಎಂದೇ ಅವರು ನಂಬಿದ್ದರು. ಕರು ಉಣಿಸಿ ಹಾಲು ಕರೆಯದೆ, ದನಕರುಗಳಿಗೆ ಮೇವು ಹಾಕದೆ ತಟ್ಟೆಯಲ್ಲಿ ಕೈಯಿಟ್ಟವರಲ್ಲ ಆ ಜನ. ಗೌಡರು ಒಮ್ಮೆ ತಮ್ಮೆಲ್ಲ ಜಾನುವಾರುಗಳ ಹುಲ್ಲು ನೀರು ಆಗಿದೆಯೇ ಎಂದು ವಿಚಾರಿಸಿಯೇ ತಾವು ಉಂಡುಮಲಗುತ್ತಿದ್ದ ಸಂಪ್ರದಾಯದವರು. ಮರೀಗೌಡರ ಹೋರಿ ಸಾಕಣೆ ಅರಮನೆಯವರೆಗೆ ತಲುಪಿತ್ತು. ಅರಮನೆಯವರು ತಮಗೆ ಬೇಕಾದ ಎತ್ತುಗಳು ಮತ್ತು ಹಸುಗಳನ್ನು ಮರೀಗೌಡರಿಂದ ಕೊಳ್ಳುತ್ತಿದ್ದರು ಅಥವಾ ತರಿಸಿಕೊಳ್ಳುತ್ತಿದ್ದರು. ಆಗಿನ ಕಾಲದಲ್ಲಿ ಇನ್ನೂ ಮೋಟಾರು ವಾಹನಗಳು ಅರಮನೆಯನ್ನು ಪ್ರವೇಶಿಸಿರಲಿಲ್ಲ. ಪ್ರವೇಶಿಸಿದ್ದರೂ ಅವು ಅತ್ಯಂತ ಅಪರೂಪ. ಅರಮನೆಯ ಸಾಗಣೆಯ ಎಲ್ಲಾ ಕೆಲಸಗಳಿಗೂ ಉತ್ತಮ ತಳಿಯ ಎತ್ತುಗಳೇ ಉಪಯೋಗವಾಗುತ್ತಿದ್ದುವು.

ಆಗಿನ ಕಾಲದಲ್ಲಿ ಊರ ಸಮಸ್ಯೆಗಳಿಗೆ ನ್ಯಾಯಾಲಯ ಹತ್ತುವ ಸಂಪ್ರದಾಯವಿರಲಿಲ್ಲ. ಅವೆಲ್ಲಾ ಏನಿದ್ದರೂ ಗ್ರಾಮದ ಮುಖಂಡರ, ಊರ ಮತ್ತು ನಾಡಗೌಡರ ಸಮ್ಮುಖದಲ್ಲಿ ತೀರ್ಮಾನವಾಗುತ್ತಿದ್ದುವು. ಕ್ಲಿಷ್ಟವಾದ ಸಮಸ್ಯೆಗಳಿದ್ದರೆ ಹೊರಗಿನಿಂದ ನ್ಯಾಯ ನಿಷ್ಠರಾದವರನ್ನು ಕರೆಯುವ ಪದ್ಧತಿಯಿತ್ತು. ಏಕೆಂದರೆ ಗ್ರಾಮದವರೇ ತೀರ್ಮಾನಿಸಿದರೆ ಪಕ್ಷಪಾತದ ದೂರು ಬಂದೀತೆಂಬ ಭಯ. ಹೀಗೆ ಹೊರಗಿನಿಂದ ಕರೆಯುತ್ತಿದ್ದುದು ನಾಡಗೌಡರನ್ನು ಮತ್ತು ಅತ್ಯಂತ ನಿಷ್ಪಕ್ಷಪಾತಿಗಳನ್ನು ಮಾತ್ರ. ಅಂತಹ ಜನಾನುರಾಗಿಗಳಲ್ಲಿ ಮರೀಗೌಡರೂ ಒಬ್ಬರಾಗಿದ್ದರು. ಅವರು ಕರಡಹಳ್ಳಿಯಲ್ಲಿ ಇರುವುದೇ ಅಪರೂಪವಾಗಿತ್ತು. ಅನೇಕ ವೇಳೆ ಊರಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಕರಡಹಳ್ಳಿಯ ಜನರೇ ತಿಂಗಳಾನುಗಟ್ಟಲೆ ಕಾಯಬೇಕಾಗುತ್ತಿತ್ತಂತೆ. ಆ ಕಾಲಕ್ಕೆ ವಿದ್ಯಾವಂತರೂ, ನ್ಯಾಯಪರರೂ ಆಗಿದ್ದ ಮರೀಗೌಡರನ್ನು

ನಾಗಮಂಗಲ ಸೀಮೆಯನ್ನೆ ಅಲ್ಲ ಅಕ್ಕಪಕ್ಕದವರೂ ಪಂಚಾಯಿತಿಯ ಮುಖಂಡರಾಗಿ ಕರೆದೊಯ್ಯುತ್ತಿದ್ದರು.

ಮರೀಗೌಡರು ಅಜಾನುಬಾಹು. ಆಕರ್ಷಕ ವ್ಯಕ್ತಿತ್ವ. ಕಚ್ಚೆಪಂಚೆ, ಅಂಗಿ. ಶಾಲು. ಪೇಟಗಳು ಅವರು ಉಟ್ಟ ಮೇಲೆ ರಾಜನೋ, ಮಂತ್ರಿಯೋ ಇದ್ದಂತೆ. ಅವರು ಊರಲ್ಲಿ ಇದ್ದರೆಂದರೆ ಕರಡಹಳ್ಳಿಯ ತುಂಬಾ ಕೋಟು. ಪೇಟ. ಪಕ್ಕಡಗಳ ಜೆಲ್ಲಾಟ ಎಂಬುದು ಈಗಲೂ ಜನಜನಿತವಾಗಿರುವ ಕಥೆ. ಅವರೊಂದಿಗೆ ನಾನಾ ವಿಷಯಗಳನ್ನು ಚರ್ಚಿಸಲು ದೂರ ಪಾಸಲೆಯ ಅನೇಕಾನೇಕ ಗೌಡರುಗಳು ಬಂದು ಕರಡಹಳ್ಳಿಯಲ್ಲಿ ಸೇರುತ್ತಿದ್ದರು. ಮನೆಯ ಮುಂದಿನ ಜೋಡಿ ಹಲಸಿನ ಮರದ ಅಡಿಯಲ್ಲಿ ಸಭೆ ಸೇರುತ್ತಿತ್ತು. ಹೊರಗಿನಿಂದ ಬಂದ ಗೌಡರುಗಳಿಗೆ ಊಟೋಪಚಾರಗಳು. ತಿಂಡಿ ತೀರ್ಥಗಳು ಅದರ ಕಥೆಯೇ ಬೇರೊಂದು. ಇದಕ್ಕಾಗಿ ಅನೇಕ ಕೊಬ್ಬಿದ ಟಗರುಗಳೇ ಹತವಾಗುತ್ತಿದ್ದವು. ಮರೀಗೌಡರಿಗೆ ನಶ್ಯಹಾಕುವ ಅಭ್ಯಾಸ. ಅದನ್ನು ಅವರು ಆಗಿನ ಕಾಲದಲ್ಲಿ ಮೈಸೂರಿನಿಂದ ತರಿಸುತ್ತಿದ್ದರಂತೆ. ಮರೀಗೌಡರ ಸಭೆ ಸೇರಿತೆಂದರೆ ಮುದ್ದೆಗಟ್ಟಲೆ ಉಂಡೆ ನಶ್ಯ ಪುಡಿಯಾಗಿ ಮೂಗಿಗೇರುತ್ತಿತ್ತು. ಧವಸಧಾನ್ಯ, ಹಾಲು ಮೊಸರುಗಳಿಗೆ ಕೊರತೆಯಿರಲಿಲ್ಲ. ಒಕ್ಕಲಿಗರ ಕೆಂಚೇಗೌಡ ಹರಿಜನರ ಕರಿಯಣ್ಣ ಗೌಡರ ಮನೆ ವಾರ್ತೆಯ ಎರಡು ಕಣ್ಣುಗಳಿದ್ದಂತೆ. ಆ ಇಬ್ಬರು ಬಂಟರು ತಮ್ಮ ಗೌಡರ ಘನತೆ ಗೌರವಗಳ ಶ್ರೀರಕ್ಷೆಯಾಗಿದ್ದರು. ಹದಿನೆಂಟನೆಯ ಶತಮಾನದ ಆದಿಭಾಗದ ನಮ್ಮ ನಾಡಿನ ಗ್ರಾಮಾಂತರ ಸ್ಥಿತಿಗತಿಗಳ ಸಂಕೇತ ಮರೀಗೌಡರು. ಆಗ ಪ್ರವಾಸಿಗರಿಗೆ ಅಲ್ಲಲ್ಲಿ ಅನ್ನಛತ್ರಗಳಿದ್ದರೂ ಹೆಚ್ಚಿನವರಿಗೆ ಗೌಡ ಮನೆತನಗಳೇ ಆಶ್ರಯ. ಊಟ ಮಾಡುವವರಿಗೆ ಮನೆಯಲ್ಲಿ ಮಾಡದವರಿಗೆ ಅಕ್ಕಿ ಹಿಡಿಕೊಟ್ಟು ಊರ ಮುಂದಿನ ತೋಟದ ಕೊಳದ ಹತ್ತಿರ ಅಡಿಗೆ ಮಾಡಿಕೊಳ್ಳಲು ಏರ್ಪಾಡು ಮಾಡುತ್ತಿದ್ದರು. ಇನ್ನು ಅರಮನೆಯ ಅಧಿಕಾರಿಗಳು ಬಂದರಂತೂ ಕೇಳುವಂತೆಯೇ ಇಲ್ಲ. ಮರೀಗೌಡರ ರೀತಿನೀತಿಗಳು ಆದರ್ಶಪ್ರಾಯವಾದವು. ಅವರು ಅತ್ಯಂತ ಜನಪ್ರಿಯ ವ್ಯಕ್ತಿ. ಬಡವರಾಧಾರಿ ಎಂಬೆಲ್ಲಾ ಮಾತುಗಳಿಗೆ ಸಾಕ್ಷಿಯಾಗಿ. ಪರಿವರ್ತನೆಯ ಕಾಲವೊಂದರ ಕೊನೆಯ ಹಂತವಾಗಿ. ನಮ್ಮ ಗತಕಾಲದ ಗ್ರಾಮಾಂತರ ಬದುಕಿನ ಉದಾತ್ತ ಸಂಕೇತವಾಗಿದ್ದರು.

೪. ತಂದೆ-ತಾಯಿ

ಕರಡಹಳ್ಳಿ ಕೃಷ್ಣಪ್ಪಗೌಡರೆಂದರೆ ಉತ್ತಮ ಜಾತಿಯ ಜಾನುವಾರುಗಳನ್ನು ಸಾಕುವುದರಲ್ಲಿ ಎತ್ತಿದ ಕೈ ಎಂಬುದು ಗ್ರಾಮಾಂತರ ಜನರ ಅಭಿಪ್ರಾಯ. ಅಪರ ರಾಜಕೀಯ, ಸಾಮಾಜಿಕ ಪ್ರತಿಷ್ಠೆಗಳು ನಗರದವರಿಗೆ. ವಿದ್ಯಾವಂತರಿಗೆ. ಹೀಗೆ ಒಬ್ಬ ವ್ಯಕ್ತಿ ಅದರಲ್ಲಿಯೂ ಗ್ರಾಮಾಂತರದಲ್ಲಿ ಹುಟ್ಟಿ ಬೆಳೆದವನು ತನ್ನ ಬಹುಮುಖ ವ್ಯಕ್ತಿತ್ವವನ್ನು ಬೆಳೆಸಿ, ಉಳಿಸಿಕೊಳ್ಳುವುದು ಅಪರೂಪದ ಸಂಗತಿ. ನಮ್ಮ ನಾಡಿನ ವರ್ಣಧರ್ಮ ಮತ್ತು ಪರಂಪರೆಯ ಬೇಲಿಯನ್ನು ದಾಟಿ ಸ್ವಂತಿಕೆಯನ್ನು ಕಾಯ್ದು ಕೊಳ್ಳುವುದು ಕಷ್ಟಸಾಧ್ಯವಾಗಿತ್ತು. ಆದರೆ ಅದೆಷ್ಟೋ ಅದಮ್ಯ ಚೇತನಗಳು ಇಂತಹ ಅಡ್ಡಿ ಆತಂಕಗಳ ಕಟ್ಟನ್ನು ಕಿತ್ತು ಆಚೆ ಬಂದು ತಮ್ಮ ಪ್ರತಿಭೆಯನ್ನು ಬೆಳಗಿಸಿ ಕೊಂಡುದುಂಟು. ಅಂತಹ ಒಂದು ಚೇತನ ಕೃಷ್ಣಪ್ಪಗೌಡರದು. ಉತ್ತಮ ತಳಿಯ ದನಗಳನ್ನು ಸಾಕಿ ಅವುಗಳ ಉತ್ತಮ ಮಾದರಿಗಳನ್ನು ಅಭಿವೃದ್ಧಿಪಡಿಸುವುದು ಕೃಷ್ಣಪ್ಪಗೌಡರಿಗೆ ಪರಂಪರೆಯಿಂದ ಬಂದ ಪದ್ಧತಿಯಾಗಿತ್ತು. ಇದರೊಂದಿಗೆ ವ್ಯವಸಾಯ ನಮ್ಮ ನಾಡಿನ ರೈತವರ್ಗದವರಿಗೆ ಜೀವನದ ಅವಿಭಾಜ್ಯ ಅಂಗವಾಗಿರು ವಂತೆಯೇ ಕೃಷ್ಣಪ್ಪಗೌಡರು ನಾಗಮಂಗಲದ ಸುತ್ತಿಗೇ ಒಳ್ಳೆಯ ಬೇಸಾಯಗಾರರೆಂದು ಹೆಸರುವಾಸಿಯಾಗಿದ್ದರು.

ಮರೀಗೌಡರು ತಕ್ಕಮಟ್ಟಿಗೆ ವಿದ್ಯಾವಂತರಾಗಿದ್ದವರು. ಆಗಿನ ಕಾಲದಲ್ಲಿ ಗ್ರಾಮಾಂತರದ ಮಕ್ಕಳಿಗೆ ಶಿಕ್ಷಣ ಸೌಲಭ್ಯಗಳು ಇರಲಿಲ್ಲ. ಈ ಅನುಕೂಲಗಳೆಲ್ಲ ಕೇವಲ ನಗರಗಳಿಗೆ, ಅಲ್ಲಿಯೂ ಮೇಲುವರ್ಗದವರೆನಿಸಿಕೊಂಡವರಿಗೆ ಮೀಸಲಾ ಗಿದ್ದುವು. ಹಳ್ಳಿಯವರು ತಮ್ಮ ಮಕ್ಕಳನ್ನು ನಗರಗಳಿಗೆ ಕಳಿಸಿ ಶಿಕ್ಷಣ ಕೊಡಿಸಲು ಸಮರ್ಥರಾಗಿರಲಿಲ್ಲ. ಅಲ್ಲದೆ ಅವರಿಗೆ ಶಿಕ್ಷಣ ಪಡೆಯುವ ಪಾರಂಪರಿಕ ಹಕ್ಕೂ ಇರಲಿಲ್ಲ. ಮತ್ತೂ ಒಂದು ಕಾರಣ ಮನೆಯಲ್ಲಿ ಎಷ್ಟು ಜನವಿದ್ದರೂ ರೈತನಾದವನಿಗೆ ಕೆಲಸಗಳಿದ್ದೇ ಇರುತ್ತಿದ್ದುವು. ವ್ಯವಸಾಯವೇ ಅಂಥದು. ಇಂದಿಗೂ ಹಳ್ಳಿಯ ಹುಡುಗರು ತಮ್ಮ ಮನೆಯ ವ್ಯವಸಾಯ ಸಂಬಂಧವಾದ ಕೆಲಸಕಾರ್ಯಗಳಿಗೆ ನೆರವಾಗಿಯೇ ಶಾಲಾಕಾಲೇಜುಗಳಿಗೆ ಬರುತ್ತಾರೆ. ಇಂದಿಗೂ ನೂರಕ್ಕೆ ಎಪ್ಪತ್ತೈದು ಜನ ರೈತರಿಗೆ ತಮ್ಮ ಮಕ್ಕಳನ್ನು ಉತ್ತಮ ದರ್ಜೆಯ ವಿದ್ಯಾರ್ಥಿನಿಲಯಗಳಲ್ಲಿ ಇಟ್ಟು

ಓದಿಸುವುದು ಆಗದ ಪರಿಸ್ಥಿತಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಎಷ್ಟೊಂದು ಗ್ರಾಮಾಂತರ ಪ್ರತಿಭೆ ಅವಕಾಶ ದೊರೆಯದೆ ನಶಿಸಿ ಹೋಗಿದೆ ಎಂಬುದನ್ನು ನೆನೆದಾಗ ಈ ದೇಶದ ಇಂದಿನ ಪರಿಸ್ಥಿತಿಗೆ ಕಾರಣ ಹೊಳೆಯದಿರದು. ಭಾರತಕ್ಕೆ ಇಂಗ್ಲಿಷರ ಆಗಮನ ಈ ದೃಷ್ಟಿಯಿಂದ ಸ್ವಾಗತಾರ್ಹ ಎನಿಸದಿರದು. ಅವರು ಶಾಲಾ ಕಾಲೇಜುಗಳನ್ನು ತೆರೆದು ಕಡೆಯ ಪಕ್ಷ ಈಗಿರುವ ರೀತಿಯ ಶಿಕ್ಷಣವನ್ನಾದರೂ ಕೊಡದಿದ್ದರೆ ನಾವೆಲ್ಲ ಎಲ್ಲಿರುತ್ತಿದ್ದೆವೊ ? ನಮ್ಮ ದೇಶದ ಇಂತಹ ಪರಿಸ್ಥಿತಿಯಲ್ಲಿಯೂ ಕೆಲವರು ತಮ್ಮ ಮಕ್ಕಳಿಗೆ ಓದು ಬರಹವನ್ನು ಕಲಿಸಲು ಯತ್ನಿಸಿರುವ ಅಪರೂಪ ಪ್ರಸಂಗಗಳು ದೊರೆಯುತ್ತವೆ. ಮರೀಗೌಡರು ಓದು ಕಲಿತದ್ದು ಅಂತಹ ಒಂದು ಪ್ರಸಂಗ. ಈ ಕಾರಣದಿಂದಾಗಿ ಅವರು ತಮ್ಮ ಮಗ ಕೃಷ್ಣಪ್ಪಗೌಡರಿಗೆ ಶಿಕ್ಷಣ ಕೊಡಿಸಲು ಮನಸ್ಸು ಮಾಡಿದರೆಂದು ಕಾಣುತ್ತದೆ.

ಊರಿನಲ್ಲಿ ಶಾಲೆಗಳಿಲ್ಲದಿದ್ದರೂ ಅಯ್ಯಗಳನ್ನು ಕರೆತಂದು ತಮ್ಮ ಮಕ್ಕಳಿಗೆ ಓದು ಬರಹ ಕಲಿಸುವ ಪದ್ಧತಿ ನಮ್ಮ ಗ್ರಾಮಾಂತರ ಸಮಾಜದಲ್ಲಿದ್ದಿತು. ಹೀಗೆ ಉಪಾಧ್ಯಾಯರನ್ನು ತಂದು ಮನೆಯಲ್ಲಿರಿಸಿಕೊಳ್ಳುವುದು, ಅವರಿಗೆ ಸಂಬಳ, ಉಂಬಳಿ ಕೊಡುವುದು ಎಲ್ಲರಿಗೂ ಸಾಧ್ಯವಾಗುವಂಥದಲ್ಲ. ಊರಿನ ಮುಖಂಡರು, ಶ್ರೀಮಂತ ಕುಳಗಳು ಮಾತ್ರ ತಮ್ಮ ಮಕ್ಕಳಿಗಾಗಿ ಈ ಏರ್ಪಾಡುಗಳನ್ನು ಮಾಡುತ್ತಿದ್ದರು. ಅಂತಹ ಮಠಗಳಲ್ಲಿ ಮುಖಂಡರ ಮಗ ಒಬ್ಬನೇ ಓದುವುದು ಸಾಧ್ಯವೆ ? ಹೀಗಾಗಿ ಆಸಕ್ತರಾದ ಇನ್ನೂ ಕೆಲವು ಹುಡುಗರಿಗೆ ಅಕ್ಷರದರ್ಶನವಾಗುತ್ತಿತ್ತು. ಈ ಮಠಗಳು ಕನ್ನಡ ಕಲಿಕೆಗೆ ಮಾತ್ರ ಸೀಮಿತ. ಅವನು ಜೈಮಿನಿ ಓದಿಬಿಟ್ಟರೆ ಮಹಾಪಂಡಿತ ಎಂದೇ ನಿರ್ಣಯ. ಮರೀಗೌಡರು ಒಬ್ಬ ಉಪಾಧ್ಯಾಯರನ್ನು ತಂದಿರಿಸಿ ತಮ್ಮ ಮಗನಿಗೆ ಶಿಕ್ಷಣ ಆರಂಭಿಸಿದರು. ಆ ಹೊತ್ತಿಗೆ ಅಲ್ಲಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ, ಮುಖ್ಯ ಊರುಗಳಲ್ಲಿ ಸರ್ಕಾರವ್ರೋ ಇಲ್ಲ ಕ್ರೈಸ್ತಮಿಷನರಿಗಳೋ ಶಾಲೆಗಳನ್ನು ಆರಂಭಿಸಿದರು. ಈ ಶಾಲೆಗಳಲ್ಲಿ ಲೋಯರ್ ಸೆಕೆಂಡರಿಯವರೆಗೆ ಮಾತ್ರ ಶಿಕ್ಷಣ. ಯಾವುದಾದರೂ ಹಳ್ಳಿಯ ಹುಡುಗ ಈ ಪರೀಕ್ಷೆಯನ್ನು ಪಾಸುಮಾಡಿದರೆ ಅದೊಂದು ದೊಡ್ಡ ಸುದ್ದಿಯಾಗಿ ಮುಂದೆ ಅವನು ಅಮಲ್ದಾರನೋ ಸುಭೇದಾರನೋ ಆಗೇ ಆಗುತ್ತಾನೆಂದು ಜನ ಅವನನ್ನು ನೋಡಲು ನೆರೆಯುತ್ತಿದ್ದರಂತೆ. ಕೃಷ್ಣಪ್ಪಗೌಡರೂ ಈ ಮಹಾಪದವಿಯವರೆಗೆ ಓದಿದವರು.

ಕೃಷ್ಣಪ್ಪಗೌಡರು ಆಗಿನ ಪದ್ಧತಿಯಲ್ಲಿ ಭಾರೀ ವಿದ್ಯಾವಂತರು. ಅಂತಹವರಿಗೆ ಸರ್ಕಾರಿ ಹುದ್ದೆಗಳು ಅರಸಿಕೊಂಡು ಬರುತ್ತಿದ್ದುವು. ಕೃಷ್ಣಪ್ಪಗೌಡರನ್ನು ಅರಸಿಕೊಂಡು ಒಂದು ಹುದ್ದೆ ಬಂದಿತು. ಅದು ಪೋಲೀಸ್ ದಫೇದಾರಿಕೆ. ಇಷ್ಟೇ ಶಿಕ್ಷಣ ಹೊಂದಿದ ಮೇಲು ವರ್ಗದವರಿಗೆ ಇನ್ನು ಉತ್ತಮ ಹುದ್ದೆಗಳೇ ಕಾದಿರುತ್ತಿದ್ದುವು. ಆದರೆ ಗ್ರಾಮಾಂತರದವರಿಗೇನಿದ್ದರೂ ಪೋಲೀಸು, ಸೇನೆ ಇತ್ಯಾದಿಯವು ತಾನೆ ?

ದಫೇದಾರಿಕೆ ಬಂದುದರಿಂದ ಗೌಡರು ಹಿಗ್ಗಿ ಹಿರೇಕಾಯಿಯಾಗಿ ಅದನ್ನು ಒಪ್ಪಿಕೊಂಡೇ ಬಿಟ್ಟರು. ಮಗನ ರೀತಿಯಿಂದ ಮರೀಗೌಡರಿಗೆ ಬಹಳ ನೋವಾಯಿತು. ಅವರು ಮಗನಿಗೆ ಶಿಕ್ಷಣ ಕೊಡಿಸಿದ್ದು ಆತ ಗ್ರಾಮದಲ್ಲಿ ನಿಂತು ಇಲ್ಲಿನ ಜನರ ಉದ್ಧಾರಕ್ಕೆ ಕಾರಣನಾದಾನೆ. ತಮ್ಮ ಮನೆವಾಳ್ತೆಯನ್ನು ಇನ್ನೂ ಉತ್ತಮವಾಗಿ ನಡೆಸಿಯಾನೆ ಎಂದು. ಆದರೆ ಮಗ ಸರ್ಕಾರಿ ನೌಕರಿಯ ಹಾದಿ ಹಿಡಿದುದು ಮರೀಗೌಡರಿಗೆ ನಿರಾಶೆಯಾಯಿತು. ಈ ಬಗ್ಗೆ ತಂದೆ ಮಕ್ಕಳಲ್ಲಿ ವಾದವಿವಾದ ನಡೆದು ಕೆಲಕಾಲ ಮುನಿಸಿಗೂ ಅದು ಕಾರಣವಾಯಿತು. ಅಂತೂ ತಂದೆಯ ಆಸೆ ಮತ್ತು ಮಾತನ್ನು ಮೀರಿ ಕೃಷ್ಣಪ್ಪ ಗೌಡರು ತಮ್ಮ ದಫೇದಾರಿಕೆಯ ಮೇಲೆ ನಡೆದೇಬಿಟ್ಟರು.

ಅತ್ಯಂತ ಸ್ವತಂತ್ರ ವಾತಾವರಣದಲ್ಲಿ ಬೆಳೆದ ಊರ ಗೌಡರ ಮಗನಾದ ಕೃಷ್ಣಪ್ಪ ಗೌಡರಿಗೆ ದಫೇದಾರಿಕೆ ಗೌಡಿಕೆಯ ಮುಂದೆ ಏನೇನೂ ಅಲ್ಲ ಎಂಬುದು ಬಹುಬೇಗ ಅರ್ಥವಾಯಿತು. ಕುಂತರೆ ನಿಂತರೆ ಮೇಲಧಿಕಾರಿಗಳಿಗೆ ಸಲಾಮು ಹಾಕಬೇಕು. ಅಂತಹ ಅಧಿಕಾರಿ ಬಿಳಿಯನಾಗಿದ್ದರಂತೂ ಈ ದೇಶೀಯ ದಫೇದಾರರು ನಾಯಿಗಿಂತ ಕಡೆ. ತಮ್ಮ ಕಮಾನು ಗಾಡಿಯಲ್ಲಿ ಕುಳಿತು ಗೌಡಿಕೆ ಮಾಡುವುದೆಲ್ಲಿ? ಸದಾ ನಿಂತು ಸಲಾಮು ಹಾಕುವ ಈ ತಾಪೇದಾರಿ ಎಲ್ಲಿ ? ತಂದೆಯ ಮಾತನ್ನು ಮೀರಿ ಬರಬಾರದಿತ್ತೆಂಬ ಅರಿವು ಮೂಡಿತು. ಆದರೆ ಅತ್ಯಂತ ಸ್ವಾಭಿಮಾನಿ ಕೃಷ್ಣಪ್ಪಗೌಡರದು ಬಡಪಟ್ಟಿಗೆ ಸೋಲೊಪ್ಪುವ ಸ್ವಭಾವವಲ್ಲ. ತಾವೇ ಗೆಲ್ಲಬೇಕೆಂಬ ಹಠ. ಈ ಎಲ್ಲಾ ಪತ-ಫಲಗಳ ಗೊಂದಲದಲ್ಲಿ ಆರು ತಿಂಗಳ ಕಾಲ ದಫೇದಾರಿ ನಡೆಸುವಲ್ಲಿಗೆ ಗೌಡರಿಗೆ ಸಾಕೋ ಸಾಕಾಗಿ ಹೋಯಿತು. ಇನ್ನು ಈ ದಫೇದಾರಿ ನನ್ನಿಂದ ಸಾಧ್ಯವಿಲ್ಲ ಎನ್ನಿಸಿತು. ತನ್ನ ಹಳ್ಳಿಯಲ್ಲಿ ಹುಲಿಯಾಗಿದ್ದ ಗೌಡರು ಇಲ್ಲಿ ಇಲಿಯಾಗಿ ಬಾಳುವುದು ಸಾಧ್ಯವಿರಲಿಲ್ಲ. ತಂದೆಯ ಎದುರು ಅಭಿಮಾನವಂಥದು. ಆರು ತಿಂಗಳು ತುಂಬುವ ಮೊದಲೇ ಕೃಷ್ಣಪ್ಪ ಗೌಡರು ತಮ್ಮ ದಫೇದಾರಿಯನ್ನು ಅತ್ತ ಒಗೆದು ತಾಯಿಯ ಬಳಿ ಓಡುವ ಕರುವಿನಂತೆ ತಮ್ಮ ಊರಿಗೆ ಓಡಿದರು. ಮಗ ದಾರಿತಪ್ಪಿದನೆಂದು ತಮ್ಮ ಮನೆವಾಳ್ತೆಯ ಭವಿಷ್ಯದ ಬಗೆಗೆ ಯೋಚನೆಗೊಳಗಾಗಿದ್ದ ಮರೀಗೌಡರಿಗೆ ಮಗ ಹಿಂತಿರುಗಿದುದು ಬಹಳ ಸಮಾಧಾನ ಮತ್ತು ಸಂತೋಷವನ್ನುಂಟುಮಾಡಿತು.

ನಾಗಮಂಗಲದಿಂದ ಕೃಷ್ಣರಾಜಪೇಟೆಗೆ ಹೋಗುವ ರಸ್ತೆಯಲ್ಲಿ ಲೋಕಪಾವನಿ ನದಿಯನ್ನು ದಾಟಿದ ಕೂಡಲೆ ಕರಿಕ್ಯಾತನಹಳ್ಳಿ ಸಿಗುತ್ತದೆ. ಈ ಹಳ್ಳಿಯ ಬಲಭಾಗದಲ್ಲಿರುವ ತೋಪಿನ ಮೂಲಕ ರಸ್ತೆಯೊಂದು ಹಾದುಹೋಗುತ್ತದೆ. ನಮ್ಮ ಎಷ್ಟೋ ದೊಡ್ಡಹಳ್ಳಿಗಳು ರಸ್ತೆಯನ್ನು ಕಾಣುವ ಮೊದಲೇ ಈ ರಸ್ತೆ ಅಲ್ಲಿದ್ದಿತೆಂದು ಹೇಳುತ್ತಾರೆ. ಆ ರಸ್ತೆಯಲ್ಲಿ ಮೂರು ನಾಲ್ಕು ಕಿಲೋಮೀಟರು ಹೋದರೆ ತಟ್ಟೇಕೆರೆ ಸಿಗುತ್ತದೆ. ಈ ಊರಿನ ರೈತರೊಬ್ಬರು ಅನಿಶ್ಚಿತ ಮಳೆ ಬೆಳೆಗಳಿಂದ ಕಂಗಾಲಾಗಿ ಜೀವನ ನಿರ್ವಹಣೆ ಮತ್ತು ತಮ್ಮ ಒಟ್ಟು ಕುಟುಂಬವನ್ನು ಸಾಕಲು ಕೆಲಸವನ್ನರಸಿ ನೀಲಗಿರಿಗೆ

ಹೋದರು. ಅಲ್ಲಿನ ಇಂಗ್ಲಿಷರ ಟೀ ತೋಟದಲ್ಲಿ ಮೇಸ್ತ್ರಿಯಾಗಿ ಸೇರಿದರು. ಕಾಲಾನು ಕ್ರಮದಲ್ಲಿ ಇವರು ತಮ್ಮ ಸ್ವಂತ ಟೀತೋಟ ಮಾಡಿ ಶ್ರೀಮಂತರಾದರು. ಆದರೆ ಅವರು ತಮ್ಮ ಹಳ್ಳಿ ತಟ್ಟೇಕೆರೆಯನ್ನು ಮರೆಯಲಿಲ್ಲ. ತಮ್ಮ ಶ್ರೀಮಂತಿಕೆಯನ್ನು ತಟ್ಟೇಕೆರೆಗೆ ವರ್ಗಾಯಿಸಿದರು. ಕಾಲಾನುಕ್ರಮದಲ್ಲಿ ತಟ್ಟೇಕೆರೆಯು ಈ ಮನೆತನ ಇಡೀ ತಾಲ್ಲೂಕಿನಲ್ಲಿ ಹೆಸರುವಾಸಿಯಾಯಿತು. ಒಂದು ಪ್ರತಿಷ್ಠಿತ ಮನೆತನವೆಂದು ಪ್ರಸಿದ್ಧಿಗೂ ಬಂದಿತು. ಈ ಮನೆಯವರು ನೀಲಗಿರಿಯ ತಮ್ಮ ತೋಟದ ಆದಾಯದ ಹಣವನ್ನು ಗಾಡಿಗಳಲ್ಲಿ ಹೇರಿ ತರುತ್ತಿದ್ದರೆಂಬ ದಂತಕತೆಗಳೂ ಇಂದಿಗೂ ಬದುಕಿ ಜನಮನದಲ್ಲಿ ಉಳಿದಿವೆ. ಮುಂದೆ ಈ ಮನೆತನ ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿಯೂ ಪ್ರಮುಖ ಪಾತ್ರವಹಿಸಿತು. ಈವಂಶದ ಟಿ. ಎನ್. ಕಪನೀಗೌಡ, ಟಿ. ಎನ್. ಮಾದಪ್ಪ ಗೌಡ ಮತ್ತು ಟಿ. ಎನ್. ಬಸಪ್ಪಗೌಡ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖವಾದ ವರು. ಕಪನೀಗೌಡರು, ಮಾದಪ್ಪಗೌಡರು ಮತ್ತು ಬಸಪ್ಪಗೌಡರು ಅನೇಕ ವರ್ಷ ರಾಜಕಾರಣದಲ್ಲಿಯೂ ಇದ್ದವರು. ಮಾದಪ್ಪಗೌಡರು ಶಾಸನಸಭಾ ಸದಸ್ಯರೂ ಆಗಿದ್ದರು. ಈ ಮನೆತನದ ಮಾದಾಮೇಸ್ತ್ರಿಯವರು ಕರಡಹಳ್ಳಿ ಮರೀಗೌಡರ ಸಮಕಾಲೀನರು. ಗ್ರಾಮಪಂಚಾಯಿತಿಯ ಅನೇಕ ಕೆಲಸಗಳಿಗಾಗಿ ಈ ಇಬ್ಬರೂ ಆಗಾಗ ಸೇರುತ್ತಿದ್ದುದುಂಟು. ವಥೇದಾರಿಯನ್ನು ತೊರೆದು ಬಂದ ಮಗ ಕೃಷ್ಣಪ್ಪ ಗೌಡನಿಗೆ ಮದುವೆ ಮಾಡಬೇಕೆಂದು ಮರೀಗೌಡರು ನಿರ್ಧರಿಸಿದರು. ಆಗ ಅವರಿಗೆ ನೆನಪಿಗೆ ಬಂದುದು ತಟ್ಟೇಕೆರೆ ಮಾದಾಮೇಸ್ತ್ರಿಯವರ ಮಗಳು ನಿಂಗಮ್ಮ.

ನಿಂಗಮ್ಮನವರು ನಮ್ಮ ಪ್ರಾಚೀನ ಸ್ತ್ರೀಕುಲದ ಸಂಕೇತ. ಎತ್ತರದ ನಿಲುವು, ಗ್ರಾಮಾಂತರ ಹೆಣ್ಣು ಮಕ್ಕಳಲ್ಲಿ ಅಪರೂಪವಾದ ಬಣ್ಣ, ಲಕ್ಷಣಯುತ ಮೈಕಟ್ಟು. ಸರಳ ಸೌಜನ್ಯಯುತ ವ್ಯಕ್ತಿತ್ವ, ಒಟ್ಟುಕುಟುಂಬದಲ್ಲಿ ಬೆಳೆದ ಹೆಣ್ಣುಮಕ್ಕಳಲ್ಲಿರುವ ಉದಾರತೆ. ಕೃಷ್ಣಪ್ಪಗೌಡ ಮತ್ತು ನಿಂಗಮ್ಮ ಇವರ ಮದುವೆ ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು, ಮದುವೆಯಾದ ಮೇಲೆ ಸಾಮಾನ್ಯವಾಗಿ ನಾಚಿಕೆಯಿಂದ ಹುಡುಗಿಯರ ಮನಸ್ಸು ಹೊಣೆಗಾರಿಕೆಯತ್ತ ತಿರುಗುತ್ತದೆಂದು ಹೇಳುತ್ತಾರೆ. ನಿಂಗಮ್ಮನವರು ಒಂದು ದೊಡ್ಡ ಮನೆಯ ಮಗಳಾಗಿ ಮತ್ತೊಂದು ದೊಡ್ಡ ಮನೆಯ ಸೊಸೆಯಾಗಿ ಕಾರ್ಯನಿರ್ವಹಿಸುವುದು ಅಷ್ಟೇನು ಕಷ್ಟವೆನಿಸಲಿಲ್ಲ. ಸಾಮಾನ್ಯವಾಗಿ ಈ ಮನೆತನಗಳ ಸ್ತ್ರೀಯರ ಜವಾಬ್ದಾರಿಗಳು ಒಂದೇ ರೀತಿಯಲ್ಲಿರುತ್ತವೆ. ನಿಂಗಮ್ಮನವರದು ಅಹಂ ಇಲ್ಲದ ವ್ಯಕ್ತಿತ್ವವಾದುದರಿಂದ ಬಹುಬೇಗ ಕಾಲಿರಿಸಿದ ಮನೆಯಲ್ಲಷ್ಟೇ ಅಲ್ಲ ಆ ಊರಿನಲ್ಲಿಯೂ ಜನಪ್ರಿಯರಾಗಿ, ನಾಲ್ಕು ಜನರಿಗೆ ಬೇಕಾದವರಾದರು. ದಾಂಪತ್ಯಜೀವನದ ಫಲವಾಗಿ ನಿಂಗಮ್ಮನವರಿಗೆ ಒಂದು ಹೆಣ್ಣು, ಒಂದು ಗಂಡು ಮಕ್ಕಳೂ ಆದರು. ಆದರೆ ವಿಧಿಯ ಆಟವೇ ಬೇರೆಯಾಗಿತ್ತು. 1918ರಲ್ಲಿ ಜರ್ಮನಿಯಿಂದ ಸಾಂಕ್ರಾಮಿಕವಾಗಿ ಹರಡಿದ

ಇನ್‌ಫ್ಲುಯೆಂಜಾ ಎಂಬ ಮಾರಿಜ್ವರ ಭಾರತದ ಅನೇಕ ಮನೆಗಳನ್ನೇ ಬರಿದು ಮಾಡಿತು. ಆ ಭಯಂಕರ ವ್ಯಾಧಿಯಿಂದ ಬದುಕಿ ಉಳಿದವರು ಹೇಳುವ ಚಿತ್ರ ಮೈನಡು ಗಿಸುತ್ತದೆ. ಒಂದು ಹೆಣವನ್ನು ಸ್ಮಶಾನದಲ್ಲಿ ಮಣ್ಣು ಮಾಡಿ ಬರುವ ಹೊತ್ತಿಗೆ ಮತ್ತೊಂದು, ಮಗದೊಂದು. ವಿಧಿಯಂತೆ ನಡೆಯುವುದು ಸಾಧ್ಯವಾಗದೆ ಊರಿಂದ ಗಾಡಿಗಳಲ್ಲಿ ಸಾಗಿಸಿ ಬಿಸಾಡಲಾರಂಭಿಸಿದರು. ಕಡೆಕಡೆಗೆ ಅದೂ ಆಗದೆ ಎಷ್ಟೋ ಊರನ್ನೇ ತೊರೆದು ಹೋದರಂತೆ. ಶ್ರೀಮತಿ ನಿಂಗಮ್ಮನವರು ತಮ್ಮ ಇಬ್ಬರು ಚಿಕ್ಕಮಕ್ಕಳನ್ನು ಬಿಟ್ಟು ಈ ಮಾರಿಗೆ ತುತ್ತಾದರು. ತಮ್ಮ ಹೊರಗಿನ ಕೆಲಸ ಗಳೊಂದಿಗೆ ಮನೆ, ಮಕ್ಕಳನ್ನೂ ನೋಡಿಕೊಳ್ಳುವುದು ಅಸಾಧ್ಯವಾದುದರಿಂದ ಕೃಷ್ಣಪ್ಪಗೌಡರು ಕಾಂತರಾಜಪುರದ ಲಿಂಗಣ್ಣನವರ ಮಗಳು ಸಂಜಮ್ಮ ಅವರನ್ನು ತಮ್ಮ ಎರಡನೆಯ ಹೆಂಡತಿಯಾಗಿ ಮದುವೆಯಾದರು.

ತಂದೆ ತೀರಿಕೊಂಡ ಮೇಲೆ ಕೃಷ್ಣಪ್ಪಗೌಡರು ಸಕಲ ಜವಾಬ್ದಾರಿಯನ್ನೂ ಹೊತ್ತರು. ವಂಶಪಾರಂಪರ್ಯವಾಗಿ ಬಂದ ಬೇಸಾಯ ಉತ್ತಮ ತಳಿಯ ರಾಸು ಗಳನ್ನು ಸಾಕುವುದರೊಂದಿಗೆ ವಿದ್ಯಾವಂತರಾದುದರಿಂದ ದೇಶದ ಆಗುಹೋಗುಗಳ ಬಗ್ಗೆಯೂ ಓದಿ ತಿಳಿಯಲಾರಂಭಿಸಿದರು. ಆಗಷ್ಟೇ ಭಾರತೀಯ ಸ್ವಾತಂತ್ರ್ಯ ಚಳವಳಿ ಹಳ್ಳಿಹಳ್ಳಿಯನ್ನು ತನ್ನ ಬಾಹುವಿಗೆ ತೆಗೆದುಕೊಳ್ಳುತ್ತಿದ್ದ ಕಾಲ. ದೇಶದ ನಾನಾ ಕಡೆ ಗಳಲ್ಲಿ ಇಂಗ್ಲಿಷರು ಭಾರತೀಯರ ಮೇಲೆ ನಡೆಸಿದ ದೌರ್ಜನ್ಯದ ಕಥೆಗಳನ್ನು ಓದಿದಾಗ, ಕೇಳಿದಾಗ ಕೃಷ್ಣಪ್ಪಗೌಡರಲ್ಲಿ ರೋಷ ಉಕ್ಕುತ್ತಿತ್ತು. ತಮ್ಮ ದಫೇದಾರಿಯ ದಿನಗಳಲ್ಲಿ ಆಂಗ್ಲರ ದರ್ಪ ಮತ್ತು ಅಹಂಕಾರಗಳನ್ನು ಕಂಡಿದ್ದ ಗೌಡರಿಗೆ ಅವರನ್ನು ಈ ನಾಡಿನಿಂದ ತೊಲಗಿಸುವ ಕಾರ್ಯಕದಲ್ಲಿ ತಾನು ಪಾಲುಗೊಳ್ಳಬೇಕೆಂದು ನಿರ್ಧರಿಸಿದರು. ತಾವು ನ್ಯಾಯಪಂಚಾಯಿತಿಗಳಿಗೆ ಹೋದೆಡೆಯಲೆಲ್ಲ ಸ್ವಾತಂತ್ರ್ಯ ಸಂಗ್ರಾಮದ ಬಗೆಗೆ ಜನರಿಗೆ ತಿಳಿಯ ಹೇಳಲಾರಂಭಿಸಿದರು. ಅನೇಕ ದಿನಗಳ ಕಾಲ ಇವರ ಚಟುವಟಿಕೆಗಳು ನಿರಾತಂಕವಾಗಿ ನಡೆದುವು. ಆದರೆ ಈ ಸ್ವಾತಂತ್ರ್ಯದ ಹಂಬಲ ಇನ್‌ಫ್ಲುಯೆಂಜಾದಂತೆ ಮನೆಮನೆಯನ್ನು ಹೊಕ್ಕಾಗ ಆಳರಸರು ಹಳ್ಳಿಗಳತ್ತಲೂ ಗಮನ ಹರಿಸಬೇಕಾಯಿತು. ಕೃಷ್ಣಪ್ಪಗೌಡರು ಮೊದಮೊದಲು ಮಹಾರಾಜರ ಪರವಾಗಿದ್ದವರು. ಅದು ಆಗಿನ ಕಾಲದ ಗ್ರಾಮಾಂತರದವರ ಸ್ವಭಾವವೂ ಆಗಿತ್ತು. ಆದರೆ ಸ್ವಾತಂತ್ರ್ಯದ ಅರಿವು ಮತ್ತು ಮಹತ್ವಗಳ ಆಕಾಂಕ್ಷೆ ಬೆಳೆದಂತೆಲ್ಲಾ ಕೃಷ್ಣಪ್ಪಗೌಡರು ಬಹುಬೇಗ ತಮ್ಮ ಪರಂಪರಾನುಗತ ಭಾವನೆಗಳಿಗೆ ತಿಲಾಂಜಲಿಯಿತ್ತು, ಹೊಸದರತ್ತ ತಿರುಗಿದರು. ಮಂಡ್ಯ ಮೈಸೂರು ಪ್ರಾಂತ್ಯವನ್ನೆಲ್ಲಾ ಸುತ್ತಿ ಸ್ವಾತಂತ್ರ್ಯ ಸಂಗ್ರಾಮದ ಬಗೆಗೆ ಪ್ರಚಾರ ನಡೆಸಿದರು. ಇಂಡವಾಳು ಹೊನ್ನಯ್ಯ, ಹೊನಗಾನಹಳ್ಳಿ ಪುಟ್ಟಣ್ಣ ಇವರು ಗೌಡರ ಆಪ್ತರು. ಕೃಷ್ಣಪ್ಪಗೌಡರ ಪ್ರಭಾವ ಎಲ್ಲಿಯವರೆಗಿತ್ತೆಂದರೆ ಕೆಲವು ಕಾಲ ಅವರನ್ನು ಮೈಸೂರು ಜಿಲ್ಲೆಯಿಂದ ಗಡೀಪಾರು ಮಾಡಲಾಗಿತ್ತು. ಆಗ ಮಂಡ್ಯ ಜಿಲ್ಲೆ

ಇನ್ನೂ ಆಗಿರಲಿಲ್ಲ. ಹೀಗೆ ಪ್ರಜಾಕಂಟಕ ದಫೇದಾರನಾಗಬೇಕಿದ್ದ ಕೃಷ್ಣಪ್ಪಗೌಡರು ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯ ನಾಯಕರಾದರು.

ಜನಸಮುದಾಯದ ಹೃದಯದಲ್ಲಿ ಭುಗಿಲೆದ್ದ ಸ್ವಾತಂತ್ರ್ಯದ ಆಸೆಯನ್ನು ಹತ್ತಿಕ್ಕುವುದು ಆಳರಸರಾದ ಬ್ರಿಟಿಷರಿಗಾಗಲಿ ಅವರ ಕೈಗೊಂಬೆಗಳಾಗಿದ್ದ ದೇಶೀಯ ರಾಜರಿಗಾಗಲಿ ಸಾಧ್ಯವಿಲ್ಲದ ಮಾತು ಎಂಬುದು ಅರಿವಾದಾಗ ಅಲ್ಲಲ್ಲಿ ಪ್ರಜಾಪ್ರತಿನಿಧಿ ಸಭೆಗಳು ಆರಂಭವಾದುವು. ಆಡಳಿತದಲ್ಲಿ ಪ್ರಜೆಗಳೂ ಪಾಲುಗೊಳ್ಳುವುದರ ಮೊದಲ ಹಂತ ಇದು. ಇಲ್ಲಿಯೂ ಆಳುವವರ ಕುತಂತ್ರವೇ ಪ್ರಧಾನವಾಗಿತ್ತು. ಏಕೆಂದರೆ ಪ್ರಜಾಪ್ರತಿನಿಧಿಸಭೆಯ ಸದಸ್ಯರಾಗುತ್ತಿದ್ದವರು ಸಾಮಾನ್ಯವಾಗಿ ಶ್ರೀಮಂತರು. ಪ್ರತಿಷ್ಠಿತರು. ಊರ ಮುಖಂಡರುಗಳು ಮಾತ್ರ. ಇವರಲ್ಲಿ ಬಹುಪಾಲು ಜನರು ಸರ್ಕಾರದೊಂದಿಗಿನ ತಮ್ಮ ಕೃಪಾಶ್ರಯ ಸಂಬಂಧಗಳಿಂದಾಗಿ ಸ್ವಾತಂತ್ರ್ಯ ವಿರೋಧಿಗಳೇ ಆಗಿದ್ದರು. ಆದರೆ ಅವರಲ್ಲಿಯೂ ನಿಜವಾದ ದೇಶಪ್ರೇಮಿಗಳಿದ್ದರು. ಕೃಷ್ಣಪ್ಪಗೌಡರನ್ನು ಪ್ರಜಾಪ್ರತಿನಿಧಿಸಭೆಯ ಸದಸ್ಯರಾಗಿ ನೇಮಿಸಲಾಯಿತು. ಅಲ್ಲಿ ಗೌಡರು ತಮ್ಮ ಗ್ರಾಮಾಂತರ ಜನಗಳಿಗೆ ಅನುಕೂಲವೊದಗಿಸುವ ಕೆಲಸಗಳ ಬಗ್ಗೆ ತಳೆಯುತ್ತಿದ್ದ ಹಠವಾದಿ ನಿಲುವು ಅನೇಕ ಬಾರಿ ಈತನನ್ನು ಯಾಕಾದರೂ ಸದಸ್ಯನನ್ನಾಗಿ ಮಾಡಿದೆವೋ ಎಂದು ಪರಿತಪಿಸುವಂತಿರುತ್ತಿತ್ತು. ಶ್ರೀ ಕೃಷ್ಣಪ್ಪಗೌಡರು ಅನೇಕ ವರ್ಷಗಳ ಕಾಲ ಈ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು.

ಕೃಷ್ಣಪ್ಪಗೌಡರು ಪ್ರಮುಖ ವ್ಯಕ್ತಿಯಾಗಿದ್ದರು. ಅವರು ಲೆಜಿಸ್ಲೇಟಿವ್ ಕೌನ್ಸಿಲ್, ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದಾಗಲೇ ಮಂಡ್ಯ ಜಿಲ್ಲೆಯ ಕನಸು ಕಂಡಿದ್ದರು. ಮುಂದೆ ಅವರು ಮೈಸೂರು ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾದಾಗ ಏನಾದರೂ ಸರಿಯೆ ಮಂಡ್ಯ ಜಿಲ್ಲೆಯ ರಚನೆಯಾಗಬೇಕೆಂದು ಈ ಭಾಗದ ಅನೇಕ ಪ್ರತಿನಿಧಿ ಮಿತ್ರರೊಂದಿಗೆ ಚರ್ಚಿಸಿದರು. ಈ ಎಲ್ಲ ಫಲಗಳಿಂದಾಗಿ 1939ರಲ್ಲಿ ಮಂಡ್ಯ ಜಿಲ್ಲೆ ರಚನೆಯಾಯಿತು. ಕೃಷ್ಣಪ್ಪಗೌಡರು ಮಂಡ್ಯ ಜಿಲ್ಲಾಬೋರ್ಡಿನ ಅಧ್ಯಕ್ಷರೂ ಆದರು. ಸ್ವಾತಂತ್ರ್ಯ ಬಂದ ಮೇಲೆ ಅವರು ಮೇಲ್ಮನೆಯ ಸದಸ್ಯರೂ ಆಗಿ ಕೆಲಸ ಮಾಡಿದರು. ಪ್ರಾಯಃ ಅವರು ದಫೇದಾರನಾಗಿ ಮುಂದುವರಿದಿದ್ದರೆ ಏನಾಗುತ್ತಿದ್ದರೋ ತಿಳಿಯದು. ಅದನ್ನು ತೊರೆದುದರಿಂದ ಜನಮನದಲ್ಲಿ ಉಳಿದರು. ಕೃಷ್ಣಪ್ಪಗೌಡರು ಭೋಜನಪ್ರಿಯರು. ಮೇಲುಕೋಟೆ ಕೆಂಪಂಚಿನ ಕಚ್ಚೆ ಪಂಚೆ. ಕೋಟು. ಜರಿಪೇಟಗಳ ಈ ಆಜಾನುಬಾಹು ನೋಡಿದವರಲ್ಲಿ ಭಯ ಹುಟ್ಟುವಂತೆ ಕಂಡರೂ ಅಂತರಂಗದಲ್ಲಿ ಅತ್ಯಂತ ಮೃದುವಾದ ವ್ಯಕ್ತಿತ್ವವನ್ನು ಹೊಂದಿದ್ದರು.

ಗ್ರಾಮಾಂತರದಲ್ಲಿ ಹುಟ್ಟಿದವನು ಅತ್ಯಂತ ಮುಕ್ತವಾಗಿ ಬೆಳೆಯುತ್ತಾನೆ. ಪ್ರಕೃತಿಯ ಮಡಿಲಲ್ಲಿ ಹಾಯಾಗಿರುತ್ತಾನೆ. ಮರ, ಗಿಡ, ಕೆರೆತೊರೆಗಳು ಸೂರ್ಯೋದಯ

ಸೂರ್ಯಾಸ್ತಗಳು, ಬಿಸಿಲು ಮಳೆ ಗಾಳಿಗಳು, ಗುಡುಗು ಮಿಂಚು, ಪ್ರಾಣಿ ಪಕ್ಷಿಗಳು. ಎಂತಹ ಮಧುರ ವಾತಾವರಣ. ವಾಹನಗಳ ಕಾಟವಿಲ್ಲ. ಅವು ಬಿಡುವ ಹೊಗೆಯ ಧೂಳುಗಳಿಲ್ಲ. ಇಲ್ಲಿ ಯಾವುದೇ ಅಡ್ಡಿ ಆತಂಕಗಳಿಲ್ಲ. ಮಳೆ ಬೆಳೆ ಹೂವು ಹಣ್ಣು ಯಾವುದೂ ಕೃತಕವಲ್ಲ.ಮೊದಲ ಕೋಳಿಯ ಕೂಗಿನೊಂದಿಗೆ ಎಚ್ಚರಗೊಳ್ಳುವ ಹಳ್ಳಿಯ ಬದುಕು ದೀಪ ಹಚ್ಚುವ ತನಕ ನಿರಂತರವಾಗಿ ಪ್ರಕೃತಿಯ ಮಧ್ಯದಲ್ಲಿಯೇ ನಡೆಯುತ್ತದೆ. ಈಗೀಗ ಆಧುನಿಕತೆಯ ಹಸರಿನಲ್ಲಿ ಗ್ರಾಮ ಜೀವನ ಕದಡುತ್ತಿದ್ದರೂ ನಗರಗಳಷ್ಟು ಕೆಟ್ಟಿಲ್ಲವೆಂದೇ ಹೇಳಬೇಕು. ಐವತ್ತು ಅರವತ್ತು ವರ್ಷಗಳ ಹಿಂದಿನ ಗ್ರಾಮ ಸ್ವಯಂ ಪರಿಪೂರ್ಣವಾಗಿತ್ತು. ಮುಕ್ತವಾಗಿತ್ತು. ಮಧುರವಾಗಿತ್ತು. ಪ್ರಕೃತಿಮಯವಾಗಿತ್ತು. ಇಂತಹ ಒಂದು ಮುಕ್ತ ವಾತಾವರಣದಲ್ಲಿ 1916 ನೆಯ ವರ್ಷ ಮಾರ್ಚ್ ತಿಂಗಳು ಹದಿನಾರನೆಯ ದಿನದಂದು ಶ್ರೀ ಕೆ. ಸಿಂಗಾರಿಗೌಡರು ನಾಗಮಂಗಲ ತಾಲ್ಲೂಕು ಕರಡಹಳ್ಳಿಯ ಕೃಷ್ಣಪ್ಪಗೌಡ ಸಿಂಗಮ್ಮರ ಹಿರಿಯ ಮಗನಾಗಿ ಜನ್ಮವೆತ್ತಿದರು.

ತಾತ ಮರೀಗೌಡರು ಸುಗ್ಗನಹಳ್ಳಿಯ ಜಾತ್ರೆಗೆ ದನಗಳ ವ್ಯಾಪಾರಕ್ಕೆ ಹೋಗಿದ್ದರು. ಮಗುವಿನ ಜನನ ಸುದ್ದಿಯನ್ನು ಅವರಿಗೆ ಜಾತ್ರೆಗೇ ತಿಳಿಸಲಾಯಿತು. ವಂಶೋದ್ಧಾರಕನ ಜನನವಾಯಿತೆಂದು ಹಿಗ್ಗಿದ ಮರೀಗೌಡರು ಅಲ್ಲಿಯೇ ಸಿಹಿ ಹಂಚಿ ಸಂತರ್ಪಣೆ ನಡೆಸಿದರಂತೆ. ಈ ಮೊದಲೇ ಸಿಂಗಮ್ಮನವರಿಗೆ ಹೆಣ್ಣು ಮಗು ಜಾನಕಮ್ಮ ಈ ಲೋಕಕ್ಕೆ ಬಂದಾಗಿತ್ತು. ಆದರೆ ಗಂಡಿನಿಂದಲೇ ವಂಶೋದ್ಧಾರ ಎಂದು ನಂಬಿದ ಕಾಲ ಅದು. ಮಗುವಿನ ಜನನ ಮನೆಮಂದಿಗೆಲ್ಲಾ ಸಂತಸ ಸಡಗರವನ್ನುಂಟುಮಾಡಿತು. ಆದರೆ ಈ ಸಂತಸ ಬಹಳ ಕಾಲ ಉಳಿಯಲಿಲ್ಲ. 1918 ರಲ್ಲಿ ದೇಶದ ಮೇಲೆಲ್ಲಾ ಅತಿ ಭಯಂಕರ ಧಾಳಿ ನಡೆಸಿದ ಇನ್‌ಫ್ಲುಯೆಂಜ ಅಥವಾ ನಮ್ಮಹಳ್ಳಿಯವರು ಹೇಳುವಂತೆ ಮಾರಿಬೇನೆ ಮನೆ ಮನೆಯನ್ನೇ ಊರೂರನ್ನೇ ಗುಡಿಸಿಹಾಕಿತಷ್ಟೆ. ಸಿಂಗಾರಿಗೌಡರು ಒಂದೂವರೆ ವರ್ಷದ ಮಗುವಾಗಿದ್ದಾಗ ತಾಯಿ ಸಿಂಗಮ್ಮನವರು ಈ ಬೇನೆಗೆ ತುತ್ತಾಗಿ ಇಹವನ್ನು ಬಿಟ್ಟರು. ಆಗ ಮನೆ ಮನೆಯಲ್ಲೂ ಸಾವು ಸಾಮಾನ್ಯ. ಯಾರು ಯಾರನ್ನೂ ಸಂತೈಸುವ ಸ್ಥಿತಿಯಲ್ಲಿರಲಿಲ್ಲ. ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ ಮಗುವಿಗೆ ಚಿಕ್ಕಜ್ಜಿ ಕೆಂಪಮ್ಮ ತಾಯಿಯ ಸ್ಥಾನದಲ್ಲಿ ನಿಂತು ಸಾಕಿಸಲಹಿದರು. ಅಷ್ಟೇನೂ ಉತ್ತಮ ಬೆಳವಣಿಗೆಯಿಲ್ಲದ ಮಗುವಿಗೆ ಅರಳೆ ಬತ್ತಿಯನ್ನು ಹಾಲಲ್ಲಿ ಅದ್ದಿ ಬಾಯಿಗೆ ಹನಿಸಿ, ಅತ್ಯಂತ ಮಮತೆಯಿಂದ ಸಾಕಿದರಂತೆ. ಮುಂದೆ ಮಗು ಓಡಾಡುವಂತಾಗಿ ಊರಿಗೆ ಬಂದಾಗ ಊರ ಹೆಂಗಸರೆಲ್ಲಾ ತಾಯಂದಿರಾದರು. ಸಿಂಗಮ್ಮನವರಿಂದ ಉಪಕೃತರಾದವರು ಅವರ ಮಗುವಿನ ಮೇಲೆ ಮಮಕಾರ ತೋರಿಸಿದರು. ತಮ್ಮ ಎದೆಹಾಲು ಕುಡಿಸಿದರು. ತಾಯಿ ಇಲ್ಲದ ಕೊರತೆಯನ್ನು ಸ್ವಲ್ಪಮಟ್ಟಿಗಾದರೂ ತುಂಬಿಕೊಟ್ಟರು. ತಾತ ಮರೀಗೌಡರಿಗೆ ಮೊಮ್ಮಗನ ಮೇಲೆ ಅಪಾರ ಪ್ರೀತಿ. ಮನೆತನದವರು ವಲಸೆ ಬರುವಾಗ ದೇವರಿಗೆ ಹರಿಸಿಕೊಂಡು ಬಿಟ್ಟಿದ್ದಂತೆ ಮೇಲುಕೋಟೆಯಲ್ಲಿ

ಮೊದಲ ಮುಡಿ ತೆಗೆಸಲು ಹೋದಾಗ ಮರೀಗೌಡರು ಅಲ್ಲಿನ ಬ್ರಾಹ್ಮಣರಿಗೆ ಒಂದು ಮಹಾಸಂತರ್ಪಣೆಯನ್ನೇ ಏರ್ಪಡಿಸಿದ್ದರಂತೆ, ಮಹಾಜನಗಳಿಗೆ ಆಶ್ಚರ್ಯವಾಗುವಂತೆ. ಅದೇ ಸಂದರ್ಭದಲ್ಲಿ ತಮ್ಮ ಕೈಯ ಬೆರಳಿನಲ್ಲಿದ್ದ ಮನೆತನದ ಅಧಿಕಾರ ಸಂಕೇತವಾದ ಉಂಗುರವನ್ನು ಮಗು ಸಿಂಗಾರಿಗೌಡರ ಕೈಬೆರಳಿಗೆ ತೊಡಿಸಿದರು. ಅದು ಈಗಲೂ ಗೌಡರ ಕೈಯಲ್ಲಿದೆ.

ಬೆಳೆದ ಹುಡುಗ ಮನೆಯಿಂದ ಆಚೆ ತಲೆ ಹಾಕಿದರೆ ಪ್ರಕೃತಿಯ ಮಡಿಲು. ಸಾಮಾನ್ಯವಾಗಿ ಹಳ್ಳಿಯ ಹುಡುಗರು ಗುಂಪುಕೂಡಿ ಗೋಲಿ, ಗಜ್ಜುಗ, ಚಿಣ್ಣಿಕೋಲು ಆಡುವುದು ಈಜುವುದು ದನಕರು ಮೇಯಿಸಲು ಬೋರೆಗೆ ಹೋಗುವುದು ವಾಡಿಕೆ. ಆದರೆ ಬಾಲಕ ಸಿಂಗಾರಿಗೌಡರು ಹೆಚ್ಚು ಗುಂಪು ಗಲಭೆ ಇದ್ದಲ್ಲಿ ಸೇರುತ್ತಿರಲಿಲ್ಲ. ಇದಕ್ಕೆ ಎರಡು ಕಾರಣಗಳಿರಬಹುದು. ಒಂದು ಅತ್ಯಂತ ಎಳೆಯ ವಯಸ್ಸಿನಲ್ಲಿ ತಾಯಿ ತೀರಿಕೊಂಡುದು. ಇನ್ನೊಂದು ಈ ಹೊತ್ತಿಗಾಗಲೇ ಕೃಷ್ಣಪ್ಪಗೌಡರ ಮನೆಯಲ್ಲಿ ಆಧುನಿಕತೆ ತಲೆಹಾಕಿದ್ದುದು. ಮನೆತುಂಬ ಕೋಳಿಗಳಿದ್ದುವು. ಅವುಗಳಲ್ಲಿ ಅನೇಕವು ದಿನವೂ ಒಂದೊಂದು ಮೊಟ್ಟೆ ಇಡುತ್ತಿದ್ದುವು. ಆ ಬಿಳಿಯ ದುಂಡಾಕಾರದ ಮೊಟ್ಟೆ ಬಾಲಕ ಸಿಂಗಾರಿಗೌಡರಿಗೆ ಕುತೂಹಲ ಹುಟ್ಟಿಸುತ್ತಿತ್ತು. ಇದರೊಂದಿಗೆ ಅವರ ರುಚಿಯ ಆಕರ್ಷಣೆಯೂ ಸೇರಿಕೊಂಡಿದ್ದಿತು. ಸರಿ ಮೊಟ್ಟೆಕೋಳಿಗಳನ್ನು ಹಿಡಿದು ಪಂಜರದಲ್ಲಿ ಹಾಕುವುದು. ಅವು ಮೊಟ್ಟೆ ಇಟ್ಟಮೇಲೆ ಕೋಳಿಯನ್ನು ಓಡಿಸಿ ಮೊಟ್ಟೆ ಸಂಗ್ರಹಿಸಿ ಮನೆಯ ಅಮ್ಮಂದಿರಿಗೆ ತಲುಪಿಸುವುದು. ಈ ಹುಡುಗಾಟಿಕೆಯ ಸಮಯದಲ್ಲಿಯೇ ಬೆಟ್ಟಸೆಟ್ಟಿ ಎಂಬ ಉಪಾಧ್ಯಾಯರು ಊರಿಗೆ ಬಂದು ಕೂಲಿಮಠ ತೆರೆದರು. ಕೂಲಿಮಠವೆಂದರೆ ಉಪಾಧ್ಯಾಯರಿಗೆ ಬೇಕಾದ ದವಸಧಾನ್ಯಗಳನ್ನು ಕೊಟ್ಟು ಶಿಕ್ಷಣ ಪಡೆಯುವುದು. ಆಗಿನ ಕಾಲದಲ್ಲಿ ಯಾವುದಾದರೂ ಪರೀಕ್ಷೆಯಲ್ಲಿ ಅನುತ್ತೀರ್ಣರಾದವರು. ಯಾವುದಾದರೂ ತೊಂದರೆಯಿಂದ ಓದನ್ನು ಮುಂದುವರಿಸಲಾರದವರು ಜೀವನ ನಿರ್ವಹಣೆಗಾಗಿ ಶಾಲೆಗಳಿಲ್ಲದ ಹಳ್ಳಿಗಳಲ್ಲಿ ಇಂತಹ ಮಠ ತೆರೆಯುತ್ತಿದ್ದರು. ಅನೇಕ ವೇಳೆ ಗ್ರಾಮದವರೇ ಇಂತಹ ಅಯ್ಯಗಳನ್ನು ಹಿಡಿದು ತಂದು ಅವರಿಂದ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದರು. ಬೆಟ್ಟಸೆಟ್ಟರೂ ಇಂತಹ ಒಂದು ಶಾಲೆಯನ್ನು ಕರಡಹಳ್ಳಿಯಲ್ಲಿ ಆರಂಭಿಸಿದಾಗ ಬಾಲಕ ಸಿಂಗಾರಿಗೌಡರೂ ಅಲ್ಲಿಗೆ ಸೇರಿದರು.

ಆಗಿನ ಕಾಲದ ಈ ಶಾಲೆಗಳು ಗ್ರಾಮದ ಚಾವಡಿಯಲ್ಲೋ ಗೌಡ ಮುಖಂಡರ ಮನೆಯ ಜಗುಲಿಯ ಮೇಲೋ ನಡೆಯುತ್ತಿದ್ದುದು ವಾಡಿಕೆ. ಊರಿನಲ್ಲಿ ಯಾವುದಾದರೂ ಮನೆ ಖಾಲಿ ಇದ್ದು ಅದು ಶಾಲೆ ನಡೆಸಲು ದೊರೆತರೆ ಅದೊಂದು ಅದೃಷ್ಟವೆಂದೇ ಹೇಳಬೇಕು. ಶಿಕ್ಷೆಯಿಂದ ಶಿಕ್ಷಣ ಎಂದು ನಂಬಿದ್ದ ಕಾಲ ಅದು. ಆದುದರಿಂದ ಶಿಕ್ಷಣ ಎಂದರೆ ಮಕ್ಕಳು ಹೆದರುತ್ತಿದ್ದುದ್ದೇ ಹೆಚ್ಚು. ಬೆರಳು ಮುರಿಯ ಬೆತ್ತದ ಏಟು ತಿಂದರೆ ಅಕ್ಷರ ಗುಂಡಾಗುತ್ತದೆಂಬುದು ಗಾದೆಯ ಮಾತು. ಶಾಲೆ ಆರಂಭವಾದ ಮೇಲೆ

ಒಂದು ಶುಭದಿನ ಪೂಜಾವಿಧಿಗಳನ್ನು ನಡೆಯಿಸಿ ತೋರ ಬೆರಳಿಗೆ ಗಜ್ಜುಗವನ್ನು ಅಂಟಿಸಿ ಮರಳಿನ ಮೇಲೆ ಓಂ, ಶ್ರೀಯನ್ನು ತಿದ್ದಿ ಅನಂತರ ಅಕ್ಷರವನ್ನು ಆರಂಭಿಸುವುದು ಪದ್ಧತಿ. ಈ ಶಾಲೆಗಳಿಗೆ ಸೇರುತ್ತಿದ್ದವರು ನಾಲ್ಕೋ ಐದೋ ಮಕ್ಕಳು. ಹತ್ತು ಮಕ್ಕಳು ಸೇರಿದರಂತೂ ಅದೊಂದು ದೊಡ್ಡ ಸಾಧನೆಯೆಂದೇ ತಿಳಿಯುತ್ತಿದ್ದರು. ವಿದ್ಯಾರ್ಥಿಗಳು ಕಡಿಮೆಯಾದುದರಿಂದ ಉಪಾಧ್ಯಾಯರು ಪ್ರತಿ ವಿದ್ಯಾರ್ಥಿಯ ಬಗ್ಗೆಯೂ ಗಮನ ಕೊಡುವುದು ಸಾಧ್ಯವಿತ್ತು. ಈ ಮಠಗಳ ಕಲಿಕೆ ಬಹುಮಟ್ಟಿಗೆ ಅಮರಕೋಶ, ಸಾಮೂಹಿಕ ಮಗ್ಗಿ ಅಕ್ಷರ ತಿದ್ದುವುದರಿಂದ ಆರಂಭವಾಗುತ್ತಿತ್ತು. ಮುಂದೆ ಉಪಾಧ್ಯಾಯರು ಹೆಚ್ಚು ಕಾಲನಿಂತರೆ ಓದುಗಾರಿಕೆಯವರೆಗೆ ಶಿಕ್ಷಣ ಸಾಗುತ್ತಿತ್ತು. ಈ ಶಾಲೆಗೆ ಸೇರಿದ ಬಾಲಕ ಸಿಂಗಾರಿಗೌಡರು ಶಾಲೆಗೆ ತಪ್ಪಿಸಿಕೊಳ್ಳುತ್ತಿದ್ದುದೇ ಹೆಚ್ಚು. ಇದಕ್ಕೆ ಎರಡು ಕಾರಣಗಳಿದ್ದುವು. ಒಂದು ಶಾಲೆಯ ಶಿಕ್ಷೆ. ಮತ್ತೊಂದು ಮನೆಯಲ್ಲಿ ತಾಯಿ ಇಲ್ಲದ ಮಗು ಎಂಬ ಮುದ್ದು.

ಸ್ವತಃ ವಿದ್ಯಾವಂತರಾಗಿದ್ದು. ರಾಜಕೀಯವನ್ನು ಪ್ರವೇಶಮಾಡಿದ್ದ ಕೃಷ್ಣಪ್ಪಗೌಡರಿಗೆ ಮಗನನ್ನು ವಿದ್ಯಾವಂತನನ್ನಾಗಿ ಮಾಡಬೇಕು ಅದೂ ಇಂಗ್ಲಿಷ್ ರೀತಿಯ ಶಿಕ್ಷಣ ಕೊಡಿಸಬೇಕೆಂಬ ಹಂಬಲ. ಆದರೆ ಕರಡಹಳ್ಳಿಯ ಕೂಲಿಮಠದಲ್ಲಿ ಇದು ನೆರವೇರುವಂತಿರಲಿಲ್ಲ. ಈ ಹೊತ್ತಿಗೆ ಪಕ್ಕದ ಹಳ್ಳಿಯಾದ ದಂಡಿಗನಹಳ್ಳಿಯಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯೊಂದು ಆರಂಭವಾಯಿತು. ಕೂಡಲೇ ಕೃಷ್ಣಪ್ಪಗೌಡರು ಮಗನನ್ನು ಕೂಲಿಮಠ ಬಿಡಿಸಿ ಸರ್ಕಾರಿ ಶಾಲೆಗೆ ಸೇರಿಸಿದರು. ಕರಡಹಳ್ಳಿಯಿಂದ ಒಂದು ಒಂದೂವರೆ ಮೈಲಿ ದೂರ ದಂಡಿಗನಹಳ್ಳಿ. ದರ್ಜಿಯವರೊಬ್ಬರು ಆ ಶಾಲೆಗೆ ಉಪಾಧ್ಯಾಯರಾಗಿದ್ದರು. ಆಗಿನ ಕಾಲದಲ್ಲಿ ಇಂತಹ ಗ್ರಾಮಾಂತರ ಶಾಲೆಗಳಿಗೆ ನೇಮಕವಾಗುತ್ತಿದ್ದ ಅಧ್ಯಾಪಕರು ಜೊತೆ ಜೊತೆಯಲ್ಲಿಯೇ ತಮ್ಮ ವೃತ್ತಿಯನ್ನೂ ನಡೆಸುತ್ತಿದ್ದರು. ಇಂತಹ ಶಾಲೆಗಳ ಸ್ಥಿತಿಗತಿಯ ಬಗ್ಗೆ ದಿವಂಗತ ಎಂ. ಆರ್. ಶ್ರೀಯವರು ತಮ್ಮ ರಂಗಣ್ಣನ ಕನಸಿನದಿನಗಳು ಎಂಬ ಕೃತಿಯಲ್ಲಿ ಬಹಳ ಚೆನ್ನಾಗಿ ನಿರೂಪಿಸಿದ್ದಾರೆ. ಆ ಕೃತಿಯಲ್ಲಿ ಬರುವ ಶಾಲೆಗಳೆಲ್ಲ ಬಹುತೇಕ ನಾಗಮಂಗಲ ಭಾಗದವೇ ಆಗಿರುವುದು ಕುತೂಹಲದ ಸಂಗತಿಯಾಗಿದೆ. ದಂಡಿಗನಹಳ್ಳಿಯ ಶಾಲೆಯ ಉಪಾಧ್ಯಾಯರು ಸಹ ತಮ್ಮ ಕಸುಬಾದ ಬಟ್ಟೆ ಹೊಲಿಗೆಯನ್ನು ಇಲ್ಲಿಯೂ ಮುಂದುವರಿಸಿದರು. ಆಗ ಇನ್ನೂ ಶಾಲಾ ಕಟ್ಟಡಗಳು ಆಗಿರಲಿಲ್ಲ. ಊರ ಚಾವಡಿ, ದೇವಾಲಯ ಅಥವಾ ಯಾರದಾದರೂ ಖಾಲಿ ಮನೆಯಲ್ಲಿ ಸರ್ಕಾರಿ ಶಾಲೆಗಳೂ ನಡೆಯುತ್ತಿದ್ದುವು. ಉಪಾಧ್ಯಾಯರು ತಮ್ಮ ವ್ಯಾಪಾರದ ಮಧ್ಯೆ ಬಿಡುವುಮಾಡಿಕೊಂಡರೆ, ಅವರ ಮನಸ್ಥಿತಿ ಉತ್ತಮವಾಗಿದ್ದರೆ. ಪಾಠ ಹೇಳುತ್ತಿದ್ದರು ಇಲ್ಲದಿದ್ದರೆ ಹುಡುಗರು ಬಂದದಾರಿಗೆ ಸುಂಕವಿಲ್ಲವೆಂದು ಹಿಂತಿರುಗುತ್ತಿದ್ದರು. ಆ ಉಪಾಧ್ಯಾಯರನ್ನು ನಮ್ಮ ಹುಡುಗರಿಗೆ ಸರಿಯಾಗಿ ಕಲಿಸುತ್ತಿಲ್ಲವೇಕೆ ಎಂದು ಕೇಳುವ ಧೈರ್ಯ ಆಗ ಯಾರಿಗಿತ್ತು?

ಗ್ರಾಮಾಂತರ ಶಾಲೆಗಳ ಸ್ಥಿತಿ ಈಗಲೂ ಇದಕ್ಕಿಂತ ಉತ್ತಮವಾಗೇನೂ ಇಲ್ಲವೆಂದೇ ಹೇಳಬಹುದು.

ಗ್ರಾಮಾಂತರ ಮಕ್ಕಳು ಬಹಳ ಬೇಗ ತಮ್ಮ ಶಾಲಾಜೀವನವನ್ನು ಕೊನೆಗಾಣಿಸಿ ಬಿಡುತ್ತಾರೆ. ಇದಕ್ಕೆ ಬೇರೆಯವರು ಕಷ್ಟಪಡಲು ಅವರಿಗೆ ಆಗುವುದಿಲ್ಲವೆಂದೋ ವಿದ್ಯೆ ಅವರಿಗೆ ಹತ್ತುವುದಿಲ್ಲವೆಂದೋ ಹೇಳಿ ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಾರೆ. ಆದರೆ ವಾಸ್ತವವಾಗಿ ಗ್ರಾಮಾಂತರದ ಮಕ್ಕಳಿಗೆ ನಗರದ ಮಕ್ಕಳಂತೆ ಶಾಲೆಗೆ ಹೋಗುವುದೊಂದೇ ಕಸುಬಲ್ಲ. ಬೆಳಿಗ್ಗೆ ಎದ್ದರೆ ದನಕರುಗಳನ್ನು ಆಚೆ ಕಟ್ಟಬೇಕು. ಹಟ್ಟಿಯ ಕಸ ತೆಗೆಯಬೇಕು ಅನಂತರ ದನಕರುಗಳಿಗೆ ಏನಾದರೂ ಮೇವು ಸಂಗ್ರಹಿಸಿ ತರಬೇಕು. ಮನೆಯವರು ಹೇಳುವ ಇನ್ನಿತರ ವ್ಯವಸಾಯ ಸಂಬಂಧವಾದ ಕೆಲಸವನ್ನು ಮಾಡಬೇಕು. ಕೆಲಸದ ಒತ್ತಡ ಹೆಚ್ಚಿದಾಗ ದನಕರು ನೋಡಿಕೊಳ್ಳುವ ಕೆಲಸ. ಇಷ್ಟೆಲ್ಲಾ ಮಾಡಿ ಶಾಲೆಗೆ ಹೊರಟರೆ ಕಾಲಕ್ಕೆ ಸರಿಯಾಗಿ ಮನೆಯಲ್ಲಿ ಊಟತಿಂಡಿಗಳಿಲ್ಲ. ಸಿಕ್ಕಿದ್ದನ್ನು ತಿಂದು ಹೊರಟರೆ ಮೂರು ನಾಲ್ಕು ಮೈಲಿ ಶಾಲೆಗೆ ಓಡಬೇಕು. ತಡವಾಗಿ ಶಾಲೆಗೆ ಹೋದರೆ ಉಪಾಧ್ಯಾಯರಿಂದ ಶಿಕ್ಷೆ. ಸಂಜೆ ಶಾಲೆಯಿಂದ ಬಂದೊಡನೆಯೆ ಮತ್ತೆ ಇವೇ ಕೆಲಸಗಳು. ರಾತ್ರಿ ದೀಪ ಉರಿಸಿ ಓದಲು ಅವಕಾಶವೂ ಇಲ್ಲ. ಮನಸ್ಸೂ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ. ವಾತಾವರಣದಲ್ಲಿ. ಅವಕಾಶದಲ್ಲಿ ವಿದ್ಯೆ ಹತ್ತುವುದಾದರೂ ಹೇಗೆ ?

ಬಾಲಕ ಸಿಂಗಾರಿಗೌಡರು ದಂಡಿಗನಹಳ್ಳಿ ಶಾಲೆಗೆ ಹೋಗತೊಡಗಿದ ಮೇಲೆ ಮನಸ್ಸು ಸುತ್ತಲಿನ ಪ್ರಕೃತಿಯತ್ತ ಹರಿಯಿತು. ಮೊಲಗಾಲದಲ್ಲಿಯಂತೂ ಸುತ್ತಲೂ ಬೆಳೆದು ಅಚ್ಚ ಹಸುರಾಗಿರುತ್ತಿದ್ದ ರಾಗಿ, ಜೋಳ. ಅವರೆ. ಮುರುಳಿ ಬಾಲಕನ ಮನಸ್ಸಿನ ಮೇಲೆ ತಮ್ಮ ಅಚ್ಚಳಿಯದ ಪ್ರಭಾವ ಬೀರುತ್ತಿದ್ದುವು. ಆಟ ಆಡಲು ಓರಗೆಯ ಹುಡುಗರ ಅಭಾವ. ಏಕೆಂದರೆ ಹಳ್ಳಿಯ ಬದುಕಿನಲ್ಲಿ ಒಂದು ಮಗು ಎದ್ದು ನಿಲ್ಲುವ ಹೊತ್ತಿಗೆ ಅವನಿಗೆ ಯಾವುದಾದರೊಂದು ಕೆಲಸ ಅಂಟಿಕೊಂಡಿರುತ್ತದೆ. ಅಲ್ಲದೆ ನಗರದ ಮಕ್ಕಳ ಹಾಗೆ ತಿಂದದ್ದನ್ನು ಅರಗಿಸಲು ಆಟ ಆಡುವ ಅವಕಾಶ ಹಳ್ಳಿಯ ಮಕ್ಕಳಿಗೆ ಕನಸಿನಲ್ಲಿಯೂ ಸಾಧ್ಯವಿಲ್ಲ. ಬಾಲಕ ಸಿಂಗಾರಿಗೌಡರಿಗೆ ಯಾವುದೇ ಇಂತಹ ಕೆಲಸಗಳ ಹೊರೆ ಇರಲಿಲ್ಲ. ಮನೆ ತುಂಬ ಆಳುಕಾಳುಗಳಿದ್ದು ಅವರು ಯಾವುದೇ ಜವಾಬ್ದಾರಿ ವಹಿಸಬೇಕಾಗಿರಲಿಲ್ಲ. ತಿಂದುಂಡು ಹಾಯಾಗಿ ಆಡಿಕೊಂಡಿರುವ ಅವಕಾಶವಿತ್ತು. ಆದರೆ ಜೊತೆಗಾದರೂ ಸಮ ವಯಸ್ಸಿನ ಹುಡುಗರು ಬೇಕಲ್ಲ. ದಂಡಿಗನಹಳ್ಳಿಯ ಶಾಲೆಗೆ ಸೇರಿದನಂತರ ಈ ಕೊರತೆ ನೀಗಿತು.

ಈಗ ಗಮನಿಸಿ ಹೇಳುವುದಾದರೂ ಸಿಂಗಾರಿಗೌಡರದು ಸ್ವಲ್ಪ ಏಕಾಂತಪ್ರಿಯ ಸ್ವಭಾವವಾಗಿದ್ದಂತೆ ಕಂಡುಬರುತ್ತದೆ. ತಮ್ಮನ್ನು ಎದ್ದು ಕಾಣುವಂತೆ ತೋರಿಸಿಕೊಳ್ಳಬೇಕೆಂಬ ಸ್ವಭಾವ ಅವರದಲ್ಲ. ಅವರ ನಿಲುವು. ಸ್ವಭಾವಗಳು ತಾಯಿ ನಿಂಗಮ್ಮ

ಅವರಿಂದ ಬಂದಂಥವು. ಕೃಷ್ಣಪ್ಪಗೌಡರಿಗೆ ತಾವು ಹತ್ತು ಜನರ ಮಧ್ಯೆ ಗಣ್ಯವಾಗಿ ಕಾಣಿಸಿಕೊಳ್ಳಬೇಕು. ತಾವು ಹೇಳಿದ್ದು ನಡೆಯಬೇಕು ಎಂಬ ಹಠ, ಛಲ. ಆದರೆ ಸಿಂಗಾರಿಗೌಡರಿಗೆ ಈ ರೀತಿಯ ಆಡಂಬರವಿಲ್ಲ. ತಮಗೆ ಸರಿ ಅನ್ನಿಸಿದ್ದನ್ನು ಅಷ್ಟೇ ನಿಖರವಾಗಿ ಹೇಳಿ ಸುಮ್ಮನಾಗುವುದು. ಮಕ್ಕಳಿಗೆ ತಂದೆ ಅಥವಾ ತಾಯಿಯ ಗುಣಗಳಲ್ಲಿ ಕೆಲವಾದರೂ ಬಂದೇ ಬರುತ್ತದೆಂಬುದು ವೈಜ್ಞಾನಿಕ ಸತ್ಯ. ಬಾಲಕ ಸಿಂಗಾರಿಗೌಡರು ಹಳ್ಳಿಯ ಹುಡುಗನಾಗಿ ಕಳೆದ ದಿನಗಳು ಅಪೂರ್ವವಾದಂಥವು. ಅ ಗಿಡ, ಮರ, ಬಳ್ಳಿಗಳು, ಪ್ರಾಣಿ ಪಕ್ಷಿಗಳು ಅವರ ವ್ಯಕ್ತಿತ್ವವನ್ನು ರೂಪಿಸಲು ನೆರವಾದವು. ಹಳ್ಳಿಯ ಸಮಸ್ಯೆಗಳು ಮುಂದಿನ ಅವರ ರಾಜಕೀಯ, ಸಾಮಾಜಿಕ ಸೇವೆಯ ಕೆಲಸಗಳಲ್ಲಿ ನೆರವಾದವು. ಒಬ್ಬ ಮನುಷ್ಯನ ಜೀವಿತದಲ್ಲಿ ಅವನು ಹುಟ್ಟಿ ಬೆಳೆದ ಪರಿಸರದ ಪ್ರಭಾವವೂ ಕೆಲಸಮಾಡುತ್ತದೆ. ನಾಗಮಂಗಲ ಪ್ರದೇಶದಂತಹ ಬರಗಾಲ ಪೀಡಿತ ಪ್ರದೇಶದ ಒಂದು ಚಿಕ್ಕಗ್ರಾಮ ಕರಡಹಳ್ಳಿಯ ಹುಡುಗ ಮುಂದೊಂದು ದಿನ ವಿದ್ಯಾವಂತನಾಗಿ ರಾಜ್ಯದ ಆಗುಹೋಗುಗಳಲ್ಲಿ ನಿರತನಾಗುತ್ತಾನೆಂದು ಯಾರೂ ನೆನೆಸಿರಲಿಲ್ಲ. ಸಿಂಗಾರಿಗೌಡರ ಆ ಹಳ್ಳಿಯ ಬದುಕು ಇಂದಿಗೂ ಹಸುರಾದುದು. ಆದುದರಿಂದಲೇ ಅವರ ಈವರೆಗಿನ ಆಯುಷ್ಯದ ಬಹುಕಾಲವನ್ನು ಅವರು ಕರಡಹಳ್ಳಿಯಲ್ಲಿಯೇ ಕಳೆದಿದ್ದಾರೆ.

೫. ಪ್ರಾಥಮಿಕ ಶಿಕ್ಷಣ

ಅನೇಕ ವೇಳೆ ಯಾವುದೋ ಒಂದು ಘಟನೆ, ಯಾವನೋ ಒಬ್ಬ ವ್ಯಕ್ತಿಯ ಪ್ರವೇಶ ಬದುಕಿನ ದಿಕ್ಕನ್ನೇ ಬದಲಾಯಿಸಬಹುದು. ಆ ವೇಳೆಯಲ್ಲಿ ಅದು ಸಂಭವಿಸದಿದ್ದಲ್ಲಿ ಅದು ಬೇರೆಯದೇ ಸಂಗತಿಯೂ ಆಗಬಹುದು. ಬಾಲಕ ಸಿಂಗಾರಿಗೌಡರ ಶಿಕ್ಷಣ ದಂಡಿಗನಹಳ್ಳಿಯಿಂದ ಕರಡಹಳ್ಳಿ. ಕರಡಹಳ್ಳಿಯಿಂದ ದಂಡಿಗನಹಳ್ಳಿಗಳ ಮಧ್ಯೆ ಕುಂಟುತ್ತಾ ನಡೆಯುತ್ತಿತ್ತು. ಒಂದು ದಿನ ಪಕ್ಕದ ಹಳ್ಳಿಯವರೊಬ್ಬರು ಇದ್ದಕ್ಕಿದಂತೆಯೇ ಕರಡಹಳ್ಳಿಗೆ ಬರದಿದ್ದರೆ. ಅವರು ಕೃಷ್ಣಪ್ಪಗೌಡರ ಸ್ನೇಹಿತರೂ ಬಂಧುವೂ ಆಗಿರದಿದ್ದರೆ ಸಿಂಗಾರಿಗೌಡರ ಶಿಕ್ಷಣ ಯಾವ ದಿಕ್ಕು ಹಿಡಿಯುತ್ತಿತ್ತೋ ಹೇಳಲು ಬರುತ್ತಿರಲಿಲ್ಲ. ಚಿಕ್ಕಯಗಟಿಯೆಂಬ ಹಳ್ಳಿಯ ನರಸಪ್ಪ ದಫೇದಾರರಾಗಿ ಸರ್ಕಾರಿ ಸೇವೆಯಲ್ಲಿದ್ದರು. ಅವರ ಪತ್ನಿ ಕೆಂಪಮ್ಮ ಕರಡಹಳ್ಳಿಯವರು. ಕರಡಹಳ್ಳಿಗೆ ಅತ್ತೆಯ ಮನೆಗೆ ಬಂದವರು ಕೃಷ್ಣಪ್ಪಗೌಡರನ್ನು ಭೇಟಿಯಾದರು. ಅವರಿಬ್ಬರೂ ಸಮ ವಯಸ್ಕರು. ಕೃಷ್ಣಪ್ಪಗೌಡರೂ ಆರು ತಿಂಗಳ ಕಾಲ ದಫೇದಾರಿ ಮಾಡಿದವರು. ಇಬ್ಬರೂ ಕಲೆತು ಪರಸ್ಪರ ಮಾತನಾಡುವಾಗ್ಗೆ ಕೃಷ್ಣಪ್ಪಗೌಡರು ಮಗನ ಶಿಕ್ಷಣದ ತೊಂದರೆಯನ್ನು ವಿವರಿಸಿದರೆಂದು ತೋರುತ್ತದೆ. ದಫೇದಾರರು ಬಾಲಕ ಸಿಂಗಾರಿಗೌಡರನ್ನು ತಮ್ಮ ಜೊತೆಯಲ್ಲಿ ಕಳಿಸಬೇಕೆಂದೂ ತಮ್ಮ ಮಗ ಓದುವ ಶಾಲೆಯಲ್ಲೇ ಅವರನ್ನೂ ಸೇರಿಸುವುದಾಗಿಯೂ ತಮ್ಮ ಮನೆಯಲ್ಲೇ ಇರಿಸಿಕೊಂಡು ನೋಡಿಕೊಳ್ಳುವುದಾಗಿಯೂ ಕೃಷ್ಣಪ್ಪಗೌಡರಿಗೆ ಆಶ್ವಾಸನೆಯಿತ್ತರು. ಮಗನ ಭವಿಷ್ಯ ಮತ್ತು ಆ ಬಂಧುಗಳ ಆತ್ಮೀಯ ಒತ್ತಾಯಕ್ಕೆ ಮಣಿದು ಅವರೊಂದಿಗೆ ಬಾಲಕ ಸಿಂಗಾರಿಗೌಡರನ್ನು ಕಳಿಸಲು ಒಪ್ಪಿದರು.

ಚಿಕ್ಕಯಗಟಿಯ ನರಸಪ್ಪ ಆಗ ಕನಕಪುರತಾಲ್ಲೂಕು ಹಾರೋಹಳ್ಳಿಯಲ್ಲಿದ್ದರು. ಸಿಂಗಾರಿಗೌಡರ ಓರಗೆಯವನೇ ಅವರಿಗೊಬ್ಬ ಮಗನಿದ್ದ. ಅವನ ಹೆಸರು ತಿಮ್ಮಪ್ಪ. ಅಲ್ಲಿನ ಶಾಲೆಗೆ ಸಿಂಗಾರಿಗೌಡರೂ ಸೇರಿದರು. ಜೊತೆಗೆ ಸಮವಯಸ್ಕ ತಿಮ್ಮಪ್ಪ ಸಿಕ್ಕಿದುದು ಆಟ ಪಾಠಗಳಿಗೆಲ್ಲಾ ಅನುಕೂಲವಾಯಿತು. ಅವರೆಗಿದ್ದ ಒಂಟಿತನ ದೂರವಾಯಿತು. ನರಸಪ್ಪನವರ ಪತ್ನಿ ಕರಡಹಳ್ಳಿಯವರು. ಅವರಿಗೆ ತಮ್ಮೂರ ಗೌಡರ ಮನೆಯ ಬಗ್ಗೆ ಅಪಾರ ಅಭಿಮಾನ. ಸಿಂಗಾರಿಗೌಡರ ತಾಯಿ ಸಿಂಗಮ್ಮನವರ ಸಜ್ಜನಿಕೆಯನ್ನು ಅವರು ಬಲ್ಲವರು. ಅತ್ಯಂತ ಪ್ರೀತಿಯಿಂದಲೇ ಬಾಲಕ

ಸಿಂಗಾರಿಗೌಡರನ್ನು ಕಾಣುತ್ತಿದ್ದರು. ಸರ್ಕಾರಿ ಚಾಕರಿಗೆ ಸೇರಿದವನು ಒಂದುಕಡೆ ನೆಲೆ ನಿಲ್ಲುವುದು ಆಗದ ಮಾತು. ದಫೇದಾರರಿಗೆ ಊರಿಂದೂರಿಗೆ ವರ್ಗ ಆಗುತ್ತಲೇ ಇತ್ತು. ಸರಿ ಇದ್ದೂರಿನಿಂದ ಮುಂದಲೂರಿಗೆ ಪಯಣ. ಅವರಿಗೆ ಕನಕಪುರದಿಂದ ಮಳವಳ್ಳಿಗೆ ವರ್ಗವಾಯಿತು. ಹುಡುಗರು ಅಲ್ಲಿಯ ಪ್ರಾಥಮಿಕ ಶಾಲೆ ಸೇರಿದರು. ಮಳವಳ್ಳಿಯಿಂದ ಅಜ್ಜಂಪುರ. ಅಲ್ಲಿಂದ ಕೃಷ್ಣರಾಜಪೇಟೆ. ಹೀಗೆಯೇ ಊರಿಂದೂರಿಗೆ ತಿರುಗುವುದಾಯಿತು. ಯಾವುದೇ ಒಂದು ಶಾಲೆಯಲ್ಲಿ ಖಾಯಮ್ಮಾಗಿ ಸಿಲ್ಲದ ಕಾರಣ ಓದಿನಲ್ಲಿ ವ್ಯತ್ಯಾಸವಾಗುತ್ತಿತ್ತು. ಆಟ ಪಾಠಗಳಲ್ಲಿ ಸ್ನೇಹದಲ್ಲಿ ಒಂದು ನೆಲೆಯೂರುದಿರಲಿಲ್ಲ. ಈ ಊರಿನಲ್ಲಿ ಇನ್ನೇನು ಒಗ್ಗಿಕೊಂಡೆವು ಎನ್ನುವಷ್ಟರಲ್ಲಿ ಮುಂದಲೂರಿಗೆ ಕಂತೆ ಕಟ್ಟಬೇಕಾಗುತ್ತಿತ್ತು. ಇಷ್ಟು ಹೊತ್ತಿಗೆ ಮೈಸೂರು ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾಗಿದ್ದ ಕೃಷ್ಣಪ್ಪಗೌಡರಿಗೂ ಮಗ ಎಲ್ಲಾದರೂ ಒಂದು ಕಡೆ ಖಾಯಂ ಆಗಿ ನೆಲೆಯೂರಲೆಂದು ಆಸೆಯಾಯಿತು.

ಶ್ರೀ ಎಂ. ಚೆನ್ನಸ್ವಾಮಿಯವರು ಆಗ ಕೃಷ್ಣರಾಜಪೇಟೆಯಲ್ಲಿ ಸಹಕಾರ ಸಂಘಗಳ ಇನ್ಸ್‌ಪೆಕ್ಟರ್ ಆಗಿದ್ದರು. ಆ ಹೊತ್ತಿಗಾಗಲೇ ಆಗಿನ ಮೈಸೂರು ರಾಜ್ಯದಲ್ಲಿ ಬ್ರಾಹ್ಮಣೇತರ ಜನಾಂಗಗಳ ಅಭಿವೃದ್ಧಿಯ ಚಳವಳಿ ಆರಂಭವಾಗಿತ್ತು. ದಿವಂಗತ ಕೆ. ಎಚ್. ರಾಮಯ್ಯನವರು ನಾಡಿನಾದ್ಯಂತ ಸಂಚರಿಸಿ ಬ್ರಾಹ್ಮಣೇತರರ ಸಂಘಟನೆ ಮತ್ತು ಅವರು ಶಿಕ್ಷಣ ಪಡೆಯುವ ಬಗ್ಗೆ ಮಾರ್ಗದರ್ಶನ ನೀಡುತ್ತಿದ್ದರು. ಅವರಿಂದ ಪ್ರಭಾವಿತರಾಗಿ, ಅನೇಕ ವಿದ್ಯಾವಂತ ಯುವಕರು ಬ್ರಾಹ್ಮಣೇತರ ಜನರಿಗೆ ಶೈಕ್ಷಣಿಕ ಅನುಕೂಲಗಳನ್ನು ಒದಗಿಸುವಲ್ಲಿ ಸೇವೆ ಸಲ್ಲಿಸುತ್ತಿದ್ದರು. ಶ್ರೀ ಎನ್. ಜಿ. ಗುಜ್ಜೇಗೌಡ, ಶ್ರೀ ಎಸ್. ಕರಿಯಪ್ಪ, ಎಂ. ಚೆನ್ನಸ್ವಾಮಿ, ಶ್ರೀ ಮುನಿಸ್ವಾಮಪ್ಪ, ಶ್ರೀ ಎಚ್. ಸಿ. ದಾಸಪ್ಪ, ಎಸ್. ಚನ್ನಯ್ಯ, ತಿಟ್ಟಮಾರನಹಳ್ಳಿ ವೆಂಕಟಪ್ಪ, ಎಚ್. ಕೆ. ವೀರಣ್ಣಗೌಡ ಮುಂತಾದವರು ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಒಕ್ಕಲಿಗರ ವಿದ್ಯಾರ್ಥಿನಿಲಯಗಳನ್ನು ಆರಂಭಿಸಿ ಗ್ರಾಮಾಂತರ ಮಕ್ಕಳಿಗೆ ಶಿಕ್ಷಣ ದೊರೆಯಲು ಸಹಾಯ ಮಾಡುತ್ತಿದ್ದರು. ಅಂತಹ ಒಂದು ವಿದ್ಯಾರ್ಥಿನಿಲಯ ಶ್ರೀ ಚೆನ್ನಸ್ವಾಮಿಯವರ ನೇತೃತ್ವದಲ್ಲಿ ಕೃಷ್ಣರಾಜ ಪೇಟೆಯಲ್ಲಿಯೂ ಆರಂಭವಾಗಿತ್ತು. ಚಿಕ್ಕಯಗಟಿಯ ದಫೇದಾರರಿಗೆ ಕೃಷ್ಣರಾಜ ಪೇಟೆಯಿಂದ ವರ್ಗವಾದಾಗ ಕೃಷ್ಣಪ್ಪಗೌಡರು ಮಗನನ್ನು ದಫೇದಾರರ ವಶದಿಂದ ಬಿಡಿಸಿ ಕೃಷ್ಣರಾಜಪೇಟೆಯ ಒಕ್ಕಲಿಗರ ವಿದ್ಯಾರ್ಥಿನಿಲಯದ ವಶಕ್ಕೆ ಒಪ್ಪಿಸಿದರು.

ವಿದ್ಯಾರ್ಥಿನಿಲಯದ ಮೇಲ್ವಿಚಾರಣೆಯನ್ನು ಬೆಕ್ಕಳಲೆಯ ವೀರಣ್ಣಗೌಡ ಮತ್ತು ರಾಮಯ್ಯ ಎಂಬುವರು ನೋಡಿಕೊಳ್ಳುತ್ತಿದ್ದರು. ಬೆಕ್ಕಳಲೆ ವೀರಣ್ಣಗೌಡರು ಸಬ್‌ರಿಜಿಸ್ಟ್ರಾರ್ ಅವರ ಕಛೇರಿಯಲ್ಲಿ ಗುಮಾಸ್ತರಾಗಿದ್ದರು. ಪ್ರಾಯಶಃ ಅವರು ವರ್ಗವಾದ ಕಡೆಗಳಿಗೆಲ್ಲಾ ತಮ್ಮ ಸಂಸಾರವನ್ನು ಕರೆದೊಯ್ಯುತ್ತಿರಲಿಲ್ಲ

ಎಂದು ತೋರುತ್ತದೆ. ಆದುದರಿಂದಲೇ ಇರಬೇಕು ಅವರೂ ವಿದ್ಯಾರ್ಥಿನಿಲಯದಲ್ಲೇ ಇರುತ್ತಿದ್ದರು. ತುಂಬಾ ಸ್ನೇಹಮಯಿ ವ್ಯಕ್ತಿ. ನಿಲಯದ ವಿದ್ಯಾರ್ಥಿಗಳ ಬಗೆಗೆ ಅಭಿಮಾನ. ಬೆಳಗಿನ ಜಾವ ವಿದ್ಯಾರ್ಥಿಗಳನ್ನು ಓದಲು ಎಬ್ಬಿಸುತ್ತಿದ್ದವರು ಅವರೆ. ಆಗ ವಿದ್ಯಾರ್ಥಿನಿಲಯಗಳಲ್ಲಿ ಒಳ್ಳೆಯ ಶಿಸ್ತು ಇದ್ದ ಕಾಲ. ವೀರಣ್ಣಗೌಡರಿಗೆ ಕಛೇರಿಯಲ್ಲಿ ದಿನಸತ್ತು ಆದಾಯ. ಹೀಗೆ ಬಂದ ಆದಾಯದ ತಮ್ಮಪಾಲನ್ನು ತಂದು ತಮಗೆ ಅಭಿಮಾನದ ವಿದ್ಯಾರ್ಥಿಯಾಗಿದ್ದ ಸಿಂಗಾರಿಗೌಡರ ಟ್ರಂಕಿನಲ್ಲಿಡುತ್ತಿದ್ದರು. ಬೆಳಗಿನ ಜಾವ ಓದಲು ಅವರು ಮೊದಲು ಏಳಿಸುತ್ತಿದ್ದುದು ಸಿಂಗಾರಿಗೌಡರನ್ನೇ.

ಬೆಳಗಿನ ಜಾವದ ಓದು ಮುಗಿಸಿ ನಿತ್ಯಕರ್ಮಗಳ ತೀರಿಕೆಗಾಗಿ ವೀರಣ್ಣಗೌಡರೊಂದಿಗೆ ದೇವೀರಮ್ಮಣ್ಣಿ ಕೆರೆಗೆ ಹೋಗುವುದು. ಕೆರೆಯಲ್ಲಿಯೇ ಸ್ನಾನ. ವಿದ್ಯಾರ್ಥಿಯಾದವನು ಸುಖ ಬಯಸಬಾರದಷ್ಟೆ ! ವೀರಣ್ಣಗೌಡರು ಒಳ್ಳೆಯ ಈಜುಗಾರರು. ಬಾಲಕ ಸಿಂಗಾರಿಗೌಡರಿಗೆ ನೀರು ಕಂಡರೆ ಮೈಯೆಲ್ಲಾ ಛಳಿ. ಆದರೆ ವೀರಣ್ಣಗೌಡರು ಸಿಂಗಾರಿಗೌಡರ ಸೊಂಟಕ್ಕೆ ಸೋರೇಬುರುಡೆ ಕಟ್ಟಿ ಕೆರೆಯಲ್ಲಿ ಎತ್ತಿಹಾಕುತ್ತಿದ್ದರು. ಹೀಗೆ ಮಾಡಿ ತಮಗೆ ಈಜು ಕಲಿಸಿದ ವೀರಣ್ಣಗೌಡರನ್ನು ಸಿಂಗಾರಿಗೌಡರು ಇಂದಿಗೂ ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಕೆರೆಯಿಂದ ಹಿಂತಿರುಗುವಾಗ ರಾಮದಾಸಪ್ಪನವರ ಹೊಟೇಲಿನಲ್ಲಿ ದೋಸೆ. ಆಗ ಅದನ್ನು ದೋಸೆ ರಾಮದಾಸಪ್ಪನ ಹೋಟೆಲೆಂದೇ ಜನ ಕರೆಯುತ್ತಿದ್ದರು. ವಿದ್ಯಾರ್ಥಿನಿಲಯದಲ್ಲಿ ಬೆಳಗಿನ ತಿಂಡಿ ಕಾಫಿಯೇನಿರಲಿಲ್ಲ; ಅವನ್ನು ಹೊಟೇಲಿನಲ್ಲಿ ಹಣ ಕೊಟ್ಟು ತಿನ್ನುವ ಶಕ್ತಿ ಅನೇಕರಿಗಿರಲಿಲ್ಲ. ವೀರಣ್ಣಗೌಡರು ತಮ್ಮ ಖರ್ಚಿನಲ್ಲಿ ಸಿಂಗಾರಿಗೌಡರಿಗೆ ಕಂಠಪೂರ್ತಿ ದೋಸೆ ತಿನ್ನಿಸುತ್ತಿದ್ದರು. ವಿದ್ಯಾರ್ಥಿನಿಲಯಕ್ಕೆ ಮರಳಿದ ಮೇಲೆ ವೀರಣ್ಣಗೌಡರು ಕಛೇರಿಗೆ, ಸಿಂಗಾರಿಗೌಡರು ಶಾಲೆಗ ಹೊರಡುತ್ತಿದ್ದರು. ಕೃಷ್ಣರಾಜಪೇಟೆಯಲ್ಲಿದ್ದ ಎರಡು ವರ್ಷಗಳ ಕಾಲ ಇದೇ ಅವರ ದಿನಚರಿ.

ಕೃಷ್ಣರಾಜಪೇಟೆಯ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರ ಹೆಸರು ನರಸಿಂಹಅಯ್ಯಂಗಾರ್. ಉದ್ದನೆಯ ವ್ಯಕ್ತಿ, ಬಹಳ ಆಚಾರವಂತರು. ಆದರೆ ನಡೆನುಡಿಯಲ್ಲಿ ದೊಡ್ಡತನವಿತ್ತು. ಶಾಲೆಗೆ, ಓದಿಗೆ ಸಂಬಂಧಿಸಿದಂತೆ ಶಿಸ್ತಿನ ಮನುಷ್ಯ. ನರಸಿಂಹ ಅಯ್ಯಂಗಾರ್ಯರ ವ್ಯಕ್ತಿತ್ವ ಬಾಲಕ ಸಿಂಗಾರಿಗೌಡರ ಮೇಲೆ ಅಪಾರ ಪ್ರಭಾವ ಬೀರಿತ್ತು. ಅವರ ಬಗ್ಗೆ ಗೌಡರಿಗೆ ಬಹಳ ಪೂಜ್ಯಭಾವನೆಯಿತ್ತು. ಈ ಶಾಲೆಯಲ್ಲಿ ಸಿಂಗಾರಿಗೌಡರಿಗೆ ಅನೇಕ ಮಿತ್ರರು ದೊರೆತರು. ಅವರಲ್ಲಿ ಗದ್ದೆ ಹೊಸೂರು ಶಂಕರಪ್ಪ ಪ್ರಮುಖರಾದವರು. ಗದ್ದೆಹೊಸೂರು ಹೇಮಾವತಿ ನದಿಯ ತೀರದಲ್ಲಿದೆ. ಶಂಕರಪ್ಪನವರು ಬಿಟ್ಟಿನಲ್ಲಿ ಔಷಧಿ ಹಾಕಿ ಮೀನು ಹಿಡಿಯುತ್ತಿದ್ದರು. ಪ್ರಾಯಃ ನದಿಯಲ್ಲಿ ಈ ರೀತಿ ಮೀನು ಹಿಡಿಯುವುದನ್ನು

ಅವರು ಕಲಿತಿದ್ದರೆಂದು ತೋರುತ್ತದೆ. ರಜೆಯ ದಿನಗಳಲ್ಲಿ ಶಂಕರಪ್ಪ ಮತ್ತು ಸಿಂಗಾರಿಗೌಡರು ವಿದ್ಯಾರ್ಥಿನಿಲಯದಿಂದ ರಾಗಿಮುದ್ದೆ ತೆಗೆದುಕೊಂಡು ಕೆರೆಗೆ ಹೋಗುತ್ತಿದ್ದರು. ಆ ಮುದ್ದೆಯನ್ನು ಸಣ್ಣಸಣ್ಣ ಉಂಡೆಮಾಡಿ ಅವರ ಮಧ್ಯದಲ್ಲಿ ಮತ್ತು ಬರಿಸುವ ಯಾವುದಾದರೂ ಔಷಧಿ ಹಾಕಿ ಗುಳಿಗೆ ತರಹ ಮಾಡುವುದು. ಅದನ್ನು ನೀರಿಗೆ ಎಸೆದರೆ ಅನೇಕ ಹೊಟ್ಟೆಬಾಕ ಮೀನುಗಳು ಯಾವುದೋ ಆಹಾರ ಎಂದು ಗುಳಿಗೆಯನ್ನು ನುಂಗುತ್ತಿದ್ದವು. ಕೆಲವೇ ನಿಮಿಷದಲ್ಲಿ ಅವು ಮೂರ್ಛಿತವಾಗಿ ನೀರಿನ ಮೇಲೆ ತೇಲಲಾರಂಭಿಸುತ್ತಿದ್ದವು. ಕೂಡಲೆ ಇವರು ಅವನ್ನು ಚೀಲಕ್ಕೆ ಸೇರಿಸಿ ಮತ್ತೆ ಗುಳಿಗೆಗಳನ್ನು ನೀರಿಗೆಸೆಯುತ್ತಿದ್ದರು. ಹೀಗೆ ಹಿಡಿದ ಮೀನುಗಳನ್ನು ಬೇಯಿಸಿ ಮಿತ್ರರೆಲ್ಲಾ ಕೂಡಿ ತಿಂದುಹಾಕುತ್ತಿದ್ದರು.

ಪ್ರಾಥಮಿಕ ಶಾಲೆಯ ದಿನಗಳಲ್ಲಿ ಸಿಂಗಾರಿಗೌಡರು ಅತ್ಯುನ್ನತ ದರ್ಜೆಯ ವಿದ್ಯಾರ್ಥಿಯಾಗಿರದಿದ್ದರೂ ಹೇಗೋ ತಮ್ಮ ಪಾಠ ಪ್ರವಚನಗಳನ್ನು ಸರಿದೂಗಿಸಿ ಮುಂದಿನ ತರಗತಿಗೆ ಹೋಗುತ್ತಿದ್ದರೆಂದು ತಮ್ಮ ಆಗಿನ ಓದನ್ನು ಕುರಿತು ಅವರೇ ಪಡುಪಂಥ ಅಭಿಪ್ರಾಯಗಳಿಂದ ಊಹಿಸಬಹುದು. ಮನೆಯವರ ಮುದ್ದಿನಿಂದಲೋ ದೊಡ್ಡಮನೆತನದವರೆಂಬ ಒಂದು ರೀತಿಯ ಭಾವನೆಯಿಂದಲೋ ಹಗಲಿರುಳು ಕುಳಿತು ಅಭ್ಯಾಸಮಾಡುವುದು ಗೌಡರಿಗೆ ಮುಜುಗರದ ಕೆಲಸವಾಗಿದ್ದಂತೆ ಕಾಣುತ್ತದೆ. ನಾಲ್ಕು ಗೋಡೆಯೊಳಗೆ ಕುಳಿತು ಪಾಠ ಕೇಳುವುದಕ್ಕಿಂತ ಸ್ವತಂತ್ರವಾಗಿ ಆಟದ ಮೈದಾನದಲ್ಲಿಯೋ ಕೆರೆಯಲ್ಲಿ ಮೀನು ಹಿಡಿಯುತ್ತಲೋ ಇರುವುದು ಸೊಗಸು ಅನ್ನಿಸಿರಬೇಕು. ಆದರೆ ಅತ್ಯಂತ ಸೂಕ್ಷ್ಮಗ್ರಾಹಿಯಾದುದರಿಂದ ಒಮ್ಮೆ ಅಧ್ಯಾಪಕರು ಹೇಳಿದುದು ಮನಸ್ಸಿನಲ್ಲಿ ಉಳಿಯುತ್ತಿತ್ತು. ಈ ಸ್ವಲ್ಪ ಬಂಡವಾಳವನ್ನೇ ಅತ್ಯಂತ ಚೆನ್ನಾಗಿ ಉಪಯೋಗಿಸಿಕೊಂಡು ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿಬಿಡುತ್ತಿದ್ದರು. ಎರಡು ವರ್ಷಗಳ ಕೊನೆಯಲ್ಲಿ ತಮ್ಮ ಲೋಯರ್ ಸೆಕೆಂಡರಿ ಪರೀಕ್ಷೆಯನ್ನು ಮುಗಿಸಿದ ಸಿಂಗಾರಿಗೌಡರು ಮೈಸೂರು ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾಗಿದ್ದು ಮೈಸೂರು ನಗರದಲ್ಲಿಯೇ ವಾಸಿಸುತ್ತಿದ್ದ ತಂದೆ ಕೃಷ್ಣಪ್ಪಗೌಡರನ್ನು ಕೂಡಿಕೊಂಡರು. ಇದಲ್ಲದೆ ಮೈಸೂರಿನಲ್ಲಿ ಅವರ ಚಿಕ್ಕಮ್ಮನ ಮನೆ, ಭಾವನ ಮನೆಗಳೂ ಆ ಹೊತ್ತಿಗೆ ಇದ್ದುವು.

೬. ಜ್ಞಾನಸೋಪಾನ

ಕಾಲನಿಯತಿ ಯಾರನ್ನು ಎಲ್ಲಿಗೆ ಒಯ್ಯುತ್ತದೆಂದು ಹೇಳಲು ಬರುವುದಿಲ್ಲ. ಜೀವನದಲ್ಲಿ ಬೇಸರಗೊಂಡು ತಲೆಗೆ ಗುಂಡು ಹಾರಿಸಿಕೊಳ್ಳಲು ಯತ್ನಿಸಿದ ರಾಬರ್ಟ್ ಕ್ಲೈವ್ ಮುಂದೊಂದು ದಿನ ಸಂದರ್ಭವನ್ನು ಉಪಯೋಗಿಸಿಕೊಂಡು ಲಾರ್ಡ್ ಕ್ಲೈವ್ ಆಗಿ ಭಾರತದ ಗವರ್ನರ್ ಜನರಲ್ ಆಗುತ್ತಾನೆಂದು ಯಾವ ಭವಿಷ್ಯಕಾರನೂ ಊಹಿಸಿರಲಿಲ್ಲ, ಹೇಳಿಯೂ ಇರಲಿಲ್ಲ. ಜಗತ್ತಿನ ಇತಿಹಾಸವನ್ನು ಗಮನಿಸಿದರೆ ಇಂತಹ ಆಕಸ್ಮಿಕಗಳು ನೂರಾರು ಕಂಡುಬರುತ್ತವೆ. ಐವತ್ತು ಅರವತ್ತು ವರ್ಷಗಳ ಹಿಂದೆ ಹಳ್ಳಿಯ ಹುಡುಗನೊಬ್ಬ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಪ್ರೌಢಶಾಲೆ ಸೇರುತ್ತಾನೆಂಬುದು ಇಂತಹದೇ ಆಕಸ್ಮಿಕ, ಅನಿರೀಕ್ಷಿತ. ಕೃಷ್ಣರಾಜ ಪೇಟೆಯ ಮಾಧ್ಯಮಿಕ ಶಾಲೆಯಿಂದ ಸಿಂಗಾರಿಗೌಡರು ತಮ್ಮ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆಗಿನ ಕಾಲದಲ್ಲಿ ವ್ಯಕ್ತಿಯೊಬ್ಬನ ಶೈಕ್ಷಣಿಕ ಜೀವನ ದಲ್ಲಿ ಇದು ಅತ್ಯಂತ ಪ್ರಮುಖವಾದ ಅಡಿಪಾಯದ ಅಂಗ. ಕಾಲುವೆಯನ್ನು ಹಾರ ಲಾರದವನು ಸಮುದ್ರ ಹಾರಬಲ್ಲನೆ ಎಂಬಂತೆ ಲೋಯರ್ ಸೆಕೆಂಡರಿ ದಾಟದವನಿಗೆ ಪ್ರೌಢ ಶಿಕ್ಷಣವಲ್ಲಿ ? ಸಿಂಗಾರಿಗೌಡರು ಅದನ್ನು ದಾಟಿ ತಮ್ಮ ಶೈಕ್ಷಣಿಕ ಜೀವನದ ಮುಂದಿನ ಹಂತ ತಲುಪಿದರು.

ಆಗಿನ ಕಾಲದಲ್ಲಿ ದೇಶದಲ್ಲಿಯೇ ಬೆರಳೆಣಿಕೆಯಷ್ಟು ಪ್ರೌಢಶಾಲೆಗಳಿದ್ದುವು. ಅವುಗಳಲ್ಲಿ ಮಹಾ ಮಹಾ ಮೇಧಾವಿಗಳು ಪಂಡಿತರು ಉಪಾಧ್ಯಾಯರಾಗಿರು ತ್ತಿದ್ದರು. ಅಂತಹ ಶಾಲೆಗಳಲ್ಲಿ ಮೈಸೂರಿನ ಮಹಾರಾಜಾ ಪ್ರೌಢಶಾಲೆಯೂ ಒಂದು. ಸಿಂಗಾರಿಗೌಡರು ಆ ಶಾಲೆಗೆ ಸೇರಿ ತಮ್ಮ ಪ್ರೌಢ ವ್ಯಾಸಂಗವನ್ನು ಮುಂದುವರಿಸಿದರು. ಆಗ ಸಿಂಗಾರಿಗೌಡರ ತಂದೆ ಕೃಷ್ಣಪ್ಪಗೌಡರು ಮೈಸೂರು ಜಿಲ್ಲಾಬೋರ್ಡಿನ ಉಪಾಧ್ಯಕ್ಷ ರಾಗಿದ್ದು ಮೈಸೂರಿನಲ್ಲಿಯೇ ವಾಸಮಾಡಬೇಕಾಗಿತ್ತು. ಆದರೆ ಸಂಸಾರವನ್ನು ಕರಡ ಹಳ್ಳಿಯಿಂದ ಬದಲಾಯಿಸುವಂತಿರಲಿಲ್ಲ. ಮನೆಯಲ್ಲಿ ಅಡಿಗೆಯವನಿದ್ದ. ಸಿಂಗಾರಿ ಗೌಡರು ತಮ್ಮ ಪ್ರೌಢಶಾಲಾ ಜೀವನವನ್ನು ಅತ್ಯಂತ ಹುಮ್ಮಸ್ಸಿನಿಂದಲೇ ಆರಂಭಿಸಿ ದರು. ಆ ಹೊತ್ತಿಗಾಗಲೇ ಅವರ ಬಂಧು ತಟ್ಟೇಕೆರೆಯ ಮಾದಪ್ಪಗೌಡರು ಮೈಸೂರಿ ನಲ್ಲಿ ಓದುತ್ತಿದ್ದರು. ಸಿಂಗಾರಿಗೌಡರ ತಾಯಿ ತಟ್ಟೇಕೆರೆಯ ಮನೆಯವರು. ಈ ಹೊತ್ತಿಗೆ ಮೈಸೂರಿನಲ್ಲಿ ಪಳಗಿದ್ದ ಮಾದಪ್ಪಗೌಡರು ಮತ್ತು ಅವರ ಗೆಳೆಯರ

ಸಂಪರ್ಕ ಸಿಂಗಾರಿಗೌಡರಿಗಾಯಿತು. ಆಟಗಳ ಕಡೆಗೆ. ತಿರುಗಾಟದ ಕಡೆಗೆ ಹೆಚ್ಚು ಗಮನಹರಿಯಿತು. ಮಿತ್ರರ ಜೊತೆ ಸೇರಿ ಇಸ್ಪೀಟು ಆಟ ಕಲಿತರು. ಈ ಇಸ್ಪೀಟು ತುಂಬಾ ಅಪಾಯಕಾರಿಯಾದ ಆಟ. ಒಮ್ಮೆ ಅಂಟಿಬಿಟ್ಟರೆ ಹಗಲು ರಾತ್ರಿ ವ್ಯಕ್ತಿಯನ್ನು ಇದು ಬಿಡುವುದೇ ಇಲ್ಲ. ಸಿಂಗಾರಿಗೌಡರನ್ನು ಈ ಆಟ ಮೊದಮೊದಲು ಆಕರ್ಷಿಸಿತು. ಕಡೆಗೆ ಅವರನ್ನು ಬಿಗಿಯಾಗಿಯೇ ಹಿಡಿಯಿತು. ಅದು ಅಪಾಯದ ಅಂಚಿಗೆ ಹೋಗದಿದ್ದರೂ ಇಂದಿಗೂ ಇಸ್ಪೀಟು ಆಟ ಸಿಂಗಾರಿಗೌಡರನ್ನು ಬಿಟ್ಟಿಲ್ಲ ಅನ್ನಿಸುತ್ತದೆ.

ನಿನ್ನ ಗೆಳೆಯರ ಹೆಸರನ್ನು ಹೇಳು ನಿನ್ನ ಭವಿಷ್ಯ ಹೇಳುತ್ತೇನೆ ಎಂಬ ಮಾತೊಂದಿದೆ. ಗೆಳೆಯರ ಸಂಪರ್ಕ ಬೆಳೆದಂತೆಲ್ಲಾ, ಇಸ್ಪೀಟು ಆಟ ಬೆಳೆದಂತೆಲ್ಲಾ ತರಗತಿಗಳಿಗೆ ಚಕ್ಕರ್ ಹೊಡೆಯುವುದು ಸರ್ವೇಸಾಮಾನ್ಯವಾಯಿತು. ಸ್ನೇಹಿತರನ್ನು ಕೂಡಿಕೊಂಡು ರೈಲು ಹಳಿಗಳ ಪಕ್ಕ ಇಸ್ಪೀಟಿಗೆ ಕುಳಿತರೆ ಕಾಲದ ಪರಿವೇ ಇರುತ್ತಿರಲಿಲ್ಲ. ಮೊದಲ ವರ್ಷದ ಓದು ಕೊನೆಯಾಗುತ್ತಾ ಬರುತ್ತಿತ್ತು. ಮುಖ್ಯೋಪಾಧ್ಯಾಯರಿಗೆ ಹುಡುಗರ ಓದು, ತರಗತಿಯ ಹಾಜರಾತಿ ಸರಿಯಾಗಿಲ್ಲವಾಯಿತು. ತಂದೆ ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರು. ಆಗಿನ ಲೆಕ್ಕದಲ್ಲಿ ಬಹಳ ಗಣ್ಯವ್ಯಕ್ತಿ. ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದವರು. ಅಂತಹವರ ಮಗನ ಓದು ಕುಂಠಿತಗೊಳ್ಳುವುದು ಅವರಿಗೆ ಸರಿಯಾಗಿ ಕಾಣಲಿಲ್ಲ. ಆದರೆ ಮಾಡುವುದೇನು ? ಮುಖ್ಯೋಪಾಧ್ಯಾಯರು ಕೃಷ್ಣಪ್ಪಗೌಡರಿಗೆ ಮಗನ ವ್ಯಾಸಂಗದ ಹಿನ್ನೆಲೆಯನ್ನು ಕುರಿತು ವರದಿ ಕಳಿಸಿದರು.

ಬೆಳೆದ ಮಕ್ಕಳನ್ನು ಸ್ನೇಹಿತರಂತೆ ಕಾಣು ಎಂಬುದು ನಾಣ್ಣುಡಿ. ಕೃಷ್ಣಪ್ಪಗೌಡರಿಗೆ ಮಗನ ವ್ಯಾಸಂಗ ಕುಂಠಿತಗೊಂಡುದು ತುಂಬಾ ವ್ಯಥೆಯನ್ನುಂಟುಮಾಡಿತು. ಆದರೂ ಅವರು ದುಡುಕಲಿಲ್ಲ. ಮಗನನ್ನು ಬಯ್ಯಲಿಲ್ಲ ; ಮುಖ್ಯೋಪಾಧ್ಯಾಯರು ದೂರು ಹೇಳಿದರೆಂದೂ ಹೇಳಲಿಲ್ಲ. "ನಾನು ಕೇಳಿದೆ ಎಂದು ನಾಳೆ ಮನೆಯಲ್ಲಿ ನಿನ್ನ ಮುಖ್ಯೋಪಾಧ್ಯಾಯರನ್ನು ಕಂಡು ಬಾ" ಎಂದರು. ಸಿಂಗಾರಿಗೌಡರಿಗೆ ಆಗಿರಬಹುದಾದ ಅನಾಹುತದ ವಾಸನೆ ಹೊಡೆಯಿತಾದರೂ ತಂದೆಯ ಮಾತನ್ನು ಮೀರುವಂತಿಲ್ಲ. ಅವರ ಆಣತಿಯಂತೆ ಮುಖ್ಯೋಪಾಧ್ಯಾಯರ ಮನೆಗೆ ಹೋದುದಾಯಿತು. ಆದರೆ ಕರುಣೆ ಇರಬೇಕಾದ ಮುಖ್ಯೋಪಾಧ್ಯಾಯರ ಮುಖದಲ್ಲಿ ವ್ಯಗ್ರತೆ ವ್ಯಗ್ರತೆ ತುಂಬಿತ್ತು. ಸೌಜನ್ಯದ ತಿದ್ದುವಿಕೆಯ ಮಾತುಗಳು ಬರಬೇಕಾದ ಅವರ ಬಾಯಲ್ಲಿ ಕಠಿಣವಾದ, ದರ್ಪದ ಮಾತುಗಳು ಬಂದವು. ದಾಟಿಯಿಂದ ನಿರಾಸೆಯಿಂದ ಮಗ ಹಿಂತಿರುಗಿದ್ದು ತಂದೆಗೆ ವ್ಯಸನವನ್ನುಂಟುಮಾಡಿತು. ಮನಸ್ಸು ಕೆಟ್ಟಮೇಲೆ ಅಲ್ಲಿ ಓದು ಮುಂದುವರಿಸುವುದು ಕೃಷ್ಣಪ್ಪಗೌಡರಿಗೆ ಸರಿಯೆನಿಸಲಿಲ್ಲ. ತಮ್ಮ ರಾಜಕೀಯ ತಿರುಗಾಟದಲ್ಲಿ ಮಗನ ಓದಿನ ಬಗ್ಗೆಯಾಗಲಿ, ನಡತೆಯ ಬಗ್ಗೆಯಾಗಲಿ ವೈಯಕ್ತಿಕ ಗಮನ

ಕೊಡಲು ಆಗಿರಲಿಲ್ಲ. ಈಗ ಪರಿಸ್ಥಿತಿ ಬೇರೆಯಾಗಿತ್ತು. ಏನಾದರೂ ವ್ಯವಸ್ಥೆ ಮಾಡದೆ ಹೋದರೆ ಮಗನ ಭವಿಷ್ಯ ಕುಂಠಿತವಾಗುತ್ತದೆಂಬುದು ಅವರಿಗೆ ಅರಿವಾಗಿತ್ತು. ಈ ವಿಚಾರವಾಗಿ ತಮ್ಮ ಮಿತ್ರರಾದ ಡಿ. ಬನುಮಯ್ಯನವರೊಂದಿಗೆ ಸಮಾಲೋಚಿಸಲು ನಿರ್ಧರಿಸಿದರು.

ಮೈಸೂರಿನ ಸುಪ್ರಸಿದ್ಧ ವ್ಯಾಪಾರಗಾರರಾದ ಡಿ. ಬನುಮಯ್ಯನವರು ಆಗಿನ ಕಾಲದಲ್ಲಿ ಸುಪ್ರಸಿದ್ಧ ವ್ಯಕ್ತಿ. ಅವರಿಗೆ ಸಾಹುಕಾರ್, ಲೋಕಸೇವಾನಿರತ ಮುಂತಾದ ಬಿರುದುಗಳಿದ್ದುವು. ತಾವು ಗಳಿಸಿದ ಐಶ್ವರ್ಯದ ಕೆಲ ಅಂಶವನ್ನಾದರೂ ಜನೋಪಯೋಗಿ ಕೆಲಸಗಳಿಗೆ ವ್ಯಯಮಾಡಬೇಕೆಂಬುದು ಬನುಮಯ್ಯ ಅವರ ಆಸೆ. ದಿವಂಗತ ಕೆ. ಎಚ್. ರಾಮಯ್ಯನವರಿಂದ ಪ್ರಭಾವಿತರಾದವರಲ್ಲಿ ಡಿ. ಬನುಮಯ್ಯ ಕೂಡ ಸೇರಿದ್ದರು. ಆಗ ನಾಡಿನಲ್ಲಿ ಆರಂಭವಾಗಿದ್ದ ಬ್ರಾಹ್ಮಣೇತರ ಜನಾಂಗಗಳ ಅಭಿವೃದ್ಧಿ ಚಳುವಳಿಯಲ್ಲಿ ಡಿ. ಬನುಮಯ್ಯನವರು ಕುಂಚಿಟಿಗರ ಮುಖಂಡರಾಗಿದ್ದರು. ಅವರು ತಮ್ಮ ಗಳಿಕೆಯ ಸ್ವಲ್ಪ ಭಾಗವನ್ನು ಶೈಕ್ಷಣಿಕ ಸಂಸ್ಥೆಗಳಿಗೆ ವಿನಿಯೋಗಿಸುತ್ತಿದ್ದರು. ಆಮೇಲೆ ಅವರೇ ಒಂದು ಶಿಕ್ಷಣ ಸಂಸ್ಥೆಯನ್ನು ಆರಂಭಿಸಿ ಅವರ ಆಶ್ರಯದಲ್ಲಿ ಹತ್ತನೆಯ ತರಗತಿಯವರೆಗೆ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳನ್ನು ನಡೆಸುತ್ತಿದ್ದರು. ಆ ಸಂಸ್ಥೆ ಈಗ ಬೃಹದಾಕಾರವಾಗಿ ಬೆಳೆದು ಪದವಿಯವರೆಗೆ ಶಿಕ್ಷಣ ಕೊಡುತ್ತಿರುವ ಅನೇಕ ಅಂಗಗಳನ್ನು ಹೊಂದಿದೆ. ಕೃಷ್ಣಪ್ಪಗೌಡರು ತಮ್ಮ ಮಗನ ಸಮಸ್ಯೆಯನ್ನು ಬನುಮಯ್ಯನವರಲ್ಲಿ ಚರ್ಚಿಸಿರಬೇಕು. ಅದರ ಫಲ ಸಿಂಗಾರಿಗೌಡರು ಮಹಾರಾಜರವರ ಪ್ರೌಢಶಾಲೆಯಿಂದ ಡಿ. ಬನುಮಯ್ಯನವರ ಪ್ರೌಢಶಾಲೆಗೆ ಬಂದು ಸೇರಿದರು.

ಆಗ ಡಿ. ಬನುಮಯ್ಯ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದವರು ರಂಗಣ್ಣ ಎಂಬುವರು. ಬನುಮಯ್ಯನವರು ಸಿಂಗಾರಿಗೌಡರ ಬಗ್ಗೆ ಅವರಿಗೆ ಹೇಳಿದ್ದರೆಂದು ಕಾಣುತ್ತದೆ. ಅವರು ಗೌಡರನ್ನು ಕರೆಸಿ ಅತ್ಯಂತ ಸ್ನೇಹ ವಾತ್ಸಲ್ಯದಿಂದ ಮಾತನಾಡಿಸಿ ಚೆನ್ನಾಗಿ ವ್ಯಾಸಂಗ ಮಾಡಲು ಹುರಿದುಂಬಿಸಿದರು. ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರ ಮಗನೆಂಬ ಕಾರಣವೂ ಅದರಲ್ಲಿ ಇರಬಹುದು. ವಾರಕ್ಕೆ ಕಡೆಯ ಪಕ್ಷ ಎರಡು ಸಾರಿಯಾದರೂ ಸಿಂಗಾರಿಗೌಡರನ್ನು ಕರೆಸಿಕೊಂಡು ಅವರ ವ್ಯಾಸಂಗದ ಬಗ್ಗೆ ರಂಗಣ್ಣನವರು ವಿಚಾರಿಸಿಕೊಳ್ಳುತ್ತಿದ್ದರು. ರಂಗಣ್ಣನವರು ಹಿಂದಿನ ಮುಖ್ಯೋಪಾಧ್ಯಾಯರಿಗೆ ಹೋಲಿಸಿದಾಗ ವಿದ್ಯಾರ್ಥಿ ಸಿಂಗಾರಿಗೌಡರ ದೃಷ್ಟಿಯಲ್ಲಿ ಅಜಗಜಾಂತರವಾಗಿ ಕಂಡರು. ರಂಗಣ್ಣನವರು ತಮ್ಮ ಸೌಜನ್ಯದ ಸಂಮೋಹನಾಸ್ತ್ರದಿಂದ ಗೌಡರನ್ನು ಆಕರ್ಷಿಸಿ ವಶಮಾಡಿಕೊಂಡು ಬಿಟ್ಟರು. ಅವರ ಪ್ರಭಾವ ಸಿಂಗಾರಿಗೌಡರ ಮೇಲೆ ಬಹಳವಾಗಿಯೇ ಆಯಿತೆಂದು ಹೇಳಬೇಕು. ಇದರಿಂದ ಅವರ ಶಿಕ್ಷಣವಷ್ಟೇ ಅಲ್ಲ ಜೀವನದ ರೀತಿ ನೀತಿಯೂ ಬೇರೆಯಾಯಿತೆಂದು ಹೇಳಬಹುದು. ತಂದೆಗೆ ಬೆಟ್ಟ

ವಾಗಿದ್ದ ಮಗನ ಓದು ಹತ್ತಿಯಂತೆ ಹಗುರವಾಯಿತು.

ವಾರಕೊಮ್ಮೆ ಶ್ರೀ ರಾಮಕೃಷ್ಣಾಶ್ರಮದ ಸ್ವಾಮಿಗಳು ಬಂದು ವಿದ್ಯಾರ್ಥಿಗಳಿಗೆ ಹಿತವಚನ ನೀಡುತ್ತಿದ್ದರು. ಅವರ ಅನೇಕ ಉಪದೇಶಗಳು ಸಿಂಗಾರಿಗೌಡರ ಮೇಲೆ ತುಂಬಾ ಪ್ರಭಾವ ಬೀರಿದವು. ಅವರಲ್ಲಿ ಸೇವಾಮನೋಭಾವ ಅಂಕುರಿಸಿತು. ಆಟ ಪಾಠಗಳಲ್ಲಿ ಆಸಕ್ತಿ ಕುದುರಿತು. ಮೊದಲ ವರ್ಷ ಮಗ ಅನುತ್ತೀರ್ಣನಾಗುವನೆಂದು ನಂಬಿದ್ದ ಕೃಷ್ಣಪ್ಪಗೌಡರಿಗೆ ಸಂತಸವಾಗುವಂತೆ ಅವರು ಮುಂದಿನ ತರಗತಿಗೆ ಹೋದರು. ರಂಗಣ್ಣನವರು, ಆಶ್ರಮದ ಸ್ವಾಮಿಗಳು ಅವರ ಮೇಲೆ ಅಪಾರ ಪ್ರಭಾವ ಬೀರಿದರು. ಏಳು ಎದ್ದೇಳು ಗುರಿಮುಟ್ಟುವವರೆಗೂ ನಿಲ್ಲಬೇಡ ಎಂಬ ಸ್ವಾಮಿ ವಿವೇಕಾನಂದರ ಶ್ರೀವಾಣಿ ಸಿಂಗಾರಿಗೌಡರ ಜೀವನ್ಮಂತ್ರವಾಯಿತು. ಅನೇಕರ ಗೆಳೆತನವನ್ನು ಸಂಪಾದಿಸಿಕೊಂಡರು. ಓದಿನಲ್ಲಿ ಬುದ್ಧಿವಂತರೆನಿಸಿಕೊಂಡರು. ಮುಂದಿನ ಎರಡು ವರ್ಷಗಳಲ್ಲಿ ಅವರು ಒಬ್ಬ ವಿದ್ಯಾರ್ಥಿ ಮುಖಂಡರಾಗಿ ರೂಪಿತಗೊಂಡರು.

ಕಗ್ಗಲ್ಲೊಂದು ಕುಶಲನಾದ ಶಿಲ್ಪಿಯ ಕೈಗೆ ಸಿಕ್ಕಿ ಸುಂದರ ಮೂರ್ತಿಯಾಗುವಂತೆ ಸಿಂಗಾರಿಗೌಡರು ರಂಗಣ್ಣನವರಿಂದ ಒಬ್ಬ ವ್ಯಕ್ತಿಯಾದರು. ಹೊಸ ಹೊಸದನ್ನು ಅರಿಯುವ ಆಸೆ ಕೆರಳಿ ಓದಿನಲ್ಲಿ ತನ್ಮಯತೆಯನ್ನು ಸಾಧಿಸಿದರು. ಬರಿಯ ಪಠ್ಯಪುಸ್ತಕಗಳಷ್ಟೇ ಅಲ್ಲ ಬೇರೆ ಬೇರೆಯ ಸಾಹಿತ್ಯ, ರಾಜಕೀಯ, ಧಾರ್ಮಿಕ ಗ್ರಂಥಗಳನ್ನು ಅವಲೋಕಿಸಿದರು. ಅದುವರೆಗೆ ಒಂದು ರೀತಿಯ ಏಕಾಂಗಿಯಂತಿರುತ್ತಿದ್ದವರು ಆಟದ ಮೈದಾನಕ್ಕಿಳಿದರು. ಇದರಿಂದ ಆರೋಗ್ಯ ಮತ್ತು ಸ್ನೇಹಸಂವರ್ಧನೆಯಾಯಿತು. ಕೂಡಿ ಬಾಳುವ ರೀತಿಯು ಅರಿವಾಯಿತು. ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ತೋರಿಸಿತು. ಈ ಎಲ್ಲಾ ಚಟುವಟಿಕೆಗಳೊಂದಿಗೆ ತಮ್ಮ ಓದನ್ನು ಹಿಂದೆ ಬೀಳದಂತೆ ನೋಡಿಕೊಂಡು ತಮ್ಮ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಸಿಂಗಾರಿಗೌಡರು ಉತ್ತೀರ್ಣರಾದರು. ತಮ್ಮ ಜ್ಞಾನಸೋಪಾನದ ಮೊದಲ ಮೆಟ್ಟಿಲುಗಳನ್ನು ಹತ್ತಿ ವಿಶ್ವಜ್ಞಾನದ ಹೆಬ್ಬಾಗಿಲಿಗೆ ಬಂದು ನಿಲ್ಲುವ ಅರ್ಹತೆಯನ್ನು ಗಳಿಸಿಕೊಂಡರು. ಕರಡಹಳ್ಳಿಯಂತಹ ಸಾಮಾನ್ಯ ಹಳ್ಳಿಯೊಂದರಲ್ಲಿ ಹುಟ್ಟಿ ವಿಶ್ವವಿದ್ಯಾನಿಲಯದ ಹೊಸ್ತಿಲು ತುಳಿಯುವುದು ಆ ಕಾಲದ ಅಪೂರ್ವ ಘಟನೆಗಳಲ್ಲೊಂದು. ಅಂತಹ ಶಕ್ತಿಯನ್ನು ಸಿಂಗಾರಿಗೌಡರು ಸಾಧಿಸಿ ತೋರಿಸಿದರು.

೭. ವಿಶ್ವವಿದ್ಯಾಭಗವತಿ

ಭಾರತೀಯ ವಿಶ್ವವಿದ್ಯಾನಿಲಯಗಳ ಚರಿತ್ರೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಒಂದು ಪ್ರಮುಖ ಸ್ಥಾನಪಡೆದುಕೊಂಡಿದೆ. 1916 ರಲ್ಲಿ ಆಗಿನ ಮಹಾರಾಜರಾದ ನಾಲ್ಮಡಿ ಕೃಷ್ಣರಾಜ ಒಡೆಯರ ದೂರದೃಷ್ಟಿಯ ಫಲವಾಗಿ ಈ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬಂದಿತು. ಇಂದು ಕನ್ನಡ ನಾಡಿನಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳೂ ಸೇರಿದಂತೆ ಎಂಟು ವಿಶ್ವವಿದ್ಯಾನಿಲಯಗಳಿವೆ. ಜಗತ್ತಿನ ಶೈಕ್ಷಣಿಕ ಗತಿಯನ್ನು ಗಮನಿಸಿ ಹೇಳುವುದಾದರೆ ಊರಿಗೆ ಎರಡು ಮೂರು ವಿಶ್ವವಿದ್ಯಾನಿಲಯಗಳಿರುವುದೂ ಉಂಟು. ಇಷ್ಟಾದರೂ ಮೊದಲಿಗೆ ಆರಂಭವಾದ ವಿಶ್ವವಿದ್ಯಾನಿಲಯಗಳು ಅವುಗಳ ಪರಂಪರೆಯ ದೃಷ್ಟಿಯಿಂದ ಮಹತ್ವದವಾಗಿವೆ. ಮೈಸೂರು ವಿಶ್ವವಿದ್ಯಾನಿಲಯ ಆರಂಭವಾದಾಗ ಇದ್ದವು ಎರಡೇ ಕಾಲೇಜುಗಳು ಮೈಸೂರಿನ ಮಹಾರಾಜಾ ಕಾಲೇಜು ಮತ್ತು ಬೆಂಗಳೂರಿನ ಸೆಂಟ್ರಲ್ ಕಾಲೇಜು. ಅನಂತರ ಕ್ರಮವಾಗಿ ಜಿಲ್ಲಾ ಪ್ರಮುಖ ಕೇಂದ್ರಗಳಲ್ಲಿ ಇಂಟರ್‌ಮೀಡಿಯಟ್ ಕಾಲೇಜುಗಳು ಆರಂಭವಾದುವು. ಅಂತಹವುಗಳಲ್ಲಿ ಮೈಸೂರಿನ ಯುವರಾಜಾ ಕಾಲೇಜು ಒಂದು. ಇದು ಇಂಟರ್‌ಮೀಡಿಯಟ್‌ವರೆಗೆ ವಿಜ್ಞಾನ ಶಿಕ್ಷಣ ಕೊಡುತ್ತಿದ್ದ ಕಾಲೇಜು ಆಗಿತ್ತು. ಆಗ ವಿಜ್ಞಾನದ ಪದವಿಗೆ ಬೆಂಗಳೂರು ಸೆಂಟ್ರಲ್ ಕಾಲೇಜು, ಕಲಾಪದವಿಗೆ ಮೈಸೂರಿನ ಮಹಾರಾಜಾ ಕಾಲೇಜುಗಳಿಗೆ ಮಾತ್ರ ಸೇರಬೇಕಾಗಿತ್ತು. ಬನುಮಯ್ಯ ಪ್ರೌಢಶಾಲೆಯಿಂದ ತಮ್ಮ ಎಸ್ ಎಸ್.ಎಲ್.ಸಿ. ಯನ್ನು ಮುಗಿಸಿದ ಸಿಂಗಾರಿಗೌಡರು ತಮ್ಮ ಮುಂದಿನ ಶಿಕ್ಷಣಕ್ಕಾಗಿ ಮೈಸೂರಿನ ಯುವರಾಜ ಕಾಲೇಜನ್ನು ಸೇರಿದರು.

ಯುವರಾಜಾ ಕಾಲೇಜಿನಲ್ಲಿ ಆಗ ಪ್ರಿನ್ಸಿಪಾಲರಾಗಿದ್ದವರು ನಾಗೇಶರಾಯರು. ಕುಳ್ಳನೆಯ ಸಣ್ಣ ಆಳು. ಆದರೆ ಅತ್ಯಂತ ತೀಕ್ಷ್ಣಮತಿ. ತನ್ನ ಕಾಲೇಜಿಗೆ ಸೇರುವ ಪ್ರತಿ ವಿದ್ಯಾರ್ಥಿಯ ಬಗೆಗೆ ಅವರು ಮೊದಲೇ ವಿಷಯ ಸಂಗ್ರಹಿಸಿಬಿಡುತ್ತಿದ್ದರು. ಆ ಕಾಲದಲ್ಲಿ ಈಗಿನಂತೆ ಕಾಲೇಜುಗಳು ಸಂತೆಯಾಗಿರಲಿಲ್ಲ. ಲೋಯರ್ ಸೆಕೆಂಡರಿ ದಾಟುತ್ತಿದ್ದವರಲ್ಲಿ ಶೇಕಡ ಎಪ್ಪತ್ತೈದು ಮಂದಿ ಹಿಂತಿರುಗಿ ಬಿಡುತ್ತಿದ್ದರು. ಇಂಟರ್ ದಾಟುವುದರಲ್ಲಿ ಉಳಿದವರಲ್ಲಿ ಶೇಕಡ ಹತ್ತೋ ಇಪ್ಪತ್ತೋ. ಹೀಗಾಗಿ ವಿದ್ಯಾರ್ಥಿ ಸಂಖ್ಯೆಯೂ ಕಡಿಮೆ ಇದ್ದು ಪ್ರತಿ ವಿದ್ಯಾರ್ಥಿಯ ಬಗೆಗೂ ಅಧ್ಯಾಪಕರಿಗೆ, ಪ್ರಿನ್ಸಿಪಾಲರಿಗೆ ಪರಸ್ಪರ ವಿಷಯಗಳ ಅರಿವಿರುತ್ತಿತ್ತು. ಬನುಮಯ್ಯನವರ ಪ್ರೌಢಶಾಲೆಯ ವಿದ್ಯಾರ್ಥಿ

ಮುಖಂಡರಾಗಿ ಉತ್ತಮವಾಗಿ ಕೆಲಸ ನಿರ್ವಹಿಸಿದ್ದ ವಿಷಯ ಯುವರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ನಾಗೇಶರಾಯರಿಗೆ ತಿಳಿದಿತ್ತೆಂದು ಕಾಣುತ್ತದೆ. ಅವರು ಸಿಂಗಾರಿಗೌಡರನ್ನು ತಮ್ಮಲ್ಲಿಗೆ ಕರೆಸಿಕೊಂಡು ಆತ್ಮೀಯವಾಗಿ ಮಾತನಾಡಿಸಿದರು. ಇಂತಹ ಎರಡು ಮೂರು ಭೇಟಿಗಳ ನಂತರ ಸಿಂಗಾರಿಗೌಡರನ್ನು ಯುವರಾಜಾ ಕಾಲೇಜು ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿ ನೇಮಿಸಿದರು. ಆಗಿನ ಕಾಲದಲ್ಲಿ ಈಗಿನಂತೆ ಪೈಪೋಟಿಯ ಚುನಾವಣೆಗಳ ಗದ್ದಲ ಇರಲಿಲ್ಲ. ಆದುದರಿಂದ ಸಾಮಾನ್ಯವಾಗಿ ಕಾಲೇಜಿನ ಮುಖ್ಯಸ್ಥರೇ ಸಮರ್ಥ ವಿದ್ಯಾರ್ಥಿಗಳನ್ನು ಗಮನಿಸಿ ಇಂತಹವುಗಳಿಗೆ ನೇಮಕ ಮಾಡುತ್ತಿದ್ದರು. ಅಂತಹ ನೇಮಕಗಳು ಅತ್ಯಂತ ಗೌರವಪೂರ್ಣವಾದವೆಂಬ ಭಾವನೆಯೂ ವಿದ್ಯಾರ್ಥಿಗಳಲ್ಲಿದ್ದಿತು. ಪ್ರಾಯಃ ಸಿಂಗಾರಿಗೌಡರ ಪೂರ್ವಾಪರಗಳನ್ನು ಅರಿತ ನಾಗೇಶರಾಯರು ಈ ನೇಮಕ ಮಾಡಿದರೆಂದು ಕಾಣುತ್ತದೆ.

ಇಂಟರ್‌ಮೀಡಿಯೆಟ್ ಎರಡು ವರ್ಷದ ಶಿಕ್ಷಣವಾಗಿದ್ದಿತು. ಅಧ್ಯಯನ ಕ್ರಮ ಕಠಿಣವಾಗಿರುತ್ತಿತ್ತು. ಇಂಟರ್ ಮುಗಿಸಿದವನು ಪದವೀಧರ ಆದನೆಂದೇ ನಂಬಿಕೆಯಿತ್ತು. ಸಿಂಗಾರಿಗೌಡರಿಗೆ ಮಹಾರಾಜಾ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರ ಪ್ರಕರಣ ಬುದ್ಧಿಕಲ್ತು ಓದಿನ ಬಗೆಗೆ ಅತ್ಯಂತ ಎಚ್ಚರವಾಗಿರುವಂತೆ ಮಾಡಿತ್ತು ಎಂದು ಹೇಳಬಹುದು. ಆದುದರಿಂದ ಅವರು ಪಠ್ಯೇತರ ಚಟುವಟಿಕೆಗಳ ಮಧ್ಯದಲ್ಲಿಯೂ ತಮ್ಮ ಓದಿನ ಬಗೆಗೆ ಗಮನಕೊಡುತ್ತಿದ್ದರು. ವಿದ್ಯಾರ್ಥಿ ನಾಯಕನಾದವನು ಸಾಮಾನ್ಯವಾಗಿ ಓದಿನಲ್ಲಿ ಕುಂಟುವುದು ನಡೆದು ಬಂದ ಪದ್ಧತಿ. ಆದರೆ ಅವರಲ್ಲಿಯೂ ಕೆಲವರು ಎರಡನ್ನೂ ಸಮರ್ಥವಾಗಿ ಸರಿತೂಗಿಸಿದ್ದುಂಟು.. ಸಿಂಗಾರಿಗೌಡರು ಈ ಎರಡನೆಯ ಗುಂಪಿಗೆ ಸೇರಿದವರು. ವಿದ್ಯಾರ್ಥಿ ಸಂಘದ ಚಟುವಟಿಕೆಗಳು ಅವರ ಸಮಯದ ಅಪಾರ ಭಾಗವನ್ನು ತಿಂದುಹಾಕುತ್ತಿದ್ದುವೆಂಬುದು ನಿಜ.

ಇದೇ ಸಮಯದಲ್ಲಿ ಸಿಂಗಾರಿಗೌಡರ ಹೆಗಲಿಗೆ ಮತ್ತೊಂದು ಹೊಣೆಗಾರಿಕೆ ಸೇರಿಕೊಂಡಿತು. ಅವರ ವಿದ್ಯಾರ್ಥಿ ಸಂಘದ ಕಾರ್ಯಕ್ರಮಗಳ ರೀತಿ ನೀತಿ ಅವರ ಮಾತುಗಾರಿಕೆಯನ್ನು ಗಮನಿಸಿದ್ದ ಪ್ರಾಧ್ಯಾಪಕ ತ. ಸು. ವೆಂಕಣ್ಣಯ್ಯ ಅವರು ಸಿಂಗಾರಿಗೌಡರನ್ನು ವಿಶ್ವವಿದ್ಯಾಲಯ ಕರ್ನಾಟಕ ಸಂಘದ ಸಹಕಾರ್ಯದರ್ಶಿಯಾಗಿ ನೇಮಿಸಿದರು. ಆಗ ವಿಶ್ವವಿದ್ಯಾನಿಲಯದ ಕರ್ನಾಟಕ ಸಂಘ ಒಂದು ಪ್ರತಿಷ್ಠಿತ ಸಂಸ್ಥೆಯಾಗಿದ್ದು, ಕನ್ನಡದ ಹೆಸರಾಂತ ಲೇಖಕರೆಲ್ಲಾ ಅದರ ಬಗೆಗೆ ಅತ್ಯಂತ ಗೌರವ ಭಾವದಿಂದಿರುತ್ತಿದ್ದರು. ಆ ಸಂಸ್ಥೆ ಏರ್ಪಡಿಸುತ್ತಿದ್ದ ಉಪನ್ಯಾಸಗಳು, ಕವಿಸಮ್ಮೇಳನಗಳು, ಚರ್ಚಾಕೂಟಗಳೂ ಇಂದಿಗೂ ಪವಾಡ ಸದೃಶವಾಗಿ ಕಂಡುಬರುತ್ತವೆ. ಅಂತಹ ಕರ್ನಾಟಕ ಸಂಘದ ಸಹಕಾರ್ಯದರ್ಶಿಯಾದುದು ಸಿಂಗಾರಿಗೌಡರ ವ್ಯಕ್ತಿತ್ವವನ್ನು ಬಲಿಸಿತಷ್ಟೇ ಅಲ್ಲ ಅವರ ಸಂಪರ್ಕಗಳನ್ನು ವಿಸ್ತರಿಸಿತು. ಸಂಘದ ಕೆಲಸಗಳಿಗಾಗಿ ಬಿ. ಎಂ. ಶ್ರೀಕಂಠಯ್ಯ, ಟಿ. ಕೃಷ್ಣಮೂರ್ತಿ. ವಿ. ಸೀತಾರಾಮಯ್ಯ ಮುಂತಾದ ವಿದ್ವಾಂಸರ

ಸಂಪರ್ಕ ಉಂಟಾಯಿತು. ಕಾಲಕ್ರಮದಲ್ಲಿ ಅವರೊಂದಿಗೆ ಸಲುಗೆ ಬೆಳೆದು ಅನೇಕ ವಿಚಾರಗಳನ್ನು ಅರಿವುಮಾಡಿಕೊಟ್ಟಿತು. ಇದರಿಂದ ಅಧ್ಯಾಪಕ ವರ್ಗ ಮತ್ತು ವಿದ್ಯಾರ್ಥಿ ಸಮುದಾಯಗಳೆರಡರಲ್ಲಿಯೂ ಸಿಂಗಾರಿಗೌಡರು ಗೌರವಾನ್ವಿತ ವ್ಯಕ್ತಿಯಾಗಿ ಪರಿಗಣಿತರಾದರು. ಅವರಿಗೆ ಆಗಿನ ಕಾಲದ ಕನ್ನಡ. ಇಂಗ್ಲೀಷ್. ತತ್ವಶಾಸ್ತ್ರ. ಇತಿಹಾಸದ ಉನ್ನತ ಪ್ರಾಧ್ಯಾಪಕರುಗಳ ಪರಿಚಯವಾಯಿತು. ಅವರೊಡನೆ ಮಾತನಾಡುವ. ಚರ್ಚಿಸುವ ಅವರ ಮಾತುಗಳನ್ನು ಕೇಳುವ ಅವಕಾಶ ದೊರೆಯಿತು. ಇದರಿಂದ ಸಿಂಗಾರಿಗೌಡರ ವ್ಯಕ್ತಿತ್ವ ಜ್ಞಾನ ಬೆಳೆಯಲು ಅನುಕೂಲವಾಯಿತು. ಇವೆಲ್ಲವುಗಳ ಮಧ್ಯೆ ಅವರು ತಮ್ಮ ಇಂಟರ್‌ಮೀಡಿಯಟ್ ಪರೀಕ್ಷೆಯನ್ನು ಮುಗಿಸಿ ಅದರಲ್ಲಿ ಉತ್ತೀರ್ಣರೂ ಆಗಿ ಪದವಿ ತರಗತಿಗೆ ಸೇರುವ ಅರ್ಹತೆ ಗಳಿಸಿಕೊಂಡರು.

ಮೈಸೂರಿನ ಮಹಾರಾಜಾ ಕಾಲೇಜು ನಮ್ಮ ನಾಡಿನ ಬಹುತೇಕ ರಾಜಕಾರಿಣಿಗಳನ್ನು. ಸಾಹಿತಿಗಳನ್ನು. ತತ್ವಶಾಸ್ತ್ರಜ್ಞರನ್ನು. ಇತಿಹಾಸಕಾರರನ್ನು ತಯಾರಿಸಿದ ಸ್ಥಳ. ಕೆ. ಹನುಮಂತಯ್ಯ. ನಿಜಲಿಂಗಪ್ಪ. ದೇವರಾಜ ಅರಸ್ ಇವರೆಲ್ಲಾ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು. ಶ್ರೀ ಕುವೆಂಪು. ತೀನಂಶ್ರೀ. ಡಿ.ಎಲ್. ನರಸಿಂಹಾಚಾರ್ ಇವರೆಲ್ಲ ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು. ತಮ್ಮ ಜೀವನದಲ್ಲಿ ರಾಜಕೀಯ. ಸಾಹಿತ್ಯ ಇಂತಹ ಕ್ಷೇತ್ರಗಳನ್ನು ಪ್ರವೇಶಿಸುವವರಿಗೆ ಈ ಕಾಲೇಜು ಪವಿತ್ರಕ್ಷೇತ್ರ. ಮುಖಂಡರ ನೆಲೆವೀಡು, ವಾಗ್ಮಿಗಳ ತೌರು ಹೀಗೆ ಈ ಕಾಲೇಜಿನ ಕೀರ್ತಿ ದೇಶ ವಿದೇಶಗಳಲ್ಲಿ ಪ್ರಸಿದ್ಧವಾದುದು. ಮಹಾರಾಜಾ ಕಾಲೇಜಿನ ಪದವೀಧರ ಎನ್ನಿಸಿಕೊಳ್ಳಲು ಆಗ ಜನ ಹೆಮ್ಮೆಪಡುತ್ತಿದ್ದರು. ತಮ್ಮ ಇಂಟರ್ ಪರೀಕ್ಷೆ ಮುಗಿಸಿದ ಸಿಂಗಾರಿಗೌಡರು ಮಹಾರಾಜಾ ಕಾಲೇಜಿನಲ್ಲಿ ಬಿ.ಎ. ತರಗತಿಗೆ ಸೇರಿದರು.

ಕೃಷ್ಣಪ್ಪಗೌಡರಿಗೆ ಮಗನನ್ನು ಸರ್ಕಾರಿ ನೌಕರನನ್ನಾಗಿ ಮಾಡುವ ಆಸೆಯಿದ್ದಂತೆ ಕಂಡು ಬರುವುದಿಲ್ಲ. ಆಗಿನ ಕಾಲದಲ್ಲಿ ಹೆಸರಾಂತ ನ್ಯಾಯವಾದಿಗಳಿಗೆ ಬಹಳ ಬೆಲೆ. ಗೌರವ ಸಿಗುತ್ತಿತ್ತು. ಭಾರತ ದೇಶದ ಮಹಾನಾಯಕರುಗಳಲ್ಲಿ ಅನೇಕರು ಸರ್ದಾರ್ ಪಟೇಲ್, ನೆಹರು, ರಾಜೇಂದ್ರ ಪ್ರಸಾದ್. ರಾಜಗೋಪಾಲಚಾರಿ ಇವರೆಲ್ಲಾ ನ್ಯಾಯವಾದಿಗಳಾಗಿದ್ದವರೆ. ಪ್ರಾಯಃ ಕೃಷ್ಣಪ್ಪಗೌಡರಿಗೂ ತಮ್ಮ ಮಗ ಒಳ್ಳೆಯ ನ್ಯಾಯವಾದಿಯಾಗಬೇಕೆಂಬ ಆಸೆಯಿತ್ತೆಂದು ಕಾಣುತ್ತದೆ. ಸಿಂಗಾರಿಗೌಡರೂ ವಿದ್ಯಾರ್ಥಿ ಮುಖಂಡರಾಗಿ, ಸಂಘ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿ ಸ್ವತಂತ್ರ ಜೀವನವನ್ನೇ ಸ್ವಾಗತಿಸುವ ಮನೋಭಾವದವರಾಗಿದ್ದರು. ಆದುದರಿಂದಲೇ ಅವರು ಬಿ.ಎ. ಪದವಿಯನ್ನು ಆರಿಸಿಕೊಂಡದ್ದು.

ಮಹಾರಾಜಾ ಕಾಲೇಜಿನಲ್ಲಿಯೂ ಸಾಂಘಿಕ ಚಟುವಟಿಕೆಗಳು ಸಿಂಗಾರಿಗೌಡರನ್ನು ಬಿಡಲಿಲ್ಲ. ಆಗ ಮಹಾರಾಜಾ ಕಾಲೇಜು ವಿದ್ಯಾರ್ಥಿ ಸಂಘ ವಯಸ್ಕರ ಶಿಕ್ಷಣವನ್ನು ನಡೆಸುವ ಹೊಣೆಗಾರಿಕೆಯನ್ನು ಹೊತ್ತಿತ್ತು. ದೇಶದ ಜನಸಂಖ್ಯೆಯ ಶೇಕಡ

ತೊಂಬತ್ತೈದಕ್ಕೂ ಹೆಚ್ಚು ಮಂದಿ ಅನಕ್ಷರಸ್ಥರಲ್ಲಿ ಕೆಲವರನ್ನಾದರೂ ಅಕ್ಷರಸ್ಥರನ್ನಾಗಿ ಮಾಡುವ ನಮ್ಮ ನಾಡಿನ ಇಂದಿನ ವಯಸ್ಕರ ಶಿಕ್ಷಣ ಪದ್ಧತಿಯನ್ನು ಆರಂಭಿಸಿದವರು ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳು ಎಂಬುದು ಹೆಮ್ಮೆಯ ಸಂಗತಿ. ಇದರ ಸಂಚಾಲಕತ್ವವನ್ನು ಸಿಂಗಾರಿಗೌಡರಿಗೆ ವಹಿಸಲಾಯಿತು. ಅತ್ಯಂತ ಜವಾಬ್ದಾರಿಯುತವೂ ನೂತನವೂ ಆದ ಈ ಕೆಲಸವನ್ನು ಸಿಂಗಾರಿಗೌಡರು ತಮ್ಮ ವ್ಯಾಸಂಗದೊಂದಿಗೆ ನಿರ್ವಹಿಸಬೇಕಾಗಿತ್ತು.

ಭಾರತ ಹಿಂದುಳಿದಿರುವಿಕೆಗೆ ಅನಕ್ಷರತೆಯೇ ಮೂಲಕಾರಣವೆಂದು ಅನೇಕರು ಹೇಳಿದ್ದಾರೆ. ಮಹಾತ್ಮಗಾಂಧಿ ಈ ಬಗೆಗೆ ತಮ್ಮ ಅಪಾರ ಸಹಾನುಭೂತಿಯನ್ನು ಹೊಂದಿದ್ದವರು. ಅಕ್ಷರ ಜ್ಞಾನವಿಲ್ಲದವನು ಪಶುವಿಗೆ ಸಮಾನ. ಭಾರತ ಸ್ವಾತಂತ್ರ್ಯ ಗಳಿಸಲು ಅಕ್ಷರತೆ ಬಹುಮುಖ್ಯವಾಗಿದ್ದಿತು. ನಮ್ಮ ಜನರಿಗೆ ತಮ್ಮ ಇತಿಹಾಸ ತಿಳಿದಲ್ಲದೆ ಅವರು ಇಂಗ್ಲಿಷರ ವಿರುದ್ಧ ತಿರುಗಿನಿಲ್ಲುವುದಿಲ್ಲ. ಈ ಕೆಲಸವನ್ನು ಮಾಡುವವರು ಕೇವಲ ಸೇವಾಮನೋಭಾವದಿಂದ ಮಾಡಬೇಕು. ಇದಕ್ಕಾಗಿ ಹೊಸ ಸಾಹಿತ್ಯ ಬೇಕು. ಅಪಾರ ಹಣಬೇಕು. ದೇವುಡು ನರಸಿಂಹಶಾಸ್ತ್ರಿಯವರು ಹೊಸ ಅಕ್ಷರಮಾಲಿ ರೂಪಿಸಿದ್ದರು. ಅವು ಪ್ರಕಟವಾಗಿರಲು ಇದ್ದುವು. ತೀ.ನಂ.ಶ್ರೀಕಂಠಯ್ಯ, ಡಿ.ಎಲ್. ನರಸಿಂಹಾಚಾರ್, ಟಿ. ಕೃಷ್ಣಮೂರ್ತಿ ಇವರೆಲ್ಲಾ ವಯಸ್ಕರಿಗೆ ಬೇಕಾಗುವ ಸಾಹಿತ್ಯ ರೂಪಿಸಲು ಮುಂದೆ ಬಂದರು. ಸಂಘದ ವತಿಯಿಂದ ಐವತ್ತು ರಾತ್ರಿಶಾಲೆಗಳನ್ನು ತೆರೆಯಲಾಯಿತು. ಅಧ್ಯಾಪಕರು ವಿದ್ಯಾರ್ಥಿಗಳು ಈ ಅಕ್ಷರಯಜ್ಞದಲ್ಲಿ ಅತ್ಯಂತ ಉತ್ಸಾಹದಿಂದ ಪಾಲುಗೊಳ್ಳುತ್ತಿದ್ದರು. ಈ ಬಗ್ಗೆ ಆಗಿನ ಅಧ್ಯಾಪಕರಲ್ಲಿ ಎಷ್ಟು ಉತ್ಸಾಹ, ಆಸಕ್ತಿ ಇದ್ದಿತೆಂದರೆ ಇಂಗ್ಲೆಂಡಿನಿಂದ ಮಹಾರಾಜಾ ಕಾಲೇಜಿಗೆ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಬಂದ ಈಗಲ್‌ಟನ್ ಎಂಬುವರು ಕೂಡ ಇದರಲ್ಲಿ ಅತ್ಯಂತ ಆಸಕ್ತಿಯನ್ನು ತೋರಿಸಿದರು. ಅಷ್ಟೇ ಅಲ್ಲ ಅವರು ಮೈಸೂರು ನಗರದಲ್ಲಿ ನಡೆಯುವ ರಾತ್ರಿಶಾಲೆಗಳಿಗೆ ಭೇಟಿ ಕೊಟ್ಟು ಅವು ಉತ್ತಮವಾಗಿ ನಡೆಯುವಂತೆ ಸಹಕರಿಸಿದರು.

ಸಿಂಗಾರಿಗೌಡರ ಸಂಚಾಲಕತ್ವದಲ್ಲಿ ವಯಸ್ಕರ ಶಿಕ್ಷಣ ಒಂದು ಕುತೂಹಲಕಾರಿಯಾದ ಸಂಗತಿಯಾಯಿತು. ಜನರು ಇದರ ಬಗ್ಗೆ ಆಸಕ್ತಿ ತೋರಿಸಿದರು. ಗಣ್ಯರು ಗಮನಿಸತೊಡಗಿದರು. ಆದರೆ ಇದಕ್ಕೆ ಇದ್ದದ್ದು ಹಣದ ಕೊರತೆಯೊಂದೆ. ಇದನ್ನು ಪರಿಹರಿಸಲು ಶ್ರೀ ಸುಬ್ರಮಣ್ಯರಾಜ ಅರಸ್ (ಈಗ ಚದುರಂಗರೆಂದು ಪ್ರಸಿದ್ಧರಾಗಿರುವ ಲೇಖಕರು) ಮತ್ತು ಸಿಂಗಾರಿಗೌಡರು ಹಣ ಸಂಗ್ರಹಣೆಗೆ ಪಾದಯಾತ್ರೆ ಮಾಡಿದರು. ಮೊದಲ ದಿನವೇ ಒಂದು ಸಾವಿರ ರೂಪಾಯಿ ಸಂಗ್ರಹವಾದುದು ಇವರ ಉತ್ಸಾಹವನ್ನು ಇಮ್ಮಡಿಸಿತು. ಇದೇ ಕಾಲದಲ್ಲಿ ಒಂದು ದಿನ ಇಬ್ಬರಿಗೂ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಎನ್.ಎಸ್. ಸುಬ್ಬರಾಯರಿಂದ ಬುಲಾವ್ ಬಂದಿತು. ಏನಾಗಿದೆಯೋ? ಎಲ್ಲಿ ತಪ್ಪಿದೆಯೋ ? ಎಂದು ಇವರಿಗೆ ಹೆದರಿಕೆ. ಆ ಹೆದರಿಕೆ

ಯಲ್ಲಿ ಕುಲಪತಿ ಸುಬ್ಬರಾಯರ ಎದುರಿಗೆ ನಿಂತ ಇವರಿಗೆ ವಯಸ್ಸ್ ೧೮. ಜೊತೆಗೆ ವಿಶ್ವವಿದ್ಯಾನಿಲಯದಿಂದ ಐದುನೂರರ ರೂಪಾಯಿಗಳ ಕೊಡುಗೆ. ಈ ಗೌರವವನ್ನು ಪಡೆದುಕೊಂಡವರಿವರು. ಇದೇ ಸಮಯದಲ್ಲಿ ಶ್ರೀ ಟಿ. ಮರಿಯಪ್ಪನವರು ಮೈಸೂರು ಪುರಸಭೆಯ ಅಧ್ಯಕ್ಷರು. ಟಿ. ಮರಿಯಪ್ಪನವರೂ ನಾಗಮಂಗಲ ತಾಲ್ಲೂಕಿನವರು. ಸಿಂಗಾರಿಗೌಡರಿಗೆ ಬೇಕಾದವರು. ಅವರ ಮುಂದೆ ಗೌಡರು ತಮ್ಮ ವಯಸ್ಕರ ಶಿಕ್ಷಣ ಯೋಜನೆಯನ್ನಿಟ್ಟಾಗ ಅವರೂ ಪುರಸಭೆಯ ವತಿಯಿಂದ ಐದು ನೂರ ರೂಪಾಯಿ ಕೊಟ್ಟರು. ಕಾಲೇಜು ವಿದ್ಯಾರ್ಥಿನಿಲಯದಲ್ಲಿದ್ದ ಗೌಡರ ಮಿತ್ರರು ಈ ರಾತ್ರಿ ಶಾಲೆಯಲ್ಲಿ ಪಾಠಹೇಳಿದರು. ಹೀಗೆ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘ ಈ ಒಂದು ಕಾರ್ಯಕ್ರಮ ನಮ್ಮ ದೇಶದಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಉದಯಕ್ಕೆ ಕಾರಣವಾಯಿತು. ಅಲ್ಲಿಂದ ಇಲ್ಲಿಯವರೆಗ ಸಿಂಗಾರಿಗೌಡರಿಗೆ ವಯಸ್ಕರ ಶಿಕ್ಷಣ ಸಮಿತಿಯ ಸಂಬಂಧ ತಪ್ಪಿಲ್ಲ. ಕೆಲವು ಕಾಲ ಸಮಿತಿಯ ಕಾರ್ಯದರ್ಶಿಯಾಗಿದ್ದರು. ಈಗಲೂ ಅವರು ವಯಸ್ಕರ ಶಿಕ್ಷಣ ಮಂಡಲಿಯ ಸದಸ್ಯರಾಗಿದ್ದಾರೆ.

ವಯಸ್ಕರ ಶಿಕ್ಷಣ ಸಮಿತಿಯ ಕಾರ್ಯಚಟುವಟಿಕೆಗಳು ಸಿಂಗಾರಿಗೌಡರಿಗೆ ನಮ್ಮ ದೇಶದ ನಿಜವಾದ ಸ್ಥಿತಿಯನ್ನು ಪರಿಚಯಿಸಿದವು. ಅನೇಕಾನೇಕ ರಾಜಕಾರಣಿಗಳ ಪರಿಚಯವಾಯಿತು. ಮಿತ್ರರ ಬಳಗ ಬೆಳೆಯುತ್ತಾ ಹೋಯಿತು. ತನ್ನ ನಾಡಿಗಾಗಿ, ಜನತೆಗಾಗಿ ಏನಾದರೂ ಮಾಡಬೇಕು ಎಂದು ಮನಸ್ಸು ತುಡಿಯುತ್ತಿತ್ತು. ದೇಶದಲ್ಲಿ ಸ್ವಾತಂತ್ರ್ಯ ಸಮರದ ಬಿಸಿಯೇರುತ್ತಿತ್ತು. ಮಹಾತ್ಮಗಾಂಧಿಯವರು ಸ್ವದೇಶಿವಸ್ತ್ರ ಚಳವಳಿ ಆರಂಭಿಸಿದ್ದರು. ಸಿಂಗಾರಿಗೌಡರು ರಾಜಕೀಯದತ್ತ ಒಲಿಯ ತೊಡಗಿದರು. ಅದುವರೆಗೆ ಅವರು ಸ್ವಲ್ಪ ಮಟ್ಟಿಗೆ ತಟಸ್ಥ ಧೋರಣೆಯನ್ನು ತಳೆದಿದ್ದರು. ಅದಕ್ಕೆ ಕಾರಣ ಅವರ ತಂದೆ ಕೃಷ್ಣಪ್ಪಗೌಡರು. ಅವರ ಚಟುವಟಿಕೆಗಳು. ಅವರನ್ನು ಗಡೀಪಾರು ಮಾಡುವವರೆಗೆ ತೆಗೆದುಕೊಂಡು ಹೋಗಿದ್ದವು. ತಾಯಿಯ ಮನೆ ತಪ್ಪಿಸಿದರೂ ಹಿರಿಯರೆಲ್ಲಾ ಸ್ವಾತಂತ್ರ್ಯ ಚಳುವಳಿಯಲ್ಲಿದ್ದವರು. ಮೊದಲು ಓದು ಮುಗಿಸಿ ಅನಂತರ ಚಳುವಳಿಗಾಗಲಿ, ರಾಜಕೀಯಕ್ಕಾಗಲಿ ಇಳಿಯಬೇಕೆಂಬ ಅವರ ತೀರ್ಮಾನ ಬದಲಾಯಿತು. ಅವರು ಆಗ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲುಗೊಳ್ಳಲಾರಂಭಿಸಿದರು. ಆಗಿನ ಚಳವಳಿಗಾರರಂತೆ ಸಿಂಗಾರಿಗೌಡರೂ ದೇಶೀಯವಸ್ತ್ರ ತೊಡುವ ಶಪಥ ಮಾಡಿದರು. ಅಂದು ಖಾದಿಧಾರಿಯಾದ ಗೌಡರು ಇಂದಿಗೂ ಅದನ್ನು ಉಳಿಸಿಕೊಂಡು ಬಂದಿದ್ದಾರೆ. ಹೀಗೆ ಅವರು ಸಂಘ ಚಟುವಟಿಕೆಗಳ ಮೂಲಕ ರಾಜಕೀಯದತ್ತ ನಡೆದರು.

ಕಾಲೇಜು ಶಿಕ್ಷಣದ ಕೊನೆಯ ದಿನಗಳು ಸಮೀಪಿಸುತ್ತಿದ್ದವು. ಸಿಂಗಾರಿಗೌಡರು ತಮ್ಮ ಪಠ್ಯೇತರ ಚಟುವಟಿಕೆಗಳಿಂದ ಬಿಡಿಸಿಕೊಂಡು ತಮ್ಮ ಓದಿನತ್ತ ಗಮನ ಹರಿಸಿದರು. ಮುಂದೆ ಅವರು ಕೈಗೊಳ್ಳಲು ಯೋಚಿಸಿದ್ದ ಸೇವಾ ಚಟುವಟಿಕೆಗಳಿಗೆ

ಶಿಕ್ಷಣ, ವಸತಿಗಳ ಆವಶ್ಯಕತೆಯಿತ್ತು. ಸಿಂಗಾರಿಗೌಡರು ತಮ್ಮ ಮಹಾರಾಜಾ ಕಾಲೇಜಿನ ವ್ಯಾಸಂಗದ ದಿನಗಳಲ್ಲಿ ಸ್ವಾಮಿ ವಿವೇಕಾನಂದ ವಿದ್ಯಾರ್ಥಿನಿಲಯದಲ್ಲಿದ್ದವರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಣಕಾಸು ಅಧಿಕಾರಿಯಾಗಿದ್ದ ಸುಗ್ಗೇಹಳ್ಳಿ ಗುಜ್ಜೇಗೌಡರ ಶ್ರಮದ ಫಲವಾಗಿ ಮೈಸೂರಿನಲ್ಲಿ ಗ್ರಾಮಾಂತರ ವಿದ್ಯಾರ್ಥಿಗಳಿಗಾಗಿ ತೆರೆದ ಹಲವು ವಿದ್ಯಾರ್ಥಿ ನಿಲಯಗಳಿದ್ದವು. ವಿವೇಕಾನಂದ ವಿದ್ಯಾರ್ಥಿನಿಲಯ ಅವುಗಳಲ್ಲೊಂದು. ಅದು ಈಗಿನ ಸರಸ್ವತೀಪುರಂನ ಕಾಂತರಾಜ ಅರಸ್ ರಸ್ತೆಯಲ್ಲಿ ಸುಪ್ರಸಿದ್ಧ ಕಂಟ್ರಾಕ್ಟರ್ ಜೋರಯ್ಯ. ಬಸವಯ್ಯ ಅವರ ಮನೆಯೊಂದರಲ್ಲಿತ್ತು. ಈ ವಿದ್ಯಾರ್ಥಿನಿಲಯಗಳಲ್ಲಿ ಗ್ರಾಮಾಂತರ ಪ್ರದೇಶದಿಂದ ಬಂದ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳಿರುತ್ತಿದ್ದರು. ಸಿಂಗಾರಿಗೌಡರು ಈಗೀಗ ಕ್ರೀಡೆಗಳಲ್ಲಿಯೂ ಪಾಲುಗೊಳ್ಳುತ್ತಿದ್ದರು. ಅವರಿಗೆ ಪ್ರಿಯವಾದ ಆಟ ವಾಲಿಬಾಲ್. ಕಡೆಗೆ ಅವರು ಎಂ.ಜಿ.ಎಸ್. ಆಟಗಾರರಾಗಿ ಆಯ್ಕೆಯಾದರು. ಆಗಿನ ಕ್ರೀಡಾಪಟುವಿನ ಜೀವನದಲ್ಲಿ ಇದೊಂದು ಪ್ರತಿಷ್ಠಿತ ಆಯ್ಕೆ. ಬೆಂಗಳೂರು. ಮದರಾಸುಗಳಲ್ಲಿ ಈ ಪಂದ್ಯಗಳು ನಡೆಯುತ್ತಿದ್ದುವು. ಎರಡು ವರ್ಷಗಳ ಕಾಲ ಸಿಂಗಾರಿಗೌಡರು ಮಹಾರಾಜಾ ಕಾಲೇಜಿನ ವಿವಿಧ ಚಟುವಟಿಕೆಗಳಲ್ಲಿ ಪಾಲುಗೊಂಡು. ತಮ್ಮ ಬಿ.ಎ. ಪದವಿಯನ್ನು ಗಳಿಸಿಕೊಂಡರು.

ವಕೀಲರಾಗಿ ಸ್ವತಂತ್ರ ಜೀವನಮಾರ್ಗ ರೂಪಿಸಿಕೊಳ್ಳುವುದು ಸಿಂಗಾರಿಗೌಡರ ಆಸೆಯಾಗಿತ್ತು. ತಮ್ಮ ಬಿ.ಎ. ಮುಗಿದ ಕೂಡಲೇ ಅವರು ನ್ಯಾಯಶಾಸ್ತ್ರ ಅಧ್ಯಯನ ಮಾಡಲು ಕೊಲ್ಲಾಪುರಕ್ಕೆ ಹೋದರು. ಆಗಿನ ಕಾಲದಲ್ಲಿ ನ್ಯಾಯಶಾಸ್ತ್ರ ಅಭ್ಯಾಸಮಾಡುವವರು ಮದರಾಸು. ಪುಣೆ. ಕೊಲ್ಲಾಪುರ. ಮುಂಬಯಿಗಳಿಗೇ ಹೋಗಬೇಕಿತ್ತು. ಆಗ ಮೈಸೂರು ರಾಜ್ಯದಲ್ಲಿ ಕಾನೂನು ಕಾಲೇಜುಗಳಿರಲಿಲ್ಲ. ಆಗ ಕೊಲ್ಲಾಪುರದಲ್ಲಿ ಪೆಯಿಕ್ಸ್ ಕಾನೂನು ಕಾಲೇಜು ಪ್ರಸಿದ್ಧವಾಗಿತ್ತು. ಮೈಸೂರಿನವರಿಗಾಗಿ ಒಂದು ವಿದ್ಯಾರ್ಥಿನಿಲಯವೂ ಇದ್ದಿತು. ಮೊದಲ ವರ್ಷ ಗೌಡರು ವಿದ್ಯಾರ್ಥಿನಿಲಯದಲ್ಲಿಯೇ ಇದ್ದರು. ಆದರೆ ಎರಡನೆಯ ವರ್ಷ ಅಧ್ಯಯನದಲ್ಲಿ ಏಕಾಗ್ರತೆ ಸಾಧ್ಯವಾಗದೆ ಬೇರೆ ಕೊಠಡಿಯೊಂದನ್ನು ಬಾಡಿಗೆಗೆ ಹಿಡಿದು ಅಲ್ಲೇ ನಿಂತರು. ಊಟಕ್ಕೆ ಮಾತ್ರ ನಿಲಯಕ್ಕೆ ಬರುತ್ತಿದ್ದರು. ಜೀವನ ಸಾಗಿದಂತೆಲ್ಲಾ ಜವಾಬ್ದಾರಿಯ ಅರಿವು ಮೂಡಿದಂತೆಲ್ಲಾ ವಿದ್ಯಾರ್ಥಿನಿಲಯದಲ್ಲಿ ಗಲಾಟೆ. ಏಕಾಗ್ರತೆ ಸಾಧ್ಯವಿಲ್ಲ ವೆನ್ನಿಸುವುದು ಸ್ವಾಭಾವಿಕ. ಸಿಂಗಾರಿಗೌಡರ ಹುಡುಗತನದ ಕಾಯಿ ದೋರೆಯನ್ನಾಗಿ ಜೀವನದ ಸಿದ್ಧತೆಗಳ ಬಗ್ಗೆ ಹೇಗೆ ಪ್ರವೃತ್ತವಾಗಿತ್ತೆಂದು ಇದರಿಂದ ತಿಳಿಯುತ್ತದೆ.

ಸಿಂಗಾರಿಗೌಡರ ಕೊಠಡಿಯ ಪಕ್ಕದಲ್ಲಿಯೇ ಶ್ರೀ ಕೆ. ಜಿ. ಕುಂದಣಗಾರ್ ಅವರ ಮನೆಯಿತ್ತು. ಅವರು ಅಲ್ಲಿನ ರಾಜಾ ರಾಮ ಕಾಲೇಜಿನ ಪ್ರಾಧ್ಯಾಪಕರು. ಸಿಂಗಾರಿಗೌಡರು ಅವರ ಪರಿಚಯ ಮಾಡಿಕೊಂಡರು. ಆಗಾಗ ಭೇಟಿಯಾಗಿ ಪರಿಚಯ

ಬೆಳೆಯಿತು. ಕುಂದಣಗಾರರ ಮನೆಗೆ ಹೋಗಲಾರಂಭಿಸಿದರು. ಅವರಲ್ಲಿ ದೊಡ್ಡ ಗ್ರಂಥಭಂಡಾರವೇ ಇತ್ತು. ಮೊದಮೊದಲಿಗೆ ಕೆಲವು ಪುಸ್ತಕಗಳನ್ನು ತಂದು ಓದುತ್ತಿದ್ದರು. ಇಬ್ಬರಲ್ಲೂ ಆತ್ಮೀಯತೆ ಬೆಳೆಯಿತು. ಕುಂದಣಗಾರರ ಗ್ರಂಥಭಂಡಾರ ಸಿಂಗಾರಿಗೌಡರದೇ ಆದಂತಾಯಿತು. ತಮ್ಮ ಸಾಂಘಿಕ ಚಟುವಟಿಕೆಗಳಲ್ಲಿ ಅವರು ಕನ್ನಡ ಪುಸ್ತಕಗಳನ್ನು ಹೆಚ್ಚು ಓದಿರಲಿಲ್ಲ. ಅದಕ್ಕೆ ಆ ಕಾಲದ ವರ್ನಾಕ್ಯುಲರ್‌ನಲ್ಲಿ ಏನಿದೆ? ಎಂಬ ವರಿಷ್ಟ ಧೋರಣೆಯೂ ಕಾರಣವಾಗಿರಬಹುದು. ಕುಂದಣಗಾರರ ಗ್ರಂಥಭಂಡಾರ ಗೌಡರನ್ನು ಸೆರೆಹಿಡಿಯಿತು. ಅವರಿಗೆ ಕನ್ನಡ ಪುಸ್ತಕ ಓದುವ ಹುಚ್ಚು ಹಿಡಿಸಿತು. ಅದನ್ನು ಈಗಲೂ ಬಿಟ್ಟಿಲ್ಲ. ಈಗಲೂ ಸಿಂಗಾರಿಗೌಡರು ಓದುವಷ್ಟು ಕನ್ನಡ ಪುಸ್ತಕಗಳನ್ನು ಎಷ್ಟೋ ಮಂದಿ ಕನ್ನಡ ಅಧ್ಯಾಪಕ. ಪ್ರಾಧ್ಯಾಪಕರು ಓದುವುದಿಲ್ಲವೆಂದು ತೋರುತ್ತದೆ.

ಕೊಲ್ಲಾಪುರದ ಎರಡು ವರ್ಷಗಳ ಕಾನೂನು ಶಿಕ್ಷಣ ಸಿಂಗಾರಿಗೌಡರ ಮೇಲೆ ಅಪಾರ ಪರಿಣಾಮ ಬೀರಿರುವುದು ಕಂಡುಬರುತ್ತದೆ. ಆಗ ಸ್ವಾತಂತ್ರ್ಯದ ಕಹಳೆ ದಶದಿಕ್ಕುಗಳಿಂದಲೂ ಮೊಳಗುತ್ತಿತ್ತು. ಆ ಕಡೆಯಿಂದ ಬಾಲಗಂಗಾಧರ ತಿಲಕ್. ಮಹಾತ್ಮಗಾಂಧಿ ಮುಂತಾದ ರಾಷ್ಟ್ರನಾಯಕರ ವಾಣಿ ಕೇಳಿಬರುತ್ತಿತ್ತು. ಕಾಲೇಜಿನಲ್ಲಿ ನ್ಯಾಯಶಾಸ್ತ್ರದಲ್ಲಿ ಪಂಡಿತರಾದ ಪ್ರಾಧ್ಯಾಪಕರುಗಳ ವಾಣಿ. ಮಿತ್ರರೊಂದಿಗಿನ ಚರ್ಚೆ. ತನ್ನ ಊರಿನಿಂದ. ದೇಶದಿಂದ ದೂರವಿದ್ದುದರಿಂದ ಪುಸ್ತಕಗಳೇ ಸಂಗಾತಿಗಳು. ಬಂಧುಗಳು. ಓದಿನ ಹಸಿವಿಗೆ ಬೇಕಾದ ಅಪಾರ ಗ್ರಂಥಾಲಯಗಳು. ವ್ಯಕ್ತಿಯೊಬ್ಬನ ಜೀವನ ವಿಕಾಸಕ್ಕೆ ಬೇಕಾದ ಎಲ್ಲ ಪರಿಕರಗಳೂ ಸಿದ್ಧವಾಗಿದ್ದುವು. ಸಿಂಗಾರಿಗೌಡರು ಅವನ್ನೆಲ್ಲಾ ಉಪಯೋಗಿಸಿಕೊಂಡರು. ಅನೇಕರು ಅವರ ಮೇಲೆ ಪ್ರಭಾವ ಬೀರಿದರು ಅವರೆಲ್ಲರ ಪರಿಚಯ ಸರಳತೆ ನನ್ನ ವ್ಯಕ್ತಿತ್ವ ಬೆಳೆಸಲು ಕಾರಣವಾಯಿತೆಂದು ಸಿಂಗಾರಿಗೌಡರು ಈಗಲೂ ಕೃತಜ್ಞತೆಯಿಂದ ನೆನೆಯುತ್ತಾರೆ. ತಮ್ಮ ನ್ಯಾಯಶಾಸ್ತ್ರ ಪದವಿಯನ್ನು ಪಡೆದು ವಿಶ್ವವಿದ್ಯಾಭಗವತಿಗೆ ನಮನ ಸಲ್ಲಿಸಿ ನಿಜಜೀವನರಂಗ ಪ್ರವೇಶಿಸಲು ಸಿಂಗಾರಿಗೌಡರು ತಮ್ಮ ಊರಿಗೆ ಹಿಂತಿರುಗಿದರು. ಪ್ರಾಯಃ ತಾತ ಮರೀಗೌಡರು ಮೇಲುಕೋಟೆಯಲ್ಲಿ ತಮ್ಮ ಮನೆತನದ ಸಂಕೇತವಾದ ಉಂಗುರವನ್ನು ಸಿಂಗಾರಿಗೌಡರ ಬೆರಳಿಗೆ ತೊಡಿಸಿದ್ದು ಸಾರ್ಥಕವಾಯಿತು.

೮. ವೃತ್ತಿರಂಗ

ಕೊಲ್ಲಾಪುರದಿಂದ ನ್ಯಾಯಶಾಸ್ತ್ರದ ವ್ಯಾಸಂಗ ಮುಗಿಸಿ ಬಂದ ಸಿಂಗಾರಿ ಗೌಡರು ಕೆಲವು ಕಾಲ ಮತ್ತೆ ವಯಸ್ಕರ ಶಿಕ್ಷಣ ಮತ್ತು ಗ್ರಾಮಾಂತರ ವಿದ್ಯಾರ್ಥಿಗಳಿಗೆ ಅನುಕೂಲಗಳನ್ನು ಒದಗಿಸಿಕೊಡುವ ಸಾಮಾಜಿಕ ಸೇವೆಯಲ್ಲಿ ತೊಡಗಿದರು. ಅವರು ಕೊಲ್ಲಾಪುರಕ್ಕೆ ನ್ಯಾಯಶಾಸ್ತ್ರ ಅಧ್ಯಯನಕ್ಕೆ ಹೋಗುವ ಕಾಲಕ್ಕೆ ನಾಗಮಂಗಲ ತಾಲ್ಲೂಕಿನಲ್ಲಿಯೇ ಇಪ್ಪತ್ತೈದು ರಾತ್ರಿ ಶಾಲೆಗಳು ನಡೆಯುತ್ತಿದ್ದುವು. ಅವರು ಮಧ್ಯೆ ರಜೆಯಲ್ಲಿ ಬಂದಾಗ ನಾಗಮಂಗಲದಲ್ಲಿ ವಿದ್ಯಾರ್ಥಿ ನಿಲಯವೊಂದನ್ನು ಸ್ಥಾಪಿಸಿ ಅದನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಪಿ. ಎನ್. ನರಸಿಂಹಯ್ಯ ಅವರಿಗೆ ವಹಿಸಿದ್ದರು. ಬೇಸಿಗೆ ರಜೆಗೆ ಬಂದಾಗ ಹಳ್ಳಿಗಳಲ್ಲಿ ಸುತ್ತಿ ದವಸ ಧಾನ್ಯ ಸಂಗ್ರಹಿಸುತ್ತಿದ್ದರು. ತಮ್ಮ ಎಲ್ಲಾ ಕೆಲಸಗಳನ್ನೂ ಪರಿಶೀಲಿಸಿ ಮುಂದೆ ಅವುಗಳ ನಿಲುವಿನ ಬಗೆಗೆ ಕ್ರಮ ಕೈಗೊಳ್ಳುವ ಹೊತ್ತಿಗೆ ಅವರ ನ್ಯಾಯಶಾಸ್ತ್ರ ಪರೀಕ್ಷೆಯ ಫಲಿತಾಂಶ ಬಂದು ಗೌಡರು ಅದರಲ್ಲಿ ಉತ್ತೀರ್ಣರಾಗಿದ್ದರು.

ಮೈಸೂರಿಗೂ ಸಿಂಗಾರಿಗೌಡರಿಗೂ ಹತ್ತಿರದ ಸಂಬಂಧ. ಅವರ ತಂದೆ ಮೈಸೂರು ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾಗಿದ್ದವರು. ಪ್ರೌಢಶಾಲೆಯಿಂದ ಪದವಿಯವರೆಗೆ ಅವರು ಓದಿದ್ದು ಮೈಸೂರಲ್ಲಿ. ಅವರ ಭಾವಂದಿರ ಮನೆ ಇದ್ದುದು ಮೈಸೂರು. ಈ ಎಲ್ಲದರೊಂದಿಗೆ ನಾಗಮಂಗಲ ತಾಲ್ಲೂಕು ಸಹ 1939ರ ವರೆಗೆ ಮೈಸೂರು ಜಿಲ್ಲೆಯಲ್ಲಿಯೆ ಇತ್ತು. ಈ ಎಲ್ಲಕ್ಕಿಂತ ಮಿಗಿಲಾದುದು ಮೈಸೂರು ರಾಜಧಾನಿಯಾದುದರಿಂದ ಎಲ್ಲಾ ಚಟುವಟಿಕೆಗಳ ಕೇಂದ್ರ. ಸುಪ್ರಸಿದ್ಧರಾದ ನ್ಯಾಯವಾದಿಗಳು ಮೈಸೂರಿನಲ್ಲಿದ್ದರು. ಈ ಕಾರಣಗಳಿಂದಾಗಿ ಸಿಂಗಾರಿಗೌಡರು ತಮ್ಮ ವಕೀಲಿವೃತ್ತಿರಂಗವನ್ನು ಮೈಸೂರಿನ ಹಿರಿಯ ವಕೀಲರೊಬ್ಬರಲ್ಲಿ ಆರಂಭಿಸಲು ತೀರ್ಮಾನಿಸಿದರು.

ಶ್ರೀ ಎಚ್. ಸಿ. ದಾಸಪ್ಪ ಮತ್ತು ಶ್ರೀ ಟಿ. ಮರಿಯಪ್ಪ ಅವರ ಕಛೇರಿ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿತ್ತು. ಈ ಇಬ್ಬರು ಮಹನೀಯರೂ ನಗರದಲ್ಲಷ್ಟೆ ಅಲ್ಲ ದೇಶದಲ್ಲಿಯೇ ಹೆಸರಾದವರು. ಗಣ್ಯರು. ಶ್ರೀ ಎಚ್. ಸಿ. ದಾಸಪ್ಪನವರು ದಿವಂಗತ ಕೆ. ಎಚ್. ರಾಮಯ್ಯನವರ ಅಳಿಯಂದಿರು. ಅವರ ಪತ್ನಿ ಯಶೋಧರಮ್ಮ ಅವರೂ ಸುಪ್ರಸಿದ್ಧರು. ಈ ದಂಪತಿಗಳು ಮಹಾತ್ಮ ಗಾಂಧಿಜೀಯವರಿಗೆ ಹತ್ತಿರವಾಗಿದ್ದು ಅವರ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಳುಗಿದ್ದವರು.

ದಾಸಪ್ಪನವರನ್ನು ಮೈಸೂರಿನ ಗಾಂಧೀಯೆಂದೇ ಜನ ಕರೆಯುತ್ತಿದ್ದುದುಂಟು. ಶ್ರೀ ಟಿ. ಮರಿಯಪ್ಪನವರು ನಾಗಮಂಗಲ ತಾಲ್ಲೂಕು ಕಳ್ಳನಕೆರೆಯವರು. ಅವರು ಶ್ರೀ ದಾಸಪ್ಪ ಮತ್ತು ಸಾಹುಕಾರ್ ಚನ್ನಯ್ಯ ಅವರ ಆಪ್ತರು. ಶ್ರೀ ಮರಿಯಪ್ಪನವರು ಮೈಸೂರಿನಲ್ಲಿ ವಕೀಲಿ ವೃತ್ತಿ ಆರಂಭಿಸಿ ಸಾಮಾಜಿಕವಾಗಿಯೂ ಕೆಲಸಮಾಡಿದವರು. ಅವರು ಮೈಸೂರು ಪುರಸಭೆಯ ಅಧ್ಯಕ್ಷರಾಗಿದ್ದರು. ಮುಂದೆ ಮೈಸೂರಿನಿಂದಲೇ ವಿಧಾನಸಭೆಗೂ ಆಯ್ಕೆಯಾಗಿ ಮಂತ್ರಿಯೂ ಆಗಿದ್ದವರು. ಈ ಇಬ್ಬರು ಮಹನೀಯರೂ ವಕೀಲಿಯಲ್ಲಿ ಹಳೆಯ ಹುಲಿಗಳು. ಆದುದರಿಂದ ಸಿಂಗಾರಿಗೌಡರು ಇವರ ಕಛೇರಿಯಲ್ಲಿ ಕಿರಿಯ ವಕೀಲರಾಗಿ ತಮ್ಮ ವೃತ್ತಿ ಆರಂಭಿಸಿದರು.

ರಾಜಕೀಯ ಆಂದೋಲನ ಕಾವೇರುತ್ತಿದ್ದ ಕಾಲವದು. ದಾಸಪ್ಪನವರು. ಮರಿಯಪ್ಪನವರು ಸಂಪೂರ್ಣವಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಳುಗಿ ಹೋಗಿದ್ದರು. ಅವರು ಯಾವಾಗ ಸೆರೆಮನೆಯಲ್ಲಿರುತ್ತಾರೆ. ಯಾವಾಗ ಹೊರಗಿರುತ್ತಾರೆಂಬುದರ ನಿಯಮವಿಲ್ಲ. ಹೀಗಾಗಿ ಆ ಹಿರಿಯರಿಬ್ಬರೂ ವಕೀಲಿಯನ್ನು ಒಂದು ರೀತಿಯಲ್ಲಿ ಬಿಟ್ಟಾಗಿತ್ತು. ಹೀಗೆಯೇ ಯಾವಾಗಲಾದರೂ ನೆನಪಾದರೆ. ಯಾವುದಾದರೂ ರಾಜಕೀಯ ಸಮಾಲೋಚನೆ ಇದ್ದರೆ ಮಾತ್ರ ಅವರು ಕಛೇರಿಗೆ ಬರುತ್ತಿದ್ದರು. ಅಲ್ಲಿ ರಾಜಕೀಯ ಮುಖಂಡರೆಲ್ಲಾ ಸೇರುತ್ತಿದ್ದರು. ಆದುದರಿಂದ ಅದನ್ನು ವಕೀಲರ ಕಛೇರಿಯೆನ್ನುವುದಕ್ಕಿಂತ ರಾಜಕೀಯ ಕಛೇರಿ ಎನ್ನಬಹುದಾಗಿತ್ತು. ಅಲ್ಲದೆ ಯಾವುದೇ ಹೊಸ ಮೊಕದ್ದಮೆಗಳು ಬರುತ್ತಿರಲೂ ಇಲ್ಲ. ಬಂದರೆ ಹಿರಿಯರು ತೆಗೆದುಕೊಳ್ಳುವ ಸ್ಥಿತಿಯಲ್ಲೂ ಇರಲಿಲ್ಲ. ಇದ್ದ ಹಳೆಯ ಮೊಕದ್ದಮೆಗಳನ್ನಷ್ಟೇ ನೋಡಿಕೊಳ್ಳಬೇಕಾಗಿತ್ತು. ಯಾವಾಗಲೋ ಒಮ್ಮೊಮ್ಮೆ ಅಪರೂಪದ ಬಿಡುವು ಸಿಕ್ಕಾಗ ಟಿ. ಮರಿಯಪ್ಪನವರು ಆ ಮೊಕದ್ದಮೆಗಳನ್ನು ಕುರಿತು ಕಿರಿಯ ವಕೀಲ ಸಿಂಗಾರಿಗೌಡರಿಗೆ ವಿವರಿಸುತ್ತಿದ್ದರು ಅಷ್ಟೆ. ಈ ಕಛೇರಿಯಲ್ಲಿ ಸಿಂಗಾರಿಗೌಡರು ವಕೀಲಿ ಕಲಿತುದಕ್ಕಿಂತ ರಾಜಕೀಯ ಅರಿತುದೇ ಹೆಚ್ಚು.

ರಾಮಯ್ಯ ಎಂಬ ಹಿರಿಯರೊಬ್ಬರು ಅಲ್ಲಿ ಕೆಲಸಮಾಡುತ್ತಿದ್ದರು. ಅವರಿಗೆ ಕೋರ್ಟಿನ. ಮೊಕದ್ದಮೆಗಳ ಪೂರ್ಣ ಪರಿಚಯವಿತ್ತು. ಅವರು ದಾಸಪ್ಪ. ಮರಿಯಪ್ಪರೊಂದಿಗೆ ಹೆಣಗಿದವರು. ಈಗ ಅವರೇ ಸಿಂಗಾರಿಗೌಡರ ವಕೀಲಿಯ ಮಾರ್ಗದರ್ಶಿಯಾದರು. ಯಾವ ಯಾವ ನ್ಯಾಯಾಧೀಶರಲ್ಲಿ ಹೇಗೆ ಮಾತನಾಡಿ ಮೊಕದ್ದಮೆಯನ್ನು ಮುಂದೆ ಹಾಕಿಸಬೇಕು. ಕಕ್ಷಿದಾರರಿಗೆ ಅವರ ಮೊಕದ್ದಮೆಗಳ ಬಗೆಗೆ ಹೇಗೆ ಉತ್ತರ ಕೊಡಬೇಕು. ಸಹ ವಕೀಲರೊಂದಿಗೆ ಹೇಗೆ ವ್ಯವಹರಿಸಬೇಕು ಇದೆಲ್ಲಾ ತಿಳಿದಂತಾಯಿತು. ಹೊಸಬರಿಗೆ ನ್ಯಾಯಾಲಯವೆಂಬುದೊಂದು ಭಯಂಕರ ಕಾನನವಿದ್ದಂತೆ. ಎಲ್ಲಿ ದಾರಿ ತಪ್ಪುತ್ತೇವೋ ಎಂಬ ಭಯ. ಮಾತುಗಾರಿಕೆಯ ಅಭಾವವಿರುವವರಿಗಂತೂ ಇದೊಂದು ಗೊಂಡಾರಣ್ಯವೇ ಸರಿ. ಆದರೆ ಸಿಂಗಾರಿಗೌಡರು ತಮ್ಮ ವಿದ್ಯಾರ್ಥಿ ದೆಸೆಯಿಂದಲೂ

ವೇದಿಕೆ ಹತ್ತಿದವರು. ಆದುದರಿಂದ ರಾಮಯ್ಯನವರ ಮಾರ್ಗದರ್ಶನದಲ್ಲಿ ಆ ಕಛೇರಿಯಲ್ಲಿ ಕಲಿಯಬಹುದಾದುದನ್ನೆಲ್ಲ ಕಲಿತರು.

ಈ ಹೊತ್ತಿಗೆ ಮಂಡ್ಯ ಒಂದು ಜಿಲ್ಲೆಯಾಗಿ ಅಲ್ಲಿನ ಜಿಲ್ಲಾ ಬೋರ್ಡಿಗೆ ಕೃಷ್ಣಪ್ಪಗೌಡರೇ ಅಧ್ಯಕ್ಷರು. ಈಗ ನಾಗಮಂಗಲ ತಾಲ್ಲೂಕು ಮಂಡ್ಯ ಜಿಲ್ಲೆಗೆ ಸೇರಿತ್ತು. ಆದುದರಿಂದ ಸಿಂಗಾರಿಗೌಡರು ತಮ್ಮ ವಕೀಲಿಯನ್ನು ಮಂಡ್ಯಕ್ಕೆ ಬದಲಾಯಿಸುವುದು ಅನಿವಾರ್ಯವಾಗಿತ್ತು. ಮಂಡ್ಯದ ನ್ಯಾಯಾಲಯಗಳು ಅವರಿಗೆ ಹೊಸದೇನಾಗಿರಲಿಲ್ಲ. ಮೈಸೂರು ಕಛೇರಿಯ ಅನೇಕ ಮೊಕದ್ದಮೆಗಳು ಜಿಲ್ಲೆಯ ವಿಂಗಡಣೆಯ ನಂತರ ಅಲ್ಲಿನ ನ್ಯಾಯಾಲಯಗಳಿಗೆ ವರ್ಗವಾಗಿದ್ದುವು. ಅವುಗಳನ್ನು ಗೌಡರೆ ಹೋಗಿ ನೋಡಿಕೊಳ್ಳುತ್ತಿದ್ದರು. ಆಗ ಮಂಡ್ಯದಲ್ಲಿ ಟಿ. ವಿ. ರುದ್ರಪ್ಪನವರು ಪ್ರಸಿದ್ಧ ವಕೀಲರು. ಕೃಷ್ಣಪ್ಪಗೌಡರಿಗೆ ಬೇಕಾದವರು. ಮಗ ರುದ್ರಪ್ಪನವರ ಹತ್ತಿರ ವಕೀಲಿ ಕಲಿಯಲೆಂಬುದು ಅವರ ಇಷ್ಟವಾಗಿತ್ತು. ಅದರಂತೆ ಸಿಂಗಾರಿಗೌಡರು ತಮ್ಮ ವಕೀಲಿಯನ್ನು ಮೈಸೂರಿನಿಂದ ಮಂಡ್ಯಕ್ಕೆ ಬದಲಾಯಿಸಿದರು.

ಟಿ. ವಿ. ರುದ್ರಪ್ಪನವರಲ್ಲಿ ಬಹಳ ಮೊಕದ್ದಮೆಗಳಿದ್ದುವು. ಅವರು ಕಿರಿಯ ವಕೀಲರಿಗೆ ಉತ್ತಮ ಮಾರ್ಗದರ್ಶನ ನೀಡುತ್ತಿದ್ದರು. ಸಿಂಗಾರಿಗೌಡರ ವಕೀಲಿ ಕುದುರತೊಡಗಿತ್ತು. ಆದರೆ ಕಂಟಕಗಳು ಬಂದರೆ ಬರುತ್ತಲೇ ಇರುತ್ತವೆ. ಎಡವಿದ ಕಾಲೇ ಎಡವುತ್ತದೆ. ಗಾಯ ವಾಸಿಯೇ ಆಗುವುದಿಲ್ಲ. ರುದ್ರಪ್ಪನವರ ಕಿರಿಯ ಮಗನಿಗೆ ಸಖತ್ ಕಾಯಿಲೆ. ಸಾವು ಬದುಕಿನ ಮಧ್ಯೆ ಹೋರಾಟ. ಅರಸೀಕೆರೆಯಲ್ಲಿದ್ದ ಆತನನ್ನು ನೋಡಿಕೊಳ್ಳಲು ರುದ್ರಪ್ಪನವರು ಮೂರು ನಾಲ್ಕು ತಿಂಗಳು ಎಲ್ಲ ಜವಾಬ್ದಾರಿಯನ್ನು ಸಿಂಗಾರಿಗೌಡರಿಗೆ ವಹಿಸಿ ಹೋಗಿ ಬಿಟ್ಟರು. ಇವರಿಗೆ ದಿಕ್ಕೇ ತೋರದಾಯಿತು. ಕೆಲವು ದಿನ ಮೊಕದ್ದಮೆಗಳು ಬಂದಾಗಲೆಲ್ಲ ಕಾಲಾವಕಾಶ ತೆಗೆದುಕೊಂಡರು. ಆದರೆ ಕಡೆಕಡೆಗೆ ನ್ಯಾಯಾಧೀಶರು ಕಾಲಾವಕಾಶ ಕೊಡಲು ನಿರಾಕರಿಸಲಾರಂಭಿಸಿದರು. ಸಿಂಗಾರಿಗೌಡರಿಗೆ ಚಿಂತೆಗಿಟ್ಟುಕೊಂಡಿತು. ರುದ್ರಪ್ಪನವರದು ನ್ಯಾಯ ವಲಯದಲ್ಲಿ ಪ್ರತಿಷ್ಠಿತ ಹೆಸರು. ತಮ್ಮಿಂದಾಗಿ ಅದು ಕೆಟ್ಟರೆ ಏನು ಗತಿ! 'ಆಗ ಸಿ. ವಿ. ಚನ್ನಪ್ಪ ಎಂಬುವರು ಅಲ್ಲಿ ಮುನ್ಸೀಫರಾಗಿದ್ದರು. ಗೌಡರು ನೇರವಾಗಿ ಅವರ ಕಛೇರಿಗೆ ಹೋದರು. ತಮ್ಮ ಹಿರಿಯ ವಕೀಲರಿಲ್ಲದ ಕಾರಣ ವಿವರಿಸಿದರು. ತಾವು ಕಾಲಾವಕಾಶ ಕೋರುತ್ತಿರುವುದು ಹೆದರಿಕೆಯ ಕಾರಣದಿಂದಲ್ಲ, ನಾನು ಹೊಸಬ. ಕಕ್ಷಿದಾರರಿಗೆ ಅನ್ಯಾಯವಾದೀತೆಂದು. ರುದ್ರಪ್ಪನವರಿಗೆ ಕೆಟ್ಟ ಹೆಸರು ಬಂದೀತೆಂದು' ಎಂದು ವಿವರಿಸಿದರು. ಎಲ್ಲವನ್ನೂ ಸಾವಧಾನವಾಗಿ ಕೇಳಿದ ನ್ಯಾಯಾಧೀಶರು ಹೇಳಿದರು. "ನಾನು ಕಾಲಾವಕಾಶ ಕೊಡುವುದಿಲ್ಲವೆನ್ನುತ್ತೇನೆ, ರೇಗಲೂಬಹುದು. ನೀವು ನ್ಯಾಯವಾದಿ, ನಾನು ಏನೇ ಹೇಳಲಿ ವಾದಿಸುವುದು ನಿಮ್ಮ ಹಕ್ಕು. ಅಲ್ಲಿ ಏನಾಗುತ್ತದೆಯೋ ಆದರೆ ನೀವು ಕೆಲಸ ಕಲಿಯಬೇಕು" ಎಂದು ಬುದ್ಧಿವಾದ ಹೇಳಿದರು. ಒಂದು ತಮ್ಮ

ಹಿರಿಯ ವಕೀಲರ ಮರ್ಯಾದೆಯ ಪ್ರಶ್ನೆ. ಮತ್ತೊಂದು ತಮ್ಮದೆ ವ್ಯಕ್ತಿತ್ವದ ಪ್ರಶ್ನೆ. ಮೊಕದ್ದಮೆಗಳನ್ನು ನಡೆಸಿಯೇ ಬಿಡುವುದೆಂಬ ನಿರ್ಧಾರಕ್ಕೆ ಬಂದರು ಸಿಂಗಾರಿಗೌಡರು. ಅವರ ವೃತ್ತಿ ಜೀವನದ ಅತ್ಯಂತ ಸದ್ವ್ಯಸನವಾದ ಹೆಜ್ಜೆ ಮತ್ತು ತೀರ್ಮಾನ ಈ ಘಟನೆಯೆಂದು ಹೇಳಬಹುದು.

ನಿರ್ಧಾರ ತೆಗೆದುಕೊಂಡ ಮೇಲೆ ಹಿಮ್ಮೆಟ್ಟುವುದು ದೃಢಮನಸ್ಸಿನ ಲಕ್ಷಣವಲ್ಲ. ಗೌಡರು ಮೊಕದ್ದಮೆಯ ಕಟ್ಟುಗಳನ್ನು ಮನೆಗೊಯ್ದರು. ನ್ಯಾಯವಾದಿ ಸದಾ ವಿದ್ಯಾರ್ಥಿಯೆಂಬ ಮಾತೇ ಇದೆ. ಆ ಸ್ಥಾನವೇ ಅಂಥದು. ಓದಬೇಕು ಪರಾಮರಿಸಬೇಕು, ಉದಾಹರಣೆಗಳನ್ನು ಸಂಪಾದಿಸಬೇಕು. ಒಂದೊಂದೇ ಮೊಕದ್ದಮೆಯನ್ನು ಗೌಡರು ಅಭ್ಯಸಿಸಿದರು. ನಾಗಮಂಗಲದವರೇ ಬಸಪ್ಪ ಎಂಬುವರು ಗುಮಾಸ್ತರಿದ್ದರು. ಹೊಸ ಲಾಯರುಗಿಂತ ಹಳೇ ಕಕ್ಷಿದಾರ ವಾಸಿಯೆಂಬಂತೆ ಬಸಪ್ಪ ಹಳೇಹುಲಿ. ನ್ಯಾಯದ, ನ್ಯಾಯಾಲಯದ ಸಂದುಗೊಂದುಗಳ ಬಗ್ಗೆಯೆಲ್ಲಾ ಆತ ಬಲ್ಲವರು. ಯಾವ ಯಾವ ಲಾ ಜರ್ನಲ್‌ನಲ್ಲಿ ನಮ್ಮದರಂತಹ ಮೊಕದ್ದಮೆಗಳು ಅವುಗಳ ತೀರ್ಪುಗಳಿವೆ ಎಂಬುದನ್ನೆಲ್ಲಾ ಗುರುತು ಮಾಡುವ ಕೆಲಸ ಬಸಪ್ಪನವರದು. ಅದನ್ನು ಉಪಯೋಗಿಸುವ ಮಜಲನ್ನು ಮೊದಮೊದಲು ಬಸಪ್ಪ ಹೇಳಿಕೊಟ್ಟರು. ಕ್ರಮೇಣ ಗೌಡರು ಕೆಲಸದಲ್ಲಿ ಹಿಡಿತ ಸಾಧಿಸಿದರು. ಇದರಿಂದ ರುದ್ರಪ್ಪನವರ ಕಛೇರಿಯ ಗೌರವ ಉಳಿದುದರೊಂದಿಗೆ ಗೌಡರ ವೃತ್ತಿ ಗೌರವ ಗಟ್ಟಿಯಾಯಿತು.

ಸಿಂಗಾರಿಗೌಡರು ಸಿವಿಲ್ ಮೊಕದ್ದಮೆಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಕ್ರಿಮಿನಲ್ ಮೊಕದ್ದಮೆಯೆಂದರೆ ಅವರಿಗಾಗುತ್ತಿರಲಿಲ್ಲ. ಮೊದಲಿಗೆ ಕೆಲವು ಕ್ರಿಮಿನಲ್ ಮೊಕದ್ದಮೆಗಳನ್ನು ತೆಗೆದುಕೊಂಡರು. ಅವು ಮುಗಿಯುವವರೆಗೆ ಹಗಲು ರಾತ್ರಿ ಅವುಗಳದೇ ಚಿಂತೆ. ಮನಸ್ಸು ಉದ್ವೇಗಗೊಳ್ಳುವುದು. ಆತಂಕ ಮನಸ್ಸನ್ನೆಲ್ಲಾ ವ್ಯಾಪಿಸಿ ಬಿಡುತ್ತಿತ್ತು. ಹೀಗಾಗಿ ಅವುಗಳನ್ನು ತೆಗೆದುಕೊಳ್ಳುವುದೇ ಬೇಡ ಎಂಬ ತೀರ್ಮಾನಕ್ಕೆ ಬಂದರು. ತಮಗೆ ಆಪ್ತರು, ಬೇಕಾದವರು ತರುವ ಕ್ರಿಮಿನಲ್ ಮೊಕದ್ದಮೆಗಳನ್ನು ಸ್ನೇಹಿತರಿಗೆ ವಹಿಸಿಬಿಡುತ್ತಿದ್ದರು. ಸಿಂಗಾರಿಗೌಡರು ತಮ್ಮ ಕಕ್ಷಿದಾರರನ್ನು ಎಂದೂ ಇಷ್ಟೇ ಹಣ ಕೊಡಬೇಕೆಂದು ಕೇಳಿದವರಲ್ಲ. ಇದಕ್ಕೆ ಕಾರಣ ಅವರಿಗೆ ಹಣದ ಕೊರತೆಯೇನಿರಲಿಲ್ಲ. ಮನೆಯ ಕಡೆಯೂ ಅನುಕೂಲವಾಗಿದ್ದ ಅವರಿಗೆ ಹಣಗಳಿಸುವ ಅವಶ್ಯಕತೆಯೂ ಇರಲಿಲ್ಲ, ಆಸೆಯೂ ಇರಲಿಲ್ಲ. ಮಂಡ್ಯದಲ್ಲಿ ಸ್ವತಂತ್ರವಾಗಿ ವಕೀಲಿ ಆರಂಭಿಸಿದ ಮೇಲೆ ರಾಜಕೀಯ ಸಂಪರ್ಕ ಅನಿವಾರ್ಯವಾಯಿತು. ತಂದೆಯ ಸ್ನೇಹಿತರಾದ ಹಿರಿಯ ರಾಜಕಾರಣಿಗಳಿಂದ ತಮ್ಮ ಮಿತ್ರರವರೆಗೆ ರಾಜಕೀಯ ಧುರೀಣರು ಒಂದಲ್ಲ ಒಂದು ಕಾರಣದಿಂದ ಗೌಡರ ಜೊತೆಯಲ್ಲಿ ಸಂಪರ್ಕ ಹೊಂದಿದ್ದರು. ಇದು ಎಷ್ಟು ಬೆಳೆಯಿತೆಂದರೆ ಅವರಿಗೆ ಅನೇಕ ವೇಳೆ ತಮ್ಮ ವಕೀಲಿಯನ್ನು ಕ್ರಮಬದ್ಧವಾಗಿ ನಡೆಸುವುದು ಕಷ್ಟವಾಗತೊಡಗಿತು. ಸಿಂಗಾರಿಗೌಡರು

ಜೀವನ ನಿರ್ವಹಣೆಗೇನೂ ವಕೀಲ ವೃತ್ತಿ ನಡೆಸಬೇಕಾಗಿರಲಿಲ್ಲ. ಆದರೆ ಅವರ ಅಧ್ಯಯನ ನಿರುಪಯೋಗಿಯಾಗಬಾರದು ಮತ್ತು ಸುಮ್ಮನೆ ಮಂಡ್ಯದಲ್ಲಿರುವುದು ಸರಿಯಲ್ಲ ಅಲ್ಲವೆ?

ಇಷ್ಟೆಲ್ಲಾ ಕೆಲಸ ಕಾರ್ಯಗಳ ಮಧ್ಯೆಯೂ ಗೌಡರು ಕ್ಲಬ್‌ಗೆ ಹೋಗುತ್ತಿದ್ದರು. ಈಗ ವಾಲಿಬಾಲ್‌ಗೆ ಬದಲಾಗಿ ಟೆನ್ನಿಸ್ ಆಟ ಆರಂಭವಾಗಿತ್ತು. ಸಂಜೆಯ ವೇಳೆ ಒಳ್ಳೆಯ ವ್ಯಾಯಾಮಕ್ಕೆ ಈ ಆಟ. ಅವರಿಗೆ ಮೊದಲಿನಿಂದಲೂ ಇಸ್ಪೀಟು ಆಟದ ಹುಚ್ಚು ಸ್ವಲ್ಪ ಇದ್ದೇ ಇತ್ತು. ಈಗ ಕ್ಲಬ್ ಮತ್ತು ಮಿತ್ರರಿಂದಾಗಿ ಅದು ಇನ್ನು ಗಟ್ಟಿಯಾಗಿ ಅಂಟಿತೆಂದು ಅವರೇ ಹೇಳುತ್ತಾರೆ. ಬೆಳಗ್ಗಿಯಿಂದ ಸಂಜೆಯವರೆಗೆ ರಾಜಕೀಯ, ನ್ಯಾಯಾಲಯಗಳಲ್ಲಿ ದುಡಿದ ಮನಸ್ಸಿಗೆ ಇಲ್ಲಿ ಸ್ವಲ್ಪವಾದರೂ ವಿರಾಮ ತಂದುಕೊಳ್ಳುವ ಯತ್ನ. ಸಿಂಗಾರಿಗೌಡರ ವಕೀಲಿಜೀವನ ಹೀಗೆ ನಿರಂತರವಾಗಿ ನಿರಾತಂಕವಾಗಿ ಸಾಗುತ್ತಿತ್ತು.

೯. ಸಂಸಾರ ದೀಕ್ಷೆ

ಏಪ್ರಿಲ್ ತಿಂಗಳ ಧಗೆಯ ದಿನಗಳು. ಮುಮ್ಮಡಿ ಕೃಷ್ಣರಾಜ ಒಡೆಯರ ಸವಾರಿ ನಂಜನಗೂಡಿಗೆ ದಯಮಾಡಿಸಿತ್ತು. ಎಲ್ಲೆಲ್ಲೂ ಬೇಸಗೆಯ ಧಗೆ. ಮಹಾರಾಜರು ರಾಜ ನಿವಾಸದ ಕೈಸಾಲೆಯಲ್ಲಿ ಕುಳಿತು ವಿಶ್ರಮಿಸುತ್ತಿದ್ದರು. ಅವರು ಹಾಗೆ ನೋಡುತ್ತಿದ್ದಾಗ ಒಬ್ಬರು ಅಡ್ಡೆಯಲ್ಲಿ ಪಾತ್ರೆಗಳನ್ನಿಟ್ಟು ಏನನ್ನೋ ಹೊತ್ತುಕೊಂಡು ಹೋಗುತ್ತಿದ್ದರು. ಆ ಪಾತ್ರೆಗಳ ಸ್ವಚ್ಛತೆಯ ಹೊಳಪು ಮಹಾರಾಜರನ್ನು ಏಕೋ ಏನೋ ಆಕರ್ಷಿಸಿತು. ಕೂಡಲೇ ಹೋಗುತ್ತಿದ್ದ ಆ ವ್ಯಕ್ತಿಯನ್ನು ಕರೆತರುವಂತೆ ಅಪ್ಪಣೆಯಾಯಿತು. ಆ ವ್ಯಕ್ತಿ ಮುಮ್ಮಡಿಯವರ ಎದುರಿಗೆ ತನ್ನ ಅಡ್ಡೆಗಳನ್ನಿಳಿಸಿ ನಮಸ್ಕರಿಸಿ ನಿಂತರು. ಆ ಪಾತ್ರೆಗಳಲ್ಲಿದ್ದುದು ಕೆನೆಮೊಸರು. ಅದರಿಂದ ಆಕರ್ಷಿತರಾದ ಮಹಾರಾಜರು ಆ ವ್ಯಕ್ತಿಯಿಂದ ಮೊಸರು ಪಡೆದು ಕುಡಿದರು. ಧಗೆಯ ಆ ದಿನಗಳಲ್ಲಿ ಅದು ಬಹಳ ಸ್ವಾದವಾಗಿ ತಂಪಾಗಿತ್ತು. ಸಂತೃಪ್ತರಾದ ಮಹಾರಾಜರು ಆ ವ್ಯಕ್ತಿಯ ಬಗ್ಗೆ ವಿಚಾರಿಸಿದರು. ಅವರು ನಂಜನಗೂಡಿನ ದಾಸೇಗೌಡರೆಂದೂ ಅವರು ನಂಜುಂಡೇಶ್ವರನ ಅಭಿಷೇಕ ಮತ್ತಿತರ ದೇವಾಲಯದ ಉಪಯೋಗಕ್ಕೆ ಉಚಿತವಾಗಿ ಹಾಲು, ಮೊಸರು, ಬೆಣ್ಣೆಗಳನ್ನು ಒದಗಿಸುವವರೆಂದೂ ತಿಳಿಯಿತು. ಮಹಾರಾಜರಿಗೆ ಸಂತೋಷವಾಗಿ ನಮ್ಮಿಂದ ಏನಾದರೂ ಸಹಾಯ ಬೇಕೆ ಎಂದು ಕೇಳಿದರು. ದಾಸೇಗೌಡರು ಪ್ರಭುಗಳು ಕೆಲವು ಉತ್ತಮ ತಳಿಯ ಹಸುಗಳನ್ನು, ಸ್ವಲ್ಪ ಕಾವಲನ್ನೂ ದಯಪಾಲಿಸಿದರೆ ತಮ್ಮ ಸೇವೆಯನ್ನು ನಿಷ್ಠೆಯಿಂದ ನಡೆಸುವುದಾಗಿ ಕೇಳಿಕೊಂಡರು. ಮಹಾರಾಜರು ಮೈಸೂರಿಗೆ ಹಿಂತಿರುಗಿದ ಮೇಲೆ ಕೆಲವು ಅಮೃತ ಮಹಲ್ ಹಸುಗಳನ್ನು ಅವುಗಳ ಮೇವಿಗಾಗಿ ಗುಂಡ್ಲುನದಿಯ ಬಲ ಪಾರ್ಶ್ವದ ಮಲ್ಲಿಗೆಯಮ್ಮನ ತೋಟ ಪ್ರದೇಶವನ್ನು ಬಿಟ್ಟಿರುವ ನಿರೂಪವನ್ನು ದಾಸೇಗೌಡರಿಗೆ ತಲುಪಿಸಿದರು. ಅಂದಿನಿಂದ ಆ ಮನೆಗೆ ಕರೆಯೋಹಟ್ಟಿ ಎಂದು ಹೆಸರು ಬಂದಿತು.

ನಂಜನಗೂಡಿನ ಕರೆಯೋಹಟ್ಟಿ ದಾಸೇಗೌಡರಿಗೆ ಒಬ್ಬನೇ ಮಗ ಲಿಂಗಣ್ಣ. ಈ ಲಿಂಗಣ್ಣನ ಕಾಲದಲ್ಲಿ ಆ ಮನೆ ಬಹಳ ಅಭಿವೃದ್ಧಿಗೆ ಬಂದು ಅಪಾರ ಆಸ್ತಿ. ಐಶ್ವರ್ಯ ಸಂಗ್ರಹವಾಯಿತು. ಲಿಂಗಣ್ಣ ಮುಟ್ಟಿದ್ದೆಲ್ಲಾ ಚಿನ್ನವಾಗುತ್ತದೆಂಬ ನಂಬಿಕೆ ಜನಗಳಲ್ಲಿ ಹುಟ್ಟುವವರೆಗೆ ಈ ಕಥೆ ಬೆಳೆಯಿತು. ತಂದೆಯ ಕಾಲದಿಂದ ಬಂದ ದಾನಧರ್ಮಗಳನ್ನು ಐಶ್ವರ್ಯ ಬಂದ ಕಾರಣಕ್ಕಾಗಿ ಲಿಂಗಣ್ಣ ಬಿಡಲಿಲ್ಲ. ನಂಜನಗೂಡಿನ ಬಹುಪಾಲು

ಬ್ರಾಹ್ಮಣರ ಮಕ್ಕಳು ಆ ಮನೆಯ ಹಾಲು ಕುಡಿದು ಬೆಳೆದವರೆಂದು ಹಿರಿಯರು ಹೇಳುವುದುಂಟು. ಆಗಿನ ಕಾಲದಲ್ಲಿ ಹಾಲು, ಮೊಸರುಗಳನ್ನು ಮಾರುವುದು ಧರ್ಮ ವಿರುದ್ಧ. ಲಿಂಗಣ್ಣನವರೂ ತಂದೆಯ ಕಾಲದ ಕರೆಯೋಹಟ್ಟಿ ಸಂಪ್ರದಾಯವನ್ನು ಉಳಿಸಿಕೊಂಡೇ ಬಂದರು. ಅನೇಕ ಪ್ರತಿಕಾರರನ್ನು ಕರೆಯಿಸಿ ಗ್ರಂಥಗಳನ್ನು ಪ್ರತಿ ಮಾಡಿಸುತ್ತಿದ್ದರು. ಹೀಗಾಗಿ ಆ ಮನೆಯಲ್ಲಿ ತಾಳೆಗರಿ ಹಸ್ತಪ್ರತಿಗಳ ಒಂದು ದೊಡ್ಡ ಭಂಡಾರವೇ ಇತ್ತು. ಅವುಗಳನ್ನೆಲ್ಲಾ ಲಿಂಗಣ್ಣನವರ ನಂತರ ಆಗ ನಂಜನಗೂಡು ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ ಅಂಬಳೆ ಸುಬ್ರಮಣ್ಯಂ ಅವರಿಗೆ ಕೊಡಲಾಯಿತೆಂದು ತಿಳಿದುಬರುತ್ತದೆ. ಲಿಂಗಣ್ಣನವರಿಗೆ ಸಿದ್ಧಪ್ಪನೆಂಬ ಒಬ್ಬನೇ ಮಗ. ಸುಮಾರು ಐದಾರು ತಲೆಮಾರುಗಳಿಂದ ಈ ಮನೆತನದಲ್ಲಿ ಒಂದೇ ಗಂಡು ಸಂತಾನ ಉಳಿದುಬಂದಿರುವುದು ಕಂಡುಬರುತ್ತದೆ.

ಸಿದ್ಧಪ್ಪನವರು ತಂದೆಯ ಆಸ್ತಿಯನ್ನು ಅಭಿವೃದ್ಧಿಪಡಿಸಿಕೊಂಡು ಒಳ್ಳೆಯ ಕುಳವೇ ಆಗಿದ್ದರು. ಈ ಹೊತ್ತಿಗೆ ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಸಮರ ಆರಂಭ ವಾಗಿತ್ತು. ಈ ಮನೆತನಗಳ ರಾಜರ ಕಾಲದ ಸವಲತ್ತುಗಳು ಹೋಗಿದ್ದುವು. ಹಾಗೇ ಗೌಡರ ಕರೆಯೋಹಟ್ಟಿ ಉಳಿದಿರಲಿಲ್ಲ. ಅದರ ಅಗತ್ಯವೂ ಇರಲಿಲ್ಲ. ಕಾಲ ಬದಲಾಗಿತ್ತು. ಕರೆಯೋಹಟ್ಟಿ ಸಿದ್ಧಪ್ಪನವರಿಗೆ ಮಕ್ಕಳಿಲ್ಲದ್ದೊಂದು ಕೊರತೆ. ಮೊದಲ ಹೆಂಡತಿ ತೀರಿಕೊಂಡಿದ್ದರು. ಮನೆತನದ ಉಳಿವಿಗಾಗಿ ಸಿದ್ಧಪ್ಪ ಎರಡನೆ ಮದುವೆ ಮಾಡಿಕೊಂಡರು. ಈ ಪತ್ನಿಯಿಂದ ಅವರಿಗೆ ಒಬ್ಬಳು ಮಗಳು ಹುಟ್ಟಿದಳು. ಸಿದ್ಧಪ್ಪನವರಿಗೆ ಮತ್ತೆ ಪತ್ನಿವಿಯೋಗ. ಅವರು ನಾಲ್ಕನೆಯ ಬಾರಿ ಮದುವೆ ಯಾಗುವ ಹೊತ್ತಿಗೆ ಎರಡನೆಯ ಹೆಂಡತಿಯಲ್ಲಿ ಪಡೆದ ಮಗಳು ಭಾಗೀರತಿ ವಯಸ್ಸಿಗೆ ಬಂದ ವಿದ್ಯಾವಂತೆಯಾಗಿದ್ದಳು.

ನಂಜನಗೂಡಿನಲ್ಲಿ ಆಗ ಮುನ್ಸಿಫ್‌ಕೋರ್ಟಿತ್ತು. ಕನ್ನಡದ ಅರುಣೋದಯ ಕಾಲದ ಸುಪ್ರಸಿದ್ಧ ಲೇಖಕರಾದ ಎಂ. ಎಲ್. ಶ್ರೀಕಂಠೇಶಗೌಡರು ಅಲ್ಲಿ ಮುನ್ಸಿಫ ರಾಗಿದ್ದರು. ಆ ಹೊತ್ತಿಗಾಗಲೇ ಅವರು ಮದರಾಸು ವಿಶ್ವವಿದ್ಯಾನಿಲಯದಿಂದ ಎಲ್. ಎಲ್. ಬಿ. ಪರೀಕ್ಷೆ ಮಾಡಿ, ಕೆಲವು ಕಾಲ ನ್ಯಾಯವಾದಿಯಾಗಿದ್ದು ಈ ಸರ್ಕಾರಿ ಹುದ್ದೆಗೆ ಬಂದಿದ್ದರು. ಷೇಕ್ಸಪಿಯರನ ನಾಟಕಗಳನ್ನು ಮೊತ್ತಮೊದಲಿಗೆ ಭಾಷಾಂತರಿಸಿದ್ದಲ್ಲದೆ, ಸ್ವತಂತ್ರ ಕೃತಿಗಳನ್ನೂ ರಚಿಸಿ ಹೆಸರುವಾಸಿಯಾಗಿದ್ದರು. ಅವರ ಮೊದಲ ಹೆಂಡತಿ ತೀರಿಕೊಂಡು ಕೆಲವು ವರ್ಷ ಆಗಿತ್ತು. ತಮಗೆ ವಂಶೋದ್ಧಾರಕ ನಿಲ್ಲದ ಕಾರಣ ಸಿದ್ಧಪ್ಪನವರು ನಾಲ್ಕನೆ ಮದುವೆಮಾಡಿಕೊಂಡಿದ್ದರು. ಸಿದ್ಧಪ್ಪ ನವರ ಮಗಳು ಭಾಗೀರತಮ್ಮ ಶ್ರೀಕಂಠೇಗೌಡರನ್ನು ತಾನು ಮದುವೆಯಾಗುವುದಾಗಿ ಹಠ ಹಿಡಿದಳು. ಅವರು ತಮ್ಮ ಮಗಳ ಇಂಗಿತ ತಿಳಿದು ಎಂ. ಎಲ್. ಶ್ರೀಕಂಠೇಶಗೌಡ

ರಿಗೆ ಆಕೆಯನ್ನು ಮದುವೆ ಮಾಡಿಕೊಟ್ಟರು. ಸಿದ್ದಪ್ಪನವರು ಪುತ್ರಸಂತಾನಕ್ಕಾಗಿ ರಾಮೇಶ್ವರದಿಂದ ಕಾಶಿಯವರೆಗೆ ತೀರ್ಥಯಾತ್ರೆ ಮಾಡಿಬಂದರಂತೆ. ಅದರ ಫಲವೋ ಎಂಬಂತೆ ಅವರ ಪತ್ನಿ ಗಂಡುಮಗುವನ್ನು ಹಡೆದರು. ಆದರೆ ದುರಾದೃಷ್ಟ ಆಕೆಯೂ ಹಿಂದಿನ ಮೂವರ ದಾರಿಯನ್ನೇ ತುಳಿದರು. ಸಿದ್ದಪ್ಪನವರು ಮುಂದೆ ಮದುವೆಯಾಗಲು ಇಚ್ಛಿಸಲಿಲ್ಲ. ತಾವು ಕಷ್ಟದಿಂದ ತೀರ್ಥಯಾತ್ರೆ ಮಾಡಿ ಪಡೆದ ಮಗನಿಗೆ ಕಾಶಿ ವಿಶ್ವೇಶ್ವರಗೌಡ ಎಂದು ಹೆಸರಿಟ್ಟರು. ಮಗನಿಗೆ ಎರಡು ವರ್ಷವಾಗಿದ್ದಾಗ ತಂದೆಯೂ ತೀರಿಕೊಂಡರು.

ಎಂ.ಎಲ್. ಶ್ರೀಕಂಠೇಶಗೌಡರು ಆಗ ಹೊಳೇನರಸೀಪುರದಲ್ಲಿದ್ದರು. ಮಾವನವರ ಅನಾರೋಗ್ಯ ತಿಳಿದು ನಂಜನಗೂಡಿಗೆ ಧಾವಿಸಿದರು. ಸಿದ್ದಪ್ಪನವರು ತಮ್ಮ ಆಸ್ತಿ ಪಾಸ್ತಿ ಮತ್ತು ವಂಶದ ಕುಡಿಯನ್ನು ಅವರ ಮಡಿಲಿಗೆ ಹಾಕಿ ಕಣ್ಣುಮುಚ್ಚಿದರು. ಶ್ರೀಕಂಠೇಶಗೌಡರು ತಮ್ಮ ಮಾವ ಸಿದ್ದಪ್ಪ ಅವರ ನಂಬಿಕೆಯನ್ನು ಉಳಿಸಿಕೊಂಡರು. ವಿಶ್ವೇಶ್ವರಗೌಡರನ್ನು ಬೆಳೆಸಿ ವಿದ್ಯಾವಂತರನ್ನಾಗಿ ಮಾಡಿ ಅವರ ಆಸ್ತಿಯನ್ನು ಅವರ ವಶಕ್ಕೆ ಕೊಟ್ಟರು. ಮುಂದೆ ವಿಶ್ವೇಶ್ವರಗೌಡರು ಸ್ವಾತಂತ್ರ್ಯ ಸಮರದಲ್ಲಿ ಧುಮುಕಿ ಮಹತ್ತರ ಸೇವೆಸಲ್ಲಿಸಿದರು. ಅನೇಕ ಬಾರಿ ಜೈಲಿಗೆ ಹೋಗಿಬಂದರು. ಹರಿಜನೋದ್ಧಾರ ಕಾರ್ಯವನ್ನು ಅತ್ಯಂತ ನಿಷ್ಠೆಯಿಂದ ಮಾಡಿದರು. ಪ್ರಾಯಶಃ ಸ್ವಾತಂತ್ರ್ಯ ಹೋರಾಟದಲ್ಲಿ ಮುಳುಗಿದ್ದ ಸಿಂಗಾರಿಗೌಡರ ತಂದೆ ಕೃಷ್ಣಪ್ಪಗೌಡರಿಗೂ. ವಿಶ್ವೇಶ್ವರ ಗೌಡರಿಗೂ ಪರಿಚಯವಾಗಿ ಸ್ನೇಹಕ್ಕೆ ತಿರುಗಿ ಬಂಧುತ್ವದಲ್ಲಿ ಪರ್ಯವಸಾನವಾಗಿರಬೇಕು. ಶ್ರೀ ವಿಶ್ವೇಶ್ವರಗೌಡರ ಹಿರಿಯ ಮಗಳು ಸರಸ್ವತಿಯವರನ್ನು ಕರಡಹಳ್ಳಿಯ ಕೃಷ್ಣಪ್ಪಗೌಡರ ಮಗ ಕೆ. ಸಿಂಗಾರಿಗೌಡರಿಗೆ ಕೊಟ್ಟು 1946ರಲ್ಲಿ ವಿಜೃಂಭಣೆಯಿಂದ ಮದುವೆ ಮಾಡಿದರು.

ಶ್ರೀಮತಿ ಸರಸ್ವತಿಯವರು ಸರಳ ಸಜ್ಜನಿಕೆಯ ಸಮಾಧಾನ ಗುಣದ ಮಹಿಳೆಯಾಗಿದ್ದರು. ಒಂದು ಹೆಸರಾಂತ ಮನೆತನದಿಂದ ಮತ್ತೊಂದು ಹೆಸರಾಂತ ಮನೆತನಕ್ಕೆ ಬಂದ ಅವರಿಗೆ ಜವಾಬ್ದಾರಿಯ ಅರಿವಿತ್ತು. ಸಿಂಗಾರಿಗೌಡರು ಆಗ ಅತ್ಯಂತ ಬಿರುಸಿನಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ಮುಳುಗಿದ್ದರು. ಮನೆ ಬಿಟ್ಟರೆ ಮತ್ತೆ ಬರುವುದು ಎಂದೋ ? ಆಗಿನ ಸ್ವಾತಂತ್ರ್ಯ ಹೋರಾಟಗಾರರ ಸ್ಥಿತಿಯೇ ಹಾಗಿತ್ತು. ಸರಸ್ವತಿ ಅವರಿಗೆ ಸ್ವಾತಂತ್ರ್ಯ ಹೋರಾಟ ಮತ್ತು ರಾಜಕೀಯಗಳ ನಂಟು ತಂದೆಯಿಂದ ಹುಟ್ಟಿನೊಂದಿಗೇ ಬಂದು, ಅವರ ತೀವ್ರತರ ಅನುಭವಗಳ ಪರಿಚಯವೂ ಇದ್ದಿತು. ಅಲ್ಲದೆ ಅವರು ಅತ್ಯಂತ ಶಾಂತಸ್ವಭಾವದವರಾದ್ದರಿಂದ ಕಾಲ ಮತ್ತು ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬಲ್ಲವರು. ಆದುದರಿಂದ ಅವರು ಗೃಹತಪಸ್ವಿನಿಯಾಗಿಯೇ ತಮ್ಮ ಕಾರ್ಯನಿರ್ವಹಿಸಿದರು. ಒಳ್ಳೆಯವರು ಬಹಳ ಅಲ್ಪಾಯುಷಿಗಳಾಗಿರುತ್ತಾರೆಂಬ ಮಾತಿದೆ. 1967 ರಲ್ಲಿ ತಮ್ಮ ಸಂಸಾರಿಕ ಜೀವನದ ಇಪ್ಪತ್ತೊಂದು ವಸಂತಗಳ ನಂತರ

ಶ್ರೀಮತಿ ಸರಸ್ವತಿ ಅವರು ಇಹವನ್ನು ತ್ಯಜಿಸಿದರು. ಆಗ ಅವರ ಇಬ್ಬರು ಹೆಣ್ಣು ಮಕ್ಕಳಿಗೆ ಮಾತ್ರ ಮದುವೆಯಾಗಿತ್ತು.

ಎಡವಿದ ಕಾಲೇ ಎಡವುತ್ತದೆ ಎಂಬ ಮಾತಿದೆ. ಪತ್ನಿಯನ್ನು ಕಳೆದು ಕೊಂಡ ಸಿಂಗಾರಿಗೌಡರು ದಿಕ್ಕುಕಾಣದಾದರು. ಒಂದು ಕಡೆ ರಾಜಕೀಯ, ಒಂದು ಕಡೆ ಮಕ್ಕಳು ಮನೆ ಯಾವುದನ್ನು ನೋಡುವುದು ? ತಮ್ಮ ಪತ್ನಿಯಿದ್ದಷ್ಟು ದಿವಸ ಅವರಿಗೆ ಸಂಸಾರ ಗರಿ ಹಗುರ. ಅವರು ಹೋದೊಡನೆಯೇ ಗಿರಿ ಭಾರ. ಅವರೆ ಹೊರಟ ಮೇಲೆ ನಿಲ್ಲುವಂತಿಲ್ಲ. ಹಿಂದುಮುಂದಿನವರಿಗೆ ಅಡಚಣೆ. ಕೇವಲ ಹತ್ತು ವರ್ಷಗಳ ಹಿಂದೆ 1957 ರಲ್ಲಿ ಒಬ್ಬನೇ ತಮ್ಮ ತೀರಿಕೊಂಡಾಗಲೇ ಗೌಡರು ತಮ್ಮ ವಕೀಲಿಯನ್ನು ನಿಲ್ಲಿಸಿ ಊರಿಗೆ ಮರಳಿದ್ದರು. ಮಕ್ಕಳ ಶಿಕ್ಷಣಕ್ಕಾಗಿ ಸಂಸಾರ ಮಂಡ್ಯ ದಲ್ಲಿಯೇ ಇದ್ದಿತು. ತಂದೆ ಕೃಷ್ಣಪ್ಪಗೌಡರು, ತಮ್ಮ ಪತ್ನಿ ಸರಸ್ವತಿ ಹೀಗೆ ಒಬ್ಬರ ಹಿಂದೊಬ್ಬರು ಮನೆಯಿಂದ ನಿರ್ಗಮಿಸಿದಾಗ ಎಲ್ಲಾ ಭಾರವೂ ಒಬ್ಬರ ಹೆಗಲಮೇಲಿ ಬಿದ್ದು ಅತ ಧೃತಿಗೆಡುವುದು ಸ್ವಾಭಾವಿಕ. ಆದರೆ ಸಿಂಗಾರಿಗೌಡರದು ಮೊದ ಲಿಂದಲೂ ಜೀವನವನ್ನು ಅದು ಬಂದಂತೆ ತೆಗೆದುಕೊಳ್ಳುವ ಸ್ವಭಾವ. ಆದುದರಿಂದಾಗಿ ಈ ಎಲ್ಲಾ ಏರುಪೇರುಗಳೂ ಅವರನ್ನು ಜೀವನಕ್ರಮದಿಂದ ವಿಚಲಿತಗೊಳಿಸಲಿಲ್ಲ.

ಸವಿವರಿಗೆ ಸಂಸಾರವೊಂದು ಸುಂದರ ಕನಸು ಎಂಬುದು ಸತ್ಯಸಂಗತಿ. ಎಲ್ಲಿಯೋ ಹುಟ್ಟಿ ಎಲ್ಲಿಯೋ ಬೆಳೆದ ಜೀವನಗಳೆರಡು ಕೂಡಿ ತಮ್ಮ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡು ತಮ್ಮ ಮುಂದಿನ ಜನಾಂಗವನ್ನು ಬೆಳೆಸುವುದು. ಮತ್ತೆ ಅದೇ ಚಕ್ರದ ತಿರುಗಣೆ. ಸಿಂಗಾರಿಗೌಡರಸಂಸಾರ ದೀಕ್ಷೆ ಅಂತಹುದು. ಇಂದಿಗೂ ಅವರು ತಮ್ಮ ಪತ್ನಿಯನ್ನು ಅತ್ಯಂತ ಆತ್ಮೀಯವಾಗಿ ಸ್ಮರಿಸುತ್ತಾರೆ.

೧೦. ಸೇವೆಯ ಹಾದಿಯಲ್ಲಿ

ಮೈಸೂರಿನಲ್ಲಿ ವ್ಯಾಸಂಗ ಮಾಡುವಾಗ ವಿದ್ಯಾರ್ಥಿನಾಯಕರಾಗಿ ರೂಪುಗೊಂಡ ಸಿಂಗಾರಿಗೌಡರ ಜೀವನಮಾರ್ಗ ಒಂದು ರೀತಿಯಲ್ಲಿ ಸಮಾಜ ಸೇವೆಯತ್ತ ತಿರುಗಿತ್ತೆಂದು ಹೇಳಬಹುದು. ಮುಂದೆ ಮಹಾರಾಜಾ ಕಾಲೇಜಿನಲ್ಲಿರುವಾಗ ವಿದ್ಯಾರ್ಥಿಸಂಘ ಕೈಗೊಂಡ ವಯಸ್ಕರ ಶಿಕ್ಷಣದ ಸಂಚಾಲಕರಾದ ಮೇಲೆ ಈ ದಾರಿಗೆ ಒಂದು ಸ್ಪಷ್ಟ ರೂಪು ದೊರೆತಂತಾಯಿತು. ಆ ದಿನಗಳಲ್ಲಿ ಒಬ್ಬ ಸಮಾಜಸೇವಕನಿಗೆ ಅತ್ಯಂತ ಉತ್ತಮ ಸೇವೆ ಸಲ್ಲಿಸಬಲ್ಲ ಅನೇಕ ದಾರಿಗಳಿದ್ದುವು. ಒಂದು ಕಡೆ ರಾಜಕೀಯ ಆಂದೋಲನ ನಡೆಯುತ್ತಿದ್ದುದರ ಜೊತೆ ಜೊತೆಯಲ್ಲಿಯೇ ಸಾಮಾಜಿಕ ಆಂದೋಲನವೂ ನಡೆಯುತ್ತಿತ್ತು. ಭಾರತ ರಾಜಕೀಯ ಸ್ವಾತಂತ್ರ್ಯವನ್ನಷ್ಟೇ ಅಲ್ಲ ಸಾಮಾಜಿಕ ಸ್ವಾತಂತ್ರ್ಯವನ್ನೂ ಪಡೆದುಕೊಳ್ಳಬೇಕಾಗಿತ್ತು. ಧರ್ಮ ಮತ್ತು ಪರಂಪರೆಯ ಹೆಸರಿನಲ್ಲಿ ಶತಶತಮಾನಗಳ ಕಾಲ ತುಳಿತಕ್ಕೆ ಒಳಗಾಗಿದ್ದ ಜನರು ಮೇಲೇಳಬೇಕಾಗಿತ್ತು. ಅವರು ಮೇಲೇಳಲು ಶಿಕ್ಷಣದ ಆವಶ್ಯಕತೆಯಿತ್ತು. ಅದು ಬರಿಯ ವಯಸ್ಕರ ಶಿಕ್ಷಣಕ್ಕಷ್ಟೇ ಮೀಸಲಾಗಿರಲಿಲ್ಲ. ಆ ಕಾಲದಲ್ಲಿ ಲಕ್ಷೋಪಲಕ್ಷ ಗ್ರಾಮಾಂತರ ಮಕ್ಕಳು ವಿದ್ಯೆಯಿಂದ ಪ್ರತಿ ವರ್ಷ ವಂಚಿತರಾಗುತ್ತಿದ್ದರು. ಹೀಗಾಗಿ ಸಿಂಗಾರಿಗೌಡರಿಗೆ ಸೇವೆಯ ಮಾರ್ಗಗಳು ನಿಚ್ಚಳವಾಗಿದ್ದುವು.

ಅವರು ನ್ಯಾಯಶಾಸ್ತ್ರದ ವಿದ್ಯಾರ್ಥಿಯಾಗಿ ಕೊಲ್ಹಾಪುರದಲ್ಲಿರುವಾಗಲೇ ತಮ್ಮ ತಾಲ್ಲೂಕಿನಲ್ಲಿ ಸೇವಾಚಟುವಟಿಕೆಗಳನ್ನು ಆರಂಭಿಸಿದ್ದರು. ಇದರಲ್ಲಿ ಮೊದಲನೆಯದು ಗ್ರಾಮಾಂತರದಲ್ಲಿ ವಯಸ್ಕರ ಶಿಕ್ಷಣ ಪ್ರಚಾರ. ಸುಮ್ಮನೆ ರಾತ್ರಿಶಾಲೆಯನ್ನು ತೆರೆದು ಬಿಟ್ಟರೆ ವಯಸ್ಕರು ಕಲಿಯಲು ಬಂದುಬಿಡುತ್ತಿರಲಿಲ್ಲ. ಆದುದರಿಂದ ಇದಕ್ಕೆ ಬೇಕಾದ ಭೂಮಿಕೆಯನ್ನು ಸಿದ್ಧಪಡಿಸಬೇಕಾಗಿತ್ತು. ಕೆಲವರು ಗ್ರಾಮಾಂತರ ಜನರ ಅನಕ್ಷರತೆ ಮತ್ತು ಮೌಢ್ಯಗಳನ್ನೇ ತಮ್ಮ ಬಂಡವಾಳವಾಗಿ ಮಾಡಿಕೊಂಡಿದ್ದರು. ವಿದ್ಯಾವಂತ ಯುವಕರು ಕೈಗೊಳ್ಳುವ ಇಂತಹ ಸೇವಾ ಕಾರ್ಯಗಳ ವಿರುದ್ಧ ಅವರು ಅಪಪ್ರಚಾರ ಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಸಮಾಜ ಸೇವೆ ಅಷ್ಟೇನು ಸುಲಭದ ಕೆಲಸವಾಗಿರಲಿಲ್ಲ. ತಮ್ಮ ಧ್ಯೇಯದಲ್ಲಿ ಅಚಲವಾದ ನಿಷ್ಠೆ ಇದ್ದವರು ಮತ್ತು ಧೈರ್ಯವಂತರು ಮಾತ್ರ ಈ ಹೋರಾಟದಲ್ಲಿ ಯಶಸ್ಸು ಕಾಣುವುದು ಸಾಧ್ಯವಿತ್ತು. ಶ್ರೀ ಸಿಂಗಾರಿಗೌಡರಿಗೆ ಆ ಛಲ, ನಿಷ್ಠೆಗಳಿದ್ದುವಾದುದರಿಂದಲೇ ಅವರು ತಮ್ಮ ಸೇವಾಕಾರ್ಯದಲ್ಲಿ

ಮುಂದೆ ನಡೆದರು. ನಾಗಮಂಗಲ ತಾಲ್ಲೂಕಿನ ಹಳ್ಳಿಹಳ್ಳಿಗಳನ್ನು ಸಂದರ್ಶಿಸಿ ಅಕ್ಷರ ಜ್ಞಾನದ ಮಹತ್ವವನ್ನು ಕುರಿತು ಜನರಿಗೆ ತಿಳಿಯ ಹೇಳಿದರು. ಅನೇಕ ಕಡೆಯಿಂದ ಅವರ ಕಡೆಗೆ ಉತ್ತಮ ಪ್ರತಿಕ್ರಿಯೆಯೂ ಬಂದಿತು. ಹೀಗಾಗಿ ನಾಗಮಂಗಲ ತಾಲ್ಲೂಕೊಂದರಲ್ಲಿಯೇ ಅವರು ಸುಮಾರು ಇಪ್ಪತ್ತೈದು ರಾತ್ರಿಯ ಶಾಲೆಗಳನ್ನು ಆರಂಭಿಸಲು ಕಾರಣರಾದರು.

ಯಾವುದೇ ಸಂಘ ಸಂಸ್ಥೆಗಳನ್ನು ಆರಂಭಿಸುವುದು ಅತ್ಯಂತ ಸುಲಭ. ಆದರೆ ಅವುಗಳು ಕ್ರಮವಾಗಿ ನಡೆದು ಅವನ್ನು ಆರಂಭಿಸಿದ ಉದ್ದೇಶ ನೆರವೇರುವುದು ಅಷ್ಟೇ ವಿರಳ. ಸಿಂಗಾರಿಗೌಡರು ತಾವು ಆರಂಭಿಸಿದ ರಾತ್ರಿಶಾಲೆಗಳು ಸರಿಯಾಗಿ ನಡೆಯುವಂತೆ ನೋಡಿಕೊಂಡರು. ಆಗಿನ ಕಾಲದಲ್ಲಿ ಈಗಿನಂತೆ ವಯಸ್ಕರ ಶಿಕ್ಷಣಕ್ಕೆ ಸರ್ಕಾರದ ಅನುದಾನವಿರಲಿಲ್ಲ. ಆದುದರಿಂದಾಗಿ ಶಾಲೆಗಳಿಗೆ ಬೇಕಾಗುವ ಹಲಗೆ. ಬಳಪ. ದೀಪಕ್ಕಾಗಿ ಸೀಮೆಎಣ್ಣೆ ಇತ್ಯಾದಿಗಳಿಗಾಗಿ ಹಣ ಒದಗಿಸಬೇಕಾಗಿತ್ತು. ರಾತ್ರಿಯ ಶಾಲೆಗಳಲ್ಲಿ ಪಾಠ ಹೇಳುವವರು ಅಷ್ಟು ಸುಲಭವಾಗಿ ಸಿಗುತ್ತಿರಲಿಲ್ಲ. ಏಕೆಂದರೆ ಆಗ ಈಗಿನ ಹಾಗೆ ಸಂಬಳಸಾರಿಗೆ ಇರಲಿಲ್ಲ. ಸೇವಾದೃಷ್ಟಿಯಿಂದ ಮಾತ್ರ ಪಾಠ ಹೇಳಬೇಕಾಗಿತ್ತು. ಇವುಗಳೆಲ್ಲವರ ಏರ್ಪಾಡುಗಳನ್ನೂ ಸಿಂಗಾರಿಗೌಡರು ಮಾಡುತ್ತಿದ್ದರು.

ವಯಸ್ಕರ ಶಿಕ್ಷಣದಂತೆಯೇ ಮತ್ತೊಂದು ಸಮಸ್ಯೆ ಆಗಿನ ಗ್ರಾಮಾಂತರ ಜನವನ್ನು ಕಾಡುತ್ತಿತ್ತು. ಆಗಿನ ಕಾಲದಲ್ಲಿ ಶಿಕ್ಷಣ ಸಂಸ್ಥೆಗಳು ನಗರಗಳಲ್ಲಿ ಮಾತ್ರ ಇದ್ದುವು. ಹಳ್ಳಿಯ ಹುಡುಗನೊಬ್ಬ ತಾಲ್ಲೂಕು ಕೇಂದ್ರಕ್ಕೆ ಬಂದು ಶಿಕ್ಷಣ ಪಡೆಯಲು ಊಟ ವಸತಿಗಳ ತೊಂದರೆಯಿತ್ತು. ಇದೊಂದು ಅವಕಾಶವಿದ್ದಲ್ಲಿ ಎಷ್ಟೋ ಮಂದಿ ಹಳ್ಳಿಯ ಮಕ್ಕಳು ವಿದ್ಯಾವಂತರಾಗುತ್ತಿದ್ದರು. ಈ ತೊಂದರೆಯನ್ನು ಅರಿತ ಸಿಂಗಾರಿಗೌಡರು ಅವರು ಸ್ವಯಂ ವಿದ್ಯಾರ್ಥಿಯಾಗಿರುವಾಗಲೇ ನಾಗಮಂಗಲದಲ್ಲಿ ವಿದ್ಯಾರ್ಥಿನಿಲಯವೊಂದನ್ನು ಆರಂಭಿಸಿ ನಡೆಸುತ್ತಿದ್ದರು. ಮುಂದೆ ಅವರು ಮತ್ತು ಕೆ. ವಿ. ಶಂಕರಗೌಡರು ಕೂಡಿದ ಮೇಲೆ ನಾಟಕಗಳನ್ನು ಆಡಿ ಸುಮಾರು ನಲವತ್ತು ಸಾವಿರ ರೂಪಾಯಿಗಳನ್ನು ಸಂಗ್ರಹಿಸಿದರು. ಆಗ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದ ಕಾಲ. ಈ ಹಣದಲ್ಲಿ ನಾಗಮಂಗಲದಲ್ಲಿ ಒಂದು ವಿದ್ಯಾರ್ಥಿನಿಲಯದ ಕಟ್ಟಡವನ್ನು ಕಟ್ಟಿಸಿದರು. ಈಗಲೂ ಅದು ನಾಗಮಂಗಲದ ಅತ್ಯಂತ ವಿಶಾಲವಾದ ಸಾರ್ವಜನಿಕ ಕಟ್ಟಡಗಳಲ್ಲಿ ಒಂದು ಎಂದು ಹೇಳಬಹುದಾಗಿದೆ.

ಮಂಡ್ಯದಲ್ಲಿ ವಕೀಲಿಯನ್ನು ಆರಂಭಿಸಿದುದು ಸಿಂಗಾರಿಗೌಡರ ಸೇವಾ ಮಾರ್ಗದಲ್ಲಿ ಒಂದು ಮಹತ್ತರವಾದ ಹೆಜ್ಜೆ ಎಂದು ಹೇಳಬಹುದು. ಇದರೊಂದಿಗೆ ಕೆ. ವಿ. ಶಂಕರಗೌಡರ ಜೊತೆಗಾರಿಕೆ ದೊರೆತದ್ದು ಒಂದು ಅಪೂರ್ವ ಯೋಗ. ಮಂಡ್ಯ

ಜಿಲ್ಲೆಯ ಮತ್ತು ನಗರದ ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಯಲ್ಲಿ ಆ ಕಾಲದ ಎಲ್ಲ ಯುವ ರಾಜಕಾರಣಿಗಳೂ ಶ್ರೀ ಕೆ. ವಿ. ಶಂಕರಗೌಡರ ಮುಖಂಡತ್ವದಲ್ಲಿ ಮಾಡಿದ ಕೆಲಸ ಈ ದೃಷ್ಟಿಯಿಂದ ಅಪೂರ್ವವಾದುದೆಂದು ಹೇಳಬಹುದು. ಈ ದಿಸೆಯ ಮೊದಲ ಕೆಲಸ ರೈತರ ಸಹಕಾರ ಸಂಘ. ಎರಡನೆಯ ಮಹಾಯುದ್ಧದ ಕಾಲ. ಆಹಾರ ಧಾನ್ಯ, ಬಟ್ಟೆ ಬರೆಗಳಿಗೆಲ್ಲಾ ಅಭಾವ. ಕಾಳಸಂತೆಕೋರರ ಹಾವಳಿ ವಿಪರೀತ. ನಿಜ ಬೆಲೆಯ ನಾಲ್ಕು ಐದರಷ್ಟು ಕೊಟ್ಟರೆ ಏನು ವಸ್ತುಬೇಕಾದರೂ ದೊರೆಯುತ್ತದೆ. ನ್ಯಾಯಬೆಲೆಗೆ ಯಾವುದೂ ದೊರೆಯುವುದಿಲ್ಲ. ಮಳೆಬಿಸಿಲೆನ್ನದೆ ಅಂಗಡಿಗಳ ಮುಂದೆ ಜನರು ನಿಂತಿರುತ್ತಿದ್ದರು. ತಮ್ಮ ಜನರ ಈ ಪರಿಸ್ಥಿತಿಯನ್ನು ಕಂಡ ಶಂಕರಗೌಡರು ಇದನ್ನು ತಮ್ಮೆಲ್ಲಾ ಮಿತ್ರರೊಂದಿಗೆ ಚರ್ಚಿಸಿದರು. ಅದರ ಪರಿಣಾಮವೇ ಮಂಡ್ಯ ನಗರದ ರೈತರ ಸಹಕಾರ ಸಂಘ. ಈಗ ಅದೊಂದು ಮಹಾಸಂಸ್ಥೆಯಾಗಿ ಬೆಳೆದು ನಿಂತಿದೆ. ಅದರ ಸೇವೆಯದೇ ಒಂದು ಇತಿಹಾಸವಾಗುತ್ತದೆ.

ನಮ್ಮ ದೇಶದ ಅನೇಕ ಸಮಸ್ಯೆಗಳಿಗೆ ಜಾತಿಯೇ ಕಾರಣ ಎಂದು ಅನೇಕಾನೇಕ ಮಹನೀಯರು ಹೇಳಿದ್ದಾರೆ. ಹೇಳುತ್ತಿದ್ದಾರೆ. ನಮ್ಮ ದೊಡ್ಡ ದುರಂತವೆಂದರೆ ಜನಿವಾರ, ಶಿವದಾರ, ಲಿಂಗ, ಮುದ್ರೆ, ವಿಭೂತಿ, ಪಂಚಾಕ್ಷರಿ, ಗಾಯತ್ರಿ ಈ ಯಾವುದನ್ನೂ ಬಿಡದೆ ಜಾತಿ ನಿರ್ಮೂಲನದ ಬಗ್ಗೆ ಗಂಟೆಗಟ್ಟಲೆ ಕೊಚ್ಚುವ ಜನರಿಂದ ಜಾತಿ ಹೋದೀತೆ ? ಶ್ರೀ ಕೆ. ಹನುಮಂತಯ್ಯ ಅವರು ಜಾತಿಯ ಕಟ್ಟುಪಾಡುಗಳನ್ನು ಸ್ವಲ್ಪವಾದರೂ ಸಡಿಲಗೊಳಿಸುವ ದೃಷ್ಟಿಯಿಂದ ಒಂದು ಆಜ್ಞೆ ಹೊರಡಿಸಿದರು. ಮೈಸೂರು ರಾಜ್ಯದ ಎಲ್ಲಾ ಜಾತೀಯ ವಿದ್ಯಾರ್ಥಿನಿಲಯಗಳನ್ನೂ ಸಾರ್ವಜನಿಕ ವಿದ್ಯಾರ್ಥಿನಿಲಯಗಳೆಂದು ಘೋಷಿಸುವುದು. ಈ ಆಜ್ಞೆಯನ್ನು ಒಕ್ಕಲಿಗರನ್ನು ಬಿಟ್ಟರೆ ಮತ್ತೆ ಪ್ರಾಯಶಃ ಯಾವ ಜಾತಿಯವರೂ ತಮ್ಮ ನಿಲಯಗಳನ್ನು ಸಾರ್ವಜನಿಕ ಎಂದು ಘೋಷಿಸಲು ಒಪ್ಪಲಿಲ್ಲ. ಮಂಡ್ಯದಲ್ಲಿ ಶಂಕರಗೌಡರು, ಸಿಂಗಾರಿಗೌಡರು ಈ ಎಲ್ಲಾ ಮಿತ್ರರು ಸೇರಿ ಮಂಡ್ಯನಗರದಲ್ಲಿ ಎರಡು ಮಹಾ ಕಾರ್ಯಗಳನ್ನು ಸಾಧಿಸಿದರು. ಇದರಲ್ಲಿ ಒಂದು ಒಕ್ಕಲಿಗರ ಸಾರ್ವಜನಿಕ ವಿದ್ಯಾರ್ಥಿನಿಲಯ. ಮತ್ತೊಂದು ಜನತಾ ಶಿಕ್ಷಣ ಸಂಸ್ಥೆ. ಮಂಡ್ಯದ ಒಕ್ಕಲಿಗರ ಸಾರ್ವಜನಿಕ ವಿದ್ಯಾರ್ಥಿನಿಲಯ ರೂಪುಗೊಂಡುದು ಈ ಮಿತ್ರರ ಸಾಹಸದ ಫಲವೆಂದೇ ಹೇಳಬೇಕು. ಕೇವಲ ನಾಟಕಗಳನ್ನು ಆಡಿ ಇಂತಹ ಭವ್ಯ ವಿದ್ಯಾರ್ಥಿನಿಲಯ ಸ್ಥಾಪಿಸಿದರು ಎಂದರೆ ಮುಂದೊಂದು ದಿನ ಯಾರೂ ನಂಬದಿರಬಹುದು. ಜನತಾ ಶಿಕ್ಷಣ ಸಂಸ್ಥೆಯಂತೂ ಒಂದು ವಟವೃಕ್ಷವಾಗಿ ಬೆಳೆದುನಿಂತಿದೆ. ಇಂಜನಿಯರಿಂಗ್ ಕಾಲೇಜು, ಪ್ರಥಮದರ್ಜೆ ಕಾಲೇಜು, ಶಿಕ್ಷಣ ಕಾಲೇಜು ಹೀಗೆ ಅನೇಕ ಉನ್ನತ ಶೈಕ್ಷಣಿಕ ಸಂಸ್ಥೆಗಳು ಇಂದು ಮಂಡ್ಯ ನಗರದಲ್ಲಿ ತಲೆಯೆತ್ತಿ ನಿಂತಿವೆ. ಶ್ರೀ ಶಂಕರಗೌಡರೊಂದಿಗೆ ಈ ಎಲ್ಲಾ ಸಂಸ್ಥೆಗಳನ್ನು ಕಟ್ಟುವಲ್ಲಿ ಶ್ರೀ ಸಿಂಗಾರಿಗೌಡರ ಸೇವೆಯೂ ಅಪಾರವಾಗಿ ಸಂದಿದೆ.

1975ರಲ್ಲಿ ಒಮ್ಮೆ ಆಗಿನ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ದೇ. ಜವರೇಗೌಡರು ಶ್ರೀ ಆದಿಚುಂಚನಗಿರಿಗೆ ಬಂದಿದ್ದರು. ಅದೊಂದು ಅಮೃತ ಘಳಿಗೆ. ಅವರೊಂದಿಗೆ ಡಾ. ಜೀ. ಶಂ. ಪರಮಶಿವಯ್ಯ ಮತ್ತು ಹ. ಕ. ರಾಜೇಗೌಡ ಇದ್ದರು. ನಾಗಮಂಗಲ ತಾಲ್ಲೂಕಿನವರಾದ ಈ ಇಬ್ಬರಿಗೂ ಆದಿಚುಂಚನಗಿರಿಯಲ್ಲಿ ಒಂದು ಪ್ರಥಮ ದರ್ಜೆ ಕಾಲೇಜು ಆರಂಭವಾದರೆ ಆ ಸುತ್ತಮುತ್ತಲಿನ ಹಳ್ಳಿಯ ಮಕ್ಕಳಿಗೆ ಅನುಕೂಲವಾಗುತ್ತದೆಂಬ ಆಸೆ. ಆಗ ಪೀಠಾಧ್ಯಕ್ಷರಾಗಿದ್ದ ಶ್ರೀ ಶ್ರೀ ಶ್ರೀ ರಾಮಾನಂದ ಸ್ವಾಮಿಗಳ ಮೂಲಕ ಗಿರಿಗೆ ಒಂದು ಕಾಲೇಜು ಕೋರಿಕೆಯನ್ನು ಸಲ್ಲಿಸುವಂತೆ ಪ್ರಾರ್ಥಿಸಲಾಯಿತು. ಅದರಂತೆ ಸ್ವಾಮಿಗಳು ಕುಲಪತಿಯವರನ್ನು ಕೋರಿದರು. ಆಗ ಈ ಎಲ್ಲಾ ಕಾರ್ಯನಿರ್ವಹಣೆಗೆ ಶ್ರೀ ಆದಿಚುಂಚನಗಿರಿ ಶಿಕ್ಷಣಟ್ರಸ್ಟ್ ಆರಂಭವಾಯಿತು. ಶ್ರೀ ಸಿಂಗಾರಿಗೌಡರು ಆ ಟ್ರಸ್ಟಿನ ಒಬ್ಬ ಪ್ರಮುಖ ಸದಸ್ಯರು. ಇಂದು ಆದಿಚುಂಚನಗಿರಿಯ ಮಠದ ಶಿಕ್ಷಣಸಂಸ್ಥೆಗಳು ಬೃಹದಾಕಾರವಾಗಿ ಬೆಳೆದಿವೆ. ಇಂಜಿನಿಯರಿಂಗ್. ಮೆಡಿಕಲ್ ಕಾಲೇಜುಗಳಿವೆ. ಈ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಸಿಂಗಾರಿಗೌಡರದು ಪ್ರಮುಖ ಪಾತ್ರ. ಅಂದಿನಿಂದ ಈವರೆಗೂ ಅವರು ಆ ಶಿಕ್ಷಣ ಟ್ರಸ್ಟಿನ ಪ್ರಮುಖ ಸದಸ್ಯರಾಗಿ ಸೇವೆ ಸಲ್ಲಿಸುತ್ತಲೇ ಇದ್ದಾರೆ.

ಸಾರ್ವಜನಿಕ ಕೆಲಸಗಳಲ್ಲಿ ಸಿಂಗಾರಿಗೌಡರದು ಅತ್ಯಂತ ಪ್ರಮುಖ ಪಾತ್ರವಿರುತ್ತದೆ. ಆದರೆ ಅವರು ಅದನ್ನು ತೋರಿಸಿಕೊಳ್ಳುವುದಿಲ್ಲ. ಯಾವುದೇ ಸಮಾರಂಭ ಅದರ ಯಶಸ್ಸು ಅದರಲ್ಲಿ ಪಾಲುಗೊಳ್ಳುವವರಿಗೆ ವಸತಿ ಸೌಕರ್ಯ ಏರ್ಪಡಿಸುವುದು, ಊಟೋಪಚಾರಗಳ ಮೇಲ್ವಿಚಾರಣೆ ಇತ್ಯಾದಿಗಳ ಸೋಲು ಗೆಲುವನ್ನು ಅವಲಂಬಿಸಿರುತ್ತದೆ. 1971ರಲ್ಲಿ ನಾಗಮಂಗಲದಲ್ಲಿ ಅಖಿಲ ಕರ್ನಾಟಕ ಮೂರನೆಯ ಜಾನಪದ ಸಮ್ಮೇಳನ ನಡೆಯಿತು. ಈಸಮ್ಮೇಳನದ ಸ್ವಾಗತ ಸಮಿತಿಯ ಸದಸ್ಯರು ಸಿಂಗಾರಿಗೌಡರು. ಆದರೆ ವಾಸ್ತವ ಸಂಗತಿಯೆಂದರೆ ಅದನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸಿದವರೇ ಶ್ರೀ ಗೌಡರು ಎಂದು ಹೇಳಿದರೆ ಉತ್ಪ್ರೇಕ್ಷೆಯಲ್ಲ. ಸಿಂಗಾರಿಗೌಡರು ಜೀವನದ ಪ್ರಾಥಮಿಕ ಅವಶ್ಯಕತೆಗಳಿಗೆ ಪ್ರಾಧಾನ್ಯತೆ ಕೊಡುತ್ತಾರೆ. ಮೂರನೆಯ ಜಾನಪದ ಸಮ್ಮೇಳನಕ್ಕೆ ರಾಜ್ಯದ ಎಲ್ಲಾ ಭಾಗಗಳಿಂದಲೂ ಸಾಹಿತಿಗಳು. ವಿದ್ವಾಂಸರು. ಕಲಾವಿದರು ಬಂದಿದ್ದರು. ಈ ಎಲ್ಲಾ ಜನರ ಅಭಿರುಚಿ, ಸ್ವಭಾವಗಳು ಭಿನ್ನ. ನಾಗಮಂಗಲದಂತಹ ಒಂದು ಊರಿನಲ್ಲಿ ಈ ವೈವಿಧ್ಯಮಯ ಜನರಿಗೆ ಊಟ ವಸತಿ ಸಾಧ್ಯವೇ ಎಂಬುದು ಅನೇಕರ ಅನುಮಾನವಾಗಿತ್ತು. ಆದರೆ ಸಿಂಗಾರಿಗೌಡರು ಈ ಅನುಮಾನವನ್ನು ಹುಸಿಗೊಳಿಸಿದರು. ಆ ಸಮ್ಮೇಳನಕ್ಕೆ ಬಂದಿದ್ದ ಮಹಾಕವಿ ಶ್ರೀ ಕುವೆಂಪು ಅವರಿಂದ ಹಿಡಿದು ಜನಪದ ಕಲಾವಿದನವರೆಗೆ ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ಕೆಲವರಿಗೆ ಮೆಚ್ಚುಗೆಯಾದರು. ಆದರೆ ಶ್ರೀ ಸಿಂಗಾರಿಗೌಡರು ಅಲ್ಲಿ ಸೇರಿದ್ದ ಎಲ್ಲರಿಗೂ ಮೆಚ್ಚಿಕೆಯಾದರು.

ಎಲ್ಲರೂ ಅವರನ್ನು ಸ್ಮರಿಸಿದರು. ಈಗಲೂ ಅನೇಕ ವಿದ್ವಾಂಸರು ಅವರನ್ನು ನೆನೆಯುತ್ತಾರೆ.

ಶ್ರೀ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾಗಿದ್ದ ರಾಮಾನಂದ ಸ್ವಾಮಿಗಳು ತೀರಿಕೊಂಡರು. ಅವರ ಉತ್ತರಾಧಿಕಾರಿಯ ಆಯ್ಕೆಯಲ್ಲಿ ಗೌಡರದು ಮಹತ್ತರ ಪಾತ್ರ. ಈ ಎಲ್ಲಕ್ಕಿಂತ ಅವರ ದೊಡ್ಡ ಪಾತ್ರವನ್ನು ಆ ಸಂದರ್ಭಗಳಲ್ಲಿ ಸಿಂಗಾರಿ ಗೌಡರು ನಿರ್ವಹಿಸಿದರು. ಸ್ವಾಮಿಗಳ ಆರಾಧನೆ ಮತ್ತು ಹೊಸ ಸ್ವಾಮಿಗಳ ಪಟ್ಟಾಭಿಷೇಕದ ದಿನ ಜನಗಳಿಗೆ ಊಟದ ಏರ್ಪಾಡಿತ್ತು. ಅದರ ನೇತಾರರು ಸಿಂಗಾರಿಗೌಡರು. ನಾವು ಗೌಡರನ್ನು ಅರಸಿಕೊಂಡು ಹೋದಾಗ ದಿಬ್ಬವೊಂದರ ಮೇಲೆ ಕುಳಿತು ಗೌಡರು ಸಿಗರೇಟು ಸೇದುತ್ತಿದ್ದರು. ಇಡೀ ಮಠದ ಆವರಣ ಜನರಿಂದ ತುಂಬಿಹೋಗಿತ್ತು. ಆ ಜನರಿಗೆಲ್ಲಾ ಊಟ ದೊರೆಯುತ್ತದೆಂಬ ನಂಬಿಕೆ ನಮಗಿರಲಿಲ್ಲ. ಯಾರಿಗೂ ಇರುವಂತೆಯೂ ಇರಲಿಲ್ಲ. ನಾವು ಗೌಡರನ್ನು ಕೇಳಿಯೂ ಬಿಟ್ಟೆವು. ಅವರು ಮುಗುಳ್ನಕ್ಕರು. ಪ್ರಶಾಂತವಾಗಿ, ನಿಶ್ಚಲವಾಗಿದ್ದರು. ಯಾವುದು ಅಸಾಧ್ಯವೆಂದು ನಾವೆಲ್ಲಾ ತಿಳಿದುಕೊಂಡಿದ್ದೆವೋ ಅದು ನಮ್ಮೆದುರಿಗೇ ಅತ್ಯಂತ ಸಮರ್ಪಕವಾಗಿ ನಡೆದುಹೋಯಿತು. ಗಿರಿಯ ಮೇಲೆ ನೂತನ ಸ್ವಾಮಿಗಳ ಪಟ್ಟಾಭಿಷೇಕ. ಮಂತ್ರಿ ಮಾನ್ಯರು, ನಾಡಿನ ಗಣ್ಯರು. ಅಲ್ಲಿದ್ದರು. ಆದರೆ ಸಿಂಗಾರಿಗೌಡರಿದ್ದುದು ಅಡುಗೆಯ ಸ್ಥಳದಲ್ಲಿ. ಅವರ ಸೇವೆಯ ರೀತಿಯೇ ಅದು.

ಸಿಂಗಾರಿಗೌಡರು ತಮ್ಮ ಜೀವಿತದಲ್ಲಿ ಎಷ್ಟೋ ಸೇವಾ ಕೈಂಕರ್ಯ ಮಾಡಿದ್ದಾರೆ. ಅವುಗಳಿಗೆ ಲೆಕ್ಕವಿಲ್ಲ. ಗೌಡರು ಲೆಕ್ಕ ಇಡುವ ಸ್ವಭಾವದವರೂ ಅಲ್ಲ. ಅವರು ಸೇವೆಯನ್ನು ಕರ್ತವ್ಯ ಎಂದು ತಿಳಿದು ಮಾಡಿದವರು. ಅದರ ಪ್ರಸಿದ್ಧಿಯನ್ನು ಹಾಗೆ ಪಟ್ಟಿ ಮಾಡುವುದು ಅವರ ಸ್ವಭಾವವಲ್ಲ. ಮಂಡ್ಯ ಜಿಲ್ಲೆಯ ಯಾವುದೇ ದೊಡ್ಡ ಸಮಾರಂಭದ ಊಟ ವಸತಿಯ ಹಿಂದೆ ಸಿಂಗಾರಿಗೌಡರಿರುತ್ತಾರಾಗಿ ಅದು ಸೊಗಸಾಗಿ ನೆರವೇರುತ್ತದೆ. ಇದು ಗೌಡರ ಸೇವೆಯ ರೀತಿ.

೧೧. ರಾಜಕೀಯ ರಂಗ

1947ರ ಆಗಸ್ಟ್ 15 ಭಾರತೀಯ ರಾಜಕೀಯ ಇತಿಹಾಸದ ಸುವರ್ಣದಿನ. ಈ ಮಾತು ಭಾರತಕ್ಕೆ ಎಲ್ಲಾ ದೃಷ್ಟಿಯಿಂದಲೂ ಅನ್ವಯವಾಗುತ್ತದೆ. ಈ ದೇಶ ಹಿಂದೆಂದೂ ಹೀಗೆ ಏಕವಾಗಿರಲಿಲ್ಲ. ಅನೇಕಾನೇಕ ಚಕ್ರವರ್ತಿಗಳು. ರಾಜಮಹಾರಾಜರು ಇಡೀ ಭರತವರ್ಷವನ್ನು ಒಂದೇ ಆಡಳಿತದ ಅಡಿಯಲ್ಲಿ ತರುವ ಆಸೆಯಿಂದ ತಮ್ಮೆಲ್ಲ ಶಕ್ತಿಯನ್ನು ವಿನಿಯೋಗಿಸಿ, ನಿರಾಶರಾಗಿ ನಿರ್ಗಮಿಸಿದ್ದರು. ಈ ಯಾವನೂ ಸಾಧಿಸ ಲಾಗದ್ದನ್ನು ಮಹಾತ್ಮಗಾಂಧಿ ಸಾಧಿಸಿದರು. ಸ್ವಾತಂತ್ರ್ಯ ದೊರಕುವವವರೆಗೆ ಅವ ರಿಗೆ ಅದೊಂದೇ ಗುರಿಯಾಗಿದ್ದಿತು. ಅದು ದೊರೆತ ಮೇಲೆ ಅಡಳಿತ, ಅಧಿಕಾರಕ್ಕಾಗಿ ಅನೇಕಾನೇಕ ರಾಜಕೀಯ ಪಕ್ಷಗಳು. ವ್ಯಕ್ತಿಗಳು ಹುಟ್ಟಿಕೊಂಡರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲುಗೊಳ್ಳುತ್ತಿದ್ದ ಅನೇಕರು ರಾಜಕೀಯ ಪ್ರವೇಶಮಾಡಿ ಅಧಿಕಾರ ಗದ್ದುಗೆಯನ್ನು ಏರಿದರು. ಶ್ರೀ ಸಿಂಗಾರಿಗೌಡರು ಕೂಡ ಮಂಡ್ಯದಲ್ಲಿ ವಕೀಲವೃತ್ತಿ ಯನ್ನು ಆರಂಭಿಸಿದ ಮೇಲೆ ರಾಜಕೀಯ ಪ್ರವೇಶ ಮಾಡುವುದು ಅನಿವಾರ್ಯ ವೆನಿಸಿತು.

ಸಿಂಗಾರಿಗೌಡರ ತಂದೆ ಕೃಷ್ಣಪ್ಪಗೌಡರು ರಾಜ್ಯದಲ್ಲಿ ಒಳ್ಳೆಯ ಸ್ಥಾನದಲ್ಲಿದ್ದವರು. ರಾಜಕೀಯವಾಗಿ ಅವರು ಅತ್ಯಂತ ಪ್ರಬಲರಾದವರು. ಮೈಸೂರು. ಮಂಡ್ಯ ಜಿಲ್ಲೆಯ ರಾಜಕೀಯ ಮುಂದಾಳುಗಳಾಗಿದ್ದರು. ಮಂಡ್ಯ ಒಂದು ಜಿಲ್ಲೆಯಾಗಿ ರೂಪುಗೊಂಡ ಮೇಲೆ ಕೃಷ್ಣಪ್ಪಗೌಡರು ಒಂದು ರಾಜಕೀಯ ಕೇಂದ್ರಶಕ್ತಿಯೇ ಆದರು. ಕೆಲವು ಕಾಲ ಮೈಸೂರಿನಲ್ಲಿ ವಕೀಲಿ ಕಲಿತ ಸಿಂಗಾರಿಗೌಡರು ಮಂಡ್ಯಕ್ಕೆ ಬಂದು ಸೇರಿದರು. ಅವರ ಮನೆ ಒಂದು ರೀತಿಯಲ್ಲಿ ರಾಜಕೀಯ ಕೇಂದ್ರವೇ ಆಗಿತ್ತು. ಗೌಡರ ರಾಜಕೀಯ ಸಂಬಂಧ ಅವರು ವಿದ್ಯಾರ್ಥಿಯಾಗಿದ್ದಾಗಿನಿಂದಲೂ ಇದ್ದೇ ಇತ್ತು. ಅವರು ಕೊಲ್ಲಾಪುರ ದಲ್ಲಿ ನ್ಯಾಯಶಾಸ್ತ್ರ ಕಲಿಯುತ್ತಿದ್ದಾಗ ಸರ್ಕಾರದ ಅವಕೃಪೆಗೆ ಪಾತ್ರರಾದ ಶ್ರೀಮತಿ ಯಶೋಧರಾ ದಾಸಪ್ಪ ಮತ್ತು ಶ್ರೀ ದೇವನಾಥ್ ಸುಮಾರು ಒಂದು ತಿಂಗಳ ಕಾಲ ಕೊಲ್ಲಾಪುರದಲ್ಲಿ ಸಿಂಗಾರಿಗೌಡರ ಆಶ್ರಯದಲ್ಲಿ ತಲೆಮರೆಸಿಕೊಂಡಿದ್ದರು. ಶ್ರೀ ಟಿ. ಸಿದ್ಧಲಿಂಗಯ್ಯ, ಟಿ. ಮರಿಯಪ್ಪ, ಸಾಹುಕಾರ್ ಚನ್ನಯ್ಯ, ಎಚ್.ಸಿ. ದಾಸಪ್ಪ, ಎಚ್. ಕೆ. ವೀರಣ್ಣಗೌಡ ಇವರೆಲ್ಲಾ ರಾಜಕೀಯ ಸಮಾಲೋಚನೆಗಾಗಿ ಕೃಷ್ಣಪ್ಪಗೌಡರ ಮನೆ ಯಲ್ಲಿ ಆಗಾಗ ಸಮಾವೇಶಗೊಳ್ಳುತ್ತಿದ್ದರು. ಅಂತಹ ಸಮಾಲೋಚನೆಗಳಲ್ಲಿ ಸಿಂಗಾರಿ

ಗೌಡರೂ ಪಾಲುಗೊಳ್ಳುತ್ತಿದ್ದರು. 1947ರಲ್ಲಿ ಭಾರತಕ್ಕೆಲ್ಲ ಸ್ವಾತಂತ್ರ್ಯ ಬಂದರೂ ಮೈಸೂರಿನ ಪ್ರಜೆಗಳಿಗೆ ಅದು ಬರದಿರುವ ಸೂಚನೆಗಳಿದ್ದುವು. ಬ್ರಿಟಿಷರು ತಮ್ಮ ಒಡೆದು ಆಳುವ ನೀತಿಯಂತೆ ಮೈಸೂರಿನ ಮಹಾರಾಜರನ್ನು ಸ್ವಾತಂತ್ರ್ಯದ ವಿರುದ್ಧ ಎತ್ತಿಕಟ್ಟಿದ್ದರು. ಆದುದರಿಂದಾಗಿ ಮಂಡ್ಯಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮ ಅತ್ಯಂತ ಉತ್ಕರ್ಷಸ್ಥಿತಿಯನ್ನೇ ಮುಟ್ಟಿತ್ತು. ಶ್ರೀಯುತರಾದ ಇಂಡುವಾಳು ಹೊನ್ನಯ್ಯ, ಪಿ.ಎಸ್. ಜವರಪ್ಪಗೌಡ, ಅರಕೆರೆ ಪುಟ್ಟೇಗೌಡ ಇವರೆಲ್ಲಾ ಜೈಲಿನಲ್ಲಿದ್ದರು. ಸಿಂಗಾರಿಗೌಡರ ತಂದೆ ಕೃಷ್ಣಪ್ಪಗೌಡರೂ ಜೈಲಿನಲ್ಲಿರುತ್ತಿದ್ದರು. ಆಗ ಮಹಮದ್ ಅಹಮದ್ ಎಂಬುವರು ಜಿಲ್ಲಾಧಿಕಾರಿ. ಸ್ವಾತಂತ್ರ್ಯಯೋಧರನ್ನು ಭೇಟಿ ಮಾಡುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಆದರೆ ಸಿಂಗಾರಿಗೌಡರಿಗೆ ಜೈಲಿಗೆ ಹೋಗಿಬರಲು ಯಾವ ನಿರ್ಬಂಧವೂ ಇರಲಿಲ್ಲ. ಕಡೆಗೆ ಅವರನ್ನೆಲ್ಲಾ ಬೆಂಗಳೂರು ಜೈಲಿಗೆ ವರ್ಗಾಯಿಸಲಾಯಿತು. ಆ ಹೋರಾಟ ಅತ್ಯಂತ ಚಿರಸ್ಮರಣೀಯ. ಸಿಂಗಾರಿಗೌಡರ ಮೇಲೆ ಅಪಾರ ಪ್ರಭಾವವನ್ನು ಬೀರಿದ ಆ ಹೋರಾಟ ಅವರು ರಾಜಕೀಯದತ್ತ ಒಲಿಯುವಂತೆ ಪ್ರೇರಣೆಯನ್ನೂ ಉಂಟುಮಾಡಿತು.

ಕೆ. ವಿ. ಶಂಕರಗೌಡರೊಂದಿಗೆ ಸ್ನೇಹ ಸಿಂಗಾರಿಗೌಡರ ಬದುಕಿನಲ್ಲಿ ಒಂದು ಮಹತ್ತರ ಘಟನೆಯೆಂದು ಹೇಳಬಹುದಾಗಿದೆ. ಅವರೇ ಒಂದು ಕಡೆ ಹೀಗೆ ಹೇಳಿದ್ದಾರೆ "ಹೆಸರು ಕೇಳಿದ್ದು ನನ್ನ ತಂದೆಯವರು ಶಂಕರಗೌಡರ ಮದುವೆಗೆಂದು ಹೊರಟ ದಿನ. ಮುಖತಃ ಅವರನ್ನು ಕಂಡದ್ದು ಮಂಡ್ಯಕ್ಕೆ ವಕೀಲಿ ವೃತ್ತಿಗೆ 1945ರಲ್ಲಿ ಬಂದಾಗ." ಮೈಸೂರಿನಲ್ಲಿ ವಕೀಲಿ ವೃತ್ತಿ ಕಲಿಯುತ್ತಿದ್ದಾಗ ಅವರನ್ನು ಆಗಾಗ ಮಂಡ್ಯದ ಕೋರ್ಟಿಗೆ ಕಳುಹಿಸುತ್ತಿದ್ದರು. ಆಗ ಶಂಕರಗೌಡರು ಹೊಂಬೇಗೌಡರ ಕಛೇರಿಯಲ್ಲಿ ಕಿರಿಯ ವಕೀಲರಾಗಿ ಕೆಲಸಮಾಡುತ್ತಿದ್ದರು. ಆದರೆ ಇಬ್ಬರದೂ ಪರಸ್ಪರ ಭೇಟಿಯೇ ಆಗಲಿಲ್ಲ. ಸಿಂಗಾರಿಗೌಡರು ಮಂಡ್ಯದಲ್ಲಿ ವಕೀಲಿಯನ್ನಾರಂಭಿಸಿದಾಗ ಇಬ್ಬರ ಭೇಟಿಯಾಯಿತು. ಅಂದಿನಿಂದ ಈವರೆಗೂ ಅದು ಪ್ರಾಂಜಲ ಸ್ನೇಹವಾಗಿಯೇ ಉಳಿದುಬಂದಿದೆ.

ಮೈಸೂರು ರಾಜ್ಯಾಂಗ ಸಭೆಗೆ ಮಂಡ್ಯದಿಂದ ಐದು ಮಂದಿ ಸದಸ್ಯರನ್ನು ಆರಿಸಬೇಕಾಗಿತ್ತು. ಅದಕ್ಕಾಗಿ ಕರೆದಿದ್ದ ಸಭೆಗೆ ಸಿಂಗಾರಿಗೌಡರು ಹೋಗಿರಲಿಲ್ಲ. ಅವರಿಗೆ ತಾವೊಬ್ಬ ಅಭ್ಯರ್ಥಿಯಾಗಬೇಕೆಂಬ ಆಸೆಯೇನೂ ಇರಲಿಲ್ಲ. ನ್ಯಾಯಾಲಯದಲ್ಲಿದ್ದ ಅವರನ್ನು ಕೂಡಲೇ ಸಭೆಗೆ ಬರಬೇಕೆಂದು ಶಂಕರಗೌಡರು ಹೇಳಿಕಳಿಸಿದರು. ಗೌಡರೂ ಒಬ್ಬ ಅಭ್ಯರ್ಥಿಯಾದರು. ರಾಜ್ಯಾಂಗ ರಚನಾ ಸಭೆಗೆ ಇಬ್ಬರೂ ಆರಿಸಿ ಬಂದರು. ಮುಂದೆ ಅವರ ಊಟ ವಸತಿ ಇವೆಲ್ಲಾ ಬೆಂಗಳೂರಿನಲ್ಲಿ ಒಂದೇ ಕಡೆ. ಪರಸ್ಪರ ಹತ್ತಿರದಿಂದ ಪರಸ್ಪರ ಅರಿಯಲು ಅವಕಾಶವಾಯಿತು. ಅಂದಿನಿಂದ ಇಂದಿನವರೆಗೂ ಶಂಕರಗೌಡರು ಕೈಗೆತ್ತಿಕೊಳ್ಳುವ ಯಾವುದೇ ರಚನಾತ್ಮಕ ಕೆಲಸಗಳಿಗೆ ಸಿಂಗಾರಿಗೌಡರು

ಹೆಗಲೇರಿಸಿಯಾಗಿದ್ದಾರೆ. ಸಿಂಗಾರಿಗೌಡರು ರಾಜಕೀಯ ರಂಗ ಪ್ರವೇಶಮಾಡಿದ್ದು ಈ ಹಿನ್ನೆಲೆಯಲ್ಲಿ. ಮುಂದೆ ಅವರ ರಾಜಕೀಯ ಚಟುವಟಿಕೆಗಳು ಬೆಳೆಯುತ್ತಾ ಹೋದುವು. ರಾಜಕೀಯ ಒಂದು ಅತ್ಯಂತ ಗೊಂದಲಮಯವಾದ ರಂಗ. ನೇರ ನಿರ್ಧಾರದ ವ್ಯಕ್ತಿಗಳು ಅಲ್ಲಿ ನಿಭಾಯಿಸುವುದು ಕಷ್ಟ. ಚಾಣಕ್ಯನಾದವನು ಮಾತ್ರ ಅಲ್ಲಿ ಬದುಕಬಲ್ಲ. ಆದರೆ ಕೆಲವರು ಯಾವುದೇ ರಂಗದಲ್ಲಿನ ಯಾವುದೇ ಸ್ಥಿತಿಯನ್ನು ಎದುರಿಸುವ ಆತ್ಮಸ್ಥೈರ್ಯವನ್ನು ಹೊಂದಿರುತ್ತಾರೆ. ಅಂತಹ ಸ್ಥಿತಪ್ರಜ್ಞ ರಾಜಕಾರಣಿಗಳಲ್ಲಿ ಸಿಂಗಾರಿಗೌಡರು ಒಬ್ಬರು.

ಮೊದಮೊದಲಿಗೆ ರಾಜಕೀಯ, ವಕೀಲಿ, ಎರಡನ್ನೂ ಸರಿತೂಗಿಸಲು ಸಿಂಗಾರಿಗೌಡರು ಯತ್ನಿಸಿದರು. ಅದು ಸಾಧ್ಯವಾಗಲಿಲ್ಲ. ಕಾರಣ, ಒಂದು ಕಾಲಕ್ಕೆ ಮಹತ್ವ ಕೊಡುವಂಥದು. ಮತ್ತೊಂದು ಕಾಲದ ಬಗೆಗೆ ಪರಿವೇ ಇಲ್ಲದ್ದು. ಇವೆರಡೂ ಕೂಡುವುದುಂಟೆ? ಕಾಲಕ್ರಮದಲ್ಲಿ ಸಿಂಗಾರಿಗೌಡರು ತಮ್ಮ ವಕೀಲಿ ವೃತ್ತಿಯನ್ನು ಬಿಟ್ಟರಾದರೂ ರಾಜಕೀಯವನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಂತೆ ಕಾಣುವುದಿಲ್ಲ. ತಮ್ಮನೂರು ಸೇರಿಕೊಂಡ ಅನಂತರ ಅವರು ಸಂಪೂರ್ಣವಾಗಿ ವ್ಯವಸಾಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆದರೆ ರಾಜಕೀಯದಿಂದಲೂ ದೂರವಿರಲಿಲ್ಲ. 1952ರ ಮಹಾಚುನಾವಣೆಯಲ್ಲಿ ಸಿಂಗಾರಿಗೌಡರು ನಾಗಮಂಗಲ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮೊಟ್ಟಮೊದಲ ಬಾರಿಗೆ ಚುನಾವಣೆಯ ಕಣಕ್ಕಿಳಿದರು.

ರಾಜಕಾರಣಿಗೆ ಆಶ್ವಾಸನೆಗಳನ್ನು ಕೊಡುವ, ಎದುರಾಳಿಯನ್ನು ಬಿಗ್ಗಾ ಮುಗ್ಗಾ ನಿಂದಿಸುವ ಶಕ್ತಿ ಇರಬೇಕು. ಇಂದಿಗೂ ಈ ಮಾತು ಸತ್ಯ. ಸಿಂಗಾರಿಗೌಡರಿಗೆ ಈ ಎರಡೂ ಶಕ್ತಿಗಳು ಇರಲಿಲ್ಲ. ಈಗಲೂ ಇರುವಂತೆ ಕಾಣುವುದಿಲ್ಲ. ಅಲ್ಲದೆ ಆಗ ಅವರ ವಿರುದ್ಧ ಸ್ಪರ್ಧಿಸಿದ್ದವರು ಎಂ. ಶಂಕರಲಿಂಗೇಗೌಡರು. ಅವರು ನಾಗಮಂಗಲ ತಾಲ್ಲೂಕು ಮೈಲಾರ ಪಟ್ಟಣದವರು. ಬಿ.ಎ.ಪದವಿ ಪಡೆದು ಬ್ರಿಟಿಷ್ ಸರ್ಕಾರದ ಉನ್ನತ ಹುದ್ದೆಯಲ್ಲಿದ್ದು ನಿವೃತ್ತರಾಗಿದ್ದವರು. ಬರೋಡ ಮಹಾರಾಜರಿಗೆ ಆರ್ಥಿಕ ಸಲಹೆಗಾರರಾಗಿದ್ದವರು. ಕಾರವಾರ ಬಂದರಿನ ವಿಕಸನಸ್ಥ ಆಯೋಗದ ಸದಸ್ಯರಾಗಿದ್ದವರು. ಈ ಎಲ್ಲಕ್ಕಿಂತ ಮಿಗಿಲಾಗಿ ಶಂಕರಲಿಂಗೇಗೌಡರು ಒಳ್ಳೆಯ ಮಾತುಗಾರರು. ಇದೆಲ್ಲದರ ಪ್ರತಿಫಲ ಚುನಾವಣೆಯಲ್ಲಿ ಸಿಂಗಾರಿಗೌಡರು ಸೋತರು.

ಸಿಂಗಾರಿಗೌಡರ ಒಂದು ಒಳ್ಳೆಯ ಗುಣವೆಂದರೆ ಸೋಲು ಗೆಲವುಗಳನ್ನು ಸ್ಪರ್ಧಾತ್ಮಕವಾಗಿ ತೆಗೆದುಕೊಳ್ಳುವುದು. ಯಾವುದೇ ಕಾರಣಕ್ಕೂ ಚುನಾವಣೆಯ ನಂತರ ಯಾರ ಬಗ್ಗೆಯೂ ದ್ವೇಷ ಸಾಧಿಸದಿರುವುದು. ಪ್ರಾಯಃ ಇಂದಿಗೂ ಅವರು ಅಜಾತಶತ್ರುವಾಗಿ ಉಳಿದಿರುವುದರ ಗುಟ್ಟು ಇದೇ ಎಂದು ಕಾಣುತ್ತದೆ. ತಾವು ಚುನಾವಣೆಯಲ್ಲಿ ಸೋತರೂ ನಗುನಗುತ್ತ ಜನರ ಕೆಲಸ ಮಾಡಿಕೊಟ್ಟರು. ಚುನಾವಣೆಯಾದ ಮರುವರ್ಷವೇ ಶ್ರೀ ಶಂಕರಲಿಂಗೇಗೌಡರು ತೀರಿಕೊಂಡರು. ಮತ್ತೆ 1953ರಲ್ಲಿ

ನಡೆದ ಉಪಚುನಾವಣೆಯಲ್ಲಿ ಶ್ರೀ ಸಿಂಗಾರಿಗೌಡರು ನಾಗಮಂಗಲ ಕ್ಷೇತ್ರದಿಂದ ವಿಧಾನಸಭೆಗೆ ಆರಿಸಿಬಂದರು. ಅವರ ರಾಜಕೀಯ ಜೀವನದಲ್ಲಿ ಈ ಚುನಾವಣೆ ಒಂದು ಮಹತ್ತರವಾದ ಘಟ್ಟವೆಂದು ಹೇಳಬಹುದು.

ಮಂಡ್ಯ ಜಿಲ್ಲೆಯ ರಾಜಕೀಯ ನಾಯಕರಲ್ಲಿ ಶಂಕರಗೌಡರನ್ನು ಬಿಟ್ಟರೆ ಸಿಂಗಾರಿಗೌಡರೇ ಪ್ರಧಾನವಾಗಿ ಕಾಣುತ್ತಾರೆ. ಕೆಲವು ಸಂದರ್ಭಗಳಲ್ಲಿ ಅವರು ಶಂಕರಗೌಡರಿಗಿಂತ ಅತ್ಯಂತ ಭಿನ್ನವಾಗಿ ಕಾಣುವುದೂ ಉಂಟು. ಅವರು ವಿಧಾನಸಭೆಗೆ ಆರಿಸಿ ಬಂದಾಗ ಕೆ. ಹನುಮಂತಯ್ಯನವರ ಮುಖ್ಯಮಂತ್ರಿತ್ವದ ಉತ್ಕರ್ಷೆಯ ಕಾಲ. ಆ ಹೊತ್ತಿಗಾಗಲೇ ಶಂಕರಗೌಡರು ತಮಗೆ ಬಂದ ಮಂತ್ರಿಪದವಿಯನ್ನು ತಿರಸ್ಕರಿಸಿದ್ದರು. ರಾಜಕೀಯಕ್ಕೆ ಬೇಸತ್ತು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡಿದ್ದರೆಂದು ಕಾಣುತ್ತದೆ. ಸಿಂಗಾರಿಗೌಡರು ಹನುಮಂತಯ್ಯ ಅವರ ಆಪ್ತರಲ್ಲೊಬ್ಬರು. ಅವರು ಮನಸ್ಸು ಮಾಡಿದ್ದರೆ ಮಂತ್ರಿಯೂ ಆಗಬಹುದಾಗಿತ್ತು. ಆದರೆ ಗೌಡರು ತಮ್ಮ ಹತ್ತಿರ ಅದಾಗಿ ಬಂದ ಸೇವೆಯನ್ನು ಮಾಡುವ ಸ್ವಭಾವದವರು. ಅಧಿಕಾರದ ಬೆನ್ನುಹತ್ತುವವರಲ್ಲ. ಆದುದರಿಂದ ಅವರು ತಮ್ಮ ಕಾಲವನ್ನೆಲ್ಲಾ ಕ್ಷೇತ್ರದ ಅಭಿವೃದ್ಧಿಗೆ ಉಪಯೋಗಿಸಿದರು.

ಸಿಂಗಾರಿಗೌಡರು ಅಬ್ಬರದ ಮಾತುಗಾರರಲ್ಲ. ಪಂಪನನ್ನು ಕುರಿತು 'ಹಿತಮಿತ ಮೃದು ವಚನಂ' ಎಂಬ ಪಂಪನದೇ ಹೇಳಿಕೆಯೊಂದಿದೆ. ಈ ಮಾತು ಸಿಂಗಾರಿಗೌಡರಿಗೆ ನೂರಕ್ಕೆ ನೂರು ಅನ್ವಯವಾಗುತ್ತದೆ. ನಮ್ಮ ಹಳ್ಳಿಯವರ ಮಾತಿನಲ್ಲಿ ಹೇಳಬಹುದಾದರೆ ಇವರು ಕಡ್ಡಿ ಎರಡು ತುಂಡಾದಂತೆ ಮಾತನಾಡುವವರು. ಇಂಥವರಿಗೆ ರಾಜಕೀಯ ಸರಿಯಾದ ಕ್ಷೇತ್ರವಲ್ಲ ಎಂಬ ಅಭಿಪ್ರಾಯವಿದೆ. ಶಂಕರಗೌಡರಾಗಲಿ ಸಿಂಗಾರಿಗೌಡರಾಗಲಿ ಚುನಾವಣೆಗಳಲ್ಲಿ ಸೋತದ್ದನ್ನು ಕೇಳಿದಾಗ ಈ ಮಾತು ಸತ್ಯ ಅನ್ನಿಸುತ್ತದೆ. ವಿಧಾನಸಭೆಯಲ್ಲಿ ಸಿಂಗಾರಿಗೌಡರು ಅಬ್ಬರದ ಭಾಷಣ ಮಾಡುತ್ತಿರಲಿಲ್ಲ. ಅವರ ಮಾತುಗಳು ರಚನಾತ್ಮಕವಾಗಿರುತ್ತಿದ್ದುವು. ಯಾವುದೇ ಸಂಗತಿಯನ್ನು ಹೃದಯ ತಟ್ಟುವಂತೆ ಸರಳವಾಗಿ ಹೇಳುವ ಗೌಡರ ಮಾತುಗಾರಿಕೆ. ಬರವಣಿಗೆಯ ಕಲೆ ಆಶ್ಚರ್ಯಕರವಾದುವು. ಎಂಥದೇ ಗಹನ ವಿಷಯವನ್ನು ವಿವರಿಸಲು ಅವರಿಗೆ ಭಾಷೆಯ ತೊಡಕು ಉಂಟಾಗುವುದಿಲ್ಲ. ಸರಳವಾದ ಕನ್ನಡದಲ್ಲಿ ಸ್ಫುಟವಾಗಿ ಹೇಳುತ್ತಾರೆ. ಕನ್ನಡ ಆಡಳಿತ ಭಾಷೆಯಾಗಬಲ್ಲುದೆ? ಅಸೆಂಬ್ಲಿಯ ಭಾಷೆಯಾಗಬಲ್ಲುದೆ? ಎಂಬುದಕ್ಕೆ ಸಿಂಗಾರಿಗೌಡರೇ ಜೀವಂತ ಸಾಕ್ಷಿಯಾಗಿದ್ದಾರೆ. ಯಾವನಿಗೆ ತನ್ನ ಮಾತೃಭಾಷೆಯ ಮೇಲೆ ಪ್ರಭುತ್ವವಿರುತ್ತದೆಯೋ ಅವನು ಮಾತ್ರ ಸೃಜನಶೀಲ ಸಲಹೆಗಳನ್ನು ಕೊಡಬಲ್ಲ. ವಿಧಾನಸಭೆಯಲ್ಲಿನ ಗೌಡರ ಸಲಹೆಗಳು ಅಂತಹ ಸೃಜನಶೀಲವಾದಂಥವು.

ರಾಜಕೀಯ ಒಂದು ಚದುರಂಗದಾಟವಿದ್ದಂತೆ. ಅದರ ಜಯಾಪಜಯಗಳು ಅನಿಶ್ಚಿತ. ಸಿಂಗಾರಿಗೌಡರು ಮೊದಲಿನಿಂದಲೂ ಸದ್ದುಗದ್ದಲವಿಲ್ಲದೆ ಕೆಲಸಮಾಡಿದವರು.

ವಿಶೇಷವಾಗಿ ಹಳ್ಳಿಗಳಲ್ಲಿ ಅಭಿವೃದ್ಧಿಯಾಗಬೇಕೆಂದು ನಂಬಿದವರು. ವಿಧಾನಸೌಧ, ಮಂತ್ರಿಗಿರಿ, ಶಾಸಕರ ಭವನ್ ಕಾರು ಇತ್ಯಾದಿ ಸವಲತ್ತುಗಳಿಗೆ ತಮ್ಮನ್ನು ಮಾರಿಕೊಂಡವರಲ್ಲ. 1960ರಲ್ಲಿ ತಾಲ್ಲೂಕು ಬೋರ್ಡು ಆಡಳಿತ ವ್ಯವಸ್ಥೆ ಬಂದಾಗ ಸಿಂಗಾರಿಗೌಡರು ನಾಗಮಂಗಲ ತಾಲ್ಲೂಕು ಬೋರ್ಡ್ ಅಧ್ಯಕ್ಷರಾದರು. ನಾಗಮಂಗಲ ತಾಲ್ಲೂಕು ಪ್ರಾಕೃತಿಕವಾಗಿ ಬಡಪ್ರದೇಶ. ಮೋಡದ ಮಳೆಯನ್ನೇ ಅವಲಂಬಿಸಿದ ಮಣ್ಣು. ಅಲ್ಲಿನ ಸಮಸ್ಯೆಗಳು ಅನೇಕ. ಸಿಂಗಾರಿಗೌಡರು ಎಂಟು ವರ್ಷಗಳ ಕಾಲ ತಾಲ್ಲೂಕು ಬೋರ್ಡ್‌ನಲ್ಲಿದ್ದು ಸೇವೆಸಲ್ಲಿಸಿದರು. ಇಂದಿನ ನಾಗಮಂಗಲ ತಾಲ್ಲೂಕಿನ ಅನೇಕ ಅಭಿವೃದ್ಧಿ ಕೆಲಸಗಳು ಅವರ ಶ್ರಮದ ಫಲ. ಅವರು ಅನೇಕ ತಾಲ್ಲೂಕು ಬೋರ್ಡ್ ಪ್ರೌಢಶಾಲೆಗಳನ್ನು ಆರಂಭಿಸಿದರು. ಹಳ್ಳಿ ಹಳ್ಳಿಗಳಿಗೆ ರಸ್ತೆಗಳನ್ನು ಮಾಡಿಸಿದರು. ಸಣ್ಣಪುಟ್ಟ ಕಟ್ಟೆಗಳನ್ನು ನಿರ್ಮಿಸುವವರಿಗೆ ನೆರವು ಕೊಡಿಸುವುದರ ಮೂಲಕ ವ್ಯವಸಾಯದ ಅಭಿವೃದ್ಧಿಗೆ ಕಾರಣರಾದರು. ಎಲ್ಲರೊಂದಿಗೂ ಸರಳ ಸೌಜನ್ಯತೆಯಿಂದ ಹೊಂದಿಕೊಳ್ಳುವ ಗೌಡರು ತಮ್ಮ ರಾಜಕೀಯ ಜೀವನದ ಮಹತ್ಸಾಧನೆಯಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಕಾರ್ಯ ನಿರ್ವಹಿಸಿದರು.

ಮತ್ತೆ ಅವರು ವಿಧಾನ ಸಭೆಗೆ ಆರಿಸಿ ಬಂದರು. ರಾಷ್ಟ್ರದ ರಾಜಕೀಯ ಕ್ಷಿಪ್ರ ಬದಲಾವಣೆಯನ್ನು ಕಂಡಿತು. ಕಾಂಗ್ರೆಸ್ ವಿಭಜನೆಯಾಯಿತು. ಸಿಂಗಾರಿಗೌಡರು ತಮ್ಮ ಮಿತ್ರರಾದ ಶಂಕರಗೌಡರೊಂದಿಗೆ ಸುಮ್ಮನೆ ಇದ್ದು ಬಿಟ್ಟರು. ಅವರು ಜಿಲ್ಲಾ ರಾಜಕೀಯ ಸಮಿತಿಗಳ ಅಧ್ಯಕ್ಷರಾಗಿ. ರಾಜ್ಯ ಸಮಿತಿಗಳ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ. ಬೆಂಗಳೂರಿನ ವ್ಯವಸಾಯ ವಿಶ್ವವಿದ್ಯಾನಿಲಯದ ಆಡಳಿತ ಮಂಡಲಿಯ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ. ಮುಂದೆ ಕಾಂಗ್ರೆಸ್‌ನ ಒಂದು ಗುಂಪು ಜನತಾ ಪಕ್ಷವಾದಾಗ ಸಿಂಗಾರಿಗೌಡರೂ ಜನತಾದತ್ತ ಬಂದರು. 1977ರಲ್ಲಿ ಕೇಂದ್ರ ಮತ್ತು ಉತ್ತರದ ಬಹುತೇಕ ರಾಜ್ಯಗಳಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದಿತು. ಮೊಟ್ಟಮೊದಲಿಗೆ ಕಾಂಗ್ರೆಸ್ಸೇತರ ಸರ್ಕಾರವೊಂದನ್ನು ಕೇಂದ್ರದಲ್ಲಿ ತಂದು ಅದರ ಫಲವನ್ನು ಜನ ನಿರೀಕ್ಷಿಸುತ್ತಿದ್ದರು. ಆದರೆ ನಮ್ಮ ರಾಷ್ಟ್ರೀಯ ನಾಯಕರ ಕಿತ್ತಾಟ ಮತ್ತು ಕೆಲವು ಪಟ್ಟಭದ್ರಹಿತಾಸಕ್ತರ ಕೈವಾಡದಿಂದಾಗಿ ಜನತಾ ಪಕ್ಷ ಕುಸಿಯಿತು. ಸಿಂಗಾರಿಗೌಡರು ಸಂಸ್ಥಾ ಕಾಂಗ್ರೆಸ್ ಮತ್ತು ಜನತಾ ಪಕ್ಷಗಳ ಜಿಲ್ಲಾ ಅಧ್ಯಕ್ಷರಾಗಿಯೂ ತಮ್ಮ ಸೇವೆಯನ್ನು ಸಲ್ಲಿಸಿದರು.

ಒಮ್ಮೆದಾರಿ ತಪ್ಪಿದ ಯಾವುದೇ ಆಗಲಿ ಮತ್ತೆ ಸರಿದಾರಿಗೆ ಬರಲು ಕಾಲ ಬೇಕಾಗುತ್ತದೆ. ಇದರ ಜೊತೆಗೆ ರಾಜಕೀಯದಲ್ಲಿ ಹೊಸ ಶಕ್ತಿಗಳ ಉದಯ. ರಾತ್ರಿ ಬೆಳಗಾಗುವುದರಲ್ಲಿ ನಾಯಿ ಕೊಡೆಗಳಂತೆ ಜನನಾಯಕರು ಹುಟ್ಟಿಕೊಂಡರು. ಜಾತಿ ವಂಗಡಗಳ ನಡುವೆ ಜಗಳ ಹಚ್ಚಿ ರಾಜಕೀಯಬೇಳೆ ಬೇಯಿಸುವ ಪರಿಪಾಠ ಬೆಳೆಯಿತು. ಹಳಬರನ್ನು ಸಂಪ್ರದಾಯವಾದಿಗಳು ಮಂದಗಾಮಿಗಳೆಂದು ಹೀಯಾಳಿಸ

ಲಾಯಿತು. ಇಂತಹ ಪರಿಸ್ಥಿತಿಯಲ್ಲಿ ತೆಪ್ಪಗಿರುವುದೇ ಮೇಲೆಂದು ನಿರ್ಧರಿಸಿದ ಸಿಂಗಾರಿ ಗೌಡರು ತಮ್ಮ ಹಳ್ಳಿಗೆ ಹಿಂತಿರುಗಿ ವ್ಯವಸಾಯ ಮಗ್ನರಾದರು.

ರಾಜಕೀಯದಿಂದ ದೂರ ಸರಿದರೂ ಸೇವಾ ಕೆಲಸಗಳಿಂದ ಅವರು ದೂರ ಸರಿಯಲಿಲ್ಲ. ನಾಗಮಂಗಲದಲ್ಲಿ ಮಾದರಿ ವಿದ್ಯಾಸಂಸ್ಥೆಯೊಂದನ್ನು ಸ್ಥಾಪಿಸಿ ಅದರ ಆಶ್ರಯದಲ್ಲಿ ಹೆಣ್ಣು ಮಕ್ಕಳ ಶಾಲೆ ನಡೆಸುತ್ತಿದ್ದರು. ಶ್ರೀ ಆದಿ ಚುಂಚನಗಿರಿ ಶಿಕ್ಷಣ ಟ್ರಸ್ಟಿನ ಸದಸ್ಯರಾಗಿ ಶ್ರೀ ಮಠದ ಶೈಕ್ಷಣಿಕ ಚಟುವಟಿಕೆಗಳಲ್ಲಿ ಪಾಲುಗೊಳ್ಳು ತ್ತಿದ್ದರು. ಮಂಡ್ಯದ ಜನತಾ ಶಿಕ್ಷಣ ಸಂಸ್ಥೆಯ ಸದಸ್ಯರಾಗಿದ್ದರು. ಇವುಗಳಿಂದ ಬಿಡುವು ದೊರೆತಾಗ ಓದುವುದರಲ್ಲಿ ವ್ಯಮಗ್ನರಾಗುತ್ತಿದ್ದರು.

ಕರ್ನಾಟಕದಲ್ಲಿ ದೇವರಾಜ್ ಅರಸ್ ಮುಖ್ಯಮಂತ್ರಿತ್ವದ ಕೊನೆಯ ದಿನಗಳಲ್ಲಿ ಸರ್ಕಾರವು ಕನ್ನಡ ಭಾಷೆಯೊಂದೇ ಏಕೈಕ ಪ್ರಥಮ ಭಾಷೆಯೆಂದು ತಳೆದ ನಿಲುವು ಅನೇಕ ಶೈಕ್ಷಣಿಕ ಮತ್ತು ರಾಜಕೀಯ ಬೆಳವಣಿಗೆಗೆ ಕಾರಣವಾಯಿತು. ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಓದಿದ ವಿದ್ಯಾರ್ಥಿಗಳು ಅಲ್ಲಿ ದೊರೆಯುವ ಧಾರಾಳ ಅಂಕಗಳಿಂದ ರ್‍ಯಾಂಕ್ ಗಿಟ್ಟಿಸುತ್ತಿದ್ದ ಗುಟ್ಟು ರಟ್ಟಾದಾಗ ಸರ್ಕಾರ ಸಂಸ್ಕೃತವನ್ನು ಪ್ರಥಮ ಭಾಷೆಯ ಸ್ಥಾನದಿಂದ ತೆಗೆದುಹಾಕಿತು. ಅನಂತರ ಬಂದ ಗುಂಡೂರಾವ್ ಸರ್ಕಾರ ಈ ಬಗ್ಗೆ ವಿ. ಕೃ. ಗೋಕಾಕ್ ಸಮಿತಿಯನ್ನು ನೇಮಿಸಿತು. ಈ ಸಮಿತಿ ಕನ್ನಡವೇ ಏಕೈಕ ಪ್ರಥಮ ಭಾಷೆಯಾಗಬೇಕೆಂದು ಶಿಫಾರಸು ಮಾಡಿತು. ಆದರೆ ಮತ್ತೆ ಪಟ್ಟಭದ್ರ ಹಿತಾಸಕ್ತಿಗಳು ತಲೆಯೆತ್ತಿ ಆ ವರದಿ ಅನುಷ್ಠಾನಕ್ಕೆ ಬರದಂತೆ ತಡೆದವು. ಇದರಿಂದ ಕುಪಿತಗೊಂಡ ಜನತೆ ಕಾಂಗ್ರೆಸ್ ಐ ಹಾಗೂ ಗುಂಡುರಾವ್ ಸರ್ಕಾರವನ್ನು ಕಿತ್ತೊಗೆದು ಗೋಕಾಕ್ ವರದಿಗೆ ಬೆಂಬಲ ಸೂಚಿಸಿದ್ದ ಜನತಾಪಕ್ಷವನ್ನು ಅಧಿಕಾರಕ್ಕೆ ತಂದಿತು.

ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಜನತಾ ಸರ್ಕಾರ ಭಾಷೆಗೆ ಸಂಬಂಧಿಸಿದಂತೆ ಜನತೆಯ ಆಶೋತ್ತರಗಳನ್ನು ಈಡೇರಿಸುವುದರಲ್ಲಿ ವಿಫಲವಾದರೂ ಕೆಲವು ಒಳ್ಳೆಯ ಕೆಲಸಗಳನ್ನು ಮಾಡಿತು. ಅದರಲ್ಲಿ ಪಂಚಾಯಿತಿ ರಾಜ್ ಆಡಳಿತ ವ್ಯವಸ್ಥೆ ಒಂದು. ಈ ಪದ್ಧತಿ ಗಂಗರ ಕಾಲದಲ್ಲಿಯೇ ಕರ್ನಾಟಕದಲ್ಲಿದ್ದಿತು. ಆಡಳಿತ ಗ್ರಾಮದಿಂದ ರಾಜ ಧಾನಿಯವರೆಗೆ ಆಯಾ ಸ್ಥಳೀಯರ ಕೈಯಲ್ಲಿ ಇರುವ ಪದ್ಧತಿ ಇದು. ರಾಜನದೇನಿ ದ್ದರೂ ಮೇಲುಸ್ತುವಾರಿ ; ಆಧುನಿಕ ಪಂಚಾಯತ್ ರಾಜ್ಯ ವ್ಯವಸ್ಥೆಯಲ್ಲಿ ಸರ್ಕಾರದ್ದು ಮೇಲುಸ್ತುವಾರಿ. ಈ ಪದ್ಧತಿಯ ಜಯಾಪಜಯಗಳು ಅಧಿಕಾರ ಹಿಡಿದಿರುವವರ ಕೈಯಲ್ಲಿವೆ. ಈ ಜಿಲ್ಲಾ ಪರಿಷತ್ತಿಗೆ ಚುನಾವಣೆ ನಡೆಯುವಾಗಲೇ ಜಿಲ್ಲಾ ಪರಿಷತ್ ಅಧ್ಯಕ್ಷರು ಯಾರು ಯಾರು ? ಎಂದೆಲ್ಲಾ ವಿವಾದಗಳು ಹುಟ್ಟಿಕೊಂಡವು. ಇಂಥ ಸಮಯದಲ್ಲಿ ಶ್ರೀ ಶಂಕರಗೌಡರು ಮತ್ತು ಶ್ರೀ ಎಚ್. ಟಿ. ಕೃಷ್ಣಪ್ಪ ಅವರು ಸಿಂಗಾರಿ ಗೌಡರು ರಾಜಕೀಯ ಮರುಪ್ರವೇಶ ಮಾಡುವಂತೆ ಮನವೊಲಿಸಿ ಯಶಸ್ವಿಯಾದರು

ಗೌಡರು ಚುನಾವಣೆಯಲ್ಲಿ ಜಯಗಳಿಸಿದರಷ್ಟೇ ಅಲ್ಲ ಮಂಡ್ಯ ಜಿಲ್ಲಾಪರಿಷತ್ತಿನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯೂ ಆದರು.

ಸಿಂಗಾರಿಗೌಡರು ಮಂಡ್ಯ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿ ಒಂದು ವರ್ಷ ಮುಗಿದಿದೆ. ಮಂಡ್ಯ ಜಿಲ್ಲೆಯಲ್ಲಿ ತಾತ್ವಿಕ ರಾಜಕೀಯ ವಿವಿಧ ಬಣಗಳು, ಅಭಿಪ್ರಾಯಗಳೂ ಇರುವುದು ನಿಜ. ಆದರೆ ವೈಯಕ್ತಿಕವಾಗಿ ಎಲ್ಲರೂ ಸಿಂಗಾರಿಗೌಡರೊಂದಿಗೆ ಸ್ನೇಹದಿಂದಿರುತ್ತಾರೆ. ಅಲ್ಲಿ ರಾಜಕೀಯ ಸೇಡಿಗೆ ಅವಕಾಶವಿಲ್ಲ. ಗೌಡರು ಹಿರಿಯ ರಾಜಕಾರಿಣಿ, ಅನುಭವಿ, ಆದುದರಿಂದಲೇ ಕರ್ನಾಟಕದ ಈ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಅರಿಯಲು, ಅಧ್ಯಯನ ಮಾಡಲು ಬರುವ ಹೊರ ರಾಜ್ಯದವರನ್ನು, ವಿದೇಶಿಯರನ್ನು ಮಂಡ್ಯ ಜಿಲ್ಲಾ ಪರಿಷತ್ತಿಗೆ ಸರ್ಕಾರ ಕಳಿಸುತ್ತದೆ. ಕಾರಣ ಅದರ ಅಧ್ಯಕ್ಷ ಸಿಂಗಾರಿಗೌಡರು. ಈ ಒಂದು ವರ್ಷದಲ್ಲಿ ತೀವ್ರ ಹಣಕಾಸಿನ ಪರಿಸ್ಥಿತಿಯನ್ನು ಎದುರಿಸಿದರೂ ಮಂಡ್ಯ ಜಿಲ್ಲಾ ಪರಿಷತ್ತು ಸಾಕಷ್ಟು ಕೆಲಸ ಮಾಡುತ್ತಿದೆಯೆಂದು ಹೇಳಬಹುದು. ಅದರ ನೇತಾರರಾಗಿ ಸಿಂಗಾರಿಗೌಡರು ಈ ಪರಿಷತ್ತಿಗೊಂದು ಘನತೆಯನ್ನು ತಂದುಕೊಟ್ಟಿದ್ದಾರೆಯೆಂಬುದರಲ್ಲಿ ಎರಡನೆಯ ಮಾತಿಲ್ಲ.

೧೨. ಸ್ಮರಣೀಯ ಹಿರಿಕಿರಿಯರು

ಯಾವನೇ ಒಬ್ಬ ವ್ಯಕ್ತಿಯ ಜೀವನ ರೂಪಿತವಾಗುವಲ್ಲಿ ಹಲವಾರು ವ್ಯಕ್ತಿಗಳ ಮತ್ತು ಶಕ್ತಿಗಳ ನೆರವು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಒದಗಿಬರುತ್ತದೆ. ಒಂದು ಕಲ್ಲು ಮೂರ್ತಿಯಾಗಲು ಉಳಿಯ ಅನೇಕ ಹೊಡೆತಗಳು ಹೇಗೋ ಹಾಗೇ ಜೀವನ ಕೂಡ ಎಂದು ಹಿರಿಯರು ಹೇಳಿದ್ದಾರೆ. ಶ್ರೀ ರಾಮಕೃಷ್ಣ ಪರಮಹಂಸರ ಭೇಟಿ ನರೇಂದ್ರನ ಬದುಕಿಗೆ ಒಂದು ಹೊಸ ತಿರುವನ್ನು ನೀಡಿ ಸ್ವಾಮಿ ವಿವೇಕಾನಂದನನ್ನಾಗಿಸಿ ಲೋಕಪ್ರಸಿದ್ಧಿಗೊಳಿಸಿತು. ಇದು ರಾಮಕೃಷ್ಣರ ಜೀವನಕ್ಕೂ ಒಂದು ತಿರುವೇ. ಹೀಗೆ ಯಾವನೇ ವ್ಯಕ್ತಿಯ ಬದುಕು ಮತ್ತೊಂದು ವ್ಯಕ್ತಿಯ ಪ್ರವೇಶದಿಂದ ಉತ್ತಮವಾಗಲೂ ಬಹುದು ಕೆಡಲೂ ಬಹುದು. ಶ್ರೀ ಕೆ. ಸಿಂಗಾರಿಗೌಡರ ಜೀವನದ ಮಾರ್ಗದಲ್ಲಿ ಬರುವ ಅನೇಕ ಹಿರಿಕಿರಿಯರು ಅವರ ಜೀವನದ ಗತಿ ಬದಲಾಗಲು ಕಾರಣವಾಗಿರುವುದನ್ನು ಕಾಣಬಹುದು.

ಚಿಕ್ಕಯಗಟಿಯ ದಫೇದಾರ ನರಸಪ್ಪ ಮತ್ತು ಅವರ ಪತ್ನಿ ಕೆಂಪಮ್ಮ ಗೌಡರ ಬದುಕಿನ ದಾರಿಯಲ್ಲಿ ಸಹಾಯಕ್ಕೆ ಬಂದ ಮೊದಲಿಗರು. ತಾಯಿ ನಿಂಗಮ್ಮನವರ ಹಿರಿಮೆಯನ್ನು ಕಂಡಿದ್ದ ಕೆಂಪಮ್ಮ ಬಾಲಕ ಸಿಂಗಾರಿಗೌಡರನ್ನು ತಮ್ಮ ಮಗನಂತೆ ಕಂಡು ಆಶ್ವಾಸಿಸದಿದ್ದರೆ ಅವರ ಓದು ಮಂಡಿಗನಹಳ್ಳಿಗೇ ಮುಗಿಯುತ್ತಿತ್ತೇನೋ ? ತಾಯಿಯಿಲ್ಲದ ಮಗುವೆಂಬ ಮಮತೆಯ ಸುಳಿಯಲ್ಲಿ ಯಾರೂ ಅವರನ್ನು ಹೊಡೆದು, ಬಡಿದು ಗದರಿಸಿ ಶಾಲೆಗೆ ಕಳಿಸುತ್ತಿರಲಿಲ್ಲ. ಅಲ್ಲದೆ ಆಗಿನ ಕಾಲದ ವ್ಯವಸಾಯಗಾರರ ಮನೆಯಲ್ಲಿ ಇವನು ಓದಿ ಏನು ಅಮಲ್ದಾರನಾಗಬೇಕೆ ? ಎಂಬಂಥ ಧೋರಣೆಯೇ ಹೆಚ್ಚು. ಆದುದರಿಂದ ಈ ದಫೇದಾರ ದಂಪತಿಗಳು ಗೌಡರ ಜೀವನದ ಅಡಿಗಲ್ಲನ್ನಿಟ್ಟವರು ಎಂದರೆ ತಪ್ಪಾಗುವುದಿಲ್ಲ.

ಕೃಷ್ಣರಾಜಪೇಟೆಯಲ್ಲಿ ಚಿನ್ನಸ್ವಾಮಿಯವರು ಮತ್ತು ಅವರ ಪತ್ನಿ, ಚಿಕ್ಕಳಲಿ ವೀರಣ್ಣಗೌಡರು ಮತ್ತು ಮಿತ್ರ ಶಂಕರಪ್ಪ ಇವರ ಜೀವನದ ಮೇಲೆ ಪ್ರಭಾವ ಬೀರಿದರು. ಚಿನ್ನಸ್ವಾಮಿ ದಂಪತಿಗಳು ಗೌಡರನ್ನು ಮಗನಂತೆ ಕಂಡರು. ಶ್ರೀಮತಿ ಚಿನ್ನಸ್ವಾಮಿಯವರು ಬಾಲಕ ಸಿಂಗಾರಿಗೌಡರ ತಲೆ ಬಾಚಿ ಹೂ ಮುಡಿಸಿ ಶಾಲೆಗೆ ಕಳಿಸುತ್ತಿದ್ದರಂತೆ. ತಾಯಿಯಿಲ್ಲದೆ, ತಂದೆ ಮತ್ತು ಮನೆಯಿಂದ ದೂರವಿದ್ದ ಒಂದು ಎಳೆಯ ಜೀವಕ್ಕೆ ಇದು ಎಂತಹ ಮಧುರವಾದ ವಾತ್ಸಲ್ಯ. ಇಂತಹ ಪ್ರೀತಿ

ವಾತ್ಸಲ್ಯಗಳು ಕೊರಡನ್ನೂ ಕೊನರಿಸಬಲ್ಲವು. ಚಿಕ್ಕಳಲೆ ವೀರಣ್ಣಗೌಡರದಂತೂ ಪ್ರೀತಿಯ ಅಣ್ಣನ ವಾತ್ಸಲ್ಯ. ಬೆಳಗಿನ ನಿತ್ಯಕರ್ಮಗಳಿಂದ ರಾತ್ರಿಯ ವ್ಯಾಸಂಗದ ವರೆಗೆ ಅವರು ವಹಿಸಿದ ಆಸಕ್ತಿ ಅಪೂರ್ವವಾದುದು. ಪ್ರತಿಫಲಾಪೇಕ್ಷೆಯಿಲ್ಲದ್ದು. ಗೆಳೆಯ ಶಂಕರಪ್ಪ ಸ್ನೇಹದ ಅಮೃತವನ್ನು ಹರಿಸಿದವನು. ಆ ಬಾಲಕ ಹೃದಯದ ಮೇಲೆ ಇವರೆಲ್ಲಾ ಬೀರಿದ ಪ್ರಭಾವ ಶರತ್‌ರಾತ್ರಿಯ ಬೆಳದಿಂಗಳಂತಹುದು.

ಶ್ರೀ ರಂಗಣ್ಣನವರು ಸಿಂಗಾರಿಗೌಡರ ಬದುಕಿನಲ್ಲಿ ಪ್ರವೇಶಿಸಿದ ಮತ್ತೊಬ್ಬ ಮಹಾನ್ ವ್ಯಕ್ತಿ. ಮಹಾರಾಜಾ ಪ್ರೌಢಶಾಲೆಯಲ್ಲಿ ಮಿತ್ರರೊಡಗೂಡಿ ತರಗತಿಗೆ ಚಕ್ಕರ್ ಹೊಡೆದು ರೈಲುಹಳಿಯ ಪಕ್ಕದಲ್ಲಿ ಇಸ್ಪೀಟು ಆರಂಭಿಸಿ ಅಧೋಗತಿಯತ್ತ ಸಾಗಿದ್ದ ಸಿಂಗಾರಿಗೌಡರ ಬದುಕನ್ನು ಗರುಡನಂತೆ ಬಂದೆತ್ತಿದವರು ರಂಗಣ್ಣನವರು. ಆಗ ಅವರು ಬನುಮಯ್ಯ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ದಾರಿ ತಪ್ಪುತ್ತಿದ್ದ ಹುಡುಗನನ್ನು ಆತ್ಮೀಯತೆಯ ವಲಯಕ್ಕೆ ಕರೆದು ಪ್ರೀತಿಯಿಂದ ಬುದ್ಧಿ ಹೇಳಿ ಆತನೇ ತಾನು ಹಿಡಿದ ಮಾರ್ಗ ಬಿಡುವಂತೆ ಮಾಡಿದವರು. ತಪ್ಪು ಮಾಡಿದವ ನೆಂದು ನಿಂದಿಸದೆ ಉತ್ತೇಜಿಸಿ, ಆತ ವಿದ್ಯಾರ್ಥಿ ನಾಯಕನಾಗಿ ರೂಪುಗೊಳ್ಳುವಂತೆ ಮಾಡಿದವರು. ಪ್ರಾಯಃ ರಂಗಣ್ಣನವರೂ ಮಹಾರಾಜ ಪ್ರೌಢಶಾಲೆಯ ಮುಖ್ಯೋ ಪಾಧ್ಯಾಯರಂತೆ ಬಾಯಿಗೆ ಬಂದಂತೆ ಬಯ್ದಿದ್ದರೆ ಗೌಡರ ಜೀವನ ಪಥ ಮತ್ತೆ ಯಾವ ಕಡೆ ತಿರುಗುತ್ತಿತ್ತೊ ಹೇಳಬಲ್ಲವರಾರು ? ಆದರೆ ರಂಗಣ್ಣನವರ ಹೃದಯವಂತಿಕೆ, ಮಾರ್ದವತೆ ಆ ಬಾಲಕನ ಉನ್ನತಿಗೆ ಕಾರಣವಾಯಿತು.

ಯುವರಾಜ ಕಾಲೇಜಿನ ಪ್ರಿನ್ಸಿಪಾಲ್ ನಾಗೇಶರಾಯರು ಮತ್ತು ಪ್ರೊ. ತ. ಸು. ವೆಂಕಣ್ಣಯ್ಯನವರು ಸಿಂಗಾರಿಗೌಡರ ಜೀವನದಲ್ಲಿ ಕಾಣಿಸಿಕೊಂಡ ಅಪೂರ್ವ ಶಕ್ತಿಗಳು. ಅಧಿಕಾರಿಗಳ ಉನ್ನತ ವರ್ಗದ ಮನೆಯ ಮಕ್ಕಳು ಮಾತ್ರ ನಾಯಕ ರಾಗಲು, ಗೌರವಾನ್ವಿತರಾಗಲು ಸಾಧ್ಯವಿದ್ದ ಕಾಲ ಅದು. ಅಂತಹ ದಿನಗಳಲ್ಲಿ ಹಳ್ಳಿಯ ಹುಡುಗನೊಬ್ಬನ ಶಕ್ತಿಯನ್ನು ಗುರುತಿಸಿ ಅವನನ್ನು ವಿದ್ಯಾರ್ಥಿ ಸಂಘದ ಪದಾಧಿಕಾರಿ ಸ್ಥಾನಕ್ಕೆ ನೇಮಿಸಿದ್ದು ನಾಗೇಶರಾಯರ ದೊಡ್ಡತನವೆನ್ನಬೇಕು. ಅದೇ ಸಂದರ್ಭದಲ್ಲಿ ಗೌಡರನ್ನು ವಿಶ್ವವಿದ್ಯಾನಿಲಯದ ಕರ್ನಾಟಕ ಸಂಘದ ಸಹಕಾರ್ಯದರ್ಶಿ ಯಾಗಿ ನೇಮಿಸಿದವರು ಪ್ರೊ. ತ. ಸು. ವೆಂಕಣ್ಣಯ್ಯನವರು. ಈ ಎರಡೂ ಸ್ಥಾನ ಗಳು ಸಿಂಗಾರಿಗೌಡರ ಬದುಕಿಗೆ ಪ್ರತಿಷ್ಠೆಯನ್ನು ತಂದುಕೊಟ್ಟಂತಹವು.

ಶ್ರೀ ಸುಬ್ರಮಣ್ಯರಾಜೇ ಅರಸ್ ಈಗ ಚದುರಂಗ ಎಂಬ ಹೆಸರಿಂದ ಪ್ರಸಿದ್ಧ ರಾಗಿರುವ ಕನ್ನಡ ಲೇಖಕರು. ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಸಂಘ, ವಯಸ್ಕರ ಶಿಕ್ಷಣ ಯೋಜನೆಯನ್ನು ಆರಂಭಿಸಿ ಸಿಂಗಾರಿಗೌಡರನ್ನು ಸಂಚಾಲಕರಾಗಿ ನೇಮಿಸಿದಾಗ ಗೌಡರ ನೆರವಿಗೆ ನಿಂತ ಮಿತ್ರರು. ಸುಬ್ರಮ್ಮಣ್ಯರಾಜೇ ಅರಸ್ ಅವರು ಅರಸು ಮನೆ

ಬಲ್ಲವರು. ಅದಾಯಿಗೆ ಪತ್ರಿಕೆಯವರು. ಆಗಿನ ಕಾಲದಲ್ಲಿ ಅವರಿಗೆ ಸಮಾಜದಲ್ಲಿ ಉನ್ನತವಾದ ಸ್ಥಾನಮಾನಗಳಿರುತ್ತಿದ್ದುವು. ಅವರ ಸಂಪರ್ಕ ಬಹುಮಂದಿಗಳಿಗಿದ್ದರೂ ಶ್ರೀಮಂತರು ಮತ್ತು ಮೇಲ್ವರ್ಗದವರೊಂದಿಗೆ ಮಾತ್ರ. ಅಂತಹವರು ಸಿಂಗಾರಿ ಗೌಡರೊಂದಿಗೆ ಪುರಸ್ಕೃತ ಶಿಕ್ಷಣದ ಕಾರ್ಯಗಳಿಗೆ ಹಣ ಸಂಗ್ರಹಿಸುವ ಕಾರ್ಯದಲ್ಲಿ ಜೊತೆಗೂಡುವರು. ಇಂತಹ ಉದಾರಿಗಳು ಗ್ರಾಮ್ಯ ಜನರ ಕುರಿತು ಬರೆಯುವ ಗ್ರಂಥ ಲೇಖಕರಿಗೂ ಪ್ರೋತ್ಸಾಹದಲ್ಲಿ ಇವರನ್ನು ಕಾರಣರೆಂದು ತೋರುತ್ತದೆ. ಪ್ರೊ. ಅರಸ್ ಸಿಂಗಾರಿಗೌಡರ ವಿದ್ಯಾರ್ಥಿ ಜೀವನದ ಒಬ್ಬ ಅಪೂರ್ವ ಮಿತ್ರರು. ಈ ಮಿತ್ರದ್ವಯರನ್ನು. ಅವರ ಕೆಲಸವನ್ನು ಮೆಚ್ಚಿ ತಮ್ಮಲ್ಲಿಗೆ ಕರೆದು ವಿಶ್ವವಿದ್ಯಾನಿಲಯದ ಪರವಾಗಿ ಐದು ಸಾವಿರ ರೂಪಾಯಿಗಳನ್ನು ಪಡೆದವರು ಆಗಿನ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಎನ್. ಎಸ್. ಸುಬ್ಬರಾಯರು. ನಿಸ್ವಾರ್ಥಸೇವೆಗೆ ಯಾವ ಮೂಲಧನವಾದರೂ ಸಹಾಯ ಒದಗುತ್ತದೆಂಬುದನ್ನು ಗೌಡರಿಗೆ ಮನದಟ್ಟು ಮಾಡಿದವರು ಕುಲಪತಿ ಸುಬ್ಬರಾಯರು.

ಪ್ರೊ. ಕೆ. ಜಿ. ಕುಂದಣಗಾರ್ ಕೊಲ್ಹಾಪುರದ ರಾಜಾರಾಮ ಕಾಲೇಜಿನ ಕನ್ನಡ ಪ್ರಾಧ್ಯಾಪಕರು. ಸಿಂಗಾರಿಗೌಡರು ತಮ್ಮ ನ್ಯಾಯಶಾಸ್ತ್ರ ಅಧ್ಯಯನಕ್ಕೆ ಕೊಲ್ಹಾಪುರಕ್ಕೆ ಹೋದರು. ಕುಂದಣಗಾರರ ಮನೆ ಗೌಡರಿದ್ದ ವಿದ್ಯಾರ್ಥಿನಿಲಯದ ಹತ್ತಿರವೇ ಇತ್ತು. ಮೈಸೂರಿನಲ್ಲಿಯೇ ಗೌಡರಿಗೆ ಶ್ರೀಕಂಠಯ್ಯ : ಟಿಎಸ್‌ವಿ : ಮುಂತಾದ ಕನ್ನಡದ ಹಿರಿಯ ಲೇಖಕರ ಪರಿಚಯವಿದ್ದಿತು. ಹಾಗೆಯೇ ಗೌಡರಿಗೆ ಕುಂದಣಗಾರರ ಪರಿಚಯ ವಾಯಿತು. ಅವರ ಮನೆಗೆ ಆಗಾಗ ಹೋಗುತ್ತಿದ್ದರು. ಅನೇಕ ವಿಚಾರಗಳ ಬಗೆಗೆ ಮಾತುಕತೆಯಾಗುತ್ತಿತ್ತು. ಕುಂದಣಗಾರರು ಪುಸ್ತಕ ಪ್ರೇಮಿ. ಅವರ ಮನೆಯಲ್ಲಿ ಕನ್ನಡದ ಅಪೂರ್ವ ಗ್ರಂಥಗಳ ರಾಶಿಯೇ ಇತ್ತು. ಸಿಂಗಾರಿಗೌಡರು ಒಂದೊಂದೇ ಪುಸ್ತಕ ಕೇಳಿ ಪಡೆದು ಓದಿ ಹಿಂತಿರುಗಿಸುತ್ತಿದ್ದರು. ಕೆಲವು ದಿನಗಳಲ್ಲಿಯೇ ಗೌಡರಿಗೂ ಕುಂದಣಗಾರರಿಗೂ ಆತ್ಮೀಯತೆ ಬೆಳೆಯಿತು. ಕುಂದಣಗಾರರ ಗ್ರಂಥಭಂಡಾರದ ಬೀಗದ ಕೈ ಸಿಂಗಾರಿಗೌಡರ ಕೈಗೆ ಬಂದಿತು. ಆ ಮೂಲಕ ಕುಂದಣಗಾರರು ಗೌಡರಿಗೆ ಸಾರಸ್ವತ ಭಂಡಾರದ ಬೀಗದ ಕೈಯನ್ನೇ ನೀಡಿದ್ದರು. ಇಂದಿಗೂ ಗೌಡರು ಒಬ್ಬ ಅತ್ಯಂತ ಆಸಕ್ತ ಹಾಗೂ ಸಹೃದಯ ಓದುಗರಾಗಿದ್ದಾರೆ.

ಎಚ್. ಸಿ. ದಾಸಪ್ಪ, ಟಿ. ಮರಿಯಪ್ಪ ಇಬ್ಬರೂ ಸಿಂಗಾರಿಗೌಡರ ರಾಜಕೀಯ ಜೀವನ ರೂಪಿಸಿದ ರೂವಾರಿಗಳು. ಅವರಿಬ್ಬರೂ ಮೈಸೂರಿನ ಸುಪ್ರಸಿದ್ಧ ವಕೀಲರು. ಸಿಂಗಾರಿಗೌಡರಿಗೆ ತಾವು ವಕೀಲಿ ವೃತ್ತಿ ಕೈಗೊಳ್ಳುವ ನಿರ್ಧಾರ ಮಾಡಿದಾಗಿನಿಂದಲೂ ಇವರಲ್ಲಿಯೇ ತಾವು ಕಿರಿಯ ವಕೀಲರಾಗಿ ಕೆಲಸಮಾಡುವ ಆಸೆಯನ್ನು ಹೊಂದಿದ್ದರು. ಕೃಷ್ಣಪ್ಪಗೌಡರಿಗೂ ಮಗನನ್ನು ದಾಸಪ್ಪ, ಮರಿಯಪ್ಪನವರಲ್ಲಿಯೇ ವಕೀಲಿ ಕಲಿಯಲು ಸೇರಿಸಬೇಕೆಂಬ ಆಸೆಯಿತ್ತು. ಅವರೆಲ್ಲರೂ ಸ್ವಾತಂತ್ರ್ಯ ಸಮರದಲ್ಲಿ ಒಟ್ಟಿಗೇ ಪಾಲು

ಗೋಂಡಪರು. ದಾಸಪ್ಪ, ಮರಿಯಪ್ಪನವರು ಆಗಿನ ಕಾಲದ ಸುಪ್ರಸಿದ್ಧ ವಕೀಲರಷ್ಟೇ ಅಲ್ಲ, ರಾಜಕೀಯ ಮುತ್ಸದ್ದಿಗಳು ಮತ್ತು ಅತ್ಯಂತ ಪ್ರಾಮಾಣಿಕ ಸಮಾಜ ಸೇವಕರು. ಸಿಂಗಾರಿಗೌಡರು ಅವರಲ್ಲಿಗೆ ಬರುವ ಹೊತ್ತಿಗೆ ಈ ಇಬ್ಬರೂ ಸ್ವಲ್ಪ ಹೆಚ್ಚು ಕಡಿಮೆ ವಕೀಲಿಯನ್ನು ಬಿಟ್ಟು ಪೂರ್ಣ ಪ್ರಮಾಣದ ರಾಜಕಾರಣಿಗಳಾಗಿದ್ದರು. ದಾಸಪ್ಪನವರಂತೂ ಸಿಂಗಾರಿಗೌಡರ ಮನೆಯವರಂತೆಯೇ ಇದ್ದರು. ಮರಿಯಪ್ಪನವರು ಕರಡಹಳ್ಳಿಯ ಪಕ್ಕದವರು. ಈ ಇಬ್ಬರೂ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಿಂಗಾರಿಗೌಡರಿಗೆ ಆದರ್ಶಪ್ರಾಯರು.

ಮೈಸೂರಿನ ಕಛೇರಿಯ ರಾಮಯ್ಯ, ಮಂಡ್ಯದ ಕಛೇರಿಯ ಬಸಪ್ಪ ಸಿಂಗಾರಿಗೌಡರ ವಕೀಲಿ ವೃತ್ತಿಯ ಮಾರ್ಗದರ್ಶಕರು. ಅವರು ತಮ್ಮ ವಕೀಲಿ ವೃತ್ತಿಯ ಆರಂಭದ ದಿನಗಳಲ್ಲಿ ಈ ಇಬ್ಬರಿಂದ ಕಲಿತುದನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಮಂಡ್ಯ ನಗರದಲ್ಲಿ ವಕೀಲಿ ಆರಂಭಿಸಿದ ಮೇಲೆ ಸಿಂಗಾರಿಗೌಡರ ಸ್ನೇಹವಲಯ ವಿಸ್ತರಿಸಿತು. ಕಾರಣ ಅದು ತಮ್ಮದೇ ನೆಲ. ಇಲ್ಲಿ ಸಿಂಗಾರಿಗೌಡರ ಮೇಲೆ ಅತ್ಯಂತ ಹೆಚ್ಚಿನ ಪ್ರಭಾವ ಬೀರಿದವರಲ್ಲಿ ಶ್ರೀ ಕೆ. ವಿ. ಶಂಕರಗೌಡರು ಪ್ರಮುಖರು. ಈ ಇಬ್ಬರೂ ಜಿಲ್ಲೆಯ ಅತ್ಯಂತ ಪ್ರಭಾವಶಾಲಿ ರಾಜಕೀಯ ಧುರೀಣರು. 1946 ರಲ್ಲಿ ರಾಜ್ಯಾಂಗ ರಚನಾ ಸಭೆಗೆ ಸ್ಪರ್ಧಿಸಿದ ದಿನಗಳಿಂದ ಇಲ್ಲಿಯವರೆಗೆ ರಾಜಕೀಯ ಮತ್ತು ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಲ್ಲಿ ಜೊತೆಯಾಗಿಯೇ ಕೆಲಸಮಾಡಿಕೊಂಡು ಬಂದಿದ್ದಾರೆ. ತಮ್ಮ ಮಿತ್ರರ ಬಗ್ಗೆ ಶಂಕರಗೌಡರಿಗೆ ಅಪಾರವಾದ ನಂಬಿಕೆ ಮತ್ತು ಅಭಿಮಾನ. ಆಧುನಿಕ ಮಂಡ್ಯ ಜಿಲ್ಲೆಗೆ ಈ ಇಬ್ಬರ ಕೊಡುಗೆ ಅಪೂರ್ವವಾದುದಾಗಿದೆ.

ತಮ್ಮ ಕ್ಷೇತ್ರದವರೇ ಆದ ಟಿ. ಎನ್. ಜವರಪ್ಪಗೌಡರು ಸಿಂಗಾರಿಗೌಡರ ಆತ್ಮೀಯರಲ್ಲಿ ಒಬ್ಬರು. ನಾಗಮಂಗಲ ತಾಲ್ಲೂಕು ಪಾಲಅಗ್ರಹಾರದ ಜವರಪ್ಪಗೌಡರು ಸ್ನೇಹಪ್ರಿಯರು. ಕಡುಬಡತನದಿಂದ ಬಂದು, ಹೆಚ್ಚು ಶಿಕ್ಷಣ ಪಡೆಯಲು ಆಗದೇ ಹೋದರೂ ನಿರಾಶರಾಗದೆ ತಮ್ಮ ಬದುಕಿನೊಂದಿಗೆ ಸೆಣಸಿ ಮೇಲೆ ಬಂದವರು. ಒಬ್ಬ ಶ್ರೀಸಾಮಾನ್ಯ ತನ್ನ ಅದ್ಭುತ ಕ್ರಿಯಾಶಕ್ತಿಯಿಂದ ಮೇಲೆ ಬಂದ ಉದಾಹರಣೆಗೆ ಜವರಪ್ಪಗೌಡರಿಗಿಂತ ಒಳ್ಳೆಯ ಮಾದರಿ ನಮಗೆ ಬೇರೆಲ್ಲಿಯೂ ಸಿಗಲಾರದು. ತಮ್ಮ ಸ್ವಾತಂತ್ರ್ಯ ಹೋರಾಟದ ದಿನಗಳಿಂದಲೂ ಜವರಪ್ಪಗೌಡರು ಸಿಂಗಾರಿಗೌಡರ ಬಗ್ಗೆ ಅಭಿಮಾನವಿಟ್ಟುಕೊಂಡು ಬಂದವರು. ತಾಲ್ಲೂಕಿನ ರಾಜಕೀಯದಲ್ಲಿ ಉದ್ದಕ್ಕೂ ಸಿಂಗಾರಿಗೌಡರನ್ನು ಬೆಂಬಲಿಸುತ್ತಾ ಬಂದವರು. ಅವರ ಸಹಕಾರವನ್ನು ಗೌಡರು ಕೃತಜ್ಞತೆಯಿಂದ ಸ್ಮರಿಸುವುದುಂಟು. ಇದೇ ರೀತಿಯಲ್ಲಿ ಶ್ರೀ ಎಂ. ಆರ್. ಎನ್. ಶಾಸ್ತ್ರಿಯವರೂ ಸಿಂಗಾರಿಗೌಡರಿಗೆ ಬೆಂಬಲವಾಗಿ ನಿಂತ ನಾಗಮಂಗಲದ ಹಿರಿಯರು. ಅವರಿಬ್ಬರೂ

ಕೂಡಿ ನಾಗಮಂಗಲದಲ್ಲಿ ಅನೇಕ ಶೈಕ್ಷಣಿಕ ಕಾರ್ಯಗಳನ್ನು ವಹಿಸಿಕೊಂಡು ಅತ್ಯಂತ ಉತ್ತಮ ದರ್ಜೆಯಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ.

ಈ ಎಲ್ಲಾ ಪ್ರಭಾವಗಳಿಗಿಂತ ಮಿಗಿಲಾದ. ಶಕ್ತಿಯುತವಾದ ಪ್ರಭಾವ ಸಿಂಗಾರಿಗೌಡರಿಗೆ ಅವರ ತಂದೆ ಕೃಷ್ಣಪ್ಪಗೌಡರದು. ಅವರು ಮತ್ತು ಅವರ ಮಿತ್ರರು ಶ್ರೀ ಇಂದವಾಳು ಹೊನ್ನಯ್ಯ ಮುಂತಾದವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಳೆದ ಧೀರೋದಾತ್ತ ನಿಲುವು ಯಾರಮೇಲಾದರೂ ಪ್ರಭಾವ ಬೀರುವಂತಹದ್ದು. ಕೃಷ್ಣಪ್ಪಗೌಡರನ್ನು ಉಗ್ರಗಾಮಿ ಸ್ವಾತಂತ್ರ್ಯವಾದಿಯೆಂದು ಅವರನ್ನು ಬಲ್ಲ ಅನೇಕರು ಕರೆದಿದ್ದಾರೆ. ಅವರ ಚಟುವಟಿಕೆಗಳು ಗಡಿಪಾರು ಮಾಡುವವರೆಗೆ ಹೋಗಿದ್ದುವು. ಕೃಷ್ಣಪ್ಪಗೌಡರದು ಗಂಭೀರ ಉದಾತ್ತವಾದ ವ್ಯಕ್ತಿತ್ವ. ಧೀರತನವಾದ ನಡೆನುಡಿ. ಅಧಿಕಾರದ ಅನೇಕ ಹಂತಗಳಲ್ಲಿ ಕೆಲಸ ಮಾಡಿದವರು ಕೂಡ. ಆದುದರಿಂದ ಅವರ ಪ್ರಭಾವ ನಿಚ್ಚಳವಾಗಿ ಸಿಂಗಾರಿಗೌಡರ ಮೇಲೆ ಆಗಿದೆ.

ಸಿಂಗಾರಿಗೌಡರ ಅನೇಕ ಕಿರಿಯ ಮಿತ್ರರು ರಾಜ್ಯದ ರಾಜಕೀಯದಲ್ಲಿ ಇಂದು ಮುಂಚೂಣಿಯಲ್ಲಿದ್ದಾರೆ. ಮಂತ್ರಿ, ಶಾಸಕರಾಗಿದ್ದಾರೆ. ಅಧ್ಯಕ್ಷ, ಸದಸ್ಯರಾಗಿದ್ದಾರೆ. ಜೀವನದ ಅನೇಕ ಕ್ಷೇತ್ರಗಳಲ್ಲಿ ವಿಶಿಷ್ಟವಾದ ಸೇವೆ ಸಲ್ಲಿಸಿದ್ದಾರೆ. ಗೌಡರು ಯಾರನ್ನೂ ಹಿಂದೆ ಎಳೆಯುವ ಸ್ವಭಾವದವರಲ್ಲ. ತಾವೇ ಹಿಂದೆ ನಿಂತು ತಮಗಿಂತ ಕಿರಿಯರನ್ನು, ಮಿತ್ರರನ್ನು ಮುಂದೆಬಿಟ್ಟು ಕೆಲಸಮಾಡುವವರು. ಅವರೊಂದಿಗಿದ್ದು ಈಗ ಅಧಿಕಾರದಲ್ಲಿರುವ ಅವರ ಅನೇಕ ಕಿರಿಯರು ಮತ್ತು ಮಿತ್ರರ ಅಭ್ಯುದಯ ಕಂಡು ಗೌಡರು ಹರ್ಷಿಸುತ್ತಾರೆ. ನನ್ನಿಂದ ಅವರಿಗೆ ಏನಾದರೂ ಉಪಕಾರ ಆಗಿದೆಯೋ ಇಲ್ಲವೋ ನನಗಂತೂ ಅವರಿಂದ ಆಗಿದೆ ಎನ್ನುವ ಸೌಜನ್ಯ ಅವರದು. ಪ್ರತ್ಯಕ್ಷವಾಗಿ ಪರೋಕ್ಷವಾಗಿ ತಮ್ಮ ಜೀವನದ ಮೇಲೆ ಪ್ರಭಾವ ಬೀರಿದ ಹಿರಿಕಿರಿಯರೆಲ್ಲರನ್ನೂ ಸಿಂಗಾರಿಗೌಡರು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

೧೩. ಎನಗಿಂತ ಕಿರಿಯರಿಲ್ಲ

ತಮ್ಮ ಜೀವಿತದ ಎಪ್ಪತ್ತೆರಡನೆಯ ವಸಂತದ ಕಡೆಯ ಮೆಟ್ಟಿಲಲ್ಲಿದ್ದಾರೆ ಸಿಂಗಾರಿಗೌಡರು. ಹಳ್ಳಿಯ ಹುಡುಗನಿಂದ ರಾಜ್ಯಮಟ್ಟದ ನಾಯಕತ್ವದವರೆಗೆ ಎಲ್ಲಾ ರಾಜಕೀಯ ರಂಗದ ಹಂತಗಳಲ್ಲಿ ಕೆಲಸ ಮಾಡಿದ್ದಾರೆ. ಸಾಮಾಜಿಕ ಮತ್ತು ಶೈಕ್ಷಣಿಕ ಸೇವೆಯನ್ನು ಅಪಾರವಾಗಿ ಮಾಡಿದ್ದಾರೆ. ಒಂದು ರೀತಿಯಲ್ಲಿ ಆಗಿನ ಕಾಲದ ಸಾಮಾಜಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಅವರು ತಮ್ಮ ಬಾಯಲ್ಲಿ ಚಿನ್ನದ ಚಮಚ ಇಟ್ಟುಕೊಂಡು ಹುಟ್ಟಿದವರು. ತಾಯಿಯ ಮನೆತನ. ಪತ್ನಿಯ ಮನೆತನ ಇವೆಲ್ಲವೂ ಅಷ್ಟೇ ಅಥವಾ ಸ್ವಲ್ಪ ಹೆಚ್ಚಿನ ಸಾಮಾಜಿಕ ಸ್ಥಾನಮಾನಗಳನ್ನು ಹೊಂದಿದ್ದಂತಹವು. ಈ ಪರಿಸರದಲ್ಲಿ ಹುಟ್ಟಿ ಬೆಳೆದ ಯಾರೇ ಆಗಲಿ ಹಮ್ಮು ಅಹಂಕಾರಗಳನ್ನು ಮೈಗೂಡಿಸಿಕೊಳ್ಳುವುದು ಸ್ವಾಭಾವಿಕ. ಆದರೆ ಸಿಂಗಾರಿಗೌಡರಲ್ಲಿ ಈ ಯಾವುದೇ ಅಹಂ ಕಂಡವರಿಲ್ಲ. ಈ ಹಿನ್ನೆಲೆಯಲ್ಲಿ ಅವರ ಜೀವನವನ್ನು ಹಲವು ಕೋನಗಳಿಂದ ಅವಲೋಕಿಸಬಹುದು.

ಸಿಂಗಾರಿಗೌಡರು ಸಾಮಾನ್ಯರೊಂದಿಗೆ ಬೆರೆಯುವುದಿಲ್ಲ ಎಂಬ ದೂರಿದೆ. ಇದು ಅವರ ಕ್ಷೇತ್ರದ ಕೆಲವು ಜನರೂ ಹೇಳುವ ಮಾತು. ಗಮನಿಸಬೇಕಾದ ಅಂಶ, ಅವರು ಮೊದಲಿನಿಂದಲೂ ಸ್ವಲ್ಪ ಮಟ್ಟಿಗೆ ಏಕಾಂತ ಜೀವಿ. ಇದಕ್ಕೆ ಕಾರಣ ಅತ್ಯಂತ ಎಳೆಯ ವಯಸ್ಸಿನಲ್ಲಿ ತಾಯಿ ತೀರಿಕೊಂಡದ್ದು. ಇನ್ನೊಂದು ಅವರದೇ ವಂಶದ ಪೂರ್ವಿಕರಲ್ಲೊಬ್ಬರು ಸಿಂಗಾರಿಗೌಡರು ನಿರ್ಲಿಪ್ತರೂ, ಮೌನಿಗಳೂ ಆಗಿದ್ದು ಆ ಗುಣಗಳುವಂಶ ವಾಹಿನಿಯಲ್ಲಿ ಹರಿದು ಬಂದಿರಬೇಕು. ಪ್ರತಿಯೊಬ್ಬ ಮನುಷ್ಯನ ನಡಾವಳಿಗಳ ಹಿಂದೆಯೂ ಇಂಥ ಪಾರಂಪರ್ಯದ ಗುಣಗಳೂ ಇರುತ್ತವೆ. ಈ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ ಗೌಡರು ಜನಸಾಮಾನ್ಯರೊಂದಿಗೆ ಬೆರೆಯುವುದಿಲ್ಲ ಎಂಬುದು ಸರಿಯಲ್ಲ ಎನ್ನಿಸುತ್ತದೆ. ಗಲಾಟೆ ಗಡಿಬಿಡಿಯಿಂದ ಅವರು ದೂರವಿರುತ್ತಾರೆ. ಹೀಗಾಗಿ ಇದು ಅಹಂಕಾರ ಗುಣವೆಂದು ಕೆಲವರಿಗೆ ಅನ್ನಿಸಿದ್ದರೆ ಆಶ್ಚರ್ಯವೇನೂ ಇಲ್ಲ.

ವಿಧಾನ ಸಭೆಯ ಸದಸ್ಯರಾಗಿ ಅವರ ಸಾಧನೆಯನ್ನು ಪ್ರಶ್ನಿಸುವವರಿದ್ದಾರೆ. ಕೆಲವರು ಸದಾ ಸುದ್ದಿಯಲ್ಲಿರುತ್ತಾರೆ. ಒಂದು ಅತ್ಯಂತ ಸಣ್ಣ ಅವಕಾಶ ದೊರೆತರೂ ಅದನ್ನು ತಮ್ಮತ್ತ ಮಾಡಿಕೊಂಡು ನಾಯಕರೋ. ವೀರರೋ ಆಗುವವರಿದ್ದಾರೆ. ಆದರೆ ವಾಸ್ತವವಾಗಿ ಅಂಥವರಿಂದ ಹೆಚ್ಚು ಗಟ್ಟಿಯಾದ ಕೆಲಸಗಳು ಆಗುವುದಿಲ್ಲ. ಮತ್ತೆ

ಕೆಲವರು ಸಂದರ್ಭ ಬಂದಾಗ ಅವಶ್ಯಕತೆಯಿದ್ದರೆ ಮಾತ್ರ ಮಾತನಾಡುತ್ತಾರೆ. ಶ್ರೀ ಸಿಂಗಾರಿಗೌಡರು ಈ ಎರಡನೆಯ ಗುಂಪಿಗೆ ಸೇರಿದವರು. ಅವರು ಎಂದೂ ಆರ್ಭಟದ ವ್ಯಕ್ತಿಯಲ್ಲ. ಕಣ್ಣು ಕೋರೈಸುವ ನಾಯಕತ್ವದ ಸ್ವಭಾವದವರಲ್ಲ. ಆದರೂ ತಮ್ಮ ವ್ಯಕ್ತಿತ್ವದ ತೂಕದಿಂದ ಅವರು ಅನೇಕ ಕೆಲಸಗಳನ್ನು ಮಾಡಿಸಿದವರು. ಗೌಡರು ಪ್ರಚಾರಪ್ರಿಯ ರಾಜಕಾರಣಿಯಾಗಿದ್ದಿದ್ದರೆ. ಆಶ್ವಾಸನೆಗಳನ್ನು ಕೊಡುವುದರಲ್ಲಿ ನಿಸ್ಸೀಮರಾಗಿದ್ದರೆ ಸದಾ ಅಧಿಕಾರದಲ್ಲಿ ಇರಬಹುದಾಗಿತ್ತು ಎಂದು ಕಾಣುತ್ತದೆ.

ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿದ್ದಾಗ ಅವರು ಅನೇಕ ಭ್ರಷ್ಟರಾದ ಅಧಿಕಾರಿಗಳಿಗೆ ಸಹಾಯಮಾಡಿದರು ಎಂಬುದು ಮತ್ತೊಂದು ಅವರ ಮೇಲಿನ ದೂರು. ಆಗ ಕ್ಷೇತ್ರಾಭಿವೃದ್ಧಿ ಅಧಿಕಾರಿಯಾಗಿದ್ದವರೊಬ್ಬರ ಬಗ್ಗೆ ಈ ದೂರಿದ್ದುದು ನಿಜ. ಅವರ ಬಗ್ಗೆ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಅವರು ಕೆಲವು ಕಾಲ ಕೆಲಸವನ್ನೂ ಕಳೆದುಕೊಂಡಿದ್ದರೆಂದು ತೋರುತ್ತದೆ. ನಮ್ಮ ನೌಕರಶಾಹಿ ವ್ಯವಸ್ಥೆಯಲ್ಲಿ ಅನೇಕ ತಪ್ಪುಗಳು ನಡೆಯುತ್ತವೆ. ಅವುಗಳನ್ನು ರಾಜಕಾರಣಿ ಅಧ್ಯಕ್ಷರೋ ಸದಸ್ಯರೋ ಮಾಡಿದರೆಂದು ದೂರು ಬರುವುದುಂಟು. ಸಿಂಗಾರಿಗೌಡರಲ್ಲಿ ಒಂದು ಕೊರತೆ ಅದನ್ನು ಕೊರತೆಯೆನ್ನಬಹುದಾದರೆ ಅಪಾರವಾದ ಅನುಕಂಪ ಅವರದು. ಯಾರನ್ನೂ ನೋಯಿಸುವ, ಹಿಂಸಿಸುವ ಪ್ರವೃತ್ತಿಯಲ್ಲ. ಆದುದರಿಂದ ಎಂತಹದೇ ಸಂದರ್ಭದಲ್ಲಿಯೂ ಗೌಡರು ಕಟುವಾಗಿ ನಡೆದುಕೊಳ್ಳುವುದಿಲ್ಲ. ಅದು ಅವರ ಸ್ವಭಾವ. ಬೇರೆಯವರಿಗೆ ಅದು ಆ ಅಧಿಕಾರಿಗೆ ಮಾಡಿದ ಸಹಾಯ ಎಂದೆನಿಸಿದರೆ ಆಶ್ಚರ್ಯವೇನು ಇಲ್ಲ.

ರಾಜಕಾರಣಿಗಳ ಒಂದು ಅತ್ಯಂತ ಪ್ರಧಾನವಾದ ಗುಣವೆಂದರೆ ಸಾಧ್ಯಾಸಾಧ್ಯತೆಗಳನ್ನು ಗಮನಿಸದೆ ಆಶ್ವಾಸನೆ ಕೊಡುತ್ತಾ ಹೋಗುವುದು. ಒಬ್ಬರು ವಿಧಾನ ಸಭಾ ಹುರಿಯಾಳು ನಾಗಮಂಗಲ ತಾಲ್ಲೂಕಿಗೆ ಸಂಪೂರ್ಣವಾಗಿ ಹೇಮಾವತಿಯ ನೀರು ತರಿಸುತ್ತೇನೆ ಎಂದರು. ಜನ ಸಿಂಗಾರಿಗೌಡರನ್ನು ಕೇಳಿದರು. ಅವರು ಇಲ್ಲ ಕೆಲವು ಭಾಗಗಳಿಗೆ ಮಾತ್ರ ಸಾಧ್ಯ. ಮೇಲ್ಕಡೆಗೆ ನೀರು ಹತ್ತುವುದಿಲ್ಲವೆಂದರು. ಈ ವಿಚಾರ ಆ ಹುರಿಯಾಳಿಗೆ ತಿಳಿಯಿತು. ಅವರು ಕರ್ನಾಟಕದ ನದಿಗಳ ಭೂಪಟವೊಂದನ್ನು ಗೋಡೆಗೆ ನೇತು ಹಾಕಿದರು. ಜನಗಳನ್ನು ಕರೆದರು "ನೋಡಿ ಹೇಮಾವತಿ ಇಲ್ಲಿದೆ. ನಾಗಮಂಗಲ ತಾಲ್ಲೂಕು ಇಲ್ಲಿದೆ. ಅಲ್ಲಿಂದ ನೀರು ಬಿಟ್ಟರೆ ಇಲ್ಲಿಗೆ ಹರಿಯುವುದಿಲ್ಲವೆ ? ಜನರು ನಿಜ ನಿಜ ಹರಿಯುತ್ತದೆ ಎಂದರು. ನಿಜವಾದ ರಾಜಕಾರಣಿ ಎಂದರೆ ಹೀಗಿರಬೇಕು. ಆದರೆ ಸಿಂಗಾರಿಗೌಡರು ತಾಂತ್ರಿಕ ವರದಿಯನ್ನು ಆಧರಿಸಿ ಆ ರೀತಿ ಹೇಳುತ್ತಿದ್ದರು. ಜನರು ತಮ್ಮ ನಾಯಕರಿಂದ ಬಯಸುವುದು ಭಗೀರಥ ಪ್ರಯತ್ನವನ್ನೇ ವಿನಾ ಸಾಧ್ಯಾಸಾಧ್ಯತೆಗಳ ವಾಸ್ತವವನ್ನಲ್ಲ. ಇದು ಜಗತ್ತಿನ ಯಾವ ರಾಜಕಾರಣಿಯನ್ನೂ ಬಿಟ್ಟಿದ್ದಲ್ಲ. ಈ ಹಿನ್ನೆಲೆಯಲ್ಲಿ ಸಿಂಗಾರಿಗೌಡರು ಚುನಾವಣೆಗಳಲ್ಲಿ ಸೋತದ್ದೂ ಉಂಟು. ವೀರ ಪ್ರಿಯರು ಅವರನ್ನು ಪ್ರಯೋಜನವಿಲ್ಲಾ ಎಂದದ್ದೂ ಉಂಟು.

ಅವರು ಆಗಷ್ಟೇ ವಿಧಾನ ಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು : ಅವರ ಕ್ಷೇತ್ರದ ಪ್ರೌಢಶಾಲಾ ವಿದ್ಯಾರ್ಥಿಯೊಬ್ಬನ ವಿದ್ಯಾರ್ಥಿ ವೇತನದ ಅರ್ಜಿಗೆ ವಿಧಾನಸಭಾ ಸದಸ್ಯರ ಸಹಿ ಬೇಕಾಗಿತ್ತು. ಆ ಹುಡುಗ ನೇರವಾಗಿ ಕರಡಹಳ್ಳಿಗೆ ಹೋದ. ವಿಧಾನಸಭಾ ಸದಸ್ಯರ ಮನೆಯ ಮುಂದೆ ನೂರಾರು ಜನ. ಆ ಹುಡುಗ ಕಕ್ಕಾಬಿಕ್ಕಿಯಾದ. ಇಷ್ಟೊಂದು ಜನ ಭಯಭಕ್ತಿಯಿಂದ ಕಾಣುತ್ತಿರುವ ವ್ಯಕ್ತಿ ನನ್ನ ಅರ್ಜಿಗೆ ಸಹಿ ಹಾಕುವರೆ ? ಸದಸ್ಯರು ಹೊರಗೆ ಬಂದು ಎಲ್ಲರನ್ನು ವಿಚಾರಿಸಿಕೊಂಡರು. ಈ ದೃಶ್ಯವನ್ನು ಕಣ್ಣು ಬಾಯಿ ಬಿಟ್ಟು ನೋಡುತ್ತಿದ್ದ ಹುಡುಗನ ಹತ್ತಿರವೂ ಬಂದರು. "ನಿನ್ನದೇನಪ್ಪ ಕೆಲಸ" ಎಂದು ಅತ್ಯಂತ ಪ್ರೀತಿಯಿಂದ ಅವನ ಹೆಗಲ ಮೇಲೆ ಕೈಯಿಟ್ಟರು. ಹುಡುಗ ಭಾವಪರವಶನಾದ. ಮಾತು ಹೊರಡದಾಯಿತು. ಸುಮ್ಮನೆ ತನ್ನ ಅರ್ಜಿಯನ್ನು ಮುಂದೆ ಹಿಡಿದ. ಗೌಡರು ತಮ್ಮ ಕೈಗೆ ತೆಗೆದುಕೊಂಡು ನೋಡಿ ಸಹಿ ಹಾಕಿ ಅವನ ಬೆನ್ನು ತಟ್ಟಿ "ಚೆನ್ನಾಗಿ ಓದಬೇಕಪ್ಪ" ಎಂದರು. ಇದು ಸಿಂಗಾರಿಗೌಡರು ನಡೆದು ಕೊಳ್ಳುವ ರೀತಿ.

ತಮ್ಮಲ್ಲಿಗೆ ಬಂದ ಯಾರನ್ನೇ ಆಗಲಿ ಅತ್ಯಂತ ಸೌಜನ್ಯದಿಂದ ಮಾತನಾಡಿಸುವುದು ಗೌಡರ ಪರಮ ಗುಣ. ಇದು ತೋರಿಕೆಯ ನಡವಳಿಕೆಯಲ್ಲ. ಅವರಲ್ಲಿ ಸ್ವಾಭಾವಿಕವಾಗಿ ಇರುವಂಥದು. ಅವರು ಸಾಮಾನ್ಯವಾಗಿ ಸಾರ್. ಅಣ್ಣ. ಅಪ್ಪ ಈ ಪದಗಳನ್ನೇ ಬಳಸಿ ಮಾತನಾಡಿಸುತ್ತಾರೆ. ಇದು ಅತ್ಯಂತ ಸಂಸ್ಕೃತಿವಂತ ವ್ಯಕ್ತಿಯೊಬ್ಬ ನಡೆದು ಕೊಳ್ಳುವ ರೀತಿ. ಅವರು ಸಾಮಾನ್ಯವಾಗಿ ವಿದ್ಯಾವಂತರನ್ನು ಕುರಿತು ಸಂಬೋಧಿಸುವಾಗ 'ಸಾರ್' ಪದವನ್ನು ಬಳಸುತ್ತಾರೆ. ಗೌಡರು ಜಿಲ್ಲಾಪರಿಷತ್ತಿನ ಅಧ್ಯಕ್ಷರಾಗಿ ತಮ್ಮ ಕಾರ್ಯದರ್ಶಿಯನ್ನು 'ಸಾರ್' ಎಂದು ಕರೆದು ಪ್ರಾಧಾನ್ಯತೆ ಕೊಟ್ಟಿದ್ದಾರೆ ಎಂಬ ಸುದ್ದಿಯೊಂದು ಪತ್ರಿಕೆಯಲ್ಲೂ ಪ್ರಕಟವಾಗಿತ್ತು. 'ಸಾರ್' ಪದ ಸ್ವಲ್ಪ ಗುಲಾಮಿ ಪದ್ಧತಿಯನ್ನು ಸೂಚಿಸುತ್ತದೆ ನಿಜ. ಆದರೆ ಶ್ರೀ ಸಿಂಗಾರಿಗೌಡರು ಅದನ್ನು ಸೌಜನ್ಯದ ಅರ್ಥದಲ್ಲಿ ಎಂದಿಗೂ ಬಳಸುತ್ತಾರೆ. ಮಾನವನಿಗಿರಬಹುದಾದ ಒಂದೆರಡು ದೌರ್ಬಲ್ಯಗಳು ಅವರಿಗಿರಲೂಬಹುದು. ಆದರೆ ಅವರ ವ್ಯಕ್ತಿತ್ವವನ್ನು ಹತ್ತಿರದಿಂದ ಗಮನಿಸಿದಾಗ ಇವು ಗೌಣವಾಗಿ ಬಿಡುತ್ತವೆ. ವ್ಯಕ್ತಿಯಾಗಿ ಸಿಂಗಾರಿ ಗೌಡರನ್ನು ನೋಡಿದಾಗ ಬಸವಣ್ಣನವರ ಎನಗಿಂತ ಕಿರಿಯರಿಲ್ಲ ಎಂಬ ಮಾತು ನೆನಪಾಗುತ್ತದೆ. ಸಹನೆ ಸೌಜನ್ಯಗಳ ಸಂಗಮವಾದ ಶ್ರೀ ಗೌಡರು ನಮ್ಮ ಈ ನಾಡಿನ ಸಮಾಜದ ಒಬ್ಬ ಅಪರೂಪ ಸೌಮ್ಯಗುಣ ವ್ಯಕ್ತಿ. ಸಮಾಜ ಸುಧಾರಕ. ನಿಷ್ಠಾವಂತ ರಾಜಕಾರಣಿ.

ತಾನು ಕೇಳಿದುದನ್ನು ನಡೆಸಿಕೊಡದಿದ್ದಲ್ಲಿ ದೇವರನ್ನೂ ತರಾಟೆಗೆ ತೆಗೆದು ಕೊಳ್ಳುವುದು ಮನುಷ್ಯ ಸ್ವಭಾವ. ಅಷ್ಟೇ ಅಲ್ಲ ಯಾವುದೇ ಕಾಲದ ಯಾವುದೇ ನಾಯಕ ಇಡೀ ಜನ ಸಮುದಾಯದಿಂದ ಹೊಗಳಿಸಿ ಕೊಳ್ಳುವುದು ಸಾಧ್ಯವಾಗದು. ಎಲ್ಲಾ

ಮನುಷ್ಯನ ಸಹಜ ದೌರ್ಬಲ್ಯಗಳೇ ಸರಿ. ಹಾಗೆಯೇ ಸಿಂಗಾರಿಗೌಡರನ್ನು ಹೊಗಳುವವರಂತೆ ಟೀಕಿಸುವವರೂ ಇದ್ದಾರೆ. ದಿನಾಂಕ 16-2-88 ರ ಶಿವರಾತ್ರಿಯಂದು ನಾವು ಕೆಲವು ಲೇಖಕರು, ಪತ್ರಿಕೋದ್ಯಮಿಗಳು ಕರಡಹಳ್ಳಿಗೆ ಭೇಟಿ ನೀಡಿದ್ದೆವು. ಅವರ ತೋಟವೊಂದರಲ್ಲಿ ಎಳನೀರು ಕುಡಿದು ಹೊರಡುವ ಸಮಯದಲ್ಲಿ ಒಬ್ಬಾತ ಅವರ ಕಾಲುಮುಟ್ಟಿ ನಮಸ್ಕರಿಸಿದ. ಗೌಡರು ನಿರಾಕರಿಸಿದರೂ ಅವನು ಕೇಳಲಿಲ್ಲ. ನಮಗೆ ಸ್ವಲ್ಪ ಮುಜುಗರವೂ ಆಯಿತು. ಆದರೆ ನಾವೆಲ್ಲಾ ಜೀಪು ಹತ್ತಿದೆವು. ಆ ನಮಸ್ಕರಿಸಿದ ವ್ಯಕ್ತಿಯೂ ನಮ್ಮ ಜೊತೆ ಬರಬೇಕಾಗಿತ್ತು. ಸಿಂಗಾರಿಗೌಡರು ಅವನನ್ನು ತಮ್ಮ ಪಕ್ಕದಲ್ಲಿ ಅತ್ಯಂತ ಆತ್ಮೀಯತೆಯಿಂದ ಕೂರಿಸಿಕೊಂಡು ಅವನ ಹೆಗಲ ಮೇಲೆ ಕೈಯಿಟ್ಟು ಕೊಂಡರು. ಶ್ರೀ ಸಾಮಾನ್ಯನ ಹೃದಯ ಪೀಠವನ್ನಲಂಕರಿಸಿದ ಗೌಡರ ವ್ಯಕ್ತಿತ್ವ ಶುಭ್ರವಾದುದು, ಉದಾತ್ತವಾದುದು ಎಂದು ನಮಗನ್ನಿಸಿತು. ಈ ಜನನಾಯಕ ನೂರ್ಕಾಲ ಬಾಳಿ ಬೆಳಗಲಿ ಎಂದು ನಮ್ಮ ಹೃದಯಗಳು ತಮಗೆ ತಾವೇ ಹಾರೈಸುತ್ತಿದ್ದುವು.

ಸಿಂಗಾರಿ ಗೌಡರು ನಾನು ಕಂಡಂತೆ

(ಸಿಂಗಾರಿಗೌಡರ ವ್ಯಕ್ತಿತ್ವ ಕುರಿತ ಬರಹಗಳು)

ಸುಸಂಸ್ಕೃತ ವ್ಯಕ್ತಿ

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಕರಡಹಳ್ಳಿ ಗ್ರಾಮದ ಕೃಷ್ಣಪ್ಪ ಗೌಡರ ಮನೆತನ ಆ ತಾಲ್ಲೂಕಿನಲ್ಲೇ ಒಂದು ಗಣ್ಯ ಮನೆತನ. ಅವರ ಪೂರ್ವಿಕರು ಪುಟ್ಟಪಾಳೆಗಾರರಾಗಿದ್ದರೂ ಇರಬಹುದೆಂದು ಕಾಣುತ್ತದೆ. ಆದರೆ ಪಾಳೆಗಾರರಲ್ಲೂ ಎರಡು ಬಗೆಯ ಪಾಳೆಗಾರರುಂಟು. ಒಂದು ವರ್ಗದವರು ಅಧಿಕಾರ ಐಶ್ವರ್ಯ ಮದದಿಂದ ಜನಸಾಮಾನ್ಯರ ಮೇಲೆ ದಬ್ಬಾಳಿಕೆ ನಡೆಸುವುದಲ್ಲದೆ ಶೋಷಣಾ ಪ್ರವೃತ್ತಿಯನ್ನೂ ಬೆಳೆಸಿಕೊಂಡವರು. ಇದಕ್ಕೆ ವಿಭಿನ್ನವಾದ ವರ್ಗ ದೀನದಲಿತರಿಗೆ ಆಸರೆಯಾಗಿ ದಯೆ-ದಾನ-ಧರ್ಮಾದಿ ಮಾನವೀಯ ಮೌಲ್ಯಗಳ ಆರಾಧಕರಾಗಿ ಬೆಳಗುತ್ತಾರೆ. ಈ ವರ್ಗಕ್ಕೆ ಸೇರಿದ ಮನೆತನ ಶ್ರೀ ಕೃಷ್ಣಪ್ಪ ಗೌಡರದು.

ಕೆ. ಸಿಂಗಾರಿಗೌಡರ ಪರಿಚಯವಾಗುವುದಕ್ಕೆ ಮುಂಚೆಯೇ ಶ್ರೀ ಕೃಷ್ಣಪ್ಪಗೌಡರು ನನಗೆ ಚಿರಪರಿಚಿತರಾಗಿದ್ದರು. ಪೂಜ್ಯರೂ ಆಗಿದ್ದರು. ಈ ಪರಿಚಯ ದೈವ ಪ್ರೇರಣೆಯಿಂದಾದುದೆಂದೇ ನಾನು ನಂಬಿದ್ದೇನೆ. ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಪೂರ್ವದ ಉಗ್ರ ಹೋರಾಟ ದೇಶದ ಸ್ವಾತಂತ್ರ್ಯ ಸಾಧನೆಗಾಗಿ ನಡೆಯುತ್ತಿದ್ದ ಕಾಲದಲ್ಲಿ ಶ್ರೀ ಕೃಷ್ಣಪ್ಪಗೌಡರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾಗ ವಿದ್ಯಾರ್ಥಿಯಾಗಿದ್ದ ನಾನೂ ತೀರಾ ಸಕ್ರಿಯವಾಗಲ್ಲದಿದ್ದರೂ ಪರೋಕ್ಷವಾಗಿ ಆ ರೋಮಾಂಚಕಾರಿ ಅಲೆಯಲ್ಲಿ ಮಿಂದೇಳುತ್ತಿದ್ದೆ. ತತ್ಪರಿಣಾಮವಾಗಿ ನಮ್ಮ ಜಿಲ್ಲೆಯ ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಪರಿಚಯವೂ ನಾನು ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ನನಗೆ ಆಗಿತ್ತು. ಅವರೆಲ್ಲರ ದೇಶಪ್ರೇಮ ವ್ಯಕ್ತಿತ್ವದ ಪ್ರಭಾವ ನನ್ನ ವ್ಯಕ್ತಿತ್ವದ ಮೇಲೂ ಪರಿಣಾಮವನ್ನುಂಟು ಮಾಡಿತ್ತು. ಅವರೆಲ್ಲರ ಪ್ರೀತಿಗೂ ಪಾತ್ರನಾಗಿದ್ದ ಕಿರಿಯವ ನಾನಾಗಿದ್ದೆ. ತನಗೆ ತಾನೇ ಬೆಳೆದು ಬಂದ ಅನೇಕ ರಾಷ್ಟ್ರ ಪ್ರೇಮಿಗಳ ಪ್ರೀತಿಯು ನನ್ನ ಕಡೆ ಹರಿದು ಬಂದುದು ದೈವ ಕೃಪೆಯಲ್ಲದೆ ಮತ್ತೇನಾದೀತು.

ಶ್ರೀ ಕೃಷ್ಣಪ್ಪ ಗೌಡರ ಮೊದಲನೆಯ ಧರ್ಮಪತ್ನಿಯವರೂ ಹೆಸರಾಂತ ಮನೆತನವಾದ ತಟ್ಟೆಕೆರೆ ಮಾದಪ್ಪಮಂತ್ರಿ ಕುಟುಂಬದಲ್ಲಿ ಜನಿಸಿದವರು. ಒಂದು ಹೆಣ್ಣು ಒಂದು ಗಂಡು ಮಗುವಿಗೆ ಜನ್ಮವಿತ್ತ ಆ ತಾಯಿ ಮಕ್ಕಳು ಬೆಳೆಯುವ ಮುನ್ನವೇ ವಿಧಿವಶರಾದರು. ಎರಡನೆಯ ಪತ್ನಿಯನ್ನು ಸ್ವೀಕರಿಸುವ ಮನಸ್ಸಿತ್ತು ಶ್ರೀ ಕೃಷ್ಣಪ್ಪ

ಗೌಡರಿಗೆ ಶ್ರೀ ಸಿಂಗಾರಿ ಗೌಡರ ತಾಯಿ ಅಕಾಲ ಮೃತ್ಯುವಿಗೊಳಗಾದಾಗ. ಆ ಸಾಧ್ವಿ ಮಣಿಯು ಹಾಸನ ಜಿಲ್ಲೆಯಲ್ಲಿನ ಹೆಸರಾಂತ ಮನೆತನದಿಂದ ಬಂದವರೇ ಆಗಿದ್ದ ಗುಣಾಢ್ಯೆಯಾಗಿದ್ದರು.

ಇಂತಹ ಸಾಂಸ್ಕೃತಿಕ ಪರಂಪರೆಯುಳ್ಳ ಮನೆತನದಲ್ಲಿ ಶ್ರೀ ಸಿಂಗಾರಿಗೌಡರು ಸುಸಂಸ್ಕೃತಿಯನ್ನೇ ಹೊತ್ತು ಜನಿಸಿದ್ದಾರೆಂದೇ ಯಾವ ಸಂಕೋಚವೂ ಇಲ್ಲದೆ ಹೇಳ ಬಹುದು.

"ಓರ್ವ ತಂದೆಯ ಏಕಮಾತ್ರ ಪುತ್ರ ಹಾಳಾಗುವ ಸಂಭವವೇ ಹೆಚ್ಚು! ಅದರಲ್ಲಿಯೂ ನಮ್ಮ ದೇಶ ಭಾರತದಲ್ಲಿ ಇದು ವಿಶೇಷತಃ ಸತ್ಯ" ಎಂಬುದು ಪಂಡಿತ ಜವಹರಲಾಲ್ ನೆಹರು ಅವರು ರಚಿಸಿರುವ ತಮ್ಮ ಆತ್ಮ ಕಥನದ ಪ್ರಪ್ರಥಮ ವಾಕ್ಯವೆಂಬಂತ ಅಧ್ಯಯನ ಪ್ರಿಯರಿಗರಿವಾಗಿರುವ ವಿಷಯವೆಂದು ಹೇಳಬೇಕಾದ ಅಗತ್ಯವಿಲ್ಲ. ಆದರೆ ಕೆ. ಸಿಂಗಾರಿಗೌಡರು ಇದಕ್ಕೆ ಅಪವಾದವೋ ಎಂಬಂತೆ ತಮ್ಮ ವ್ಯಕ್ತಿತ್ವವನ್ನು ತಮ್ಮ ಸ್ವಪ್ರಯತ್ನದಿಂದಲೇ ಮೈಗೂಡಿಸಿಕೊಂಡಿದ್ದಾ ರೆಂದು ಹೇಳುವುದು ನನಗೆ ಅತ್ಯಂತ ಹೆಮ್ಮೆಯಾಗುತ್ತದೆ. ಕಾರಣ ತಾರುಣ್ಯದಲ್ಲಿಯೇ ತಾಯಿಯ ಅಮೃತಸೋಪಾದಿಯ ಪ್ರೇಮದಿಂದ ವಂಚಿತರಾದ ಶ್ರೀ ಗೌಡರು ಏಕಾಂತ ಪ್ರಿಯರಾಗಿ ಬೆಳೆದರು.

ವಿದ್ಯಾಭ್ಯಾಸ ಹುಟ್ಟೂರಿನಲ್ಲಾಗಲು ಸಾಧ್ಯವಿರಲಿಲ್ಲ. ಮೈಸೂರು, ಕೊಲ್ಲಾಪುರ ಗಳಂತಹ ನಗರ ಪ್ರದೇಶಗಳ ಕಲುಷಿತ ವಾತಾವರಣದಲ್ಲಿ ವಿದ್ಯಾರ್ಜನೆ ಮಾಡಿದ ಅವರು ನಗರವಾಸದ ಪ್ರಲೋಭನೆಗಳಿಗೆ ಗುರಿಯಾಗದೆ ಸ್ವಚ್ಛ ನಡೆ. ನುಡಿ, ಆಚಾರ. ವಿಚಾರಗಳನ್ನು ಒಂಟಿ ಜೀವನದಲ್ಲೇ ಮೈಗೂಡಿಸಿಕೊಂಡು ತಮ್ಮ ವಿದ್ಯಾರ್ಜನೆಯನ್ನು ಯಶಸ್ವಿಯಾಗಿ ಮುಗಿಸಿದ ಶ್ರೀ ಕೃಷ್ಣಪ್ಪಗೌಡರ ಪ್ರೇಮ ಪುತ್ಥಳಿಯಾಗಿ ವಿಜೃಂಭಿ ಸಿದರು ಶ್ರೀ ಕೆ. ಸಿಂಗಾರಿಗೌಡರು.

ಶ್ರೀ ಕೆ. ಸಿಂಗಾರಿಗೌಡರು ಮಂಡ್ಯದ ಪ್ರಸಿದ್ಧ ವಕೀಲರೂ. ಸಜ್ಜನಪ್ರಿಯರೂ, ಸ್ವಾತಂತ್ರ್ಯಾಭಿಮಾನಿಗಳೂ, ಶುಭ್ರ ಚಾರಿತ್ರ್ಯವುಳ್ಳವರೂ. ಶುದ್ಧ ಖಾದಿಧಾರಿಗಳೂ ಆಗಿದ್ದ ಪೂಜ್ಯ ರುದ್ರಪ್ಪನವರ ಸಹಾಯಕರಾಗಿ ವಕೀಲ ವೃತ್ತಿಯಲ್ಲಿ ಸಾಕಷ್ಟು ತರಬೇತಿ ಪಡೆಯುತ್ತಿದ್ದಾಗಲೇ ಅವರು ನನಗೆ ಪರಿಚಯವಾದದ್ದು. ಬಹುಶಃ ಆ ಕಾಲ 1944-45ರ ಅವಧಿಯಲ್ಲಿರಬಹುದೆಂಬ ಜ್ಞಾಪಕ ನನ್ನದು. ಹೀಗೆ ಪರಿಚಯವಾದದ್ದೂ ನನ್ನ ಮಾನ್ಯ ಮಿತ್ರರಾದ ಶ್ರೀ ಪಿ. ಎನ್. ಜವರಪ್ಪ ಗೌಡರ ಮೂಲಕವೇ ಎಂಬುದೂ ನೆನಪಿದೆ.

ನನ್ನ ರಾಜಕೀಯ ಜೀವನ ಪ್ರಾರಂಭವಾದದ್ದು 1946ರಲ್ಲಿ ಜಿಲ್ಲಾ ಬೋರ್ಡ್ ಸದಸ್ಯತ್ವಕ್ಕೆ ಮೈಸೂರು ಕಾಂಗ್ರೆಸ್ ಹುರಿಯಾಳಾಗಿ ಸ್ಪರ್ಧಿಸಿ ಗೆದ್ದಾಗ! ಆಗ ನನ್ನ

ರಾಜಕೀಯದ ಕೇಂದ್ರ ಬಿಂದು ಮಾನ್ಯ ಪಿ. ಎನ್. ಜವರಪ್ಪಗೌಡರೆಂದು ಹೇಳದಿದ್ದರೆ ಸತ್ಯಕ್ಕೆ ಅಪಚಾರಮಾಡಿದಂತಾಗುತ್ತದೆ.

ನಾನು ಸಕ್ರಿಯ ರಾಜಕಾರಣದಲ್ಲಿ ಪಳಗಿದವನಲ್ಲ. ಆದರೆ ಸ್ವಾತಂತ್ರ್ಯ ಪೂರ್ವದಲ್ಲೇ ಅನೇಕ ಬಾರಿ ತುರಂಗವಾಸವನ್ನನುಭವಿಸಿದ್ದ ಶ್ರೀ ಪಿ. ಎನ್. ಜವರಪ್ಪಗೌಡರು ರಾಜಕಾರಣ ವಿಶಾರದರಾಗಿದ್ದರು. ಅವರ ಸಮಯೋಚಿತ ಸಲಹೆ. ಸಹಾಯ ಶ್ರದ್ಧಾ ಸಕ್ತಿಗಳ ಫಲವಾಗಿ, ಸೋಲು ಗೆಲವುಗಳನ್ನನುಭವಿಸಿದರೂ. ಅನೇಕ ಸಮಾಜಸೇವಾ ಸಂಘ ಸಂಸ್ಥೆಗಳನ್ನು ಸಂಸ್ಥಾಪಿಸಿ ಬೆಳೆಸಲು ನನ್ನ ಚೇತನ ಚಿಗುರಿತು.ಹಾಗೆ ಚಿಗುರುತ್ತಿರುವಾಗಲೇ ಆ ಸಸಿಗೆ ನೀರೆರೆದು ಪೌಷ್ಟಿಕಾಂಶವನ್ನು ಕೊಟ್ಟು. ಕ್ರಿಮಿನಾಶಕ ಕೈಂಕರ್ಯಗಳನ್ನು ಕೈಗೊಳ್ಳಲು ಮತ್ತೊಂದು ಚೇತನದ ರೂಪದಲ್ಲಿ ನನ್ನ ಪಕ್ಕ ನಿಂತ ಶ್ರೀ ಕೆ. ಸಿಂಗಾರಿ ಗೌಡರು ನನ್ನ ವ್ಯಕ್ತಿತ್ವದಲ್ಲಿದ್ದ ಲೋಪದೋಷಗಳನ್ನು ಅಸಾಧಾರಣವಾಗಿ ತಿದ್ದಿದ ಪುಣ್ಯಶಾಲಿಗಳು.

ನಾನೇನಾದರೂ ಈ ಜೀವನದಲ್ಲಿ ಸಾಧಿಸಿದ್ದರೆ ಅದರಲ್ಲಿ ಶ್ರೀ ಪಿ. ಎನ್. ಜವರಪ್ಪ ಗೌಡರು ಹಾಗೂ ಕೆ. ಸಿಂಗಾರಿಗೌಡರಿಬ್ಬರೂ ಪಾಲುದಾರರೆಂದು ಹೇಳಲಿ. ಬೇಕಾಗಿದೆ.

ಈ ಮಾನ್ಯ ಮಿತ್ರರಿಬ್ಬರ ವ್ಯಕ್ತಿತ್ವದಲ್ಲಿ ಒಂದು ರೀತಿಯ ವಿಭಿನ್ನತೆಯಿದೆ. ಶ್ರೀ ಪಿ.ಎನ್. ಜವರಪ್ಪ ಗೌಡರು ಸಾಂದರ್ಭಿಕ ಕ್ರಿಯಾ ಶೀಲತೆಯಲ್ಲಿ ಚತುರರಾಗಿರುವುದಲ್ಲದೆ ಮಾತಿನ ಮೋಡಿಯಿಂದ ಎಲ್ಲರನ್ನೂ ಮುಗ್ಧರನ್ನಾಗಿ ಮಾಡುವ ಕಲೆಯನ್ನು ಮೈಗೂಡಿಸಿಕೊಂಡಿದ್ದಾರೆ. ಶ್ರೀ ಕೆ. ಸಿಂಗಾರಿಗೌಡರು ಸಂದರ್ಭ ಎಂತಹುದೇ ಇರಲಿ ತಮ್ಮ ತಾಳ್ಮೆ, ಮನ ಮತ್ತು ಸಮಚಿತ್ತತೆಯನ್ನು ಕಳೆದು ಕೊಂಡವರಲ್ಲ, ಬದಲಾಗಿ ನಾನೇ ತಾಳ್ಮೆಗೆಟ್ಟಾಗ ಅದಕ್ಕೆ ಸಾವಕಾಶವಾಗಿ ಕಡಿವಾಣ ಹಾಕುವ ಶಕ್ತಿ ಶ್ರೀ ಗೌಡರದಾಗಿತ್ತು. ನನ್ನೆಲ್ಲಾ ಕಷ್ಟ ಸುಖಗಳಲ್ಲಿ ಅವರು ಸಮಪಾಲುದಾರರಾಗಿ ಎಡಬಿಡದೆ ನನ್ನೊಡನಿದ್ದಾರೆ. ಶ್ರೀ ಸಿಂಗಾರಿ ಗೌಡರಂತಹ ನೈಜ ಮಿತ್ರರು ಸಿಗುವುದು ಅಪರೂಪ. ನಾನು ಕುಹಕಿಗಳ, ಕಿಡಿಗೇಡಿಗಳ ಪಿತೂರಿಯಿಂದ ತೀರಾ ಹತಾಶನಾಗಿ ತಲೆಯ ಮೇಲೆ ಕೈಹೊತ್ತು ಕುಳಿತಾಗ ನವಸ್ಫೂರ್ತಿಯ ತುತ್ತೂರಿಯನ್ನೂದಿ ನನ್ನನ್ನು ಕಾರ್ಯಮಗ್ನನನ್ನಾಗಿ ಮಾಡಿದ ಅನೇಕ ಕ್ಲಿಷ್ಟಕರ ಸಂದರ್ಭಗಳು ನನ್ನ ನೆನಪಿನಲ್ಲಿ ಇನ್ನೂ ಹಸಿರಾಗಿ ನಿಂತಿವೆ. ಕತ್ತಲು ಕವಿದಾಗ ಅವರು ನನಗೆ ದಾರಿದೀಪವಾಗಿ ಕಾಣಿಸಿಕೊಳ್ಳುತ್ತಿದ್ದರು. ಕೈಹಿಡಿದು ನಡೆಸುತ್ತಿದ್ದರು. ಇಂದೂ ನಡೆಸುತ್ತಿದ್ದಾರೆ.

ಶ್ರೀ ಕೆ. ಸಿಂಗಾರಿಗೌಡರ ರಾಜಕೀಯ ಜೀವನ ಪರಿಶುದ್ಧವಾದ ಜೀವನವೆಂಬುದನ್ನು ನೆನೆದು ಸಹಸ್ರಾರು ಜನ ಅವರಿಗೆ ತಮ್ಮ ಪ್ರೀತಿ ಗೌರವಗಳನ್ನರ್ಪಿಸುತ್ತಾರೆ. ದೊರೆತ ಅಧಿಕಾರವನ್ನು ಅವರು ಎಂದಿಗೂ ತಮ್ಮ ಅಥವಾ ತಮ್ಮವರ ಸ್ವಾರ್ಥಕ್ಕಾಗಿ ಬಳಸಿಕೊಂಡವರಲ್ಲ. ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಮಾತ್ರ

ವಲ್ಲಿ ಇತರ ಜಿಲ್ಲೆಗಳಲ್ಲಿಯೂ ಗೌರವಾಭಿಮಾನಗಳನ್ನು ಸಂಪಾದಿಸಿಕೊಂಡಿರುವ ಹಿರಿಯ ಜೀವ ಶ್ರೀ ಕೆ. ಸಿಂಗಾರಿ ಗೌಡರು. ಅವರಂತಹ ಸನ್ಮಿತ್ರರು ದೊರಕಿರುವುದು ನನ್ನ ಪುಣ್ಯ. ಜೀವನದ ವಿಶೇಷ.

ನನ್ನ ಸಿದ್ಧಿ, ಸಾಧನೆಯಲ್ಲಿ ಅವರ ಸಮಯೋಚಿತ ಮಾರ್ಗದರ್ಶನ ಅಪಾರ ಪಾತ್ರವಹಿಸಿದೆ. ಪ್ರಚಾರ ಪ್ರಿಯರಲ್ಲದ ಈ ಹಿರಿಯ ಜೀವನದ ಪರಿಚಯ ರಾಜ್ಯದ ಜನಕ್ಕಾಗಲಿ ಎಂಬ ಸದಾಶಯದಿಂದ ಈ ಸಂಭಾವನಾ ಗ್ರಂಥ ಹೊರಬೀಳಲಿದೆಯೇ ಹೊರತು, ಆಗಲೇ ದೊಡ್ಡ ವ್ಯಕ್ತಿಗಳಾಗಿರುವ ಅವರನ್ನು ದೊಡ್ಡವರನ್ನಾಗಿ ಮಾಡುವುದಕ್ಕಲ್ಲ.

ಅವರ ಜೀವನದ ಎಲ್ಲಾ ಸ್ತರಗಳನ್ನು ವಿವರವಾಗಿ ಬರೆಯ ಹೋದರೆ ಒಂದು ಉದ್ಗ್ರಂಥವೇ ಆದೀತು ! ಹಾಗೆ ಮಾಡಲವಕಾಶವಿಲ್ಲ. ಮಾಡುವಷ್ಟು ಕಾಲವಾಗಲೀ ಲೇಖನ ಶಕ್ತಿಯಾಗಲಿ ನನಗಿಲ್ಲ. ಮುಂದೆ ಯಾರಾದರೂ ಮಾಡಿಯಾರೆಂಬ ಆಸೆ ನನ್ನದಾಗಿದೆ.

ಶ್ರೀ ಗೌಡರು ದೀರ್ಘಾಯುವಾಗಲಿ. ಅವರ ಸೇವೆ ಸಮಾಜಕ್ಕೆ ಮತ್ತಷ್ಟು ದೊರಕಲಿ ಎಂದು ಹಾರೈಸಿ ಈ ಕಿರುಪರಿಚಯಕ್ಕೆ ವಿರಾಮ ಹಾಡುತ್ತೇನೆ.

ಕೆ. ವಿ. ಶಂಕರಗೌಡ

ಸಾತ್ವಿಕ ರಾಜಕಾರಣಿ

1938ನೆಯ ಸಂವತ್ಸರವಿರಬಹುದು. ಪ್ರೊ. ಟಿ. ಎಸ್. ವೆಂಕಣ್ಣಯ್ಯನವರಿನ್ನೂ ಜೀವಂತವಾಗಿದ್ದರು, ಕ್ರಿಯಾಶೀಲ ವ್ಯಕ್ತಿಯಾಗಿದ್ದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪ್ರೊ. ಎ. ಆರ್. ಕೃಷ್ಣಶಾಸ್ತ್ರಿಗಳು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ವೆಂಕಣ್ಣಯ್ಯನವರ ನೇತೃತ್ವದಲ್ಲಿ ಕರ್ನಾಟಕ ಸಂಘಗಳು "ನ ಭೂತೋ ನ ಭವಿಷ್ಯತಿ" ಎನ್ನುವಂತೆ ಯೋಜನೆಗಳನ್ನು ಹಮ್ಮಿಕೊಳ್ಳುತ್ತ, ನಾಡು ನುಡಿಗಳ ಚೈತನ್ಯವೇ ಮೂರ್ತಿವೆತ್ತಂತೆ ಕಾರ್ಯಕ್ರಮಗಳನ್ನು ರೂಪಿಸುತ್ತ, ಇಡೀ ಕನ್ನಡ ನಾಡಿನ ಸ್ಫೂರ್ತಿ ಕೇಂದ್ರಗಳಾಗಿದ್ದುವು. ಆ ಸಂಘಗಳು ಆ ಕಾಲೇಜುಗಳಿಗೆ ಮಾತ್ರವೇ ಸೀಮಿತವಾಗದೆ, ಇಡೀ ನಗರಗಳ ಹೆಮ್ಮೆಯ ವೃತ್ತ್ಕೇಂದ್ರಗಳಾಗಿದ್ದುವು. ಮಹಾರಾಜ ಕಾಲೇಜು ಕರ್ನಾಟಕ ಸಂಘ ಅಂಥ ಉತ್ಕರ್ಷ ಸ್ಥಿತಿಯಲ್ಲಿದ್ದಾಗ ಶ್ರೀ ಕೆ. ಸಿಂಗಾರಿಗೌಡರು ಅದರ ಕಾರ್ಯದರ್ಶಿಯಾಗಿದ್ದರು.

ಈ ಐವತ್ತು ವರ್ಷಗಳಲ್ಲಿ ಜನರ ರುಚಿ ಅಭಿರುಚಿಗಳು ಸಂಪೂರ್ಣವಾಗಿ ಬದಲಾವಣೆಗೊಂಡಿವೆ. ಯಂತ್ರ ವೈಜ್ಞಾನಿಕ ಯುಗದ ಸೌಕರ್ಯಗಳು ಆ ಬದಲಾವಣೆಗೆ ಇಂಬುಗೊಟ್ಟಿವೆ. ಈಗ ಪರಿಪಕ್ವಾನುಭವದ ಪ್ರಬುದ್ಧ ವಿದ್ವಾಂಸರ ಭಾಷಣಕ್ಕೂ ಜನ ನೆರೆಯುವುದಿಲ್ಲ. ಆ ಕಾಲದಲ್ಲಾದರೋ ಜ್ಯೂನಿಯರ್ ಬಿ.ಎ. ಸಭಾಂಗಣ ಶ್ರೋತೃಗಳಿಂದ ತುಂಬಿ ತುಳುಕುತ್ತಿತ್ತು. ಕರ್ನಾಟಕ ಸಂಘದ ಕಾರ್ಯಕ್ರಮಗಳಿಗಂತು ಊರಿನ ಜನ ಆಬಾಲ ವೃದ್ಧರಾದಿಯಾಗಿ ಬಂದು ಸೇರುತ್ತಿದ್ದರು. ಅಂಥದೊಂದು ಕಾರ್ಯಕ್ರಮದಲ್ಲಿಯೇ ನಾನು ಸಿಂಗಾರಿಗೌಡರನ್ನು ಮೊದಲು ನೋಡಿದ್ದು.

ಜೈತಲೆ ತೆಗೆದು ಕ್ರಾಪು. ತಾವರೆಮೊಗ್ಗಿನಾಕಾರದ ಮುಖ, ಕಷ್ಟವನ್ನು ಕಾಣದ ಕಾಂತಿಯುತವಾದ ಕಣ್ಣುಗಳು, ಸಂಪಗೆಯನ್ನು ಹೋಲುವ ನಾಸಿಕ, ಹೊಂಬಣ್ಣದ ಮೆಯ್‌ಗಳಿಂದ ಆಕರ್ಷಕವಾಗಿದ್ದ ಆ ವ್ಯಕ್ತಿ ಪಾದರಸದಂತೆ ಸಮಾರಂಭದ ವ್ಯವಸ್ಥೆಯಲ್ಲಿ ನಿರತರಾಗಿದ್ದರು. ಗುರುಶಿಷ್ಯರ ನಡುವೆ ತುಂಬ ಅಂತರವಿದ್ದ ಕಾಲವದು. ಪ್ರಾಧ್ಯಾಪಕರಿಗೆ ತೀರ ಹತ್ತಿರವಾಗಿದ್ದುಕೊಂಡು, ಅವರೊಡನೆ ಸಲೀಸಾಗಿ ವ್ಯವಹರಿಸುವ, ಸಲೀಸಾಗಿ ಮಾತಾಡುವ ಭಾಗ್ಯಕ್ಕೆ ಭಾಗಿಯಾದ ಆ ಸುಂದರ ವ್ಯಕ್ತಿ ವಿದ್ಯಾರ್ಥಿವೃಂದಕ್ಕೆ ಅಕ್ಕರೆಯ ಹಾಗೂ ಮೆಚ್ಚುಗೆಯ ಗೆಳೆಯರಾಗಿದ್ದರು. ಅವರು ಖಾದಿಧಾರಿಯಾಗಿದ್ದುದ್ದೂ ಗೆಳೆಯರ ಆಕರ್ಷಣೆಗೆ ಮತ್ತೊಂದು ಕಾರಣವಾಗಿತ್ತು.

ಸಿಂಗಾರಿಗೌಡರ ಬಾಹ್ಯ ಲಕ್ಷಣಗಳಲ್ಲಿಷ್ಟು ಚೆಲುವಿತ್ತೋ ಅವರ ನಡೆ ನುಡಿಗಳಲ್ಲಿಯೂ ಅಷ್ಟೇ ಸೊಗಸಿತ್ತು. ವಂದನಾರ್ಪಣೆಗೆಂದು ವೇದಿಕೆಯ ಮೇಲೆ ನಿಂತಾಗ ಸಭಿಕರನ್ನು ತಲೆತೂಗಿಸಬಲ್ಲ ಮಾತಿನ ಮೋಡಿ ಅವರಿಗೆ ವಶವಾಗಿತ್ತು. ಸಭಾಕಂಪನವಿಲ್ಲದೆ ನಿಂತ ದಿಟ್ಟನಿಲವು, ನಿರರ್ಗಳವಾಗಿ ಸ್ವಾರಸ್ಯವಾಗಿ ಸ್ಖಾಲಿತ್ಯರಹಿತವಾಗಿ ಹರಿಯುತ್ತಿದ್ದ ವಾಗ್ಧಾರೆ. ಅತಿಗೆ ಹೋಗದೆ, ಹದವಾಗಿ ಹಾಳತವಾಗಿ, ಯಾರಿಗೂ ಬೇಸರವಾಗದಂತೆ ಮುಕ್ತಾಯವನ್ನು ಸಾಧಿಸುವ ಅವರ ಜಾಣ್ಮೆ ವಿಶಿಷ್ಟವಾಗಿದ್ದುವು.

ಕಾಲೇಜು ವ್ಯಾಸಂಗ ಮುಗಿದ ನಂತರ ಜೀವನದ ದಂಧೆಗಳು ವಿದ್ಯಾರ್ಥಿಗಳನ್ನು ಪ್ರತ್ಯೇಕಗೊಳಿಸುವುದುಂಟಷ್ಟೆ. ಅವರನ್ನು ನಾನು ಮತ್ತೆ ನೋಡಿದ್ದು, ಕಾನೂನುಪರೀಕ್ಷೆ ಮುಗಿಸಿ, ಕರಿಕೋಟು ಧರಿಸಿದ ನಂತರ. ಮಂಡ್ಯದಲ್ಲಿ ಶ್ರೀ ಕೆ. ವಿ. ಶಂಕರಗೌಡರ ಜತೆಯಲ್ಲಿದ್ದ ನಮ್ಮ ವ್ಯವಹಾರಗಳು ಭಿನ್ನ ಭಿನ್ನ ವಲಯಗಳಿಗೆ ಸಂಬಂಧಿಸಿದುವಾದ್ದರಿಂದ ನಾವು ಎರಡು ಮೂರುವರ್ಷಕ್ಕೊಮ್ಮೆ ಆಕಸ್ಮಿಕವಾಗಿ ಸಂಧಿಸಿದ್ದುದುಂಟು. ಅವರು ಮಿತಭಾಷಿ. ನಾನು ಸಂಕೋಚ ಸ್ವಭಾವದವನು. ಅವರಾಗಲಿ, ನಾನಾಗಲಿ ಮೇಲೆ ಬಿದ್ದು ಮಾತಾಡುವ ಚಾಳಿಯವರಲ್ಲ. ಆದ್ದರಿಂದ ನಮ್ಮ ಮಾತುಕತೆ ಕುಶಲೋಪರಿ ಸಾಂಪ್ರತಗಳಲ್ಲಿ ಮುಕ್ತಾಯವಾಗುತ್ತಿತ್ತು.

ಆದರೆ ಅವರ ಕಾರುಬಾರುಗಳನ್ನು ಗೆಳೆಯರಿಂದ ಕೇಳಿ ತಿಳಿದುಕೊಳ್ಳುತ್ತಿದ್ದೆ. ಅತಿ ಸರ್ವತ್ರ ವರ್ಜಯೇತ್ ಎನ್ನುವುದು ಅವರ ಜೀವನ ಸೂತ್ರವೆಂಬಂತೆ ತೋರುತ್ತದೆ. ಲಜ್ಜಾವಿಹೀನರಾಗಿ, ಮುಂದೆ ಮುಂದೆ ನುಗ್ಗಿ, ಅತಿಕ್ರಮಿಸುವ, ಬೇರೆಯವರನ್ನು ಹಿಂದಕ್ಕೆ ಹಾಕುವ. ಗೆಳೆಯರನ್ನು ಹಿಂದಿನಿಂದ ಕಾಲು ಹಿಡಿದೆಳೆಯುವ, ತಮ್ಮದಲ್ಲದ ಪರರ ಸ್ವತ್ತನ್ನು ಲಪಟಾಯಿಸುವ, ಅನ್ಯರ ಅಭ್ಯುದಯಕ್ಕಾಗಿ ಮೂರು ಹೊತ್ತು ಮಚ್ಚರಿಸುವ ಅಸಹ್ಯ ರಾಜಕಾರಣಿಗಳ ಗುಂಪಿಗೆ ಸೇರಿದವರಲ್ಲವೆಂದು ಅವರನ್ನು ಬಲ್ಲವರೆಲ್ಲ ಹೇಳುತ್ತಾರೆ. ಸೇವೆ ಸಲ್ಲಿಸಬಹುದಾದ ಅವಕಾಶಗಳು ತಾವಾಗಿಯೇ ಒದಗಿ ಬಂದದ್ದಾದರೆ, ಹತ್ತು ಜನ ಸೇರಿ ಅವನ್ನು ತಮ್ಮ ಮೇಲೆ ಹೇರಿದ್ದಾದರೆ ಮಾತ್ರ ಸಂತೋಷವಾಗಿ ಎಂಥದ್ದಾದರೂ ಜವಾಬ್ದಾರಿಯನ್ನು ಹೊತ್ತುಕೊಂಡು, ಯಾವ ಕಳಂಕಕ್ಕೂ ಎಡೆಗೊಡದಂತೆ, ಕರ್ತವ್ಯ ದೃಷ್ಟಿಯಿಂದ ಅದನ್ನು ನಿರ್ವಹಿಸುವ ಛಾತಿ ಅವರಿಗೆ ರಕ್ತಗತವಾಗಿದೆ. ಸೇಡಾಗಲಿ, ಸ್ಪರ್ಧೆಯಾಗಲಿ ಅವರ ಜಾಯಮಾನಕ್ಕೆ ಒಗ್ಗುವಂಥವಲ್ಲ. ಅವರಲ್ಲಿ ಅಧಿಕಾರದಾಹವಿಲ್ಲ, ಪ್ರಚಾರ ಪ್ರದರ್ಶನಗಳ ಆಮಿಷವಿಲ್ಲ, ಭೋಗ ಜೀವನದ ಲಾಲಾಸೆಯೂ ಇಲ್ಲ ಎನ್ನುವುದಕ್ಕೆ ಅವರು ಮಂಡ್ಯವನ್ನು ತೊರೆದು ಹಳ್ಳಿಯಲ್ಲಿ ನೆಲಸಿದ್ದೇ ಅತ್ಯುತ್ತಮ ನಿದರ್ಶನ. ಸಂತೃಪ್ತಿಯುಳ್ಳ, ಆಶೆ ಆಮಿಷಗಳಿಲ್ಲದ, ಸರಳಜೀವಿಗೆ ಹಳ್ಳಿಯೇ ದಿಳ್ಳಿ, ಅದರಲ್ಲಿಯೇ ವಿಶ್ವವನ್ನು ಕಾಣುತ್ತಾರೆನ್ನುವುದಕ್ಕೆ ಸಿಂಗಾರಿಗೌಡರೇ ಸಾಕ್ಷಿ.

ಅವರು ಸ್ನೇಹಮಯಿ, ಅನಸೂಯರು. ನಿಗರ್ವಿಗಳು ಎಂಬುದನ್ನು ನಾನೇ ಅವರ ಬಾಳಿನಲ್ಲಿ ಕಂಡಿದ್ದೇನೆ. ಕೆ. ವಿ. ಶಂಕರಗೌಡರ ಷಷ್ಟ್ಯಬ್ದಿ ಸಮಾರಂಭದ ಸಮಯದಲ್ಲಿ ಅವರು ಪಟ್ಟ ಸಂತೋಷಕ್ಕೆ ಮೇರೆಯೇ ಇರಲಿಲ್ಲ. 'ಆ ಅಯ್ಯ ದೇಶಕ್ಕಾಗಿ ಸಮಾಜಕ್ಕಾಗಿ ಎಲ್ಲವನ್ನು ತ್ಯಾಗ ಮಾಡಿದ್ದಾನೆ, ಮನೆಮಾರು ತೊರೆದಿದ್ದಾನೆ : ಮಂಡ್ಯ ಜಿಲ್ಲೆ ಅವನಿಂದ ಪಾವನವಾಯ್ತು. ಅವನಿಗೆಷ್ಟು ಮಾಡಿದರೂ ಕಡಿಮೆಯೇ' ಎಂದರು. ಮತ್ತೊಮ್ಮೆ ರಾಜಕೀಯದ ವ್ಯವಹಾರಗಳನ್ನೆತ್ತಿಕೊಂಡಾಗ 'ಶಂಕರಗೌಡರು ಏಳಲಿ, ಬೀಳಲಿ, ಅವರೇ ನನ್ನ ನಾಯಕರು. ಅವರ ನಾಯಕತ್ವದಲ್ಲಿ ನನಗೆ ಸಂಪೂರ್ಣ ವಿಶ್ವಾಸವಿದೆ. ಅವರು ಕರೆದಾಗ ಹೋಗುತ್ತೇನೆ. ಕರೆಯದಾಗ ಮನೆಯಲ್ಲಿರುತ್ತೇನೆ' ಎಂದವರ ನಿಷ್ಕಪಟ ಪ್ರಾಮಾಣಿಕ ವಾಣಿಯನ್ನು ಕೇಳಿದಾಗ. ಇಂಥ ಜನರೂ ಭರತಖಂಡದಲ್ಲಿದ್ದಾರಲ್ಲ ; ಇಂಥವರಿಂದಲೇ ದೇಶದಲ್ಲಿ ಅಷ್ಟೋ ಇಷ್ಟೋ ಸತ್ಯ ಉಳಿದಿದೆ ; ಒಳ್ಳೆಯದು ನಡೆಯುತ್ತಿದೆ ಎಂದುಕೊಂಡೆ. ತಾನು ನಂಬಿದ ಶ್ರೇಷ್ಠ ತತ್ತ್ವಕ್ಕೆ ತನ್ನನ್ನು ತಾನೇ ಸಂಪೂರ್ಣವಾಗಿ ಸಮರ್ಪಿಸಿ ಕೊಂಡಾಗಲೇ ತನಗೂ ಒಳಿತಾಗುತ್ತದೆ, ನಾಡಿಗೂ ಶ್ರೇಯಸ್ಸೊದಗುತ್ತದೆ.

ಅಜ್ಞಾನದಲ್ಲಿ ಅರಿವಾಗಿ, ಕತ್ತಲಲ್ಲಿ ಮಣಿದೀಪವಾಗಿ. ಅಶುಭದ ನಡುವೆಯೂ ಶುಭವಾಗಿ, ದೀನದಲಿತರಿಗೆ ವರವಾಗಿ. ಸಿಂಗಾರಿಗೌಡರು ಹಲವು ಕಾಲ ನಾಡು ನುಡಿಗಳಿಗೆ ಕೈಂಕರ್ಯವನ್ನೆಸಗುತ್ತಾರೆಂದು ನಾನು ಹಾರೈಸುತ್ತೇನೆ.

ದೇ. ಜವರೇಗೌಡ

ಸಿಂಗಾರ ವ್ಯಕ್ತಿತ್ವ

ನಾನು ಶ್ರೀಮಾನ್ ಕೆ. ಸಿಂಗಾರಿ ಗೌಡರನ್ನು ಮೂರು ನಾಲ್ಕು ಸಂದರ್ಭಗಳಲ್ಲಿ ಕಂಡಿರಬಹುದು. ಒಂದು ಸಲ ಕಂಡಿರುವ ನೆನಪಂತೂ ಮನಸ್ಸಿನಲ್ಲಿ ಉಳಿದಿದೆ. ಅದು 1971 ರ ಕೊನೆಯ ಭಾಗ. ನಾಗಮಂಗಲದಲ್ಲಿ ಅಖಿಲ ಕರ್ನಾಟಕ ತೃತೀಯ ಜಾನಪದ ಸಮ್ಮೇಳನವೊಂದು ಅದ್ದೂರಿಯಾಗಿ ನಡೆಯಿತು. ಗೌಡರು ಸ್ವಾಗತ ಸಮಿತಿಯಲ್ಲಿ ಪದಾಧಿಕಾರಿಯಾಗಿದ್ದರೋ ಇಲ್ಲವೋ ನನಗೆ ಈಗ ನೆನಪಿಲ್ಲ. ಆದರೆ ಸಮ್ಮೇಳನದ ಭಾರ ಹೊತ್ತವರಲ್ಲಿ ಖಂಡಿತವಾಗಿಯೂ ಅವರೊಬ್ಬರಾಗಿದ್ದರು.

ಅದು ತುಂಬ ಯಶಸ್ವಿಯಾದ ಒಂದು ಸಮ್ಮೇಳನ. ಎಷ್ಟು ಯಶಸ್ವಿಯಾಯಿತೆಂದರೆ, ಸಮ್ಮೇಳನದ ಅಧ್ಯಕ್ಷರಾಗಿದ್ದ ಶ್ರೀ ಬೆಟಗೇರಿ ಕೃಷ್ಣಶರ್ಮರು (ಈಗ ದಿವಂಗತರು) ತಮ್ಮ ಸಮಾರೋಪ ಭಾಷಣದಲ್ಲಿ ಹೀಗೆ ಹೇಳಿದ್ದರು. "ನಾಗಮಂಗಲ ತಾಲ್ಲೂಕು ತುಂಬ ಬಡ ತಾಲ್ಲೂಕು ಎಂದು ಕೇಳಿದ್ದೇನೆ. ಆದರೆ ಇಲ್ಲಿನ ಜನರ ಹೃದಯ ಶ್ರೀಮಂತಿಕೆಯನ್ನು ನಾನು ಈ ಎರಡು ದಿನ ಕಣ್ಣಾರ ಕಂಡಿದ್ದೇನೆ. ಈ ಸಮ್ಮೇಳನ ಎಪ್ಪತ್ತೆರಡು ವರ್ಷ ವಯಸ್ಸಿನ ನನಗೆ ಇನ್ನೂ ನಾಲ್ಕು ವರ್ಷ ಬದುಕಬೇಕೆಂಬ ಆಸೆಯನ್ನು ಹುಟ್ಟಿಸಿದೆ."

ಸಿಂಗಾರಿ ಗೌಡರು ಸಮ್ಮೇಳನದ ವ್ಯವಸ್ಥೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ದಕ್ಷತೆ, ಪಾದರಸದಂತೆ ಅತ್ತಿತ್ತ ಓಡಾಡುತ್ತಿದ್ದ ಚಟುವಟಿಕೆ, ಎಲ್ಲರನ್ನೂ ಒಂದೇ ಸಮನೆ ಹಸನ್ಮುಖರಾಗಿ ಮಾತನಾಡಿಸುತ್ತಿದ್ದ ಹೃದಯವಂತಿಕೆ— ಇವೆಲ್ಲ ನಮ್ಮನ್ನು ಸಂಪೂರ್ಣವಾಗಿ ಅವರತ್ತ ಒಲಿಯುವಂತೆ ಮಾಡಿದ್ದವು. ಕೃಷ್ಣಶರ್ಮರಂತೂ ನನ್ನೊಡನೆ ಗೌಡರ ಈ ಗುಣಗಳನ್ನು ಮತ್ತೆ ಮತ್ತೆ ಕೊಂಡಾಡುತ್ತಿದ್ದರು. ಊರಿಗೆ ಹೋದ ಮೇಲೆ ಬರೆದ ಒಂದೆರಡು ಕಾಗದಗಳಲ್ಲಿಯೂ ಸಮ್ಮೇಳನದ ಯಶಸ್ಸನ್ನು ಪ್ರಸ್ತಾಪಿಸಿ, ಸಿಂಗಾರಿ ಗೌಡರನ್ನು ನೆನಪು ಮಾಡಿಕೊಂಡಿದ್ದರು. ಗೌಡರ ವ್ಯಕ್ತಿತ್ವ ಅಂಥದು, ಸರಳ, ನೇರ, ಆಕರ್ಷಕ.

ನಮ್ಮ ಸಮಾಜ ಹಾಗೂ ಸಾರ್ವಜನಿಕ ಜೀವನದಲ್ಲಿ ಸಿಂಗಾರಿ ಗೌಡರಂಥವರು ತುಂಬ ವಿರಳ. ಅವರು ಅಪ್ಪಟ ಗ್ರಾಮೀಣ ವ್ಯಕ್ತಿ. ಆಧುನಿಕ ವಿದ್ಯಾಭ್ಯಾಸ ಮಾಡಿದ್ದರೂ, ನಗರಗಳನ್ನು ಬಲ್ಲವರಾಗಿದ್ದರೂ, ಶಾಸನ ಸಭೆಗಳಲ್ಲಿ ಇದ್ದವರಾಗಿದ್ದರೂ

ತಮ್ಮ ಸಹಜ ಗುಣಗಳನ್ನು ಕಳೆದುಕೊಂಡವರಲ್ಲ. ಜನಾಕರ್ಷಣೆಗೆ ಕೃತಕ ನಗುವನ್ನು ಚೆಲ್ಲಿದವರಲ್ಲ.

ವಿದ್ಯಾರ್ಥಿ ದೆಸೆಯಲ್ಲಿ ಟಿ. ಎಸ್. ವೆಂಕಣ್ಣಯ್ಯ, ತೀ. ನಂ. ಶ್ರೀಕಂಠಯ್ಯ, ವಿ. ಸೀತಾರಾಮಯ್ಯ ಅವರಂಥ ಪ್ರಾತಃ ಸ್ಮರಣೀಯರ ಗರಡಿಯಲ್ಲಿ ಪಳಗಿದವರು, ಸಿಂಗಾರಿಗೌಡರು. ವಿಶ್ವವಿದ್ಯಾನಿಲಯದ ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಶ್ರಮಿಸಿದವರು. ಆ ದಿನಗಳಿಂದಲೇ ಕನ್ನಡದ ಪ್ರೀತಿಯನ್ನು ಮೈಗೂಡಿಸಿಕೊಂಡವರು. ಪದವಿ ತರಗತಿಗಳ ವಿದ್ಯಾರ್ಥಿಯಾಗಿದ್ದಾಗಲೆ ವಯಸ್ಕರ ಶಿಕ್ಷಣದಂಥ ಕೆಲಸದಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದರು. ತಮ್ಮ ಕಾರ್ಯ ದಕ್ಷತೆಯಿಂದ, ಈ ಕೆಲಸಕ್ಕಾಗಿ ಕುಲಪತಿ ಎನ್. ಎಸ್. ಸುಬ್ಬರಾಯರಂಥವರಿಂದಲೇ ಸಾವಿರಾರು ರೂಪಾಯಿಗಳ ನೆರವು ಪಡೆಯುವುದು ಅವರಿಗೆ ಸಾಧ್ಯವಾಗಿತ್ತು.

ಕೊಲ್ಲಾಪುರಕ್ಕೆ ವಕೀಲಿ ಅಧ್ಯಯನಕ್ಕೆ ಹೋದಾಗಲೂ ಸಿಂಗಾರಿಗೌಡರಿಗೆ ಹತ್ತಿರವಾಗಿದ್ದವರು ಸುವರ್ಣವ್ಯಕ್ತಿತ್ವದ ಕೆ. ಜಿ. ಕುಂದಣಗಾರರು. ಹೀಗೆ ತರುಣ ವಯಸ್ಸಿನಲ್ಲಿಯೇ ಅವರು ಶುಭ್ರ ಸುಂದರ ವ್ಯಕ್ತಿತ್ವವೊಂದನ್ನು ರೂಪಿಸಿಕೊಂಡರು. ಸಾರ್ವಜನಿಕ ಬದುಕಿಗೆ 'ಸಿಂಗಾರ'ವೆನ್ನಿಸಿದರು.

ಮುಂದೆ ಅವರು ಲಾಯರಾದರು. ಮೈಸೂರು ರಾಜ್ಯಾಂಗ ಸಭೆಯ ಸದಸ್ಯರಾದರು, ಶಾಸಕರಾದರು, ಸಹಕಾರಿಯಾದರು, ರಾಜಕಾರಣಿಯಾದರು. ಇವುಗಳಲ್ಲಿ ಒಂದೊಂದಾಗಿದ್ದವರೇ ಕೆಟ್ಟು ಹೋದವರು ಅನೇಕ. ಸಿಂಗಾರಿಗೌಡರು ಇವೆಲ್ಲ ಆಗಿಯೂ ಕೆಡದೆ ಉಳಿದರು ; ನಿಜವಾದ ಜನ ಸೇವಕರಾದರು. ಈಗ ಅವರು ಮಂಡ್ಯ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿದ್ದಾರೆ. ಸೇವೆಗೆ ಇನ್ನೊಂದು ಕ್ಷೇತ್ರ : ಮತ್ತೊಂದು ಅವಕಾಶ. ಸಾರ್ವಜನಿಕ ಜೀವನದಲ್ಲಿ ಸಿಂಗಾರಿಗೌಡರಂಥವರು ಇರುವವರೆಗೂ ನಾವು ಪೂರ್ಣ ನಿರಾಶರಾಗಬೇಕಾಗಿಲ್ಲ. ಅದು ನಮ್ಮ ಅದೃಷ್ಟ. ನಮ್ಮ ಭವಿಷ್ಯವೆಲ್ಲ ಇನ್ನು ಮೇಲೆ ವ್ಯಕ್ತಿಗಳನ್ನೇ ಅವಲಂಬಿಸಿರುವಂಥದು.

ಸಿಂಗಾರಿಗೌಡರನ್ನು ನಾನು ಹತ್ತಿರದಿಂದ ಬಲ್ಲವನಲ್ಲ ; ಅವರ ಚಟುವಟಿಕೆಗಳನ್ನು ಪ್ರತ್ಯಕ್ಷ ಕಂಡವನಲ್ಲ, ಆದರೆ ಅವರ ವ್ಯಕ್ತಿತ್ವ ಸಾಧನೆ ಸೇವೆಗಳ ಬಗ್ಗೆ ಬೇಕಾದಷ್ಟು ಕೇಳಿದ್ದೇನೆ ; ಕೇಳಿ ಸಂತೋಷಿಸಿದ್ದೇನೆ. ಅವರಿಗೆ ಎಪ್ಪತ್ತೆರಡು ವರ್ಷ ತುಂಬಿದ ಒಂದು ನೆವದಲ್ಲಿ ಮಿತ್ರರು, ಅಭಿಮಾನಿಗಳು ಕೂಡಿಕೊಂಡು ಅಭಿನಂದನ ಗ್ರಂಥವೊಂದನ್ನು ಒಪ್ಪಿಸುತ್ತಿರುವುದು ತುಂಬ ಉಚಿತವಾಗಿದೆ, ಅರ್ಥವತ್ತಾಗಿದೆ. ಇದೊಂದು ಋಣ ಸಂದಾಯದ ಪ್ರಯತ್ನ : ಕೃತಜ್ಞತೆಯ ಆರತಿ. ಈ ಸಂದರ್ಭದಲ್ಲಿ ನಾನೂ ಸಿಂಗಾರಿಗೌಡರಿಗೆ ನನ್ನ ಹೃದಯ ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರ ಸೇವೆ ನಮ್ಮ ಜನರಿಗೆ ಬಹುಕಾಲ ಒದಗಲಿ ಎಂದು ಹಾರೈಸುತ್ತೇನೆ.

ಹಾ. ಮಾ. ನಾಯಕ

ಪಕ್ಷಾತೀತವ್ಯಕ್ತಿತ್ವ

ನಮ್ಮ ಊರಿನಲ್ಲಿ ಮಾಧ್ಯಮಿಕ ಶಾಲೆ ಇರಲಿಲ್ಲ. ಆಗ ಮಾಧ್ಯಮಿಕ ಶಾಲೆಗೆ ಸೇರಬೇಕಾದರೆ ಮಂಡ್ಯಕ್ಕೆ ಬರಬೇಕಾಗಿತ್ತು. ನಾನು 1938ರಲ್ಲಿ ಹೀಗೆ ಮಂಡ್ಯಕ್ಕೆ ಬಂದೆ. ಆಗ ದೇಶಾದ್ಯಂತ ಸ್ವಾತಂತ್ರ್ಯ ಹೋರಾಟ ಬಹಳ ಬಿರುಸಿನಿಂದ ನಡೆಯುತ್ತಿತ್ತು. ಕರಡಹಳ್ಳಿ ಕೃಷ್ಣಪ್ಪಗೌಡರು, ಎಚ್. ಕೆ. ವೀರಣ್ಣಗೌಡರು. ಸಾಹುಕಾರ್ ಚೆನ್ನಯ್ಯ, ಟಿ. ಮರಿಯಪ್ಪ ಇವರೆಲ್ಲ ನಮ್ಮ ನಾಯಕರು. ಅವರ ಭಾಷಣಗಳು ಉಜ್ವಲವಾಗಿರುತ್ತಿದ್ದುವು. ಅವರೆಲ್ಲ ನಮಗೆ ಆದರ್ಶಪ್ರಾಯರು. ನಮ್ಮಲ್ಲಿ ರಾಷ್ಟ್ರ ಪ್ರೇಮ ಉದ್ದೀಪನಗೊಳ್ಳುವಂತೆ ತಿಳಿಯ ಹೇಳುತ್ತಿದ್ದರು. ಆ ಬಿಸಿಯಿಂದ ಪ್ರೇರಿತರಾಗಿ ವಿದ್ಯಾರ್ಥಿಗಳಾಗಿದ್ದ ನಾವೆಲ್ಲಾ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದೆವು. ಆಗ ಇನ್ನೂ ಸಿಂಗಾರಿಗೌಡರು ಲಾ ಓದುತ್ತಿದ್ದರೋ ಅಥವಾ ಮೈಸೂರಿನಲ್ಲಿ ಕಿರಿಯ ವಕೀಲರಾಗಿದ್ದರೋ ತಿಳಿಯದು. ಅವರ ಹೆಸರು ನನಗೆ ಆಗ ಇನ್ನೂ ಪರಿಚಯವಾಗಿರಲಿಲ್ಲವೆಂದೇ ಹೇಳಬೇಕು.

ಮಂಡ್ಯ ಒಂದು ಜಿಲ್ಲೆಯಾಗಿ ರೂಪುಗೊಂಡು ಜಿಲ್ಲೆಗೆ ಸಂಬಂಧಿಸಿದ ರಾಜಕೀಯ ಚಟುವಟಿಕೆಗಳು ಮೈಸೂರಿನಿಂದ ಇಲ್ಲಿಗೆ ಬಂದುವು. ಪ್ರಾಯಶಃ ಆಗ ಸಿಂಗಾರಿಗೌಡರೂ ತಮ್ಮ ವಕೀಲಿಯನ್ನು ಮಂಡ್ಯಕ್ಕೆ ವರ್ಗಾಯಿಸಿಕೊಂಡರೆಂದು ಕಾಣುತ್ತದೆ. ಆ ಕಾಲದಲ್ಲಿ ಶ್ರೀಮಾನ್ ಸಿಂಗಾರಿಗೌಡರು ಒಳ್ಳೆಯ ಲಾಯರ್ ಎಂದು ಕಕ್ಷಿದಾರರು ಹೊಗಳುವುದನ್ನು ನಾನು ಕೇಳಿದ್ದೆ. ಏಕೆಂದರೆ ನಮ್ಮ ಊರ ಕಡೆಯವರೆಲ್ಲಾ ಸಿಂಗಾರಿಗೌಡರಿಗೆ ತಮ್ಮ ಕೇಸುಗಳನ್ನು ಕೊಡುತ್ತಿದ್ದರು. ಆಗಲೇ ಗೌಡರು ಜನಪರರಾಗಿರುತ್ತಿದ್ದುದನ್ನು ಕೇಳಿದ್ದೇನೆ. ಅವರು ಬಡವರನ್ನು ಇಂತಿಷ್ಟೇ ಹಣಕೊಡಿ ಎಂದು ಕೇಳುತ್ತಿರಲಿಲ್ಲವಂತೆ. ಬಹುಶಃ ಹಳ್ಳಿಯವರ ಆರ್ಥಿಕ ಪರಿಸ್ಥಿತಿಯನ್ನು ಗೌಡರು ಚೆನ್ನಾಗಿ ಅರಿತುಕೊಂಡಿದ್ದರೆಂದು ನನಗನ್ನಿಸುತ್ತದೆ. ಸಾಮಾನ್ಯವಾಗಿ ಲಾಯರ್ ಕಕ್ಷಿದಾರನೊಂದಿಗೆ ಬಹಳ ಗತ್ತಿನಿಂದ ನಡೆದುಕೊಳ್ಳುವುದು ಆಗಿನ ಪದ್ಧತಿ. ಆದರೆ ಸಿಂಗಾರಿಗೌಡರು ಎಲ್ಲರೊಂದಿಗೂ ಅತ್ಯಂತ ಸರಳವಾಗಿ ನಡೆದುಕೊಳ್ಳುತ್ತಾರೆಂದು ಜನ ಹೊಗಳುತ್ತಿದ್ದರು. ಇದೆಲ್ಲಕ್ಕಿಂತ ಮಿಗಿಲಾಗಿ ಅವರೊಬ್ಬ ಉತ್ತಮ ದರ್ಜೆಯ ಲಾಯರ್ ಆಗಿದ್ದರು ಎಂಬುದು ಬಹು ಮುಖ್ಯ ಸಂಗತಿ.

1952ರಲ್ಲಿ ನಡೆದ ಮಹಾ ಚುನಾವಣೆ ಮಂಡ್ಯ ಜಿಲ್ಲೆಯ ದೃಷ್ಟಿಯಿಂದ ಅತ್ಯಂತ

ಮಹತ್ವವದ್ದು ಎಂದು ಹೇಳಬಹುದು. ಇಷ್ಟು ಹೊತ್ತಿಗೆ ನನಗೆ ಶ್ರೀಮಾನ್ ಕೆ. ಸಿಂಗಾರಿ ಗೌಡರ ಪರಿಚಯವಾಗಿತ್ತು. ಅವರು ಈ ಹೊತ್ತಿಗಾಗಲೇ ರಾಜಕೀಯ ಪ್ರವೇಶ ಮಾಡಿದ್ದರು. ಆ ಚುನಾವಣೆಯಲ್ಲಿ ಸಿಂಗಾರಿಗೌಡರು ನಾಗಮಂಗಲದಿಂದ ವಿಧಾನ ಸಭೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಈ ಚುನಾವಣೆ ಮಂಡ್ಯ ಜಿಲ್ಲೆಯ ದೃಷ್ಟಿಯಿಂದ ಬಹಳ ಮಹತ್ವವದ್ದು ಎಂದು ಏಕೆ ಹೇಳುತ್ತೇನೆಂದರೆ ಆಗ ಕೆ.ವಿ. ಶಂಕರ ಗೌಡರು. ಬಿ. ವೈ. ನೀಲೇಗೌಡರು, ಎಸ್. ಎಂ. ಲಿಂಗಪ್ಪ. ಕೆ. ಪುಟ್ಟಸ್ವಾಮಿ. ಎಚ್. ಕೆ. ವೀರಣ್ಣಗೌಡ ಇವರೆಲ್ಲರೂ ಜಿಲ್ಲೆಯ ಕ್ಷೇತ್ರಗಳಿಂದ ಸ್ಪರ್ಧಿಸಿದ್ದರು. ಆಗ ಮಂಡ್ಯ ಜಿಲ್ಲೆಯಿಂದ ಸ್ಪರ್ಧಿಸಿದ್ದ ಎಂಟು ಮಂದಿ ಕಾಂಗ್ರೆಸ್ ಅಭ್ಯರ್ಥಿಗಳೂ ಒಳ್ಳೆಯ ವಿದ್ಯಾವಂತರು ಲಾಯರ್‌ಗಳಾಗಿದ್ದವರು. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಂಡ ದೇಶ ಪ್ರೇಮಿಗಳಾಗಿದ್ದರು. ಮಳವಳ್ಳಿ ಕ್ಷೇತ್ರವೊಂದನ್ನುಳಿದು ಉಳಿದ ಏಳು ಕ್ಷೇತ್ರಗಳಿಂದಲೂ ಕಾಂಗ್ರೆಸ್ ಅಭ್ಯರ್ಥಿಗಳೇ ಗೆದ್ದು ಬಂದರು. ಮಳವಳ್ಳಿಯಿಂದ ಶ್ರೀ ನಾಗರಾಜಮೂರ್ತಿ ಸ್ವತಂತ್ರವಾಗಿ ಸ್ಪರ್ಧಿಸಿ ಜಯಗಳಿಸಿದ್ದರು.

1939ರಲ್ಲಿ ರೂಪುಗೊಂಡ ಮಂಡ್ಯ ಜಿಲ್ಲೆಗೆ ಆಗ ಇನ್ನೂ ಕಿರಿಯ ವಯಸ್ಸು. ರಾಜ್ಯದ ಭೂಪಟದಲ್ಲಿ ಅಂತಹ ಮಹತ್ವದ ಸ್ಥಾನವೇನೂ ಜಿಲ್ಲೆಗೆ ಇರಲಿಲ್ಲ. ಆದರೆ ಆ ಮಹಾಚುನಾವಣೆಯಲ್ಲಿ ಜಯಗಳಿಸಿದ ಈ ಎಂಟು ಮಂದಿ ಮಹನೀಯರು ಆ ಸ್ಥಾನವನ್ನು ಮಂಡ್ಯಜಿಲ್ಲೆಗೆ ದೊರಕಿಸಿಕೊಟ್ಟಿದ್ದರೆಂಬುದರಲ್ಲಿ ಎರಡನೆಯ ಮಾತಿಲ್ಲ. ಶ್ರೀಮಾನ್ ಕೆ. ವಿ. ಶಂಕರಗೌಡರ ನಾಯಕತ್ವದಲ್ಲಿ ಪಕ್ಷಭೇದವಿಲ್ಲದೆ ಇವರೆಲ್ಲ ಕೆಲಸ ಮಾಡಿದರು. ಅದು ಹೇಗೆ ಎಂದರೆ ಕಾಂಗ್ರೆಸ್ಸಿಗರಲ್ಲದ ನಾಗರಾಜಮೂರ್ತಿಯವರೂ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಲ್ಲಿ ಇವರೊಂದಿಗೆ ಅನುಕೂಲವಾಗಿ ನಿಂತರು. ಈ ಮಹನೀಯರೆಲ್ಲ ಆಗ ರಾಜಕೀಯ ಪ್ರಬಲರು. ನಿಷ್ಠಾವಂತರು. ಸಮಾಜಸೇವಕರು, ದೇಶ ಪ್ರೇಮಿಗಳು. ಈ ಯಾರಲ್ಲಿಯೂ ಅಧಿಕಾರದ ಹಂಬಲ ಇರಲಿಲ್ಲ. ಜನತಾ ಪ್ರತಿನಿಧಿಗಳು ಹೇಗೆ ಅಭಿವೃದ್ಧಿ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕೆಂಬುದನ್ನು ಈ ಗುಂಪು ತೋರಿಸಿಕೊಟ್ಟಿತು. ಮೈಸೂರುದೇಶದ ರಾಜಕೀಯದಲ್ಲಿ ಮಂಡ್ಯ ಜಿಲ್ಲೆಯನ್ನು ಮೊದಲನೆಯ ಸ್ಥಾನಕ್ಕೆ ಏರಿಸಿದವರು ಇವರು. ನನಗೆ ಈ ಇಡೀ ಗುಂಪಿನ ಬಗ್ಗೆ ಅತ್ಯಂತ ಹೆಚ್ಚಿನ ಗೌರವವಿದೆ. ಆದರೂ ಶ್ರೀಮಾನ್ ಸಿಂಗಾರಿಗೌಡರನ್ನು ಈ ಗುಂಪಿನ ಮಧ್ಯದಲ್ಲಿಯೂ ನಾನು ಅತ್ಯಂತ ಪ್ರಧಾನವಾಗಿ ಗೌರವಿಸುತ್ತೇನೆ. ಇದು ಮಂಡ್ಯ ಜಿಲ್ಲೆಯ ರಾಜಕೀಯ ಸುವರ್ಣಯುಗ.

ಶ್ರೀಮಾನ್ ಸಿಂಗಾರಿಗೌಡರದು ಅಹಂಕಾರರಹಿತ. ಸೌಜನ್ಯಪೂರ್ಣ. ಸ್ವಪ್ರತಿಷ್ಠೆ ಇಲ್ಲದ, ನಿಗರ್ವಿಯಾದ ವ್ಯಕ್ತಿತ್ವ. ಅವರು ಬೇರೆಯವರ ಮನನೋಯುವಂತೆ. ಬೇರೆಯವರಿಗೆ. ಅಸಹ್ಯವಾಗುವಂತೆ ನಡೆದುಕೊಂಡದ್ದನ್ನು ನಾನು ಕೇಳಿಯೂ ಇಲ್ಲ. ಕಂಡೂ ಇಲ್ಲ. ಅವರು ಯಾವುದೇ ಸ್ಥಾನಮಾನಗಳಿಗೂ ಆಸೆಪಟ್ಟವರಲ್ಲ. ತಮ್ಮ ಪಾಲಿನ

ಕೆಲಸ ಅದು ಯಾವುದೇ ಇರಲಿ ಅತ್ಯಂತ ನಿಷ್ಠೆಯಿಂದ, ಶ್ರದ್ಧೆಯಿಂದ ಮಾಡಿದವರು. ಅವರ ನಡೆನುಡಿಗಳು ಸ್ಫಟಿಕಸದೃಶವಾದವು. ಆದುದರಿಂದಲೇ ನಾನು ಅವರನ್ನು ಅಪಾರವಾಗಿ ಮೆಚ್ಚಿಕೊಂಡಿರುವುದು.

ನಾವು ಮಂಡ್ಯ ಇಂಟರ್ ಮೀಡಿಯೇಟ್ ಕಾಲೇಜಿನ ವಿದ್ಯಾರ್ಥಿಗಳು. ಆಗ ಶಂಕರಗೌಡರು ಅವರ ಮಿತ್ರರ ಗುಂಪು ಮಂಡ್ಯ ನಗರದಲ್ಲಿ ವಿದ್ಯಾರ್ಥಿ ನಿಲಯಗಳು, ಶಿಕ್ಷಣ ಸಂಸ್ಥೆಗಳ ನಿರ್ಮಾಣಕ್ಕಾಗಿ ಹಣ ಸಂಗ್ರಹಣೆಯಲ್ಲಿ ತೊಡಗಿದ್ದರು. ಇದಕ್ಕಾಗಿ ಅವರುಗಳೇ ನಾಟಕಗಳನ್ನು ಕಲಿತು ಸಹಾಯಾರ್ಥ ಪ್ರದರ್ಶನ ನೀಡುತ್ತಿದ್ದರು. ಈ ಸೇವಾ ಕಾರ್ಯದಲ್ಲಿ ಅವರು ವಿದ್ಯಾರ್ಥಿಗಳಾದ ನಮ್ಮನ್ನು ತೊಡಗಿಸುತ್ತಿದ್ದರು. ಹಸ್ತ ಪತ್ರಿಕೆಗಳನ್ನು ಹಂಚುವುದು. ಮಂದಿರದ ವ್ಯವಸ್ಥೆ ನೋಡಿಕೊಳ್ಳುವುದು ಇತ್ಯಾದಿ. ಹಾಗೆಯೇ ರೈತರ ಸಹಕಾರ ಸಂಘ. ಜನತಾ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯಲ್ಲಿಯೂ ಈ ಗುಂಪಿನದೇ ಸಾಹಸ. ಈ ಎಲ್ಲಾ ಸೇವಾ ಕಾರ್ಯಗಳಲ್ಲಿಯೂ ಶ್ರೀಮಾನ್ ಸಿಂಗಾರಿಗೌಡರನ್ನು ನಾನು ಅತ್ಯಂತ ಹತ್ತಿರದಿಂದ ಕಂಡಿದ್ದೇನೆ. ಗೌಡರು ರಾಜಕೀಯ ಮತ್ತು ಸೇವಾ ರಂಗವನ್ನು ಪ್ರವೇಶಿಸಿದ ಮೇಲೆ ಅವರು ನ್ಯಾಯಾಲಯಕ್ಕೆ ಹೋಗುವುದು ಕಡಿಮೆಯಾಯಿತು. ಅವರ ಕಿರಿಯ ವಕೀಲರಾಗಿದ್ದ ವೀರಂಕಯ್ಯನವರೂ ಪ್ರಾಮಾಣಿಕರು. ಗೌಡರನ್ನು ಅರ್ಥಮಾಡಿಕೊಂಡವರು. ಕಡೆಗೆ ತಮ್ಮ ತೀರಿಕೊಂಡಾಗ ಸಿಂಗಾರಿಗೌಡರು ತುಂಬಾ ಬೆಲೆಬಾಳುವ ತಮ್ಮ ಕಛೇರಿಯ ಸರ್ವಸ್ವವನ್ನೂ ಪ್ರತ್ಯೇಕವಾಗಿ ವೀರಂಕಯ್ಯನವರಿಗೆ ಬಿಟ್ಟುಕೊಟ್ಟು ತಾವು ತಮ್ಮ ಹಳ್ಳಿಗೆ ಹಿಂತಿರುಗಿದರು.

1969ರಲ್ಲಿ ಕಾಂಗ್ರೆಸ್ ಇಬ್ಭಾಗವಾಯಿತು. ಆ ಹೊತ್ತಿಗೆ ನಾನೂ ಸಕ್ರಿಯ ರಾಜಕೀಯದಲ್ಲಿದ್ದೆ, ಶಾಸಕನೂ ಆಗಿದ್ದೆ. ಇದೇ ಗುಂಪು ಆಗ ಸಂಸ್ಥಾ ಕಾಂಗ್ರೆಸ್‌ನಲ್ಲೇ ಉಳಿಯಿತು. ಮುಂದೆ ಅನೇಕ ಘಟನೆಗಳು ಸಂಭವಿಸಿ ನಾವೆಲ್ಲಾ ನಮ್ಮ ನಾಯಕರು ಶಂಕರಗೌಡರೂ ಸೇರಿದಂತೆ ಕಾಂಗ್ರೆಸ್ ಐ. ಜನತಾ ಅಲ್ಲಿ ಇಲ್ಲಿ ಅನೇಕ ಪಕ್ಷಗಳಿಗೆ ಜಿಗಿದೆವು ಮತ್ತೆ ವಾಪಸ್ ಬಂದೆವು. ಆದರೆ ಶ್ರೀಮಾನ್ ಕೆ. ಸಿಂಗಾರಿಗೌಡರು ಯಾವುದೇ ಕಾರಣಕ್ಕೂ ಪಕ್ಷಾಂತರ ಮಾಡಲೇ ಇಲ್ಲ. ಸಿಂಗಾರಿಗೌಡರನ್ನು ನಮ್ಮ ಕಡೆಗೆ ಸೇರಿಸಿಕೊಳ್ಳಲು ನಾವು ಇನ್ನಿಲ್ಲದ ಪ್ರಯತ್ನ ಮಾಡಿದೆವು. ಆದರೆ ಅವರು ಜಗ್ಗಲೇ ಇಲ್ಲ ಕಡೆಗೆ ನಾವೇ ಸೋತು ಸುಮ್ಮನಾದೆವು. ಇದು ಸಿಂಗಾರಿಗೌಡರ ರೀತಿ. ಅವರ ನಿಷ್ಠೆ. ನುಡಿದಂತೆ ನಡೆಯುವ ಛಲ. ಅಧಿಕಾರದ ಆಸೆ ಆಮಿಷಗಳಿಗೆ ಅವರು ಒಳಗಾಗುವರಲ್ಲ. ನಮ್ಮ ಪಕ್ಷಾಂತರದ ರಾಜಕೀಯದಲ್ಲೊಂದು ಅಪರೂಪದ ವ್ಯಕ್ತಿತ್ವ.

ನಾಗಮಂಗಲ ಕ್ಷೇತ್ರಕ್ಕೆ ಸಿಂಗಾರಿಗೌಡರು ಸದ್ದುಗದ್ದಲವಿಲ್ಲದೆ ಕೆಲಸ ಮಾಡಿದವರು. ಕ್ಷೇತ್ರದ ಯುವಕರಿಗೆ ಗೌಡರು ಒಳ್ಳೆಯ ಪ್ರೋತ್ಸಾಹ ನೀಡಿದವರು. ಮಂಡ್ಯದಲ್ಲಿ ವಕೀಲರಾಗಿದ್ದ ತರುಣರಾದ ಎಚ್. ಟಿ. ಕೃಷ್ಣಪ್ಪನವರನ್ನು ರಾಜಕೀಯದಲ್ಲಿ ಬೆಂಬಲಿಸಿ ಅವರ ಉನ್ನತಿಗೆ ಕಾರಣರಾದವರು. 1972ರಲ್ಲಿ ಇದು ಕಾಣುತ್ತದೆ.

ಕಾಂಗ್ರೆಸ್ ಐ ತನ್ನ ಉತ್ತುಂಗ ಶಿಖರದಲ್ಲಿದ್ದ ದಿನಗಳು. ಆಗ ಶಾಸಕರಾಗಿದ್ದ ಟಿ. ಎನ್. ಮಾದಪ್ಪಗೌಡರ ನಿಧನದಿಂದಾಗಿ ಉಪಚುನಾವಣೆಯೊಂದು ನಡೆಯಿತು. ಎಚ್. ಟಿ. ಕೃಷ್ಣಪ್ಪ ಸಂಸ್ಥಾ ಕಾಂಗ್ರೆಸ್ ಅಭ್ಯರ್ಥಿ. ಸಿಂಗಾರಿಗೌಡರು ಅವರ ಪರವಾಗಿ ನಿಂತರು. ಇಡೀ ಭಾರತೀಯ ರಾಜಕೀಯ ನಾಗಮಂಗಲದತ್ತ ನೋಡುತ್ತಿತ್ತು. ಕೃಷ್ಣಪ್ಪನವರು ಗೆದ್ದರು. ಪಕ್ಷಾಂತರ ಮಾಡಿದರು. ಆದರೆ ಸಿಂಗಾರಿಗೌಡರು ರಾಜಕೀಯವನ್ನೇ ತೊರೆದು ತಮ್ಮ ವ್ಯವಸಾಯದಲ್ಲಿ ನಿರತರಾಗಿಬಿಟ್ಟರು.

ಸಿಂಗಾರಿಗೌಡರು ಶಾಸಕರಾಗಿದ್ದಾಗ, ನಾನೂ ಶಾಸಕನಾಗಿದ್ದೆ. ಇಬ್ಬರೂ ಶಾಸಕರ ಭವನದಲ್ಲಿ ಒಂದೇ ಕೊಠಡಿಯಲ್ಲಿದ್ದೆವು. ನಾನು ಏಳುವುದು ಸ್ವಲ್ಪ ತಡ. ಆದರೆ ಗೌಡರು ಬೆಳಗಿನ ಐದು ಗಂಟೆಗೇ ಎದ್ದು ತಮ್ಮ ನಿತ್ಯಕರ್ಮ, ಸ್ನಾನಾದಿಗಳನ್ನು ಮುಗಿಸಿ ಪೂಜಾದರೂ ಓದುತ್ತಾ ಕುಳಿತು ಬಿಡುತ್ತಿದ್ದರು. ಇಷ್ಟೆಲ್ಲಾ ಅವರು ಮಾಡುವಾಗ, ದೀಪಹಾಕುವ, ಸ್ನಾನದ ಮನೆಯ ಯಾವುದೇ ಸದ್ದಾಗುತ್ತಿರಲಿಲ್ಲ. ಇದು ಸಿಂಗಾರಿ ಗೌಡರ ವಿಶಿಷ್ಟ ಸಭ್ಯತೆಯೆಂದು ನಾನು ತಿಳಿದಿದ್ದೇನೆ. ಆಮೇಲೆ ಸಾಮಾನ್ಯವಾಗಿ ತಿಂಡಿ. ಊಟ. ವಿಧಾನಸಭೆ ಇಲ್ಲೆಲ್ಲಾ ನಾವು ಒಟ್ಟಿಗೇ ಇರುತ್ತಿದ್ದೆವು. ಆದರೆ ಸಂಜೆ ಏಳರ ನಂತರ ನಾವು ಕ್ಲಬ್ ಅಲ್ಲಿ ಇಲ್ಲಿ ಹೋಗಿ ಬಿಡುತ್ತಿದ್ದೆವು. ಒಮ್ಮೆ ಗೌಡರು ನಮ್ಮನ್ನು "ಸಂಜೆ ಹೊತ್ತು ಎಲ್ಲಿಗೆ ಹೋಗ್ತೀರಿ ?" ಎಂದು ಕೇಳಿದರು. ಆಗ ಜೊತೆಯಲ್ಲಿದ್ದ ಮಿತ್ರ ಶಾಸಕ ಮಂಚೇಗೌಡರು "ಸಂಜೆ ಹೊತ್ತು ನಮ್ಮ ಸಹವಾಸ ನಿಮಗೆ ಬೇಡಸಾರ್" ಅಂದರು. ಸಿಂಗಾರಿಗೌಡರಿಗೆ ಕುತೂಹಲ "ಅಯ್ಯಪ್ಪ ನಾನೂ ಬರ್ತೀನಿ ನಿಮ್ಮ ಕೆಲಸ ನೀವು ಮಾಡಿ ನನ್ನ ಕೆಲಸ ನಾನು ಮಾಡ್ತೀನಿ" ಎಂದರು. ಸರಿ ಅವರನ್ನು ನಮ್ಮೊಂದಿಗೆ ಕರೆದೊಯ್ಯಲಾರಂಭಿಸಿದೆವು. ನನಗೆ ಆಶ್ಚರ್ಯವೆಂದರೆ ನಮ್ಮ ಯಾವ ಚಟಗಳೂ ಗೌಡರನ್ನು ಪ್ರಚೋದಿಸಲಾರದೆ ಹೋದುದು.

ನಮ್ಮ ರಾಜಕೀಯ ಅದು ಯಾವುದೇ ಪಕ್ಷವಾಗಲಿ ಇಂದು ಕದಡಿದ ನೀರಾಗಿದೆ. ಅದು ಬಗ್ಗಡ ಆಗುತ್ತಲೂ ಸಾಗುತ್ತಿದೆ ಅನ್ನಿಸುತ್ತದೆ. ರಾಜ್ಯದ ರಾಜಕೀಯದ ಮೇಲೆ ಹಿಡಿತ ಸಾಧಿಸಿದ್ದ ಮಂಡ್ಯ ಜಿಲ್ಲೆಯ ಪ್ರಭಾವ ಇಳಿಮುಖವಾಗುತ್ತಿದೆ. ಶಾಸಕರಲ್ಲಿ ಕೆಲವು ಪಕ್ಷ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆಯೂ ಒಗ್ಗಟ್ಟಿಲ್ಲ. ಮೇಲಿನ ನಾಯಕರೂ ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದ್ದಾರೆ. ಜಿಲ್ಲೆಯಲ್ಲಿ ಶಕ್ತಿಯುತ ನಾಯಕತ್ವ ಇಲ್ಲವಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಶ್ರೀಮಾನ್ ಸಿಂಗಾರಿ ಗೌಡರು ನಮಗೆ ಆಶಾಕಿರಣವಾಗಿ ಕಾಣುತ್ತಾರೆ.

ಕೆಲವು ಪಕ್ಷ ಜಿಲ್ಲೆಯ ಜನತಾ ಮುಖಂಡರು ಈ ಕೆಲಸಕ್ಕಾಗಿಯಾದರೂ ಅಭಿನಂದನೆಗೆ ಅರ್ಹರು. ಇಳಿಯುತ್ತಿರುವ ರಾಜಕೀಯ ಮೌಲ್ಯಗಳ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ರಾಜಕೀಯದಿಂದ ದೂರವಿದ್ದ ಸಿಂಗಾರಿಗೌಡರನ್ನು ಮತ್ತೆ ಸಕ್ರಿಯ ರಾಜಕೀಯಕ್ಕೆ ತಂದರು. ಜಿಲ್ಲಾ ಪರಿಷತ್ ಅಧ್ಯಕ್ಷರಂತಹ ಜವಾಬ್ದಾರಿಯುತ ಸ್ಥಾನಕ್ಕೆ ಎಲ್ಲರ ಪಕ್ಷಾ

ಶೀತ ಮನ್ನಣೆಗೆ ಪಾತ್ರರಾದ ಸಿಂಗಾರಿಗೌಡರಂತಹವರು ಬಂದುದು ನನಗಂತೂ ಸಮಾಧಾನ ತಂದಿದೆ, ಇದರಲ್ಲಿ ರಾಜಕೀಯ ಬೇಡ. ನೀತಿವಂತರು ಎಲ್ಲಿದ್ದರೂ ಜನಮನ್ನಣೆ ಹುಡುಕಿಕೊಂಡು ಬಂದೇಬರುತ್ತದೆಂಬುದಕ್ಕೆ ಶ್ರೀ ಸಿಂಗಾರಿಗೌಡರೇ ಸಾಕ್ಷಿ. ಎಲ್ಲ ಪಕ್ಷದವರೂ ಅವರಿಗೆ ಸಹಕಾರ ನೀಡುತ್ತಾರೆ. ಅಧ್ಯಕ್ಷರಾಗಿ ಅವರು ಯಶಸ್ವಿಯಾಗುತ್ತಾರೆಂಬ ನಂಬಿಕೆ ನನಗಿದೆ. .

ಇಂದಿನ ಜನಜೀವನಕ್ಕೂ ಹಿಂದಿನ ಜನಜೀವನಕ್ಕೂ ಅಜಗಜಾಂತರವನ್ನು ಯಾರು ಬೇಕಾದರೂ ಕಾಣಬಹುದು. ಹಿಂದಿನ ಜನಜೀವನವು ಸಮಾಜ ನೆಮ್ಮದಿ ಸಮೃದ್ಧಿಗಳ ಸಮಾಜ. ಆದರೆ ಇಂದಿನ ಸಮಾಜ ? ಎಲ್ಲಾ ವ್ಯವಸ್ಥೆಗಳೂ ಅರ್ಥಿಕ, ರಾಜಕೀಯ, ಸಾಮಾಜಿಕ, ನೈತಿಕ ಇತ್ಯಾದಿಗಳು. ಮೇಲಾಗಿ ಪ್ರಜಾಪ್ರಭುತ್ವದ ನಾಲ್ಕು ಅಂಗಗಳು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಪತ್ರಿಕಾಂಗ ಬಹಳ ಗೊಂದಲಮಯವಾಗಿ ಪ್ರಜಾಪ್ರಭುತ್ವವೇ ಕುಸಿದು ಬೀಳುವ ಸ್ಥಿತಿಯಲ್ಲಿರುವ ಈ ಸಂದರ್ಭದಲ್ಲಿ ಶ್ರೀ ಸಿಂಗಾರಿ ಗೌಡರಂತಹವರ ಆದರ್ಶ ಇಂದಿನ ಯುವ ಪೀಳಿಗೆಗೆ ಮಾರ್ಗದರ್ಶಕವಾಗಿ ಈ ರಾಷ್ಟ್ರವನ್ನು ಪ್ರಜಾಪ್ರಭುತ್ವ ತತ್ವಗಳ ಆಧಾರದ ಮೇಲೆ ಗಾಂಧೀಜೀಯವರು ಕಂಡ "ಸುಖೀ ರಾಜ್ಯ" ಸ್ಥಾಪಿಸಲು ಸಾಧ್ಯವಾಗುತ್ತದೆಂಬುದು ನನ್ನದೃಢನಂಬಿಕೆ. ನಮ್ಮ ರಾಜಕೀಯ ಕ್ಷೇತ್ರ ಹಸನಾಗಬೇಕು. ರಾಜಕಾರಣಿಗಳು ಸಮಾಜ ಸೇವಕರಾಗಬೇಕು. ದೇಶ ಪ್ರೇಮಿಗಳಾಗಬೇಕು. ಮುಂದಿನ ಪೀಳಿಗೆಗೆ ಆದರ್ಶನಾಯಕತ್ವದ ಉದಾಹರಣೆಯಾಗಬೇಕು. ಸ್ಫೂರ್ತಿಯಾಗಬೇಕು. ನಮ್ಮ ನಾಡಿನಲ್ಲಿ ಶ್ರೀ ಸಿಂಗಾರಿ ಗೌಡರಂತಹ ಹತ್ತು ಇಪ್ಪತ್ತು ಮಂದಿ ಇದ್ದರೆ ಇದು ಸಾಧ್ಯವಾಗುತ್ತದೆಂದು ನನಗನ್ನಿಸುತ್ತದೆ. ಶ್ರೀ ಗೌಡರಿಗೆ ದೇವರು ಸನ್ಮಂಗಳವನ್ನುಂಟುಮಾಡಲಿ.

ಜಿ. ಮಾದೇಗೌಡ

ಸಿಂಗಾರಣ್ಣ

ಕರಡಹಳ್ಳಿಯ ಮರೀಗೌಡರು ಮತ್ತು ಅವರ ಮನೆತನ ನಾಡಿನಲ್ಲಿ ಹೆಸರಾದುದು. ಮರೀಗೌಡರು ಸಾಕುತ್ತಿದ್ದ ದನಗಳ ತಳಿಗೆ ಕರಡಹಳ್ಳಿ ತಳಿ ಎಂದೇ ಹೆಸರು ಬಂದಿತ್ತು. 1940ರಲ್ಲಿ ದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ದನಗಳ ಪ್ರದರ್ಶನದಲ್ಲಿ ಕರಡಹಳ್ಳಿಯ ತಳಿ ಬಹುಮಾನಗಳಿಸಿತೆಂದ ಮೇಲೆ ಅವುಗಳ ಮಹತ್ವವನ್ನು, ಮರೀಗೌಡರ ಶಕ್ತಿಯನ್ನು ವಿವರಿಸುವ ಅಗತ್ಯವಿಲ್ಲವೆಂದು ಭಾವಿಸಿದ್ದೇನೆ. ಮರೀಗೌಡರ ಮಗ ದಿವಂಗತ ಕೃಷ್ಣಪ್ಪಗೌಡರು ದೆಹಲಿಗೆ ಹೋಗಿ ಆ ಪ್ರಶಸ್ತಿಯನ್ನು ಸ್ವೀಕರಿಸಿದರು.

ಮರೀಗೌಡರದು ಒಂದು ರೀತಿಯ ಮಹತ್ವದ ಸಾಧನೆಯಾದರೆ ಅವರ ಮಗ ಕೃಷ್ಣಪ್ಪಗೌಡರದು ದೇಶಾದ್ಯಂತ ಕೀರ್ತಿಗಳಿಸಿದ ಮಹಾನ್ ವ್ಯಕ್ತಿತ್ವ. ಈ ಶತಮಾನದ ಆದಿಯಲ್ಲಿಯೇ ಪ್ರಜಾಪಕ್ಷ ಮತ್ತು ಪ್ರಜಾಮಿತ್ರ ಎಂಬ ರಾಜಕೀಯ ಪಕ್ಷಗಳು ಸ್ಥಾಪನೆಗೊಂಡು ಬೆಳೆಯುತ್ತಿದ್ದವು. ಸುಮಾರು ನೂರೈವತ್ತು ವರ್ಷಗಳ ಹಿಂದೆಯೇ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳಿಂದ ಕೂಡಿದ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಗಳು ಸ್ಥಾಪನೆಗೊಂಡು ಜನರಲ್ಲಿ ವಿಶೇಷವಾಗಿ ವಿದ್ಯಾವಂತರಲ್ಲಿ ರಾಜಕೀಯ ಪ್ರಜ್ಞೆ ಮೂಡಲು ಕಾರಣವಾಗಿದ್ದವು.

ಈಗಿನ ಮಂಡ್ಯ ಜಿಲ್ಲೆಯೂ ಸೇರಿದಂತೆ ಆಗ ವಿಶಾಲ ಮೈಸೂರು ಜಿಲ್ಲೆ ಅಸ್ತಿತ್ವದಲ್ಲಿದ್ದಿತು. ಶ್ರೀ ಕೃಷ್ಣಪ್ಪಗೌಡರು ಮಂಡ್ಯ ಪ್ರದೇಶದ ಮುಖಂಡರಾಗಿದ್ದು ಪ್ರಜಾಪ್ರತಿನಿಧಿ ಸಭೆ. ಜಿಲ್ಲಾಬೋರ್ಡ್ ಹೀಗೆ ಯಾವುದಾದರೊಂದರ ಸದಸ್ಯರಾಗಿರುತ್ತಿದ್ದರು. ಅವರು ಸುಮಾರು ಕಾಲು ಶತಮಾನದಷ್ಟು ಕಾಲ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಮೈಸೂರು ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾಗಿ. ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ ಅವರು ಸಲ್ಲಿಸಿದ ಸೇವೆ ಚಿರಸ್ಮರಣೀಯ.

ಕರಡಹಳ್ಳಿ ಮನೆತನ ಕಳೆದ ಮೂರು ತಲೆಮಾರುಗಳಿಂದ ಪ್ರಸಿದ್ಧಿಯ ಗದ್ದುಗೆಯಿಂದ ಇಳಿದೇ ಇಲ್ಲ. ಮರೀಗೌಡರು, ಕೃಷ್ಣಪ್ಪಗೌಡರು, ನಂತರ ಸಿಂಗಾರಿಗೌಡರು ಅದನ್ನು ಮುಂದುವರಿಸುತ್ತಿದ್ದಾರೆ. ತಮ್ಮ ವಿದ್ಯಾರ್ಥಿ ದಿಸೆಯಲ್ಲಿಯೇ ರಾಜಕೀಯ ಪ್ರವೇಶ ಮಾಡಿದ ಇವರು ರಾಜಕೀಯದ ಆಳ ಅಂತರಾಳವನ್ನು ಬಲ್ಲವರು. ತಂದೆಯ ಮಹಾನ್ ವ್ಯಕ್ತಿತ್ವದ ನೆರಳಿನಲ್ಲಿಯೂ ಸ್ವತಂತ್ರ ವ್ಯಕ್ತಿತ್ವ ರೂಪಿಸಿಕೊಂಡವರು.

ಮೈಸೂರು ಸಂಸ್ಥಾನದಲ್ಲಿ ಉಗ್ರವಾದ ಸ್ವಾತಂತ್ರ್ಯಚಳುವಳಿ ಇನ್ನೂ

ಆರಂಭವಾಗಿರಲಿಲ್ಲ. ಇಲ್ಲಿನ ಮುಖಂಡರು ಅಖಿಲ ಭಾರತ ಕಾಂಗ್ರೆಸ್ ಮಹಾ ಅಧಿವೇಶನಗಳಲ್ಲಿ ಭಾಗವಹಿಸಿ ಬರುತ್ತಿದ್ದರಷ್ಟೆ. ರಾಷ್ಟ್ರೀಯ ಕಾಂಗ್ರೆಸ್ ನಾಯಕರು ಮೈಸೂರಿಗೆ ಬಂದು ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಿದ್ದರು. ಸಿಂಗಾರಿಗೌಡರು ಇಂತಹ ಸಭೆಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದರು. ಆಗ ಕಾಂಗ್ರೆಸ್ಸಿಗರ ಆಂದೋಲನ ಎಂದರೆ ಪಾನನಿರೋಧ ಮತ್ತು ವಿದೇಶಿ ವಸ್ತುಗಳ ತ್ಯಾಜ್ಯ. ಬಹಿರಂಗ ಭಾಷಣಗಳ ನಂತರ ವಿದೇಶಿ ವಸ್ತ್ರ ದಹನ ಸ್ವದೇಶೀವಸ್ತ್ರ ತೊಡುವ ಪ್ರತಿಜ್ಞೆ ನಡೆಯುತ್ತಿದ್ದುವು. 1935ರಲ್ಲಿ ಎಂದು ಕಾಣುತ್ತದೆ. ಸಿಂಗಾರಿಗೌಡರು ತಮ್ಮ ವಿದೇಶಿ ವಸ್ತ್ರಗಳನ್ನು ತೊರೆದು ಖಾದೀಧಾರಿಯಾದವರು ಇಂದಿಗೂ ಅದನ್ನು ವ್ರತವಾಗಿ ಉಳಿಸಿಕೊಂಡಿದ್ದಾರೆ.

1938ರಲ್ಲಿ ಮಂಡ್ಯ ಜಿಲ್ಲೆಯ ಶಿವಪುರದಲ್ಲಿ ರಾಷ್ಟ್ರಕೂಟ ಎಂಬ ಹೆಸರಿನ ಮಹಾ ಅಧಿವೇಶನವೊಂದು ನಡೆಯಿತು. ಮೈಸೂರು ಕಾಂಗ್ರೆಸ್ ಇಲ್ಲಿಂದಲೇ ಆರಂಭವಾಯಿತೆಂದು ಹೇಳಿದರೆ ತಪ್ಪಾಗುವುದಿಲ್ಲ. ಈ ರಾಷ್ಟ್ರಕೂಟಕ್ಕೆ ನಾಡಿನ ಮೂಲೆ ಮೂಲೆಗಳಿಂದ ಜನ ತಂಡೋಪ ತಂಡವಾಗಿ ಬಂದು ಸೇರಿದರು. ಶ್ರೀ ಸಿಂಗಾರಿಗೌಡರು ಆ ಮಹಾಧಿವೇಶನದ ಸ್ವಯಂ ಸೇವಕರಾಗಿ ಅಲ್ಲಿಗೆ ಆಗಮಿಸಿದ್ದ ಹಿರಿಯ ರಾಜಕಾರಣಿಗಳ ಪರಿಚಯ ಮಾಡಿಕೊಂಡರು.

ಬಿ. ಎ. ಪದವಿ ಪಡೆದ ನಂತರ ನ್ಯಾಯಶಾಸ್ತ್ರ ಪಾರಂಗತರಾಗಿ ವಕೀಲಿ ಪ್ರಾರಂಭಿಸಲು ಮಂಡ್ಯಕ್ಕೆ ಬಂದು ವಕೀಲಿತನ ಪ್ರಾರಂಭಿಸಿ ಕರ್ತವ್ಯ ನಿಷ್ಠರಾಗಿ ಕಾರ್ಯ ನಿರ್ವಹಿಸಿ ಹಿರಿಯ ವಕೀಲರಿಂದ ಹಾಗೂ ನ್ಯಾಯಾಧೀಶರುಗಳಿಂದ ಒಳ್ಳೆಯ ಹೆಸರನ್ನು ತಮ್ಮ ಉದ್ಯಮದಲ್ಲಿ ಗಳಿಸಿ ಸೈ ಎನಿಸಿಕೊಂಡರು.

ಇದೇ ಕಾಲಕ್ಕೆ ಶ್ರೀ ಕೆ. ವಿ. ಶಂಕರಗೌಡರು. ಆಗ ಸಂಸತ್ ಸದಸ್ಯರಾಗಿದ್ದ ದಿವಂಗತ ಎಂ.ಕೆ. ಶಿವನಂಜಪ್ಪ ಇವರುಗಳು ಮಂಡ್ಯದಲ್ಲಿ ವಕೀಲಿತನ ಪ್ರಾರಂಭಿಸಿದ್ದರು. ಇವರುಗಳು ತಮ್ಮ ವಕೀಲತನದ ಜೊತೆಗೆ ಇನ್ನಿತರ ಸ್ನೇಹಿತರುಗಳ ಜೊತೆಗೂಡಿ ರೈತರ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರದೊಡನೆ ವ್ಯವಹಾರ ಪ್ರಾರಂಭಿಸಿದರು. ಸಿಂಗಾರಿಗೌಡರು ಸ್ನೇಹಿತರುಗಳ ಜೊತೆ ಸೇರಿ ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸುತ್ತಾ ಬಂದು. ಎರಡನೇ ಮಹಾಯುದ್ಧ ಮುಗಿದ ಮೇಲೆ ಬಟ್ಟೆ ಆಹಾರ ಪದಾರ್ಥಗಳು. ಹೀಗೆ ಗ್ರಾಮಾಂತರ ಜನರ ನಿತ್ಯೋಪಯೋಗಿ ಅಗತ್ಯ ವಸ್ತುಗಳ ತುಟ್ಟಿ ಗಗನ ಮುಟ್ಟಿದ ದಿನಗಳು. ಇವುಗಳ ಪರಿಹಾರ ಮಾರ್ಗಕ್ಕೆ ದಿವಂಗತ ಎಚ್. ಸಿ. ದಾಸಪ್ಪನವರು ಮಾರ್ಗದರ್ಶಕರಾಗಿ ಬಂದು ರೈತರ ಸಂಘಟನೆ ಮತ್ತು ಅವರಿಗೆ ಸಹಾಯಕವಾಗಿ ಸಹಕಾರ ಸಂಘ ಸ್ಥಾಪಿಸುವ ಸಲಹೆಗೆ ಸಹಕಾರ ನೀಡಿದರು.

ಈ ಮೊದಲೇ ದಿವಂಗತರುಗಳಾದ ಎಚ್. ಕೆ. ವೀರಣ್ಣಗೌಡರು, ಹೊಸಗಾನಹಳ್ಳಿ ಎಚ್. ಕೆ. ಪುಟ್ಟಣ್ಣಗೌಡರು, ಇಂಡುವಾಳಿನ ಎಚ್. ಹೊನ್ನಯ್ಯನವರುಗಳು ಇರ್ವಿನ್ ನಾಲಾ ರೈತರ ಸಂಘ ಸಂಘಟಿಸಿ ದೊಡ್ಡ ಹೋರಾಟ ನಡೆಸಿದ ನಂತರ ಈ ಸಂಘದ

ಕಾರ್ಯ ಚಟುವಟಿಕೆಗಳು ಸಂಪೂರ್ಣವಾಗಿ ಸ್ಥಗಿತಗೊಂಡಿದ್ದವು. ಈ ಸಂಘದ ಹೆಸರಿನಲ್ಲೇ ಹೊಸದಾಗಿ ಕಾರ್ಯ ಚಟುವಟಿಕೆ ಆರಂಭಿಸಿ. ಸಂಘದ ಜೊತೆಗೆ ರೈತರ ಸಹಕಾರ ಸಂಘವನ್ನು ಸ್ಥಾಪಿಸಿ ತನ್ನಧೀನ ರೈತರನ್ನು ಬಡ್ಡಿಯಿಂದ ಬಿಡುಗಡೆಮಾಡಲು ರೈತರ ಸಹಕಾರ ಸಂಘವನ್ನು ಸ್ಥಾಪಿಸಲು ಅಣಿಮಾಡಿ. ರಿಜಿಸ್ಟರು ಮಾಡಿಸಿಕೊಂಡು ರೈತರಿಂದ ಷೇರುಧನ ವಸೂಲಿ ಕಾರ್ಯ ಪ್ರಾರಂಭಿಸಲಾಯಿತು. ಈ ಕಾರ್ಯಕ್ಕೆ ಶ್ರೀಗಳಾದ ಕೆ. ವಿ. ಶಂಕರಗೌಡ. ಪಿ. ಎಸ್. ಜವರಪ್ಪಗೌಡ ಮತ್ತು ಕೆ. ಬೆಟ್ಟಸೆಟ್ಟಿಯವರುಗಳೊಡನೆ ಸಿಂಗಾರಿಗೌಡರು ವಕೀಲಿತನ ಬಿಟ್ಟು ಪೂರ್ಣಕಾಲ ಸಹಕಾರ ಸಂಘದ ಪರಿಪೂರ್ಣತೆಗೆ ಶ್ರಮಿಸಿದರು. ಮುಂದೆ ಕೆಲವು ಕಾಲ ಸಂಘದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ಸಂಘಕ್ಕೆ ಭಾರತಾದ್ಯಂತ ಒಳ್ಳೆ ಹೆಸರು ಗಳಿಸುವಂತೆ ಮಾಡಿದರು.

ಸ್ವರಾಜ್ಯ ನಂತರ ಪ್ರಾಂತವಾರು 'ರಾಜ್ಯಾಂಗ ರಚನಾ' ಸಭೆಗಳನ್ನು ಚುನಾಯಿಸಲು ಕೇಂದ್ರ ಸರ್ಕಾರ ನಿರ್ಧರಿಸಿತು. 'ರಾಜ್ಯಾಂಗ ರಚನಾ' ಸಭೆಗೆ ತರುಣರುಗಳನ್ನು ಉಮೇದುವಾರರುಗಳನ್ನಾಗಿ ಆಯ್ಕೆಮಾಡಲು ಜಿಲ್ಲಾ ಕಾಂಗ್ರೆಸ್ ಸಮಿತಿ ನಿರ್ಣಯಿಸಿ ಸಿಂಗಾರಿಗೌಡರನ್ನು ಈ ಚುನಾವಣೆಗೆ ಉಮೇದುವಾರರನ್ನಾಗಿ ಆಯ್ಕೆಮಾಡಿತು. ಚುನಾವಣೆಯಲ್ಲಿ ಇನ್ನಿತರ ಕಾಂಗ್ರೆಸ್ ಉಮೇದುವಾರರ ಜೊತೆ ಸಿಂಗಾರಿಗೌಡರು ಜಯಗಳಿಸಿದರು. ಜಿಲ್ಲೆಯ ಎಲ್ಲಾ ಸ್ಥಾನಗಳನ್ನೂ ಕಾಂಗ್ರೆಸ್ ಗಳಿಸಿಕೊಂಡಿತ್ತು. ಮೂರು ನಾಲ್ಕು ಬಾರಿ "ಮೈಸೂರು ರಾಜ್ಯಾಂಗ ರಚನಾ" ಸಭೆ ಸಮಾವೇಶಗೊಂಡ ನಂತರ ಕೇಂದ್ರ ಸರ್ಕಾರವು ರಾಜ್ಯಾಂಗ ರಚನಾಸಭೆ ಕೇಂದ್ರಕ್ಕೆ ಒಂದೇ ಸಾಕೆಂದು ನಿರ್ಣಯಿಸಿದ ಮೇಲೆ ಇನ್ನಿತರ ಎಲ್ಲಾ ಪ್ರಾಂತಗಳ ರಾಜ್ಯಾಂಗರಚನಾ ಸಭೆಗಳು ಪ್ರಾಂತೀಯ ವಿಧಾನಸಭೆಗಳಾಗಿ ಮಾರ್ಪಾಟಾದುವು. ಅಂತೆಯೇ ಮೈಸೂರು ದೇಶದಲ್ಲಿಯೂ ಅದು ವಿಧಾನಸಭೆಯಾಗಿ ಮಾರ್ಪಾಟಾಯಿತು.

ಮಂಡ್ಯ ನಗರದಲ್ಲಿ ನಿರ್ಮಾಣಗೊಂಡಿರುವ ರೈತರ ಸಹಕಾರ ಸಂಘ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್. ಪಿ. ಇ. ಎಸ್. ವಿದ್ಯಾಸಂಸ್ಥೆ. ಹೀಗೆ ನಾನಾ ಸಾರ್ವಜನಿಕ ಕಾರ್ಯಕ್ಷೇತ್ರದ ಪ್ರಮುಖ ಸಾಧನೆಗಳ ಅನುಕೂಲ ಮಾಡಲು ಸತತ ಎರಡು ವರ್ಷಗಳಿಗೂ ಮೇಲ್ಪಟ್ಟು ದಿನವೂ ಬೆಂಗಳೂರು. ಮಂಡ್ಯ ಓಡಾಟದಲ್ಲಿ ಸ್ನೇಹಿತರುಗಳೊಡನೆ ಸಿಂಗಾರಿಗೌಡರು ಭಾಗವಹಿಸಿ ಶ್ರಮಿಸಿದರು. ಈ ಕಾರ್ಯಕ್ಷೇತ್ರಗಳ ನಿರ್ಮಾಣ ಕಾರ್ಯಕ್ಕೆ ಅಪಾರವಾದ ಹಣ ಬೇಕಾಗಿತ್ತು. ಈ ಹಣದ ಕೊರತೆ ನೀಗಲು ಶ್ರೀ ಕೆ. ವಿ ಶಂಕರಗೌಡರು ಸಂಘಟಿಸಿದ 'ದಾನಶೀಲ ಕರ್ಣ' ನಾಟಕದಲ್ಲಿ ಸಿಂಗಾರಿಗೌಡರು ಧರ್ಮರಾಯನ ಪಾತ್ರ ನಟಿಸಿದ್ದರು. ಸಿಂಗಾರಿಗೌಡರಾಗ ಸೌಮ್ಯ ಮೂರ್ತಿಯಾಗಿದ್ದವರು. ಧರ್ಮರಾಯನ ಪಾತ್ರ ಅವರಿಗೆ ಇನ್ನೂ ಸೌಮ್ಯವಾಗಿ ರಂಗಭೂಮಿಯ ಮೇಲೆ ಅವರನ್ನು ಕಂಡ ದಿವಂಗತ ವಾಸಪ್ಪನವರು "ಕುಮಾರವ್ಯಾಸ ತನ್ನ ಮಹಾಭಾರತದಲ್ಲಿ ಹೇಳಿರುವ ಧರ್ಮರಾಯನೇ ಸಿಂಗಾರಿಗೌಡರು" ಎಂದು ತಮ್ಮ ಭಾಷಣದಲ್ಲಿ

ಪ್ರಸ್ತಾಪಿಸಿದರು. ಈ ನಾಟಕಗಳ ಉತ್ಪತ್ತಿಯಿಂದ ಮಂಡ್ಯದಲ್ಲಿರುವ ನಾಲ್ಕುನೂರು ಮಕ್ಕಳ ವಸತಿಗೆ ಸೌಲಭ್ಯ ಕಲ್ಪಿಸಿರುವ ಒಕ್ಕಲಿಗರ ಸಾರ್ವಜನಿಕ ವಿದ್ಯಾರ್ಥಿನಿಲಯ, ನಾಗಮಂಗಲದಲ್ಲಿ ಅಭಿನಯಿಸಿದ ನಾಟಕದ ಉತ್ಪತ್ತಿಯಿಂದ ನಾಗಮಂಗಲದಲ್ಲಿ ಶ್ರೀ ಆದಿಚುಂಚನಗಿರಿ ವಿದ್ಯಾರ್ಥಿ ನಿಲಯ ನಿರ್ಮಾಣಗೊಂಡವು.

1952ರಲ್ಲಿ ನಡೆದ ಸಾರ್ವತ್ರಿಕ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಉಮೇದುವಾರರಾಗಿ ಶ್ರೀ ಸಿಂಗಾರಿಗೌಡರನ್ನು ಆಯ್ಕೆಮಾಡಲಾಯಿತು. ಅವರ ವಿರುದ್ಧವಾಗಿ ಸ್ವತಂತ್ರವಾಗಿ ದಿವಂಗತ ದೇಶಬಂಧು ಎಂ. ಶಂಕರಲಿಂಗೇಗೌಡರು ಸ್ಪರ್ಧಿಸಿದರು. ಇಲ್ಲಿ ಇನ್ನೊಂದು ಮಾತು ಹೇಳುವುದು ಅಪ್ರಕೃತವೆನ್ನದೆ ಪ್ರಸ್ತಾಪಿಸುತ್ತಿದ್ದೇನೆ, ಸ್ವರಾಜ್ಯ ಪ್ರಾಪ್ತವಾಗುವ ಮುನ್ನವೇ ಕಾಂಗ್ರೆಸ್ಸಿಗರಲ್ಲಿ ಒಳಜಗಳಗಳಿಂದ ಪಕ್ಷದಲ್ಲಿ ದೊಡ್ಡ ಬಿರುಕುಬಿಟ್ಟಿತ್ತು. ಕೆರೆಯ ನೀರು ತೂಬಿನ ಮೂಲಕ ನಾಲೆಯಲ್ಲಿ ಪ್ರವಹಿಸಿ ನಾಲಾ ಕೆಳಗಿನ ಎಲ್ಲಾ ಜಮೀನಿಗೂ ಹರಿವಂತೆ ರಾಜ್ಯಮಟ್ಟದಲ್ಲಿ ಕಾಂಗ್ರೆಸ್ ಮುಖಂಡರುಗಳಲ್ಲಿ ಉಂಟಾಗುತ್ತಿದ್ದ ಗುಂಪುಗಾರಿಕೆ ರಾಜ್ಯದ ಎಲ್ಲಾ ಊರುಗಳಿಗೂ ಹರಿದು ಅದರ ಪರಿಣಾಮವನ್ನುಂಟು ಮಾಡುತ್ತಿತ್ತು. ಈ ಗುಂಪುಗಾರಿಕೆ ಪ್ರವಾಹ ಮಂಡ್ಯ ಜಿಲ್ಲೆಗೂ ಪ್ರವಹಿಸಿ ನಾಗಮಂಗಲ ತಾಲ್ಲೂಕು ಸಹ ಈ ಪ್ರವಾಹದಿಂದ ತಪ್ಪಿಸಿಕೊಳ್ಳಲಾಗಲಿಲ್ಲ. ಈ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಕಾಣದ ಕೈಗಳು ಕೆಲಸ ಮಾಡಿದ ಈ ಒಂದು ಪ್ರಸಂಗ ರಾಜ್ಯದ ಎಲ್ಲಾ ಚುನಾವಣಾ ಕ್ಷೇತ್ರದಲ್ಲೂ ಕಾರ್ಯನಿರ್ವಹಿಸಿತು. ಈ ಅವಹೇಳನ ಪ್ರಸಂಗದಲ್ಲಿ ಯಾರ ಯಾರದೇ ಗುಂಪು ಕೈವಾಡ ನಡೆಸದೇ ಹೊರತಾಗಿರಲಿಲ್ಲ.

ಈ ಚುನಾವಣೆ ಮತ್ತದರ ಹಿಂದಿನ ಚುನಾವಣೆಗಳ ವೆಚ್ಚವನ್ನು ಕೇಳಿದರೆ ಈಗಿನವರು ನಿಜವೇ ? ಎಂದು ಸೋಜಿಗಗೊಳ್ಳುತ್ತಾರೆ. ಈ ಚುನಾವಣಾ ವೆಚ್ಚ ಕೇವಲ ಒಂಭತ್ತು ಸಾವಿರ ರೂಪಾಯಿಗಳು. ಮುಂದಿನ ಚುನಾವಣಾ ವೆಚ್ಚ ಹನ್ನೆರಡು ಸಾವಿರ ದಾಟಲಿಲ್ಲ. ಈ ಚುನಾವಣೆಗಳಲ್ಲಿ ಸಿಂಗಾರಿಗೌಡರ ಚುನಾವಣೆಯ ಮುಖ್ಯ ನೇತಾರನಾಗಿ ನಾನೇ ನಿಂತು ಕಾರ್ಯನಿರ್ವಹಿಸುತ್ತಿದ್ದೆ. ಈಗಿನ ಚುನಾವಣೆಗಳ ವೆಚ್ಚ ಕೇಳಿ ನೋಡಿದ ನನಗಂತೂ ಚುನಾವಣೆಗಳೆಂದರೆ ವಾಕರಿಕೆ ಬಂದು ಬದುಕು ಬೊಬ್ಬಳಿಸಿದಂತಾಗುವುದು. ಸಿಂಗಾರಿಗೌಡರ ಮನಸ್ಸಿನ ಮೇಲೆ ಇಂತಹದೇ ಪರಿಣಾಮವಾಗಿತ್ತು. ಮುಂದಿನ ಚುನಾವಣೆಗಳಲ್ಲಿ ಯಾರಾದರು ಅಪ್ಪಿ ತಪ್ಪಿ ಚುನಾವಣೆಗೆ ನಿಲ್ಲಲು ಕೇಳಿದರೆ 'ಯಾಕಣ್ಣ ಈ ದುಡ್ಡಿನ ವ್ಯವಹಾರ' ಎಂದು ಮಾತಿನಲ್ಲಿ ದಾಟಿಸಿ ಬೇರೆ ಮಾತೇನಾದರೂ ಇದ್ದರೆ ಆಡಪ್ಪ ಎಂದು ಬಿಡುತ್ತಿದ್ದರು.

ಇವರ ಜೊತೆಗೆ ತಾತ ಮರಿಗೌಡರ ನಂತರ ಇವರ ತಂದೆ ಕೃಷ್ಣಪ್ಪಗೌಡರು ರಾಜಕೀಯ ಚಟುವಟಿಕೆಗಳಲ್ಲಿ ಹತ್ತಾರು ಸಂಸಾರಗಳನ್ನು ಸಾಕುವುದಾಗಿದ್ದ ಸಾಲ, ಗದ್ದೆಗಳು ಹಾಳುಬಿದ್ದು ಬಿಕೋ ಎನ್ನುವ ಪರಿಸ್ಥಿತಿ ಒದಗಿತ್ತು. ತಮ್ಮನ ಮದುವೆಯಲ್ಲಿ

ತೀರಿಕೊಂಡ. ತಂದೆಯವರು ಅನಾರೋಗ್ಯದಿಂದ ಹಾಸಿಗೆ ಬಿಟ್ಟು ಏಳದ ಸ್ಥಿತಿ ಒದಗಿತ್ತು. ಅಷ್ಟೇ ಅಲ್ಲದೆ ಸಿಂಗಾರಿಗೌಡರು ಮಧ್ಯದಲ್ಲಿ, ನಾಗಮಂಗಲದಲ್ಲಿ ರಾಜಕೀಯ ಮಾಡುತ್ತಾರೆಂಬ ದೂರನ್ನು ಎದುರು ಗುಂಪಿನವರು ಕಾಂಗ್ರೆಸ್ ವರಿಷ್ಠರಲ್ಲಿ ಹೇಳುತ್ತಿದ್ದರು.

ಸಂಸಾರಕ್ಕೆ ಬಿರುಗಾಳಿ ಬೀಸಿತ್ತು. ಸಂಸಾರವನ್ನು ಸಿಂಗಾರಿಗೌಡರಿಲ್ಲದಿದ್ದರೂ ನಡೆಸಿಕೊಂಡು ಹೋಗುತ್ತಿದ್ದ ತಂದೆ ಕೃಷ್ಣಪ್ಪಗೌಡರು ತಮ್ಮ ರಾಮಣ್ಣ, ಪತ್ನಿ ಸರಸ್ವತಮ್ಮ ನವರುಗಳು ನಿಧನರಾದಾಗ ಚಿಕ್ಕ ವಯಸ್ಸಿನ ಮಕ್ಕಳೊಡನೆ ಸಿಂಗಾರಿಗೌಡರು ನಿಜವಾಗಿ ತತ್ತರಿಸಿಹೋದರು.

ಈ ಘಟನೆಗಳ ನಂತರ ಸಿಂಗಾರಿಗೌಡರು ಪೂರ್ಣವಾಗಿ ತಮ್ಮ ಹಳ್ಳಿ ಕರಡಹಳ್ಳಿ ಸೇರಿ ತಮ್ಮ ಸಂಸಾರದ ಹೊರೆಹೊತ್ತು, ಗಂಡು ಹೆಣ್ಣು ಮಕ್ಕಳೆಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡಿ, ಮದುವೆ ಮಾಡಿ, ಸುಧಾರಾಯಿಸಿಕೊಂಡರು.

ಸಿಂಗಾರಿಗೌಡರು ರಾಜಕೀಯದಿಂದ ದೂರವುಳಿದಿದ್ದೇನೆಂದುಕೊಂಡರು. "ಹೊಳೆಯಲ್ಲಿ ಬಿದ್ದವನು ಹೊಳೆಯಲ್ಲಿ ತೇಲುವ ಕರಡಿ ಕೈಗೆ ಸಿಕ್ಕಿ ಅಯ್ಯೋ ನಾನು ಬಿಟ್ಟರೂ ಕಂಬಳಿ ಬಿಡದಪ್ಪ" ಎನ್ನುವಂತೆ ಜನಪ್ರಿಯರಾಗಿದ್ದ ಸಿಂಗಾರಿಗೌಡರಲ್ಲಿ ಜನ ಒಂದಲ್ಲ ಒಂದಕ್ಕೆ ಬಂದು ಸರ್ಕಾರಿ ಕಾರ್ಯಗಳಲ್ಲಿ ಕೈಹಾಕುವ ಪ್ರಮೇಯವನ್ನುಂಟು ಮಾಡುತ್ತಿದ್ದರು. ತಮ್ಮ ಕೈಲಾದ ಸಹಾಯವನ್ನು ಜನರಿಗೆ ಮಾಡಿ ಅವರ ಆಪದ್ಬಾಂಧವರಾಗಿ ಉಳಿದಿದ್ದಾರೆ. ನಾಗಮಂಗಲದ ಜನ ಸಿಂಗಾರಿಗೌಡರನ್ನು ರಾಜಕೀಯದಿಂದ ದೂರವಿರಲು ಬಿಡಲು ಒಪ್ಪಲೂ ಇಲ್ಲ, ಬಿಟ್ಟುಕೊಟ್ಟೂ ಇಲ್ಲ. ಹಳ್ಳಿಗಳಲ್ಲಿನ ಗ್ರಾಮ ವ್ಯಾಜ್ಯಗಳು, ಸಹಕಾರ ಸಂಘಗಳ ಚುನಾವಣೆಗಳು, ಹಳ್ಳಿಗಳ ಹಬ್ಬಹರಿದಿನಗಳಲ್ಲಿ ಅಭಿನಯಿಸುವ ನಾಟಕ ಸಮಾರಂಭಗಳಲ್ಲಿ ಭಾಗವಹಿಸಲು ಜಪ್ಪಯ್ಯ ಎಂದರೂ ಬಿಡದೆ ಕರೆದೊಯ್ಯುತ್ತಿದ್ದರು. ಇಂದೂ ಅದು ನಡೆಯುತ್ತಿದೆ.

ಚುನಾವಣೆಯ ವಿಚಾರ ಒಂದೆಡೆ ಬಿಟ್ಟು ಬೇರೆ ವಿಚಾರ ಪ್ರಸ್ತಾಪಕ್ಕೆ ಬಂದಿದ್ದೇನೆ. ಬೇಸರಗೊಳ್ಳಬೇಡಿ. ಚುನಾವಣೆಯಲ್ಲಿ ಪ್ರಚಾರ ಮುಗಿಸಿ ಸಂಜೆ ಆಗಾಗ ಸಿಂಗಾರಿಗೌಡರ ಮನೆಗೆ ಹೋಗುತ್ತಿದ್ದೆವು. ಅವರ ತಂದೆಗೆ ಮುಖ ಬಾಡಿದ ಮಗನನ್ನು ನೋಡಿ ಮನಕರಗುತ್ತಿತ್ತೇನೋ. ಕಾರಣ ತಾಯಿ ಸತ್ತ ತಬ್ಬಲಿ ಮಗ ಸಿಂಗಾರಿಗೌಡರನ್ನು ಎಲ್ಲರೂ ಹೇಳುವಂತೆ "ಹಾಲ ಹಣ್ಣಿನ ಗುಡಾರ"ದಲ್ಲಿ ಬೆಳೆಸಿದ್ದರವರು. ಮಗನಿಗೆ ಕೇಳುವಂತೆ ನನ್ನನ್ನು ಕುರಿತು "ಏನೋ ಇವನೊಬ್ಬ ಸಣ್ಣಗಾಗಿದ್ದಾನೆ? ಯಾಕೆ ವೇಳೆಗೆ ಸರಿಯಾಗಿ ಊಟ ಮಾಡೋದಿಲ್ವೇನಪ್ಪ?" ನನ್ನ ಚುನಾವಣೆಯಲ್ಲಿ ಐವತ್ತೈದು ದಿನ ಸುತ್ತಾಡಿ ಒಂದು ತಾಲೂಕದಲ್ಲಿ ಒಂದು ಸುತ್ತು ಹಳ್ಳಿಗ್ರಾಮಗಳನ್ನು, ಅದೂ ಗಾಡಿಯಲ್ಲಿ ನಾವು ಪ್ರಯಾಣಿಸುತ್ತಿದ್ದುದು. ಇನ್ನವರು ಕಾರುಗಳಲ್ಲಿ ಓಡಾಡುತ್ತಿದ್ದರು" ಎಂದರು. ಅಲ್ಲಾ! ನಮಗಿದ್ದ ಬಿಡುಗಾಸು ? ಇಪ್ಪತ್ತೈದು ರೂಪಾಯಿ ಕಂದಾಯ ದಾರರಿ

ಹೋಬಳಿಗೆ ಎಂಟೋ ಹತ್ತೋ ಇಪ್ಪತ್ತೈದಂತೂ ಇಲ್ಲವೇ ಇಲ್ಲ. ಬೆರಳಿನಲ್ಲಿ ಎಣಿಸೋ ಓಟುದಾರರು ನಮಗೆ. ನಮಗಿರೋ ಓಟುದಾರರು ಒಂದು ಬೀದಿಯಲ್ಲಿರೋವಷ್ಟು ತಾಲ್ಲೂಕಿನಲ್ಲೂ ಇರಲಿಲ್ಲ ಎಂದ ಮೇಲೆ ಅವರನ್ನು ಕಂಡು ನಮಸ್ಕಾರ ಹೇಳಿದರಲ್ಲಿ ಸುಸ್ತು. ಅವರಿಗೆ ನಮಸ್ಕಾರ ಹೇಳಿದರೆ ನಮಸ್ಕಾರ ಹೇಳಿ ಸುಮ್ಮನಾಗುತ್ತಾರ ಈ ಓಟುದಾರರು. ಅವರ ಊರ ಕೆರೆ. ಸ್ಕೂಲು. ದೇವಸ್ಥಾನ. ಚಾವಡಿ ಇವೆಲ್ಲವುಗಳ ರಿಪೇರಿ ಹೀಗೆ ನಾನಾ ಸಮಸ್ಯೆಗಳನ್ನು ನಮ್ಮ ಮುಂದೆ ಒಡ್ಡುತ್ತಾರೆ. ಅವು ಆಗುತ್ತವೆಯೋ ಇಲ್ಲವೋ ನಾವಂತೂ ಭರವಸೆಕೊಟ್ಟು ಉದ್ದುದ್ದ ಭಾಷಣ ಮುಗಿಸಿ ಬರೋ ಹೊತ್ತಿಗೆ ಸಾಕಪ್ಪ ಸಾಕು ಈ ಚುನಾವಣೆ ಎನ್ನುವಂತಾಗಿ ಹೋಗುತ್ತೆ. ನಿಮ್ಮ ಚುನಾವಣೆಯಲ್ಲೂ ಒಂದೆರಡು ಕಡೆ ನಾನು ನಿಮ್ಮೊಡನಿದ್ದು ನೋಡಿದ್ದೇನೆ. ಯಾವನಾದರೂ ಓಟುದಾರ ಏನಾದರೂ ನಿಮ್ಮನ್ನು ಕೇಳಿದರೆ "ಲೇ ಕುಂತ್ಕೊಳ್ಳೊ ಅದೇನ್ ಕೇಳ್ತೀಯ, ಕರಡಳ್ಳಿ ಗೌಡ ಬಂದವ್ನೆ ಏನೋ ಕೇಳ್ತಾನೆ ಕೊಡ್ತೀವಿ ಅಂತ ಹೇಳಿ ಕಳಿಸ್ಲ ತಲೆಯಲ್ಲಿ ಮಾತಾಡಾ ಬಾರ್ದು ದೊಡ್ಡವರ್ ತಾವು" ಅಂತಿದ್ರು. ಈಗ ಹಾಗಿಲ್ಲ ಸಾರ್ ಎಲ್ಲರನ್ನು ಯಜಮಾನರ ಸ್ಥಾನಕ್ಕೆ ಏರ್ಸಿದ್ದೇವೆ. ಪ್ರತಿಯೊಬ್ಬನೂ ಏನಾದರೂ ಒಂದು ಸಮಸ್ಯೆಯನ್ನು ಚುನಾವಣೆ ಸಮಯದಲ್ಲಿ ಒಡ್ಡುತ್ತಾನೆ ಎಂದು ಹೇಳುತ್ತಿದ್ದ.

ವರ್ಷಾನುಕಾಲ ಆ ಕೆಲಸ ಈ ಕೆಲಸ ಅಂತ ಹೇಳಿ ಸಿಂಗಾರಿಗೌಡರನ್ನು ಹುಡುಕಿಕೊಂಡು ಕರಡಳ್ಳಿಗೆ ಬರುತ್ತಿದ್ದ ಜನಕ್ಕೆ ಚುನಾವಣೆಯ ತಮ್ಮಟೆ ಶಬ್ದ ಕಿವಿಗೆ ಬೀಳ್ತು ಅಂದರೆ "ಮುಗೀತು ಬಿಡ್ಲ ಸಿಂಗಾರಿಗೌಡ್ನೆ ಬತ್ತಾನೆ ಅನ್ನೋ ತಾತ್ಸಾರಕ್ಕೆ ಜನ ಹೋಗಿದ್ದಾರೆ ಸಾರ್!" ಎಂದು ಚುನಾವಣೆ ಕತೆಯನ್ನು ಕೃಷ್ಣಪ್ಪಗೌಡರಿಗೆ ವಣಿದು ಹೇಳುತ್ತಿದ್ದ.

ಕಾಂಗ್ರೆಸ್ಸಿನ ಒಳಗುಂಪಿನ ಕಾಣದ ಕೈ ಚುನಾವಣೆಯಲ್ಲಿ ಕೆಲಸಮಾಡಿತ್ತೆಂದು ಹೇಳಬೇಕಿಲ್ಲವೆ. ಇದರ ಜೊತೆಗೆ ದಿವಂಗತ ಎಂ. ಶಂಕರಲಿಂಗೇಗೌಡರ ಚಾಕಚಕ್ಯತೆಯೂ ಬಹುವಾಗಿ ಕೆಲಸಮಾಡಿತ್ತು. ಶಂಕರಲಿಂಗೇಗೌಡರು ಅರವತ್ತು ವರ್ಷ ವಯಸ್ಸು ದಾಟಿದ್ದ ವ್ಯಕ್ತಿ. ಅವರು ಮತದಾರರನ್ನು ತುಂಬಿದ ಸಭೆಯಲ್ಲೂ ಏಕವಚನದಿಂದ ಮಾತನಾಡಿಸುವ ಅಭ್ಯಾಸವಿತ್ತು.

ಸಿಂಗಾರಿಗೌಡರ ಸಮೀಪದ ಬಂಧುಗಳು ಇವರ ಚುನಾವಣೆಗೆ ನಾಲ್ಕಾರು ಹಳ್ಳಿಗಳ ಜವಾಬ್ದಾರಿ ಹೊತ್ತಿದ್ದ ವ್ಯಕ್ತಿ. ಇಂತಹ ಮನೆಗೆ ಶಂಕರಲಿಂಗೇಗೌಡರು ಮಧ್ಯಾಹ್ನದ ಊಟದ ವೇಳೆಗೆ ಹೋಗಿದ್ದಾರೆ. ಪಾಪ ಗೌಡರು ಓಟು ಕೊಡದಿರಬಹುದೇ ಹೊರತು ಶಂಕರಲಿಂಗೇಗೌಡರಿಗೆ ಮರ್ಯಾದೆಯಿಂದ ಮನೆಗೆ ಕರೆದೊಯ್ದು ಊಟಕೆ ಕೂರಲು ಕರೆದಿದ್ದಾರೆ. ಶಂಕರಲಿಂಗೇಗೌಡರು "ಊಟ ಆಮೇಲಾಗಲಿ ನನ್ನ ಅಳಿಯ ಚಾಲಾಕಿನ ಲಾಯರ್ ಹುಡುಗ. ಪಡುವಲಹಳ್ಳಿಗೆ ಓಟು ಕೇಳಲು ಹೋದ. ಯಾವ ಊರಿಗೂ ನನ್ನ ಸೇರಿಸಲಿಲ್ಲ. ಮುಂದೆ ಸೇರ್ಸೋದು ಇಲ್ಲ. ಉಳ್ಳ ಓಟು ಹಾಳಾಗೋಗ್ಲಿ

ಯಾಂಗೋ ಸಿಂಗಾರಿಯಂಥ ಒಳ್ಳೆ ಹುಡುಗನಿಗೆ ಓಟಾಕ್ತಾರೆ. ಹಾಕ್ಲಿ ಅಂದುಕೊಂಡು ವಾಪಾಸ್ಸು ಬಂದೆ. ಸದ್ಯ ನನ್ನ ಹೆಂಡ್ತಿ ಒಡವೆ ವಸ್ತು ಅಡ ಇಟ್ಟು ಎಲೆಕ್ಷನ್ ಡಿಪಾಜಿಟ್ ಮಾಡ್ದೆ ಮಹರಾಯ. ನನಗೆ ಓಟು ಬಂದು ಮೆಂಬಾರಾಗೋದು ಬೇಡ ಸದ್ಯ ಅಡ ಇಟ್ಟಿರೋ ಒಡವೆ ವಾಪಸ್ಸು ಬಂದರೆ ಸಾಕು. ಡಿಪಾಜಿಟ್ ಉಳ್ಕೊಳ್ಳೋ ವಷ್ಟು ಓಟಾದರೆ ಸಾಕು. ನಿಮ್ಮೂರ 800-900 ಓಟ ನನ್ಗೇ ಹಾಕ್ಬದರೆ ಸಾಕಪ್ಪ ನನ್ನ ಡಿಪಾಜಿಟ್ ಉಳೀತು. ನಿನ್ನ ಆಳಿಯನೇನು ? ನನಗೂ ಅಳಿಯನೆ ಸಿಂಗಾರಿ ಅಪ್ಪು ಮೆಂಬರಾದ್ನಂಗಾಯ್ತು. ನೋಡಪ್ಪ ನಿನ್ನ ಮನೆ ಅನ್ನ ತಿನ್ನು ಅಂತೀಯ ತಿಂತೀನಿ. ಬಿಡಿ ಅನ್ನ ಇಟ್ಟು ನಿಮ್ಮೂರಿನ ಓಟು ನನಗೆ ಕೊಡಿಸ್ತೀನೆ ಅಂದರೆ ತಲೆಗೆ ಕೈ ಹಾಕ್ತೀನೆ. ಇಲ್ಲಾ ಒಂಗಂದೀಗೆ ಬೆಂಗಳೂರ್ಗೋ ಮೈಸೂರ್ಗೋ ಹೋಗಿ ಎಲೆಕ್ಷನ್ ಮುಗಿತ್ಲೆ ಬರ್ತೀನೆ" ಎಂದರಂತೆ.

ಪಾಪ ಗೌಡರಿಗೆ ಮನಸ್ಸು ಕರಗಿತು. ಶಂಕರಲಿಂಗೇಗೌಡರಿಗೆ ಅವರ ಒಡವೆ ಯಾದ್ರೂ ವಾಪಸ್ಸು ಬರಲಿ ಎಂದು ತಮ್ಮೂರ ಮತ್ತು ಮಗ್ಗುಲವೂರಿನ ಓಟುಗಳನ್ನು ಪಟ್ಟಿಯಲ್ಲಿ ಹೆಸರಿಲ್ಲದಂತೆ ಓಟು ಮಾಡಿಸಿ ಸುಮಾರು 1200 ಓಟುಗಳು ಶಂಕರಲಿಂಗೇ ಗೌಡರಿಗೆ ದೊರೆಯುವಂತೆ ಮಾಡಿದ್ದರು.

ಚುನಾವಣೆ ಫಲಿತಾಂಶ ಹೊರಬಿದ್ದಿತು. ಸಿಂಗಾರಿಗೌಡರು ಸೋತರು. ಶಂಕರ ಲಿಂಗೇಗೌಡರಿಗೆ ಓಟು ಹಾಕಿಸಿದ ಆ ಬಂಧು ಗೋಳೋ ಎಂದು ಅಳುತ್ತಾ ಅಯ್ಯೋ ನಾನೇ ಕೈಯ್ಯಾರ ಶಂಕರಲಿಂಗೇಗೌಡರಿಗೆ ಓಟು ಹಾಕಿಸಿದೆನಲ್ಲ ಎಂದು ಮೇಲಿನ ಕತೆ ಹೇಳಿದರು.

ಶಂಕರಲಿಂಗೇಗೌಡರು ಮತ್ತೊಂದು ಊರಿಗೆ ಓಟು ಕೇಳಲು ಹೋದರು. ಆ ಊರಿನವರು "ಪೂರ್ತಾ ಕಾಂಗ್ರೆಸ್ಸಿಗೆ ಮತ ನೀಡುತ್ತೇವೆ. ಊರೆಲ್ಲ ಸೇರಿ ಮಾತನಾಡಿದ್ದೇವೆ" ಎಂದು ತಿಳಿಸಿದರು. ಸರಿ ಚುನಾವಣೆ ದಿನ ಮತ್ತೆ ಹೋದರು. "ಲೋ ನೀವೇನು ನನಗೆ ಓಟು ಕೊಡೋಲ್ಲ. ನೆನ್ನೆ ಸಾಹುಕಾರ್ ಚನ್ನಯ್ಯನವರು ನಾಗಮಂಗಲದಲ್ಲಿ ನಿಮ್ಮೂರ ಮಾರಿಗುಡಿ ಕಟ್ಟೋಕೆ ಹತ್ತುಸಾವಿರ ರೂಪಾಯಿ ಕೊಟ್ಟರಂತೆ. ಅದನ್ನು ಈಸ್ಕೊಂಡು ಓಟುಕೊಡ್ತೀರಿ" ಎಂದು ಜೋರಾಗಿ ಹೇಳಿ ಹೊರಟು ಹೋಗಿದ್ದರು.

ನಾವಂತು ಆ ಊರಿನ ಓಟು ನಮ್ಮ ಪಕ್ಷಕ್ಕೇ ಎಂದು ಉದಾಸೀನ ಮಾಡಿದೆವು. ಸಂಜೆ 4.30 ಘಂಟೆ ಹೊತ್ತಿಗೆ ಆ ಊರಿನ ಸಮೀಪದ ಬೂತಿಗೆ ಹೋದ ನಾನು ಆ ಓಟುದಾರರು ಬಂದಿದ್ದಾರೆಯೆ ಎಂದು ವಿಚಾರಿಸಿದೆ. ಇಲ್ಲ ಚಲುವೇಗೌಡ ಮತ್ತೆ ಅವರ ಹೆಂಡತಿ ಬಂದಿದ್ದು ಓಟು ಹಾಕಿ ಹೋದ್ರು. ಇನ್ನೊ ಸಿಂಗಾರಿಗೌಡರೂ ಬಂದ್ರು ಸರಕ್ಕನೆ ಬರಹೇಳಿ ಹೋದರು. ಜಲ್ದಿ ಹೋಗಿ ಬನ್ನಿ ಎಂದರು. ನಾನು ಆ ಊರಿಗೆ ಹೋದೆ. ಎಲ್ಲರಲ್ಲೂ ಮಾತನಾಡುವಷ್ಟರಲ್ಲಿ ಮತದಾನದ ಕಟ್ಟ ಬಾಗಿಲು ಮುಚ್ಚಿತು. ಶಂಕರಲಿಂಗೇಗೌಡರ ಮೇಲಿನ ಕತೆಯನ್ನು ಊರವರು ಹೇಳಿದರು.

ಪಂಚಾಯ್ತಿರಾಜ್ ಚುನಾವಣೆಗಳು ಬಂದಾಗ ಸಿಂಗಾರಿಗೌಡರು ಚುನಾವಣೆಗೆ ನಿಲ್ಲುವ ಮಹತ್ವಾಕಾಂಕ್ಷೆಯಿಲ್ಲದ ಮನಸ್ಸಿನಿಂದಿದ್ದರು. ಜಿಲ್ಲಾ ಪರಿಷತ್ತಿಗೆ ಜನತಾ ಅಭ್ಯರ್ಥಿಗಳನ್ನು ಚುನಾಯಿಸುವಾಗಲೇ ಸಿಂಗಾರಿಗೌಡರನ್ನು ಜಿಲ್ಲಾ ಪರಿಷತ್ತಿಗೆ ಅಧ್ಯಕ್ಷರು ಮಾಡುವ ಮುಂದಾಲೋಚನೆಯಿಂದಲೇ ಜಿಲ್ಲಾ ಪರಿಷತ್ ಸದಸ್ಯತನಕ್ಕೆ ಒತ್ತಾಯದಿಂದ ನಿಲ್ಲಿಸಿ ಅಧ್ಯಕ್ಷರನ್ನಾಗಿ ಚುನಾಯಿಸಿದ್ದಾರೆ.

ರಾಜಕೀಯ ಕ್ಷೇತ್ರದಲ್ಲಿ ಸ್ವಚ್ಛತೆಯಿಂದ ಇರುವ ಸಿಂಗಾರಿಗೌಡರನ್ನು ಅಧಿಕಾರ ಹುಡುಕಿ ಹೋದ ಈ ನಿದರ್ಶನ ಈಗಿನ ಯುವ ಪೀಳಿಗೆಗೆ ಆದರ್ಶವಾಗಬೇಕು.

ಶ್ರೀ ಕೆ. ಸಿಂಗಾರಿಗೌಡರ ಮುಂದಿನ ದಿನಗಳು ಶುಭಮಯವಾಗಲಿ. ಭಗವಂತ ಅವರಿಗೆ ದೀರ್ಘಾಯುಸ್ಸಿತ್ತು ಸನ್ಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಪಿ. ಎನ್. ಜವರಪ್ಪಗೌಡ

ಹಿರಿಯಣ್ಣ

ಸ್ವಾತಂತ್ರ್ಯ ಪೂರ್ವದ ದಿನಗಳು. ಆಗಿನ್ನೂ ಕೂಲಿಮಠದಲ್ಲಿ ಓದುತ್ತಿದ್ದ ನನಗೆ ನಮ್ಮೂರಿನ ಮುದ್ದಾಮೇಸ್ತ್ರಿಗಳ ಜಗಲಿಯಲ್ಲಿ ನಡೆಯುತ್ತಿದ್ದ ಕಾಂಗ್ರೆಸ್ಸಿಗರ ಸಭೆಯ ಅಸ್ಪಷ್ಟ ನೆನಪು.. ಎಚ್. ಸಿ. ದಾಸಪ್ಪನವರು. ಟಿ. ಮರಿಯಪ್ಪನವರು. ಕರಡಹಳ್ಳಿ ಕೃಷ್ಣಪ್ಪಗೌಡರು. ಅಂಚೆಚಿಟ್ಟನಹಳ್ಳಿ ಗೋವಿಂದಗೌಡರು ಇವರೆಲ್ಲ ಅಲ್ಲಿ ಸಭೆಸೇರಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುತ್ತಿದ್ದರು. ಪೂರ್ಣ ಖಾದಿಧಾರಿಗಳಾಗಿದ್ದ ಅವರನ್ನು ನೋಡುವುದೇ ಒಂದು ಖುಷಿ, ನಮ್ಮಂಥ ಹಳ್ಳಿಯ ಹುಡುಗರಿಗೆ. ಖಾದಿಯ ಜುಬ್ಬ. ಅದರ ಮೇಲೆ ಖಾದಿಯದೇ ಆದ ಮಂದವಾದ ಬಟ್ಟೆಯ ಕಿರುವಂಗಿ. ಖಾದಿಯಲ್ಲೇ ಹಾಕಿದ ಕಚ್ಚೆ. ಹೆಗಲ ಮೇಲಿನ ಖಾದಿಯ ವಸ್ತ್ರ. ತಲೆಯ ಮೇಲೆ ಗಾಂಧಿ ಟೋಪಿ. ಹತ್ತಾರು ಜನರ ಗುಂಪು ಅಲ್ಲಿ ಸೇರುತ್ತಿತ್ತು. ಶ್ರೀ ಆದಿಚುಂಚನಗಿರಿಗೆ ಹೋಗಿ ಹಿಂದಿರುಗುವಾಗಲೆಲ್ಲಾ ಈ ಸಭೆ ನಮ್ಮೂರಿನ ಮುದ್ದಾಮೇಸ್ತ್ರಿಗಳ ಆತಿಥ್ಯವನ್ನು ಸ್ವೀಕರಿಸಿಯೇ ಹೋಗುತ್ತಿತ್ತು.

ನಮ್ಮ ಊರಿಗೆ ಭೇಟಿಕೊಡುತ್ತಿದ್ದ ಈ ಕಾಂಗ್ರೆಸ್ಸಿಗರ ಗುಂಪಿನಲ್ಲಿ ಎದ್ದು ಕಾಣುತ್ತಿದ್ದ ವ್ಯಕ್ತಿ ಶ್ರೀ ಕರಡಹಳ್ಳಿ ಕೃಷ್ಣಪ್ಪಗೌಡರು. ಸ್ಥೂಲಕಾಯ: ಮಾತಿನಲ್ಲಿ ವಿಶಿಷ್ಟವಾದ ಗತ್ತು. ಆ ಗುಂಪಿನ ನಾಯಕರಂತೆ ಶೋಭಿಸುತ್ತಿದ್ದ ಅವರ ವ್ಯಕ್ತಿತ್ವ ಸಹಜವಾಗಿ ನನ್ನನ್ನು ಆಕರ್ಷಿಸಿತ್ತು. ಇಷ್ಟೊಂದು ಗಾತ್ರದ ಈ ವ್ಯಕ್ತಿಯನ್ನು ಹುಡುಗರಾದ ನಾವು ಕುತೂಹಲದಿಂದ ನೋಡುತ್ತಿದ್ದೆವು.

ಕರಡಹಳ್ಳಿಯ ಕೃಷ್ಣಪ್ಪಗೌಡರೂ ಅಂಚೆಚಿಟ್ಟನ ಹಳ್ಳಿಯ ಗೋವಿಂದಗೌಡರೂ ತುಂಬ ಆಪ್ತರು. ಮುಂದೆ ಅವರು ಅನೇಕ ಬಾರಿ ಜೈಲಿಗೆ ಹೋದ ಸುದ್ದಿಯನ್ನು ನಮ್ಮೂರಿನ ಹಿರಿಯರು ಮಾತಾಡಿಕೊಳ್ಳುತ್ತಿದ್ದರು. ನಮ್ಮ ತಾಲ್ಲೂಕಿನ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಟಿ. ಮರಿಯಪ್ಪನವರು, ಕರಡಹಳ್ಳಿ ಕೃಷ್ಣಪ್ಪಗೌಡರು, ಅಂಚೆಚಿಟ್ಟನಹಳ್ಳಿ ಗೋವಿಂದಗೌಡರು ಮುಖ್ಯರಾದವರು. ಕರಡಹಳ್ಳಿ ಕೃಷ್ಣಪ್ಪಗೌಡರು ಒಂದು ರೀತಿಯಲ್ಲಿ ಈ ಎಲ್ಲ ಹೋರಾಟಗಾರರ ನಾಯಕರಂತಿದ್ದು ಅಪಾರ ತ್ಯಾಗವನ್ನು ಮಾಡಿದವರು. ನಮ್ಮ ಸ್ವಾತಂತ್ರ್ಯದ ಇತಿಹಾಸವನ್ನು ಬರೆದ ಯಾರೂ ಈ ಹೆಸರುಗಳನ್ನು ಎಲ್ಲಿಯೂ ದಾಖಲು ಮಾಡಿದಂತಿಲ್ಲ.

ಕೆ. ಸಿಂಗಾರಿಗೌಡರು ನಮ್ಮ ಹಿರಿಯ ಸ್ವಾತಂತ್ರ್ಯಯೋಧರ ಸುಪುತ್ರರಾಗಿ ಜನಿಸಿದರು. ಕರಡಹಳ್ಳಿ ಕೃಷ್ಣಪ್ಪಗೌಡರಿಗೆ ಇಬ್ಬರು ಗಂಡುಮಕ್ಕಳು. ಕಿರಿಯವರ ಹೆಸರು ನನಗೆ ತಿಳಿಯದು. ಅವರನ್ನು ನಾನು ನೋಡಿಯೂ ಇರಲಿಲ್ಲ. ಕರಡಹಳ್ಳಿಗೆ ಕೆಲವು ವರ್ಷಗಳ ಹಿಂದೆ ಮಾತ್ರ ನಾನು ಹೋಗುವ ಅವಕಾಶ ಕೂಡಿಬಂದಿತ್ತು. ಹಿರಿಯ ಲೇಖಕರೂ, ನಮ್ಮ ವಯಸ್ಕರ ಶಿಕ್ಷಣ ಕ್ಷೇತ್ರದಲ್ಲಿ ಅಪಾರವಾಗಿ ದುಡಿದವರೂ ಆದ ಶ್ರೀ ಸ. ಭದ್ರಯ್ಯ ಅವರ ಜೊತೆ ಒಮ್ಮೆ ಕರಡಹಳ್ಳಿಗೆ ನಾನು ಹೋಗಿದ್ದೆ. ಆಗಿನ್ನೂ ಕೃಷ್ಣಪ್ಪಗೌಡರು ಬದುಕಿದ್ದರು. ಆದರೆ ಆ ವೇಳೆಗಾಗಲೇ ತೀವ್ರವಾದ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ಮಂಡ್ಯದಲ್ಲಿ ವಕೀಲರಾಗಿ ಒಳ್ಳೆಯ ಹೆಸರು ಮಾಡಿದ್ದ ಸಿಂಗಾರಿಗೌಡರು ತಮ್ಮ ಸೋದರನ ಅನಿರೀಕ್ಷಿತ ಮರಣದಿಂದ ಕರಡಹಳ್ಳಿಗೆ ಮರಳಿ ಅಲ್ಲಿಯೇ ಉಳಿದಿದ್ದರು. ನಮ್ಮನ್ನು ಸ್ವಾಗತಿಸಿ ತುಂಬ ಆತ್ಮೀಯತೆಯಿಂದ ಮಾತನಾಡಿಸಿದರು. ಅಲ್ಲಿಯೇ ಊಟಮುಗಿಸಿ ನಾವು ಮೈಸೂರಿಗೆ ವಾಪಸಾದೆವು. ಮುಂದೆ ಕೆಲವೇ ದಿನಗಳಲ್ಲಿ ಕೃಷ್ಣಪ್ಪಗೌಡರು ತೀರಿಕೊಂಡರು. ನಮ್ಮ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರ ಮುಂಚೂಣಿಯ ನಾಯಕರಂತಿದ್ದ ಈ ಭಾಸ್ಕರನ ಅಸ್ತಂಗತವಾಯಿತು. ಅವರ ಉತ್ತರ ಕ್ರಿಯೆಗೆ ನಾನೂ ಮಿತ್ರರಾದ ಹ. ಕ. ರಾಜೇಗೌಡರೂ ಹೋಗಿ ಮೃತರ ಆತ್ಮಕ್ಕೆ ಶಾಂತಿಕೋರಿ ಬಂದೆವು. ಸಿಂಗಾರಿಗೌಡರ ಹೆಸರನ್ನು ನಾನು ಬಹಳವಾಗಿ ಕೇಳಿದ್ದೆ. ಆದರೆ ಅವರನ್ನು ಮೊದಲು ನೋಡಿದ ಸಂದರ್ಭ ನೆನಪಿನಲ್ಲಿಲ್ಲ.

1953ರ ಸುಮಾರಿನಲ್ಲಿ ಮೈಸೂರಿನಲ್ಲಿ ಕಾಲೇಜು ವಿದ್ಯಾರ್ಥಿಯಾಗಿದ್ದ ನಾನು ಊರಿಗೆ ಹೊರಟಿದ್ದೆ. ಆಗ ನನ್ನದೂ ಖಾದಿಯ ಜುಬ್ಬ, ಕಚ್ಚೆ, ಹೆಗಲಮೇಲೆ ಒಂದು ವಸ್ತ್ರ. ಥೇಟ್ ಕಾಂಗ್ರೆಸ್ಸಿಗ. ನಾಗಮಂಗಲದಲ್ಲಿ ಬಸ್ಸು ಕಾಫಿಗಾಗಿ ನಿಂತಾಗ ಇಳಿದು ಪಕ್ಕದ ಫಲಾಹಾರ ಮಂದಿರಕ್ಕೆ ಹೊರಟೆ. ಆಗ ಇದ್ದಕ್ಕಿದ್ದಂತೆಯೇ ನಾಲ್ಕು ಐದು ಮಂದಿ ರೈತರು ನನ್ನ ಕಡೆಗೆ ಧಾವಿಸಿದರು. "ನಮಸ್ಕಾರ ಬುದ್ಧಿ ಯಾವಾಗ ಬಂದಿರಿ?" ಎಂದರು. ಯಾರೋ ಪರಿಚಿತರಿರಬೇಕೆಂದು "ಈಗ ತಾನೆ ಬಂದೆ ಊರಿಗೆ ಹೋಗುತ್ತಿದ್ದೇನೆ" ಎಂದೆ. "ಕರಡಹಳ್ಳಿ ಕಡೆಗೆ ಈಗ ಯಾವ ಬಸ್ಸೂ ಇಲ್ಲ" ಎಂದರು. ನಾನು "ಜೀರಹಳ್ಳಿಗೆ ಹೋಗುತ್ತಿದ್ದೇನೆ. ಈ ಬಸ್ಸಿನಲ್ಲಿ ಬಂದೆ" ಎಂದೆ. ಅವರಲ್ಲಿ ಸ್ವಲ್ಪ ಗೊಂದಲ ಉಂಟಾದಂತಾಯಿತು. "ಓಹೋ ತಾವು ಸಿಂಗಾರಿಗೌಡರಲ್ಲ!" ಎಂದು ಕ್ಷಮಾಪಣೆ ಕೇಳಿ ಹೊರಟುಹೋದರು. ಅವರ ಅಹವಾಲುಗಳನ್ನು ಕೇಳುವ ಅವಕ್ಕೆ ಪರಿಹಾರವನ್ನು ಒದಗಿಸುವ 'ವ್ಯಕ್ತಿ' ನಾನಲ್ಲ ಎಂದು ಗೊತ್ತಾದ ಮೇಲೆ ಅವರಿಗೆ ತುಂಬ ನಿರಾಶೆಯಾಯಿತು.

ನಾಗಮಂಗಲ ಬಸ್ ನಿಲ್ದಾಣದ ಈ ಘಟನೆ ನನ್ನ ಮನಸ್ಸಿನ ಮೇಲೆ ನಿಂತಿತು. ನಾನು ಸಿಂಗಾರಿಗೌಡರಂತೆ ಕಾಣುತ್ತೇನೆ ! ಅಸ್ಪಷ್ಟ ಹೋಲಿಕೆಯಾದರೂ ಇವೆ ಎಂಬುದು ಸ್ಪಷ್ಟವಾಯಿತು. ಆದರೆ ಗೌಡರು ನನಗಿಂತ ಬಹಳ ಹಿರಿಯರು. ನಾನಿನ್ನೂ ವಿದ್ಯಾರ್ಥಿ

ಯಾಗಿದ್ದಾಗ ವಕೀಲಿ ವೃತ್ತಿಯನ್ನು ನಡೆಸುತ್ತಿದ್ದವರು. ಅವರು ತುಂಬ ತೆಳ್ಳನೆಯ ವ್ಯಕ್ತಿ. ನಾನೂ ವಿದ್ಯಾರ್ಥಿ ದೆಸೆಯಲ್ಲಿ ತೆಳ್ಳಗೆ ಇದ್ದವನೇ. ಇರಲಿ. ಅವರನ್ನು ನೋಡಿ ನನ್ನ ಸಾದೃಶ್ಯವನ್ನು ದೃಢಪಡಿಸಿಕೊಳ್ಳಬೇಕೆಂದು ನಿರ್ಣಯಿಸಿದೆ. ಮುಂದೊಮ್ಮೆ 1956 ಎಂದು ನೆನಪು. ನಾಗಮಂಗಲದ ಬಸ್ ನಿಲ್ದಾಣದಲ್ಲಿಯೇ ಅವರನ್ನು ನೋಡುವ ಅವಕಾಶ ಒದಗಿಬಂತು. ನನ್ನ ಜೊತೆಯಲ್ಲಿದ್ದ ಮಿತ್ರರೊಬ್ಬರು "ಅವರೇ ಸಿಂಗಾರಿಗೌಡರು" ಎಂದು ತೋರಿಸಿದರು. ಅವರನ್ನು ಪರಿಚಯಮಾಡಿಕೊಳ್ಳುವ ತವಕದಿಂದ ಅವರಲ್ಲಿಗೆ ಹೋದೆವು. ನಮಸ್ಕಾರ ಮಾಡಿದೆವು. "ಓಹೋ ನೀವೆ ಜೀ ಶಂ ಪರಮಶಿವಯ್ಯನವರೊ ! ನಿಮ್ಮ ಹೆಸರು ಕೇಳಿದ್ದೇನೆ. ನಿಮ್ಮ ಲೇಖನಗಳನ್ನು ಓದಿದ್ದೇನೆ" ಎಂದು ಮುಗುಳ್ನಕ್ಕರು. ಗೌಡರ ಮುಖಮುದ್ರೆ, ಆಕಾರ ವೇಷ ಎಲ್ಲವನ್ನೂ ಒಮ್ಮೆ ಮೇಲಿಂದ ಕೆಳಗಿನವರೆಗೆ ಪರೀಕ್ಷಾ ದೃಷ್ಟಿಯಿಂದ ನೋಡಿದೆ. ಅವರು ನನ್ನ ಹಿರಿಯ ಸೋದರರಂತೆ ಕಂಡುಬಂದರು! ರೈತರು ಗೊಂದಲಕ್ಕೆ ಒಳಗಾದುದರಲ್ಲಿ ಆಶ್ಚರ್ಯವಿಲ್ಲ ಎಂದುಕೊಂಡೆ ! ಮುಂದೆ ನನ್ನ ಉಡುಪಿನಲ್ಲಿ ಸ್ವಲ್ಪಬದಲಾವಣೆ ಮಾಡಿಕೊಂಡೆ ! ಇದರಿಂದ ಆಗೊಮ್ಮೆ ಈಗೊಮ್ಮೆ ಗೌಡರನ್ನು ನೋಡಿದ ರೈತರು ನಾಗಮಂಗಲದಲ್ಲಿ ನನಗೆ ಮುತ್ತಿಗೆಹಾಕುವ ಕಷ್ಟದಿಂದ ಪಾರಾದೆ !

ಸಿಂಗಾರಿ ಗೌಡರು ಮೇಲುಕೋಟೆಯ ಭಕ್ತರಿರಬೇಕು. 'ಸಿಂಗಾರಿ' ಎಂಬುದು ಮೇಲುಕೋಟೆಯ ಉಗ್ರನರಸಿಂಹನ ಹೆಸರು. ತುಂಬ ಸರಳ ಸ್ವಭಾವದವರು. ತಮ್ಮ ಅಂತರಂಗ ಬಹಿರಂಗ ಎರಡರಲ್ಲೂ ಶುದ್ಧ ಗಾಂಧೀವಾದಿ. ತುಂಬ ಓದಿಕೊಂಡವರು. ಅತ್ಯಂತ ಪ್ರಾಮಾಣಿಕ ವ್ಯಕ್ತಿತ್ವ. ನಿಷ್ಠುರವಾದಿ, ಅನ್ಯಾಯದ ಪರವಾಗಿ ಎಂದೂ ನಿಂತವರಲ್ಲ. ಯಾರೇ ಆಗಿರಲಿ ನ್ಯಾಯವಾದ ವಿಷಯಕ್ಕೆ ಮಾತ್ರ ಅವರು ತಲೆಬಾಗುವವರು. ಅನಗತ್ಯ ಎಂದು ಕಂಡಾಗ ಖಂಡತುಂಡಾಗಿ ಮಾತನಾಡಿ ಮುಖ ಮುರಿದುಬಿಡುತ್ತಾರೆ. ಅರ್ಹವ್ಯಕ್ತಿ ಎಂದು ತಿಳಿದರೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾರೆ. ನ್ಯಾಯವಾದ ವಿಷಯಗಳಿಗೆ ಜನ ಪ್ರಭಾವವನ್ನು ಬಳಸಿಕೊಳ್ಳಲು ಬರುವುದು ಅಪರೂಪ ! ಹೀಗಾಗಿ ಅನೇಕರು ಅವರನ್ನು ಇಂಥ ವಿಷಯಗಳಲ್ಲಿ ಕಾಣಲು ಅಳುಕುತ್ತಾರೆ.

ಗೌಡರು ಮೇಲೆ ಕಠಿಣವಾಗಿ ಕಂಡರೂ ಅಂತರಂಗದಲ್ಲಿ ಮೃದುತ್ವ ತುಂಬಿ ತುಳುಕುತ್ತದೆ. ತಮ್ಮ ಗಂಭೀರವಾದ ವ್ಯಕ್ತಿತ್ವದಿಂದ ಅವರು ನಮ್ಮನಾಯಕ ವರ್ಗದಲ್ಲಿ ಅಪಾರ ಗೌರವ ಆದರಗಳಿಗೆ ಭಾಜನರಾಗಿದ್ದಾರೆ. ಅವರು ಶಾಸಕರಾಗಿ, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಸುಸಂಸ್ಕೃತ ರಾಜಕಾರಿಣಿಯಾಗಿ ನಮ್ಮ ತಾಲ್ಲೂಕಿನ ಅಭಿವೃದ್ಧಿಗಾಗಿ ಬಹಳವಾಗಿ ದುಡಿದವರು. ಶಾಸಕರಾಗಿರಲಿ, ಆಗದಿರಲಿ ಅವರು ನಮ್ಮ ತಾಲ್ಲೂಕಿನ ಅನಭಿಷಿಕ್ತ ನಾಯಕರು. ತಾಲ್ಲೂಕಿನ ಬಗ್ಗೆ ನಿಜವಾದ ಕಳಕಳಿಯನ್ನು ತುಂಬಿಕೊಂಡವರು. ಅದಕ್ಕಾಗಿ ದುಡಿದವರು. ಇಂದು ಅವರು

ಜಿಲ್ಲೆಯ ನಾಯಕರಾಗಿದ್ದಾರೆ: ಜಿಲ್ಲಾಪರಿಷತ್ತಿನ ಅಧ್ಯಕ್ಷರಾಗಿದ್ದಾರೆ. ಇದು ನಮ್ಮೆಲ್ಲರಿಗೂ ತುಂಬ ಅಭಿಮಾನದ ವಿಷಯವಾಗಿದೆ.

ಗೌಡರನ್ನು ಕಂಡರೆ ತಾಲ್ಲೂಕಿನ ತರುಣ ಪೀಳಿಗೆಯ ಎಲ್ಲ ಹುರಿಯಾಳುಗಳೂ, ಅವರು ಯಾವುದೇ ಪಕ್ಷದಲ್ಲಿರಲಿ 'ಗುರು' ಸ್ಥಾನದಲ್ಲಿ ಅವರನ್ನು ಕಾಣುತ್ತಾರೆ. ಸಚಿವ ಎಚ್. ಟಿ. ಕೃಷ್ಣಪ್ಪನವರು ತಾಲ್ಲೂಕಿನ ತುಂಬ ಜನಪ್ರಿಯ ನಾಯಕರು, ಸಾಧುಸ್ವಭಾವದವರು. ಗೌಡರ ಬಳಿ ಹೋಗಲು ಅಂಜುವ ಜನ ಅವರ ಬಳಿ ಮುತ್ತಿಕೊಳ್ಳುತ್ತಾರೆ. ಗೌಡರೆಂದರೆ ಕೃಷ್ಣಪ್ಪನವರಿಗೆ ಅನನ್ಯ ಪ್ರೀತಿ, ಅಪಾರ ಗೌರವ. ಕೃಷ್ಣಪ್ಪನವರು ಉನ್ನತ ಸ್ಥಾನಮಾನಗಳನ್ನು ಅಲಂಕರಿಸಿದಾಗಲೂ ನಾನು ಅವರನ್ನು ಬಲ್ಲೆ. ಗೌಡರ ಬಗ್ಗೆ ಯಾವಾಗಲೂ ಅವರು ಗೌರವಯುತವಾಗಿ ಮಾತನಾಡುವವರೇ. ಇದಕ್ಕೆ ಗೌಡರು ಕಿರಿಯರ ಮೇಲೆ ಇಟ್ಟ ವಿಶ್ವಾಸ ಪ್ರೀತಿಗಳೇ ಕಾರಣ. ಕಿರಿಯರನ್ನು ಬೆಳೆಸಿ, ಅವರ ಶ್ರೇಯಸ್ಸನ್ನು ನೋಡಿ ಸಂತೋಷಪಡುವವರು ಅವರು.

ಗೌಡರ ದಕ್ಷತೆ, ಜನಾನುರಾಗವನ್ನು ನಾವು ಹತ್ತಿರದಿಂದ ಕಂಡದ್ದು ನಾಗಮಂಗಲದ ಮೂರನೇ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ನಡೆದಾಗ. ಆ ಸಮ್ಮೇಳನದ ಯಶಸ್ಸಿಗಾಗಿ ಅವರು ಅಪಾರವಾಗಿ ಶ್ರಮಿಸಿದರು. ತಮ್ಮ ಶಿಷ್ಯರನ್ನೆಲ್ಲ ಕಟ್ಟಿಕೊಂಡು ಅಪೂರ್ವರಿಯಾಗಿ ರಾಜ್ಯಮಟ್ಟದ ಸಮ್ಮೇಳನವನ್ನು ನಡಸಿ ಜಯಭೇರಿ ಹೊಡೆದರು. ರಾಷ್ಟ್ರಕವಿ ಕುವೆಂಪು ಅವರನ್ನು ಈ ಸಮ್ಮೇಳನಕ್ಕೆ ಕರೆತರುವಲ್ಲಿ ಯಶಸ್ವಿಯಾದರು. ಅತಿಥಿಗಳ ಊಟೋಪಚಾರದ ಮೇಲ್ವಿಚಾರಣೆಯನ್ನು ತಾವೇ ವಹಿಸಿಕೊಂಡರು. ಅಚ್ಚುಕಟ್ಟಾದ, ರುಚಿಕಟ್ಟಾದ ನಾಗಮಂಗಲದ ಊಟ ತಿಂಡಿಗಳ ರುಚಿಯನ್ನು ಸಮ್ಮೇಳನಕ್ಕೆ ಬಂದಿದ್ದ ಯಾವ ವಿದ್ವಾಂಸನೂ ಮರೆತಿಲ್ಲ. ಎಲ್ಲರೂ ಸಿಂಗಾರಿ ಗೌಡರ ಶಿಸ್ತನ್ನು, ಕಾರ್ಯದಕ್ಷತೆಯನ್ನು ಮೆಚ್ಚಿಕೊಂಡಾಡಿದವರೇ.

ಶ್ರೀ ಆದಿಚುಂಚನಗಿರಿ ಕ್ಷೇತ್ರಕ್ಕಾಗಿ ಗೌಡರು ಬಹಳವಾಗಿ ದುಡಿದವರು. ಲಿಂಗೈಕ್ಯರಾದ ಭಕ್ತನಾಥ ಸ್ವಾಮಿಗಳು ನಂತರ ಪಟ್ಟಕ್ಕೆ ಬಂದ ಚಂದ್ರಶೇಖರನಾಥರು, ಈಗಿನ ಶ್ರೀಯವರು ಪಟ್ಟಕ್ಕೆ ಬಂದಾಗ ಲಿಂಗೈಕ್ಯರಾದ ರಮಾನಂದನಾಥರು ಈ ಸಂದರ್ಭದ ಜನ ಜಾತ್ರೆಯ ಊಟದ ವ್ಯವಸ್ಥೆಯೆಲ್ಲಾ ಸಿಂಗಾರಿಗೌಡರ ನೇತೃತ್ವದಲ್ಲೇ ನಡೆದದ್ದನ್ನು ನಾನು ಬಲ್ಲೆ! ಗೌಡರಲ್ಲದೆ ಬೇರೆ ಯಾರೇ ಆಗಿದ್ದರೂ ಅಲ್ಲಿ ಗೊಂದಲವಾಗುತ್ತಿತ್ತು; ಅವ್ಯವಸ್ಥೆಯಾಗುತ್ತಿತ್ತು. ಈಗಿನ ಪೂಜ್ಯ ಶ್ರೀಯವರು ಪಟ್ಟಕ್ಕೆ ಬಂದ ಮೇಲೆ ಶ್ರೀ ಚುಂಚನಗಿರಿ ಅಭಿನವ ಕೈಲಾಸವೆಂಬಂತೆ ಕೀರ್ತಿಗಳಿಸುತ್ತಿದೆ. ಅಹೋರಾತ್ರಿ ಪೂಜ್ಯ ಬಾಲಗಂಗಾಧರನಾಥ ಸ್ವಾಮಿಗಳು ದುಡಿದು ಶೈಕ್ಷಣಿಕ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯನ್ನೇ ಎಸಗುತ್ತಿದ್ದಾರೆ. ಅಭಿವೃದ್ಧಿ ಮುಖವಾದ ಚುಂಚನಗಿರಿ ಕ್ಷೇತ್ರದ ಎಲ್ಲ ಪ್ರಮುಖ ಸಂದರ್ಭಗಳಲ್ಲಿಯೂ ಸಿಂಗಾರಿಗೌಡರು ಇದ್ದೇ ಇರುತ್ತಾರೆ.

ಗೌಡರು ಶ್ರೀಮಂತ ಕುಟುಂಬಕ್ಕೆ ಸೇರಿದವರು. ಒಳ್ಳೆಯ ರೈತರು. ದುಡಿಮೆಯಲ್ಲಿಯೇ ದೈವವನ್ನು ಕಂಡವರು. ಮೂರು ನಾಲ್ಕು ದಶಕಗಳಿಂದ ರಾಜಕೀಯದಲ್ಲಿ ಇದ್ದರೂ ಏನನ್ನೂ ಮಾಡಿಕೊಂಡವರಲ್ಲ. ಅವರಿಗೆ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ದುಡಿದ ತೀರ್ಥರೂಪರವರ "ತ್ಯಾಗ" ಸದಾ ಆದರ್ಶವಾಗಿದೆ. ಸಿಂಗಾರಿಗೌಡರೆಂದರೆ ನಮ್ಮ ರಾಜಕೀಯ ಕ್ಷೇತ್ರದ ಬಹುದೊಡ್ಡ ಹೆಸರು. ಮಂಡ್ಯದ ರಾಜಕಾರಣದ ನೀಲಿಮ ಆಕಾಶದಲ್ಲಿ ತೇಲುವ ಶುಭ್ರವಾದ ಅಭ್ರಗಳಲ್ಲಿ ಅವರೂ ಒಬ್ಬರು. ಕೆ. ವಿ. ಶಂಕರಗೌಡ, ಜಿ. ಮಾದೇಗೌಡ, ಎಚ್. ಡಿ. ಚೌಡಯ್ಯ, ಎಚ್. ಟಿ. ಕೃಷ್ಣಪ್ಪ ಇಂಥ ಗಣ್ಯ ನಾಯಕರ ಶ್ರೇಣಿಯಲ್ಲಿ ಇವರೂ ಒಬ್ಬರಾಗಿದ್ದಾರೆ. ಈ ಹಿರಿಯ ನಾಯಕರಿಗೆ ನನ್ನ ನಮನ.

ಜೀ. ಶಂ. ಪರಮಶಿವಯ್ಯ

ವಿಚಾರಮತಿ

ಶ್ರೀ ಕೆ. ಸಿಂಗಾರಿಗೌಡರನ್ನು ಬಹಳ ಸಮೀಪದಿಂದ ನೋಡಿದವರಲ್ಲಿ ನಾನೇ ಮೊದಲಿಗನೋ ಏನೋ. ನನ್ನ ಸಿಂಗಾರಿಗೌಡರ ಪರಿಚಯ ನಲವತ್ತು ವರ್ಷಗಳಷ್ಟು ಹಳೆಯದು. ಅವರ ಮನೆತನವೂ ದೊಡ್ಡದು. ಅದಕ್ಕೊಪ್ಪುವಂತೆ ಹೆಸರಿಸುವಂತಹ ದೊಡ್ಡ ಗುಣಗಳೂ ಇವರಲ್ಲಿವೆ. ನಾನು ಕಂಡಂತೆ ಹಣಕಾಸಿನ ಪರಿಸ್ಥಿತಿಯಲ್ಲೂ ಇವರು ಚಿಕ್ಕವರೇನಲ್ಲ.

ಇವರೊಬ್ಬ ರಾಜಕೀಯ ವ್ಯಕ್ತಿಯಾಗಿ ಬೆಳೆಯಬೇಕೆಂಬ ಇಚ್ಛೆ ಇವರ ಹಿರಿಯರಿಗಿರಲಿಲ್ಲ. ಬದಲಾಗಿ ಒಳ್ಳೆಯ ಪದವಿಯನ್ನು ಪಡೆದು ಉನ್ನತ ಹುದ್ದೆಗೇರಲೆಂಬ ಹಂಬಲ ಇವರ ಹಿರಿಯರಲ್ಲಿತ್ತು. ಹಾಗೆ ನೋಡಿದರೆ ಇದೊಂದರಲ್ಲಿ ಸ್ವಲ್ಪ ಹಿರಿಯರ ಇಚ್ಛೆಗೆ ವಿರುದ್ಧವಾಗಿ ಹೋದರೆಂದೇ ಹೇಳಬಹುದು.

1950 ರಲ್ಲಿ ಇವರ ರಾಜಕೀಯ ಪ್ರವೇಶ. ಕಾಂಗ್ರೆಸ್ ಪಕ್ಷ ಇವರ ರಾಜಕೀಯ ಜೀವನದ ಆರಂಭದ ರಂಗಸ್ಥಳ. ಮೈಸೂರು ರಾಜ್ಯಾಂಗ ರಚನಾಸಭೆ, ತಾಲ್ಲೂಕ್ ಕ್ಷೇತ್ರಗಳಲ್ಲಿ ಸದಸ್ಯತ್ವ. ವಿಧಾನಸಭೆ ಪ್ರವೇಶ. ಹೀಗೆ ಇವರು ವಿವಿಧ ಸಾರ್ವಜನಿಕ ಬೋರ್ಡ್, ಜಿಲ್ಲಾಸಮಿತಿ, ಸಹಕಾರ ಕ್ಷೇತ್ರಗಳಲ್ಲಿ ಸೇವಾ ಮನೋಭಾವದಿಂದ ದುಡಿದರು.

ರಾಜಕೀಯದಲ್ಲಿದ್ದು ಸ್ವಚ್ಛ ಜೀವನ ಮಾಡಬಹುದೆಂಬುದಕ್ಕೆ ಕೆ. ಸಿಂಗಾರಿಗೌಡರು ಒಂದು ಸ್ಪಷ್ಟ ಉದಾಹರಣೆ. ಶುಭ್ರ ಖಾದಿವಸ್ತ್ರದ ಸಿಂಗಾರಿಗೌಡರನ್ನು ನೋಡಿದರೆ ಇವರ ವೈರಿಗೂ ಒಂದು ಗೌರವಭಾವನೆ ಮೂಡಿಸುವಂತಿದೆ. ಇವರ ವ್ಯಕ್ತಿತ್ವ. ನಾನು ಕಂಡಂತೆ ಇವರ ಶುಭ್ರ ಖಾದಿ ಇವರ ಅಂತರಂಗದ ಪ್ರತೀಕ.

ಹಮ್ಮು ಬಿಮ್ಮುಗಳಿಲ್ಲದ ಗಂಭೀರ ವ್ಯಕ್ತಿತ್ವದ ಗೌಡರು ವಿಚಾರಮತಿಯೂ ಕೂಡ. ಗಂಭೀರವಾಗಿ ಸಮಯಕ್ಕೆ ತಕ್ಕಂತೆ ಮಾತಾಡುತ್ತಾರೆ. ಸಾಹಿತ್ಯಾಸಕ್ತರೂ ಹೌದು.

ಯಾವುದನ್ನೂ ಯಾರನ್ನೂ ಹೆಚ್ಚು ಹಚ್ಚಿಕೊಳ್ಳುವವರಲ್ಲ. ಯಾರನ್ನೂ ಕಳೆದುಕೊಳ್ಳುವವರೂ ಅಲ್ಲ. ಸುಖ ದುಃಖಗಳನ್ನು ಸಮಭಾವದಿಂದ ನೋಡುವ ಸಮದೃಷ್ಟಿ ಇವರಲ್ಲಿದೆ. ಸ್ನೇಹಪರರು.

ದುಡುಕಿನಿಂದ ಯಾವುದೇ ನಿರ್ಣಯ ತೆಗೆದುಕೊಳ್ಳುವವರಲ್ಲ. ಕೂಲಂಕಷವಾಗಿ ಸಾಧಕ ಬಾಧಕಗಳನ್ನು ತೂಗಿ ನೋಡುವವರು. ಇದನ್ನೇ ಅನೇಕರು ಇವರ ದೌರ್ಬಲ್ಯವೆಂತಲೂ ಎನ್ನುತ್ತಾರೆ. ಇವರ ವ್ಯಕ್ತಿತ್ವವನ್ನು ಮನಗಂಡೇ. ಒಂದು ರೀತಿಯಲ್ಲಿ ರಾಜಕೀಯ ಸನ್ಯಾಸವನ್ನು ತೆಗೆದುಕೊಂಡಂತಿದ್ದ ಇವರನ್ನು ಅಭಿಮಾನಿಗಳು ಮತ್ತೆ ರಾಜಕೀಯಕ್ಕೆ ಎಳೆದು ತಂದರು. ತಮ್ಮ ಘನತೆ ದಕ್ಷತೆಯಿಂದಾಗಿಯೇ ಮಂಡ್ಯ ಜಿಲ್ಲಾ ಪರಿಷತ್ ಅಧ್ಯಕ್ಷರೂ ಆದರು.

ತೆರೆದಿಟ್ಟ ಪುಸ್ತಕವೇ ಆಗಿರುವ ಇವರ ಜೀವನ, ಜೀವನಶೈಲಿ ಸ್ವಚ್ಛ ರಾಜಕೀಯ ಜೀವನ ನನಗಂತೂ ತುಂಬಾ ಅಚ್ಚುಮೆಚ್ಚು. ಈ ಒಂದೆರಡು ಮಾತುಗಳಿಂದ ಇವರನ್ನು ಅಭಿನಂದಿಸಲು ನನಗೆ ಹೆಮ್ಮೆ. ಯಾರನ್ನೂ ಹೊಗಳಿ ಅಭ್ಯಾಸವಿಲ್ಲದ ನನಗೆ ಸಿಂಗಾರಿ ಗೌಡರನ್ನು ಹೊಗಳಿ ಸಾಧಿಸಿಕೊಳ್ಳಬೇಕಾದ್ದೇನೂ ಇಲ್ಲ. ಗೌಡರಿಗೆ ಭಗವಂತನು ಹೆಚ್ಚಿನ ಆರೋಗ್ಯ ಮತ್ತು ಜನಸೇವೆ ಮಾಡುವ ಉತ್ಕಟೇಚ್ಛೆಯನ್ನು ಅಧಿಕಗೊಳಿಸಲೆಂದು ತನ್ಮಯತೆಯಿಂದ ಪ್ರಾರ್ಥಿಸುತ್ತೇನೆ.

ಎಂ. ಆರ್. ಎನ್. ಶಾಸ್ತ್ರೀ

ಪ್ರೀತಿ ವಾತ್ಸಲ್ಯಗಳ ಗಣಿ

ನಾವು ಆರು ಜನ ಮಕ್ಕಳು. ನಾಲ್ಕು ಜನ ಹೆಣ್ಣು ಮಕ್ಕಳು. ಇಬ್ಬರು ಗಂಡು ಮಕ್ಕಳು. ನಾನು ಮೂರನೆಯವಳು. ತಂದೆಯವರ ಬಗ್ಗೆ ಪುಸ್ತಕವೊಂದು ಸಿದ್ಧವಾಗುತ್ತಿದೆ ಎಂದು ಕೇಳಿದಾಗ ನಾನೂ ಏಕೆ ಬರೆಯಬಾರದು ಅನ್ನಿಸಿತು. ಬರೆಯಲು ಕುಳಿತಾಗ ಏನನ್ನು ಬರೆಯಬೇಕೆಂಬ ಬಗ್ಗೆಯೇ ಚಿಂತಿಸಿ ನಿದ್ರೆಕಳೆದುಕೊಂಡಂತಾಯಿತು. ಕಡೆಗೆ ನಮ್ಮವರನ್ನು ಕೇಳಿದರೆ "ನಿನಗೆ ಏನು ತೋಚುತ್ತದೆಯೋ ಅದನ್ನೇ ಬರಿ" ಎಂದರು. ಪೆನ್ನು ಹಿಡಿದು ಕುಳಿತಾಗ ನೆನಪಿನ ಹಾಳೆ ಮಗುಚಿತು.

ನಾನು ಆರನೆ ವರ್ಷಕ್ಕೆ ಕಾಲಿಕ್ಕುವಕಾಲಕ್ಕೆ ತಂದೆಯವರು ತಮ್ಮ ವಕೀಲಿ ವೃತ್ತಿಯನ್ನು ತೊರೆದು ಊರಿನಲ್ಲಿದ್ದರು. ನಮ್ಮ ಚಿಕ್ಕಪ್ಪನವರು ಅಕಾಲ ಮೃತ್ಯುವಿಗೆ ತುತ್ತಾದುದರಿಂದ ವಯಸ್ಸಾದ ಮತ್ತು ರಾಜಕೀಯ ನಿರತ ತಾತನವರೊಂದಿಗಿರುವುದು ಕರ್ತವ್ಯವೆಂದು ಅವರು ಭಾವಿಸಿದರೆಂದು ನನಗೆ ಈಗ ಅನ್ನಿಸುತ್ತದೆ.

ನಾನು ಮೂರನೆಯ ತರಗತಿಗೆ ಬರುವಷ್ಟರಲ್ಲಿ ತಂದೆಯವರು ರಾಜಕೀಯಕ್ಕಿಳಿದಿದ್ದರು. ನಾವೆಲ್ಲಾ ಮಲಗಿದ ಮೇಲೆ ಅವರು ಮನೆಗೆ ಬರುತ್ತಿದ್ದರು. ನಾವೆಲ್ಲಾ ಏಳುವ ಹೊತ್ತಿಗೆ ಹೊರಗೆ ಹೋಗಿರುತ್ತಿದ್ದರು. ಅಪರೂಪದಾಗಿ ಮನೆಯಲ್ಲಿ ಉಳಿದ ದಿನ ಅವರ ಸುತ್ತಾ ಜನ ತುಂಬಿರುತ್ತಿದ್ದರು. ಹೀಗಾಗಿ ನಮಗೆ ಅವರನ್ನು ಯಾರೂ ಹೊರಗಿನವರು ಇಲ್ಲದಾಗ ಭೇಟಿಯಾಗುವುದೇ ಕಷ್ಟವಾಗಿತ್ತು.

ತಂದೆಯವರು ತುಂಬಾ ಶಿಸ್ತಿನ ಮನುಷ್ಯರು. ನನಗಿನ್ನೂ ಚೆನ್ನಾಗಿ ಜ್ಞಾಪಕವಿದೆ. ಒಮ್ಮೆ ಅವರ ಫೆನ್ನು ತೆಗೆದುಕೊಂಡು ಬರೆಯಲಾರಂಭಿಸಿದೆ. ಏನೋ ಕಾರಣಕ್ಕೆ ಅದು ಮುಂದೆ ಬರೆಯಲಿಲ್ಲ. ನನಗೆ ಸಿಟ್ಟು ಬಂತೆಂದು ಕಾಣುತ್ತದೆ, ಅದನ್ನು ಕಚ್ಚಿ ಅದ್ವಾನ ಮಾಡಿ ಅದು ಎಲ್ಲಿತ್ತೋ ಅಲ್ಲಿಯೇ ಇಟ್ಟು ತೆಪ್ಪಗಾದೆ. ಅವರು ಏನನ್ನೋ ಬರೆಯಲು ತೆಗೆದಾಗ ಅದರ ಸ್ಥಿತಿ ಕಂಡು ನಮ್ಮ ಮೇಲೆ ಅವರಿಗೆ ಸಹಜವಾಗಿಯೇ ಕೋಪ ಬಂದಿರಬೇಕು. ಇಂತಹ ಕೋಪ ಅವರಿಗೆ ಬರುವುದು ನಮ್ಮಲ್ಲಿ ಶಿಸ್ತು ಕೆಟ್ಟಾಗ ಮಾತ್ರ. ಅದಕ್ಕೆ ಕಾರಣ ನಾನು ಎಂದು ತಿಳಿದಾಗ ಅವರು ಶಿಸ್ತುಗೇಡಿಯಾದ ನನಗೆ ಚೆನ್ನಾಗಿಯೇ ಏಟು ಕೊಟ್ಟಿದ್ದರು. ಅವರೆ ಮರುಕ್ಷಣ ಮರುಗಿ ಮುದ್ದಿಸಿಯೂ ಇದ್ದರು.

ಮಕ್ಕಳ ಶಿಕ್ಷಣದ ಬಗ್ಗೆ ತಂದೆಯವರಿಗೆ ಬಹಳ ಆಸಕ್ತಿಯಿತ್ತು. ಇದಕ್ಕಾಗಿ ಅವರು ಮಂಡ್ಯದಲ್ಲಿ ಮನೆ ಮಾಡಿ ನಮ್ಮನ್ನೆಲ್ಲಾ ಅಲ್ಲಿಟ್ಟು ಓದಿಸುತ್ತಿದ್ದರು. ಈ ವಿಚಾರದಲ್ಲಿ ನಮ್ಮ ತಂದೆ, ತಾಯಿಯಂದಿರಿಬ್ಬರೂ ನಮಗಾಗಿ ಮಹಾತ್ಯಾಗವನ್ನೇ ಮಾಡಿದ್ದಾರೆಂದು ಸಂಸಾರ ವಂದಿಗರಾದ ನಮಗೆ ಈಗ ಅರ್ಥವಾಗುತ್ತದೆ. ನಮಗಾಗಿ ಅವರಿಬ್ಬರೂ ಅನೇಕ ದಿನಗಳ ಕಾಲ ಅಗಲಿರಬೇಕಾಗುತ್ತಿತ್ತು.

ನಮ್ಮ ತಾಯಿ ನಗರದಿಂದ ಅದರಲ್ಲೂ ಪ್ರತಿಷ್ಠಿತ ಮನೆತನದಿಂದ ಬಂದವರು. ಅವರು ಕರಡಹಳ್ಳಿಯಲ್ಲಿ ಸಹ ಅತ್ಯಂತ ಸಂತೋಷದಿಂದ ಇರಲು ತೀರ್ಮಾನಿಸಿದರು ಎಂಬುದು ನಿಜಕ್ಕೂ ಅವರ ತ್ಯಾಗ ಮತ್ತು ಬುದ್ಧಿವಂತಿಕೆಯನ್ನು ತೋರಿಸುತ್ತದೆ. ನಮ್ಮ ತಾತನವರು ಮಾಡಿದ್ದೇ ಬೇಕಾದಷ್ಟು ಆಸ್ತಿ ಊರಲ್ಲಿದೆ. ತಾತ ತಮ್ಮ ಮಗ ವಕೀಲರಾಗಿ ಊರಿಗೆ ಬಂದಾಗ ಇರಲು ಒಂದು ಹೊಸ ಮನೆ ಕಟ್ಟಿಸಿದ್ದರು. ನಮ್ಮ ಹಳೆಯ ಮನೆ ಬಹಳ ದೊಡ್ಡದು. ಈಗಲೂ ನಾವು ಆ ಮನೆಗಳನ್ನು ಹಾಗೆಯೇ ಕರೆಯುತ್ತೇವೆ. ಈಗಿನ ಕಾಲದಲ್ಲಿ ಹಳ್ಳಿಗಳಿಗೆ ಎಲ್ಲಾ ಆಧುನಿಕ ಸೌಲಭ್ಯಗಳಿದ್ದೂ ಜನರು ನಗರವಾಸ ಬಯಸುತ್ತಾರೆ. ಆದರೆ ನಮ್ಮ ತಂದೆ ತಾಯಿಯವರು ಇಂತಹ ಸೌಲಭ್ಯ ಗಳಿಲ್ಲದ ಕಾಲದಲ್ಲಿ ತಮ್ಮ ಹಳ್ಳಿಯ ಬಗೆಗೆ ತೋರಿದ ಪ್ರೀತಿ ದೊಡ್ಡದು. ಈ ವಿಚಾರದಲ್ಲಿ ನನ್ನ ತಾಯಿಯದು ದೊಡ್ಡ ತ್ಯಾಗವೆಂದೇ ನನಗನ್ನಿಸುತ್ತದೆ.

ನಮ್ಮ ತಂದೆ ಸ್ವಾರ್ಥಿಯಲ್ಲ ಎಂಬುದು ನಮಗೆಲ್ಲಾ ಹೆಮ್ಮೆಯ ಸಂಗತಿ. ಎಲ್ಲವೂ ಅಲ್ಲದಿದ್ದರೂ ಕೆಲವು ಸಂಗತಿಗಳು ನನಗೆ ಗೊತ್ತಿವೆ. ಒತ್ತಾಯಮಾಡಿ ಒಂದು ನಿವೇಶನ ಕೊಡಲು ಮುಂದೆ ಬಂದರೆ "ನಮಗೇಕೆ ನಿವೇಶನ ನಾನು ಹಳ್ಳಿಯಲ್ಲಿರುವವನು" ಎಂದರು. ಮಂತ್ರಿಯಾಗು ಎಂದರೆ "ಅಯ್ಯೋ ಅಷ್ಟೊಂದು ದಿನ ಹಳ್ಳಿ ಬಿಟ್ಟಿರು ವುದೆ ? ಬೇಡ" ಎಂದರು. ಅವರು ಯಾವುದಕ್ಕೂ ಮೇಲೆ ಬಿದ್ದು ಹೋದುದನ್ನು ನಾನು ಕಂಡೇ ಇಲ್ಲ. ತಮಗೆ ಅಧಿಕಾರಬೇಕೆಂದು ಆಸೆಪಟ್ಟವರಲ್ಲ. ಎಷ್ಟೇ ತೊಂದರೆ ಯಾದರೂ ಜನರೊಂದಿಗೆ ನಗುನಗುತ್ತಾ ಪ್ರೀತಿಯಿಂದ ನಡೆದುಕೊಳ್ಳುವುದನ್ನು ಕಂಡಾಗ ನಮಗೆ ಹೆಮ್ಮೆಯೆನಿಸಿದ್ದುಂಟು. ಇದು ನಮ್ಮ ತಂದೆಯವರ ಅಪರೂಪಗುಣವೆಂದೇ ನಾವು ನಂಬಿದ್ದೇವೆ.

ತಂದೆಯವರು ಹದಿನೈದು ಇಪ್ಪತ್ತು ದಿನ ನಮ್ಮೊಂದಿಗೆ ಉಳಿದುದು ಅತ್ಯಂತ ದುರಂತ ಸಮಯದಲ್ಲಿ, ತಾಯಿಯವರ ಆರೋಗ್ಯ ವಿಷಮಿಸಿದಾಗ. ಅವರನ್ನು ಉಳಿಸಿ ಕೊಳ್ಳಲು ತಂದೆ ಎಲ್ಲಿಲ್ಲದ ಪ್ರಯತ್ನ ಮಾಡಿದರು. ಆದರೆ ನಮ್ಮೆಲ್ಲರ ದೌರ್ಭಾಗ್ಯ 1969 ಜೂನ್ 30 ರಂದು ತಾಯಿ ನಮ್ಮನ್ನಗಲಿದರು. ಆ ಸಂದರ್ಭದಲ್ಲಿ ತಂದೆ ಯವರು ತಮ್ಮ ನೋವನ್ನು ಮರೆತು ನಮ್ಮನ್ನು ಸಂತೈಸಿದ್ದು ಎಂದೆಂದೂ ಮರೆಯ ದಂತಹ ಘಟನೆ. ಅಂದಿನಿಂದ ಇಂದಿನವರೆಗೆ ಅವರು ನಮಗೆ ತಂದೆ, ತಾಯಿ ಎರಡೂ ಆಗಿದ್ದಾರೆ.

ತಾಯಿದ್ರೆ ತೌರೆಚ್ಚು ಎಂಬ ಜನಪದದ ಮಾತೊಂದಿದೆ. ನಮ್ಮ ತಾಯಿ ತೀರಿಕೊಂಡಾಗ ನಮ್ಮಲ್ಲಿ ಈ ಭಾವನೆ ಬರದಂತೆ ತಂದೆ ನೋಡಿಕೊಂಡರು. ತಮ್ಮದಾದ ಎಲ್ಲವನ್ನೂ ನಮಗಾಗಿ ಅವರು ವ್ಯಯಿಸಿದರು. ಅವರು ರಾಜ ಕಾರಣಿಯಾದರೂ ಅವರಿಗೆ ಶತ್ರುಗಳೇ ಇಲ್ಲ. ಮಾತಿನಲ್ಲಿ ತಂದೆ ಅತ್ಯಂತ ತೂಕವಾದವರು. ಎಲ್ಲರನ್ನೂ ಅವರು. ಅವರನ್ನು ಎಲ್ಲರೂ ಪ್ರೀತಿಸುತ್ತಾರೆ. ಅವರ ಶ್ರೀ ರಕ್ಷೆಯಲ್ಲಿ ನಾವೆಲ್ಲಾ ಸುಕ್ಷೇಮವಾಗಿದ್ದೇವೆ. ಅವರ ಈ ಮಹಾತ್ಯಾಗವನ್ನು ಉಳಿಸಿಕೊಳ್ಳುವ ಶಕ್ತಿಯನ್ನು ದೇವರು ನಮಗೆ ಕೊಡಲಿ ಎಂದು ಪ್ರಾರ್ಥಿಸುತ್ತೇನೆ.

ಕೆ. ಎಸ್. ಗೀತಾ

ನಮ್ಮ ತಾಯಿ

"ಯಾವುದೇ ಶ್ರೇಷ್ಠ ವ್ಯಕ್ತಿಯ ಹಿನ್ನೆಲೆಯಲ್ಲಿ ಓರ್ವ ಸ್ತ್ರೀಯ ಪಾತ್ರ ಇದ್ದೇ ಇರುತ್ತದೆ" ಎಂಬ ಹೇಳಿಕೆಯನ್ನು ನೆನಪಿಗೆ ತಂದು ಕೊಳ್ಳುತ್ತಾ, ನನ್ನ ತಂದೆಯನ್ನು ಕುರಿತಂತೆ ಹೊರಬರುತ್ತಿರುವ ಅಭಿನಂದನ ಗ್ರಂಥಕ್ಕೆ ನನ್ನ ತಾಯಿಯನ್ನು ಕುರಿತಂತೆ ನನ್ನ ಅನಿಸಿಕೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳ ಬಯಸುತ್ತೇನೆ.

ಹಾಲುಂಡ ತವರಿಗೆ ಏನೆಂದು ಹಾಡಲಿ,
ಹೊಳೆದಂಡೆಲಿರುವ ಗರಿಕೇಯ ಕುಡಿಹಂಗೆ
ಹಬ್ಬಲಿ ಅವರ ರಸಬಳ್ಳಿ ॥

ಎಂಬ ಜಾನಪದ ತ್ರಿಪದಿಯನ್ನು, ಜ್ಞಾಪಿಸಿಕೊಳ್ಳುತ್ತಾ, ಯಾವುದೇ ಹೆಣ್ಣು ತವರನ್ನು ವಿಶೇಷವಾಗಿ 'ತಾಯಿ'ಯನ್ನು ಕುರಿತಂತೆ ಮಾತನಾಡುವಾಗ ಬರೆಯುವಾಗ ಉಲ್ಲಸಿತಳಾಗುತ್ತಾಳೆ. ಭಾವನಾಸ್ಫೋಟಕ್ಕೆ ಒಳಪಡುತ್ತಾಳೆ. ಈ ಕಾರಣದಿಂದಾಗಿ ಮಾತು ಅಥವಾ ಬರಹ ಉತ್ಪ್ರೇಕ್ಷೆ ಅನಿಸಬಹುದು. ಈ ನನ್ನ ಬರಹ ಕೂಡ ಈ ಸೀಮಿತತೆಯಲ್ಲೇ ಇದೆ ಅನ್ನಿಸಿದರೆ ನಾನೂ 'ಹೆಣ್ಣು' ತಾನೆ ಎಂಬುದಷ್ಟೆ ಸಮಜಾಯಿಷಿ.

ನನ್ನ ತಾಯಿ ಸರಸ್ವತಿ. ನಂಜನಗೂಡಿನ ಕಮಲಮ್ಮ ವಿಶ್ವೇಶ್ವರ ಗೌಡ ಎಂಬ ಶ್ರೀಮಂತ ದಂಪತಿಗಳ ಹಿರಿಯ ಮಗಳು. ಆ ಕಾಲದಲ್ಲೇ ಏಳನೆಯ ತರಗತಿಯವರೆಗೆ ವಿದ್ಯಾಭ್ಯಾಸ. ಜೊತೆಗೆ ವೀಣಾವಾದನದಲ್ಲಿ ಪರಿಣತಿ. ಅಷ್ಟೇ ಅಲ್ಲದೆ ಹಿಂದಿ ಭಾಷೆಯಲ್ಲಿ ವಿಶಾರದೆ. ನಮ್ಮ ತಂದೆ ತಾಯಿಯ ದಾಂಪತ್ಯ ಜೀವನ ಇಪ್ಪತ್ಮೂರು ವರ್ಷಗಳದ್ದು. ನಮ್ಮ ತಾಯಿ–ತಂದೆ ವೈವಾಹಿಕ ಜೀವನ ಪ್ರಾರಂಭಿಸಿದ್ದು 1946 ಮಾರ್ಚ್ 20 ರಂದು.

ನಮ್ಮ ತಾಯಿ ಹೆಸರಿಗೆ ಅನ್ವರ್ಥವಾಗಿ 'ಸರಸ್ವತಿ'ಯೇ ಆಗಿದ್ದರು. ಅಷ್ಟೇ ಅಲ್ಲ ಸಾರ್ವಜನಿಕ ಬದುಕಿನಲ್ಲೂ ಕ್ರಿಯಾಶೀಲರಾಗಿದ್ದರು. ಕರಡಹಳ್ಳಿಗೆ ಬಂದನಂತರ ಕೆಲವು ಕಾಲ ಪಂಚಾಯಿತಿ ಚೇರ್‌ಮನ್‌ರಾಗಿ ಊರಿನ ಮತ್ತು ಸುತ್ತಮುತ್ತಲಿನ ಹಳ್ಳಿಗಳ ಏಳ್ಗೆಗೆ ಶ್ರಮಿಸಿದರು. ಈ ಸಂದರ್ಭದಲ್ಲಿ ನಡೆದ ಒಂದು ದೃಷ್ಟಾಂತ ಉಲ್ಲೇಖನೀಯ. ಅಕ್ಕಪಕ್ಕದ ಊರಿಗೆ ಹೋಗಬೇಕಾದ ಸಂದರ್ಭದಲ್ಲಿ ವೃದ್ಧ ಕರಿಯಣ್ಣ ಜೊತೆಯಲ್ಲಿರುತ್ತಿದ್ದರು. ಕುಹಕಿಗಳು ಏನೇನೋ ಮಾತನಾಡಿದಾಗ, ನೊಂದ ಕರಿಯಣ್ಣ ಅಮ್ಮನ ಬಳಿಬಂದು 'ನಾನು ಕೆಲಸಕ್ಕೆ ಬರಲ್ಲ' ಎಂದಾಗ ನೊಂದು "ಕರಿಯಣ್ಣ ನೀವು ನನ್ನ ತಂದೆ

ಇದ್ದ ಹಾಗೆ. ನೀವು ಮುಂದೆ ಹೋದರೆ ನಾನು ಹಿಂದೆ ಬರುವೆ" ಎಂದಾಗ, "ಅಷ್ಟು ದೊಡ್ಡ ಮಾತೇಕೆ ನನ್ನಪ್ಪ" ಎಂದು ಕೆಲಸಕ್ಕೆ ಬರುವುದನ್ನು ಮುಂದುವರಿಸಿದರು. ಇದು ತಾಯಿಯ ಮನೋಧೋರಣೆಯ ನಿದರ್ಶನವಲ್ಲವೇ ?

ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದಾಗ, ಎರಡು ಸಂಕಟ. ಅತ್ತ ಪತಿಯನ್ನು ಬಿಟ್ಟಿರಬೇಕು. ಇತ್ತ ಮಕ್ಕಳ ವಿದ್ಯಾಭ್ಯಾಸದ ಕಡೆ ಗಮನಕೊಡಬೇಕು. ಕೊನೆಗೆ ಆಯ್ಕೆ ಮಾಡಿಕೊಂಡದ್ದು—ಮಕ್ಕಳ ಭವಿಷ್ಯವನ್ನೇ. ನಾವು ಮಕ್ಕಳು ಅವರು ಹಾಗಿದ್ದಾರೆ ಇವರು ಹೀಗಿದ್ದಾರೆ ನಾವು ಮಾತ್ರ ಹೀಗೇ ಇರಬೇಕೆ? ಎಂದಾಗ "ನಾಳಿನ ನಿಮ್ಮ ಭವಿಷ್ಯ ಚೆನ್ನಾಗಿರಬೇಕಾದರೆ ಇಂದಿನ ನಿಮ್ಮ ಕ್ಷಣಿಕ ಸುಖಗಳನ್ನು ಬಲಿಕೊಡಲೇಬೇಕು" ಎಂಬ ತಾಯಿಯ ಹಿತನುಡಿಯು ಅಂದು ನಮಗೆ ಕಿರಿಕಿರಿ ಎನ್ನಿಸಿದ್ದರೂ, ಈಗ ಅದರ ಬೆಲೆ ಗೊತ್ತಾಗುತ್ತಿದೆ.

ನಮಗೆ 'ನೀತಿ' ಹೇಳುತ್ತಿದ್ದ ವಿಧಾನ ಕುರಿತಂತೆ ಬರೆಯಲೇಬೇಕು. ಯಾವ ಅಧಿಕಾರವನ್ನೂ ಬಳಸದೆ, ತಂದೆ ರಾಜಕೀಯದಲ್ಲಿದ್ದಾರೆ. ನಿಮ್ಮ ಕಡೆಯಿಂದ ಅವರಿಗೆ ಕಳಂಕ ಬರಬಾರದು......ಮುಂತಾಗಿ ಹೇಳಿ. ನಮ್ಮ ದಾರಿ ತಪ್ಪುವಿಕೆಯನ್ನು ತಡೆ ಗಟ್ಟುತ್ತಿದ್ದರು. ತಂದೆ ಬಂದಾಗ ತಾಯಿಗೆ, ನಮಗೆ ಎಲ್ಲರಿಗೂ ಸಂತೋಷವೋ ಸಂತೋಷ. ಅದೂ ಕ್ಷಣಿಕ. ಬರುವಾಗಲೇ ದಂಡು ದಾಳಿ ಸಮೇತವೇ ಬರುತ್ತಿದ್ದರು. ಜೊತೆಯಲ್ಲಿ ಕುಳಿತು ಮಾತನಾಡುವಂತಿಲ್ಲ—ವಾದಮಾಡುವಂತಿಲ್ಲ. ತಂದೆ ಹೊರಟಾಗ ತಾಯಿ ಕಿಟಕಿಯ ಬಳಿ ನಿಂತು ಅವರು ಮರೆಯಾಗುವವರೆಗೂ ನೋಡುತ್ತಿದ್ದುದು ನನ್ನ ಕಣ್ಣಲ್ಲಿ ಕಟ್ಟಿದಂತಿದೆ.

ತಂದೆಯವರ ಏಳ್ಗೆಗೆ ಮಕ್ಕಳಾದ ನಮ್ಮೆಲ್ಲರ ಇಂದಿನ ಸುಖ-ನೆಮ್ಮದಿಗೆ ನಮ್ಮ ತಾಯಿಯ ಅಗೋಚರವಾದ ಮೌನ ತಪಸ್ಸು ಹಾರೈಕೆ, ಶ್ರಮದ ಅಡಿಪಾಯವಿದೆ. ತಾಯಿಯ ಸೌಜನ್ಯ ಸರಳತೆ ಇಂದಿಗೂ ನೆನಪಿನ ಸುರುಳಿಯಲ್ಲಿದೆ. ವೀಣೆಯ ಮುಂದೆ ಕುಳಿತ ತಾಯಿಯ ಚಿತ್ರ ನೆನಪಿನಲ್ಲಿ ಹಸಿರಾಗಿದೆ. ನಮ್ಮೆಲ್ಲರ ಸಾಹಿತ್ಯ-ಸಂಗೀತದ ಅಭಿರುಚಿಗೆ ತಾಯಿಯ ಕೊಡುಗೆ ಅಪಾರ. ಕುವೆಂಪು ಅವರ "ಶ್ರೀ ರಾಮಾಯಣ ದರ್ಶನಂ" ವಾಚನ ತಾಯಿಗೆ ಪ್ರಿಯವಾದ ಹವ್ಯಾಸವಾಗಿತ್ತು. ಒಳ್ಳೆಯ ಪುಸ್ತಕ ಓದುವುದು ಚರ್ಚಿಸುವುದು. ತಾಯಿಗೆ ಇಷ್ಟದ ಕೆಲಸ ವಾಗಿತ್ತು. ಮಹಿಳಾ ಸಮಾಜದ ಸದಸ್ಯೆಯೂ ಆಗಿದ್ದರು. ಸಂಸಾರದಲ್ಲಿ ನೋವಿರಲಿ ನಲಿವಿರಲಿ ಎಂದೂ ಹೊರಗೆ ಅದನ್ನು ತೋರಿಸಿ ಕೊಂಡವರಲ್ಲ. ಅವರ ತಾಳ್ಮೆ, ಸಹನೆಯನ್ನು ನೆನೆಸಿಕೊಂಡರೆ ಈಗಲೂ ಆಶ್ಚರ್ಯ ವಾಗುತ್ತದೆ. ತಾಯಿ ತಮ್ಮ ಅಕ್ಕತಂಗಿಯರಿಗೆ ಬರೆಯುತ್ತಿದ್ದ ಕಾಗದಗಳು ರಸವತ್ತಾಗಿ ಕಾದಂಬರಿ ಓದಿದಂತಾಗುತ್ತಿದ್ದವು. ಭಾವಪೂರ್ಣವಾಗಿರುತ್ತಿದ್ದವು. ಮೆಚ್ಚುಗೆಯಾದ ಹಲ-ಕೆಲವು ಭಾವಗೀತೆಗಳನ್ನು ಬರೆದಿಡುವ ಹವ್ಯಾಸವೂ ಇತ್ತು.

ತಾಯಿ ಮದುವೆಯಾದ ಹೊಸತರಲ್ಲಿ ತಮ್ಮ ಪತಿಗೆ ಬರೆದ ಕಾಗದದ ತುಣುಕು

ಗಳು ಉಲ್ಲೇಖನೀಯ. ಸಾಮಾಜಿಕ ಜೀವನಕ್ಕೆ ದುಮುಕಿ ಕಾರ್ಯಕ್ಷೇತ್ರ ವಿಶಾಲವಾದರೂ. ಸಾಂಸಾರಿಕವಾಗಿ ತನ್ನ ಸೀಮಿತತೆಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ. "ಒಂದು ಸ್ವತಂತ್ರವಾಗಿ ಹಾರಿಕೊಂಡಿದ್ದ. ಪಕ್ಕಿಗೆ ಪಂಜರವಾದೆನಲ್ಲ" ಎಂದುಕೊಂಡ ಅವರು "ಪಂಜರವೇ ಆಗ ಬೇಕೆಂದಿಲ್ಲ ಆ ಪಕ್ಕಿಗಾಗಿ ಒಂದು ಪುಟ್ಟ ಗೂಡಾಗಬಹುದು." ಎಂದು ಹೇಳಿದ್ದಾರೆ. ಈ ಮಾತುಗಳ ಹಿಂದಿರುವ ತಾಯಿಯ ಮನದ ಕೊರಗ ಹಾಗೂ ತಮಗೆ ತಾವೇ ಸಾಂತ್ವನಗೊಳಿಸಿಕೊಳ್ಳುವ ಅಷ್ಟೇ ಅಲ್ಲದೆ ಸಾಂತ್ವನಕ್ಕೆ ಒಂದು ನೆಲೆಯನ್ನು ಒದಗಿಸಿಕೊಳ್ಳುವ ರೀತಿ ಅವರ ಪ್ರಜ್ಞಾಪೂರ್ವಕ ಚಿಂತನ ಶೀಲತೆಗೆ ಸಾಕ್ಷಿ ಆಗುತ್ತದಲ್ಲವೆ ?

ಇಂಥಾ ಸುಸಂಸ್ಕೃತ ತಾಯಿ-ತಂದೆ ಪಡೆದ ನಾವೇ ಧನ್ಯರು. ಅವರ ಆಶೀರ್ವಾದದಿಂದಲೇ ನಮ್ಮ ಬಾಳು ಹಸನಾಗಿದೆ. ತಾಯಿ ಅಗಲಿದ ಮೇಲೆ ಆಸ್ಥಾನವನ್ನು ತುಂಬಿದ ತಂದೆಯ ತ್ಯಾಗ ಬಹು ದೊಡ್ಡದು.

ತಾಯಿಯ ಸ್ಥಾನವನ್ನು ಬಹುಶಃ ತಂದೆ ತುಂಬಿದರೆ ? ಆಸ್ಥಾನವನ್ನು ಪೂರ್ಣ ತುಂಬಿದ ಚಿಕ್ಕಮ್ಮನನ್ನು ನೆನೆಯದಿದ್ದರೆ ಲೋಪವಾಗುತ್ತದೆ.

ಕೆ ಯಸ್ ಮಂಜುಳಾ

ನನ್ನವರಿಗೊಂದು ಓಲೆ*

ನಂಜನಗೂಡು
4–4–1946

ನನ್ನ..................ಗೆ !

ನಿಮಗೆ ಓಲೆ ಬರೆಯಲೆಂದು ಕುಳಿತು ಸುಮಾರು ಇಪ್ಪತ್ತು ನಿಮಿಷವಾಯಿತು. ಈಗ ಬರೆಯುತ್ತಿದ್ದೇನೆ. ಏನೇನೋ ಬರೆಯಬೇಕೆಂದಾಸೆ. ಆದರೆ ಮನಸ್ಸು ಕಂಪಿಸುತ್ತಿದೆ ಮೃದುವಾಗಿ. ಒಮ್ಮೆ ಓದಿದ್ದೆ "ಭಾವದಿಂದ ಹೃದಯ ತುಂಬಿ ಬಂದಾಗ ವಾಣಿ ಮೂಕವಾಗುವುದೆಂದು" ಅದು ನಿಜವಿರಬೇಕು. ನಿಮ್ಮ ಓಲೆ ಬಂದಾಗ ನಾ ಅದಕೆ ಸಿದ್ಧಳಿರಲಿಲ್ಲ. ಮನ ಬಯಸುತ್ತಿತ್ತಾದರೂ ನಾ ತಿಳಿದಿರಲಿಲ್ಲ ನನ್ನಾಸೆ ನೆರವೇರುದೆಂದು. ನಿನ್ನೆ ಬೆಳಗಿನಿಂದಲೂ ಬಹಳ ಬೇಸರವಾಗಿತ್ತು. ಬೇಡ ಬೇಡವೆಂದರೂ ನಿಮ್ಮ ನೆನಪು ಮನದ ತುಂಬ ತುಂಬಿತ್ತು. ನೀವಿಲ್ಲದೆ ನನಗೆ ಅದೆಂಥ ದುಃಖ ! ಒಮ್ಮೊಮ್ಮೆ ನೆನೆಸುತ್ತಿದ್ದೆ "ಅವರು ಓಲೆ ಬರೆದರೆ ಅದೆಷ್ಟು ಚೆನ್ನ !" ಆದರೆ ಮತ್ತೆ ನಿಸುತ್ತಿತ್ತು. ಮೂರು ನಾಲ್ಕು ದಿನ ಇಲ್ಲಿದ್ದು, ಮತ್ತೆ ಹೋಗುವಾಗ ಸಹ ಒಂದು ಮಾತು. ಒಂದೇ ಒಂದು ಮಾತು. "ಹೋಗಿ ಬರುವೆ" ಎಂದು ಸಹ ಹೇಳದವರು ಓಲೆ ಬರೆಯುವರೇ ? ಎಂದು. ಇಂದು ನಿಮ್ಮಲ್ಲಿ ಹೇಳುವ ಎನಿಸುತ್ತದೆ. ನೀವು ಹೋದ ದಿನ ನಾ ಬಹಳ ಅತ್ತಿದ್ದೆ. ಹೇಳಿ ಕೂಡ ಹೋಗಲಿಲ್ಲವಲ್ಲ. ನಾನವರಿಗೆ ಅಷ್ಟು ಪರಕೀಯಳೇ ಎಂದು. ಅತ್ತು ಅತ್ತು ಕಣ್ಣು ಕೆಂಪಾಗಿದ್ದವು. ಅಕ್ಕ ಬಂದರು. ನಾನು ಗಾಬರಿಯಾಗಿ ನಿದ್ದೆ ಹೋದವಳಂತೆ ನಟಿಸಿದೆ. ಆದರೂ ಎಳಿಸಿ ಕೇಳಿದರು "ಮಾತಾಡಿಸಿದರೇನು ?" ನಾನು ಉಕ್ಕಿ ಬರುವ ಅಳುವನ್ನು ತಡೆದು ಕಣ್ಣು ಮುಚ್ಚುತ್ತಾ ಹೇಳಿದೆ "ಇಲ್ಲ, ನನಗೆ ನಿದ್ದೆ ಬರುತ್ತಿದೆ. ನೀವು ಹೋಗಿ' ಎಂದು ಇಷ್ಟು ನಿರಾಶಳಾಗಿದ್ದಾಗ ನಿಮ್ಮ ಓಲೆ ಬಂದರೆ ನನಗೆ ನಂಬಿಕೆ ಬರಲಿಲ್ಲ. ಸ್ವಲ್ಪಹೊತ್ತು ತೆಗೆಯಲು ಹೆದರಿದೆ. ನನ್ನ ಕನಸು ಸುಳ್ಳಾದರೆ ! ವಿದ್ಯಾವಂತರು ಮತ್ತು ಗುಣವಂತರು ಮಾತ್ರವಲ್ಲ, ಕವಿ ಕೂಡ ಹೌದು !" ಒಮ್ಮೆ ಓದಿದೆ. ಮತ್ತೊಮ್ಮೆ ಓದಿದೆ. ಆದರೂ ತೃಪ್ತಿಯಾಗಲಿಲ್ಲ. ಇದುವರೆಗೂ ಅದೆಷ್ಟೋ ಬಾರಿ ಓದಿ ಮುಗಿಸಿರುವೆ. ಇನ್ನೂ ತೃಪ್ತಿಯಿಲ್ಲ. ಓದಿದಂದಿನಿಂದ ಮನಸ್ಸಿಗೆ ಬಿಡುವೇ ಇಲ್ಲ. ಯೋಜನೆ ಮಾಡಿ ಮಾಡಿ ಸಾಕಾಯಿತು. ಕಡೆಗೂ ನಿಮ್ಮ ಮನ ಒಪ್ಪುವಂತಹ ಓಲೆ ಸಿದ್ಧವಾಗಲಿಲ್ಲ.

* ಶ್ರೀ ಸಿಂಗಾರಿಗೌಡರಿಗೆ ಅವರ ಪತ್ನಿ ಬರೆದ ಮೊದಲ ಪತ್ರ.

"ಇಷ್ಟು ದಿನಗಳವರೆಗೆ ಹಕ್ಕಿ ಹಾರಿದಂತೆ .....ಹೋಗಿದ್ದೆ ನಾವು. ಮಾಡಿದ್ದೇ ಕೆಲಸ ಆಗಿತ್ತು ನನ್ನ ಜೀವನ" ಎಂದು ಬರೆದಿರುವಿರಿ. ಮೋಹನ ಕೂಡ ಒಮ್ಮೆ ಹೇಳಿದ್ದ "ಅವರಿಗೆ ಮದುವೆಯಾಗಲು ಇಷ್ಟವೇ ಇರಲಿಲ್ಲವಂತೆ" ಎಂದು. ಕೇಳಿ ನನ್ನ ಮನಸ್ಸಿಗೆ ನೋವಾಯಿತು. "ಒಂದು ಸ್ವತಂತ್ರವಾಗಿ ಹಾರಿಕೊಂಡಿದ್ದ ಹಕ್ಕಿಗೆ ಪಂಜರ ವಾದೆನಲ್ಲಾ" ಎಂದೆನಿಸಿತು ಒಮ್ಮೆ. ಆದರೆ ಮರುಕ್ಷಣದಲ್ಲಿಯೇ "ಪಂಜರವೇ ಆಗಬೇಕೆಂದಿಲ್ಲ. ಹಕ್ಕಿಗಾಗಿ ಒಂದು ಪುಟ್ಟಗೂಡಾಗಬಹುದು. ಆಕಾಶ ಅದೆಷ್ಟೇ ವಿಶಾಲ ವಾಗಿದ್ದರೂ ಬೆಳಗಿನಿಂದ ಸಂಜೆಯವರೆಗೆ ಮಾತ್ರ ಹಕ್ಕಿಗೆ ಅದರಲ್ಲಿ ಸ್ಥಾನ. ಸಂಜೆ ಯಾದ ಮೇಲೆ ಅದಕ್ಕೊಂದು ಆಶ್ರಯ ಬೇಕು. ನಿರಾತಂಕವಾಗಿ ನಿದ್ದೆಮಾಡಲು ಒಂದು ಪುಟ್ಟಗೂಡುಬೇಕು, ಅದಿಲ್ಲದೆ ಹಕ್ಕಿಯ ಬಾಳು ಅಪೂರ್ಣ" ಎನ್ನಿಸಿತು. ಇವೆರಡರಲ್ಲಿ ಯಾವುದು ಸರಿ, ಯಾವುದು ತಪ್ಪು ನೀವು ಹೇಳಿ ಇವು ನನ್ನ ಕಲ್ಪನೆ ಮಾತ್ರ. ನಾನದೆಷ್ಟೋ ತಪ್ಪುತ್ತೇನೆ. ಅದನ್ನು ಸರಿಪಡಿಸುವುದು ನಿಮ್ಮ ಭಾರ. ಏಕೆಂದರೆ ಈಗ ನೀವು "ನನ್ನವರು", ನಾನು "ನಿಮ್ಮವಳು" ನಿಮಗಾಗಿ ನಾನು ಮತ್ತು ನನ್ನದೆಲ್ಲ. ನನಗೊಂದಾಸೆ ಇದೆ. ನಿಮಗೆ ನಾನು ಹೊರೆಯಾಗಬಾರದು ಮತ್ತು ಸಾಧ್ಯವಾದ ಮಟ್ಟಿಗೆ ನಿಮ್ಮ ಕೆಲಸಗಳಿಗೆ ಸಹಕಾರಿಯಾಗಬೇಕು ಎಂದು. ಇಲ್ಲ ನಿಜ ಹೇಳಲೇನು ? ನನಗಾಸೆ ಇರುವುದು ನಾವಿಬ್ಬರೂ ಒಂದಾಗಬೇಕೆಂದು. ಹೃದಯ ಒಂದು ದೇಹ ಎರಡು, ನಾನೇ ನೀವು. ನೀವೇ ನಾನಾಗಬೇಕೆಂದು. ನಾನು ನಿಮಗೆ ತಕ್ಕವಳಲ್ಲ. ಆದರೂ ನನಗಾಸೆ ಇರುವಾಗ, ನೀವು ಮಾಡಿದರೆ ನಿಮಗೆ ಸರಿಯಾದ, ಮೆಚ್ಚಿನ ಗೆಳತಿ ಯಾಗುವುದು ಸಾಧ್ಯವೆ ?

ಒಂದು ಮಾತು ಮರೆತ್ತಿದ್ದೆ. ನಿಮ್ಮ ಫೋಟೋ ಒಂದು ಕಳುಹಿಸುವಿರಾ? ಶಾಂತಿ ಒಂದು ಕೇಳಿದಾಗ ನೀವು ನಕ್ಕು ಹೇಳಿದಿರಂತೆ "ಸರಸ್ವತಿ ಹೇಳಿ ಕಳುಹಿಸಿರಬೇಕು" ಎಂದು. ಕೇಳಿ ನನ್ನ ಮನಸ್ಸಿನಲಿ ಅದೇನೇನೋ ಆಗಿತ್ತು ! ಹೇಗಾದರಾಗಲಿ ಒಂದು ಕಳುಹಿಸಿ. ಸಾಧ್ಯವಾದರೆ ಕೆಲವು ಪುಸ್ತಕಗಳನ್ನೂ ಕಳುಹಿಸಿ. ನಿಮ್ಮಂತೆಯೇ ನನಗಾದರೂ ಪುಸ್ತಕಗಳ ಹುಚ್ಚು ಬಹಳ. ಅದಿದ್ದರೆ ಪ್ರಪಂಚವೇ ಮರೆತು ಹೋಗುತ್ತದೆ **ನನಗೆ.** ಓಲೆ ಬಹಳ ದೊಡ್ಡದಾಯಿತು. ನಿಮಗೆ ಬೇಸರವಾಗಬಹುದು. ನಿಮ್ಮ ಎರಡನೆಯ ಓಲೆಗಾಗಿ ಕಾಯುತ್ತಿರುವೆ. ಜೊತೆಗೆ ನಿಮ್ಮ ಬರುವಿಕೆಗೂ ಕಾಯುವೆ. ಮತ್ತೆ ಯಾವಾಗ ಬರುವಿರಿ. ಆದಷ್ಟು ಬೇಗ ಬರುವಿರೆಂದು ನಂಬಲೆ ? ನಿಮ್ಮನ್ನು ನೋಡುವ ಆಸೆ ಹೆಚ್ಚಾಗುತ್ತಿದೆ. ಓದಿ ನಗಬೇಡಿ ! ಮುಂದಿನ ಬಾರಿಗೆ ಮರೆಯದೆ ನಿಮ್ಮ ವಿಳಾಸ ಬರೆಯಿರಿ. ಅದನ್ನೇ ಮರೆಯುವುದೆ ! ನಾನೆಲ್ಲಿಗೆ ಬರೆಯಬೇಕು.

ಸರಸ್ವತಿ

ಬಂಗಾರದಂಥ ಸಿಂಗಾರಿಗೌಡರು

ಹುಟ್ಟಿದ ವಂಶವೂ ಒಬ್ಬರ ಯೋಗ್ಯತೆಗೆ ಕಾರಣವಾಗುತ್ತದೆ. ಶ್ರೀಮಾನ್ ಕೆ. ಸಿಂಗಾರಿಗೌಡರು ಒಳ್ಳೆಯ ಮನೆತನದಲ್ಲಿ ಜನಿಸಿದರು. ಅವರ ತಂದೆ ದಿವಂಗತ ಶ್ರೀಮಾನ್ ಕೃಷ್ಣಪ್ಪಗೌಡರನ್ನು ನಾನು ಚೆನ್ನಾಗಿ ಬಲ್ಲೆ. ಅವರ ಧಡೂತಿ ಶರೀರ ಹಾಗೆ ನೋಡಿದರೆ ಸಿಂಗಾರಿಗೌಡರು ತೀರಾ ಬಡಕು ಎನ್ನಬಹುದು. ಶ್ರೀ ಕೃಷ್ಣಪ್ಪಗೌಡರು ಮತ್ತು ದಿವಂಗತ ಟಿ. ಮರಿಯಪ್ಪನವರು ಯಾವತ್ತೂ ಜೊತೆ ಜೊತೆಯಾಗಿಯೇ ಇರುತ್ತಿದ್ದರು. ಆಗ ದೇಶದ ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿದ್ದ ಚಳುವಳಿಯಲ್ಲಿ ಇಬ್ಬರೂ ಚಳುವಳಿಯ ರಥಕ್ಕೆ ಕಟ್ಟಿದ ಎರಡು ಕುದುರೆಗಳಂತಿದ್ದರು. ಇವರಿಬ್ಬರಿಗೆ ಮಾರ್ಗದರ್ಶನ ನೀಡಲು ಸಾರಥಿಯಾಗಿ ದಿವಂಗತ ಶ್ರೀ ಎಚ್.ಸಿ. ದಾಸಪ್ಪನವರಿದ್ದರು. ನಾಗಮಂಗಲದ ಶ್ರೀಮಾನ್ ಎಂ. ಆರ್. ಎಸ್. ಶಾಸ್ತ್ರಿಯವರನ್ನೂ ಶ್ರೀಮಾನ್ ಪಿ. ಎಸ್. ಜವರಪ್ಪಗೌಡರನ್ನೂ ಈ ಗುಂಪಿಗೆ ಸೇರಿಸಬಹುದು. ಇಂತಹ ಮಹನೀಯರನ್ನು ನಾವು ಮರೆಯಬಾರದು. ಆದರೆ ಮರೆಯುತ್ತಿದ್ದೇವೆ. ಇದು ನಮ್ಮ ನಾಡಿನ, ಅಷ್ಟೇ 'ಏಕೆ, ನಮ್ಮ ದೇಶದ ದೌರ್ಭಾಗ್ಯ.

ಕೃಷ್ಣಪ್ಪಗೌಡರ ಸುಪುತ್ರರಾದ ಸಿಂಗಾರಿಗೌಡರು ತಂದೆಗೆ ತಕ್ಕ ಮಗ. ರಾಜಕೀಯ ವ್ಯಕ್ತಿಗಳ ಬಗ್ಗೆ ಒಂದಲ್ಲ ಒಂದು ಆಕ್ಷೇಪಣೆಯನ್ನು ನಾವು ಕೇಳುತ್ತೇವೆ. ಆದರೆ ಸಿಂಗಾರಿಗೌಡರ ಬಗ್ಗೆ ಅಂತಹ ಆಕ್ಷೇಪಣೆಯ ಮಾತುಗಳನ್ನು ನಾವು ಕೇಳಿಲ್ಲ. ಎತ್ತರದ ನಿಲುವು, ಸಣಕಲು ಶರೀರ, ಮೇಲಾಗಿ ವಿನಯದ-ವರ್ತನೆ ಇವು ಗೌಡರನ್ನು ಗೌರವವಾಗಿ ಕಾಣುವಂತೆ ಮಾಡುತ್ತವೆ. ಮಂಡ್ಯ ಜಿಲ್ಲೆಯ ಸಚ್ಚರಿತ ಮತ ಸಜ್ಜನ ರಾಜಕೀಯ ನಾಯಕರಲ್ಲಿ ಇವರೊಬ್ಬರು. ಎಲ್ಲರ ಬಾಯಲ್ಲೂ ಒಳ್ಳೆಯವರೆನಿಸಿಕೊಂಡು ಬಾಳು ಸಾಗಿಸುತ್ತಿರುವವರಲ್ಲಿ ಅಗ್ರಗಣ್ಯರೆಂದೇ ಹೇಳಬೇಕು. ಇತ್ತೀಚೆಗೆ ಅವರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿ ಪರಿಷತ್ತಿನ ಆಡಳಿತವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವುದರಲ್ಲಿ ಅವರು ತೋರಿಸುತ್ತಿರುವ ಜಾಣ್ಮೆ, ಎಲ್ಲಾ ಪಕ್ಷದವರನ್ನೂ ಒಂದೇ ರೀತಿಯಾಗಿ ಕಾಣುವ ಅವರ ಉದಾರತನ ತುಂಬಾ ಮೆಚ್ಚತಕ್ಕವುಗಳು.

ಶ್ರೀಮಾನ್ ಗೌಡರನ್ನು ನಾನು ಬಹು ವರ್ಷಗಳಿಂದ ಬಲ್ಲೆ. ಅವರು ಅನಾವಶ್ಯಕವಾಗಿ ಏನೇನೋ ಕೆಲಸಗಳನ್ನು ಹಚ್ಚಿಕೊಂಡು ಮೈಪರಚಿಕೊಳ್ಳುವ ಸ್ವಭಾವದ

ವರಲ್ಲ. ಆದರೆ ಕೈಗೆತ್ತಿಕೊಂಡ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ಸೈ ಎನ್ನಿಸಿಕೊಳ್ಳುವ ವ್ಯಕ್ತಿ ಅವರು. 1971ರಲ್ಲಿ ನಾನು ರಾಜ್ಯದ ಲೇಬರ್ ಕಮೀಷನರ್ ಆಗಿದ್ದ ಕಾಲದಲ್ಲಿ ನಾಗಮಂಗಲದಲ್ಲಿ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ನಡೆಸಬೇಕೆಂದು ತೀರ್ಮಾನಿಸಲಾಯಿತು. ಎಲ್ಲಾ ತಾಲ್ಲೂಕು ಕೇಂದ್ರಗಳೂ ಬೆಳೆದಿದ್ದರೂ 1971ರಲ್ಲಿ ನಾಗಮಂಗಲ ತೀರಾ ಹಿಂದುಳಿದ ಊರು ಆಗಿತ್ತು. ಹೋಟೆಲುಗಳಿಲ್ಲ. ಬಂದವರು ಊಟ-ತಿಂಡಿ ವ್ಯವಸ್ಥೆಯಿಲ್ಲ. ಉಳಿದುಕೊಳ್ಳಲು ಇರುವ ಕೊಠಡಿಯೆಂದರೆ ಟಿ. ಬಿ. ಬಿಟ್ಟರೆ ಬೇರೇನೂ ಇರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ನಾವು ಸಿಂಗಾರಿಗೌಡರಿಗೆ ಹೊರಗಿನಿಂದ ಬರುವ ಸುಮಾರು ಐನೂರು ಜನ ಪ್ರತಿನಿಧಿಗಳಿಗೆ ಊಟ-ವಸತಿ ಸೌಕರ್ಯಗಳನ್ನು ಒದಗಿಸುವ ಜವಾಬ್ದಾರಿ ವಹಿಸಿದೆವು. ಗೌಡರು ಆಗಲಿ ಎಂದರು. 'ಅವರ ಊಟಕ್ಕೆ ತಗಲಬಹುದಾದ ಖರ್ಚಿಗೆ ಹಣ ಒದಗಿಸಬೇಕು, ಇಷ್ಟು ಮಾಡಿ. ಉಳಿದ ವಿಚಾರ ನನಗೆ ಬಿಡಿ" ಎಂದರು. ನಾವು ಆಗಲಿ ಎಂದೆವು. ಸಾಕಷ್ಟು ಹಣ ಸಂಗ್ರಹ ಆಯಿತು. ಶ್ರೀ ಆದಿಚುಂಚನಗಿರಿ ಮಠಕ್ಕೆ ಸೇರಿದ ಹಾಸ್ಟಲ್ ಕಟ್ಟಡದಲ್ಲಿ ಊಟ-ವಸತಿಗಳ ಏರ್ಪಾಡುಗಳಾದವು. ಮೈಸೂರಿನಿಂದ ಅಡುಗೆಯವರು ಬಂದರು. ಅಲ್ಲಿಂದಲೇ ಕಂಬಳಿಗೆ, ತಲೆದಿಂಬು. ಹಾಸಿಗೆಗಳೂ ಬಂದವು. ಎರಡು ಹೊಸ ಫ್ಲಷ್ ಕಕ್ಕಸ್ಸು ಕಟ್ಟಿಸಲಾಯಿತು. ದವಸ. ಧಾನ್ಯ. ತರಕಾರಿ. ಹಾಲು. ಮೊಸರು. ಬೆಣ್ಣೆ ಇತ್ಯಾದಿಗಳನ್ನು ಸಂಗ್ರಹಿಸಲಾಯಿತು.

ಇನ್ನು ಸಮ್ಮೇಳನಕ್ಕೆ ಜನ ಬರುತ್ತಾರೆಯೋ ಇಲ್ಲವೋ ಎಂದು ನಮಗೆ ಸಂದೇಹ. ಏಕೆಂದರೆ, ಊರಿನಲ್ಲಿ ಎಲ್ಲಿ ನೋಡಿದರೂ ಜನವೇ ಇಲ್ಲ. ಇನ್ನು ಹಳ್ಳಿಯವರು ಬರುವುದು ಸಂದೇಹ. ಈ ವಿಷಯವನ್ನು ಸಿಂಗಾರಿಗೌಡರಲ್ಲಿ ಹೇಳಿದಾಗ ಅವರು "ನೀವು ಸುಮ್ಮನಿರಿ ನಾನು ಜನ ಸೇರಿಸ್ತೀನಿ" ಎಂದರು. ಕಾರಣ ಅಂಥವರು ನಾಗಮಂಗಲದಂತಹ ಊರಿಗೆ ಬರುವುದೇ ಅಪರೂಪವಾಗಿತ್ತು. ಅವರೂ ಬಂದರು ನನ್ನ ಕೋರಿಕೆಯನ್ನು ಮನ್ನಿಸಿ ಸಮ್ಮೇಳನವನ್ನು ಉದ್ಘಾಟಿಸಲು ಒಪ್ಪಿಕೊಂಡಿದ್ದರು. ಗೌಡರ ಪ್ರಯತ್ನದಿಂದ ಉದ್ಘಾಟನೆಗೆ ಮಾತ್ರ ಅನಂತರದ ಕಾರ್ಯಕ್ರಮಗಳಿಗೆ ಅಪಾರ ಜನ ಸೇರಿದ್ದರು. ಸಮ್ಮೇಳನ ಯಶಸ್ವಿಯಾಗಿ ನಡೆಯಿತು.

ಯಶಸ್ಸಿಗೆ ಮತ್ತೊಂದು ಕಾರಣ. ಗೌಡರು ಏರ್ಪಡಿಸಿದ್ದ ಊಟೋಪಚಾರ. ಶ್ರೀಮಾನ್ ಬಾಳಪ್ಪ ಹುಕ್ಕೇರಿಯವರು ಸಮ್ಮೇಳನಕ್ಕೆ ಬಂದಿದ್ದರು. ಅವರು ಧಾರವಾಡದ ಕಡೆಯ ಜೋಳದ ರೊಟ್ಟಿ ಮತ್ತು ಮುದ್ದೆಗಟ್ಟಲೆ ಬೆಣ್ಣೆ ತಿಂದ ಮಂದಿ. ಅಂಥವರೂ ಸಹ "ಬಿಡ್ರಿಯಾ. ನಮ್ಮ ಸಿಂಗಾರಿಗೌಡರು ಒಳ್ಳೇ ವ್ಯವಸ್ಥಾ ಮಾಡಿದ್ದರ್ರಿ ಅಗದಿ ಭಯಂಕರವಾಗಿತ್ರಿ. ಊಟಾ ಉಪಚಾರ ಭೇಷ್ ಭೇಷ್" ಎಂದರು. ಈಹೊತ್ತೂ ಆ ಊಟದ ರುಚಿ ಇನ್ನೂ ಬಾಯಲ್ಲಿರುವಂತೆಯೇ ಬಾಳಪ್ಪನವರು

ಮಾತಾಡುತ್ತಾರೆ "ಮತ್ತೊಮ್ಮೆ ಸಮಾರಂಭಗಳಲ್ಲಿ ನಮ್ಮ ಗೌಡ್ರು ಇದ್ರಲ್ಲಾ. ಸಿಂಗಾರಿ ಗೌಡ್ರನ್ನೇ ಊಟದ ವ್ಯವಸ್ಥೆಗೆ ನೇಮಿಸಿರಲ್ಲಾ" ಎನ್ನುತ್ತಾರೆ.

ಇದರಿಂದ ಕಂಡುಬರುವ ವಿಷಯವೆಂದರೆ, ನಮ್ಮ ಗೌಡರ ನಿಷ್ಠಾವಂತಿಕೆ. ಜಾಣತನ. ಶ್ರದ್ಧೆ. ಕೊಟ್ಟ ಮಾತಿನಂತೆ ನಡೆದುಕೊಳ್ಳುವ ಗುಣ ಇತ್ಯಾದಿಗಳು. ಅನ್ಯ ಆಪತ್ತಿಗೂ ಅವರಲ್ಲಿ ಮುಂದುವರಿದುಕೊಂಡು ಬಂದಿವೆ.

ಇಂತಹ ಪುಣ್ಯಾತ್ಮರಿಗೆ ದೇವರು ಆರೋಗ್ಯಕರವಾದ ಆಯುಸ್ಸು ಕೊಟ್ಟು ಜಿಲ್ಲೆಯ ಸೇವೆಗೆ ಅವರನ್ನು ಮೀಸಲಾಗಿರಿಸಲಿ ಎಂದು ಹಾರೈಸುತ್ತೇನೆ.

ಎಚ್. ಎಲ್. ನಾಗೇಗೌಡ

ಮಿತ ಭಾಷಿ

ನನ್ನ ಸ್ನೇಹಿತರಾದ ಶ್ರೀ ಕೆ. ಸಿಂಗಾರಿಗೌಡರನ್ನು ಸನ್ಮಾನಿಸಲು ಅಭಿನಂದನ ಗ್ರಂಥ ತರುವವರು ಸಿಂಗಾರಿಗೌಡರನ್ನು ಕುರಿತು ಲೇಖನ ಬರೆಯಲು ಕೇಳಿ ಬಂದ ಪತ್ರ ನೋಡಿ ಸಂತೋಷವಾಯಿತು. ಈ ಹಿಂದೆಯೇ ಇಂತಹ ಸಮಾರಂಭ ನಡೆಯಬೇಕಿತ್ತು. ನಿಧಾನವಾದರೂ ಈ ಸನ್ಮಾನ ಸ್ನೇಹಿತರಿಗೆ ಸಲ್ಲಿಸಲು ಸ್ನೇಹಿತರು ಮಾಡಿದ ಪ್ರಯತ್ನಕ್ಕೆ ಅಭಿನಂದನೆಗಳು.

ನನ್ನ ಸಿಂಗಾರಿಗೌಡರ ಪರಿಚಯ ಸುಮಾರು ಮವತ್ತೈದು ವರ್ಷ ಹಿಂದಿನಿಂದ ನಡೆದುಬಂದುದು. ಸಿಂಗಾರಿಗೌಡರ ಬಂಧು ಒಬ್ಬರು ಮಳವಳ್ಳಿಯಲ್ಲಿ ಪೋಲೀಸ ಇಲಾಖೆಯಲ್ಲಿ ಉದ್ಯೋಗದಲ್ಲಿದ್ದರು. ಅವರ ಹೆಸರು ನರಸಪ್ಪನವರೆಂದು ಜ್ಞಾಪಕ. ಮಳವಳ್ಳಿ ಮಿಡ್ಲ್‌ಸ್ಕೂಲಿನಲ್ಲಿ ನಾನು ಗೌಡರ ಜೊತೆ ವಿದ್ಯಾರ್ಥಿಯಾಗಿ ಕಳೆದ ದಿನಗಳು ಇಂದಿಗೂ ಅಚ್ಚೊತ್ತಿದಂತೆ ನನ್ನ ಮನದಲ್ಲಿ ಉಳಿದಿವೆ.

ಶ್ರೀಯುತರು ಬಹುಮಿತ ಭಾಷಿಗಳು. ಮಾತುಗಳು ಅಷ್ಟಕಷ್ಟೆ! ಮಾತುಗಳನ್ನು ತೂಕ ಮಾಡಿ ಮಾತನಾಡುತ್ತಾರೋ ಎನ್ನುವಂತೆ ಭಾಸವಾಗುತ್ತಿತ್ತು. ಆಡುವ ಮಾತುಗಳಲ್ಲಿ ಮೃದುತನ. ಏರಿದ ಧ್ವನಿಯಲ್ಲಿ ಮಾತನಾಡಿದರೆ ಪಕ್ಕದ ವಿದ್ಯಾರ್ಥಿಯ ಓದಿಗೆ ತೊಂದರೆಯಾದೀತೆಂಬ ಶಂಕೆ. ತನ್ನ ಓದಿಗೆ ತಕ್ಕ ವಾತಾವರಣ ಕಲ್ಪಿಸಿಕೊಳ್ಳುವಂತಹ ಸನ್ನಿವೇಶವನ್ನು, ಜೊತೆ ಓದುಗರಿಗೂ ಒದಗಿಸುವುದು ಅಗತ್ಯ ಎಂಬ ಅರಿವನ್ನು ವಿದ್ಯಾರ್ಥಿ ದೆಸೆಯಲ್ಲಿಯೇ ಬೆಳೆಸಿಕೊಂಡಿದ್ದ ಪ್ರಾಜ್ಞ ವಿದ್ಯಾರ್ಥಿಯಾಗಿದ್ದರು. ಮೂರು ಮೂರೂವರೆ ವರ್ಷಕಾಲ ಮಳವಳ್ಳಿಯಲ್ಲಿ ವಿದ್ಯಾರ್ಥಿ ಜೀವನ ಕಳೆದಿರಬಹುದು. ವಿದ್ಯಾರ್ಥಿಗಳಲ್ಲಿ ಸಣ್ಣಪುಟ್ಟ ಕೂಗಾಟವಾಗುವುದು ಸರ್ವಸಾಮಾನ್ಯವಾದರು. ಒಮ್ಮೆಯಾದರು ಯಾರೊಡನೆಯೂ ಇವರು ಜಗಳವಾಡಿದ ನೆನಪಿಲ್ಲ. ಕೊನೆಗೆ ಕೂಗಾಟಕ್ಕಾದರೂ ಅವಕಾಶ ನೀಡಿದ ವ್ಯಕ್ತಿಯಲ್ಲ. ಅಂತಹ ಪರಿಸ್ಥಿತಿ ಒದಗಿದರೆ ನಕ್ಕುನಗಿಸಿ ಒಂದಾಗುತ್ತಿದ್ದರು.

ದಿನಚರಿಯಲ್ಲಿ ವೇಳಾಪಟ್ಟಿ ಇಟ್ಟುಕೊಂಡು ಅನುಕರಣೆ ಮಾಡುತ್ತಿದ್ದರೋ ಎನ್ನುವಂತೆ ದಿನಚರಿ ಪಾಲನೆ ಮಾಡುತ್ತಿದ್ದರು. ನನ್ನ ತಂದೆತಾಯಿಗಳು ಎಲ್ಲೂ ಕೆರೆಗೆ ಆಟಕ್ಕೂ ಹೋಗದಂತೆ ನನ್ನನ್ನು ಚಿಕ್ಕಂದಿನಿಂದ ಮನೆಯಿಂದ ಹೊರ ಹೋಗದಂತೆ ಪುಸ್ತಕಕೊಟ್ಟು ಕೂರಿಸಿ ಓದಿಸುತ್ತಿದ್ದರು. ನಾನೂ ಚುರುಕುತನದ ಹುಡುಗನೆ!

ಆದರೆ ಎಷ್ಟೇ ಓದಿದರೂ ತರಗತಿಯಲ್ಲಿ ಸಿಂಗಾರಿಗೌಡರನ್ನು ಹಿಂದೂಡಲು ಸಾಧ್ಯವಾಗುತ್ತಿರಲಿಲ್ಲ.

ಮಿತವ್ಯಯದಲ್ಲಿ ಗೌಡರು ಹೆಸರಾಂತ [illegible]. ನಾನು ನಾಲ್ಕಾರು ಪುಟಗಳಲ್ಲಿ ಬರೆವಷ್ಟನ್ನು ಒಂದೋ ತಪ್ಪಿದರೆ ಒಂದೂವರೆ ಪುಟಗಳಲ್ಲಿ ಬರೆದು ತರುತ್ತಿದ್ದರು. ಇಂದಿಗೂ ನೋಡಿ ಅವರ ಬರವಣಿಗೆ ಭೂತಗನ್ನಡಿ ಹಿಡಿಯಬೇಕೋ ಎನ್ನುವಂತೆ ಕೊರೆದಿರುತ್ತಾರೆ. ಆಗಿನ ಕಾಲಕ್ಕೆ ಈಗಿನಂತೆ ನೀರು ಸರಬರಾಜು ಕೊಳಾಯಿ ಮೂಲಕ ಇರಲಿಲ್ಲ. ಕನ್ನೇರು ಕಟ್ಟೆಯಲ್ಲಿ ಊರೆಲ್ಲ ಮನೆಗೆ ನೀರು ಹೊರುತ್ತಿದ್ದರು. ಅದೇ ಕಟ್ಟೆಗೆ ಬೆಳಗಾಗ ಎದ್ದು ಆಗಾಗ ನಾನೂ ಹೋಗುತ್ತಿದ್ದೆ. ಒಂದು ದಿನ ಕೈಕಾಲು ತೊಳೆಯಲು ಬಂದ ಸಿಂಗಾರಿಗೌಡರು ಕನ್ನೇರು ಕಟ್ಟೆ ಮೆಟ್ಟಿಲಿನಲ್ಲಿ ಸಿಕ್ಕಿದರು. ಕೈಕಾಲಿಗೆ ಕಟ್ಟೆನೀರನ್ನು ಬಳಸಲು ಜಿಪುಣತನ! ಅಯ್ಯೋ ಕಟ್ಟೆ ತುಂಬ ನೀರಿದೆ! ಉದಾರವಾಗಿ ನೀರು ಬಳಸಪ್ಪ! ಎಂದೆ! "ಹೊಟ್ಟೆಗೆ ಉಂಡರೆ ಅನ್ನವ್ವಾ ವಿಷ" ಎಂದರು ನಗುತ್ತಾ. ಮಿತವ್ಯಯದಲ್ಲಿ ಸಿಂಗಾರಿಗೌಡರಿಂದ ಚಿಕ್ಕಂದಿನಿಂದ ಕಲಿತಿದ್ದರೂ. ಜೀವನದ ಸರ್ವಮುಖಗಳಲ್ಲೂ ಅವರಂತೆ ಮಿತವ್ಯಯ ಸಾಧಿಸಲಾಗಿಲ್ಲ ನನಗೆ.

ಆಗಿನ ವಿದ್ಯಾರ್ಥಿ ತಂಡದಲ್ಲಿ ಎದ್ದು ಕಾಣುತ್ತಿದ್ದ ಎತ್ತರದ ವಿದ್ಯಾರ್ಥಿ ಸಿಂಗಾರಿಗೌಡರು. ದಿನವೂ ತಪ್ಪದೆ ಫುಟ್‌ಬಾಲ್ ಆಡಲು ಮೈದಾನಕ್ಕೆ ಸೇರುತ್ತಿದ್ದೆವು. ಈ ಆಟದಲ್ಲಿ ಅವರು ಪ್ರಾವೀಣ್ಯತೆಗಳಿಸಿದ್ದರು. ಸಿಂಗಾರಿಗೌಡರು ಒಂದರ ಮೇಲೊಂದು ಗೋಲುಹಾಕಿ ಎದುರು ಆಟಗಾರರನ್ನು ಸೋಲಿಸುತ್ತಿದ್ದರು. ನಾನು ಸಹ ಎತ್ತರದ ಆಳಲ್ಲದಿದ್ದರು ಕುಳ್ಳನಾಗಿರಲಿಲ್ಲ. ಸಿಂಗಾರಿಗೌಡರನ್ನು ಆಟದಲ್ಲಿ ಸೋಲಿಸಲು ಎದುರು ಪಕ್ಷದವರು ಹುನ್ನಾರು ಮಾಡಿ ನನ್ನನ್ನು ಅವರ ಪಕ್ಷಕ್ಕೆ ಕರೆಯುತ್ತಿದ್ದರು. ಮಳವಳ್ಳಿ ಪೇಟೆಯಲ್ಲಿ ಹೆಸರಾಂತ ಮನೆತನದ ಹುಡುಗ ನಾನು. ಸಿಂಗಾರಿಗೌಡರಿಗೆ ಸೋತರೆ ನನ್ನ ಮನೆತನದ ಗೌರವ ಹೋದೀತು ಎನ್ನುವ ಕುತೂಹಲದಿಂದ ಸಿಂಗಾರಿಗೌಡರ ಪಕ್ಷವನ್ನೇ ಸೇರಿ, ಸಿಂಗಾರಿಗೌಡರು ಹೊಡೆದ ಗೋಲಿನಿಂದ ಗೆದ್ದು ನನಗೆ ನಾನೇ ಗೋಲುಹೊಡೆದು ಗೆದ್ದೆ ಎನ್ನುವ ಹೆಮ್ಮೆ ಮೂಡುತ್ತಿತ್ತು.

ಆಟದ ಮೈದಾನದಲ್ಲಿ ಒಂದಲ್ಲ ಒಂದಕ್ಕೆ ಕೂಗಾಟವಾಗುವುದು ಸರ್ವೇಸಾಧಾರಣ. ಅಷ್ಟೇ ಅಲ್ಲ ನಿಸರ್ಗ ನಿಯಮ ಎಂದು ಕೊಂಡಿದ್ದೇನೆ. ಆಟದ ಎರಡು ತಂಡಗಳಲ್ಲೂ ತುಂಟಾಟಿಕೆಯ ಹುಡುಗರಿದ್ದರು. ಅವರ ಪೈಕಿ ನಾನೂ ಒಬ್ಬ. ತುಂಟಾಟದಲ್ಲಿ ಬಹು ತುಂಟಾಟದ ಹುಡುಗನಾಗಿದ್ದೆ. ಸೋತ ತಂಡದವರು ಒಂದಲ್ಲ ಒಂದು ಕಾರಣ ತೆಗೆದು ಕಾಲು ಕೆರೆದು ಜಗಳಕ್ಕೆ ಬರುತ್ತಿದ್ದರು. ಸಿಂಗಾರಿಗೌಡರು ಸುಮ್ಮನಿದ್ದರೂ ನಾನು ಸುಮ್ಮನಿರುತ್ತಿರಲಿಲ್ಲ. ಕಾಲುಕೆರೆದು ಜಗಳಕ್ಕೆ ನಿಲ್ಲುತ್ತಿದ್ದೆ. "ಏ ! ಬಾ ಅಣ್ಣ ಇದೇನು ಅಂತ ಜಗಳಕ್ಕೆ ನಿಲ್ಲುತ್ತೀಯೆ" ಎಂದು ಬೆನ್ನುತಟ್ಟಿ ಸುಮ್ಮನಿರುತ್ತಿದ್ದರು. ಆಟದ ಮೈದಾನದಲ್ಲಿ ಜೊತೆಗಾರರೊಡನೆ ಜಗಳ ಮಾಡುವುದೆಂದರೆ ಅದೇನೋ ! ಒಂದು

ಸೊಗಸು ನನಗೆ. ಏನು ಮಾಡಿದರೂ ಜಗಳವಾಡಲು ಬಿಡದ ಸಿಂಗಾರಿಗೌಡರ ಬಗ್ಗೆ ನನಗೆ ಮುಜುಗರವಾಗುತ್ತಿತ್ತು. ಎಷ್ಟೇ ಮುಜುಗರವಾದರೂ ತರಗತಿಯಲ್ಲಿ ಅವರ ಸೌಮ್ಯ ಮುಖಭಾವ ನೋಡಿದಾಗ ತಣ್ಣಗಾಗಿಬಿಡುತ್ತಿದ್ದೆ.

ಕೂತಲ್ಲೇ ಏನಾದರೂ ಯಾರನ್ನಾದರು ಕೆದಕಿ ಉಪಾಧ್ಯಾಯರಿಂದ ಎಚ್ಚರಿಕೆ ನೀಡುವ ಮಾತುಗಳನ್ನು ಕೇಳುವ ಸ್ವಭಾವ ನನ್ನದಾಗಿತ್ತು. ಸಿಂಗಾರಿಗೌಡರು ಶಾಲೆಯನ್ನು ಬಿಟ್ಟು ಹೋಗುವಾಗಲೂ ಶಾಲೆಯ ಎಲ್ಲಾ ಉಪಾಧ್ಯಾಯರಿಂದಲೂ ಶಹಬಾಸ್‌ಗಿರಿ ಪಡೆದೇ ತೆರಳಿದರು. ಚಿಕ್ಕವನೋ ದೊಡ್ಡವನೋ ಎಲ್ಲರನ್ನು "ಬಾ ಅಣ್ಣ. ಹೋಗಣ್ಣ" ಎನ್ನುವ ಸಚ್ಚಾರಿತ್ರ್ಯ ಸ್ವಭಾವ ಅಂದಿನಿಂದ ಬೆಳೆದು ಬಂದುದು. ಇಂದೂ ಸಹ ಅದೇ ಸ್ವಭಾವ ಮೈಗೂಡಿಸಿಕೊಂಡಿದ್ದಾರೆ. ಸಿಂಗಾರಿಗೌಡರ ಸೌಮ್ಯತೆ, ಮುಖಭಾವ ಕಂಡು ಯಾರಾದರು ತಮ್ಮ ವರ್ತನೆಯಲ್ಲಿ ಬದಲುಗೊಳ್ಳುವ ವ್ಯಕ್ತಿತ್ವ. ಹಿಂದೆ ಹೇಳಿರುವಂತೆ ಕೊಂಚ ಜಗಳ ಗಂಟಿತನದ ನಾನು ಎಂದೂ ಯಾವಾಗಲು ಸಿಂಗಾರಿಗೌಡರೊಡನೆ ಕೂಗಾಡಿದ ನಿದರ್ಶನವಿಲ್ಲ. ಇದಕ್ಕೆ ಕಾರಣ ಅವರ ಸ್ವಭಾವವೋ ನನ್ನ ಸ್ವಭಾವವೋ ಎನ್ನುವುದನ್ನು ಅನೇಕ ಸಾರಿ ತಡಕಾಡಿದ್ದೇನೆ.

ನ್ಯಾಯಶಾಸ್ತ್ರ ಪಾರಂಗತರಾದ ಮೇಲೆ ಮಂಡ್ಯದಲ್ಲಿ ಸುಪ್ರಸಿದ್ಧ ವಕೀಲರಾಗಿದ್ದ ದಿ|| ಟಿ. ವಿ. ರುದ್ರಪ್ಪನವರಲ್ಲಿ ವೃತ್ತಿ ಆರಂಭಿಸಿದ್ದರು. ದಿವಂಗತ ರುದ್ರಪ್ಪನವರು ಸಿಂಗಾರಿಗೌಡರ ವಕೀಲಿ ವೃತ್ತಿ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸುತ್ತಿದ್ದುದನ್ನು ಕೇಳುತ್ತಿದ್ದ ನನಗೆ ನನ್ನ ಬೆನ್ನನ್ನು ನಾನೇ ಚಪ್ಪರಿಸಿಕೊಂಡು ಹಾ ! ನನ್ನ ಸ್ನೇಹಿತನೊಬ್ಬ ಇಂತಾಗಿದ್ದಾನಲ್ಲ ಎಂದು ಹೆಮ್ಮೆಪಟ್ಟುಕೊಳ್ಳುತ್ತಿದ್ದೆ.

ಜಿಲ್ಲೆಯ ಸುಪ್ರಸಿದ್ಧ ಕರ್ಮಯೋಗಿ ಶ್ರೀ ಕೆ.ವಿ. ಶಂಕರಗೌಡರೊಡನೆ ರಚನಾತ್ಮಕ ಕಾರ್ಯ ಪ್ರವೃತ್ತರಾದ ಸಿಂಗಾರಿಗೌಡರು ಪೂರ್ಣ ವೇಳೆಯನ್ನು ರಾಜಕೀಯ ವೇದಿಕೆಗೆ ಅರ್ಪಿಸಿಕೊಂಡಿದ್ದರು. ಸಂಯುಕ್ತ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷರಾಗಿ, ತದನಂತರ ಬಂದ ಸಂಸ್ಥಾ ಕಾಂಗ್ರೆಸ್ ಮತ್ತು ಜನತಾ ಘಟಕದ ಅಧ್ಯಕ್ಷರಾಗಿದ್ದ ಸಿಂಗಾರಿಗೌಡರು ತಾನು ಕುಳಿತಿದ್ದ ಪಕ್ಷವನ್ನು ಬಿಟ್ಟು ಬೇರೆ ಪಕ್ಷಕ್ಕೆ ಪಾದಾರ್ಪಣೆ ಮಾಡಿದವರಲ್ಲ. ಶ್ರೀ ನಿಜಲಿಂಗಪ್ಪನವರು ಹೇಳುವಂತೆ 'ಆಯಾರಾಂ ಗಯಾರಾಂ' ಅನುಸರಿಸಿದವರಲ್ಲ. ಯಾರಿಗೂ ಎಂದೂ ಯಾವಾಗಲೂ ಅನಾವಶ್ಯಕ ಭರವಸೆ ನೀಡುವ ಸ್ವಭಾವವಂತೂ ಸಿಂಗಾರಿಗೌಡರಲ್ಲಿ ದೀಪ ಹಚ್ಚಿ ಹುಡುಕಿದರೂ ಉದಾಹರಣೆಗೂ ಸಿಗಲಾರದು.

ನಾನು ಮೇಲೆ ತಿಳಿಸಿರುವಂತಹ ಸೃಜನಾತ್ಮಕ ವ್ಯಕ್ತಿಯೊಬ್ಬರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿ ಬಂದದು ನಮ್ಮ ಜಿಲ್ಲೆಯ ಪುಣ್ಯೋದಯ. ಅಷ್ಟೇ ಅಲ್ಲ ಕಾಸಿಗೆಕಾಸು ದುರುಪಯೋಗವಾಗದಂತೆ ಎಚ್ಚರ ವಹಿಸಿ ನಡೆದುಕೊಳ್ಳುವ ಸಮರ್ಥ ವ್ಯಕ್ತಿಯ ಕೈನಲ್ಲಿ ಜಿಲ್ಲಾಪರಿಷತ್ ಸುರಕ್ಷಿತಾ ಎಂಬುದು ಎಲ್ಲರೂ ಒಪ್ಪುವ ಮಾತುಗಳು.

ಜಿಲ್ಲಾ ಪರಿಷತ್‌ನಲ್ಲಿ ಕೆಲಸ ಮಾಡುವ ಶಿಬ್ಬಂದಿವರ್ಗದವರಿಗೆ ಅದೃಷ್ಟ. ಕಾರಣ ಗೌಡರಂಥ ಆಡಳಿತದಲ್ಲಿ ಪಳಗಿರಬೇಕು. ಹೀಗೆ ನಡೆಯಬೇಕು, ಅವರ ಮಾರ್ಗದರ್ಶನ ಪಡೆದು ಹೋಗುವ ಅಧಿಕಾರಿಗಳು ಎಲ್ಲಿ ಹೋದರೂ ಕೀರ್ತಿವಂತರಾಗುವರು.

ಶ್ರೀಯುತ ಶಿಂಗಾರಿಗೌಡರಿಗೆ ಸನ್ಮಾನ ಸಮಾರಂಭ ಏರ್ಪಡಿಸಿರುವ ನನ್ನ ಮಾನ್ಯ ಸ್ನೇಹಿತರಿಗೆ ತುಂಬಾ ಆಭಾರಿಯಾಗಿದ್ದೇನೆ. ನನ್ನ ಸ್ನೇಹಿತರ ಬಗ್ಗೆ ಒಂದೆರಡು ಮಾತುಗಳನ್ನು ಉಲ್ಲೇಖಿಸಲು ಅವಕಾಶ ಕಲ್ಪಿಸಿಕೊಟ್ಟ ಸಂಭಾವನಾಗ್ರಂಥದ ಸಂಪಾದಕ ಮಂಡಳಿಗೆ ನನ್ನ ಅನಂತ ಧನ್ಯವಾದಗಳು.

ಶ್ರೀ ಶಿಂಗಾರಿಗೌಡರ ಅಧಿಕಾರಾವಧಿಯಲ್ಲಿ ಜಿಲ್ಲಾಪರಿಷತ್ತು ರಾಜ್ಯದ ಇನ್ನಿತರ ಜಿಲ್ಲೆಗಳಿಗೆ ಮಾರ್ಗದರ್ಶಕವಾಗುವಂತೆ ಜನೋಪಕಾರಕ ಸನ್ಮಂಗಳವನ್ನಿತ್ತು. ಶ್ರೀಯುತರಿಗೆ ದೀರ್ಘಾಯುರಾರೋಗ್ಯವನ್ನೀಯಲೆಂದು ನಾವು ನೀವೆಲ್ಲ ಹಾರೈಸೋಣ.

ಎಂ. ವಿ. ವೆಂಕಟಪ್ಪ

ಸರಳ ಸಜ್ಜನಿಕೆಯ ಸಿಂಗಾರಿಗೌಡರು

ನನಗೆ ಶ್ರೀ ಸಿಂಗಾರಿಗೌಡರ ಪರಿಚಯವಾಗಿದ್ದು ತೀರಾ ಇತ್ತೀಚೆಗೆ. ಕರ್ನಾಟಕ ಮಕ್ಕಳ ಸಾಹಿತ್ಯ ಅಕಾಡೆಮಿಯು ಮಂಡ್ಯಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ರಾಜ್ಯಮಟ್ಟದ ಮೂರನೆಯ ಮಕ್ಕಳ ಸಾಹಿತ್ಯ ಸಮ್ಮೇಳನವನ್ನು ಇದೇ ಜನವರಿ ತಿಂಗಳಲ್ಲಿ ಆಚರಿಸಿತು. ಈ ಸಂದರ್ಭದಲ್ಲಿ ಅವರ ಸ್ನೇಹ ಸೌಭಾಗ್ಯ ಲಭಿಸಿತು. ಅದಕ್ಕೆ ಮೊದಲು ನಾನು ಅವರ ಬಗ್ಗೆ ಕೇಳಿದ್ದು, ಪತ್ರಿಕೆಗಳಲ್ಲಿ ಅವರ ವಿಚಾರಗಳನ್ನು ಕುರಿತು ತಿಳಿದದ್ದು ಅಷ್ಟೆ. ನಾನು ಮಕ್ಕಳ ಸಾಹಿತ್ಯ ಸಮ್ಮೇಳನದ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುವವನಿದ್ದೆ. ಆಗಷ್ಟೆ ಅವರನ್ನು ಮಕ್ಕಳ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಶ್ರೀ ಸಿ. ಸು. ಸಂಗಮೇಶ ಅವರೊಡನೆ ಹೋಗಿ ಮಂಡ್ಯದಲ್ಲಿ ಕಂಡುಬಂದೆ. ನಾವು ಹೋದಾಗ ಅವರು ನಮ್ಮನ್ನು ಬಹುದಿನಗಳಿಂದ ಬಲ್ಲವರಂತೆ ವಿಶ್ವಾಸದಿಂದ ಮಾತನಾಡಿಸಿ ನಾವು ಹಮ್ಮಿಕೊಂಡ ಕಾರ್ಯಕ್ರಮದ ಬಗ್ಗೆ ಒಳ್ಳೆಯ ಮಾತುಗಳನ್ನಾಡಿದರು. ಸಮ್ಮೇಳನಕ್ಕೆ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಇರಬೇಕೆಂದು ಕೋರಿದಾಗ "ನಾನೊಬ್ಬ ಶ್ರೀ ಸಾಮಾನ್ಯ. ಇಂತಹ ಕೆಲಸಕ್ಕೆ ನಾನೆಷ್ಟು ಅರ್ಹ" ಎಂದು ತಿಳಿಸಿದರು. ಆದರೆ ಸಮ್ಮೇಳನ ಮುಗಿಯುವವರೆಗೂ ಅವರು ವಹಿಸಿದ ಪಾತ್ರ, ತೋರಿದ ಆಸ್ಥೆ, ಎಲ್ಲ ಸಭೆಗಳಿಗೂ ಮುಂಚಿತವಾಗಿಯೇ ಬಂದು ನಡೆಸಿಕೊಡುತ್ತಿದ್ದ ರೀತಿ. ಕಾಲಕಾಲಕ್ಕೆ ಆಗಬೇಕಾದ ಕೆಲಸಗಳ ಬಗ್ಗೆ ಕೇಳಿ ತಿಳಿಯುತ್ತಿದ್ದ ಪರಿ, ಸಮ್ಮೇಳನದ ಖರ್ಚು ವೆಚ್ಚಗಳಿಗಾಗಿ ಹಣವನ್ನು ಸಂಗ್ರಹಿಸುವುದರಲ್ಲಿ ತಮ್ಮೆಲ್ಲ ಗುರುತರವಾದ ಕಾರ್ಯಗಳ ಮಧ್ಯೆ ಓಡಾಡುತ್ತಿದ್ದ ಬಗೆ ಇವೆಲ್ಲ ನನ್ನನ್ನು ಮೂಕನನ್ನಾಗಿಸುತ್ತಿದ್ದವು. ಅವರಿಂದ ನಾವು ಕಲಿಯಬೇಕಾದದ್ದು ಸಾಕಷ್ಟಿದೆ ಎಂದುಕೊಂಡೆ. ಸಮ್ಮೇಳನದ ದಿನಗಳು ಹತ್ತಿರ ಬಂದಂತೆ ಅವರು ಸಮ್ಮೇಳನದ ಯಶಸ್ಸಿಗಾಗಿ ಶ್ರಮಿಸಿದವರು. ಪೂಜ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥಮಹಾಸ್ವಾಮಿಗಳು ಸಮ್ಮೇಳನದ ಆಶ್ರಯದಾತರಾಗಿದ್ದರು. ಸಮ್ಮೇಳನ ಅದ್ದೂರಿಯಾಗಿ ನಡೆಯಿತು. ರಾಜ್ಯದ ಮುಖ್ಯಮಂತ್ರಿಗಳು ಸಮ್ಮೇಳನವನ್ನು ಉದ್ಘಾಟಿಸಿದರು. ಆದಿನ (ಜನವರಿ ೨೩. ೧೯೮೮) ಸಿಂಗಾರಿಗೌಡರದೇ ಸ್ವಾಗತ ಭಾಷಣ. ಪ್ರತಿ ಹಂತದಲ್ಲಿಯೂ ಅವರು ತೋರಿದ ಆಸ್ಥೆ ಅನುಕರಣೀಯ, ಚಿಕ್ಕವರಲ್ಲಿ ಅವರು ಮಾತನಾಡುವಾಗ ಎಂದೂ ಗದರಿಕೊಂಡದ್ದನ್ನು ಕಾಣೆ. ಸಮಾಧಾನದಿಂದ

ಶಾಂತ ಭಾವದಿಂದ ದಾನಿಗಳಾಗಿ ಕೆಲಸ ಮಾಡುವವರನ್ನು ಪ್ರೋತ್ಸಾಹಿಸುತ್ತಿದ್ದರು. ಇವೆಲ್ಲ ಸಮ್ಮೇಳನದ ಕೆಲಸಗಳ ಬಗ್ಗೆ ಆಯಿತು.

ನಾನು ಅವರನ್ನು ಎರಡು ಬಾರಿ ಕಛೇರಿಯಲ್ಲಿ ಕಂಡು ಬಂದಿದ್ದೆ. ಜಿಲ್ಲಾ ಪಂಚಾಯತ್ ಅಧ್ಯಕ್ಷರೆಂದರೆ ಇಡೀ ಜಿಲ್ಲೆಗೆ ಅವರು ಮುಖ್ಯ ಅಧಿಕಾರಿಗಳಾದರು. ಶಿಂಗಾರಿ ಗೌಡರಲ್ಲಿ ನಾನು ಕಂಡದ್ದು ಒಬ್ಬ ದಕ್ಷ ಆಡಳಿತಗಾರನಿಗೆ ಇರಬೇಕಾದ ಎಲ್ಲ ಗುಣಗಳು. ಯಾರೇ ಬರಲಿ, ಸಮಾಧಾನದಿಂದ ಅವರ ಮಾತನ್ನು ಕೇಳುತ್ತಿದ್ದರು. ಸಮಸ್ಯೆಗಳ ಪರಿಹಾರಕ್ಕೆ ಯುಕ್ತಿಯುಕ್ತ ಭರವಸೆ ನೀಡುವುದಲ್ಲದೆ ಅದನ್ನು ಮಾಡುವತ್ತ ಕ್ರಮ ಕೈಗೊಳ್ಳ ತೊಡಗುವರು. ವಕೀಲರಾದ ಅವರು ನ್ಯಾಯಾನ್ಯಾಯಗಳ ವಿಮರ್ಶೆ ಚೆನ್ನಾಗಿ ಬಲ್ಲವರು.

ವಿನಯ. ಸರಳತೆ. ಸಮಯಪ್ರಜ್ಞೆ. ಮುಗುಳ್ನಗೆಯಿಂದ ಮಾತಾಡುವವರನ್ನು ಅಷ್ಟೇ ಗಮನವಿಟ್ಟು ಆಲಿಸುವ ಜಾಣ್ಮೆ, ಧೀರೋದಾತ್ತ ನಿಲುವು. ಇವು ಶಿಂಗಾರಿಗೌಡರ ಗುಣ ಸೌಂದರ್ಯಗಳು. ಎತ್ತರದ ವ್ಯಕ್ತಿಗಳ ಸಾಲಿನಲ್ಲಿ ಒಬ್ಬರಾದ ಅವರು ಎತ್ತರವೂ ಹೌದು.

ಬಿ. ಗೋ. ರಮೇಶ್

ತತ್ವಬದ್ಧ ರಾಜಕಾರಣಿ

"ಕಾಂಗ್ರೆಸ್ (ಅಮೆರಿಕಾ) ಸದಸ್ಯನೊಬ್ಬ ಎದುರಿಸಬೇಕಾದ. ಲೆಕ್ಕಕ್ಕೆ ಸಿಗದ. ದೌರ್ಭಾಗ್ಯ ಪ್ರಸಂಗಗಳಲ್ಲಿ ಒಂದೆಂದರೆ. ಸಮುದ್ರ ಮಟ್ಟ, ಪರ್ವತಶ್ರೇಣಿಯನ್ನು ಮರು ಅರಣ್ಯವನ್ನಾಗಿಸುವ ಭರವಸೆಯನ್ನಿತ್ತು ಕಾಂಗ್ರೆಸ್ಸಿಗೆ ಆಯ್ಕೆಯಾಗಿ ಎರಡು ತಿಂಗಳು ಕಳೆದಿವೆ. ಇನ್ನೂ ಕೊಟ್ಟ ಭರವಸೆಯನ್ನು ಈಡೇರಿಸಿಲ್ಲ ಎಂದು ನಿನ್ನಂತಹ ಹೆಸರ ಕರ್ತೃಗಳಿಂದ ಬರುವ ಅಸಂಬದ್ಧ ಪತ್ರಗಳನ್ನು ಪಡೆಯುವ ದುರಂತ ನನ್ನದಾಗಿದೆ. ನೀನು ದಯಮಾಡಿ ರಭಸ ಓಟದ ಎರಡು ಕಾರು ಹಾರಿ ನರಕಕ್ಕೆ ಹೋಗು."

ಮೇಲಿನ ಮಾತುಗಳು ಮೂವತ್ತು ವರ್ಷಗಳಷ್ಟು ಹಿಂದೆ ಅಮೆರಿಕೆಯ ಕಾಂಗ್ರೆಸ್ ಸದಸ್ಯನೊಬ್ಬ ಬರೆದವುಗಳಾಗಿವೆ. ಇಂತಹ ಮಾತುಗಳನ್ನು ಎಲ್ಲಾ ಪ್ರಜಾಪ್ರಭುತ್ವ ಇರುವ ದೇಶಗಳಲ್ಲೂ ಶಾಸನಸಭೆ ಅಥವಾ ಇನ್ನಾವುದೇ ಪ್ರಾತಿನಿಧಿಕ ಸಭೆಗಳಿಗೆ ಆಯ್ಕೆಯಾದವರು ಒಂದಿಲ್ಲೊಂದು ಸಂದರ್ಭದಲ್ಲಿ ಹೇಳಲೇಬೇಕಾದೀತು. ನಮ್ಮಲ್ಲಿಯಂತೂ ಓಟುಗಳಿಸುವಲ್ಲಿ ಅಭ್ಯರ್ಥಿ ಕೊಡುವ ಉದಾರ ಭರವಸೆಗಳು ಮತದಾರರ ನಿರೀಕ್ಷೆಯು ಪ್ರಾಮಾಣಿಕ ಪ್ರತಿನಿಧಿಯಾದವನನ್ನು ಇಂತಹ ಉದ್ಗಾರ ತೆಗೆಯಲೇಬೇಕಾದ ಸಂದರ್ಭಕ್ಕೆ ಖಂಡಿತ ನೂಕುತ್ತವೆ.

ಶ್ರೀ ಸಿಂಗಾರಿಗೌಡರು ಈಗ ಮಂಡ್ಯಾಜಿಲ್ಲಾಪರಿಷತ್ತಿನ ಅಧ್ಯಕ್ಷರಾಗಿದ್ದಾರಷ್ಟೆ. ಅಧ್ಯಕ್ಷರಾದ ನಂತರ ಅವರ ಕಛೇರಿಗೆ ನಾನು ಮೊದಲ ಬಾರಿಗೆ ಹೋಗಿದ್ದೆ. ಅವರ ಎದುರಿನಲ್ಲಿ ನಾಲ್ಕೈದು ಜನ ಕುಳಿತಿದ್ದರು. ಅವರ ಪೈಕಿ ಒಬ್ಬಿಬ್ಬರು ಪರಿಷತ್ತಿನ ಸದಸ್ಯರೂ ಇದ್ದರು. ನಾನು ಬಂದ ಉದ್ದೇಶ ಹೇಳುತ್ತಿದ್ದ ಅವರು ಕುಳಿತುಕೊಳ್ಳಲು ಹೇಳಿದರು. ಅಲ್ಲಿ ಮೊದಲಿಗೆ ಬಂದಿದ್ದವರನ್ನು ಒಬ್ಬೊಬ್ಬರಾಗಿ ಅವರ ಅಹವಾಲು ಕೇಳಿ ಉತ್ತರಿಸುತ್ತಿದ್ದರು. ಒಬ್ಬ ಯುವಕ ಬಿ.ಎ. ಪದವೀಧರ ಅವರ ಕ್ಷೇತ್ರಕ್ಕೆ ಸೇರಿದವ. ಆತನ ಸರದಿ ಬಂದಾಗ ಬಂದು ಅರ್ಜಿ ಸಲ್ಲಿಸಿ ತನ್ನ ಕೋರಿಕೆ ಮುಂದಿಟ್ಟ. ಊರಿನ ಶಾಲೆಗೆ ಎರಡು ಹೊಸ ಕೊಠಡಿ ನಿರ್ಮಾಣಕ್ಕಾಗಿ ಕೇಳಿಕೆ. ಸಂಭಾಷಣೆಯ ಧಾಟಿ ಕೇಳಿ ..

ಶ್ರೀ ಗೌಡರು— ಕಳೆದ ವರ್ಷ ಎರಡು ಕೊಠಡಿ ಕಟ್ಟಲಾಗಿದೆಯಲ್ಲವೆ ?

ಅರ್ಜಿದಾರ — ಹೌದು

ಶ್ರೀ ಗೌಡರು— ಈ ವರ್ಷ ಮತ್ತೆರಡರ ನಿರ್ಮಾಣ ಸಾಧ್ಯವಿಲ್ಲ.

ಅರ್ಜಿದಾರ — ಈಗಿರುವ ವ್ಯವಸ್ಥೆ ಸಾಲದು. ಇರುವ ತರಗತಿಗಳ್ಲಿ ಕೊಠಡಿಗಳಿಲ್ಲ.

ಶ್ರೀ ಗೌಡರು — ಹೌದು. ಆದರೆ ನಾವು ಒಂದು ತತ್ವಪಾಲನೆ ಮಾಡಬೇಕಾಗಿದೆ. ಈ ದರ್ಜೆ ಬರುವ ಊರುಗಳಲ್ಲಿ ಕೊಠಡಿಗಳೇ ಇಲ್ಲದಿದ್ದರೆ ಅಲ್ಲಿ ಮೊದಲು ನಿರ್ಮಾಣ.

ಅರ್ಜಿದಾರ — ನೀವು (ಸ್ವಲ್ಪ ಮುನಿಸಿನಿಂದ) ಈ ರೀತಿ ಮಾತನಾಡಿದರೆ ನಾನೇನು ಹೇಳಲಿ. ನಿಮ್ಮ ಕ್ಷೇತ್ರಕ್ಕೆ ಸಂಬಂಧಿಸಿದುದು ಪಕ್ಕದ ಊರು. ಮತ್ತೊಮ್ಮೆ ಓಟು ಕೇಳಲು ಹೋದಾಗ ಛೀಮಾರಿ ಹಾಕುತ್ತಾರೆ.

ಶ್ರೀ ಗೌಡರು — ಅದಕ್ಕೆ ಸೊಪ್ಪು ಹಾಕಲಾರೆ. ತತ್ವಬದ್ಧನಾಗಿ ಕೆಲಸ ಮಾಡುತ್ತೇನೆ. ವಾರ್ಷಿಕ ಯೋಜನೆಗೆ ಒಂದು ಚೌಕಟ್ಟು ಹಾಕಿಕೊಂಡಿದ್ದೇವೆ. ಕೊಠಡಿಗಳೇ ಇಲ್ಲದ ಕಡೆ ಮೊದಲ ಆದ್ಯತೆ. ಅದು ಬಿಟ್ಟು ಬೇರೆ ಇಲ್ಲ.

ಅರ್ಜಿದಾರ — (ಕೋಪದಿಂದ) ಸರಿ ಬಿಡಿ ನಾವಂತೂ ಮತದಾರರಿಗೆ ಮುಖ ತೋರುವ ಹಾಗಿಲ್ಲ. ನೀವೇ ಉತ್ತರ ಕೊಡಬೇಕಾಗುತ್ತದೆ. ಎಂದು ಹೇಳುತ್ತಾ ಆತ ಹೊರಹೋದರು.

ಬಂದವರಿಗೆಲ್ಲ ಇದೇ ಧಾಟಿಯಲ್ಲಿ ಅವರ ಉತ್ತರ ಸಾಗಿತ್ತು. ಇದನ್ನು ಕೇಳುತ್ತಾ ಕುಳಿತ ನನಗೆ ಮೊದಲೇ ಹೇಳಿದ ಅಮೇರಿಕ ಕಾಂಗ್ರೆಸ್ ಸದಸ್ಯನ ಮಾತುಗಳು ನೆನಪಿಗೆ ಬಂದವು. ಶ್ರೀ ಗೌಡರ ನೇರ ಚುಟುಕು ಉತ್ತರ ಬೆರಗುಗೊಳಿಸುವಂಥದು. ಅದರ ಹಿಂದಿನ ಪ್ರಾಮಾಣಿಕತೆ ಸ್ಪಷ್ಟ.

ಈಗಿನ ಅವರ ಸ್ಥಾನದಲ್ಲಿ ಕುಳಿತು ದಿನನಿತ್ಯದ ವ್ಯವಹಾರ ಸಾಗಿಸುವಾಗ ನೋಡುವವರಿಗೆ ಮನೋರಂಜನೆಯೂ ಸಿಕ್ಕುತ್ತದೆ. ಒಬ್ಬ ಹಳ್ಳಿಯವ ಮುಗ್ಧ ತಲೆ ತಗ್ಗಿಸಿ ನಾಚಿದಂತೆ ನಟಿಸುತ್ತಾ, "ಸ್ವಾಮಿ. ನನ್ನ ಹೆಂಡತಿಗೆ ಆಪರೇಶನ್ ಆಗಿ ಮೂರು ದಿನ ಆಯಿತು" ಎಂದು ಹೇಳುತ್ತಾನೆ. "ಅದಕ್ಕೆ ನಾನೇನು ಮಾಡಲಪ್ಪ" ಎಂದು ಶ್ರೀ ಗೌಡರು ಅತಿ ಮುಗ್ಧತೆಯಿಂದಲೇ ಕೇಳುತ್ತಾರೆ. ಮತ್ತೊಂದು ಹಳ್ಳಿಗರ ಗುಂಪು ಹೆಣ್ಣು ಗಂಡುಗಳು ಸೇರಿದಂತೆ ಒಟ್ಟಾಗಿ ನುಗ್ಗಿಬರುತ್ತಾರೆ. ಯಾವ ವಿಧದ ಅಂಜಿಕೆಯೂ ಇಲ್ಲ. "ಸ್ವಾಮಿ ಹಾಲು ಸಪ್ಲೈ ಮಾಡಿ ಮೂರು ತಿಂಗಳಾಯ್ತು, ದುಡ್ಡು ಪಾವತಿ ಮಾಡಿಲ್ಲ" ಎನ್ನುತ್ತಾರೆ. ನೋಡುವವರಿಗೆ ತಲೆಬುಡ ಅರ್ಥವಾಗದೆ ಮೋಜೆನಿಸುತ್ತದೆ. ಗೌಡರ ವಿಚಾರಣಾ ಧಾಟಿಯಿಂದ ಬಂದಿದ್ದವರು. ಜೀತ ವಿಮುಕ್ತರಿಗೆ ಕುರಿ, ಹಸು ಇತ್ಯಾದಿ ಪ್ರಾಣಿಗಳನ್ನು ಒದಗಿಸಿ ಸರ್ಕಾರದ ನೀತಿಗನುಗುಣವಾಗಿ ಹಣ ಪಡೆಯಬೇಕಿದ್ದವರೆಂದು. ಈ ಬಗ್ಗೆ ಪರಿಷತ್ತಿನ ಹಾಲಿನ ಕಾರ್ಯ ಸಾಗಿದ್ದು ಸರ್ಕಾರದ ಕಡೆಯಿಂದ ಹಣ

ಪಾವತಿ ನಿಧಾನವಾಗಿದೆ ಎಂದು ಸ್ಪಷ್ಟವಾಗುತ್ತದೆ. ಮೃದು ಮಾತಿನಲ್ಲಿ ಕೊಡುವ ಉತ್ತರದಿಂದ ಬಂದಿದ್ದವರು ತೃಪ್ತರಾಗಿ ಹಿಂದಿರುಗುತ್ತಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದು ರಂಜಿಸುವ ಮಾತನಾಡುವುದಕ್ಕಿಂತ ಕಟು ಸತ್ಯವನ್ನೇ ಹೇಳಿ ಮನಗಾಣಿಸುವುದು.

ನಾವು ಈಗ ಇಪ್ಪತ್ತೊಂದನೆಯ ಶತಮಾನದ ಹೊಸ್ತಿಲಿಗೆ ಧಾವಿಸುತ್ತಿದ್ದೇವೆ ಅಲ್ಲವೆ ? ಪ್ರಚಾರ ಯುಗ. ಪ್ರತಿಯೊಬ್ಬನೂ ಪ್ರತಿಷ್ಠಿತನೆ. ವಿಮಾನ ಇಳಿದು ಬರುವಾಗ ಬೀಗಬೇಕು. ಸಭೆ ಸಮಾರಂಭಗಳ ವೇದಿಕೆಯಲ್ಲಿ ಸ್ಥಾನ ಮೀಸಲಿರಬೇಕು. ರೇಡಿಯೋ ಟಿ. ವಿ. ಗಳಲ್ಲಿ ತನ್ನ ಧ್ವನಿ. ಮುಖ ಮೂಡಿರಬೇಕು. ಕನಿಷ್ಟ ಫೋಟೋದಲ್ಲಾದರೂ ಧುರೀಣರ ಮಧ್ಯ ಎದ್ದು ಕಾಣುವವನಾಗಿರಬೇಕು. ಹೀಗೆ ಆಸೆ.

ಶ್ರೀ ಗೌಡರು ಇದಕ್ಕೆಲ್ಲಾ ಹೊರತು. ಮೊನ್ನೆ ಮೊನ್ನೆ ನಡೆದ ಮಕ್ಕಳ ಸಮ್ಮೇಳನ ಒಂದರಲ್ಲಿ ಅವರ ಜೊತೆ ಇರುವ ಸಂದರ್ಭ ಒದಗಿ ಬಂದಿತ್ತು. ಅವರೆ ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷರು. ಮೊದಲ ದಿನ ಬೆಳಗ್ಗೆ ಉದ್ಘಾಟನಾ ಸಮಾರಂಭ ಸ್ವಾಗತ ಭಾಷಣ ಮುಗಿದು ನಂತರ ಸಮಾರಂಭ ಮುಗಿಯುತ್ತಿದ್ದಂತೆ ಶ್ರೀ ಗೌಡರು ವೇದಿಕೆಯಿಂದ ನಿರ್ಗಮಿಸಿದವರು ಕೊನೆದಿನ ಸಮಾರೋಪ ಸಮಾರಂಭದ ಕೊನೆಯ ಕ್ಷಣಗಳಲ್ಲಿ ಬಿಡದ ಒತ್ತಾಯಕ್ಕೆ ಮಣಿದು ಕೆಲಕಾಲ ವೇದಿಕೆಮತ್ತೆ ಕುಳಿತರು. ಮಿಕ್ಕೆಲ್ಲಾ ಕಾಲ ಸಮಾರಂಭದ ಹಿಂದಿನ ಸಾಲಿನ ಪ್ರೇಕ್ಷಕರಾಗಿ ಈಶಾನ್ಯ ಮೂಲೆಯ ಕುರ್ಚಿಯಲ್ಲೇ ಉಪಸ್ಥಿತರು.

ಒಪ್ಪಿದ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸುವಲ್ಲಿ ಕೆಲಸ ಕಾರ್ಯಗಳನ್ನು ಇತರರಿಂದ ತೆಗೆಯುವಲ್ಲಿ. ಸೂಕ್ತ ವ್ಯಕ್ತಿಗಳಿಗೆ ಕೆಲಸ ಹಂಚುವಲ್ಲಿ. ಹಣಕಾಸಿನ ವ್ಯವಹಾರದಲ್ಲಿ ಈ ವಿಷಯದಲ್ಲೂ ಇಂದಿನ ಯಾವ ರಾಜಕಾರಣಿಗೂ ಇವರನ್ನು ಸುಲಭದಲ್ಲಿ ಹೋಲಿಸಲಾಗದು. ಅವರಿಗೆ ಅವರೆ ಹೋಲಿಕೆ.

ಇವನ್ನೆಲ್ಲ ಇಂದು ಶ್ರೀ ಗೌಡರಲ್ಲಿ ಕಾಣುವಾಗ ನೆನಪು ನಲವತ್ತು ವರ್ಷಗಳಷ್ಟು ಹಿಂದಕ್ಕೆ ತಾನೆ ತಾನಾಗಿ ಸರಿಯುತ್ತದೆ. 1947ರ ಮೈಸೂರು ಚಲೇಜಾವ್ ಚಳುವಳಿ ಮಂಡ್ಯದ ಜೈಲಿನಲ್ಲಿ ನಾವು ಒಟ್ಟು ಹತ್ತರಲ್ಲಿ ಹನ್ನೊಂದು. ಗೌಡರ ತಂದೆ ಕರಡಹಳ್ಳಿ ಶ್ರೀ ಕೃಷ್ಣಪ್ಪಗೌಡರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು. ಹೋರಾಟದ ಅಂತಿಮ ದಿನಗಳ ಕೊನೆಯ ಜೈಲುವಾಸ. ಹಿರಿಯರಲ್ಲೂ ಎದ್ದು ಕಾಣುವ ವ್ಯಕ್ತಿತ್ವವನ್ನು ಪಡೆದಿದ್ದ ಶ್ರೀಕೃಷ್ಣಪ್ಪಗೌಡರು ಒಂದು ಬ್ಯಾರಕ್‌ನಲ್ಲಿ ಕೆಲವರೊಡನೆ ಇದ್ದರು. ಅವರೊಡನೆ ಡಾ. ಸಿ. ಬೈರೇಗೌಡ, ಶ್ರೀ ಮರಿಸೇಗೌಡ ಇತ್ಯಾದಿ. ತಂದೆಯವರನ್ನು ನೋಡಲು ಬರುತ್ತಿದ್ದ ಶ್ರೀ ಸಿಂಗಾರಿ ಗೌಡರನ್ನು ನೆನಪಿಗೆ ತಂದುಕೊಂಡಾಗ ಮನ ಪಟಲದ ಮೇಲೆ ಮೂಡಿಬರುವ ಚಿತ್ರವೆಂದರೆ ಬಿಳಿಜುಬ್ಬ, ಬಿಳಿಪಂಚೆ ಉಟ್ಟ ಬಿಳಿಯ ಯುವಕ. ನಿಶ್ಚಿತ ನೋಟದ ಹೊಳೆಯುವ ಕಣ್ಣುಗಳ ಸ್ಫುರದ್ರೂಪಿ. ಇಂದಿಗೂ

ಅದೇ ಉಡುಪು. ವಕೀಲಿ ವೃತ್ತಿ ನಿರತರಾಗಿದ್ದ ದಿನಗಳಲ್ಲಿ ಅಗತ್ಯವಿದ್ದಷ್ಟು ಕಾಲ ಮಾತ್ರ ಕರಿ ಕೋಟು ಬಿಳಿ ಪ್ಯಾಂಟು. ಮಾತುಗಳಂತೂ ಎರಡು ಮೂರು ಪದಗಳನ್ನು ಹೊಂದಿದ ಚಿಕ್ಕ ಚಿಕ್ಕ ವಾಕ್ಯಗಳು. ಇತ್ತೀಚೆಗೆ ಇವರು ಬಳಸುವ ಮಾತುಗಳನ್ನು ಕುರಿತು ಪ್ರಸ್ತಾಪಿಸಿದಾಗ ತಾವು ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರಂತೆ ಪುಟ್ಟ ಪುಟ್ಟ ವಾಕ್ಯಗಳನ್ನು ಬಳಸುವುದರಲ್ಲಿ ಪ್ರಯತ್ನಿಸುತ್ತೇನೆ ಎಂದರು. ಹೌದು ವಾಕ್ಯ ಚಿಕ್ಕದು ಆದರೆ ನೇರ ನಾಟುವಂತಹದು. ಚುರುಕಾದುದು ಆದರೆ ಸೊಗಸು ತುಂಬಿದುದು. ಶ್ರೀ ಶರ್ಮರು ಅಂತಹ ಮಾತು ಬಳಕೆಯಲ್ಲಿ ನಿಷ್ಣಾತರು. ಶ್ರೀ ಗೌಡರೂ ಹಾಗೆಯೇ.

ಮುಂದಿನ ದಿನಗಳಲ್ಲಿ ಶಾಸನ ಸಭೆಗೆ ಆಯ್ಕೆಯಾದರು. ಆ ದಿನಗಳಲ್ಲಿನ ಮಂಡ್ಯ ಜಿಲ್ಲೆಯ ಶಾಸಕ ಸಭೆ ಸದಸ್ಯಕೂಟ ನೆನೆದಾಗ ಹರ್ಷತರುತ್ತದೆ. ಆ ಕೂಟದ ಘನತೆ ಗಾಂಭೀರ್ಯ ಕಾರ್ಯಶ್ರದ್ಧೆ ಇಡೀ ರಾಜ್ಯದ ರಾಜಕಾರಣವನ್ನೇ ನಿಯಂತ್ರಿಸುವ ಪ್ರಭಾವ. ಪೂರ್ಣ ಶಕ್ತಿಯ ಮೂಲವಾಗಿತ್ತು. ಇಂದು ಅದನ್ನು ನೆನೆದಾಗ ಮತ್ತೊಮ್ಮೆ ಅಂತಹ ದಿನಗಳು ಬಂದಾವೆ, ಅಂತಹ ವ್ಯಕ್ತಿಗಳ ಕೂಟ ಸಿಕ್ಕೀತೆ ಎನಿಸುತ್ತದೆ. ಶ್ರೀ ಎಚ್. ಕೆ. ವೀರಣ್ಣಗೌಡ, ಶ್ರೀ ಕೆ. ವಿ. ಶಂಕರಗೌಡರಂತಹ ನಾಯಕರ ಗುಂಪಿನಲ್ಲಿ ಶ್ರೀ ಸಿಂಗಾರಿಗೌಡರದು ವೈಶಿಷ್ಟ್ಯಪೂರ್ಣ ತತ್ವಬದ್ಧ ರಾಜಕಾರಣ. ಇವರು ಪಾಂಡವರಲ್ಲಿ ತಮ್ಮ ತಮ್ಮದೇ ಪ್ರತ್ಯೇಕ ರೀತಿಯ ಶೌರ್ಯ ಪ್ರತಾಪಗಳ ಹೆಗ್ಗಳಿಕೆಯಿದ್ದಂತೆ. ಸೌಮ್ಯ ನಡೆಗೆ, ಪ್ರಾಮಾಣಿಕತೆಗೆ, ತಾತ್ವಿಕ ಚಿಂತನೆಗೆ, ಶ್ರದ್ಧಾಪೂರ್ವಕ ನಿರ್ವಹಣೆಗೆ ಶ್ರೀ ಗೌಡರದು ಹೆಗ್ಗಳಿಕೆ.

ರಾಜಕೀಯ ಏಳು ಬೀಳುಗಳಲ್ಲಿ ಸ್ಥಿತಪ್ರಜ್ಞತೆ. ಬಹುತೇಕ ರಾಜಕಾರಣಿಗಳು ರಾಜಧಾನಿಯನ್ನು ಅಥವಾ ಜಿಲ್ಲಾ ಕೇಂದ್ರವನ್ನು ಸೇರಿದರೆಂದರೆ ಮುಗಿಯಿತು. ಹಳ್ಳಿಯ ವಾಸಕ್ಕೆ ವಿಧಾಯ ಹೇಳುತ್ತಾರೆ. ಅಷ್ಟೇ ಅಲ್ಲ ಹಿಂದಿನ ವೃತ್ತಿಗೂ ಕೊನೇ ನಮಸ್ಕಾರ. ಶ್ರೀ ಗೌಡರದು ಹಾಗಲ್ಲ ಪ್ರತಿನಿಧಿಸ್ಥಾನದ ನಿಗದಿತ ಕಾಲ ಮುಗಿದನಂತರ ಹಿಂದಿನ ಕೃಷಿಕ ವೃತ್ತಿಗೆ ಹಿಡಿದಿದ್ದ ಮೀನನ್ನು ಮತ್ತೆ ನೀರಿಗೆ ಬಿಟ್ಟಂತೆ. ಕೃಷಿಕರಾಗಿಯೂ ಸೈ ಎನಿಸಿಕೊಂಡರು. ಕಲ್ಪವೃಕ್ಷ ವೃದ್ಧಿ ಸಿದ್ಧಿ. ರಾಜಕಾರಣಿಗಳಲ್ಲಿ ಶೀಘ್ರ ಮನೆಮಾಡುವ ಯಾವ ಕೆಟ್ಟಚಟವೂ ಇವರ ಬೆನ್ನು ಹತ್ತಲಿಲ್ಲ. ಸಂಸಾರಿಕ ಜೀವನವೂ ಅಂತಹದೆ. ಕೈ ಹಿಡಿದು ಬಂದು ಇದ್ದಷ್ಟುಕಾಲ ಬಾಳು ಬೆಳಗಿದವರೂ ಅಂತಹವರೆ, ವಿಧಿ ಅವರನ್ನು ಸೆಳೆದುಕೊಂಡಾಗ ಶ್ರೀ ಗೌಡರು ನೋವನ್ನು ಹೃದಯದಲ್ಲೇ ಅಡಗಿಸಿಕೊಂಡು ಮೌನವಾಗಿಯೇ ಶ್ರದ್ಧಾಂಜಲಿ ಅರ್ಪಿಸಿದರು. ಹಿರಿಯರಿಂದ ಗಳಿಸಿದ ವೃತ್ತಿಗೆ ವಿದಾಯ ಹೇಳಿ ಕುಲ ಕಸುಬಿಗೆ ಮರಳಿ ತಾಯಿಗೆ ತಕ್ಕ ಮಕ್ಕಳನ್ನಾಗಿ ಬೆಳೆಸಿದರು ತಮ್ಮ ಕುಡಿಗಳನ್ನು. ಇಂದು ಅವರೆಲ್ಲ ತಮ್ಮ ತಮ್ಮ ಕಾಲಮೇಲೆ ನಿಂತು ಯೋಗ್ಯರೆನಿಸಿ ಬಾಳುತ್ತಿದ್ದಾರೆ. ಅದೇ ತೃಪ್ತಿ ಅದಕ್ಕಿನ್ನ ಮಿಗಿಲೇನು ?

ಕೇಂದ್ರೀಕೃತ ಅಧಿಕಾರವನ್ನು ಪ್ರಜಾಪ್ರಭುತ್ವ ವಿಧಿಗನುಗುಣವಾಗಿ ವಿಕೇಂದ್ರಗೊಳಿಸುವಲ್ಲಿ ಜಿಲ್ಲಾ ಪರಿಷತ್ತುಗಳ ಉದಯ. ನಮ್ಮ ಜಿಲ್ಲೆಯಲ್ಲಿ ಇದನ್ನು ಸ್ಥಾಪಿಸುವಲ್ಲಿ ಮಂತ್ರಿಮಟ್ಟ ಸ್ಥಾನಪಡೆದ ಅಧ್ಯಕ್ಷ ಸ್ಥಾನಕ್ಕೆ ಸೂಕ್ತ ವ್ಯಕ್ತಿಗಾಗಿ ಹೋಲಿಕೆಯಲ್ಲೇ ಸನ್ನಾಹ. ಕೃಷಿಕರಾದ ನಾವು ಹೇಳುವ ಮಾತು, ಒಳ್ಳೆಯ ಬೀಜ ಸಮೃದ್ಧ ಫಸಲು ತರುತ್ತದೆ ಎನ್ನುವುದು. ಶ್ರೀ ಕೆ. ವಿ. ಶಂಕರಗೌಡರು ಬೀಜ ಬಿತ್ತುವಲ್ಲೇ ಮುಂಜಾಗ್ರತೆ ವಹಿಸಿದರು, ಸದಸ್ಯ ಸ್ಥಾನಕ್ಕೆ ಅಭ್ಯರ್ಥಿಗಳನ್ನು ಆರಿಸುವಲ್ಲೇ ರಾಜ್ಯ ರಾಜಕೀಯದಿಂದ ಬಿಮ್ಮಟ್ಟಿ ಗ್ರಾಮವಾಸಿಗರಾಗಿ ನಿಜ ಕೃಷಿಕನಾಗಿದ್ದ ಶ್ರೀ ಗೌಡರನ್ನು ಮತ್ತೊಮ್ಮೆ ರಾಜಕೀಯ ಕಣಕ್ಕೆ ತಂದಿದ್ದಾರೆ. ಅದೇ ಪ್ರಾಮಾಣಿಕತೆ ಇಂದಿಗೂ ಮಾಸದಿದೆ. ಪ್ರಸ್ಥ್ಯ ಮೈಗೂಡಿ ಬಂದಿದೆ. ಗ್ರಾಮೀಣ ಬದುಕನ್ನು ಹಸನುಗೊಳಿಸುವಲ್ಲಿನ ಕಳಕಳಿಗೆ ಕೊರತೆಕಾಣದು. ಇದಕ್ಕೆ ಪೂರಕವಾಗಿ ವಾಸ್ತವ ಪ್ರಜ್ಞೆಯುಳ್ಳವರು, ಯಾವ ಭ್ರಮೆಗೂ ಒಳಗಾದವರಲ್ಲ. ಗಾಂಧೀಜಿಯ ಅನುಯಾಯಿಗಳನ್ನು ಹುಡುಕುವಲ್ಲಿ ಇವರು ಬೇಗ ಕಣ್ಣಿಗೆ ಕಾಣುತ್ತಾರೆ. ಇದೇ ನನ್ನಂತಹವನಿಗೆ ಸಮಾಧಾನ ಹೆಮ್ಮೆ.

ಕೆ. ಟಿ. ಚಂದು

ಸೌಜನ್ಯಶೀಲರು

ಪ್ರಜಾಪ್ರಭುತ್ವ ಯಶಸ್ವಿಯಾಗಲು ಪ್ರಜೆಗಳು ಎಲ್ಲಾ ಕಾರ್ಯಕ್ರಮಗಳಲ್ಲೂ ತಮ್ಮ ಜವಾಬ್ದಾರಿಯನ್ನು ಅರಿತು ಪಾಲ್ಗೊಳ್ಳಬೇಕು, ಪ್ರಜಾಪ್ರಭುತ್ವ ಅರ್ಥಪೂರ್ಣವಾಗಲೋಸುಗ ಪ್ರಥಮ ಬಾರಿಗೆ ಕರ್ನಾಟಕದಲ್ಲಿ ಅಧಿಕಾರ ವಿಕೇಂದ್ರೀಕರಣವಾಗಿದೆ. ಅಂತೆಯೇ ಮಂಡ್ಯ ಜಿಲ್ಲೆಯ ಜಿಲ್ಲಾಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವ ಅವಕಾಶ ಹಿರಿಯರಾದ ಶ್ರೀ ಕೆ. ಸಿಂಗಾರಿಗೌಡರಿಗೆ ಲಭ್ಯವಾಗಿದೆ. ಅಧಿಕಾರದ ವಿಕೇಂದ್ರೀಕರಣದ ವ್ಯವಸ್ಥೆ ಜಾರಿಗೆ ಬಂದ ಪ್ರಥಮದಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಿ ಅವುಗಳಿಗೆ ತಕ್ಕ ಪರಿಹಾರ ಕಂಡುಹಿಡಿದು ಮುನ್ನಡೆಯಬೇಕಾಗುತ್ತದೆ. ಇಂತಹ ಪರಿಸ್ಥಿತಿಯನ್ನು ಎದುರಿಸಲು ಮತ್ತು ಯಶಸ್ವಿಯಾಗಲು ಕೆಲವು ಗುಣಗಳನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ.

ಪ್ರಥಮ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿರುವ ಶ್ರೀ ಕೆ. ಸಿಂಗಾರಿಗೌಡರವರು ಸೌಜನ್ಯಶೀಲರು, ಸುಸಂಸ್ಕೃತರು ಹಸನ್ಮುಖಿಗಳು ಹಾಗೂ ಅನುಭವಶೀಲರು ಆಗಿದ್ದಾರೆ. ಜಿಲ್ಲಾ ಪರಿಷತ್ತಿನ ಅನುಷ್ಠಾನ ಮತ್ತು ಪ್ರಯೋಗ ಇವರ ಮುಂದಾಳತ್ವದಲ್ಲಿ ಯಶಸ್ವಿಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಅತ್ಯಂತ ಹಿರಿಯರಾದ ಇವರು ರಾಜಕೀಯ ಮತ್ತು ಆಡಳಿತ ರಂಗಗಳಲ್ಲಿ ಸಾಕಷ್ಟು ಅನುಭವವುಳ್ಳವರಾಗಿದ್ದು ಸಹನೆ ಸಹಕಾರಗಳೊಂದಿಗೆ ಕಾರ್ಯ ನಿರ್ವಹಿಸುತ್ತಿರುವುದು ಎಲ್ಲರೂ ಅರಿತ ವಿಷಯ. ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ಇನ್ನೂ ಹೆಚ್ಚಿನ ಸಹಾಯವಾಗಲೆಂದು ಮತ್ತು ಜನಸೇವೆ ಮಾಡುವ ಭಾಗ್ಯ ಮುಂದುವರಿಯಲೆಂದು ನಾನು ಈ ಸಂದರ್ಭದಲ್ಲಿ ಹಾರೈಸುತ್ತೇನೆ.

ಬಿ, ಸೋಮಶೇಖರ್

ನನ್ನ ಮಾವ

ಹೆಣ್ಣು ಕೊಟ್ಟ ಮಾವಂದಿರಲ್ಲಿ ಎರಡು ಬಗೆ. ಒಂದು–ಅಳಿಯ ಶ್ರೀಮಂತನಾಗಿರಬೇಕು. ಒಳ್ಳೆಯ ಹುದ್ದೆಯಲ್ಲಿರಬೇಕು. ಸಾಧ್ಯವಾದರೆ ಡಾಕ್ಟರೋ. ಎಂಜಿನೀಯರೋ ಆಗಿರಬೇಕು. ವಿಭಕ್ತ ಕುಟುಂಬಕ್ಕೆ ಸೇರಿದ್ದರೆ ತುಂಬಾ ಒಳ್ಳೆಯದು. ಅದಿಲ್ಲದಿದ್ದರೆ ವಿಭಕ್ತ ಕುಟುಂಬಕ್ಕೆ ಬೇಗ ಗಮನ ಹರಿಸುವಂಥವನಾಗಿರಬೇಕು. ಇತ್ಯಾದಿ, ಇತ್ಯಾದಿ. ಎರಡು-ಅಳಿಯ ವಿದ್ಯಾವಂತನಾಗಿದ್ದು ಯೋಗ್ಯನಾಗಿದ್ದು. ತನ್ನ ಹೆಂಡತಿಯನ್ನು ಮರ್ಯಾದೆಯಿಂದ ಸಾಕುವ. ಗೌರವದಿಂದ ನಡೆಸಿಕೊಳ್ಳುವ ಆತ್ಮಸ್ಥೈರ್ಯವುಳ್ಳ ವ್ಯಕ್ತಿಯಾಗಿದ್ದರೆ ಸಾಕು. ಈ ಎರಡನೆಯ ವರ್ಗಕ್ಕೆ ಸೇರಿದ ವ್ಯಕ್ತಿ ನನ್ನ ಮಾವ. ಇದಕ್ಕಾಗಿ ನನಗೆ ಹೆಮ್ಮೆ ಎನಿಸುತ್ತದೆ.

ಮಂಡ್ಯ ಜಿಲ್ಲೆಯ ರಾಜಕಾರಣಿಗಳ ಬಗೆಗೆ ಚಿಕ್ಕವನಿದ್ದಾಗಿನಿಂದಲೂ ಬಹಳ ಆಸಕ್ತಿಯನ್ನು ವಹಿಸುತ್ತಿದ್ದೆ. ಹೀಗಾಗಿ ತುಂಬಾ ಚಿಕ್ಕವನಿದ್ದಾಗಲೇ ನನ್ನ ಮಾವ ಶ್ರೀ ಸಿಂಗಾರಿಗೌಡರ ಹೆಸರನ್ನು ಕೇಳಿ ಬಲ್ಲವನಾಗಿದ್ದೆ. ಆದರೆ ನೋಡಿರಲಿಲ್ಲ. ಅವರ ಬಗ್ಗೆ ಎಲ್ಲರಲ್ಲಿಯೂ ಸದಭಿಪ್ರಾಯ ಇದ್ದುದನ್ನು ಗಮನಿಸಿದ್ದೆ. ಜೊತೆಗೆ ತುಂಬಾ ಮಿತ ಭಾಷಿ ಎಂಬುದರ ಬಗ್ಗೆಯೂ ತಿಳಿದಿತ್ತು.

ನನ್ನ ವಿದ್ಯಾಭ್ಯಾಸ ಮುಗಿದ ಮೇಲೆ ಮದುವೆ ಮಾಡಿಕೊಳ್ಳಬೇಕು ಎಂಬ ವಿಚಾರದಲ್ಲಿ ತೊಡಗಿದ್ದಾಗಲೇ ನನ್ನ ನೆಂಟರೊಬ್ಬರಿಂದ "ಸಿಂಗಾರಿಗೌಡರ ಮಗಳನ್ನು ಏಕೆ ಮದುವೆ ಮಾಡಿಕೊಳ್ಳಬಾರದು" ಎಂಬ ಮಾತು ಬಂತು. ಇದನ್ನು ಕೇಳಿದ ಕೂಡಲೇ ಏಕಾಗಬಾರದೆಂಬ ಯೋಚನೆಯೂ ಬಂದು ಈ ದಿಸೆಯಲ್ಲಿ ಪ್ರಯತ್ನ ಪಡುವಂತೆ ನನ್ನ ತಂದೆಯವರನ್ನು ಕೇಳಿಕೊಂಡೆ. ಅಂತೂ ಅವರ ಮಗಳನ್ನು ಮದುವೆಯಾಗುವ ಅವಕಾಶ ಒದಗಿ ಬಂದುದು ನನ್ನ ಅದೃಷ್ಟವೆಂದು ಭಾವಿಸುತ್ತೇನೆ.

ಮದುವೆಯಾದ ಹೊಸತು. ಮಾವನ ಮನೆಗೆ ಹೋದಾಗ ಒಂದು ವಿಚಿತ್ರ ವಾತಾವರಣಕ್ಕೆ ನಾನು ಹೋದಂತೆನಿಸಿತು. ನಾನು ತುಂಬಾ ವಾಚಾಳಿ, ಜೊತೆಗೆ ನೇರ ನಡೆ ನುಡಿಯ ಒರಟು ಸ್ವಭಾವದ ವ್ಯಕ್ತಿ. ಆದರೆ ಈ ನನ್ನ ಗುಣಗಳು ಅಲ್ಲಿ ದಿಕ್ಕು ತಪ್ಪಿದವು. ಅವರ ಮನೆಯಲ್ಲಿನ ಮೌನ ವಾತಾವರಣ, ಅವರ ಮಕ್ಕಳಲ್ಲಿ ತಂದೆಯ ಬಗ್ಗೆ ಇದ್ದ ಗೌರವ ಮಿಶ್ರಿತ ಭಯ ಇವು ನನ್ನನ್ನು ತುಂಬಾ ಪೇಚಿಗೆ ಸಿಕ್ಕಿಸಿದವು. ಸುಮಾರು ದಿವಸಗಳ ಕಾಲ ಈ ವಾತಾವರಣಕ್ಕೆ ಹೊಂದಿಕೊಳ್ಳಲಾರದೆ ಪರಿತಪಿಸು

ಮಂತಾಯಿತು. "ಬ್ರಾಹ್ಮಣ ಸಂಸ್ಕೃತಿಯೊಂದನ್ನು ಪ್ರತಿಬಿಂಬಿಸಲೋ ಏನೋ" ಎನ್ನುವ ಒಂದು ಭ್ರಮೆಯೂ ನನ್ನಲ್ಲಿ ಉಂಟಾಯಿತು. ಹೀಗೆ ಈ ವಾತಾವರಣಕ್ಕೆ ನಾನು ಹೊಂದಿಕೊಳ್ಳಲು ಸುಮಾರು ದಿನಗಳೇ ಬೇಕಾದವು. ಅನಿವಾರ್ಯವಾಗಿ ನನ್ನ ಬದುಕನ್ನು ವನ್ನು ಕಠಿಣ ಮಾಡಿಕೊಳ್ಳುತ್ತಾ. ಮಾತನ್ನು ಮಿತಿಗೆ ಒಳಪಡಿಸಬೇಕಾಯಿತು. ಈ ಸಂದರ್ಭದಲ್ಲಿ ನನ್ನ ಮಾವನವರ ಬಗ್ಗೆ ಆಗಾಗ ಆಲೋಚಿಸಲು ತೊಡಗಿದೆ. ಬಹುಶಃ ಅವರ ದರ್ಪ ಮತ್ತು ಬೆದರಿಕೆಯಿಂದಾಗಿ, ಅವರ ಮಕ್ಕಳಲ್ಲಿ ತುಂಬಾ ದರರಿಕೆ ಉಂಟಾಗಿರಬಹುದೆಂದು ಭಾವಿಸಿದೆ. ಆದರೆ ದಿನ ಕಳೆದಂತೆ ಅವರಲ್ಲಿ ಯಾವ ದರ್ಪವಾಗಲೀ, ಬೆದರಿಸುವ ಮನೋಭಾವವಾಗಲೀ ಕಂಡು ಬರದೆ ಚಕಿತನಾದ. ಅವರ ಮಿತಭಾಷಿತ್ವ ಅವರ ಮಕ್ಕಳಲ್ಲಿ ಒಂದು ಸಂಕೀರ್ಣತೆಯನ್ನು ಉಂಟು ಮಾಡಿದೆಯೇನೋ ಎಂಬ ತೀರ್ಮಾನಕ್ಕೆ ಬಂದೆ. ಇದಕ್ಕೆ ಕಾರಣವಾದರೂ ಇಷ್ಟೇ. ಶ್ರೀ ಸಿಂಗಾರಿಗೌಡರ ವ್ಯಕ್ತಿತ್ವದಲ್ಲಿ ಒಂದು ಗುಣ ಇದೆ. ಅದೇನೆಂದರೆ ಮಕ್ಕಳಿಗೆ ಜವಾಬ್ದಾರಿಯನ್ನು ಕೊಟ್ಟು ಸ್ವಾತಂತ್ರ್ಯವನ್ನು ಕೊಟ್ಟರೂ, ಮಕ್ಕಳು ಪೂರ್ಣ ಜವಾಬ್ದಾರಿಯನ್ನು ಹೊರಲಾರದೆ, ಸ್ವಾತಂತ್ರ್ಯವನ್ನು ಅನುಭವಿಸಲಾರದೆ ತೊಳಲಾಡುವ ಸಂಕೀರ್ಣತೆಯನ್ನು ಗಮನಿಸಿದೆ. ಚಿಕ್ಕ ವಯಸ್ಸಿನಲ್ಲೇ ಎಲ್ಲವನ್ನು ಮಕ್ಕಳ ತೀರ್ಮಾನಕ್ಕೆ ಬಿಡುವುದು ಕೆಲವೊಮ್ಮೆ ಅಪಾಯವನ್ನುಂಟು ಮಾಡುತ್ತದೆ. ಈ ಕಾರಣದಿಂದಾಗಿ ಷೇಕ್ಸ್‌ಪಿಯರ್ ಮಹಾಕವಿಯ ಹ್ಯಾಮ್ಲೆಟನ "ಟು ಬಿ ಅರ್ ನಾಟ್ ಟು ಬಿ" ಸಂಕೀರ್ಣತೆಯ ಸ್ವಭಾವ ಅವರ ಎಲ್ಲಾ ಮಕ್ಕಳಲ್ಲಿ ಅಂದೂ ಇತ್ತು, ಇಂದೂ ಇದೆ. ಇದು ಶ್ರೀ ಸಿಂಗಾರಿಗೌಡರ ಧನಾತ್ಮಕ ಗುಣವೂ ಹೌದು, ಋಣಾತ್ಮಕ ಗುಣವೂ ಹೌದು. ಶ್ರೀ ಸಿಂಗಾರಿಗೌಡರು ಯಾವುದನ್ನೂ ಮಕ್ಕಳ ಮೇಲೆ ಹೇರಿಸುವುದಿಲ್ಲ. ಸಂಪೂರ್ಣ ಜವಾಬ್ದಾರಿಯನ್ನು ಸ್ವಾತಂತ್ರ್ಯವನ್ನು ಕೊಡುತ್ತಾರೆ. ಅವರ ಹಿಂದೆಯೇ ಅವರ ಮಿತ್ರ ಭಾಷಿತ್ವ ಅಂಕುಶವಾಗುತ್ತದೆ.

ಶ್ರೀ ಸಿಂಗಾರಿಗೌಡರ ಸಾಮಾಜಿಕ ಧೋರಣೆಗಳನ್ನು ಎರಡು ಮೂರು ದೃಷ್ಟಾಂತಗಳ ಮೂಲಕ ಹೇಳಬಯಸುತ್ತೇನೆ. ಒಂದು ದೃಷ್ಟಾಂತ-ನನ್ನ ವೈಯಕ್ತಿಕ ವಿಷಯಕ್ಕೆ ಸಂಬಂಧಪಟ್ಟದ್ದು. ಮದುವೆಯಾದ ಹೊಸದರಲ್ಲಿ ಹೆಂಡತಿಯನ್ನು ಕರೆದುಕೊಂಡು ಹೋಗಬೇಕಾದ ಸಂದರ್ಭ ಬಂದಾಗ. ಸಾಮಾನ್ಯವಾಗಿ ಹೆಣ್ಣು ಹೆತ್ತವರು ತನ್ನ ಮಗಳು ನಗರದಲ್ಲಿ ವಾಸ ಮಾಡಿದರೆ ಬಹಳ ಚೆನ್ನ ಎಂದು ಕೊಂಡಿರುತ್ತಾರೆ. ಆ ಪರಿಸ್ಥಿತಿಯಲ್ಲಿ ನಗರ ವಾಸಕ್ಕೆ ನಾನು ಅಣಿಗೊಂಡಿರಲಿಲ್ಲ. ಹಳ್ಳಿಯಲ್ಲೇ ನೆಲಸಬೇಕೆಂಬ ಹಂಬಲವಿತ್ತು. ಈ ಹಿನ್ನೆಲೆಯಲ್ಲಿ ನಾನು ಅಳುಕುತ್ತಲೇ ನನ್ನ ಮಾವನವರ ಜೊತೆ "ನಾನು ಹಳ್ಳಿಗೆ ಹೆಂಡತಿಯನ್ನು ಕರೆದುಕೊಂಡು ಹೋಗುತ್ತೇನೆಂದು" ತಿಳಿಸಿದೆ. ಆಗ ಅವರ ಪ್ರತಿಕ್ರಿಯೆ ನನ್ನ ನಿಲುವಿಗೆ ತೀರಾ ತದ್ವಿರುದ್ಧವಾಗಿತ್ತು. "ನೋಡಣ್ಣಾ ನನ್ನ ಮಕ್ಕಳು ಅಂತಹುದೇನನ್ನೂ ಬಯಸುವುದಿಲ್ಲ. ಗ್ರಾಮೀಣ ಬದುಕಿಗೆ ಅವರು ತಯಾರಾಗಿದ್ದಾರೆ. ನಿನಗೆ ಎಲ್ಲಿ ಕ್ಷೇಮವೋ ಅಲ್ಲಿಯೇ ಸಂಸಾರವನ್ನು ಹೂಡು. ನನ್ನ ಮಗಳಿಂದ

ನಿನಗಾಗಲೀ, ನನ್ನ ಮನೆಯವರಿಗಾಗಲಿ ಯಾವ ರೀತಿಯ ಕಿರಿಕಿರಿಯಾಗಲಾರದು'. ಎಂದಾಗ ಹಳ್ಳಿಗಾಡಿನಿಂದ ಬಂದ ನನಗೆ ನಾಚಿಕೆಯ ಜೊತೆಗೆ ಸಂಕೋಚವೂ ಆಯಿತು. ಅಷ್ಟೇ ಅಲ್ಲ ಅವರ ಹೇಳಿಕೆಯನ್ನು ಸಮರ್ಥಿಸುವಂತೆ ಸುಮಾರು ವರ್ಷಗಳ ಕಾಲ ನಮ್ಮ ಹಳ್ಳಿಯಲ್ಲಿ ಸಂಸಾರವನ್ನೂ ಹೂಡಿದೆ. ಕೊನೆಗೂ ನನ್ನ ವ್ಯಯಕ್ತಿಕ ಬಯಕೆಯ ಕಾರಣದಿಂದಾಗಿ ನನ್ನ ಸಂಸಾರವನ್ನು ಪಟ್ಟಣಕ್ಕೆ ಸ್ಥಳಾಂತರಿಸಿದೆ.

ಇನ್ನೊಂದು ದೃಷ್ಟಾಂತ ಅವರ ಕಿರಿಯ ಮಗಳು ನಂದಿನಿಯ ಮದುವೆಯ ಸಂದರ್ಭ. ಎಲ್ಲಾ ಅಪ್ಪ ಅಮ್ಮಂದಿರೂ ವಿದ್ಯಾವಂತನನ್ನು ಉದ್ಯೋಗಿಯಾದ ಅಳಿಯನನ್ನು ಪಡೆಯುವ ಹಂಬಲದಲ್ಲಿರುತ್ತಾರೆ. ಅದರಲ್ಲೂ ಪ್ರಭಾವೀ ಹುದ್ದೆಯಲ್ಲಿರುವವರನ್ನು ಪಡೆಯುವುದು ಹೆಗ್ಗಳಿಕೆಯೆಂದು ಭಾವಿಸುತ್ತಾರೆ. ಪ್ರಭಾವೀ ವ್ಯಕ್ತಿಯೇ ಆಗಿರುವ ಶ್ರೀ ಸಿಂಗಾರಿಗೌಡರು ಮಗಳಿಗೆ ಬಂದ ನಾಲ್ಕಾರು ಸಂಬಂಧಗಳನ್ನು ಕಡೆಗಣಿಸಿದಾಗ ಆಶ್ಚರ್ಯಪಟ್ಟು ಅವರ ಜೊತೆ ಪ್ರಸ್ತಾಪಿಸಿದೆ. ಅವರ ಅಭಿಪ್ರಾಯ "ಇಡೀ ಸಮಾಜದಲ್ಲಿ ಒಳ್ಳೆಯ ಹುದ್ದೆ ಎಂದರೆ ಒಕ್ಕಲುತನ. ಯಾರ ಹಂಗಿನಲ್ಲೂ ಇರದೇ ಸ್ವತಂತ್ರವಾಗಿ ಬದುಕಲು ಅವಕಾಶ ಮಾಡಿಕೊಡುತ್ತದೆ. ಆದ್ದರಿಂದಲೇ ವಿದ್ಯಾವಂತನಾಗಿದ್ದು, ಒಕ್ಕಲುತನವನ್ನು ಆಶ್ರಯಿಸಿರುವ ವ್ಯಕ್ತಿಯನ್ನು ಇಷ್ಟಪಟ್ಟಿದ್ದೇನೆ." ಎಂದಾಗ ಅವರ ಇನ್ನೊಂದು ಮುಖದ ಪರಿಚಯವಾಯಿತು. ಈ ಸಂದರ್ಭದಲ್ಲಿ ಇನ್ನೊಂದು ಅಂಶವನ್ನು ಇದಕ್ಕೆ ಪೂರಕವಾಗಿ ಹೇಳ ಬಯಸುತ್ತೇನೆ. ಒಂದು ಅತ್ಯಂತ ಒಳ್ಳೆಯ ಸಂಬಂಧ ಕಡಿದು ಹೋದಾಗ ನಾನು ಕೇಳಿದೆ. ಅದಕ್ಕೆ ಅವರ ಪ್ರತಿಕ್ರಿಯೆ "ನೋಡಣ್ಣಾ, ತೀರ್ಮಾನ ತೆಗೆದುಕೊಳ್ಳುವಾಗ ಯಾವ ವ್ಯಕ್ತಿ ಪರಾವಲಂಬಿಯಾಗಿ ಹೆಂಡತಿಯ ಮೊರೆ ಹೋಗುತ್ತಾನೋ ಅಂತಹ ಮನೆಗೆ ಮಗಳನ್ನು ಕೊಟ್ಟರೆ ಕಷ್ಟ. ನನ್ನ ಮಗಳೂ ಸುಖವಾಗಿ ಬಾಳಲಾರಳು" ಎಂದಾಗ ಅವರ ಮಗದೊಂದು ಮುಖದ ಪರಿಚಯವಾಯಿತು. ಈ ಹೇಳಿಕೆಯಿಂದ ಅವರಿಗೆ ಸ್ತ್ರೀಯರ ಬಗ್ಗೆ ಗೌರವವಿಲ್ಲ ಎಂಬ ತೀರ್ಮಾನಕ್ಕೂ ಬರಲಾಗದು.

ಮೇಲು ನೋಟಕ್ಕೆ ತುಂಬಾ ನಿರ್ಲಿಪ್ತರಂತೆ ಕಂಡು ಬರುವ ಶ್ರೀ ಸಿಂಗಾರಿಗೌಡರು ಅಂತರ್ಯದಲ್ಲಿ ಮಹಾ ಪ್ರೇಮಿ. ಆದರೆ ಯಾವುದೇ ಪ್ರೇಮ ಅದು ಪ್ರಕಟಗೊಳ್ಳಬೇಕಾದ ಸಂದರ್ಭದಲ್ಲಿ ಪ್ರಕಟಗೊಳ್ಳದಿದ್ದರೆ ಅವರನ್ನು ಅವಲಂಬಿಸಿರುವ, ನಂಬಿಕೆಯನ್ನಿರಿಸಿಕೊಂಡಿರುವ, ಸಂಬಂಧವನ್ನು ಹೊಂದಿರುವ ವ್ಯಕ್ತಿಗಳಲ್ಲಿ ಬಹಳಷ್ಟು ನಿರಾಸೆಯನ್ನು ಮೂಡಿಸುತ್ತದೆ. ಅವರ ಬಗ್ಗೆ ತಪ್ಪು ಗ್ರಹಿಕೆ ಮೂಡುವಂತೆ ಮಾಡುತ್ತದೆ. ಹಲವಾರು ಸಂದರ್ಭಗಳಲ್ಲಿ ಈ ಅಭಿಪ್ರಾಯ ಅವರಿಗೆ ಸಂಬಂಧಪಟ್ಟ ಎಲ್ಲರ ಮನಸ್ಸಿನಲ್ಲೂ ಒಂದಲ್ಲ ಒಂದು ಬಾರಿ ಮೂಡಿರುವುದನ್ನು ನಾನು ಗಮನಿಸಿದ್ದೇನೆ. ಇದರಿಂದ ಕೆಲವೊಮ್ಮೆ ನನಗೆ ವೈಯುಕ್ತಿಕವಾಗಿ ಬೇಸರವಾಗಿದೆ. ಹೀಗೆ ಬೇಸರಗೊಂಡಿರುವಾಗಲೇ

ಅವರ ಪ್ರೀತಿಪೂರ್ವಕವಾದ ಒಂದು ಮಾತು ನನ್ನಲ್ಲಿ ಉಂಟಾಗಿದ್ದಂತಹ ಬೇಸರವನ್ನು ದೂರ ಸಾಗಿಸಿದೆ. ಹೀಗೆ ಮಿಶ್ರ ಪ್ರತಿಕ್ರಿಯೆ ಒಟ್ಟಾಗಿ ಉಂಟಾಗುವಂತೆ ಮಾಡುವ ವ್ಯಕ್ತಿತ್ವ ಅವರದು, ''ಮಾತು ಬೆಳ್ಳಿ, ಮೌನ ಬಂಗಾರ'' ಎನ್ನುವ ಗಾದೆ ಮಾತಿದ್ದರೂ ಮೌನ ಎಷ್ಟಿರಬೇಕೋ ಅಷ್ಟಿದ್ದರೆ ಬಹಳ ಚೆನ್ನ. ಇಲ್ಲದಿದ್ದರೆ ಆ ಮೌನವೂ ಕೆಲವೊಮ್ಮೆ ಅಸಹನೀಯುವಾಗುತ್ತದೆ. ಈ ರೀತಿಯಲ್ಲಿ ಒಮ್ಮೊಮ್ಮೆ ಅವರ ಮೌನ ನನ್ನಲ್ಲಿ ಅಸಹನೆಯನ್ನುಂಟು ಮಾಡಿದೆ. ಯಾವ ಸಂದರ್ಭದಲ್ಲೂ ಸಮಚಿತ್ತತೆಯನ್ನು ಕಳೆದು ಕೊಳ್ಳದ ಶ್ರೀ ಸಿಂಗಾರಿಗೌಡರು ವೈವಿಧ್ಯಪೂರ್ಣ ವ್ಯಕ್ತಿಯಾಗಿ ಕಾಣಿಸಲಾರರು. ಇವರ ಮೌನ ಮತ್ತು ತಾಟಸ್ಥ್ಯ ಪ್ರವೃತ್ತಿಯಿಂದಾಗಿ ದೃಢ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಅವರ ಮಕ್ಕಳು ಬಹಳ ಸಂಕಷ್ಟಕ್ಕೆ ಸಿಲುಕುತ್ತಾರೆ, ಪ್ರಾಪ್ತ ವಯಸ್ಸಿಗೆ ಬಂದಾಗಲೂ ಯಾವ ತೀರ್ಮಾನಕ್ಕೂ ಬರಲಾಗದೆ ತೊಳಲಾಡುವುದನ್ನು ಕಂಡಿದ್ದೇನೆ.

ಸರಳತೆ, ಸಜ್ಜನಿಕೆ, ಪ್ರಾಮಾಣಿಕತೆ ವಿಶಿಷ್ಟ ಗುಣಗಳಾಗಿವೆ. ಕೆಲವೊಮ್ಮೆ ಈ ಗುಣಗಳು ಇವರಲ್ಲಿ ಅತಿ ಎನಿಸುವಷ್ಟರ ಮಟ್ಟಿಗೆ ಬೇಸರವನ್ನು ತರಿಸುತ್ತವೆ. ಮಕ್ಕಳೆಲ್ಲರ ಮನೋಧರ್ಮವನ್ನು ರೂಪಿಸುವಲ್ಲಿ ಎಲ್ಲರೊಡನೆ ಹೊಂದಿಕೊಂಡು ಹೋಗುವ ಸ್ವಭಾವವನ್ನು ಮೈಗೂಡಿಸಿಕೊಂಡಿರುವಲ್ಲಿ ಇವರ ಮತ್ತು ಇವರ ಶ್ರೀಮತಿ ಯವರ ಪ್ರಭಾವ ಬಹಳಷ್ಟು ಇದೆ. ಹೊಂದಿಕೊಂಡು ಹೋಗುವ ಸ್ವಭಾವವನ್ನು ರೂಡಿಸುವಲ್ಲಿನ ಈ ದಂಪತಿಗಳಿಬ್ಬರ ಶ್ರಮವನ್ನು ಯಾರಾದರೂ ಮೆಚ್ಚಿಕೊಳ್ಳಲೇ ಬೇಕು.

ರಾಜಕಾರಿಣಿಯಾಗಿ ಶ್ರೀ ಸಿಂಗಾರಿಗೌಡರು ನೌಕರ ಶಾಹಿಯ ಬಗೆಗೆ ಇರಿಸಿಕೊಂಡಿರುವ ಅಭಿಪ್ರಾಯವನ್ನು ಪುಷ್ಟೀಕರಿಸಲು ಒಂದು ಘಟನೆಯನ್ನು ಉಲ್ಲೇಖಿಸ ಬಯಸುತ್ತೇನೆ. ಜಿಲ್ಲಾ ಪರಿಷತ್ ಅಧ್ಯಕ್ಷರಾದ ಹೊಸತರಲ್ಲಿ ಅವರ ಮತ್ತು ಅವರ ನೌಕರರ ಜೊತೆಗಿನ ಸಂಬಂಧದ ಬಗ್ಗೆ ಪತ್ರಿಕೆಗಳ ಮೂಲಕ ಟೀಕೆ ಬಂತು. ಅದೇನೆಂದರೆ, ಮಂತ್ರಿಗಳ ಸಾಧನ ಸೌಲಭ್ಯವನ್ನುಳ್ಳ ಜಿಲ್ಲಾ ಪರಿಷತ್ ಅಧ್ಯಕ್ಷರು ಓರ್ವ ಐ.ಎ.ಎಸ್. ಅಧಿಕಾರಿ ಬಂದಾಗ ಎದ್ದು ನಿಂತು ಸ್ವಾಗತಿಸುತ್ತಾರೆ, ಕಾರಿನ ಹತ್ತಿರಕ್ಕೆ ಹೋಗಿ ಕಳುಹಿಸಿ ಕೊಡುತ್ತಾರೆ. ಎಂಬುದೇ ಆ ಟೀಕೆ. ಈ ಟೀಕೆಗೆ ಸಂಬಂಧಪಟ್ಟಂತೆ ಶ್ರೀ ಸಿಂಗಾರಿಗೌಡರ ಬಳಿ ಪ್ರಸ್ತಾ ಪಿಸಿದಾಗ, ಅವರ ಪ್ರತಿಕ್ರಿಯೆ, ''ನೋಡಣ್ಣಾ, ನಾನು ರಾಜಕಾರಣಿಯಾಗಿರಬಹುದು. ಆ ಕಾರಣದಿಂದಾಗಿ ಅಧ್ಯಕ್ಷನಾಗಿರಬಹುದು. ಆದರೆ ಈ ಅಧ್ಯಕ್ಷಸ್ಥಾನ ಇಂದು ಇದ್ದು ನಾಳೆ ಹೋಗುತ್ತದೆ. ಇದಕ್ಕಿಂತ ಮುಖ್ಯವಾದುದು ನಮ್ಮ ಮಾನವೀಯ ಸಂಬಂಧಗಳು. ತೀರಾ ಕ್ರಿಯಾಶೀಲನಾದ, ಸುಶಿಕ್ಷಿತನಾದ ಒಬ್ಬ ಮನುಷ್ಯನನ್ನು–ಅವನು ಐ.ಎ.ಎಸ್. ಅಧಿಕಾರಿಯಾಗಿರಬಹುದು, ಇಲ್ಲದೇ ಇರಬಹುದು–ನನ್ನ ಕಛೇರಿಗೆ ಬಂದಾಗ ಗೌರವ ದಿಂದ ಬರ ಮಾಡಿಕೊಳ್ಳುವುದು, ಹೋಗುವಾಗ ಗೌರವದಿಂದ ಬೀಳ್ಕೊಡುವುದು ನನ್ನ ಪ್ರತಿಷ್ಠೆಯ ಪ್ರಶ್ನೆಯಾಗಬಾರದು. ನನ್ನ ವ್ಯಕ್ತಿತ್ವದ ಪ್ರಶ್ನೆಯಾಗಬೇಕು. ಆ

ಮೂಲಕ ಪ್ರೀತಿಯಿಂದ ಮನವೊಲಿಸಿಕೊಳ್ಳುವಂತಾಗಬೇಕು. ನಾನು ಇದೇ ಧೋರಣೆಯನ್ನು ಮುಂದುವರಿಸಲಿಚ್ಛಿಸುತ್ತೇನೆ' ಎಂದಾಗ ಅವರ ಧೋರಣೆ ನಮ್ಮ ಯುವ ಪೀಳಿಗೆಯ ರಾಜಕಾರಿಣಿಗಳು ತಳೆದಿರುವ ಅಧಿಕಾರಿಗಳೆಲ್ಲ ಗುಲಾಮರು ಎಂಬ ಧೊರಣೆಗಿಂತ ಭಿನ್ನವಾಗಿ ಉಳಿಯುತ್ತದೆ.

ಹೀಗೆ ಹಲವು ಹತ್ತು ಸಂದರ್ಭಗಳಲ್ಲಿ ತನ್ನ ವ್ಯಕ್ತಿತ್ವವನ್ನು ಉಳಿಸಿ, ಬೆಳೆಸಿಕೊಂಡು ಬಂದಿರುವ ಶ್ರೀ ಸಿಂಗಾರಿಗೌಡರ ಬಗ್ಗೆ ಮನೆಯವರೆಲ್ಲರಲ್ಲೂ ಗೌರವದ ಭಾವನೆ ಇದೆ.

ಬಿ. ಜಯಪ್ರಕಾಶಗೌಡ

ದಳಪತಿ

ಹಳ್ಳಿಗಾಡಿನ ಎಲ್ಲಾ ರೀತಿಯ ಜೀವನಕ್ಕೆ ಹೊಂದಿಕೊಂಡು ಬಾಳ್ವೆ ನಡೆಸುತ್ತಿರುವ ಅಪರೂಪದ ರಾಜಕಾರಣಿಗಳಲ್ಲಿ ಶ್ರೀ ಕೆ. ಸಿಂಗಾರಿಗೌಡರು ಅಗ್ರಗಣ್ಯರು. ಶ್ರೀಮಂತ ಕುಟುಂಬದಲ್ಲಿ ಜನಿಸಿ ಆ ಶ್ರೀಮಂತಿಕೆಯ ಅಹಂಭಾವವಿಲ್ಲದೆ, ಅವರ ಗತ್ತು ಗಮ್ಮತ್ತನ್ನು ತೋರಿಸದೆ, ತೀರಾ ಸಜ್ಜನಿಕೆಯಿಂದ ನಡೆದುಕೊಳ್ಳುವ ಶ್ರೀ ಗೌಡರು ಸ್ವಲ್ಪವೂ ಕಡಿಮೆ ಇಲ್ಲದೆ ಪೂರ್ತಿಯಾಗಿ ಕರಡಹಳ್ಳಿಯವರೇ ಆಗಿದ್ದಾರೆ. ಬಟ್ಟೆ ಸೊಪ್ಪು ಅವರೆಕಾಳು. ಇವುಗಳು ಅವರ ಹಳ್ಳಿಯ ಜೀವನಕ್ಕೆ ಹಿಡಿಯಬಹುದಾದ ಗುರುತುಗಳು. ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಶಾಸಕರಾಗಿ, ರಾಜಕೀಯದ ಮುಂಚೂಣಿಯಲ್ಲಿದ್ದರೂ ಸಹ ಜಿಲ್ಲಾ ಕೇಂದ್ರದಲ್ಲೇ ಏಕೆ ತಾಲ್ಲೂಕು ಕೇಂದ್ರದಲ್ಲೂ ಸಹ ಅವರು ವಾಸಿಸಲು ಇಷ್ಟಪಡಲಿಲ್ಲ. ರಾಜಕೀಯದಲ್ಲೇ ಇದ್ದು ಪುನಃ ಹಳ್ಳಿಯಲ್ಲೇ ಹೋಗಿ ವಾಸಿಸುವ ಕೆಲವೇ ರಾಜಕಾರಣಿಗಳಲ್ಲೂ ಸಹ ಶ್ರೀ ಸಿಂಗಾರಿಗೌಡರು ಮೊದಲನೆಯವರಾಗಿದ್ದಾರೆ. ಪಾಶ್ಚಾತ್ಯ ರೀತಿಯ ಉಡುಪುಗಳನ್ನು ಹಾಕಿದ್ದರೆ ಇವರನ್ನು ಯಾರೂ ಹಳ್ಳಿಯವರೆಂದು ಕರೆಯಲು ಸಾಧ್ಯವಾಗುತ್ತಿರಲಿಲ್ಲ. ಬೆಳ್ಳಗೆ ಕೆಂಪಗೆಯಿರುವ ಇವರು ಬಿಳಿ ಖಾದಿ ಬಟ್ಟೆಯ ಉಡುಪುಗಳನ್ನು ಹಾಕುವುದರಿಂದ ಹಳ್ಳಿಯವರೆಂದು ಕರೆಯಬಹುದು. ಬಟ್ಟೆಗಳನ್ನು ಧೂಳಾಗದಂತೆ ನೋಡಿಕೊಂಡು ಹಳ್ಳಿಯ ಜೀವನ ನಡೆಸುತ್ತಿರುವ ಶ್ರೀ ಗೌಡರು ಇಂದೂ ಹಳ್ಳಿಗಳಲ್ಲಿ ನ್ಯಾಯ, ಪಂಚಾಯಿತಿ, ನಾಟಕ, ದೇವರ ಪೂಜೆಗಳಲ್ಲಿ ಭಾಗಿಯಾಗುತ್ತಾರೆ. ಜಗಲಿ ಮೇಲೆ ಕೂರುತ್ತಾರೆ. ಬಟ್ಟೆಗಳನ್ನು ಕೊಳೆ ಮಾಡಿಕೊಳ್ಳುವುದಿಲ್ಲ. ನ್ಯಾಯ ಪಂಚಾಯಿತಿಯನ್ನೂ ಕೊಳೆ ಮಾಡುವುದಿಲ್ಲ. ಅದಕ್ಕಾಗಿಯೇ ಇವರನ್ನು ಇನ್ನೂ ಹಳ್ಳಿಗಳಲ್ಲಿ ಜನ ಗೌರವಿಸುತ್ತಿದ್ದಾರೆ. ಹಳ್ಳಿಯ ಬಡವ ಬಲ್ಲಿದರನ್ನು ಬಿನ್ನಭಾವದಿಂದ ಕಾಣದೆ ಎಲ್ಲರನ್ನು ಸಮಾನಭಾವದಿಂದ ಕಾಣುವ ಇವರು ಇಂದಿಗೂ ಹಳ್ಳಿಗಳಿಗೆ ಯಜಮಾನರು, ಯಜಮಾನರಿಗಿಂತ ಪಾಳೆಯಗಾರರೆನ್ನಬಹುದು, ದಳಪತಿಗಳೆನ್ನಬಹುದು. ಬೆಟರ್‌ಮೆಂಟ್ ಡಿಕ್ಟೇಟರ್'' ಎಂಬ ಇಂಗ್ಲೀಷ್ ಪದ ಬಳಕೆಯ ಅರ್ಥದಂತೆ ಇವರು ಒಬ್ಬ ಒಳ್ಳೆಯ ಪಾಳೆಯಗಾರರು. ಯಾವ ಹಳ್ಳಿಯವನೇ ಆಗಲಿ, ಯಾವ ಪಟ್ಟಣದವನೇ ಆಗಲೀ, ಇವರ ಮಾತನ್ನು ಕೇಳಲೇಬೇಕು. ಅಂದರೆ ಇವರ ನಿಷ್ಪಕ್ಷಪಾತ ಮತ್ತು ಅವರಲ್ಲಿರುವ ಅರ್ಥದ, ಕುತಂತ್ರವಿಲ್ಲದ ನೇರ ಮಾತುಗಳು, ಯಾರೂ ತುಟಿ ಪಿಟಕ್ಕೆನ್ನುವ ಹಾಗಿಲ್ಲ. ಯಾವ ಸ್ವಾರ್ಥವು ಇಲ್ಲದ ಕೆಟ್ಟತನವೂ ಇಲ್ಲದ ಇವರ ನಡೆ ನುಡಿಗಳಿಂದ ಇವರನ್ನು ಒಳ್ಳೆಯ ಪಾಳೇಯಗಾರ, ದಳಪತಿಗಳೆನ್ನುವುದರಲ್ಲಿ ತಪ್ಪೇನಿಲ್ಲ.

ಮಂಡ್ಯ ಜಿಲ್ಲೆಯ ಹಲವು ಹನ್ನೊಂದು ಅಭಿವೃದ್ಧಿ ಕಾರ್ಯಗಳಲ್ಲಿ ಪ್ರಮುಖ ರಾಗಿ ದುಡಿದಿರುವ ಶ್ರೀ ಸಿಂಗಾರಿಗೌಡರಿಗೆ ರಾಜಕೀಯ ಹಿನ್ನೆಲೆಯಿದೆ. ತಂದೆ ದಿವಂಗತ ಕರಡಹಳ್ಳಿ ಕೃಷ್ಣಪ್ಪಗೌಡರು ಅಂದಿನ ಕಾಲದಲ್ಲೇ ಜನೋಪಯೋಗಿ ಕಾರ್ಯಗಳಲ್ಲಿ ತೊಡಗಿ. ಅನ್ನದಾನ ವಿದ್ಯಾದಾನ ಮಾಡುತ್ತಿದ್ದವರು. ಎಷ್ಟೋ ಜನರು ಇವರ ಸಹಾಯದ ಹಸ್ತದಿಂದ ಮುಂದೆ ಬಂದ ಉದಾಹರಣೆಗಳಿವೆ. ಮಂಡ್ಯ ಜಿಲ್ಲೆಯ ರಾಜಕೀಯದಲ್ಲಿ ಅದರಲ್ಲೂ ವಿಶೇಷವಾಗಿ ಹಳೇ ಮೈಸೂರಿನ ರಾಜಕೀಯದಲ್ಲಿ ಹೆಸರಾಗಿದ್ದ ಕೃಷ್ಣಪ್ಪಗೌಡರ ಹೆಸರು ಅವರ ಮಗ ಶ್ರೀ ಸಿಂಗಾರಿಗೌಡರ ರಾಜಕೀಯಕ್ಕೆ ಸಹಾಯ ಮಾಡಿದೆ. ಒತ್ತು ಕೊಟ್ಟು ಬೆಳೆಸಿದೆ. ಅವರ ತಂದೆಯ ರಾಜಕೀಯವನ್ನು ಶ್ರೀ ಗೌಡರು ಎಚ್ಚರಿಕೆಯಿಂದ ಮುಕ್ಕಾಗದಂತೆ. ಕೆಡದಂತೆ. ಬೆಳೆಸಿಕೊಂಡು ತಮ್ಮ ರಾಜಕೀಯ ಜೀವನವನ್ನು ರೂಪಿಸಿಕೊಂಡು ಮುಂದೆ ಬಂದಿದ್ದಾರೆ. ಶ್ರೀ ಗೌಡರು ಕಷ್ಟಪಟ್ಟು ರಾಜಕೀಯ ಮಾಡಿದವರಲ್ಲವೆಂದು ಪುನಃ ಹೇಳಬೇಕಾಗಿಲ್ಲ. ಕಷ್ಟಪಟ್ಟು ಆ ಕಷ್ಟಗಳಿಗೆ ಸಿಕ್ಕಿಹಾಕಿಕೊಂಡು ರಾಜಕೀಯ ಮಾಡಬೇಕೆನ್ನುವ ಹಂಬಲ ಇವರಿಗೆ ಒಂದೆಯೂ ಇದ್ದಂತೆ ಕಾಣಲಿಲ್ಲ. ಈಗಲೂ ಸಹ ಕಾಣುವುದಿಲ್ಲ. ಅಧಿಕಾರವನ್ನು ಇವರು ಎಂದೂ ಹುಡುಕಿಕೊಂಡು ಹೋದವರಲ್ಲವೆಂದು ಹೇಳಬಹುದು. ಇವರ ಅದೃಷ್ಟ ಚೆನ್ನಾಗಿದೆ, ಇಂದಿನ ರಾಜಕೀಯ ಚದುರಂಗದಾಟದಲ್ಲಿ. ಅದೂ ಮಂಡ್ಯ ಜಿಲ್ಲೆಯಲ್ಲಿ ಈ ೪೩ ವಯಸ್ಸಿನಲ್ಲಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಇವರ ಅದೃಷ್ಟ ಚೆನ್ನಾಗಿದೆಯೆನ್ನುವುದಕ್ಕೆ ಒಂದು ಉದಾಹರಣೆ. ಶ್ರೀ ಸಿಂಗಾರಿಗೌಡರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಬೇಕೆಂದು ಬಂದವರಲ್ಲ. ಜನರೇ ಹೋಗಿ ನೀವೇ ಅಧ್ಯಕ್ಷರಾಗ ಬೇಕು ನಮ್ಮ ಜಿಲ್ಲೆಯನ್ನು ಮುನ್ನಡೆಸಬೇಕೆಂದು ಕೇಳಿಕೊಂಡಿದ್ದಾರೆ. ವಕೀಲರಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷರಾಗಿ ಸರ್ಕಾರದ ವಿವಿಧ ಸಮಿತಿಗಳಲ್ಲಿ ಕೆಲಸ ಮಾಡಿ ಪಡೆದ ಆಡಳಿತದ ಅನುಭವ ಅವರು ಇಂದು ಪಡೆದಿರುವ ಅಧಿಕಾರಕ್ಕೆ ಎರಡನೇ ಅರ್ಹತೆಯಾಗಿದೆ.

ಅಧಿಕಾರದ ವಿಕೇಂದ್ರೀಕರಣದ ದಿಸೆಯಲ್ಲಿ ಜಾರಿಗೆ ಬಂದಿರುವ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿ ವ್ಯವಸ್ಥೆಯಲ್ಲಿ ಶ್ರೀ ಗೌಡರಂತಹ ಅನುಭವಸ್ಥ ಅಧ್ಯಕ್ಷ ರನ್ನು ಪಡೆದ ಮಂಡ್ಯ ಜಿಲ್ಲೆಯ ಆಡಳಿತ ಕೆಟ್ಟು ಹೋಗಿಲ್ಲ. ಇಂದಿನ ಜಿಲ್ಲೆಯ ರಾಜ ಕೀಯ ಪರಿಸ್ಥಿತಿಯಲ್ಲಿ ಇಂತಹವರ ಅವಶ್ಯಕತೆಯಿತ್ತು. ಇವರು ಅನಿವಾರ್ಯವಾಗಿದ್ದರು ಎಂಬ ಮಟ್ಟವನ್ನು ಜಿಲ್ಲೆಯ ರಾಜಕೀಯದ ಆಡಳಿತ ಕಂಡುಕೊಂಡಿದೆ. ಆಡಳಿತದಲ್ಲಿ ಬಿಗಿಧೋರಣೆ ತಳೆದರೆ ಏನಾಗುತ್ತದೆಯೋ ಎಂದು ಭಾವಿಸಿರುವ ಶ್ರೀ ಗೌಡರು ತುಂಬಾ ಮೃದು ಸ್ವಭಾವದವರು, ಇವರ ಮೃದು ಸ್ವಭಾವ ಆಡಳಿತದ ಮೇಲೆ ಕೆಟ್ಟ ಪರಿಣಾಮ ಬೀರಬಹುದೆಂಬಷ್ಟರ ಮಟ್ಟಿಗೆ ಇವರು ಒಳ್ಳೆಯವರಾಗಿ ಬಿಡುತ್ತಾರೆ ಎಂದು ಜನ ಅಂದುಕೊಳ್ಳುತ್ತಿದ್ದಾರೆಯಷ್ಟೆ. ಅಧಿಕಾರದ ದುರುಪಯೋಗವಾಗಲೀ. ಸ್ವಾರ್ಥ ಸ್ವಜನ

ಪಕ್ಷಪಾತವಾಗಲೀ ಇವಾವು ಸಹ ಇವರನ್ನು ಕಾಡಿಲ್ಲ. ನಿಷ್ಪಕ್ಷಪಾತವಾಗಿ ಆಡಳಿತ ನಡೆಸಬೇಕೆನ್ನುವುದರಲ್ಲಿ ಶ್ರೀ ಸಿಂಗಾರಿಗೌಡರು ಯಾರಿಗೂ ಒಂದೆ ಇಲ್ಲ. ಇದನ್ನು ಸಭೆ ಸಮಾರಂಭಗಳಲ್ಲಿ ತೋರಿಸಿಯೇ ಬಿಡುತ್ತಾರೆ. ನಾನು ಅಧ್ಯಕ್ಷನಾಗಿರುವುದು ಮಂಡ್ಯ ಜಿಲ್ಲಾಪರಿಷತ್ತಿಗೆ. ಯಾವುದೇ ಒಂದು ಗುಂಪಿಗಲ್ಲ. ಯಾವ ಒಂದು ಪಕ್ಷಕ್ಕಲ್ಲ ಎಂದು ನಿಷ್ಠುರವಾಗಿಯೇ ಅಂದು ಬಿಡುತ್ತಾರೆ. "ನಿಮ್ಮಗಳ ಜಗಳ ಕಟ್ಟಿಕೊಂಡು ನನಗೇನು ಸ್ವಾಮಿ" ನನಗೆ ಬೇಕಾಗಿರುವುದು ಜನಗಳಿಗೆ ಒಳ್ಳೆಯ ಕೆಲಸ ಎಂದು ಹೇಳಿ ಜನಗಳ ಜಗಳ, ಜೂಟಗಳಿಂದ ಜಾರಿಕೊಳ್ಳುತ್ತಾರೆ.

ಜಿಲ್ಲೆಯಲ್ಲಿ ಅಧಿಕಾರದ ಉನ್ನತ ಶಿಖರದಲ್ಲಿದ್ದರೂ ಸಹ ಸುಳ್ಳು ಭರವಸೆಗಳನ್ನು ಕೊಡುವ ಗೋಜಿಗೇ ಹೋಗುವುದಿಲ್ಲ. ಬದಲಾಗಿ ಸಾಮಾನ್ಯ ಕೆಲಸಗಳನ್ನು ಆಯಾ ಊರಿನಲ್ಲೇ ಜನರು ಮಾಡಿಕೊಳ್ಳಬೇಕೆನ್ನುತ್ತಾರೆ. "ನಿಮ್ಮ ಮನೆ ಮುಂದಿನ ಮೋರಿ ತೊಳೆಯಲು, ನಿಮ್ಮೂರಿನ ತಿಪ್ಪೆಕಸ ತೆಗೆಸಲು ನಾನು, ಸರಕಾರ ಎಲ್ಲಾ ಬರಬೇಕೇನಪ್ಪ" ಎಂಬುದಾಗಿ ಆಡು ನುಡಿಯಲ್ಲಿ ಹೇಳಿ ಸಣ್ಣಪುಟ್ಟ ಕೆಲಸ ಕಾರ್ಯಗಳಿಗೆ ಸರಕಾರವನ್ನು ಕಾಯಬೇಡಿರೆಂದು ಮಾರ್ಮಿಕವಾಗಿ ಹೇಳುತ್ತಾರೆ. ಅನ್ಯ ರಾಜಕಾರಣಿಗಳ ತರಹ ಪೊಳ್ಳು ಭರವಸೆಗಳನ್ನು ಕೊಡುತ್ತಾ ಹಳ್ಳಿಯ ಯುವ ಜನತೆಯನ್ನು ಕೆಟ್ಟದ್ದಕ್ಕೆ ಬೆನ್ನು ತಟ್ಟುವಂತಹ ಕಾರ್ಯವನ್ನು ಮಾಡದೆ, ಹಳ್ಳಿಗಳನ್ನು ಕಟ್ಟುವುದರ ಮೂಲಕ ದೇಶವನ್ನು ಕಟ್ಟಿರೆಂದು ಹೇಳುತ್ತಾರೆ. ಹಳ್ಳಿಗಳಲ್ಲಿ ಇಂದು ಯುವಕರೆನಿಸಿಕೊಂಡವರು ಕೆಲವರು ಮಾಡುತ್ತಿರುವ ಕೆಟ್ಟ ರಾಜಕೀಯ ಕೆಲಸಗಳನ್ನು ಧೈರ್ಯವಾಗಿ ಎತ್ತಿ ಆಡುತ್ತಾರೆ. ಆಗ ಯಾರೂ ಸಹ ತುಟಿಪಿಟಿಕ್ಕೆನ್ನುವುದಿಲ್ಲ ಇದಕ್ಕೇ ಇವರನ್ನು ಒಳ್ಳೆಯ ದಳಪತಿಯೆನ್ನುವುದು.

ಹಿರಿಯರಲ್ಲಿ ಹಿರಿಯರಾಗಿ, ಕಿರಿಯರಲ್ಲಿ ಕಿರಿಯರಾಗಿ ನಡೆದುಕೊಳ್ಳುವ ಶ್ರೀ ಗೌಡರು ಎಂದೂ ಯಾರಿಗೂ ಮನ ನೋಯುವಂತೆ ಮಾತನಾಡುವುದಿಲ್ಲ. ಸಾರ್ವಜನಿಕರನ್ನಷ್ಟೆ ಏಕೆ, ತಮ್ಮ ಮೊಮ್ಮಕ್ಕಳನ್ನೂ ಏನಪ್ಪ ಏನಣ್ಣ ಎಂದೇ ಮಾತ ಮಾತನಾಡಿಸುವ ಇವರು ಹಿರಿಯ ಕಿರಿಯರ ಮನ ಗೆಲ್ಲುತ್ತಾರೆ. ಜೀವನದಲ್ಲಿ ಶಿಸ್ತು ಸಂಯಮಕ್ಕೆ ಸಜ್ಜನಿಕೆಗೆ ಹೆಸರಾದವರು. ಶ್ರೀಮಂತಿಕೆಯಿದ್ದವರೆಲ್ಲಾ ಸುಸಂಸ್ಕೃತರಾಗಿರುವುದಿಲ್ಲ. ಐಶ್ವರ್ಯವಿದ್ದರೂ ಇವರು ಸುಸಂಸ್ಕೃತರಾಗಿದ್ದಾರೆ. ರಾಜಕಾರಣದಲ್ಲಿ ಸುಳ್ಳು ಹೇಳುವುದು, ಕುತಂತ್ರ ನಡೆಸುವುದರಲ್ಲಿ ಇವರು ಭಾಗಿಯಾಗುವುದಿಲ್ಲ. ಜೊತೆಗೆ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಶ್ರೀ ಎಂ. ಎಸ್. ಜೋಯಿಸರವರು ಹೇಳುವಂತೆ ರಾಜಕಾರಣಗಳಲ್ಲಿರಬಹುದಾದ ಕೆಟ್ಟ ಚಾಳಿಗಳಿಲ್ಲ. ತಮ್ಮ ಶ್ರೀಮಂತಿಕೆ ದುರುಪಯೋಗಕ್ಕಂತೂ ಸಿದ್ಧರಿಲ್ಲದ ಶ್ರೀ ಸಿಂಗಾರಿಗೌಡರ ಜೀವನ ಎಲ್ಲಾ ರೀತಿಯಿಂದಲೂ ಎಲ್ಲರಿಗೂ ಸಹ ಅನುಕರಣೀಯವಾದುದು.

ಕೌಡ್ಲೆ ಚನ್ನಪ್ಪ

ಮಂಡ್ಯ ಜಿಲ್ಲೆಯ ರಾಜಕೀಯ ಕೊಡುಗೆ

(ಭಾಗ ಎರಡು)

ಪ್ರಾಚೀನ ರಾಜಕೀಯ ಕೊಡುಗೆ

ಮಂಡ್ಯ ಜಿಲ್ಲೆಯ ಸಂಕ್ಷಿಪ್ತ ಇತಿಹಾಸ

ಗಂಗರು

ರಾಷ್ಟ್ರಕೂಟರು

ಚೋಳರು

ಹೊಯ್ಸಳರು

ವಿಜಯನಗರದ ಅರಸರು

ಮೈಸೂರು ಅರಸರು

ಸ್ಥಾನಿಕ ಪ್ರಭುಗಳು

ಹೈದರಾಲಿ–ಟಿಪ್ಪು

ಮಂಡ್ಯ ಜಿಲ್ಲೆಯ ಸಂಕ್ಷಿಪ್ತ ಇತಿಹಾಸ

ಒಂದು ಜಿಲ್ಲೆಯಾಗಿ ಮುವತ್ತೈದು ವರ್ಷಗಳ ಹಿಂದೆ ರೂಪಗೊಂಡ ಮಂಡ್ಯ ಜಿಲ್ಲೆಯು ಕರ್ನಾಟಕದ ಇತರ ಪ್ರಮುಖ ಜಿಲ್ಲೆಗಳಷ್ಟೇ ಪ್ರಾಚೀನವಾದ ಪ್ರಾದೇಶಿಕ ಇತಿಹಾಸವನ್ನು ಹೊಂದಿದೆ. 1939ನೇ ಜುಲೈ ಒಂದರಂದು, ಆ ವೇಳೆಗೆ ನಿರ್ಮಿತ ವಾಗಿದ್ದ ಕೃಷ್ಣರಾಜಸಾಗರ ಮತ್ತು ಇರ್ವಿನ್ ನಾಲೆಯ ಆಡಳಿತ ನಿರ್ವಹಣೆ ಮತ್ತು ಈ ಪ್ರದೇಶದ ಮುಖಂಡರ ಕ್ರಿಯಾಶೀಲ ಚಟುವಟಿಕೆಗಳಿಂದಾಗಿ ಮೈಸೂರು ಜಿಲ್ಲೆಯಿಂದ ಬೇರ್ಪಟ್ಟು ಮಂಡ್ಯವು ಪ್ರತ್ಯೇಕ ಜಿಲ್ಲೆಯಾಗಿ ವಿಂಗಡಣೆಯಾಯಿತು. ಈ ಮಂಡ್ಯಜಿಲ್ಲೆಯು, ಮಂಡ್ಯ, ಮದ್ದೂರು, ನಾಗಮಂಗಲ, ಕೃಷ್ಣರಾಜಪೇಟೆ, ಪಾಂಡವಪುರ, ಶ್ರೀರಂಗಪಟ್ಟಣ. ಮತ್ತು ಮಳವಳ್ಳಿ ತಾಲ್ಲೂಕುಗಳಿಂದ ಕೂಡಿದೆ. ಈಚಿನ ಅಂಕಿ ಸಂಖ್ಯೆಗಳ ಪ್ರಕಾರ ಮಂಡ್ಯ ಜಿಲ್ಲೆಯು 1333 ಗ್ರಾಮಗಳನ್ನು ಹೊಂದಿದೆ.

ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿರುವ ಮಂಡ್ಯವು ಜಿಲ್ಲೆಯ ಮುಖ್ಯ ಕೇಂದ್ರ. ಮಂಡ್ಯ ಎಂಬ ಹೆಸರಿನ ಉಗಮಕ್ಕೆ ಸಂಬಂಧಿಸಿದಂತೆ ಅನೇಕ ಸ್ವಾರಸ್ಯಕರ ವಾದ ಐತಿಹ್ಯಗಳಿವೆ. ಸ್ಥಳ ಪುರಾಣಗಳು ಈ ಪ್ರದೇಶದ ಇತಿಹಾಸವನ್ನು ಕೃತ ಯುಗಕ್ಕೆ ಕೊಂಡೊಯ್ಯುತ್ತವೆ. ಆಗ ಈ ಪ್ರದೇಶವು ಅರಣ್ಯಮಯವಾಗಿತ್ತೆಂದೂ ಇಲ್ಲಿ ತಪಸ್ಸಿನಲ್ಲಿ ತೊಡಗಿದ್ದ ಮುನಿಯೊಬ್ಬನು ಜನಾರ್ಧನ ಅಥವಾ ವರದರಾಜ ಸ್ವಾಮಿಯ ಮೂರ್ತಿಯನ್ನು ಸ್ಥಾಪಿಸಿ ದೇವಾಲಯ ಕಟ್ಟಿಸಿದನೆಂದೂ ಹಾಗೂ ವನ್ಯ ಪ್ರಾಣಿಗಳಿಗೂ ವೇದಾಧ್ಯಯನ ಮಾಡಿಸುತ್ತಿದ್ದನೆಂದೂ ಆದ್ದರಿಂದ ಈ ಸ್ಥಳಕ್ಕೆ ವೇದಾ ರಣ್ಯವೆಂಬ ಅಭಿದಾನವಿತ್ತಿದ್ದನೆಂದೂ ಉಲ್ಲೇಖಿಸಲಾಗಿದೆ. ಮತ್ತೊಂದು ಹೇಳಿಕೆಯ ಪ್ರಕಾರ ಅದೇ ಕೃತಯುಗದಲ್ಲಿ ಶತಮಾನಗಳ ಅವಧಿಯಲ್ಲಿ ಮತ್ತೊಬ್ಬ ಋಷಿಯು ಅದೇ ಸ್ಥಳದಲ್ಲಿ ತಪಸ್ಸನ್ನಾಚರಿಸುತ್ತಿದ್ದು ಸಕಲೇಶ್ವರ ಸ್ವಾಮಿಯನ್ನು ಸ್ಥಾಪಿಸಿದ ನೆಂದೂ, ಹಾಗೂ ಶ್ರೀಮನ್ಮಹಾವಿಷ್ಣುವು ಅವನ ಕನಸಿನಲ್ಲಿ ಗೋಚರಿಸಿದುದರಿಂದ ಆ ತಾಪಸಿಯು ವಿಷ್ಣುವಿನ ಮೂರ್ತಿಯನ್ನು ಸ್ಥಾಪಿಸಿದುದಲ್ಲದೆ ವಿಷ್ಣುಪುರ ಎಂಬ ಹೆಸರನ್ನು ಕೊಟ್ಟನೆಂದೂ ತಿಳಿದುಬರುತ್ತದೆ. ಇನ್ನೊಂದು ಹೇಳಿಕೆಯ ಪ್ರಕಾರ ಅದೇ ಯುಗದಲ್ಲಿ ಇಂದ್ರವರ್ಮ ಎಂಬ ರಾಜನು ಸಂತಾನಾಪೇಕ್ಷೆಯಿಂದ ಈ ಸ್ಥಳಕ್ಕೆ ಬಂದು ಪೂಜಾ ಕೈಂಕರ್ಯದಲ್ಲಿ ತೊಡಗಿದನು. ಅವನ ಭಕ್ತಿಯ ಫಲವಾಗಿ ಅವನಿಗೆ ವಂಶೋ

ದ್ವಾರಕನಾದ ಪುತ್ರನು ಜನಿಸಿದನು. ಆ ಮಗುವಿಗೆ ಸೋಮವರ್ಮ ಎಂದು ಹೆಸರಾಯಿತು. ಸೋಮವರ್ಮನು ಈ ಸ್ಥಳವನ್ನು ಒಂದು ಅಗ್ರಹಾರವಾಗಿ ಪರಿವರ್ತಿಸಿ ಒಂದು ಕೋಟೆಯನ್ನು ಕಟ್ಟಿಸಿ ಮಂಡೇಮು ಎಂಬ ಹೆಸರನ್ನು ಕೊಟ್ಟನೆಂದೂ ಮಂಡೇಮು ಎಂಬುದರಿಂದಲೇ ಕ್ರಮೇಣ ಮಂಡ್ಯ ಎಂಬ ಹೆಸರು ಬಂದಿತೆಂದೂ ಹೇಳಲಾಗಿದೆ. ಇನ್ನೂ ಒಂದು ಐತಿಹ್ಯದ ಪ್ರಕಾರ : ಪ್ರಾಚೀನ ಕಾಲದಲ್ಲಿ ಈ ಸ್ಥಳದಲ್ಲಿ ಮಾಂಡವ್ಯ ಎಂಬ ಮಹರ್ಷಿಯು ತಪಸ್ಸು ಮಾಡುತ್ತಿದ್ದನೆಂದೂ ಜನಪ್ರಿಯವಾದ ಋಷಿಯ ಹೆಸರಿನಿಂದ ಈ ಗ್ರಾಮಕ್ಕೆ ಮಂಡ್ಯ ಎಂದು ಹೆಸರಾಯಿತೆಂದು ತಿಳಿದು ಬರುತ್ತದೆ.

ಹದಿನಾರನೇ ಶತಮಾನದ ಶಾಸನಗಳು ಮಂಡ್ಯ ಎಂಬ ಹೆಸರಿಗೆ ಸಂಬಂಧಿಸಿದ ಐತಿಹಾಸಿಕ ದಾಖಲೆಯನ್ನೊದಗಿಸುತ್ತವೆ. ಕ್ರಿ. ಶ. 1516ರಲ್ಲಿ ಶ್ರೀ ರಾಮಾನುಜಾಚಾರ್ಯರ ಅನುಯಾಯಿ ಅನಂತಾಚಾರ್ಯರ ಪರಂಪರೆಯಲ್ಲಿ ಹನ್ನೆರಡನೆಯವರಾದ ಗೋವಿಂದಾಚಾರ್ಯ ಎಂಬುವರು, ವಿಜಯನಗರದ ಕೃಷ್ಣದೇವರಾಯನ ಪ್ರೋತ್ಸಾಹದಿಂದ ತಿರುಪತಿಯ ಬಳಿಯ ಮಂಡ್ಯ. ಎಂಬ ಗ್ರಾಮದಿಂದ ಇನ್ನೂ ಹಲವು ಶ್ರೀವೈಷ್ಣವ ಕುಟುಂಬಗಳೊಡನೆ ಹೊರಟು ಬಂದು ಇಲ್ಲಿ ನೆಲಸಿದರು. ತಮ್ಮ ಮೂಲ ಗ್ರಾಮದ ಸ್ಮರಣಾರ್ಥವಾಗಿ ತಾವು ಹೊಸದಾಗಿ ಬಂದು ನೆಲಸಿದ ಈ ಗ್ರಾಮವನ್ನೂ ಮಂಡ್ಯ. ಎಂಬ ಹೆಸರಿನಿಂದ ಕರೆದರು. ಕೃಷ್ಣದೇವರಾಯನು ಈ ಗ್ರಾಮವನ್ನು ಅಗ್ರಹಾರವಾಗಿ ಪರಿವರ್ತಿಸಿ ಅವರಿಗೆ ಮಾನ್ಯವಾಗಿ ನೀಡಿದನು. ಈ ಗ್ರಾಮವು ಟಿಪ್ಪು ಸುಲ್ತಾನನ ಕಾಲದವರೆಗೂ ಶ್ರೀ ವೈಷ್ಣವರ ಅಗ್ರಹಾರವಾಗಿ ಮುಂದುವರಿಯಿತು. ಐತಿಹಾಸಿಕವಾಗಿ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಈ ಸ್ಥಳಕ್ಕೆ ಮಂಡ್ಯ ಎಂಬ ಹೆಸರು ಬಂದಿತಾದರೂ ಈ ಗ್ರಾಮವು ಬಹು ಪ್ರಾಚೀನ ಕಾಲದಲ್ಲೇ ಸ್ಥಾಪಿತವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಟ್ಟಿತ್ತೆಂದೂ ಹಾಗೂ ಇದು ಶ್ರೀವೈಷ್ಣವ ಅಗ್ರಹಾರವಾಗಿ ಮಾರ್ಪಡುವ ಹಿಂದೆ ಶೈವ ಮತ್ತು ವೈಷ್ಣವ ಸಂಪ್ರದಾಯಾವಲಂಬಿಗಳಿಂದ ಕೂಡಿತ್ತೆಂದೂ ಸ್ಥಳಪುರಾಣಗಳಲ್ಲಿ ದೊರೆಯುವ ಮಾಹಿತಿಯಿಂದ ಮನವರಿಕೆಯಾಗುತ್ತದೆ. ಪ್ರಾಚೀನ ಕಾಲದಲ್ಲಿ ಕಾಲಕ್ರಮವಾಗಿ ತಲಕಾಡಿನ ಗಂಗರ, ದೋರಸಮುದ್ರದ ಹೊಯ್ಸಳರ ಮತ್ತು ವಿಜಯನಗರ ಸಾಮ್ರಾಜ್ಯದ ಆಡಳಿತಕ್ಕೊಳಪಟ್ಟಿದ್ದ ಮಂಡ್ಯ ಜಿಲ್ಲೆಯು ಅನೇಕ ಐತಿಹಾಸಿಕ ಸ್ಥಳಗಳನ್ನೂ, ಧಾರ್ಮಿಕ ಕ್ಷೇತ್ರಗಳನ್ನೂ, ಉಪಯುಕ್ತ ನದಿಗಳನ್ನೂ ಮತ್ತು ನೈಸರ್ಗಿಕ ರಮಣೀಯ ದೃಶ್ಯಗಳನ್ನು ಒಳಗೊಂಡಿದೆ.

ಕ್ರಿ. ಪೂ. ಶತಮಾನಗಳ ಇತಿಹಾಸಕ್ಕೆ ಸಂಬಂಧಿಸಿದ ಮಾಹಿತಿಗಳು ದೊರೆತಿಲ್ಲವಾದರೂ ಈ ಪ್ರದೇಶವು ಕರ್ನಾಟಕದ ಇತರ ಭಾಗಗಳಂತೆ ಶಿಲಾಯುಗದ ನಾಗರಿಕತೆಯನ್ನು ದಾಟಿ ಇತಿಹಾಸ ಯುಗಕ್ಕೆ ಮುಂದುವರಿದ ಅನೇಕ ಕುರುಹುಗಳು ದೊರೆತಿವೆ. ಕಾವೇರಿ ಮತ್ತು ಹೇಮಾ ನದಿಗಳ ಬಯಲಿನಲ್ಲಿ ಜನರು ನೆಲೆನಿಂತು ವ್ಯವಸಾಯ ಪಶು

ಪಾಲನೆಯನ್ನು ಮುಂದುವರಿಸಿಕೊಂಡು ಬಂದರು. ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರದ ಬಳಿಯ ಹೆಮ್ಮಿಗೆಯಲ್ಲಿ ನಡೆದ ಪ್ರಾಚ್ಯ ಸಂಶೋಧನೆಗಳು ಮೇಲ್ಕಂಡ ಸಂಗತಿಯನ್ನು ಪುಷ್ಟೀಕರಿಸುತ್ತವೆ. ಕ್ರಿ. ಪೂ. ಶತಮಾನಗಳಲ್ಲಿ ದಕ್ಷಿಣ ಭಾರತದ ಇತರ ಭಾಗಗಳಂತೆ ಆರ್ಯರ ನಾಗರೀಕತೆಯು ಈ ಪ್ರದೇಶದಲ್ಲೂ ಪ್ರಸಾರವಾಯಿತು. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ. ಕನ್ನಂಬಾಡಿ (ಕೃಷ್ಣರಾಜಸಾಗರ), ಮದ್ದೂರು, ಮೇಲ್ಕೋಟೆ, ಮಂಡ್ಯ ಮತ್ತು ಇತರ ಪಟ್ಟಣಗಳ ಸ್ಥಳಪುರಾಣಗಳ ಪ್ರಕಾರ ವೈದಿಕಯುಗದ ಉತ್ತರಾರ್ಧ ಮತ್ತು ಮಹಾಕಾವ್ಯಗಳ ಕಾಲದಲ್ಲಿ ಈ ಪ್ರದೇಶಗಳಲ್ಲಿ ಉತ್ತರದಿಂದ ಬಂದ ಗೌತಮ, ಕದಂಬ. ಕಣ್ವ. ಮಾಂಡವ್ಯ ಮೊದಲಾದ ಋಷಿಗಳು ಆಶ್ರಮಗಳನ್ನು ಸ್ಥಾಪಿಸಿಕೊಂಡಿದ್ದರೆಂದು ವೇದ್ಯವಾಗುತ್ತದೆ. ಇಂದಿನ ಮದ್ದೂರು ಪಟ್ಟಣಕ್ಕೆ ಆ ಕಾಲದಲ್ಲಿ ಅರ್ಜುನಪುರಿ ಎಂಬುದಾಗಿ ಹೆಸರಾಗಿತ್ತೆಂದೂ ಅರ್ಜುನನು ಕೃಷ್ಣನೊಡನೆ ಈ ಸ್ಥಳಕ್ಕೆ ಭೇಟಿ ನೀಡಿದ್ದನೆಂದೂ ಪ್ರತೀತಿ ಇದೆ. ಮೌರ್ಯರ ಮತ್ತು ಶಾತವಾಹನರ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶದಲ್ಲಿ ಸಣ್ಣಪುಟ್ಟ ಸಾಮಂತರು ಆಳುತ್ತಿದ್ದರೆಂದು ಊಹಿಸಲಾಗಿದೆ.

ಕ್ರಿ.ಶ. ನಾಲ್ಕನೇ ಶತಮಾನದ ಪ್ರಾರಂಭದಲ್ಲಿ ತಲಕಾಡಿನ ಗಂಗರಾಜ್ಯವು ಸ್ಥಾಪನೆಯಾಯಿತು. ಗಂಗ ಮನೆತನದ ಪ್ರಭುಗಳು ಕ್ರಿ.ಶ. 11ನೇ ಶತಮಾನದ ಪ್ರಾರಂಭದವರೆಗೂ ಗಂಗವಾಡಿ 96000 ಎಂದು ಪ್ರಸಿದ್ಧವಾಗಿದ್ದ ಕನ್ನಡ ನಾಡಿನ ದಕ್ಷಿಣ ಭಾಗವನ್ನು ವಿಚಕ್ಷಣತೆಯಿಂದ ಆಳಿದರು. ಏಳು ಶತಮಾನಗಳ ದೀರ್ಘ ಆಳ್ವಿಕೆಯ ಕಾಲದಲ್ಲಿ ಈ ಸಂತತಿಯ ಸುಮಾರು ಮೂವತ್ತುಮಂದಿ ರಾಜರು ಕ್ರಮವಾಗಿ ಆಳ್ವಿಕೆ ನಡೆಸಿದರು. ಇವರಲ್ಲಿ ಮಾಧವ. ಹರಿವರ್ಮ, ಅವನೀತ, ದುರ್ವಿನೀತ, ಭೂವಿಕ್ರಮ, ಮುತ್ತರಸ, ಶ್ರೀಪುರುಷ. ಶಿವಮಾರ, ರಾಜಮಲ್ಲ. ಭೂತುಗ ಮತ್ತು ಮಾರಸಿಂಹ ಮೊದಲಾದವರು ಅತ್ಯಂತ ಪ್ರಖ್ಯಾತರು. ಮಂಡ್ಯ ಪ್ರದೇಶವು ಸರಿಸುಮಾರಾಗಿ ಗಂಗ ರಾಜ್ಯದ ಕೇಂದ್ರಪ್ರಾಂತ್ಯವಾಗಿತ್ತು. ಮದ್ದೂರು ಮತ್ತು ಸುತ್ತಮುತ್ತಲ ಪ್ರದೇಶಕ್ಕೆ ಚಿಕ್ಕಗಂಗವಾಡಿ ಎಂಬ ಹೆಸರಿತ್ತು. ಪರಾಕ್ರಮಿಗಳೂ ಆಡಳಿತನಿಪುಣರೂ ಮತ್ತು ಪ್ರಜಾಭ್ಯುದಯಾಕಾಂಕ್ಷಿಗಳೂ ಆದ ಗಂಗರ ಆಳ್ವಿಕೆಯಲ್ಲಿ ಅವರ ರಾಜ್ಯವು ಸುಭಿಕ್ಷದಿಂದ ಕೂಡಿದ್ದು ಅವರ ರಾಜ್ಯಕ್ಕೆ "ಸಿರಿರಾಜ್ಯ" ಎಂಬ ಹೆಸರೂ ಇದ್ದಿತು. "ದಕ್ಷಿಣ ರಾಜ್ಯ ಸಂರಕ್ಷಣ ದಕ್ಷರೆಂದು ಬಿರುದು ಹೊಂದಿದ್ದ ಗಂಗಪ್ರಭುಗಳು ತಮ್ಮ ರಾಜ್ಯದಲ್ಲಿ ದೇವಾಲಯಗಳನ್ನೂ ನೀರಾವರಿ ಕಾಲುವೆಗಳನ್ನೂ, ಕೆರೆ ಕಟ್ಟೆಗಳನ್ನೂ, ಕಟ್ಟಿಸಿದ್ದರು. ಮಂಡ್ಯ ಜಿಲ್ಲೆಯಲ್ಲಿ ಅವರ ಕಾಲದ ಅನೇಕ ಶಾಸನಗಳು ದೊರೆತಿವೆ. ಒಂದು ಶಾಸನವು ಈ ಜಿಲ್ಲೆಯ ನದಿಯೊಂದಕ್ಕೆ ಗಂಗರಾಜನೊಬ್ಬನು ಕಟ್ಟಿಸಿದ ಸೇತುವೆಯನ್ನು ಉಲ್ಲೇಖಿಸುತ್ತದೆ.

ಶ್ರೀರಂಗಪಟ್ಟಣ, ಮೇಲ್ಕೋಟೆ ಮೊದಲಾದ ಸ್ಥಳಗಳು ಗಂಗರ ಕಾಲದಲ್ಲಿ

ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಾಗಿದ್ದವು. ಕ್ರಿ. ಶ. 9ನೇ ಶತಮಾನದ ಮಧ್ಯಭಾಗದ ವರೆಗೂ ಆಳಿದ ಗಂಗರಾಜರು ಹಿಂದೂ ಮತಾವಲಂಬಿಗಳಾಗಿದ್ದು ಅನೇಕ ಸ್ಥಳಗಳಲ್ಲಿ ದೇವಾಲಯಗಳನ್ನು ಕಟ್ಟಿದರು. ಆದರೆ ಅವರ ಕಾಲದಲ್ಲಿ ಕಟ್ಟಲಾದ ದೇವಾಲಯ ಗಳು ಶಿಥಿಲಗೊಂಡು ಅನಂತರ ರಾಜವಂಶಗಳ ಕಾಲದಲ್ಲಿ ಪುನರ್‌ನಿರ್ಮಾಣಗೊಂಡವು. ಶ್ರೀರಂಗನಾಥಸ್ವಾಮಿ ಮತ್ತು ಜನಾರ್ಧನ ದೇವಾಲಯಗಳು ಮೂಲತಃ 9ನೇ ಶತಮಾನದಲ್ಲಿ ಗಂಗರ ದಳಪತಿಯೊಬ್ಬನಾದ ತಿರುಮಲದಂಡನಾಯಕನಿಂದ ಕಟ್ಟ ಲ್ಪಟ್ಟಿದ್ದು ಅನಂತರ ವಿಕಾಸಗೊಂಡವು.

ರಾಷ್ಟ್ರಕೂಟರ ಸಹಾಯಕ್ಕೆ ಧಾವಿಸಿದ ಗಂಗಪ್ರಭು ಇಮ್ಮಡಿ ಭೂತುಗನು ಚೋಳ ರಾಜ್ಯವನ್ನು ಮುತ್ತಿ ಪರಾಕ್ರಮದಿಂದ ಹೋರಾಡಿ ತಕ್ಕೋಲಂ ಎಂಬ ಯುದ್ಧದಲ್ಲಿ ಚೋಳ ಪರಾಂತಕನ ಸೈನ್ಯವನ್ನು ಸೋಲಿಸಿದುದಲ್ಲದೆ ಅವನ ಹಿರಿಯ ಮಗನಾದ ರಾಜಾದಿತ್ಯನನ್ನು ಯುದ್ಧದಲ್ಲಿ ಕೊಂದು ಕೋದಂಡರಾಮ ಎಂಬ ಬಿರುದನ್ನು ಧರಿಸಿ ದನು. ಭೂತುಗನ ನಂತರ ನಾಲ್ಕನೇ ರಾಜಮಲ್ಲ ಮತ್ತು ರಕ್ಕಸ ಗಂಗರು ಆಳಿದರು. ರಾಜಮಲ್ಲನ ಮಂತ್ರಿಯಾದ ಚಾವುಂಡರಾಯನು ಅನೇಕ ಜೈನ ಬಸದಿಗಳನ್ನು ಗಂಗಾ ವಾಡಿಯಲ್ಲಿ ಕಟ್ಟಿಸಿದುದಲ್ಲದೆ ಶ್ರವಣಬೆಳಗೊಳದ ಬೃಹತ್ ಗೊಮ್ಮಟವಿಗ್ರಹವನ್ನು ಕೆತ್ತಿಸಿದನು. ರಕ್ಕಸಗಂಗನ ಆಳ್ವಿಕೆ ಕಾಲದಲ್ಲಿ ತಮಿಳುನಾಡಿನ ಚೋಳರು ಪ್ರಬಲರಾಗಿ ಗಂಗವಾಡಿಯನ್ನು ಕ್ರಿ. ಶ. 1400ರಲ್ಲಿ ಆಕ್ರಮಿಸಿದರು. ಗಂಗವಾಡಿಯು ಚೋಳರ ವಶವಾದರೂ ರಕ್ಕಸಗಂಗನು 1024ರ ವರೆಗೂ ಅಧೀನರಾಜನಾಗಿ ಆಳುತ್ತಿದ್ದನೆಂದು ಮಂಡ್ಯ ತಾಲ್ಲೂಕಿನ ಹಳೆಬೂದನೂರಿನಲ್ಲಿ ದೊರೆತಿರುವ ಅವನ ಶಾಸನವೊಂದರಿಂದ ತಿಳಿದು ಬರುತ್ತದೆ. ಹಲವಾರು ಶತಮಾನಗಳ ಕಾಲ ಮಂಡ್ಯ ಜಿಲ್ಲೆಯು ಗಂಗವಾಡಿಯ ಭಾಗವಾಗಿತ್ತು. ಗಂಗ ಮನೆತನವು ಅಳಿದ್ದಾಗ್ಯೂ ಅವರ ಆಳ್ವಿಕೆಯನ್ನು ಸಾರುವ ಸ್ಮಾರಕಗಳು ಮತ್ತು ಆ ಕಾಲದ ಹಲವು ಉನ್ನತ ಸಾಮಾಜಿಕ. ರಾಜಕೀಯ ಪದ್ಧತಿ ಗಳು ಉಳಿದು ಬಂದಿವೆ. ಅವರ ಕಾಲದಲ್ಲಿ ಸ್ಥಾಪನೆಯಾದ ಅನೇಕ ಗ್ರಾಮಗಳು ಚಿಕ್ಕ ಗಂಗವಾಡಿ ಮತ್ತು ದೊಡ್ಡಗಂಗವಾಡಿ ಎಂಬ ಹೆಸರಿನಿಂದ ಇಂದಿಗೂ ಇವೆ. ಗಂಗರಾಜ ವಂಶದ ಹಾಗೂ ಗಂಗವಾಡಿಯ ಮೂಲದಿಂದಲೇ ಒಕ್ಕಲಿಗರ ಗಂಗಡಿಕಾರ ಪಂಗಡವು ಪ್ರಚಲಿತಕ್ಕೆ ಬಂದಿತೆಂದು ವಿದ್ವಾಂಸರು ಅನುಮೋದಿಸಿದ್ದಾರೆ. ಗಂಗರ ಮುಖ್ಯ ಸಂತತಿಯು ಅಳಿದ ಮೇಲೆ ಗಂಗಾವಾಡಿಯ ಮೇಲೆ ಚೋಳರ ಆಳ್ವಿಕೆಯು ಕ್ರಿ. ಶ. 1114 ರವರೆಗೂ ಮುಂದುವರಿಯಿತು. ಮಂಡ್ಯಜಿಲ್ಲೆಯೂ ಸಹ ಚೋಳರ ಆಳ್ವಿಕೆಗೊಳಪಟ್ಟಿತ್ತು.

ಕ್ರಿ. ಶ. 11ನೇ ಶತಮಾನದ ವೇಳೆಗೆ ದೋರಸಮುದ್ರದ ಹೊಯ್ಸಳರು ತಮ್ಮ ಪ್ರಾಬಲ್ಯವನ್ನು ವಿಸ್ತರಿಸಿದರು. ಈ ಸಂತತಿಯ ಮೊದಲನೇ ಪ್ರಮುಖ ರಾಜನಾದ ಇಮ್ಮಡಿ ವಿನಯಾದಿತ್ಯನು (1048–1100) ಕನ್ನಂಬಾಡಿಯವರೆಗೂ

ರಾಜ್ಯ ವಿಸ್ತರಿಸಿದನು, ಮೇಲ್ಕೋಟೆ, ಶ್ರೀರಂಗಪಟ್ಟಣಗಳೂ ಅವನ ಆಡಳಿತಕ್ಕೊಳ ಪಟ್ಟಿದ್ದವು. ಅವನ ಮೊಮ್ಮಗನಾದ ವಿಷ್ಣುವರ್ಧನನು ಬಾಲ್ಯದಲ್ಲಿ ಈ ಪ್ರಾಂತ್ಯದ ರಾಜ್ಯಪಾಲಕನಾಗಿದ್ದು ಕ್ರಿ. ಶ. 1096 ರಲ್ಲಿ ಬೆಳಗೊಳದ ಸೀತಾರಾಮ ದೇವಸ್ಥಾನಕ್ಕೆ ದತ್ತಿ ನೀಡಿ ಈ ಗ್ರಾಮವನ್ನು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ನೀಡಿದನು. ಈ ಪ್ರದೇಶವನ್ನು ಆಗ ಶ್ರೀ ವಿಷ್ಣುವರ್ಧನ ಚತುರ್ವೇದಿ ಮಂಗಲ ಎಂದು ಕರೆದ.

ವಿಷ್ಣುವರ್ಧನನು ಕ್ರಿ. ಶ. 1108 ರಿಂದ 1142 ರವರೆಗೂ ಆಳಿದನು. ತನ್ನ ಅಮಾತ್ಯನೂ ಪ್ರತಾಪಿಯೂ ಆದ ಗಂಗರಾಜನ ನೆರವಿನಿಂದ 1114 ರಲ್ಲಿ ಚೋಳರ ಮೇಲೆ ಯುದ್ಧ ಘೋಷಿಸಿ ತಲಕಾಡನ್ನು ಆಕ್ರಮಿಸಿ ಗಂಗವಾಡಿಯ ಮೇಲಿನ ಚೋಳರ ಆಳ್ವಿಕೆಯನ್ನು ಕೊನೆಗಾಣಿಸಿದನು. ಗಂಗವಾಡಿ ನೊಳಂಬವಾಡಿ ಹಾಗೂ ಕೋಗುನಾಡಿನ ಮೇಲೆ ಹೊಯ್ಸಳರ ಅಧಿಕಾರವು ಸ್ಥಾಪಿತವಾಗಿ ಮಂಡ್ಯ ಜಿಲ್ಲೆಯು ಹೊಯ್ಸಳ ರಾಜ್ಯದ ಭಾಗವಾಯಿತು. ವಿಷ್ಣುವರ್ಧನನ ಆಳ್ವಿಕೆಯಲ್ಲಿ ಮಂಡ್ಯ ಜಿಲ್ಲೆಯೂ ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಹೆಚ್ಚು ಮಹತ್ವ ಪೊಂದಿದೆ. ಸುಪ್ರಸಿದ್ಧ ತತ್ವವೇತ್ತರೂ, ಧರ್ಮಸುಧಾರಕರೂ ಆದ ಶ್ರೀರಾಮಾನುಜಾಚಾರ್ಯರೂ ಚೋಳರಾಜನ ಮತೀಯ ವೈಷಮ್ಯದಿಂದ ನೆಮ್ಮದಿ ಯನ್ನರಸುತ್ತ ಕನ್ನಡನಾಡಿಗೆ ಬಂದರು. ಅವರು ಸಾಲಿಗ್ರಾಮ, ತೊಂಡನೂರು ಮತ್ತು ಮೇಲ್ಕೋಟೆಯಲ್ಲಿ ಸುಮಾರು 20 ವರ್ಷಗಳ ಕಾಲ ತಂಗಿದ್ದರು. ವಿಷ್ಣು ವರ್ಧನನು ಅವರಿಗೆ ಆಶ್ರಯ ನೀಡಿ ಅವರು ತಮ್ಮ ಧರ್ಮಪ್ರಚಾರ ಮಾಡಲು ಸಹಕಾರಿಯಾದನು.

ಜನಜನಿತವಾಗಿರುವ ನಂಬಿಕೆಯ ಪ್ರಕಾರ ವಿಷ್ಣುವರ್ಧನನು ಪ್ರಾರಂಭದಲ್ಲಿ ಜೈನಧರ್ಮಾವಲಂಬಿಯಾಗಿದ್ದು ಶ್ರೀರಾಮಾನುಜಾಚಾರ್ಯರು ಇಲ್ಲಿಗೆ ಆಗಮಿಸಿದ ನಂತರ ಅವರಿಂದ ವೈಷ್ಣವಪಂಥಕ್ಕೆ ಪರಿವರ್ತನೆಗೊಂಡನೆಂದು ತಿಳಿದು ಬರುತ್ತದೆ. ವಿಷ್ಣುವರ್ಧನನ ಕಾಲದಲ್ಲಿ ಬೇಲೂರು ತಲಕಾಡು ದೊಡ್ಡಗದ್ದವಳ್ಳಿ ದೋರ ಸಮುದ್ರಗಳಲ್ಲಿಯೂ ಮಂಡ್ಯ ಜಿಲ್ಲೆಯ ತೊಂಡನೂರು ಮತ್ತು ಮೇಲ್ಕೋಟೆ ಯಲ್ಲಿಯೂ ಸುಂದರವಾದ ದೇವಮಂದಿರಗಳು ನಿರ್ಮಾಣವಾದವು. ಶ್ರೀರಂಗಪಟ್ಟಣ ಮತ್ತು ಮೇಲ್ಕೋಟೆಯ ದೇವಾಲಯಗಳಿಗೂ ಧಾರ್ಮಿಕ ಸಂಸ್ಥೆಗಳಿಗೂ ಅನೇಕ ಉಂಬಳಿಗಳನ್ನು ವಿಷ್ಣುವರ್ಧನನು ಕೊಟ್ಟನು.

ವಿಷ್ಣುವರ್ಧನನ ಉತ್ತರಾಧಿಕಾರಿಯಾದ ಒಂದನೇ ನರಸಿಂಹನ ಶಾಸನವೊಂದು ಶ್ರೀರಂಗಪಟ್ಟಣದ ಸಮೀಪದ ಹರಹಿನ ಕಾಲುವೆಯನ್ನು ದುರಸ್ತಿಗೊಳಿಸಲು ಇನ್ನೂರು ಗದ್ಯಾಣವನ್ನು ಖರ್ಚು ಮಾಡಿದುದಲ್ಲದೆ ಅದರ ನಿರ್ವಹಣೆಗಾಗಿ ಭೂಮಿ ಯನ್ನು ಉಂಬಳಿಯಾಗಿ ನೀಡಿದನೆಂದು ತಿಳಿಸುತ್ತದೆ. ಆದ್ದರಿಂದ ನೀರಾವರಿ ವ್ಯವಸ್ಥೆಯು ಆ ವೇಳೆಗಾಗಲೇ ಏರ್ಪಟ್ಟಿತ್ತೆಂದು ತಿಳಿದು ಬರುತ್ತದೆ. ನರಸಿಂಹನು

ಮೇಲುಕೋಟೆಯ ತಿರುನಾರಾಯಣ ದೇವಾಲಯಕ್ಕೆ ದಾನದತ್ತಿಗಳನ್ನು ನೀಡಿದನು. ಅವನ ಕಾಲದ ಶಾಸನವೊಂದರಲ್ಲಿ ಮದ್ದೂರಿನ ಗ್ರಾಮಸಭೆಯು ಉಲ್ಲೇಖಿತವಿದೆ. ಅಲ್ಲದೆ ಅಲ್ಲಿ ಶಿಂಷಾ ನದಿಯ ದಡದಲ್ಲಿ ವಿಶೇಷವಾಗಿ ಕಬ್ಬನ್ನು ಬೆಳೆಯುತ್ತಿದ್ದರೆಂದೂ ಕಬ್ಬಿನ ಗಾಣಗಳ ಮೇಲೆ ಅಲೆಮರ ಎಂಬ ಸುಂಕ ವಿಧಿಸಲಾಗುತ್ತಿತ್ತೆಂದೂ ಮತ್ತೊಂದು ಶಾಸನದಿಂದ ತಿಳಿದು ಬರುತ್ತದೆ. ಅವನ ಮಗನಾದ ಇಮ್ಮಡಿ ವೀರ ಬಲ್ಲಾಳನ ಕಾಲದ (1173–1221) ಅನೇಕ ಶಾಸನಗಳು ಮಂಡ್ಯ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ದೊರೆತಿವೆ. ಕೃಷ್ಣರಾಜಪೇಟೆ (ಅತ್ತಿಗುಪ್ಪೆ) ತಾಲ್ಲೂಕಿನ ಜನರು ಬಲ್ಲಾಳನು ಸೇವುಣರ ಮೇಲೆ ನಡೆಸಿದ ಯುದ್ಧಗಳಲ್ಲಿ ಭಾಗವಹಿಸಿ ಪ್ರಚಂಡ ಜಯ ಗಳಿಸಿದ ಸಂಗತಿಯನ್ನು ಅಲ್ಲಿಯ ಶಾಸನಗಳು ಮನವರಿಕೆ ಮಾಡಿಕೊಡುತ್ತವೆ. ನಾಗಮಂಗಲ ಪ್ರದೇಶವನ್ನು ವೀರಬಲ್ಲಾಳ ಚತುರ್ವೇದಿ ಮಂಗಲ ಎಂಬ ಹೆಸರಿನಿಂದ ಕರೆಯಲಾಗಿತ್ತು. ಅವನ ಅಧಿಕಾರಿಯೊಬ್ಬನು ಬೆಳ್ಳೂರು ಬಳಿಯಲ್ಲಿ ಒಂದು ದೇವಾಲಯವನ್ನೂ ಕೆರೆಯನ್ನೂ ಕಟ್ಟಿಸಿ ಸಂತೆಯನ್ನು ಸ್ಥಾಪಿಸಿದನೆಂದು ಒಂದು ಶಾಸನವು ತಿಳಿಸುತ್ತದೆ. ನಾಗಮಂಗಲ ತಾಲ್ಲೂಕಿನ ಲಾಲನಕೆರೆಯ ಬಳಿಯ ಶಾಸನವೊಂದರಿಂದ ವೀರಬಲ್ಲಾಳನು ಚೋಳರಾಜನ ಸಹಾಯಕ್ಕೆ ತನ್ನ ಸೈನ್ಯವನ್ನು ಕಳುಹಿಸಿ ಪಾಂಡ್ಯರನ್ನು ಸೋಲಿಸಿ, ಚೋಳರಾಜ ಪ್ರತಿಷ್ಠಾಪನಾಚಾರ್ಯ ಮತ್ತು ಪಾಂಡ್ಯರಾಜ ಗಜಕೇಸರಿ ಎಂಬ ಬಿರುದನ್ನು ಧರಿಸಿದನೆಂದು ಗೊತ್ತಾಗುತ್ತದೆ. ಮಂಡ್ಯ ಜಿಲ್ಲೆಯು ಹೊಯ್ಸಳರ ಆಳ್ವಿಕೆಯ ಕೊನೆಯವರೆಗೂ ಅವರ ಸಾಮ್ರಾಜ್ಯದ ಭಾಗವಾಗಿತ್ತು. ಮೇಲುಕೋಟೆಯು ಈ ಪ್ರದೇಶದ ಉಪರಾಜಧಾನಿಯಾಗಿತ್ತು. ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಮಂಡ್ಯಜಿಲ್ಲೆಯಲ್ಲಿ ಅನೇಕ ದೇವಾಲಯಗಳು ಕಟ್ಟಲ್ಪಟ್ಟವು. ಮೇಲುಕೋಟೆ, ತೊಣ್ಣೂರು, ಶ್ರೀರಂಗಪಟ್ಟಣ, ಕಿಕ್ಕೇರಿ. ಬಸರಾಳು, ಬೂದನೂರು. ಗೋವಿಂದನಹಳ್ಳಿ, ನಾಗಮಂಗಲದ ಪ್ರಸಿದ್ಧ ದೇವಾಲಯಗಳು ಆ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳಲ್ಲಿ ಹಲವಾಗಿವೆ.

ಕ್ರಿ.ಶ. 1342ರಲ್ಲಿ ಹೊಯ್ಸಳ ಸಂತತಿಯ ಕೊನೆಯ ಸಾಮ್ರಾಟ ಮೂರನೆ ವೀರಬಲ್ಲಾಳನ ಮರಣದ ವೇಳೆಗೆ ಸ್ಥಾಪನೆಯಾಗಿದ್ದ ವಿಜಯನಗರವು ಕ್ರಮೇಣ ವಿಸ್ತಾರಗೊಂಡು ಇಡೀ ದಕ್ಷಿಣ ಭಾರತವನ್ನೆಲ್ಲಾ ಒಳಗೊಂಡಿತ್ತು. ಮೈಸೂರು, ಮಂಡ್ಯ ಮತ್ತು ಇತರ ಜಿಲ್ಲೆಗಳಲ್ಲಿ ಸಣ್ಣಪುಟ್ಟ ಪಾಳೆಪಟ್ಟು ಮನೆತನಗಳು ತಲೆಯೆತ್ತಿ ವಿಜಯನಗರ ಸಾಮ್ರಾಟರಿಗೆ ಅಧೀನರಾಗಿ ಆಳುತ್ತಿದ್ದರು. ವಿಜಯನಗರ ಸುಪ್ರಸಿದ್ಧ ಸಾಮ್ರಾಟನಾದ ಕೃಷ್ಣದೇವರಾಯನು ಆ ವೇಳೆಗೆ ಶ್ರೀರಂಗಪಟ್ಟದಲ್ಲಿ ಆಳುತ್ತಿದ್ದ ಸಾಮಂತ ಕುಮಾರವೀರಯ್ಯನ ಕುಮಾರಿಯನ್ನು ವರಿಸಿದ್ದನೆಂದೂ, ಅವಳು ಅವನ ಮೂವರು ಮುಖ್ಯ ರಾಣಿಯರಲ್ಲೊಬ್ಬಳಾಗಿದ್ದಳೆಂದೂ ತಿಳಿದು ಬರುತ್ತದೆ. ಆ ವೇಳೆಗೆ ಉಮ್ಮತ್ತೂರು ರಾಜ್ಯವನ್ನು ಸ್ಥಾಪಿಸಿ ಶಿವನಸಮುದ್ರವನ್ನು ರಾಜಧಾನಿಯಾಗಿ

ಮಾಡಿಕೊಂಡು ಆಳುತ್ತಿದ್ದ ಗಂಗ ಶಾಖೆಯ ರಾಜನನ್ನು ಸೋಲಿಸಿ ಕ್ರಿ.ಶ. 1511ರಲ್ಲಿ ಕೃಷ್ಣದೇವರಾಯನು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡನು. ಉಮ್ಮತ್ತೂರು ಗಂಗರಸರ ಕಾಲದಲ್ಲಿ ಶಿವನ ಸಮುದ್ರ ಸೀಮೆಯ ಒಂದು ಮುಖ್ಯ ಪಟ್ಟಣವಾಗಿತ್ತು. ಕೃಷ್ಣದೇವರಾಯನ ಅನಂತರ ಆಳಿದ ಅಚ್ಯುತರಾಯನು ಕ್ರಿ. ಶ. 1532ರಲ್ಲಿ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಿದ್ದನು.

ಕ್ರಿ.ಶ. 1565ರ ತಾಳಿಕೋಟೆಯ ಕದನದ ಬಳಿಕ ವಿಜಯನಗರ ಸಾಮ್ರಾಜ್ಯವು ಛಿದ್ರಗೊಂಡಿತು. ರಾಮರಾಯನ ತಮ್ಮನಾದ ತಿರುಮಲರಾಯನು ಪೆನುಕೊಂಡೆಯಿಂದ ಆಳಲುಪಕ್ರಮಿಸಿ ತನ್ನ ಮಕ್ಕಳಲ್ಲೊಬ್ಬನಾದ ರಾಮರಾಜನನ್ನು ಶ್ರೀರಂಗಪಟ್ಟಣದ ಸುತ್ತಮುತ್ತಿನ ಪ್ರದೇಶಗಳ ಮಾಂಡಲೀಕನನ್ನಾಗಿ ನೇಮಿಸಿದನು. ಅವನು ಶ್ರೀರಂಗಪಟ್ಟಣದಿಂದ ಆಡಳಿತ ನಿರ್ವಹಿಸುತ್ತಿದ್ದು ಶಿವನಸಮುದ್ರ ಮತ್ತು ಮೇಲುಕೋಟೆಯ ದೇವಾಲಯಗಳಿಗೆ ದತ್ತಿಗಳನ್ನು ನೀಡಿದನು. ಅವನ ಮರಣಾನಂತರ ಕ್ರಿ.ಶ. 1584ರಲ್ಲಿ ಅವನ ಮಗನಾದ ಎರಡನೇ ತಿರುಮಲನು ಶ್ರೀರಂಗಪಟ್ಟಣ ಪ್ರಾಂತದ ಆಡಳಿತವನ್ನು ವಹಿಸಿಕೊಂಡನು.

ಆ ವೇಳೆಗಾಗಲೇ ಪದಿನಾಡು ಎಂಬಲ್ಲಿ ತಮ್ಮ ಆಳ್ವಿಕೆಯನ್ನು ಸ್ಥಾಪಿಸಿದ್ದ ಮೈಸೂರಿನ ಒಡೆಯರ ಸಂತತಿಯ ಪ್ರಭುಗಳು ರಾಜ್ಯ ವಿಸ್ತರಣೆಯಲ್ಲಿ ತೊಡಗಿದ್ದರು. ಈ ಮನೆತನದ ರಾಜಒಡೆಯನು (1578-1617) ಶ್ರೀರಂಗಪಟ್ಟಣದ ಎರಡನೇ ತಿರುಮಲನ ಮೇಲೆ ಯುದ್ಧ ಹೂಡಿ ಅವನನ್ನು ಸೋಲಿಸಿ ಕ್ರಿ.ಶ. 1610ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡನು. ರಾಜ ಒಡೆಯ ಶ್ರೀರಂಗಪಟ್ಟಣವನ್ನು ರಾಜಧಾನಿಯಾಗಿ ಮಾಡಿಕೊಂಡು ಮಂಡ್ಯ, ಮದ್ದೂರಿನ ವರೆಗೂ ರಾಜ್ಯವನ್ನು ವಿಸ್ತರಿಸಿದನು. ಚನ್ನಪಟ್ಟಣದ ಪಾಳೆಯಗಾರನಾದ ಜಗದೇವರಾಯನನ್ನು ರಾಜ ಒಡಯ ಸೋಲಿಸಿ ರಾಜ್ಯವನ್ನು ವಿಸ್ತರಿಸಿದನು. ಮೇಲುಕೋಟೆಯ ನಾರಾಯಣ ಸ್ವಾಮಿ ದೇವಾಲಯದ ಕಂಬವೊಂದರಲ್ಲಿ ರಾಜ ಒಡೆಯನ ಆಕೃತಿಯನ್ನು ಕೆತ್ತಲಾಗಿದೆ. ಕಂಠೀರವ ನರಸರಾಜನ ಕಾಲದಲ್ಲಿ ಬಿಜಾಪುರದ ಸೈನ್ಯಗಳು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದವು. ಆದರೆ ಕಂಠೀರವ ನರಸರಾಜನು ಶತ್ರುಗಳನ್ನು ಬಗ್ಗು ಬಡಿದು ಓಡಿಸಿದನು. ಅನಂತರ ಶ್ರೀರಂಗಪಟ್ಟಣವನ್ನು ಆಕ್ರಮಿಸಲು ಯತ್ನಿಸಿದ ಕೆಳದಿಯ ನಾಯಕ ಹಾಗೂ ಮಧುರೆಯ ನಾಯಕರು ಪರಾಭವಗೊಂಡರು.

ಒಡೆಯರ ಸಂತತಿಯ ಪೂರ್ವಾರ್ಧದ ಆಳ್ವಿಕೆಯ ಕಾಲದ ರಾಜರಲ್ಲೆಲ್ಲಾ ಪ್ರಸಿದ್ಧನಾದವನು. ಕ್ರಿ.ಶ. 1673 ರಿಂದ 1704ರ ವರೆಗೆ ಆಳಿದ ಚಿಕ್ಕದೇವರಾಜ ಒಡೆಯ. ಇವನ ಕಾಲದಿಂದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣವು ಸುಮಾರು ಒಂದುನೂರು ವರ್ಷಗಳ ಕಾಲ ಕನ್ನಡನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ

ಚಟುವಟಿಕೆಯ ಕೇಂದ್ರವಾಯಿತು. ಚಿಕ್ಕದೇವರಾಜನು ಕೆಳದಿ ಮತ್ತು ಮಧುರೆಯ ಪಾಳೆಯಗಾರರನ್ನೂ ಧಾಳಿಗರಾದ ಮರಾಠರನ್ನೂ ಸೋಲಿಸಿ ಬಾಬಾಬುಡನ್‌ಗಿರಿಯಿಂದ ಬಾರಾ ಮಹಲ್ ವರೆಗೆ ರಾಜ್ಯವನ್ನು ವಿಸ್ತರಿಸಿ ಸುಭದ್ರ ಆಡಳಿತವನ್ನು ಸ್ಥಾಪಿಸಿದನು. ಶ್ರೀರಂಗಪಟ್ಟಣ, ಮೇಲುಕೋಟೆ ಮತ್ತು ಮಳವಳ್ಳಿ ಪಟ್ಟಣಗಳು ವ್ಯಾಪಾರ, ವಿದ್ಯಾಭ್ಯಾಸ ಮತ್ತು ಧಾರ್ಮಿಕ ಕೇಂದ್ರಗಳಾಗಿ ವಿಶೇಷ ಪುರೋಭಿವೃದ್ಧಿಗೊಂಡವು. ಶ್ರೀರಂಗಪಟ್ಟಣದಲ್ಲಿ ವಿಷ್ಣುದೇವಾಲಯವನ್ನು ಕಟ್ಟಿಸಿದುದಲ್ಲದೆ ಚಿಕ್ಕದೇವರಾಜ ಒಡೆಯ ಮೇಲ್ಕೋಟೆಯ ದೇವಾಲಯಗಳಿಗೆ ಅನೇಕ ಸವಲತ್ತುಗಳನ್ನೂ ದಾನ ದತ್ತಿಗಳನ್ನೂ ನೀಡಿದನು. ಅವನ ಆಸ್ಥಾನವು ಅನೇಕ ಸಂಸ್ಕೃತ ಮತ್ತು ಕನ್ನಡ ಕವಿಗಳಿಂದ ಕೂಡಿತ್ತು. ತಿರುಮಲಾರ್ಯ, ಚಿಕ್ಕುಪಾಧ್ಯಾಯ, ಸಂಚಿಯ ಹೊನ್ನಮ್ಮ ಮೊದಲಾದ ಕವಿಗಳೂ, ವಿದ್ವಾಂಸರೂ, ಗ್ರಂಥಗಳನ್ನು ರಚಿಸಿದ್ದರು. ಚಿಕ್ಕದೇವರಾಜ ಒಡೆಯ ತಾನೇ ಸ್ವತಃ ಕವಿಯಾಗಿ ಅನೇಕ ಕೃತಿಗಳನ್ನು ರಚಿಸಿರುವನು.

ಚಿಕ್ಕದೇವರಾಜನ ಆಳ್ವಿಕೆಯ ನಂತರ ಕಾಲಕ್ರಮದಲ್ಲಿ ಒಡೆಯರ ಸಂತತಿಯ ಅಧಿಕಾರವು ಕ್ಷೀಣಿಸಿ ಆಡಳಿತವು ದಳವಾಯಿಗಳ ಕೈವಶವಾಯಿತು. ದಳವಾಯಿ ಕರಾಚುರಿ ನಂಜರಾಜಯ್ಯನ ಕೊನೆಗಾಲದಲ್ಲಿ ಹೈದರನು ಪ್ರಾಬಲ್ಯಕ್ಕೆ ಬಂದನು. ಅವನು ಅನೇಕ ಪಾಳೇಗಾರರನ್ನೂ, ನೆರೆಯ ರಾಜರನ್ನೂ ಸೋಲಿಸಿ, ಶ್ರೀರಂಗಪಟ್ಟಣ ವನ್ನು ಆಕ್ರಮಿಸಲು ಯತ್ನಿಸಿದ ಮರಾಠರನ್ನೂ ಸೋಲಿಸಿ ಓಡಿಸಿದನು. 1767ರಲ್ಲಿ ರಾಜನಿಗೆ ಗೃಹಬಂಧನದ ವ್ಯವಸ್ಥೆ ಮಾಡಿ ತಾನೇ ಪೂರ್ಣಾಧಿಕಾರವನ್ನು ವಹಿಸಿ ಕೊಂಡನು. ಹೈದರನು ಮಂಗಳೂರು, ಹೊನ್ನಾವರ ಮತ್ತು ಧಾರವಾಡದವರೆಗೆ ರಾಜ್ಯವನ್ನು ವಿಸ್ತರಿಸಿದುದಲ್ಲದೆ ತಮಿಳುನಾಡಿನ ಹಲವು ಭಾಗಗಳನ್ನೂ ಗೆದ್ದು ಕೊಂಡನು. ಬ್ರಿಟಿಷರ ಪಡೆಗಳನ್ನು ಸೋಲಿಸಿ ಮಂಗಳೂರು ಒಪ್ಪಂದವನ್ನು ಮಾಡಿಕೊಂಡನು. ಎರಡನೇ ಮೈಸೂರು ಯುದ್ಧವು ನಡೆಯುತ್ತಿದ್ದಾಗ ಹೈದರನು ಮರಣ ಹೊಂದಿದ್ದರಿಂದ ಅವನ ಮಗನಾದ ಟಿಪ್ಪುವು 1782ರಲ್ಲಿ ಅಧಿಕಾರ ವಹಿಸಿಕೊಂಡು 1799ರ ವರೆಗೂ ಆಳಿದನು. ಇತಿಹಾಸ ಪ್ರಸಿದ್ಧವಾದ 3 ಮತ್ತು 4ನೇ ಮೈಸೂರು ಯುದ್ಧಗಳು ಬ್ರಿಟಿಷರಿಗೂ ಟಿಪ್ಪುವಿಗೂ ನಡೆದವು. 1799ರಲ್ಲಿ ಲಾರ್ಡ್ ವೆಲ್ಲೆಸ್ಲಿಯು ಟಿಪ್ಪುವಿನ ವಿರೋಧವನ್ನಡಗಿಸಲು ನಿರ್ಧರಿಸಿ ಮಂಡ್ಯ ಜಿಲ್ಲೆಯ ಮಳವಳ್ಳಿ, ಆರಕೆರೆ ಮತ್ತು ಇತರ ಕಡೆಗಳಲ್ಲಿ ಟಿಪ್ಪುವಿನ ಸೈನ್ಯವನ್ನು ಸೋಲಿಸಿ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಟಿಪ್ಪುವು ವೀರಾವೇಶದಿಂದ ಹೋರಾಡುತ್ತಾ ರಣರಂಗದಲ್ಲಿ ಅಸುನೀಗಿದನು. ರಾಜ್ಯದ ಹೆಚ್ಚು ಭಾಗವನ್ನು ಬ್ರಿಟಿಷರು ತಾವೇ ವಹಿಸಿಕೊಂಡು ಹಿಂದಿನ ಮೈಸೂರು ರಾಜ್ಯವನ್ನು ಮಾತ್ರ ಒಡೆಯರ ಸಂತತಿಗೆ ಕೊಟ್ಟು ಶ್ರೀರಂಗಪಟ್ಟಣದಿಂದ ರಾಜಧಾನಿಯನ್ನು ಮೈಸೂರಿಗೆ ವರ್ಗಾಯಿಸಿದರು.

ನೂರಾರು ವರ್ಷಗಳ ಕಾಲ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣವು ಕ್ರಮೇಣ ತನ್ನ ರಾಜಕೀಯ ಮಹತ್ವವನ್ನು ಕಳೆದುಕೊಂಡಿತು. ಟಿಪ್ಪೂಸುಲ್ತಾನನ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ ಲಾಲ್‌ಬಾಗ್. ದರಿಯಾದೌಲತ್, ಗುಂಬಸ್ ಮೊದಲಾದ ಐತಿಹಾಸಿಕ ಸುಂದರವಾದ ಕಟ್ಟಡಗಳ ನಿರ್ಮಾಣವಾದವು. ಶ್ರೀರಂಗಪಟ್ಟಣವು ಇಡೀ ದಕ್ಷಿಣ ಭಾರತದ ರಾಜಕೀಯದ ಶಕ್ತಿಯುತ ಕೇಂದ್ರವಾಗಿತ್ತು. ಅನಂತರವೂ ಶ್ರೀರಂಗಪಟ್ಟಣವು ರವಿನ್ಯೂ ಪರಿಪಾಟಿನ ಕೇಂದ್ರವಾಗಿತ್ತು.

ಈಚಿನ ಒಡೆಯರ ಸಂತತಿಯ ಆಳ್ವಿಕೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲವು ಚಿರಸ್ಮರಣೀಯವಾದುದು. ಅವರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿ ಆದರ್ಶ ರಾಜ, ರಾಜರ್ಷಿ ಎಂಬ ಬಿರುದುಗಳಿಗೆ ಪಾತ್ರರಾಗಿದ್ದರು. ಅವರ ಆಳ್ವಿಕೆಯ ಕಾಲದಲ್ಲಿ ಮಂಡ್ಯ ಜಿಲ್ಲೆಯಲ್ಲಿ ಭಾರತದಲ್ಲೇ ಪ್ರಪ್ರಥಮವಾದ ದೊಡ್ಡ ಜಲಾಶಯವಾದ ಕೃಷ್ಣರಾಜಸಾಗರವೂ, ಹಾಗೂ ಭಾರತದಲ್ಲೇ ಪ್ರಪ್ರಥಮ ವಾದ ಶಿವನಸಮುದ್ರ ಜಲವಿದ್ಯುದಾಗರವು ಸ್ಥಾಪನೆಯಾದವು. ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆ ಮತ್ತು ಇತರ ಕೈಗಾರಿಕೆಗಳು ಸ್ಥಾಪನೆಯಾದವು. ಮಂಡ್ಯ ಜಿಲ್ಲೆಯ ಆದಿರಂಗ, ಮಧ್ಯರಂಗ ಎಂದು ಪ್ರಸಿದ್ಧವಾಗಿರುವ ಶ್ರೀರಂಗಪಟ್ಟಣ, ಶಿವನಸಮುದ್ರ ಹಾಗೂ ಮೇಲ್ಕೋಟೆ, ತೊಣ್ಣೂರು. ಆದಿಚುಂಚನಗಿರಿ ಮೊದಲಾದ ಧಾರ್ಮಿಕ ಕ್ಷೇತ್ರಗಳಿಂದಲೂ, ಬೃಂದಾವನ, ರಂಗನತಿಟ್ಟು, ಶ್ರೀರಂಗಪಟ್ಟಣ ಮೊದಲಾದ ಪ್ರೇಕ್ಷಣೀಯ ಸ್ಥಳಗಳಿಂದಲೂ ಕೂಡಿದ್ದು ಮೂರು ಸಕ್ಕರೆ ಕಾರ್ಖಾನೆಗಳನ್ನೂ, ಫರ್ಟಿಲೈಸರ್ಸ್, ಕಾಗದದ ಕಾರ್ಖಾನೆ, ಅಸಿಟೇಟ್ ಮತ್ತು ಕೆಮಿಕಲ್ಸ್ ಕಾರ್ಖಾನೆ, ಶಿವನಸಮುದ್ರ ಮತ್ತು ಷಿಂಷಾ ಜಲವಿದ್ಯುದಾಗರಗಳನ್ನೂ ಹೊಂದಿದೆ. ಚಿಕ್ಕದೇವರಾಜ ಒಡೆಯರ ಕಾಲದಿಂದಲೂ ಪ್ರಸಿದ್ಧ ಸಾಹಿತಿಗಳನ್ನೂ ಕವಿಗಳನ್ನೂ ಕಲಾವಿದರನ್ನೂ ಆಡಳಿತಗಾರರನ್ನೂ ಹಾಗ ರಾಜಕೀಯ ನೇತಾರರನ್ನೂ ದಕ್ಷ ಸಚಿವರನ್ನೂ ಕನ್ನಡ ನಾಡಿಗೆ ನೀಡುತ್ತಾ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿದೆ.

ಜಿ. ಆರ್. ರಂಗಸ್ವಾಮಯ್ಯ

ಗಂಗರ ಆಡಳಿತದಲ್ಲಿ ಮಂಡ್ಯ ಜಿಲ್ಲೆ

ಕರ್ನಾಟಕವನ್ನು ಆಳಿದ ಮುಖ್ಯ ರಾಜಮನೆತನಗಳೆಂದರೆ: ಮೌರ್ಯ, ಸಾತವಾಹನ, ಕದಂಬ, ಗಂಗ. ಚಾಳುಕ್ಯ, ರಾಷ್ಟ್ರಕೂಟ, ಸೇಉಣ. ಹೊಯ್ಸಳ, ಕಳಚುರಿ ಮತ್ತು ವಿಜಯನಗರ. ಚಾಳುಕ್ಯ ಹಾಗೂ ರಾಷ್ಟ್ರಕೂಟರ ಕಾಲದಲ್ಲಿ ಇಡೀ ಕರ್ನಾಟಕ ದೇಶ ಅರ್ಥಾತ್ ಕಾವೇರಿಯಿಂದ ಗೋದಾವರಿಯವರೆಗಿನ ಭೂಪ್ರದೇಶ ಏಕಛತ್ರಛಾಯೆಯಲ್ಲಿ ಇದ್ದಿತು.[1] ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ ಕರ್ನಾಟಕದ ಗೆಲುವು ಆರಂಭವಾಗಿ ಕರ್ನಾಟಕದ ಆಡಳಿತ-ಅಧಿಕಾರ-ನೇಪಾಳದಿಂದ ಶ್ರೀಲಂಕಾದವರೆಗೂ ವ್ಯಾಪಿಸಿತು : ಒಂದು ಬೃಹತ್‌ಸಾಮ್ರಾಜ್ಯವಾಗಿ ಮೆರೆಯಿತು. ಅಧಿರಾಜರು ಯಾರೇ ಇರಲಿ "ಕರ್ನಾಟಕಂ ಬಲಮಚಿನ್ತ್ಯಮಜೇಯಮನ್ಯೈಃ" ಎಂದು ಅದು ತನ್ನ ಅತುಲ ಪರಾಕ್ರಮವನ್ನು ಮೆರೆಯಿತು. ಆ ಬಲದಲ್ಲಿ ಗಂಗ ಮನೆತನದ ಬಲವೂ ಬೆರೆತಿತ್ತು– ಸೈನ್ಯದಿಂದ, ಶರೀರ ಸಂಬಂಧದಿಂದ ! ಮೇಲುನೋಟಕ್ಕೆ ಅವು ಬೇರೆ ಬೇರೆ-ಯಾವ ಯಾವುದೋ–ಸಂಬಂಧವಿಲ್ಲದ್ದೆನ್ನುವ ರೀತಿಯಲ್ಲಿ ಇತಿಹಾಸ ಬೋಧನೆಯಾಗಿದೆ–ಇದುವರೆಗೆ ! ವಾಸ್ತವದಲ್ಲಿ ಈ ಎಲ್ಲ ಮನೆತನಗಳಿಗೆ ಶರೀರ ಸಂಬಂಧಗಳಿದ್ದು-ಹೆಣ್ಣು ಕೊಟ್ಟು, ತಂದು–ಅವು ರಕ್ತ ಸಂಬಂಧಿಗಳಾಗಿದ್ದವೆನ್ನುವುದನ್ನು ಮರೆಯುವಂತಿಲ್ಲ. ಇನ್ನೊಂದು ಮರೆಯಬಾರದ ಸಂಗತಿಯೆಂದರೆ ಇಂದಿನ ಆಡಳಿತ ವಿಭಾಗಗಳೂ ಅಂದೂ ಇದೇ ರೀತಿಯ ಆಡಳಿತ ವಿಭಾಗಗಳಾಗಿದ್ದಿಲ್ಲ ಎಂಬುದು. ಮಂಡ್ಯಜಿಲ್ಲೆ ಕೆ.ಆರ್. ಪೇಟೆ, ಪಾಂಡವಪುರ, ಶ್ರೀರಂಗಪಟ್ಟಣ,ನಾಗಮಂಗಲ, ಮಂಡ್ಯ, ಮದ್ದೂರು ಮತ್ತು ಮಳವಳ್ಳಿ ಎಂಬ ಏಳು ತಾಲ್ಲೂಕುಗಳಿಂದ ಕೂಡಿದೆ. ೧–೭–೧೯೩೯ ರಂದು ಮಂಡ್ಯಜಿಲ್ಲೆಯು ಅಸ್ತಿತ್ವಕ್ಕೆ ಬಂದಿತು.[2] ಆದುದರಿಂದ ಮಂಡ್ಯಜಿಲ್ಲೆಯ ಈ ಏಳು ತಾಲ್ಲೂಕುಗಳಲ್ಲಿ

---

[1] ಕವಿರಾಜಮಾರ್ಗ :

ಕಾವೇರಿಯಿಂದಮಾ ಗೋ
ದಾವರಿವರಮಿರ್ದ್ದ ನಾಡದಾ ಕನ್ನಡದೊಳ್ ।
ಭಾವಿಸಿದ ಜನಪದಂ ವಸು
ಧಾವಳಯವಿಲೀನ ವಿಶದವಿಷಯ ವಿಶೇಷಂ ॥ I. ಪ–೩೬

[2] District Gazetteer, Mandya, p. 6

ಉಪಲಬ್ಧವಾಗಿರುವ ಗಂಗರಶಾಸನಗಳನ್ನು ಗಮನದಲ್ಲಿಟ್ಟುಕೊಂಡು ಈ ಲೇಖನವನ್ನು ಸಿದ್ಧಪಡಿಸಿರುವೆ. ಗಂಗವಾಡಿ–೯೬೦೦೦, ಗಂಗರಾಜ್ಯ, ಗಂಗಮಣ್ಡಲ, ಗಙ್ಗಪಾಡಿ ಮುಂತಾಗಿ ಪ್ರಸಿದ್ಧವಾದ ಒಂದು ದೊಡ್ಡದಾದ ಪ್ರದೇಶದ ಅಂಗವಾಗಿತ್ತು–ಈಗಿನ ಮಂಡ್ಯ ಜಿಲ್ಲೆ. ಕಬ್ಬಿಪ್ಪು–೧೦೦೦ದ ಕೆಲಭಾಗ,[3] ಕೊಂಗಾಲ್ನಾಡ–೮೦೦೦ವಲ್ಲಿ[4] ಹೇಮಾವತಿಯ ಈಚಿನ ಭಾಗ (ಈಗಿನ ಕೆ. ಆರ್. ಪೇಟೆ ತಾಲ್ಲೂಕು ಮತ್ತು ಪಾಂಡವಪುರ ತಾಲ್ಲೂಕು). ತಳಕಾಡುಪಟ್ಟಣ ಮತ್ತು ಎಡವಜೆ–೧೦೦೦, ಕಲ್ಕಣಿನಾಡು (ನಾಗಮಂಗಲ ಇತ್ಯಾದಿ), ಕೆರೆಗೋಡು ವಿಷಯ (ನಾಡು)[5]. ಕೆಳಲೆನಾಡು (ವಿಷಯ)[6] ಅಮ್ಮತೂರ ಸ್ಥಳ, ಆರಣೆಯಸ್ಥಳ, ಆತುಕೂರ್ಪ್ಪನ್ನೆರಡು, ಅಲುಗೋಡರಾಜ್ಯ. ರಾಜೇನ್ದ್ರಚೋಳ ಒಳನಾಡು, ಉಮ್ಮತ್ತೂರು ರಾಜ್ಯದ ಸ್ವಲ್ಪಭಾಗ, ಎಱುನಾಟ್ಟು, ಕೆಳಲೆ (ಕಿಳಲೆ)–೧೦೦೦, ಚಿಕ್ಕಗಂಗಪಾಡಿ (ಗಂಗಪಾಡಿ–೬೦೦೦), ಕಳವಲದ ನಾಡು, ಕಳಲೆನಾಡು, ಕಲ್ಕಣಿನಾಡು(ಮಳವಳ್ಳಿ ತಾಲೂಕು:ಇದು ಅನಂತರದ ಕಿಱುಗಾವಲು ಸ್ಥಳ=ಕಿರುಗಾವಲು ಸ್ಥಳ), ತಳಕಾಡ ಸೀಮೆಯ ಕುಂದೂರ ಸ್ಥಳ. ಕುನ್ದನ್ನಾಡು. ನಿರ್ಗುಂದ, ಕುರುವಂಕನಾಡು, ನಾಗಮಂಗಲರಾಜ್ಯ, ನಾಗಮಂಗಲರಾಜ್ಯದ ಕೊಪ್ಪದ ಸೀಮೆ, ಗಾಜಲೂರುನಾಡು, ಗೋಂವಪಾಡಿ. ದಡಿಗವಾಡಿ, ದೇವಲಾಪುರಸ್ಥಳ. ಬಂಕಿನಾಡು, ಬಡಗರೆ (ವಡಕರೆ)–೩೦೦. ಬಡಗುಂದಮನಾಡು. ಬಸುರವಾಳಸ್ಥಳ, ಬಳಮುಡುನಾಡು, ಬಡಗರೆನಾಡು, ಬೆಸಗರಹಳ್ಳಿಸೀಮೆ. ಬೆಳಕವಾಡಿಸ್ಥಳ. ಮದ್ದೂರಸ್ಥಳ (ಸೀಮೆ). ಮಳವಳ್ಳಿಸಂಸ್ಥಾನ (ತಾಲೂಕು), ಮುಡಿಗೊಣ್ಡಶೋಳಮಣ್ಡಲ. ಷಣ್ಣವತಿಸಹಸ್ರ, ಕೆರೆಗೋಡನಾಡಹಾಡಿಮಂಡಲ, ಹುಲಿವನದಸ್ಥಳ. ಹಾಗೂ ಹೆಬ್ಬೆಟ್ಟುನಾಡು ಮುಂತಾಗಿ ಹಲವು ವಿಭಾಗಗಳಿಂದ ಕೂಡಿತ್ತು. ಈಗಿನ ಮಂಡ್ಯಜಿಲ್ಲೆಗೆ ಸಂಬಂಧಿಸಿದಂತೆ ಗಂಗರ ಆಳ್ವಿಕೆಗೆ ಸಂಬಂಧಪಟ್ಟ ಇಪ್ಪತ್ತೈದು ಶಾಸನಗಳು ಸದ್ಯ ಉಪಲಬ್ಧವಾಗಿವೆ. ಸಂಖ್ಯೆಯಲ್ಲಿ ಅವು ಕಡಿಮೆಯೆನ್ನಿಸಿದರೂ ಚರಿತ್ರೆಯ ಅಧ್ಯಯನದಲ್ಲಿ ಬಹಳ ಗಮನಾರ್ಹವಾದ ದಾಖಲೆಗಳಾಗಿವೆ. ಇವುಗಳ ವ್ಯಾಪ್ತಿಯು ಒಂದನೆಯ ಶಿವಮಾರನಿಂದ ಹಿಡಿದು ಕೊನೆಯ ಅರಸನಾದ ಸತ್ಯವಾಕ್ಯಗೋವಿಂದರಸನವರೆಗೆ (ಕ್ರಿ. ಶ. ೭೧೩-೧೦೨೪) ಹಬ್ಬಿನಿಂತಿದೆ.

ಕ್ರಿ. ಶ. ೭೧೩ರಲ್ಲಿ ಬರೆಯಲಾದ ಹಳ್ಳಿಗೆರೆ ಶಾಸನವು ಒಂದನೆಯ ಶಿವಮಾರನ

---

3 Ep. Car. Vol. VI, K.R. Pet–50 (1977) p. 37

4 (a) Ep. Car. Vol IV, Piriyapattana–28, p. 523
(b) ibid. Vol. VI K.R. Pet–20, p. 14

5 ibid. Vol. VII. ಮಂಡ್ಯ–35, ಹಳ್ಳಿಗೆರೆಯ ಶಾಸನ

6 ಈ ಎಲ್ಲ ನಾಡುಗಳ ಉಲ್ಲೇಖವನ್ನು ಎಪಿಗ್ರಾಫಿಯ ಕರ್ನಾಟಕ ಶಾಸನ ಸಂಪುಟಗಳಲ್ಲಿ ಜಿಜ್ಞಾಸುಗಳು ಕಾಣಬಹುದು.

ದಾಗಿದ್ದು ಅದು ಅರಸನ ಆಳ್ವಿಕೆಯ ೬೪ನೆಯ ವರ್ಷದಲ್ಲಿ ಬರೆಯಲಾಗಿದೆ. ಆದುದರಿಂದ ಆತ ಕ್ರಿ.ಶ. ೬೭೯ರಲ್ಲಿ ಪಟ್ಟಕ್ಕೆ ಬಂದನೆಂದು ವಿದಿತವಾಗುತ್ತದೆ. ಚಾಳುಕ್ಯ ಚಕ್ರವರ್ತಿ ೧ ನೆಯ ವಿಕ್ರಮಾದಿತ್ಯನ ಗದ್ವಾಲ ಶಾಸನವು ಕ್ರಿ.ಶ. ೬೭೪ರಲ್ಲಿ ಬರೆಯಲ್ಪಟ್ಟಿದ್ದು ಆತನು ಗಂಗಮಹಾದೇವಿಯನ್ನು ಚೋಳಿಕ ವಿಷಯಕ್ಕೆ ದಂಡಯಾತ್ರೆ ಹೋದಾಗ ಜೊತೆಗೆ ಕರೆದುಕೊಂಡು ಹೋಗಿದ್ದನೆಂದು ಆಕೆಯ ವಿಜ್ಞಾಪನೆಯ ಮೇರೆಗೆ ದತ್ತಿ ನೀಡಿದನೆಂದು ತಿಳಿದು ಬಂದಿದೆ.[7] ಈ ಗಂಗಮಹಾದೇವಿ. ಗಂಗವಂಶತಸಕ್ಕೆ ಸಂಬಂಧಪಟ್ಟವಳೆನ್ನುವುದರಲ್ಲಿ ತಿಲಾಂಶವೂ ಸಂದೇಹಕ್ಕೆಡೆಯಿಲ್ಲ. ಆಕೆಯ ಮಗನೇ ಚಾಳುಕ್ಯ ವಿನಯಾದಿತ್ಯ ಚಕ್ರವರ್ತಿ[8]. ಗಂಗಮಹಾದೇವಿ ಒಂದನೆಯ ಶಿವಮಾರನಿಗೆ ತುಂಬ ಹತ್ತಿರದ ಕಾಲದವಳಾಗಿದ್ದು ನಿಕಟ ಸಂಬಂಧಿ ಎಂದು ಸ್ಪಷ್ಟವಾಗುತ್ತದೆ. ಶಿವಮಾರನು ಪಟ್ಟಕ್ಕೆ ಬಂದಿರುವ ತೇದಿಗೂ ಗದ್ವಾಲ ಶಾಸನ ಬರೆಯಲ್ಪಟ್ಟ ತೇದಿಗೂ ಕೇವಲ ಐದು ವರ್ಷದಷ್ಟು ಅಂತರವಿದೆ. ಆಕೆ ಶಿವಮಾರನಿಗೆ ಸೋದರತ್ತೆಯೊ ಸೋದರಿಯೊ ಆಗಿರಬೇಕು. ಈ ಶಿವಮಾರನು ತಲವನಪುರದಿಂದ ರಾಜ್ಯವಾಳುತ್ತಿದ್ದನು. ಇವನ ಅಜ್ಜ ಭೂವಿಕ್ರಮನು ಕೋಳಾಲಪುರವಲ್ಲಿದ್ದು ರಾಜ್ಯವಾಳುತ್ತಿದ್ದನೆಂದು ಅವನ ಬೆದಿರೂರ ಶಾಸನದಲ್ಲಿ ಬರೆದಿದೆ.[9] ಇನ್ನು ಶಿವಮಾರನ ಈ ಶಾಸನ ಅವನ ಆಳ್ವಿಕೆಯ ೩೪ನೆಯ ವರ್ಷ ಹುಟ್ಟಿದ್ದು ಶಾ.ಶ. ೬೩೫, ಜ್ಯೇಷ್ಠಪೌರ್ಣಿಮಿ (೧೩-೬-೭೧೩ A.D) ತೇದಿಯನ್ನು ಹೊಂದಿದೆ. "ತಲವನಪುರವಾಧಿವಸತಿ ವಿಜಯಸ್ಕನ್ಧಾವಾರೇ" ಎಂದು ಬರೆದಿರುವುದರಿಂದ ಆತನೇ ಅದನ್ನು ಗೆದ್ದು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನೆಂದು ಗ್ರಹಿಸಬಹುದಾಗಿದೆ. ಸದ್ಯ ಸ್ಥೂಲವಾಗಿ ನಾವು ಈ ಘಟನೆಯು ಕ್ರಿ. ಶ. ೭೧೩ ಕ್ಕಿಂತ ಹಿಂದೆ ಮತ್ತು ಕ್ರಿ.ಶ. ೬೩೪ರ ಅನಂತರ ಪ್ರಾಯಃ ಕ್ರಿ.ಶ. ೬೭೯ರ ಎಡಬಲದಲ್ಲಿ ನಡೆಯಿತೆಂದು ಹೇಳಬಹುದು. ಒಂದು ಊರು ರಾಜಧಾನಿ ಆಯಿತೆಂದರೆ ಆ ಪ್ರದೇಶದ ಸಾಂಸ್ಕೃತಿಕ ಬೆಳವಣಿಗೆ ಒಂದು ವಿಶಿಷ್ಟ ರೀತಿಯಲ್ಲೇ ಆಗುತ್ತದೆ. ನೆಲಮಂಗಲ ತಾಲೂಕಿನ ಮಣ್ಣೆನಗರಕ್ಕೆ ರಾಜಧಾನಿ ಕೆಲಕಾಲ ಸ್ಥಳಾಂತರ

---

[7] Ep. Ind. Vol. X, pp. 100 f. ಈ ಒಂದನೆಯ ವಿಕ್ರಮಾದಿತ್ಯನಿಗೆ 'ರಾಜಮಲ್ಲ' ಎಂಬ ಒಂದು ಬಿರುದಿದ್ದಿತು. ಅದನ್ನು ಮುಂದೆ ಗಂಗರ ಮನೆಯ ರಾಜರಲ್ಲಿ ಹಲವರು ಧರಿಸಿದ್ದರು.

[8] "ಕರ್ನಾಟಕದ ಅರಸು ಮನೆತನಗಳು" (ಎಸ್. ಎಲ್. ರಾವ್ ಹಾಗೂ ರಾ. ಸ್ವಾ. ಪಂಚಮುಖಿ) ಚಲುಕ್ಯರ ವಂಶಾವಳಿ ಸದರ ಪುಟ-೪೮

[9] (a) MAR 1925 No. 104

(b) Dr. S. Srikantha Sastri "Sources of Karnataka History," p. 52.

ಹಾದರೂ ಹೊಯ್ಸಳರ ಕಾಲದವರೆಗೆ ಅದು ಸುಮಾರು ರಾಜಧಾನಿಯಾಗಿಯೇ ಮೆರೆಯಿತು. ಈ ಶಿವಮಾರದೊರೆ "ಪಲ್ಲವತಟಾಕ" ಎಂಬ ಗ್ರಾಮವನ್ನು ನಿರ್ಮಿಸಿ ಅದನ್ನು ದತ್ತಿಯಾಗಿ ಕೊಟ್ಟನು. ಕಿಬಿನೀ ನದಿಗೆ ಸೇತುವೆ (ಅಣೆಕಟ್ಟು) ಕಟ್ಟಿ[10] ಅದರ ಬಳಿಯಲ್ಲೇ ಪಲ್ಲವ ತಟಾಕ' ಗ್ರಾಮದ ನಿರ್ಮಾಣ. ಇದು ಕೆಬಿಗೋಡು ಊರಿಗೆ ಉತ್ತರ ಪಕ್ಕದಲ್ಲಿದ್ದಿತು. ದತ್ತಿಯನ್ನು "ಮಹಾಸೇನಪುರ"ದ ವಾಸ್ತವ್ಯನಿಗೆ ಕೊಡಲಾಯಿತು. 'ಮಹಾಸೇನಪುರ' ಈಗಿನ 'ದಣ್ಣಾಯಕನಪುರ' ಆಗಿರಬಹುದು. ಮಹಾಸೇನ = ದಣ್ಣಾಯಕ ; ದೇವತೆಗಳ ಸೇನಾನಿ ಷಣ್ಮುಖನನ್ನು ಇಲ್ಲಿ ಜ್ಞಾಪಕಕ್ಕೆ ತಂದುಕೊಳ್ಳಬಹುದು. ಕಿಬಿನೀ ನದಿಯು ಕೆರೆಗೋಡಿಗೆ ಉತ್ತರದಲ್ಲಿದ್ದಿತು. ಗ್ರಾಮವನ್ನು 'ಸರ್ವಪರಿಹಾರ' ಮಾಡಿಕೊಟ್ಟ ಆ ಶಿಷ್ಟಪ್ರಿಯ (ಶಿವಮಾರ I). ಸಿದ್ಧಾಯ (ನಿಗದಿತ ಕಂದಾಯ = fixed rent) ಬಾಧಾ (ಕರ = Tax) ಇವುಗಳನ್ನು ಯಾರೂ ಹೆಚ್ಚು ಮಾಡಿ ಆಗಲಿ ಇಲ್ಲವೆ ಸಿದ್ಧಾಯವನ್ನು ಅಪಹರಿಸುವುದಾಗಲಿ ಮಾಡುವಂತಿರಲಿಲ್ಲ. ಜನಹಿತಕಾರಿ ಕೆಲಸವನ್ನು ಅಂದಿನ ನಿರಂಕುಶ ಪ್ರಭುತ್ವದ ಸಮಯದಲ್ಲೂ ಹೇಗೆ ಮಾಡಿದರೆಂಬುದು–ಮಾಡುತ್ತಿದ್ದರೆಂಬುದು–ಇಲ್ಲಿ ಗಮನಾರ್ಹವಾಗಿದೆ. ಈ ಸಂಬಂಧದಲ್ಲಿ ನಾವು ಶಿವಮಾರ ದೊರೆಯ ವ್ಯಕ್ತಿತ್ವವನ್ನೂ ಗಮನಿಸುವುದು ಒಳ್ಳೆಯದೆಂದು ತೋರುತ್ತದೆ. ಆ ವಿಷಯ ಶಾಸನದಲ್ಲಿ ಹೀಗೆ ಇದೆ :

ಲಕ್ಷ್ಮೀವಕ್ಷಸ್ಥಲಸ್ಥಂ ಹರತಿ ಮುರರಿಪೋಃ ಕೀರ್ತಿಮಾಕ್ರಷ್ಟುಮಿಷ್ಟೇ
ಶುದ್ಧಾಂ ರಾಮಸ್ಯ ವೃತ್ತಿಂ ಬುಧಜನ ಮಹಿತಾಂ ಮಾನವೀಂ ಸ್ವೀಕರೋತಿ
ನಿರ್ವ್ಯಾಜ್ಯೋಲೋಕಧೂರ್ತ್ತಃ ಪರಯುವತಿಹರೋ ದೇವರಾಜೋಪಮಾನಃ
ಚಿತ್ರಂ ಕಿಂ ಚಾತ್ರ ಚಿತ್ರಂ ಫಲಮುಪರಮತಃ ಕಿನ್ತು ಶಿಷ್ಟಪ್ರಿಯತ್ವೇ ॥

[ಹೃದಯದಲ್ಲಿ ಶ್ರೀಯನ್ನು ಹೊಂದಿ (ಉದಾರ ಗುಣದಿಂದ) ಮುರರಿಪು (ವಿಷ್ಣು)ವಿನ ಕೀರ್ತಿಯನ್ನು ಕಸಿದುಕೊಂಡನು (ಕಡಿಮೆ ಮಾಡಿದ). ರಾಮಚಂದ್ರನ ಹಾಗೆ ಶುದ್ಧಚಾರಿತ್ರ್ಯವನ್ನು ಉಳ್ಳವನು. ವಿದ್ವಾಂಸರನ್ನು ಮಾನವೀಯತೆಯಿಂದ ನೋಡಿದನು. (ಅತ್ಯಂತ ಚಾಣಾಕ್ಷತನವನ್ನು ಹೊಂದಿ) ಲೋಕಧೂರ್ತ ಎನ್ನಿಸಿಕೊಂಡನು. ಪರಯುವತಿಯರನ್ನು ಇಂದ್ರನ ಹಾಗೆ ಅಪಹರಿಸಿದರೂ ಇವನು ಇಂದ್ರ

---

[10] ಸೇತುರ್ವಾರಣಮುಚ್ಯತೇ. ಸೇತುಃ + ಆರಣ–ಈ ಎರಡು : ಕಟ್ಟೆ. ಕೋಶಕಾರರು 'ವಾರಣ' ಎಂದು ತಪ್ಪುಗ್ರಹಿಸಿದ್ದಾರೆ. ಅಮರ ಕೋಶದಲ್ಲಿ "ಸೇತುರಾಳೌ ಸ್ತ್ರೀಯಾಂಪುಮಾನ್" ಎಂದು ಬರೆದಿದೆ (ದ್ವಿತೀಯ ಕಾಂಡ-೧೫). 'ಆರಣ' 'ಸೇತು' ಎಂದರೆ ತೊರೆಯ ಎರಡು ದಂಡೆಗಳಿಗೂ ಸಂಬಂಧವನ್ನು ಕಟ್ಟೆಯ ಮೂಲಕ ಕಲ್ಪಿಸುವುದು (Bridging). ಆರಣ > ಆರಣೆ (ಣೆ) > ಅಣೆ* > ಅಣೆ + ಕಟ್ಟು = ಅಣೆಕಟ್ಟು ಆಗಿದೆ. ನಾಗಮಂಗಲ ತಾಲೂಕಿನ 'ಅರಣೆ' ಊರನ್ನೂ ಇಲ್ಲಿ ಜ್ಞಾಪಿಸಿಕೊಳ್ಳಬಹುದು.

ನಲ್ಲಿ: ಅರ್ಥಾತ್ ಕನ್ನಿಕೆಯರನ್ನು ಅಪಹರಿಸಿದ ಪರಸ್ತ್ರೀ ಎಂಬ ಯುವತಿಯರನ್ನಲ್ಲ.[11] ಶಿಷ್ಟರೆಲ್ಲರ ಪ್ರೇಮವನ್ನು ಸಂಪಾದಿಸಿಕೊಂಡದ್ದು ನಿಜವಾಗಿಯೂ ವಿಚಿತ್ರ ಸಂಗತಿ.]

ತೇನಾನೇಕ ನೃಪತಿ ಮಕುಟಕೋಟಿಲಾಳಿತಶಾಸನೇನ ಶತ್ರುಶಾಸನೇನ ದ್ವಿಷಲ್ಲಕ್ಷ್ಮೀ ಕಚಗ್ರಹ ಪ್ರಮಾಥಪರಕ್ಷಾಪ್ರಯೋಜನಾ ಜನತಾಪ್ರಿಯೇಣ ಶ್ರೀಮತ್ಪೃಥ್ವೀಕೊಙ್ಗಣಿ ಮಹಾರಾಜೇನ **ಶಿವಮಾರನಾಮಧೇಯೇನ** ಪಲ್ಲವಮಹಾರಾಜಸ್ಯ ಪ್ರಿಯತನಯಾಭ್ಯಾಂ ಜಯವೃದ್ಧಿ ಪಲ್ಲವಾಧಿರಾಜಾಭ್ಯಾಂ ವಿಜ್ಞಾಪಿತೇನ ಪಞ್ಚತ್ರಿಂಶೋತ್ತರಷಟ್ಛತೇಷು ಶಕವರ್ಷೇಷ್ವತೀತೇಷು ಆತ್ಮನಃಪ್ರವರ್ಧಮಾನ ವಿಜಯೈಶ್ವರ್ಯಸಂವತ್ಸರೇ ಚತುಸ್ತ್ರಿಂಶತ್ತಮೇ ಪ್ರವರ್ತಮಾನೇ ತಲವನಪುರವರಾಧಿವಸತಿ ವಿಜಯಸ್ಕನ್ಧಾವಾರೇ ಜ್ಯೇಷ್ಠಮಾಸ ಪೌರ್ಣಮಾಸ್ಯಾಂ ಕಿಱುಗೋಡು ವಿಷಯೇ ಕಿಱುಗೋಡುತ್ತರಪಾರ್ಶ್ವ ಕಿಬಿಸೀನವಿಷೇತುಂ ಬದ್ಧಯಿತ್ವಾ ತಸ್ಯೈವ ನಾಮ ದಕ್ಷಿಣತಃ ಕೊಳಗೊಳ ನಿಕ್ಕರೆ ಸಹಿತಂ ಉತ್ತರತಃ ಚಿಪ್ಪವಾಳ್ಗಾಸಿಪಟ್ಟಸಹಿತಂ ಪಲ್ಲವತಟಾಕಮಿತಿ ಗ್ರಾಮಸ್ಯ ನಾಮಧೇಯಂ ಕೃತ್ವಾ ತಂ ಗ್ರಾಮಂ[12]

ಶಿವಮಾರ ರಾಜನು ಜನಹಿತಕ್ಕಾಗಿ ತಾನು ಕಷ್ಟಪಟ್ಟು, ಯುದ್ಧದಲ್ಲಿ ರಕ್ತಸುರಿಸಿ, ವೈರಿಗಳನ್ನು ಸೋಲಿಸಿ ತಂದ ಅಪರ ಸಂಪತ್ತನ್ನು, ತನಗಾಗಿಯೇ ಇಟ್ಟುಕೊಳ್ಳಬಹುದಾದ್ದನ್ನು ಪ್ರೇಮದಿಂದ ಕೆರೆಯನ್ನೂ ಊರನ್ನೂ ನಿರ್ಮಾಣ ಮಾಡುವುದಕ್ಕೆ ವ್ಯಯಿಸಿದನು. ಆದರೆ ಇಂದು ಜನಹಿತದ ನೆಪದಲ್ಲಿ ಸ್ವಹಿತದ ಕಾರ್ಯಗಳೇ ನಡೆದಿವೆ ಎಲ್ಲೆಲ್ಲೂ.

ಸದ್ಯ ಶ್ರೀಪುರುಷನ ಶಾಸನಗಳು ಈ ಪ್ರದೇಶದಲ್ಲಿ ಮೂರು ಉಪಲಬ್ಧವಾಗಿದ್ದು ಅವು ಗಂಗರ ವಂಶಾವಳಿಯ ಮೇಲೂ ಆಡಳಿತದ ಮೇಲೂ ಸಾಕಷ್ಟು ಬೆಳಕನ್ನು ಚೆಲ್ಲುತ್ತವೆ. ಇದುವರೆಗಿನ ಇತಿಹಾಸದ ಪುಸ್ತಕಗಳಲ್ಲಿ ಶ್ರೀಪುರುಷನನ್ನು ಒಂದನೆಯ ಶಿವಮಾರನ ಮೊಮ್ಮಗನೆಂದು ಬರೆದಿದೆ. ಈತನ ಬಿರುದಾವಳಿಗಳನ್ನೆಲ್ಲ ಶ್ರೀ ಪುರುಷನೂ ಧರಿಸಿದ್ದರಿಂದ ಈ ಇಬ್ಬರ ಚರಿತ್ರೆ. ಚರಿತ್ರೆಗಳಲ್ಲಿ, ಎಪಿಗ್ರಾಫಿಯ ಕರ್ನಾಟಕಗಳ ಪುಟಗಳಲ್ಲಿ. ಕಲಸು ಮೇಲೋಗರವಾಯಿತು. ಶ್ರೀಪುರುಷನ

---

[11] Ep. Car. Vol. VII (1979) Md. 35, p. 572. The passage has been, here, wrongly translated as "as a seducer of others' young wives he is a blameless Dēvarāya (Indra)." Seduction of young or old wives is the same ! Indra took away married women and whereas Sivamara took away unmarried. As such he was blameless. This point has been completely ignored.

[12] ibid,. p. 221

ದೇವರಹಳ್ಳಿ ಶಾಸನ[13] ಹುಳ್ಳಿಸಹಳ್ಳಿ ಶಾಸನ[14] ಗಳಿಗೆಕೆರೆ ಶಾಸನ[15] ಇತ್ಯಾದಿಗಳಲ್ಲಿ ಒಂದನೆಯ ಶಿವಮಾರನನ್ನು ಕೊಂಗಣಿ (ಜ್ಗಣಿ) ಮಹಾರಾಜ ಭೂವಿಕ್ರಮನ ಮೊಮ್ಮಗನೆಂದೇ ಬರೆದಿದೆ. ಹಳ್ಳಿಗೆರೆಯ ಶಾಸನದಿಂದ ಶಿವಮಾರನಿಗೆ 'ಪೃಥ್ವೀಕೊಙ್ಗಣಿ ವರ್ಮ' ಎಂಬ ಹೆಸರಿದ್ದುದು ಸ್ಪಷ್ಟವಿದೆ. ಶ್ರೀಪುರುಷನನ್ನು ಯಾರ ಪುತ್ರನೆಂಬುದು ಇನ್ನೂ ಗುರುತಿಸಲಾಗಿಲ್ಲ. ಶ್ರೀ ಪುರುಷನು ವಾಸ್ತವದಲ್ಲಿ ಭೂವಿಕ್ರಮನ ತಮ್ಮ 'ನವಕಾಮ' ದೊರೆಯ ಮೊಮ್ಮಗನು[16] ಆದರೆ 'ನವಕಾಮ' ಎಂಬುದನ್ನು ನಮ್ಮ ಕೆಲ ಇತಿಹಾಸಕಾರರು ಒಂದು ಬಿರುದನ್ನಾಗಿಸಿ ಅದನ್ನು ಒಂದನೆಯ ಶಿವಮಾರನಿಗೆ ಲಗತ್ತಿಸಿ ದ್ದಾರೆ. ಈಗ ಈ ಸಂದರ್ಭದಲ್ಲಿ ಶ್ರೀ ಪುರುಷನ ನಂಬಲರ್ಹವಾದ ಯಾವುದಾದ ರೊಂದು ಶಾಸನವನ್ನು ಪರಿಶೀಲಿಸುವುದು ವಿಹಿತ. ಇತಿಹಾಸಕಾರರೆಲ್ಲರೂ ಒಪ್ಪಿಕೊಂಡಿ ರುವ[17] ನಮ್ಮ ನಾಗಮಂಗಲದ ದೇವರಹಳ್ಳಿ ಶಾಸನವನ್ನು ಎತ್ತಿಕೊಳ್ಳೋಣ :

ಪಂಕ್ತಿಗಳು 20 ಶ್ರೀ ವಿಕ್ಕ್ರಮ ಪ್ರಥಿತ ನಾ

21 ಮಧೇಯಃ ತಸ್ಯಪುತ್ರಃ ಅನೇಕ ಸಮರ ಸಂಪಾದಿತ ವಿಜೃಮ್ಭಿತ
ದ್ವಿರದ (ರದನ) ಕುಲಿಶಾಘಾತಃ

22 ವ್ರಣಸಂರೂಢಭಾಸ್ವದ್ವಿಜಯಲಕ್ಷಣಲಕ್ಷ್ಮೀಕೃತ ವಿಶಾಲ ವಕ್ಷಸ್ಥಲಃ
ಸಮಧಿಗತ ಸಕಲ ಶಾಸ್ತ್ರಾ

23 ರ್ಥ ತತ್ವಸಮಾರಾಧಿತ ತ್ರಿವರ್ಗ್ಗೋ ನಿರವದ್ಯಚರಿತಙ್ಪ್ರತಿದಿನಮಭಿ
ವರ್ದ್ಧಮಾನ ಪ್ರಭಾವೋ ಭೂವಿಕ್ರಮ

24 ನಾಮಧೇಯಃ ಅಪಿಚ (ಃ) ನಾನಾಹೇತಿ ಪ್ರಹಾರ ಪ್ರವಿಘಟಿತ
ಭಟೋರಸ್ಕವಾಟೋತ್ಥಿತಾಸೃಗ್ಧಾರಾಸ್ವಾದಪ್ರ

25 ಮತ್ತಾ ದ್ವಿಪಪತಿ ಚಿರಾಣಿ ಕ್ಷೋದ ಸಮ್ಮರ್ದ್ದ ಭೀಮೋ ಸಂಗ್ರಾಮೇ
ಪಲ್ಲವೇನ್ದ್ರನ್ನರಪತಿಮಜಯದ್ಯೋಪಿ

---

13 Ep. Car. Vol VII, Ng. 149, pp. 144 f

14 ibid., Md. 14, pp. 199 f

15 ibid , Vol. V, K. R. Nagar-105, pp 99 f

16 ibid., Vo.l VIII (BLR)Nagar-35 (Humcha Inscription)
ತಾಪಿಯು ತಡೆವರೆಗಂ ಧರ । ಣೀಪಲಿಯುಮನಾಳ್ದು ಬಾಹು ವಿಕ್ರಮದಿಂ ।
ಶ್ರೀವಿಕ್ರಮ ಭೂವಿಕ್ರಮ । ಭೂವಲ್ಲಭರಧಿಕ ಕೀರ್ತಿವಲ್ಲಭರಾದರ್ ॥
ಅಂತಾತನನುಜ ನೃಪಕಾಮಂ ಗಜದಾನವಾರ್ಥಿಗಿತ್ತು ಚಾಗಿ ಎಂಬ ಪೆಸರ ಪಡೆದ ನಾತನ ಮೊಮ್ಮಂ ಶ್ರೀಪುರುಷ ಶ್ರೀವಲ್ಲಭನೆ ನಿಪ್ಪನ್.........ಇತ್ಯಾದಿ

17 ಗಂಗರ ಕಾಲದ ಹಲವು ತಾಮ್ರಪಟಗಳು ಕೂಟದಾಖಲೆಗಳಾಗಿವೆ.

26 ಳನ್ನಾಭಿಧಾನೇ ರಾಜಾ ಶ್ರೀವಲ್ಲಭಾಖ್ಯಸ್ಸಮರ ಶತ ಜಯಾವಾಪ್ತ ಲಕ್ಷ್ಮೀ
ವಿಲಾಸಃ [॥*] **ತಸ್ಯಾನು**

27 **ಜೋ** ನತನರೇನ್ದ್ರ ಕಿರೀಟ ಕೋಟಿ ರತ್ನಾರ್ಕದೀಧಿತಿ ವಿರಾಜಿತ
ಪಾದಪತ್ಮಃ ಲಕ್ಷ್ಮ್ಯಾ ಸ್ವಯಂವೃತ **ಪತಿರ್ನ್ನವಮಾ**

28 **ಮನಾವಮಾ** ಶಿಷ್ಟ ಪ್ರಿಯೋರಿಗಣದಾರುಣ ಗೀತ ಕೀರ್ತ್ತಿಃ [॥*]
ತಸ್ಯಕೊಂಗಣಿಮಹಾರಾಜಸ್ಯಶಿವಮಾ

29 **ರಾಪರ ನಾಮಧೇಯಸ್ಯ ಪೌತ್ರಃ** ಸಮವನತ ಸಮಸ್ತ ಸಾಮನ್ತ
ಮಕುಟತಟಘಟಿತ

30 ಹಲರತ್ನವಿಲಸದಮರಧನುಷ್ಷಣ್ಡಮಣ್ಡಿತಚರಣನಖಮಯೂಖೋ
ನಾರಾಯ

31 ಣ ನಿಹಿತ ಭಕ್ತಿಃ ಶೂರ ಪುರುಷತುರಗನರವಾರಣಘಟಾಸಂಘಟ್ಟ
ದಾರುಣಸಮರಶಿರಸಿ

32 ನಿಹಿತಾತ್ಮಕೋಪೋ ಭೀಮಕೋಪಃ ಪ್ರಕಟ ರತಿಸಮಯ ಸಮನುಪ
ರ್ತ್ತನ ಚತುರಯುವತೀಜನಲೋ

33 ಕಧೂರ್ತ್ತೋ ಲೋಕಧೂರ್ತ್ತಃ ಸುದರ್ಧರಾನೇಕಯುದ್ಧಮೂರ್ದ್ಧ
ಲಬ್ಧ ವಿಜಯ ಸಂಪದಹಿತ ಗಜಘ

34 ಟಾ ಕೇಸರಿ ರಾಜಕೇಸರಿ ಅಪಿಚ । **ಯೋಗಂಗಾನ್ವಯ ನಿರ್ಮ್ಮಲಾಮ್ಬರತ**
ಲವ್ಯಾಭಾಸನ ಪ್ರೋಲಸನ್ಮಾರ್ತ್ತ

35 ಣ್ಡೋರಿ ಭಯಂಕರಃ ಶುಭಕರಸ್ಸನ್ಮಾರ್ಗ ರಕ್ಷಾಕರಃ ಸೌರಾಜ್ಯಂ ಸಮುಪೇತ್ಯ
ರಾಜ್ಯ ಸಮೀತೌ ರಾಜನ್ಯಗಣ್ಯೈರು

36 ತ್ತಮೈ ರಾಜಾ **ಶ್ರೀಪುರುಷಶ್ಚಿರಂ** ವಿಜಯತೇ ರಾಜನ್ಯ ಚೂಳಾಮಣಿಃ [॥*]
ಕಾಮೋ ರಾಮಾಮು ಚಾಪೇದಶರಥತ

37 ನಯೋ ವಿಕ್ರಮೇ ಜಾಮದಗ್ನ್ಯಃ ಪ್ರಾಜ್ಯೈಶ್ವರ್ಯ್ಯೇ ಬಲಾರಿರ್ಬ್ಬಹು
ವಹುಸಿ ರವಿಸ್ಚ ಪ್ರಭುತ್ವೇ

38 ಧನೇಶಃ ಭಯೋ ವಿಖ್ಯಾತ ಶಕ್ತಿ ಸ್ಫುಟತರಮಖಿಲಂ ಪ್ರಾಣಭಾಜಾಂ
ವಿಧಾತಾ ಧಾತ್ರ ಸೃಷ್ಟಃ

39 ಪ್ರಜಾನಾಂ ಪತಿರಿತಿ ಕವಯೋ ಯಂ ಪ್ರಶಂಸನ್ತಿ ನಿತ್ಯಂ [॥*] ತೇನ
ಪ್ರತಿದಿನ ಪ್ರವೃತ್ತ ಮಹಾದಾನ ಜನಿತ

40 ಪುಣ್ಯಾಹ ಘೋಷ ಮುಖರಿತ ಮನ್ದಿರೋದರೇಣ **ಶ್ರೀಪುರುಷಪ್ರಥಮನಾಮ**
ಧೇಯೇನ ಪ್ರಿಥುವೀಕೊಙ್ಗ

41 ಣಿ ಮಹಾರಾಜೇನ ।...........ಇತ್ಯಾದಿ[18]

---

18 Ep Car. Vol. VII, Ng. 149, pp. 144-150

ಈ ಶಾಸನದಿಂದ ಶ್ರೀ ಪುರುಷನಿಗೂ "**ಪೃಥ್ವೀಕೋಙ್ಗಣಿ ಮಹಾರಾಜ**" ಎಂಬ ಬಿರುದು ಇದ್ದಿತು ; ಆತ ಗಂಗವಂಶದ ಗಗನದಲ್ಲಿ ಸೂರ್ಯನಂತೆ ಪ್ರಕಾಶಿಸುತ್ತಿದ್ದ: ಸನ್ಮಾರ್ಗವನ್ನು ರಕ್ಷಿಸುತ್ತಿದ್ದ: ವೈರಿಗಳಿಗೆ ಭಯಂಕರನಾಗಿದ್ದ: ಕುಬೇರನ ಹಾಗೆ ಸಂಪದ್ಭರಿತನಾಗಿದ್ದ: ಪ್ರಜೆಗಳನ್ನು ತನ್ನ ಪ್ರಾಣವನ್ನು ಪ್ರೀತಿಸುವಂತೆ ಪ್ರೀತಿಸುತ್ತಿದ್ದ. ಪ್ರತಿದಿನ ದಾನಗಳನ್ನು ಕೊಡುವ ನೇಮವನ್ನು ಹೊಂದಿದ್ದ; ಆದಕ್ಕಾಗಿ ಆತನ ಅರಮನೆಯಲ್ಲಿ ಪುಣ್ಯಾಹವಾಚನ ಪ್ರತಿದಿನ ನಡೆಯುತ್ತಿತ್ತು : ಮಹಾರಾಜಾಧಿರಾಜ ಪರಮೇಶ್ವರ ಶ್ರೀಜಸಹಿತದೇವ ಎಂದು ಕರೆಯಲ್ಪಡುತ್ತಿದ್ದ' ಎಂದು ಮುಂತಾಗಿ ತಿಳಿದುಬರುತ್ತದೆ. ಈ ಶಾಸನವನ್ನು ಕ್ರಿ.ಶ. 776-77 ಕ್ಕೆ ಹೊಂದುವ ಶಾ. ಶ. 698 ರಲ್ಲಿ ಬರೆದಿರುವುದರಿಂದ ಮತ್ತು ಅದು ರಾಜನ ಆಳ್ವಿಕೆಯ 50 ನೇಯ ವರ್ಷವೆಂದೂ ಸ್ಪಷ್ಟ ಹೇಳಿರುವುದರಿಂದ ಅವನು ಕ್ರಿ. ಶ. 726ರಲ್ಲಿ ಪಟ್ಟಕ್ಕೆ ಬಂದನು. ಈ ಶಾಸನ ಬರೆದ ಕಾಲದಲ್ಲಿ ಗಂಗರಾಜ್ಯಕ್ಕೆ ರಾಜಧಾನಿ ಮಾನ್ಯಪುರವಾಗಿತ್ತು. ಈ ಮಾನ್ಯಪುರ ಈಗಿನ ನೆಲಮಂಗಲ ತಾಲ್ಲೂಕಿನ ಮಣ್ಣೆಗ್ರಾಮ, ಶ್ರೀಪುರುಷ. ಶಿವಮಾರ ಮಹಾರಾಜನಿಗೆ ನೇರವಾಗಿ ಮೊಮ್ಮಗನೆನ್ನುವುದಕ್ಕೆ ಇಲ್ಲಿಲ್ಲೂ ಸುಳಿವಿಲ್ಲ. ಇಬ್ಬರೂ 'ಪೃಥ್ವೀಕೊಙ್ಗಣಿ ಮಹಾರಾಜ' ಎಂಬ ಬಿರುದನ್ನೇ ಹೊಂದಿದವರು. ಶಿವಮಾರ ಮಹಾರಾಜನಿಗೆ ಸಂತತಿ ಇಲ್ಲದಿರಲು ತಮ್ಮನ ಮೊಮ್ಮಗ ಪಟ್ಟಕ್ಕೆ ಬಂದಂತೆ ತೋರುತ್ತದೆ. ಅಥವಾ ಇನ್ನೇನು ಘಟನೆ ನಡೆಯಿತೊ ಅದು ಸಂಶೋಧನೆಯಲ್ಲಿ ಪತ್ತೆಯಾಗಬೇಕಾದ ವಿಷಯ. ಕೆಲವರು ಈ ಮಣ್ಣೆ ಅಥವಾ ಮಾನ್ಯಪುರವನ್ನೇ ಮುಂದೆ ಚೋಳರ ಶಾಸನಗಳಲ್ಲಿ ಕಂಡುಬರುವ "ಮನ್ನೆಕಡಕ"[20] ಊರಿನೊಂದಿಗೆ ಸಮೀಕರಿಸಿದ್ದಾರೆ. ಮಾನ್ಯ ಖೇಟಕ ಮನ್ನೆಕಡಕ್ಕವೇ ವಿನಾ ಮಾನ್ಯಪುರ ಎಂಬುದು ಅಲ್ಲ. ಇಲ್ಲಿ ಶಬ್ದದ ಸ್ವರೂಪವನ್ನಾದರೂ ಗಮನಿಸುವುದು ಉಚಿತ. ಈ ಮಾನ್ಯಖೇಟಕ ಕಲ್ಯಾಣದ ಚಾಳುಕ್ಯರ ಮೊದಲರಾಜಧಾನಿ ಸಹ ; ಯಾವುದನ್ನು ೧ ನೆಯ ರಾಜೇಂದ್ರ ಚೋಳನ ಕಾಲದಲ್ಲಿ ಆತ ಗೆದ್ದನು. ರಾಜೇಂದ್ರನ ಸೈನ್ಯ ಕೊಲ್ಲಿಪಾಕೆಯವರೆಗೆ ಹೋಗಿತ್ತೆಂಬುದೂ ಮನ್ನೆಕಡಕ್ಕದ ಜೊತೆಗೆ ಅದು ಬಂದಿರುವುದೂ ಇಲ್ಲಿ ಗಮನಾರ್ಹ. ಇದಕ್ಕೂ ಹೆಚ್ಚಿನ ಸಂಗತಿಯೆಂದರೆ ಈ 'ಮಾನ್ಯಪುರ' ಕಿ. ಶ. 963 ರಿಂದ ಈಚೆಗೆ ಗಂಗರಿಗಾಗಲಿ ಕಲ್ಯಾಣದ ಚಾಳುಕ್ಯರಿಗಾಗಲಿ ರಾಜಧಾನಿ ಆಗಿದ್ದಿಲ್ಲ. ಶ್ರೀ ಪುರುಷನ ಅನಂತರ ಇಮ್ಮಡಿ ಶಿವಮಾರನ ಕಾಲದಲ್ಲಿ ತಲವನಪುರವೇ ಬಹಳ ಮುಖ್ಯವಾದ ನಗರವಾಯಿತು. ರಾಷ್ಟ್ರಕೂಟರು ಕ್ರಿ. ಶ. 808ರಲ್ಲಿ ಗೆದ್ದು ತಮ್ಮ ಅಧೀನ ತೆಗೆದಂ

---

[19] ಶ್ರೀ ಪುರುಷನಿಗೆ 'ಜಸಹಿತದೇವ' ಎಂಬ ಹೆಸರಿದ್ದ ಸಂಗತಿಯನ್ನು ಇದುವರೆಗೆ ಗುರುತಿಸಲಾಗಿಲ್ಲ. ಅನುವಾದ ಮಾಡುವಲ್ಲಿ ತಪ್ಪಾಗಿ ವಿವರಿಸಿದ್ದಾರೆ. ಶ್ರೀಜ + ಸಹಿತ' ಎಂದುಬರೆದಿದ್ದಾರೆ.

[20] ibid., Mandya 53, p. 234

ಕೊಂಡದ್ದು ಈ ತಲವನಪುರವನ್ನೇ ಎಂಬುದು ನಮಗೆ ರಾಷ್ಟ್ರಕೂಟ ರಣಾವಲೋಕ ಕಂಬರಾಜನ ಬದನಗುಪ್ಪೆಯ ಶಾಸನದಿಂದ ಸ್ಪಷ್ಟವಿದೆ.[21] ಅದು ಆಗ ರಾಜಧಾನಿ ಯಾಗಿತ್ತೆಂಬುದೂ ಶಾಸನದಲ್ಲೇ ಬರೆದಿರುವುದರಿಂದ ಸಂದೇಹಕ್ಕೆ ಎಡೆ ಇಲ್ಲ. ಇಮ್ಮಡಿ ಮಾರಸಿಂಹನು ತಲಕಾಡಿನಲ್ಲಿ ಇರುತ್ತಿದ್ದನೆಂಬುದು 'ರಟ್ಟಮತ' ಎಂಬ ಗ್ರಂಥದಿಂದಲೂ ಸ್ಪಷ್ಟವಿದೆ.[22] ಚೋಳರನ್ನು ಮುರಿಯುವವರೆಗೆ ತಲಕಾಡು ಪ್ರಮುಖ ರಾಜಧಾನಿಯಾಗಿದ್ದಿತು. ಚಾಳುಕ್ಯರು ಹೊಯ್ಸಳರು—ಹೊಯ್ಸಳ ದೊರೆ ವಿನಯಾದಿ ತ್ಯನ ಕಾಲದಲ್ಲಿ ಸಂಬಂಧಿಗಳಾಗಿ ಚೋಳರನ್ನು ಮುರಿದರು. ರಾಜಧಾನಿಯ ಕೇಂದ್ರ ತಲಕಾಡಿನಿಂದ ಶಶಪುರ, ಬೆಲಹುರ (ಬೇಲೂರು) ಮತ್ತು ದೋರಸಮುದ್ರದತ್ತ ಸ್ಥಳಾಂತರವಾಯಿತು.

ಪ್ರಸ್ತುತ ಶ್ರೀಪುರುಷನ ಈ ದೇವರಹಳ್ಳಿ ಶಾಸನ ಜೈನಮುನಿ ವಿಮಳಚಂದ್ರಾ ಚಾರ್ಯನಿಗೆ ಕೊಟ್ಟ ದಾನವನ್ನು ದಾಖಲಿಸುತ್ತದೆ; ಇನ್ನೂ ಒಂದು ವಿಷಯದ ಮೇಲೆ ಬೆಳಕನ್ನು ಚೆಲ್ಲುತ್ತದೆ. ಶ್ರೀಪುರುಷನು ಸ್ವತಃ ವೈದಿಕ ಧರ್ಮಾನುಯಾಯಿ. ಆದರೆ ದತ್ತಿ ಬಿಟ್ಟುದು ಜೈನ ಯತಿಗಳಿಗೆ, ಇನ್ನೊಂದು ಧರ್ಮದ ಬಗ್ಗೆಯೂ ಆದರ, ಗೌರವ, ಇದ್ದುದು ತುಂಬ ಗಮನಾರ್ಹ ಸಂಗತಿ. ದತ್ತಿಪಡೆದ ಪ್ರತಿಗ್ರಹಿಯ ವಿವರಗಳು. ದತ್ತಿ ಭೂಮಿಯ ವಿವರಗಳು ಹೀಗಿವೆ: ಮೂಲಗಣ: ನಂದಿಸಂಘ; ಎರೆಗಿತ್ತೂರಗಣ.[23] ಪುಲಿಕಲ್‌ಗಚ್ಛ—ಎರೆಗಿತ್ತೂರು ಪ್ರಾಯಃ ಹೆಗ್ಗಡದೇವನಕೋಟೆ ತಾಲ್ಲೂಕಿನ ಕಿತ್ತೂರು. ಇದು ಪುನ್ನಾಟ ವಿಷಯದ ರಾಜಧಾನಿ ಆಗಿತ್ತು. 'ಪುಲಿಕಲ್' ಈ ಪ್ರದೇಶದ ಊರೆಂಬುದು ಇನ್ನೂ ಖಚಿತವಾಗಿಲ್ಲ. ಯತಿಗಳು ದೇಶಾಂತರಿಗಳಾದುದ ರಿಂದ ಯಾರದಾದರೂ ಶಿಷ್ಯ ಎಲ್ಲಿಯಾದರೂ ಇರಬಹುದು. ಆದುದರಿಂದ ಈ ಪುಲಿಕಲ್ ಸದ್ಯ ಯಾವುದು ಎನ್ನುವುದು ಸಮಸ್ಯೆ. 'ಹುಲಿಕಲ್ + ದುರ್ಗ' ಪ್ರಾಚೀನ ಪುಲಿಕಲ್ ಆದರೂ ಆಗಿರಬಹುದು. ಸಾಮಾನ್ಯವಾಗಿ ಚತುಸ್ಸೀಮೆಗಳನ್ನು ಹೇಳುವುದಕ್ಕೆ ಪ್ರತಿಯಾಗಿ ಇಲ್ಲಿ ಅಷ್ಟದಿಕ್ಕುಗಳಲ್ಲಿಯೂ ಇರುವ ಗಡಿವಸ್ತುಗಳನ್ನು ವಿವರಿಸಿದೆ. ದತ್ತಿ ಕೊಟ್ಟವರು, ಬಸ್ತಿ ಕಟ್ಟಿದವರು, ರಾಜಮನೆತನದ ವ್ಯಕ್ತಿಗಳು. ಮೂವರು ವ್ಯಕ್ತಿಗಳು (ಇಲ್ಲಿ ತಂದೆ, ಮಗ ಹಾಗೂ ಸೊಸೆ ಇವರು) ನಿಗ್ಗುಂದ ವಿಷಯದಲ್ಲಿ 'ಪೊನ್ನಳ್ಳಿ'

---

[21] (a) MAR 1927, No. 122
(b) Ep. Car. Vol. IV Chamarajanagar

[22] ರಟ್ಟಮತ (ಸಂ. ಎಚ್. ಶೇಷಯ್ಯಂಗಾರ)

[23] ಎರಡು ಸಲ ಗಣದ ಉಲ್ಲೇಖ ಬಂದಿರುವುದು ಆಶ್ಚರ್ಯ. ಸಾಮಾನ್ಯವಾಗಿ ಮೂಲ ಸಂಘದ ಅನಂತರ ಗಣಗಳು ಬರುವುದು ರೂಢಿ. ಇಲ್ಲಿ ಮೊದಲು 'ಗಣ' ಅನಂತರ 'ಸಂಘ' ಮತ್ತೆ ಆದಾದ ಮೇಲೆ 'ಗಣ' ಬಂದಿರುವುದು ಅಚ್ಚರಿ!

ಗ್ರಾಮವನ್ನು ಶ್ರೀಪುರದ 'ಲೋಕತಿಲಕ ಜಿನಾಲಯ'ಕ್ಕೆ ಜೀರ್ಣೋದ್ಧಾರ, ಸುಣ್ಣಬಣ್ಣ, ಹಾಗೂ ದೇವತಾ ಪೂಜೆಗಳಿಗೆಂದು ಶ್ರೀಪುರುಷ ಅಥವಾ ಮಹಾರಾಜಾಧಿರಾಜ ಪರಮೇಶ್ವರ ಶ್ರೀಜಸಹಿತದೇವನಿಂದ 'ಸರ್ವ್ವಪರಿಹಾರ' (=ಸರ್ವಬಾಧಾ ಪರಿಹಾರ =ಸಂಪೂರ್ಣ ಕರವಿಮುಕ್ತ) —ಆ ಗ್ರಾಮದ ಕಂದಾಯ ಹಾಗೂ ಆದಾಯಗಳೆಲ್ಲ ವನ್ನೂ ಜಿನಾಲಯದ ಶ್ರೀಕಾರ್ಯಕ್ಕೆಂದು ಮಾಡಿಸಿ ಬಿಡಿಸಿಕೊಟ್ಟರು.

ದುಣ್ಡು । ನಿರ್ಗುಂದ ಯುವರಾಜ
ಪರಮಗೂಳ । ಪ್ರಿಥುವೀನಿರ್ಗುಂದರಾಜ
ಹೆಂ. ಕುನ್ದಾಚ್ಚಿ

ಈಕೆಯ ತಂದೆ ಸಗರಕುಲದ ಮರುವರ್ಮ್ಮ ತಾಯಿ ಪಲ್ಲವರಾಜತನಯೆ. ಈ ದುಣ್ಡು ಅಥವಾ ನಿರ್ಗುಂದ ಯುವರಾಜನನ್ನು ಶಾಸನದಲ್ಲಿ 'ಶ್ರೀಮದ್ಬಾಣಕುಲಕಲಃ'[24] ಎಂದು ಹೇಳಿರುವುದರಿಂದ ಆತ ಬಾಣಕುಲವನ್ನು ಮಥಿಸಿ ಕೋಲಾಹಲ ಉಂಟುಮಾಡಿ ದವನು. ಅನುವಾದದಲ್ಲಿ 'the confounder of the Bāṇakula' ಎಂದು ಸರಿಯಾಗಿಯೆ ಬರೆದಿದೆ. ಇಷ್ಟೆಲ್ಲ ಬೆಣ್ಣೆಯಷ್ಟು ಬೆಳ್ಳಗಿದ್ದರೂ ದುಣ್ಡು ಹಾಗೂ ಪರಮಗೂಳ ಇವರು ಬಾಣಕುಲದವರಾಗಿದ್ದಾರೆ, ಎಪಿಗ್ರಾಫಿಯ ಕರ್ನಾಟಕದ ಪರಿಷ್ಕೃತ ಆವೃತ್ತಿಯ ಮುನ್ನುಡಿಕಾರನ ಕೈಯ್ಯಲ್ಲಿ! ಅರ್ಥವನ್ನು[25] ಸರಿಯಾಗಿ ಗ್ರಹಿಸಿದರೆ ದುಣ್ಡು ಹಾಗೂ ಆತನ ಪುತ್ರ ಬಾಣಕುಲದವರಲ್ಲ. ದುಣ್ಡು, ಪರಮಗೂಳ, ಮಾಧವ ಇವು ಗಂಗಾನ್ವಯಕ್ಕೆ ಹೆಚ್ಚು ಸಂಬಂಧಿಸಿವೆ. ಈ ಶಾಸನದಲ್ಲಿ ಬಂದಿರುವ ಆಡಳಿತ ಪದ್ಧತಿಯೂ ಗಮನಾರ್ಹವಾದ ಸಂಗತಿಯಾಗಿದೆ :

ಶ್ರೀಪುರುಷ—ಈತ ಮಹಾರಾಜಾದಿರಾಜ
ದುಣ್ಡು—ಈತ ಯುವರಾಜ
ಪರಮಗೂಳ—ಈತ ರಾಜ

---

24 Ep, Car. Vol. VII, Nagamangala, pp. 146, 531

25 'ದುಣ್ಡು' ಹಾಗೂ 'ಪರಮಗೂಳ' ಶಬ್ದಗಳ ಅರ್ಥ ಏನು ಎಂದು ವಿಚಾರಿಸಿದರೆ ನನಗೆ ಕಾಶಿಯಲ್ಲಿರುವ 'ಗಣಪತಿ' ಹಾಗೂ ಕಾಶಿಯಲ್ಲಿಯ ಗಂಗಾನದಿಯ ತಟ ಎಂದು ಅರ್ಥವಾಗುತ್ತದೆ.

ವಿಶ್ವೇಶಂ ಮಾಧವಂ ಧುಂಡಿಂ ದಂಡಪಾಣಿಂಚ ಭೈರವಂ
ವಂದೇ ಕಾಶೀಂ ಗುಹಾಂ ಗಂಗಾಂ ಭವಾನೀಂ ಮಣಿಕರ್ನಿಕಾಂ ॥

ಎಂಬ ಕಾಶಿಯ ಸ್ತುತಿಯನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು. 'ಪರಮಕೂಲ' =ಶ್ರೇಷ್ಠತಟಜ. ಕೂಲ =ಕೂಳ >ಗೂಳ—ಎಂದಾಗಿದೆ. ಧುಂಡಿ< ಧುಣ್ಡಿ >ದುಣ್ಡು> ಧುಣ್ಡು — ಆಗಿ ; ದುಣ್ಡು ಯುವರಾಜನಾಗಿದ್ದುದು ಇಷ್ಟು ಸ್ಪಷ್ಟವಿದ್ದು ಮುಂದೆ ಆತ ಎಲ್ಲಿಯೂ ಮಹಾಧಿರಾಜ ನಾಗಲಿಲ್ಲವೇ ? ಮಹಾಧಿರಾಜ ಶ್ರೀಪುರುಷನಿಗೆ ಆತ ದಾಯಾದಿಯಾಗಿದ್ದು ಹೆಚ್ಚು ಶಕ್ತನಾಗಿರದೆ ಹೋಗಿರಬಹುದು. ರಾಜಕೀಯಂ ಖಲು !

ಇಲ್ಲಿ ಅಧಿಕಾರಗಳನ್ನು ಮೂರು ಸ್ತರವಲ್ಲಿ ವಿಭಜಿಸಿದುದು ಕಂಡು ಬರುತ್ತದೆ. ಮುಖ್ಯ ಸಿರ್ಗುಂದ ವಿಷಯಕ್ಕೆ 'ಯುವರಾಜ'. 'ಮಹಾರಾಜನ' ಕೈಕೆಳಗೆ ಆತನ ವಂಶಸ್ಥರು ರಾಜ್ಯವನ್ನು ಹಲವು ಆಡಳಿತ ವಿಭಾಗಗಳನ್ನಾಗಿಸಿ (ವಿಷಯಗಳನ್ನಾಗಿಸಿ) ಒಂದೊಂದು ವಿಭಾಗಕ್ಕೆ ಒಬ್ಬ ಯುವರಾಜನಿರಬಹುದಾಗಿತ್ತು. ಇಲ್ಲವೇ ಯುವರಾಜನಿಗೆ ಒಂದು ವಿಭಾಗವನ್ನು ನೋಡಿಕೊಳ್ಳಲು ನಿಯಮಿಸುತ್ತಿದ್ದರು. 'ಮಹಾರಾಜಾಧಿರಾಜ' ಎಲ್ಲ ರಾಜರ ಮೇಲಿನ ಅಧಿಕಾರವನ್ನು ಸೂಚಿಸುತ್ತದೆ. ರಾಜರು ಅನೇಕ; ಯುವರಾಜರೂ ಅನೇಕ; ಆದರೆ 'ಮಹಾರಾಜಾಧಿರಾಜ' ಮಾತ್ರ ಒಬ್ಬ. ಈ ಅಧಿಕಾರ ಸಾರ್ವಭೌಮತ್ವವನ್ನು ಸೂಚಿಸುತ್ತದೆ. ಗಂಗದೊರೆ ಮಾರಸಿಂಹನ (I) ಆಲೂರ ಶಾಸನದಲ್ಲೂ ಯುವರಾಜನ ಪದವಿ ಒಂದಿತ್ತೆಂಬುದು ಸ್ಪಷ್ಟವಿದೆ. "ಸಮಧಿಗತ ಯೌವರಾಜ್ಯ ಪದೇನ" "ಮಾನ್ಯಪುರಮಧಿವಸತಿ ವಿಜಯಸ್ಕಂಧಾವಾರೇ ಶ್ರೀಮದ್ಯುವರಾಜ ಮಾರಸಿಂಹಃ" ಎಂಬ ವಾಕ್ಯಗಳನ್ನು ಅವಲೋಕಿಸಬೇಕು.

ಶ್ರೀಪುರುಷನ ಪುರಿಗಾಲಿ ಶಾಸನವು[26] (ಮಳವಳ್ಳಿ ತಾಲೂಕು) ಶ್ರೀಪುರುಷ ಮಹಾರಾಜರು ಆಳುತ್ತಿರಲು 'ಕುಸ್ದಸತ್ತಿ' ಅರಸನು ಪಡಗರೆ–300 ಪ್ರಾಂತವನ್ನು ಆಳುತ್ತಿದ್ದನು ಮತ್ತು ಪುವಗ್ರಾಮವನ್ನು ಮುದುಗುನ್ದೂರ ಸಿಜ್ಗಡಿ ಅರಸನು ಆಳುತ್ತಿದ್ದನು ಎಂದು ತಿಳಿಸುವುದರ ಜೊತೆಗೆ ಆ ಊರ ಅಳಿವಿನಲ್ಲಿ ಊರರಸನು ಬಿದ್ದನು ಎಂದೂ ತಿಳಿಸಿದೆ. ಆಸ್ತಿ ಆಗ ಘನಸರ್ಕಾರದ್ದಾಗುತ್ತದೆ. ಆ ಸರ್ಕಾರದವರು ಆ ಸಂಪತ್ತನ್ನು ಅಲ್ಲಿಯೆ ಪ್ರಜೆಗಳ ಹಿತಕ್ಕಾಗಿ ಬಳಸಿದರು. ಆ ಊರ "ಪನ್ನಿರ್ವ್ವರು" ದೇವಸ್ಥಾನವನ್ನೂ ಕೊಂಗಣಿಕೆಜೆಯನ್ನೂ ಕಟ್ಟುವ ಭಾರವನ್ನು ಹೊತ್ತರು. ಸಂಪತ್ತು ಮಹಾರಾಜರ ಅಧಿಗತವಾಗದಿದ್ದರೆ, ಈ 'ಪನ್ನಿರ್ವ್ವರ' ವಿಶ್ವಸ್ಥಮಂಡಳಿ ಕೊಂಗಣಿ ಕೆರೆಯನ್ನು ಕಟ್ಟುವ ಪ್ರಮೇಯ ಬರುತ್ತಿದ್ದಿಲ್ಲ. ಪ್ರತಿಯೊಂದು ಊರಿನ ಕಂದಾಯದ ಆದಾಯದಲ್ಲಿ ಆ ಊರಿನ ಅಭಿವೃದ್ಧಿಗೆ ಮೀಸಲು ರೂಪದಲ್ಲಿ ಹಣ ಇಡದಿದ್ದರೆ ಆ ಊರಿನ ಸತತ ಅಭಿವೃದ್ಧಿಗೆ ಸಾಧ್ಯವಾಗಲು ಅವಕಾಶಗಳೇ ಇರುವುದಿಲ್ಲ. ಇದನ್ನು ನಮ್ಮ ಈಗಿನ ರಾಜಕಾರಣಿಗಳು ತಿಳಿದುಕೊಳ್ಳಬೇಕಾಗಿದೆ. ಪ್ರಾಚೀನ ಕಾಲದಲ್ಲಿ ದೇವಸ್ಥಾನ ಹಾಗೂ ಕೆರೆ ಇತ್ಯಾದಿಗಳು ಲೋಕೋಪಯೋಗಿ ಕಾರ್ಯಗಳಾಗಿದ್ದವು. ಕೆರೆ ಆಹಾರದ ಸಮಸ್ಯೆಯನ್ನು ಬಿಡಿಸುತ್ತಿತ್ತು. ದೇವಾಯತನ ವಿದ್ಯೆಯ ದಾಹವನ್ನು ತೀರಿಸುವದರ ಜೊತೆಗೆ ಅನೇಕ ರೀತಿಯಲ್ಲಿ ಸಾಮಾಜಿಕ ಸಂಬಂಧಗಳನ್ನು ಒಂದು ಪರಿ

---

[26] Ep. Car. Vol. VIII, Malavalli–122, p. 419
ಶಿಲಾಶಾಸನಗಳು ಸಂಪೂರ್ಣ ಕನ್ನಡದಲ್ಲಿದ್ದು ಹಲವು ಪ್ರಾಚೀನ ಪ್ರಯೋಗಗಳನ್ನು ಹೊಂದಿದ್ದು ಅರ್ಥೈಸಲು ಕಷ್ಟಕರದ್ದಾಗಿವೆ. ತಾಮ್ರ ಶಾಸನಗಳು ವಿಶೇಷ ಸಂಸ್ಕೃತ ಪ್ರಚುರವಾಗಿದ್ದು ಸೀಮಾರೇಖೆಗಳ ವಿವರಣೆಯು ಮಾತ್ರ ಕನ್ನಡದಲ್ಲಿ ಇವೆ.

ಮಿತಿಯಲ್ಲಿ ಸೃಷ್ಟಿಸುತ್ತಿತ್ತು, ಅವಕಾಶಗಳನ್ನು ಕಲ್ಪಿಸುತ್ತಿತ್ತು. ಈ ಶಾಸನದಲ್ಲಿ ಬರುವ ಶಾಪಾಶಯವೂ ತುಂಬ ಕುತೂಹಲಕಾರಕವಾಗಿದೆ.

ದೇವರಿಗೆಕ್ಕಟ್ಟಿಮೆ ಕೊಂಗಣಿಕೆಜ ಕಟ್ಟುವ್ವೋರ್ ಪನ್ನಿರ್ವ್ವರು ಈ ಧರ್ಮ್ಮವಾನ್‌ನಟು ತ್ತೋನ ವಾರಣಾಸಿಯುಂ ಕವಿಲೆಯುಂ ಪಾರ್ವ್ವರುಮಾನ್ ಕೊನ್ದಪಾಪಮಕ್ಕೆ ಇಬಾನ್ ಕೆಡವೇಟ್ಟಿನ್ನು ಮೀಪಾಪಮಕ್ಕೆ ಅದೋ ಅದೋ ಸಡವನ್

—ಧರ್ಮಕಾರ್ಯವನ್ನು ಕೆಡಿಸಿದವರಷ್ಟೆ ಪಾಪಿಗಳಲ್ಲ; ಕೆಡಿಸಲು ಹೇಳುವವರೂ ಅದೇ ಪಾಪಕ್ಕೆ ಹೋಗುವರು ! ಕೆಡಿಸಲು ಹೇಳಿದ ಪಾಪಿಯೂ ಅದೇ ಅಧೋಗತಿಗೆ ಹೋಗುವನು : ಅಧೋ ಅಧೋ ನಡೆವನ್. ನಮ್ಮ ಸುಖದುಃಖಗಳೇ ನಮ್ಮ ನಮ್ಮ ಪುಣ್ಯಪಾಪಗಳ ಪ್ರತಿಫಲಗಳು. ಈ ಲೋಕವೇ ಸ್ವರ್ಗ–ನರಕ. ಆಗಿನ ಕಾಲದಲ್ಲಿ ಇವು ಎರಡೂ ದೂರವಿದ್ದು ಸದ್ವರ್ತನೆಯೊಂದೇ ಮುಖ್ಯ ಗುರಿಯಾಗಿದ್ದಿತು. ಈಗಿನ ಕಾಲದಲ್ಲಿ ಇಲ್ಲಿ ಸಾಕಷ್ಟು ಸುಖವೂ ಸಿಕ್ಕಬಹುದು, ಸಾಕಷ್ಟು ಕಷ್ಟನೋವೂ ಅನುಭವಿಸ ಬಹುದು. ಆದರೆ ಸದ್ವರ್ತನೆ ಈಗ ಅಪರೂಪವಾಗಿದೆ.

ಶ್ರೀಪುರುಷನ ಆಳ್ವಿಕೆಗೆ ಸಂಬಂಧಿಸಿದ ಮಂಡ್ಯಜಿಲ್ಲೆಯಲ್ಲಿ ದೊರೆತ ಮೂರನೆಯ ಶಾಸನವೇ ಹುಳ್ಳೇನಹಳ್ಳಿಶಾಸನ.[27] ಇದಕ್ಕೆ ಶ್ರೀಪುರುಷನ "ಕೊವಳೆವೆಟ್ಟು" ಶಾಸನ ಎಂದೂ ಹೇಳುತ್ತಾರೆ. ಶ್ರೀಪುರುಷನ ಸಾಮನ್ತ ಬಾಣವಂಶದ ದಿಣ್ಡಿಗರಾಜನು 'ಕೊವಳೆವೆಟ್ಟು' ಗ್ರಾಮವನ್ನು ಬ್ರಹ್ಮದೇಯವಾಗಿ ಕೊಟ್ಟನು. ಆ ದತ್ತಿ ಗ್ರಾಮದ ಹೆಸರೇ ಶಾಸನಕ್ಕೆ ಅನಿಕೊಂಡು ಬಂದಿದೆ. ದಿಣ್ಡಿಗರಾಜನು ಕಬ್ಬಿಪ್ಪು–1100 (ಕಬ್ಬಿಪ್ಪುನಾಡು ಸಾಸಿರದೊಟ್ಟೊಬು) ನಾಡನ್ನು ಆಳುತ್ತಿದ್ದ. ಕೆಲವರು ಕಬ್ಬಿಪ್ಪು–1700 ಎಂದೂ ಅರ್ಥೈಸಿದ್ದಾರೆ. ಕಂಡರಣೆಕಾರ 'ದೆ'ಗೆ ಪ್ರತಿಯಾಗಿ 'ದೊ' ಕೆತ್ತಿರ ಬಹುದೆಂದು ಅವರ ಭಾವನೆ. ಶಾಸನದಲ್ಲಿ ಕಂಡರಿಸಿದ್ದನ್ನು ಯಥಾವತ್ತಾಗಿ ಸ್ವೀಕರಿಸಿ ದರೆ 'ಸಾಸಿರದೊಟ್ಟೊಬು' ಸಾಸಿರದ ಒಜ್ಜೊಬು ಎಂದಾಗುತ್ತದೆ. ಈ ಪ್ರದೇಶ ಕಬ್ಬಿಪ್ಪು–1000 ಎಂದೇ ಪ್ರಸಿದ್ಧವಾಗಿತ್ತು ಅನಂತರದ ಕಾಲದಲ್ಲಿ. ಈ ಸಂದರ್ಭದಲ್ಲಿ ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿಯ ಶಾಸನವನ್ನೂ ಕೃಷ್ಣರಾಜಪೇಟೆಯ ತೊಣಚಿ ಯಲ್ಲಿರುವ ಹೊಯ್ಸಳದೊರೆ ವಿನಯಾದಿತ್ಯನ ಶಾಸನವನ್ನೂ ಜ್ಞಾಪಿಸಿಕೊಳ್ಳಬಹುದು. ದತ್ತಿಬಿಟ್ಟ ಗ್ರಾಮದ ವಿವರ–ಚತುಸ್ಸೀಮೆಯ ಸ್ಪಷ್ಟೀಕರಣ–ಹೀಗಿದೆ :

---

[27] Ep. Car. Vol. VII, Mandya–14, p. 199 f

ಕಡವಿಗೆಱೆ
ಉತ್ತರ

ವೆಳ್ಗೊಳ ಕಾಲುವೆ	ಪಶ್ಚಿಮ	ಕೊವಳೆವೆಟ್ಟುಗ್ರಾಮ	ಪೂರ್ವ	ಪೆರ್ವ್ವೞ್ಳ

ದಕ್ಷಿಣ
ಬೆದಿಕೆಱೆವೊರಡಿ
ಹಾಗೂ ಮಡುವು

ಇಲ್ಲಿ ಒಂದು ಗಮನಾರ್ಹ ವಿವರಣೆಯಿದೆ. ಅದೆಂದರೆ ಆಗ 'ವೆಳ್ಗೊಳ' 'ಹಾಗೂ 'ಕಱ್ಬಪ್ಪು' ಇವು ಎರಡು ಭಿನ್ನ ಸ್ಥಳಗಳು. ಪ್ರಾಯಃ ಈಗಿನ ಹಳೆಯ ಬೆಳ್ಗೊಳವೇ ಈ 'ವೆಳ್ಗೊಳ' ಎಂದು ತೋರುತ್ತದೆ. ಇಂದಿನ ಶ್ರವಣಬೆಳ್ಗೊಳದ ಚಿಕ್ಕಬೆಟ್ಟ ಹಾಗೂ ದೊಡ್ಡ ಬೆಟ್ಟಗಳ ನಡುವೆ ಒಂದು ಕಾಲುವೆ ಇದ್ದುದಕ್ಕೆ ಕುರುಹು ಏನೂ ತೋರುತ್ತಿಲ್ಲ.

ಈ ಮೂರು ಶಾಸನಗಳು ಮೂರು ಆಡಳಿತ ವಿಭಾಗಗಳನ್ನು ಸೂಚಿಸಿವೆ :

(೧) ನಿರ್ಗುಂದ ವಿಷಯ, ಇದಕ್ಕೆ ಅಧಿಪತಿ ನಿರ್ಗುಂದಯುವರಾಜ (ದುಣ್ಡು)

(೨) ವಡಗರೆ (>ಬಡಗರೆ)-300, ಇದಕ್ಕೆ ಒಡೆಯ ಕುನ್ದಸತ್ತಿ

(೩) ಕಱ್ಬಪ್ಪು–1100, ಇದಕ್ಕೆ ಬಾಣಕುಲೋದ್ಭವ ದಿಣ್ಡಿಗನು ಒಡೆಯ.

ಊರು, ನಾಡು, ವಿಷಯ–ಹೀಗೆ ಮೂರು ಬಗೆಯ ವಿಭಜನೆಗಳು ಕಂಡುಬರುತ್ತದೆ. ಊರೊಡೆಯ–ಪೆರ್ಗಡೆ, ನಾಡೊಡೆಯ–ನಾಡಿಯರ ಹಾಗೂ ವಿಷಯಕ್ಕೊಡೆಯ ಯುವರಾಜ ಎಂದು ಅಧಿಕಾರಿಗಳನ್ನು ಗುರುತಿಸಲಾಗುತ್ತಿತ್ತೆಂದು ತೋರುತ್ತದೆ. ನಿರ್ಗುಂದ ವಿಷಯಕ್ಕೆ ನಿರ್ಗುಂದ ಯುವರಾಜನಿದ್ದ ಹಾಗೆ ಕೊಂಗಲ್ನಾಡು–8000 ಪ್ರದೇಶ[28] ಅಥವಾ ಕೊಙ್ಗನಾಡ ವಿಷಯ ಇತ್ಯಾದಿ ಪ್ರಾಂತಗಳಿಗೆ ಒಂದನೆಯ ಬೂತುಗನ ಪುತ್ರ ಎಱೆಗಂಗನು ಅಧಿಪತಿಯಾಗಿದ್ದನು. ಕೊಂಗಾಳ್ವರ ಇತಿಹಾಸ ಬರೆಯುವ ಸಂದರ್ಭದಲ್ಲಿ ಕೆಲವರು ಅವರ ಇತಿಹಾಸವನ್ನು ಕ್ರಿ.ಶ. ೧೦ನೆಯ ಶತಮಾನದಿಂದ ಆರಂಭಿಸುತ್ತಾರೆ. ಆದರೆ ಆ ಕೊಂಗರ ಅನೆಗಳನ್ನು ಒಂದನೆಯ ಬೂತುಗನು ರಣದಲ್ಲಿ ಕ್ರಿ.ಶ. ೯ನೆಯ ಶತಮಾನದಲ್ಲಿಯೆ ಗೆದ್ದಿದ್ದನು.[29] ಕೊಂಗಲ್ನಾಡನ್ನು ಆಳು

---

[28] Ep. Car. Vol. IV, Piriyapattana–28, p. 523 (1975)

[29] (a) ibid. Vol. III, Nanjanagudu-402, pp. 547 f (1974)
(b) ibid. Vol. IV, Chamarajanagar – 354 pp. 227 f (1975)

ತ್ತಿದ್ದ ಒಂದು ರಾಜ್ಯವು ಈ ಭೂಭಾಗದಲ್ಲಿದ್ದಿತು. ಇನ್ನು ಬೂತುಗನ ಅರಸಿ ಪರಮಬ್ಬೆಯು ಕುಗ್ಗನಾಡನ್ನು ಆಳುತ್ತಿದ್ದುದು ಶಾಸನದಲ್ಲಿ ಸ್ಪಷ್ಟವಾಗಿ ಬರೆದಿರುವುದರಿಂದ ಆಕೆಗೆ ಆಕೆಯ ತಂದೆತಾಯಂದಿರು ಬಳುವಳಿಯಾಗಿ ಆ ಊರನ್ನು ಅನುಭವಿಸಲು ಕೊಟ್ಟಿರಬೇಕು. ಈ ಕೊಂಗಲ್ನಾಡು, ಕೆ. ಆರ್. ಪೇಟೆ ತಾಲೂಕಿನ ಹೊನ್ನೇನ ಹಳ್ಳಿಯ ಭೂಭಾಗವನ್ನೂ ಒಳಗೊಂಡಿತ್ತೆಂಬುದು ಅಲ್ಲಿ ದೊರೆತಿರುವ ಇದೇ ಏಚಿಯಪ್ಪನ ಶಾಸನದಿಂದ ಸ್ಪಷ್ಟವಿದೆ.[30] ಇದರ ಪಕ್ಕದ ಊರು ಶ್ರವಣನ ಹಳ್ಳಿಯಲ್ಲಿ ದೊರೆತಿರುವ ಹೊಯ್ಸಳ ದೊರೆ ವಿಷ್ಣುವರ್ಧನನ ಪಿರಿಯರಸಿ ಕೊಂಗಾಳ್ವರಾಜಕುಮಾರಿ ಚಂದಲದೇವಿಯ ಶಾಸನವೂ ಈ ಭೂಭಾಗ ಕೊಂಗಲ್ನಾಡಿನಲ್ಲಿ ಸೇರಿತ್ತೆಂಬುದನ್ನು ಇನ್ನಷ್ಟು ವಿಶದವಾಗಿ ಸ್ಪಷ್ಟೀಕರಿಸಿದೆ. ತವರು ಮನೆಯ ರಾಜರು ಬಳುವಳಿಯಾಗಿ ಊರನ್ನು ಕೊಡುತ್ತಿದ್ದರೆಂಬುದೂ ಈ ಶಾಸನದಲ್ಲಿ ಸ್ಪಷ್ಟವಿದೆ :

1 ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋಘಲಾಂಛ
2 ನಂ ಜೀಯಾತ್ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ । ಸ್ವಸ್ತಿ
3 ಶ್ರೀಮನ್ಮಹಾಮಂಡಳೇಶ್ವರ ತ್ರಿಭುವನಮಲ್ಲ ತಳ
4 ಕಾಡುಗೊಣ್ಡ ಭುಜಬಳವೀರಗಂಗ ವಿಷ್ಣುವರ್ಧನ ಹೊಯ್ಸಳ
5 ದೇವರ ಪಿರಿಯರಸಿ ಚಂವಲದೇವಿಯರು ॥ ತ್ರಿಭುವನ ತಿಳ
6 ...... ತೀರ್ಥದ ವೀರಕೊಂಗಾಳ್ವಜಿನಾಲಯ
7 ದ ದೇವರ ಅಂಗಭೋಗಕ್ಕಂ ರಿಷಿಯರಾಹಾರದಾನಕ್ಕಂ ತ
8 ಮ್ಮ ಬಪ್ಪ ಪ್ರಿಥ್ವಿಯಕೊಂಗಾಳ್ವದೆವರವ [ರ್ಗ್ಗ] ಬಳಿವಳಿ ಬ
9 ಟ್ಟ ಮುಂದೆಗೆಜೆಯ ಶ್ರಿತಿಯೊಳಗೆ ಕಾವನಹಳ್ಳಿಯ ತಮ್ಮ
10 ತಮ್ಮ ದುದ್ದಮಲ್ಲಿ ದೇವನು ತಾವು ಬಿಟ್ಟು ಶ್ರೀಮೂಲಸಂಘ
11 ದೇಸಿಗಗಣ ಪುಸ್ತಕಗಚ್ಛ ಕೊಣ್ಡಕುಂದಾನ್ವಯದ ಶ್ರೀಮೇಘ
12 ಚಂದ್ರತ್ರೈವಿದ್ಯದೇವರ ಶಿಷ್ಯರು ಪ್ರಭಾಚಂದ್ರಸಿದ್ಧಾಂತದೇವ
13 ರ ಕಾಲಂಕರ್ಚ್ಚಿ ಧಾರಾಪೂರ್ವ್ವಕಂ ಮಾಡಿ ಸರ್ವಬಾಧಾ
14 ಪರಿಹಾರಂ ಮಾಡಿಬಿಟ್ಟ ದತ್ತಿ ಮಂಗಲ ಮಹಾ
15 ಶ್ರೀ ॥ ....[31]

ಅಕ್ಕ ತಮ್ಮ ಇವರು ಕೊಂಗಾಳ್ವ ವಂಶದವರೆನ್ನುವುದೂ, ಈ ನೆಲವು ಕೊಂಗಲ್ನಾಡಿನಲ್ಲಿ ಇತ್ತೆನ್ನುವುದು ಸ್ಫಟಿಕದ ಹರಳಿನಷ್ಟು ಪಾರದರ್ಶಕವಾಗಿದೆ ; ಬೆಣ್ಣೆಯಷ್ಟು ಬೆಳ್ಳಗಿದೆ. ಆದುದರಿಂದ ಕೆ. ಆರ್. ಪೇಟೆ ತಾಲೂಕಿನ ಸ್ವಲ್ಪಭಾಗ ಕೊಂಗಲ್ನಾಡಿನಲ್ಲಿ

---

30 ibid., Vol. V. K. R. Pete–20, p. 14 (1977)

31 Ep. Car. Vol. VI, K.R. Pete–21, p. 15 (1977)

ಇದ್ದಿತು. ಗಂಗರ ಆಳ್ವಿಕೆಯ ಕಾಲದಲ್ಲಿ ಇಲ್ಲಿ ಕೊಂಗಾಳ್ವರು ಮಾಂಡಲಿಕರಾಗಿದ್ದರು ಎಂಬುದು ಗಮನಾರ್ಹವಾದ ಅಂಶ. ಸರ್ಕಾರದ ಸೇವೆಯಲ್ಲಿ ಇದ್ದು ರಾಜರ ಸೇವೆಯನ್ನು ಮಾಡಿದವರಿಗೆ. ಅಂತೆಯೆ ಪ್ರಜೆಗಳ–ಊರ ಹಿತಕ್ಕಾಗಿ ಪ್ರಾಣತೆತ್ತವರಿಗೆ ರಾಜರು 'ಬಾಳ್ಗಳ್ಚು' ಎಂಬ ಪರಿಹಾರ ನಿಧಿಯನ್ನು ಕೊಡುತ್ತಿದ್ದರು–ಅದು ಊರೋ, ನಾಡೋ ಆಗಿರುತ್ತಿತ್ತು. 'ಕೊಂಗಲ್ನಾಡು ವಿಷಯ' ಕಾವೇರೀ ನದಿಯ ಉತ್ತರ ತೀರದಲ್ಲಿ[32] ಆರಂಭವಾಗಿ, ಹೇಮಾವತಿಯ ಎಡಬಲದ ಭೂಭಾಗವನ್ನು ಒಳಗೊಂಡಿತ್ತು.

ಕ್ರಿ.ಶ. ಸು. 9ನೆಯ ಶತಮಾನದ ಲಿಪಿಯುಳ್ಳಿರುವ ನಾಗಮಂಗಲದ ತಾಲೂಕಿನ ಕಾರಬಯಲು ಗ್ರಾಮದ ಶಾಸನಕಲ್ಲಿನಲ್ಲಿ ಎರಡು ಶಾಸನಗಳು ಒಂದೇ ವೀರಗಲ್ಲಿನಲ್ಲಿ ಲಿಖಿತಗೊಂಡಿರುವುದು ಒಂದು ಆಶ್ಚರ್ಯದ ಸಂಗತಿ. ಈ ಶಾಸನದ ಪ್ರಕಾರ ಆರಂಭಲ್ಲನು ಇದುಳೆಯನ್ನು 'ಬೀಯವೃತ್ತಿ' ಇಂದ ಆಳುತ್ತಿದ್ದನು. ನೀತಿಮಾರ್ಗ ಪೆರ್ಮಾನಡಿಯು ಅಧಿರಾಜನಾಗಿದ್ದನು. ವಲ್ಲಭ (ರಾಷ್ಟ್ರಕೂಟರಾಜ)ನ ದಂಡು ಕೆಂಬೊಳಲ್ಗೆ[33] ಬಂದಾಗ ಗಂಗದೊರೆಯ ಆಜ್ಞೆಯ ಮೇರೆಗೆ ವೀರನೊಬ್ಬನು ರಣದಲ್ಲಿ ಸತ್ತುಹೋದನು (ಹೆಸರು ಅಳಿಸಿ ಹೋಗಿದೆ). ಆಗ ಆ ವೀರನಿಗೆ ಗಂಗದೊರೆಯು 'ನಿಡವುಟೆ' ಗ್ರಾಮವನ್ನು ಕಲ್ನಾಡಾಗಿ ಇತ್ತನು. 'ಬೀಯವೃತ್ತಿ' ಎಂಬ ಮಾತು ಇಲ್ಲಿ ಬಂದಿದ್ದು ಅದು ಒಬ್ಬ ವ್ಯಕ್ತಿ ಸ್ವತಂತ್ರ ರೀತಿಯಲ್ಲಿ ಆಳುತ್ತಿದ್ದುದನ್ನು ಸೂಚಿಸುತ್ತದೆ. 'ವೃತ್ತಿ' ಇದನ್ನು 'ಜೀವಿತ' ಅಥವಾ 'ಜೀವಿಕಾ'ಎಂದೂ ಹೇಳಬಹುದು. 'ಅಚಲವೃತ್ತಿ' 'ಅಣುಗವೃತ್ತಿ' ಇತ್ಯಾದಿಗಳ ಹಾಗೆ ಇದೂ ಒಂದು ಬಗೆಯ ಆಡಳಿತ ವ್ಯವಸ್ಥೆ. 'ಅಣುಗಜೀವಿತ' 'ಅಣುಗವೃತ್ತಿ' ಇವು ಒಂದೇ ಅರ್ಥವನ್ನುಳ್ಳ ಪದಗಳು, ಹೀಗೆಯೆ 'ಕುಮಾರವೃತ್ತಿ' ಎಂಬುದು ಕೂಡ. ವಂಶಪಾರಂಪರ್ಯ ನಡೆಯುವುದು 'ಅಚಲವೃತ್ತಿ' ಪುತ್ರರಂತೆ ಕೆಲಕಾಲ ನಡೆಯುವ ವೃತ್ತಿ ಅಥವಾ ಆ ವಾತ್ಸಲ್ಯವನ್ನು ಪ್ರದರ್ಶಿಸುವ ವೃತ್ತಿ–ಜೀವನಾಂಶದ ಆದಾಯ. ಮಹಾರಾಜ ಹಾಗೂ ಮಾಂಡಲಿಕರ ಮಧ್ಯದ ಆಡಳಿತ ಸಂಬಂಧವನ್ನು ಈ ಶಬ್ದಗಳು ಸೂಚಿಸುತ್ತವೆ.

ಮಳವಳ್ಳಿ ತಾಲ್ಲೂಕಿನ 15ನೆಯ ಶಾಸನವು, ನೀತಿಮಾರ್ಗ ಪೆರ್ಮಾಡಿ ಹಾಗೂ ಸತ್ಯವಾಕ್ಯ ರಾಚಮಲ್ಲ ಇಬ್ಬರ ಆಳ್ವಿಕೆಯ ಅಂಶವನ್ನು ಅಳಿದುಳಿದ ಅಕ್ಷರಗಳಲ್ಲಿ ಹೊತ್ತು ನಿಂತಿರುವುದರಿಂದ ಇದು ಕ್ರಿ.ಶ. 868-919ರ ಮಧ್ಯದಲ್ಲಿ ಆಳಿದ ಇಬ್ಬರು ಗಂಗದೊರೆಗಳಿಗೆ ಸಂಬಂಧಿಸಿದೆ. ಇದು ರಾಮಂದೂರಿನಲ್ಲಿದೆ. ಈ ರಾಮಂದೂರಿನಲ್ಲಿ ಇದೇ ಕಾಲದ ಇನ್ನೊಂದು ಶಾಸನವಿದ್ದು ಅದು ಕೆರೆಯ ದುರಸ್ತಿಗಾಗಿ ಬೇಕಾಗುವ

---

[32] ibid., Vol. V, K.R. Nagar–77, p. 71 (1976)

[33] ನಂಜನಗೂಡು ತಾಲೂಕಿನ ಶ್ರೀರಾಮಪುರ ಬಳಿಯಿರುವ ಊರೆಂದು ತೋರುತ್ತದೆ–ಇಲ್ಲಿನ ಕೆಂಬೊಳಲು.

ಹೆಂಕ್ಕೆಂದು ಬಿಟ್ಟ 'ಬಿತ್ತು ವಟ್ಟ' ದತ್ತಿಯನ್ನು ದಾಖಲಿಸಿದೆ. ಕೆರೆಯನ್ನು ಯಾರೇ ಕಟ್ಟಿಸಿರಲಿ ಅವರ ರಕ್ಷಣೆಯು ಅಷ್ಟೇ ಮಹತ್ವದ ಸಂಗತಿ. ಅಧಿಕಾರಿಗಳೊ, ಊರಿನ ಮಹಾಜನರೊ, ಈ ಕೆಲಸವನ್ನು. ಕೆರೆಯು ಅಮೂಲ್ಯ ರಕ್ಷಣೀಯ ವಸ್ತುವೆಂದು ತಿಳಿದು ರಕ್ಷಿಸುತ್ತಿದ್ದರು. 'ಅಸವಯ್ಯ' 'ದುಗ್ಗಯ್ಯ' ಹಾಗೂ 'ನುಬಿಪ್ಪ' ಎಂಬ ಮೂವರು ಇದ್ದು ಬಿಟ್ಟ 'ಬಿತ್ತುವಟ್ಟ' ಎಂದು ಶಾಸನದಲ್ಲಿ ಒಕ್ಕಣೆಯಿದೆ.[34]

ಮದ್ದೂರು ತಾಲ್ಲೂಕಿನ 57ನೆಯ ಶಾಸನವು ಶಾ.ಶ. 817ರಲ್ಲಿ ಬರೆಯಲಾಗಿದ್ದು ರಾಜಮಲ್ಲನ ಆಳ್ವಿಕೆಗೆ ಸಂಬಂಧಿಸಿದೆ.[35] ತೈರೂರ (ತಾಯಲೂರು) ಗಾಮುಣ್ಡ ಸಾಮಿಯ ಮಗ ನಾಗಮ್ಮಯ್ಯನು ಕಲ್ಲದೇಗುಲವನ್ನು ಮಾಡಿಸಲು ದತ್ತಿಯಾಗಿ ಭೂಮಿಯನ್ನು ಬಿಟ್ಟನು. ಆಗ ಈ ವಿಭಾಗಕ್ಕೆನೊ ನೊಳಂಬಾಧಿರಾಜನು ಒಡೆಯನಾಗಿದ್ದು ಆಳುತ್ತಿದ್ದನು. ಶಾಸನವನ್ನು ಸತ್ಯವಾಕ್ಯರಾಜಮಲ್ಲನ 27ನೆಯ ವರ್ಷದಂದು ಬರೆಯಲಾಗಿದೆ. ಆದುದರಿಂದ ಈತ ಪಟ್ಟಕ್ಕೆ ಬಂದುದು 817-27=790 ರಲ್ಲಿ ಎಂಬುದು ಸ್ಪಷ್ಟವಿದೆ. ಶಾ.ಶ. 790 ಎಂದರೆ ಕ್ರಿ.ಶ. 868 ಆಗುತ್ತದೆ ; 790+78=868. ಆದರೂ ಇತಿಹಾಸಕಾರರು ಅವನ ಆಳ್ವಿಕೆಯ ವರ್ಷವನ್ನು ಕ್ರಿ. ಶ. 870 ರಿಂದ ಆರಂಭಿಸಿ ಬರೆದಿದ್ದಾರೆ ![36] ಇದು ಶಿಲಾಶಾಸನವಾಗಿದ್ದು ಕೂಟ ದಾಖಲೆಯಂತೂ ಅಲ್ಲ. ಈ ಶಾಸನ ನೊಳಂಬಾಧಿರಾಜನ ಆಳ್ವಿಕೆಯನ್ನು ಸೂಚಿಸಿ ಅನಂತರ ಮುಗಿತಾಯದಲ್ಲಿ (ತೇದಿಯನ್ನು) ಸತ್ಯವಾಕ್ಯ ಪೆಮ್ಮನಡಿಗಳ 27ನೆಯ ವರ್ಷವನ್ನೂ ಹೇಳಿದೆ. ದತ್ತಿ ಬಿಟ್ಟ ವ್ಯಕ್ತಿ ಎರಡು ರಾಜಮನೆತನಗಳ ವಂಶಕ್ಕೆ ಸಂಬಂಧಿಸಿಲ್ಲ. ಯಾವ ದೇಗುಲವೆಂಬುವರ ಹೊಳಹು ಶಾಸನದಲ್ಲಿ ಇಲ್ಲ. ದೇವಾಲಯಕ್ಕೆ ಐದು ವರ್ಷಕ್ಕೊಮ್ಮೆಯಾದರೂ ಸುಣ್ಣವನ್ನು ಹಚ್ಚಲೇಬೇಕೆಂದು ದತ್ತಿಕಾರ ಬರೆಯಿಸಿದ್ದಾನೆ. ಹಾಗೆ ಮಾಡದೆ ಆತ ಬಿಟ್ಟ ದತ್ತಿಯನ್ನು ಅನುಭೋಗಿಸಿದರೆ ಅನುಭೋಗಿಸುವವರು ಪಂಚಮಹಾಪಾತಕವನ್ನು ಹೊಂದುವರು ಎಂದು ಶಾಪಾಶಯದ ಕೊನೆಯಲ್ಲಿದೆ. ಇದೇ ತಾಯಲೂರ ಕೆರೆಯಲ್ಲಿ ಒಂದೊಮ್ಮೆ ಇದ್ದ[37] ಈಗ ಕಳೆದು ಹೋಗಿರುವ ಶಾಸನದಲ್ಲಿ ಕ್ರಿ. ಶ. 907ರಲ್ಲಿ ಈ ಊರಿಗೆ ಅಧಿಪತಿ ಮಣಲಿಯರನು ಆಗಿದ್ದ ಸಂಗತಿ ಬರೆದಿದೆ.

ಮಳವಳ್ಳಿ ತಾಲ್ಲೂಕಿನ ಕೂಲಿಗೆರೆಯ ಶಾಸನದಲ್ಲಿ ನೀತಿಮಾರ್ಗ ಪೆರ್ಮ್ಮನಡಿ

---

34 Ep. Car. Vol. VII, Malavalli-15 & 17 pp 356-357

35 Ibid Maddur-57, pp 285-86

36 A History of Karnataka (Dr. P.B.D., Dr. S.H.R & Dr. B.R.G) pp. 74, 84-85 (Revised Edition 1981)

37 Ep. Car VolV. VII Maddur-56, p. 284

ಗಳು ರಾಜ್ಯ ಆಳುತ್ತಿರಲು ಶಾ.ಶ. ೮೩೮ ರಲ್ಲಿ (ಕ್ರಿ. ಶ. 916) ಮಾದೇವನಾರನು ಕನಕಗಿರಿ ತೀರ್ಥದ ಮೇಲೆ ಬಸದಿಯನ್ನು ಸ್ಥಾಪಿಸಿದುದನ್ನು ದಾಖಲಿಸಿದೆ. ಆತ ಬಸದಿಯನ್ನು ಕಟ್ಟಿಸಿ ಅರಸನ (ಗಂಗಮಾರಸಿಂಹನ) ಅನುಜ್ಞೆಯಿಂದ ಬಸದಿಗೆ ಪೂಜೆ ಪುರಸ್ಕಾರಗಳು ನಡೆಯಲು ತಿಪ್ಪೆಯೂರಿನಿಂದ ಬರುವ 'ಅಟ್ಟದೆಜ್ಜೆ' 'ಕುಜುದೆಜ್ಜೆ' ಮುಂತಾಗಿ ಬರುತ್ತಿದ್ದ ಸುಂಕದ ಹಣವನ್ನು ಕನಕಸೇನ ಭಟ್ಟಾರರಿಗೆ ಅರ್ಪಿಸಿ ಬಿಟ್ಟುಕೊಟ್ಟನು. ಈ ತೆರಿಗೆಗಳು ಗಮನಾರ್ಹವಾಗಿವೆ. ಇಲ್ಲಿನ ಕನಕಗಿರಿ ಚಾಮರಾಜನಗರ ತಾಲ್ಲೂಕಿನ ಮಲೆಯೂರು.

ಅಟ್ಟದೆಜ್ಜೆ :—ಈ ಶಬ್ದವನ್ನು ಕನ್ನಡ ವಿದ್ವಾಂಸರು ಹೀಗೆ ವಿವರಿಸಿದ್ದಾರೆ :

1. ಡಾ|| ಎಂ. ಚಿದಾನಂದಮೂರ್ತಿ ಅವರು ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನದಲ್ಲಿ "ಅಟ್ಟದೆಜ್ಜೆ-ಅಟ್ಟವನ್ನು ಮಾಡಿದ್ದಕ್ಕೆ. ಎಂದರೆ ಬಹುಶಃ ಮಹಡಿಯನ್ನು ಮನೆಗೆ ಹಾಕಿಸಿಕೊಂಡಿದ್ದಕ್ಕೆ. ಶಾಸನ[38] ಪ್ರಕಟಿಸಿರುವವರು "ಅಡ್ಡದೆಜ್ಜೆ" ಇದಕ್ಕೆ ಪ್ರಶ್ನೆಯ ಚಿಹ್ನೆಯನ್ನು ಹಾಕಿದ್ದಾರೆ; ಅರ್ಥವನ್ನು ಕೊಟ್ಟಿಲ್ಲ.

2 (a) ಕ.ಸಾ. ಪರಿಷತ್ತಿನ 'ಕನ್ನಡ ನಿಘಂಟು' ಗ್ರಂಥದಲ್ಲಿ "ಅಟ್ಟದೆಜ್ಜೆ (ನಾ) ದೊಡ್ಡ ತೆರಿಗೆ : ಹಿರಿಯಸುಂಕ (?) : ಕನಕಸೇನ ಭಟ್ಟಾರರ್ಗ್ಗೆ ತಿಪ್ಪೆಯೂರೊಳಾದ ಅಟ್ಟದೆಜ್ಜೆಯುಂ ಕುಜುದೆಜ್ಜೆಯುಮುಂ ಕಟ್ಟಿಮಾಡಲ್ಪಡುವುದೆಯುಮಬ್ಬಿಟ್ಟಂ (ಎಕ III, ಮಳವ ೩೦-೧೦; 909. ಪೆಜ್ಜುರ್ಜಂಕಹೋ.

"Tax on upper rooms" [=ಅಟ್ಟಗಳ ಮೇಲಿನ ತೆರಿಗೆ] ಎಂದು ಶಾಸನ ಸಂಪಾದಕರು ಭಾಷಾಂತರ ಮಾಡಿದ್ದಾರೆ. [ಅಟ್ಟ₁ + ತೆಜ್ಜೆ₂][39]

(b) ಅಡ್ಡದೆಜ್ಜೆ—"ಅಡ್ಡ" ಎಂಬ ತೆರಿಗೆ ಸುಂಕ (?) : ಕುಪದಲೂರ ಭೋದರಿಯೂರು ಮನ್ನೆಯ್ಯಕ್ಕೆ ಬಿಟ್ಟ ಪ್ರತಿಕ್ರಮವಾಗಿದ್ದ ಅಡ್ಡದೆಜ್ಜೆ ಕಜುದೆಜ್ಜೆ ನಾಟ್ಗಿ × × × ಣಸಲ್ವ (ಎಕ. IX ಚನ್ನಪ ೧೬೧-೭: 913). [ಅಡ್ಡ₃ + ತೆಜ್ಜೆ₃][40]

—ಈ ಎರಡೂ ವಿವರಣೆಗಳಿಂದ ಈ ಶಬ್ದದ ಅರ್ಥ ಇನ್ನೂ ಸರಿಯಾಗಿ ಆಗಿಲ್ಲವೆಂಬುದು ಸ್ಪಷ್ಟ.

"ಅಡ್ಡದೆಜ್ಜೆ" ತೆಲುಗಿನಲ್ಲಿ ಅಡ್ಡಪಟ್ಟಸುಂಕ" ಎಂದಾಗಿದೆ. ಆ ಭಾಷೆಯಲ್ಲಿ 'ಅಡ್ಡಗಡಸುಂಕ' 'ಅಡ್ಡಪಟ್ಟಸುಂಕ' ಮತ್ತು 'ಅಡ್ಡಪಟ್ಟಸುಂಕಮುಲು' ಎಂಬ ಪ್ರಯೋಗಗಳೂ ಇವೆ. ಸಂತೆಯಸುಂಕ ಸಂತೆಯಮೇರೆ ಹಾಗೂ ಸಂತೆಯ ಸುಂಕವನ್ನು

---

38 ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ (1966) ಪು. 397 : ಇಲ್ಲಿ ಶಾಸನದ ತೇದಿಯನ್ನು 909 ಎಂದು ಬರೆದಿದೆ. ಅದು ಕ್ರಿ.ಶ. 916 ಎಂದಾಗಬೇಕು.

39 ಕನ್ನಡ ನಿಘಂಟು, ಸಂಪುಟ–೧, ಪು. ೧೦೩ (೧೯೭೦)

40 ಅದೇ ಪುಸ್ತಕ, ಪು. ೧೫೭

ವಸೂಲ್‌ಮಾಡುವವರು ಎಂದು ಕ್ರಮವಾಗಿ ಅರ್ಥ.[41] ಅಡ್ಡ<ಅಟ್ಟ<ಹಟ್ಟ (ಸಂ) ಇವೆಲ್ಲ ಒಂದು ಶಬ್ದ 'ಹಟ್ಟ' ಎಂಬುದರ ಭಿನ್ನರೂಪಗಳು. ಹಟ್ಟ=ಸಂತೆ 'ಹಟ್ಟ' ಎಂಬ ಸಂಸ್ಕೃತ ಶಬ್ದಕ್ಕೆ 'ಸಂತೆ' ಎಂಬ ಅರ್ಥ ಪ್ರಸಿದ್ಧ[42]. ಮೂಲತಃ ಕ್ರಯವಿಕ್ರಯ ಸ್ಥಲಕ್ಕೆ ಅಡ್ಡಗಟ್ಟ ಎಂದು ಅರ್ಥ. 'ಅಡಗಟ್ಟು' ಎಂಬ ಮಾತು ಅರ್ಥಭೇದದಿಂದ ಈಗಲೂ ಉತ್ತರ ಕರ್ನಾಟಕದಲ್ಲಿ ಬಳಕೆಯಲ್ಲಿದೆ. 'ಅಡ್ಡಹಾಕು'='ತಾಣೆಹಾಕು' ಎಂಬ ಪ್ರಯೋಗವೂ ದೊರೆಯುತ್ತದೆ. ವ್ಯಾಪಾರಿ ಆಗಾಗ್ಗೆ ಒಂದು ನಿಯತಸ್ಥಲದಲ್ಲಿ ನಿಂತು ವ್ಯಾಪಾರ ಮಾಡುತ್ತಿದ್ದರೆ ಅಡ್ಡ. A place where business is transacted and duty is levied on the goods.

ಕುಜ್ಜುದೆಜ್ಜಿ : ಕುಜ್ಜು=ಕಿರಿದು: ಇವು ಸಮಾನಾರ್ಥಕ ಶಬ್ದಗಳು. ಕಿರುಕುಳ ಎಂಬ ಸುಂಕವು ಇದ್ದುದೂ ಅನೇಕ ಶಾಸನಗಳಿಂದ ತಿಳಿದು ಬಂದಿದೆ. ಕರ ವಿಧಾನದಲ್ಲಿ ಎರಡು ವಿಧ : (1) ದೊಡ್ಡಪ್ರಮಾಣದಲ್ಲಿ ಕರಹಾಕುವುದು=heavy taxes

(2) ಸಣ್ಣಪ್ರಮಾಣದಲ್ಲಿ ಕರ ಹಾಕುವುದು=petty taxes

'ಪೆರ್ಜುಂಕ' 'ಸಿದ್ಧಾಯ' ಇತ್ಯಾದಿಗಳು ದೊಡ್ಡಪ್ರಮಾಣದ ಕರಗಳು. ಉಳಿದವು ಕಿರುಕುಳಗಳು—ಕುಜ್ಜುದೆಜ್ಜಿಗಳು. ಕುಜ್ಜುದೆಜ್ಜಿ=ಕುಜ್ಜುಂಬದೆಜ್ಜಿ ಆಗಿರಲೂಬಹುದು. ಪ್ರಾಚೀನಕಾಲದಲ್ಲಿ ಕುರಿಗಳ ಸಾಕಣೆಯ ಮೇಲೆ ತೆರೆಯನ್ನು ಹಾಕುತ್ತಿದ್ದರು. ಕುರುಬರು ಕುರಿ ಮೇಯಿಸುವುದಕ್ಕೆ 'ಹುಲಬನ್ನ' ಎಂದರೆ ಹುಲ್ಲಿನ ಮೇಲೆ ತಾವು ಹುಲ್ಲನ್ನು ಮೇಯಿಸಿದುದಕ್ಕೆ ಪ್ರತಿಯಾಗಿ ಪನ್ನಾಯವನ್ನು ಕೊಡುತ್ತಿದ್ದರು. ಕುರುಬರು < ಕುರುಂಬರು ಕೊಡುವ ತೆರೆ (tax) ಕುರುಂಬ | ಕುಜ್ಜುಂಬ + ತೆರೆ = ಕುಜ್ಜುಂಬದೆಜ್ಜಿ ಅಥವಾ ಕುಜ್ಜುದೆಜ್ಜಿ ಆಗಿರಬಹುದು. ಇದು ವಿಚಾರಣೀಯ. ಆದರೆ ಕುಜ್ಜು + ತೆಜ್ಜಿ = ಕುಜ್ಜುದೆಜ್ಜಿ ಎಂದರೆ 'ಕಿರುಕುಳ' ಎಂದೇ ನನಗೆ ಅನ್ನಿಸುತ್ತದೆ. ಕುಜ್ಜು + ಪಿಡಿ = ಕುಜ್ಜುಂಬಿಡಿ = ಕಿರುಕುಳ (petty tax) ಹಲ್ಮಿಡಿ ಶಾಸನ ಕಾಲದಿಂದಲೂ ಕರ್ನಾಟಕದಲ್ಲಿ ಇದ್ದುದು ಕಂಡುಬರುತ್ತದೆ[43]. ಪಿಡಿ = ಸ್ವೀಕರಿಸು. ಕುಜ್ಜು + ಪಿಡಿ = ಕಿರಿದಾದರೀತಿಯ ಕರಗಳನ್ನು ಸ್ವೀಕರಿಸುವುದು. ಕುಜ್ಜುಂಬಿಡಿ = ಕುಜ್ಜುದೆಜ್ಜಿ = ಕಿರುಕುಳ —ಇವುಗಳನ್ನು ಸಮಾನಾರ್ಥಕ ಶಬ್ದಗಳೆಂದು ಸ್ವೀಕರಿಸಬಹುದು.

ಸಾಮನ್ತದೆಜ್ಜಿ : ಸಾಮನ್ತರಾಜರು ಸ್ವೀಕರಿಸುತ್ತಿದ್ದ ತೆಜ್ಜಿ. ಅಧಿರಾಜರು ಮತ್ತು

---

[41] Inscriptional Galassory of Andhra Pradesh (K. I'svra Datt pp. 8–9)

[42] ಮೋನಿಯರ್ ವಿಲಿಯಮ್ಸ್ ಅವರ ಸಂಸ್ಕೃತ –ಇಂಗ್ಲೀಷ್ ಕೋಶದಲ್ಲಿ Hatta = a market fair ಮುಂತಾಗಿ ಅರ್ಥಗಳನ್ನು ಬರೆದಿದೆ.

[43] MAR 1936, ಹಲ್ಮಿಡಿಯ ಶಾಸನ

ಸಾಮನ್ತರು ತೆಱೆಗಳನ್ನು (taxes) ಹಂಚಿಕೊಳ್ಳುತ್ತಿದ್ದರೆಂಬುದು ಈ ಶಾಸನದಿಂದ ಸ್ಪಷ್ಟವಿದೆ. ಇದನ್ನು ಇಂದಿನ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಹಂಚಿಕೊಳ್ಳುವ ಆರ್ಥಿಕ ಹೊಂದಾಣಿಕೆಗೆ ಹೋಲಿಸಬಹುದು. ರಾಜ್ಯದ ಆದಾಯದಲ್ಲಿ ಎರಡು ಸರ್ಕಾರಗಳು ನಿಗದಿತ ಪಾಲನ್ನು ಪಡೆದಿವೆ. 'ಸಾಮನ್ತ' ಎಂಬ ಶಬ್ದ ಮಾಳಿಯೂರನು ಸಾಮಂತನಾಗಿದ್ದನೆನ್ನುವುದನ್ನು ಸೂಚಿಸುತ್ತದೆ. ಈ ಮಾಳಿಯೂರ ಸಗರಕುಲದ ವಂಶದ ದೊರೆಯೆಂಬುದೂ, ಇವರು ಮಳವಳ್ಳಿ ಮದ್ದೂರು ಮತ್ತು ತಿರುಮಕೂಡಲು ನರಸೀಪುರ ತಾಲೂಕಿನ ಭೂಭಾಗವನ್ನು ಆಳುತ್ತಿದ್ದರೆಂಬುದೂ ಇಲ್ಲಿ ದೊರೆತ ಶಾಸನಗಳಿಂದ ತಿಳಿದು ಬಂದಿದೆ. ಆತಕೂರ ಶಾಸನ ಈ ವಂಶದ ಚರಿತ್ರೆಯ ಮೇಲೆ ಹೆಚ್ಚು ಬೆಳಕನ್ನು ಬೀರುತ್ತದೆ ಆ ವಿವರ ಮುಂದೆ ಒದಗಿದೆ.

ಈ ಸತ್ಯವಾಕ್ಯ ಪೆರ್ಮಾನಡಿಯ ದೊರೆಯ ಆಳ್ವಿಕೆಯ ಕಾಲದ ಶ್ರೀರಂಗಪಟ್ಟಣ ತಾಲೂಕಿನ ರಾಂಪುರ ಶಾಸನವು 'ಪೆರ್ಬ್ಬಾಣಸಪಳ್ಳಿ' ಊರಲ್ಲಿ ಮತಿಸಾಗರ ಪಂಡಿತ ಯಾರು ಕಟ್ಟಿಪ್ಪ ತೀರ್ಥಕ್ಕೆ ಒಡೆಯರಾಗಿದ್ದರೊ ಅವರ ಆಜ್ಞೆಯ ಮೇರೆಗೆ ಅಣೆಕಟ್ಟನ್ನು ಕಟ್ಟಿ, ಭೂಮಿಯನ್ನು ನೀರಾವರಿಯಾಗಿಸಿ ಅವಕ್ಕೆ ಕಂದಾಯ ನಿಗದಿಪಡಿಸಿದುದನ್ನು ತಿಳಿಸುತ್ತದೆ. ಆ "ಸ್ಥಿತಿಕ್ರಮ" ಬಹಳ ಮುಖ್ಯವಾಗಿದೆ :

1. ಕಟ್ಟೆ ಕಟ್ಟಿದ ವರ್ಷ ಒಂದರಣೆಯಗ[44]
2. ಎರಡೆಯ ವರಿಷ ಪತ್ತೊನ್ದಿ $= \frac{೧}{೧೦}\left(\frac{1}{10}\right)$
3. ಮೂರನೆಯ ವರಿಷ ಏೞಳವಿ (ಏೞಳವಿ) $= \frac{೧}{೭}\left(\frac{1}{7}\right)$
4. ಅನಂತರ ಎಲ್ಲಾ ಕಾಲಕ್ಕೂ ಐದಳಿ $= \frac{೧}{೫}\left(\frac{1}{5}\right)$

ಕಟ್ಟೆ ಕಟ್ಟಿದ ವ್ಯಕ್ತಿಗೆ ಕೊಟ್ಟ ಸೌಲತ್ತುಗಳು ಗಮನಾರ್ಹವಾಗಿವೆ ಬೆಳೆದ ಬೆಳೆಯ $\frac{೧}{೧೦}$, $\frac{೧}{೭}$ ಮತ್ತು $\frac{೧}{೫}$-ನೆಯ ಭಾಗ ಗೇಣಿಯ ವ್ಯವಸ್ಥೆಯನ್ನು ಸೂಚಿಸಿದೆ.

ಈ ರಾಂಪುರಕ್ಕೆ ಸಮೀಪದ್ದೇ ಆದ ಈಗ ಪಾಂಡವಪುರ ತಾಲೂಕಿನಲ್ಲಿರುವ

---

[44] Ep. Car. Vol. VI ಶ್ರೀರಂಗಪಟ್ಟಣ–85 ; "ಅರಣೆಯಗ" ಇದಕ್ಕೆ ಶಾಸನ ಪುಟದಲ್ಲಿ ಪ್ರಶ್ನಾರ್ಥಕ ಚಿಹ್ನೆಯಿದೆ. 'ಅರಣೆಯಗ' ಇದು 'ಲೊಕ್ಕಿಯಗ' ಇದ್ದಹಾಗೆ ಊರಿನ ಟಂಕಸಾಲೆಯನ್ನು ಸೂಚಿಸುತ್ತದೆ. 'ಲೊಕ್ಕಿ' ಲಕ್ಕುಂಡಿ ಇದ್ದಂತೆ 'ಅರಣಿ' ನಾಗಮಂಗಲ ತಾಲೂಕಿನ ಅ (ಆ) ರಣೆಯನ್ನು ಸೂಚಿಸುತ್ತದೆ.

ಕ್ಯಾತನಹಳ್ಳಿಯ ಶಾಸನವೂ ಇದೇ ಸತ್ಯವಾಕ್ಯ ಹಾಗೂ ಆತನ ಯುವರಾಜ ಎಚೆಯ ಪ್ಪರಸನಿಗೆ ಸಂಬಂಧಿಸಿದ್ದು, ಆ ರಾಜರು ಚಾಗಿಪೆರ್ಮಾನಡಿಗಳು ಕಟ್ಟಿಸಿದ ಕೆಲ್ಲಬಸದಿಗೆ, ಅಲ್ಲಿ ನಡೆಸಬೇಕಾದ ಉತ್ಸವಕ್ಕೆಂದು (ಪರಪ್ರ್ರಪರ್ಪ್ಪಕ್ಕೆಂದು) ಬಿಳಿಯಕ್ಕಿ (ನೆಲ್ಲಕ್ಕಿ), ಬಿಟ್ಟಿ ಹಾಗೂ ತುಪ್ಪ (ತುಪ್ಪದೆಜೆ) ಇವುಗಳನ್ನು ಜೈನಮಠಕ್ಕೆ ದತ್ತಿಬಿಟ್ಟರು.[45] ಪ್ರತಿಯಾಗಿ ಆ ಮಠದ ಯತಿಗಳು ಸರ್ಕಾರಕ್ಕೆ ಏನನ್ನೂ ಕೊಡಬೇಕಾಗಿದ್ದಿಲ್ಲ. ಸರ್ವ್ವ ಬಾಧಾಪರಿಹಾರ (ಸರ್ವ್ವಪಾದಪರಿಹಾರ) ಮಾಡಿಕೊಟ್ಟುದೂ ಒಂದು ಗಮನಾರ್ಹ ವಾದಸಂಗತಿ. ಪ್ರಾಚೀನ ಕಾಲದಲ್ಲಿ ತುಪ್ಪ, ಹಾಲು, ಮೊಸರು ಇವುಗಳನ್ನು ಮಾರು ವಂತಿದ್ದಿಲ್ಲ. ಮನೆಯಲ್ಲೇ ಅವನ್ನು ಆ ಮನೆಯ ಜನತೆ ಉಪಯೋಗಿಸಬೇಕಾಗಿತ್ತು. ಮಾರಿದರೆ ತೆರಿಗೆಯನ್ನು ಕೊಡಬೇಕಾಗುತ್ತಿತ್ತು. ಆ ಕಾರಣದಿಂದಲೇ ಹೈನ ಇಲ್ಲದ ಮನೆಯವರು ಹೈನ ಇದ್ದ ಮನೆಯಿಂದ ಕಡ ತರುತ್ತಿದ್ದರು ಮತ್ತು ಅದನ್ನು ತಮ್ಮ ಮನೆಯಲ್ಲಿ ಹೈನ ಇದ್ದ ಸಂದರ್ಭದಲ್ಲಿ ಪುನಃ ವಾಪಸ್ಸು ಕೊಡುತ್ತಿದ್ದರು. ಪ್ರಾಯಃ ಇಂತಹ ಒಂದು ಸುಂಕದಭಯ ಹಾಲು ಮೊಸರು ತುಪ್ಪಗಳಲ್ಲಿ ಕಲಬೆರಕೆಯ ಅವಾಂತ ರಕ್ಕೆ ಎಡೆಕೊಟ್ಟಿದ್ದಿಲ್ಲ ಅಷ್ಟೇ ಅಲ್ಲ, ಜನರ ಆರೋಗ್ಯವನ್ನು ಚೆನ್ನಾಗಿ ಕಾಪಾಡಿತ್ತು. ನಮ್ಮ ಹಿರಿಯರು ನಮಗಿಂತಲೂ ಗಟ್ಟಿಯಾಗಿದ್ದರೆನ್ನುವುದಕ್ಕೆ, ತಾಕತ್ತುಳ್ಳವರಾಗಿದ್ದ ರೆನ್ನುವುದಕ್ಕೆ, ಅವರು ಉಣ್ಣುತ್ತಿದ್ದ ಊಟ ತಿಂಡಿಗಳೇ ಕಾರಣ. ಕಲಬೆರಕೆ ಇಂದಿನ ಜನದ ಸ್ವಾಸ್ಥ್ಯವನ್ನು ಸಂಪೂರ್ಣ ನಾಶಗೊಳಿಸಿದೆ. ನಮ್ಮ ಹಿರಿಯರ ಸುಸಂಸ್ಕೃತಿ ಹಾಳಾಗಿಹೋಯಿತು. ಸದ್ಭಾಗವನ್ನು ಉಳಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿತ್ತು.

ಈ ಶಾಸನದಲ್ಲಿ ಕಬ್ಬಪ್ಪುತೀರ್ಥ ಬೆಳ್ಗೊಳನಿವಾಸಿ ಎಂದು ಜೈನ ಸಂಘವನ್ನು ಸೂಚಿಸಿರುವುದರಿಂದ ಕಬ್ಬಪ್ಪುತೀರ್ಥ ಹಾಗೂ ಬೆಳ್ಗೊಳ ಸ್ಥಳಗಳು ಒಂದಕ್ಕೊಂದು ಹತ್ತಿರದಲ್ಲಿದ್ದ ಎರಡು ಭಿನ್ನಸ್ಥಳಗಳೆಂಬುದನ್ನು ಸೂಚಿಸುತ್ತವೆ. ತಿರುಪತಿ ಹಾಗೂ ತಿರುಮಲೈ ಇದ್ದಹಾಗೆ. ಇಲ್ಲಿ ಬಂದಿರುವ ಕುಮಾರಸೇನ ಯತಿಗಳಿಗೂ ಕೊಪಣಾದ್ರಿ ಯಲ್ಲಿ ಇಂಗಿಣಿ ಮರಣದಿಂದ ಮುಡಿಸಿದ ಕುಮಾರಸೇನರಿಗೂ ಯಾವ ಸಂಬಂಧವಿಲ್ಲ, ಅವರು ಮುಳುಗುಂದ ತೀರ್ಥದವರು ; ಇವರು ಕಬ್ಬಪ್ಪು ತೀರ್ಥದ ನಾಥರು ಈ ಕುಮಾರಸೇನರಿಗೆ ದತ್ತಿಯನ್ನು ಸರ್ವಬಾಧಾಪರಿಹಾರವಾಗಿ ಕೊಟ್ಟಿತೆಂದು ಬರೆದಿರು ವುದರಿಂದ 'ಸರ್ವಬಾಧಾ' ಎಂಬ ಮಾತೂ. ಆಗ ಬಳಕೆಯಲ್ಲಿದ್ದಿತು. 'ಬಾಧಾ' ಎಂದರೆ

---

[45] ibid., Pandavapur–16, p. 114. ಇಲ್ಲಿ ಬಂದಿರುವ ಕೆಲ್ಲಬಸದಿಯನ್ನು ಕಟ್ಟಿಸಿದ ವ್ಯಕ್ತಿ **ಚಾಗಿಪೆರ್ಮಾನಡಿಗಳು**. ಚಾಗಿಪೆರ್ಮಾನಡಿ ಎಂದು ಗಂಗ 'ನವಕಾಮ' ದೊರೆಯನ್ನು ಕರೆಯುತ್ತಿದ್ದರು. ಈ ಬಿರುದು ಬರಲು ಕಾರಣ ಆತ ಗಜಗಳನ್ನು ದಾನಮಾಡಿದುದು. ಈ ಸಂಗತಿಯನ್ನು ಹುಂಚದ ಶಾಸನದಲ್ಲಿಯೂ ಬರೆದಿದೆ–Nagar 35, Ep. Car. Vol. VIII (B. L. Rice)

ತೆರಿಗೆ ! ಬಾಧಾ ಯಾವಾಗಲೂ ಬಾಧೆಯನ್ನು ಕೊಡುವ ವಿಷಯವೇ ! ತೊಂದರೆ ಕೊಟ್ಟು ತೆರಿಗೆ ಕಟ್ಟಿಸಿಕೊಳ್ಳುತ್ತಿರಬಹುದು. ಪ್ರಾಯಶಃ ಆ ಕಾರಣದಿಂದಲೇ ಬಾಧಾ ಇನ್ನೊಂದು ಅರ್ಥವನ್ನು ಪಡೆದುಕೊಂಡಿತು. ಅಂತು ಒಂದು ದಾನ ಪತ್ರ 'ಸರ್ವಭಾದಾಪರಿಹಾರ' ಮಾಡಿದಮೇಲೆ ಆ ರಾಜನ ಆಜ್ಞೆಯ ಕಾಲದಲ್ಲೂ ಯಾವ ಅಧಿಕಾರಿಗಳೂ ಭಾಧೆಯನ್ನು ಕೊಡುತ್ತಿದ್ದಿಲ್ಲ. ಈ ವ್ಯವಸ್ಥೆ ಮುಂದೆ ಸೂರ್ಯಚಂದ್ರರಿರುವವರೆಗೆ ನಡೆಯಲಿ ಎಂಬ ಮನಸ್ಸು ಅವರದಾಗಿತ್ತು. ಅಂತೆಯೇ ಶಾಸನದ ಮುಕ್ತಾಯದಲ್ಲಿ ಶಾಪಾಶಯ ಪದ್ಯಗಳನ್ನು ಬರೆಯುತ್ತಿದ್ದರು. ವ್ಯವಸ್ಥೆಯನ್ನು ಕೆಡಿಸಿದರೆ, ಅರಾಜಕತೆ (anarchy) ಉಂಟಾಗಿ. ಪ್ರಗತಿಯಂತೂ ಹೋಗಿಬಿಡುತ್ತದೆ.

ಪಾಂಡವಪುರ ತಾಲೂಕಿನ ಮಲ್ಲಿಗೆರೆ ಗ್ರಾಮದಲ್ಲಿರುವ ಶಾಸನವೂ ಪ್ರಾಯಃ ಇದೇ ಬಗೆಯ ಒಂದು ದಾನ ಶಾಸನವಾಗಿರಬಹುದು. ಸಗರ ರಾಜರ ಬಿರುದಾವಳಿ ಹಾಗೂ ಶಾಸನದ ತೇದಿ (ಶಾ. ಶ. ೮೨೮) ಇವುಗಳನ್ನು ಬಿಟ್ಟರೆ ಹೆಚ್ಚಿಗೆ ಏನೂ ಇಲ್ಲ.[46]

ಇಮ್ಮಡಿ ಬೂತುಗ ದೊರೆಯ ಶಾಸನಗಳು ಸಹ ಮೂರು ದೊರಕಿದ್ದು ಅವು ಕ್ರಮವಾಗಿ ಅತಕೂರು (ಮದ್ದೂರು ತಾಲೂಕು) ಕಲ್ಕುಣಿ ಹಾಗೂ ಧನಗೂರು (ಮಳವಳ್ಳಿ ತಾಲೂಕು) ಊರುಗಳಲ್ಲಿವೆ.[47] ಅತಕೂರ ಶಾಸನ ರಾಷ್ಟ್ರಕೂಟ ಚಕ್ರವರ್ತಿ ಮೂರನೆಯ ಕೃಷ್ಣ, ಗಂಗದೊರೆ ಇಮ್ಮಡಿ ಬೂತುಗ ಹಾಗೂ ಆತನ ಸಾಮಂತ ಮಣಲೇರನಿಗೆ ಸಂಬಂಧಿಸಿದೆ. ಶಾಸನದಲ್ಲಿ ಮಣಲೇರನ ವಿವರಗಳು ಹೀಗಿವೆ :

೧. ಸಗರವಂಶ

೨. ವಳಭೀಪುರವರೇಶ್ವರ

೩. ಬಿರುದಾವಳಿಗಳು : ಸಗರತ್ರಿನೇತ್ರ : ಸೋನೆಯಾಂಗರಿಪ್ರೋನ್ ; ಕದನೈಕಶೂದ್ರಕ : ಬೂತುಗನಬ್ಬಕಾಜು ; ಉದಾರಭಾಗೀರಥ ಮತ್ತು ಇಜ್ಜಾವಟಿಕಂಗ. ಬೂತುಗನ ಅಂಕಕಾರನಾದ ಈತ ತನ್ನ ಒಡೆಯನೊಂದಿಗೆ ರಾಷ್ಟ್ರಕೂಟ ಚಕ್ರವರ್ತಿ ೩ನೆಯ ಕೃಷ್ಣನಿಗೆ ಸಹಾಯಕನಾಗಿ ಮೂದಲಿಯೊಳ್ ರಾಜಾದಿತ್ಯನ ಮೇಲೆ ಯುದ್ಧ ಮಾಡುತ್ತಾನೆ. ಚೋಳಚತುರಂಗಬಲವನ್ನು ಅಟ್ಟಿ ಮುಟ್ಟಿ ಅಸಾಧ್ಯ ಎನ್ನುವ ಪಂಜರದಲ್ಲಿದ್ದ, ಆನೆಯ ಅಂಬಾರಿಯಲ್ಲಿ ಕುಳಿತಿದ್ದ, ಚೋಳದೊರೆಯನ್ನು ಚೋಳಸೈನ್ಯದ ಸಾಕ್ಷಿಯಲ್ಲೇ, ಆ ಅಂಬಾರಿಯಲ್ಲೇ, ಇರಿದು ಕೊಂದನು. ಅವನು ಆ ಆನೆಯನ್ನು

---

[46] Ep. Car. Vol. VI, Pandavapur-47, p. 134.

[47] ibid. Vol. VIII, Maddur-42 ; Malavalli-141 and 50. ಅತಕೂರ ಶಾಸನವನ್ನು ಈಗ ಬೆಂಗಳೂರಿನ ವಸ್ತುಸಂಗ್ರಹಾಲಯದಲ್ಲಿ ಇಟ್ಟಿದ್ದಾರೆ.

ತಲೆಬಿರಿಯುವಂತೆ ಹೊಡೆದು ಕೆಡವಿ ಬಿಟ್ಟನು. ಬಿಸುಗೆಯೆ=ಅಂಬಾರಿಯೆ ರಣರಂಗವಾಯಿತು. ಆ ಅದ್ಭುತ ಗೆಲುವು ಗಂಗರ ಸ್ವತ್ತಾಯಿತು—ಒಡೆಯ ಬೂತುಗನದ್ದಾಯಿತು. ಮೆಚ್ಚಿದ ಚಕ್ರವರ್ತಿ ಕೃಷ್ಣ ಭಾವನಾದ ಬೂತುಗನಿಗೆ ಬನವಸೆ-೧೨೦೦೦, ಬೆಳ್ವೊಲ-೩೦೦, ಪುರಿಗೆರೆ-೩೦೦, ಕಿಸುನಾಡು-೭೦ ಮತ್ತು ಬಾಗೆನಾಡು-೭೦ ಪ್ರದೇಶಗಳನ್ನು ಮೆಚ್ಚುಗೊಟ್ಟನು. ಬೂತುಗನು ಅದೇ ಸಮಯದಲ್ಲಿ ತನ್ನ ಅಂಕಕಾರ ಮಣಲೇರನಿಗೆ ಆತುಕೂರ್-೧೨ ಮತ್ತು ಬೆಳ್ವೊಲದ ಕಾಡಿಯೂರನ್ನು ಬಾಳ್ಗಚ್ಚುವಾಗಿ ಕೊಟ್ಟನು. ಈ ಮಣಲೇರನಿಗೆ ಅವನ ಸಾಹಸಕ್ಕೆ ಮೆಚ್ಚಿ ಚಕ್ರವರ್ತಿಯಾದ ಕೃಷ್ಣನೂ ಏನುಬೇಕು ಅದನ್ನು ಬೇಡಿದರೆ ಕೊಡುವೆ ಎಂದಾಗ ಮಣಲೇರನು 'ಕಾಳಿ' ಎಂಬ ಒಂದು ಉತ್ತಮ ನಾಯಿಯನ್ನು ಕೊಡಬೇಕೆಂದು ಕೇಳಿಕೊಂಡ. ವಚನ ಕೊಟ್ಟಂತೆ ಆ ಚಕ್ರವರ್ತಿ ಕಾಳಿಯನ್ನು ಕೊಟ್ಟನು. ಮಣಲೇರ ಆ ಕಾಳಿಯನ್ನು ಕೆಲಲೆನಾಡ ಬೆಳತೂರ ಪಶ್ಚಿಮಕ್ಕೆ ಇರುವ ಮೊರಡಿಯಲ್ಲಿ ಒಂದು ಹಂದಿಯಮೇಲೆ ಬಿಟ್ಟನು. ಆ ಹಂದಿ ಹಾಗೂ ಆ ನಾಯಿ ಎರಡೂ ಸೆಣಸಿ ಕೊನೆಗೆ ಎರಡೂ ಸತ್ತವು. ಆಗ ಮಣಲೇರ ಆತಕೂರಿನಲ್ಲಿ ಇದ್ದ ಚಲ್ಲೇಶ್ವರ ದೇವಾಲಯದ ಮುಂದೆ ಆ ನಾಯಿಯ ಶೌರ್ಯಕ್ಕೆ ಮೆಚ್ಚಿ ವೀರರಿಗೆ ನಿಲ್ಲಿಸುವಂತೆ ನಾಯಿಗೂ ಒಂದು ವೀರಗಲ್ಲನ್ನು ಹಾಕಿಸಿದನು ; ವೀರರಿಗೆ ಸಲ್ಲುವ ಸನ್ಮಾನಗಳೆಲ್ಲವೂ ಆ ವೀರಜೀವಕ್ಕೆ ಸಲ್ಲಿಸಿದನು. ಕ್ರಿ. ಶ. 949-50 (ಶಾ. ಶ. 872, ಸೌಮ್ಯ) ರಲ್ಲಿ ಈ ಘಟನೆ ನಡೆಯಿತು.

ಗಂಗರ ಚರಿತ್ರೆಯನ್ನು ಬರೆಯುವವರಿಗೆ ಇಲ್ಲೊಂದು ಸಮಸ್ಯೆ ಕಾದಿದೆ. "ಸ್ವಸ್ತಿ ಶ್ರೀ **ಎಱೆಯಪ್ಪನ ಮಗಂ ರಾಚಮಲ್ಲನಂ** ಬೂತುಗಂ ಕಾದಿಕೊಂದು ತೊಂಬತ್ತಱುಸಾಸಿರಮುಮಂ ಆಳುತ್ತಿರೆ"[48] ಎಂಬ ಈ ವಾಕ್ಯದಲ್ಲಿ ಬೂತುಗನು ಕೊಂದದ್ದು ಎಱೆಯಪ್ಪನ ಮಗನನ್ನು; ಹಾಗಾದರೆ ಬೂತುಗನು ಯಾರ ಮಗ ? ಅವನೂ ಎಱೆಯಪ್ಪನ ಔರಸಪುತ್ರನಾಗಿದ್ದರೆ ಹೀಗೆ ಬರೆದಿರುವುದು ತುಂಬ ಆಶ್ಚರ್ಯದಾಯಕ. ಅವನು ಎಱೆಯಪ್ಪನ ಸೋದರನ ಮಗನಾಗಿದ್ದರೆ ಹೀಗೆ ಬರೆಯುವುದು ಸಹಜ. ಇದು ಸರಿಯಾದರೆ ಒಂದನೆಯ ಬೂತುಗನಿಗೆ ಎಱೆಯಪ್ಪನಲ್ಲದೆ ಇನ್ನೊಬ್ಬ ಮಗನಿದ್ದು ಅವನ ಮಗ ಈ ಬೂತುಗನಾಗುತ್ತಾನೆ. ಅಣ್ಣತಮ್ಮಂದಿರ ಮಕ್ಕಳನ್ನು 'ಅಣ್ಣ' 'ತಮ್ಮ' ಎಂದು ಹೇಳುವುದೂ ಲೋಕರೂಢಿಯೇ. ಆ ದೃಷ್ಟಿಯಿಂದ ಇಮ್ಮಡಿ ಬೂತುಗ, ಮೂರನೆಯ ರಾಚಮಲ್ಲನಿಗೆ ಜ್ಞಾತಿಪಕ್ಷ ಸೋದರ.

ಮಳವಳ್ಳಿಯ ತಾಲೂಕಿನ ಕಲ್ಕುಣಿ ಶಾಸನ ಆ ಊರ ಹೆಸರು 'ಕುಣು (ಣಿ) ಙ್ಗಲೂರು ಎಂದು ತಿಳಿಸುತ್ತ ಅದು ಮಣಲೇರನ ಊರು ಎಂಬುದನ್ನು ಸ್ಪಷ್ಟಪಡಿಸಿದೆ. ಆ ಊರ ಮೇಲೆ ಬೂತಗ ದಂಡನ್ನು ನಡೆಸಿಕೊಂಡು ಬಂದನು. ಯುದ್ಧದಲ್ಲಿ ಕೊನ್ನದ

---

[48] ibid. p. 277

ನರಗನ ಮುಂದೆ ಏಱೆಯಂಗ ಎಂಬ ವ್ಯಕ್ತಿ ಮರಣವನ್ನಪ್ಪಿದ. ಅದನ್ನು ಕಂಡು ಆತನ ವೇಳೆಯ ಆಳು ದಲ್ಲಬ್ಬೆಯ (ಪುತ್ರ) ಬಸವ ಎಮ್ಬವನು ತನ್ನ ತಲೆಯನ್ನು ತೆಗೆಯಿಸಿ ಕೊಂಡು ವೀರಮರಣವನ್ನಪ್ಪಿದನು.[49] ಸೇವಕರು ತಮ್ಮ ಪ್ರೀತಿಯ ಒಡೆಯನ ಮರಣವನ್ನು ಕಂಡಾಗ ತಾವು ಮರಣವನ್ನಪ್ಪುತ್ತಿದ್ದರು. ಇಲ್ಲಿನ ಮಣಲೇರ, ಕೊಲಿಗೆರೆಯ ಮಣಲೇರ, ಅತಕೂರಿನ ಶಾಸನದ ಮಣಲೇರ ಹಾಗೂ ತಲಕಾಡಿನ ಬಳಿಯ ವಿಜಯಪುರದ ಶ್ರೀಪುರುಷ ಗಂಗನೊರೆಯ ಮಾಂಡಲಿಕ ಮಣಲೇರ[50] –ಅರಸರ ಹೆಸರುಗಳನ್ನು ಅಧ್ಯಯನಕ್ಕೆ ಎತ್ತಿಕೊಂಡರೆ ಒಂದು ಸ್ಪಷ್ಟಸಂಗತಿ ಹೊರ ಬೀಳುತ್ತದೆ. ಅದೆಂದರೆ ತಲಕಾಡಿನ ಬಳಿಯ ಭೂಭಾಗದಲ್ಲಿ ಮಣಲೇರ ಅರಸನಿಂದ ಆರಂಭವೊ ಅಥವಾ ಅವನ ಪ್ರಭಾವದಿಂದ ಆ ವಂಶಕ್ಕೆ ಮಣಲೇರ ವಂಶ ಎಂದು ಹೆಸರು ಬಂದು ಅನಂತರದಲ್ಲಿ ಆ ವಂಶದ ಅರಸರನ್ನು 'ಮಣಲೇರ' 'ಮಣಲೇರ' ಎಂದು ಸಂಬೋಧಿಸುತ್ತ ನಡೆಯಿತು. 'ಕೊಂಗಣಿವರ್ಮ' 'ಹೈಹಯ' 'ಹೊಯ್ಸಳ' 'ಸೇವುಣ' 'ಚಾಳುಕ್ಯ' ಇತ್ಯಾದಿಗಳು ಆವರ್ತನಗೊಂಡಂತೆ. 'ಮಣಲೇರ' ಎಂಬುದು ಈ ವಂಶದ ಅರಸರನ್ನು ಸೂಚಿಸಲು ಆವರ್ತನಗೊಂಡಿದೆ. ಈ ಮಣಲೇರನ ವಂಶ ದವರು ಗಂಗವಾಡಿಯ ತಲಕಾಡಿನ ಬಳಿಯಲ್ಲಿ ಆಳುತ್ತಿದ್ದವರು, ಕ್ರಿ.ಶ. ೧೦ನೆಯ ಶತಮಾನದ ಅನಂತರ ಪುಲಿಗೆಱೆಯ ರಾಜಧಾನಿಯಿಂದ ಪುಲಿಗೆಱೆ-೩೦೦ ಪ್ರಾಂತವನ್ನು ಆಳುತ್ತಿದ್ದರು.[51] ವಿಜಯಪುರದ ಶಾಸನದಲ್ಲಿ ಬಂದ ಕುಮ್ಬಿಡಿ (<ಕುಱುಂಬಿಡಿ), ಕೊಲಿಗೆಱೆಯ ಶಾಸನದಲ್ಲಿ ಬಂದಿರುವ ಕುಱುದೆಱೆ ಇವುಗಳು ಲಕ್ಷ್ಮೇಶ್ವರ (ಪುಲಿಗೆಱೆ) ಶಾಸನದಲ್ಲಿ ಬಂದಿರುವ 'ಕಿಱುದೆಱೆ' ಎಲ್ಲವೂ ಒಂದೇ ಎಂಬುದು ಇದೀಗ ಸ್ಪಷ್ಟ. ಏಕೆಂದರೆ ಮಣಲೇರ ವಂಶದ ಅರಸರು ವಂಶಪಾರಂಪರ್ಯವಾಗಿ ಈ ತೆರಿಗೆಯನ್ನು ಅನುಭೋಗಿಸುತ್ತ ಬಂದುದು ಶಾಸನಗಳಿಂದ ಸ್ಪಷ್ಟವಿದೆ. ಲಕ್ಷ್ಮೇಶ್ವರ ಶಾಸನವು ಈ ಮನ್ನೆಯ ''ಕಿಱುದೆಱೆ'' ಎಂದರೆ ಯಾವುಯಾವು ಎಂಬುದನ್ನು ಸ್ಪಷ್ಟಪಡಿಸಿದೆ. ಅವು ಹೀಗಿವೆ :

1. ಮನೆವಣಂ (ಮನೆಗಳ ಮೇಲಿನ ಸುಂಕ)

---

[49] ibid. p. 441 : ಶಾಸನದ ಟಿಪ್ಪಣಿಯಲ್ಲಿ ಎಬ್ಬೆಬಸವ ಎಂದು ಮುಂತಾಗಿ ಬರೆದಿದೆ. ಅದು ಸರಿಯಲ್ಲ. ಗುಂಡ, ಗುಂಡಮ, ಗುಂಡಮಬ್ಬೆ ರೀತಿಯಲ್ಲೇ ದಲ್ಲ, ದಲ್ಲಪ, ದಲ್ಲಬ್ಬೆ ಎಂಬುದೂ ಒಂದು ಅಂಕಿತನಾಮದ ರೂಪ. ರನ್ನನ ಅಜಿತಪುರಾಣ ಆಶ್ವಾಸ-೧ ರಲ್ಲಿಯ ಪದ್ಯ ೪೧, ೪೨, ೪೩ ಹಾಗೂ ೪೪ರಲ್ಲಿ ಬಂದಿರುವ 'ದಲ್ಲ' ದಲ್ಲಪ' ಎಂಬ ಪ್ರಯೋಗಗಳನ್ನು ನೆನಪಿಸಿಕೊಂಡರೆ ಸಾಕು.

[50] Ep. Car. Vol. V, T. Narasipur-145 and 146, p. 554 (1976)

[51] S. I. I. Vol. XX pp. XIX and Insp. No. 38, 47. 55, 99, and 117 *etc*.

2. ಪಿರಿಯಂರವಣಂ (ದೊಡ್ಡ ದೊಡ್ಡ ಜೂಜುಗಳ ಮೇಲೆ ಕೊಡುತ್ತಿದ್ದ ಸುಂಕ)

3. ಧನಬಳ (ಬಡ್ಡಿ ವ್ಯವಹಾರದವರು ಕೊಡುತ್ತಿದ್ದ ಸುಂಕ)

4. ಕಾಳಗೊಲ್ಚು (ಕಾಳನ್ನು ಮಾರುವವರು ಅಳತೆಯ ಮೇಲೆ ಕೊಡುತ್ತಿದ್ದ ಸುಂಕ)

5. ಮೇಂಟಿಗಣ್ಣುಗ (ಮೇಟಿಯ ಮೇಲಿನ ಸುಂಕ ಒಂದು ಖಂಡುಗ)

6. ಅಂಗಡಿಯ ತಿಂಗಳಿನ ಬೇಳೆಯೊಂದು (ಬೇಳೆ–ಒಂದು ನಾಣ್ಯ)

7. ಪೊಳಲಮನ್ನೆಯದಾನಿಕೆ (ಪಟ್ಟಣ ಮರ್ಯಾದೆ)

8. ದಾಯದ್ರಮ್ಮ (ರಿಜಿಸ್ಟ್ರೇಷನ್ ಫೀಸು–ವಿಶೇಷತಃ ಅಣ್ಣತಮ್ಮಂದಿರು ಪಾಲಾದಾಗ, ತಂದೆಯ ಅನಂತರ ಮಕ್ಕಳಿಗೆ ಆಸ್ತಿ ಆಗುವಾಗ, ಕೊಡಬೇಕಾಗಿದ್ದ ತೆರಿಗೆ)

—ಇವಲ್ಲದೆ ಇನ್ನೂ ಕೆಲವು ಸಣ್ಣಸಣ್ಣ ತೆರಿಗೆಗಳೂ ಇವರಲ್ಲಿ ಸೇರಿರಬಹುದು. ಸಾಮನ್ತರು ಇವುಗಳನ್ನು ತಾವು ಸಂಗ್ರಹಿಸಿ ಅಧಿರಾಜರಿಗೆ ಊರಿಗೆ ಇಂತಿಷ್ಟು ಮೊತ್ತ ಹಣ ಎಂದು ಆ ಊರಿನ ಆದಾಯದ ಮೇಲೆ ಕೊಟ್ಟು ಆಡಳಿತವನ್ನು ನಡೆಸುತ್ತಿದ್ದ ರೆಂದು ಹೇಳಬಹುದು.

ಇಮ್ಮಡಿ ಬೂತುಗನ ಧನಗೂರ ಶಾಸನವು ಅಲ್ಲಲ್ಲಿ ಅಳಿಸಿಹೋಗಿರುವುದರಿಂದ, ಮತ್ತು ಬಿದ್ದು ಒಡೆದು ಹೋಗಿರುವುದರಿಂದ ಎಲ್ಲವನ್ನು ಕೂಲಂಕಷವಾಗಿ ಹೇಳಲು ಬರದಿದ್ದರೂ 'ಬಿಯಳಮ್ಮ' ಎಂಬ ವ್ಯಕ್ತಿಗೆ ಕ್ರಿ.ಶ. 960 (ಶಾ.ಶ. 882 ರೌದ್ರಿ ಆಶ್ವಯುಜ)ರಲ್ಲಿ ಧನಗೂರನ್ನು ಕಲ್ನಾಡಾಗಿ ಕಿಱುಪಜೆ ಇತ್ಯಾದಿಗಳ ಜೊತೆಗೆ ದತ್ತಿಯಾಗಿ ಕೊಟ್ಟುದನ್ನು ತಿಳಿಸುತ್ತತೆಯೆಂದು ವಿವರಿಸಬಹುದು. ಆ ಊರಿನಲ್ಲಿ ಸುಮಾರುಜನ ಓದಿದವರು ಇದ್ದರೆನ್ನುವುದು ಅವರು ಹಾಕಿದ ರುಜು–ಸಾಕ್ಷಿ–'ಅಕ್ಕರ': ಕನವಯ್ಯನಕ್ಕರ, ನಾಗವರ್ಮಯ್ಯನಕ್ಕರ, ರೇವಣಯ್ಯನಕ್ಕರ–ಇತ್ಯಾದಿಗಳಲ್ಲಿ ವ್ಯಕ್ತ ವಾಗಿದೆ. ಬೂತುಗನನ್ನು 'ಸತ್ಯವಾಕ್ಯ' 'ಗಜ್ಜಗಾಙ್ಗೇಯ' 'ಗಙ್ಗನಾರಾಯಣ' ಹಾಗೂ 'ಜಯದುತ್ತರಙ್ಗ' ಎಂಬ ಬಿರುದಾವಳಿಗಳಿಂದ ನಿರ್ದೇಶಿಸಿದೆ. ಧನಗೂರು ಆಗ ಬಡ ಗೆಱೆನಾಡಿನಲ್ಲಿದ್ದಿತು. ಈ ಶಾಸನ ಆತನ ಆಳ್ವಿಕೆಯ ಕೊನೆಯ ವರ್ಷವನ್ನು ಸೂಚಿಸಿದೆ.

ಇಮ್ಮಡಿ ಬೂತುಗನ ಅನನ್ತರ ಇಮ್ಮಡಿ ಮಾರಸಿಂಹನ ಎರಡು ಶಾಸನಗಳು ಉಪಲಬ್ಧವಾಗಿವೆ. ಇವೆರಡೂ ನಾಗಮಂಗಲ ತಾಲೂಕಿನಲ್ಲಿವೆ.[52] ನಾಗಮಂಗಲ ಊರಿನಲ್ಲಿ ಪ್ರಸಾಸಿಮಂದಿರದ ಎದುರಿನಲ್ಲಿ ನಿಂತಿರುವ ವೀರಗಲ್ಲು ಮಾರಸಿಂಗನ

---

[52] Ep. Car. Vol. VII, Nagamangala–12 and 99.

ಪಟ್ಟಂಗಟ್ಟಿದ ಮೊದಲನೆಯ ವರ್ಷದಲ್ಲಿ ಅವನ್ನು ಬಲಿಯುವಾಗಿಯೂ ಮತ್ತು ಇಡಗೂರ ತನವರಯ್ಯ ಎಂಬ ವೀರನು ಅಬ್ಬಿಯನಪ್ಪುಬೊಂದು ಸ್ಥಳದಲ್ಲಿ ತುರುಗೋಳಲ್ಲಿ ಕಾದಿ ಸತ್ತ ಎಂಬುದನ್ನು ದಾಖಲಿಸಿದೆ.[53] ಎರಡನೆಯ ಶಾಸನವನ್ನು ಮಾರಸಿಂಹನ ಪಟ್ಟಗಟ್ಟಿದ ಹತ್ತನೆಯ ವರ್ಷದಲ್ಲಿ ಬರೆದಿದೆ, ರಾಜನು ಕೊಂಗಳನಾಡ ರಾಜಪೊಳಲಿನಲ್ಲಿ ಬೀಡುಬಿಟ್ಟಾಗ ಈ ದಾನಶಾಸನವನ್ನು ಬರೆಯಲಾಗಿದೆ. ಗಂಗಮೊರೆ ಸತ್ಯವಾಕ್ಯ, ಕೊಂಗುಣಿವರ್ಮ ಧರ್ಮಮಹಾಧಿರಾಜ, ನೊಳಂಬಕುಳಾಂತಕ ಪೆರ್ಮಾನಡಿ ಗಂಗಪಾಡಿ–96000ವನ್ನು ನಿಷ್ಕಂಟಕ ಮಾಡಿ ಆಳುತ್ತಿದ್ದ. ಶಾಸನದ ವಸ್ತು, ಆರಣಿ ಊರಕೆರೆಗಳ ಕೆಳಗೆ ಕೆರೆಗಳ ದುರಸ್ತಿಗೆ ಬೇಕಾಗುವ ಹಣಕ್ಕೆಂದು ಬಿತ್ತುವಟ್ಟವನ್ನು ಸ್ಥಾಯಿಯಾಗಿ ಮಹಾಮಾತ್ಯ ಪದವಿ ವಿರಾಜಮಾನ ಮಾಬಲಯ್ಯನಿಂದ ಬಿಡಲ್ಪಟ್ಟಿತು.[54] ಲೋಕೋಪಕಾರಕ [illegible] ಕೆಲಸ ಹೇಗೆ ನಡೆಯುತ್ತಿತ್ತೆಂಬುದು ಇದರಿಂದ ಸುವ್ಯಕ್ತ. ಆ ಊರಿನ ಜನರ ಕೈಯಲ್ಲಿಯೇ ಊರಿನ ಒಳಿತಿಗೆ ಬೇಕಾಗುವ ಆರ್ಥಿಕ ನೆಲೆಗಟ್ಟು ಭದ್ರವಾಗಿ ಬೆಳೆಯುತ್ತಿತ್ತು. ಅದೆಪದ ಆದಯ್ಯ ಮಾಡಿಸಿದ – ಎಂದು ಬರೆದಿದೆ. ಪ್ರಾಯಃ ಆತ ಕಾರ್ಯದ ಉಸ್ತುವಾರಿಯನ್ನು ವಹಿಸಿ ಅದನ್ನು ನಿರ್ವಹಿಸಿದ. ಈ ಮಾಬಲಯ್ಯನನ್ನು ತಿ. ನರಸೀಪುರ ಆಲ್ಗೋಡುಶಾಸನದಲ್ಲಿ ಬಂದಿರುವ ಮಾಬಲಯ್ಯನನ್ನೂ ಸಮೀಕರಿಸಿ ಆತ ಚಾವುಂಡರಾಯಂ ಮಂತ್ರಿಯ ತಂದೆ ಎಂಬ ಅಭಿಪ್ರಾಯಕ್ಕೆ ಕೆಲವರು ಬಂದಿದ್ದಾರೆ.[55] ಮಾರಸಿಂಹನ ಮಂತ್ರಿ ಚಾವುಂಡರಾಯನು ಬ್ರಹ್ಮಕ್ಷತ್ರಿಯ ಕುಲದವನು[56] ಮತ್ತು ಆಲ್ಗೋಡಿನ ಶಾಸನದ ಮಾಬಲಯ್ಯನು ಬ್ರಾಹ್ಮಣ ಕುಲದವನು. ಚಾವುಂಡರಾಯನು ಗಂಗವಂಶದವನೇ ಆಗಿದ್ದು ಈ ಬ್ರಾಹ್ಮಣ ಕುಲದ ವ್ಯಕ್ತಿಯ ಮಗನಾಗಿದ್ದನೆಂದು

---

[53] ಈ ಮಾರಸಿಂಹ ಯಾರೆಂಬುದು ಉಪಲಬ್ಧ ವಸ್ತುವಿನಿಂದ ಖಚಿತವಾಗಿ ನಿರ್ಣಯಿಸಲು ಆಗುವುದಿಲ್ಲ.

[54] ಈ ಶಾಸನದಲ್ಲಿ ಬಂದಿರುವ ಶಾರ್ದೂಲವಿಕ್ರೀಡಿತ ವೃತ್ತದಲ್ಲಿ "ಪೆಂಪಿನೊಳ್ಗಾಗಳು" ಎಂಬ ಪ್ರಯೋಗ ಗಮನಾರ್ಹವಾದುದು. ಕ್ರಿ.ಶ. ೧೦ನೆಯ ಶತಮಾನದ ಅಂತ್ಯಭಾಗದಲ್ಲಿ (ಕ್ರಿ.ಶ. 972 ಸೆಪ್ಟೆಂಬರ್-25) ಸ್ವರಾಂತವಾಗಿರುವುದು ಆಗಲೇ ಭಾಷೆಯಲ್ಲಿ ವ್ಯಂಜನಾಂತ ರೀತಿ ಸ್ವರಾಂತ್ಯಕ್ಕೆ ಪದಾರ್ಪಣ ಮಾಡಿರುವುದು ಕಾಣುತ್ತದೆ.

[55] (a) Ep. Car. Vol. V. (1976) T. Narasipur 312.
(b) ibid., Vol. VII (1979), Introduction, ಕನ್ನಡ ಪು. xlix ; ಇಂಗ್ಲಿಷ್ ಪು. xc.
(c) ಶಿಲ್ಪಶ್ರೀ ಕಾದಂಬರಿ – ತ.ರಾ.ಸು.

[56] Ep. Car. Vol. II (1973) Sravana Belgola-388, p. 247

ಹೇಳಲು, ಸಮೀಕರಿಸಲೂ ಆಗುವುದಿಲ್ಲ. ಅಧಿಕಾರದ ಮತ್ತಿನಲ್ಲಿ ಏನಾದರೂ ಬರೆದಿರ ಬಹುದು ! ಸತ್ಯವನ್ನು ಕಾಲ ನಿರ್ಣಯಿಸುತ್ತದೆ

ಮಂಡ್ಯ ತಾಲೂಕಿನ ಕೊತ್ತತ್ತಿಯ ಶಾಸನವು ಗಂಗದೊರೆ ಸತ್ಯವಾಕ್ಯ ರಾಜಮಲ್ಲನಿಗೆ ಸಂಬಂಧಿಸಿದ್ದು ಶಾ. ಶ. 899 ಪ್ರಮಾಥಿ ಸಂವತ್ಸರದಲ್ಲಿ (ಕ್ರಿ. ಶ. 977-78) ಬರೆಯಲ್ಪಟ್ಟಿದೆ. 'ಈಸರಗಣ್ಣ' ಎಂಬ ವೀರನ ನೆನಪಿನಲ್ಲಿ ನೆಟ್ಟ ವೀರಗಲ್ಲು—ಇದು. ಆತ ಗಂಗದೊರೆಯ ಪೇರೂರ ಯುದ್ಧದಲ್ಲಿ ಮಡಿದ ಕಾರಣದಿಂದ ಮರಣಾನಂತರದ ಮರ್ಯಾದೆಯಾಗಿ (posthumous award) ಕೊತ್ತತ್ತಿಗ್ರಾಮವನ್ನು ಕಲ್ನಾಡಾಗಿ ಆ ಗಂಗದೊರೆಯು ಕೊಟ್ಟನು. ಪೆರೂರ ಯುದ್ಧದಲ್ಲಿ ಪಲ್ಲವರನ್ನು ಸೋಲಿಸಲಾಯಿತು. ಈ ಶಾಸನದಲ್ಲಿ ಬಂದಿರುವ ರಾಜಮಲ್ಲದೊರೆಯ ಬಿರುದಾವಳಿಯು ಬಹಳ ಗಮನಾರ್ಹವಾಗಿದೆ : ಸತ್ಯವಾಕ್ಯ, ಕೊಂಗುಣಿವರ್ಮ, ಧರ್ಮಮಹಾಧಿರಾಜ, ಕುವಳಾಳಪುರವರೇಶ್ವರ, ನನ್ದಗಿರಿನಾಥ, ಜಸಮುತ್ತರಂಗ (<ಜಯದುತ್ತರಂಗ?) ಹಾಗೂ ಹೇಹಕುಳಾನ್ತಕ.[57] ಈ 'ಹೇಹಕುಳ' ಯಾವುದು ಎಂದು ಪ್ರಶ್ನಿಸಿಕೊಂಡರೆ ನನಗೆ ಕಲ್ಕುಣಿಯಿಂದ ಆಳುತ್ತಿದ್ದ ಮಣಲೇರ ವಂಶದ ರಾಜರ ಕುಳವೆಂದೇ ತೋರುತ್ತದೆ. ಹೇಹ [ಯ*]ಅಥವಾ ಹೈಹಯ ಅಥವಾ ಅಹಿಹಯ ಅಥವಾ ಕಳಚುರಿ ಎಂದು ಮುಂತಾಗಿ ಪ್ರಸಿದ್ಧಿ ಪೊಂದಿದ ಹಲವು ಶಾಖೆಗಳನ್ನು ಹೊಂದಿದ ಮಧ್ಯಭಾರತದ ಒಂದು ಅರಸುಮನೆತನ. ಇವರ ಕರ್ನಾಟಕದಲ್ಲಿಯೇ ನಮಗೆ, ಮೂರು ಶಾಖೆಗಳಿದುದ್ದು ಕಂಡು ಬಂದಿದೆ:

1. ಕಾಳಂಜರ ಪುರವರಾಧೀಶ್ವರರು—ಕಳಚುರಿಯರು

2. ಮಾಹಿಷ್ಮತಿಪುರವರಾಧೀಶ್ವರರು – ಆಯ್ಯಣಮಾಡಿ ಎಂಬ ಕೃಷ್ಣಾ ಹಾಗೂ ಭೀಮಾ ನದಿಗಳ ನಡುವಣ ಹಾಗೂ ಎಡಬಲದ ಭೂಭಾಗದಲ್ಲಿದ್ದು ಆಳುತ್ತಿದ ರಾಜಮನೆತನ.

3. ವಳಭಿಪುರವರೇಶ್ವರರು—ಮದ್ದೂರು, ಮಳವಳ್ಳಿ ಹಾಗೂ ತಲಕಾಡು ಪ್ರದೇಶವನ್ನು ಅಂತರ್ಗತವಾಗಿಸಿಕೊಂಡ ನಾಡನ್ನು ಆಳುತ್ತಿದ್ದರು. ಮದ್ದೂರು ಭಾಗಕ್ಕೆ, ಮಂಡ್ಯದ ಕೆಲಭಾಗಕ್ಕೆ ಹಾಗೂ ಮಳವಳ್ಳಿ (ಕೂಲಿಗೆರೆ, ಕಲ್ಕುಣಿ ಇತ್ಯಾದಿ) ಕೆಲಭಾಗಕ್ಕೆ ಕೆಳಲೆನಾಡ ಪ್ರಾಂತ ಎಂದು ಆಗಿನ ಕಾಲದಲ್ಲಿ ಹೇಳುತ್ತಿದ್ದರು. ಈ ಮಂಡಲವನ್ನು ಆಳುತ್ತಿದ್ದುದೇ ಮಣಲೇರನ ವಂಶ.

—ಇದು ಈಗ ಹರಳುಗೊಂಡ ಸ್ಪಷ್ಟ ಸಂಗತಿ. ಈ ರಾಜಮಲ್ಲನು ಯಾವ 'ಹೇಹಕುಳಾನ್ತಕ' ಎಂಬುದನ್ನು ತಿಳಿದುಕೊಳ್ಳಬೇಕಾದರೆ ಇತಿಹಾಸದ ಸಂಗತಿಗಳನ್ನು ಇನ್ನಷ್ಟು ಆಳವಾಗಿ ಅಭ್ಯಾಸಮಾಡಬೇಕಾಗುತ್ತದೆ. ಈ ರಾಜ ಮಲ್ಲನ ತಮ್ಮನಾದ

---

[57] Ep. Car. Vol. Mandya-81, pp. 250-51

ವಾಸವಮಹೀಭುಜಂಗನಿಗೆ ಅಯ್ಯಣಪಾಡಿಯ ಆಹವಯ ವಂಶದ ರೇವರಸನ ತಾಯಿಯ ತಂಗಿ ಕೇಚಲದೇವಿಯನ್ನು ಕೊಟ್ಟು ವಿವಾಹ ಮಾಡಿದ್ದರು. ಈ ದಂಪತಿಗಳಿಗೆ ಹುಟ್ಟಿದ ಅರುಮೊಳಿದೇವನಿಗೆ ರೇವರಸನ ಸೋದರ ತಂಗಿಯಾದ ಗಾವಬ್ಬರಸಿಯನ್ನು ಕೊಟ್ಟು ಮದುವೆ ಮಾಡಿದ್ದರು. ಇಮ್ಮಡಿ ಬೂತುಗನ ಅನಂತರದ ಗಂಗ ವಂಶಾವಳಿಯನ್ನು ಇನಿತು ಗಮನಿಸಬಹುದು ಇಲ್ಲಿ ವಿವರ :

ಇಮ್ಮಡಿ ಬೂತುಗ ಸತ್ಯವಾಕ್ಯ

- ನೀತಿಮಾರ್ಗ ಮರುಳದೇವ (ತಾಯಿ ರೇವಕ ನಿಮ್ಮಡಿ ರಾಷ್ಟ್ರಕೂಟ ವಂಶದವಳು[58])
- ಸತ್ಯವಾಕ್ಯ ಮಾರಸಿಂಹ II (ತಾಯಿ : ಕಲ್ಲಬ್ಬರಸಿ ಮಾಟೂರ ವಂಶದವಳು[59])
- ನೀತಿಮಾರ್ಗ ಗೋವಿಂದರ
- ಸತ್ಯವಾಕ್ಯ ರಾಜಮಲ್ಲ
- ವಾಸವ ಹೆಂಕೆಂಚಲೆ
  - ಗೋವಿಂದರ (ಸತ್ಯವಾಕ್ಯ, ಗಂಡರ ಮೂಕುತಿ, ಗಂಡ ದಲ್ಲಣ ಕಲ್ಕಣಿ ಬ್ರಹ್ಮನ ಉಗ್ರಾರಿ, ರಕ್ಕಸಗಂಗ, ಗಂಗಚೂಡಾಮಣಿ, ವೀರ ಮಾರ್ತಾಂಡ ಇತ್ಯಾದಿ ಬಿರುದುಗಳಿದ್ದುವು)
  - ಅರುಮೊಳಿದೇವ (ಕೊಮರಂಕಭೀಮ ಎಂಬುದು ಬಿರುದು. ಹೆಂಡತಿ : ಮಧ್ಯದೇಶಾಧಿಪತಿಯೆನಿಸಿದ ಅಯ್ಯಣ ಚಂದರಸನ ಪುತ್ರಿ, ರೇವರಸನ ತಂಗಿ : ಗಾವಬ್ಬರಸಿ)
    - ಚಟ್ಟಲೆ (ಗಂ. ಪಲ್ಲವ ಕಾಡುವೆಟ್ಟಿ)
    - ಕೆಂಚಲೆ (ಗಂ. ಶಾಂತರ ವೀರದೇವ)
    - ರಾಜ ವಿದ್ಯಾಧರ

ಕ್ರಿ.ಶ. 977–78ರಲ್ಲಿ ರಾಜಮಲ್ಲನು ತನ್ನನ್ನು ಹೇಹಕುಳಾನ್ತಕ ಎಂದು ಹೇಳಿಕೊಂಡಿರುವುದರಿಂದ ಮತ್ತು ಮಣಲೇರನ ವಂಶದವರ ಶಾಸನಗಳು ಈ ಭೂಭಾಗದಲ್ಲಿ (ಮಂಡ್ಯ ಜಿಲ್ಲೆಯ ಹಾಗೂ ಎಡಬಲದ ಪ್ರದೇಶದಲ್ಲಿ) ಅನಂತರದಲ್ಲಿ ಒಂದೂ ಸಿಕ್ಕಿಲ್ಲವಾದುದರಿಂದ ಅವರ ವಂಶದವರು ಇಲ್ಲಿ ಇಲ್ಲದಂತಾದರು. ಅವರ ಕುಡಿ ಬೆಳ್ವೊಲ-ಪುಲಿಗೆರೆಗಳಲ್ಲಿ ಅನಂತರದಲ್ಲಿ ಇದ್ದುದು ಕಂಡು ಬರುವುದರಿಂದ ಸತ್ಯವಾಕ್ಯ ರಾಜಮಲ್ಲ ಹಾಗೂ ಆತನ ಅನಂತರ ಪಟ್ಟಕ್ಕೆ ಬಂದ ಸತ್ಯವಾಕ್ಯ ಗೋವಿಂದರ ಇವರು ಮೂಲೋತ್ಪಾಟನ ಮಾಡಿದ್ದು ಕಲ್ಯಾಣಿಯ ಹೈಹಯ ವಂಶ.

ಕೃಷ್ಣರಾಜಪೇಟೆಯ ಆಲೇನಹಳ್ಳಿಯ ಶಾಸನವು ಸತ್ಯವಾಕ್ಯ ಕೊಂಗುಣಿವರ್ಮ

---

[58] ಇಮ್ಮಡಿ ಮಾರಸಿಂಹನ ಕೂಡಲೂರ ಶಾಸನ (MAR 1991) ಹಾಗೂ ಶಾಂತರ ತೈಲಪನ ಹುಂಚದ ಶಾಸನ–NR. 35, Ep. Car. Vol. VIII (B. L. Rice)

[59] Ep. Car Vol. II (1973) Sravana Belgola–64, p. 20

ಧರ್ಮಮಹಾರಾಜನು ರಾಜ್ಯ ಆಳುತ್ತಿರಲು ಕಲಊರ (ಕಲಊರ) ಕಾಳಗದಲ್ಲಿ ನೀತಿವಾಕ್ಯ ಪೆರ್ಮಾನಡಿ ಒಬ್ಬನು ಸತ್ತಂತೆ ಬರೆದುದು ಕಂಡುಬರುತ್ತದೆ.[60] ಇದರ ಅಕ್ಷರಗಳು ಕ್ರಿ ಶ. 10ನೆಯ ಶತಮಾನವೆಂಬುದು ಸಷ್ಟವಿದೆ. ಕಲಊರ ಕಾಳಗ ಕ್ರಿ.ಶ. 1004ರ ಎಡಬಲದಲ್ಲಿ ನಡೆದುದನ್ನು ಗಮನಕ್ಕೆ ತಂದುಕೊಂಡರೆ ಇಲ್ಲಿ ಇಬ್ಬರು ಗಂಗ ದೊರೆಗಳು ಸೋತುದು ಸ್ಪಷ್ಟವಿದೆ. ಈ ನೀತಿವಾಕ್ಯ 'ನೀತಿಮಾರ್ಗ' ಇದರ ಇನ್ನೊಂದು ರೂಪವಾಗಿ ವಾಸವನಿಗ ಅನ್ವಯವಾಗುತ್ತೇ ಇದು ವಿಚಾರಣೀಯ. ಏಕೆಂದರೆ ಆತನ ಮಗ ಗೋವಿಂದರನಿಗೆ ಮತ್ತೆ 'ಸತ್ಯವಾಕ್ಯ' ಎಂಬ ಬಿರುದೇ ಬಂದಿದೆ. ಈ ಯುದ್ಧದಲ್ಲಿ ಸತ್ತ ವೀರನಿಗೆ 'ತಟ್ಟೆವಳ್ಳಿ' ಎಂಬ ಊರನ್ನು 'ಅಭ್ಯಂತರ ಸಿದ್ಧಿ' ಯಾಗಿ ಕಲ್ನಾಡನ್ನು ಪಡೆದನು. ಕ್ರಿ.ಶ. 986-87ರಲ್ಲಿ ಮದ್ದೂರು ತಾಲೂಕಿನ ಕಾಡಕೊತ್ತನ ಹಳ್ಳಿಯ ಶಾಸನದ ಪ್ರಕಾರ ಗೋಯರನು ರಾಜ್ಯವಾಳುತ್ತಿದ್ದನು. ಈ ಗೋಯರ ಗೋವಿಂದರ ಆಗಿದ್ದರೂ ಆಗಿರಬಹುದು. ಇವನ ಕಾಲಕ್ಕೆ 'ಬಲ್ಲಹ' ಗಂಗವಾಡಿಗೆ ದಂಡೆತ್ತಿ ಬಂದಿದ್ದನು.[61] ಕ್ರಿ.ಶ. 997ರಲ್ಲಿ ಅಥವಾ 1022ರಲ್ಲಿ(< 944 + 78)ಗಂಗಪೆರ್ಮಾನಡಿಗಳು ಕುನ್ನೂರು ನಾಡನ್ನು ಆಳುತ್ತಿದ್ದುದಾಗಿ ತಿಳಿದುಬಂದಿದೆ.[62] ಗಂಗರು ಈ ಶಾಸನದ ಕಾಲಕ್ಕೆ ತಮ್ಮ ಹಿರಿಮೆಗಳನ್ನು ಕಳೆದುಕೊಂಡಿದ್ದರು. ಮಂಡ್ಯ ತಾಲೂಕಿನ ಹಳೆಬೂದನೂರ ಒಂದು ಶಾಸನವನ್ನು ಎರಡಾಗಿ ಪರಿಗಣಿಸಲಾಗಿದೆ; ಇದು ವಾಸ್ತವ ಸತ್ಯಕ್ಕೆ ದೂರವಾಗಿದೆ. ಚೋಳರ ಅಧೀನದಲ್ಲಿ ಈ ಗಂಗರ ಶಾಸನ ಹುಟ್ಟಿದೆ. ಏಕೆಂದರೆ ಶಾಸನ ಶಿಲೆಯ ಅತ್ಯಂತ ಮುಖ್ಯ ಭಾಗದಲ್ಲಿ ಚೋಳರ ದೊರೆ ೧ನೆಯ ರಾಜೇಂದ್ರ ಚೋಳನ ತಮಿಳು ಪ್ರಶಸ್ತಿಯನ್ನು ಕನ್ನಡ ಅಕ್ಷರದಲ್ಲಿ ಬರೆದಿದೆ; ಅದರಲ್ಲಿ ದತ್ತಿಯ ಭಾಗವೇ ಇಲ್ಲ! ಆ ದತ್ತಿಯ ಭಾಗವನ್ನು ಗಂಗದೊರೆ ಸತ್ಯವಾಕ್ಯ ಗೋವಿಂದರ ರಕ್ಕಸ ಗಂಗ ಇತ್ಯಾದಿ ಬಿರುದಾವಳಿಗಳ ಜೊತೆಗೆ ದಾಖಲಿಸಿದೆ. ಕೆಜೆಗೆ ಬಿತ್ತುವಾಟ ಕೊಟ್ಟುದು ಶಾಸನದ ವಸ್ತು.[63]

ಗಂಗರ ಆಡಳಿತದಲ್ಲಿ ಮಂಡ್ಯಜಿಲ್ಲೆ ಅವರ ರಾಜ್ಯದ ಮುಖ್ಯ ಭಾಗವೇ ಆಗಿತ್ತು. ಅದು ಅವರ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಜೀವನವನ್ನು ಪ್ರತಿಫಲಿಸುವ ಕನ್ನಡಿಯಾಗಿದೆ.

— ಸೀತಾರಾಮರಾವ್ ಜಾಗಿರ್ದಾರ್

---

[60] Ep. Car Vol. VI (1977) K. R. Pate–19, p. 14

[61] ibid., Vol. VII, Maddur–116, p. 326

[62] ibid., Mandya–67, p. 244

[63] ibid., Mandya–53 and 54. pp, 234–36

ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಮಂಡ್ಯ ಜಿಲ್ಲೆ

ರಾಷ್ಟ್ರಕೂಟರು ದಖನ್‌ನಲ್ಲಿ ಸಾಮ್ರಾಜ್ಯ ಕಟ್ಟಿ ಆಳಿದ ಪ್ರಮುಖರಲ್ಲಿ ಒಬ್ಬರು. ಈಗಿನ ಗುಲ್ಬರ್ಗಜಿಲ್ಲೆಯ ಮಾನ್ಯಖೇಟ ಅಥವಾ ಮಳಖೇಡ ಅವರ ರಾಜಧಾನಿಯಾಗಿತ್ತು. ಅವರ ಸಾಮ್ರಾಜ್ಯದ ವ್ಯಾಪ್ತಿಗೆ ಮಂಡ್ಯ ಜಿಲ್ಲೆಯೂ ಸೇರಿತ್ತು. ಆದರೆ ಈ ಅವಧಿಯುದ್ದಕ್ಕೂ ತಲಕಾಡಿನಿಂದ ಆಳುತ್ತಿದ್ದ ಗಂಗರ ರಾಜ್ಯಕ್ಕೆ ಮಂಡ್ಯ ಜಿಲ್ಲೆ ಕೇಂದ್ರ ಸ್ಥಾನದಲ್ಲಿದ್ದುದರಿಂದ ರಾಷ್ಟ್ರಕೂಟರ ನೇರ ಆಳ್ವಿಕೆಗೆ ಇದು ಒಳಗಾದದ್ದು ಕಡಿಮೆ. ಆದ್ದರಿಂದ ಈ ಜಿಲ್ಲೆಗೆ ಸಂಬಂಧಿಸಿದ ರಾಷ್ಟ್ರಕೂಟರ ಆಳ್ವಿಕೆಯನ್ನು ಗಂಗ-ರಾಷ್ಟ್ರಕೂಟರ ಸಂಬಂಧಗಳ ಹಿನ್ನೆಲೆಯಲ್ಲಿ ನೋಡಬೇಕಾಗಿದೆ.

ರಾಷ್ಟ್ರಕೂಟರ ದಂತಿದುರ್ಗನು ಕ್ರಿ.ಶ. 751 ರಿಂದ 756ರ ಅವಧಿಯಲ್ಲಿ ಬಾದಾಮಿ ಚಾಲುಕ್ಯರನ್ನು ಸೋಲಿಸಿ ರಾಷ್ಟ್ರಕೂಟ ರಾಜ್ಯದ ಸ್ಥಾಪಕನೆನಿಸಿದನು. ಅವನ ಚಿಕ್ಕಪ್ಪ ಒಂದನೆಯಕೃಷ್ಣನ (ಸು. 756–774) ಕಾಲದಲ್ಲಿ ರಾಷ್ಟ್ರಕೂಟ ರಾಜ್ಯ ಹಿಂದಿನ ಚಾಲುಕ್ಯ ಸಾಮ್ರಾಜ್ಯದ ಉತ್ತರಾಧಿಕಾರಿಯಾಗಿ ವಿಸ್ತರಿಸಿತು. ಚಾಲುಕ್ಯರ ಬೆಂಬಲಿಗನೂ ಬಂಧುವೂ ಆಗಿದ್ದ ಗಂಗ ಶ್ರೀಪುರುಷನು ರಾಷ್ಟ್ರಕೂಟರ ಆದಿಪತ್ಯವನ್ನು ಒಪ್ಪಿಕೊಳ್ಳಲಿಲ್ಲ. ಇದರಿಂದ ಕೆರಳಿದ ರಾಷ್ಟ್ರಕೂಟ ಕೃಷ್ಣನು ಶ್ರೀಪುರುಷನ ವಿರುದ್ಧ ಯುದ್ಧ ಹೂಡಿದ. ಮೊದಲು ಶ್ರೀಪುರುಷನು ರಾಷ್ಟ್ರಕೂಟ ಸೈನ್ಯವನ್ನು ಈಗಿನ ಬಳ್ಳಾರಿ ಜಿಲ್ಲೆಯ ಕಂಪಿಲಿಯವರೆಗೂ ಹಿಮ್ಮೆಟ್ಟಿಸಿದನಾದರೂ ತರುವಾಯದ ಆಕ್ರಮಣದಲ್ಲಿ ರಾಷ್ಟ್ರಕೂಟರಿಗೆ ಮಣಿದನು.

ಗಂಗರು ಮಂಡ್ಯ ಜಿಲ್ಲೆಯ ಸರಹದ್ದಿನಲ್ಲಿರುವ ಈಗ ಮೈಸೂರು ಜಿಲ್ಲೆಗೆ ಸೇರಿರುವ ತಲಕಾಡಿನಿಂದ ಆಳುತ್ತಿದ್ದರು. ಅವರ ಕಾರ್ಯಕ್ಷೇತ್ರ ಮಂಡ್ಯ ಜಿಲ್ಲೆಯೂ ಸೇರಿದಂತೆ ಇಡೀ ಗಂಗವಾಡಿಗೆ ವ್ಯಾಪಿಸಿತ್ತು. ಈ ಗಂಗವಾಡಿಯಲ್ಲಿ ಮಂಡ್ಯ ಬಹು ಮುಖ್ಯ ಭಾಗ. ಮದ್ದೂರು ಸುತ್ತಮುತ್ತಲ ಪ್ರದೇಶಕ್ಕೆ ಚಿಕ್ಕಗಂಗವಾಡಿ ಎಂಬ ಹೆಸರೂ ಇತ್ತು. ರಾಷ್ಟ್ರಕೂಟರ ಅಭ್ಯುದಯದ ಕಾಲಕ್ಕೆ ಇಲ್ಲಿ ಗಂಗರು ಶತಮಾನಗಳ ಕಾಲ ಆಳಿ ಸುಭದ್ರವಾಗಿ ಬೇರೂರಿದ್ದರು. ರಾಷ್ಟ್ರಕೂಟರು ಗಂಗರನ್ನು ಮೂಲೋತ್ಪಾಟನ ಮಾಡಲು ಸಾಧ್ಯವಾಗದ್ದರಿಂದ ಅವರ ಬಗ್ಗೆ ಮೂರುಹಂತದ ಧೋರಣೆಯನ್ನು ಅನುಸರಿಸಿದರು. ಮೊದಲ ಹಂತದಲ್ಲಿ ಅಂದರೆ ಒಂದನೇ ಅಮೋಘವರ್ಷನೃಪತುಂಗನ ಆಳ್ವಿಕೆಯ ಪ್ರಾರಂಭ ಕಾಲದವರೆಗೂ ಗಂಗರ ವಿರುದ್ಧ ಬಲಪ್ರಯೋಗದ ನೀತಿಯನ್ನು

ಅನುಸರಿಸಿದರು. ಎರಡನೆಯ ಹಂತದಲ್ಲಿ ನೃಪತುಂಗನು ಗಂಗರೊಂದಿಗೆ ರಕ್ತ ಸಂಬಂಧ ಬೆಳೆಸಿ ಸಾಮರಸ್ಯದ ನೀತಿಯನ್ನು ತಳೆದನು. ಮೂರನೆಯ ಹಂತದಲ್ಲಿ ರಾಷ್ಟ್ರಕೂಟರು ತಮ್ಮ ಅಸ್ತಿತ್ವಕ್ಕಾಗಿ ಗಂಗರ ಬೆಂಬಲ ನಿರೀಕ್ಷಿಸಿ ಸ್ನೇಹಪರ ಹಸ್ತ ಚಾಚಿದರು. ಮೊದಲ ಹಂತದಲ್ಲಿ ಗಂಗವಾಡಿಗೆ ಒಬ್ಬಿಬ್ಬರು ಪ್ರಾಂತ್ಯಾಧಿಕಾರಿಗಳನ್ನು ನೇಮಿಸಿದ್ದನ್ನು ಬಿಟ್ಟರೆ ಉಳಿದಂತೆ ಈ ಪ್ರದೇಶದ ಆಡಳಿತ ಹಾಗೂ ಇತರ ಆಗುಹೋಗುಗಳು ಗಂಗರ ಕೈಯಲ್ಲೇ ಇದ್ದವು

ಒಂದನೇ ಕೃಷ್ಣನ (756–774) ಮಕ್ಕಳಾದ ಇಮ್ಮಡಿಗೋವಿಂದ ಮತ್ತು ಧ್ರುವರ ನಡುವೆ ಸಿಂಹಾಸನಕ್ಕಾಗಿ ಕಚ್ಚಾಟ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಗಂಗ ಶ್ರೀಪುರುಷರ ಮಗ ಎರಡನೆಯ ಶಿವಮಾರನು ಇಮ್ಮಡಿ ಗೋವಿಂದನ (774–780) ಪಕ್ಷ ವಹಿಸಿದ್ದನು. ಆದರೆ ಅಂತಿಮವಾಗಿ ಧ್ರುವನು (780–793) ಗೋವಿಂದನಿಂದ ಅಧಿಕಾರವನ್ನು ಕಿತ್ತುಕೊಳ್ಳುವಲ್ಲಿ ಯಶಸ್ವಿಯಾದನು. ತನ್ನ ಅಣ್ಣನ ಪಕ್ಷವನ್ನು ವಹಿಸಿದ್ದ ಶಿವಮಾರನನ್ನು ಸೋಲಿಸಿ ಸೆರೆಯಲ್ಲಿಟ್ಟನು. ತನ್ನ ಮಗ ಕಂಬಯ್ಯನನ್ನು (ಸ್ತಂಭ) ಗಂಗವಾಡಿಯ ಪ್ರಾಂತ್ಯಾಧಿಕಾರಿಯನ್ನಾಗಿ ನೇಮಿಸಿದನು. ಇವನು ಪ್ರಾಂತ್ಯಾಧಿಕಾರಿಯಾಗಿದ್ದಾಗಲೂ ಸ್ಥಳೀಯ ಆಡಳಿತದಲ್ಲಿ ಯಾವುದೇ ಬದಲಾವಣೆಗಳಾಗಲಿಲ್ಲ. ರಾಷ್ಟ್ರಕೂಟರ ಪ್ರಭಾವ ಮಾತ್ರ ಗಂಗವಾಡಿಯಲ್ಲಿ ಪ್ರಬಲವಾಗಿತ್ತು. ಇವನ ಆಡಳಿತಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳೇನೂ ತಿಳಿದುಬರುವುದಿಲ್ಲ.

ಧ್ರುವನ ಅನಂತರ ಕಂಬಯ್ಯನಿಗೂ ಅವನ ತಮ್ಮ ಮೂರನೆಯ ಗೋವಿಂದನಿಗೂ ರಾಷ್ಟ್ರಕೂಟ ಸಿಂಹಾಸನಕ್ಕಾಗಿ ಸ್ಪರ್ಧೆ ನಡೆಯಿತು ಆಗ ಗೋವಿಂದನು ಕಂಬಯ್ಯನನ್ನು ಎದುರಿಸಲು ನೆರವಾಗುವಂತೆ ಶಿವಮಾರನನ್ನು ಸೆರೆಯಿಂದ ಬಿಡುಗಡೆಮಾಡಿ ಪುನಃ ಅವನ ರಾಜ್ಯವನ್ನು ಒಂದಕ್ಕೆಕೊಟ್ಟನು. ಆದರೆ ಸೆರೆಯಿಂದ ಬಿಡುಗಡೆಯಾದ ಶಿವಮಾರನು ಕಂಬಯ್ಯನ ಪಕ್ಷವನ್ನು ವಹಿಸಿದ. ಗೋವಿಂದ ತನ್ನ ಸಹೋದರನನ್ನು ಅಡಗಿಸಿ ಶಿವಮಾರನನ್ನು ಸೋಲಿಸಿ ಪುನಃ ಸೆರೆಯಲ್ಲಿಟ್ಟನು. ಶಿವಮಾರ ಅನೇಕ ವರ್ಷಗಳ ಕಾಲ ಸೆರೆಯಲ್ಲಿದ್ದ. ಗೋವಿಂದನು ತನ್ನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ ದಯೆತೋರಿ ಅವನನ್ನು ಸೆರೆಯಿಂದ ಬಿಡುಗಡೆಮಾಡಿ ಸಿಂಹಾಸನವನ್ನು ಹಿಂದಿರುಗಿಸಿದ. ಗಂಗವಾಡಿಯ ಒಂದು ಪ್ರಾಂತ್ಯಕ್ಕೆ ಗೋವಿಂದವಾಡಿ[1] ಎಂಬ ಹೆಸರು ಬಂದಿದೆ. ಇದು ಇವನ ಹೆಸರಿನಲ್ಲಿ ರಚಿತವಾದ ಪ್ರಾಂತ್ಯ ಎಂಬುದರಲ್ಲಿ ಸಂದೇಹವಿಲ್ಲ.

ಗಂಗ ಒಂದನೆಯ ರಾಚಮಲ್ಲನು (816–843) ಪರಾಕ್ರಮಿಯಾಗಿದ್ದು ಸ್ವತಂತ್ರನಾಗಲು ಹವಣಿಸುತ್ತಿದ್ದನು. ರಾಷ್ಟ್ರಕೂಟರು ಗಂಗವಾಡಿಯ ಮೇಲೆ ಪರಮಾಧಿಕಾರ ಸ್ಥಾಪಿಸಿದ್ದರೂ ದಕ್ಷಿಣ ಕರ್ನಾಟಕದ ಆಡಳಿತದಲ್ಲಿ ಹೆಚ್ಚಿನ ಪ್ರವೇಶಕ್ಕೆ ಅವರಿಗೆ ಅವಕಾಶವಿರಲಿಲ್ಲ. ಇಲ್ಲಿ ಮುಖ್ಯವಾಗಿ ಹೋರಾಟ ನಡೆಯುತ್ತಿದ್ದದ್ದು ಬಾಣರು, ನೊಳಂಬರು ಮತ್ತು ಗಂಗರ ನಡುವೆ. ಮಂಡ್ಯ ಮತ್ತು ಮೈಸೂರು ಜಿಲ್ಲೆಗಳು ಕೇಂದ್ರ ನೆಲ

ಯಾಗಿದ್ದವು ತುಮಕೂರು. ಕೋಲಾರ ಮತ್ತು ಆಂಧ್ರದ ಸರಹದ್ದಿನ ಪ್ರಾಂತ್ಯಗಳು ಬಾಣರು ಮತ್ತು ನೊಳಂಬರ ನೆಲೆಗಳಾಗಿದ್ದವು. ರಾಜಮಲ್ಲನು ಬಾಣರನ್ನು ಅಡಗಿಸಿ ನೊಳಂಬರೊಡನೆ ಸಖ್ಯ ಬೆಳೆಸಿದ. ಈ ಬೆಳವಣಿಗೆಯಿಂದ ಶಂಕೆಗೊಂಡ ರಾಷ್ಟ್ರಕೂಟರ ಒಂದನೇ ಅಮೋಘವರ್ಷನು (814–878) ತನ್ನ ಸೇನಾನಿ ಬಂಕೇಶನ ನೇತೃತ್ವದಲ್ಲಿ ಗಂಗವಾಡಿಯ ವಿರುದ್ಧ ಸೈನ್ಯವನ್ನು ಕಳುಹಿಸಿದ. ಬಂಕೇಶನು ಕೈದಾಳದುರ್ಗವನ್ನು ಆಕ್ರಮಿಸಿ ಗಂಗಸೈನ್ಯವನ್ನು ಕಾವೇರಿಯವರೆಗೂ ಅಟ್ಟಿಸಿಕೊಂಡು ಹೋದನು. ಆದರೆ ಬಂಕೇಶನು ಅಮೋಘವರ್ಷನ ಮಗ ಕೃಷ್ಣನನ್ನು ಹತೋಟಿಗೆ ತರಲು ಬಹುಬೇಗ ಮಾನ್ಯಖೇಟಕ್ಕೆ ಹಿಂದಿರುಗಬೇಕಾಯಿತು.

ರಾಷ್ಟ್ರಕೂಟ ಸಾಮ್ರಾಜ್ಯವು ಉತ್ತರದಲ್ಲಿ ಗುಜರಾತ್‌ವರೆಗೂ ಪೂರ್ವಪಶ್ಚಿಮಗಳಲ್ಲಿ ಸಮುದ್ರಗಳವರೆಗೂ ದಕ್ಷಿಣದಲ್ಲಿ ಕಾವೇರಿಯವರೆಗೂ ತನ್ನ ವ್ಯಾಪ್ತಿಯನ್ನು ಹೊಂದಿದ್ದರಿಂದ ಅದರ ವ್ಯವಸ್ಥಾಪನೆ ಅಗಾಧವಾದುದಾಗಿತ್ತು. ಆದ್ದರಿಂದ ಕರ್ನಾಟಕದ ವಿದ್ಯಮಾನಗಳಿಗೆ ಸಂಪೂರ್ಣ ಗಮನಕೊಡುವ ಸ್ಥಿತಿಯಲ್ಲಿ ಅವರಿರಲಿಲ್ಲ. ಆಗಾಗ ಕಳುಹಿಸುತ್ತಿದ್ದ ದಂಡಯಾತ್ರೆಗಳು ಸಾಮಂತರನ್ನು ಹತೋಟಿಯಲ್ಲಿಡುವ ಮತ್ತು ಕಪ್ಪಕಾಣಿಕೆಗಳನ್ನು ತರುವ ಸಾಧನಗಳಾಗಿದ್ದವು. ಸಾಮ್ರಾಜ್ಯಕ್ಕೆ ಸದಾ ಕಪ್ಪಕಾಣಿಕೆ ನೀಡುವುದು ಮುಗಿಯದ ಕಾರ್ಯವಾಗಿತ್ತು. ಗಂಗರಾಜ ನೀತಿಮಾರ್ಗ ಎರೆಯಗಂಗನು (853–869) ರಾಷ್ಟ್ರಕೂಟರ ಪ್ರಭಾವವನ್ನು ತಗ್ಗಿಸಲು ಯುದ್ಧಸನ್ನದ್ಧನಾದನು. ಅವರ ವಿರುದ್ಧ ಕೋಲಾರ ಜಿಲ್ಲೆಯ ಉತ್ತರಕ್ಕೆ ರಾಜಮಡು[3] ಎಂಬಲ್ಲಿ 868ರಲ್ಲಿ ನಡೆಸಿದ ಯುದ್ಧವು ಪರಿಣಾಮಕಾರಿಯಾಯಿತು. ರಾಷ್ಟ್ರಕೂಟರು ಈ ಯುದ್ಧದಲ್ಲಿ ಮುಖಭಂಗ ಹೊಂದಿದರು. ಅಮೋಘವರ್ಷ ನೃಪತುಂಗನು ಗಂಗರಾಜ್ಯವು ಪ್ರಬಲವಾಗಿರುವುದನ್ನು ಮನಗಂಡು ಆ ಮನೆತನದೊಂದಿಗೆ ವಿವಾಹಸಂಬಂಧ ಬೆಳೆಸಿ ಸಾಮರಸ್ಯ ಸಾಧಿಸಲು ಮುಂದಾದನು. ನೀತಿಮಾರ್ಗನ ಮಗ ಯುವರಾಜ ಒಂದನೇ ಬೂತುಗನಿಗೆ ತನ್ನ ಮಗಳು ಚಂದ್ರೋಬಲಬ್ಬೆಯನ್ನು ಕೊಟ್ಟು ವಿವಾಹ ಮಾಡಿದನು.

ಅಮೋಘವರ್ಷನ ಈ ಹೊಂದಾಣಿಕೆ ನೀತಿಯು ಉತ್ತಮ ಫಲಕೊಟ್ಟಿತು. ಅವನ ಮಗ ಕೃಷ್ಣನ ಆಳ್ವಿಕೆಯಲ್ಲಿ ಗಂಗ ಯುವರಾಜ ಬೂತುಗನು ತನ್ನ ಭಾವಮೈದುನನ ನೆರವಿಗೆ ಬಂದನು. ಒಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ರಾಷ್ಟ್ರಕೂಟರು ನಡೆಸಿದ ಹಲವಾರು ಯುದ್ಧಗಳಲ್ಲಿ ಬೂತುಗನು ಭಾಗವಹಿಸಿದನು. ವೆಂಗಿಯ ಚಾಲುಕ್ಯರು, ಚೋಳರು, ಪಲ್ಲವರನ್ನು ತಮ್ಮ ಹತೋಟಿಗೊಳಪಡಿಸುವುದು ರಾಷ್ಟ್ರಕೂಟರಿಗೆ ಸುಲಭವಾಯಿತು. ಗಂಗರು ಅಧೀನಭಾವನೆಯನ್ನು ತೋರೆಯುತ್ತ ಬಂದರು. ಇದು ರಾಷ್ಟ್ರಕೂಟರ ಎರಡನೆಯ ಕೃಷ್ಣನಿಗೆ ಕಣ್ಣಿನ ಕಸವಾಗಿ ಪರಿಣಮಿಸಿತು. ತನ್ನ ಛತ್ರದಡಿ ಎಲ್ಲರೂ ಅಧೀನರೇ ಎಂಬ ಚಕ್ರವರ್ತಿಯ ದರ್ಪ ಅವನನ್ನು

ಕಾದಿತು. ಇದರಿಂದ ಅವನು ದಂಡನಾಯಕ ಸಂಪಯ್ಯನನ್ನು (ದಾಮಪೈಯ್ಯ) ಗಂಗರ ಉಪರಾಜಧಾನಿ ಮಣ್ಣೆಗೆ ರಾಜ್ಯಪಾಲನನ್ನಾಗಿ ನೇಮಿಸಿದನು. ಇದರಿಂದ ಕ್ಷುಬ್ಧನಾದ ಗಂಗ ಎರಡನೇ ನೀತಿಮಾರ್ಗನು ಹೋರಾಟಕ್ಕೆ ಸಿದ್ಧನಾದನು. ಆಗ ನಡೆದ ಘರ್ಷಣೆಗಳ ವಿವರ ತಿಳಿದುಬರುವುದಿಲ್ಲ. ಆದರೆ ನಾಗಮಂಗಲದ 127 ನೇ ಶಾಸನದಲ್ಲಿ* ಆರಂಭಲ್ಲನು ಇದುಳಿಯ ಬಿಳಿವೃತ್ತಿಯನ್ನು ಆಳುತ್ತಿದ್ದಾಗ ಬಲ್ಲಹನ ಸೈನ್ಯವು ಕೆಂಬೊಳಲು ಗ್ರಾಮದ ಮೇಲೆ ದಾಳಿಮಾಡಿದುದನ್ನು ಉಲ್ಲೇಖಿಸುತ್ತದೆ. ಇದು ನೀತಿಮಾರ್ಗ ಪೆರ್ಮಾನಡಿಯ ಕಾರಬಯಲು ಶಾಸನ. ಇದು ಈ ಸಮಯದಲ್ಲಿ ನಡೆದ ದಾಳಿಗಳಲ್ಲೊಂದೆಂದು ಭಾವಿಸಲಾಗಿದೆ. ಒಟ್ಟಿನಲ್ಲಿ ರಾಷ್ಟ್ರಕೂಟರು ಗಂಗಪಾಡಿಯನ್ನು ಅಧೀನಗೊಳಿಸಲು ನಡೆಸಿದ ಈ ಪ್ರಯತ್ನಗಳು ಅಷ್ಟು ಯಶಸ್ವಿಯಾಗಲಿಲ್ಲ.

ಮೂರನೆಯ ಇಂದ್ರನ ಕಾಲದಲ್ಲಿ (914–929) ಉತ್ತರ ಭಾರತದ ಕಡೆಯಿಂದ ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ಅಪಾಯಗಳು ಹೆಚ್ಚಿದವು. ಇಂದ್ರನು ತನ್ನ ಆಳ್ವಿಕೆಯ ಬಹುಕಾಲವನ್ನು ಪರಮಾರರು ಮತ್ತು ಚಾಂದೇಲರನ್ನು ನಿಗ್ರಹಿಸುವಲ್ಲಿ ಮತ್ತು ವೆಂಗಿ ಚಾಳುಕ್ಯರನ್ನು ಅಧೀನಗೊಳಿಸುವಲ್ಲಿ ಕಳೆದನು. ಇವನ ಹಿರಿಯ ಮಗ ಎರಡನೆಯ ಅಮೋಘವರ್ಷನು (1929–30) ಪಟ್ಟಕ್ಕೆ ಬಂದು ತನ್ನ ಸಹೋದರ ನಾಲ್ಕನೆಯ ಗೋವಿಂದನ ಭ್ರಾತೃದ್ರೋಹದಿಂದ ಹತಾತ್ಮನೆ ನಿರ್ಗಮಿಸಿದನು. ರಾಷ್ಟ್ರಕೂಟರ ಅರಮನೆ ಒಳಸಂಚುಗಳ ಬೀಡಾಯಿತು. ಆಗ ಗಂಗಬೂತುಗ ಮತ್ತಿತರ ಸಾಮಂತರು ಗೋವಿಂದನನ್ನು ಪದಚ್ಯುತಿಗೊಳಿಸಿ ಮೂರನೆಯ ಇಂದ್ರನ ತಮ್ಮ ಮೂರನೆಯ ಅಮೋಘವರ್ಷನನ್ನು ಸಿಂಹಾಸನಕ್ಕೇರಿಸಿದರು. ಅಮೋಘವರ್ಷನ ಮಗಳು ರೇವತಿ ಸಿಮ್ಮಡಿಯನ್ನು ಎರಡನೆ ಗಂಗ ಬೂತುಗನಿಗೆ ಕೊಟ್ಟು ವಿವಾಹಮಾಡಲಾಯಿತು. ಇನ್ನು ಮುಂದೆ ರಾಷ್ಟ್ರಕೂಟ ಸಾಮ್ರಾಜ್ಯ ಸಂಪೂರ್ಣವಾಗಿ ಗಂಗರ ಬೆಂಬಲವನ್ನು ಅವಲಂಬಿಸುವಂತಾಯಿತು.

ಮುಮ್ಮಡಿ ಅಮೋಘವರ್ಷನ ಮಗ ಮುಮ್ಮಡಿ ಕೃಷ್ಣನ ಆಳ್ವಿಕೆಯಲ್ಲಿ (939–67) ರಾಷ್ಟ್ರಕೂಟ-ಗಂಗರ ಮೈತ್ರಿ ಅತ್ಯಂತ ನಿಕಟವಾಗಿತ್ತು. ದಕ್ಷಿಣದಲ್ಲಿ ಚೋಳರು ಪ್ರಬಲರಾಗಿ ರಾಷ್ಟ್ರಕೂಟ ಗಂಗರಿಬ್ಬರಿಗೂ ಸಮಾನ ಪ್ರತಿಸ್ಪರ್ಧಿಗಳಾಗಿದ್ದರು. ಇವರನ್ನು ಹತ್ತಿಕ್ಕಲು ಇಮ್ಮಡಿ ಗಂಗಬೂತುಗನು (936–61) ರಾಷ್ಟ್ರಕೂಟ ಸೈನ್ಯದ ನೇತೃತ್ವವಹಿಸಿ ತಮಿಳುನಾಡಿನತ್ತ ಧಾವಿಸಿದ. ಚಕ್ರವರ್ತಿ ಕೃಷ್ಣ ಹಾಗೂ ಬೂತುಗರು ಸ್ವತಃ ಭಾಗವಹಿಸಿ ನಡೆಸಿದ ಈ ಯುದ್ಧದ ವರ್ಣನೆ ಮದ್ದೂರು ತಾಲ್ಲೂಕಿನಲ್ಲಿರುವ ಆತಕೂರು ಶಾಸನದಲ್ಲಿ* ವಿಶದವಾಗಿ ನಿರೂಪಿತವಾಗಿದೆ. ಈ ಶಾಸನ ಹಲವು ದೃಷ್ಟಿಗಳಿಂದ ಮಹತ್ವದ್ದಾಗಿದ್ದು ಸದ್ಯ ಅದನ್ನು ಬೆಂಗಳೂರು ವಸ್ತುಸಂಗ್ರಹಾಲಯದಲ್ಲಿರಿಸಲಾಗಿದೆ.

ತಕ್ಕೋಲಂ ಯುದ್ಧದ ಬಗ್ಗೆ ವಿವರ ನೀಡುವ ಆತಕೂರು ಶಾಸನ ಕರ್ನಾಟಕದ ಪ್ರಸಿದ್ಧ ಶಾಸನಗಳಲ್ಲೊಂದು. ಈ ಶಾಸನವು ಮೂಲತಃ ನಾಯಿಯೊಂದರ ವೀರ ಮರಣದ ನೆನಪಿಗಾಗಿ ಹಾಕಿದ ವೀರಗಲ್ಲಾಗಿದೆ. ಇದರಲ್ಲಿ ಬರುವ ಐತಿಹಾಸಿಕ ವಿವರಗಳು ಮಹತ್ವದಿಂದ ಕೂಡಿವೆ. ರಾಷ್ಟ್ರಕೂಟ ಮುಮ್ಮಡಿ ಅಮೋಘವರ್ಷನ ಪುತ್ರ ಮೂರನೆಯ ಕೃಷ್ಣ ಯಾನೆ ಕನ್ನರನು ಮುಂಪಡಿಯ ಚೋಳರಾಜ ರಾಜೇಂದ್ರನ ಮೇಲೆ ದಂಡೆತ್ತಿ ಬಂದನು. ಗಂಗಬೂತುಗನು ಸೈನ್ಯದ ದಂಡನಾಯಕತ್ವ ವಹಿಸಿದನು. ತಕ್ಕೋಲದಲ್ಲಿ ನಡೆದ ಯುದ್ಧದಲ್ಲಿ ಇಮ್ಮಡಿ ಬೂತುಗನು ಚೋಳ ರಾಜಕುಮಾರ ರಾಜಾದಿತ್ಯನನ್ನು ಕೊಂದನು. ಅವನು ಹೇಗೆ ಈ ಸಾಹಸಕೃತ್ಯವೆಸಗಿದನು ಎಂಬ ಬಗ್ಗೆಯೂ ಶಾಸನದಲ್ಲಿ ವಿವರಗಳಿವೆ.

“ಕನ್ನರದೇವ, ಚೋಳನಂ ಕಾದುವನ್ದು, ಬೂತುಗಂ ರಾಜಾದಿತ್ಯನಂ ಬಿಸುಗೆಯೆ ಕಳನಾಗಿ ಸುರಿಗಿಱಿದು ಕಾದುಕೊನ್ದು” ಎಂದಿದೆ. ಅಂದರೆ ರಾಜಾದಿತ್ಯನು ಆನೆಯ ಮೇಲೆ ಕುಳಿತು ಯುದ್ಧ ಮಾಡುತ್ತಿದ್ದಾಗ ಬೂತುಗನು ಶತ್ರುವಿನ ಅಂಬಾರಿಯನ್ನೇರಿ ಅದನ್ನು ಯುದ್ಧರಂಗವಾಗಿ ಪರಿವರ್ತಿಸಿ ತನ್ನ ಸುರಗಿಯಿಂದ ರಾಜಾದಿತ್ಯನನ್ನು ಇರಿದು ಕೊಂದನು. ಈ ಅಂಶವನ್ನು ಚೋಳರ ಶಾಸನಗಳೂ ಉಲ್ಲೇಖಿಸಿವೆ.

ಈ ಜಯವನ್ನು ತಂದುಕೊಟ್ಟ ಬೂತುಗನಿಗೆ ಕೃಷ್ಣರಾಜನು ಮೆಚ್ಚುಗೆಯಾಗಿ ಬನವಸೆ 1200, ಬೆಳ್ವಲ 300, ಪುರಿಗೆಱೆ 300, ಕಿಸುಕಾಡು 70 ಮತ್ತು ಬಾಗೆನಾಡು 70–ಈ ಪ್ರಾಂತಗಳನ್ನು ಕೊಟ್ಟನು.

ಈ ಶಾಸನವನ್ನು ಮನಾಲರ ಎಂಬವನು ಹಾಕಿಸಿದನು. ಮನಾಲರನು ಬೂತುಗನ ಅಂಕಕಾರ. ಅವನು ತಕ್ಕೋಲಂ ಯುದ್ಧದಲ್ಲಿ ಬೂತುಗನ ಅಂಗರಕ್ಷಕನಾಗಿದ್ದನು. ಯುದ್ಧ ನಡೆಯುತ್ತಿದ್ದಾಗ ರಾಜಾದಿತ್ಯನ ಆನೆಯ ತಲೆಯನ್ನು ಇಬ್ಭಾಗವಾಗುವಂತೆ ಹೊಡೆದನು. ಇದರಿಂದ ಬೂತುಗನಿಗೆ ರಾಜಾದಿತ್ಯನನ್ನು ಕೊಲ್ಲಲು ಅನಕೂಲವಾಯಿತು. ಅವನ ಈ ಸಾಹಸಕ್ಕೆ ಮೆಚ್ಚಿದ ಬೂತುಗ ಅವನಿಗೆ ಆತಕೂರು 12ನ್ನು ಬೆಳ್ವೊಲದಲ್ಲಿರುವ ಕಾಡಿಯೂರನ್ನು ದಾನವಾಗಿ ‘ಬಾಳ್ಗೆ ಮುಚ್ಚುಕೊಟ್ಟ’.[5]

ಮನಾಲರನ ಪರಾಕ್ರಮ ರಾಷ್ಟ್ರಕೂಟ ಚಕ್ರವರ್ತಿ ಕನ್ನರನ ಮೆಚ್ಚುಗೆಗೂ ಪಾತ್ರವಾಯಿತು. ಚಕ್ರವರ್ತಿಯು ಮನಾಲರನಿಗೆ ‘ಮೆಚ್ಚಿದಂ ಬೇಡಿಕೊಳ್’ ಎಂದನು. ಮನಾಲರನು ಹೊನ್ನನ್ನಾಗಲಿ ಮಣ್ಣನ್ನಾಗಲಿ ಬೇಡಲಿಲ್ಲ. ಅವನು ಬೇಡಿದ್ದು ಚಕ್ರವರ್ತಿಯ ಬಳಿ ಇದ್ದ ಕಾಳಿ ಎಂಬ ಬೇಟೆ ನಾಯಿಯನ್ನು. ಕೃಷ್ಣರಾಜನು ಬೇಟೆ ನಾಯಿಗಳ ಹಿಂಡೊಂದನ್ನು ಇಟ್ಟುಕೊಂಡಿದ್ದ ಉಲ್ಲೇಖ ನಾಗವರ್ಮನ “ಕಾವ್ಯಾವಲೋಕನದ” ಪದ್ಯವೊಂದರಲ್ಲಿದೆ (ಸಂಖ್ಯೆ 183) ಎಂದು ಶ್ರೀ ಸೀತಾರಾಮ್ ಜಾಗಿರ್‌ದಾರರು ತಮ್ಮ “ಗ್ರಂಥಸಂಪಾದನ ಶಾಸ್ತ್ರ ಪರಿಚಯ” ಕೃತಿಯಲ್ಲಿ (ಪು. 159,

208) ಅಭಿಪ್ರಾಯಪಟ್ಟಿರುವುದನ್ನು ಡಾ. ಬಿ. ಆರ್. ಗೋಪಾಲ್‌ರವರು ದಾಖಲಿಸಿದ್ದಾರೆ.[9]

ಹೀಗೆ ಚಕ್ರವರ್ತಿಯು ಮೆಚ್ಚಿಕೊಟ್ಟ ನಾಯಿ ಕಾಳಿಯು ಬೆಳೆನಾಡ ಪಡುವಣ ದಿಕ್ಕಿನ ಮೊರಡಿಯಲ್ಲಿ ದೊಡ್ಡ ಹಂದಿಯೊಂದಿಗೆ ಹೋರಾಡುವಾಗ ಅಸುನೀಗಿತು. ತಾನು ಸಾಯುವ ಮುನ್ನ ಹಂದಿಯನ್ನೂ ಕೊಂದಿತು. ಇಂತಹ ವಿರೋಚಿತ ಮರಣವಪ್ಪಿದ ನಾಯಿಯ ಸ್ಮರಣಾರ್ಥವಾಗಿ ಅದರ ಒಡೆಯ ಮನಾಲರನು ಅಳತ್ತೂರಿನಲ್ಲಿ ಒಂದು ಶಾಸನದ ಕಲ್ಲನ್ನು ಹಾಕಿಸಿದನು. ಈ ಕಲ್ಲಿನ ಮೇಲ್ಭಾಗದಲ್ಲಿ ನಾಯಿಯು ಹಂದಿಯೊಂದಿಗೆ ಹೋರಾಡುತ್ತಿರುವ ಚಿತ್ರವನ್ನು ಕೆತ್ತಿಸಿದ್ದಾನೆ. ಈ ಶಾಸನದ ಸಂರಕ್ಷಣೆ ಮತ್ತು ಪೂಜೆಗಾಗಿ ಎರಡು ಖಂಡುಗ ಭೂಮಿಯನ್ನೂ ದತ್ತಿಯಾಗಿಬಿಟ್ಟನು. ಈ ಶಾಸನ ಈ ರೀತಿಯ ಪ್ರಾಣಿಪ್ರೇಮದ ಅಪೂರ್ವ ಶಾಸನಗಳಲ್ಲೊಂದಾಗಿದೆ.

ತಕ್ಕೋಲಂ ಯುದ್ಧದ ವಿಜಯದಿಂದ ಪ್ರೇರಿತನಾದ ಕೃಷ್ಣನು ಚೋಳ ರಾಜ್ಯವನ್ನೂ ಹೊಕ್ಕು ಕಂಚಿ, ತಂಜಾವೂರುಗಳನ್ನು ಗೆದ್ದನು. ರಾಮೇಶ್ವರದವರೆಗೂ ವಿಜಯಯಾತ್ರೆ ಕೈಗೊಂಡು ವಿಜಯಸ್ತಂಭವನ್ನೂ ನೆಡಿಸಿದನು. ಕನ್ನಂಬಾಡಿಯ ಕನ್ನೇಶ್ವರ ದೇವರಿಗೆ ಕನ್ನಡ ದೇವನೊಬ್ಬನು ದತ್ತಿ ಬಿಟ್ಟ ವಿಚಾರವನ್ನು ಕೃಷ್ಣರಾಜಪೇಟೆ 31ನೇ ಶಾಸನವು ತಿಳಿಸುತ್ತದೆ.[10] ಮುಮ್ಮಡಿ ಕೃಷ್ಣನೇ ಈ ದತ್ತಿಬಿಟ್ಟನೆಂದು ಭಾವಿಸಲಾಗಿದೆ.

ರಾಷ್ಟ್ರಕೂಟ ಕೃಷ್ಣನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ ಗಂಗಸಿಂಹಾಸನವನ್ನೇರಿದ ಇಮ್ಮಡಿ ಮಾರಸಿಂಹನು (963–74) ರಾಷ್ಟ್ರಕೂಟರ ಬಲಗೈಯಂತಿದ್ದನು. ಉತ್ತರ ಭಾರತದಿಂದ ರಾಷ್ಟ್ರಕೂಟರಿಗೆ ಎದುರಾದ ದಾಳಿಗಳನ್ನು ನಿಗ್ರಹಿಸಲು ಅವನು ಸ್ವತಃ ದಂಡನಾಯಕತ್ವ ವಹಿಸಿ ದಂಡಯಾತ್ರೆ ಕೈಗೊಂಡನು. ಅವನು ಕಾಲಂಜರ ಮತ್ತು ಚಿತ್ರಕೂಟ ಗಿರಿದುರ್ಗಗಳನ್ನು ವಶಪಡಿಸಿಕೊಂಡನು. ಕೊನೆಗೆ ಉಜ್ಜಯಿನಿಯನ್ನು ಹಿಡಿದು ಪರಮಾರರನ್ನು ಸೋಲಿಸಿದನು. ಅಪಾರ ಸಂಪತ್ತಿನೊಂದಿಗೆ ಹಿಂದಿರುಗಿದನು. ಮುಮ್ಮಡಿ ಕೃಷ್ಣನು ಮಾರಸಿಂಹನಿಗೆ ಗೂರ್ಜರಾಧಿರಾಜ ಎಂಬ ಬಿರುದನ್ನು ಕೊಟ್ಟು ಪುಲಿಗೆರೆ, ಬೆಳುವಲ ಮತ್ತು ಸಾಂತಳಿಗೆ ಪ್ರಾಂತ್ಯಗಳನ್ನು ನೀಡಿದನು.

ಮುಮ್ಮಡಿ ಕೃಷ್ಣನ ತರುವಾಯ ರಾಷ್ಟ್ರಕೂಟ ಆಳ್ವಿಕೆ ಪತನದತ್ತ ಸಾಗಿತು. ಇದರಿಂದಾಗಿ ಗಂಗಮಾರಸಿಂಹನೇ ರಾಷ್ಟ್ರಕೂಟರ ರಕ್ಷಕನ ಪಾತ್ರವಹಿಸಬೇಕಾಯಿತು. ಮಂಡ್ಯಜಿಲ್ಲೆಯಲ್ಲಿ ವಾಸ್ತವವಾಗಿ ರಾಷ್ಟ್ರಕೂಟರ ಆಳ್ವಿಕೆ ನೆಪಮಾತ್ರವಾಯಿತು. ಗಂಗರೇ ನಿಜವಾದ ಪ್ರಭುಗಳಾಗಿದ್ದರು. ಪರಮಾರ ಸೀಯಕನು ರಾಷ್ಟ್ರಕೂಟ ರಾಜಧಾನಿ ಮಾನ್ಯಖೇಟವನ್ನು ಆಕ್ರಮಿಸಿದನು. ಆಗ ಮಾರಸಿಂಹನು ಅಲ್ಲಿಗೆ ಧಾವಿಸಿ ಪರಮಾರರನ್ನು ಅಟ್ಟಿದನು. ಆದರೆ ಗಂಗರ ಏಕಮಾತ್ರ ಶಕ್ತಿಯು ರಾಷ್ಟ್ರಕೂಟ ಸಾಮ್ರಾಜ್ಯವನ್ನು ಉಳಿಸುವ ಸ್ಥಿತಿಯಲ್ಲಿರಲಿಲ್ಲ. 973 ರಲ್ಲಿ ಚಾಳುಕ್ಯ ಎರಡನೆಯ

ತೈಲನು ಸಂಯುಕ್ತ ಸೈನ್ಯವನ್ನು ರಚಿಸಿ ರಾಷ್ಟ್ರಕೂಟರನ್ನು ಸೋಲಿಸಿ ರಾಜಧಾನಿಯನ್ನು ವಶಪಡಿಸಿಕೊಂಡನು. ಮಾನ್ಯಖೇಟ ಖಾಯಂ ಆಗಿ ರಾಷ್ಟ್ರಕೂಟರನ್ನು ಕೈಬಿಟ್ಟು ಹೋಯಿತು. ಮಾರಸಿಂಹನು ಬಂಕಾಪುರದಲ್ಲಿ ಕೃಷ್ಣನ ಮೊಮ್ಮಗ ನಾಲ್ಕನೆಯ ಇಂದ್ರನಿಗೆ ಪಟ್ಟಗಟ್ಟಿದನು. ಆದರೆ ಕುಸಿಯುತ್ತಿದ್ದ ಸಾಮ್ರಾಜ್ಯದ ಪ್ರಯೋಜನ ಪಡೆಯಲು ಹವಣಿಸುತ್ತಿದ್ದ ಸಾಮಂತರು ಅದರ ಅಸ್ತಿತ್ವವನ್ನು ಉಳಿಸಲು ಆಸಕ್ತರಾಗಿರಲಿಲ್ಲ. ಇದರಿಂದಾಗಿ ಕೊನೆಯ ಚಕ್ರವರ್ತಿ ನಾಲ್ಕನೆಯ ಇಂದ್ರನು ಗಂಗರಾಜ್ಯದಲ್ಲಿ ಆಶ್ರಯ ಪಡೆದನು. ಕೊನೆಗೆ ಮಂಡ್ಯಜಿಲ್ಲೆಯ ಸರಹದ್ದಿನಲ್ಲಿರುವ ಶ್ರವಣಬೆಳಗೊಳದಲ್ಲಿ 982ರಲ್ಲಿ ಸಲ್ಲೇಖನವ್ರತ ಸ್ವೀಕರಿಸಿ ಇಹಲೋಕ ತ್ಯಜಿಸಿದನು [8] ಅಲ್ಲಿಗೆ ರಾಷ್ಟ್ರಕೂಟರ ಕುರುಹು ಅಂತ್ಯವಾಯಿತು.

ರಾಷ್ಟ್ರಕೂಟರ ಆಳ್ವಿಕೆಯ ಉದ್ದಕ್ಕೂ ಗಂಗರಿಂದಾಗಿ ಮಂಡ್ಯಜಿಲ್ಲೆ ಐತಿಹಾಸಿಕ ಮಹತ್ವ ಪಡೆದಿತ್ತು. ಮೊದಲಿಗೆ ರಾಷ್ಟ್ರಕೂಟರನ್ನು ಎದುರಿಸುವಲ್ಲಿ ಮತ್ತು ಅನಂತರ ಅವರೊಂದಿಗೆ ಹೆಗಲಿಗೆ ಹೆಗಲುಕೊಟ್ಟು ನಿಲ್ಲುವಲ್ಲಿ ಎಣೆಯಿಲ್ಲದ ಸಾಹಸ ತೋರಿದ ಗಂಗರ ಸಾಧನೆಯಲ್ಲಿ ಈ ಜಿಲ್ಲೆಯ ಜನತೆಯ ಪಾಲು ಮುಖ್ಯವಾದುದೆಂಬುದರಲ್ಲಿ ಸಂದೇಹವಿಲ್ಲ. ಆ ಯುಗದಲ್ಲಿ ಮಂಡ್ಯ ಪ್ರದೇಶ ಚಟುವಟಿಕೆಭರಿತವಾಗಿದ್ದು ಸಾಹಸ ಪ್ರಿಯ ಜನಾಂಗವನ್ನು ಹೊಂದಿದ್ದು ನಿಜಕ್ಕೂ ಹೆಮ್ಮೆಯ ಸಂಗತಿ.

ಡಿ. ಎಸ್. ಜಯಪ್ಪಗೌಡ

ಆಧಾರಗಳು

1. History of the western Gangas : B. Sheik Ali ಪುಟ 190 ಮೈಸೂರು ವಿಶ್ವವಿದ್ಯಾನಿಲಯ, 1976.

2. ಅದೇ, ಪುಟ 108

3. ಎಪಿಗ್ರಾಫಿಯ ಕರ್ನಾಟಿಕ ಸಂಪುಟ ಏಳು (ಹೊಸ ಆವೃತ್ತಿ) 1979

4. ಎಪಿಗ್ರಾಫಿಯ ಕರ್ನಾಟಿಕ ಸಂಪುಟ ಏಳು (ಹೊಸ ಆವೃತ್ತಿ) 1979 ಮದ್ದೂರು–42

5. ಇಕ್ಷುಕಾವೇರಿ (ನೆನಪಿನ ಸಂಚಿಕೆ) ಮಂಡ್ಯಜಿಲ್ಲೆಯಲ್ಲಿ ಗಂಗರ ಶಾಸನಗಳು : ಎಂ. ಹನುಮಂತರಾವ್, 1974

6. ಎಪಿಗ್ರಾಫಿಯ ಕರ್ನಾಟಿಕ, ಸಂಪುಟಗಳು (ಹೊಸ ಆವೃತ್ತಿ) 1979. ಪೀಠಿಕೆ ಭಾಗ.

7. ಅದೇ, ಸಂಪುಟ ಆರು (ಹೊಸ ಆವೃತ್ತಿ)

8. ಕರ್ನಾಟಕ–ವಿಷಯ ವಿಶ್ವಕೋಶ ಪುಟ 73, 1979

ಚೋಳರ ಆಡಳಿತದಲ್ಲಿ ಮಂಡ್ಯಜಿಲ್ಲೆ

ಕರ್ನಾಟಕವನ್ನಾಳಿದ ವಿವಿಧ ಅರಸುಮನೆತನಗಳಲ್ಲಿ ಚೋಳರದೂ ಒಂದು. ಮೂಲತಃ ತಮಿಳುನಾಡಿನವರಾದ ಇವರು, ರಾಜ್ಯವಿಸ್ತರಣಾಕಾಂಕ್ಷಿಗಳಾಗಿ ಕರ್ನಾಟಕವನ್ನು ಕ್ರಮೇಣ ಗೆಲ್ಲುತ್ತಾ ಬಂದು ಒಂದುಕಾಲದಲ್ಲಿ ಅದನ್ನು ಹೆಚ್ಚುಕಡಿಮೆ ಸಂಪೂರ್ಣವಾಗಿಯೇ ಆಕ್ರಮಿಸಿಕೊಂಡರು. ಕ್ರಿ.ಶ. 900 ರಿಂದ ಸುಮಾರು ಹನ್ನೆರಡನೆಯ ಶತಮಾನದ ಅಂತ್ಯದವರೆಗೆ ತುಂಗಭದ್ರಾನದಿಯ ದಕ್ಷಿಣದ ಬಹುಭಾಗವು ಚೋಳರ ಆಳ್ವಿಕೆಗೆ ಒಳಪಟ್ಟಿತ್ತು. ಆದರೆ ಈ ಅವಧಿಯಲ್ಲಿ ರಾಷ್ಟ್ರಕೂಟರ ಜೊತೆಯಲ್ಲಿ ಹೋರಾಡುವುದರಲ್ಲೇ ಅವರು ಹೆಚ್ಚಿನ ಕಾಲಕಳೆದರು. ಹಾಗಾಗಿ ಕರ್ನಾಟಕದ ಕಲೆ ಹಾಗೂ ಸಾಹಿತ್ಯಗಳಿಗೆ ಪ್ರೋತ್ಸಾಹಕೊಡಲು ಅವರಿಗೆ ಹೆಚ್ಚಿನ ಪುರುಸೊತ್ತಿದ್ದಂತೆ ಕಾಣುವುದಿಲ್ಲ.

ಇವರ ಆಳ್ವಿಕೆಗೆ ಸಂಬಂಧಿಸಿದಂತೆ ಇಂದಿನ ಮಂಡ್ಯಜಿಲ್ಲೆಯಲ್ಲಿ ಏನಾದರೂ ಕುರುಹುಗಳು ಸಿಗುತ್ತವೆಯೆ ? ಹಾಗೆ ಸಿಕ್ಕಬಹುದಾದ ಕುರುಹುಗಳಿಂದ ತಿಳಿದುಬರುವ ವಿಚಾರಗಳಾವುವು ? ಎಂಬುದರ ಬಗ್ಗೆ ವಿಚಾರ ಮಾಡುವುದು ಪ್ರಕೃತದ ಉದ್ದೇಶ. ಈ ದಿಶೆಯಲ್ಲಿ ಮೊದಲು ಚೋಳರ ಇತಿಹಾಸವನ್ನು ಸಂಗ್ರಹವಾಗಿಯಾದರೂ ನೋಡಬೇಕಾಗುತ್ತದೆ.

ವಿಜಯಾಲಯನೆಂಬುವನು [ಕ್ರಿ ಶ. 846-871] ಮೊದಲನೆಯ ಚೋಳದೊರೆ. ಪಲ್ಲವರ ಸಾಮಂತನಾಗಿದ್ದ ಅತ ಪುದುಕೋಟ್ಟೈಯ ಮುತ್ತರೈಯರ್‌ನನ್ನು ಎದುರಿಸಿ ತಂಜಾವೂರನ್ನು ಅವನಿಂದ ಕಿತ್ತುಕೊಂಡು, ಅದನ್ನೇ ತನ್ನ ಆಡಳಿತಕೇಂದ್ರವಾಗಿ ಮಾಡಿಕೊಂಡ. ಈ ತಂಜಾವೂರುವಿಜಯದಿಂದ ಪಲ್ಲವಸಾಮ್ರಾಜ್ಯಕ್ಕೆ ಮತ್ತಷ್ಟು ಬಲ ಬಂದಂತಾಯಿತು.

ವಿಜಯಾಲಯನ ನಂತರ ಅವನ ಮಗನಾದ ಮೊದಲನೆಯ ಆದಿತ್ಯನು [ಕ್ರಿ.ಶ. 871-907] ಪಟ್ಟಕ್ಕೆ ಬಂದ. ಅವನ ಕಾಲದಲ್ಲಿ ಚಿತ್ರ ಬದಲಾಯಿಸಿತು. ಪಲ್ಲವರ ಅಪರಾಜಿತ ಮತ್ತು ನೃಪತುಂಗರ ನಡುವೆ ವೈಮನಸ್ಯದಿಂದಾಗಿ ಯುದ್ಧಸಂಭವಿಸಿತು. ಕ್ರಿ.ಶ. 885 ರಲ್ಲಿ ಕುಂಭಕೋಣಂ ಬಳಿಯ ಪುರಂಬಿಯಂ ಎಂಬಲ್ಲಿ ನಡೆದ ಆ ಪ್ರಬಲ ಯುದ್ಧದಲ್ಲಿ ಆದಿತ್ಯನು ಅಪರಾಜಿತನಿಗೆ ಸಹಾಯ ಮಾಡಿದ. ಇದರಿಂದ ಅಪರಾಜಿತನಿಗೆ ಜಯ ಲಭಿಸಿತು : ನೃಪತುಂಗನ ಆಳ್ವಿಕೆ ಕೊನೆಗೊಂಡಿತು. ಈ ಸಹಾಯಕ್ಕಾಗಿ

ಅಪರಾಜಿತನು ಆದಿತ್ಯನಿಗೆ ಕೆಲವು ಭೂಭಾಗಗಳನ್ನು ಬಿಟ್ಟುಕೊಟ್ಟ. ಇದರಿಂದ ಆದಿತ್ಯನ ಸಾಮರ್ಥ್ಯ ಮತ್ತಷ್ಟು ಹೆಚ್ಚಿತು. ಇದರ ಪರಿಣಾಮವು ಪಕ್ವಿಸುವವರೆಗೆ ಕಾಯುತ್ತಿದ್ದರೆ, ಆತ ತನ್ನ ಒಡೆಯನಾದ ಅಪರಾಜಿತನ ಮೇಲೆಯೇ ತಿರುಗಿ ಬಿದ್ದ. ಕ್ರಿ.ಶ. 903ರಲ್ಲಿ ನಡೆದ ಆ ಯುದ್ಧದಲ್ಲಿ ಅಪರಾಜಿತನು ಮರಣವನ್ನಪ್ಪಿದ. ಆದಿತ್ಯನು ಇಡೀ ತೊಂಡೈಮಂಡಲಕ್ಕೆ ಅಧಿಪತಿಯಾದ. ಇದರಿಂದಾಗಿ. ಪಲ್ಲವರೇ ಆತನಿಗೆ ಕಪ್ಪ ಕೊಡುವಂತಾಯಿತು. ಜೊತೆಗೆ, ಗಂಗದೊರೆ ಇಮ್ಮಡಿ ಪೃಥ್ವೀಪತಿ ಕೂಡ, ಆತನನ್ನು ತಮ್ಮ ಅಧಿರಾಜನಾಗಿ ಸ್ವೀಕರಿಸುವಂತಾಯಿತು. ಇದರ ಫಲವಾಗಿ ಗಂಗಸಾಮ್ರಾಜ್ಯವು ಸ್ವಾಭಾವಿಕವಾಗಿಯೇ ಚೋಳಸಾಮ್ರಾಜ್ಯದ ಛತ್ರದ ನೆರಳಿಗೆ ಬಂತು.

ಇದರ ನಂತರ ಚೋಳರಾಜ್ಯವಿಸ್ತರಣೆಯ ಕಾರ್ಯ ಪ್ರಾರಂಭವಾಯಿತು. ಕೊಂಗುದೇಶ ಕೈವಶವಾಯಿತು : ಪಾಂಡ್ಯದೊರೆಗಳು ಸೋತು ಸಾಮಂತರಾದರು. ಚೋಳಸೀಮೆಯು ಬಹಳಷ್ಟು ವಿಸ್ತರಿಸಿತು. ಆದರೆ ಈ ವಿಸ್ತರಣ ಕಾರ್ಯವು ಅಷ್ಟಕ್ಕೇ ನಿಲ್ಲಲಿಲ್ಲ : ರಾಷ್ಟ್ರಕೂಟ ಸಾಮ್ರಾಜ್ಯದ ಗಡಿಯವರೆಗೂ ಹಬ್ಬಿತು. ಈ ಕಾರ್ಯದಲ್ಲಿ ಯುವರಾಜನಾದ ಮೊದಲನೆಯ ಪರಾಂತಕನ ಪಾತ್ರ ಬಹುಮುಖ್ಯವಾದುದು. ಆತ. ಆದಿತ್ಯನಿಗೆ ಬಲಗೈಯಾಗಿ ನಿಂತು ಜಯಗಳಿಕೆಗೆ ಶ್ರಮಿಸಿದ. ಆದಿತ್ಯನು, ರಾಷ್ಟ್ರಕೂಟ ದೊರೆ ಇಮ್ಮಡಿಕೃಷ್ಣನ (ಕ್ರಿ.ಶ. 880-915) ಮಗಳೊಬ್ಬಳನ್ನು ಮದುವೆಯಾಗಿ, ಆವಳಿಂದ ಕನ್ನರದೇವನೆಂಬ ಮಗನನ್ನು ಪಡೆದ. ಇದರಿಂದ ಚೋಳರಿಗೆ ರಾಷ್ಟ್ರಕೂಟರ ಸಹಾಯ ಕೂಡ ಸಿಕ್ಕಿದಂತಾಯಿತು.

ಆದಿತ್ಯನ ನಂತರದಲ್ಲಿ ಕ್ರಿ.ಶ. 907 ರಲ್ಲಿ ಮೊದಲನೆಯ ಪರಾಂತಕನು ಪಟ್ಟಕ್ಕೆ ಬಂದನು. ಆದರೆ ಇದು ರಾಷ್ಟ್ರಕೂಟರಿಗೆ ಒಪ್ಪಿತವಾಗಿರಲಿಲ್ಲ. ಪರಾಂತಕನ ಬದಲಿಗೆ. ತಮ್ಮ ಸಂಬಂಧಿಕನಾದ ಕನ್ನರದೇವನು ಪಟ್ಟಕ್ಕೇರಬೇಕಾಗಿತ್ತೆಂಬುದು ಅವರ ಇಚ್ಛೆಯಾಗಿತ್ತು. ಹೀಗಾಗಿ ಚೋಳರ ಬಗ್ಗೆ ಅವರಿಗೆ ವೈಮನಸ್ಯ ಬೆಳೆಯಲಾರಂಭಿಸಿತು. ಈಗಿನ ಅನಂತಪುರ ಮತ್ತು ಚಿತ್ತೂರು ಜಿಲ್ಲೆಗಳ ಪ್ರದೇಶವನ್ನು ಬಾಣರೂ, ಚಿತ್ತೂರು ಜಿಲ್ಲೆಯ ಉತ್ತರ ಹಾಗೂ ಪೂರ್ವ ಪ್ರದೇಶಗಳನ್ನು ವೈದುಂಬರೂ ಆಗ ಆಳುತ್ತಿದ್ದರು. ಅವರ ರಾಜ್ಯಗಳ ಮೇಲೆ ಚೋಳರ ಆಕ್ರಮಣ ನಡೆದೇ ಇತ್ತು. ಹೀಗಾಗಿ ಅವರಿಬ್ಬರೂ ರಾಷ್ಟ್ರಕೂಟರ ಪಕ್ಷಕ್ಕೆ ಸೇರಿದರು. ಆದರೆ ಅವರ ಕೂಟಕ್ಕೆ ಜಯ ಮಾತ್ರ ಲಭಿಸಲಿಲ್ಲ. ಉತ್ತರ ಅರ್ಕಾಟು ಜಿಲ್ಲೆಯ ತಿರುವಳ್ಳಂನಲ್ಲಿ ನಡೆದ ಯುದ್ಧದಲ್ಲಿ ಪರಾಂತಕನು ಗಂಗ ಪೃಥ್ವೀಪತಿಯ ಸಹಾಯದಿಂದ ರಾಷ್ಟ್ರಕೂಟರನ್ನು ಗೆದ್ದ. ಅದರ ಫಲವಾಗಿ ಬಾಣರು ಗಂಗರ ಸಾಮಂತರಾಗಬೇಕಾಯಿತು.

ಗಂಗ ಪೃಥ್ವೀಪತಿಯು ಕ್ರಿ.ಶ. 940ರಲ್ಲಿ ತೀರಿಕೊಂಡ. ಇದರಿಂದ ಪರಾಂತಕನಿಗೆ ಬಹುದೊಡ್ಡ ನಷ್ಟವಾದಂತಾಯಿತು. ಜೊತೆಗೆ ಗಂಗ ಇಮ್ಮಡಿಬೂತುಗನು ರಾಷ್ಟ್ರಕೂಟ ಮುಮ್ಮಡಿಕೃಷ್ಣನ ಸೋದರಿಯನ್ನು ಮದುವೆಯಾಗಿ ರಾಷ್ಟ್ರಕೂಟರ

ಬೆಂಬಲಿಗನಾದ. ಹೀಗಾಗಿ ಚೋಳರು ಮತ್ತೆ ಇವರನ್ನೆಲ್ಲ ಗೆಲ್ಲಬೇಕಾದ ಪ್ರಸಂಗ ಒದಗಿಬಂತು. ಪರಾಂತಕನು ಈ ಕೆಲಸಕ್ಕಾಗಿ ತನ್ನ ಮಗ ರಾಜಾದಿತ್ಯನನ್ನು ಕಳುಹಿಸಿದ. ಆದರೆ ರಾಜಾದಿತ್ಯನು ಯುದ್ಧದಲ್ಲಿ ಹತನಾದುದು ಮಾತ್ರವೇ ಅಲ್ಲದೆ ರಾಷ್ಟ್ರಕೂಟ ಮುಮ್ಮಡಿಕೃಷ್ಣ (ಕನ್ನರಸ) ನು ಚೋಳರಾಜ್ಯದ ಬಹುಭಾಗಗಳನ್ನು ಕೂಡ ಆಕ್ರಮಿಸಿಕೊಂಡ. ಅವನು ಬದುಕಿರುವಷ್ಟು ಕಾಲವೂ ಪರಾಂತಕನು ಕರ್ನಾಟಕದ ಕಡೆಗೆ ತಲೆಹಾಕಲಿಲ್ಲ. ಈ ಅವಧಿಯಲ್ಲಿ ಸುಮಾರು 30 ವರ್ಷಗಳ ಕಾಲ ಚೋಳ ರಾಜ್ಯವು ಕಾಂತಿಹೀನವಾಗಿತ್ತು.

ಕ್ರಿ.ಶ. 985ರಲ್ಲಿ ಮೊದಲನೆಯ ರಾಜರಾಜಚೋಳನು ರಾಜನಾದ. ಅಲ್ಲಿಂದ ಮುಂದಕ್ಕೆ ಚೋಳ ಸಾಮ್ರಾಜ್ಯವು ಚೇತರಿಸಿಕೊಂಡಿತು. ಅವನು ಕರ್ನಾಟಕದ ಮೇಲೆ ದಂಡೆತ್ತಿ ಬಂದು ಗಂಗವಾಡಿ ಮೊದಲಾದ ಭಾಗಗಳ ಮೇಲೆ ದಾಳಿಮಾಡಿದ. ಚೋಳ ಮಂಡಲವನ್ನು ಭದ್ರವಾಗಿ ಬೆಸೆದು ಅದರಿಂದ ಸಾಮ್ರಾಜ್ಯವಾಗಿಸುವ ಶಕ್ತಿ ಅವನಿಗಿತ್ತು. ಪಾಂಡ್ಯ, ಕೇರಳ, ಸಿಂಹಳ ದೇಶಗಳನ್ನು ಗೆದ್ದು ಸಾಮ್ರಾಜ್ಯವನ್ನು ಅತ ವಿಸ್ತರಿಸಿದ. ಸಿಂಹಳದ ಯುದ್ಧದಲ್ಲಿ ಅದರ ಉತ್ತರಾರ್ಧವು ಚೋಳರ ಕೈವಶವಾಯಿತು. ಅಲ್ಲಿಯ ದೊರೆ ಐದನೆಯ ಮಹೇಂದ್ರನು ಸೋತು ಓಡಿಹೋದ. ಈ ಯುದ್ಧದಲ್ಲಿ ಅನುರಾಧಪುರವನ್ನು ಸಂಪೂರ್ಣವಾಗಿ ನಾಶಮಾಡಲಾಯಿತು. ಪೊಲೊನ್ನರುವ ಎಂಬುದು ಚೋಳರ ರಾಜಧಾನಿಯಾಯಿತು. ಅನಂತರ ಇತ್ತ, ಮೈಸೂರು ದೇಶದ ಬಹುಭಾಗ ಚೋಳರ ಕೈಸೇರಿತು : ರಾಜ್ಯದ ಗಡಿಯು ಇಮ್ಮಡಿತೈಲಪನ ಚಾಲುಕ್ಯ ಸಾಮ್ರಾಜ್ಯದವರೆಗೂ ವಿಸ್ತರಿಸಿತು. ಅಷ್ಟರಲ್ಲಿ ತೆಲುಗುಚೋಡ ಭೀಮನು ಶಕ್ತಿವರ್ಮ ಮತ್ತು ವಿಮಲಾದಿತ್ಯರನ್ನು ತನ್ನ ರಾಜ್ಯದಿಂದ ಹೊರಹಾಕಿದನು. ಆಗ ರಾಜರಾಜನು ಅವರನ್ನು ಸ್ವಾಗತಿಸಿದ್ದು ಮಾತ್ರವೇ ಅಲ್ಲದೆ ಚಿಕ್ಕವನಾದ ವಿಮಲಾದಿತ್ಯನಿಗೆ ತನ್ನ ಒಬ್ಬಳು ಮಗಳನ್ನು ಕೊಟ್ಟು ಮದುವೆಯನ್ನೂ ಮಾಡಿದ. ಜೊತೆಗೆ ದೊಡ್ಡವನಾದ ಶಕ್ತಿವರ್ಮನನ್ನು (ಕ್ರಿ.ಶ 1000) ವೇಂಗಿಮಂಡಲದ ಅಧಿಪತಿಯಾಗಿ ಪುನಃಸ್ಥಾಪಿಸಿದ. ಅನಂತರ ಅವನ ದೃಷ್ಟಿಯು ಪಶ್ಚಿಮ ಚಾಲುಕ್ಯರ ಕಡೆಗೆ ತಿರುಗಿತು. ಆದರೆ ಚಾಲುಕ್ಯದೊರೆ ಸತ್ಯಾಶ್ರಯನು ಅವನೊಡನೆ ಒಪ್ಪಂದ ಮಾಡಿಕೊಂಡು ಶಾಂತಿ ಸ್ಥಾಪನೆ ಮಾಡಿದ. ಆ ಸಂದರ್ಭದಲ್ಲಿ ಕೊಳ್ಳೆಹೊಡೆದ ಅಪಾರ ಸಂಪತ್ತಿನೊಡನೆ ಚೋಳಸೇನೆ ಹಿಂತಿರುಗಿತು. ಆ ಸಂಪತ್ತಿನ ಬಹುಭಾಗವನ್ನು ತಂಜಾವೂರಿನ ರಾಜರಾಜೇಶ್ವರ (ಇಂದಿನ ಬೃಹದೀಶ್ವರ) ದೇವಾಲಯದ ನಿರ್ಮಾಣಕಾರ್ಯಕ್ಕೆ ಬಳಸಲಾಯಿತು. ತನ್ನ ಆಳ್ವಿಕೆಯ ಕೊನೆಯ ವೇಳೆಗೆ ರಾಜರಾಜನು ಮಾಲ್ಡೀವ್ಸ್‌ಅನ್ನು ಕೂಡ ಗೆದ್ದುಕೊಂಡ. ಅವನ ಈ ವಿಜಯಗಳಿಗೆಲ್ಲ ಅವನ ಸಮರ್ಥ ಸೇನಾನಿಗಳು ಅಮಾತ್ಯರು ಬಹಳವಾಗಿ ಸಹಾಯಕರಾಗಿದ್ದರೆ. ಈ ನಡುವೆ ಬೆಟ್ಟಾಗಿ ಬಂದು ಎದುರಿಸಿದ ಹೊಯ್ಸಳ, ಗಂಗ, ನೊಳಂಬಾದಿ ಸಾಮಂತರಾಜರ ಮಂಡಲವನ್ನು

ರಾಜರಾಜಚೋಳನ ಮಹಾಮಾತ್ಯನೂ ಕೊತ್ತಮಂಡಲನಾಥನೂ ಆದ ಅಪ್ರಮೇಯನು ಕಲಪೂರ (ಈಗಿನ ಟಿ. ನರಸೀಪುರ ತಾಲ್ಲೂಕಿನ ಕಲಿಯೂರಿನ) ಬಯಲಿನಲ್ಲಿ ನಡೆಬಡಿದ ವಿಚಾರವನ್ನು ಕಲಿಯೂರಿನ ಅವನ ಜಯಸ್ತಂಭ (ಕ್ರಿ.ಶ.1006)ವು ಕಾವ್ಯಮಯವಾಗಿ ವರ್ಣಿಸುತ್ತದೆ. ಇದು ರಾಜರಾಜನ ಆಶ್ರಿತಬಲದ ಅಳವಿಗೆ ದ್ಯೋತಕವಾಗಿದೆ.

ಕ್ರಿ.ಶ. 1012 ರಲ್ಲಿ ರಾಜೇಂದ್ರಚೋಳನಿಗೆ ಯುವರಾಜಪದವಿ ಲಭಿಸಿತು. ಅವನ ಕಾಲದಲ್ಲಿ ಸುಮಾತ್ರದ ಶ್ರೀವಿಜಯಸಾಮ್ರಾಜ್ಯದೊಡನೆ ಸ್ನೇಹಯುತ ಸಂಬಂಧ ಏರ್ಪಟ್ಟಿತು. ಇದರಿಂದ ಸಮುದ್ರವ್ಯಾಪಾರದ ದಾರಿ ಸುಗಮವಾಯಿತು. ಶ್ರೀವಿಜಯದ ದೊರೆಯಾದ ಮಾರವಿಜಯೋತ್ತುಂಗವರ್ಮನು ನಾಗಪಟ್ಟಣದಲ್ಲಿ ತನ್ನ ತಂದೆಯ ನೆನಪಿಗಾಗಿ ಚೂಡಾಮಣಿಯೆಂಬ ಬೌದ್ಧವಿಹಾರವನ್ನು ಕಟ್ಟಿಸಿದ.

ರಾಜರಾಜಚೋಳನ ನಂತರ. ಕ್ರಿ.ಶ. 1014ರಲ್ಲಿ, ಅವರಿಗೆ ಯುವರಾಜನಾಗಿದ್ದ ಆ ರಾಜೇಂದ್ರಚೋಳನೇ ಪಟ್ಟಕ್ಕೆ ಬಂದ. ಅವನು ಸಿಂಹಳದೇಶದ ಮೇಲೆ ದಂಡೆತ್ತಿ ಹೋಗಿ ಅದನ್ನು ಸಂಪೂರ್ಣವಾಗಿ ಕೈವಶಮಾಡಿಕೊಂಡುದಲ್ಲದೆ, ಅದರ ದೊರೆ ಮಹೇಂದ್ರನನ್ನು ಸೆರೆಹಿಡಿದು ಚೋಳದೇಶಕ್ಕೆ ತಂದ. ಆ ಮಹೇಂದ್ರನು ಹನ್ನೆರಡು ವರ್ಷಗಳ ನಂತರ ಚೋಳದೇಶದಲ್ಲೇ ಗತಿಸಿದ. ಇಷ್ಟಾದರೂ ಸಿಂಹಳೀಯರು ಮಾತ್ರ ತಮಿಳರ ಆಳ್ವಿಕೆಗೆ ಎಂದೂ ಬಗ್ಗಲಿಲ್ಲ : ಸದಾ ವಿರೋಧಿಸುತ್ತಲೇ ಇದ್ದರು.

ಇದರ ನಂತರದಲ್ಲಿ ರಾಜೇಂದ್ರನ ದೃಷ್ಟಿ ಕಳಿಂಗದೇಶದತ್ತ ಹರಿಯಿತು. ಅದರ ಮೇಲೆ ದಂಡೆತ್ತಿಹೋಗಿ ಅದನ್ನು ಕೈವಶ ಮಾಡಿಕೊಂಡು ಗಂಗಾನದೀ ಕಣಿವೆಯತ್ತ ಮುನ್ನುಗ್ಗಿ ಅಲ್ಲಿಯೂ ಜಯಗಳಿಸಿದ. ಇದರಿಂದಾಗಿ ಅವನಿಗೆ 'ಗಂಗೈಕೊಂಡ'ನೆಂಬ ಬಿರುದು ಬಂತು. ಅದರ ನೆನಪಿಗಾಗಿ 'ಗಂಗೈಕೊಂಡ ಚೋಳಪುರಂ' ಎಂಬ ಹೊಸ ರಾಜಧಾನಿಯನ್ನು ಕೂಡ ಕಟ್ಟಲಾಯಿತು.

ಈ ಮಹಾವಿಜಯದ ನಂತರ ಚೋಳಸೇನೆಯು ಶ್ರೀವಿಜಯಸಾಮ್ರಾಜ್ಯದತ್ತ ತಿರುಗಿತು. ಅದನ್ನು ಕೈವಶಮಾಡಿಕೊಂಡು, ಅಲ್ಲಿಯ ದೊರೆಗೇ ಮತ್ತೆ ಅಲ್ಲಿಯ ಅಧಿಕಾರವನ್ನು ವಹಿಸಿಕೊಟ್ಟು ಅವನನ್ನು ಸಾಮಂತನನ್ನಾಗಿ ಮಾಡಿಕೊಳ್ಳಲಾಯಿತು. ಇದರಿಂದ ಚೀಣಾದೇಶದೊಡನೆ ಸಮುದ್ರವ್ಯಾಪಾರ ಸಂಬಂಧ ಬೆಳೆಸುವ ಮಾರ್ಗ ಸುಗಮವಾಯಿತು.

ಅಷ್ಟರಲ್ಲಿ ಸಿಂಹಳದೇಶದಲ್ಲಿ ಮತ್ತೆ ದಂಗೆ ಪ್ರಾರಂಭವಾಯಿತು. ಅದನ್ನು ಹತ್ತಿಕ್ಕುವ ಭಾರವು. ಯುವರಾಜನಾಗಿದ್ದ ಮೊದಲನೆಯ ರಾಜಾಧಿರಾಜನ ಮೇಲೆ ಬಿತ್ತು. ಅವನು ಬಹುಕ್ರೌರ್ಯದಿಂದ ವರ್ತಿಸಿ ಆ ದಂಗೆಯನ್ನು (ಕ್ರಿ.ಶ. 1041) ಹತ್ತಿಕ್ಕಿದ.

ಕ್ರಿ.ಶ. 1044ರಲ್ಲಿ ರಾಜೇಂದ್ರಚೋಳನು ಮರಣಿಸಲು ಈ ಯುವರಾಜ ಮೊದಲನೆಯ ರಾಜಾಧಿರಾಜನು ಪಟ್ಟಕ್ಕೆ ಬಂದ. ತನ್ನ ತಂದೆಯ ವಿಸ್ತರಣನೀತಿಯನ್ನೇ

ಈತನೂ ಮುಂದುವರಿಸಿದ ವಿಸ್ತಾರವಾದ ಸಾಮ್ರಾಜ್ಯದಲ್ಲಿ ದಂಗೆಗಳೇಳುವುದು ಬಹು ಸುಲಭ. ಹೀಗಾಗಿ ವೇಂಗಿಯ ದೊರೆ ಚಾಲುಕ್ಯ ವಿಕ್ರಮಾದಿತ್ಯನನ್ನು ಈತನು ಮತ್ತೆ ಹತ್ತಿಕ್ಕಬೇಕಾಯಿತು. ಚೋಳಸೈನ್ಯವು ಚಾಲುಕ್ಯ ಸಾಮ್ರಾಜ್ಯದ ಮೇಲೆ ದಂಡೆತ್ತಿ ಹೋಯಿತು. ಹಲವು ವಿಜಯಗಳ ನಂತರ ಕೃಷ್ಣಾನದೀತೀರದ ಪುಂಡೂರು ಎಂಬಲ್ಲಿ ನಡೆದ ಯುದ್ಧದಲ್ಲಿ ರಾಜಾಧಿರಾಜನಿಗೆ ಜಯದೊರೆಯಿತು : ಯಾದಗಿರಿ ಕೈಸೇರಿತು ; ಚಾಲುಕ್ಯರ ಹೊಸರಾಜಧಾನಿಯಾದ ಕಲ್ಯಾಣಿ ನಾಶವಾಯಿತು. ರಾಜಾಧಿರಾಜನು ಅಲ್ಲಿಯೇ ವೀರಾಭಿಷೇಕ ಮಾಡಿಸಿಕೊಂಡು ವಿಜಯರಾಜೇಂದ್ರನೆಂಬ ಬಿರುದು ಧರಿಸಿದ. ಕಲ್ಯಾಣಿಯ ಒಂದು ಸುಂದರ ದ್ವಾರಪಾಲಕ ವಿಗ್ರಹವನ್ನು ತನ್ನ ವಿಜಯದ ಕುರುಹಾಗಿ ಹೊತ್ತುತಂದ. [ಈ ವಿಗ್ರಹವನ್ನು ತಂಜಾವೂರಿನ ವಸ್ತುಸಂಗ್ರಹಾಲಯದಲ್ಲಿ ಇಂದಿಗೂ ಕಾಣಬಹುದಾಗಿದೆ].

ಆದರೆ ಇನ್ನೊಂದು ಯುದ್ಧದಲ್ಲಿ ಚಾಲುಕ್ಯ ಸೋಮೇಶ್ವರನಿಂದ ರಾಜಾಧಿರಾಜನು ಹತನಾದ. ಆಗ ಚೋಳಸೇನೆ ಚೆದರಿ ಹಿಮ್ಮೆಟ್ಟಿತು. ಆ ಸಂದರ್ಭದಲ್ಲಿ ಅವನ ತಮ್ಮ ಇಮ್ಮಡಿರಾಜೇಂದ್ರನು ಅದನ್ನು ಒಗ್ಗೂಡಿಸಿ ಮತ್ತೆ ಶೌರ್ಯದಿಂದ ಹೋರಾಡಿ ಜಯಗಳಿಸಿದ. ಅವನಿಗೆ ರಣರಂಗದಲ್ಲಿಯೇ ಪಟ್ಟಾಭಿಷೇಕವಾಯಿತು. ಅನಂತರ ಅವನು ಕೊಲ್ಲಾಪುರದ ಕಡೆಗೆ ದಂಡೆತ್ತಿ ಹೋಗಿ, ವಿಜಯ ಸಾಧಿಸಿ ಕೊಲ್ಲಾಪುರದಲ್ಲಿ ಒಂದು ಜಯ ಸ್ತಂಭವನ್ನು ನೆಟ್ಟ. ಇದು ಹೇಗೆ ಇದ್ದರೂ, ಚೋಳರು, ಅನಂತರದ ಕಾಲದಲ್ಲಿ ಪೂರ್ವ ಹಾಗೂ ಪಶ್ಚಿಮ ಚಾಲುಕ್ಯರೊಂದಿಗೆ ನಿರಂತರವಾಗಿ ಯುದ್ಧ ಮಾಡಬೇಕಾಯಿತು. ಕೊನೆಗೆ ಪಶ್ಚಿಮ ಚಾಲುಕ್ಯದೊರೆ ವಿಕ್ರಮಾದಿತ್ಯನು ಚೋಳರಾಜಕುಮಾರಿಯನ್ನು ಮದುವೆಯಾಗಿ ಚೋಳರೊಂದಿಗೆ ಒಪ್ಪಂದ ಮಾಡಿಕೊಂಡ.

ಅನಂತರದ ಪ್ರಮುಖ ಚೋಳದೊರೆಯೆಂದರೆ ಕುಲೋತ್ತುಂಗಚೋಳ (ಕ್ರಿ.ಶ. 1070–1120). ಅವನ ಆಳ್ವಿಕೆಯಲ್ಲಿ ಚೋಳ ಇತಿಹಾಸದ ಒಂದು ಅಧ್ಯಾಯ ಪ್ರಾರಂಭವಾಯಿತು. ಅವನು ತನ್ನ ಪ್ರಜೆಗಳ ಸುಖದುಃಖಗಳ ಬಗ್ಗೆ ಹೆಚ್ಚಿನ ಗಮನ ಕೊಟ್ಟ, ಸುಂಕಗಳನ್ನು ತೆಗೆದು ಹಾಕಿದ. ಆದರೆ ಸಾಮ್ರಾಜ್ಯವನ್ನು ಭದ್ರಪಡಿಸುವ ಕೆಲಸವನ್ನು ಕೂಡ ಕೈಬಿಡುವಂತಿರಲಿಲ್ಲ. ಹಾಗಾಗಿ ತುಂಗಭದ್ರೆಯ ಕಡೆಗೆ ಹೋಗಿ ಯುದ್ಧಮಾಡಿ ಕ್ರಿ.ಶ. 1098ರಲ್ಲಿ ಗಂಗಮಂಡಲವನ್ನು ಕೈವಶಮಾಡಿಕೊಂಡ. ಆದರೆ ಅಷ್ಟರಲ್ಲಿ ಸಿಂಹಳದೇಶದಲ್ಲಿ ಸಿಂಹಳೀಯರು ಚೋಳರನ್ನು ಸಂಪೂರ್ಣವಾಗಿ ಹತ್ತಿಕ್ಕಿ ವಿಜಯ ಸಾಧಿಸಿದರು. ಆಗ ಕುಲೋತ್ತುಂಗನು ಸಿಂಹಳದ ರಾಜಕುಮಾರ ವೀರ ಪೆರುಮಾಳನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡುವುದರ ಮೂಲಕ ಶಾಂತಿಯನ್ನು ಸಾಧಿಸಿದ. ಇವನ ಕಾಲದಲ್ಲಿಯಲ್ಲಿಯೇ ಚೀನಾದೇಶಕ್ಕೆ (ಕ್ರಿ.ಶ. 1077) 72 ಜನ ವರ್ತಕರನ್ನು ಕೊಡಲಾಯಿತು, ಶ್ರೀವಿಜಯ ಸಾಮ್ರಾಜ್ಯದಲ್ಲಿ ಕೂಡ ತಮಿಳುವರ್ತಕರ

ಒಂದು ಸಂಘವಿತ್ತು. ಸುವಣಾತ್ತುದ ಕ್ರಿ.ಶ. 1088ರ ಒಂದು ತಮಿಳುಶಾಸನದಿಂದ ಈ ಅಂಶವು ದೃಢಪಡುತ್ತದೆ.

ಇಷ್ಟರಲ್ಲಿ ಕಳಿಂಗಾಧಿಪತಿಯು ಕಪ್ಪಕೊಡಲು ನಿರಾಕರಿಸಿದ್ದರಿಂದ ಕರುಣಾಕರ ತೊಂಡೈಮಾನನ ನೇತೃತ್ವದಲ್ಲಿ ಚೋಳಸೇನೆಯು ಕಳಿಂಗದ ಮೇಲೆ ದಂಡೆತ್ತಿಹೋಯಿತು. ಅದರಲ್ಲಿ ಚೋಳರಿಗೆ ಜಯಲಭಿಸಿತು. ಜಯಂಗೊಂಡಾರನ 'ಕಳಿಂಗತ್ತುಪ್ಪರಣಿ'ಯೆಂಬ ತಮಿಳು ಕಾವ್ಯಕ್ಕೆ ಈ ವಿಜಯದ ಕಥೆಯೇ ವಸ್ತುವಾಗಿದೆ.

ಹೀಗೆ ಮೇಲಿಂದ ಮೇಲೆ ಜಯಲಭಿಸಿದರೂ ಇವನ ಆಳ್ವಿಕೆಯ ಕೊನೆಯ ಹೊತ್ತಿಗೆ ಮೈಸೂರು ಮತ್ತು ಗಂಗಮಂಡಲಗಳು ಕೈಬಿಟ್ಟುಹೋದವು. 1116ರಲ್ಲಿ ಹೊಯ್ಸಳ ವಿಷ್ಣುವರ್ಧನನು ಕರ್ನಾಟಕವನ್ನೆಲ್ಲ ಸ್ವಾಧೀನಪಡಿಸಿಕೊಂಡನು. ಅನಂತರದಲ್ಲಿ ಚೋಳರು ಕರ್ನಾಟಕದಿಂದ ಕಾಲ್ತೆಗೆದುದು ಮಾತ್ರವಲ್ಲದೆ ಅವರ ಸಾಮ್ರಾಜ್ಯ ಕೂಡ ಕ್ಷಯಿಸುತ್ತ ಹೋಯಿತು : ಮುಮ್ಮಡಿ ರಾಜರಾಜ ಮತ್ತು ಮುಮ್ಮಡಿ ರಾಜೇಂದ್ರರೊಂದಿಗೆ ಕೊನೆಗೊಂಡಿತು.

ಇದು ಚೋಳರ ಇತಿಹಾಸದ ಸಂಕ್ಷಿಪ್ತ ನೋಟ. ಇದನ್ನು ಗಮನಿಸಿದಾಗ ಕಂಡುಬರುವ ಎರಡು ಪ್ರಮುಖ ಅಂಶಗಳೆಂದರೆ, (1) ಚೋಳರು ಸದಾ ಯುದ್ಧದಲ್ಲಿಯೇ ತೊಡಗಿರಬೇಕಾಯಿತೆಂಬುದು ಮತ್ತು (2) ಕರ್ನಾಟಕವು ಒಮ್ಮೆ ಕೈವಶವಾಗುತ್ತ ಮತ್ತೊಮ್ಮೆ ಕೈಜಾರುತ್ತಾ ಅವರೊಡನೆ ಕಣ್ಣುಮುಚ್ಚಾಲೆಯಾಡುತ್ತಿತ್ತೆಂಬುದು. ಈ ಹಿನ್ನೆಲೆಯಲ್ಲಿ ಇನ್ನು ಮಂಡ್ಯ ಜಿಲ್ಲೆಯಲ್ಲಿ ಸಿಕ್ಕುವ ಚೋಳ ಶಾಸನಗಳ ಬಗ್ಗೆ ನೋಡಬಹುದು.

ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಪ್ರಕಟವಾಗಿರುವ ಎರಡು ಶಾಸನ ಸಂಪುಟಗಳನ್ನೂ ಅವಲೋಕಿಸಿದಾಗ, ನೇರವಾಗಿ ಚೋಳರಿಗೆ ಸಂಬಂಧಿಸಿದ ಶಾಸನಗಳು ಕೇವಲ ಎಂಟುಮಾತ್ರ ಸಿಕ್ಕುತ್ತವೆ. ಇವುಗಳ ಪೈಕಿ ಪ್ರಾಚೀನವಾದುದೆಂದರೆ ಮೊದಲನೆಯ ರಾಜರಾಜ ಚೋಳನದೇ. ಅವನಿಗಿಂತ ಹಿಂದಿನವರವು ಯಾವುವೂ ದೊರೆತಿಲ್ಲ.

ರಾಜರಾಜಚೋಳನ ಶಾಸನಗಳ ಪೈಕಿ ಪ್ರಾಚೀನವಾದುದೆಂದರೆ ಪಾಂಡವಪುರ ತಾಲ್ಲೂಕಿನ ಚಿನಕುರಳಿಯಲ್ಲಿ ಪ್ರವಾಸಿ ಮಂದಿರಕ್ಕೆ ಹೋಗುವ ದಾರಿಯಲ್ಲಿರುವ ಒಂದು ವೀರಗಲ್ಲು. (ಪಾಂ.ಪು. 51) ಶಕ 934ರ ವಿರೋಧಿಕೃತು ಸಂವತ್ಸರದ ಜ್ಯೇಷ್ಠಮಾಸದಲ್ಲಿ ರಾಜರಾಜದೇವನು ಪೃಥ್ವೀರಾಜ್ಯಗೈಯುತ್ತಿರುವಾಗ ಚಿಕವಂಗಲದ ತುರುವ ಕಣ್ಣನು "ತುರುವಳಿಗೆಕೊಂಡು" ಹರಿಯಲು ಬಂಗರಿ ಎಚಿಯಮ್ಮನ ಮಗ ನಾಗಯ್ಯನು ತುರುಗಳನ್ನು ಬಿಡಿಸಿ ಕಾದಿ ಸ್ವರ್ಗಸ್ಥನಾದ ವಿಚಾರವು ಅದರಲ್ಲಿ ನಿರೂಪಿತವಾಗಿದೆ. ಇದು ರಾಜರಾಜನಿಗೆ ನೇರವಾಗಿ ಸಂಬಂಧಿಸಿದ್ದಲ್ಲವಾದರೂ. ಆ ಕಾಲದಲ್ಲಿ ಆ ಪ್ರದೇಶದಲ್ಲಿ ಇವನ ಆಳ್ವಿಕೆಯಿದ್ದುದನ್ನಂತೂ ದೃಢಪಡಿಸುತ್ತವೆ. ಇದರ ಕಾಲ ಕ್ರಿ.ಶ. 1011.

ಎರಡನೆಯದು ಬಲಮುರಿಯ ಅಗಸ್ತ್ಯೇಶ್ವರ ದೇವಸ್ಥಾನದ ಒಂದು ಶಾಸನ (ಶ್ರೀಪ.78). ಇದೊಂದು ಕನ್ನಡ ಶಾಸನ. ರಾಜರಾಜಚೋಳನ ಆಳ್ವಿಕೆಯ ಮೇಲೆ ಇದು ಹೆಚ್ಚಿನ ಬೆಳಕು ಬೀರುತ್ತದೆ. ಅವನ ಮಹಾದಂಡನಾಯಕನಾದ ಪಂಚವ ಮಹಾರಾಯನು ಬಲಮುರಿಯ ಒಂದು ದೇವರಿಗೆ ನೈವೇದ್ಯಕ್ಕಾಗಿ ಅಕ್ಕಿಯನ್ನು (ಭೂಮಿಯನ್ನು ?) ದಾನಕೊಟ್ಟ ವಿಚಾರವು ಇದರ ವಸ್ತು ಸಾಂದರ್ಭಿಕವಾಗಿ ರಾಜರಾಜ ಚೋಳನ ಬಗ್ಗೆ ತಿಳಿಸುವ ಪದ್ಯ ಹೀಗಿದೆ :

ಶ್ರೀಗಂಗಾವನಿ ರಟ್ಟವಾಡಿ ಮಲೆನಾಡೆಯು ನೊಳಂಬಾಂಧ್ರದಿ
ಗ್ಭಾಗಂ ಕೊಂಗು ಕಳಿಂಗ ಪಾಂಡ್ಯವಿಷಯಾಧೀಶಕ್ಕಳಂ ಕೊಂದು ಪುಂ
ತಾಗಲ್ಕೊಳ್ಳುದಿಲಾನಲೋಕನಿತುಮಂ ಜೋಳ್ವಾಡೆನಲ್ಕಾಳ್ವುಭೂ
ಭಾಗೇಂದ್ರಂ ಕಲಿರಾಜರಾಜಚೋಳಂ ಚಕ್ರೇಶ್ವರನ್ನಾಳಿದಂ।

ಗಂಗರಾಜ್ಯ, ರಟ್ಟವಾಡಿ, ಪಳುಮಲೆನಾಡುಗಳು, ನೊಳಂಬರಾಜ್ಯ, ಆಂಧ್ರರಾಜ್ಯ ಕೊಂಗು, ಕಳಿಂಗ ಪಾಂಡ್ಯನಾಡುಗಳ ದೊರೆಗಳನ್ನು ಸಂಹರಿಸಿ ಆ ಎಲ್ಲರ ಭೂಭಾಗಗಳನ್ನೂ ಒಟ್ಟಾಗಿ ಜೋಳನಾಡೆಂದು ಕರೆದು ಅವನ್ನು ರಾಜರಾಜಚೋಳನು ಆಳುತ್ತಿದ್ದನೆಂಬುದು ಇದರಿಂದ ತಿಳಿದುಬರುತ್ತದೆ.

ಪಂಚವಮಹಾರಾಯನ ಬಗ್ಗೆ ತಿಳಿದು ಬರುವ ಅಂಶಗಳು ಹೀಗಿವೆ : ಅವನು ಚಕ್ರವರ್ತಿಯ ನಿಷ್ಠಾವಂತ ಬಂಟನಾಗಿದ್ದ. ವೇಂಗಿಮಂಡಲ, ಗಂಗಮಂಡಲಗಳಿಗೆ ಮಹಾದಂಡನಾಯಕನಾಗಿದ್ದ. ಅವನು ತುಳುವ ಕೊಂಕಣಗಳನ್ನು ಗೆದ್ದಿದ್ದ: ಮಲೆಯನನ್ನು ಬೆನ್ನಟ್ಟಿದ್ದ; ಚೇರಮ, ರಟ್ಟಿಗರನ್ನು ಓಡಿಸಿದ್ದ ; ಬೆಳುವಲದ ಅಧಿಪನನ್ನು ನಡುಗಿಸಿದ್ದ. ಅವನು ಹುಬ್ಬುಗಂಟಿಕ್ಕಿದರೆ ಸಾಕು ಶತ್ರುಸೈನ್ಯವು ನಡುಗುತ್ತಿತ್ತು- ಅಂತಹ ಪರಾಕ್ರಮಿ ಆತ. ಚೋಳನ ಗಂಧವಾರಣನೆಂದು ಅವನನ್ನು ವಿಶೇಷಿಸಲಾಗಿದೆ

ಇಂದಿನ ಮಂಡ್ಯಜಿಲ್ಲೆಯ ಪ್ರದೇಶವು ಅಂದು ಚೋಳರ ಆಳ್ವಿಕೆಗೆ ಒಳಪಟ್ಟಿತ್ತೆಂಬುದೂ, ಚೋಳಮಹಾದಂಡನಾಯಕನಾದ ಪಂಚವ ಮಹಾರಾಯನ ನೇರ ಆಧಿಪತ್ಯಕ್ಕೆ ಸೇರಿತ್ತೆಂಬುದೂ, ಚೋಳಆಡಳಿತಗಾರರು ಕೂಡ. ಬಹಳ ವಿರಳವಾಗಿಯಾದರೂ, ಇಲ್ಲಿಯ ದೇವಾಲಯಗಳಿಗೆ ದತ್ತಿಗಳನ್ನು ಬಿಟ್ಟಿದ್ದಾರೆಂಬುದೂ ಈ ಶಾಸನದಿಂದ ದೃಢಪಡುತ್ತದೆ. ಮೂರನೆಯದು, ಮಂಡ್ಯತಾಲ್ಲೂಕಿನ ಹಳೇಬೂದನೂರಿನ ಸೋಮೇಶ್ವರ ದೇವಾಲಯದ ಮುಂದಿರುವ ಒಂದು ಶಾಸನ (ಮಂಡ್ಯ 53). ಕನ್ನಡಲಿಪಿಯಲ್ಲಿರುವ ಈ ತಮಿಳು ಶಾಸನವು ಮೊದಲನೆಯ ರಾಜೇಂದ್ರ ಜೋಳನ ಆಳ್ವಿಕೆಯ ಕಾಲಕ್ಕೆ ಸೇರುತ್ತದೆ. ಇದರ ಕಾಲ ಕ್ರಿ.ಶ. 1024. ಶಾಸನದ ಹೆಚ್ಚಿನ ಭಾಗವು ತ್ರುಟಿತವಾಗಿರುವುದರಿಂದ ಇದರ ರಚನೆಯ ಉದ್ದೇಶವೇನೆಂಬುದು ತಿಳಿಯುವುದಿಲ್ಲ. ಆದರೆ ಚಕ್ರವರ್ತಿಗೆ ಸಂಬಂಧಿಸಿದ ಕೆಲವು ಪ್ರಮುಖ ವಿಚಾರಗಳಂತೂ ತಿಳಿದುಬರುತ್ತವೆ. ರಾಜೇಂದ್ರಚೋಳನು ಎಡದೊರೆನಾಡು, ಬನವಾಸಿ, ಕೊಲ್ಲಿ

ಪಾಕೆ, ಮನ್ನೆಕಡಕಂ (ಮಾನ್ಯಖೇಟ). ಸಮುದ್ರಮಧ್ಯದಲ್ಲಿದ್ದ ಈಳಂಮಂಡಲ ಇವನ್ನೆಲ್ಲ ಗೆದಿದ್ದ; ಪಾಂಡ್ಯದೊರೆ ಸುಂದರನನ್ನು ಜಯಿಸಿದ್ದ; ಚಾಲುಕ್ಯ ಜಯಸಿಂಹನನ್ನು ಮುಸಂಗಿಯಲ್ಲಿ ಸೋಲಿಸಿದ್ದ; ಚೇರಳ (ಕೇರಳ), ಒಡ್ಡವಿಷಯ, ಉತ್ತರಲಾಟ, ದಕ್ಷಿಣಲಾಟಗಳನ್ನು ಜಯಿಸಿದ್ದ; ಗಂಗೆಯ ಬಯಲನ್ನು ಕೈವಶಮಾಡಿಕೊಂಡಿದ್ದ ಎಂಬಿವೇ ಮುಂತಾದ ವಿಚಾರಗಳು ಇವರಲ್ಲಿ ಕಾವ್ಯಮಯವಾಗಿ ವರ್ಣಿತವಾಗಿವೆ. ಇದರಿಂದ ಚೋಳರಾಜ್ಯದ ವಿಸ್ತಾರ ಹಾಗೂ ಕರ್ನಾಟಕದ ಮೇಲಿನ ಅದರ ಒಡಿತ ಇವು ಸ್ಪಷ್ಟವಾಗುತ್ತವೆ

ನಾಲ್ಕನೆಯದು, ಮದ್ದೂರು ತಾಲ್ಲೂಕಿನ ವೈದ್ಯನಾಥಪುರದ ಒಂದು ಶಾಸನ (ಮದ್ದೂರು 72). ಇದು ಕೂಡ ರಾಜೇಂದ್ರಚೋಳನ ಆಳ್ವಿಕೆಯ ಕಾಲಕ್ಕೇ (11ನೆಯ ಶ.ತ.) ಸೇರುತ್ತದೆ. ತ್ರುಟಿತವಾಗಿರುವುದರಿಂದ ಇದರ ರಚನೆಯ ಉದ್ದೇಶ ಕೂಡ ತಿಳಿಯುವುದಿಲ್ಲ. ಆದರೆ ರಾಜೇಂದ್ರಚೋಳನು, ಉತ್ತರಲಾಟ, ಗಂಗಾಪ್ರದೇಶ, ಇವನ್ನೆಲ್ಲ ಜಯಿಸಿದ್ದು, ಕದಾರಂನ ಸಂಗ್ರಾಮವಿಜಯೋತ್ತುಂಗವರ್ಮನನ್ನು ಗೆದ್ದದ್ದು ಮುಂತಾದ ವಿಚಾರಗಳ ಉಲ್ಲೇಖವಿದ್ದು, ಚೋಳರ ಚರಿತ್ರೆಯ ಅಧ್ಯಯನಕ್ಕೆ ಇದು ಆಧಾರವನ್ನು ಒದಗಿಸಿಕೊಡುತ್ತದೆ.

ಐದನೆಯದು, ಶ್ರೀರಂಗಪಟ್ಟಣ ತಾಲ್ಲೂಕಿನ ಕಿರಂಗೂರಿನ ಒಂದು ಶಾಸನ (ಶ್ರೀಪ. 87) ಇದರಲ್ಲಿ ಬಹುಭಾಗ ತ್ರುಟಿತವಾಗಿ ಹೋಗಿದೆ. ಆದರೆ ಉಳಿದಿರುವ ಒಂದು ಒಂದುವರೆ ಸಾಲೇ ಒಂದು ಮುಖ್ಯ ಅಂಶವನ್ನು ತಿಳಿಸುತ್ತದೆ, ಅದರಲ್ಲಿ ಬರುವ ''ಪಂಚವ ಮಾರಾಯನಾದ ರಾಜೇಂದ್ರಚೋಳನೆಂಬ ಮಾತು ಗಮನಾರ್ಹ. ಹಿಂದೆ ನೋಡಿದ ರಾಜರಾಜಚೋಳನ ಆಳ್ವಿಕೆಯ ಕಾಲದ ಎರಡನೆಯ ಶಾಸನದಲ್ಲಿ ಪಂಚವ ಮಾರಾಯನ ವಿಚಾರವಿದೆ. ಅವನೇ ಈ ರಾಜೇಂದ್ರಚೋಳನೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಶಾಸನದ ಕಾಲ ಗೊತ್ತಿಲ್ಲ. ಇದರಲ್ಲಿ ರಾಜೇಂದ್ರಚೋಳನು ಪಟ್ಟಕ್ಕೆ ಬಂದಿದ್ದನೆಂಬ ಉಲ್ಲೇಖವೂ ಇಲ್ಲ. ಹಾಗಾಗಿ ಇದು ಬಹುಶಃ ರಾಜರಾಜ ಚೋಳನ ಆಳ್ವಿಕೆಯ ಕಾಲಕ್ಕೇ ಸೇರುತ್ತದೆಯೆಂದು ತೋರುತ್ತದೆ.

ಆರನೆಯದು, ಶ್ರೀರಂಗಪಟ್ಟಣ ತಾಲ್ಲೂಕಿನ ಬೊಮ್ಮೂರು ಅಗ್ರಹಾರದ ಒಂದು ಶಾಸನ (ಶ್ರೀಪ. 67). ಇದು ಗ್ರಂಥಲಿಪಿಯಲ್ಲಿರುವ ಒಂದು ತಮಿಳು ಶಾಸನ. ಇದರ ಕಾಲ ಕ್ರಿ.ಶ. 1102–1103 ; ಕುಲೋತ್ತುಂಗಚೋಳನ ಆಳ್ವಿಕೆಯ ಅವಧಿಗೆ ಸೇರುವ ಈ ಶಾಸನದಲ್ಲಿ, ಇಡತ್ತುಜೈನಾಟ್ಟಿನ (ಎಡತೊರೆ ನಾಡಿನ) ಸಿಜೀಯಕಲಸತ್ತ ಪಾಡಿಯಾದ ಪಾನವಸ್ ಮಾದೇವಿ ಚತುರ್ವೇದಿಮಂಗಲದಲ್ಲಿ ಹಾಳಾಗಿದ್ದ ಜಲಾಶಯವೊಂದನ್ನು ಜೀರ್ಣೋದ್ಧಾರ ಮಾಡಿಸಲು ಇನ್ನೂರು ವರ್ಷಗಳಿಂದ ಯಾರೂ ಮುಂದೆ ಬರದೆ ಇರಲು, ಆ ಊರ ಅಡೈಕ್ಕಾಜನೂ, ಚೋಳನ ಮಾಂಡಲಿಕನೂ ಆದ ಪೋಮನ್ ಇರಾಮನಾದ ವಿರುದರಾಯಬಯಂಕರಮಾರಾಯನ್ ಎಂಬುವನು

ಮುಂದೆ ಬಂದು ಅದನ್ನು ಜೀರ್ಣೋದ್ಧಾರ ಮಾಡಿಸಿದನು–ಎಂಬ ವಿಚಾರ ನಿರೂಪಿತ ವಾಗಿದೆ.

ಏಳನೆಯದು, ಪಾಂಡವಪುರ ತಾಲ್ಲೂಕಿನ ಕನ್ನಂಬಾಡಿಯ ಕಣ್ವೇಶ್ವರ ದೇವಾಲಯದ ಒಂದು ಶಾಸನ [ಪಾಂ.ಪು 44]. ಇದರ ಕಾಲ ಕ್ರಿ.ಶ. 1114–15. ಇದೊಂದು ಕನ್ನಡ ಶಾಸನ. ಕುಲೋತ್ತುಂಗಚೋಳನ ಆಳ್ವಿಕೆಯ ಕಾಲದಲ್ಲಿ, ವಡುಗ ವೇಳಿಕಾಜಿ ಮುತಪಡೆರಾಯನ ಮಕ್ಕಳಾದ ಮಾದಿಯಣ್ಣ ಮತ್ತು ಲಂಕಣ್ಣ ಎಂಬುವರು ಎರಡು ದೇವಾಲಯಗಳನ್ನು ಕಟ್ಟಿಸಿದರು ಕೊಪರ ಬಮ್ಮಗಾವುಂಡನು (ಅಲ್ಲಿ) ಇದ್ದು ಶಿವಕೆರೆಯಲ್ಲಿ 12 ಖಂಡುಗ ನೀರಾವರಿ ಭೂಮಿಯನ್ನೂ ಎರಡು ಖಂಡುಗ ಬಗುಳ ಕಪ್ಪುಮಣ್ಣಿನ ಭೂಮಿಯನ್ನೂ, ಪಿರಿಯ ಕೆರೆಯಲ್ಲಿ ಒಂದು ಖಂಡುಗ ಜೋಳದ ಭೂಮಿಯನ್ನೂ ದತ್ತಿಯಾಗಿ ಬಿಟ್ಟ : ಅವನ ಮಗ ಮಾಚಗಾವುಂಡನು (ಅದನ್ನು) ಕೊಂಗಜೀಯರಿಗೆ ಧಾರೆಯೆರೆದುಕೊಟ್ಟ–ಎಂಬುದು ಇದರಲ್ಲಿ ನಿರೂಪಿತವಾಗಿದೆ. ನೇರವಾಗಿ ಚೋಳದೊರೆಗಳಿಗೇ ಸಂಬಂಧಿಸದಿದ್ದರೂ, ಆ ಕಾಲದಲ್ಲಿ ಅಲ್ಲಿ ಅವರ ಆಳ್ವಿಕೆಯಿತ್ತೆಂಬುದಕ್ಕೆ ಮಾತ್ರ ಇದೊಂದು ಒಳ್ಳೆಯ ಆಧಾರವಾಗಿದೆ.

ಎಂಟನೆಯದು ಮಂಡ್ಯತಾಲ್ಲೂಕಿನ ಚನ್ನಪ್ಪನ ದೊಡ್ಡಿಯ ಒಂದು ಬಹುತ್ರುಟಿತ ಶಾಸನ. (ಮಂ. 66). ಇದರಲ್ಲಿ ಎರಡು ಪದಗಳು ಮಾತ್ರ ಕಾಣಿಸುತ್ತವೆ. ಅವುಗಳಲ್ಲಿ ಒಂದು "ಉತ್ತಮ ಚೋಳ" ಎಂಬುದು. ಇದು ಯಾವ ದೊರೆಯನ್ನು ಸೂಚಿಸುತ್ತದೆ, ಯಾವ ಕಾಲಕ್ಕೆ ಸೇರುತ್ತದೆ ಎಂಬುದು ತಿಳಿಯದೇ ಇದ್ದರೂ, ಆ ಪ್ರದೇಶದಲ್ಲಿ ಚೋಳರ ಆಡಳಿತವಿದ್ದುದಕ್ಕಂತೂ ಸಾಕ್ಷಿಯಾಗಿದೆ.

ಇವಿಷ್ಟೂ ಈ ಪ್ರದೇಶದಲ್ಲಿ ದೊರಕುವ ಚೋಳಶಾಸನಗಳು. ಹೆಚ್ಚಾಗಿ ತಮಿಳಿಗೇ ಪ್ರಾಧಾನ್ಯವಿರುವುದನ್ನು ಇವುಗಳಲ್ಲಿ ಕಾಣುತ್ತೇವೆ. ಜೊತೆಗೇ ಇವೆಲ್ಲ ಶ್ರೀರಂಗಪಟ್ಟಣ, ಪಾಂಡವಪುರ, ಮಂಡ್ಯ, ಮದ್ದೂರು ಈ ನಾಲ್ಕು ತಾಲ್ಲೂಕುಗಳಿಗಷ್ಟೇ ಸೀಮಿತವಾಗಿವೆ. ಅಂತೆಯೇ ಮೊದಲನೆಯ ರಾಜಾಧಿರಾಜ ಮೊದಲನೆಯ ರಾಜೇಂದ್ರ ಮತ್ತು ಕುಲೋತ್ತುಂಗ ಈ ಮೂವರ ಆಳ್ವಿಕೆಗಷ್ಟೇ ಸೇರುತ್ತವೆ. ರಾಜೇಂದ್ರ ಮತ್ತು ಕುಲೋತ್ತುಂಗರ ನಡುವಿನ ಕಾಲದಲ್ಲಾಗಲೀ ಕುಲೋತ್ತುಂಗನ ನಂತರದಲ್ಲಾಗಲೀ ಆಳಿದ ದೊರೆಗಳ ಒಂದು ಶಾಸನವೂ ಸಿಕ್ಕಿಲ್ಲ. ಆ ಅವಧಿಯಲ್ಲಿ ಈ ಪ್ರದೇಶದ ಮೇಲೆ ಅವರ ಹಿಡಿತ ತಪ್ಪಿರಬಹುದು.

ಒಟ್ಟಾರೆ, ಇಲ್ಲಿನ ಕಲೆ ಸಾಹಿತ್ಯಗಳಿಗೆ ಚೋಳರಾಜರಿಂದ ಎಂತಹುದೇ ಗಮನಾರ್ಹ ಪ್ರೋತ್ಸಾಹವೂ ದೊರೆತಿಲ್ಲವೆಂಬುದು ಈವರೆಗಿನ ಪರಿಶೀಲನೆಯಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ಕಾರಣ, ಹಿಂದೆಯೇ ತಿಳಿಸಿದಂತೆ ಆಧಿಪತ್ಯಸ್ಥಾಪನೆಗಾಗಿ ನಿರಂತರವಾಗಿ ನಡೆಯುತ್ತಿದ್ದ ಯುದ್ಧಗಳು, ಹಾಗೂ ಅಧಿಕಾರ ಬದಲಾವಣೆಗಳು. ಇದರಿಂದಾಗಿ ರಾಜಧಾನಿಯಿಂದ ಬಹುದೂರವಾಗಿದ್ದ ಈ ನಾಡಿನ ಮೇಲೆ ಪ್ರಭಾವದ ಗಮನಾರ್ಹ ಮುದ್ರೆಯೊತ್ತುವುದು ಚೋಳರಾಜರಿಗೆ ಸಾಧ್ಯವಾಗಲಿಲ್ಲ.

ಕೆ. ಜಿ. ನಾರಾಯಣ ಪ್ರಸಾದ್

ಹೊಯ್ಸಳರ ಆಡಳಿತದಲ್ಲಿ ಮಂಡ್ಯಜಿಲ್ಲೆ

ಕರ್ನಾಟಕದ ಇತಿಹಾಸದಲ್ಲಿ ಮಲೆನಾಡಿನ ಅಧಿಪರಾಗಿ ಕಾಣಿಸಿಕೊಂಡ ಹೊಯ್ಸಳರು ಕಲ್ಯಾಣದ ಚಾಳುಕ್ಯರ ಸಾಮಂತರಾಗಿ ತಮ್ಮ ರಾಜಕೀಯ ಪ್ರಗತಿಯ ಹಾದಿಯನ್ನು ರೂಪಿಸಿಕೊಂಡರು. ಗಂಗವಾಡಿ ಪ್ರದೇಶವನ್ನು ಚೋಳರಿಂದ ವಶಪಡಿಸಿಕೊಂಡು, ಚಾಳುಕ್ಯ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುತ್ತಲೇ ಕ್ರಮೇಣ ಸ್ವತಂತ್ರರಾಗಲು ಹವಣಿಸಿ ಸಫಲರಾದರು. ಈ ಅರಸರ ಆಡಳಿತಕ್ಕೆ ಈಗಿನ ಮಂಡ್ಯಜಿಲ್ಲೆಯ ಪ್ರದೇಶವೆಲ್ಲ ಸೇರಿದ್ದಿತು. ಇವರ ಕಾಲದ ಈ ಪ್ರದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಶಾಸನಗಳೇ ಪ್ರಧಾನ ಆಕರಗಳು.

ಮಂಡ್ಯಜಿಲ್ಲೆಯ ಶಾಸನಗಳಲ್ಲಿ ಸುಮಾರು ಮುನ್ನೂರಕ್ಕೂ ಹೆಚ್ಚಿನವು ಹೊಯ್ಸಳರ ಕಾಲಕ್ಕೆ ಸೇರಿದವು. ಕ್ರಿ.ಶ. 11ನೆಯ ಶತಮಾನದ ಮಧ್ಯಭಾಗದಿಂದ ಕ್ರಿ.ಶ. 14ನೆಯ ಶತಮಾನದ ಪೂರ್ವಾರ್ಧದವರೆಗೆ ಸೇರುವ ಹೊಯ್ಸಳ ಶಾಸನಗಳ ಲಿಪಿ ಸುಂದರ. ಭಾಷೆ ಪ್ರಧಾನವಾಗಿ ಸಂಸ್ಕೃತ ಮಿಶ್ರಿತ ಕನ್ನಡ. ಕೆಲವು ಶಾಸನಗಳು ತಮಿಳಿನಲ್ಲಿವೆ. ಮೊದಲು ಗಂಗವಾಡಿಯನ್ನು ಆಳುತ್ತಿದ್ದ ಚೋಳರು ಆಡಳಿತದಲ್ಲಿ ತಮಿಳನ್ನು ಬೇರೂರಿಸಿದ್ದುದೇ ಇದಕ್ಕೆ ಕಾರಣವೆಂದು ತೋರುತ್ತದೆ. ಈ ಶಾಸನಗಳಿಂದ ತತ್ಕಾಲೀನ ರಾಜಕೀಯ ಮತ್ತು ಸಾಂಸ್ಕೃತಿಕ ಜೀವನದ ಕೆಲವು ಅಂಶಗಳನ್ನು ಸ್ಥೂಲವಾಗಿ ಪರಿಚಯಿಸಿಕೊಳ್ಳಬಹುದು.

ರಾಜಕೀಯ ಇತಿಹಾಸಾಂಶಗಳು :

ಹೊಯ್ಸಳ ವಂಶದ ಉಗಮ ಕುರಿತು ಶಾಸನಗಳಲ್ಲಿ ಸಾಮಾನ್ಯವಾಗಿ ಕಂಡುಬರುವುದು ಸಳನ ಕಥೆ. ಶಶಪುರ ಅಥವಾ ಸೊಸೆವೂರಿನ ವಾಸಂತಿಕಾದೇವಾಲಯದಲ್ಲಿ ಸಿದ್ಧಮುನೀಂದ್ರನೊಬ್ಬ 'ಸಳನಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದಾಗ' ಹುಲಿಯೊಂದು ನುಗ್ಗಿತಂತೆ ; ಮುನಿ ಸಲಾಕೆಯೊಂದನ್ನು ಕೊಟ್ಟು 'ಪೊಯ್ ಸಳ' ಎಂದನಂತೆ ; ಸಳ ಕೂಡಲೇ ಆ ಸಲಾಕೆಯಿಂದ ಹುಲಿಯನ್ನು ಕೊಂದುಹಾಕಿದನಂತೆ. ಆಗಿನಿಂದ ಅವನ ವಂಶದವರಿಗೆ ಪೊಯ್ಸಳ ಎಂಬ ಹೆಸರೂ ಹುಲಿಯನ್ನು ಸಳ ಕೊಲ್ಲುತ್ತಿರುವ ಪ್ರಸಂಗವನ್ನು ಸೂಚಿಸುವ ಲಾಂಛನವೂ ಪ್ರಾಪ್ತವಾಯಿತು.[1] ಈ ಕಥೆಯ ಪಾಠಾಂತರಗಳೂ ಇವೆ. ಸಳ ತನ್ನ ಪೂರ್ವಜರು ಆರಾಧಿಸುತ್ತಿದ್ದ ಮತ್ತು ಶಶಪುರದ ಸಮೀಪದ

ಕಾನನದಲ್ಲಿದ್ದ ವಾಸಂತಿಕಾದೇವಾಲಯಕ್ಕೆ ದರ್ಶನಾರ್ಥ ಹೋದಾಗ ಮುನಿವರ್ಯನೊಬ್ಬನನ್ನು ಕಂಡ. ಸ್ವಲ್ಪಕಾಲ ಅಲ್ಲಿದ್ದು 'ವೀತಾಯುಧ ವ್ರತ'ಧಾರಿಯಾಗಿ (ಆಯುಧಗಳನ್ನು ಬಿಡುವುದರ ವ್ರತಧಾರಿಯಾಗಿ) ದೇವಿಯನ್ನು ಆರಾಧಿಸಿ. ಮುನಿಯನ್ನು ಸತ್ಕರಿಸುತ್ತಿದ್ದ ಸಮಯದಲ್ಲಿ ಇದ್ದಕ್ಕಿದ್ದಂತೆ ಪೊದೆಗಳಲ್ಲಿ ಕೋಲಾಹಲ ಉಂಟಾಯಿತು. ನೋಡಿದರೆ ಭೀಕರ ಹುಲಿ : ಮೂರು ಲೋಕವನ್ನು ನುಂಗಲೆಂಬಂತೆ ತೆರೆದ ಗುಹೆಯಂಥ ಬಾಯಿ, ಕಿಡಿಸೂಸುವ ಕಣ್ಣು, ಮೇಲೆ ಬಾಗಿದ ಉದ್ದ ನಾಲಗೆ, ಚೂಪಾದ ಉಗುರುಗಳು, ಪರ್ವತದಂಥ ಆಕಾರ. ಹಾವು ಸುತ್ತಿನ ಬಾಲ! ಅದರ ಕೋಪದ ಗರ್ಜನೆ ಎಲ್ಲೆಡೆ ಮೊಳಗಿತು. ಆಗ ಅದನ್ನು ಎದುರಿಸಲು ಮುನಿ ನೀಡಿದ ಸಲಾಕೆಯಿಂದ ಸಳ ಅದನ್ನು ಕೊಂದು ಹಾಕಿದ.[2]

ಮುಂದೆ, ಹೊಯ್ಸಳ ಶಾಸನಗಳಲ್ಲಿ ನಮಗೆ ಕಂಡುಬರುವ ಮೊದಲ ಹೊಯ್ಸಳ ಅರಸ ವಿನಯಾದಿತ್ಯ. ಈತ ಧರಿಸಿದ ತ್ರಿಭುವನಮಲ್ಲ ಎಂಬ ಬಿರುದಿನಿಂದಲೇ ಈತ ಚಾಲುಕ್ಯ ಸಾಮಂತನಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಕೊಂಕಣ, ಆಳ್ವಖೇಡ, ಬಯಲ್ನಾಡು, ತಲಕಾಡು, ಸಾವಿಮಲೆ ಮುಂತಾದ ಪ್ರದೇಶಗಳನ್ನು ಆತ ತನ್ನ ಪತ್ನಿ ಕೆಳೆಯಬ್ಬರಸಿಯೊಡಗೂಡಿ 'ಸುಖಸಂಕಥಾವಿನೋದದಿಂ ಸೊಸವೂರ ನೆಲೆವೀಡಿ' ನಿಂದ ಆಳುತ್ತಿದ್ದ.[3] ಈತನಿಗೆ ದ್ವಾರಾವತೀಪುರವರಾಧೀಶ್ವರ ಎಂಬ ಬಿರುದಿರುವುದು ಗಮನಾರ್ಹ.[4]

ಎರೆಯಂಗ ವಿನಯಾದಿತ್ಯನ ಮಗ : ಯುವರಾಜನಾಗಿದ್ದುಕೊಂಡು ತಂದೆಗೆ ನೆರವಾದ ವ್ಯಕ್ತಿ. 'ಚಾಳುಕ್ಯಚಕ್ರೇಶನ ಬಲದ ಭುಜಾದಂಡ' ಎನ್ನುವ ವರ್ಣನೆ[5] ಈತನು ಗಳಿಸಿದ ಸ್ಥಾನಮಾನವನ್ನು ಸೂಚಿಸುತ್ತದೆ. ಈತ 'ಮಾಳವರಾಜ್ಯದಾಳ ವನಿವಗ್ರದ ಧಾರೆಯನಾತ್ಮಸೇನೆಯಿಂ ಕಾಳ್ಕಿ ಚಕ್ರವರ್ತಿಗೆ' ವಿಜಯವನ್ನು ತಂದುಕೊಟ್ಟ ಪರಾಕ್ರಮಿ.[6] ಇದರಿಂದ ಇವನೊಬ್ಬ ನಿಷ್ಠ ಚಾಳುಕ್ಯ ಮಾಂಡಲಿಕನಾಗಿದ್ದನೆಂದು ಗೊತ್ತಾಗುತ್ತದೆ. ಈತನ ಪತ್ನಿಯರು ಏಚಲದೇವಿ ಹಾಗೂ ಮಾವಲಮಹಾದೇವಿ ಅಥವಾ ತುಳುವಲದೇವಿ

ಎರೆಯಂಗನ ಮಕ್ಕಳಾದ ಬಲ್ಲಾಳ, ವಿಷ್ಣು ಹಾಗೂ ಉದಯಾದಿತ್ಯರು ದೋರಸಮುದ್ರದಲ್ಲಿ ಪರಮಾರ ರಾಜಕುಮಾರ ಜಗದೇವನ ಸೇನೆಯನ್ನು ಸದೆಬಡಿದು ಆತನ ಕೊರಳಹಾರದ ಪದಕವನ್ನೂ ಭಂಡಾರವನ್ನೂ ವಶಪಡಿಸಿಕೊಂಡರು.[7] ಇವರಲ್ಲಿ ಬಲ್ಲಾಳ ಸ್ವಲ್ಪಕಾಲ ಮಾತ್ರ ರಾಜ್ಯವಾಳಿದ. ಗಂಗವಾಡಿ ಪ್ರದೇಶ ಈತನ ಆಡಳಿತಕ್ಕೆ ಒಳಪಟ್ಟಿದ್ದಿತು.[8] ಈತ ತಲಕಾಡನ್ನು ಮುತ್ತಿದ ಮತ್ತು ಕೊಂಗು ಪ್ರದೇಶವನ್ನು ಗೆದ್ದ ಸಂಗತಿ ಇತರ ಶಾಸನಗಳಿಂದ ತಿಳಿದುಬರುತ್ತದೆ. ವಿನಯಾದಿತ್ಯನಿಗೆ ಉದಯಾದಿತ್ಯ ಎಂಬ ಹೆಸರೂ ಇದ್ದಂತೆ[9] ಉದಯಾದಿತ್ಯನಿಗೆ ವಿನಯಾದಿತ್ಯನೆಂಬ ಹೆಸರೂ ರೂಢಿಯಲ್ಲಿತ್ತು. ಈತನನ್ನು ಶಾಸನವೊಂದರಲ್ಲಿ 'ಯಾದವರಾಜ್ಯಪೂಜಿತ'ನೆಂದು ವರ್ಣಿಸಿದೆ.[10]

ರಾಜಕೀಯ ಮಹತ್ವದ ದೃಷ್ಟಿಯಿಂದ ವಿಷ್ಣುವರ್ಧನನ ಶಾಸನಗಳು ಗಮನಾರ್ಹವಾದುವು. 'ತಲಕಾಡುಗೊಂಡ' ಮತ್ತು 'ನಂಗಲಿಯ ಗೆಲದ' ಈತ[11] ಗಂಗವಾಡಿ ಪ್ರದೇಶವನ್ನು 'ಸುಖದಿಂದಾಳುತ್ತಿದ್ದ' ಎಂಬ[12] ಸಂಗತಿ ತಿಳಿಯುತ್ತದೆ. ಜೊತೆಗೆ ನೊಳಂಬವಾಡಿ, ಬನವಸೆ, ಹಲಸಿಗೆ ಮುಂತಾದ ಪ್ರದೇಶಗಳೂ ಈತನ ಅಧಿಕಾರಕ್ಕೊಳಪಟ್ಟಿದ್ದವು.[13] ಅಂಗವಾಡಿಯನ್ನು ಗಲ್ಲುವಲ್ಲಿ ಪ್ರಮುಖ ಪಾತ್ರವಹಿಸಿದವನು ಹಿರಿಯ ದಂಡನಾಯಕ ಗಂಗರಾಜ. ಸಾಮಂತ ಅದಿಯಮ ಚೋಳ ಕೊಟ್ಟ ನಾಡನ್ನು ಬಿಡದೆ ಕಾದಿ ತೆಗೆದುಕೊಳ್ಳೆಂದು ಹೇಳಲು ಗಂಗರಾಜ ಅದರಂತೆ ಯುದ್ಧಸನ್ನದ್ಧನಾಗಿ ಅದಿಯಮ, ನರಸಿಂಹವರ್ಮ ಮುಂತಾದ ಚೋಳ ಸಾಮಂತರನ್ನು ಜಯಿಸಿದ.[14] ತಲಕಾಡಿನ ದಿಗ್ವಿಜಯ ಹೊಯ್ಸಳ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಶಾಸನಗಳಲ್ಲಿ ಹಾಗೂ ನಾಣ್ಯಗಳಲ್ಲಿ ತಲಕಾಡುಗೊಂಡ ಎಂಬ ಬಿರುದು ಕಂಡುಬರುತ್ತದೆ.

ವಿಷ್ಣುವರ್ಧನ ಮೊದಲು ಜೈನನಾಗಿದ್ದ ; ಬಿಟ್ಟಿಗ ಎಂಬ ಹೆಸರಿದ್ದ ವ್ಯಕ್ತಿ ; ರಾಮಾನುಜಾಚಾರ್ಯರ ಪ್ರಭಾವದಿಂದ ವೈಷ್ಣವ ಮತ ಸ್ವೀಕರಿಸಿ ವಿಷ್ಣುವರ್ಧನನಾಗಿ ಪರಿವರ್ತಿತನಾದ ಎಂಬ ಪ್ರತೀತಿ ಇದೆ. ಆದರೆ ಇದಕ್ಕೆ ಆಧಾರವಿಲ್ಲ.[15] ಬಿಟ್ಟಿಗ ಎಂಬ ಹೆಸರು ಈ ಪ್ರತೀತಿಗೆ ಸ್ವಲ್ಪಮಟ್ಟಿಗೆ ಕಾರಣವಾಗಿದ್ದಿರಬಹುದೇನೋ. ಆದರೆ ಬಿಟ್ಟಿಗ ಎಂಬುದು ವಿಷ್ಣು ಎಂಬುದರ ತದ್ಭವ ರೂಪ. ವಿಷ್ಣುವರ್ಧನ ಹಾಗೂ ಬಿಟ್ಟಿಗ ಎಂಬ ನಾಮರೂಪಗಳೆರಡೂ ಶಾಸನಗಳಲ್ಲಿ ಸರಿಸಮನಾಗಿಯೇ ಕಂಡುಬರುತ್ತವೆ. ಈ ಕಾಲದಲ್ಲಿ ಮೇಲುಕೋಟೆ, ತೊಣ್ಣೂರು ಮುಂತಾದವು ವೈಷ್ಣವ ಕ್ಷೇತ್ರಗಳಾಗಿ ಹೆಸರು ಗಳಿಸಿದ್ದುದಿಟ.

ಚಾಳುಕ್ಯಾಭರಣನ ಪಾದಪದ್ಮೋಪಜೀವಿಯಾಗಿದ್ದರೂ ವಿಷ್ಣುವರ್ಧನ ಒಬ್ಬ ಸಮರ್ಥ ದೊರೆ ; ಹೊಯ್ಸಳ ರಾಜ್ಯವನ್ನು ವಿಸ್ತರಿಸಿದ ಧೀರ. ನಂಗಲಿ, ಕೊಂಗು, ಸಿಂಗಮಲೆ, ರಾಯಪುರ, ತಲಕಾಡು, ರೊದ್ದ. ಬೆಂಗಿರಿ, ಚಕ್ರಗೊಟ್ಟ, ಉಚ್ಚಂಗಿ, ವಿರಾಟನಪೊಳಲು ಅಥವಾ ಹಾನುಗಲ್ಲು, ಬಂಕಾಪುರ, ಬನವಸೆ, ಕೋಯತೂರು, ನೀಳಾದ್ರಿ, ಪಡಿಯಘಟ್ಟ, ವಳುಮಲೆ ಅಥವಾ ತಿರುಪತಿ, ಕಂಚಿ, ತುಳುದೇಶ, ರಾಜೇಂದ್ರಪುರ, ಕೋಲಾಲ, ಬಯಲ್ನಾಡು, ಹಲಸಿಗೆ, ಬೆಳುವಲ, ಹುಲಿಗೆರೆ, ಲೊಕ್ಕಿಗುಂಡಿ ಮತ್ತು ಕೃಷ್ಣಾನದಿಯವರೆಗಿನ ಪ್ರದೇಶಗಳನ್ನು ವಿಷ್ಣುವರ್ಧನ ಜಯಿಸಿದ[16] ಹಾಗೆಯೇ ಬಳ್ಳಾರಿ, ವಲ್ಲೂರು ಇರುಂಗೋಳನ ಕೋಟೆ, ಕಾರುಕನ ಕೊಳ್ಳ, ಕುಮ್ಮಟ, ಚಿಂಚಿಲೂರು, ರಾಚಪ್ರೂರು ಮುಂತಾದ ದುರ್ಗಗಳು ಕೂಡ ಈತನ ವಶವಾದವು[17] ಈತ ತನ್ನ ಅಣ್ಣನಾದ ಒಂದನೆಯ ಬಲ್ಲಾಳ ಬದುಕಿದ್ದಾಗಲೇ ಅರಸನಾಗಿ ರಾಜ್ಯವಾಳುತ್ತಿದ್ದನೆಂಬ ಸಂಗತಿ ಗಮನಿಸಬೇಕಾದುದು. ತಾಯಿ ತುಳುವಲದೇವಿ ಮತ್ತು 'ಆತ್ಮಾಗ್ರಜ' ನೃಪಭೂಪ (ಬಲ್ಲಾಳ)ರ ಉಪಸ್ಥಿತಿಯಲ್ಲಿ ಅರಸ ದಾನ ನೀಡಿದ್ದುಂಟು.[18]

ವಿಷ್ಣುವರ್ಧನನ ಅರಸಿಯರಲ್ಲಿ ನಾಲ್ವರನ್ನು ಮಂಡ್ಯ ಜಿಲ್ಲೆಯ ಶಾಸನಗಳು ಉಲ್ಲೇಖಿಸುತ್ತವೆ : ಪಿರಿಯರಸಿ ಪಟ್ಟಮಹಾದೇವಿ ಶಾಂತಲದೇವಿ,[19] ಪಟ್ಟಮಹಿಷಿ ಲಕ್ಷ್ಮಾದೇವಿ,[20] ಪಲ್ಲವ ರಾಜಪುತ್ರಿ ಬಮ್ಮಲದೇವಿ[21] ಹಾಗೂ ಕೊಂಗಾಳ್ವ ರಾಜಪುತ್ರಿ ಚಂದಲದೇವಿ.[22] ಈತನ ಅನೇಕ ಬಿರುದುಗಳನ್ನು ಶಾಸನಗಳು ಉಲ್ಲೇಖಿಸುತ್ತವೆ.

ಒಂದನೆಯ ನರಸಿಂಹ ವಿಷ್ಣುವರ್ಧನ ಹಾಗೂ ಲಕ್ಷ್ಮಾದೇವಿಯರ ಮಗ. ತಂದೆಯ ಅನೇಕ ಬಿರುದುಗಳನ್ನು ಈತನೂ ಧರಿಸಿದ್ದ. ಶಾಸನವೊಂದರಲ್ಲಿ ಈತ 'ಚಂಗಾಳ್ವನಂ ಕೊಂದ' ಉಲ್ಲೇಖವಿದೆ.[23] ಈತನಿಗಿದ್ದ ತ್ರಿಭುವನಮಲ್ಲ, ಜಗದೇಕಮಲ್ಲ ಇತ್ಯಾದಿ ಬಿರುದುಗಳು ಚಾಳುಕ್ಯರ ಸಾರ್ವಭೌಮತ್ವವನ್ನು ಧ್ವನಿಸುತ್ತವೆ. ತಳಕಾಡು, ಕೊಂಗು, ನಂಗಲಿ, ಗಂಗವಾಡಿ, ನೊಣಂಬವಾಡಿ, ಬನವಸೆ, ಹಾನುಂಗಲ್ಲು, ಬೆಳ್ವಲಗಳನ್ನು ಈತ ವಶಪಡಿಸಿಕೊಂಡ.[24] ಈತನನ್ನು 'ದ್ರವಿಳಮಗಧಪಾಂಚಾಳನೇಪಾಳ ಲೋಳಾವನೀಪಾಳಾನೀಕಮಂ' ಸಾಧಿಸಿದವನೆಂದು ವರ್ಣಿಸಿರುವುದು[25] ಕೇವಲ ಅತಿಶಯೋಕ್ತಿ. ಈತನ ಪತ್ನಿಯರು ಮಹಾದೇವಿ ಹಾಗೂ ಮೈಲಳದೇವಿ.

ಒಂದನೆಯ ನರಸಿಂಹನ ತರುವಾಯ ಪಟ್ಟಕ್ಕೆ ಬಂದವನು ಇಮ್ಮಡಿ ಬಲ್ಲಾಳ. ಈತ ಪಾಂಡ್ಯರಿಗೆ ಸೇರಿದ ಉಚ್ಚಂಗಿಯನ್ನು ಗೆದ್ದ.[26] ಬಾಚೆಯಹಳ್ಳಿಯ ಬಬ್ಬೆಯ ನಾಯಕನನ್ನು ಕರೆದು ಕಳಚುರಿ ವಂಶದ 'ಸಂಕಮದೇವನ ಕಟಕದಲಿ ಕಾದುವುದೆಂದು ಬೆಸಸಿ' ಆತನಿಗೆ ಅರಸ ವೀಳೆಯವನ್ನು ನೀಡಿ ಬೀಳ್ಕೊಟ್ಟಾಗ ಆತ 'ಮಹಾಪ್ರಸಾದ' ವೆಂದು ರಣರಂಗಕ್ಕೆ ತೆರಳಿ, ಪರಾಕ್ರಮದಿಂದ ಹೋರಾಡಿ ವೀರಸ್ವರ್ಗ ಪಡೆದ.[27] ಈತನ ಸಾಮಂತನೊಬ್ಬ ಹಟ್ಟಿಗಾಳಗದಲ್ಲಿ ವಿಜಯಿಯಾದವನು.[28] ಬಲ್ಲಾಳ ಸುಮಾರು 1200ರ ಹೊತ್ತಿಗೆ ಹೆದ್ದೊರೆ ಎಂದರೆ ಕೃಷ್ಣಾನದಿಯವರೆಗಿನ ಪ್ರದೇಶವನ್ನು ಆಳುತ್ತಿದ್ದ.[29] ಪದ್ಮಲದೇವಿ ಈತನ ಪತ್ನಿ.

ಇಮ್ಮಡಿ ನರಸಿಂಹ ಬಲ್ಲಾಳನ ತರುವಾಯ ಅಧಿಕಾರಕ್ಕೆ ಬಂದ ಅರಸ. ಈತ ಶತ್ರು ಅರಸರಿಗೆ 'ಪೆಣ್ಣುಡೆಯನುಡಿಸಿದ' ಧೀರ ![30] ಹೊಯ್ಸಳರಿಗೂ ದೇವಗಿರಿಯ ಸೇವುಣರಿಗೂ ಸಂಭವಿಸಿದ ಕದನದಲ್ಲಿ ಈತನ ಪರ ಹರಿಹರದಂಡನಾಯಕ ಹೋರಾಡಿದ.[31] ಈತನ ರಾಣಿ ಕಾಳಲದೇವಿ. ಸೋಮಲದೇವಿ ಈತನ ಸೋದರಿ.

ಅನಂತರ ಅರಸನಾದ ಸೋಮೇಶ್ವರ ಕ್ರಿ.ಶ. 1242ರಲ್ಲಿ ಚೋಳ ರಾಜ್ಯದ ನೆಲೆವೀಡಿನಿಂದ,[32] ಎಂದರೆ ಕಣ್ಣಾನೂರಿನಿಂದ[33] ರಾಜ್ಯವಾಳುತ್ತಿದ್ದ. ಬಾಲ್ಯದಲ್ಲಿದ್ದಾಗಲೇ ಈತ ವಿರೋಧಿ ಅರಸರ ತಲೆಗಳನ್ನು ಚೆಂಡಿನಂತೆ ಆಡುತ್ತಿದ್ದನಂತೆ.[34] ಈತನ ಸಾಧನೆಗಳನ್ನು ಶಾಸನವೊಂದು ಉತ್ಪ್ರೇಕ್ಷಿಸುವುದು ಹೀಗೆ :

ಥಿರುಹರ್ಪಾಯವಧಾರುದೇವೆನುತ ಚೇರಂ ಮುಂದೆ ಚೋಳಾವನೀ
ಶ್ವರನುಂ ಪಾಂಡ್ಯನುಮಿಂವ್ವರಿರ್ಕೆಲದೊಳುಂ ಕೈಗೊಟ್ಟು ಬಪ್ಪಾಗಳೀಂ

ಶ್ವರನುಂ ಬ್ರಹ್ಮಚತುರ್ಭುಜಚಕ್ರಗಳಿನೊಳ್ ಬಲ್ಪಿಂದಮಿ ಮಹಿಮಂಡಳಂ
ದೊರೆವೆತ್ತಂ ಕದನತ್ರಿನೇತ್ರ ನೃಪಟಿಂ ಶ್ರೀವೀರ ಸೋಮೇಶ್ವರಂ ॥[35]

ಇವನ ಸಾಧನೆಯನ್ನು ಕುರಿತ ಇನ್ನೊಂದು ಪದ್ಯ ಗಮನಾರ್ಹ :

ಮುನ್ನಂ ರೂಢಿಯ ಕೃಷ್ಣಕಂಧರನುಮಂ ಪಾಂಡ್ಯೋರುಮಂ ಚೋಳಭೂಪನುಮಂ
ನಿನ್ನಂತಾರೊಳಪ್ಪುಕ್ಕ ಸಾಧಿಸಿದರಾಪ್ಪಾಂಡ್ಯೇಶನಂ ಶೌರ್ಯದಿಂ
ಬೆನ್ನಂ ಪತ್ತಿಸಿ ಸೋಮಿದೇವಘಟೆಯುಂ ಕೈಕೊಂಡರಾಚೆಲ್ಲಗಳನಂ
ತನ್ನಾಮ್ನಾಯದ ರಾಜ್ಯದೊಳ್ನಿರಿಸಿದನ್ಗಾರ್ಮಾನ್ವಯೋರ್ವೀಶ್ವರರ್ ॥[36]

ಇದರಲ್ಲಿ ಉಕ್ತನಾದ ಕೃಷ್ಣಕಂಧರ ಸೇವುಣ ಅರಸನೆಂದು ಹಲವರೂ ರಾಷ್ಟ್ರಕೂಟ ಅರಸನೆಂದು ಮತ್ತೆ ಕೆಲವರೂ ಗುರುತಿಸಿದ್ದಾರೆ. ಸೋಮೇಶ್ವರನ ರಾಜ್ಯ ಪೂರ್ವದಲ್ಲಿ ಕಂಚಿ, ಪಶ್ಚಿಮದಲ್ಲಿ ವೇಲಾಪುರ ಅಥವಾ ಬೇಲೂರು, ಉತ್ತರದಲ್ಲಿ ಕೃಷ್ಣಾನದಿ ಮತ್ತು ದಕ್ಷಿಣದಲ್ಲಿ ಬಯಲ್ನಾಡಿನವರೆಗೆ ವ್ಯಾಪಿಸಿತ್ತು.[37] ಬಿಜ್ಜಲದೇವಿ ಈತನ ಪತ್ನಿ.

ಮುಮ್ಮಡಿ ನರಸಿಂಹ ಸೋಮೇಶ್ವರನ ಉತ್ತರಾಧಿಕಾರಿ. ಈತ 'ಮಲೆಯ ದಂಡಿಗೆತ್ತಿ ನಡೆದ' ಸಂಗತಿ ತಿಳಿದುಬರುತ್ತದೆ.[38] ಈತನ ವಿರುದ್ಧ ಹೋರಾಡಲು ಬಂದ 'ಸೇವುಣ ಮಹಾಮಹಿಪಂ ಮಹದೇವರಾಣೆಯುಂ ಕದನದೊಳಾಂತುನಿತ್ತರಿಸ ಲಾರದೆ ಬಿಟ್ಟು' ಒಂದೇ ರಾತ್ರಿಯಲ್ಲಿ ಓಡಿಹೋದನಂತೆ ![39] ಇದರಲ್ಲಿ ಉತ್ಪ್ರೇಕ್ಷೆ ಇದ್ದರೂ ಹೊಯ್ಸಳ ಸೇವುಣರ ನಡುವಣ ಸೆಣಸಾಟವನ್ನು ಅಲ್ಲಗಳೆಯುವಂತಿಲ್ಲ.

ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಜಿಮುತೂರಕಲ್ಲ ಸೋಮಯನಾಯಕ ಮತ್ತು ಕಂಪಿಲರ ನಡುವೆ ಹೊಳಲಕೆರೆಯಲ್ಲಿ ಹೋರಾಟ ನಡೆಯಿತು.[40] ಈತನನ್ನು 'ವಾರಿಧಿ ಮೇರೆಯಾಗಿ ಮೇದಿನಿಯ ವಳಯಮನಾಗಿ' ಆಳುತ್ತಿದ್ದವನೆಂದು ವರ್ಣಿಸಿರುವುದು ಅತಿಶಯೋಕ್ತಿ.[41] ಈತ ಅಣ್ಣಾಮಲೆಯಿಂದ ಆಳುತ್ತಿದ್ದುದುಂಟು.[42]

ಹೊಯ್ಸಳ ಅರಸನೊಬ್ಬ 'ದಿಗ್ವಿಜಯಂಗಳ ಮಾಡಿ ಬಂದು' ದೋರಸಮುದ್ರ ದಿಂದ ಆಳುತ್ತಿದ್ದ ಸಂಗತಿ ತಿಳಿದುಬರುತ್ತದೆ.[43] ಆದರೆ ಈ ಅರಸನನ್ನು ಗುರುತಿಸಲು ಸಾಧ್ಯವಾಗುವುದಿಲ್ಲ.

ಮಂಡ್ಯ ಜಿಲ್ಲೆಯಲ್ಲಿ ಲಭ್ಯವಾದ ಶಾಸನಾಧಾರಗಳಿಂದ ಹೊಯ್ಸಳ ವಂಶಾವಳಿ ಯನ್ನು ಹೀಗೆ ರೂಪಿಸಬಹುದು :

ಸಳ
|
ವಿನಯಾದಿತ್ಯ (ಉದಯಾದಿತ್ಯ)
ಪತ್ನಿ-ಕೆಳೆಯಬ್ಬೆ

ಎರೆಯಂಗ
ಪತ್ನಿ ಏಚಲದೇವಿ
ಮಾದಲಮಹಾದೇವಿ ಅಥವಾ ತುಳುವಲದೇವಿ

ಬಲ್ಲಾಳ I ವಿಷ್ಣುವರ್ಧನ (ಬಿಟ್ಟಿಗ, ಬಿಟ್ಟಿದೇವ) ಉದಯಾದಿತ್ಯ (ಏನಯಾದಿತ್ಯ)

ಪತ್ನಿ ಶಾಂತಲದೇವಿ
ಲಕ್ಷ್ಮಾದೇವಿ
ಬಮ್ಮಲದೇವಿ
ಚಂದಲದೇವಿ

ನರಸಿಂಹ I
ಪತ್ನಿ ಮಹಾದೇವಿ
ಮೈಲಳದೇವಿ

ಬಲ್ಲಾಳ II
ಪತ್ನಿ ಪದ್ಮಲದೇವಿ

ನರಸಿಂಹ II
ಪತ್ನಿ ಕಾಳಲದೇವಿ

ಸೋಮೇಶ್ವರ (ಸೋವಿದೇವ)
ಪತ್ನಿ ಬಿಜ್ಜಲದೇವಿ

ನರಸಿಂಹ III

ಬಲ್ಲಾಳ III

ಹೊಯ್ಸಳರು ಸೊಸೆವೂರು, ಬೇಲೂರು ಹಾಗೂ ದೋರಸಮುದ್ರಗಳಿಂದ ಮಾತ್ರವಲ್ಲದ ತಲಕಾಡು, ಬಂಕಾಪುರ, ಕೋಲಾಲ, ಹಳ್ಳದಬೀಡು, ಕಣ್ಣಾನೂರು, ಲೊಕ್ಕಿಗುಂಡಿ ಮುಂತಾದ ನೆಲೆವೀಡುಗಳಿಂದ ರಾಜ್ಯಭಾರ ನಡೆಸಿದರೆಂಬುದು ಇಲ್ಲಿನ ಶಾಸನಗಳಿಂದ ವ್ಯಕ್ತವಾಗುತ್ತದೆ. ಸಮಕಾಲೀನ ರಾಜಮನೆತನಗಳಾದ ಚೋಳ, ಚಾಳುಕ್ಯ, ಕಳಚೂರಿ, ಸೇವುಣ, ಕೊಂಗಾಳ್ವ, ಚಂಗಾಳ್ವ, ಪಾಂಡ್ಯ, ಕದಂಬ ಮತ್ತಿತರ

ರೊಡನೆ ಹೋರಾಟ ನಡೆಸಿದ ವಿಷಯವನ್ನು ಇಲ್ಲಿನ ಶಾಸನಗಳಿಂದ ಸ್ಥೂಲವಾಗಿ ತಿಳಿಯಬಹುದು,

ಕೆಲವು ಸಾಂಸ್ಕೃತಿಕ ಅಂಶಗಳು

ಹೊಯ್ಸಳರ ಕಾಲದ ಸಮಾಜದಲ್ಲಿ ವರ್ಣಾಶ್ರಮ ಪದ್ಧತಿ ಅಸ್ತಿತ್ವದಲ್ಲಿತ್ತು. ಆದರೆ ಜಾತಿಪದ್ಧತಿ ಕಟ್ಟುನಿಟ್ಟಿನದಾಗಿರಲಿಲ್ಲ. ಪತಿ ಪತ್ನಿಯರು ಬೇರೆ ಬೇರೆ ಧರ್ಮದ ಅಥವಾ ಬೇರೆ ಬೇರೆ ಜಾತಿಗೆ ಸೇರಿದವರಾಗಿ ಕೂಡ ಸಾಮರಸ್ಯದಿಂದ ಬಾಳಿದರು. ಪರಸ್ಪರರ ಧಾರ್ಮಿಕ ಭಾವನೆಗಳನ್ನು ಹೇರುವ ಪ್ರವೃತ್ತಿ ಇರಲಿಲ್ಲ. ದಾಂಪತ್ಯ ಜೀವನಕ್ಕೆ ಧರ್ಮ ಅಡ್ಡಿಯಾಗಲಿಲ್ಲ. ಒಂದು ಸಂಸ್ಕೃತಿಯ ಹಿರಿಮೆ ಅಡಗಿರುವುದು ಇಂಥ ವಿಷಯಗಳಲ್ಲಿಯೇ.

ಹೊಯ್ಸಳ ಅರಸರು ಧರ್ಮ ಸಹಿಷ್ಣುತೆಯ ನೀತಿಯನ್ನು ಪಾಲಿಸಿದರು. ವಾಸ್ತವವಾಗಿ ಧರ್ಮ ಮನುಷ್ಯರ ನಡುವಣ ಉಕ್ಕಿನ ತೆರೆಯೇನೂ ಆಗಿರಲಿಲ್ಲ. ಹೀಗಿದ್ದರೂ ಒಮ್ಮೊಮ್ಮೆ ಧಾರ್ಮಿಕ ಸಂಬಂಧದ ವಿವಾದಗಳು ಉದ್ಭವಿಸುತ್ತಿದ್ದವು. 'ದಿವ್ಯ' ಪದ್ಧತಿಯನುಸಾರ ಅವು ತೀರ್ಮಾನಿಸಲ್ಪಡುತ್ತಿದ್ದವು. ಇಂಥವು ಅತ್ಯಪರೂಪ. ಒಂದು ಧರ್ಮದವರನ್ನು ಹೊಗಳುವ ಭರದಲ್ಲಿ ಇನ್ನೊಂದು ಧರ್ಮದವರನ್ನು ತೆಗಳಿದ ನಿದರ್ಶನಗಳೂ ವಿರಳವಾಗಿ ಕಂಡು ಬರುತ್ತದೆ ಎನ್ನುವುದಕ್ಕೆ ಸಂಸ್ಕೃತದಲ್ಲಿರುವ ಈ ಪದ್ಯವನ್ನು ಗಮನಿಸಬಹುದು :

ತಾರಾ ಯೇನ ವಿನಿರ್ಜಿತಾ ಘಟಕುಟೀಗೂಢಾವತಾರಾ ಸಮಂ
ಬೌದ್ಧೈರ್ಯೋ ಧೃತ ಪೀಠಪೀಡಿತ ಕುದೃಗ್ದೇವಾರ್ತ್ಥ ಸೇವಾಂಜಲಿಃ
ಪ್ರಾಯಶ್ಚಿತ್ತಮಿವಾಂಘ್ರಿವಾರಿರಜಃ ಸ್ನಾನಂ ಚ ಯಸ್ಯಾಚರ
ದ್ದೋಷಾಣಾಂ ಸುಗತಸ್ಸ ಕಸ್ಯ ವಿಷಯೋ ದೇವಾಕಳಂಕಃ ಕೃತೀ ॥[44]

ಹರಿಹರರನ್ನು ಸ್ತುತಿಸುವ ವಿಶಾಲಭಾವನೆ ಒಂದೆಡೆ ಕಂಡುಬಂದರೆ ತನ್ನ ಧರ್ಮವೇ ಶ್ರೇಷ್ಠ ಎಂದು ಪ್ರಶಂಸಿಸಿಕೊಳ್ಳುವುದರಲ್ಲಿ ತೃಪ್ತರಾಗದೆ ಪರಧರ್ಮ ಖಂಡಿಸುವ ರೀತಿ ನೀತಿ ಇನ್ನೊಂದೆಡೆ ಗೋಚರಿಸುತ್ತದೆ. ಇದು ಬೌದ್ಧಿಕ ಸ್ತರಕ್ಕಷ್ಟೇ ಸೀಮಿತವಾಗಿತ್ತೆಂದು ತೋರುತ್ತದೆ.

ಹಳ್ಳಿಗಳ ನಡುವೆ ಎಲ್ಲೆಗಳಿಗೆ ಸಂಬಂಧಿಸಿದಂತೆ ವಿವಾದಗಳು ಉದ್ಭವಿಸುತ್ತಿದ್ದವು. ಪರಿಣಾಮವಾಗಿ ಉಂಟಾದ ಹೋರಾಟಗಳಲ್ಲಿ ಕೆಲವರು ಮೃತರಾದದ್ದೂ ಉಂಟು. ಬಸರಾಳು ಮತ್ತು ಕೆರೆಗೋಡುಗಳ[45] ನಡುವೆ ಹಾಗೆಯೇ ತೊಣ್ಣೂರು-ಇಗ್ಗಲೂರುಗಳ [46] ನಡುವೆ, ಭೂಸಂಬಂಧದ ಹೋರಾಟ ನಡೆದವು. ಇನ್ನೂ ಕುತುಹಲಕರವಾದ ಘಟನೆಯೊಂದು ಶಾಸನವೊಂದರಲ್ಲಿ ನಿರೂಪಿತವಾಗಿದೆ. ಕಾಡುವಿಟ್ಟಿಯೊಡನೆ ಯುದ್ಧದಲ್ಲಿ ಹೋರಾಡಿದ ವೀರನೊಬ್ಬನಿಗೆ ಹೊಯ್ಸಳ ಅರಸ ಗರುಡನಹಳ್ಳಿಯಲ್ಲಿ ಭೂದಾನ

ನೀಡಿದ. ಆದರೆ ಮುರುಡಿಪುರದ ಜನರು ತಾಮ್ರಶಾಸನವೊಂದನ್ನು ತೋರಿಸಿ ಆ ಭೂಮಿ ತಮಗೆ ಸೇರಿದ್ದೆಂದು ವಾದಿಸಿ, ಬಲಾತ್ಕಾರದಿಂದ ಅಲ್ಲಿ ಕಲ್ಲುಗಳನ್ನು ನೆಡಲಾಗಿದೆಯೆಂದು ದೂರಿತ್ತರು. ಆಗ ಗರುಡನ ಹಕ್ಕಿಯ ಕಂನ್ನೆಯನೆಂಬಾತ ಭೂಮಿ ತನಗೆ ಸೇರಿದುದೆಂದು ಹೇಳಿ ಈ ಭೂ ವಿವಾದದ ಬಗ್ಗೆ 'ದಿವ್ಯ ಪತ್ರ' ವನ್ನು ಬರೆಸಿ ದೋರಸಮುದ್ರದ ಹೊಯ್ಸಳೇಶ್ವರ ಸನ್ನಿಧಿಯಲ್ಲಿ ದಿವ್ಯ ಹಿಡಿದು ಗೆದ್ದ.[47]

ಪಶುಕರುಗಳನ್ನು ಅಪಹರಿಸಿದ ನಿದರ್ಶನಗಳುಂಟು. ಅಂಥ ಸಂದರ್ಭಗಳಲ್ಲಿ ಅವುಗಳ ರಕ್ಷಣೆಗಾಗಿ ಕಾದಿ ಮಡಿದ ಹಲವರನ್ನು ವೀರಗಲ್ಲು ಶಾಸನಗಳು ಹೆಸರಿಸುತ್ತವೆ. ಕಡಿಲವಾಗಿಲ ಭೂಮಿಕಾರ ಕಾಮಯನಾಯಕ ಮರಣಿಸಿದುದು ಇಂಥ ಒಂದು ತುರುಗಾಳಗದಲ್ಲಿ.[48] ಇಂಥ ಹೋರಾಟಗಳಲ್ಲಿ ಸೆಟ್ಟಿಯಣ, ಸಾಲಗವುಂಡ, ಮಲ್ಲಿಯಣ ಹಾಗೂ ಆತನ ತಮ್ಮ ಮುಂತಾದ ಹಲವಾರು ಕಾದಿ ಮಡಿದರು. ಬೀರಗೌಡನಹಳ್ಳಿಯ ಅಸಗರ ಗೋರವ ಮೃತನಾದುದು ಹಂದಿಯೊಡನೆ ನಡೆದ ಹೋರಾಟದಲ್ಲಿ.[49] ಹಾಗೆಯೇ ಊರ ರಕ್ಷಣೆಯಲ್ಲಿ ನಿರತರಾಗಿ ಮಡಿದ ವೀರರೂ ಇದ್ದಾರೆ. ತನ್ನೂರ ಮೇಲೆ ದಾಳಿಯಾದಾಗ ಮನ್ನೆಯನಾರಸಿಂಗ ಹೋರಾಡಿ ಮೃತನಾದ ; ಅವನ ಕುಟುಂಬದವರಿಗೆ ಭೂ ಪ್ರದೇಶ ನೆತ್ತರುಗೊಡಗೆಯಾಗಿ ಸಂದಿತು.[50] ಹೊಯ್ಸಳನಾಯಕನ ದಾಳಿಯಲ್ಲಿ ಕೇತಣ, ಬೆಗೆವಡದ ಊರಳಿವಿನಲ್ಲಿ ಬಾಚಗಾವುಡ, ತೆಂಕಣಹಳ್ಳಿಯ ಊರಳಿವಿನಲ್ಲಿ ಮಾರಪ್ಪ ಮತ್ತು ಮಾದೆಯ ಮುಂತಾದವರು ಮರಣಿಸಿದರು. ಆತ್ಮಾಹುತಿಯ ಇನ್ನೊಂದು ರೀತಿಯನ್ನು ರಾಯಸೆಟ್ಟಿಪುರದ ಶಾಸನದಲ್ಲಿ[51] ಕಾಣಬಹುದು. ಕೆರೆಗೋಡನಾಡ ಬಿದಿರಕೋಟೆ ಗ್ರಾಮಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಕಾಲದಲ್ಲಿ ನೀಡಲಾದ ದಾನಗಳನ್ನು ಕುರಿತಾಗಿದೆ ಈ ಶಾಸನ. ಮೊದಲು ಬಲ್ಲಾಳನ ಕಾಲದಲ್ಲಿ ಮಲ್ಲೆಯನಾಯಕ ಮತ್ತು ಸೋಮಯನಾಯಕರು ಕೆಲವು ವೀರಶೈವರಿಗೆ ಬಿದಿರಕೋಟೆಯನ್ನು ಶಿವಪುರವನ್ನಾಗಿ ಮಾಡಿ ದತ್ತಿ ಬಿಟ್ಟರು. ಆದರೆ ಮುಂದೆ ಈ ಗ್ರಾಮವನ್ನು ಮಾದೆಯನಾಯಕ ಮುತ್ತಿ ವಶಪಡಿಸಿಕೊಂಡ : ಅದನ್ನು ವೀರಶೈವರಿಗೆ ಬಿಟ್ಟುಕೊಡಲು ಒಪ್ಪಲಿಲ್ಲ. ಆಗ ವೀರಮಲ್ಲಯ್ಯ ಎಂಬಾತ—ಹೇಗೆಂದು ಸ್ಪಷ್ಟಪಡುವುದಿಲ್ಲವಾದರೂ—ಅದನ್ನು ಪಡೆದು ವೀರಶೈವರಿಗೆ ಸೋಮನಾಥಪುರದ ಹೆಸರಿನಲ್ಲಿ ದಾನಪತ್ರ. ಆದರೆ ಆತ ಆತ್ಮಾಹುತಿಯಾಗಬೇಕಾಯಿತೆಂದು ತೋರುತ್ತದೆ.

ಇಂದಿಗೂ ಜ್ವಲಂತ ಸಮಸ್ಯೆಯಾಗಿರುವ ಸತಿ ಪದ್ಧತಿಯ ಅನುಸರಣೆಯ ಉದಾಹರಣೆಗಳನ್ನು ಕೆಲವು ಶಾಸನಗಳಲ್ಲಿ ಕಾಣಬಹುದು. ಸಾಮಂತ ಸೋಮನ ಮಗ ಮಾರದೇವ ಮೃತನಾದಾಗ ಆತನೊಡನೆ ಮಹಾದೇವಿ ಸಹಗಮನ ಮಾಡಿದಳು.[52]

ಅಧಿಕಾರಿಗಳೂ ಪ್ರಜೆಗಳೂ ಅರಸನಿಗೆ ನಿಷ್ಠರಾಗಿದ್ದರು. ಅರಸನಿಗಾಗಿ ರಾಜ್ಯಕ್ಕಾಗಿ ಪ್ರಾಣಾರ್ಪಣೆಗೆ ಹಿಂಜರಿಯುತ್ತಿರಲಿಲ್ಲ. ಗರುಡಪದ್ಧತಿಯಂತೂ ಸ್ವಾಮಿನಿಷ್ಠೆಯ ಪರಮಾವಧಿ. ಅಗ್ರಹಾರ ಬಾಚಹಳ್ಳಿಯ ಶಾಸನವೊಂದು[53] ಹೊಯ್ಸಳ ಅರಸರೊಡನೆ

ಗೌಡರಾದವರ ಪಟ್ಟಿಯನ್ನು ನೀಡುತ್ತದೆ. ಹೊಯ್ಸಳ ಬಲ್ಲಾಳನಿಗೆ ಗರುಡ ರಾದವರು ಗಂಡಗಾರಯ್ಯನೆಂಬವನು ಮತ್ತು ಅವನ ಹೆಂಡತಿ ಮಾದವ್ವನಾಯಕಿ : ಬಿಟ್ಟಿದೇವ ಅಥವಾ ವಿಷ್ಣುವರ್ಧನನಿಗೆ ಸೋಮೇಶ್ವರನು ಮತ್ತು ಮಾಚವ್ವನಾಯಕಿ: ಒಂದನೆಯ ನರಸಿಂಹನಿಗೆ ಸೋಮೆಯನಾಯಕ. ಮಾರವ್ವ, ಚಿಕ್ಕ ಮಾದವ್ವ ಹಾಗೂ [illegible] ಜನ ಲೆಂಕರು : ಇಮ್ಮಡಿ ಬಲ್ಲಾಳನಿಗೆ [illegible]ನಾಯಕ ಮತ್ತು [illegible] ಜನ ಲೆಂಕರು : ಇಮ್ಮಡಿ ನರಸಿಂಹನಿಗೆ [illegible]ನಾಯಕ. ಗಂಗಾದೇವಿ ಹಾಗೂ ಮೂವರು ಲೆಂಕರು : ಸೋಮೇಶ್ವರ ಪ್ರಭುವಾದಾಗ ಕಂಚೆಯನಾಯಕ. ಮಾದವ್ವ, ಕಲ್ಲವ್ವ, ಬಾಚವ್ವ, ಹತ್ತು ಮಂದಿ ಲೆಂಕತಿಯರು ಹಾಗೂ ಇಪ್ಪತ್ತೆಂಟು ಮಂದಿ ಲೆಂಕರು "ಆರುವಾರಿ ಗರುಡವನ್ನು" ಧಾರೆಯನ್ನು ಸ್ವೀಕರಿಸಿದರು. ಹಾಗೆಯೇ ಮುಮ್ಮಡಿ ನರಸಿಂಹನೊಡನೆ ರಂಗೆಯನಾಯಕ, ಕೇತವ್ವ, ಹೊನ್ನವ್ವೆ, ಮಂಚವ್ವೆ, ಹತ್ತು ಜನ ಲೆಂಕಿತಿಯರು ಮತ್ತು ಇಪ್ಪತ್ತೆಂಟು ಮಂದಿ ಲೆಂಕರು ಗರುಡರಾಗಿ [illegible] [illegible] ತೀರದು ಬರುತ್ತದೆ. ಇದರಿಂದ ಅಂದಿನ ಜೀವನದಲ್ಲಿ ಗರುಡ ಪದ್ಧ ತಿಗೆ ಹಾಗೂ ಸ್ವಾಮಿಭಕ್ತಿಗೆ ಮಹತ್ವಕೊಟ್ಟಿರುವುದು ತಿಳಿದುಬರುತ್ತದೆ.

[illegible] ಕ್ರಿ.ಶ 1221 ರಲ್ಲಿ [illegible] ಕ್ರಿ.ಶ 1242 ರಲ್ಲಿ [illegible] ಶಾಸನ[54] [illegible] ಹಾಳಸಲಾಯಿತು.

[illegible] ಕಾಲದಲ್ಲಿ [illegible] ಇಮ್ಮಡಿ ಬಲ್ಲಾಳನ ಕಾಲದಲ್ಲಿ ಮಹಾಮಂಡಲೇಶ್ವರ ಕೇಶವರಸ [illegible] ಸ್ಥಾಪಿಸಿದರು.[55] [illegible] ಮುಂತಾದ ಹಳ್ಳಿಗಳು ಪಟ್ಟಣಗಳಾಗಿ ಪರಿವರ್ತಿತವಾದುವು.

ಅನೇಕ ಹಳ್ಳಿಗಳು ಹೊಸ ಹೆಸರು ಪಡೆದು ಅಗ್ರಹಾರಗಳಾದವು. [illegible] ಮಂಗಲವಾಯಿತು : [illegible] ಶ್ರೀ [illegible] ಎಂಬ ಹೆಸರು ಬಂತು ; [illegible] ಅಗ್ರಹಾರ [illegible] ಮಂಗಲ, ನಾಗಮಂಗಲಕ್ಕೆ [illegible] ಭಟ್ಟರತ್ನಾಕರ ಅಗ್ರಹಾರ,

ಬೆಳ್ಳೂರಿಗೆ ಸರ್ವಸಮಸ್ತ ಅಗ್ರಹಾರ ಉದ್ಭವನಾರಸಿಂಹಪುರ, ಗುತ್ತಲಿಗೆ ಮಲ್ಲಿಕಾರ್ಜುನಪುರ ಹಾಗೂ ಯಾದವ ನಾರಾಯಣಪುರ, ಬೆಳಗೊಳಕ್ಕೆ ವಿಷ್ಣುವರ್ಧನ ಪೊಯ್ಸಳದೇವ ಚತುರ್ವೇದಿ ಮಂಗಲ, ಶ್ರೀರಂಗಪಟ್ಟಣಕ್ಕೆ ತಿರುವನಾರಾಯಣ ಚತುರ್ವೇದಿ ಮಂಗಲ. ದೊಡ್ಡ ಅರಸಿಕೆರೆಗೆ ಮುಮ್ಮುರಿ ಚತುರ್ವೇದಿ ಮಂಗಲ, ತಗಲೂರ ಹಳ್ಳಿಗೆ ಮಾಧವ ಪಟ್ಟಣ ಇತ್ಯಾದಿ. ಹೀಗೆ ಹಲವು ಹಳ್ಳಿಗಳಿಗೆ ಹೊಸ ಹೆಸರು ಬಂದರೂ ಕೆಲವು ಕಾಲದಲ್ಲಿಯೇ ಅವು ತಮ್ಮ ಹಳೆಯ ಹೆಸರನ್ನೇ ಉಳಿಸಿಕೊಂಡದ್ದನ್ನು ಕಾಣುತ್ತೇವೆ. ಈಗಿನ ಮಂಡ್ಯ ಕೂಡ ಬೇರೆ ಶಾಸನಗಳಿಗೂ ಹೆಚ್ಚಿನ ಇತಿಹಾಸ ಹೊಂದಿರುವ ಸ್ಥಳ. 1276 ರಲ್ಲಿ ಅದು 'ಶ್ರೀಭುವನಾದಿಯಗ್ರಹಾರ ಮಂಡೆಯಂ' ವಾಗಿದ್ದಿತು[56] : 1267 ರಲ್ಲಿಯೇ ಮಂಡ್ಯದ ಉಲ್ಲೇಖ ಕಾಣಸಿಗುತ್ತದೆ.[57]

ಹೊಯ್ಸಳರ ಕಾಲದಲ್ಲಿ ಅನೇಕ ಆಡಳಿತ ವಿಭಾಗಗಳಿದ್ದುವು. ಕಳ್ವಪ್ಪು ಅಥವಾ ಕಬ್ಬಹು ಸಾವಿರ ನಾಡಿಗೆ ಕೃಷ್ಣರಾಜಪೇಟೆ ತಾಲ್ಲೂಕಿನ ಮಾಳಿಗೆ ಅಥವಾ ಮಾಳಗೂರು ಕೇಂದ್ರವಾಗಿತ್ತು. ಬನವಸೆ ಸಾವಿರ, ಕೆಳಲೆನಾಡು ಅಥವಾ ಕೆಳಲೆ ಸಹಸ್ರ, ಕಲ್ಕುಣಿನಾಡು ಅಥವಾ ಕಲ್ಕಣಿ-ಎಪ್ಪತ್ತು, ಬಿಡುಗೆನಾಡು. ಬೆಟ್ಟಟ್ಟುನಾಡು, ಕೆರೆಗೋಡುನಾಡು, ಕುಂದೂರುನಾಡು, ಬಡಗಂದೂರುನಾಡು, ಚಿಕ್ಕಗಂಗವಾಡಿ, ಕುರುವಂಕನಾಡು, ಮೊರಸುನಾಡು, ಕುರುಕಿನಾಡು, ಕಿಕ್ಕೇರಿ-ಹನ್ನೆರಡು ಮುಂತಾದ ಹಲವು ನಾಡುಗಳು ಶಾಸನಗಳಲ್ಲಿ ಉಲ್ಲೇಖಿತವಾಗಿವೆ. ಈ ನಾಡುಗಳನ್ನು ಮತ್ತು ಕೆಲವು ಕೇಂದ್ರಗಳನ್ನು ಆಳುತ್ತಿದ್ದ ಅಧಿಕಾರಿಗಳಲ್ಲಿ ಕೆಲವರು ಶಾಸನೋಕ್ತರಾಗಿದ್ದಾರೆ : ಮಂಗಲಕುಲದ ಗಂಡನಾರಾಯಣಸೆಟ್ಟಿ ಹಾಗೂ ಅವನ ಸಂತಸ್ಥರು ಕಬ್ಬಹುನಾಡಿನ ಅಧಿಕಾರಿಗಳಾಗಿದ್ದರು : ಚಿಕ್ಕ ಬಂದಾತ ಕಿಕ್ಕೇರಿ-12 ಪ್ರದೇಶವನ್ನಾಳುತ್ತಿದ್ದ : ಗಾ (ಹಾ) [illegible] ಅಥವ ಹೆದ್ದಾರಿಸಾಮಂತ: ಚಿಕ್ಕೆಯನಾಯಕ ಬಂದಾತ ನೊಸಲೆನಾಡನ್ನು ಆಳುತ್ತಿದ್ದ: ರಾಮೆಯನಾಯಕ [illegible] ಪ್ರಭು—ಹೀಗೆ ಪಟ್ಟಿ ಬೆಳೆಯುತ್ತದೆ.

ಮಂಡ್ಯ ಜಿಲ್ಲೆಯ ಶಾಸನಗಳು ಅನೇಕ ಅಧಿಕಾರಿಗಳನ್ನು ಹೆಸರಿಸುತ್ತವೆ. ವಿಷ್ಣುವರ್ಧನನ ಕಾಲದಲ್ಲಿ ಒಡೆಯ ದಂಡನಾಯಕ ಗಂಗರಾಜ, ಮಹಾಪ್ರಧಾನ ಲಿಂಗಪ್ಪಯ್ಯ, ಸಾಮಂತ ಮಾಚೆಯನಾಯಕ, ಲಕ್ಕುಮರಸಿಟ್ಟ, ಮರಿಯಾನೆ ಮತ್ತು ಭರತ ದಂಡನಾಯಕರು. ಬೋಕಣ, ಪುಣಿಸಮಯ್ಯ. ತಂತ್ರಾಧಿಷ್ಠಾಯಕ ಸುರಿಗೆಯ ನಾಗಯ್ಯ, ಯುವರಾಜದಂಡಾಧಿಪ. ಶ್ರೀಕರಣದ ಮಾದಿರಾಜ. ಪಟ್ಟಸ್ವಾಮಿ ಚಿಮ್ಮಣಾಯಿ ಮುಂತಾದವರು ಕೆಲವು ಪ್ರಮುಖ ಅಧಿಕಾರಿಗಳು. ಬಿಟ್ಟಿದೇವ ದಂಡಾಧೀಶ ಎಂಬಾತನ ವರ್ಣನೆ ಇದು :

ನುಡಿದ ನುಡಿ ತಾಂಬ್ರಶಾಸನ
ಪಡೆದ ಧನಂ ಸದುಬುಧಗ್ಗ್ರವಾತ್ಯರೊಳಧಿಕಂ
ಪೊಡವಿಯೊಳೆ ತೋರ್ಪ್ಪ ಸುರತರು
ಪಡೆಮಾತೇಂ ಬಿಟ್ಟಿದೇವ ದಂಡಾಧೀಶಂ ||[58]

ಕಲುಕಣನಾಡನ್ನು ಆಳುತ್ತಿದ್ದ ಸಾಮಂತ ಸೋವೆಯ ನಾಯಕನ ಬಿರುದುಗಳಲ್ಲಿ ತೊಡರ್ದರಪೊಂಕೆ, ತೊಡರೆ ಬಲ್ಗಂಡ ಮುಂತಾದವು ಸೇರಿದ್ದವು. ಈ ಅಧಿಕಾರಿಗಳಲ್ಲಿ ಕೆಲವರು ಒಂದನೆಯ ನರಸಿಂಹ ಹಾಗೂ ಇಮ್ಮಡಿ ಬಲ್ಲಾಳರ ಕಾಲದಲ್ಲಿಯೂ ಇದ್ದರು. ಉದಾಹರಣೆಗೆ ಸುರಿಗೆಯ ನಾಗಯ್ಯ. ಕಾರಿಕುಡಿ ಕೂತ್ತಾಂಡಿ ದಂಡನಾಯಕ, ಮಹಾಪಸಾಯಿತ ಮಾಚಯ್ಯ, ದಂಡನಾಯಕ ಅಚ್ಯುತಿಮಯ್ಯ, ಮಹಾಪ್ರಧಾನ ದಾಮಣ್ಣ, ಶ್ರೀಕರಣದ ಹೆಗ್ಗಡೆ ಎರೆಯಣ್ಣ, ತಂತ್ರಹೆಗ್ಗಡೆ ದೇವರಾಜ, ಕರ್ನಾಟ ವಂಶಕ್ಕೆ ಸೇರಿದ ದಂಡನಾಯಕ ಬಿಟ್ಟಿಯಣ ಮುಂತಾದವರು ನರಸಿಂಹನ ಕಾಲದಲ್ಲಿದ್ದ ಕೆಲವು ಅಧಿಕಾರಿಗಳು. ಇಮ್ಮಡಿ ಬಲ್ಲಾಳನ ಕಾಲದಲ್ಲಿದ್ದ ಅಧಿಕಾರಿಗಳಲ್ಲಿ ಮಹಾಪ್ರಧಾನ ಮಾಚಯ್ಯ. ಮಹಾಪ್ರಧಾನ ದೇವರಾಜ. ಹೆಗ್ಗಡೆ ಕೇಸಿಯಣ್ಣ, ಹೆಗ್ಗಡೆ ಕೊಮ್ಮಣ್ಣ, ಹೆಗ್ಗಡೆ ಮಹದೇವಣ್ಣ. ಮಹಾಪ್ರಧಾನ ಚಂದ್ರಮೌಳಿಯಣ್ಣ, ಬಬ್ಬೆಯ ನಾಯಕ, ವಾಜಿವಂಶದ ಕಂಟಿಮಯ್ಯ, ಹಿರಿಯ ದಂಡನಾಯಕ ಲಕುಮಯ್ಯ, ಮಹಾಪ್ರಧಾನ ವಾಸುದೇವ, ಮಹಾಸಾಮಂತ ಧುಮ್ಮಣ ಅಥವಾ ದುಮ್ಮಯನಾಯಕ, ದೇಕೆಯನಾಯಕ ಮುಂತಾದವರಿದ್ದರು. ಈ ಕಾಲದಲ್ಲಿ ಅಚ್ಯುತಿಮಯ್ಯ ಮತ್ತು ವೀರಯ್ಯ ಎಂಬಿಬ್ಬರು ಯಾದವಗಿರಿಕೋಟೆಯ ರಕ್ಷಾಪಾಳಕರಾಗಿದ್ದರು. ಮಹಾಪ್ರಧಾನ ಹಗ್ಗಡೆಯಣ್ಣ, ಕಾಟದೇವ ಮುಂತಾದವರು ಇಮ್ಮಡಿ ನರಸಿಂಹನ ಕಾಲದಲ್ಲಿದ್ದ ಅಧಿಕಾರಿಗಳು. ಈತನ ಸೇನಾನಿಯಾಗಿದ್ದ ಬಾಹತ್ತರ ನಿಯೋಗಾಧಿಪತಿ ಸೇವುಣರ ಮೇಲೆ ವಿಜಯ ಸಾಧಿಸಿದ ಪರಾಕ್ರಮಿ :

ಕಡುಪಿಂ ಮುತ್ತಿದ ವೀರಸೇವ್ರಣರ ಸೈನ್ಯಾನೀಕಮಂ ಪೊಕ್ಕು ಮು
ಯ್ವೊಡೆ ಕೊಂದಿಕ್ಕಿದನೊಕ್ಕಲಿಕ್ಕಿ ತುಳಿದಂ ಬೆಂಸಟ್ಟಿದಂ ಮುಟ್ಟಿದಂ
ಪಿಡಿದಂ ಸಾಲೆ ತುರಂಗಮಂ ಹರಿಪರಂ ತಂಸೊಂದೆ ಜಾತ್ಯಶ್ವದಿಂ
ಗಡ ವಿಶ್ವಾವನಿ ಮೆಚ್ಚೆ ಮಂತ್ರಿತಿಳಕಂ ವಿದ್ವಿಷ್ಟವಿದ್ರಾವಣಂ ||[59]

ಸೋಮೇಶ್ವರನ ಆಳ್ವಿಕೆಯಲ್ಲಿ ಈ ಪ್ರದೇಶದಲ್ಲಿದ್ದ ಅಧಿಕಾರಿಗಳಲ್ಲಿ ಬಲ್ಲಿಯನಾಯಕ, ಬೋಗಯ್ಯ, ಮುರಾರಿ ಮಲ್ಲಯ್ಯ. ಹರಿಹರ ದಂಡನಾಯಕ ಮುಂತಾದವರು ಸೇರಿದ್ದಾರೆ. ಪೆರುಮಾಳೆ ದಂಡನಾಯಕ, ಮಾಧವ ದಂಡನಾಯಕ, ಸೋಮಯ ದಂಡನಾಯಕ, ಆತನ ಅಳಿಯ ಕೇತಚಮೂಪತಿ. ಚಿಕ್ಕ ಕೇತಯ್ಯ ಮುಂತಾದವರು ಮುಮ್ಮಡಿ ನರಸಿಂಹನ ಕಾಲದಲ್ಲಿ ಅಧಿಕಾರಿಗಳಾಗಿದ್ದರು. ಸಾಮಂತ ಸೋವಿಯನ್ನು ಬಲಗಯ್ಯ ಸೇನಾಧಿಪತಿ ಎಂಬುದಾಗಿ ವರ್ಣಿಸಿದೆ. ಇದು ಸಂಸ್ಕೃತದ ದಕ್ಷಿಣ ಭುಜಾ

ದಂಡದ ಕನ್ನಡ ರೂಪ. 'ಹಟ್ಟಿಗಾಳೆಗಕ್ಕೆ ಮಲೆವ' ಕಾಚಿದೇವ ಎಡಗಯ್ಯ ಸೇನಾನಾಯಕನಾಗಿದ್ದ[60] ಎಂಬುದನ್ನು ಇಲ್ಲಿ ಪ್ರಾಸಂಗಿಕವಾಗಿ ಗಮನಿಸಬಹುದು. ದಾಡಿಯ ಸೋಮೆಯ ದಂಡನಾಯಕ ಮತ್ತು ಆತನ ಮಗ ಬಲ್ಲಪ್ಪ ದಂಡನಾಯಕ ಮುಮ್ಮಡಿ ಬಲ್ಲಾಳನ ಕಾಲದಲ್ಲಿ ಅಧಿಕಾರಿಗಳಾಗಿದ್ದರು. ತೆರಿಗೆ ವಸೂಲಾತಿಗೆ, ಲೆಕ್ಕಪತ್ರಗಳನ್ನಿಡಲು ಹಾಗೂ ಶಾಂತಿ ಮತ್ತು ಕಾನೂನು ವ್ಯವಸ್ಥೆ ನೋಡಿಕೊಳ್ಳಲು ಇತರ ಅನೇಕ ಅಧಿಕಾರಿಗಳು ಬೇರೆ ಬೇರೆ ಹಂತಗಳಲ್ಲಿ ಇದ್ದರು.

ಹೊಯ್ಸಳರ ಕಾಲದಲ್ಲಿ ತೆರಿಗೆಗಳು ಅನೇಕ ತೆರನವು : ಬಾಣ, ಆನೆಸೇಸೆ, ಕಟಕಸೇಸೆ, ಕುದುರೆಸೇಸೆ ಮುಂತಾದ ಸೇಸೆಗಳು, ಸಿದ್ಧಾಯ, ಅಳಿವು, ಅನ್ಯಾಯ, ಪುತ್ರೋತ್ಸಾಹ, ಅಂಗಡಿತೆರೆ, ಹೋಳಿಯ ಸುಂಕ, ಆಡುದೆರೆ, ಆಳ್ದೆರೆ, ಕಬ್ಬಿಲದೆರೆ, ಮನೆಸುಂಕ, ಮಗ್ಗದೆರೆ, ಪಟ್ಟಬಂಧ, ಬಾಸಿಗದೆರೆ, ಹೊಂಬಳಿ, ಮಳಬ್ರಯ, ಮಲ್ಲಿಗೆ, ಸೊಲ್ಲಿಗೆ, ಬೆಡಗೂಳು, ದಂಡಿನಭ್ಯಾಗತೆ ಇತ್ಯಾದಿ ಬಿಡತಿ ಇಟ್ಟರ ಪಾವಾಡಿ ಪ್ರಾಯಶಃ ಬಿಡದಿಯ ಮೇಲೆ ವಿಧಿಸಿದ ತೆರಿಗೆ ಎಂದು ಅರ್ಥೈಸಿದೆ. ಕಜ್ಜಿಲವಡಿ ಎಂಬುದೊಂದು ತೆರಿಗೆ. ಇಂಥ ಕೆಲವು ತೆರಿಗೆಗಳನ್ನು ಶಾಸನಗಳು ಹೆಸರಿಸುತ್ತವೆ. ಆದರೆ ಇವುಗಳ ಅರ್ಥ ಸ್ಪಷ್ಟವಿಲ್ಲ. ಮಾರಹಳ್ಳಿಯ ಶಾಸನವೊಂದು[61] ಸುಂಕ ವಿವರಗಳನ್ನು ನೀಡುತ್ತದೆ: ಅಡಕೆ, ಮೆಣಸು, ನೂಲು, ಶಿಲೆ ಇತ್ಯಾದಿ ಸಾಮಗ್ರಿಗಳಾದರೆ 'ಎತ್ತಿನ ಹೇಱಿಂಗೆ ವೀಸ ಕತ್ತೆಯ ಹೇಱಿಗೆ ಹುಲಿ ವೀಸ' : ಉಪ್ಪು ಎಳು ಎತ್ತಿನ ಹೇರುಗಳಿಗೆ ಹುಲಿವೀಸ.

ಕೆರೆಕಟ್ಟೆಗಳನ್ನು ತೋಡಿಸುವುದು, ದೇಗುಲ ಬಸದಿಗಳನ್ನು ನಿರ್ಮಿಸುವುದು ಹಾಗೂ ಅವನ್ನು ಜೀರ್ಣೋದ್ಧಾರಗೊಳಿಸುವುದು ಪುಣ್ಯದ ಕೆಲಸವೆಂಬ ಭಾವನೆ ಎಲ್ಲರಲ್ಲಿಯೂ ಬೇರೂರಿತ್ತು. ಹೀಗೆ ಕಟ್ಟಿಸಿದ ರಚನೆಗಳು ಅರಸನ ಹೆಸರಿನಲ್ಲೋ ಅಥವಾ ತಮ್ಮ ತಂದೆತಾಯಿಯರ ಹೆಸರಿನಲ್ಲೋ ಇರುತ್ತಿದ್ದುದು ಸ್ವಾಭಾವಿಕವೇ. ಮಂಡ್ಯ ಜಿಲ್ಲೆಯ ಹೊಯ್ಸಳ ಶಾಸನಗಳಲ್ಲಿ ನಗರಸಮುದ್ರ, ಹೊಯ್ಸಳಸಮುದ್ರ, ದುಮ್ಮಸಮುದ್ರ, ಮಣಿಯಮ್ಮನಕೆರೆ, ಹುಳ್ಳಗಟ್ಟ, ಮಸಣಮುದ್ರ, ಗುಜ್ಜವೆನಾಯಕಿತಿಯಕೆರೆ, ಹರದಸಮುದ್ರ, ಮಾಚಸಮುದ್ರ, ಮರಿಯಾನೆಸಮುದ್ರ, ಮಾಕಸಮುದ್ರ ಇತ್ಯಾದಿ ಕೆರೆಗಳು ಉಕ್ತವಾಗಿವೆ. ಒಡಗೆರೆಮಲ್ಲ ಹಾಗೂ ಕನ್ನಗೆರೆಮಲ್ಲರನ್ನೂ ಶಾಸನಗಳಲ್ಲಿ ಕಾಣಬಹುದು.

ಜೈನಧರ್ಮಕ್ಕೆ ರಾಜಾಶ್ರಯ ಜನಾಶ್ರಯ ಲಭ್ಯವಾಗಿತ್ತು. ಅನೇಕ ಜಿನಾಲಯಗಳು ನಿರ್ಮಿತವಾದವು. ಮಾಣಿಕ್ಯಪ್ರೊಳಲಿನ ಹೊಯ್ಸಳ ಜಿನಾಲಯ, ಬೋಗಾದಿಯ ಶ್ರೀಕರಣ ಜಿನಾಲಯ, ಪ್ರಾಯಶಃ ಶ್ರವಣಹಳ್ಳಿಯಲ್ಲಿದ್ದ ವೀರಕೊಂಗಾಳ್ವ ಜಿನಾಲಯ, ಹೆಬ್ಬಿದಿರೂರುವಾಡಿಯ ಪಾರ್ಶ್ವನಾಥ ಜಿನಾಲಯ ಮತ್ತು ಕ್ಯಾತನಹಳ್ಳಿಯ ಕೊಡೆಹಾಳ ಬಸದಿ ಮುಂತಾದವುಗಳನ್ನು ಶಾಸನಗಳು ಉಲ್ಲೇಖಿಸುತ್ತವೆ. ಕಂಬದಹಳ್ಳಿಯ ಪಂಚಕೂಟ ಬಸದಿ ಗಮನಿಸಬೇಕಾದ ವಾಸ್ತುರಚನೆ. ವಡಿಗನಕೆರೆಯ

ಪಂಚಬಸದಿಗಳೊಳಗೆ ನಾಲ್ಕು ದೇಸಿಗಣಕ್ಕೆ ಮತ್ತು ಉಳಿದೊಂದು ಕಾಣೂರ್ಗಣಕ್ಕೆ ಸೇರಿತ್ತು. [illegible] ಬಸದಿಯನ್ನು [illegible] ಕಟ್ಟಿಸಿದ. [illegible] ಒಂದು ಪ್ರಮುಖ ಜೈನ ಕೇಂದ್ರವಾಗಿತ್ತು.

[illegible] ಗಂಗರಾಜ [illegible] ಅರಸನಿಂದ 'ಅಪಸ್ವಾಮ' [illegible] ಚಂದ್ರ ಸಿದ್ಧಾಂತದೇವನಿಗೆ [illegible].[62] ಹೀಗೆ [illegible] ಸ್ಥಳವನ್ನು ಪಡೆದು ಜಿನಪೂಜೆಗೆ [illegible] ಮಲ್ಲಿನೊಡನೆ [illegible] ಮುಂದಗೆರೆ ಪ್ರದೇಶಕ್ಕೆ [illegible] ದೇವರಿಗೆ ದಾನವಿತ್ತನು.[63] [illegible] ಸಿದ್ಧಾಂತದೇವ, [illegible] ಅಧ್ಯಾತ್ಮಿ ಬಾಲಚಂದ್ರ, ರಾಜಗುರು ಗುಮ್ಮಟದೇವ ಮುಂತಾದ ಜೈನಾಚಾರ್ಯರನ್ನು ಶಾಸನಗಳು ಉಲ್ಲೇಖಿಸುತ್ತವೆ.

ವೈಷ್ಣವ-ಶೈವಧರ್ಮಗಳೂ [illegible] ಪಡೆದಿದ್ದುವು. [illegible] ಮತ್ತು [illegible] ಅದರ [illegible][64] [illegible] ಮತ್ತು [illegible].[65] [illegible] ಕಲ್ಲಗನ್ನಡ [illegible].[66] [illegible] ನಾಯಕನ ಅಕ್ಕ [illegible] ನಿರ್ಮಿಸಿತ್ತು.[67] [illegible] ದೇವಸ್ಥಾನವನ್ನು ಕಟ್ಟಿಸಿದ ಮತ್ತು ಅದರಲ್ಲಿ [illegible] ಸಂತೆ ನಡೆಯುವ ವ್ಯವಸ್ಥೆ ಮಾಡಿದ.[68] [illegible] ದೇವಾಲಯ ಐದು ಗುಡಿಗಳಿಂದ ಕೂಡಿದ [illegible] ಮಲ್ಲಿತಮ್ಮ [illegible] ರೂವಾರಿ. ಬಸರಾಳಿನ ಮಲ್ಲಿಕಾರ್ಜುನ ದೇವಾಲಯವನ್ನು [illegible] ದಂಡನಾಯಕನು ಕ್ರಿ.ಶ. 1234 ರಲ್ಲಿ [illegible] ಸಂಗಮೇಶ್ವರ, [illegible] ಇತ್ಯಾದಿ ದೇಗುಲಗಳು ಈ ಕಾಲದ ರಚನೆಗಳು. [illegible] ಲಕ್ಷ್ಮೀನಾರಾಯಣ

ದೇವಸ್ಥಾನ ವಾಸ್ತುಶಿಲ್ಪಗಳ ದೃಷ್ಟಿಯಿಂದ ಗಮನಾರ್ಹವಾದ ತ್ರಿಕೂಟಾಚಲ ರಚನೆ : ಹಾಗೆಯೇ ನಾಗಮಂಗಲದ ಸೌಮ್ಯಕೇಶವಾಲಯ, ಬೆಳ್ಳೂರ ಪ್ರಸನ್ನ ಮಾಧವ, ಮಳವಳ್ಳಿಯ ತಾಳಗ್ರಾಮದ, ಮೊಟುಕೋಳಿಯ ರಾಮೇಶ್ವರಾಲಯ ಮುಂತಾದ ರಚನೆಗಳು ಈ ಶೈಲಿಯವು. ಏಕಕೂಟ-ದ್ವಿಕೂಟಗಳಿಗೂ ಈ ಕಾಲದಲ್ಲಿ ವಿಶೇಷ ಪ್ರಾಧಾನ್ಯ ಪಡೆದುವು. ಶ್ರೀರಂಗಪಟ್ಟಣ ಸಮೀಪದ ಹೊಯ್ಸಳ ಉದಯಾದಿತ್ಯನಿಂದ ಸ್ಥಾಪಿತವಾದ ಅಗ್ರಹಾರ : ಶ್ರೀ ರಂಗನಾಥ ದೇವಾಲಯ ಮೂಲತಃ ಹೊಯ್ಸಳ ಕಾಲದ ರಚನೆ [illegible][69] ಸಂಗತಿ ಗಮನಾರ್ಹ.

ಅಗ್ರಹಾರ ಬಾಚಹಳ್ಳಿ, ಸಂತೇಬಾಚಹಳ್ಳಿ, ಅಘಲಯ, ಶೀಳನೆರೆ, ತೆಂಗಿನಘಟ್ಟ, ಸಿಂದಘಟ್ಟ, ಹೊಸಹೊಳಲು: ಬಿಂಡಿಗನವಿಲೆ, ದುನ್ನಸಂದ್ರ, ಮಾರೆಹಳ್ಳಿ, ಮಾಚಲಘಟ್ಟ, ವರಾಹನಾಥ ಕಲ್ಲಹಳ್ಳಿ ಮುಂತಾದ ಹಲವು ಗ್ರಾಮಗಳಲ್ಲಿರುವ ವಾಸ್ತುಶಿಲ್ಪ ಸಂಪತ್ತು ಹೊಯ್ಸಳ ಕಾಲದ ಸಂಸ್ಕೃತಿಯನ್ನು ಬಿಂಬಿಸುತ್ತವೆ. ದೈನಂದಿನ ಪೂಜೆ ಪುರಸ್ಕಾರಗಳಿಗೆ ವಿಶೇಷೋತ್ಸವಗಳಿಗೆ, ದೇಗುಲದ ಭಂಡಾರದ ಜೀರ್ಣೋದ್ಧಾರಕ್ಕೆ ಅರಸ ಅಧಿಕಾರಿಗಳು ಜನಸಾಮಾನ್ಯ ಭಕ್ತರೂ ಧಾರಾಳವಾಗಿ ದಾನಮಾಡುತ್ತಿದ್ದರು. ಚಂದ್ರಪರ್ವ, ಪಂಚಕೇಶ್ವರ, ಅರಣಪೂಜೆ, ಚೈತ್ರಪವಿತ್ರ ಮುಂತಾದ ವಿಶೇಷ ಸೇವೆಗಳು ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ನಾಗಮಂಗಲ, ದುದ್ದ, ತೊಣ್ಣೂರು, ಮೇಲುಕೋಟೆಯ ಶ್ರೀ ವೈಷ್ಣವ ಮಹಾಜನರು ಪರಿಸೆಟ್ಟಿ ನಾದ ಶ್ರೀವೈಷ್ಣವರಲ್ಲಿ ಸೇರಿದ್ದರೆಂದು ತಿಳಿದು ಬರುತ್ತದೆ.

ಹಿಂದಿನ ಅರಸರು ಕೊಟ್ಟಿದ್ದ ದಾನವನ್ನು ಊರ್ಜಿತಗೊಳಿಸಿ ಪುನರ್ದತ್ತಿ ನೀಡಿದ ಘಟನೆ ಆ ಕಾಲದ ಅರಸರ ಮನೋವೈಶಾಲ್ಯ ಹಾಗೂ ಜೀವನ ಮೌಲ್ಯಗಳನ್ನು ಬಿಂಬಿಸುತ್ತದೆ. ಪೂರ್ವದಲ್ಲಿ ಶಿವಮಾರಸಿಂಹನೆಂಬ ಗಂಗ ಅರಸ ನೀಡಿದ್ದ ದಾನಕ್ಕೆ ಸಂಬಂಧಿಸಿದ ತಾಮ್ರಶಾಸನವನ್ನು ನೋಡಿ, ಓದಿ ಕೇಳಿ ತಿಳಿದ ಅರಸ ವಿಷ್ಣುವರ್ಧನ ಶಿವಪುರದ ಸ್ವಯಂಭೂ ವೈದ್ಯನಾಥ ದೇವರಿಗೆ ಬೆಳಗೂರು ಗ್ರಾಮವನ್ನು ಒಪ್ಪಿಸಿದ.[70] ಇದು ದೇವಾಲಯದ ಪ್ರಾಚೀನತೆಯ ಬಗೆಗೂ ಬೆಳಕು ಬೀರುತ್ತದೆ. ಹೀಗೆಯೇ ಕನ್ನಂಬಾಡಿಯ ಕನ್ನೇಶ್ವರದೇವರಿಗೆ ನೀಡಲಾದ ದತ್ತಿ ಕೂಡ.

ಪಲ್ಲವಕುಲದ ಗೋವಿಂದರ ಮತ್ತು ಚಾಮುಂಡಬ್ಬರಸಿಯರ ಮಗಳೂ ವಿಷ್ಣುವರ್ಧನ ಅರಸಿಯೂ ಆದ ಬಮ್ಮಲದೇವಿ ನಾಗಮಂಗಲದ ಶಂಕರನಾರಾಯಣ ದೇಗುಲವನ್ನು ಜೀರ್ಣೋದ್ಧಾರಗೊಳಿಸಿ, ದೇವರ ಸ್ನಾನಪೂಜಾದಿ ಸೇವೆಗಳಿಗೆ ಅರಿಕನಕಟ್ಟೆ ಎಂಬ ಗ್ರಾಮವನ್ನು ದಾನ ನೀಡಿದಳು.[71] ಬಸರಾಳಿನಲ್ಲಿ ಮಲ್ಲಿಕಾರ್ಜುನ ದೇಗುಲವನ್ನು ಕಟ್ಟಿಸಿದ ಹರಿಹರ ದಂಡನಾಯಕ ಮಾಡಿದ ದಾನ ದೇವಾಲಯದ ತೋಟಿಗ, ಮಾಲೆ

ಗಾರ, ದವಸಿಗ, ಅಂಗರಿಕ, ದೇವರಾರತಿಯ ಸೂಳೆ ಮುಂತಾದವರೆಲ್ಲರಿಗೂ ಸಲ್ಲುತ್ತಿತ್ತು. ವೇದಪಠಣ ಮತ್ತು ಬಾಲಶಿಕ್ಷೆಗಾಗಿ ಸಹ ದಾನ ನೀಡಿದ್ದುಂಟು.

ಹೊಯ್ಸಳ ಅರಸ ಮುಮ್ಮಡಿ ಬಲ್ಲಾಳ ಹರಿಹರಪುರದ ಕಟ್ಟೆಗೆ 'ಬಿಜಯಂಗೆಯ್ದು ಆರೋಗಣೆಯ ಮಾಡಿ ಕಟೆ ಕಾಲುವೆಯ ಚಿತ್ತೈಸಿ' ಆ ಕಟ್ಟೆ ಕಾಲುವೆಗಳ ನಿರ್ವಹಣೆಗಾಗಿ ರಾಜಗುರು ಹರಿಹರಭಟ್ಟೋಪಾಧ್ಯಾಯ ಮತ್ತು ಇತರ ನೂರಿಪ್ಪತ್ತಾರು ಮಹಾಜನರಿಗೆ ಪೆಜ್ಜುಂಕ ಹಾಗೂ ಬಾಡುಸುಂಕಗಳ ಆದಾಯವನ್ನು ನೀಡಿದನೆಂದು ತಿಳಿದು ಬರುತ್ತದೆ.[72] ಹಾಳು ಕೆರೆಗಳನ್ನು ದುರಸ್ತುಗೊಳಿಸಿದ ಉದಾಹರಣೆಗಳನ್ನು ಕಾಣಬಹುದು. ಪೆರುಮಾಳೆ ದಂಡನಾಯಕ ಇಂಥ ಕೆರೆಯೊಂದನ್ನು 'ಒರಿದಹ ಅರ್ತ್ಥವ ನಿಕ್ಕಿ ಧ್ರುವಜಲವಹಂತಾಗಿ' ಕಟ್ಟಿಸಿದ.[73] ನಿಸರ್ಗ ಸಂಪತ್ತನ್ನು ಇಂದಿನ ಹಾಗೆ ಲೂಟಿ ಹೊಡೆಯುತ್ತಿರಲಿಲ್ಲ. ಮರದ ತೋಪುಗಳ ಸ್ಥಾಪನೆಗೂ ಹೊಯ್ಸಳ ಕಾಲದ ಜನಸಾಮಾನ್ಯರು ಗಮನವಿತ್ತಿದ್ದರು. ಬಯಲುಸೀಮೆ ಕೂಡ ಮರಗಿಡಗಳಿಂದ ಕೂಡಿತ್ತು. ಶಾಸನವೊಂದು 928 ಮಾವಿನಮರಗಳಿಂದ ಕೂಡಿದ ಬನವೊಂದನ್ನು ಉಲ್ಲೇಖಿಸುವುದು[74] ಗಮನಾರ್ಹ.

ದೂರದ ಊರಿನ ದೇವಾಲಯಗಳಿಗೂ ಈ ಪ್ರದೇಶದಲ್ಲಿ ದಾನವಿತ್ತಿರುವ ಉದಾಹರಣೆಗಳುಂಟು. ಕಾಂಚಿಪುರದ ಅಲ್ಲಾಳ ಪೆರುಮಾಳುದೇವರಿಗೆ ಶ್ರೀಕರಣದ ಕಲಿಯಣ ಭೂದಾನ ನೀಡಿದ.[75] ಪ್ರಭಾಕರದ (ಒಂದು ವೇದಾಂತ ಶಾಖೆ) ಕೂಮಾಂಡೂರಾಚರ ಹೆಂಡತಿ ಬಯಿಸಾದ್ಯಕೆ ಎಂಬಾಕೆ ಕೇಶವದೇವರಿಗೆ ದಾನವಿತ್ತಳು.[76] ದಾನ ಪಡೆದವರ ಪಟ್ಟಿಯಲ್ಲಿ ಮೇಲೆ ತಿಳಿದ ಜೈನಗುರುಗಳಲ್ಲದೆ ಬಲ್ಲಾಳಜೀಯ, ಮಾಧಜೀಯ, ಸಂಕಜೀಯ, ಬೀಚಜೀಯ, ಸೋಮರಾಸಿಜೀಯ, ಶಿವಯೋಗಿ ಧರ್ಮಪುರಿಭಟ್ಟ, ಸಂಕರಾಸಿ, ಪದ್ಮರಾಸಿ, ಅಮೃತರಾಶಿ ಮುಂತಾದವರು ಸೇರಿದ್ದರು.

ದಂಡನಾಯಕ ಪಚಿರಾಜ ಗೌಡಿಕೆಯ ಉಂಬಳಿಯಾಗಿ ನಾನಲಕೆರೆಯನ್ನು ಪಡೆದನೆಂಬ ಸಂಗತಿ ಗಮನಾರ್ಹ.[77] ತನ್ನ ಸೇನಾನಿ ವೃತ್ತಿಗೆ ಆತ ಪಡೆದ ಸಂಭಾವನೆ ಇದಾಗಿದ್ದಿರಬಹುದು. ಸಾಮಂತ ಸೋಮನ ಮೂಲಪುರುಷ ಅಯ್ಕಣನನ್ನು ಕುರಿತಂತೆ ಒಂದು ಘಟನೆ ಶಾಸನವೊಂದರಲ್ಲಿ ನಿರೂಪಿತವಾಗಿದೆ : ವೀರಗಂಗ ಪೆರ್ಮಾಡಿಯು ಚೋಳರ ಮೇಲೆ ದಂಡೆತ್ತಿ ಹೋಗುತ್ತ ಪೃದುವನಕೆರೆ ಎಂಬಲ್ಲಿ ಬೀಡು ಬಿಟ್ಟಿದ್ದಾಗ ಕಾಡಾನೆಯೊಂದು ಶಿಬಿರದ ಮೇಲೆ ನುಗ್ಗಿತಂತೆ. ಅಯ್ಕಣ ಬಾಣದಿಂದ ಅದನ್ನು ಹೊಡೆದುರುಳಿಸಿದನಂತೆ. ಅಂದಿನಿಂದ ಆತನಿಗೆ ಕರಿಯಯ್ಕಣ ಎಂದು ಹೆಸರಾಯಿತಂತೆ.[78]

ಅಳೀಸಂದ್ರದ ಶಾಸನ[79] ಬೇರೆ ಬೇರೆ ಕಾಲದ ಘಟನೆಗಳನ್ನು ತಿಳಿಸುವ ಒಂದು ಸಂಕೀರ್ಣ ಶಾಸನ. ಹಿರಿಯ ಮರಿಯಾನೆ ಎಂಬಾತನನ್ನು ಹೊಯ್ಸಳ ವಿನಯಾದಿತ್ಯನ ಪತ್ನಿ ಕೆಳೆಯಬ್ಬರಸಿ ತನ್ನ ಸ್ವಂತ ತಮ್ಮನಂತೆ ಬೆಳೆಸಿ, ದೇಕವ್ವೆ ಎಂಬಾಕೆಯನ್ನು ಆತನಿಗೆ ವಿವಾಹ ಮಾಡಿಸಿದಳು ; ಆಸಂದಿನಾಡ ಸಿಂದಗೆರೆಯ ಪ್ರಭುತ್ವವನ್ನು

ಕೊಡಿಸಿಕೊಟ್ಟಳು. ಮರಿಯಾನೆಗೆ ಚಾಮಲೆ ಎಂಬಾಕೆ ಇನ್ನೊಬ್ಬ ಪತ್ನಿ. ಆಕೆಯಲ್ಲಿ ಜನಿಸಿದ "ಪದುಮಲದೇವಿ ಚಾಮಲದೇವಿ ಬೊಪ್ಪಾದೇವಿಯರಿನ್ತೀ ಮೂವರುಂ ಶಾಸ್ತ್ರಗೀತ ನೃತ್ಯದಲು ಪ್ರವೃವೆಯರುಂ ಮೂಜಗದೊಳು ಕಟಕಪಾತ್ರಜಗದಳೆಯ ರೆನಿಸಿ ಬಳೆಯಲಾ ಮೂವರು ಕನ್ಯಕೆಯರನೊಂದೇ ಹಸೆಯೊಳು" ಒಂದನೆಯ ಬಲ್ಲಾಳ ವಿವಾಹ ಮಾಡಿಸಿದ. ಅನೇಕರು ಭಾವಿಸಿದಂತೆ ಆತನೇ ವಿವಾಹವಾಗಲಿಲ್ಲ ; ಆ ಮೂವರ ಮದುವೆ ಒಂದೇ ಹಸೆಯಲ್ಲಿ ನಡೆಯುವ ಏರ್ಪಾಟುಮಾಡಿದ.[80] ಮರಿಯಾನೆ ಮತ್ತು ಭರತೇಶ್ವರ ದಂಡನಾಯಕರು ಭರತನ ಮಗನಿಗೆ ಬಿಟ್ಟಿದೇವನೆಂಬ ಹೆಸರನ್ನಿಟ್ಟು ಸಾವಿರ ಹೊನ್ನನ್ನು ಪಾದಪೂಜೆಯಾಗಿ ಅರಸನಿಗೆ ಒಪ್ಪಿಸಿದರು. ಅರಸ ಮಗುವಿನ 'ಬಾಯ್ಬೆಣ್ಣೆ'ಗೆ ಬಗ್ಗವಳ್ಳಿ ಎಂಬ ಹಳ್ಳಿಯನ್ನು ನೀಡಿದ ಸಂಗತಿಯೂ ಈ ಶಾಸನದಲ್ಲಿ ನಿರೂಪಿತವಾಗಿದೆ.

ಕೆಲವು ಹಳ್ಳಿಗಳ ಹಾಗೂ ವ್ಯಕ್ತಿಗಳ ಹೆಸರು ಕೂಡ ಗಮನಿಸಬೇಕಾದುದು. ಕಡವಳ್ಳಿಯ ಹೆಸರಿನ ಮೂಲರೂಪ ಕದಂಬೆಹಳ್ಳಿ.[81] ಪಾಂಡವಪುರ ತಾಲ್ಲೂಕಿನಲ್ಲಿರುವ ಹಳೆಯವೀಡಿಗೆ ಬನದ ತೊಂಡನೂರು ಎಂಬ ಹೆಸರಿತ್ತು.[82] ಆದರೆ ಅನತಿಕಾಲದಲ್ಲಿಯೇ ಅದಕ್ಕೆ ಈಗಿನ ಹೆಸರು ಪ್ರಾಪ್ತವಾಗಿದ್ದನ್ನು ಕಾಣುತ್ತೇವೆ. ಬೆಳ್ಳೂರಮ, ಕೊಳ್ಳಿಅಯ್ಯ, ಅಯ್ಕಣ, ಬಪ್ಪೆಯ, ಬೋಕಣ, ಸಿಂಗಾಡಿ, ಐಯಾದ್ಯಕೆ, ಬೂಚಲೆ ಮುಂತಾದ ವ್ಯಕ್ತಿ ನಾಮಗಳು ಅಧ್ಯಯನಾರ್ಹ.

ಲಕುಳೀಶ ಸಿದ್ಧಾಂತಕ್ಕೆ ಸೇರಿದ ಶೈವರು ಅಂದರೆ ಎಕ್ಕೋಟಿ ಮಹಾರುದ್ರರು ಕುಬದಹಳ್ಳಿಯ ಬಸದಿಗೆ ಎಕ್ಕೋಟಿ ಜಿನಾಲಯವೆಂಬ ಹೆಸರನ್ನಿತ್ತು ಪಂಚಮಹಾಶಬ್ದ ಗಳನ್ನು ನೀಡಿದರೆಂಬ ಸಂಗತಿ ಕುತೂಹಲಕರವಾಗಿದೆ.[83] ಮರಡಿಪುರದ ಶಾಸನವೊಂದು[84] ಬಹಳ ಮುಖ್ಯವಾದುದು. ಶಿವಶರಣರು, ಕವಿಗಳು ಹಾಗೂ ಅರಸರು ಇದರಲ್ಲಿ ಉಲ್ಲೇಖಿತರಾಗಿದ್ದಾರೆ: "ಮಾರ್ತ್ಯಲೋಕದ ಗಣಂಗಳ ಸ್ತ್ರೀರಿಯಾಳುವ ದಾಸ ದಸವಮ್ಮ ಓಹಿಲ ಉದ್ಭಟ ನಂಬಿ ಕುಂಬಾರಗುಂಡ ಅಂಡವಲ ಕರಿಕಾಲಚೋಳ ಭೋಗದೇವ ಬಾಣ ಮಯೂರ ಕಾಳಿದಾಸ ಕೇಶಿರಾಜದಣ್ಣಾಯಕ ಸುರಿಗೆಯ ಚಲ್ವಡರಾಯ ಸಂಗನ ಬಸವಯ್ಯ ಅನಿಮಿತ ಕೇಸವರಾಜ ಜಗದೇವ ದಣ್ಣಾಯಕ ಏಕಾನ್ತದ ರಾಮಯ್ಯ ಸೊಂನಲಿಗೆಯ ರಾಮಯ್ಯ ಹುಲಿಗೆರೆಯ ಪೊನ್ನಯ ನೆಲುವಿಗೆಯ ಸಾಂತಯ್ಯ" ಹೊಯ್ಸಳ ಬಲ್ಲಾಳನ ಶಾಸನವೊಂದರ ಈ ಭಾಗದ ಅರ್ಥ ಸ್ಪಷ್ಟವಿಲ್ಲ : "ಅಣ್ಣನ ಒಡವೆ ತಮ್ಮಂಗೆ ತಮ್ಮನ ಒಡವೆ ಅಣ್ಣಂಗೆ ಮಾವನ ಒಡವೆ ಅಳಿಯಂಗೆ ಅಳಿಯನ ಒಡವೆ ಮಾವಂಗೆ ಸೇರ್ದುಕೊಂಡು ಸಪ್ರತಿಬದ್ಧದೆ ಗಂಡನುಳ್ಳಡೆ ವಡವೆಯ ಹಳಿಗೆ ಸುಡುವುದು ತೊತ್ತಪ್ಪದೆ ಎಳೆದು ಬಿಸುಡುವುದು ಹಗಲು ಸೂಳೆ ಯಿರುಳು ಸಜ್ಜನೆ ಪೊಡಲಲಿ ಪೊಕ್ಕಲ ರಣಕ್ಕೆ ದಂಡವಿಲ್ಲ ಮತ್ತು ಸತ್ತುದು ಹಣ ತುಂಬಿದುದು ಕಳಗು

ಬಿಸಾಡಿ ಕೊಡುವುದು ಹಾವರಳಿ ದೊರೆಯಿಲ್ಲ."[85] ಈ ಕಾಲಕ್ಕಾಗಲೇ ಭಾಷೆ ಪರಿಶುದ್ಧ ಹ ಹಾದಿಗಿಳಿದುದು ಈ ಭಾಗದಿಂದ ವಿದಿತವಾಗುತ್ತದೆ.

ಹೊಯ್ಸಳರ ಕಾಲಕ್ಕೆ ಅಪ್ರಸಿದ್ಧನಾದ ಗೋಪಯಭಟ್ಟಾರಕ ಎಂಬ ತಪಸ್ವಿಯ ವರ್ಣನೆಯ ಪದ್ಯವಿದು :

ತಳವಳಗನಾಗಿ ಪುಲಿಗಳ
ಗಳಗರ್ಜ್ಜನೆಗಾದಮಳ್ಕಿ ಗುಹೆಯಿಂದಮಣಂ ।
ತಳರದೆ ನೆಲೆಸಿಪ್ಪ ಮನೋ
ಬಳಮುಬ್ಬಿರ್ಗ ಗಗುರ್ವ್ವ ಗೋಪಯಭಟ್ಟಾರಕನ್॥ [86]

ಈ ತಪಸ್ವಿಯ ನಿಜನಾಮಧೇಯ ಜೀವಿಯೋ ಇದ್ದಿರಬೇಕು. ಗಂಡರಾಚಾರ್ಯ ಎಂಬಾತ ಶಿಲ್ಪಕ್ಷೇತ್ರದಲ್ಲಿ ನಿಪುಣನಾಗಿದ್ದನಂತೆ: "ಮಾನು ಮಯ ವಿಶ್ವಕರ್ಮ ತೋರಾಚಾ ಚಾರ್ಯರಪ್ಪ ಹಸ್ತಕುಶಲತೆಯೊಳು ಹೇಮಕರ್ಮ್ಮ ಲೋಹಕರ್ಮ್ಮ ಶಿಲಾಕರ್ಮ್ಮ ರತ್ನ ಕರ್ಮ್ಮ ಕಾಷ್ಟಕರ್ಮ್ಮ ಚಿತ್ರಕರ್ಮ ಪತ್ರಕರ್ಮ ಲಕ್ಷಣ ಸಮಸ್ತ ಹಸ್ತಕುಶಲತೆಯುಳ್ಳ ವಿಶ್ವಕರ್ಮ ನಿರ್ಮಿತ ಮಪಗವಜಾಚಾರ್ಯ"

ಸಾಹಿತ್ಯ :

ಹೊಯ್ಸಳರ ಆಳ್ವಿಕೆಯ ಕೊನೆಗಾಲಕ್ಕೆ ಭಾಷೆಯ ಸೌಂದರ್ಯ, ನಿರೂಪಣೆಯ ಸೊಗಸು ಕುಂದಿತಾದರೂ ಬಿಟ್ಟಿಂದವಲ್ಲಿ ನೋಡಿದಾಗ ತುಂಬ ಸೊಗಸಾದ ಭಾಷೆಯ ಬಳಕೆಯನ್ನು ಗಮನಿಸಬಹುದು. ಕೆಲವು ಪದ್ಯಗಳಂತೂ ಕಾವ್ಯದ ತುಣುಕೆನ್ನಬಹುದು. ಕೆಲವು ಶಾಸನಕವಿಗಳ ಹೆಸರು ಕಾಣಸಿಗುತ್ತವಾದರೂ ಬಹುಪಾಲು ಶಾಸನ ರಚಕರು ಅನಾಮಧೇಯರಾಗಿದ್ದಾರೆ. ಈ ಶಿವಸ್ತುತಿ ಕಣ್ಣಿಗೆ ಕಟ್ಟುವ ಸುಂದರ ಚಿತ್ರವೊಂದನ್ನು ಒದಗಿಸುತ್ತದೆ :

ಪತ್ತಿರೆ ಗಂಗೆಯ ಹನಿಗಳು
ಮುತ್ತಿನ ಬಾಸಿಗಮಿದೆನಿಸಿ ವಾಸುಗಿ ಸುಖದಿಂ !
ಸುತ್ತಿರ್ದ್ದ ಜೂಟದಾದೇ
ಪೋತ್ತಮ ನಮಗೊಸದು ಕೊಡುಗೆ ಸುಖಸಂಪದಮಂ ॥[87]

ವ್ಯಾವಹಾರಿಕ ಭೇದಗಳು ಗೋಚರಿಸಿದರೂ, ಮೇಲ್ನೋಟಕ್ಕೆ ಭಿನ್ನತೆ ಕಂಡು ಬಂದರೂ ಮೂಲತತ್ವ ಒಂದೇ, ಅಭಿನ್ನ ಎನ್ನುವುದನ್ನು ಹೃದಯಸ್ಪರ್ಶಿಯಾಗಿ ಈ ಕೆಳಗಿನ ಪದ್ಯ ಸಾರುತ್ತದೆ :

ಭೇದಂ ಮೂರ್ತಿಯೊಳಲ್ಲದೆ
ಭೇದಂ ಪರಮಾರ್ತ್ಥ ತತ್ವದೊಳು ಸಲ್ಲದೆನಲು ।
ಮೂದೇವರಾದಭೇದದ
ಮಹಾದೇವಂ ದೇವನೀಗೆ ಸುಖಸಂಪದಮಂ ॥

ಹೊಯ್ಸಳ ಸೆಟ್ಟಿ ಎಂಬಾತನಿಗೆ ಶುಭಕೋರುತ್ತ, ಶಿವಪಾರ್ವತಿಯರ ಸುಂದರ ವರ್ಣನೆಯಿಂದ ನಮ್ಮ ಮನ ಸೆಳೆಯುತ್ತದೆ ಈ ಪದ್ಯ :

ಗಿರಿಜೆಯ ಕಣ್ಣಬೆಳುಪಿನೊಳಾತ್ಮ ಶರೀರದ ಬೆಳುಪು ಕುಂತಳೋ
ತ್ಕರದ ಕರ್ಪಿನೊಡನುಣ್ಮುವ ಕಂಠದ ಕಪ್ಪು ಪಲ್ಲವಾ
ಧರದ ಕೆಂಪಿನಳಪ್ಪುವ ಕೆಂಜೆಡೆದೋಗಲಕೆಂಪು ಕೂಡೆ
ತಳುತೆಸೆವೀಶ್ವರ ಕುಡುಗೆ ಹೊಯ್ಸಳಸೆಟ್ಟಿಗಭೀಷ್ಟ ಸಿದ್ಧಿಯ ।[89]

ಇದರ ಛಂದಸ್ಸಿನಲ್ಲಿ ದೋಷವಿದೆಯಾದರೂ ಅದರಿಂದ ಪದ್ಯದ ಸೊಬಗಿಗೇನೂ ಬಾಧಕವಿಲ್ಲ. ಲಿಪಿಕಾರನ ದೋಷದಿಂದಲೋ ಏನೋ ಕೆಲವೊಮ್ಮೆ ಅಪಪಾಠಗಳು ಕಂಡುಬರುವುದುಂಟು.

ಪಾಜಿಕುಳದ ಮಹಾಪ್ರಧಾನ ಕಂಟಮಯ್ಯನ ಮಕ್ಕಳಾದ ಶಿವದೇವ ಹಾಗೂ ಮದುಹಣ "ಬಟ್ಟಿಗೆಯೊಳು ಬರೆದಂತೆ" ಇಪ್ಪರಂತೆ ! ಶಿವನನ್ನು ಕಪಾಳಧರ, ಕರೆಗೊರಳ ಹೆರೆನೊಸಲ, ತುರುಗಿದ ಕೆಂಜೆಡೆಯ ಇತ್ಯಾದಿ ವಿಶೇಷಣಗಳಿಂದ ವರ್ಣಿಸಿರುವುದನ್ನು ಕಾಣುತ್ತೇವೆ. ಸಳನಿಗೆದುರಾದ ಹುಲಿಯ ವರ್ಣನೆಯನ್ನು ಈಗಾಗಲೇ ಗಮನಿಸಿದ್ದೇವೆ.

ಲಾಲನಕೆರೆಯ ಶಾಸನವನ್ನು[90] ಬರೆದವನು ಪ್ರಾಯಶಃ ಶೈವನಾದ ಸಾಂತ–ಮಹಂತ. ಈತ ಸೋವಿಯಕ್ಕನ ಮಗ ಮತ್ತು ಸತ್ಕವಿ ಎಂದು ವರ್ಣಿತನಾದವನು. ಇತರ ವಿವರಗಳೇನೂ ದೊರೆಯುವುದಿಲ್ಲ. ಇದೇ ಗ್ರಾಮದ ಇನ್ನೊಂದು ಶಾಸನವನ್ನು ಶಾಂತಿನಾಥ ಎಂಬಾತ ರಚಿಸಿದ.[91] ಈತನನ್ನು ಶಾಸನದಲ್ಲಿ ಹೀಗೆ ವರ್ಣಿಸಿದೆ :

ದಕ್ಷಿಣ ಹೆಂಮನ ಮಮಂ
ಲಾಕ್ಷಣಗವಿ ಶಾಂತಿನಾಥ ಕವಿಕುಳತಿಳಕಂ ।
ದಾಕ್ಷಿಂಣ್ಯನಿಧಿ ಗುಣೋತ್ಕರ
ಸಿಕ್ಷಾಗುರು ಹೇಳ್ದನತ್ರ್ಶಿಯಿಂ ಸಾಶನಮ ॥

ಎಲೆಕೊಪ್ಪದ ಶಾಸನವೊಂದು ತಪಸ್ವಿ ಗೊಹೆಯಭಟ್ಟಾರಕನನ್ನು ವರ್ಣಿಸುತ್ತದೆ. ಮೂರು ಕಂದಪದ್ಯಗಳಿಂದ ಕೂಡಿದ ಈ ಶಾಸನವನ್ನು ರಚಿಸಿದವನು ಏಳಾಚಾರ್ಯರ ಶಿಷ್ಯನಾದ ಬಿಂಡಯ್ಯ.[92] ಒಳ್ಳೆಯ ಕಾವ್ಯಮಯ ಭಾಷೆಯಲ್ಲಿ ಬಸರಾಳಿನ ಶಾಸನವನ್ನು ರಚಿಸಿದವನು ಸೂಕ್ತಿಸುಧಾರ್ಣವದ ಕರ್ತೃವಾದ ಮಲ್ಲಿಕಾರ್ಜುನನೆಂದು ಗುರುತಿಸಲಾಗಿರುವ, ಪರಮಯೋಗೀಶ್ವರನ ಮಗನಾದ ಕವಿ ಚಿದಾನಂದ.[93] ಅಧ್ಯಾತ್ಮಿ ಬಾಳಚಂದ್ರ, ಕವಿಕಂದರ್ಪ ಮುಂತಾದವರು ಶಾಸನೋಕ್ತ ಕವಿಗಳು.

ನಾಗಮಂಗಲ ತಾಲ್ಲೂಕಿನ ಹೊನ್ನೇನಹಳ್ಳಿಯ ಶಾಸನವನ್ನು ಬ್ರಹ್ಮದೇವ ಎಂಬಾತ ಬರೆದ ಹಾಗೂ ನಂಜೆಯಕೇತೋಜ ವೀರಗಲ್ಲನ್ನು ಸಿದ್ಧಪಡಿಸಿದ.[94] ಬೆಳ್ಳೂರಿನ ಒಂದು ಶಾಸನವನ್ನು ಬರೆದಾತ ಸೇನಬೋವ ಅಲ್ಲಾಳದೇವ[95] ರಾವೋಜನ ಜವನೋಜ ಸಿಂಥಘಟ್ಟದ ಶಾಸನವನ್ನು ಬರೆದ.[96]

ಶಾಸನವನ್ನು ಕಂಡರಿಸಿದ ವ್ಯಕ್ತಿಗಳ ಹೆಸರೂ ನಮಗೆ ಕೆಲವೊಮ್ಮೆ ಲಭ್ಯವಾಗಿವೆ. ಪುರವಕಟ್ಟೆಯ ಶಾಸನವನ್ನು ರೂವಾರಿ ಬಮ್ಮೋಜನ ಮಗ ಪುರದಾಚಾರಿ ಕಂಡರಿಸಿದ.[97] ರೂವಾರಿ ಕಲ್ಕುಟಿಕ ಕೇತೋಜ ಮಾದಿಗೆರೆಯ ಶಾಸನದ ಕಂಡರಣೆಕಾರ.[98] ಕಡ್ಲವಾಗಿಲ ವೀರಗಲ್ಲಿನ 'ರೂವಾರಿವಸು' ಮಾಣಿದಾತ ಪುರದಾಚಾರಿಯ ಮಗ ಮಂಡಳಿಕಾಚಾರಿ.[99] ಪರವಾದಿ ಮಲ್ಲೋಜ ಇನ್ನೊಬ್ಬ ಕಂಡರಣೆಕಾರ.[100]

ಇದು ಮಂಡ್ಯ ಜಿಲ್ಲೆಯ ಹೊಯ್ಸಳ ಶಾಸನಗಳ ಒಂದು ಸಾಮಾನ್ಯ ಸಮೀಕ್ಷೆ ಮಾತ್ರ. ಈ ಶಾಸನಗಳು ಮಂಡ್ಯ ಜಿಲ್ಲೆಯ ಪ್ರಾದೇಶಿಕ ಇತಿಹಾಸವನ್ನು ರೂಪಿಸುವಲ್ಲಿ ಪ್ರಧಾನಪಾತ್ರ ವಹಿಸಿವೆ ಎಂಬುದನ್ನು ಸ್ಥೂಲವಾಗಿ ಪರಿಚಯಿಸುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಎಚ್. ಎಂ. ನಾಗರಾಜರಾವ್

ಅಡಿ ಟಿಪ್ಪಣಿಗಳು

ಈ ಜಿಲ್ಲೆಯ ತಾಲ್ಲೂಕುಗಳಿಗೆ ಈ ಸಂಕೇತಾಕ್ಷರಗಳನ್ನು ಬಳಸಲಾಗಿದೆ : ಕೃಷ್ಣರಾಜಪೇಟೆ-ಕೃಪೇ, ಪಾಂಡವಪುರ–ಪಾಂಪು, ಶ್ರೀರಂಗಪಟ್ಟಣ–ಶ್ರೀಪ, ನಾಗಮಂಗಲ–ನಾಮಂ, ಮಂಡ್ಯ-ಮಂ, ಮದ್ದೂರು–ಮ, ಮಳವಳ್ಳಿ-ಮವ. ಪರಿಷ್ಕೃತ ಎಪಿಗ್ರಾಫಿಯ ಸಂಪುಟದ ಕರ್ನಾಟಿಕ ಸಂಖ್ಯೆಗಳನ್ನು ನೀಡಿದೆ

1. VII ನಾಮಂ-74, ಕಾಲ ಕ್ರಿ. ಶ. 1271, ಬೆಳ್ಳೂರು
2. VI ಕೃಪೇ-39, 1236, ಗೋವಿಂದನಹಳ್ಳಿ
3. VII ನಾಮಂ-72, 1183, ಅಳೀಸಂದ್ರ
4. VI ಕೃಪೇ-37, 1095-96, ಕಿಕ್ಕೇರಿ
5. VII ನಾಮಂ-118, 1178, ಹಟ್ಟಣ
6. VII ನಾಮಂ-63, 1165, ಲಾಲನಕೆರೆ
7. ಅದೇ
8. VI ಕೃಪೇ-72, 1103, ಮಾರುಗೋನಹಳ್ಳಿ
9. VI ಕೃಪೇ-60, 12ನೆಯ ಶತಮಾನ, ನಾಗರಘಟ್ಟ
10. VII ನಾಮಂ-81, 1223-24, ಬೆಳ್ಳೂರು
11. VI ಕೃಪೇ–56, 12ನೆಯ ಶತಮಾನ, ಭದ್ರನಕೊಪ್ಪಲು
12. VI ಕೃಪೇ–73, 12ನೇಯ ಶತಮಾನ, ಹಿರೀಕಳಲೆ
13. VII ನಾಮಂ–64, 1145, ಯಲ್ಲಾದಹಳ್ಳಿ
14. VII ಮ–54, 1117, ತಿಪ್ಪೂರು.

15. ನೋಡಿ ಡಾ. ಎಸ್. ಶ್ರೀಕಂಠಶಾಸ್ತ್ರೀ ಭಾರತೀಯ ಸಂಸ್ಕೃತಿ (1954) ಪು, 109 ಮತ್ತು 141-42
16. VI ಪಾಂಪು-236, 12ನೆಯ ಶತಮಾನ, ಸುಂಕಾತೊಂಡನೂರು
17. VII ನಾಮಂ-118, 1178, ಹಟ್ಟಣ
18. VI ಪಾಂಪ್ರು-229, 12ನೇಯ ಶತಮಾನ, ಹೊಸಕೋಟೆ
19. VI ಕೃಪೇ-66, 1117, ಮಾಳಗೂರು ; ಇತ್ಯಾದಿ.
20. VII ನಾಮಂ-63, 1165, ಲಾಲನಕೆರೆ ; ಇತ್ಯಾದಿ.
21. VII ನಾಮಂ-7, 1134, ನಾಗಮಂಗಲ
22. VI ಕೃಪೇ-21, 12ನೆಯ ಶತಮಾನ, ಶ್ರವಣನಹಳ್ಳಿ
23. VII ನಾಮಂ-64, 1145, ಯಲ್ಲಾದಹಳ್ಳಿ.
24. VI 236, 12ನೆಯ ಶತಮಾನ, ಸುಂಕಾತೊಂಡನೂರು
25. ಅದೇ
26. VII ನಾಮಂ-118, 1178, ಹಟ್ಟಣ
27. VI ಕೃಪೇ-77, 1179, ಅಗ್ರಹಾರಬಾಚಹಳ್ಳಿ
28. VII ನಾಮಂ-80, 1199, ಬೆಳ್ಳೂರು
29. VI ಕೃಪೇ–112, 1200, ಮಡುವಿನಕೋಡಿ
30. VII ನಾಮಂ-173, 1230, ಭೀಮನಹಳ್ಳಿ
31. VII ಮಂ–29, 1234, ಬಸರಾಳು
32. VI ಕೃಪೇ-69, 1234, ಜಾಕನಕೆರೆ
33. VII ನಾಮಂ-104, 1243, ಹೊನ್ನೇನಹಳ್ಳಿ
34. VI ಕೃಪೇ-39, 1236, ಗೋವಿಂದನಹಳ್ಳಿ
35. VI ಕೃಪೆ-98, 1267, ಬೈರಾಪುರ
36. VII ಮಂ-30, 1237, ಬಸರಾಳು
37. ಅದೇ
38. VII ನಾಮಂ-172, 1260, ಕಸಲಗೆರೆ
39. VII ನಾಮಂ-74, 1271, ಬೆಳ್ಳೂರು
40. VI ಕೃಪೇ–100, 1303, ಚಿಟ್ಟನಹಳ್ಳಿ
41. VII ನಾಮಂ-161 ಮತ್ತು 162, 1314, ತಿಬ್ಬನಹಳ್ಳಿ
42. VI ಪಾಂಪು-31, 12ನೆಯ ಶತಮಾನ, ಕನ್ನಂಬಾಡಿ
43. VI ಪಾಂಪು-57, 13-14ನೆಯ ಶತಮಾನ, ತೊಣ್ಣೂರು
44. VII ನಾಮಂ-183, 1144, ಬೋಗಾದಿ

45. VII ಮಂ–23, 1242, (?), ಹಂಪಾಪುರ
46. VII ಮವ-19, 13ನೆಯ ಶತಮಾನ, ದೊಡ್ಡಮುಲಗೋಡು
47. VII ಮಂ–25, 1275, ದೊಡ್ಡಗರುಡನಹಳ್ಳಿ
48. VII ಮ–120, 1192, ಕಡ್ಲವಾಗಿಲು
49. VII ಮ–97, 1264, ಬೆಲ್ಲೂರು
50. VII ಮವ–36, 1219, ಹುಲ್ಲೆಗಾಲ
51. VII ಮಂ-34, 1251, ರಾಯಸೆಟ್ಟಿಪುರ
52. VII ನಾಮಂ–171, 12ನೆಯ ಶತಮಾನ, ಕಸಲಗೆರೆ
53. VI ಕೃಪೇ–84, 1291, ಅಗ್ರಹಾರಬಾಚಹಳ್ಳಿ
54. VII ಮಂ–23, 1242 (?), ಹಂಪಾಪುರ
55. VII ಮವ-18, 1331, ಚಿಕ್ಕಮುಲಗೋಡು
56. VII ಮಂ-56, 1276, ಹೊಸಬೂದನೂರು
57. VI ಕೃಪೇ-98, 1267, ಬೈರಾಪುರ
58. VII ನಾಮಂ-61, 1138, ಆಲನಕೆರೆ
59. VII ಮಂ-29, 1234, ಬಸರಾಳು
60. VII ನಾಮಂ–81, 1223, ಬೆಳ್ಳೂರು
61. VII ಮವ–54, 12-13ನೆಯ ಶತಮಾನ, ಮಾರೆಹಳ್ಳಿ
62. VII ಮ–54, 1117, ತಿಪ್ಪೂರು
63. VI ಕೃಪೇ-21, 12ನೆಯ ಶತಮಾನ, ಶ್ರವಣಸಹಳ್ಳಿ
64. VII ನಾಮಂ–98, 1139,-40, ಮುದಿಗೆರೆ
65. VII ನಾಮಂ-173, 1230 (?), ಭೀಮನಹಳ್ಳಿ
66. VI ಕೃಪೇ-69, 1242, ಜಾಕನಕೆರೆ
67. VI ಕೃಪೇ-98 1267, ಬೈರಾಪುರ.
68. VII ನಾಮಂ–80, 1199, ಬೆಳ್ಳೂರು
69. VII ನಾಮಂ–104, 1243–44, ಹೊನ್ನೇನಹಳ್ಳಿ
70. VII ಮಂ–68, 1132, ವೈದ್ಯನಾಥಪುರ
71. VII ನಾಮಂ–7, 1134, ನಾಗಮಂಗಲ
72. VI ಕೃಪೇ-11, 1322, ಹರಿಹರಪುರ
73. VII ನಾಮಂ-82 ರಿಂದ 84, 1269, ಬೆಳ್ಳೂರು
74. VI ಪಾಂಪು-88, 1157, ತೊಣ್ಣೂರು
75. VI ಪಾಂಪು–64, 1175, ತೊಣ್ಣೂರು

76. VI ಶ್ರೀಪ–98, 1254, ಅರಕೆರೆ
77. VII ನಾಮಂ-62, 1218-19, ಲಾಲನಕೆರೆ
78. VII ನಾಮಂ-169, 1142, ಕಸಲಗೆರೆ
79. VII ನಾಮಂ-72, 1183, ಅಳೀಸಂದ್ರ
80. ಲಕ್ಷಣ ತೆಲಗಾವಿ (ಸಂ) : ಪರಿಶಿಸಿರಿ (1987). ಪು. 671-82
81. VII ಮವ-127 ಮತ್ತು 128. 1183–84, ಕದವಳ್ಳಿ
82. VI ಪಾಂಪು-231, 12–13ನೆಯ ಶತಮಾನ, ಹಳೇಬೀಡು
83. VII ನಾಮಂ–31, 13ನೆಯ ಶತಮಾನ, ಕಂಬದಹಳ್ಳಿ
84. VII ಮಂ-13, 1305, ಮರಡಿಪುರ
85. VII ಮ-52, 13ನೆಯ ಶತಮಾನ, ತಿಪ್ಪೂರು
86. VII ನಾಮಂ-122, 10–11ನೆಯ ಶತಮಾನ, ಎಲೇಕೊಪ್ಪ
87. VII ನಾಮಂ–61, 1138, ಲಾಲನಕೆರೆ
88. VII ನಾಮಂ-63, 1165, ಲಾಲನಕೆರೆ
89. VI ಕೃಪೇ-77, 1179, ಅಗ್ರಹಾರಬಾಚಹಳ್ಳಿ
90. VII ನಾಮಂ-61, 1138, ಲಾಲನಕೆರೆ
91. VII ನಾಮಂ-63, 1165, ಲಾಲನಕೆರೆ
92. VII ನಾಮಂ-122, 10-11ನೆಯ ಶತಮಾನ, ಎಲೇಕೊಪ್ಪ
93. VII ಮಂ–29, 1234, ಬಸರಾಳು
94. VII ನಾಮಂ-106, 1180, ಹೊನ್ನೇನಹಳ್ಳಿ
95. VII ನಾಮಂ-76, 1284, ಬೆಳ್ಳೂರು
96. VI ಕೃಪೇ-86, 1179, ಸಿಂಧಘಟ್ಟ.
97. VII ನಾಮಂ–17, 1139. ಪುರದಕಟ್ಟೆ (ಬೇಚಿರಾಕ್)
98. VII ನಾಮಂ–98, 1139–40, ಮುದಿಗೆರೆ
99. VII ಮ–120, 1192, ಕಡ್ಲವಾಗಿಲು
100. VI ಕೃಪೇ–106, 1165, ಬಸ್ತಿ

ವಿಜಯನಗರದ ಆಡಳಿತದಲ್ಲಿ ಮಂಡ್ಯ ಜಿಲ್ಲೆ

ಮಂಡ್ಯದ ಹೆಸರು ಪ್ರಪ್ರಥಮವಾಗಿ ಕ್ರಿ.ಶ. 1516ನೆಯ ವರ್ಷದ ಕೃಷ್ಣ ದೇವರಾಯನ ಕಾಲದ ತಾಮ್ರಶಾಸನದಲ್ಲಿ ಬಂದಿದೆ. ಈ ಗ್ರಾಮದ ಹೆಸರಿನಲ್ಲಿ ಹೆಚ್ಚಿನ ಬದಲಾವಣೆಯಾಗಿಲ್ಲ. ಅರಸ ಘೃತಪರ್ವತದಾನವನ್ನು ಮಾಡುವ ಸಂದರ್ಭದಲ್ಲಿ ತುಂಗಭದ್ರಾತೀರದ ವಿಠಲೇಶ್ವರನ ಸನ್ನಿಧಿಯಲ್ಲಿ ಧಾತುಸಂವತ್ಸರದ ಕಾರ್ತಿಕ ಪೌರ್ಣಮೆ ಭಾನುವಾರದಂದು ಉಭಯವೇದಾಂತ ತಂತ್ರವ್ಯಾಖ್ಯಾನಗಳಲ್ಲಿ ಪ್ರತಿಷ್ಠರಾದ ವರದಾಚಾರ್ಯರ ಮಕ್ಕಳಾದ ಗೋವಿಂದರಾಜಗುರುಗಳಿಗೆ 'ಮಂತೆಯ' ಎಂಬ ಗ್ರಾಮವನ್ನೂ ಅದಕ್ಕೆ ಸೇರಿದ ಉಪಗ್ರಾಮಗಳಾದ ಚಿಕ್ಕಮಂಟೆಯ, ಕಲ್ಲಹಳ್ಳಿ, ಹೊಸಹಳ್ಳಿ, ತಂಡಸೇಹಳ್ಳಿ ಹಾಗೂ ಕೋಣನಹಳ್ಳಿಗಳನ್ನು ದಾನಮಾಡಿದ್ದಾನೆ. ಇಲ್ಲಿ ಮಂಡ್ಯವನ್ನು 'ಮಂತೆಯ' ಎಂದು ಕರೆದಿದ್ದು ಅದಕ್ಕೆ 'ಚಿಕ್ಕಮಂಟೆಯ' ಎಂಬ ಉಪಗ್ರಾಮವಿದ್ದುದು ಸ್ಪಷ್ಟ. ಈ 'ಮಂತೆಯ' ವೇ ಈಗ 'ಮಂಡ್ಯ' ರೂಪವನ್ನು ಪಡೆದಿದೆ. 'ಮಂತೆಯ' ಗ್ರಾಮವು ಹೊಯ್ಸಳರ ಕಾಲದಲ್ಲಿ 'ಮಂಡೆಯ' ಅಗ್ರಹಾರ ವಾಗಿತ್ತು. ಹೀಗೆ ಅಗ್ರಹಾರವಾಗಿದ್ದ 'ಮಂಡೆಯ' ವಿಜಯನಗರದ ಕಾಲಕ್ಕೆ 'ಮಂತೆಯ' ಗ್ರಾಮವಾಗಿ ಈಗ ಏಳು ತಾಲ್ಲೂಕುಗಳನ್ನೊಳಗೊಂಡ 'ಮಂಡ್ಯ' ಜಿಲ್ಲೆಯಾಗಿ ಬೆಳೆದಿದೆ. ಈಗಿನ ಮಂಡ್ಯ ಜಿಲ್ಲೆಯಲ್ಲಿ ಗಂಗರು, ರಾಷ್ಟ್ರಕೂಟರು, ಹೊಯ್ಸಳರು ತಮ್ಮ ಆಡಳಿತ ವನ್ನು ನಡೆಸಿದ್ದಾರೆಂಬುದಕ್ಕೆ ಇಲ್ಲಿ ದೊರೆತಿರುವ ಶಾಸನಗಳೇ ಪ್ರಮಾಣಗಳು. ಹೊಯ್ಸಳರ ನಂತರ ಈ ಪ್ರದೇಶವನ್ನು ಆಳಿದವರು ವಿಜಯನಗರದ ಅರಸರು. ಒಂದನೆಯ ಬುಕ್ಕನಿಂದ ಮೂರನೆಯ ಶ್ರೀರಂಗನ ವರೆಗೆ ಸು. ಮೂರು ಶತಮಾನಗಳ ಕಾಲ ಈ ಪ್ರದೇಶವನ್ನು ಆಳಿದವರು ವಿಜಯನಗರದ ಅರಸರು ಆಳಿದ್ದಾರೆ. ಈ ಅರಸರಿಗೆ ಸಂಬಂಧಿಸಿದ ಸುಮಾರು 120 ಶಾಸನಗಳು ಈ ಜಿಲ್ಲೆಯಲ್ಲಿ ದೊರಕಿವೆ. ಇಲ್ಲಿ ದೊರಕಿರುವ ಶಾಸನಗಳ ಆಧಾರದಿಂದ ಆ ಕಾಲದ ಇಲ್ಲಿನ ರಾಜಕೀಯ, ಧಾರ್ಮಿಕ–ಸಾಮಾಜಿಕ ವಿಷಯಗಳನ್ನು ಸಂಕ್ಷಿಪ್ತವಾಗಿ ಸಮೀಕ್ಷಿಸುವ ಪ್ರಯತ್ನ ಮಾಡಲಾಗಿದೆ.

ಕ್ರಿ. ಶ. 1358ರ ಆರುವನಹಳ್ಳಿಯ (ಮ. 93)ಯ ಮೊದಲನೆಯ ಬುಕ್ಕನ ಶಾಸನವೇ ವಿಜಯನಗರ ಅರಸರ ಪ್ರಾಚೀನ ಶಾಸನ. ಈ ಶಾಸನದಲ್ಲಿ ವಿಜಯ ನಗರದ ಅರಸರಿಗೆ ಸಾಮಾನ್ಯವಾಗಿ ಬರುವ ಅರಿರಾಯವಿಭಾಡ, ಭಾಷೆಗೆತಪ್ಪುವ ರಾಯರಗಂಡ ಇತ್ಯಾದಿ ಬಿರುದಾವಳಿಗಳೊಂದಿಗೆ ವರ್ತ್ತಮಾನರಾಯಪರಮೇಶ್ವರ,

ಅಭಂಗರಾಯಮದಾನಪಜನಾರ್ದನ, ಶ್ರೀವೀರಸಂಗಮೇಶ್ವರದ ರಾಯರಾಹುತು ಎಂಬ ಪ್ರಶಸ್ತಿಗಳೂ ಇರುವುದು ಗಮನಾರ್ಹ. ಕ್ರಿ.ಶ. 1422–23ರ ಇಮ್ಮಡಿ ಹರಿಹರನ ಮಗ ಚಿಕ್ಕರಾಯನ ಹೆಸರಿರುವ ಅಪರೂಪದ ಶಾಸನ (ಸಂ. 107) ಇಲ್ಲಿದೆ. ದುರದೃಷ್ಟವಶಾತ್ ಶಾಸನ ತ್ರುಟಿತವಾಗಿದ್ದು ಚಿಕ್ಕರಾಯನ ಹೆಸರಿನಲ್ಲಿ ದಾನ ನೀಡಲಾಗಿರುವ ವಿಷಯ ಮಾತ್ರ ತಿಳಿದು ಬರುತ್ತದೆ.

ಶ್ರೀಪ. 93 ಹಾಗೂ ಇನ್ನೂ ಕೆಲವು ಶಾಸನಗಳಲ್ಲಿ ಈ ವಂಶದ ಅರಸರ ವಂಶಾವಳಿಯನ್ನು ಕೊಡುವಾಗ ಬುಕ್ಕರಾಯ, ಹರಿಹರರಾಯ, ದೇವರಾಯ, ವಿಜಯರಾಯ, ಗಜಬೇಂಟೆಕಾರ ಪ್ರೌಢದೇವರಾಯದ ಮಹಾರಾಯರ ಕುಮಾರ ಇಮ್ಮಡಿ ಪ್ರೌಢದೇವರಾಯರಾದ ಮಲ್ಲಿಕಾರ್ಜುನ ಮಹಾರಾಯ ಎಂದು ಹೇಳಿದೆ. ಇಲ್ಲಿ ಉಕ್ತನಾಗಿರುವ ವಿಜಯರಾಯ ಬಹು ಕಾಲ ರಾಜ್ಯಭಾರ ಮಾಡಲಿಲ್ಲ ವೆಂಬುದು ನಿಜ. ಆದರೆ ಕೆಲವು ಕಾಲವಾದರೂ ಆಳಿರಬೇಕೆಂಬ ವಿಚಾರ—"ರಾಜಾಧಿ ರಾಜ ರಾಜ ಪರಮೇಶ್ವರ ಶ್ರೀವೀರ ಪ್ರತಾಪ ವಿಜಯರಾಯ ಮಹಾರಾಯರು ರಾಜ್ಯಂಗೈತಿರಲು"—ಹೊಸಹಳ್ಳಿ (ಸೋಂಪ್ರ. 218)ಯ ಶಾಸನ ತಿಳಿಸುತ್ತದೆ. ಈ ಶಾಸನದ ಕಾಲ ಶಕ 1368 ಕ್ಷಯ ವರುಷ. ಇದು ಕ್ರಿ.ಶ. 1446–47ಕ್ಕೆ ಹೊಂದುತ್ತದೆ. ಆದ್ದರಿಂದ ವಿಜಯರಾಯ ಆಡಳಿತ ನಿರ್ವಹಿಸಿರುವುದು ಸ್ಪಷ್ಟ. ಇದೇ ಕಾಲದಲ್ಲಿ ಅಂದರೆ ಕ್ರಿ.ಶ. 1446–47ರಲ್ಲಿ ಮಲ್ಲಿಕಾರ್ಜುನನೂ ಆಳುತ್ತಿದ್ದನೆಂಬ ವಿಷಯ ಶ್ರೀಪ. 21ರಿಂದ ತಿಳಿಯಬರುವುದು. ಹಾಗಿದ್ದಾಗ್ಯೂ ವಿಜಯರಾಯ ಮಹಾರಾಯರು ರಾಜ್ಯವಾಳುತ್ತಿದ್ದರೆಂಬದನ್ನು ತಿಳಿಸುವ ಹೊಸಹಳ್ಳಿ ಶಾಸನ ಮಹತ್ವ ಪೂರ್ಣವಾದುದು.

ಕ್ರಿ.ಶ. 1549ರ ಸಾವಂ 107ರಲ್ಲಿ ಚಾರಿತ್ರಿಕ ಅಂಶಗಳು ಉಲ್ಲೇಖಿತವಾಗಿವೆ. ಪ್ರಸ್ತುತ ಶಾಸನವು ರಂಗ ಮತ್ತು ತಿಮ್ಮಾಂಬೆಯರ ಮಗ ಸದಾಶಿವರಾಯನ ಆಳ್ವಿಕೆಗೆ ಸಂಬಂಧಿಸಿದೆ. ಅಚ್ಯುತರಾಯನ ನಂತರ ಆತನ ಮಗ ವೆಂಕಟದೇವರಾಯ ಅಲ್ಪಕಾಲ ಆಳಿ ದುರದೃಷ್ಟವಶಾತ್ ಮೃತಿ ಹೊಂದಿದ ಮೇಲೆ ಸದಾಶಿವರಾಯ ತನ್ನ ಸಹೋದರಿಯ ಪತಿ ರಾಮನಿಂದ ಪಟ್ಟಾಭಿಷಿಕ್ತನಾಗಿ ಸಿಂಹಾಸನವನ್ನೇರಿದ ಕುತೂಹಲಕರ ಸಂಗತಿ 'ಸ್ವಭಗಿನೀ ಭರ್ತ್ರಾ ತತ್ರಾಯಿನಾ ರಾಮಕ್ಷ್ಮಾಪತಿನಾಪ್ಯತಿಲಕ್ಯೈಃಕ್ಲ್ಪ್ತಾಭಿಷೇಕೋತ್ಸವಃ' ಎಂಬ ಮಾತುಗಳಿಂದ ತಿಳಿದುಬರುತ್ತದೆ. ಇಲ್ಲಿ ಉಕ್ತನಾಗಿರುವ 'ರಾಮ' ಕೃಷ್ಣದೇವರಾಯನ ಅಳಿಯನಾದ ಅಳಿಯರಾಮರಾಯನೇ ಆಗಿರುವುದಲ್ಲದೆ ಸದಾಶಿವರಾಯನ ಸೋದರಿ ಸಂಬಂಧಿ ತಿರುಮಲಾಂಬೆಯ ಪತಿಯೂ ಹೌದು. ಹೀಗೆ ರಾಮರಾಯನಿಂದ ಸಿಂಹಾಸನವನ್ನೇರಿದ ಸದಾಶಿವ ಸುರಗಿರಿಯ ಶತ್ರುಗಳನ್ನು ನಿಗ್ರಹಿಸಿದ ವಿಷಯ 'ಸುರಗಿರೌ ಸಂಪೃತ್ಯ ವಿದ್ವೇಷಿಣಾ' ಎಂಬ ಮಾತುಗಳಲ್ಲಿ ವ್ಯಕ್ತ

ವಾಗಿದೆ. ಮುಂದೆ ಇದೇ ಶಾಸನದಲ್ಲಿ ಹೊಯ್ಸಣನಾಡು ಪೆನುಗೊಂಡೆ ರಾಜ್ಯಕ್ಕೆ ಸೇರಿತ್ತೆಂದು ಹೇಳಿದೆ. ತುಳುವ ನರಸನಾಯಕನು ಕ್ರಿ.ಶ. 1503ರ ವೇಳೆಗೆ ಮರಣ ಹೊಂದಿದ್ದ ವಿಚಾರ ಸಂತೇಬಾಚಹಳ್ಳಿಯ (ಕೃಪೇ 63) ಶಾಸನ ತಿಳಿಸಿದೆ.

ಕ್ರಿ.ಶ. 1623 ಮ. 64ನೆಯ ತಾಮ್ರಶಾಸ ರಾಮದೇವರಾಯನನ್ನು ಹೆಸರಿಸಿದ್ದರೂ ಮೈಸೂರು ಚಾಮರಾಜೇಂದ್ರನನ್ನು 'ಶ್ರೀರಂಗಪಟ್ಟಣ ಖ್ಯಾತಭೋಜ ಸಿಂಹಾಸನಾಧಿಪಃ' ಎಂದು ಹೇಳಿದೆ. ಈ ವೇಳೆಗಾಗಲೇ ಮೈಸೂರು ಒಡೆಯರು ವಿಜಯನಗರದ ಅರಸರ ಮಾಂಡಲಿಕರಾಗಿದ್ದಾಗ್ಯೂ ಶ್ರೀರಂಗಪಟ್ಟಣದಲ್ಲಿ ತಮ್ಮ ಆಡಳಿತ ನಡೆಸುತ್ತಿದ್ದರೆಂಬ ವಿಚಾರ ಸ್ಪಷ್ಟ, ಕ್ರಿ.ಶ. 1662ನೆಯ ವರ್ಷಕ್ಕೆ ಸೇರಿದ. ಮೂರನೆಯ ಶ್ರೀರಂಗನ ರಾಜ್ಯಭಾರವನ್ನು ನಿರೂಪಿಸುವ ಈ ಶಾಸನವೇ ಈ ಅರಸರ ಕೊನೆಯ ಶಾಸನ. ಈತ ಘನಗಿರಿ (ಪೆನುಗೊಂಡೆ)ಯಿಂದ ಆಳುತ್ತಿದ್ದುದು ಶ್ರೀಪ. 22 ರಿಂದ ತಿಳಿಯುತ್ತದೆ. ಹೀಗೆ ಒಂದನೆಯ ಬುಕ್ಕನಿಂದ ಮೂರನೆಯ ಶ್ರೀರಂಗನವರೆಗೆ ಸುಮಾರು 16 ಅರಸರಿಗೆ ಸಂಬಂಧಿಸಿದ ಶಾಸನಗಳಿದ್ದು ಅವುಗಳಲ್ಲಿ ಕೃಷ್ಣದೇವರಾಯ, ಅಚ್ಯುತದೇವರಾಯ ಹಾಗೂ ಸದಾಶಿವರಾಯನ ಆಳ್ವಿಕೆಗೆ ಸೇರಿದ ಶಾಸನಗಳ ಸಂಖ್ಯೆಯೇ ಮೇಲುಗೈ ಪಡೆದಿವೆ

ಈ ಕಾಲದಲ್ಲಿ ಬರುವ ಕೆಲವು ಪ್ರಮುಖ ಅಧಿಕಾರಿಗಳಲ್ಲಿ ಭಟ್ಟರ ಬಾಚಿಯಪ್ಪನೂ ಒಬ್ಬ. ಮದ್ದೂರು ತಾಲ್ಲೂಕಿನ ಆರುವನ ಹಳ್ಳಿಯ ಹಲವು ಶಾಸನಗಳಲ್ಲಿ ಬಡವಾರ ವಂಶದ ಭಟ್ಟರ ಬಾಚಿಯಪ್ಪನ ಉಲ್ಲೇಖವಿದೆ. ಅಲ್ಲದೆ ಆತನ ವಂಶಾವಳಿಯ ವಿವರವೂ ದೊರೆತಿದೆ. ಆತನ ಹೆಸರಿನೊಂದಿಗಿರುವ ಕೆಲವು ಬಿರುದಾವಳಿ ಗಮನಿಸತಕ್ಕಂತಹವು : ''ಹರಿಹರೇಶ್ವರ ಪದಪಂಕಜ ಮಧುಕರಾಲೋಲುಪ ಭ್ರಮರವನೀಪ ವಾರ್ಧಿಸುಧಾಕರ ರಾಯಭಾವಿಸಿಂಗಾರಸಾರ ..ಬಡವಾರ ಕುಲತಿಲಕ ಲೋಭಿ ರಾಯಗಜಾಂಕುಶ'' ಎಂಬ ಪ್ರಶಸ್ತಿಗಳೊಂದಿಗೆ ''ನೀತಿರಾಯಾಂಬಾಭಾಟು ನೀತಿ ರಾಯಾಂಬಾ ಮೂಲ ಪಹರಾದು ಇಭಾಟು ಸೊನ್ನಾಕೋದಂಡಿ ಸೊನ್ನಾಕೋತ್ಸತಿ'' ಎಂಬ ಕನ್ನಡಕ್ಕೆ ವಿಚಿತ್ರವೆನಿಸುವ ಬಿರುದಾವಳಿಗಳಿವೆ. ಈ ಪ್ರಶಸ್ತಿಗಳ ಅರ್ಥ ಅಸ್ಪಷ್ಟ. ಈ ಬಾಚಪ್ಪ ಬುಕ್ಕರಾಯಸಮುದ್ರ, ಕೀರ್ತಿಸಮುದ್ರ, ಬಾಚಪ್ಪನಕೆರೆ, ಚವುಡಪ್ಪನ ಕಾಲುವೆಗಳನ್ನು ತಾಯಿಯ ಹೆಸರಿನಲ್ಲಿ ಮಾಳವ್ವೆಯ ಕೆರೆಯನ್ನೂ 'ಕನ್ನೆಗೆಜ್ಜೆ'ಯಾಗಿ ಕಟ್ಟಿಸಿದ್ದಾನೆ, ಅಲ್ಲದೆ ಇವುಗಳ ನಾಲ್ಕು ದಿಕ್ಕಿನಲ್ಲಿ ಸಾಲುಮರಗಳನ್ನು ನೆಡಿಸಿದ್ದಾನೆ. ಹೀಗೆ ಚತುಸ್ಸೀಮೆಯಲ್ಲಿ ಹಾಕಿದಂಥ 'ಆರಳಿಯಮರಗಳಿಗೆ ಮುಂಜಿಯನ್ನು' ಕಟ್ಟಿಸಿರುವುದು ಒಂದು ವಿಶೇಷಸಂಗತಿ. ಇದು ಅಂದು ರೂಢಿಯಲ್ಲಿದ್ದ ಸಾಮಾಜಿಕ ಪದ್ಧತಿಯ ಮೇಲೆ ಬೆಳಕನ್ನು ಚೆಲ್ಲಿದೆ. ಈ ಧಾರ್ಮಿಕ ಕಾರ್ಯಗಳೊಂದಿಗೆ ಆತ ತನ್ನ ಹೆಸರಿನಲ್ಲಿ ಬಾಚಪಟ್ಟಣವನ್ನು ಕಟ್ಟಿಸಿದ್ದಾನೆ. ಬಾಚಪ್ಪ ತಾನು ಕಟ್ಟಿಸಿದ ಕೆರೆಗೆ ಬುಕ್ಕರಾಯ ಸಮುದ್ರವೆಂದು ನಾಮಕರಣ ಮಾಡಿರುವುದಲ್ಲದೆ ತನ್ನ ಮಕ್ಕಳಿಗೆ ಬುಕ್ಕಣ್ಣ, ಕಂಪಣ್ಣ

ಎಂದು ಹೆಸರಿಟ್ಟು ವಿಜಯನಗರದ ಅರಸರಲ್ಲಿ ತನಗಿದ್ದ ನಿಷ್ಠೆಯನ್ನು ವ್ಯಕ್ತಪಡಿಸಿದ್ದಾನೆ. ಇಂತಹ ಸಕಲಗುಣಪರಿಪೂರ್ಣನಾದ ಬಾಚಿರಾಜ

ಸುಕವಿಜನ ಸಮಾಜ ಃ ಕಾಮಿನೀನಾಂ ಮನೋಜ ಃ
ಚಕಿತ ಹರಿಣನೇತ್ರ ಃ ಕಾಂತಿ ರಾಜಿಷ್ಣುಗಾತ್ರ ಃ
ಬಕರಿಪು ಸಮಬಾಹು ಃ ದುರ್ಜನ ಗ್ರಾಹ್ಯರಾಹು ಃ
ಸಕಲಗುಣನಿಧಾನ ಃ ಬಾಚಿರಾಜಾಭಿಧಾನ ಃ

ಎಂದು ಪ್ರಶಂಸೆಗೆ ಪಾತ್ರನಾಗಿದ್ದಾನೆ. ಹೊಯ್ಸಳ ವೀರಬಲ್ಲಾಳನ ಕಾಲದಿಂದಲೇ ಈತನ ಪೂರ್ವಿಕರು ಅಧಿಕಾರದಲ್ಲಿದ್ದರು (ಮಂ. 84).

ತಿಮ್ಮಣ್ಣದಂಡನಾಯಕ ಈ ಕಾಲದ ಇನ್ನೊಬ್ಬ ಪ್ರಮುಖ ಅಧಿಕಾರಿ. ಲೋಹಿತಾನ್ವಯದ ತಿಮ್ಮಣ್ಣ ದಂಡೇಶ ಯಾದವಗಿರಿ ಜೀರ್ಣೋದ್ಧಾರಕ. ಯದುಗಿರಿ ನಾರಾಯಣ ಚರಣಾರವಿಂದ ಭಕ್ತ ಹಾಗೂ ತುಲಾಪುರುಷಾದಿ ಮಹಾದಾನವ್ರತದೀಕ್ಷಿತ. ಈತನ ಈ ಪ್ರಶಂಸೆಗಳಿಗೆ ಕಾರಣ ಈತ ಕೈಗೊಂಡಿರುವ ಧಾರ್ಮಿಕ ಕಾರ್ಯ. ಈ ತಿಮ್ಮಣ್ಣ 'ಆರೂಪಗಿದ್ದ' ನಿವೇಶನವನ್ನು ಕ್ರಯಕ್ಕೆ ಕೊಂಡು ಅಲ್ಲಿ ದೇಶಾಂತ್ರಮಠವಾಗಿ ಕಟ್ಟಿಸಿದ ರಂಗಮಂಟಪದಲ್ಲಿ 24 ಜನ ಪರಮ ವೈದಿಕ ವೈಷ್ಣವ ಬ್ರಾಹ್ಮಣರ ಭೋಜನದ ವ್ಯವಸ್ಥೆಗಾಗಿ ಕುರುವಂಕನಾಡ ಮಂಡೆಯೊಳಗಿದ್ದ ಮೇಲುಗೋಟೆಯ ಕಾಲುವಳ್ಳಿಗಳಾದ ಬಲೀನಹಳ್ಳಿ, ಯಲವದಹಳ್ಳಿಗಳನ್ನು ದಾನವಾಗಿ ನೀಡಿದ್ದಾನೆ. ಈ ದತ್ತಿಯನ್ನು ರಾಮಾನುಜ ಜೀಯ್ಯರ ವಶಕ್ಕೆ ಒಪ್ಪಿಸಿದ್ದಾನೆ. ಈ ಹಳ್ಳಿಗಳಿಂದ ಬರುವ ಆದಾಯದಲ್ಲಿ ದೇಶಾಂತ್ರಮಠ ಹಾಗೂ ರಂಗಮಠದ ಲಕ್ಷ್ಮಿ ದೇವಿಯರ ಖರ್ಚುವೆಚ್ಚಗಳನ್ನು ಕಳೆದು 'ಮಿಗಿಲುಂಟಾದರೆ' ಮಠದ 'ಸೊದೆ ಸುಣ್ಣ ಕಸ ಮುಸಕಂಬು ಮುಜಗ ಉಪೆತರೆ' ಮುಂತಾದ 'ಹನ್ನೊಳ್ಳ ಪಾತದ ಕೈಂಕರ್ಯ'ಕ್ಕೇ ಬಳಸಬೇಕೆಂಬನಿಯಮವನ್ನೂ ವಿಧಿಸಿದ್ದಾನೆ.

ಇವರೊಂದಿಗೆ ಮಹಾಪ್ರಧಾನ ಪುಲಿಯಣ್ಣ ವೊಡೆಯ, ವಿಶೇಷದ ದೇವರ ಸಪ್ರೊಡೆಯ ಮತ್ತು ಮಹಾಪ್ರಧಾನ ಲಂಖಣದಣ್ಣಾಯ್ಕ ಮೊದಲಾದ ಪ್ರಮುಖ ಅಧಿಕಾರಿಗಳನ್ನು ಹೆಸರಿಸಬಹುದು. ಮಹಾಪ್ರಧಾನ ಲಂಖಣದಣ್ಣಾಯ್ಕ ತಲಕಾಡ ವೈದ್ಯನಾಥ ದೇವರಿಗೆ 'ಮುನ್ನ ನಡೆಯುತ್ತಿದ್ದ ಕಟ್ಟಳೆಧರ್ಮ' ನಡೆಸದೆ ನಿಂತುಹೋದುದನ್ನು ಗಮನಿಸಿ ಕಿರುಗುಸೂರ ಸುಂಕದ ಹೊನ್ನನ್ನು ಸರ್ವಮಾನ್ಯವಾಗಿ ನೀಡಿ ಮತ್ತೆ ದೇವಾಲಯದ ಕಟ್ಟಳೆ ನೆರವೇರಲು ನೆರವಾಗಿದ್ದಾನೆ.

ಕೇವಲ ಆಸ್ಥಾನದ ಅಧಿಕಾರಿಗಳೇ ಅಲ್ಲದೇ ಬೇರೆಯವರೂ ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ವಹಿಸುತ್ತಿದ್ದ ನಿದರ್ಶನಗಳೂ ಇವೆ. ಹೊನೆಯನಾಯಕನ ಮಗ ವರದಯನಾಯಕ ವರದರಾಜಪುರವಾದ ಭಟ್ಟಾರಕದೇವನ ಕೆಲ್ಲಂಗೆರೆ (ಈಗಿನ

ಕೆಳಗೆರೆ)ಯ ಮಲ್ಲಿಕಾರ್ಜುನ ದೇವಾಲಯ, ಗರ್ಭಗೃಹ, ರಂಗಮಂಟಪಗಳನ್ನು ಕಟ್ಟಿಸಿದು ದಲ್ಲದೆ 'ಶಂಪ್ರಸಾದ'ವಾಗಿದ್ದ ಈ ಗ್ರಾಮವನ್ನೂ 'ಅಗ್ರಹಾರ'ವನ್ನಾಗಿ ಮಾಡಿದ್ದಾನೆ. 'ಜೀರ್ಣ'ವಾಗಿದ್ದ ಕೆರೆಯ ಜೀರ್ಣೋದ್ಧಾರಮಾಡಿ ಆ ಹೊಸ ಕೆರೆಗೆ ವರದರಾಜ ಸಮುದ್ರವೆಂದು ಹೆಸರಿಟ್ಟು ದೇವರಿಗೆ ಸಮರ್ಪಿಸಿದ್ದಾನೆ (ನಾ ಮಂ. 58). ಇದರಂತೆಯೇ ಮಳವಳ್ಳಿಯ ಮಹಾಜನಗಳು ಶಿಥಿಲವಾಗಿದ್ದ ಅರ್ಕನಾಥ ದೇವಾಲಯದ ಗರ್ಭಗೃಹ, ಸುಖನಾಸಿಕ, ಮಂಟಪ, ಶಿಖರ, ಚಪ್ಪಡಿಗಳನ್ನು ಕಿತ್ತು ಪುನರ್ನಿರ್ಮಾಣ ಮಾಡಿಸಿ ದೇವರ ಪೂಜೆ ಇತ್ಯಾದಿಗಳಿಗಾಗಿ ದತ್ತಿಯನ್ನೂ ಬಿಟ್ಟಿದ್ದಾರೆ.

ಅಂದಿನ ದೇವಾಲಯಗಳು ಧಾರ್ಮಿಕ ಕೇಂದ್ರಗಳಾಗಿದ್ದವು. ಹಾಗಾಗಿ ದೇವಾಲಯಗಳಲ್ಲಿ ಶ್ರೀಭಾಷ್ಯ, ಕೈಶಿಕಪುರಾಣ ಹಾಗೂ ಶಠಾರಿ ಸೂಕ್ತ ಮೊದಲಾದ ಧರ್ಮಕೃತಿಗಳ ಪಠನಕ್ಕಾಗಿ ಮತ್ತು ಅಕ್ಷರಾವೃತ್ತಿಯ ಅನಂತರದಲ್ಲಿ ಯತಿರಾಜ ಸಪ್ತತಿಯ ಅನುಸಂಧಾನ ಮಾಡಲು ಬೇಕಾದ ವ್ಯವಸ್ಥೆಯನ್ನು ಮಾಡಿದೆ.

ಯಾವುದೇ ವ್ಯಕ್ತಿ ತಾನು ಮಾಡಿದ ಧರ್ಮಕಾರ್ಯಕ್ಕೆ ಪ್ರತಿಫಲವಾಗಿ ಬಂದ ದಾನವನ್ನು ಅನುಭವಿಸುವ ಹಕ್ಕನ್ನು ಮಾತ್ರ ಪಡೆದಿರುತ್ತಿದ್ದನೇ ವಿನಾ ಅದನ್ನು ತನ್ನ ಮನಸ್ಸಿನ ಇಚ್ಛೆಯಂತೆ ಬಳಸಲು ಅಧಿಕಾರ ಪಡೆದಿರುತ್ತಿರಲಿಲ್ಲ ಎಂಬ ವಿಚಾರವನ್ನು ಪಾಂಡವಪುರದ ಶಾಸನವೊಂದು ಸ್ಪಷ್ಟಪಡಿಸಿದೆ. ನಾಗಮಂಗಲದ ಸಿಂಗಣ್ಣ ಒಡೆಯರ ಮಗ ದೇವರಾಜ ಕಾವೇರಿ ನದಿಗೆ ಹೊಸದಾಗಿ ಒಂದು ಕಾಲುವೆಯನ್ನು ತೋಡಿಸಿದಾಗ ಹರಹಂಗ್ರಾಮದ ಮಹಾಜನರು ತಮ್ಮ ಗ್ರಾಮದವರೆಗೂ ಆ ಕಾಲುವೆಯನ್ನು ತೋಡಿಸಿ ಕೊಡಬೇಕೆಂದು ಕೇಳಲಾಗಿ ದೇವರಾಜ ತನ್ನ ವೆಚ್ಚದಲ್ಲಿಯೇ ಕಾಲುವೆಯನ್ನು ತೋಡಿಸಿದ. ಅದಕ್ಕೆ ಪ್ರತಿಯಾಗಿ ಗ್ರಾಮದ ಹೆಬ್ಬಾರುವ ಯದುವಣ್ಣ ಕುರುವಂಕ ನಾಡ ವೇಂಠೆಯದ ಹೊಸಹಳ್ಳಿ ಗ್ರಾಮವನ್ನು ದೇವರಾಜನಿಗೆ ಯಜಮಾನ ಭಾಗವೆಂದು ಶ್ರೋತ್ರಿಯವಾಗಿ ನೀಡಿದ. ಮುಂದೆ ಈ ದೇವರಾಜ ಹೊಸಹಳ್ಳಿಗೆ ತಮ್ಮ ತಾಯಿಯ ಹೆಸರಿನಲ್ಲಿ ಶ್ರೀರಾಮಸೀತಾಪುರವೆಂದು ಹೆಸರನ್ನಿಟ್ಟು ಅನೇಕ ಬ್ರಾಹ್ಮಣರಿಗೆ ದಾನ ಮಾಡಿದ್ದಾನೆ. ಆದರೆ ಹೀಗೆ ದಾನ ಮಾಡುವ ಮೊದಲು ದೇವರಾಜ ಯದುವಣ್ಣನಿಂದ ಹೊಸಹಳ್ಳಿ ಹಾಗೂ ಇನ್ನೆರಡು ಹಳ್ಳಿಗಳನ್ನೂ 400 ಹೊನ್ನುಗಳಿಗೆ ಕೊಂಡು ಕೊಂಡಿದ್ದಾನೆ. ಯಾವುದೇ ವ್ಯಕ್ತಿ ಯಜಮಾನ ಭಾಗವೆಂದು ಶ್ರೋತ್ರಿಯವಾಗಿ ಪಡೆದ ಗ್ರಾಮದ ಹುಟ್ಟುವಳಿಯನ್ನು ಅನುಭವಿಸುವ ಹಕ್ಕನ್ನು ಪಡೆದಿರುತ್ತಾನೆಯೇ ಹೊರತು ಪರರಿಗೆ ದಾನ ಮಾಡುವ ಅಧಿಕಾರವನ್ನು ಪಡೆದಿರುವುದಿಲ್ಲ ಎಂಬ ಸಂಗತಿಗೆ ನಿದರ್ಶನ ವಾಗಿರುವುದಲ್ಲದೆ ಅಂದಿನ ರಾಜನೀತಿಯ ಕಟ್ಟುಪಾಡನ್ನೂ ಪ್ರತಿಬಿಂಬಿಸಿದೆ. ಇದರಂತೆಯೇ ದಾನ ಪಡೆದ ಯಾವುದೇ ವ್ಯಕ್ತಿ ಆ ಕೂಡಲೇ ಅದನ್ನು ವಿಕ್ರಯ ಮಾಡುವಂತಿರಲಿಲ್ಲ ಎಂಬಂಶವನ್ನು ಪಾಂಪು. 16ನೆಯ ಶಾಸನ ತಿಳಿಸಿದೆ. ನಾಚಿಯಾ ಯಾರಮ್ಮ ಎಂಬಾಕೆ ಆಳ್ವಾರರ ಕೈಂಕರ್ಯ ಮಾಡಿಕೊಂಡಿದ್ದ ಶ್ರೀವೈಷ್ಣವರಿಗೆ ದತ್ತಿ

ನೀಡಿರುವುದಲ್ಲದೆ ಪ್ರತಿಗ್ರಹಿ ಹನ್ನೆರಡು ವರ್ಷಗಳೊಳಗೆ ವಿಕ್ರಯಮಾಡಬಾರದೆಂಬ ಕರಾರನ್ನೂ ವಿಧಿಸಿದ್ದಾಳೆ.

ಅಂದಿನ ಅರಸರು ನೀಡುತ್ತಿದ್ದ ಗ್ರಾಮದಾನಗಳು ಕೆಲವೊಮ್ಮೆ ಏಕಭೋಗವಾಗಿರುತ್ತಿದ್ದರೆ ಮತ್ತೆ ಕೆಲವು ವೇಳೆ ವಂಶಪಾರಂಪರ್ಯವಾಗಿರುತ್ತಿದ್ದುವು. ಏಕಭೋಗವಾಗಿದ್ದಲ್ಲಿ ಪ್ರತಿಗ್ರಹಿಯ ಮರಣಾನಂತರ ಆ ಗ್ರಾಮದ ಒಡೆತನ ಮತ್ತೆ ಅರಸನಿಗೇ ಸೇರುತ್ತಿತ್ತು. ಈ ವಿಚಾರ ಅಚ್ಯುತರಾಯನ ತಾಮ್ರಶಾಸನ (ಕೃಪೇ. 99) ದಲ್ಲಿ ನಿರೂಪಿತವಾಗಿದೆ. ಶ್ರೀರಂಗಪಟ್ಟಣ ನಿವಾಸಿಯಾದ ಗರ್ಗಗೋತ್ರದ ಆಪಸ್ತಂಬ ಸೂತ್ರದ ಸುಬ್ರಹ್ಮಣ್ಯನ ಮಗ ಶ್ರೀನಿವಾಸನಿಗೆ ಹೊಯ್ಸಣದೇಶದ ಸಿಂದಘಟ್ಟದ ಸೀಮೆಗೆ ಸೇರಿದ ಬೆಲೆಕೆರೆಗೆ ನಾರಸಿಂಹೇಂದ್ರಪುರವೆಂದು ಹೆಸರಿಸಿ ಪುತ್ರಪೌತ್ರಾದಿ ಪಾರಂಪರ್ಯವಾಗಿ ಅನುಭವಿಸತಕ್ಕುದೆಂದು ಹೇಳಿ ಪುನರ್ದತ್ತಿ ಮಾಡಿದ್ದಾನೆ ಅಚ್ಯುತರಾಯ. ಈ ದಾನವನ್ನು ದಾಖಲಿಸುವಾಗ ಹಿಂದೆ ತನ್ನ ಹಿರಿಯ ಸಹೋದರ ವೀರ ನಾರಸಿಂಹ ಶ್ರೀನಿವಾಸನ ತಂದೆ ಸುಬ್ರಹ್ಮಣ್ಯನಿಗೆ ದಾನ ಮಾಡಿದ್ದ ವಿಷಯವನ್ನು ಹೇಳಿರುವುದಲ್ಲದೆ ಅಣ್ಣನ ಹೆಸರಿನಲ್ಲಿಯೇ ಗ್ರಾಮದಾನವನ್ನೂ ಮಾಡಿದ್ದಾನೆ. ಆದ್ದರಿಂದ ಈ ಮೊದಲು ಕೊಡಲಾಗಿದ್ದ ದಾನ ಏಕಭೋಗವಾಗಿತ್ತೆಂಬುದು ಸ್ಪಷ್ಟ.

ಆಳರಸರಾರೂ ತಮ್ಮ ಪೂರ್ವಿಕರು ಮಾಡಿದ್ದ ದಾನಗಳನ್ನು ಅನೂರ್ಜಿತಗೊಳಿಸುತ್ತಿರಲಿಲ್ಲ. ತಾವು ದಾನ ಕೊಡುವ ಮೊದಲು ಈಗಾಗಲೇ ನೀಡಿದ್ದ ದಾನಗಳನ್ನು ಪುರಸ್ಕರಿಸುತ್ತಿದ್ದರು, ಮಾನ್ಯತೆ ನೀಡುತ್ತಿದ್ದರು. ಆದ್ದರಿಂದಲೇ ದಾನ ಶಾಸನ ಹಾಕಿಸುವಾಗ "ಪೂರ್ವದಲಿ ನಡೆದಂಥಾ ದೇವಾದಾಯ ಬ್ರಹ್ಮದಾಯಗಳ ಸರ್ವಸ್ವಾಮ್ಯಗಳನ್ನು ಬಿಟ್ಟು ಪ್ರಭುಗೊಡಗೆ ಗಉಡಗಳೂ ಗ್ರಾಮದ ಸೇನಬೋವನ ಕೊಡಗೆ ಮುಂತಾದ ಮಾನ್ಯಗಳನೂ ಸರ್ವಮಾನ್ಯಗಳನು" ಬಿಟ್ಟು ಉಳಿದದ್ದು ಸಲ್ಲುವುದು ಎಂದು ಸ್ಪಷ್ಟವಾಗಿ ಬರೆಸುತ್ತಿದ್ದರು.

ಕೃಷಿ ಅಂದಿನ ಪ್ರಮುಖ ಕಸುಬುಗಳಲ್ಲೊಂದಾಗಿತ್ತು. ಹಾಗಾಗಿ ಕೆರೆಗಳನ್ನು ದುರಸ್ತಿಗೊಳಿಸಿದ ಹಾಗೂ ಹೊಸ ಕೆರೆ-ಕಾಲುವೆಗಳನ್ನು ಕಟ್ಟಿಸಿದ ಉದಾಹರಣೆಗಳು ಹೇರಳವಾಗಿವೆ. ಪುರಗ್ರಾಮದ ಹೊಸಕೆರೆ 'ಒಡೆದು ಬಿಲವಾಗಿರಲು' ಆ ಕೆರೆಯ ಪೊಡವನ್ನು ಕಟ್ಟಿಸಿ ತೂಬನ್ನು ನಿಲ್ಲಿಸಿ ಕೋಡಿಯ ಕಡುವನ್ನು ತೆಗೆಸಲು ಲಕ್ಷ್ಮೀಪತಿಸೆಟ್ಟಿಗೆ ತಗುಲಿದ ವೆಚ್ಚ 300 ಘಟ್ಟಿ ವರಹಗಳು. ಕೆರೆಯನ್ನು ಜೀರ್ಣೋದ್ಧಾರ ಮಾಡಿಸಿದ ಲಕ್ಷ್ಮೀಪತಿಸೆಟ್ಟಿಗೆ 'ಅಯ್ಯವತ್ತಿಬ್ಬರು' ಆ ಹಣವನ್ನು ಹಿಂದಿರುಗಿಸಲು ಅತ ತನ್ನ ತಂದೆ ಒಡೆಯನಾದ ತಿಬ್ಬಸೆಟ್ಟಿಯ ಹೆಸರಿನಲ್ಲಿ ಚೆಲುಪಿಳ್ಳೆರಾಯರ ಆರು ಪರಿವಾರ ಆರೋಗಣೆಯ ವಿನಿಯೋಗಕ್ಕೆಂದು ಕೊಟ್ಟಿದ್ದಾನೆ. ಅಲ್ಲದೆ ಆ ಆರು ಪರಿವಾರಗಳ ಹಂಚಿಕೆಯ ಕ್ರಮವನ್ನೂ ತಿಳಿಸಿದ್ದಾನೆ (ಪಾಂಪು. 135) ಹರಿಗಿಲ ಅಬ್ಬರಾಜನ ಮಕ್ಕಳು ಪರಿರಾಜಗಳು 150 ಗದ್ಯಾಣ ಖರ್ಚುಮಾಡಿ ಹೊಸ ಕೆರೆ ಹಾಗೂ ಕೃಷ್ಣರಾಜಪುರದ ಮೇರೆಕೆರೆಗಳಿಗೆ

ಒಡವನ್ನು ಕಟ್ಟಿಸಿದ್ದಾರೆ. ಈ ಸಂದರ್ಭದಲ್ಲಿಯೂ 'ಅಯ್ವತ್ತಿಬ್ಬರು' ನೀಡಿದ ಹಣದಿಂದ ಪೆರಿರಾಜಯ್ಯಂಗಳು ತಮ್ಮ ತಂದೆಯ ಹೆಸರಿನಲ್ಲಿ ಚೆಲುಪಿಳ್ಳೆರಾಯರಿಗೆ 4 ತಳಿಗೆ ಅಮೃತಪಡಿ ನಡೆಸಲು ಏರ್ಪಾಡು ಮಾಡಿರುವುದಲ್ಲದೆ ಅವುಗಳ ಹಂಚಿಕೆಯ ಕ್ರಮವನ್ನೂ ನಿಗದಿ ಪಡಿಸಿದ್ದಾರೆ. ಹೀಗೆ 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬಂತೆ ಧರ್ಮ ಕಾರ್ಯಗಳನ್ನು ಮಾಡಿ ಪಡೆದ ಹಣವನ್ನು ಮತ್ತೆ ಧರ್ಮಕಾರ್ಯಕ್ಕೇ ವಿನಿಯೋಗಿಸುತ್ತಿದ್ದ ಮನೋಭಾವ ಅಂದಿನ ಜನಗಳಲ್ಲಿ–ಮನೆಮಾಡಿತ್ತೆಂಬುದನ್ನು ನೋಡಿದೆವು. ಇದು ಅಂದಿನ ಸಮಾಜದಲ್ಲಿ ಬೇರುಬಿಟ್ಟಿದ್ದ ಧಾರ್ಮಿಕ ಭಕ್ತಿ, ಶ್ರದ್ಧೆಗಳಿಗೆ ದ್ಯೋತಕವಾಗಿದೆ.

ಒಂದು ರಾಜ್ಯ ಎಂದ ಮೇಲೆ ನಿಷ್ಠಾವಂತ ಅಧಿಕಾರಿಗಳಿರುತ್ತಿದ್ದಂತೆಯೇ 'ಪ್ರತಿಷ್ಠೆ'ಯ ಅಧಿಕಾರಿಗಳೂ ಇರುತ್ತಿದ್ದರೆಂಬುದಕ್ಕೆ 'ಕಾಮಪ್ಪನಾಯಕ' ಉತ್ತಮ ಸಾಕ್ಷಿ. ರಾಮಭಟ್ಟಯ್ಯನೆಂಬ ಅಧಿಕಾರಿ ಶ್ರೀರಂಗಪಟ್ಟಣದಸೀಮೆಯನ್ನು ಕಾಶ್ಯಪ ಗೋತ್ರದ ಅಪ್ಪಾಜಿಗಳ ಮಕ್ಕಳು ಪೆದ್ದಿರಾಜಯ್ಯಂಗಳಿಗೆ ಅಮರಮಾಗಣೆಯಾಗಿ ಪಾಲಿಸಿದರು. ಈ ಸೀಮೆಯಲ್ಲಿ ಅಗ್ರಹಾರಗಳು, ಮಾನ್ಯಗ್ರಾಮಗಳು, ಕರಗ್ರಾಮಗಳು ಇದ್ದುವು. ಅಗ್ರಹಾರ ಮತ್ತು ಮಾನ್ಯ ಗ್ರಾಮಗಳಿಗೆ ಸುಂಕ, ತೆರಿಗೆಗಳ ವಿನಾಯಿತಿ ದೊರಕಿದ್ದುವು. ಕರಗ್ರಾಮಗಳಿಂದ ಮಾತ್ರ 'ಕರ'ವನ್ನು ಪಡೆಯಬಹುದಾಗಿತ್ತು. ಈ ಕರಗ್ರಾಮಗಳಲ್ಲಿಯೂ ಕೆಲವು ಭೂಮಿಗಳನ್ನು ಮಾನ್ಯಗಳೆಂದು ಪರಿಗಣಿಸಿತ್ತು. ಇವುಗಳಲ್ಲದೆ ಸತ್ರ, ದೇವಸ್ಥಾನಗಳು ಮುಂತಾದ ಸಾರ್ವಜನಿಕ ಸಂಸ್ಥೆಗಳಿಂದಲೂ ತೆರಿಗೆ ಪಡೆಯುತ್ತಿರಲಿಲ್ಲ. ಆದರೆ ಕಾಮಪ್ಪನಾಯಕನೆಂಬ ಅಧಿಕಾರಿ 'ಪಾರುಪತ್ಯ' ಮಾಡಿ ಇವುಗಳಲ್ಲಿ 'ಪೂರ್ವದಲಿ ಯಿಲ್ಲದೆಯಿದ್ದ ಸುಂಕವನು ಅನೀತದಲಿ ಕೊಂಡು ಬಂದ'ನಂತೆ, ಹೀಗೆ ಆತ ಕೊಂಡು ಬಂದ ಹಣದ ಮೊತ್ತ 300 ವರಹಗಳು. ಈ ವಿಚಾರ ಮೇಲಧಿಕಾರಿಯಾದ ಪೆದ್ದಿರಾಜಗಳ ಕಿವಿಗೆ ಮುಟ್ಟಿತು. ಇದು ಪ್ರಜೆಗಳಿಂದ ಅನ್ಯಾಯವಾಗಿ ಪಡೆಯಲಾದ ಸುಂಕವೆಂಬುದನ್ನು ಅರಿತ ಮಾಗಣೆಯ ಸ್ವಾಮ್ಯ ಪಡೆದಿದ್ದ ಪೆದಿರಾಜಯ್ಯ ಈ ಹಣವನ್ನು ಪ್ರಥಮೈಕಾದಶಿಯ ಪುಣ್ಯಕಾಲದಲ್ಲಿ ಶ್ರೀರಂಗನಾಥ ದೇವರಿಗೆ ಕೊಟ್ಟುದಲ್ಲದೆ ಮಹಾಜನಗಳಿಗೆ (ಪ್ರಜೆಗಳಿಗೆ) "ನಿಮ್ಮ ಮಾನ್ಯದ ಅಡಕೆಯ ಸುಂಕ ಬೇಡಿಗ ಸಂಬಂಧವಿಲ್ಲ ... ನೀವು ಸರ್ವಸಾಮಾನ್ಯವಾಗಿ ಅನುಭವಿಸಿಕೊಂಡು ಬಹಿರಿ" ಎಂದು ಆಶ್ವಾಸನೆ ನೀಡಿ ಶಾಸನ ಹಾಕಿಸಿದ್ದಾನೆ (ಶ್ರೀಪ. 5). ಹಾಗೆ ಸರ್ವಮಾನ್ಯ ಮಾಡುವಾಗಲೂ ಅವರು ಕೊಡಬೇಕಾಗಿದ್ದ ಸುಂಕ ಯಾವುದೆಂಬುದನ್ನೂ ಸೂಚಿಸಿದ್ದಾನೆ. ಆದ್ದರಿಂದ 'ಸೀಮೆ' 'ಮಂಡಲ' ಇತ್ಯಾದಿ ವಿಭಾಗಗಳಿಗೆ ಹೊಸದಾಗಿ ನೇಮಕಗೊಂಡ ಅಧಿಕಾರಿಗಳು ಪರಂಪರಾನುಗತವಾಗಿ ಬಂದಿದ್ದ ಪದ್ಧತಿಗಳನ್ನು, ವಿಧಿವಿಧಾನಗಳನ್ನು ಕಡೆಗಣಿಸುವ ಹಾಗಿರಲಿಲ್ಲ. ಒಂದುವೇಳೆ ಹಾಗೇನಾದರೂ ಸಂಭವಿಸಿದರೆ ಪ್ರಜೆಗಳು ತಮಗಾದ ಅನ್ಯಾಯವನ್ನು ಮೇಲಧಿಕಾರಿಗಳವರೆಗೆ

ಕೊಂಡೊಯ್ದು ನ್ಯಾಯವನ್ನು ದೊರಕಿಸಿಕೊಳ್ಳುತ್ತಿದ್ದರು. ಅನ್ಯಾಯದ ವಿರುದ್ಧ ಧ್ವನಿ ಎತ್ತಿದರೆ ನಿಷ್ಪಕ್ಷಪಾತವಾದ ನಿರ್ಣಯ ಸಿಗುತ್ತಿದ್ದುದಕ್ಕೆ ಮೇಲಿನ ಈ ಪ್ರಸಂಗ ಉತ್ತಮ ಉದಾಹರಣೆ ; ಇದು ಅಂದಿನ ಮೇಲಾಧಿಕಾರಿಗಳಲ್ಲಿ ಮನೆ ಮಾಡಿದ್ದ ಪ್ರಜಾವಾತ್ಸಲ್ಯ ಗುಣಕ್ಕೆ ಹಿಡಿದ ಕನ್ನಡಿಯೂ ಹೌದು.

ಹೀಗೆ ಅಧಿಕಾರಿಗಳಿಂದ ತೊಂದರೆಗೊಳಗಾಗುತ್ತಿದ್ದುದೇ ಅಲ್ಲದೆ ಬೇರೆ ಅರಸರು ದಂಡೆತ್ತಿ ಬಂದಾಗಲೂ ಜನ ಜೀವನ ಅಸ್ತವ್ಯಸ್ತವಾಗುತ್ತಿತ್ತು. ಸಾಮಾಜಿಕ ಗೊಂದಲಗಳುಂಟಾಗುತ್ತಿತ್ತು. ವೀರಣನಾಯಕ ಶತಭಾಷಾಶತಪತ್ರಸಹಸ್ರಕಿರಣಚತುಶಾಲಾ ಚತುರ್ಮುಖ ಪದವಾಕ್ಯಪ್ರಮಾಣಜ್ಞನೆನಿಸಿದ ಎಂಬಾರಯನಿಗೆ ನಗುಲನಹಳ್ಳಿ ಗ್ರಾಮವನ್ನು ದಾನವಾಗಿ ನೀಡಿದ್ದು 'ಕೃಷ್ಣರಾಯರ ಅವಾಂತರ' ದಿಂದಾಗಿ ಅದನ್ನು ಅನೂಜಿ-ಗೆತಊಳಿಸ ಹಿಂದಕ್ಕೆ ಪಡೆಯಲಾಗಿತ್ತು, ತದನಂತರದಲ್ಲಿ ಎಂಬಾರಯನ ಮಗ ಅಪ್ಪಯ್ಯಂಗಾರ್ಯನಿಗೆ ನಗುಲನಹಳ್ಳಿಯ ಅರ್ಧಗ್ರಾಮವನ್ನು ಪುನರ್ದತ್ತಿಯಾಗಿ ನೀಡಿದೆ. ಇಲ್ಲಿ 'ಕೃಷ್ಣರಾಯನ ಅವಾಂತರ' ಎಂಬ ಪದಪುಂಜ ಕೃಷ್ಣರಾಯನ ದಾಳಿಯನ್ನು ಸೂಚಿಸುತ್ತದೆ.

'ಹುಟ್ಟುತ್ತ ಅಣ್ಣತಮ್ಮಂದಿರು ಬೆಳೆಯುತ್ತ ದಾಯಾದಿಗಳು' ಎಂಬ ಮಾತು ಸುಳ್ಳಲ್ಲ. ಆಸ್ತಿ ಇದ್ದಲ್ಲಿ ಜಗಳ ತಪ್ಪಿದ್ದಲ್ಲ. ಆಸ್ತಿ ಇದ್ದಾಗ ಅಣ್ಣತಮ್ಮಂದಿರೇ ದಾಯಾದಿಗಳಾಗುವಾಗ ಇನ್ನು ದಾಯಾದಿಗಳು ಹೊಂದಿ ಬಾಳುವುದುಂಟೇ ? ಇದು ಗತಾನುಗತಿಕ ಎಲ್ಲ ಕಾಲದಲ್ಲಿಯೂ ಇದ್ದದ್ದೇ. ಕೀರ್ತಿಯರಸನ ಮಕ್ಕಳಾದ ಹಿರಿಯ ಬಯಿಚಪ್ಪ ಚಿಕ್ಕಬಯಿಚಪ್ಪಗಳು ಪಿತ್ರಾರ್ಜಿತ ಸ್ವತ್ತಾದ ಕೆರೆ, ತೋಟ, ಗದ್ದೆ' ಬೆದ್ದಲು, ಬೆಳ್ಳಿ, ಬಂಗಾರ, ಎತ್ತು, ತೊತ್ತು ಮುಂತಾದ 'ಏನುಳ್ಳ ಸಕಲ ಪ್ರಾಪ್ತವನು, ಅರುವನ ಹಳ್ಳಿಯ 'ಸಮಸ್ತ ಗಉಡುಪ್ರಜೆಗಳ ಮುಂದಿಟ್ಟು' ಪಾಚಿಯಪ್ಪನವರ ಕೈಯಲ್ಲಿ ಹಂಚಿಸಿಕೊಂಡಿದ್ದಾರೆ (ಮ. 94). ಈ ಶಾಸನವನ್ನು 'ವಿಭಾಗಪತ್ರ'ವೆಂದೇ ಕರೆದಿದೆ.

ಇಮ್ಮಡಿ ದೇವರಾಯನ ಕಾಲಕ್ಕೆ ಸೇರಿದ (ಮವ.102) ಶಾಸನ ಅಂದಿನ ಆಡಳಿತ ಕ್ರಮವನ್ನು ನಿರೂಪಿಸಿದೆ. ಮೇಲಧಿಕಾರಿಯ ಅಪ್ಪಣೆಯಿಲ್ಲದೆ ಕೈ ಕೆಳಗಿನ ಅಧಿಕಾರಿಗಳು ಅರಮನೆಗೆ ಸೇರಬೇಕಾದ ಸ್ವತ್ತನ್ನು ದಾನ ನೀಡುವಂತಿರಲಿಲ್ಲ. ಗಜಾರಣ್ಯ ಕ್ಷೇತ್ರವಾದ ತಳಕಾಡಿನ ವೈದ್ಯನಾಥದೇವರಿಗೆ ಪೂರ್ವದಲ್ಲಿ ಬಿಡಲಾದ ದತ್ತಿ ಸಾಲುತ್ತಿರಲಿಲ್ಲವಾದ್ದರಿಂದ ತಳಕಾಡ ಪೆರುಮಾಳೆದೇವ ಅರಮನೆಗೆ ಸಲುತ್ತಿದ್ದ ಕಿಱುಗುಸೂರ ಸುಂಕದ ಹೊನ್ನಿನ ಹೊಸ ದತ್ತಿಯನ್ನು ನೀಡಿದ್ದಾನೆ. ಆದರೆ ಹಾಗೆ ನೀಡಿದ್ದು ಮೇಲಧಿಕಾರಿಗಳಿಂದ ಬಂದ ನಿರೂಪದಿಂದ. "ಮಹಾ ಪ್ರಧಾನ ಲಖ್ಖಣ್ಣ ದಣಾಯ್ಕವೊಡೆಯರ ರಾಯಸಲೂ ಪಟ್ಟಣದ ರಾಯಣ್ಣವೊಡೆಯರಿಗೆ ಬಂದು ಆ ರಾಯಣ್ಣ ವೊಡೆಯರ ನಿರೂಪದಿಂದ ತಳಕಾಡ ಪೆರುಮಾಳೆದೇವನೂ ಆ ಕಿಱುಗು

ಸೂರ ಗ್ರಾಮದಿಂದ ಉಳಿಂಥಾ ಸುಂಕವನು ವೈದ್ಯನಾಥದೇವರಿಗೆ ಬಿಟ್ಟನೆಂಬ ವಿಚಾರ ಶಾಸನ ತಿಳಿಸಿದೆ.

ಹಿಂದಿನಿಂದಲೂ ಒಳಕೆಯಲ್ಲಿದ್ದ ತೋಟ, ಅಡಿಕೆ, ಒಳವಾರು, ಹೊರವಾರು, ಕುಂಬಾರತೆರಿಗೆ, ಕನ್ನಡಿತೆರಿಗೆ, ಪಾದಾರಿಕೆ ಮೊದಲಾದ ಜಾತಿ ತೆರಿಗೆ, ಸಮಯ ತೆರಿಗೆ, ಸ್ಥಾವರಸುಂಕ ಇವೇ ಮುಂತಾದ ತೆರಿಗೆಗಳೇ ವಿಜಯನಗರ ಕಾಲದಲ್ಲೂ ರೂಢಿಯಲ್ಲಿತ್ತು. ಶ್ರೀರಂಗಪಟ್ಟಣದ ಶಾಸನದಲ್ಲಿ (ಶ್ರೀಪ.3) 'ವುಮಾರಕಾಣಿಕೆ' ಎಂಬ ಸುಂಕವನ್ನು ಇತರ ತೆರಿಗೆಗಳೊಂದಿಗೆ ಹೆಸರಿಸಿದೆ, ಇದನ್ನು 'ಹೊಸತಿಲಕಾಣಿಕೆ' ಎಂದು ಅರ್ಥೈಸಿದೆ. ಆದರೆ ಇದು ಎಷ್ಟರ ಮಟ್ಟಿಗೆ ಸಮಂಜಸ ? ಈ ತೆರಿಗೆಗಳು ಅರಸರ ಆರ್ಥಿಕ ಮೂಲಗಳೂ ಹೌದು.

ಅರಸರು ವೃತ್ತಿಗಳನ್ನು ಕೊಡುತ್ತಿದ್ದುದು ಪ್ರತಿಗ್ರಹಿಯು ಅನುಭವಿಸಲೆಂದು. ಅದಿಲ್ಲದೆ ಆವಿಂಪಕ್ಕೆ ಒಳಗಾಗಿ ವೃತ್ತಿಗಳನ್ನು ತಮಗಿಷ್ಟ ಬಂದವರಿಗೆ ವಿಕ್ರಯ ಮಾಡಲು ಪರವಾನಿಗಿ ಇರುತ್ತಿರಲಿಲ್ಲ. ಅರಸ ವಿರೂಪಾಕ್ಷ ಮಹಾಜನಗಳಿಗೆ ವೃತ್ತಿಗಳನ್ನು ನೀಡಿ ''ಈ ವೃತ್ತಿವಂತರೊಳಗೆ ಆರೊಬರು ತಮ್ಮ ತಮ್ಮ ವೃತ್ತಿಯನೂ ಶೂದ್ರರುಗಳಿಗೆ ಅಧಿಕ್ರಯವ ಮಾಡಿದರೆ ಅವರು ಬ್ರಾಹ್ಮಣಿಕೆಗೆ ಹೊರಗು ಆ ವೃತ್ತಿಗಳು ಇತಂಡಕೆ ಸಲಲು" ಎಂದು ಎಚ್ಚರಿಸಿರುವುದನ್ನು ಗಮನಿಸಿದರೆ ವೃತ್ತಿವಂತ ಮಹಾಜನಗಳು ತಮ್ಮ ವೃತ್ತಿಗಳನ್ನೂ ಬ್ರಾಹ್ಮಣೇತರರಿಗೆ ಮಾರುತ್ತಿದ್ದರೆಂಬುದು ಸ್ಪಷ್ಟ. ಆದ್ದರಿಂದಲೇ ಇಂತಹ ಕರಾರುಗಳನ್ನು ವಿಧಿಸಿರಬೇಕು. ಇಲ್ಲಿ ಗಮನಿಸತಕ್ಕ ಅಂಶವೆಂದರೆ ಕೊಂಡವರಿಗೂ ಆ ವೃತ್ತಿ ಸಲ್ಲುತ್ತಿರಲಿಲ್ಲ ಮಾತ್ರವಲ್ಲ ಮಾರಿದ ವೃತ್ತಿವಂತ ಬ್ರಾಹ್ಮಣನೂ ಜಾತಿಭ್ರಷ್ಟನಾಗಬೇಕಾಗುತ್ತಿತ್ತೆಂಬುದು. ಈ ವೇಳೆಗಾಗಲೇ ಜಾತಿ ವ್ಯವಸ್ಥೆ ತನ್ನದೇ ಆದ ಒಂದು ಸ್ವರೂಪವನ್ನು ಪಡೆಯುತ್ತಿದ್ದು ಜಾತೀಯತೆಯ ಗೊಂದಲದ ಅಂಕುರಾರ್ಪಣವನ್ನೂ ಗುರುತಿಸಬಹುದು. ಏಕೆಂದರೆ ಈ ಮೊದಲು ಆಳಿದ ಹೊಯ್ಸಳರ ಶಾಸನಗಳಲ್ಲಿ 'ಜಾತಿ' ವಿಚಾರನ್ನೊಳಗೊಂಡ ಫಲಸ್ತುತಿಗಳು ಕಂಡುಬರುವುದಿಲ್ಲ.

ಅರಸರು, ವ್ಯಕ್ತಿಗಳು ಗ್ರಾಮಗಳನ್ನು ದಾನ ಕೊಡುತ್ತಿದ್ದಾಗ ಆ ಗ್ರಾಮಗಳಿಗೆ ಪುನರ್ನಾಮಕರಣ ಮಾಡುತ್ತಿದ್ದ ಅಂದರ ತಮ್ಮ ಹೆಸರನ್ನೋ ಇಲ್ಲವೇ ಯಾವ ವ್ಯಕ್ತಿಯ ಜ್ಞಾಪಕಾರ್ಥವಾಗಿ ದಾನಮಾಡುತ್ತಿದ್ದರೋ ಆ ಹಸರನ್ನು ಇಡುತ್ತಿದ್ದ ಪರಿಪಾಠವಿತ್ತು. ತೋರಿನಾಡಮಂಡೆಯದ ಮೇನಾಪುರ ಮಾಗಣೆಯ ಚಂದಿಗಾಲ ಪ್ರತಾಪದೇವರಾಯಪುರವಾಗಿದ್ದರೆ ನಾಗಮಂಗಲದ ತಿಬ್ಬನಹಳ್ಳಿ ಕೃಷ್ಣರಾಯ ಸಮುದ್ರವೆಂದೂ ಸಿಂಧಘಟ್ಟದ ಸೀಮೆಯ ಕೈಗೊಂಡಹಳ್ಳಿ ಹಾಗೂ ಬೆಲೆಕೆರೆ (ಬ್ಯಾಲದ ಕೆರೆ) ವೀರನಾರಸಿಂಹಪುರವೆಂದೆನಿಸಿದ್ದುವು. ಈ ರೀತಿಯ ನಿದರ್ಶನಗಳು ಹಲವಾರಿದ್ದರೂ ಹಾಗ ಇಟ್ಟ ಹೆಸರುಗಳಾವುವೂ ಉಳಿದ ಬಂದಿಲ್ಲ. ಆದರೆ ದೇವರಾಜ

ಹೊಸಹಳ್ಳಿಗೆ ತಮ್ಮ ತಾಯಿಯ ಹೆಸರಿನಲ್ಲಿಟ್ಟ ಶ್ರೀರಾಮಸೀತಾಪುರ ಇಂದು ಸೀತಾಪುರವಾಗಿ ಉಳಿದು ಬಂದಿದೆ. ಶಾಸನದಲ್ಲಿ ನಾಗಮಂಗಲವನ್ನು ವೀರಬಲ್ಲಾಳಚತುರ್ವೇದಿ ಭಟ್ಟರತ್ನಾಕರವಾದ ನಾಗಮಂಗಲವೆಂದಿದ್ದರೆ ಮೇಲುಕೋಟೆಗೆ ಶ್ರೀಮದನಾದಿ ಮಹಾಸ್ವಾಮಿ ಸ್ಥಾನಂ ಭೂಲೋಕವೈಕುಂಠ ವೈಕುಂಠ ವರ್ಧನಕ್ಷೇತ್ರ ಜ್ಞಾನಮಂಟಪ ಪರಾಭಿಧಾನ ದಕ್ಷಿಣ ಬದರಿಕಾಶ್ರಮ ಶ್ರೀ ಯಾದವಗಿರಿಯಾದ ತಿರುನಾರಾಯಣಪುರ ಎಂದೇ ಇದೆ.

ವಿಜಯನಗರದ ಬಹು ಪಾಲಿನ ತಾಮ್ರ ಶಾಸನಗಳನ್ನು ಬರೆದಿರುವಾತ ವೀರಣಾಚಾರ್ಯನ ಮಗ ಮಲ್ಲಣ. ಇಲ್ಲವೇ ಮಲ್ಲಣನ ಮಗ ವೀರಣ. ಮೇಲುಕೋಟೆಯ ಅನೇಕ ಶಾಸನಗಳಲ್ಲಿ 'ಚೆಲುಪಿಳೆರಾಯರ ಶ್ರೀಭಂಡಾರದ ಸೇನಬೋವ ರಾಮಾನುಜನ ಬರಹ' ಎಂಬಿದೆ. ಈತ ಅಧಿಕಾರಿಯಾಗಿದ್ದು ಶಾಸನಗಳನ್ನು ಬರೆಸಿರಬಹುದು. ಇವರಲ್ಲದೆ ಚಉಡೋಜ, ಬೊಮ್ಮಣ, ಶಿಂಗಿರಿ ಮಗ ತಿಮ್ಮಣ, ಚೌಡೋಜನ ಮಗ ಮಾಯಿತಂಮ, ಲಿಂಗಪ, ಚಿಕಅಠವಣೆಯ ಮಾದರ್‍ಸರ ಹೆಸರುಗಳು ಸಿಗುವುವಾದರೂ ಇವರ ಬಗೆಗೆ ಯಾವ ವಿವರಗಳೂ ತಿಳಿದುಬರುವುದಿಲ್ಲ. ಆರುವನಹಳ್ಳಿಯ (ಮಂ. 87) ಶಾಸನವನ್ನು ಬರೆದಿರುವ ಕವಿ ನೃಸಿಂಹ ಶಾಸನದ ಕೊನೆಯಲ್ಲಿ

ಪದ್ಯವ ವಿರಚಿಸಿದಂ ನಿರ
ವದ್ಯಂ ಸುಕವೀಂದ್ರಲಪನಮಣಿಮಯ ಮುಕುರಂ
ಮಾದ್ಯತ್ ಕಂಠೀರವರವ
ನುದ್ಯತ್ತುಹಿನಾಂಶು ಕಿರಣಕೀರ್ತಿರ್ನೃ ಸಿಂಹಂ ॥

ಎಂದು ತನ್ನ ಹೆಗ್ಗಳಿಕೆಯನ್ನು ಹೇಳಿಕೊಂಡಿದ್ದಾನೆ.

ಹೀಗೆ ಒಂದನೆಯ ಬುಕ್ಕನಿಂದ ಮೂರನೆಯ ಶ್ರೀರಂಗನ ವರೆಗೆ ಆಳಿದ ವಿಜಯನಗರದ ಈ ಅರಸರು ತಮ್ಮ ಆಡಳಿತ ಕಾಲದಲ್ಲಿ ಶಿಲಾಶಾಸನಗಳನ್ನು ನೆಡೆಸಿದ್ದಾರೆ. ತಾಮ್ರಶಾಸನಗಳನ್ನು ಬರೆಸಿದ್ದಾರೆ. ಈ ಜಿಲ್ಲೆಯಲ್ಲಿ ದೊರೆತಿರುವ ಈ ಅರಸರ ಶಾಸನಗಳಲ್ಲಿ ಶಿಲಾಶಾಸನಗಳೇ ಹೆಚ್ಚು, ಕೇವಲ 14 ತಾಮ್ರಶಾಸನಗಳು ಮಾತ್ರ ದೊರೆತಿವೆ. ಕನ್ನಡ, ಸಂಸ್ಕೃತ, ತೆಲುಗು ಹಾಗೂ ತಮಿಳಿನ ಶಾಸನಗಳೂ ಇಲ್ಲಿವೆ. ಸಂಖ್ಯಾದೃಷ್ಟಿಯಿಂದ ಕನ್ನಡದ ಶಾಸನಗಳೇ ಅಧಿಕ. ತಾಮ್ರಶಾಸನಗಳೆಲ್ಲಾ ಸಂಸ್ಕೃತದಲ್ಲಿವೆ. ಅಪವಾದವನ್ನುವಂತೆ 2 ತೆಲುಗು (ಮಂ. 38, ಶ್ರೀಪ 33) ಹಾಗೂ ಒಂದು ಕನ್ನಡದ (ಮ. 64) ತಾಮ್ರಶಾಸನಗಳಿವೆ. ವಿಜಯನಗರದ ಕಾಲದಲ್ಲಿ ತಾಮ್ರಶಾಸನಗಳು ಕನ್ನಡದಲ್ಲಿರುವ ನಿದರ್ಶನಗಳು ಬಹು ವಿರಳ. ಈ ಕನ್ನಡ ತಾಮ್ರಶಾಸನದ ಪ್ರಾರಂಭ ಹಾಗೂ ಫಲಸ್ತುತಿಯ ಭಾಗ ಸಂಸ್ಕೃತದಲ್ಲಿಯೇ ಇದೆ. ಸಂಸ್ಕೃತದ ಈ ತಾಮ್ರಶಾಸನಗಳಲ್ಲಿ ಸಂಸ್ಕೃತ ವೃತ್ತಗಳೊಂದಿಗೆ ಖ್ಯಾತಕರ್ನಾಟಕ ವೃತ್ತಗಳೂ ಬಂದಿವೆ. ಇವುಗಳು ಒಂದರ ಪಡಿಯಚ್ಚು ಇನ್ನೊಂದಾಗಿದ್ದು ವೈವಿಧ್ಯ

ಗಳಿಲ್ಲ. ಶಿಲಾಶಾಸನಗಳು ಜನ ಸಾಮಾನ್ಯರ ತಿಳುವಳಿಕೆಗಾಗಿ ಹಾಕಿಸುತ್ತಿದ್ದುದರಿಂದ ಅವು ಕನ್ನಡದಲ್ಲಿಯೇ ಇವೆ ಅಪರೂಪಕ್ಕೆನ್ನುವಂತೆ ಅಲ್ಲೊಂದು ಇಲ್ಲೊಂದು ಸಂಸ್ಕೃತ, ತಮಿಳು ಶಾಸನಗಳಿವೆ. ತಮಿಳು ಶಾಸನ ಇರುವುದೂ ಒಂದು ವಿಶೇಷ. ಶ್ರೀಪ. 93 ಹಾಗೂ ಪಾಂಪು 19 —ಈ ಎರಡು ಶಿಲಾಶಾಸನಗಳು ಎರಡು ಕಲ್ಲುಗಳ ಮೇಲಿದ್ದು ದೀರ್ಘವಾದ ಪಂಕ್ತಿಗಳನ್ನೊಳಗೊಂಡಿವೆ ಮೊದಲನೆಯ ಶಾಸನ 74 ಪಂಕ್ತಿಗಳನ್ನೊಳಗೊಂಡಿದ್ದರೆ ಎರಡನೆಯದು 101 ಪಂಕ್ತಿಗಳವರೆಗೆ ವಿಸ್ತರಿಸಿದೆ. ಇಲ್ಲಿ ದೊರೆತಿರುವ ಶಾಸನಗಳಲ್ಲಿ ದಾನ ಶಾಸನಗಳೇ ಹೆಚ್ಚು. ಬಹುಪಾಲು ಶಾಸನಗಳು ತ್ರುಟಿತವಾಗಿರುವುದರಿಂದ ಶಾಸನ ಹಾಕಿಸಿರುವ ಉದ್ದೇಶವನ್ನು ಗ್ರಹಿಸುವುದು ಕಠಿಣವೆನಿಸಿದೆ. ಭಾಷೆಯ ದೃಷ್ಟಿಯಿಂದಲೂ ಈ ಕಾಲದ ಶಾಸನಗಳು ಅಷ್ಟೇನು ಮಹತ್ವಪೂರ್ಣವೆನಿಸುವುದಿಲ್ಲ. ಹೊಯ್ಸಳರ ಕಾಲದಲ್ಲಿ ಕಂಡುಬರುವ ಭಾಷಾ ಪ್ರೌಢಿಮೆ, ಸಾಹಿತ್ಯಕ ಮೌಲ್ಯ ಈ ಕಾಲದ ಶಾಸನಗಳಲ್ಲಿಲ್ಲ. ಆ ಕಾಲದ ಗದ್ಯದಲ್ಲಿದ್ದ ಸೊಗಸನ್ನೂ ಸುದೀರ್ಘವಾದ ವರ್ಣನೆಗಳನ್ನೂ ಇಲ್ಲಿ ಕಾಣುವುದು ವಿರಳ. ದುಂಡಾದ, ಮುದ್ದಾದ ಲಿಪಿಯನ್ನೊಳಗೊಂಡ ಶಿಲಾಶಾಸನಗಳು ಇಲ್ಲವೆಂದು ಹೇಳಿದರೆ ಅತಿಶಯೋಕ್ತಿ ಎನಿಸದು. ಅರುವನಹಳ್ಳಿಯ ಶಾಸನದಲ್ಲಿ ಬಂದಿರುವ ಬಾಚಿಯಪ್ಪನ ಗುಣವರ್ಣನೆಯ ಈ ಉತ್ಪಲಮಾಲಾ ವೃತ್ತವೇ ಕನ್ನಡ ಪದ್ಯ ಶೈಲಿಗೆ ಉತ್ತಮ ಉದಾಹರಣೆ :

ಶೂರತೆಯಂ ಮೃಗಾಧಿಪನೊಳಕ್ಷಮೆಯಂ ಕ್ಷಿತಿಯೊಳ್ಗಭೀರಮಂ
ವಾರಿಧಿಯೊಳ್ಮನೋರಮತೆಯಂ ಮಕರಧ್ವಜನೊಳ್ಸು ಕಾಂತಿಯಂ
ಪಾರಿಜಮೈರಿಯೊಳ್ಪಡೆದು ಪದ್ಮಜ ನಿರ್ಮಿಸಿದಂತಿರಂಚಿತಂ
ಚಾರುಚರಿತ್ರ ಕೀರ್ತಿಯುತ ತನೂಭವಬಾಚನುದಾರನುರ್ವಿಯೊಳು ॥

ಸಿಂಧಘಟ್ಟದ ಒಳಕೇರಿಯಲ್ಲಿ ಬಾಬುಸೆಟ್ಟಿ ಎಂಬಾತ ಕಟ್ಟಿಸಿದ 'ಕಲ್ಲುಮಸೀದಿ'ಗೆ ರಂಗೈನಾಯಕ ಶಿವಪುರಗ್ರಾಮ, ೧೪ ಗದ್ಯಾಣ ಕಾಣಿಕೆಯನ್ನೂ ಕೊಟ್ಟು ಮಸೀದಿಯ ಮೇಲ್ವಿಚಾರಕನಾದ ಹಬೀಬನಿಗೆಂದು ಮನೆಯನ್ನೂ ಕೊಟ್ಟಿರುವುದನ್ನೂ ಗಮನಿಸಿದಾಗ ಅಂದಿನ ಜನಗಳಲ್ಲಿದ್ದ ಮನೋವೈಶಾಲ್ಯದ ಅರಿವಾಗುವುದಲ್ಲದೆ ಧಾರ್ಮಿಕ ಸೌಹಾರ್ದತೆಯ ಕುರುಹೂ ಆಗಿದೆ. ಇದಲ್ಲದೆ ಸದಾಶಿವರಾಯನ ಆಳಿಕೆಯ ಕಾಲದಲ್ಲಿ ಅಲಲು ಮಲುಕವೊಡೆಯನೆಂಬ ಮಹಮ್ಮದೀಯ ಅಧಿಕಾರಿಯೂ ಇದ್ದ (ನಾಮಂ. 40).

ದಾನ ಕೊಟ್ಟುದನ್ನು ಕಾಪಾಡಬೇಕೆಂಬ ಮನೋಭಾವ, ಧರ್ಮದಲ್ಲಿದ್ದ ನಂಬಿಕೆ ಕುಸಿಯುತ್ತಿದ್ದುದರಿಂದಲೇ "ಈಗ ನಾಲು ಬಿಟ್ಟ ಸ್ವಾಸ್ತಿಗೆ ಅಳುಪಿದವನು ನಂಜಲಗೂಡ ಸೂಳೆಯರು । ಮೇಲುಗೋಟೆಯ ಸೂಳೇರು । ತಿರುಮಕೂಡಲು ಸೂಳೆಯರು ಮಕ್ಕಳಾಗಿ ಜಲ್ಮಜಲ್ಮಾಂತರದಲ್ಲಿ ಹುಟ್ಟುವನು" ಎಂಬಂತಹ ಶಾಪವಾಕ್ಯಗಳು ಶಾಸನದ ಕೊನೆಯಲ್ಲಿ ಕಾಣಿಸಿಕೊಂಡಿವೆ. ಅಂದಿನ ಸಮಾಜದಲ್ಲಿ

ವೇಶ್ಯಾವೃತ್ತಿಗೆ ಮನ್ನಣೆಯಿದ್ದರೂ ಅವರ ಸಂತಾನದ ಬಗೆಗಿದ್ದ ಕುತ್ಸಿತ ಮನೋಭಾವ ಇಲ್ಲಿ ಧ್ವನಿತವಾಗಿದೆ. ಅಧಿಕಾರಿಗಳಲ್ಲಿಯೂ ನಿಷ್ಠೆ ಕಡಿಮೆಯಾಗುತ್ತಿದ್ದು 'ಪಾರುಪತ್ಯ' ಮಾಡುತ್ತಿದ್ದ ವಿಷಯವನ್ನೂ ಈಗಾಗಲೇ ಗಮನಿಸಿದ್ದೇವೆ. ಸಾಹಿತ್ಯಕ ಮೌಲ್ಯ ಉಳ್ಳ ಗದ್ಯ, ಪದ್ಯಗಳೂ ಕಣ್ಮರೆಯಾಗುತ್ತಿದ್ದು ಭಾಷಾಬಂಧವೂ ಜಾಳುಜಾಳಾಗುತ್ತಿದ್ದುದನ್ನೂ ಕಾಣುತ್ತೇವೆ ಈ ಎಲ್ಲ ವಿಚಾರಗಳ ಕಡೆ ದೃಷ್ಟಿ ಹಾಯಿಸಿದಾಗ ವಿಜಯನಗರ ಕಾಲದ ಸಮಾಜ ಧಾರ್ಮಿಕ ಹಾಗೂ ಸಾಂಸ್ಕೃತಿಕವಾಗಿ ಅವನತಿಯ ಪಥದತ್ತ ಹೆಜ್ಜೆ ಹಾಕುತ್ತಿತ್ತೆಂದೇ ಹೇಳಬೇಕಾಗುತ್ತದೆ.

ಕೃಷ್ಣವೇಣಿ

ಅಡಿ ಟಿಪ್ಪಣಿಗಳು

1. ಎಪಿಗ್ರಾಫಿಯ ಕರ್ನಾಟಕ ಸಂ. vi (1977)
2. ಎಪಿಗ್ರಾಫಿಯ ಕರ್ನಾಟಕ ಸಂ. vii (1979)

ಮಂಡ್ಯ ಜಿಲ್ಲೆ - ಮೈಸೂರು ಒಡೆಯರ ಆಡಳಿತದಲ್ಲಿ

ಕರ್ನಾಟಕ ರತ್ನಸಿಂಹಾಸನಾಧೀಶ್ವರರೆಂದು ಮೈಸೂರು ಒಡೆಯರು ಪ್ರಸಿದ್ಧರಾದದ್ದು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ನೆಲೆಯೂರಿದ ನಂತರ. ಪ್ರಸ್ತುತ ಲೇಖನದಲ್ಲಿ ಅವರು ಶ್ರೀರಂಗಪಟ್ಟಣವನ್ನು ಆಕ್ರಮಿಸಿಕೊಂಡ 21–3–1610 ರಿಂದ 26–1–1951ರ ವರೆಗೆ ಪ್ರಮುಖವಾಗಿ ಶಾಸನಗಳನ್ನು ಆಧರಿಸಿ ಅವರು ಮಂಡ್ಯ ಜಿಲ್ಲೆಗೆ ಕೊಟ್ಟ ಕೊಡುಗೆಯನ್ನು ರೂಪಿಸುವ ಪ್ರಯತ್ನವನ್ನು ನಡೆಸಿದೆ.

ಮೈಸೂರು ಒಡೆಯರ ಮನೆತನದವರು ಯದುರಾಯ ಕ್ರಿ.ಶ. (1399)ರಿಂದ ಜಯಚಾಮರಾಜ ಒಡೆಯರ್ (195) ವರೆಗೆ ಎಂದರೆ 550 ವರ್ಷಗಳ ಕಾಲ ಅವಿಚ್ಛಿನ್ನವಾಗಿ ಆಳಿದ್ದಾರೆ. ಐತಿಹಾಸಿಕವಾಗಿ ಇದೊಂದು ಸಾಧನೆ. ಮೈಸೂರು ಒಡೆಯರು ಯುದ್ಧರಂಗದಲ್ಲಿ ಪರಾಕ್ರಮಿಗಳಾಗಿದ್ದರು ದೈನಂದಿನ ಜೀವನದಲ್ಲಿ ಆಸ್ತಿಕರೂ ಧರ್ಮಪರಾಯಣರೂ ಆಗಿದ್ದರು ರಾಜಾ ಪ್ರತ್ಯಕ್ಷದೇವತಾ ಎನ್ನುವ ಭಾವನೆಯನ್ನು ಅವರ ಮೇಲೆ ಪ್ರಜೆಗಳು ಇಟ್ಟಿದ್ದರು

ಚಿಕ್ಕದೇವರಾಯನ 19–11–1686 ಶ್ರೀರಂಗಪಟ್ಟಣ 24ನೆಯ ಶಾಸನದಿಂದ ಮೈಸೂರು ಒಡೆಯರ ಮೂಲ ಹಾಗೂ ಪರಂಪರೆಯನ್ನು ಹೀಗೆ ಗುರುತಿಸಬಹುದಾಗಿದೆ —ವಿಷ್ಣುವಿನ ನಾಭೀ ಕಮಲದಿಂದ ಬ್ರಹ್ಮ. ಬ್ರಹ್ಮನಿಂದ ಅತ್ರಿ, ಅತ್ರಿಯಿಂದ ಚಂದ್ರ, ಚಂದ್ರನಿಂದ ಬುಧ, ಬುಧನಿಂದ ಪುರೂರವ, ಪುರೂರವನಿಂದ ಆಯು, ಆಯುವಿನಿಂದ ನಹುಷ, ನಹುಷನಿಂದ ಯಯಾತಿ, ಯಯಾತಿಯಿಂದ ಯದುವೆಂಬ ಮಕ್ಕಳು ಜನಿಸಿದರು. ಯದುವು ದ್ವಾರಕೆಯಲ್ಲಿ ನೆಲೆಸಿದನು. ಆ ಯದುವಂಶದ ಕೆಲವರು ಕರ್ಣಾಟಕದೇಶಕ್ಕೆ ಬಂದು ಯದುಗಿರಿಶಿಖರಾಭರಣನಾದ ನಾರಾಯಣನನ್ನು ನೋಡಿ ಸೇವಿಸಿ ದೇಶಸಂಚಾರ ಮಾಡುತ್ತ ಬಂದು ಮಹೀಶೂರಪುರದಲ್ಲಿ ನೆಲೆಸಿದರು.

ಈ ಮನೆತನದಲ್ಲಿ ಬೆಟ್ಟದ ಚಾಮರಾಜ ಜನಿಸಿದನು. ಐತಿಹಾಸಿಕವಾಗಿ ನೋಡುವುದಾದರೆ ಈತನೇ ನಮಗೆ ದೊರೆಯುವ ಮೈಸೂರು ಒಡೆಯರ ಮೂಲ ಪುರುಷ. ಇವನು ಅರಿಘೋಧೂಮಘರಟ್ಟನೆನಿಸಿದನು. ಈತನಿಗೆ ಮೂರು ಜನ ಮಕ್ಕಳು. ಅವರಲ್ಲಿ ತಿಮ್ಮರಾಜನು ಅಂತೆಂಬರ ಗಂಡ ಎನ್ನುವ ಬಿರುದನ್ನು ಸಂಪಾದಿಸಿ ಊರ್ಜಿತಗೊಳಿಸಿದನು. ಆತನ ಸೋದರ ಕೃಷ್ಣಭೂಪತಿ,–ವಿಜಯಶ್ರೀ

ಯನ್ನು ಸ್ಥಾಪಿಸಿ ಧರ್ಮತತ್ಪರನಾಗಿದ್ದನು. ಕಿರಿಯ ಮಗ ಚಾಮನೃಪನು ರಾಮ ರಾಜನ ಸೇನಾನಿ ರೇಮಟಿ ವೆಂಕಟನನ್ನು ಸೋಲಿಸಿದನು.

ಚಾಮನೃಪನಿಗೆ ನಾಲ್ಕು ಜನ ಮಕ್ಕಳು. ಅವರಲ್ಲಿ ಮೊದಲನೆಯ ಮಗನಾದ ರಾಜಾಧಿರಾಜನು ತನ್ನ ಶಪಥದಂತೆ ಗರ್ವೋದ್ಧತನಾದ ಕಾರುಗಹಳ್ಳಿಯ ಪ್ರಭುವನ್ನು ತನ್ನ ಕುದುರೆ ಚಾವಟಿಯಿಂದ ಹೊಡೆದು ಜಯಿಸಿದನು. ತಿರುಮಲ ರಾಜನನ್ನು ಗೆದ್ದು ಶ್ರೀರಂಗಪಟ್ಟಣವನ್ನು ಗೆದ್ದು ವಶಪಡಿಸಿಕೊಂಡನು. ಅಲ್ಲಿನ ಸಿಂಹಾಸನ ವನ್ನೇರಿ ಸಾರ್ವಭೌಮ ಸಾಮ್ರಾಜ್ಯವನ್ನು ಪಡೆದನು. ಇವನ ತಮ್ಮ ಬೆಟ್ಟದ ಚಾಮ ರಾಜ. ಶತ್ರುಗಳೊಡನೆ ಈತನು ಹೋರಾಡುವಲ್ಲಿ ಯಜ್ಞೋಪವೀತದಂತಹ ಗಾಯ ಗಳು ಈತನ ಎದೆಯಮೇಲೆ ಆಗಿದ್ದುವು. ಇವನ ತಮ್ಮ ದೇವರಾಜೇಂದ್ರ. ದೇವ ರಾಜೇಂದ್ರನ ತಮ್ಮ ಚಾಮರಾಜ ಈತನು ವಿಷ್ಣುವಿಗೆ ಜಿಷ್ಣುವಿನಂತಿದ್ದನು.

ದೇವರಾಜೇಂದ್ರನ ನಾಲ್ವರು ಮಕ್ಕಳಲ್ಲಿ ಹಿರಿಯವನು ದೊಡ್ಡದೇವರಾಜ. ಈತನು ರಾಮನಂತಿದ್ದನು. ಭಕ್ತಿಭಾವದಿಂದ ಇವನ ತಮ್ಮಂದಿರು ಈತನ ಸೇವೆಯನ್ನು ಮಾಡುತ್ತಿದ್ದರು. ಎರಡನೆಯ ಚಿಕ್ಕದೇವರಾಜೇಂದ್ರನು ಲಕ್ಷ್ಮಣನಂತಿದ್ದನು. ಮೂರನೆಯವನು ಶ್ರುತಜನಸುರಭೂಜನಾದ ದೇವರಾಜ. ಈತನ ತಮ್ಮ ಸತ್ಯ ಸಂಧನಾದ ಮರಿಯದೇವಕ್ಷ್ಮಾಪತಿ. ನಾಗಲೋಕಕ್ಕೆ ಭಗೀರಥನು ಗಂಗೆಯನ್ನು ತೆಗೆದು ಕೊಂಡು ಹೋದಂತೆ ಈತನು ಮೈಸೂರಿನಲ್ಲಿ ಕೆರೆಯೊಂದನ್ನು ಕಟ್ಟಿಸಿದನು. ಪಶ್ಚಿಮ ರಂಗಪುರದ ಈಶಾನ್ಯ ಭಾಗದಲ್ಲಿ ಮಣಿಕರ್ಣಿಕಾಕ್ಷೇತ್ರದಲ್ಲಿ ಬ್ರಾಹ್ಮಣರಿಗೆ ಅಗ್ರಹಾರ ವೊಂದನ್ನು ರಚಿಸಿದನು.

ಮಧುರಾಧಿಪನ ಸೈನ್ಯವನ್ನು ಈರೋಡು ಸೀಮಾಂತರದಲ್ಲಿ ಸೋಲಿಸಿದನು. ದಾಮರಲ್ಲೈಯಪೇಂದ್ರನನ್ನು ಹತಿಸಿದನು. ಅನಂತೋಜಿಯನ್ನು ಓಡಿಸಿದನು. ಕುಲಶೇಖರ ಎನ್ನುವ ಆನೆಯನ್ನು ಸೆರೆಹಿಡಿದನು. ಚಾಂಬಳ್ಳಿಪುರ, ಓಮಲೂರು. ಮತ್ತು ಧಾರಾಪುರಗಳನ್ನು ವಶಪಡಿಸಿಕೊಂಡನು. ಕೆಳದಿ ದೊರೆಗಳ ಸೈನ್ಯವನ್ನು ಸೋಲಿಸಿ ಗಂಗಾಧರ ಎನ್ನುವ ಆನೆಯನ್ನು ಸೆರೆಹಿಡಿದನು. ಅಭೇದ್ಯವಾದ ಹಾಸನ ಮತ್ತು ಸಕ್ಕರೆಪಟ್ಟಣಗಳ ಕೋಟೆಗಳನ್ನು ವಶಪಡಿಸಿಕೊಂಡನು.

ಸಕ್ಕರೆಪಟ್ಟಣದಿಂದ ಪೂರ್ವಕ್ಕೆ ಶಾಲ್ಯದಿಂದ ಪಶ್ಚಿಮಕ್ಕೆ ಚಿಕ್ಕನಾಯಕ ಪುರದಿಂದ ದಕ್ಷಿಣಕ್ಕೆ ಧಾರಾಪುರದಿಂದ ಉತ್ತರಕ್ಕೆ ಎಲ್ಲ ರಸ್ತೆಗಳಲ್ಲಿಯೂ ಪ್ರತಿಯೊಂದು ಯೋಜನಕ್ಕೂ ಧರ್ಮಛತ್ರಗಳನ್ನಿಡಿಸಿದನು. ಪ್ರಭಾತ ಕಾಲದಲ್ಲೆದ್ದು ವಿಷ್ಣುಸ್ಮರಣೆಮಾಡಿ ಸಹಸ್ರನಾಮ ಪೂರ್ವಕ ಪೂಜೆ ನಡೆಸಿ ಬ್ರಾಹ್ಮಣರಿಗೆ ಗೋದಾನ ಸುವರ್ಣದಾನಗಳನ್ನು ಕೊಟ್ಟು ಇತಿಹಾಸ ಕಥೆಗಳನ್ನು ಕೇಳುತ್ತಿದ್ದನು. ಚಿಕ್ಕ ದೇವೇಂದ್ರನು ತನ್ನ ಉದಾರ ಗುಣದಿಂದ ಉಪೇಂದ್ರನಂತೆ ತನ್ನ ಪ್ರಜೆಗಳಿಗೆ ಹರ್ಷ ವನ್ನುಂಟು ಮಾಡುತ್ತಿದ್ದನು.

ದಾದೋಜಿ, ಜೈಕಾಜಿ ಮುಂತಾದ ಮರಾಠ ಸರದಾರರೊಡನೆ ಹೋರಾಡಿದನು. ದಾದೋಜಿಯನ್ನು ಕೊಂದು ಜೈಕಾಜಿ ಮತ್ತು ಜಸವಂತರ ದೇಹದ ಎಲ್ಲ ಅಂಗಗಳನ್ನು ಕತ್ತರಿಸಿದನು. ಶಂಭುವಿನ ಶಕ್ತಿ ಕುಂದಿತು. ಶಂಭುಜಿರಾಯ ಹತಾಶನಾದನು. ಇಕ್ಕೇರಿ ಬಸವನು ಧಿಕ್ಕರಿಸಲ್ಪಟ್ಟನು. ಏಕೋಜಿ ಏಕಾಂಗಿಯಾದನು. ಗರುಡನನ್ನು ಕಂಡ ಸರ್ಪಗಳ ಹಾಗೆ ಶಂಭು, ಕಾಪ ಮತ್ತು ಬಸವರು ಓಟ ಮಾತ್ರದಿಂದ ಭೀತರಾಗುತ್ತಿದ್ದರು. ಶ್ರೀ ದೇವರಾಜನೃಪತಿಯು ಸಾಕ್ಷಾತ್ ನರಸಿಂಹಾಕೃತಿಯಾಗಿದ್ದನು.

ಈ ವಂಶಾವಳಿಯಲ್ಲಿ ಮೈಸೂರು ಒಡೆಯರ ಮನೆತನದ ಸುಪ್ರಸಿದ್ಧ ದೊರೆ ಕಂಠೀರವನರಸರಾಜನ ಉಲ್ಲೇಖವಿಲ್ಲ. ಅದಕ್ಕೆ ಕಾರಣ ಇದರಲ್ಲಿ ಚಿಕದೇವೇಂದ್ರನ ವಂಶಾವಳಿಯನ್ನು ನೇರವಾಗಿ ಹೇಳಿದೆ. ಕಂಠೀರವನರಸರಾಜನು ಮುಪ್ಪಿನದೇವರಾಜನ ಅಣ್ಣನ ಮಗನಾದುದರಿಂದ ಇಲ್ಲಿ ಅವನ ಉಲ್ಲೇಖ ಬಿಟ್ಟುಹೋಗಿದೆಯೆನ್ನಬಹುದು. ಆದರೆ ಚಿಕ್ಕದೇವರಾಜ ವಿಜಯ ಮತ್ತು ಚಿಕ್ಕದೇವರಾಯ ವಂಶಾವಳಿಗಳಲ್ಲಿ ಕಂಠೀರವನರಸರಾಜನ ಪ್ರಸ್ತಾಪವಿರುವುದನ್ನು ಗಮನಿಸಬಹುದಾಗಿದೆ.

30–12–1724ರ ಪಾಂಡವಪುರ 215 ಮೇಲುಕೋಟೆ ಶಾಸನದಲ್ಲಿ ಮೇಲಿನ ವಿವರಗಳು ಪುನರಾವರ್ತನೆಯಾಗಿದ್ದು ಹೀಗೆ ಮುಂದುವರೆದಿದೆ–ಪ್ರತಿವ್ರತೆಯರನ್ನು ಗಣಿಸುವಾಗ ಚಿಕ್ಕದೇವರಾಜನ ಸತಿ ದೇವಮ್ಮಾಜಿಯದು ಮೊದಲು ಹೆಸರು. ವಿಷ್ಣುವಿನ ಅಂಶದಿಂದ ಇವರಲ್ಲಿ ಜನಿಸಿದವನು ಕಂಠೀರವೇಂದ್ರ. ಈತನ ಹೆಂಡತಿ ಜಗತ್ಪ್ರಸಿದ್ಧಳಾದ ಚೆಲುವಾಜಮ್ಮಾಂಬ. ಈ ದಂಪತಿಗಳ ಮಗ ಕೃಷ್ಣರಾಜ. ಈತನು ಕಲ್ಪವೃಕ್ಷ ಸಮಾನನಾದವನು. ವಂಶಾವಳಿಯನ್ನು ಕೊಡುವ ಶಾಸನ ಇಲ್ಲಿಗೆ ನಿಲ್ಲುತ್ತದೆ. ಐತಿಹಾಸಿಕವಾಗಿ, ನೋಡಿದಾಗ ಈತನ ಅನಂತರ ಚಾಮರಾಜಒಡೆಯರ್ VI, ಕೃಷ್ಣರಾಜಒಡೆಯರ್ II, ನಂಜರಾಜ ಒಡೆಯರ್, ಬೆಟ್ಟದ ಚಾಮರಾಜ ಒಡೆಯರ್, ಖಾಸಾಚಾಮರಾಜ ಒಡೆಯರ್, ಕೃಷ್ಣರಾಜ ಒಡೆಯರ್ III, ಚಾಮರಾಜ ಒಡೆಯರ್, ಕೃಷ್ಣರಾಜ ಒಡೆಯರ್ IV ಮತ್ತು ಜಯಚಾಮರಾಜ ಒಡೆಯರ್ ಅವರುಗಳು ಕ್ರಮವಾಗಿ ರಾಜ್ಯವಾಳಿದ್ದಾರೆ.

ರಾಜ ಒಡೆಯ (1578-1617)ನು ವಿಜಯನಗರದ ಒಂದನೆಯ ವೆಂಕಟನ ರಾಜಪ್ರತಿನಿಧಿಯಾದ ತಿರುಮಲರಾಯನೊಡನೆ ಹೋರಾಡಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡನು. ಅದರ ಫಲವಾಗಿ ದಕ್ಷಿಣ ಸಿಂಹಾಸನ, ರತ್ನಸಿಂಹಾಸನವೆಂದು ಪ್ರಸಿದ್ಧವಾದ ಭೋಜನದೆಂದು ಭಾವಿಸಲಾದ ಭೋಜಸಿಂಹಾಸನ ಮೈಸೂರು ಒಡೆಯರಿಗೆ ಲಭಿಸಿತು. ಸಾಧಾರಣ ಚೈತ್ರ ಶುದ್ಧ ಸಪ್ತಮಿಯಂದು ಎಂದರೆ 21–3–1610 ರಂದು ಜೋಯಿಸಗಣಿತಜ್ಞರು ಸುಮುಹೂರ್ತ ಎಂದು ನಿಶ್ಚಯಿಸಿದ ಕಾಲದಲ್ಲಿ ಸಿಂಹಾಸನವೇರಿ ಓಲಗವಿದ್ದನು. ಅದುವರೆವಿಗೂ 33 ಹಳ್ಳಿಗಳಿಗೆ ಒಡೆಯರಾಗಿದ್ದ ಮೈಸೂರು ಒಡೆಯರು ಸಿಂಹಾಸನಾಧೀಶರಾದರು. ತಮ್ಮಂದಿರ ನೆರವಿನಿಂದ

ರಾಜಒಡೆಯ ಕ್ಷೇತ್ರಯಾತ್ರೆ ಹೊರಟು ಕಾರುಗಹಳ್ಳಿ, ಕಳಲೆ, ಮೂಗೂರು, ತಗಡೂರು, ತಾಯೂರು, ಹೆಡತಲೆ, ಹೆಮ್ಮರಗಾಲ, ನಿಲಸೋಗೆ, ಮುಗುರ, ಹುಲ್ಲಹಳ್ಳಿ, ಬಿಳಿಕೆರೆ, ಕೊತ್ತಾಗಾಲ, ತಲಕಾಡು, ಅಮ್ಮಚವಾಡಿಯ ಸೀಮೆಗಳನ್ನು ಸೇರಿಸಿ ರಾಜ್ಯವಾಳುತ್ತಿದ್ದನು.

ರಾಜಒಡೆಯನು ಹೊಸ ಸಿಂಹಾಸನವನ್ನು ಸ್ಥಾಪಿಸಿ ಅನೇಕ ಉತ್ಸವ ಸಂದರ್ಭ ಸನ್ನಿವೇಶಗಳಲ್ಲಿಯೂ ಕೂಡ ದೇವಬ್ರಾಹ್ಮಣರಲ್ಲಿ ಆದರವನ್ನು ತೋರುತ್ತಿದ್ದನು. ಲಕ್ಷ್ಮೀಕಾಂತ ಮೈಸೂರು ದೊರೆಗಳ ಮನೆದೇವರು. ಕುಲದೇವರು ಯದುಗಿರಿ ನಾರಾಯಣ ಮತ್ತು ಶ್ರೀರಂಗಪಟ್ಟಣದ ರಂಗನಾಥ. ಶ್ರೀರಂಗಪಟ್ಟಣ 95 ಕರಿಘಟ್ಟದ ಶಾಸನದ ಪ್ರಕಾರ ನಳಸಂವತ್ಸರದ ಮಾಘಶು 10ಲು ಮಯಿಸೂರ ರಾಜಒಡೇರ ಸೇವೆ ಎನ್ನುವ ವಾಕ್ಯ ಲಭ್ಯವಾಗುತ್ತದೆ. ಇದು ಮಂಡ್ಯ ಜಿಲ್ಲೆಯಲ್ಲಿ ದೊರೆಯುವ ಮೈಸೂರು ಒಡೆಯರ ಮೊದಲ ಶಾಸನ. ನಳಸಂವತ್ಸರವು 1616–1617ಕ್ಕೆ ಸರಿಹೊಂದುತ್ತದೆ. ಕರಿಘಟ್ಟದ ಶ್ರೀನಿವಾಸದೇವಸ್ಥಾನವನ್ನು ಬಹುಶಃ ರಾಜಒಡೆಯನು ಕಟ್ಟಿಸಿರಬೇಕು. ಅಲ್ಲದೆ ಮೇಲುಕೋಟೆ ಮತ್ತು ಶ್ರೀರಂಗಪಟ್ಟಣದ ರಂಗನಾಥದೇವಾಲಯಗಳನ್ನು ದುರಸ್ತಿಗೊಳಿಸಿದ್ದಾನೆ. ಮೇಲುಕೋಟೆಯ ರಾಜಮುಡಿಯು ರಾಜಒಡೆಯನ ಸೇವೆ. 1614ರಲ್ಲಿ ಮುತ್ತಿಗೆರೆಯನ್ನು 50 ವೃತ್ತಿಯನ್ನಾಗಿ ಮಾಡಿ 49ನ್ನು ಬ್ರಾಹ್ಮಣರಿಗೂ ಒಂದನ್ನು ಚೆಲುವರಾಯಸ್ವಾಮಿಯ ಗರುಡವಾಹನದ ಸೇವೆಗೂ ಬಿಟ್ಟಿದ್ದಾನೆ. ಚಿಕ್ಕದೇವರಾಜವಿಜಯದಿಂದ ತಿಳಿದು ಬರುವಂತೆ ಈತನು ಶ್ರೀರಂಗಪಟ್ಟಣದಲ್ಲಿ ಸಿದ್ಧಿಹೊಂದಿದ ಸಂದರ್ಭಕ್ಕೆ ಸರಿಯಾಗಿ ಈತನ ಆತ್ಮ ಮೇಲುಕೋಟೆಯ ಚೆಲುವರಾಯನಲ್ಲಿ ಐಕ್ಯವಾಗುವುದನ್ನು ಅಲ್ಲಿ ನೆರೆದಿದ್ದ ಭಕ್ತಾದಿಗಳು ಕಂಡರು.

ಚಾಮರಾಜ (1617–1637) ಒಡೆಯನಿಗೆ ಸೇರಿದ ಮಳವಳ್ಳಿ 64 ಮತ್ತು 108ನೆಯ ಶಾಸನಗಳು ಬಹುಮಟ್ಟಿಗೆ ಒಂದೇ. ಆದರೆ 64ನೆಯ ಶಾಸನದಲ್ಲಿರುವ ಗ್ರಾಮಗಳ ಸಂಖ್ಯೆಗಿಂತ 108ನೆಯ ಶಾಸನದಲ್ಲಿ ಹೆಚ್ಚಿನ ಗ್ರಾಮಗಳಿವೆ. ಚಾಮರಾಜನ ಕೋಶವು–ಕವಿ ಬುಧಾಶ್ರಿತಂ ಯಸ್ಯ ಕೋಶಸ್ಯ ಪೂರ್ತಿಃ–ಎಂದರೆ ಕವಿ ಮತ್ತು ವಿದ್ವಜ್ಜನರ ಹಿತಕ್ಕಾಗಿ ನಿಯೋಜಿತವಾಗಿದ್ದಿತು. 31–1–1623 ಹೊನ್ನಲಗೆರೆ ಶಾಸನದಲ್ಲಿ ರಾಜಒಡೆಯನ ಪೌತ್ರನೂ ನರಸರಾಜಒಡೆಯನ ಪುತ್ರನೂ ಆದ ಚಾಮರಾಜಒಡೆಯ ತನ್ನ ತಂದೆ ನರಸರಾಜ ಮತ್ತು ತಾಯಿ ಸೋನ್ನಾಜಿ ಅಮ್ಮನವರಿಗೆ ಪುಣ್ಯವಾಗಬೇಕೆಂದು ಕಾಶ್ಯಪಗೋತ್ರದ ಆಶ್ವಲಾಯನ ಸೂತ್ರದ ಋಕ್‌ಶಾಖೆಯ ಹಿರಿಯಣ್ಣಪಂಡಿತನ ಪೌತ್ರ ಅಪ್ಪಾಜಿಪಂಡಿತನ ಪುತ್ರ ರಾಮಾನುಜ, ವಿರೂಪಾಕ್ಷಯ್ಯ, ಗೋವಿಂದಯ್ಯಗಳಿಗೆ ಹೊನ್ನಲಗೆರೆ, ನಣ್ಣೂರು, ಹಾಗಲಹಳ್ಳಿ, ಘಂಟಿಕೆರೆಗಳನ್ನು ದಾನಬಿಟ್ಟನು. 108 ನೆಯ ಶಾಸನದಲ್ಲಿ ಮೇಲ್ಕಂಡ ಗ್ರಾಮಗಳ ಜೊತೆಗೆ ತಿಮ್ಮ

ಸಮುದ್ರವನ್ನು ದಾನಬಿಟ್ಟ ವಿಚಾರ ಹೆಚ್ಚಿನ ಅಂಶವಾಗಿದೆ. ಮೈಕೆಂಜಿ ಅವರ ಸಂಗ್ರಹದ 21-2-1632ರ ಶಾಸನದಿಂದ ಚಾಮರಾಜಒಡೆಯನು ಕಾವೇರಿ ನದಿಗೆ ಅಡ್ಡಲಾಗಿ ಸೇತುವೆಗಳನ್ನು ಮಾಡಿಸಿದುದಾಗಿಯೂ ಕಾವೇರಿ ನದಿಯ ಕಾಲುವೆಗಳನ್ನು ಸರಿಪಡಿಸಿದುದಾಗಿಯೂ ತಿಳಿದುಬರುತ್ತದೆ. ಆ ಕಾಲುವೆ ಬಯಲು ಹೊಸ ಬಯಲೆಂದು ಪ್ರಸಿದ್ಧವಾಯಿತು.

1625ರ ಶ್ರೀರಂಗಪಟ್ಟಣ 111ನೆಯ ಶಾಸನವು ಆರಕೆರೆಗ್ರಾಮದ ಪೂರ್ವದ ಕಡೆ ಹೊಲವೊಂದರಲ್ಲಿರುವ ಮಂಟಪದ ಕಂಬದ ಮೇಲಿದೆ. ಅದರಲ್ಲಿ ಮಯಿಸೂರ ಚಾಮರಾಜವೊಡೇರ ಮಕ್ಕಳು ಯುವರಾಜರ ಸೇವೆ ಎಂದಿದೆ ಬಹುಶಃ ಅಲ್ಲಿದ್ದ ದೇವಸ್ಥಾನ ನಾಶವಾಗಿದ್ದು ಅದಕ್ಕೆ ಸೇರಿದ ಕಲ್ಲುಮಂಟಪ ಇಂದಿಗೂ ನಿಂತಿರಬಹುದೆಂದು ಊಹಿಸಲಾಗಿದೆ

ಕಂಠೀರವ ನರಸರಾಜ (1638–1659)ನ ಆಳ್ವಿಕೆಯ ಕಾಲ ಭಾರತೀಯ ಇತಿಹಾಸದಲ್ಲಿಯೇ ಗಮನಾರ್ಹವಾದ ಕಾಲ ಮೊಗಲರು ದಕ್ಷಿಣದ ಕಡೆ ದೃಷ್ಟಿ ಹಾಯಿಸಿದರು. ನೆರೆಯ ಮರಾಠರು ಪ್ರಬಲರಾಗುತ್ತಿದ್ದರು. ರಾಜಒಡೆಯ ರಾಜ್ಯದೊಳಗಿನ ಪಾಳೆಯಪಟ್ಟುಗಳನ್ನು ವಶಪಡಿಸಿಕೊಂಡು ಪ್ರಭುತ್ವವನ್ನು ಗಟ್ಟಿಗೊಳಿಸಿದನು. ಆದರೆ ಕಂಠೀರವನರಸರಾಜ ಒಳಶತ್ರುಗಳನ್ನು ಎದುರಿಸುವುದರ ಜೊತೆಗೆ ಹೊರಗಡೆಯ ಶತ್ರುಗಳನ್ನೂ ಎದುರಿಸಬೇಕಾಯಿತು. ಮರಾಠರು ಮತ್ತು ಮುಸಲ್ಮಾನರು ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿ ಬಂದುದು ಈ ಕಾಲದಲ್ಲಿಯೇ. ರಣದೂಳೀಖಾನನ ಧಾಳಿ ಅತ್ಯಂತ ಪ್ರಸಿದ್ಧವಾದುದು. 'ಯದಾ ತುರುಷ್ಕಾಭವ ಮರ್ದಯಂತಿ' ಎನ್ನುವಂತೆ ಅವರೆಲ್ಲರನ್ನು ಸದೆಬಡಿದನು. ಪಿರಿಯಪಟ್ಟಣದ ಕಾಳಗದಲ್ಲಿ ಸಾಕಷ್ಟು ಕಾಲವ್ಯಯವಾಯಿತು. ಆದರೂ ಈತ ಮೈಸೂರು ದೊರೆಗಳಲ್ಲೆಲ್ಲ ಅತ್ಯಂತ ಪರಾಕ್ರಮಿ. "ವಂಗಾಸ್ಸಂಗರ ಭಿ ಬವಃ ಕಪಗಲದ್ಬಾಣಾಬಭೂವು ಭೃಶಂ ಹೂಣಾಃ ಕೊಂಕಣಾಭೂಭುಜೋ ನಿಜಪದಾತಂಕೋರು ಶಂಕಾಕುಲಾಃ ಸೌರಾಷ್ಟ್ರಾಗತ ರಾಷ್ಟ್ರಕಾಃ ಪರಿಗಲದ್ವಾಜಿವ್ರಜಾ ಗುರ್ಜರಾಮ್ಲೇಚ್ಛಾಸ್ತೇ ಪರಿಮೂರ್ಛಿತಾಸ್ಸಮಂ ಭವನ್ಯಸ್ಯಾಜಿ ರಂಗಾಂಗಣೇ" ಎನ್ನುವ ಕೀರ್ತಿಗೆ ಪಾತ್ರನಾದನು. ಈ ವಿಜಯಗಳಿಂದ ಸುಪ್ರೀತನಾದ ಚಿಕ್ಕ ಚಾಮರಾಜಒಡೆಯನು ಕಂಠೀರವ ನರಸರಾಜನಿಗೆ ಗುಂಡ್ಲು ತೆರಕಣಾಂಬಿಯಿಂದ ವಿಜಯನಾರಸಿಂಹ ಎನ್ನುವ ಕತ್ತಿಯನ್ನು ಉಡುಗೊರೆಯಾಗಿ ಕಳಿಸಿದನು.

ಈತನ ಕಾಲದಲ್ಲಿ ರಾಜಧಾನಿಯಾದ ಶ್ರೀರಂಗಪಟ್ಟಣ ಸುಸಜ್ಜಿತವಾದ ಕೋಟೆಯಿಂದ ಬಳಸಿದ್ದಿತು. ಆಳ್ವೇರಿ, ಕೊತ್ತಳ, ತೆನೆ, ಡೆಂಕಣಿ, ಅಗಳು, ಬಾಗಿಲ ಸಜ್ಜೆ, ವಿಶಾಲವೀಥಿಗಳು, ರಥಶಶಿವೀಧಿಗಳು, ಹರ್ಮ್ಯ, ಉಪ್ಪರಿಗೆ, ಕೇರಿಗಳು, ಪೂರ್ವದ ಬಾಗಿಲು, ಮೈಸೂರು ಬಾಗಿಲು, ಬಿಜಾಪುರದ ಬಾಗಿಲುಗಳಿಂದ ಕೂಡಿದ್ದಿತು.

ಅಶ್ವಗಳಲಾಯ, ಗಜಶಾಲೆಗಳಿದ್ದುವು. ಅರಮನೆಯಾದರೋ ಶಿಲ್ಪಕಲಾವೈಭವದಿಂದ ಕೂಡಿದ ಭಿತ್ತಿಗಳು, ನೆಲೆಮಾಡ, ಉಪ್ಪರಿಗೆ, ಓಲಗಹಜಾರ, ಲಕ್ಷ್ಮೀವಿಲಾಸ, ಸೌಂದರ್ಯವಿಲಾಸ, ಮದನವಿಲಾಸ, ದರ್ಪಣಮಂಟಪ, ಶಾರದಾ ಮಂಟಪ, ಭುವನೇಶ್ವರಿ, ಇಂದಿರಾ ಮಂದಿರ, ಬಂಗಾರ ಚೌಕಿ, ವಿಜಯಭವನ, ಚಿತ್ರಶಾಲೆ, ಮಜ್ಜನಶಾಲೆ, ನಾಮತೀರ್ಥ ಭವನ, ಭೋಜನಶಾಲೆ, ಬೊಕ್ಕಸಭಂಡಾರ ಇತ್ಯಾದಿಗಳಿಂದ ಕೂಡಿದ್ದಿತು.

ಶ್ರೀರಂಗಪಟ್ಟಣದಲ್ಲಿ ಹೊಸದಾಗಿ ಲಕ್ಷ್ಮೀನರಸಿಂಹ ದೇವಾಲಯ ರಚನೆಗೊಂಡಿತು. ರಂಗನಾಥದೇವಾಲಯಕ್ಕೆ ವರದರಾಜ, ಮನ್ನಾರ್ ನರಸಿಂಹ, ವೇಣುಗೋಪಾಲ ಮುಂತಾದ ವಿಗ್ರಹಗಳನ್ನು ಕಂಠೀರವ ನರಸರಾಜನು ಕೊಟ್ಟನು. ಅಗರದ ಕೇರಿಯಲ್ಲಿ ತಿರುವೆಂಕಟೇಶ್ವರ, ಅಕ್ಕಿಕೇರಿಯಲ್ಲಿ ಬೇಟೆರಾಯ, ಗಂಗಾಧರೇಶ್ವರ, ವಿರೇಶ, ಮೋರಡಿಯ ತಿರುಮಲರಾಯ, ನರಸಿಂಹಮೂರ್ತಿ, ಬಾಗಿಲ ವೆಂಕಟೇಶ್ವರ ದೇವಾಲಯಗಳನ್ನು ಕಟ್ಟಿಸಿದನು. ದೊಡ್ಡ ಹಂಪಯ್ಯನ ಮಠ, ಮೂಲೆಯ ಮಠ, ವಿರಕ್ತರ ಮಠ ಮತ್ತು ದಾಸೋಹ ಮಠಗಳನ್ನು ಏರ್ಪಡಿಸಿದನು. ಶ್ರೀರಂಗಪಟ್ಟಣದ ಮಹಾನವಮಿ ಉತ್ಸವಕ್ಕೆ ಮಹತ್ವವನ್ನು ತಂದುಕೊಟ್ಟನು. ಕಂಠೀರವ ನರಸರಾಜ ವಿಜಯದಲ್ಲಿ ಬರುವ ಮಹಾನವಮಿ ಉತ್ಸವದ ವರ್ಣನೆ ಅತ್ಯಂತ ರೋಚಕವಾಗಿದೆ.

ಕಂಠೀರವ ನರಸರಾಜನ ಕಾಲದಲ್ಲಿ ಮೇಲುಕೋಟೆ ಶ್ರೀವೈಷ್ಣವ ಧರ್ಮದ ಪ್ರಮುಖ ಕೇಂದ್ರವಾಗಿತ್ತು. ಆ ಊರು ಹೆಬ್ಬಾಗಿಲು, ಶ್ರೀವೀಧಿ, ಶ್ರೀಗೋಪುರದ್ವಾರ, ಕಲ್ಯಾಣಿ, ತಿರುನಾರಾಯಣಸ್ವಾಮಿ ದೇವಾಲಯ, ರಂಗಮಂಟಪ, ಅರಮನೆ, ಒಳಚೌಕಿ, ನಾಮತೀರ್ಥದ ಚೌಕಿಗಳಿಂದ ಕೂಡಿದ್ದಿತು.

ಪಾಂಡವಪುರ 214 ಸುಂಕದೊರೆಯ ಶಾಸನದ ಪ್ರಕಾರ ಕಂಠೀರವ ನರಸರಾಜನು ಮೇಲುಕೋಟೆಯಿಂದ ಉತ್ತರಕ್ಕಿರುವ ಸುಂಕದೊರೆಗೆ ತಟ್ಟೆಕೆರೆ, ಹಂದೆಹಳ್ಳಿ, ಕಾಲೇಂಹಳ್ಳಿ, ಬೀರಂಹಳ್ಳಿ, ಕಲ್ಲಿಗುಂಡಿ, ಮಲ್ಲಿನಾಯಕನಹಳ್ಳಿ, ಮಾರನಾಯಕಹಳ್ಳಿಯೆನ್ನುವ ಉಪಗ್ರಾಮಗಳನ್ನು ಏಕತವಾಗಿ ಮಾಡಿ ಕಂಠೀರವ ನರಸನೃಪಾಂಬೋಧಿನಾಮ ಅಗ್ರಹಾರವನ್ನಾಗಿ ಮಾಡಿ ಬಹುಗುಣಭರಿತರೂ ಚಾರುವೃತ್ತರೂ ಆದ ವೈಷ್ಣವರಿಗೆ ದಾನವಾಗಿ ಕೊಟ್ಟನು. 1657ರ ಕೃಷ್ಣರಾಜಪೇಟೆ 45 ಮಾದಾಪುರದ ಶಾಸನದ ಪ್ರಕಾರ ಕಂಠೀರವ ನರಸರಾಜನು ನರಸಿಂಹಸ್ವಾಮಿಯ ಬೆವಹಾರಕ್ಕೆ ಕೊಟ್ಟ ವಿಚಾರವನ್ನು ತಿಳಿಸುತ್ತದೆ.

ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿಯ ಸಮೀಪದ ದೊಡ್ಡೇಗೌಡನ ಕೊಪ್ಪಲಿನ ದೊಡ್ಡಿಯೆನ್ನುವವಳು ಕಂಠೀರವ ನರಸರಾಜನ ಬಂಗಾರದವಳಾಗಿದ್ದಳು. ಅವಳ ಪ್ರೇರಣೆಯ ಮೇರೆಗೆ ಬಂಗಾರದೊಡ್ಡಿ ನಾಲೆಯನ್ನು ದೊರೆ ನಿರ್ಮಿಸಿದನು. ಇಂದಿಗೂ ಅದು ಉಪಯುಕ್ತವಾಗಿದ್ದು ಮಂಡ್ಯ ಜಿಲ್ಲೆಯ ನೀರಾವರಿಗೆ ಸಹಾಯಕವಾಗಿದೆ.

1663ರ ಕೃಷ್ಣರಾಜಪೇಟೆ 65 ಮಾಳಗೂರು ಶಾಸನದಿಂದ ದೊಡ್ಡ ದೇವರಾಜನು ತನಗೆ ವಿಕ್ರಮಾರ್ಜಿತವಾಗಿ ಬಂದ ಮಾಳಗೂರಿಗೆ ದೇವರಾಜಪುರವೆಂದು ಹೆಸರಿಟ್ಟು ಮಾಳಗುಂಡ, ಕೊಡಗೆಹಳ್ಳಿ, ಹುಬ್ಬನಹಳ್ಳಿ, ಮಾಚಿನಾಯಕನಹಳ್ಳಿ, ಗುಬಿತಹಳ್ಳಿ, ಲೋಕನಹಳ್ಳಿಯ ಕೆರೆ, ಗೂಳೂರು, ನಂಬಿನಾಯಕನಹಳ್ಳಿ, ಒಳ್ಳೆಕೆರೆ ಎನ್ನುವ ಉಪಗ್ರಾಮಂಗಳನ್ನು ಸೇರಿಸಿ ತನ್ನ ಪಿತ್ರಾದಿ ಸಮಸ್ತ ಪಿತೃಗಳಿಗೂ ಅಕ್ಷಯ ಪುಣ್ಯಲೋಕ ಪ್ರಾಪ್ತಿಯಾಗಲಿ ಎಂದು ಬಿಟ್ಟ ಸಂಗತಿ ತಿಳಿದುಬರುತ್ತದೆ.

12-3-1664ರ ಶ್ರೀರಂಗಪಟ್ಟಣ 23 ನೆಯ ಶಾಸನದ ರೀತ್ಯಾ ದೇವರಾಜ ಒಡೆಯರ ಕುಮಾರ ಮರಿದೇವರಾಜನು ಶ್ರೀರಂಗಪಟ್ಟಣದ ಸಿಂಗರೈಯ್ಯಂಗಾರ್ ಮಗ ಶ್ರೀನಿವಾಸಯ್ಯಂಗಾರ್ ಇದ್ದ ವೀರಾಂಬುಧಿ ಸ್ಥಳಕ್ಕೆ ಸೇರುವ ಆಲಪನಹಳ್ಳಿಯನ್ನು ಕೊಂಡುಕೊಂಡು ಶ್ರೀರಂಗಪಟ್ಟಣದ ಪಶ್ಚಿಮರಂಗನಾಥಸ್ವಾಮಿಯವರ ಪಾದಾರವಿಂದಗಳಿಗೆ ನಿತ್ಯದಲ್ಲೂ ಪಾದಾದಿ ಕೇಶಪರಿಯಂತ್ರ ಅಲಂಕಾರ ದಿವತಿರುಮಾಲೆ ತಿರುನೆತ್ತಿ ಶ್ರೀರಂಗನಾಯಕಿ ಅಮ್ಮನವರ ಪಾದಕಮಲಗಳಿಗೆ ಅಲಂಕಾರ ತಿರುಮಾಲೆ ಶ್ರೀಪಾದದ ಅಮ್ಮನವರಿಗೆ ಸಣ್ಣ ತಿರುಮಾಲೆ ಉಭಯ ನಾಚ್ಚಾರಮ್ಮನವರಿಗೆ ಸಣ್ಣ ತಿರುಮಾಲೆ 2 ಈ ಪ್ರಕಾರದಲ್ಲು ನಿತ್ಯದಲ್ಲು ತಿರುಮಾಲೆ ಸೇವಾರ್ಥವಾಗಿ ನಮ್ಮಾಳ್ವಾರು ಸಂಮಂಧದ ದ್ರಾವಿಡವೇದಅಧಿಕಾರಿಗಳಾದ ಶ್ರೀರಂಗದ ಮೊದಲಿ ಆಂಡಾನು ಸಂಮಂಧಿಗಳಾದ ಶ್ರೀವೈಷ್ಣವರುಗಳಿಗೆ ಉಪಾದಾನಾರ್ಥವಾಗಿ ಕೊಟ್ಟ ಸಾಧನದ ಕ್ರಮ ಕುರುವದ ಅಪ್ಪಚಿಯಾರ ಅಯ್ಯವರ ಕೊಮಾರರು ಸಿಂಗರೈಯ, ಆಳಗ ಸಿಂಗರು. ಬೆಳ್ಳಾಲೆಯ ನರಸಯ್ಯನವರ ಕೊಮಾರರು ನರಸಪ್ಪ, ವಸಂತಪುರದ ಸಿಂಗರೈಯ್ಯನವರ ಕೊಮಾರರು ಪುಟ್ಟಯ್ಯ, ಕುರುವದ ಸಿಂಗೈಯನವರ ಕೊಮಾರರು ನರಸಿಂಗೈಯ್ಯ, ಸಿಂಗಯ್ಯನವರ ಕೊಮಾರರು ನರಸಪ್ಪ ಈ ಆರು ಕುಟುಂಬದವರಿಗೆ ಅಲ್ಲಪನ ಹಳ್ಳಿಯನು ಕೊಟ್ಟರು ಎಂದು ತಿಳಿಸುತ್ತದೆ.

ಮರಿದೇವರಾಜನು ಶ್ರೀರಂಗಪಟ್ಟಣದ ಮದ್ದಿಕದಲ್ಲಿ ಊರ ಮುಂದಣ ಹೊಸ್ತಾಗಿ ಕಟ್ಟಿಸಿದ ಮಂಟಪಕ್ಕೆ ಹರಹಿನ ಶ್ರೀರಾಮಸ್ವಾಮಿಯವರು ಶ್ರೀರಾಮ ನವಮಿಯಲ್ಲಿ ಬಿಜಮಾಡುವ ಮಂಟಪದಲ್ಲಿ ಹೊಸ್ತಾಗಿ ಪ್ರತಿಷ್ಠೆ ಮಾಡಿದ ಹನುಮಂತ ಸ್ವಾಮಿಗೆ ಬೆದ್ದಲಂ ನಾಲ್ಕು ವರಹದ ಭೂಮಿ ಕೆರೆಕೆಳಗೆ ಬೀಜವರಿ ಗದ್ದೆಯನ್ನು ಬಿಟ್ಟಿದ್ದಾನೆ.

20-6-1678ರ ಕೃಷ್ಣರಾಜಪೇಟೆ 16 ಬೀರಹಳ್ಳಿ ಶಾಸನದಲ್ಲಿ ಯೆಂಬೆರು ಮಾನಾರ ಎಂಬರೆ ರಾಮಾನುಜಾಚಾರ್ಯರ ತಿರುನಕ್ಷತ್ರದ ಸಂಬಂಧವಾಗಿ ಹತ್ತು ದಿನಗಳ ಕಾಲ ನಡೆಯುವ ವಾಹನದ ಸೇವೆಗೆ ಕೊತ್ತೆಗಾಲ ಸ್ಥಳದ ಸಿಂಗಮಾರನಹಳ್ಳಿಯನ್ನು ಕೊಟ್ಟಿದ್ದು ಕೆಲವು ಕಾಲದ ಮೇಲೆ ಅದಕ್ಕೆ ಬದಲಾಗಿ ಮಂಡಗೆರೆ ಸ್ಥಳದ ಬಿರುಬಳ್ಳಿಯನ್ನು ತಿರುನಾರಾಯಣಪುರ (ಮೇಲುಕೋಟೆ)ದ ಶ್ರೀನಾರಾಯಣ

ಸ್ವಾಮಿಯವರ ಭಂಡಾರಕ್ಕೆ ಕೌಶಿಕಗೋತ್ರದ ಆಪಸ್ತಂಭ ಸೂತ್ರದ ಯಜುಶ್ಶಾಖೆಯ ಶ್ರೀರಂಗಪಟ್ಟಣದ ಶಿಂಗರಯ್ಯಂಗಾರ್ ಪೌತ್ರ ರಾದ ತಿರುಮಲಯ್ಯಂಗಾರ್ರ ಪುತ್ರರಾದ ಶ್ರೀಮದ್ವೇದಮಾರ್ಗ ಪ್ರತಿಷ್ಠಾಪನಾಚಾರ್ಯೋಭಯ ವೇದಾಂತಾಚಾರ್ಯರಾದ ಆಳಗೆ ಶಿಂಗರೈಯ್ಯಂಗಾರ್ರು ದೇವರಾಜ ಒಡೆಯರವರು ನಮ್ಮ ಕೈಯ ಮಹಾ ಭಾರತವ ಕೇಳಿ ಯುಧಿಷ್ಠಿರಾಭಿಷೇಕ ಶ್ರವಣಕಾಲದಲ್ಲಿ ನಮಗೆ ಧಾರೆಯನೆರದು ಕೊಟ್ಟ ನರಸೀಪುರದ ಹೋಬಳಿ ಮಂದಗೆರೆ ಸ್ಥಳದ ನಾಟನಹಳ್ಳಿ ಗ್ರಾಮವನ್ನು ಇರಿಸಿಕೊಂಡು ಬಿರುಬಳ್ಳಿಯನು ಪ್ರಾಕು ಸ್ವಾಮಿಯವರ ಶ್ರೀಭಂಡಾರಕ್ಕೆ ನಾವು ಹವಾಲಿಸಿಕೊಟ್ಟು ಇದ್ದ ಕೋತ್ತಾಗಾಲಸ್ಥಳದ ಶಿಂಗಮಾರನಹಳ್ಳಿಯೆನ್ನಿಸಿಕೊಂಬ ಗ್ರಾಮಕ್ಕೆ ಬದಲಾಗಿ ಧಾರೆಯನೆರೆದು ಕೊಟ್ಟೆವಾದ ಕಾರಣ ಬಿರುಹಳ್ಳಿಯಿಂದ ಬರುವ ಆದಾಯವೆಲ್ಲವನ್ನು ತಮ್ಮ ಸೇವೆಯಾಗಿ ಹತ್ತು ದಿವಸದ ವಾಹನ ರಥೋತ್ಸವ ಮಂಟಪದ ಚರುಪು ಕಾಣಿಕೆ ಮುಂತಾದ ಸೇವೆ ನಿಮಿತ್ತವಾಗಿ ಸ್ವಾಮಿಯವರ ಶ್ರೀ ಭಂಡಾರಕ್ಕೆ ಬಿಟ್ಟು ಕೊಟ್ಟಿದ್ದಾರೆ. ಇದರಿಂದ ಶಿಂಗಮಾರನ ಹಳ್ಳಿಯ ಆದಾಯ ಕ್ಕಿಂತ ಬಿರುಬಳ್ಳಿಯ ಆದಾಯ ಹೆಚ್ಚಿನದೆಂದು ಊಹಿಸಬಹುದಾಗಿದೆ. ಇದೇ ವಿವರ ಗಳು ಪಾಂಡವಪುರ 149ನೆಯ ಶಾಸನದಲ್ಲಿಯೂ ಇದೆ.

ಪ್ರಸ್ತುತ ಶಾಸನಕರ್ತೃವಾದ ದೇವರಾಜ ಒಡೆಯನು ಕಂಠೀರವ ನರಸರಾಜನ ಚಿಕ್ಕಪ್ಪನಾದ ಮುಪ್ಪಿನ ದೇವರಾಜನ ಮೂರನೆಯ ಮಗ. ಈತನನ್ನು ಕೆಂಪದೇವ ಎನ್ನುತ್ತಿದ್ದರು. ಮರಿದೇವರಾಜನು ಮುಪ್ಪಿನ ದೇವರಾಜನ ಕಿರಿಯ ಮಗ. ತನ್ನ ಸೋದರನೊಡನೆ ರಾಜಧಾನಿಯಲ್ಲಿದ್ದ. ಈತ ಅಣ್ಣನನ್ನು ಮುದದಿಂದ ಸೇವಿಸುತ್ತಿದ್ದ ನೆಂದು ಶ್ರೀರಂಗಪಟ್ಣದ ಶಾಸನ 240 ರಿಂದ ತಿಳಿಯುತ್ತದೆ—

ಜಯತಿ ಶುಭಗುಣೈಸ್ವೈರ ದ್ವಿತೀಯ ಸ್ತೃತೀಯಃ
ಶ್ರುತಜನ ಸುರಭೂಜೋ ದೇವರಾಜ ಕ್ಷಿತೀಂದ್ರಃ
ಪರಿಚರತಿ ಮುದಾಯಂ ಭವ್ಯಕರ್ಮಾನು ಜನ್ಮಾ
ಸಖಿಲು ಮರಿಯದೇವಕ್ಷ್ಮಾಪತಿಸ್ಸತ್ಯಸಂಧಃ ॥

6-7-1663ರ ಮದ್ದೂರು 34 ಕೌಡ್ಲೆ ಶಾಸನದಿಂದ ತಿಳಿದುಬರುವಂತೆ ಇದೇ ದೇವರಾಜನು ವಿಕ್ರಮಾರ್ಜಿತವಾಗಿ ಬಂದ ಮದ್ದೂರು ಸ್ಥಳದ ಕೌದಲೆಯೆಂಬ ಗ್ರಾಮ ವನ್ನು ದೇವರಾಜಪುರವೆಂಬ ಅಗ್ರಹಾರವನ್ನಾಗಿ ಮಾಡಿದನು. ಅದಕ್ಕೆ ಉಪಗ್ರಾಮ ಗಳಾದ ನಾಗನಹಳ್ಳಿಗ್ರಾಮ, ಕರಡಿಕೊಪ್ಪಲು ಗ್ರಾಮ, ಕೋಡಿನ ಕೊಪ್ಪಗ್ರಾಮ, ಕೀಲಾರಗ್ರಾಮ, ಉಮ್ಮರಹಳ್ಳಿ ಗ್ರಾಮಗಳನ್ನು ಸೇರಿಸಿ ಮೂವತ್ತಾರು ವೃತ್ತಿಗಳನ್ನಾಗಿ ಮಾಡಿ ಲಕ್ಷ್ಮೀನಾರಾಯಣನು ಪ್ರಸನ್ನನಾಗಲಿಯೆಂದು ನಮ್ಮ ಪಿತ್ರಾದಿ ಸಮಸ್ತ ಪಿತೃಗಳಿಗೂ ಅಕ್ಷಯ ಪುಣ್ಯ ಲೋಕಪ್ರಾಪ್ತಿಯಾಗಲೆಂದು ಬ್ರಾಹ್ಮಣರಿಗೆ ಕೊಟ್ಟುದಾಗಿ ತಿಳಿದುಬರುತ್ತದೆ.

1666 ರ ಮದ್ದೂರು 27 ಗೂಳೂರು ಶಾಸನದ ಪ್ರಕಾರ ದೇವರಾಜೊಡೆಯ ಕುಮಾರ ದೇವರಾಜ ಮಹೀಪಾಲಕರು ಕೃಷ್ಣದೇವರಾಯ ಪಟ್ಟಣದ ಸ್ಥಳಕ್ಕೆ ಸಲ್ಲುವ ಗೂಳೂರು, ಬಿದ್ರುವಿಳಿಕೆರೆ, ನಂಬಿನಾಯಕನ ಹಳ್ಳಿ ಎನ್ನುವ ಮೂರು ಗ್ರಾಮಗಳನ್ನು ಅಮೃತೂರ ಸ್ಥಳಕ್ಕೆ ಸಲ್ಲುವ ಹಾಲುಗಂಗಕೆರೆ ನಾಮಧೇಯವಾದ ದೇವರಾಜಪುರ ವೆನ್ನುವ ಅಗ್ರಹಾರಕ್ಕೆ ಉಪಗ್ರಾಮಗಳಾಗಿ ಸೇರಿಸಿಬಿಟ್ಟಿದ್ದಾರೆ.

1–4–1669 ರ ಮಳವಳ್ಳಿ 99 ಬೆಳಕವಾಡಿ ಶಾಸನದಂತೆ ದೇವರಾಜ ಒಡೆಯರು ತಲಕಾಡ ವೀರ ಒಡೆಯರಿಗೆ ಭೂಮಿಯನ್ನೂ ಊರೊಳಗೆ ಒಂದು ಹಟ್ಟಿಯನ್ನೂ ದಾನವಾಗಿ ಕೊಟ್ಟಿದ್ದಾರೆ.

21–10–1672ರ ಮಳವಳ್ಳಿ 9 ಮತ್ತು 5 ಸತ್ಯಾಲಪುರದ ಶಾಸನದ ಪ್ರಕಾರ ಮಳವಳ್ಳಿಯ ಸಂಸ್ಥಾನದ ಕಾರ್ಯಮಠದ ಗಂಗಾಧರಯ್ಯನು ಗಂಗಾಧರೇಶ್ವರ ಸ್ವಾಮಿಯನ್ನು ಪ್ರತಿಷ್ಠೆಮಾಡಿದನು. ಧರ್ಮಪ್ರಸಂಗ ಸಮಯದಲ್ಲಿ ದೇವರಾಜ ಭೂವರರನ್ನು ದೇವರ ಪಡಿತರ ದೀಪಾರಾಧನೆ ಮೊದಲಾಗಿ ಕೇಳಿಕೊಳ್ಳಲಾಗಿ ಅವರು ಸಸಿಯಾಲಪುರವನ್ನು ದತ್ತಿಯಾಗಿ ಬಿಟ್ಟುಕೊಟ್ಟರು.

17ನೆಯ ಶತಮಾನದ ನಾಗಮಂಗಲ 94 ಬೆಳ್ಳೂರು ಶಾಸನದಲ್ಲಿ ಹುಲಿಕಲ್ಲ ಪದುಮಣ್ಣಸೆಟ್ಟರ ಸುತರಾದ ದೊಡ್ಡಾಂದಣ ಸೆಟ್ಟರ ಪುತ್ರರಾದ ಸಕ್ಕರೆ ಸೆಟ್ಟರ್, ಶ್ರೀಮತು ಡಿಳ್ಳಿ ಕೊಲ್ಲಾಪುರ ಜಿನಕಂಚಿ ಪೆನುಗೊಂಡೆ ಸಿಂಹಾಸನಾಧೀಶರಾದ ಲಕ್ಷ್ಮೀಸೇನ ಭಟ್ಟಾರಕರ ಪ್ರತಿಬೋಧದಿಂದ ಮೈಸೂರು ದೇವರಾಜ ಒಡೆಯರು ಧಾರಾದತ್ತವಾಗಿ ಕೊಟ್ಟ ಕ್ಷೇತ್ರದಲ್ಲಿ ವಿಮಲನಾಥನ ಚೈತ್ಯಾಲಯವನ್ನು ನಿರ್ಮಿಸಿದ್ದಾರೆ.

19–11-1686ರ ಶ್ರೀರಂಗಪಟ್ಟಣ 24 ಶಾಸನವು ಚಿಕ್ಕದೇವರಾಜನ ಕಾಲದ್ದು. ಈ ಶಾಸನದಲ್ಲಿ ಬರುವ ವಂಶಾವಳಿ ಭಾಗವನ್ನು ಈ ಲೇಖನದ ಆರಂಭದಲ್ಲಿ ಸಂಗ್ರಹಿಸಿದೆ. ಚಿಕ್ಕದೇವರಾಜ ಒಡೆಯನು ನವಕೋಟಿ ನಾರಾಯಣನೆಂದು ಪ್ರಸಿದ್ಧನಾದವನು. ದಕ್ಷ ಆಡಳಿತಗಾರ, ಸ್ವತಃ ಕವಿ, ಕವಿಪ್ರೋಷಕ, ಕಲಾವಿದ, ರಸಿಕ ಸಪ್ತಕ್ಷೇತ್ರಸ್ಥ ತೀರ್ಥಗಳನ್ನು ದರ್ಶನಮಾಡಿ ಸೇವೆಸಲ್ಲಿಸಿದನು. ಮೇಲುಕೋಟೆ ಚೆಲುವನಾರಾಯಣನ ವೈರಮುಡಿ ಗಜೇಂದ್ರೋತ್ಸವಗಳಿಗೆ ಪ್ರಾಧಾನ್ಯವನ್ನು ಕೊಟ್ಟನು. ಈ ಶಾಸನದ ದಾನಿ ದೇವರಾಜ ಒಡೆಯನ ಜೇಬಿನ ಊಳಿಗದ ಚಲುವಪ್ಪೈಯ ಮಗ ದೊಡ್ಡದೇವಯ್ಯ. ಈತನು ರಂಗನಾಥದೇವಾಲಯದಲ್ಲಿರುವ ಕೋದಂಡದೇವರ ನಂದಾದೀವಿಗೆ ಮತ್ತಿತರ ಸೇವೆಗೆ ಒಳಗೊಳ ಸ್ಥಳದ ಅಪ್ವೇರಹಳ್ಳಿಯನ್ನು ತೆರಿಗೆಗಳ ಸಮೇತ ದಾನಮಾಡಿದನು. ದಾನಿಯು ಈ ಗ್ರಾಮವನ್ನು ವೃತ್ತಿಯಾಗಿ ಪಡೆದಿದ್ದ ಜನ್ನೈಂಗಾರ್ ಮತ್ತು ಚಿಂತಾಮಣಿ ಅಯ್ಯಂಗಾರ್‌ರಿಂದ ಕೊಂಡುಕೊಂಡು ದೊರೆಯ ಅನುಮತಿಯನ್ನು ಪಡೆದುಕೊಂಡಿದ್ದನು. ಈ ಶಾಸನದ ಕಡೆಯಲ್ಲಿ ಚಿಕ್ಕದೇವರಾಜನ ಒಪ್ಪವಿದೆ.

2–8–1673ಕ್ಕೆ ಸೇರಿದ ಮಳವಳ್ಳಿ 124 ಹುಳ್ಳೇಬಳ್ಳಿ ಶಾಸನವು ವಿಶಿಷ್ಟವಾದುದು. ಇದು ಹುಳ್ಳೇಬಳ್ಳಿ ಮಠ ಪರಂಪರೆಗೆ ಸೇರಿದ ರೇವಣಾರಾಧ್ಯರ ಅಂಶೀಭೂತರಾದ ರುದ್ರಮುನಿ ದೇವಾರಾಧ್ಯರ ವಶಕ್ಕೆ ಬರೆಸಿಕೊಟ್ಟ ಶಾಸನ. ಇದರಲ್ಲಿ ಅಶೇಷ ದೇವರ ಗುಡ್ಡರ ಜನ ಸಹಾ ಶ್ರೀಶೈಲಯಾತ್ರೆಗೆ ಪರುಷೆ ನಡೆಸುವುದಕ್ಕೆ ಕಾರಣ ಕರ್ತರಾದಂಥ ರುದ್ರಮುನಿ ದೇವರು ನಮಗೆ ಶ್ರೀಶೈಲದ ಪ್ರಸಾದ ತಂದು ಕೊಟ್ಟಲ್ಲಿ ನೀವು ನಮಗೆ ಪ್ರಸಾದ ತಂದುಕೊಟ್ಟ ಮುಹೂರ್ತದಿಂದಾ ರಾಜ್ಯ ನಮ್ಮ ಸರ್ವ ಸ್ವಾಧೀನವಾದರೆ ನಮ್ಮ ಭಕ್ತಿಯಿಂದ ಪಂಚಕಂಬ ಮಂದು ಮೇಳ ಮಂದು ನಂದಿಧ್ವಜ ಸಹಮುಸ್ತೈದೆ ಮಾಡಿಸಿ ಶ್ರೀಶೈಲಯಾತ್ರೆ ನಡೆಸುತ್ತ ಇದ್ದೇವೆಯೆಂಬುದಾಗಿ ಪ್ರಾರ್ಥನೆ ಮಾಡಿದಲ್ಲಿ ಅದೇ ಅದೇ ಪ್ರಕಾರಕ್ಕೆ ನಮ್ಮ ಮನೋಭೀಷ್ಟವಾದ್ದರಿಂದಾ ಈ ಸೇವೆ ಬಗ್ಗೆ ಕಂಠೀರಾಯ 212 ವರಹವನ್ನು ಗ್ರಹಣಪರ್ವ ಕಾಲದಲ್ಲಿ ಈಶ್ವರಾರ್ಪಿತವಾಗಿ ಧಾರೆಯೆರೆದು ವರುಷಂಪ್ರತಿಯಲ್ಲಿಯೂ ಈ ಸೇವೆಯನ್ನು ನಡೆಸಿಕೊಂಡು ಬರುವ ರೀತಿಗೆ ನೇಮಕಮಾಡಿಯಿದ್ದೀತು ಎಂದಿದೆ.

ಮುಡುಕುತೊರೆಯ ಮಲ್ಲಿಕಾರ್ಜುನ ಭ್ರಮರಾಂಬಾ ಜಾತ್ರೆಯ ಸಂದರ್ಭದಲ್ಲಿ ಶ್ರೀಶೈಲಕ್ಕೆ ಪರಿಷೆ ಹೋಗುವ ಪದ್ಧತಿ ಇಂದಿಗೂ ರೂಢಿಯಲ್ಲಿದೆ. ಮುಡುಕುತೊರೆಯಲ್ಲಿ ದನಗಳ ಪರಿಷೆ ಸೇರುತ್ತಿದ್ದು ಅದರಲ್ಲಿ ಮೊದಲ ಪ್ರಶಸ್ತಿ ಪಡೆದ ವ್ಯಕ್ತಿಯನ್ನು ದೇವಸ್ಥಾನದ ಸಮಿತಿಯವರು ತಮ್ಮ ಖರ್ಚಿನಲ್ಲಿ ಶ್ರೀಶೈಲಕ್ಕೆ ಕಳಿಸುತ್ತಿದ್ದಾರೆ.

8–5–1685ರ ಮಳವಳ್ಳಿ 2 ಶೃಂಗಾರ ಕೊಳದಬಳಿ ಇರುವ ಕಲ್ಲಿನಲ್ಲಿ ಚಿಕ್ಕದೇವರಾಜ ಒಡೆಯನು ಮಳವಳ್ಳಿಯ ಕೋಟೆಯ ಆಗ್ನೇಯ ದಿಕ್ಕಿನಲ್ಲಿ ಆಚಂದ್ರಾರ್ಕ ಧರ್ಮಕೀರ್ತ್ಯಭಿವೃದ್ಧ್ಯರ್ಥವಾಗಿ ತೋಟ ಮತ್ತು ಕೊಳವನ್ನು ನಿರ್ಮಿಸಿದ ಸಂಗತಿ ತಿಳಿದುಬರುತ್ತದೆ. ಪಾಂಡವಪುರ 169 ಮೇಲುಕೋಟೆ ಶಾಸನದಲ್ಲಿ ಉಭಯ ನಾಚ್ಚಾರುಗಳ ಬಂಗಾರದ ಲಂಬಹಸ್ತಗಳ ಮೇಲೆ ಚಿಕದೇವರಾಜ ಸೇವೆಯೆನ್ನುವ ಬರಹವಿದೆ.

1700–1701ರಲ್ಲಿ ಚಿಕ್ಕದೇವರಾಜ ಒಡೆಯನು ಕಾವೇರಿ ನದಿಗೆ ಶ್ರೀರಂಗಪಟ್ಟಣದ ಪಶ್ಚಿಮದಲ್ಲಿ ಚಿಕದೇವಸಾಗರ ಎನ್ನುವ ಕಟ್ಟೆಯನ್ನು ಕಟ್ಟಿಸಿದನು. ದೇವನಾಲಾ ಎನ್ನುವ ಹೆಸರಿನಲ್ಲಿ ಕಾಲುವೆಯನ್ನು ತೆಗೆಸಿದನು. ಈ ಕಟ್ಟೆಯಿಂದ ದೊರೆಯುವ ನೀರಾವರಿ ಸೌಲಭ್ಯದಿಂದ ಅಪಾರವಾದ ಆದಾಯವನ್ನು ದೊರೆ ನಿರೀಕ್ಷಿಸಿದ್ದನು. ತಮಿಳುನಾಡಿನ ಮಧುರೆ ಮತ್ತು ತಂಜಾವೂರುಗಳ ಗದ್ದೆಯ ಬಯಲು ಒಣಗತೊಡಗಿತು. ಅವರಿಬ್ಬರೂ ಚಿಕ್ಕದೇವರಾಜನ ಮೇಲೆ ಯುದ್ಧಹೂಡಿ ಆ ಕಟ್ಟೆಯನ್ನು ಒಡೆಯಬೇಕೆಂದು ಸಂಕಲ್ಪಿಸಿದ್ದರು. ಆದರೆ ಆ ವರ್ಷ ಸುರಿದ ಮಳೆಯಿಂದ ಕಾವೇರಿ ಹೊಳೆ ತುಂಬಿ ಬಂದು ಕಟ್ಟೆ ಒಡೆದು ಹೋಯಿತು. ದೊರೆ ಆ ಕಟ್ಟೆಯ ಮೇಲೆ ತೊಡಗಿಸಿದ್ದ ಹಣ ವ್ಯರ್ಥವಾಗಿ ನಿರಾಶನಾದನು.

30-12-1724ರ ಪಾಂಡವಪುರ 215 ಮೇಲುಕೋಟೆ ಶಾಸನ ಒಂದನೆಯ ಕೃಷ್ಣರಾಜನಿಗೆ ಸೇರಿದುದು. ಇದು ಕಾಂಚೀಪುರಿಯ ಹಸ್ತಿಗಿರಿಯಲ್ಲಿ ನಿಂತ ಭಕ್ತಜನ ವತ್ಸಲನಾದ ವರದರಾಜಸ್ವಾಮಿಯ ಶ್ರೀಭಂಡಾರಕ್ಕೆ ಬರೆಸಿಕೊಟ್ಟ ಭೂದಾನ ತಾಮ್ರ ಶಾಸನ. ಚೆಲುವರಾಜಮ್ಮ ಮತ್ತು ದೇವೀರಮ್ಮನವರು ಪ್ರಾಕಾಲಭ್ಯ ಅಳಗಿಯ ಮನವಾಳ ರಾಮಾನುಜ ಜೀಯ್ಯರವರ ಮುಖಾಂತರವಾಗಿ ನಡೆಸಿಕೊಂಡು ಬರುವ ನಿತ್ಯ ಕಟ್ಟಳೆ ಕೈಂಕರ್ಯ ಉದಯಾದಿ ಕಾಲತ್ರಯಾರಾಧನೆ ನೈವೇದ್ಯ ದೀಪಾರಾಧನೆ ಮುಂತಾದವುಗಳಿಗೆ ಮತ್ತು ವೈಶಾಖೋತ್ಸವ ಮುಂತಾದ ವಿಶೇಷೋತ್ಸವ ತೇರು ನಂದನವನ ಧರ್ಮದ ತೋಪು ಮಂಟಪ ಕಲ್ಯಾಣಿ ಸರೋವರ ಪೆರಿಜಿಯ್ಯರ ಸನ್ನಿಧಿಯಲ್ಲಿ ನಡೆವ ನಿತ್ಯ ತಳಿಗೆಯಾರಾಧನೆ ಮುಂತಾದ ಕೈಂಕರ್ಯಗಳಿಗೆಲ್ಲಕ್ಕೂ ವರ್ಷವೊಂದಕ್ಕೆ ಕಂಠೀರವ ಗುಳಿಗೆ 500 ವರಹವನ್ನು ಕೂಡಿಸಿಕೊಂಡು ಬರುವ ಹಾಗೆ ಕಟ್ಟು ಮಾಡಿಸಿದನು. ಅಲ್ಲದೆ ವೀರಭದ್ರದುರ್ಗಸ್ಥಳದ ಪನೆಕೊಳದ ಹೋಬಳಿಯ ಪಾಪಾರ್ಪಟ್ಟಿ, ಯಟ್ಟಿಗನಹಳ್ಳಿ, ಆಚಾರ್ಯಹಳ್ಳಿ, ಕಮಲನಾಯ್ಕನಹಳ್ಳಿ, ಗೊಲ್ಲಪನಾಯ್ಕನಹಳ್ಳಿ, ಮಾಪೇಹಳ್ಳಿ, ಬಲ್ಲೂರು, ವರತಹಳ್ಳಿ, ಬೆಳಚಾನಹಳ್ಳಿ ಹೀಗೆ 12 ಗ್ರಾಮಗಳನ್ನೂ 1 ಕೆರೆಯನ್ನೂ ಬಿಟ್ಟನು.

11-12-172 ರ ಪಾಂಡವಪುರ 99 ತೊಣ್ಣೂರು ಶಾಸನದಲ್ಲಿ ಮೊದಲನೆಯ ಕೃಷ್ಣರಾಜನು ಯಾದವಪುರ ಅಲಿಯಾಸ್ ತೊಂಡನೂರು ಮತ್ತು ಹೊಯ್ಸಳದೇಶದ ಕುರುವಂಕನಾಡ ಆತ್ತಿಕುಪ್ಪ ಗ್ರಾಮಗಳನ್ನು ಅಗ್ರಹಾರವಾಗಿ ಪರಿವರ್ತಿಸಿ 112 ವೃತ್ತಿಗಳಾಗಿ ವಿಂಗಡಿಸಿ ಬೇರೆಬೇರೆ ರಾಜ್ಯಗಳಿಂದ ಬಂದು ನೆಲೆಸಿದ ಬ್ರಾಹ್ಮಣರಿಗೆ ಹಂಚಿದನು.

ಲಕ್ಷ್ಮೀನಾರಾಯಣ, ಯಾದವನಾರಾಯಣ ಮತ್ತು ವಸಂತಗೋಪಾಲ ದೇವಾಲಯಗಳಲ್ಲಿ ದೈನಂದಿನ ಪೂಜೆ ಮತ್ತು ಉತ್ಸವಗಳು ನಡೆಯಲು ಕೊಡುಗೆಗಳನ್ನು ಕೊಟ್ಟನು. ಯಾದವಪುರೀ ಅಗ್ರಹಾರಕ್ಕೆ 23 ಗ್ರಾಮಗಳು ಸೇರಿದ್ದುವು. ಇವುಗಳಿಂದ ಬರುತ್ತಿದ್ದ ಗದ್ದೆ ಬೆದ್ದಲು ತೋಟ ತುಡಿಕೆ ಆಣೆ ಅಚ್ಚುಕಟ್ಟು ಕಾಡಾರಂಭ ನೀರಾರಂಭ ಮಗ್ಗ ಮನೆವಣ ಸುಂಕ ಪೊಮ್ಮು ಸುವರ್ಣಾದಾಯ ಕಾಣಿಕೆ ಬೇಡಿಗೆ ಹುಲ್ಲುಹಣ ಹೊಗೆಕಾಣಿಕೆ ಕುರಿದೆರಿಗೆ ಜಾತಿಗೂಟ ದೇವರಾಯಪಟ್ಟಿ ಹೆಚ್ಚುಬೇಡಿಗೆ ಗ್ರಾಮಾದಾಯ ಜರಾದಾಯ ಹೊರಾದಾಯ ಮೊದಲಾದ ಸಕಲಸ್ವಾಮ್ಯವನ್ನೂ ಊಳಿಗಮಾನ್ಯದ ಅರಮಾಸಿಯನ್ನು ಕೂಡ ಪುತ್ರಪೌತ್ರ ಪಾರಂಪರ್ಯವಾಗಿ ನಿರಾಬಾಧವಾಗಿ ಈ ಅಗ್ರಹಾರದ ಮಹಾಜನರು ಸುಖದಿಂದ ಅನುಭವಿಸಿಕೊಂಡು ಬರಬಹುದೆಂದಿದೆ.

ಶ್ರೀರಂಗಪಟ್ಟಣದ ಅರಮನೆ ಇಮ್ಮಡಿಕೃಷ್ಣರಾಜರ ಆಡಳಿತದಲ್ಲಿ ದಳವಾಯಿಗಳ ಸರ್ವಾಧಿಕಾರಿಗಳ ಆಡುಂಬೊಲವಾಯಿತು. ಕಳಲೆಯ ದೇವರಾಜ ಮತ್ತು ನಂಜರಾಜ

ಸಹೋದರರು ಅತ್ಯಂತ ಪ್ರಬಲರಾದರು. ಅವರ ಕೃತ್ರಿಮದಿಂದ ಮೈಸೂರು ಚೀತ ದುರ್ಬಲಗೊಂಡಿತು ಹೈದರ್ ತಲೆಯೆತ್ತಿದುದು ಕೂಡ ಈ ಸಂದರ್ಭದಲ್ಲಿಯೇ. ಕಳಲೆ ನಂಜರಾಜನು ಶ್ರೀರಂಗಪಟ್ಟಣದ ಅರಮನೆಯ ಬಾಗಿಲಿಗೆ ಆನೆಗಳನ್ನು ನುಗ್ಗಿಸಿ ಒಡೆಸಿದನು. ಮರಾಠರು ಮತ್ತು ಮುಸ್ಲಿಮರ ಜೊತೆಗೆ ಬ್ರಿಟಿಷರು ಕೂಡ ಮೈಸೂರು ರಾಜ್ಯದ ಮೇಲೆ ದಂಡೆತ್ತಿ ಬಂದರು. ಶ್ರೀರಂಗಪಟ್ಟಣದ ಅರಮನೆ ಒಂದು ಕುತಂತ್ರಗಳ ಆಗರವಾದುದಲ್ಲದೆ ಮೈಸೂರು ದೇಶ ಯುದ್ಧರಂಗವಾಯಿತು, ಒಂದಲ್ಲ ಎರಡಲ್ಲ ನಾಲ್ಕು ಮೈಸೂರು ಯುದ್ಧಗಳಾದವು. ಈ ಅರಾಜಕತ್ವದ ನಡುವೆಯೂ ಇಮ್ಮಡಿಕೃಷ್ಣರಾಜ ಒಡೆಯನು ಜನೋಪಕಾರಿಕಾರ್ಯಗಳನ್ನು ನಡೆಸಿದನು. 23–5–1759ರ ಕೃಷ್ಣರಾಜಪೇಟೆ 101ನೆಯ ಚಟ್ಟಮಗೆರೆ ಶಾಸನದಲ್ಲಿ ತೊಣ್ಣೂರಿನ ನಿಲಾಮಶೂದ ಶಾವರಿ ದರ್ಗಾದಲ್ಲಿ ನಡೆಸುವ ದಂದ್ರರ ಧರ್ಮಕ್ಕೆ ಚಟ್ಟಮಗೆರೆ ಗ್ರಾಮವನ್ನು ಹೈದರಲ್ಲಿಬಹದ್ದೂರರವರಿಗೆ ಮೈಸೂರು ಕೃಷ್ಣರಾಜ ಒಡೆಯನು ಕೊಟ್ಟಂತೆ ತಿಳಿದುಬರುತ್ತದೆ. 103ನೆಯ ಚಟ್ಟಮಗೆರೆ ಶಾಸನದ ಪ್ರಕಾರ ಅರಮನೆ ಬೊಕ್ಕಸಕ್ಕೆ ಹೈದರಲ್ಲಿ 4300 ವರಹಗಳನ್ನು ಕೊಟ್ಟಂತೆ ತಿಳಿದುಬರುತ್ತದೆ. 104ನೆಯ ಶಾಸನವು ಈ ದರ್ಗದಲ್ಲಿ ವಂಶಪರಂಪರೆಯಾಗಿ ಧರ್ಮವನ್ನು ನಡೆಸಿಕೊಂಡು ಬರಬೇಕಾದ್ದರ ಬಗ್ಗೆ ತಿಳಿಸುತ್ತದೆ. ಚಟ್ಟಮಗೆರೆ ಶಾಸನದಲ್ಲಿ ಕಂಡುಬರುವ ಹೈದರಲ್ಲಿ ಬಹದ್ದೂರ ಎನ್ನುವ ಮಾತಿನಿಂದ ಆ ಹೊತ್ತಿಗಾಗಲೇ ಹೈದರಾಲಿ ಎಷ್ಟು ಪ್ರಬಲನಾಗಿದ್ದನೆಂದು ಊಹಿಸಬಹುದಾಗಿದೆ.

29–5–1760ರ ಮಂಡ್ಯ 24 ಮುದಗುಂಡೂರು ಶಾಸನ ಒಂದು ಕ್ರಯ ಭೂದಾನ ಶಾಸನ, ಈ ಶಾಸನವನ್ನು ಕೃಷ್ಣರಾಜ ಒಡೆಯನು ಕೃಷ್ಣೈಗೆ ಗೋವಿಂದೈಗೆ ಸಹ ಬರೆಸಿಕೊಟ್ಟಿದ್ದಾನೆ. ಇದರ ಪ್ರಕಾರ ಪಟ್ಟಣದ ಹೋಬಳಿ ವಿಚಾರದ ಚಾವಡಿ ವಳಿತದ ನಾಗಮಂಗಲ ಸ್ಥಳದ ಕಲಿದೇವನಹಳ್ಳಿ ಆದರ ಉಪಗ್ರಾಮ ಹೊಸೂರುಗಳಿಗೆ ಸ್ಥಳದ ಶಾನುಭೋಗ ಲೆಕ್ಕದ ಪ್ರಕಾರ ಯುವ ಸಂವತ್ಸರಕ್ಕೆ ಬೆದ್ದಲು ಕಂದಾಯ ಕೆರೆ ನೀರು ತೋಟದ ಪಯಿರು ವಿಂಗಡ ಮಣೆಹ ಸುಂಕ ಪ್ರೊಮ್ಮು ಸಹ 211 ವರಹ 7 ಹಣ ಹುಟ್ಟುವಳಿಯಾಯಿತು. ಇದಕ್ಕೆ ಸಲ್ಲುವ ಕಂಠೀರಾಯಿಗುಳಿಗೆ 2117 ವರಹವನ್ನು ಸಾಕಲ್ಯ ಪಡೆದು ಈ ಗ್ರಾಮದ ಮೇಲ್ಲೆ ಚತುಸ್ಸೀಮೆಯೊಳಗುಳ್ಳ ಸಿಧ್ಯಾದಷ್ಟ ಭೋಗತೇಜ ಸ್ವಾಮ್ಯಂಗಳು ನಿಮಗೆ ಸಲುವುದು. ಇದನ್ನು ಪುತ್ರಪೌತ್ರಪಾರಂಪರ್ಯವಾಗಿ ನಿರುಪಾಧಿಕವಾಗಿ ಸರ್ವಮಾನ್ಯವಾಗಿ ಶಾಶ್ವತವಾಗಿ ಅನುಭವಿಸಿಕೊಂಡು ಬರುವುದು ಎನ್ನುವ ವಿವರಗಳಿವೆ.

30–11–1763ರ ನಾಗಮಂಗಲ 138 ಅಂಕನಹಳ್ಳಿ ಶಾಸನವು ರಕ್ತಕೊಡಿಗೆ ಶಾಸನ. ಇದರಲ್ಲಿ ದೊರೆಯ ಹೆಸರಿಲ್ಲ. ಆಳಿದ ಮಹಾಸ್ವಾಮಿಯವರ ಬುದ್ಧಿ ನಿರೂಪ ಎಂದಿರುವುದರಿಂದ ಈ ಕಾಲದಲ್ಲಿ ಆಳಿದ ಎರಡನೆಯ ಕೃಷ್ಣರಾಜನೆಂದು

ಭಾವಿಸಬೇಕು. ಹೊಸಕೋಟೆ ಯುದ್ಧದಲ್ಲಿ ಸತ್ತ ತಿರುಮಲಗಿರಿ ಮಗ ತಿಮ್ಮನಿಗೆ ರಕ್ತ ಕೊಡಗೆಯಾಗಿ ಅಂಕನಹಳ್ಳಿಯನ್ನು ಕೊಟ್ಟಿದೆ. ಸಾವಿರಾರು ವರ್ಷಗಳಿಂದ ನಡೆದು ಬಂದ ಪದ್ಧತಿಯಾದ ನೆತ್ತರುಕೊಡಿಗೆ, ರಕ್ತಕೊಡಿಗೆ ಪದ್ಧತಿ ಈ ಕಾಲದವರೆವಿಗೂ ಉಳಿದುಕೊಂಡು ಬಂದಿರುವುದು ಗಮನಾರ್ಹವಾಗಿದೆ.

ಇಮ್ಮಡಿಕೃಷ್ಣರಾಜನ ಅನಂತರ ಮೈಸೂರು ಅರಮನೆ ದುಃಖದ ಮಡುವಿನಲ್ಲಿ ಮುಳುಗಿತು. ಮಹತ್ವಾಕಾಂಕ್ಷಿಯಾದ ಹೈದರ್ 1766-1770ರ ನಡುವಣ ಕಾಲದಲ್ಲಿ ಆಳಿದ ನಂಜರಾಜ ಒಡೆಯರಿಗೆ ವಿಷವನ್ನುಣಿಸಿದನು 1770-1776ರ ನಡುವೆ ಆಳಿದ ಬೆಟ್ಟದ ಚಾಮರಾಜ ಒಡೆಯರ್ ಕೂಡ ವಿಷಪ್ರಾಶನಕ್ಕೆ ಒಳಗಾದನು. ವಿಲ್ಕ್ಸ ಪ್ರಕಾರ ಚಾಮರಾಜ ಒಡೆಯನು ತನ್ನ 21 ನೆಯ ವಯಸ್ಸಿನಲ್ಲಿ ಸಿಡುಬಿಗೆ ತುತ್ತಾದನೆಂದು ತಿಳಿದುಬರುತ್ತದೆ. ಆದರೆ ಫೋರ್ಟ್ ಸೇಂಟ್ ಜಾರ್ಜ್ ಪತ್ರ ವೃಂದರ ಪ್ರಕಾರ ಟಿಪ್ಪು ಚಾಮರಾಜನನ್ನು ವಿಷಪ್ರಾಶನದಿಂದ ಕೊಂದನು.

ಬ್ರಿಟಿಷರಿಗೆ ಶ್ರೀರಂಗಪಟ್ಟಣ ಪತನವಾದ ಅನಂತರ ಮಹಾರಾಣಿ ಲಕ್ಷ್ಮಮ್ಮಣ್ಣಿಯ ಪ್ರಯತ್ನದ ಫಲವಾಗಿ ಮುಮ್ಮಡಿ ಕೃಷ್ಣರಾಜನು 1799 ಜೂನ್ ತಿಂಗಳಿನಲ್ಲಿ ಸಿಂಹಾಸನವನ್ನೇರಿದನು. ದಿವಾನ್ ಆಗಿ ಪೂರ್ಣಯ್ಯ ರೆಸಿಡೆಂಟ್ ಆಗಿ ಕರ್ನಲ್ ಕ್ಲೋಸ್ ಈತನ ಆಸ್ಥಾನದಲ್ಲಿದ್ದರು. 1800 ರಲ್ಲಿ ಪೂರ್ಣಯ್ಯ ಮೈಸೂರಿನ ಅರಮನೆಯನ್ನು ಕೋಟೆಯನ್ನು ಸರಿಪಡಿಸಿ ರಾಜಧಾನಿಯನ್ನು ಮೈಸೂರಿಗೆ ಬದಲಾಯಿಸಿದನು. ಹೀಗೆ 1610 ರಿಂದ 1799ರ ವರೆಗೆ ಶ್ರೀರಂಗಪಟ್ಟಣವು ಮೈಸೂರು ಒಡೆಯರಿಗೆ ರಾಜಧಾನಿಯಾಗಿ ಸರ್ವಸಂಭ್ರಮದಿಂದ ಮೆರೆಯಿತು. 1811 ರಲ್ಲಿ ಪೂರ್ಣಯ್ಯ ನಿವೃತ್ತನಾದನು. ಆಗ 17 ವರ್ಷ ತುಂಬಿದ್ದ ಮುಮ್ಮಡಿ ಕೃಷ್ಣರಾಜ ಅಧಿಕಾರವನ್ನು ವಹಿಸಿಕೊಂಡನು. 1811 ರಿಂದ 1831ರ ವರೆಗೆ ಎಲ್ಲವೂ ಸುಸೂತ್ರವಾಗಿ ಸಾಗಿತು. ಮುಂದೆ ದಂಗೆ ಕ್ಷೋಭೆ ಕ್ಷಾಮ ಯುದ್ಧ ಮುಂತಾದವುಗಳ ಕಾರಣವಾಗಿ ರಾಜ್ಯದ ಆಡಳಿತ ಕುಸಿಯಿತು. ಬ್ರಿಟಿಷರು ಅದನ್ನೇ ನೆಪವಾಗಿಟ್ಟುಕೊಂಡು ತಾವೇ ನೇರವಾಗಿ ಆಳತೊಡಗಿದರು. 36 ವರ್ಷಕಾಲ ದೀರ್ಘ ಹೋರಾಟ ನಡೆದು 1867 ರಲ್ಲಿ ಮೈಸೂರು ರಾಜ್ಯ ಪುನಃ ಮೈಸೂರು ಒಡೆಯರಿಗೆ ದಕ್ಕಿತು. ಮುಮ್ಮಡಿಕೃಷ್ಣರಾಜನು ದಾನ ಧರ್ಮಗಳನ್ನು ನಡೆಸಿದನು. ಸಾಹಿತ್ಯ ರಚನೆಯೂ ಈ ಕಾಲದಲ್ಲಿ ಸಮೃದ್ಧವಾಗಿ ನಡೆಯಿತು. ಸಾಂಸ್ಕೃತಿಕ ಬೆಳವಣಿಗೆಗೆ ಅಪಾರ ಪ್ರೋತ್ಸಾಹ ಲಭಿಸಿತು. 26-7-1800ರ 19 ಶ್ರೀರಂಗಪಟ್ಟಣ ಶಾಸನ ಮುಮ್ಮಡಿ ಕೃಷ್ಣರಾಜನು ಮಹಿಶೂರ ನಗರದಲ್ಲಿ ರತ್ನಸಿಂಹಾಸನಾರೂಢನಾಗಿ ಆಡಳಿತ ನಡೆಸುತ್ತಿದ್ದನೆಂದು ತಿಳಿಸುತ್ತದೆ.

53, 54ನೆಯ ಶ್ರೀರಂಗಪಟ್ಟಣದ ಶಾಸನಗಳಿಂದ ಬ್ರಿಟಿಷರು 1799ರಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಳ್ಳುವಲ್ಲಿ ಸೇನಾನಾಯಕತ್ವವನ್ನು ವಹಿಸಿದ್ದ

ಭಾರತದ ಗೌರ್ನರ್ ಜನರಲ್ ಆದ ಮಾರ್ಕ್ವೆಸ್ ವೆಲ್ಲೆಸ್ಲಿಗೆ ದಿವಾನ್ ಪೂರ್ಣಯ್ಯನ ನೇತೃತ್ವದಲ್ಲಿ 1802ರಲ್ಲಿ ಪ್ರಾರಂಭವಾಗಿ 1804ರಲ್ಲಿ ಮುಗಿದ ಸೇತುವೆಯನ್ನು ಮುಮ್ಮಡಿಕೃಷ್ಣರಾಜನು ಜನತೆಯ ಕೃತಜ್ಞತೆಯ ಕುರುಹಾಗಿ ಅರ್ಪಿಸಿದುದು ತಿಳಿದು ಬರುತ್ತದೆ

1796ರ ಶ್ರೀರಂಗಪಟ್ಟಣ 57, 58ನೆಯ ಶಾಸನಗಳಲ್ಲಿ ಮುಮ್ಮಡಿ ಕೃಷ್ಣ ರಾಜನು ತನ್ನ ತಂದೆ ಖಾಸಾಚಾಮರಾಜನ ಜ್ಞಾಪಕಾರ್ಥವಾಗಿ ಈಶ್ವರದೇವಸ್ಥಾನ ವನ್ನೂ ಚಂದ್ರಶಾಸನವನ್ನೂ ಮಾಡಿಸಿದ ಸಂಗತಿಗಳು ತಿಳಿದುಬರುತ್ತವೆ. 58ನೆಯ ಶಾಸನ 57ನೆಯ ಶಾಸನದ ಇಂಗ್ಲಿಷ್ ಆವೃತ್ತಿ.

30-5-1817ರ ಪಾಂಡವಪುರ 188 ಮೇಲುಕೋಟೆಯ ಶಾಸನದ ಪ್ರಕಾರ ಮುಮ್ಮಡಿ ಕೃಷ್ಣರಾಜನು ಅಲ್ಲಿನ ಕಲ್ಯಾಣಿಯ ಭುವನೇಶ್ವರಿ ಮಂಟಪವನ್ನು ಕಟ್ಟಿಸಿದನು. 1829ನೆಯ ಇಸವಿಗೆ ಸೇರಿದ ಪಾಂಡವಪುರ 158, 159 ಮೇಲು ಕೋಟೆ ಶಾಸನಗಳ ಪ್ರಕಾರ ಪುಳ್ಳೈ ಲೋಕಾಚಾರ್ಯರ ವಿಗ್ರಹವನ್ನು ದಿವ್ಯದೇಶ ಮೇಲುಕೋಟೆಯಲ್ಲಿ ಪುನಶ್ಚ ಪ್ರತಿಷ್ಠಾಪೂರ್ವಕ ಉದ್ಧಾರ ಮಾಡಿದ್ದಾನೆ. ಪಾಂಡವ ಪುರ 173 ಮೇಲುಕೋಟೆ ಶಾಸನದಂತೆ ನಮ್ಮಾಳ್ವಾರ್ ದೇವಸ್ಥಾನದ ಬೆಳ್ಳಿಕೊಡದ ಮೇಲೆ ಶ್ರೀಕೃಷ್ಣರಾಜಒಡೆಯರವರ ಸೇವೆ ರು॥ 238 ॥0 ಎಂದಿದೆ. ಅದೇ ಕೊಡದ ಇನ್ನೊಂದು ಕಡೆ ಬೆಟ್ಟದ ನರಸಿಂಹಸ್ವಾಮಿಯವರ ಚರಣಾರವಿಂದಂಗಳ್ಗೆ ರಾಮಾಯಣದ ತಿರುಮಲಾಚಾರ್ಯರ ಧರ್ಮಪತ್ನಿಯರು ನಾಚಾರಮ್ಮ ತಿರು ವೆಂಗಡಮ್ಮನವರ ಕೈಂಕರ್ಯ ಎಂದಿದೆ. ಬಹುಶಃ ನರಸಿಂಹಸ್ವಾಮಿ ದೇವಸ್ಥಾನಕ್ಕೆ ತಿರುವೇಂಗಡಮ್ಮ ಕೊಟ್ಟಿದ್ದ ಬೆಳ್ಳಿಯ ಕೊಡವನ್ನು ಮುಮ್ಮಡಿ ಕೃಷ್ಣರಾಜನು ನಮ್ಮಾಳ್ವಾರ್ ದೇವಸ್ಥಾನಕ್ಕೆ ಅರ್ಪಿಸಿದಂತೆ ಕಾಣುತ್ತದೆ.

12ನೆಯ ಶ್ರೀರಂಗಪಟ್ಟಣ ಶಾಸನದಲ್ಲಿ ಟೀಪೂಸುಲತಾನ ಪಾದುಷಾರವರ ಧರ್ಮ ಶ್ರೀಕೃಷ್ಣ ಎಂದಿದೆ. ಬಹುಶಃ ಟೀಪೂಸುಲ್ತಾನನ ಧರ್ಮವನ್ನು ಪುನಃ ಕೊಟ್ಟು ಉಳಿಸಿರಬಹುದೆಂದು ತೋರುತ್ತದೆ. 21-12-1842ರ ಪಾಂಡವಪುರ 170 ಮೇಲುಕೋಟೆ ಶಾಸನದಂತೆ ನಮ್ಮಾಳ್ವಾರ್ ದೇವಸ್ಥಾನದ ನಾರಾಯಣ ದೇವರ ಬಂಗಾರದ ಪಾದಗಳ ಮೇಲೆ ಶ್ರೀಕೃಷ್ಣರಾಜ ಒಡೆಯರುಗಳ ಸೇವೆಯೆಂದಿದೆ. ಮುಮ್ಮಡಿ ಕೃಷ್ಣರಾಜನಲ್ಲದೆ ಆತನ ಪತ್ನಿ ಕೃಷ್ಣವಿಲಾಸದ ಲಿಂಗಾಜಮ್ಮಣ್ಣಿಯೆಂದು ಪ್ರಸಿದ್ಧಳಾದ ಮುದ್ದುಲಿಂಗಮ್ಮನು ಸೇವೆಗಳನ್ನು ನಡೆಸಿದ್ದಾಳೆ. ಈಕೆ ಮೇಲುಕೋಟೆ ಯೋಗಾನರಸಿಂಹಸ್ವಾಮಿಗೆ ಚಿನ್ನದ ಕಿರೀಟವನ್ನು ಮಾಡಿಸಿಕೊಟ್ಟಿದ್ದಾಳೆ. ಕಿರೀಟದ ಅಡ್ಡಿಕೆಗಾಟು ಸಹ ಚಿನ್ನದ ತೂಕ 656 ವರಹ 8 ಆಣೆಗಳು. ತೇದಿಯಿಲ್ಲದ ಪಾಂಡವ ಪುರ 168 ಮೇಲುಕೋಟೆ ಶಾಸನದ ಪ್ರಕಾರ ಚೆಲುವರಾಯಸ್ವಾಮಿಯವರ ದೇವಸ್ಥಾನಕ್ಕೆ ಸೇವೆಯನ್ನು ಸಲ್ಲಿಸಿದ್ದಾಳೆ.

ಹೀಗೆ ಮುಮ್ಮಡಿ ಕೃಷ್ಣರಾಜನಾಳರಿಗಿನ ಶಾಸನಗಳ ಪರಿಶೀಲನೆಯಿಂದ ಅನೇಕ ಜನೋಪಕಾರಿ ಕೆಲಸಗಳನ್ನು ಮೈಸೂರು ಒಡೆಯರು ನಡೆಸಿರುವುದು ಕಂಡು ಬರುತ್ತದೆ. ಪರಾಕ್ರಮ ಮತ್ತು ಪರೋಪಕಾರ ಬುದ್ಧಿ ಇದ್ದ ಕಾರಣವಾಗಿ ಅವರು ಸುಮಾರು 550 ವರ್ಷಗಳ ಕಾಲ ರಾಜ್ಯವಾಳಿದರೆನ್ನಬಹುದು. ಇದೇ ಪರಂಪರೆ ಚಾಮರಾಜ ಒಡೆಯರ ಕಾಲದಲ್ಲಿಯೂ ಮುಂದುವರೆಯಿತು. ದಿವಾನ್ ಸಿ. ರಂಗಾಚಾರ್ಲು ಅವರ ಮಾರ್ಗದರ್ಶನದಲ್ಲಿ ಮಂತ್ರಾಲೋಚನ ಸಭೆ, ಪ್ರಜಾಪ್ರತಿನಿಧಿ ಸಭೆಗಳು ರೂಪುಗೊಂಡುವು. ಭರತಖಂಡದ ಪ್ರಜಾಪ್ರಭುತ್ವದ ನೆಲಗಟ್ಟನ್ನು ಹಾಕಿದವರು ಮೈಸೂರು ಒಡೆಯರು. 1894ರಲ್ಲಿ ಚಾಮರಾಜನ ನಿಧನಾನಂತರ ಹತ್ತು ವರ್ಷದ ನಾಲ್ವಡಿ ಕೃಷ್ಣರಾಜ ಪಟ್ಟವೇರಿದನು. 1902ರ ವರೆಗೆ ಮಹಾರಾಣಿ ಕೆಂಪನಂಜಮ್ಮಣ್ಣಿ ರೀಜೆಂಟ್ ಆಗಿ ಆಡಳಿತ ನಡೆಸಿದಳು. ಈ ಆಡಳಿತಾವಧಿಯಲ್ಲಿ ಪಿ. ಎನ್. ಕೃಷ್ಣಮೂರ್ತಿ, ವಿ. ಪಿ. ಮಾಧವರಾವ್, ಟಿ. ಆನಂದರಾವ್, ಸರ್ ಎಂ. ವಿಶ್ವೇಶ್ವರಯ್ಯ, ಕಾಂತರಾಜ ಅರಸು, ಸರ್ ಆಲ್ಬಿಯನ್ ಬ್ಯಾನರ್ಜಿ, ಸರ್ ಮಿರ್ಜಾ ಎಂ. ಇಸ್ಮಾಯಿಲ್ ಎನ್ನುವವರು ದಿವಾನರಾಗಿದ್ದು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾದರು. ಮಹಾತ್ಮಗಾಂಧಿಯವರು ನಾಲ್ವಡಿ ಕೃಷ್ಣರಾಜನನ್ನು ರಾಜರ್ಷಿಯೆಂದು ಪ್ರಶಂಸಿಸಿದರು.

ಇಂದಿನ ಮಂಡ್ಯಜಿಲ್ಲೆ 1939ರಲ್ಲಿ ರೂಪುಗೊಂಡಿತು. ಇದು ಕೃಷ್ಣರಾಜಪೇಟೆ ಮದ್ದೂರು, ಮಳವಳ್ಳಿ, ಮಂಡ್ಯ, ನಾಗಮಂಗಲ, ಪಾಂಡವಪುರ, ಶ್ರೀರಂಗಪಟ್ಟಣ ಎನ್ನುವ ಏಳು ತಾಲ್ಲೂಕುಗಳನ್ನೊಳಗೊಂಡಿದೆ. 31 ಹೋಬಳಿ, 10 ಪಟ್ಟಣಗಳು ಮತ್ತು 1483 ಗ್ರಾಮಗಳು ಇರುವ ಈ ಜಿಲ್ಲೆಯ ವಿಸ್ತೀರ್ಣ 4958 ಚದುರ ಕಿಲೋಮೀಟರುಗಳು. ಇಲ್ಲಿನ ಪ್ರಜಾಸಂಖ್ಯೆ 11,54,374

ಮಂಡ್ಯಜಿಲ್ಲೆಯನ್ನು ನಂದನವನವನ್ನಾಗಿ ಮಾಡಿದ ಕೃಷ್ಣರಾಜಸಾಗರ ನಾಲ್ವಡಿ ಕೃಷ್ಣರಾಜನ ಕೊಡುಗೆ. 1911ರಲ್ಲಿ ಪ್ರಾರಂಭವಾಗಿ 1932ರಲ್ಲಿ ಪೂರ್ಣಗೊಂಡಿತು. ವಿಶ್ವೇಶ್ವರಯ್ಯ, ಕರ್ಪೂರ ಶ್ರೀನಿವಾಸರಾವ್, ಬಿ. ಸುಬ್ಬರಾವ್, ಸಿ. ಕಡಾಂಬಿ, ಕೆ. ಕೃಷ್ಣಅಯ್ಯಂಗಾರ್, ಜಾನ್ ಬೋರೆ, ಕೆ. ಆರ್ ಶೇಷಾಚಾರ್, ಎಸ್. ಶ್ರೀನಿವಾಸ ಅಯ್ಯರ್, ಎಚ್. ಪಿ. ಗಿಬ್ಸ್ ಅವರು ಇಂಜಿನಿಯರುಗಳಾಗಿ ಇದರ ರಚನೆಯಲ್ಲಿ ದುಡಿದಿದ್ದಾರೆ. 1455 ರಿಂದ 1932ರ ವರೆಗೆ ಕಾವೇರಿಯನ್ನು ಹಿಡಿದಿಡಲು ಭಗೀರಥಪ್ರಯತ್ನ ನಡೆಯಿತು. ನಾಗಮಂಗಲದ ಸಿಂಗಣ ವೊಡೆಯನ ಮಗ ದೇವ ರಾಜನು ಹೊಸದಾಗಿ ಕಟ್ಟೆಯನ್ನು ಕಟ್ಟಿಸಿ ಹರಪುಗ್ರಾಮದವರೆಗೆ ನೀರು ತಂದದ್ದು ಪ್ರಸಿದ್ಧವಾಗಿದೆ. ಚಾಮರಾಜನು ಶ್ರೀರಂಗಪಟ್ಟಣದ ಬಳಿ ರೂಪಿಸಿದ ಹೊಸ ಬಯಲು, ಕಂಠೀರವನರಸರಾಜನ ಬಂಗಾರದೊಡ್ಡಿನಾಲೆಗಳು ಇಂದಿಗೂ ಉಳಿದು ಬದಿವೆ. ಚಿಕ್ಕದೇವರಾಜ ಒಡೆಯನ ಪ್ರಯತ್ನ ಪ್ರಾಕೃತಿಕ ವೈಪರೀತ್ಯದಿಂದ ಯಶಸ್ವಿ

ಯಾಗಲಿಲ್ಲ. ಟಿಪ್ಪು ಸುಲ್ತಾನ್ ಕೂಡ ಈಗಿರುವ ಕಟ್ಟೆಯ ಬಳಿ ಒಂದು ಪ್ರಯತ್ನವನ್ನು ನಡೆಸಿದ್ದನು. ಕಾವೇರಿಗೆ ಕಟ್ಟೆ ಕಟ್ಟಿ ತಡೆದು ನಿಲ್ಲಿಸುವ ಕಾರ್ಯ ಯಶಸ್ವಿಯಾದದ್ದು ನಾಲ್ವಡಿ ಕೃಷ್ಣರಾಜನ ಕಾಲದಲ್ಲಿ ಎನ್ನಬಹುದು.

ಕೃಷ್ಣರಾಜ ಸಾಗರವನ್ನು ಕಟ್ಟುವಾಗ ಇದ್ದ ಉದ್ದೇಶಗಳು ಎರಡು. ಮೊದಲನೆಯದಾಗಿ ನೀರಾವರಿ ಸೌಲಭ್ಯವನ್ನು ಹೆಚ್ಚಿಸುವುದು. ಎರಡನೆಯದಾಗಿ ಶಿವನಸಮುದ್ರದಲ್ಲಿ ತಯಾರಿಸಲು ಉದ್ದೇಶಿಸಿದ್ದ ವಿದ್ಯುತ್ ಉತ್ಪಾದನೆಗೆ ನಿಯತವಾಗಿ ನೀರಿನ ಸರಬರಾಜನ್ನು ಕಾಪಾಡಿಕೊಳ್ಳುವುದು. ಇಂದು 1,20,000 ಎಕರೆಗಳಿಗೆ ಕೃಷ್ಣರಾಜ ಸಾಗರವು ನೀರನ್ನು ಉಣಿಸುತ್ತಿದ್ದು ಅದರ ವಿವರಗಳು ಹೀಗಿವೆ. ಕಟ್ಟೆಯಿಂದ ಹುಲಿಕಲ್ ಸುರಂಗದವರೆಗೆ 6900 ಎಕರೆಗಳು. ಮದ್ದೂರು ಶಾಖೆಯಿಂದ 22,100 ಎಕರೆಗಳು, ಶಿಂಷಾ ಶಾಖೆಯಿಂದ 11,000 ಎಕರೆಗಳು, ಕೆರೆಗೋಡು ಶಾಖೆಯಿಂದ 9,900 ಎಕರೆಗಳು, ಕಾವೇರಿ ಶಾಖೆಯಿಂದ 9,000 ಎಕರೆಗಳು, ಲೋಕಸರ ಶಾಖೆಯಿಂದ 7,600 ಎಕರೆಗಳು, ಹೆಬ್ಬಕವಾಡಿ ಶಾಖೆಯಿಂದ 1,1600 ಎಕರೆಗಳು, ನಿಡಘಟ್ಟ ಶಾಖೆಯಿಂದ 4,800 ಎಕರೆಗಳು, ತುರುಗನೂರು ಶಾಖೆಯಿಂದ 9,200 ಎಕರೆಗಳು ವರುಣಾನಾಲೆ ಯೋಜನೆ ಮೂಲಕ ಮಂಡ್ಯ ಮತ್ತು ಮೈಸೂರು ಜಿಲ್ಲೆಯ 80,000 ಎಕರೆ ಭೂಮಿಗೆ ನೀರನ್ನೊದಗಿಸುವ ಕೆಲಸ ನಡೆಯುತ್ತಿದೆ.

ಕೃಷ್ಣರಾಜ ಸಾಗರದಿಂದ 60 ಮೈಲಿದೂರದಲ್ಲಿರುವ ಶಿವನ ಸಮುದ್ರದಲ್ಲಿ ಕಾವೇರಿನದಿ 380 ಅಡಿ ಎತ್ತರದಿಂದ ಧುಮುಕುತ್ತದೆ. ಅಲ್ಲಿ 1902ರಲ್ಲಿ ವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭವಾಯಿತು. ಕಟ್ಟೆ ನಿರ್ಮಾಣಕ್ಕೆ ಮೊದಲು ಅಲ್ಲಿ 9698 ಕಿ. ವಾ ವಿದ್ಯುತ್ ಉತ್ಪಾದನೆಯಾಗತೊಡಗಿತು. 1915ರ ಹೊತ್ತಿಗೆ ಕಟ್ಟೆಯಲಿ 60 ಅಡಿ ನೀರು ನಿಲ್ಲುವಂತಾದಾಗ ಕೋಲಾರದ ಚಿನ್ನದಗಣಿಯ ಬೇಡಿಕೆ ಮತ್ತು ವಿದ್ಯುದ್ದೀಪದ ಬಳಕೆ ಮುಂತಾದುವುಗಳನ್ನು ಗಮನಿಸಿ ಕ್ರಮೇಣವಾಗಿ 4760 ಕಿ. ವಾ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಹೆಚ್ಚಿನ ಬೇಡಿಕೆಯನ್ನು ಗಮನಿಸಿ ಶಿಂಷಾದಲ್ಲಿಯೂ ವಿದ್ಯುತ್ ಉತ್ಪಾದನೆ ಮಾಡತೊಡಗಿದರು. 17158 ಕಿ. ವಾ ವಿದ್ಯುತ್ ಅನ್ನು ಉತ್ಪಾದಿಸುತ್ತಿದ್ದಾರೆ. ಭರತಖಂಡದಲ್ಲಿ ವಿದ್ಯುತ್ ಉತ್ಪಾದನೆ ಮಾಡಿ ಬಳಸಿಕೊಂಡ ಮೊದಲರಾಜ್ಯ ಮೈಸೂರು. ಅದರ ಕೀರ್ತಿ ಮೈಸೂರು ಒಡೆಯರಿಗೆ ಸಲ್ಲುತ್ತದೆ.

ಕೃಷ್ಣರಾಜಸಾಗರದ ನಿರ್ಮಾಣದಿಂದ ದೊರೆತ ನೀರಾವರಿ ಸೌಲಭ್ಯದಿಂದ ಆಹಾರಧಾನ್ಯಗಳ ಜೊತೆಗೆ ವಾಣಿಜ್ಯ ಬೆಳೆಯಾಗಿ ಕಬ್ಬಿನ ಉತ್ಪಾದನೆ ಹೆಚ್ಚಿತು. ಕಬ್ಬಿಗೆ ಮಾರುಕಟ್ಟೆಯನ್ನು ಒದಗಿಸುವ ಸಲುವಾಗಿ ಮಂಡ್ಯನಗರದಲ್ಲಿ 1933 ರಲ್ಲಿ ಮೈಸೂರು ಷುಗರ್ ಕಂಪನಿ ಸ್ಥಾಪಿತವಾಯಿತು. ಈ ಕಾರ್ಖಾನೆಯಲ್ಲಿ ಒಂದು ದಿವಸಕ್ಕೆ 1400 ಟನ್ ಕಬ್ಬನ್ನು ಅರೆಯಲು ಸಾಧ್ಯವಾಯಿತು. ಸಕ್ಕರೆಯ ಉತ್ಪಾದ

ನೆಯ ಸಂದರ್ಭದಲ್ಲಿ ಬರುವ ಉಪವಸ್ತುಗಳ ಬಳಕೆಗಾಗಿ ಆಲ್ಕೊಹಾಲ್ ಮತ್ತು ರಮ್‌ಗಳನ್ನು ತಯಾರಿಸುವ ಡಿಸ್ಟಿಲರಿಯೊಂದನ್ನು ಲಗತ್ತಿಸಲಾಯಿತು. ಇಂದು ವರ್ಷವೊಂದರಲ್ಲಿ ಈ ಕಾರ್ಖಾನೆ ಪರಮಾವಧಿ 33,000ಟನ್ ಸಕ್ಕರೆ ಮತ್ತು 9.41 ಲಕ್ಷ ಗ್ಯಾಲನ್‌ಗಳಷ್ಟು ಆಲ್ಕೊಹಾಲ್ ಮತ್ತು ಮದ್ಯವನ್ನು ತಯಾರಿಸುವ ಶಕ್ತಿಯನ್ನು ಹೊಂದಿದೆ.

ಜಗತ್ಪ್ರಸಿದ್ಧವಾದ ಬೃಂದಾವನ ಕೃಷ್ಣರಾಜಸಾಗರದಲ್ಲಿದೆ. ಇದು ಪ್ರವಾಸಿ ಆಕರ್ಷಣೆಯಲ್ಲಿ ಭಾರತದ ಒಂದು ಪ್ರಮುಖ ಕೇಂದ್ರ. ನೀರು ಬೆಳಕು ಬಣ್ಣಗಳ ಸುಂದರ ಸಮ್ಮಿಲನವನ್ನು ಇಲ್ಲಿ ಕಾಣಬಹುದು. ವಿದ್ಯುದಲಂಕಾರದಿಂದ ಕೂಡಿದ ಬೃಂದಾವನ ನೋಟಕರ ಕಣ್ಮನಗಳನ್ನು ತಣಿಸುತ್ತದೆ. ಸಂಗೀತ ಕಾರಂಜಿ ಮತ್ತು ಬಣ್ಣ ಬಣ್ಣದ ಕಾರಂಜಿಗಳು ಮನಸ್ಸಿಗೆ ಉಲ್ಲಾಸವನ್ನುಂಟುಮಾಡುತ್ತವೆ.

1940 ರಿಂದ 1951 ರ ವರೆಗೆ ಮೈಸೂರು ರಾಜ್ಯವನ್ನಾಳಿದ ಜಯಚಾಮರಾಜ ಒಡೆಯರ್ ಪ್ರಸಿದ್ಧ ವೇದಾಂತಿ ಮಂಡ್ಯಜಿಲ್ಲೆಯ ಮೇಲೆ ಅಪಾರ ಪ್ರೀತಿ ಅವರಿಗಿದ್ದಿತು.

ಕರ್ನಾಟಕ ರತ್ನಸಿಂಹಾಸನಾಧೀಶರನ್ನಾಗಿ ಮಾಡಿದ ಮಂಡ್ಯಜಿಲ್ಲೆಯನ್ನು ಮೈಸೂರು ಒಡೆಯರು ನಂದನವನವನ್ನಾಗಿ ಮಾಡಿ ತಮ್ಮ ಅಮೋಘವಾದ ಕಾಣಿಕೆಯನ್ನು ಸಲ್ಲಿಸಿದ್ದಾರೆ.

ಜಿ. ಜಿ. ಮಂಜುನಾಥನ್

ಮಂಡ್ಯ ಜಿಲ್ಲೆಯ ಸ್ಥಾನಿಕಪ್ರಭುಗಳು

ಮಂಡ್ಯಜಿಲ್ಲೆ 1939ರಲ್ಲಿ ಜನ್ಮತಳೆದರೂ ಈ ಪ್ರದೇಶ ಸಾಕಷ್ಟು ಪ್ರಾಚೀನವಾದುದೆಂಬುದು ಇತಿಹಾಸದಿಂದ ವಿದಿತವಾಗಿದೆ. ಈ ಜಿಲ್ಲೆಯ ರಾಜಕೀಯದಲ್ಲಿ ಗಂಗರು ಚೋಳರು ಕಲ್ಯಾಣಿಚಾಲುಕ್ಯರು ಹೊಯ್ಸಳರು ವಿಜಯನಗರದ ಅರಸರು ಮೈಸೂರು ಒಡೆಯರು ಮೊದಲಾದ ಹಲವು ಪ್ರಖ್ಯಾತ ಮನೆತನಗಳ ರಾಜಮಹಾರಾಜರು ಆಗಿಹೋಗಿದ್ದಾರೆ. ಇವರಿಗೆ ಪೂರ್ವದಲ್ಲಿ ಅಂದರೆ ಮೌರ್ಯರು ಮತ್ತು ಶಾತವಾಹನರ ಕಾಲದಲ್ಲಿ ಮಂಡ್ಯಜಿಲ್ಲೆಯನ್ನು ಸ್ಥಾನಿಕ ಪ್ರಭುಗಳು ಆಳುತ್ತಿದ್ದರೆನ್ನುವ ಹೇಳಿಕೆಗಳಿವೆ. ಸ್ಥಾನಿಕಪ್ರಭು ಎಂದರೆ ಒಂದು ನಿರ್ದಿಷ್ಟ ಪ್ರದೇಶದ ಆಡಳಿತಗಾರ ಎಂದು ಅರ್ಥೈಸಬಹುದು. ಇದು ಇಂಗ್ಲಿಷಿನ Local Chieftain, feudatory, tributory prince ಎಂಬ ಶಬ್ದಗಳಿಗೆ ಸಮಾನವಾದುದು. ಕನ್ನಡದಲ್ಲಿ ಬಳಕೆಯಲ್ಲಿರುವ ಸಾಮಂತ, ಪಾಳೆಯಗಾರ, ಮಾಂಡಲಿಕ ಎಂಬ ಮಾತುಗಳೆಲ್ಲ ಸ್ಥಾನಿಕಪ್ರಭು ಎಂಬುದಕ್ಕೆ ಪರ್ಯಾಯವಾದಂವು.

ಸ್ಥಾನಿಕಪ್ರಭುವಿನ ಆಡಳಿತಕ್ಕೆ ಒಳಪಟ್ಟ ಪ್ರದೇಶಕ್ಕೆ ಪಾಳೆಯಪಟ್ಟು, ನಾಡು, ಸಂಸ್ಥಾನ ಎಂಬ ಹಲವು ನಾಮಾಂತರಗಳಿವೆ. ಸ್ಥಾನಿಕ ಪ್ರಭುವಿಗೆ ಒಂದು ಸಂಸ್ಥಾನ ವಿಕ್ರಮಾರ್ಜಿತವಾಗಿ ಲಭ್ಯವಾಗಬಹುದು. ಇಲ್ಲವೆ ವಂಶಪಾರಂಪರ್ಯವಾಗಿ ಕೂಡ ದೊರೆಯಬಹುದು. ದೊಡ್ಡ ದೊಡ್ಡ ಸಾಮ್ರಾಟರು ಆಡಳಿತ ಸುಧಾರಣೆಯ ದೃಷ್ಟಿಯಿಂದ ತಮ್ಮ ವಿಸ್ತಾರವಾದ ರಾಜ್ಯವನ್ನು ಚಿಕ್ಕ ಚಿಕ್ಕ ಸಂಸ್ಥಾನಗಳನ್ನಾಗಿ ವಿಂಗಡಿಸಿ ಅವುಗಳಿಗೆ ಸ್ಥಳೀಯಪ್ರಭುವೊಬ್ಬನನ್ನು ನಿಯಮಿಸಿರುವ ನಿದರ್ಶನಗಳೂ ಉಂಟು. ಇಂಥ ಸ್ಥಳೀಯಪ್ರಭುಗಳ ಪ್ರಮುಖ ಕರ್ತವ್ಯವೆಂದರೆ ತಮ್ಮ ಅಧೀನಕ್ಕೆ ಒಳಪಟ್ಟ ಪ್ರದೇಶಗಳಲ್ಲಿ ಪ್ರಜೆಗಳಿಂದ ಕಂದಾಯವನ್ನು ವಸೂಲಿಮಾಡಿ ತಮ್ಮ ಆಶ್ರಯದಾತ ದೊರೆಗಳಿಗೆ ಕಪ್ಪ ಕಾಣಿಕೆಗಳನ್ನು ಸಲ್ಲಿಸುವುದು, ಶಾಂತಿಕಾಲದಲ್ಲಿ ಕಾನೂನು ಮತ್ತು ಶಿಸ್ತುಪಾಲನೆ, ಯುದ್ಧಕಾಲದಲ್ಲಿ ತಮ್ಮ ಒಡೆಯರಿಗೆ ಬೆಂಬಲವಾಗಿ ನಿಂತು ರಣರಂಗದಲ್ಲಿ ಹೋರಾಡುವುದಾಗಿದ್ದಿತು. ಇವರು ಪ್ರಜೆಗಳಿಗೆ ಸಮೀಪವರ್ತಿಗಳಾಗಿರುತ್ತಿದ್ದುದರಿಂದ ಪ್ರಜೆಗಳು ತಮ್ಮ ಕುಂದುಕೊರತೆಗಳನ್ನು ಅವರಲ್ಲಿ ಬಿನ್ನವಿಸಿಕೊಳ್ಳುತ್ತಿದ್ದರು. ಜನಸಾಮಾನ್ಯರಿಂದ ರಾಜನಿಗೆ ದೊರಕುವ ಗೌರವ, ಪ್ರೀತಿ, ಆದರ, ಅಭಿಮಾನ, ಪ್ರಶಸ್ತಿಗಳೆಲ್ಲ ಸ್ಥಾನಿಕಪ್ರಭುಗಳಿಗೂ ಲಭ್ಯವಾಗುತ್ತಿದ್ದವು. ಇವರು ತಮ್ಮ ತಮ್ಮ ಸ್ಥಳಗಳಲ್ಲಿ

ಅನಭಿಷಿಕ್ತ ಸಾರ್ವಭೌಮರಂತೆ ಇರುತ್ತಿದ್ದು ಸಮಕಾಲೀನ ರಾಜಕೀಯ ಸಂದರ್ಭದಲ್ಲಿ ಮಹತ್ತರಪಾತ್ರ ವಹಿಸುತ್ತಿದ್ದರು. ಮಂಡ್ಯ ಜಿಲ್ಲೆಯಲ್ಲಿ ಉಮ್ಮತ್ತೂರು, ನಂದ್ಯಾಲ, ಹರತಿ, ನಾಗಮಂಗಲ ಮೊದಲಾದ ಪ್ರಸಿದ್ಧ ಮನೆತನಗಳಲ್ಲದೆ ಇತರ ಸಾಮಂತರ ಶಾಸನಗಳೂ ದೊರೆತಿವೆ. ಹಾಗೆಯೆ ಕಲ್ಕುಣಿನಾಡು, ಕಬ್ಬಾಹುನಾಡು, ಅರಕೆರೆ, ಬಸರಾಳು, ನಗರಕೆರೆ ಮೊದಲಾದ ಸಣ್ಣ ಪುಟ್ಟ ಸಂಸ್ಥಾನಗಳ ವಿವರಗಳಿವೆ. ಪ್ರಸ್ತುತ ಲೇಖನದಲ್ಲಿ ಮಂಡ್ಯ ಜಿಲ್ಲೆಯ ಸ್ಥಾನಿಕಪ್ರಭುಗಳನ್ನು ಕುರಿತ ಶಾಸನಗಳನ್ನು ಸಮೀಕ್ಷಿಸಲಾಗಿದೆ.

ಕಲ್ಕುಣಿ : ಹೊಯ್ಸಳರು ದೋರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದಾಗ ಮಂಡ್ಯಜಿಲ್ಲೆಯು ಹಲವು ಸಂಸ್ಥಾನಗಳಾಗಿ ವಿಂಗಡವಾಗಿ ಹೊಯ್ಸಳ ಆಶ್ರಿತ ಸಾಮಂತರ ಆಡಳಿತಕ್ಕೆ ಒಳಪಟ್ಟಿದ್ದು ಕಂಡುಬರುತ್ತದೆ. ಇಂಥ ಸಂಸ್ಥಾನಗಳಲ್ಲಿ ಕಲ್ಕುಣಿ ಒಂದು. ಈಗ ಕಲ್ಕುಣಿ ಮಂಡ್ಯ ಜಿಲ್ಲೆಯ ಒಂದು ಚಿಕ್ಕಗ್ರಾಮ ಆದರೆ ಹಿಂದೆ ಬೆಳ್ಳೂರು, ನಾಗಮಂಗಲ, ಹೆಬ್ಬಿದಿರವಾಡಿ, ಕಸಲಗೆರೆ ಮೊದಲಾದ ಊರುಗಳೆಲ್ಲ ಕಲ್ಕುಣಿನಾಡಿನ ಎಲ್ಲೆಗೆ ಒಳಪಟ್ಟಿದ್ದವು.

ನಾಗಮಂಗಲ ತಾಲ್ಲೂಕಿನ ಕಸಲಗೆರೆಯಲ್ಲಿ ಕಲ್ಕುಣಿನಾಡಿನ ಸ್ಥಾನಿಕಪ್ರಭುಗಳಿಗೆ ಸಂಬಂಧಿಸಿದ ಮೂರು ಶಾಸನಗಳು ದೊರೆತಿವೆ.[1] ಕ್ರಿ. ಶ. 1142ರ ನಾಮಂ. 169 ನೆಯ ಶಾಸನ ಹೊಯ್ಸಳ ವಿಷ್ಣುವರ್ಧನನ ಸಾಮಂತನಾಗಿದ್ದ ಸೋಮನನ್ನು ಕುರಿತಿದೆ. ಈತ ಭಾನುಕೀರ್ತಿಸಿದ್ಧಾಂತದೇವರ ಶಿಷ್ಯ. ಇದರಿಂದ ಸಾಮಂತ ಸೋಮನು ಜೈನ ಧರ್ಮಾನುಯಾಯಿ ಎಂಬುದು ಸ್ಪಷ್ಟ. ಕಲ್ಕುಣಿನಾಡಿಗೆ ಸೇರಿದ ಹೆಬ್ಬಿದಿರುವಾಡಿಯಲ್ಲಿ ಹೊಸದಾಗಿ ಒಂದು ಬಸದಿಯನ್ನು ನಿರ್ಮಿಸಿ ಅಲ್ಲಿ ಪಾರ್ಶ್ವದೇವನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಯಿತು. ಆ ಸಂದರ್ಭದಲ್ಲಿ ಸಾಮಂತಸೋಮನು ಪಾರ್ಶ್ವದೇವರ ಅಂಗಭೋಗ, ಆಹಾರದಾನ. ಬಸ್ತಿಯ ಜೀರ್ಣೋದ್ಧಾರಕಾರ್ಯಗಳಿಗೆಂದು ಅರುಹನಹಳ್ಳಿಗ್ರಾಮವನ್ನು ದತ್ತಿಬಿಟ್ಟನು. ಮೂಲಸಂಘ ಸೂರಸ್ತಗಣದ ಬ್ರಹ್ಮದೇವನು ದತ್ತಿ ಸ್ವೀಕರಿಸಿದನು. ಪ್ರಸ್ತುತ ಶಾಸನದಲ್ಲಿ ಸಾಮಂತಸೋಮನ ಹಿಂದಿನ ತಲೆಮಾರುಗಳ ಉಲ್ಲೇಖವೂ ದೊರೆಯುತ್ತದೆ—"ಕರಿಅಯ್ಯಣಸಾವಂತನ ಪಿರಿಯಮಗಂ ನಾಗನಾತನಗ್ರತನೂಜಂ ಸುರಧೇನು ಕಲ್ಪವೃಕ್ಷದ ದೊರೆಯೆನಿಸಿದ ಸುಗ್ಗಗಉಣ್ಣನದಿರದ ಗಂಡ ಎನೆ ನೆಗಳ್ದ ಸುಗ್ಗಗಉಣ್ಣನ ತನೆಯಂ ಸಾವಂತ ಸೋಮನಾಹವಭೀಮಂ"[3] ಈ ಬರಹದ ಆಧಾರದಿಂದ ಸೋಮನ ವಂಶಾವಳಿಯನ್ನು ಹೀಗೆ ನಿರೂಪಿಸಬಹುದು—

1. ಎ. ಕ. ಸಂ 7 ; ನಾಮಂ. 169, 171, 172.

ಕರಿಅಯ್ಕಣ

ನಾಗ

|

ಸುಗ್ಗಗಾಉಣ್ಣ

|

ಸಾಮಂತ ಸೋಮ—ಮಾರವ್ವೆ

|

ಚಟ್ಟದೇವ | ಕಲಿದೇವ | ಮಾರದೇವ (?) ನಾಮಂ. 171

ಈ ವಂಶದ ಮೂಲಪುರುಷ ಅಯ್ಕಣನು ಕರಿಅಯ್ಕಣನೆಂದು ಹೆಸರು ಪಡೆದ ಸಂದರ್ಭ ಹೀಗಿದೆ—ವೀರಗಂಗಪೆರ್ಮಾಡಿಯು ಚೋಳರ ವಿರುದ್ಧ ದಂಡೆತ್ತಿ ಹೋದಾಗ ಹೃದುವನಕೆರೆಯಲ್ಲಿ ಬೀಡುಬಿಟ್ಟನು. ಆಗ ಒಂದು ಮದ್ದಾನೆ ಬೀಡಿನ ಮೇಲೆ ದಾಳಿಮಾಡಿತು. ಅಯ್ಕಣ ಆನೆಯನ್ನು ಕೊಂದು ಶೌರ್ಯವನ್ನು ಪ್ರದರ್ಶಿಸಿದ. ಅಂದಿನಿಂದ ಕರಿಅಯ್ಕಣನೆಂದು ಪ್ರಸಿದ್ಧನಾದ. ಮುಂದೊಂದುದಿನ ಗಂಗಅರಸನು ಕರಿಅಯ್ಕಣನನ್ನು ಕಲ್ಕುಣಿನಾಡಿನ ಒಡೆಯನನ್ನಾಗಿ ಮಾಡಿ ಆತನ ಪರಾಕ್ರಮಕ್ಕೆ ಮನ್ನಣೆಯಿತ್ತನು.

ಸುಮಾರು ಹನ್ನೆರಡನೆಯ ಶತಮಾನಕ್ಕೆ ಸೇರಿದ ಕಸಲಗೆರೆಯ 171 ನೆಯ ಶಾಸನ ಮುಖ್ಯವಾಗಿ ಮಾರದೇವನ ಹೆಂಡತಿ ಮಹಾದೇವಿ ಸತಿಹೋದ ಸಂಗತಿಯನು ಪ್ರಕಟಿಸಿದರೂ ಸಾಮಂತ ಸೋಮನ ಉಲ್ಲೇಖವಿರುವುದರಿಂದ ಗಮನಾರ್ಹವಾಗಿದೆ. ಇಲ್ಲಿನ ಮಾರದೇವ ಸಾಮಂತ ಸೋಮನ ಮಗ. ಸಾಮಂತ ಸೋಮನನ್ನು 'ಕೂಡಲೂರಕುಲಕಮಲಮಾರ್ತಾಂಡ' ಎಂದು ವರ್ಣಿಸಲಾಗಿದೆ. ಇದು ಇಂದಿನ ನೀಲಗಿರಿ ಸಮೀಪದ ಗೂಡಲೂರು ಇರಬಹುದೆ ? ಪೂರ್ವೋಕ್ತ ಶಾಸನದಲ್ಲಿ ಉಲ್ಲೇಖಿತನಾದ ಸೋಮ ಹಾಗೂ ಪ್ರಸ್ತುತಶಾಸನದ ಸೋಮನಿಗೂ ಸಂಬಂಧವಿದೆಯೆ ಎಂಬುದು ವಿಚಾರಾರ್ಹ.

ಕ್ರಿ. ಶ. 1260ರ ನಾಮಂ. 172ನೆಯ ಶಾಸನದಲ್ಲಿ ಮಾಚಿದೇವ ಎಂಬ ಸಾಮಂತನೊಬ್ಬನ ಪ್ರಸ್ತಾಪವಿದೆ. ಈತ ಹೊಯ್ಸಳ ಮೂರನೆಯ ನರಸಿಂಹನಿಗೆ ಅಧೀನನಾಗಿದ್ದನು. ಇಲ್ಲಿನ ಮಾಚಿದೇವ ಕೂಡ ನಾಮಂ. 171 ರಲ್ಲಿ ಉಕ್ತನಾದ ಸಾಮಂತ ಸೋಮನ ಅನ್ವಯದವ ಇರಬೇಕು. ಏಕೆಂದರೆ ಸಾಮಂತಮಾಚನ ಗುಣಾವಳಿಗಳನ್ನು ಹೇಳುವಾಗ "ಕಲಿಕಣಿ ನಾಡಾಳುವ ತೊಡದ ರ ದೊಂಕಿ ಕೂಡ ಕಾಯುವ ನಾಯಕರ ಗಂಡ ಪರನಾರೀಪುತ್ರ ಕೂಡಲೂರಕುಲಕಮಳಮಾರ್ತಂಡ

ಎನ್ನುವುದು ಈತನಿಗೂ ಸಲ್ಲುವುದರಿಂದ ನಾಮಂ. 171ರ ಸೋಮನ ವಂಶಸ್ಥ ನೆಂಬುದು ಖಚಿತವಾಗುತ್ತದೆ. ಸಾಮಂತ ಮಾಚಿದೇವನ ಪತ್ನಿ ಕೇತಲದೇವಿ. ಈ ದಂಪತಿಗಳಿಗೆ ಜನಿಸಿದ ಗುಜ್ಜಯನಾಯಕನು ರಾಜನೊಂದಿಗೆ ಮಲೆಯದಂಡಿಗೆ ಹೋಗಿ ಮಡಿದನು.

ಹೊಯ್ಸಳ ಎರಡನೆಯ ನರಸಿಂಹನಿಗೆ ಸಾಮಂತನಾಗಿದ್ದ ಕಾಚಿದೇವ ಎಂಬುವನು ಕಲ್ಕುಣಿನಾಡನ್ನು ಆಳುತ್ತಿದ್ದ ಸಂಗತಿ ಕ್ರಿ. ಶ. 1224ರ ನಾಮಂ. 81ನೆಯ ಶಾಸನ ದಿಂದ ತಿಳಿದುಬರುತ್ತದೆ. ಕುರುವಂದವಂಶಕ್ಕೆ ಸೇರಿದ ಕಾಚಿದೇವನನ್ನು 'ಮೊರ ಸಾಧಿರಾಯ' ಎಂದು ವರ್ಣಿಸಲಾಗಿದೆ. ಈತನಿಗೆ 'ವೀರಗಾಜೇಂದ್ರ ಹೊಯ್ಸಳ' ಎಂಬ ಬಿರುದೂ ಪ್ರಾಪ್ತಿಯಾಗಿತ್ತು. ಅಲ್ಲದೆ ಹೊಯ್ಸಳರಾಜರಿಗೆ ಎಡಗಯ್ಯ ಸೇನಾ ನಾಯಕನಾಗಿದ್ದನು. ಶಾಸನದಲ್ಲಿ ಕಾಚಿದೇವನ ವಂಶವನ್ನು ಚತುರ್ಥವಂಶ ಎಂದು ಸೂಚಿಸಿ ದೀರ್ಘವಾದ ವಂಶಾವಳಿಯನ್ನು ಕೊಟ್ಟಿದೆ. ಈತ ಬೆಳ್ಳೂರಿನಲ್ಲಿ ಸಿಂಘೇಶ್ವರ, ಲಕ್ಷ್ಮೀನಾರಾಯಣ ಮತ್ತು ಗೋಪಾಲದೇವಾಲಯಗಳನ್ನು ನಿರ್ಮಿಸಿ ಎಲ್ಲ ದೇವರಿಗೂ ದತ್ತಿ ಬಿಟ್ಟಿದ್ದನೆಂದು ತಿಳಿದುಬರುತ್ತದೆ. ಇದರಿಂದ ಈತ ಶೈವ ಹಾಗೂ ವೈಷ್ಣವ ಧರ್ಮಗಳಿಗೆ ಸಮಾನ ಪ್ರಾಧಾನ್ಯ ನೀಡಿದ್ದನೆಂಬುದು ಸ್ಪಷ್ಟ. ಕಾಚಿದೇವನು ಪ್ರಬಲ ನಾದ ರಾಜನಾಗಿದ್ದಂತೆ ತೋರುತ್ತದೆ.

ಕ್ರಿ. ಶ. 1199ರ ನಾಮಂ. 80ನೆಯ ಶಾಸನದಲ್ಲಿ ಕಾಚಿದೇವನನ್ನು 'ಮೊಜಿ ಸಾಧಿರಾಯ ಮೂಜುಲೋಕಜಗದಳಂ ಕುಜುವಂದಕುಲಕಮಲಮಾರ್ತಂಡ ಹಟ್ಟಿಗಾಳ ಗಕ್ಕೆ ಮಲೆವ ಸಾಮಂತರ ಗಂಡಂ ಪ್ರತಾಪಕಂಠೀರವ ಪರಬಳಜಳಧಿಬಡಬಾನಳಂ'' ಎಂದು ಪ್ರಶಂಸಿಸಿದೆ. ಕಾಚಿದೇವನ ಮಗ ರಣಿತಗೌಂಡ ಈತ ತಂದೆಯಂತೆ ಪರಾ ಕ್ರಮಿ, ಉದಾರಿ. ರಣಿತಗೌಂಡನು ಯುದ್ಧರಂಗದಲ್ಲಿ ಎದುರಾದ ವಿರೋಧಿಗಳನ್ನು ಕೊಂದು ಭೂಮಿಯಲ್ಲಿ ಶೋಭಿಸಿದನು. ರಣಿತಗೌಂಡನ ಪುತ್ರ ಸಿಂಗಾಡಿನಾಯಕ. ಸಿಂಗಾಡಿನಾಯಕನ ಮಗ ಹಿರಿಯಮಾಚಿದೇವ. ಈತನ ಮಗ ''ಹಟ್ಟಿಗಾಳೆಗದೊಳ್ ಗೆಲ್ದಾ'' ಸಿಂಘೆಯನಾಯಕ. ಮೇಲಿನ ಎರಡೂ ಶಾಸನಗಳ ಆಧಾರದಿಂದ ಕಾಚಿದೇವ ಮತ್ತು ಸಿಂಘೆಯನಾಯಕನ ವಂಶಾವಳಿಯನ್ನು ಸಮಗ್ರವಾಗಿ ರೂಪಿಸಬಹುದು.

ದೊಡ್ಡ ಜಟಕದಲ್ಲಿ ಸಿಕ್ಕಿದ ನಾಮಂ. 130 ಮತ್ತು 132ನೆಯ ಶಾಸನಗಳು ಮಹಾಸಾಮಂತ ದುಮ್ಮಯನಾಯಕನ ಬಗೆಗೆ ಬೆಳಕುಚೆಲ್ಲುತ್ತವೆ. ದುಮ್ಮಯನಾಯಕ ಹೊಯ್ಸಳಬಲ್ಲಾಳ IIನ ಆಳ್ವಿಕೆಯಲ್ಲಿ ಕಲ್ಕುಣಿನಾಡಿಗೆ ಒಡೆಯನಾಗಿದ್ದನು. ಈತ ತನ್ನ ಅಧಿಕಾರಕ್ಕೆ ಒಳಪಟ್ಟ ಚೆಟ್ಟಿಗ (ಈಗಿನ ದೊಡ್ಡಜಟಕ)ದಲ್ಲಿ ತಂದೆಯ ಹೆಸರಿನಲ್ಲಿ ಹೆಮ್ಮೇಶ್ವರದೇವಾಲಯವನ್ನು ಕಳಸ ಸಹಿತ ಕಟ್ಟಿಸಿ ದೇವರಪೂಜೆ ನೈವೇದ್ಯಗಳಿಗೆಂದು ದೇವಾಲಯದ ಅರ್ಚಕ ಬಾಚಜೀಯನಿಗೆ ಕ್ರಿ. ಶ. 1179ರಲ್ಲಿ ದತ್ತಿಬಿಟ್ಟನು. ಇದೇ ಸಂದರ್ಭದಲ್ಲಿ ದೇವಾಲಯದ ನರ್ತಕಿಯರಿಗೂ ದತ್ತಿ ನೀಡಿದ ವಿಷಯ ನಾಮಂ.

130 ರಿಂದ ತಿಳಿದುಬರುತ್ತದೆ.

ಇದೇ ಕಾಲದ ನಾಮಂ. 132 ನೆಯ ಶಾಸನ ದುಮ್ಮಯನಾಯಕ ಕೊಡವಲಿ ಸೆಟ್ಟಿಗೆ ವತ್ತಿಬಿಟ್ಟಿದ್ದನ್ನು ಹೇಳಹೊರಟರೂ ದುಮ್ಮಯನಾಯಕನ ವಂಶಾವಳಿ ನಿರೂಪಿಸಿರುವುದರಿಂದ ಪ್ರಾಮುಖ್ಯತೆ ಪಡೆಯುತ್ತದೆ. ಅದರಂತೆ ಈ ವಂಶದ ಮೂಲಪುರುಷ ಮಾರಸಿಂಗಗಾವುಂಡ. ಈತ ತಲಕಾಡುನಾಡನ್ನು ಆಳುತ್ತಿದ್ದನು. ರಾಜಾಧಿರಾಜ ಎಂಬುದು ಈತನ ಪ್ರಶಸ್ತಿ. ದುಮ್ಮಯನಾಯಕನ ಪೂರ್ವಿಕರು ಆರಂಭದಲ್ಲಿ ತಲಕಾಡಿಗೆ ಅಧಿಪತಿಗಳಾಗಿದ್ದಿರಬಹುದು. ಏಕೆಂದರೆ ಮಾರಸಿಂಗ ಗಾವುಂಡನ ಉತ್ತರಾಧಿಕಾರಿಯಾಗಿ ಬಂದ ಆತನ ಪುತ್ರ ಪುರುಷಮಾಣಿಕ್ಯಸೆಟ್ಟಿ 'ತಳಕಾಡು ಪಟ್ಟಣ ಸಮುದ್ಧರಣ' ಎನಿಸಿಕೊಂಡಿದ್ದನು. ಈತನ ಕಾಲಕ್ಕೆ ದುಮ್ಮಯ ನಾಯಕನ ವಂಶಜರಿಗೆ ಗಾವುಂಡಪದವಿ ಹೋಗಿ ಸೆಟ್ಟಿಪಟ್ಟ ದೊರೆತಿರಬಹುದು. ಪುರುಷಮಾಣಿಕ್ಯಸೆಟ್ಟಿಯ ಬಳಿಕ ಬಂದ ಈತನ ಪುತ್ರ ಹುಳ್ಳಿಯ ನಾಯಕ ನೆನಿಸಿಕೊಂಡು ಮಹಾಸಾಮಂತ ಗದ್ದುಗೆಗೆ ಏರಿದನು. ಈತನಿಗೆ 'ಉದ್ಯೋಗ ಮಲ್ಲ' ಎಂಬ ಬಿರುದಿತ್ತು. ಹುಳ್ಳಿಯ ನಾಯಕನ ಮಗ ಹೆಮ್ಮಯ ನಾಯಕ ಕೂಡ ಒಬ್ಬ ಮಹಾಸಾಮಂತ. 'ಜಿನಸಮಯ ಸಮುದ್ಧರಣ 'ಪಾರಿಷದೇವ ಪಾದಾರಾಧಕ' 'ಒಡಗೆರೆಮಲ್ಲ' ಎಂಬಿವು ಈತನ ಪ್ರಶಸ್ತಿಗಳು. ಹೆಮ್ಮಯ ನಾಯಕ ಮತ್ತು ತಿರುವಪ್ವ ದಂಪತಿಗಳ ಪುತ್ರ ಪ್ರಸ್ತುತ ಶಾಸನದ ದುಮ್ಮಯ ನಾಯಕ. ಈತನನ್ನು 'ಕನ್ನಗೆಜಿಮಲ್ಲ' 'ಶಾಸ್ತ್ರದಾನಕೋವಿದ' ಎಂದು ಸ್ತುತಿಸಲಾಗಿದೆ. ದುಮ್ಮಯ ನಾಯಕನ ತಂದೆ ಜಿನಸಮಯಸಮುದ್ಧರಣನೆನಿಸಿಕೊಂಡಿದ್ದರಿಂದ ಜೈನಧರ್ಮದ ಅನುಯಾಯಿ ಯಾಗಿದ್ದನೆಂಬುದು ಖಚಿತವಾಗುತ್ತದೆ. ಆದರೆ ಮಗ ಶೈವಧರ್ಮವನ್ನು ಸ್ವೀಕರಿಸಿದಂತೆ ತೋರುತ್ತದೆ. ಏಕೆಂದರೆ ದುಮ್ಮಯ ನಾಯಕ ತಂದೆಯ ಹೆಸರಿನಲ್ಲಿ ಕಟ್ಟಿಸುವುದು ಶಿವದೇವಾಲಯವನ್ನು. ಈತನ ಪೂರ್ವಿಕರು ಮೊದಲು ತಲಕಾಡಿನ ಒಡೆಯರಾಗಿದ್ದು ಪ್ರಾಯಃ ಹೆಮ್ಮಯ ನಾಯಕನ ಕಾಲದಲ್ಲಿ ಕಲ್ಕುಣಿನಾಡು ಒಡೆತನ ಲಭ್ಯವಾಗಿರಬಹುದು. ಇಲ್ಲವೆ ತಲಕಾಡು ಕಲ್ಕುಣಿನಾಡಿನ ಎಲ್ಲೆಗೆ ಸೇರಿರುವ ಸಾಧ್ಯತೆಯಿದೆ. ಈ ಶಾಸನದಲ್ಲಿ ಗೌಡ, ಸೆಟ್ಟಿ, ನಾಯಕ ಎಂಬಿವು ಜಾತಿಸೂಚಕವಾಗಿ ಪ್ರಯೋಗವಾಗದೆ ವೃತ್ತಿ ಅಥವಾ ಅಧಿಕಾರದ ಸ್ಥಾನಮಾನವನ್ನು ಸೂಚಿಸುವ ಶಬ್ದಗಳಾಗಿ ಬಂದಿರುವುದು ವಿಶೇಷ ಸಂಗತಿಯಾಗಿದೆ. ಹೀಗೆ ಕಲ್ಕುಣಿನಾಡಿನ ಶಾಸನಗಳು ಇಲ್ಲಿನ ಸ್ಥಾನಿಕಪ್ರಭುಗಳ ಶೌರ್ಯ, ಸಾಹಸ, ಧಾರ್ಮಿಕ ಪ್ರೀತಿಯನ್ನು ಪ್ರತಿಬಿಂಬಿಸುತ್ತವೆ.

ಕಬ್ಬಾಹು : ಕಬಾಹು ಅಥವಾ ಕಬ್ಬಾಹು ಎಂಬ ನಾಡಿನ ಉಲ್ಲೇಖ ಹೊಯ್ಸಳರ ಕಾಲದ ಶಾಸನಗಳಲ್ಲಿ ದೊರೆಯುತ್ತದೆ. ಕಬ್ಬಾಹುನಾಡಿಗೆ ಸಂಬಂಧಪಟ್ಟ ಶಾಸನಗಳು ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಕಂಡುಬರುತ್ತವೆ. ಅವರಲ್ಲಿಯೂ ಅಗ್ರಹಾರ ಬಾಚಹಳ್ಳಿಯ ಸಮೀಪ. ಪ್ರಾಯಃ ಕಬ್ಬಾಹುನಾಡು ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ

ಇದ್ದಿರಬಹುದು. ಅಗ್ರಹಾರ ಬಾಚಹಳ್ಳಿಯಲ್ಲಿ ದೊರೆತ ಕೃಪೇ. 77, 78, 79, 82, 84 ನೆಯ ಶಾಸನಗಳಿಂದ ಮುಗಿಲಕುಲಕ್ಕೆ ಸೇರಿದ ಹಲವು ವ್ಯಕ್ತಿಗಳು ತಲೆತಲಾಂತರವಾಗಿ ಕಬ್ಬಾಹುನಾಡನ್ನು ಆಳಿದ ಸಂಗತಿ ಗೋಚರಿಸುತ್ತದೆ. ಈ ಕುಲದ ಎಲ್ಲ ಸಾಮಂತರು ಹೊಯ್ಸಳರಿಗೆ ಗರುಡರಾಗಿ ಮರಣವನ್ನಪ್ಪಿದ್ದು ಉಲ್ಲೇಖಾರ್ಹ.

ಮುಗಿಲಕುಲದ ಸಾಮಂತರ ವಂಶಾವಳಿಯಲ್ಲಿ ಬರುವ ಮೊದಲ ಹೆಸರು ಗಂಡನಾರಾಯಣಸೆಟ್ಟಿ. ಈತ ಬಾಚಹಳ್ಳಿಯನ್ನು ಕೇಂದ್ರವಾಗಿಟ್ಟುಕೊಂಡು ಕಬಾಹುನಾಡನ್ನು ಆಳುತ್ತಿದ್ದ. ಕ್ರಿ.ಶ. 1256 ರ ಕೃಪೇ. 82ನೆಯ ಶಾಸನದಲ್ಲಿ ಗಂಡನಾರಾಯಣಸೆಟ್ಟಿಯನ್ನು "ಹಟ್ಟಿಗಾಳೆಗಕ್ಕೆ ಮಲೆವ ನಾಯಕರ ಗಂಡ ಕಟ್ಟಿಬಿಡುವ ನಾಯಕರ ಗಂಡ" ಎಂದು ಪ್ರಶಂಸಿಸಲಾಗಿದೆ. ಈತ ತನ್ನ ಪತ್ನಿ ಮಾರವ್ವೆನಾಯಕಿತಿಯೊಂದಿಗೆ ಹೊಯ್ಸಳ ಎರೆಯಂಗನಿಗೆ ಗರುಡನಾದನು. ಗಂಡನಾರಾಯಣಸೆಟ್ಟಿಯ ಮೂವರು ಮಕ್ಕಳಲ್ಲಿ ಮೊದಲನೆಯವನಾದ ಹೊಯ್ಸಳಸೆಟ್ಟಿ ಬಾಬಚಾಮುಂಡರಾಯನ ಶಿಷ್ಯನಾಗಿದ್ದ ಸಂಗತಿ ಕ್ರಿ.ಶ. 1179ರ ಕೃಪೇ. 77 ರಿಂದ ತಿಳಿದುಬರುತ್ತದೆ. ಈತ ಹೆಂಡತಿ ಮಾಚವ್ವೆಯೊಡನೆ ಬಿಟ್ಟಿದೇವನಿಗೆ ಗರುಡನಾಗಿ ಪ್ರಾಣಾರ್ಪಣೆ ಮಾಡಿದ. ಹೊಯ್ಸಳ ಶೆಟ್ಟಿಗೆ ಇಬ್ಬರು ಗಂಡುಮಕ್ಕಳು. ಇವರಲ್ಲಿ ಹಿರಿಯವನಾದ ಬಬ್ಬೆಯ ನಾಯಕನು ಹೊಯ್ಸಳ ಬಲ್ಲಾಳದೇವನಿಗೆ ಸಾಮಂತನಾಗಿದ್ದನು. ಬಲ್ಲಾಳನು ಬಬ್ಬೆಯ ನಾಯಕನನ್ನು ಕರೆದು "ಸಂಕಮದೇವನ ಕಟಕದಲಿ ಕಾದುವುದೆಂದು" ಹೇಳಿ ವೀಳೆಯವಿತ್ತನು. ಕಲಚುರಿರಾಜ ಸಂಕಮದೇವನ ವಿರುದ್ಧ ನಡೆದ ಯುದ್ಧದಲ್ಲಿ ಹೋರಾಡುತ್ತಾ ಬಬ್ಬೆಯನಾಯಕ ವೀರಮರಣವನ್ನಪ್ಪಿದನು. ಈ ಯುದ್ಧದಲ್ಲಿ ಬಲ್ಲಾಳನು ಪರಾಭವಗೊಂಡನು. ಬಬ್ಬೆಯನಾಯಕನ ಸ್ಮರಣಾರ್ಥವಾಗಿ ಹಾಕಿಸಿದ ಕೃಪೇ. 77ನೇ ಶಾಸನದಲ್ಲಿ ಆತನನ್ನು ಸೌಜನ್ಯರತ್ನಾಕರ, ವೀರಲಕ್ಷ್ಮೀ ವಿಜಯಲಕ್ಷ್ಮೀ ಲುಬ್ಧ ವರಪ್ರಸಾದ, ಅರಿಬಿರುದಸಾಮಂತಮದೇಭಕಂಠೀರವ, ದಾಯಿಗಸಾಮಂತಸರಸ ಭೇರುಂಡ, ತತವಿತತ ಘನಸುಸರ ವಾದ್ಯಪ್ರವೀಣ ಎಂದು ವರ್ಣಿಸಿದೆ ಇದರಿಂದ ಈತ ಕಲಿಯೂ ಕಲಾಭಿರುಚಿಯುಳ್ಳವನೂ ಆಗಿದ್ದನೆಂದು ಭಾವಿಸಬಹುದು.

ಬಬ್ಬೆಯನಾಯಕನಿಗೆ ಮಹದೇವನಾಯಕನೆಂಬ ಮಗ. ಈತ ಕೃಪೇ. 77 ರಲ್ಲಿ ಉಲ್ಲೇಖಿತನಾಗಿದ್ದಾನೆ. ಮಹದೇವ ನಾಯಕನು ಕೆಲ ಕಾಲ ಸಾಮಂತನಾಗಿದ್ದು ದಾಳಿಯೊಂದರಲ್ಲಿ ಸಿಕ್ಕಿ ಹತನಾದ ಈತನ ಬಳಿಕ ಕಬಾಹುನಾಡಿನ ಅಧಿಪತ್ಯ ಕೆಲವುಕಾಲ ಗೋಪಿನಾಯಕನ ವಶದಲ್ಲಿತ್ತೆಂಬುದು ಕ್ರಿ ಶ 1196ರ ಕೃಪೇ 79ನೆಯ ಶಾಸನದಿಂದ ತಿಳಿದುಬರುತ್ತದೆ. ಈ ಗೋಪಿನಾಯಕ ಬಬ್ಬೆಯನಾಯಕನ ವಂಶಕ್ಕೆ ಸೇರಿದವನೆ ಅಥವಾ ಹೊರಗಿನವನೆ ಎಂಬುದು ಸ್ಪಷ್ಟವಾಗುವುದಿಲ್ಲ.

ಬಬ್ಬೆಯನಾಯಕನ ಸೋದರ ಕೂರೆಯನಾಯಕನು ಹೊಯ್ಸಳ ಒಂದನೆಯ

ನರಸಿಂಹನಿಗೆ ಗರುಡನಾದ. ಈತನೊಂದಿಗೆ ಪತ್ನಿಯರಾದ ಮಾರವ್ವೆ, ಚಿಕ್ಕಮಾದವ್ವೆ ಮತ್ತು ಏಳುಮಂದಿ ಲೆಂಕರೂ ಪ್ರಾಣತ್ಯಜಿಸಿದರು.

ಕೂರೆಯನಾಯಕನ ಮಗ ಬಲ್ಲಿಯನಾಯಕನು ಕಬ್ಬಾಹುನಾಡನ್ನು ಆಳುತ್ತಿದ್ದ ಸಂಗತಿ ಕ್ರಿ. ಶ. 1146ರ ಅವಧಿಯ ಕೃಪೆ. 78ನೆಯ ಶಾಸನದಲ್ಲಿ ವ್ಯಕ್ತವಾಗಿದೆ. ಈತ 'ಕನ್ನಡಿಗ ಪೊಸೆಯಾಳ್ವಸಿಂಗೆಯ್ಯಂಗೆ ಸೇನಾನಾಯಕ''ನಾಗಿದ್ದನು. ಬಹುಶಃ ವಿರೋಧಿಗಳು ಕಬ್ಬಾಹುನಾಡನ್ನು ಮುತ್ತಿದಾಗ ಸ್ತ್ರೀಯರು ಮತ್ತು ತುರುಗಳನ್ನು ರಕ್ಷಿಸಲು ಬಲ್ಲಿಯನಾಯಕನು ಹೋರಾಡಿದನು. ಈ ಹೋರಾಟದಲ್ಲಿ ಈತನ ಸೇವಕ ಕೇತನ ಎಂಬುವನು ಮಡಿದನು. ಕೂರೆಯ ನಾಯಕನ ಕಿರಿಯ ಮಗ ಸಿವನೆಯ ನಾಯಕ ತನ್ನ ಪೂರ್ವಿಕರ ಹಾದಿಯನ್ನೇ ತುಳಿದು ಹೊಯ್ಸಳ ಎರಡನೆಯ ಬಲ್ಲಾಳನಿಗೆ ಗರುಡನಾದ. ಈತನ ಪುತ್ರ, ಲಕ್ಕೆಯನಾಯಕನು ಪತ್ನಿ ಗಂಗಾದೇವಿಯೊಂದಿಗೆ ಗರುಡನಾಗಿ ಇಮ್ಮಡಿ ನಾರಸಿಂಗದೇವನಿಗೆ ಭಾಷೆಯನ್ನು ಪೂರೈಸಿದನು. ಈ ಲಕ್ಕೆಯನಾಯಕ ಮತ್ತು ಗಂಗಾದೇವಿ ದಂಪತಿಗಳ ಮಗನೆ ಕೃಪೆ. 82 ನೆಯ ಶಾಸನೋಕ್ತನಾದ ಕನ್ನೆಯನಾಯಕ. ಕ್ರಿ.ಶ. 1256ರಲ್ಲಿ ಹೊಯ್ಸಳ ಸೋಮೇಶ್ವರನು ಸತ್ತಾಗ ಕನ್ನೆಯನಾಯಕನು ತನ್ನ ಪತ್ನಿಯರಾದ ಉಮ್ಮವ್ವೆ, ಜಕವ್ವೆ, ಕಲ್ಲವ್ವೆ ಹಾಗೂ ಹತ್ತು ಲೆಂಕಿತಿಯರು ಹತ್ತು ಲೆಂಕರೊಂದಿಗೆ ಗರುಡನಾಗಿ ತನ್ನ ಪ್ರಾಣವನ್ನು ತ್ಯಜಿಸಿ ಭಾಷೆಯನ್ನು ಪೂರಯಿಸಿದ ಹೃದಯಸ್ಪರ್ಶಿ ಘಟನೆ ಕೃಪೆ. 82ರಲ್ಲಿ ಪ್ರಸ್ತಾಪವಾಗಿದೆ. ಈತನ ಮಗ ರಂಗೆಯನಾಯಕ ಕೂಡ ತಂದೆಯಂತೆ ಕೇತವ್ವೆ ನಾಯಿಕಿತಿ, ಹೊನ್ನವ್ವೆ ನಾಯಕಿತಿ ಮಂಚವ್ವೆ ನಾಯಿಕಿತಿ ಎಂಬ ಮೂವರು ಪತ್ನಿಯರು, ಹತ್ತು ಲೆಂಕಿತಿಯರು, ಹತ್ತು ಲೆಂಕರೊಂದಿಗೆ ಹೊಯ್ಸಳ ಮೂರನೆಯ ನಾರಸಿಂಹನಿಗೆ ಗರುಡನಾಗಿ ಕ್ರಿ.ಶ. 1291ರಲ್ಲಿ ಪ್ರಾಣಾರ್ಪಣೆ ಮಾಡಿದನು.

ಶಾಸನದಲ್ಲಿ ಕನ್ನೆಯ ನಾಯಕನ ವಂಶವನ್ನು 'ಸೇವಣ ಸೈನ್ಯ ವಿಭಾಡರು' ಎಂದು ವರ್ಣಿಸಲಾಗಿದೆ. ಹೊಯ್ಸಳರು ಮತ್ತು ಸೇವುಣರ ಮಧ್ಯೆ ನಡೆದ ಯುದ್ಧದಲ್ಲಿ ಇವರು ಮುಂಚೂಣಿಯಲ್ಲಿದ್ದುಕೊಂಡು ಶತ್ರುಗಳನ್ನು ನಾಶಗೊಳಿಸಿರಬಹುದೆಂದು ಊಹಿಸಬಹುದು. ಹೀಗೆ ಕಬ್ಬಾಹು ನಾಡಿನ ಈ ಸಾಮಂತರು ಹೊಯ್ಸಳ ರಾಜರಿಗೆ ಗರುಡರಾಗಿ ಪ್ರಾಣಾರ್ಪಣೆ ಮಾಡಿದುದಕ್ಕೆ ಇವರನ್ನು ಲೆಂಕಾವಳಿನಾಯಕರೆಂದೂ ಹೊಯ್ಸಳ ಲೆಂಕಶ್ರೇಂಕರೆಂದೂ ವಿವರಿಸಿರುವುದು ಸೂಕ್ತವಾಗಿದೆ. ಮೇಲಿನ ಶಾಸನಗಳ ಆಧಾರದಿಂದ ಕಬ್ಬಾಹುನಾಡಿನ ಸಾಮಂತರ ವಂಶಾವಳಿಯನ್ನು ಹೀಗೆ ತೋರಿಸಬಹುದು.

ಗಂಡನಾರಾಯಣಸೆಟ್ಟಿ–ಮಾರವ್ವೆ

- ಹೊಯ್ಸಳಸೆಟ್ಟಿ–ಮಾರವ್ವೆ
  - ಬಬ್ಬೆಯನಾಯಕ
    - ಮಹದೇವನಾಯಕ
  - ಕೂರೆಯನಾಯಕ–ಮಾರವ್ವೆ, ಚಿಕ್ಕಮಾದವ್ವೆ
    - ಬಲ್ಲೆಯ
    - ಸಿವಸೆನಾಯಕ
      - ಲಖಿಯನಾಯಕ–ಗಂಗಾದೇವಿ
        - ಕನ್ನೆಯನಾಯಕ–ಉಮ್ಮವ್ವೆ, ಜವನವ್ವೆ, ಕಲ್ಲವ್ವೆ
          - ರಂಗೆಯನಾಯಕ–ಕೇತವ್ವೆ, ಹೊನ್ನವ್ವೆ, ಮಂಚವ್ವೆ
- ಬೋಕಣ
- ಬಮ್ಮ...

ಅರಕೆರೆ : ಸುಮಾರು ಹನ್ನೊಂದನೆಯ ಶತಮಾನದಲ್ಲಿಯೆ ಅರಕೆರೆ ಒಂದು ಪ್ರತ್ಯೇಕ ನಾಡಾಗಿ ಮನ್ನಣೆಪಡೆದಿತ್ತು. ಕಬಾಳಗಾವುಂಡ ಎಂಬುವನ ಮಗ ಬೀರ ಗಾವುಂಡನು ಕ್ರಿ.ಶ. 1108ರಲ್ಲಿ ಈ ನಾಡನ್ನು ಪಾಲಿಸುತ್ತಿದ್ದ ಸಂಗತಿ ಶ್ರೀಪ. 113 ನೆಯ ಶಾಸನದಿಂದ ತಿಳಿದು ಬರುತ್ತದೆ. ಈತನ ಆಳ್ವಿಕೆಯ ಅವಧಿಯಲ್ಲಿ ದಮ್ಮಿಸೆಟ್ಟಿಯ ಮಗ ಉದಯಾದಿತ್ಯ ಪಲ್ಲವರಾಯನು ಅರಕೆರೆಯಲ್ಲಿ ಒಂದು ಕೆರೆಯನ್ನು ಕಟ್ಟಿಸಿದನು. ಇಂಥ ಜನಪರ ಕಾರ್ಯಕ್ಕಾಗಿ ಬೀರಗಾವುಂಡ ಮೆಚ್ಚುಗೆ ವ್ಯಕ್ತಪಡಿಸಿದನು. ಶಾಸನದಲ್ಲಿ ಬೀರಗಾವುಂಡನನ್ನು "ಹೊಳಲಯನಾಡ ತೊಲಗದ ಗಂಡ" ಎಂದು ವರ್ಣಿಸಿದೆ.

ಮಾಳಿಗೆಯೂರು : ಕೃಷ್ಣರಾಜಪೇಟೆ ತಾಲ್ಲೂಕಿನ ಮಾಳಿಗೆಯೂರು ಹೊಯ್ಸಳರ ಕಾಲದಲ್ಲಿ ತುರುನಾಡಿನ ಭಾಗಕ್ಕೆ ಒಳಪಟ್ಟಿತ್ತು. ಕ್ರಿ.ಶ 1117 ರಲ್ಲಿ ಮಾಳಿಗೆಯೂರನ್ನು ಬಲ್ಲೆಯನಾಯಕನು ಆಳುತ್ತಿದ್ದನು ಈತ ವಿಷ್ಣುವರ್ಧನನ ಪಟ್ಟ ದರಸಿ ಶಾಂತಲಾದೇವಿಯ ಮಯ್ದುನನೆಂದು ತಿಳಿದುಬರುತ್ತದೆ. ಬಲ್ಲೆಯನಾಯಕನು ಗಾವುಂಡ ಮತ್ತು ಐವತ್ತೊಕ್ಕಲುಗಳೊಡನೆ ಕೂಡಿ ಮಾಳಿಗೆಯೂರಿನ ಕರ್ಮಟೇಶ್ವರ ದೇವರಿಗೆ ದತ್ತಿಬಿಟ್ಟ ಸಂಗತಿ ಕೃಪೇ. 66ನೆಯ ಶಾಸನದಲ್ಲಿ ದಾಖಲಾಗಿದೆ.

ಕ್ರಿ. ಶ 1140 ರ ವೇಳೆಗಾಗಲೆ ಬಲ್ಲೆಯನಾಯಕನ ಆಳ್ವಿಕೆ ಕೊನೆಗೊಂಡು ಮಹಾಸಾಮಂತ ಬಾಚಿಯನಾಯಕನು ಮಾಳಿಗೆಯೂರಿನ ಅಧಿಪತಿಯಾಗಿದ್ದುದಕ್ಕೆ

ಕೃಪೇ 62ನೆಯ ಶಾಸನ ನಿದರ್ಶನವಾಗಿದೆ. ಮಾಚೆಯನಾಯಕನು ಬಲ್ಲೆಯನಾಯಕನ ವಂಶಕ್ಕೆ ಸೇರಿದವನೆ ಎಂಬುದು ಸ್ಪಷ್ಟವಿಲ್ಲ. ಶಾಸನದ ಕೆಲವು ಭಾಗ ಹಾಳಾಗಿರುವುದರಿಂದ ಮಾಚೆಯನಾಯಕನ ವಂಶಾವಳಿ ನಷ್ಟವಾಗಿದೆ. ಈತ ಮಾಳಿಗೆಯೂರಿನಲ್ಲಿ ಒಂದು ಕೆರೆಯನ್ನೂ ಮಾಕೇಶ್ವರ ದೇವಾಲಯವನ್ನೂ ನಿರ್ಮಿಸಿ ದತ್ತಿಬಿಟ್ಟನು. ಈತನನ್ನು 'ವೈರಿಮದಗಜಭೀಮ' ಎಂದು ಶಾಸನದಲ್ಲಿ ಪ್ರಶಂಸಿಸಿದೆ.

ದಡಿಗನಕೆರೆ ಮಣಲವಾಡಿ: ತಿಬ್ಬನಹಳ್ಳಿಯಲ್ಲಿ ದೊರೆತ ಎರಡು ಶಾಸನಗಳಿಂದ (ನಾಮಂ 161,162) ದಡಿಗನಕೆರೆ ಮಣಲವಾಡಿ ಹಾಗೂ ತಿಬ್ಬನಹಳ್ಳಿಗಳು ಸೇರಿಕೊಂಡಂತೆ ಒಂದು ಪ್ರಾಂತ್ಯವಿದ್ದುದಕ್ಕೆ ಸ್ಪಷ್ಟ ಸೂಚನೆಗಳು ದೊರೆಯುತ್ತವೆ. ಹೊಯ್ಸಳ ವೀರಬಲ್ಲಾಳನು ದೋರಸಮುದ್ರದಿಂದ ರಾಜ್ಯವಾಳುತ್ತಿದ್ದಾಗ ಆತನಿಗೆ ಬೆಂಬಲವಾಗಿ ದಡಿಗನಕೆರೆ ಮಣಲವಾಡಿಗಳನ್ನು ಹರಹಗೌಡನು ಪಾಲಿಸುತ್ತಿದ್ದನು. ಈತನನ್ನು 'ದಡಿಗನಕೆಱೆಯ ಮಣಲವಾಡಿಯ ಭೂಪ ಕುಟಿಕಿಮಾಳೆಯರ ಕುಲತಿಲಕ' ಎಂದು ಶಾಸನದಲ್ಲಿ ಬಣ್ಣಿಸಲಾಗಿದೆ. ಈತನ ಅವಧಿಯಲ್ಲಿ ಒಮ್ಮೆ ಬಿಮತೂರ ನಾರಸಿಂಗನು ಸೈನ್ಯವನ್ನು ತೆಗೆದುಕೊಂಡು ಬಂದು ಹೆಬ್ಬಿದಿರಮಡೆಯ ತಿಬ್ಬನಹಳ್ಳಿಯನ್ನು ಮುತ್ತಿದನು. ಅಲ್ಲಿನ ತುರುಗಳನ್ನು ಸೆರೆಹಿಡಿದನು. ಆಗ ಹರಹಗೌಡನು ತನ್ನ ಸೋದರ ಗಹರಗೌಡ ಮತ್ತು ಸೋದರನ ಮಗ ಗೌಡೆಯನೊಂದಿಗೆ ಬಂದು ನಾರಸಿಂಗನನ್ನು ಎದುರಿಸಿ ಹಲವರನ್ನು ಕೊಂದನು. ಈ ದಾಳಿಯಲ್ಲಿ ಗೌಡೆಯನು ಮೃತನಾದನು.

ತಿಬ್ಬನಹಳ್ಳಿಗೆ ಸಂಬಂಧಿಸಿದ ಮತ್ತೊಂದು ತುರುಗೋಳಿನಲ್ಲಿ ಬಿಸಗೂರಿನ ಜನರು ತಿಬ್ಬನಹಳ್ಳಿಯ ತುರುಗಳನ್ನು ಹಿಡಿದರು. ಈ ಗಲಭೆಯಲ್ಲಿ ಹರಹಗೌಡನ ಮಗ ಸಂಕರಗೌಡ ; ಮೊಮ್ಮಗ ರಾಮೆಯ ವೀರಮರಣವನ್ನಪ್ಪಿದರು. ಮೇಲಿನ ಎರಡು ಶಾಸನಗಳಿಂದ ಹರಹಗೌಡನ ವಂಶಾವಳಿಯನ್ನು ಹೀಗೆ ರೇಖಿಸಬಹುದು

ಹರಹಗೌಡ — ಗಹರಗೌಡ

ಹರಹಗೌಡ
|
ಸಂಕರಗೌಡ
|
ರಾಮೆಯ

ಗಹರಗೌಡ
|
ಗೌಡೆಯ

ಬಡಗರೆ : ಮಂಡ್ಯಜಿಲ್ಲೆಯ ಹೊತ್ತಹಳ್ಳಿ, ಕೊತ್ತತ್ತಿ, ವಸುಗೂರು ಮೊದಲಾದ ಊರುಗಳು ಸೇರಿದಂತೆ ಬಡಗರೆ ಅಥವಾ ಬಡಗುಂದು ಎಂಬ ನಾಡು ಹೆಸರುವಾಸಿಯಾಗಿತ್ತು. ಹೊತ್ತಹಳ್ಳಿಯಲ್ಲಿ ದೊರೆತ ಕ್ರಿ.ಶ. 1191ರ ಮಂ. 78ನೇ ಶಾಸನ

ವಲ್ಲಿ ಸೋಮಯಪ್ಪನಾಯಕ ಎಂಬ ಸಾಮಂತರಾಜನ ಉಲ್ಲೇಖವಿದೆ. ಈತ ಬಡಗುಂದ ನಾಡಿನ ಕೊತ್ತತ್ತಿಗೆ ಒಡೆಯನಾಗಿದ್ದುದಲ್ಲದೆ ಹೊಯ್ಸಳ ಅರಸನಾದ ವೀರಬಲ್ಲಾಳನಿಗೆ ಬಲಗಯ್ಯ ಸೇನಾಧಿಪತಿ' ಎನಿಸಿಕೊಂಡಿದ್ದನು. ಇದೇ ಅವಧಿಯ ನಂ. 10ನೆಯ ಶಾಸನದಲ್ಲಿ ಅಕ್ಕನಾದ ಸೋವಿ ಎಂಬ ಸಾಮಂತ ಕೂಡ ಹೊಯ್ಸಳ ಚಕ್ರವರ್ತಿಗಳಿಗೆ ಬಲಗಯ್ಯ ಸೇನಾಧಿಪತಿಯಾಗಿದ್ದನು. ಕೊತ್ತತ್ತಿಯಲ್ಲಿ ದೊರೆತ ನಂ. 83ನೆಯ ಶಾಸನದಲ್ಲಿ ಬಡಗರೆನಾಡನ್ನು ಆಳಿದ ರಾಜನ ಹೆಸರಿರುವ ಭಾಗ ನಾಶವಾಗಿದೆ. ಆದರೂ ಈತ ಕೆರೆ ಮತ್ತು ದೇವಾಲಯದ ನಿರ್ಮಾಣಕಾರ್ಯದಲ್ಲಿ ಭಾಗಿಯಾಗಿದ್ದ ಸಂಗತಿ ಗೋಚರಿಸುತ್ತದೆ.

ಹೊಯ್ಸಳ ಸಣ್ಣನಾಡು ; ಕಂಬದ ಹಳ್ಳಿಯ ನಾಮಂ. 29 ನೆಯ ಶಾಸನದಲ್ಲಿ 'ಹೊಯ್ಸಳ ಸಣ್ಣನಾಡು' ಎಂಬ ಉಲ್ಲೇಖವಿದೆ. ಹೊಯ್ಸಳ ಆಶ್ರಿತ ಸಾಮಂತರ ಮೇಲ್ವಿಚಾರಣೆಯಲ್ಲಿದ್ದ ಒಂದು ಪ್ರದೇಶಕ್ಕೆ ಈ ಹೆಸರು ಬಂದಿರಬಹುದು. ಈ ನಾಡು ಯಾವ ಯಾವ ಊರುಗಳನ್ನು ಒಳಗೊಂಡಿತ್ತೆಂಬುದು ತಿಳಿದುಬರುತ್ತಿಲ್ಲ. ಪ್ರಾಯಃ ಕಂಬದಹಳ್ಳಿ ಹೊಯ್ಸಳ ಸಣ್ಣನಾಡಿಗೆ ಸೇರಿರಬಹುದು. ಈ ನಾಡನ್ನು ಹೊಯ್ಸಳ ಬಲ್ಲಾಳ II ನ ಕಾಲದಲ್ಲಿ ಚಂಗಿಕುಲದ ಭರತಿಯ ನಾಯಕನು ಪಾಲಿಸುತ್ತಿದ್ದ ಸಂಗತಿ ಶಾಸನದಿಂದ ವ್ಯಕ್ತವಾಗುತ್ತದೆ. ಈತ ಶಾಂತಿನಾಥಜಿನನ ಪೂಜೆಗೆಂದು ಒಂದು ಖಂಡುಗ ನೀರಾವರಿ ಭೂಮಿಯನ್ನು ಕ್ರಿ.ಶ 1174ರಲ್ಲಿ ದಾನವಾಗಿತ್ತನು. ಇದರಿಂದ ಭರತಿಯ ನಾಯಕ ಜೈನಧರ್ಮೀಯನಾಗಿದ್ದನೆಂಬುದು ಖಚಿತ

ಹೊನ್ನೇನ ಹಳ್ಳಿ : ದೇಕೆಯನಾಯಕನೆಂಬ ಪ್ರಭು ಹೊನ್ನೇನಹಳ್ಳಿಯ ಪ್ರದೇಶವನ್ನು ಆಳಿದ್ದನೆಂಬ ಸಂಗತಿ ನಾಮಂ. 106ನೆಯ ಶಾಸನದಲ್ಲಿ ಉಕ್ತವಾಗಿದೆ. ಕ್ರಿ. ಶ. 402 ರಲ್ಲಿ ಹೊಯ್ಸಳ ಬಲ್ಲಾಳ II ನಿಗೆ ದೇಕೆಯನಾಯಕ ಸಾಮಂತನಾಗಿದ್ದನು. ಈತನ ತಂದೆ ಕುನ್ನಿಯ ಬೀರನಾಯಕ. ದೇಕೆಯನಾಯಕನ ಮೇಲಾಳಿಕೆಯಲ್ಲಿ ಹೊನ್ನೇನಹಳ್ಳಿಯಲ್ಲಿ ಗೋಗ್ರಹಣವಾಯಿತು. ಹಡವಲ ಹೊನ್ನಯ್ಯ ಮತ್ತು ದೇಗುಲಗೌಂಡಿಯ ಮಗ ಹೊನ್ನಗೌಡ ಈ ಗೋಗ್ರಹಣದಲ್ಲಿ ಹೋರಾಡುತ್ತ ಮಡಿದರು. ಈತನ ಸ್ಮಾರಕವಾಗಿ ಮೃತನ ಸಹೋದರರು ವೀರಗಲ್ಲನ್ನು ನಿಲ್ಲಿಸಿದರು.

ಚುಂಚನಕೋಟೆ : ನಾಗಮಂಗಲ ತಾಲ್ಲೂಕಿನ ಈಗಿನ ಚುಂಚನಹಳ್ಳಿ ಒಂದು ಕಾಲದಲ್ಲಿ ಚುಂಚನಕೋಟೆ ಎಂದು ಪ್ರಸಿದ್ಧವಾಗಿ ಸ್ಥಾನಿಕಪ್ರಭುಗಳ ಅಡಳಿತಕ್ಕೆ ಒಳಪಟ್ಟಿತ್ತು. ಅಂಥ ಒಬ್ಬ ಪ್ರಭು ಸಾಜಿಯಕ್ಕ. ಈತನಿಗೆ ಸಂಬಂಧಿಸಿದ ಕ್ರಿ.ಶ 1205 ರ ನಾಮಂ. 111ನೆಯ ಶಾಸನದಲ್ಲಿ ಹೊಯ್ಸಳ ವೀರಬಲ್ಲಾಳನ ಉಲ್ಲೇಖವಿರುವುದರಿಂದ ಈತ ಅವನ ಆಶ್ರಿತನಾಗಿದ್ದನೆಂದು ತಿಳಿಯಬಹುದು. ಚುಂಚನಕೋಟೆಯ ಸಾಜಿಯಕ್ಕ ಪ್ರಭುವಿನ ಮಗ ರಾಮಯನಾಯಕ್ಕ. ಈತನನ್ನು "ಸತ್ಯಕೆ ತಪ್ಪುವ ನಾಯ್ಕರ ಗಂಡ ವಾಜಿವೃಕ್ಕದ ಕಾಲ ಮಾರಾಥ ಗಂಡಗೂಳಿ ಕೊಟದೊಳು ಕೂಡುವ ನಾಯಕರ ಗಂಡ"

ಎಂದು ವರ್ಣಿಸಿರುವುದು ಈತನ ಪರಾಕ್ರಮದ ದ್ಯೋತಕವಾಗಿದೆ. ರಾಮಯ್ಯ ನಾಯ್ಕನಿಗೂ ಎಡವಾರದ ರಾಜೈನಾಯಕನಿಗೂ ಬೆಲವೂರ (ಬೇಲೂರು) ಸಮೀಪ ಕಾದಾಟವಾದಾಗ ರಾಮಯ್ಯನಾಯ್ಕನು ಮೃತನಾದನು. ಈತನ ಸ್ಮಾರಕವಾಗಿ ಓರಿಯ ಗೋಯಿನಾಯಕ ಮತ್ತು ಚಿಕ್ಕಮಾಯಿನಾಯಕರು ವೀರಗಲ್ಲೊಂದನ್ನು ನಿಲ್ಲಿಸಿದರು.

ಬಸರಾಳು : ಬಸರಾಳಿನಲ್ಲಿ ದೊರೆತ ಮಂ. 29 ಮತ್ತು 30 ನೆಯ ಶಾಸನಗಳಲ್ಲಿ ಇಲ್ಲಿನ ಸ್ಥಾನಿಕಪ್ರಭು ಹಾಗೂ ಹೊಯ್ಸಳ ರಾಜರಲ್ಲಿ ಪ್ರಧಾನನಾಗಿದ್ದ ತೆನೆಮಂಕ ಕುಟುಂಬದ ಹರಿಹರದಣ್ಣಾಯಕನ ಪ್ರಸ್ತಾಪವಿದೆ. ಈತ ತನ್ನ ಶೌರ್ಯ ಪರಾಕ್ರಮಗಳಿಂದ 'ಅಪ್ಪಾಯದ' ಎಂಬ ಬಿರುದು ಪಡೆದಿದ್ದನು. ಮಂ. 29ನೆಯ ಶಾಸನದಲ್ಲಿ ನಿರೂಪಿತವಾಗಿರುವ ಹರಿಹರದಣ್ಣಾಯಕನ ವಂಶಾವಳಿ ಹೀಗಿದೆ

ಚಿಕ್ಕ ಹಡೆವಳ್ಳ — ನಾಗಲೆ

|

ಮಲ್ಲೆಯ ನಾಯಕ — ಗುಜ್ಜಲೆ

ಸಿಂಗೆಯನಾಯಕ	ಮಾರೆಯನಾಯಕ	ಹರಿಹರದಣ್ಣಾಯಕ

ಈ ವಂಶದವರಿಗೆ ಸ್ಥಾನಿಕಪ್ರಭುತ್ವ ದೊರೆತದ್ದು ವಿಷ್ಣುವರ್ಧನನಿಂದ. ಈತ ಚಿಕ್ಕಹಡೆವಳ್ಳನನ್ನು ಕರೆದು "ತೆನೆಮಂಕಾನ್ವಯ ಮೇರು ಚಿಕ್ಕಹಡೆವಳ್ಳಂ ಪ್ರೀತಿಯಿಂ ವಿಷ್ಣುವರ್ಧನದೇವಂ ಕುಡೆ ರಾಜ್ಯಚಿಹ್ನಮೆನಿಸಲ್ ಸಾಲ್ವಿ ದುರ್ಗಮಂ ದಿವ್ಯವಾಹನಮುಂ ದಂಡಿಗೆಯುಂ ಪೊವಳ್ದಡಪಮುಂ ಬಿಚ್ಚಾತಪತ್ರಾನ್ವಿತಾಸನಮುಂ" ದಯಪಾಲಿಸಿದನು. ಹರಿಹರ ದಣ್ಣಾಯಕನ ಕಾಲಕ್ಕೆ ಈ ಕುಟುಂಬ ಮತ್ತಷ್ಟು ಉನ್ನತಿಗೇರಿತು. ಈತ ಹೊಯ್ಸಳ ದೊರೆಗಳಾದ ಎರಡನೆಯ ನರಸಿಂಹ ಮತ್ತು ಸೋಮೇಶ್ವರನಿಗೆ ಮಹಾಪ್ರಧಾನನಾಗಿದ್ದನು. ಮಂ. 30ನೆಯ ಶಾಸನದಲ್ಲಿ ಈತನನ್ನು "ಬಾಹತ್ತರ ನಿಯೋಗಾಧಿಪತಿ ನಿಯೋಗಯೋಗಂಧರ ಸಾಲಮನ್ನೆಯ ಬೇಟೆಕಾಜಿ ನಾಲ್ವತ್ತುನಾಯಕರ ಗಂಡ ಬಂಧುಜನ ಚಿಂತಾಮಣಿ ತೆನೆಮಂಕ ಕುಲಕಮಳಮಾರ್ತಂಡ" ಎಂದು ವರ್ಣಿಸಿದೆ. ಇದರಿಂದ ಹರಿಹರದಣ್ಣಾಯಕ ನಲ್ವತ್ತು ಸಾಮಂತ ರಾಜರಿಗೆ ಒಡೆಯನಾಗಿದ್ದನೆಂದು ಊಹಿಸಬಹುದು. ಈತ ತನ್ನ ಸೋದರರೊಂದಿಗೆ ಸೇರಿ ಬಸರಾಳಿನಲಿ ಮಲ್ಲಿಕಾರ್ಜುನ ದೇವಾಲಯವನ್ನು ತಂದೆಯ ಹೆಸರಿನಲಿ ನಿರ್ಮಿಸಿದನು. ಅಂತೆಯೇ ತಂದೆ ತಾಯಿಗಳಿಬ್ಬರ ಹೆಸರಿನಲ್ಲಿ ಕೆರೆಯನ್ನೂ ಕಟ್ಟಿಸಿ ದತ್ತಿಬಿಟ್ಟನು. ಮಲ್ಲಿಕಾರ್ಜುನ ದೇವರ ಅಂಗಭೋಗ ರಂಗಪೂಜೆ ಪರ್ವ ಜೀರ್ಣೋದ್ಧಾರಗಳಿಗೆಂದು ಬಸರಾಳಿಗೆ ಸೇರಿದ ಬೇಬಿ ಮತ್ತು ತರಣಿ ಎಂಬ ಊರುಗಳನ್ನು ಉಂಬಳಿ ನೀಡಿದ ಸಂಗತಿ ಕ್ರಿ. ಶ. 1237ರ

ಮಂ. 30ನೆಯ ಶಾಸನದಿಂದ ತಿಳಿದುಬರುತ್ತದೆ. ಹರಿಹರದಣ್ಣಾಯಕನು ಹೊಯ್ಸಳರ ವಿರೋಧಿಗಳಾಗಿದ್ದ ದೇವಗಿರಿಯ ಸೇವುಣರನ್ನು ಹಲವು ಬಾರಿ ಎದುರಿಸಿ ಪರಾಜಿತ ಗೊಳಿಸಿದನು.

ಜಾಕನಕೆರೆ : ಕ್ರಿ. ಶ. 1242 ರ ಕೃಪೇ. 69 ನೆಯ ಶಾಸನವಲ್ಲಿ ಜಾಕನ ಕೆರೆಯ ನಾಡಪ್ರಭುವಾಗಿದ್ದ ಕಲ್ಲಗಾವುಂಡನ ಇತಿವೃತ್ತಗಳು ದೊರೆಯುತ್ತವೆ. ಈತ ಹೊಯ್ಸಳ ವೀರಸೋಮೇಶ್ವರನಿಗೆ ಆಶ್ರಿತನಾಗಿದ್ದನು. ಶಾಸನದಲ್ಲಿ ದೊರೆಯುವ ಉಲ್ಲೇಖಗಳಿಂದ ಕಲ್ಲಗಾವುಂಡನ ವಂಶಾವಳಿಯನ್ನು ಹೀಗೆ ತೋರಿಸಬಹುದು

ದಮ್ಮಗವುಂಡ — ಬೊಮ್ಮಗವುಂಡಿ
|
ಬಿಟ್ಟಿಗಾವುಂಡ— ಬೀಚಗಾವುಂಡಿ
|
ಹರಿಯಗವುಂಡ—ಹಿರಿಯಂಗಾವುಂಡಿ. ಮಾಚಿಗಾವುಂಡಿ
|
ಮಾರದೇವ
|
ಕಲ್ಲಗಾವುಂಡ

ಈ ವಂಶದ ಮೂಲಪುರುಷ ದಮ್ಮಗವುಂಡನನ್ನು "ಮಱಿಪೊಕ್ಕರ ಕಾವ ತೊಡರ್ವರ ಗಾಳ ಬೆಳ್ಳಿಯರ ಕುಲತಿಲಕ" ಎಂದು ಪ್ರಶಂಸಿಸಲಾಗಿದೆ. ಇಂಥ ವಂಶಜನಾದ ಕಲ್ಲ ಗಾವುಂಡನ ಕೀರ್ತಿ ಕೂಡ ಕಡಮೆಯಲ್ಲ. ಈತನ ರಾಜ್ಯ ಕಿಕ್ಕೇರಿಯವರೆಗೆ ವಿಸ್ತರಿಸಿ ತ್ತೆಂಬುದಕ್ಕೆ "ಕಿಕ್ಕೇರಿಯ ವೀಡಿಗೆ ಮುಖತಿಳಕವೆನಿಪ ಜಾಗನಕೆಱೆಯ ಕಲ್ಲಗವುಡ" ಎಂಬ ಮಾತುಗಳು ನಿದರ್ಶನ. ಈತ ಶಿವಾರಾಧಕ. ತಮ್ಮ ಕುಟುಂಬದ ಮೂಲ ಪುರುಷ ದಮ್ಮಗವುಂಡನ ಹೆಸರಿನಲ್ಲಿ ಧರ್ಮೇಶ್ವರ ದೇವರ ಪ್ರತಿಷ್ಠೆಮಾಡಿ ಶಿವಾಲಯ ವನ್ನು ನಿರ್ಮಿಸಿ ದತ್ತಿಬಿಟ್ಟಿದ್ದನು. ಶೂರ, ಧೀರ, ಉದಾರಿ, ಗುಣಸಂಪನ್ನನಾಗಿದ್ದ ಕಲ್ಲಗಾವುಂಡನನ್ನು "ಚಲದಂಕಭೀಮನುಂ ನುಡಿದಂತೆ ಗಂಡನುಂ ಸತ್ಯರಾಧೇಯನುಂ ಮಱಿಪೊಕ್ಕರ ಕಾವನುಂ ಆಶ್ರಿತಕಲ್ಪವೃಕ್ಷ ಬಂಧುಜನಚಿಂತಾಮಣಿ ಅನ್ನದಾನವಿನೋದಿ ಸಕಳಜೀವದಯಾಪರಿ ಚತುಸ್ಸಮಯಸಮುದ್ಧರಣ ಕಲಿದೇವರ ಪಾದಾರಾಧಕ" ಎಂದು ಬಣ್ಣಿಸಿದೆ.

ಇದುವರೆವಿಗೂ ನಿರ್ದಿಷ್ಟ ಪ್ರಾಂತ ಮತ್ತು ಅದನ್ನು ಆಳಿದ ಸ್ಥಾನಿಕಪ್ರಭು ಗಳು ಹಾಗೂ ಸ್ಥಾನಿಕಪ್ರಭುಗಳ ಆಶ್ರಯದಾತರ ಉಲ್ಲೇಖವಿರುವ ಶಾಸನಗಳನ್ನು ಸಮೀಕ್ಷಿಸಲಾಗಿದೆ. ವಿಶೇಷವೆಂದರೆ ಐತಿಹಾಸಿಕವಾಗಿ ಗುರುತಿಸಲ್ಪಟ್ಟು ನಿರ್ದಿಷ್ಟ ಎಲ್ಲೆ ಕಟ್ಟನ್ನು ಹೊಂದಿರದ ಸ್ಥಾನಿಕಪ್ರಭುಗಳ ಉಲ್ಲೇಖಗಳು ಕೆಲವು ದೊರಕು

ತ್ತವೆ. ಇವಕ್ಕೆ ಯಾವುದೇ ಬಗೆಯ ಸಮಜಾಯಿಶಿಕೊಡಲು ಸಾಧ್ಯವಾಗುವುದಿಲ್ಲವಾದರೂ ಅವುಗಳ ಮಹತ್ವ ಮತ್ತು ಮೌಲ್ಯವನ್ನು ಕಡೆಗಣಿಸುವಂತಿಲ್ಲ. ಹೊಯ್ಸಳರ ಕಾಲದ ಪ್ರಾಂತ್ಯ ನಿರ್ದಿಷ್ಟವಾಗಿರದ ಸ್ಥಾನಿಕಪ್ರಭುಗಳನ್ನು ಹೊಯ್ಸಳರ ಕಾಲದ ಇತರೆ ಸಾಮಂತರು ಎಂಬ ಶೀರ್ಷಿಕೆಯ ಅಡಿಯಲ್ಲಿ ವಿಶ್ಲೇಷಿಸಬಹುದಾಗಿದೆ.

ಹೊಯ್ಸಳರ ಕಾಲದ ಇತರ ಸಾಮಂತರು : ಪಟ್ಟಣದಲ್ಲಿ ದೊರೆತ ಸೋಮಂ. 118ನೆಯ ಶಾಸನದಲ್ಲಿ ನರಸಿಂಗನಾಯಕ ಎಂಬ ಸಾಮಂತನನ್ನು ಕುರಿತ ವಿವರಗಳಿವೆ. ಈತ ಕ್ರಿ.ಶ. 1178 ರಲ್ಲಿ ಹೊಯ್ಸಳ ಬಲ್ಲಾಳ II ನಿಗೆ ಅಧೀನನಾಗಿದ್ದನು. ನರಸಿಂಗನಾಯಕನ ಶೌರ್ಯ ಸಾಹಸಗಳನ್ನು ಶಾಸನದಲ್ಲಿ ಸೊಗಸಾಗಿ ವರ್ಣಿಸಿದೆ —

ಮುಂತಿದಿರಾಂತನಂತರಿಪುಸೈನಿಕರಂ ಸಿಡಿಲಂತೆ ಸಿಂಗದಂ
ತಂತಕನಂತೆ ಸಂಗರದೊಳೋವದೆ ಜೀರಗೆಯೊಕ್ಕಲಿಕ್ಕಿ ಸಾ
ಮಂತಲಲಾಮನೀ ನೆಗಟ್ದ ತೆಂಕಣರಾಯನೆನಲ್ಕೆನಿಪ್ಪ ಪೆಂ
ಪಂ ತಳೆದಂ ಪ್ರತಾಪನಿಳೆಯೆಂ ಧರೆಯೊಳ್ ನರಸಿಂಗನಾಯಕಂ

ನರಸಿಂಗನಾಯಕನ ಕೈಕೆಳಗಿದ್ದ ಪಟ್ಟಣಸ್ವಾಮಿ ಸೋವಿಸೆಟ್ಟಿ ಎಂಬುವನು ಮೂರು ಕೆರೆ ಮತ್ತು ಪಾರ್ಶ್ವಜಿನಾಲಯವನ್ನು ಕಟ್ಟಿಸಿದನು. ನರಸಿಂಗನಾಯಕ ಮತ್ತು ನಾಲ್ಕು ಹಳ್ಳಿ ಗೌಡರ ಒಪ್ಪಿಗೆ ಪಡೆದು ಜಿನಾಲಯದಲ್ಲಿ ನಡೆಯುವ ಪೂಜಾದಿ ಕಾರ್ಯಗಳಿಗೆಂದು ಸೋವಿಸೆಟ್ಟಿ ದತ್ತಿಬಿಟ್ಟಿದ್ದ ಸಂಗತಿ ಶಾಸನದಲ್ಲಿ ನಿರೂಪಿತವಾಗಿದೆ. ಆದರೆ ನರಸಿಂಗನಾಯಕನ ಆಡಳಿತದ ನೆಲೆ ಯಾವುದೆಂಬುದು ಸ್ಪಷ್ಟವಾಗುವುದಿಲ್ಲ. ಬಹುಶಃ ಹಟ್ಟಣ ಇರಬಹುದು.

ಹೊಯ್ಸಳ ಒಂದನೆಯ ನರಸಿಂಹನ ಕಾಲದಲ್ಲಿ ಬರಮಯ್ಯನೆಂಬ ಸ್ಥಾನಿಕ ಪ್ರಭುವಿದ್ದ ಸಂಗತಿ ಕೃಪೇ. 27ನೆಯ ಶಾಸನದಿಂದ ತಿಳಿದುಬರುತ್ತದೆ. ಪ್ರಾಯಃ ಈತ ಕಿಕ್ಕೇರಿ ಸಂಸ್ಥಾನಕ್ಕೆ ಒಡೆಯನಾಗಿದ್ದಿರಬಹುದು. ಬರಮಯ್ಯನಿಗೆ 'ವೈರಿ ಸಾಮಂತ ದಿಶಾಪಟ್ಟ' ಎಂಬ ಬಿರುದಿತ್ತು. ಈತನ ಪತ್ನಿ ಬಮ್ಮವ್ವನಾಯಿಕಿತಿ ಶಿವ ಭಕ್ತೆ. ಈಕೆ ತನ್ನ ಭಕ್ತಿಯ ಪ್ರತೀಕವಾಗಿ ಬ್ರಹ್ಮೇಶ್ವರ ದೇವಾಲಯವನ್ನು ಕಟ್ಟಿಸಿದಳು. ಈ ದೇವಾಲಯದ ಜೀರ್ಣೋದ್ಧಾರ ಹಾಗೂ ನಿತ್ಯಪೂಜೆಗಳಿಗೆ ದತ್ತಿನೀಡಬೇಕೆಂದು ತಿಲೆನಾಯಕಹೆಗ್ಗಡೆ ಎಂಬುವನು ಕೋರಿದನು. ಇದನ್ನು ಮನ್ನಿಸಿ ಹೊಯ್ಸಳ ನರಸಿಂಹನು ಕೆಲವು ದತ್ತಿಬಿಟ್ಟನು.

ಹೊಯ್ಸಳ ವೀರಬಲ್ಲಾಳನ ಆಳ್ವಿಕೆಯಲ್ಲಿ ಮಳೆಯಸಾಮಂತ ಎಂಬ ಸ್ಥಾನಿಕ ಪ್ರಭುವಿದ್ದ ಬಗ್ಗೆ ಉಲ್ಲೇಖವಿದೆ. ತೊಣಚಿಯ ಕೃಪೇ. 48 ನೆಯ ಶಾಸನದಲ್ಲಿ ಹೊರತಲೆಯ ಮಳೆಯ ಸಾಮಂತನು "ಬಲ್ಲಾಳ ದೇವರ ಕೈಯಲು ತೊಳಚೆಯ ಸಿದ್ಧನಾಥ ದೇವರಿಗೆ ಅಂಗಭೋಗ ರಂಗಭೋಗ ನಿವೇದ್ಯ ಜೀರ್ಣೋದ್ಧಾರಕ್ಕೆ" ನರುವಲಹಾಳಿನ

ಭೂಮಿಯನ್ನು ದತ್ತಿಬಿಟ್ಟ ಸಂಗತಿ ವರ್ಣಿತವಾಗಿದೆ. ಈ ಮಳೆಯ ಸಾಮಂತ ಹೊರತಲೆ ಎಂಬ ನಾಡಿನ ಒಡೆಯನಾಗಿದ್ದು ಆ ನಾಡಿನ ಭೂಮಿಯನ್ನು ದೇವರಿಗೆ ದತ್ತಿಬಿಟ್ಟಿರುವ ಸಾಧ್ಯತೆಯಿದೆ.

ಕನ್ನಡಾಗಿಲಿನಲ್ಲಿ ದೊರೆತಿರುವ ಮದ್ದೂ. 118, 120 ಶಾಸನಗಳು ಸಾಮಂತ ನಾಯಕರಿಬ್ಬರ ವೀರಮರಣವನ್ನು ದಾಖಲಿಸುತ್ತದೆ. ಕ್ರಿ.ಶ. 1192ರ ಮದ್ದೂ. 118ನೆಯ ಶಾಸನೋಕ್ತನಾದ ಪೆರುಮಾಳನಾಯಕನು ಕನ್ನಡಾಗಿಲಿನಲ್ಲಿ ಸಾಮಂತನಾಗಿದ್ದಿರಬಹುದು. ಈತನ ತಂದೆ ಮುಗೂರನಾಡಾಳ್ವ ಬಯಿಚನಾಯಕ. ಹೊಲಗರು ದಾಳಿಮಾಡಿದಾಗ ಪೆರುಮಾಳನಾಯಕನು ಹೋರಾಡುತ್ತ ಮಡಿದನು. ಇದೇ ಅವಧಿಯ ಮದ್ದೂ. 120ನೆಯ ಶಾಸನ ಕೂಡ ಕನ್ನಡಾಗಿಲಿನಲ್ಲಿ ನಡೆದ ತುರುಗೋಳನ್ನು ನಿರೂಪಿಸುತ್ತದೆ. ಇದರಲ್ಲಿ ಕಾಮಯನಾಯಕನು ಸತ್ತನು. ಈತ ಸೋಸಲೆನಾಡಿನ ಒಡೆಯ ಚಿಕೆಯನಾಯಕನ ಮಗ.

ಹೊಯ್ಸಳ ಮೂರನೆಯ ವೀರಬಲ್ಲಾಳನನ್ನು ಉಲ್ಲೇಖಿಸುವ ಮದ್ದೂ. 132ನೆಯ ಶಾಸನ ಕ್ಯಾಗಟ್ಟದಲ್ಲಿ ದೊರೆತಿದೆ. ಇದರಲ್ಲಿ ಹಳಿಯೂರಿನ ಮಂಡಲೇಶ್ವರ ಕುಮಟಭೂದೇವ ಎಂಬವನ ಉಲ್ಲೇಖವಿದೆ. ಹೊಯ್ಸಳ ವೀರಬಲ್ಲಾಳನನ್ನು ಹೆಸರಿಸಿರುವುದರಿಂದ ಈತ ಅವನ ಅಧೀನದಲ್ಲಿದ್ದನೆಂಬುದು ಸ್ಪಷ್ಟ. ಶಾಸನದ ಬಹುಭಾಗ ಲುಪ್ತ.

ವಿಜಯನಗರದ ಅರಸರ ಸಾಮಂತರು : ವಿಜಯನಗರದ ಅರಸರ ಉಲ್ಲೇಖವಿರುವ ಕೆಲವು ಸ್ಥಾನಿಕಪ್ರಭುಗಳ ಶಾಸನಗಳು ಮಂಡ್ಯಜಿಲ್ಲೆಯಲ್ಲಿ ದೊರೆತಿವೆ. ಮತ್ತೆ ಕೆಲವು ಶಾಸನಗಳು ವಿಜಯನಗರದ ಅರಸರ ಅವಧಿಯಲ್ಲಿ ಬಂದಿದ್ದರೂ ವಿಜಯನಗರದ ಅರಸರನ್ನು ಹೆಸರಿಸದಿರುವುದರಿಂದ ಅಲ್ಲಿ ಉಕ್ತರಾದ ಸಾಮಂತರು ವಿಜಯನಗರದವರಿಗೆ ಅಧೀನರಾಗಿದ್ದರೆಂದು ಸ್ಪಷ್ಟವಾಗಿ ಹೇಳಲು ಬರುವುದಿಲ್ಲ. ಆದ್ದರಿಂದ ವಿಜಯನಗರದ ಅರಸರ ಉಲ್ಲೇಖವಿರುವ ಶಾಸನಗಳಲ್ಲಿ ಕಂಡುಬರುವವರನ್ನು ಮಾತ್ರ ವಿಜಯನಗರದ ಅರಸರ ಸಾಮಂತರೆಂದು ಕರೆದಿದೆ.

ಕುರುವಂಕನಾಡು : ವಿಜಯನಗರದ ಕೃಷ್ಣರಾಯನ ಕಾಲದಲ್ಲಿ ಶ್ರೀರಂಗಪಟ್ಟಣದ ಸೀಮೆಗೆ ಸೇರಿದಂತೆ ಕುರುವಂಕನಾಡು ಅಸ್ತಿತ್ವದಲ್ಲಿದ್ದ ಸಂಗತಿ ಕ್ರಿ.ಶ. 1528ರ ಶ್ರೀಪ. 2ನೆಯ ಶಾಸನದಿಂದ ತಿಳಿದುಬರುತ್ತದೆ. ಈ ನಾಡನ್ನು ಅಹೋಬಳದೇವನ ಮಗ ಕೃಷ್ಣರಾಯನಾಯಕನು ಆಳುತ್ತಿದ್ದನು. ಈತನಿಗೆ ಕುರುವಂಕನಾಡಿನ ಒಡೆತನ ನೀಡಿದವನು ವಿಜಯನಗರದ ಕೃಷ್ಣರಾಯನಿರಬೇಕು. ಅದಕ್ಕಾಗಿ ಕೃಷ್ಣರಾಯನಾಯಕನು ವಿಜಯನಗರದ ರಾಜನ ಪುಣ್ಯಾರ್ಥವಾಗಿ ಆತನ ಅಪ್ಪಣೆಯನ್ನು ಪಡೆದು ಶ್ರೀರಂಗನಾಥದೇವರಿಗೆ ಪ್ರತಿನಿತ್ಯ 25 ಅತಿರಸಗಳನ್ನು ನೈವೇದ್ಯ

ಮಾಡಲೆಂದು ನಿತ್ಯಪೂಜೆಯ ಹೂವಮಾಲೆಗೆಂದು ಕುರುಮಂಕನಾಡಿಗೆ ಸೇರಿದ ಬೀರಸೆಟ್ಟಿ ಹಳ್ಳಿಯನ್ನು ದತ್ತಿನೀಡಿದನು.

ಹರಿಗಿಲ : ಪಾಂಡವಪುರದ 125, 127, 138ನೆಯ ಶಾಸನಗಳು ಹರಿಗಿಲ ಅರಸರಿಗೆ ಸಂಬಂಧಿಸಿವೆ. 138ನೆಯ ಶಾಸನವಲ್ಲಿ ವಿಜಯನಗರದ ಅಚ್ಯುತರಾಯನ ಉಲ್ಲೇಖವಿರುವುದರಿಂದ ಹರಿಗಿಲರಾಜರು ವಿಜಯನಗರದವರಿಗೆ ಸಾಮಂತರಾಗಿದ್ದ ರೆಂಬುದು ಖಚಿತ. ಹರಿಗಿಲ ಅಬ್ಬರಾಜನ ಮಗ ಪೆರಿರಾಜನು ೧೫೦ ಗದ್ಯಾಣ ವೆಚ್ಚ ಮಾಡಿ ಮೇಲುಕೋಟೆ ದೇವಾಲಯಕ್ಕೆ ಸೇರಿದ ಕದಳಗೆರೆಯ ಹೊಸಕೆರೆ ಹಾಗೂ ಕೃಷ್ಣ ದೇವ ಒಡೆಯರ ಕೆರೆಗಳನ್ನು ದುರಸ್ತಿಗೊಳಿಸಿದನು. ಇಂಥ ಸತ್ಕಾರ್ಯಕ್ಕಾಗಿ ದೇವ ಸ್ಥಾನದ ಐವತ್ತಿಬ್ಬರು ಅಯ್ಯಗಳು ಪೆರಿರಾಜನ ಹೆಸರಿನಲ್ಲಿ ದೇವರಿಗೆ ನೈವೇದ್ಯವನ್ನು ಅಣಿಗೊಳಿಸಿ ಆ ನೈವೇದ್ಯದಲ್ಲಿ $\frac{1}{4}$ ಭಾಗವನ್ನು ಪೆರಿರಾಜನಿಗೆ ಅಥವಾ ಆತ ಕಟ್ಟುಮಾಡಿ ಕೊಡುವ ಯಾರಿಗಾದರೂ ಕೊಡುವಂತೆ ಶಾಸನ ಮಾಡಿಸಿದರು.

ಪಾಂಡವಪುರ 125, 127ನೆಯ ಶಾಸನಗಳು ಹರಿಗಿಲ ಅಬ್ಬರಾಜನ ಮತ್ತೊಬ್ಬ ಮಗ ತಿರುಮಲರಾಜನನ್ನು ಕುರಿತಿವೆ. ಈತನನ್ನು ಸಿಂಧುಗೋವಿಂದ, ಸಿತಗರಗಂಡ, ಮಣಿನಾಗಪುರವರಾಧೀಶ್ವರ ಎಂದು ವರ್ಣಿಸಲಾಗಿದೆ. ಮಣಿನಾಗಪುರವರಾಧೀಶ್ವರ ಎಂಬ ಬಿರುದು ಬೇಲೂರು ನಾಯಕರಲ್ಲಿಯೂ ಕಂಡುಬರುತ್ತದೆ. ತಿರುಮಲ ರಾಜನು ನಾಗಮಂಗಲ ಪ್ರಾಂತಕ್ಕೆ ಸೇರಿದ ಸೆಟ್ಟಿಪುರ, ಮಾಲನಹಳ್ಳಿ, ನಿಲೆಮಂಗಲ, ಹೊಳವಳ್ಳಿ, ಕರನಾರಹಳ್ಳಿಗಳನ್ನು ಮೇಲುಕೋಟೆಯ ಶೆಲ್ವಪಿಳ್ಳೆರಾಯದೇವರಿಗೆ ಕ್ರಿ.ಶ. 1535ರಲ್ಲಿ ದತ್ತಿಬಿಟ್ಟನು. ಸೋಜಿಗದ ಸಂಗತಿಯೆಂದರೆ ಮೇಲೆ ಉಲ್ಲೇಖಿಸಿದ ಗ್ರಾಮಗಳನ್ನು ತಿರುಮಲರಾಜನು ಈ ಹಿಂದೆ ರಾಮಭಟ್ಟಯ್ಯನಿಗೆ ದಾನಮಾಡಿದ್ದನು. ಈಗ ಅವನಿಂದ ಹಿಂತೆಗೆದುಕೊಂಡು ದೇವರಿಗೆ ಉಂಬಳಿ ನೀಡಿದನು. ಈತ ಪೂರ್ವೋಕ್ತ ಶಾಸನದ ಐವತ್ತಿಬ್ಬರು ಅಯ್ಯಗಳಿಗೆ ಕೂಡ ದಾನನೀಡಿದ್ದನು.

ವಿಜಯನಗರದಲ್ಲಿ ಸದಾಶಿವರಾಯನು ಆಳುತ್ತಿದ್ದಾಗ ಚನ್ನರಾಜ, ತಿಮ್ಮಪ್ಪ ನಾಯಕ ಎಂಬ ಸಾಮಂತರು ಇದ್ದರೆಂಬುದು ಕ್ರಿ.ಶ. 1544ರ ನಾಮಂ. 6ನೆಯ ಶಾಸನದಿಂದ ತಿಳಿದುಬರುತ್ತದೆ. ಈ ಇಬ್ಬರು ಸಾಮಂತರೂ ತಮ್ಮ ಮೇಲಿನ ಅಧಿ ಪತಿಯ ಅಪ್ಪಣೆಯ ಮೇರೆಗೆ ದತ್ತಿಬಿಟ್ಟಿದ್ದರು. ಇತರ ವಿವರಗಳು ಸ್ಪಷ್ಟವಾಗು ವುದಿಲ್ಲ.

ದೇವಲಾಪುರ : ಮಲೆಯನಾಯಕನಹಳ್ಳಿ, ಮುತ್ಸಂದ್ರ, ಕುಡುಗುಬಾಳು ದೇವಲಾಪುರ ಇವೆಲ್ಲವೂ ಸೇರಿ ಒಂದು ಪ್ರಾಂತ್ಯವಾಗಿ ರೂಪುಗೊಂಡು ಒಬ್ಬ ಸ್ಥಾನಿಕ ಪ್ರಭುವಿನ ಆಡಳಿತಕ್ಕೆ ಒಳಪಟ್ಟಿದ್ದಂತೆ ತೋರುತ್ತದೆ. ದೇವಲಾಪುರ ಸ್ಥಳವನ್ನು ನಾಗೆಯಂನಾಯಕನು ಆಳುತ್ತಿದ್ದ ಸಂಗತಿ ಕ್ರಿ.ಶ. 1444ರ ನಾಮಂ. 166ನೆಯ ಶಾಸನ ದಿಂದ ಸ್ಪಷ್ಟವಾಗುತ್ತದೆ. ಈತ ತೆಪ್ಪದ ಮುದ್ದೆನಾಯಕನ ಪುತ್ರ. ನಾಗೆಯ

ನಾಯಕನು ಮಲೆಯನಾಯಕನ ಹಳ್ಳಿಯಲ್ಲಿರುವ ತಿರುಮಲದೇವರ ಪೂಜೆಗೆಂದು ಮುದಸಮುದ್ರ (ಮುತ್ಸಂದ್ರ)ವನ್ನು ದತ್ತಿನೀಡಿದ್ದನು. 'ಮೂವರು ರಾಯರ ಗಂಡ' ಗಜಸಿಂಹ' ಎಂಬುದು ಈತನ ಬಿರುದುಗಳು. ಈತ ಯಾವ ರಾಜನಿಗೆ ಸಾಮಂತನಾಗಿದ್ದನೆಂಬುದು ಶಾಸನದಲ್ಲಿ ಉಕ್ತವಾಗಿಲ್ಲ

ದೇವಲಾಪುರಕ್ಕೆ ಸಂಬಂಧಿಸಿದ ಕ್ರಿ.ಶ. 1460ರ ನಾಮಂ. 165ನೆಯ ಶಾಸನದಲ್ಲಿ ವಿಜಯನಗರದ ಶ್ರೀರಂಗರಾಯನ ಉಲ್ಲೇಖ ಸ್ಪಷ್ಟವಾಗಿದೆ. ಶ್ರೀರಂಗರಾಯನ ಅಧೀನದಲ್ಲಿ ಸುರಗಿಯ ದೇವಪ್ಪನಾಯಕ ಎಂಬ ಸ್ಥಾನಿಕಪ್ರಭುವಿದ್ದ ಸಂಗತಿ ಪ್ರಸ್ತುತ ಶಾಸನದಿಂದ ತಿಳಿದುಬರುತ್ತದೆ. ಈತ ಕುಡುಗುಬಾಳಿನ ರಾಮಲಿಂಗದೇವರ ಸೇವೆಗೆಂದು ದೇವಲಾಪುರವನ್ನು ಅದರ ಸಕಲ ಆದಾಯಗಳೊಂದಿಗೆ ದತ್ತಿಬಿಟ್ಟಿದ್ದನು. ದತ್ತಿಬಿಟ್ಟ ಹಳ್ಳಿ ದೇವಪ್ಪನಾಯಕನ ವಶಕ್ಕೆ ಸೇರಿತ್ತೆಂಬುದು ಗಮನಿಸಬೇಕಾದ ಸಂಗತಿ.

ನಾಗಮಂಗಲ : ಮಂಡ್ಯ ಜಿಲ್ಲೆಯ ಸ್ಥಾನಿಕಪ್ರಭುಗಳಲ್ಲಿ ನಾಗಮಂಗಲದ ಪ್ರಭುಗಳೂ ಪ್ರಸಿದ್ಧರು. ಹದಿನೈದನೆಯ ಶತಮಾನದ ಮಧ್ಯಭಾಗದಲ್ಲಿ ಲೋಹಿತ ಕುಟುಂಬಕ್ಕೆ ಸೇರಿದ ನಾಗಮಂಗಲದ ಸಾಮಂತರಾಜರು ತಮ್ಮನ್ನು ಪ್ರಭುಗಳೆಂದು ಘೋಷಿಸಿಕೊಂಡರು ನಾಗಮಂಗಲ ಹೊಯ್ಸಳರ ಕಾಲದಲ್ಲಿ ಕಲ್ಕುಣಿನಾಡಿಗೆ ಸೇರಿತ್ತು. ವೀರಬಲ್ಲಾಳಚತುರ್ವೇದಭಟ್ಟರತ್ನಾಕರ ಎಂಬುದು ನಾಗಮಂಗಲಕ್ಕಿದ್ದ ಪರ್ಯಾಯನಾಮ. ನಾಗಮಂಗಲದ ಪ್ರಭುಗಳು ವಿಜಯನಗರದ ಅರಸರಿಗೆ ಸಾಮಂತರಾಗಿದ್ದರು. ಈ ಪ್ರಭುಗಳ ವಂಶಾವಳಿ ಸಿಂಗಣ್ಣಒಡೆಯನಿಂದ ಆರಂಭವಾಗುತ್ತದೆ. ಈತನ ಪತ್ನಿ ಸೀತಾಂಬಿಕೆ. ಇವರ ಪುತ್ರ ತಿಮ್ಮಣ್ಣ ದಣ್ಣಾಯಕ. ಈತ ವಿಜಯನಗರದ ಇಮ್ಮಡಿ ಪ್ರೌಢರಾಜನಿಗೆ ಮಂತ್ರಿಯಾಗಿದ್ದನು. ತುಂಬ ಪ್ರಭಾವಶಾಲಿ ಅಧಿಕಾರಿ ಈತ ಅನೇಕ ಸತ್ಕಾರ್ಯಗಳನ್ನು ಮಾಡಿದ್ದನು. ಮೇಲುಕೋಟೆಯನ್ನು ಪುನರ್ನಿರ್ಮಾಣ ಮಾಡಿ ಶ್ರೀರಂಗಪಟ್ಟಣಕ್ಕೆ ಸ್ವಂತ ಖರ್ಚಿನಿಂದ ಕೋಟೆಯನ್ನು ಕಟ್ಟಿದ್ದನು ಅಲ್ಲಿ ಕೋಟೆ ಕಟ್ಟಿದವರಲ್ಲಿ ಈತನೇ ಮೊದಲಿಗ. ಈತ ಅಲ್ಲಿನ ರಂಗನಾಥ ದೇವಾಲಯವನ್ನು ವಿಸ್ತರಿಸುವ ಕೆಲಸದಲ್ಲಿಯೂ ತೊಡಗಿದ್ದನು.

ನಾಗಮಂಗಲದ ಸಿಂಗಣ್ಣವೊಡೆಯನ ಮತ್ತೊಬ್ಬ ಮಗ ದೇವರಾಜನು ಕಾವೇರಿ ನದಿಗೆ ಕಾಲುವೆಯನ್ನು ತೋಡಿಸಿದ ಸಂಗತಿ ಕ್ರಿ ಶ. 1467 ರ ಪಾಂ ಪು. 19 ನೆಯ ಶಾಸನದಿಂದ ತಿಳಿದುಬರುತ್ತದೆ. ಈ ಸಂಬಂಧದ ಒಂದು ವ್ಯವಹಾರ ಸ್ವಾರಸ್ಯವಾಗಿದೆ. ದೇವರಾಜನು ಕಾಲುವೆ ನಿರ್ಮಾಣಕಾರ್ಯ ಕೈಗೊಂಡಾಗ ಹರಹು ಗ್ರಾಮದ ಜನರು ಆ ಕಾಲುವೆಯನ್ನು ತಮ್ಮ ಗ್ರಾಮದ ಎಲ್ಲೆಯ ವರೆಗೂ ವಿಸ್ತರಿಸಬೇಕೆಂದು ಕೇಳಿಕೊಂಡರು. ಕಾಲುವೆಗಾದ ವೆಚ್ಚವನ್ನು ದೇವರಾಜನು ತಾನೇ ಭರಿಸಿದನು. ಆದಕ್ಕಾಗಿ ಹರಹು ಗ್ರಾಮದ ಯದುವಣ್ಣನು ದೇವರಾಜನಿಗೆ ಹೊಸಹಳ್ಳಿಗ್ರಾಮವನ್ನು ಯಜಮಾನ ಭಾಗವಾಗಿ ಕೊಟ್ಟನು. ಕೆಲವು ವರ್ಷಗಳ ಬಳಿಕ ಯದುವಣ್ಣನು ಹೊಸ

ಹಳ್ಳಿ, ಚಿಕ್ಕಮಳಲಿ ಮತ್ತು ಕೆಂದನಹಾಳು ಗ್ರಾಮದ ಅರ್ಧಭಾಗವನ್ನು 400 ಹೊನ್ನುಗಳಿಗೆ ದೇವರಾಜನಿಗೆ ಮಾರಿದನು. ಆತ ಹೊಸಹಳ್ಳಿ ಗ್ರಾಮವನ್ನು 208 ವೃತ್ತಿಗಳಾಗಿ ವಿಂಗಡಿಸಿ ಅವುಗಳಲ್ಲಿ 8 ವೃತ್ತಿಗಳನ್ನು ಶ್ರೀರಾಮಚಂದ್ರ ದೇವರಿಗೆ, 200 ವೃತ್ತಿಗಳನ್ನು ಬ್ರಾಹ್ಮಣರಿಗೆ ತಾಯಿ ಸೀತಮ್ಮನ ಪುಣ್ಯಾರ್ಥವಾಗಿ ದಾನವಾಡಿದನು. ಕ್ರಿ.ಶ. 1455ರಲ್ಲಿ ಹೊಸಹಳ್ಳಿ ಗ್ರಾಮವನ್ನು ದೇವರಾಜನ ತಾಯಿಯ ಹೆಸರಿನಲ್ಲಿ ಶ್ರೀರಾಮಸೀತಾಪುರ ಎಂದು ಪುನರ್ನಾಮಕರಣ ಮಾಡಿದನು.

ವಿಜಯನಗರದ ಸಾಮ್ರಾಜ್ಯ ಅವನತಿ ಹೊಂದಿದ ಬಳಿಕ ನಾಗಮಂಗಲದ ರಾಜರು ಸ್ವತಂತ್ರರಾಗಿ ನಿಲ್ಲಲಾಗಲಿಲ್ಲ. ಹದಿನಾರನೆಯ ಶತಮಾನದ ಅಂತ್ಯದಲ್ಲಿ ನಾಗಮಂಗಲ ರಾಜ್ಯ ಚನ್ನಪಟ್ಟಣದ ಜಗದೇವರಾಯನ ಕೈವಶವಾಯಿತು. ಸು. 1630 ರಲ್ಲಿ ಮೈಸೂರು ಅರಸರ ರಾಜ್ಯದಲ್ಲಿ ವಿಲೀನವಾಯಿತು.

ಉಮ್ಮತ್ತೂರು : ವಿಜಯನಗರದ ಅರಸರ ಸಾಮಂತರಾಗಿದ್ದ ಉಮ್ಮತ್ತೂರಿನ ದೊರೆಗಳು ಮೈಸೂರು ಜಿಲ್ಲೆ ಚಾಮರಾಜನಗರ ತಾಲ್ಲೂಕಿಗೆ ಸೇರಿದ ಉಮ್ಮತ್ತೂರನ್ನು ಕೇಂದ್ರವಾಗಿಟ್ಟುಕೊಂಡು ಮೈಸೂರು ಮಂಡ್ಯ ಹಾಗೂ ಕೊಯಮತ್ತೂರು ಜಿಲ್ಲೆಗಳ ಕೆಲವು ಭಾಗಗಳನ್ನು ಆಳಿದರು. ಉಮ್ಮತ್ತೂರು ದೊರೆಗಳ ಐದು ಶಾಸನಗಳು ಮಳವಳ್ಳಿಯಲ್ಲಿ ದೊರೆತಿವೆ. ಇವುಗಳಲ್ಲಿ ಪ್ರಾಚೀನ ವಾದುದು ಮಳವಳ್ಳಿ 149 ನೆಯ ಶಾಸನ. ಇದು ಸು. 15–16ನೆಯ ಶತಮಾನಕ್ಕೆ ಸೇರಿದ್ದು ಇಮ್ಮಡಿ ರಾಯಒಡೆಯನಿಗೆ ಸಂಬಂಧಿಸಿದೆ. ಈತ ಬನ್ನಿಯೂರಿನ ಮಾಯಪ್ಪ ಎಂಬವನಿಗೆ ಹೊಲಗನಹಳ್ಳಿ (ಈಗಿನ ಹೊಂಗನಹಳ್ಳಿ)ಯನ್ನು ದತ್ತಿ ಬಿಟ್ಟನು.

ಕ್ರಿ.ಶ. 1506ರ ಅವಧಿಯ ಮಪ. 106ನೆಯ ಶಾಸನ ಉಮ್ಮತ್ತೂರಿನ ದೊರೆ ದೇಪಣ್ಣೊಡೆಯನ ಮಗ ಚಿಕ್ಕರಾಯನನ್ನು ಕುರಿತದ್ದಾಗಿದೆ. ಚಿಕ್ಕರಾಯನಿಗೆ 'ಪೆನುಗೊಂಡೆ ಚಕ್ರೇಶ್ವರ' ಎಂಬ ಪ್ರಶಸ್ತಿಯಿತ್ತು. ಮಲ್ಲರಾಜ ಎಂಬುದು ಈತನ ಇನ್ನೊಂದು ಹೆಸರು. ಈತ ತೆರಕಣಾಂಬಿಯನ್ನು ಕೇಂದ್ರವನ್ನಾಗಿಟ್ಟುಕೊಂಡು ಆಳಿತ ನಡೆಸುತ್ತಿದ್ದಾಗ ತುಳುವ ಮನೆತನದ ನರಸಿಂಹ ಮಹಾರಾಯನು ವಿಜಯನಗರ ಸಾಮ್ರಾಜ್ಯದ ಅಧಿಪತಿಯಾಗಿದ್ದನು. ಚಿಕ್ಕರಾಯನು ತಲಕಾಡುನಾಡು ದನಗೂರು ಸ್ಥಳದ ಮೊನೆಮುಟ್ಟರಹಳ್ಳಿಯನ್ನು ಚಿಕ್ಕರಾಯಸಾಗರ ಎಂದು ತನ್ನ ಹೆಸರಿನಲ್ಲಿ ಪುನರ್ನಾಮಕರಣ ಮಾಡಿ, ಆ ಊರನ್ನು ಅದರ ಸಕಲ ಆದಾಯಗಳೊಂದಿಗೆ ಆಲಿಕೊಂಡದ ನಾಗಭಟ್ಟ ಎಂಬ ವಿದ್ವಾಂಸನಿಗೆ ದತ್ತಿಬಿಟ್ಟಿದ್ದನು. ಮೊನೆಮುಟ್ಟರ ಹಳ್ಳಿಯನ್ನು ಈತ ಅಗ್ರಹಾರವಾಗಿ ಪರಿವರ್ತಿಸಿದ. ಪ್ರಸ್ತುತ ಶಾಸನದಲ್ಲಿ ದೇಪಣ್ಣೊಡೆ ಯನನ್ನು ಘೇಣಾಂಕ ಚಕ್ರೇಶ್ವರ,ಪೆಸಾಳಿ ಹನುಮ, ಅರಸಂಕ ಸೊನಗಾಜಿ, ಜವಾದಿ ಕೋಲಾಹಲ, ಗಜಬೇಂಟೆಕಾಜಿ, ಸಂಗ್ರಾಮಭೀಮ ಎಂಬ ವಿಶೇಷಣಗಳಿಂದ

ವರ್ಣಿಸಿದೆ. ಇವು ಉಮ್ಮತ್ತೂರಿನ ದೊರೆಗಳ ಪ್ರಸಿದ್ಧ ಬಿರುದುಗಳು.

ಕ್ರಿ.ಶ. 1510ರ ಮವ. 130 ನೆಯ ಶಾಸನದಿಂದ ಉಮ್ಮತ್ತೂರಿನ ದೊರೆ ವೀರಚಿಕ್ಕರಾಯ ಒಡೆಯನ ನಿರೂಪದಿಂದ ಸಾದಿಯಪ್ಪೊಡೆಯನು ದತ್ತಿ ನೀಡಿದ ಸಂಗತಿ ತಿಳಿದುಬರುತ್ತದೆ. ಸಾದಿಯಪ್ಪೊಡೆಯನು ಕುಂದೂರಿನ ಮೂಲಸ್ಥಾನದೇವರಿಗೆ ನೈವೇದ್ಯ ನಂದಾದೀಪಗಳಿಗೆಂದು ನೀಡಿದ ಕಾಣಿಕೆಯನ್ನು ಊರ ಗೌಡರು ಗುತ್ತಿಗೆಯಾಗಿ ಸ್ವೀಕರಿಸುತ್ತಾರೆ.

ಮವ. 131ನೆಯ ಶಾಸನದಲ್ಲಿ ಕೂಡ ಸಾದಿಯಪ್ಪೊಡೆಯನ ಉಲ್ಲೇಖವಿದೆ. ಈತ ಕುಂದೂರು ಮೂಲಸ್ಥಾನದೇವರಿಗೆ ದತ್ತಿಬಿಟ್ಟಿದ್ದನು. ಮವ. 130 ನೆಯ ಶಾಸನೋಕ್ತ ಸಾದಿಯಪ್ಪೊಡೆಯ ಮತ್ತು ಪ್ರಸ್ತುತ ಶಾಸನದ ಸಾದಿಯಪ್ಪೊಡೆಯ ಏಕವ್ಯಕ್ತಿಗಳಾಗಿದ್ದಿರಬಹುದು. ಈತ ಉಮ್ಮತ್ತೂರಿನ ದೊರೆಗಳ ಆಶ್ರಯದಲ್ಲಿ ಕುಂದೂರನ್ನು ಪಾಲಿಸುತ್ತಿದ್ದನೆಂದು ತೋರುತ್ತದೆ.

ಉಮ್ಮತ್ತೂರಿನ ದೊರೆ ವೀರನಂಜರಾಜಒಡೆಯನ ಮಗ ಪಿರಿಯೊಡೆಯನಿಗೆ ಸಂಬಂಧಿಸಿದ ಕ್ರಿ.ಶ 1511ರ ಮವ. 145 ನೇ ಶಾಸನದಲ್ಲಿ ಉಮ್ಮತ್ತೂರು ರಾಜರ ಬಿರುದುಗಳು ದೊರೆಯುತ್ತವೆ. ಪಿರಿಯೊಡೆಯನು ಕಿರುಗಾವಲ ಸ್ಥಳದ ಕಲ್ಯಾಣಿ ಗ್ರಾಮವನ್ನು ನಂಜುಂಡೇಶ್ವರ ದೇವರಿಗೆ ದತ್ತಿಬಿಟ್ಟಿದ್ದನು.

ವಿಜಯನಗರದ ಅಚ್ಯುತರಾಯನಕಾಲದಲ್ಲಿ ಉಮ್ಮತ್ತೂರಿನಲ್ಲಿ ವೀರಮಂಗಪ್ಪೊಡೆಯನ ಮಗ ಮಲ್ಲರಾಜಪ್ಪೊಡೆಯನು ಆಳುತ್ತಿದ್ದನು. ಈತ "ತಳಕಾಡನಾಡಾಹ್ವಯ ದನುಗೂರು ಸಾಧಿಪ್ಪವೊಡೆಯರ ಮಗ ಚಿಕ್ಕಸಾಧಿಪ್ಪನಿಗೆ" ದನುಗೂರು ಸೀಮೆಯ ನೆಟ್ಟಕಲ್ಲು ಗ್ರಾಮವನ್ನು ನೀಡಿದ ಸಂಗತಿ ಕ್ರಿ.ಶ. 1532ರ ಮವ. 86ನೆಯ ಶಾಸನದಿಂದ ತಿಳಿದುಬರುತ್ತದೆ. ಈ ಚಿಕ್ಕಸಾಧಿಪ್ಪನು ಮವ 130, 131ನೆಯ ಶಾಸನಗಳಲ್ಲಿ ಉಲ್ಲಿಖಿತನಾದ ಸಾಧಿಪ್ಪವೊಡೆಯನ ಪುತ್ರನಾಗಿರಬಹುದು. ಒಟ್ಟಿನಲ್ಲಿ ಉಮ್ಮತ್ತೂರು ದೊರೆಗಳ ಶಾಸನಗಳು ಆ ರಾಜರ ಶೈವಭಕ್ತಿಯನ್ನೂ ದಾನಗುಣವನ್ನೂ ತೋರಿಸುತ್ತವೆ.

ಹದಿನಾಡು: ಹದಿನಾರು ಹದಿನೇಳನೆಯ ಶತಮಾನಗಳಲ್ಲಿ ಮೈಸೂರು ಜಿಲ್ಲೆಯ ಎಳಂದೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ರಾಜರು ಹದಿನಾಡು ಅರಸರು ಎಂದು ಪ್ರಸಿದ್ಧರಾಗಿದ್ದರು. ಹದಿನಾಡುಪ್ರಾಂತ ಎಳಂದೂರು ಚಾಮರಾಜನಗರ ಕೊಳ್ಳೇಗಾಲ ಟಿ ನರಸೀಪುರದ ಹಲವು ಪ್ರದೇಶಗಳನ್ನು ಒಳಗೊಂಡಿತ್ತು. ಮಂಡ್ಯಜಿಲ್ಲೆಯಲ್ಲಿ ಹದಿನಾಡು ಅರಸರ ಮೂರು ಶಾಸನಗಳು ದೊರೆತಿವೆ. ಕ್ರಿ.ಶ. 1576ರ ಅವಧಿಯ ಮದ್ದೂ. 137ನೆಯ ಶಾಸನದಲ್ಲಿ ಹದಿನಾಡಿನ ಪ್ರಭು ರಾಮರಾಜ ರಾಮರಾಜಯ್ಯನು ಅರಸಾಕರೆಸ್ಥಳದ ಕುದುರೆಗುಂಡಿಯನ್ನು ಪಲ್ಲಕ್ಕಿ ಉಂಬಳಿಯಾಗಿ ಕೊಟ್ಟ ಉಲ್ಲೇಖವಿದೆ. ಶಾಸನದ ಬಹುಭಾಗ ಸವೆದುಹೋಗಿರುವುದರಿಂದ ಹೆಚ್ಚಿನ ವಿವರಗಳು ತಿಳಿಯುವುದಿಲ್ಲ.

ಕ್ರಿ.ಶ.1589ರ ಮದ್ದೂ. 82ನೆಯ ಶಾಸನವು ಹದಿನಾಡಿನ ತಿರುಮಲರಾಯನ ಮಕ್ಕಳಾದ ರಾಮರಾಜಯ್ಯ ಮತ್ತು ತಿರುಮಲರಾಜಯ್ಯರು ನೀಡಿದ ದತ್ತಿಯನ್ನು ವಿವರಿಸುತ್ತದೆ. ಗಣಪತಿಪಂಡಿತನ ಪೌತ್ರ ಅಪ್ಪಾಜಿಪಂಡಿತನ ಪುತ್ರ ಪಶುಪತಿ ಪಂಡಿತನಿಗೆ ಕಬ್ಬೆರೆಯನ್ನು ತಿರುಮಲರಾಯನ ಮಕ್ಕಳು ಧಾರಾಪೂರ್ವಕವಾಗಿ ನೀಡಿದ್ದರು. ಆದ್ದರಿಂದ ಮದ್ದೂರು ತಾಲ್ಲೂಕಿಗೆ ಸೇರಿದ ಕಬ್ಬೆರೆ ಹದಿನಾಡಿನ ಅರಸರ ವಶದಲ್ಲಿತ್ತೆಂದು ಊಹಿಸಬಹುದು.

ಕ್ರಿ.ಶ.1596ರ ಮಂ.17ನೆಯ ಶಾಸನದ ಬಹುಭಾಗ ಜೀರ್ಣವಾಗಿದೆ. ಇದು ಹದಿನಾಡಿನ ಮಹಾಮಂಡಳೇಶ್ವರ ರಾಮರಾಜತಿರುಮಲರಾಜಯ್ಯನೆಂಬವನನ್ನು ಉಲ್ಲೇಖಿಸುತ್ತದೆ. ಇಲ್ಲಿ ಉಕ್ತನಾದ ನಗರೂರಿನ ಗುತ್ತಿನಾಯಕನ ಮಗ ಚಿಕ್ಕಣ್ಣನಾಯಕನು ಹದಿನಾಡುರಾಜರಲ್ಲಿ ಅಧಿಕಾರಿಯಾಗಿದ್ದಿರಬಹುದು.

ನಂದ್ಯಾಲ : ಆಂಧ್ರಪ್ರದೇಶದ ಕರ್ನೂಲುಜಿಲ್ಲೆಯ ನಂದ್ಯಾಲವನ್ನು ಕೇಂದ್ರವನ್ನಾಗಿಟ್ಟುಕೊಂಡು ಆಳಿದ ರಾಜರು ನಂದ್ಯಾಲರು. ಇವರಿಗೆ ಸೇರಿದ ಏಕೈಕಶಾಸನ ಮಂ. 21 ಮಂಡ್ಯದ ಬೇವುಕಲ್ ಹಟ್ಣದಲ್ಲಿ ದೊರೆತಿದೆ. ಸುಮಾರು 16–17ನೆಯ ಶತಮಾನದಲ್ಲಿ ನಂದಿಯಾಲದ ತಮ್ಮೆಯದೇವ ಮಹಾಅರಸನು ದುದ್ದಗ್ರಾಮದ ನಂಜವೊಡೆಯನಿಗೆ ಹಟ್ಣ ಗ್ರಾಮವನ್ನು ಉಂಬಳಿಯಾಗಿ ನೀಡಿದ ಸಂಗತಿ ಈ ಶಾಸನದಿಂದ ತಿಳಿದುಬರುತ್ತದೆ.

ಕಳಲೆ : ಮೈಸೂರು ಜಿಲ್ಲೆಯ ಕಳಲೆಯಿಂದ ಆಳಿದ ಸ್ಥಾನಿಕಪ್ರಭುಗಳು ಕಳಲೆ ಅರಸರೆಂದು ಹೆಸರುವಾಸಿಯಾಗಿದ್ದರು. ಇವರು ಮೈಸೂರು ಅರಸರಿಗೆ ದಳವಾಯಿಗಳಾಗಿದ್ದರು. ಕಳಲೆ ಅರಸರ ವಂಶಾವಳಿ ಕಾಂತಯ್ಯನಿಂದ ಆರಂಭವಾಗುತ್ತದೆ. ಅವರಲ್ಲಿ ದೇವರಾಜ ಮತ್ತು ನಂಜರಾಜರು ತುಂಬ ಪ್ರಬಲರು. ಶ್ರೀಪ. 14 ಮತ್ತು 16 ನೆಯ ಶಾಸನಗಳಲ್ಲಿ ಕಳಲೆ ಕಾಂತಯ್ಯನು ಶ್ರೀರಂಗಪಟ್ಟಣದ ಗಂಗಾಧರೇಶ್ವರ ದೇವಾಲಯಕ್ಕೆ ಬೆಳ್ಳಿಪಂಚಾರತಿ ಮತ್ತು ಬೆಳ್ಳಿಬಟ್ಟಲುಗಳನ್ನು ನೀಡಿದ ಸಂಗತಿ ದಾಖಲಾಗಿದೆ. ಈ ಶಾಸನದ ಜೊತೆಗೆ ಟಿಪ್ಪುವಿನ ಶಾಸನವೂ ಇದೆ.

ಕಳಲೆ ನಂಜರಾಜನು ಗಂಗಾಧರೇಶ್ವರ ದೇವಸ್ಥಾನದ ಪಂಚಲೋಹದ ದಕ್ಷಿಣಾಮೂರ್ತಿ ವಿಗ್ರಹವನ್ನು ನೀಡಿದ ಸಂಗತಿ ಶ್ರೀಪ. 29ನೆಯ ಶಾಸನದಿಂದು ತಿಳಿದುಬರುತ್ತದೆ.

ಇತರ ಸ್ಥಾನಿಕಪ್ರಭುಗಳು : ಅಪ್ರಮುಖರಾದ ಅಧಿಪತಿಗಳನ್ನು ಹೆಸರಿಸದ ಹಾಗೂ ನಾಗಮಂಗಲ, ಉಮ್ಮತ್ತೂರು ಮೊದಲಾದ ಪ್ರಸಿದ್ಧ ಸ್ಥಾನಿಕಪ್ರಭುಗಳ ಸಾಲಿಗೂ ಸೇರದ ಕೆಲವು ಸಾಮಂತರನ್ನು ಈ ವಿಭಾಗದಲ್ಲಿ ಸೇರಿಸಿದೆ.

ಮೊಡವನಕೋಡಿಯ ಸಾಮಂತನ ಕೆಲವು ವಿವರಗಳು ಕ್ರಿ. ಶ. 1200 ರ ಕೃಪೇ. 111ನೆಯ ಶಾಸನದಲ್ಲಿ ಕಂಡುಬರುತ್ತವೆ. ಮಲ್ಲಿಯಣ್ಣ ಮೊಡವನ

ಕೋಡಿಯ ಒಡೆಯನಾಗಿದ್ದ. ಈತನ ತಂದೆ ಬಿಟ್ಟಿಗಾವುಂಡ ಕೂಡ ಸಾಮಂತ ನಾಗಿದ್ದಿರಬಹುದು. ದುಂಬಿಗಾವುಂಡಿ ಮಲ್ಲಿಯಣ್ಣನ ತಾಯಿ. ಈಕೆಯನ್ನು "ಧರ್ಮದ ಮೇರು ಪಾರ್ವತಿಗೌರಿ ಅಭಿಮಾನಸುಗ್ಗಲದೇವಿ ಗೋತ್ರಚಿಂತಾಮಣಿ ರಾಣಿಮೊಖ ಜ್ಯೋತಿ" ಎಂದು ಪ್ರಶಂಸಿಸಲಾಗಿದೆ. ಇಂಥ ಸಾಧ್ವಿಯ ಮಗ ಮಲ್ಲಿಯಣ್ಣ "ಸತ್ಯರಾಧೇಯ ಸೌಜನ್ಯಬಾಂಧವ ಆಶ್ರಿತಜನಕಲ್ಪವೃಕ್ಷ ಗೋತ್ರಚಿಂತಾಮಣಿ ಬಂಧುಜನವಣಕನೇಕಾಂಗವೀರ ವಿವೇಕವಿದ್ಯಾಧರ ದೇಸಿಯಾಭರಣ ಮಜಿಪ್ರೊಕ್ಕರ ಕಾವ" ಮೊದಲಾದ ವಿಶೇಷಣಗಳಿಗೆ ಪಾತ್ರನಾಗಿದ್ದ. ಈತನು ಗೋಗ್ರಹಣದಲ್ಲಿ ಹೋರಾಡುತ್ತ ಪ್ರಾಣಾರ್ಪಣೆ ಮಾಡಿದನು. ಇವನೊಡನೆ ಈತನ ಸೋದರ ಕೂಡ ಮಡಿದನು.

ತೆಂಗಿನಘಟ್ಟದ ಕ್ರಪೇ. 43ನೆಯ ಅಪೂರ್ಣ ಶಾಸನದಲ್ಲಿ ಕಾಳಯ್ಯ ಎಂಬ ಸಾಮಂತನ ಪ್ರಸಕ್ತಿಯಿದೆ. ಕಾಳಯ್ಯನು ಓಬಿಯ ಹಡವಳದ ಕೊಳ್ಳಿಯಮ್ಮನ ಮಗನಿರಬಹುದೆಂದು ತೋರುತ್ತದೆ. ಇಲ್ಲಿ ದೊರೆಯುವ ಸಂಗ್ರಾಮ ಸಹಸ್ರಬಾಹು, ಕದನತ್ರಿಣೇತ್ರ, ಕರೆದೀವದಾನಿ, ಸುಭಟರಾದಿತ್ಯ, ಕಲಿಯುಗ ಮಾರ್ತಂಡ, ಪರನಾರೀ ದೂರ, ರಣರಂಗಧೀರ, ಸುಭಟರಾದಿತ್ಯ, ಸತ್ಯರಾಧೇಯ, ಸ್ವಾಮಿದ್ರೋಹರ ಗಂಡ ಮೊದಲಾದ ಬಿರುದುಗಳು ಕಾಳಯ್ಯನಿಗೆ ಸಂಬಂಧಿಸಿದವೆಂದು ಭಾವಿಸಬಹುದು.

ಸುಮಾರು 12–13ನೆಯ ಶತಮಾನಕ್ಕೆ ಸೇರಿದ ತೊಣ್ಣೂರಿನ ಪಾಂಪು 77ನೆಯ ಶಾಸನದಲ್ಲಿ ಸೋಮೆಯ ಸಾಮಂತನ ಮಗ ಮಲ್ಲಿಸಾಮಂತನು ದತ್ತಿಬಿಟ್ಟಿದ್ದ ಸಂಗತಿಯನ್ನು ನಿರೂಪಿಸಿದೆ.

ಮರಡಿಪುರದ ಕ್ರಿ. ಶ. 1305ರ ಮಂ 13ನೆಯ ಶಾಸನದಲ್ಲಿ ಮಹಾಸಾಮಂತ ನಾಗಯ್ಯ ಎಂಬವನ ಉಲ್ಲೇಖವಿದೆ. ಈತ ಎಮ್ಮೆಯಕೇತನಹಟ್ಟಿಯನ್ನು ಶಿವಪುರ ವನ್ನಾಗಿ ಮಾರ್ಪಡಿಸಿ ಅಲ್ಲಿನ ಕಲಿದೇವರಿಗೆ ದತ್ತಿನೀಡಿದ್ದನು ಇದರಿಂದ ಈತ ಶೈವಧರ್ಮೀಯನೆಂಬುದು ಸ್ಪಷ್ಟ.

ಗುತ್ತಲಿನಲ್ಲಿ ಶಿವಾಜಿನಾಯಕ ಎಂಬ ಪಾಳೆಯಗಾರನಿದ್ದ ಸಂಗತಿ ಕ್ರಿ. ಶ. 1654ರ ಮಂ. 63ನೆಯ ಶಾಸನದಿಂದ ತಿಳಿದುಬರುತ್ತದೆ. ಗುತ್ತಲು ಊರಿನ ಮತ್ತೊಂದು ಹೆಸರು ಅರ್ಕಗುಪ್ತಿಪುರ. ಇಲ್ಲಿನ ದೇವಾಲಯಗಳನ್ನು ಪೂಜಿಸುವ ಹಕ್ಕಿನ ಬಗೆ ಗುತ್ತಲಿನ ಬ್ರಾಹ್ಮಣರು ಮತ್ತು ಕೆಂಪರ್ಕಒಡೆಯರ ನಡುವೆ ವಿವಾದವೆದ್ದಿತು. ಈ ಬಗ್ಗೆ ಶಿವಾಜಿನಾಯಕನಿಗೆ ದೂರು ಹೋಯಿತು. ಆತ ಊರಿನ ಅಮಲ್ದಾರ, ಶಾನುಭೋಗ ಹಾಗೂ ಇತರ ಮುಖ್ಯಸ್ಥರನ್ನು ಕರೆಸಿ ಸಮಾಲೋಚಿಸಿದನು. ಕಾದ ತುಪ್ಪದಲ್ಲಿ ಕೈಯಿಡಿಸಿ ವಿವಾದವನ್ನು ಬಗೆಹರಿಸಲು ತೀರ್ಮಾನಿಸಿದರು. ಅದರಂತೆ ಅರ್ಕವೊಡೆಯರು ಮೂರುಬಾರಿ ಕಾದ ತುಪ್ಪದಲ್ಲಿ ಕೈ ಅದ್ದಿದನು. ದೇವಾಲಯದ

ಆಸ್ತಿ ಹಾಗೂ ಪೂಜಿಸುವ ಹಕ್ಕು ಅರ್ಕವೊಡೆಯನಿಗೆ ದಕ್ಕಿತು.

ಸುಮಾರು 15-16ನೆಯ ಶತಮಾನದಲ್ಲಿ ಮದ್ದೂರು ತಾಲ್ಲೂಕು ಹೊಂದಲಕೆರೆಯಲ್ಲಿ ಸಂಕರಬನಾಯಕ ಎಂಬ ಸ್ಥಾನಿಕಪ್ರಭುವಿದ್ದನು. ಈತನ ಅನುಜ್ಞೆಯ ಮೇರೆಗೆ ಹೊಂದಲಕೆರೆಯ ಸಮಸ್ತ ಪ್ರಜೆಗಳು ಸೇರಿ ಏಣ್ಣೆಗಾಣ ಮಾಡಿಸಿದ ಸಂಗತಿ ಮದ್ದೂ. 63ನೆಯ ಶಾಸನದಿಂದ ತಿಳಿದುಬರುತ್ತದೆ.

ಮಾರೆಹಳ್ಳಿಯಲ್ಲಿ ದೊರೆತ ಸು. 15-16ನೇ ಶತಮಾನಕ್ಕೆ ಸೇರಿದ ಮಳ. 70ನೆಯ ಶಾಸನದಲ್ಲಿ ಮಾದಯನಾಯಕನ ಮಗ ಮಹಾಸಾಮಂತಾಧಿಪತಿ ಚಿಕ್ಕಯನಾಯಕನ ಉಲ್ಲೇಖವಿದೆ. ಈತ ಮಾರೆಹಳ್ಳಿಯಲ್ಲಿ ಒಂದು ಸ್ತಂಭವನ್ನು ನಿಲ್ಲಿಸಿದ್ದನು.

ದಬಗಗವುಡಯ್ಯನೆಂಬ ಸಾಮಂತ ತಲಕಾಡುಸೀಮೆಯ ಒಡೆತನವನ್ನು ಪಡೆದಿದ್ದ ಸಂಗತಿ ಕ್ರಿ. ಶ. 1553ರ ಬೇಕವಾಡಿ 95ನೆಯ ಶಾಸನದಿಂದ ತಿಳಿದುಬರುತ್ತದೆ. ಪ್ರಾಯಃ ಬೆಳಕವಾಡಿ ಕೂಡ ತಲಕಾಡುಸೀಮೆಗೆ ಒಳಪಟ್ಟಿತ್ತು. ಬೇಕವಾಡಿಯನ್ನು ದಬಗಗವುಡಯ್ಯನು ಐಯನಮಲ್ಲ ಒಡೆಯ (ಐನಮಲ್ಲಿಕ್) ನಿಂದ ಪಡೆದು ಚಂದ್ರಶೇಖರ ಒಡೆಯರಿಗೆ ಪಲ್ಲಕ್ಕಿಉಂಬಳಿಯಾಗಿ ನೀಡಿದನು. ಉಂಬಳಿ ಪಡೆದ ಚಂದ್ರಶೇಖರ ಒಡೆಯ ಪ್ರಸಿದ್ಧ ಧಾರ್ಮಿಕವ್ಯಕ್ತಿಯಾಗಿದ್ದಂತೆ ತೋರುತ್ತದೆ. ಏಕೆಂದರೆ ದನುಗೂರಿನ ದೊರೆ ಸಂಜರಾಜವೊಡೆಯನು ಚಂದ್ರಶೇಖರ ಒಡೆಯನ ಶಿಷ್ಯನಾಗಿದ್ದನು.*

ಮಳವಳ್ಳಿ ತಾಲ್ಲೂಕಿನ ಕಲ್ಕುಣಿಯಲ್ಲಿ ದೊರೆತ 147ನೆಯ ಶಾಸನದಲ್ಲಿ ಕಲ್ವದ ಸಾವಂತ ಎಂಬ ಸ್ಥಾನಿಕ ಪ್ರಭುವಿನ ಉಲ್ಲೇಖವಿದೆ. ಐಮಣಿಗನೆಂಬವನು ಗೋಗ್ರಹಣದಲ್ಲಿ ಹೋರಾಡಿ ಪ್ರಾಣಾರ್ಪಣೆ ಮಾಡಿದಾಗ ಕಲ್ವದ ಸಾವಂತ ಆತನ ಸ್ಮಾರಕವಾಗಿ ವೀರಗಲ್ಲನ್ನು ನಿಲ್ಲಿಸಿದನು. ಈ ಶಾಸನದ ಕಾಲ ಖಚಿತವಾಗಿಲ್ಲ. ಆದರೆ ಗಂಗರ ಕಾಲದ್ದೆಂದು ಊಹೆಯಿದೆ. ಈ ಊಹೆ ಸರಿಹೋದಿದರೆ ಕಲ್ವದ ಸಾವಂತನನ್ನು ಕುರಿತ ಪ್ರಸ್ತುತ ಶಾಸನವೆ ಉಪಲಬ್ಧ ಸಾಮಂತರಾಜರ ಶಾಸನಗಳಲ್ಲಿ ಪ್ರಾಚೀನವಾಗುತ್ತದೆ.

ಮವ. 122ನೆಯ ಶಾಸನದಿಂದ ಮುದುಗುಂದೂರನ್ನು ಸಿಂಗಾಡಿಅರಸನು ಆಳುತ್ತಿದ್ದನೆಂದು ತಿಳಿದುಬರುತ್ತದೆ ಅಂತೆಯೆ ಪಡಗೆರೆನಾಡು 300ನ್ನು ಕುಂದಸೆಟ್ಟಿ ಅರಸನೆಂಬವನು ಪಾಲಿಸುತ್ತಿದ್ದುದೂ ಸೂಚಿತವಾಗಿದೆ.

ಚಿತ್ರದುರ್ಗ ಜಿಲ್ಲೆಯ ಹರತಿಯಲ್ಲಿ ಸ್ಥಾನಿಕ ಪ್ರಭುವಾಗಿದ್ದ ರಾಯಪ್ಪರಾಜನಿಗೆ ಸಂಬಂಧಿಸಿದ ಕ್ರಿ. ಶ. 1680ರ ತಾಮ್ರಶಾಸನವೊಂದು ಬೆಳ್ಳೂರಿನ ಬ್ರಹ್ಮಸೂರಪ್ಪನವರ ಮನೆಯಲ್ಲಿ ದೊರೆತಿದೆ. ಈ ಶಾಸನದ ವಸ್ತು ಮಂಡ್ಯಜಿಲ್ಲೆಗೆ ಸಂಬಂಧಿಸದಿರುವುದರಿಂದ ಈ ಲೇಖನದಲ್ಲಿ ಪ್ರಸ್ತಾಪಿಸಿಲ್ಲ.

---

* ಎ. ಕ. ಸಂಪುಟ 7 ಮಳ. 98

ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ಮೈಸೂರು ಒಡೆಯರ ಕಾಲದ ಸಾಮಂತರ ಉಲ್ಲೇಖಗಳು ಕಂಡುಬರುತ್ತಿಲ್ಲ. ಆದರೆ ಕಂಠೀರವ ನರಸರಾಜರ ಆಳ್ವಿಕೆಯಲ್ಲಿ ಮಳವಳ್ಳಿ ನಂಜಣ್ಣ, ನಾಗಮಂಗಲ ಮುದ್ದಯ್ಯ, ಮದ್ದೂರು ಹಂಪಯ್ಯ, ಹೊಸಹೊಳಲು ಚನ್ನಯ್ಯ ಮೊದಲಾದವರು ಸಾಮಂತರಾಗಿದ್ದರೆಂದು ಶಾಸನೇತರಮೂಲದಿಂದ ತಿಳಿದುಬರುತ್ತದೆ.[1]

ಇದುವರೆಗಿನ ಸಮೀಕ್ಷೆಯಲ್ಲಿ ಶಾಸನಾಧಾರವಿರುವ ಮತ್ತು ಸಾಮಂತರೆಂಬುದಕ್ಕೆ ಖಚಿತವಾದ ಸೂಚನೆಗಳಿರುವ ಸ್ಥಾನಿಕಪ್ರಭುಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡಿದೆ. ಅನಿರ್ದಿಷ್ಟ ಉಲ್ಲೇಖವಿರುವ ಹಲವಾರು ಸ್ಥಾನಿಕಪ್ರಭುಗಳು ಮಂಡ್ಯ ಜಿಲ್ಲೆಯ ಶಾಸನಗಳಲ್ಲಿ ದೊರೆಯಬಹುದು. ಆದರೆ ಅಂಥ ಶಾಸನಗಳನ್ನು ಇಲ್ಲಿ ಪರಿಗಣಿಸಿಲ್ಲ. ಮಂಡ್ಯಜಿಲ್ಲೆಯ ಹೊಸಹೊಳಲು, ಶಿವನಸಮುದ್ರ, ನಗರಕೆರೆ, ನಾರಾಯಣದುರ್ಗ ಮೊದಲಾದೆಡೆಗಳಲ್ಲಿಯೂ ಪಾಳೆಯಗಾರರು ಇದ್ದರೆಂಬ ಅಭಿಪ್ರಾಯವಿದೆ. ಹೊಸಹೊಳಲಿನಲ್ಲಿ ನರಸನಾಯಕನೆಂಬ ಪಾಳೆಯಗಾರನಿದ್ದ. ಈತ ಆಂಜನೇಯನ ಗುಡಿಯ ಮುಂದೆ ಗರುಡಗಂಬವನ್ನು ನಿಲ್ಲಿಸಲು ಹೋದಾಗ ಹರಳುಗಳು ಕಂಡುಬಂದವು ಇವರಿಂದ ಆ ಊರು ಹೊಸಹೊಳಲು ಎಂಬ ಹೆಸರು ಪಡೆಯಿತೆಂದು ಐತಿಹ್ಯವಿದೆ.[2] ಹೀಗೆಯೇ ನಗರಕೆರೆಯ ಪಾಳೆಯಗಾರನ ಸುತ್ತ ಕೆಲವು ಕಥೆಗಳಿವೆ ನಗರಕೆರೆಯ ಪಾಳೆಯಗಾರ ಮುಗುರ್ತರಾಯ ಶಿವನಸಮುದ್ರ ಪಾಳೆಯಗಾರ ಗಂಗರಾಜನ ಮಗಳನ್ನು ವಿವಾಹವಾಗಿದ್ದನು. ಆಕೆ ಸದಾಕಾಲ ತವರಿನ ಹಿರಿಮೆಯನ್ನು ಹೇಳಿಕೊಳ್ಳುತ್ತ ಅದೇ ಗುಂಗಿನಲ್ಲಿರುತ್ತಿದ್ದಳು. ಇದರಿಂದ ಬೇಸತ್ತ ಮುಗುರ್ತರಾಯ ಮಾವನ ಮೇಲೆ ದಂಡೆತ್ತಿ ಹೋಗಿ, ಆತನನ್ನು ಪರಾಭವಗೊಳಿಸಿ ತನ್ನ ಸಾಮರ್ಥ್ಯವನ್ನು ಮೆರೆದನೆಂಬ ಕಥೆ ಜನಜನಿತವಾಗಿದೆ. ಹೀಗೆ ದಂತಕಥೆಗಳನ್ನು ಆಧರಿಸಿದ ಸ್ಥಾನಿಕ ಪ್ರಭುಗಳನ್ನು ಪ್ರಸ್ತುತ ಸಮೀಕ್ಷೆಯಲ್ಲಿ ಕೈಬಿಟ್ಟಿದೆ.

ಮಂಡ್ಯಜಿಲ್ಲೆಯ ಶಾಸನಗಳ ಅಧ್ಯಯನದಿಂದ ಸುಮಾರು 60 ಕ್ಕೂ ಹೆಚ್ಚು ಸ್ಥಾನಿಕಪ್ರಭುಗಳು ಕಂಡುಬಂದಿದ್ದಾರೆ. ಇಲ್ಲಿ ಬರುವ ಬಹಳಷ್ಟು ಸ್ಥಾನಿಕ ಪ್ರಭುಗಳು ಹೊಯ್ಸಳ ಮತ್ತು ವಿಜಯನಗರದ ಸಾಮ್ರಾಟರಿಗೆ ಸಾಮಂತರಾಗಿದ್ದರೆಂಬುದು ಗಮನಾರ್ಹ. ಚಕ್ರವರ್ತಿಗಳ ಅಧಿಕಾರದ ಮಹಾಪೂರದಲ್ಲಿ ಸ್ಥಾನಿಕ ಪ್ರಭುಗಳ ಸಾಮರ್ಥ್ಯ ನಿಚ್ಚಳವಾಗಿ ಗೋಚರಿಸದಿದ್ದರೂ ಒಂದು ಮಿತಿಯಲ್ಲಿ ಮಾಡಿದ ಇವರ ಸಾಧನೆಗಳು, ತೋರಿದ ಸಾಹಸಗಳು ಮರೆಯುವಂತಿಲ್ಲ. ಇವರು ತಮ್ಮ ಆಶ್ರಯದಾತನ ಒಳಿತಿಗಾಗಿ, ಶ್ರೇಯಸ್ಸಿಗಾಗಿ ಆತನ ಹೆಸರಿನಲ್ಲಿ ಅನೇಕ ಶಾಸನಗಳನ್ನು

1. History of Mysore Vol. 1, Page 1622.
2. ಸಕ್ಕರೆಯ ಸೀಮೆ, ಕೆ. ಅನಂತರಾಮು

ಹಾಕಿಸಿ ಉಂಬಳಿಗಳನ್ನೂ ಬಿಟ್ಟಿದ್ದಾರೆ. ದಂಡನಾಯಕರಾಗಿ, ಪ್ರಧಾನಿಯಾಗಿ, ಸೇನಾನಾಯಕರಾಗಿ ಮೇಲಿನ ರಾಜರ ರಕ್ಷಣಾಬಲವನ್ನು ಸಂಪರ್ಧಿಸಿದ್ದಾರೆ. ಇದರಿಂದ ಅಂದಿನ ಆಡಳಿತದ ಆಗುಹೋಗುಗಳು ಸುಗಮವಾಗಿ ನಡೆಯಲು ಸಾಧ್ಯವಾಯಿತು. ಧಾರ್ಮಿಕವಾಗಿ ಕೂಡ ಸ್ಥಾನಿಕ ಪ್ರಭುಗಳ ಕೊಡುಗೆ ಉಲ್ಲೇಖನೀಯ, ಇವರು ತಾವು ನಂಬಿದ ದೈವಕ್ಕಾಗಿ ಹಲವು ದೇವಾಲಯಗಳನ್ನು ನಿರ್ಮಿಸಿದರು. ಆ ಮೂಲಕ ನಾಡಿನಲ್ಲಿ ವಾಸ್ತುಶಿಲ್ಪಗಳು ರೂಪುಗೊಳ್ಳಲು ಸಹಾಯವಾಯಿತು. ದೇವಾಲಯಗಳಲ್ಲಿನ ಪೂಜೆ ಹಾಗೂ ಜೀರ್ಣೋದ್ಧಾರಕ್ಕೆಂದು ದತ್ತಿಗಳನ್ನು ಬಿಟ್ಟು ಅವುಗಳ ದಕ್ಷಣೆಯ ನಿಟ್ಟಿನಲ್ಲಿಯೂ ಕ್ರಮಗಳನ್ನು ಕೈಗೊಂಡಿದ್ದರು. ಸಾಮಾಜಿಕವಾಗಿ ವಿದ್ವಾಂಸರನ್ನು ಪ್ರೋತ್ಸಾಹಿಸಿ, ಗೌರವಿಸಿ ದತ್ತಿಗಳನ್ನು ನೀಡಿದ್ದರು. ಕೆರೆ ಕಾಲುವೆಗಳನ್ನು ತೋಡಿಸಿ ನೀರಾವರಿಗೆ ಅನುವುಮಾಡಿಕೊಟ್ಟಿದ್ದರು. ಇಂಥ ಹಲವು ಲೋಕೋಪಕಾರಗಳನ್ನು ಮಾಡಿದ್ದರು. ಸ್ಥಾನಿಕ ಪ್ರಭುಗಳು ಗೋಗ್ರಹಣ ಮತ್ತು ಮಾನಿನಿಯರ ಮಾನರಕ್ಷಣೆಯಲ್ಲಿ ಹೋರಾಡಿ ತಮ್ಮ ಪ್ರಾಣಾರ್ಪಣೆಮಾಡಿದ ನಿದರ್ಶನಗಳೂ ಉಂಟು. ಒಟ್ಟಿನಲ್ಲಿ ಪ್ರಜೆಗಳಿಗೆ ನೆಮ್ಮದಿಯ ಜೀವನ ನೀಡುವಲ್ಲಿ ಸ್ಥಳೀಯ ಪ್ರಭುಗಳ ಪಾತ್ರ ಮಹತ್ತರವೆಂಬುದರಲ್ಲಿ ಸಂಶಯವಿಲ್ಲ.

ವೈ. ಸಿ. ಭಾನುಮತಿ

ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರ ಆಡಳಿತದಲ್ಲಿ ಮಂಡ್ಯ ಜಿಲ್ಲೆ

ಹದಿನೆಂಟನೆಯ ಶತಮಾನದ ಉತ್ತರಾರ್ಧದಲ್ಲಿ ದಕ್ಷಿಣ ಭಾರತದ ಚರಿತ್ರೆಯಲ್ಲಿ ಪ್ರಭಾವಶಾಲಿಗಳೂ, ಕಾಂತಿಯುಕ್ತರೂ, ವೀರೋಚಿತ ವ್ಯಕ್ತಿತ್ವದಿಂದ ಪ್ರಸಿದ್ಧರಾದವರೂ ಎಂದರೆ ಹೈದರ್ ಅಲಿ (1761–1782) ಮತ್ತು ಆತನ ಮಗ ಟಿಪ್ಪು ಸುಲ್ತಾನ (1782–1799) ಇವರಿಬ್ಬರೇ. ಈ ದೊರೆಗಳು ಸುಮಾರು ಮೂವತ್ತೊಂಬತ್ತು ವರ್ಷಗಳ ಕಾಲ ರಾಜ್ಯಭಾರ ಮಾಡಿ ದೇಶಾಭ್ಯುದಯವನ್ನೇ ತಮ್ಮ ಪರಮಧ್ಯೇಯವಾಗಿಟ್ಟುಕೊಂಡು ಅಮರರಾಗಿದ್ದಾರೆ.

ಮೈಸೂರು ಸಂಸ್ಥಾನದ ಪ್ರಖ್ಯಾತ ಸುಲ್ತಾನನಾದ ಹೈದರ್ ಅಲಿ ಕ್ರಿ.ಶ. 1721 ರಲ್ಲಿ ಕೋಲಾರ ಜಿಲ್ಲೆಯ ಬೂದಿಕೋಟೆಯಲ್ಲಿ ಹುಟ್ಟಿದನು. ಇವನ ತಂದೆ ಫತೆ ಮಹಮ್ಮದನು ಶಿರಾದ ನವಾಬನ ಸೇವೆಯಲ್ಲಿದ್ದನು. ಹೈದರ್ ಅಲಿ ಶಾಲೆಗೆ ಹೋಗದೆ ಜೀವನವಿಡೀ ನಿರಕ್ಷರಸ್ಥನಾಗಿ ಉಳಿದ. ಟಿಪ್ಪು ಸುಲ್ತಾನ ಹೈದರ್ ಅಲಿಯ ಮಗ. ಇವನು ಕ್ರಿ.ಶ. 1750 ರ ನವೆಂಬರ್ 10 ರಂದು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದನು. ಇವನು ಬಾಲ್ಯದಿಂದಲೇ ಉತ್ತಮ ವಿದ್ಯಾಭ್ಯಾಸವನ್ನು ಪಡೆದು ತನ್ನ ಕಾಲದ ವಿವಿಧ ರೀತಿಯ ಕಲೆಗಳಲ್ಲಿ ಪಾಂಡಿತ್ಯದಲ್ಲಿ ಪರಿಶ್ರಮ ಸಾಧಿಸಿದ್ದನು ಬಹು ಚಿಕ್ಕವನಿದ್ದಾಗಲೇ ತಂದೆಯ ಜೊತೆ ಮಲಬಾರಿನ ಯುದ್ಧ, ಮೊದಲನೆಯ ಮತ್ತು ಎರಡನೆಯ ಮೈಸೂರು ಯುದ್ಧ, ಮೈಸೂರು ಮರಾಠ ಯುದ್ಧ ಮುಂತಾದ ಯುದ್ಧಗಳಲ್ಲಿ ಭಾಗವಹಿಸಿದ್ದನು. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ಆಗ ಇವರ ರಾಜಧಾನಿಯಾಗಿದ್ದಿತು.

ಮೈಸೂರು ಅರಸ ಚಿಕ್ಕದೇವರಾಜನ ಆಳ್ವಿಕೆಯ ನಂತರ ಕಾಲಕ್ರಮದಲ್ಲಿ ಒಡೆಯರ್ ಸಂತತಿಯ ಅಧಿಕಾರವು ಕ್ಷೀಣಿಸಿ ಆಡಳಿತವು ದಳವಾಯಿಗಳ ಕೈವಶವಾಯಿತು. ದಳವಾಯಿ ನಂಜರಾಜಯ್ಯನ ಕೊನೆಗಾಲದಲ್ಲಿ ಹೈದರ್ ಅಲಿ ಪ್ರಾಬಲ್ಯಕ್ಕೆ ಬಂದನು. ಇವನು ಅನೇಕ ಪಾಳೇಗಾರರನ್ನೂ, ನೆರೆಯ ರಾಜರನ್ನೂ ಸೋಲಿಸಿ ಶ್ರೀರಂಗಪಟ್ಟಣವನ್ನು ಆಕ್ರಮಿಸಲು ಯತ್ನಿಸಿದ ಮರಾಠರನ್ನೂ ಸೋಲಿಸಿ ಓಡಿಸಿದನು. ಇವನು ದಳವಾಯಿಗಳಿಂದ ಸರ್ಕಾರದ ಆಡಳಿತ ಸೂತ್ರವನ್ನು ವಹಿಸಿಕೊಂಡ ಮೇಲೆ ಮೊದಲ ಬಾರಿಗೆ ಮೈಸೂರು ಮುಸ್ಲಿಮರ ಆಡಳಿತಕ್ಕೆ

ಒಳಪಟ್ಟರೂ ಆಗ ಸಿಂಹಾಸನವನ್ನು ಅಲಂಕರಿಸಿದ್ದ ಹಿಂದೂ ರಾಜನಿಗೆ ಗೌರದ ಕಾಣಿಕೆ ಸಲ್ಲಿಸುವ ಸಂಪ್ರದಾಯವನ್ನು ಅನುಸರಿಸುತ್ತ ಬಂದನು. ಹೈದರ್ ಅಲಿಯು ಮಂಗಳೂರು, ಹೊನ್ನಾವರ, ಧಾರವಾಡ ಮತ್ತು ಗೋವಾದವರೆಗೆ ರಾಜ್ಯವನ್ನು ವಿಸ್ತರಿಸಿದುದಲ್ಲದೆ ತಮಿಳುನಾಡಿನ ಹಲವು ಭಾಗಗಳನ್ನು ಗೆದ್ದುಕೊಂಡನು. ಬ್ರಿಟೀಷರ ಪಡೆಗಳನ್ನು ಸೋಲಿಸಿ ಇತಿಹಾಸ ಪ್ರಸಿದ್ಧ ಮಂಗಳೂರು ಒಪ್ಪಂದವನ್ನು ಮಾಡಿಕೊಂಡನು. ಇವನು ಶಿರಾ, ಹೊಸಕೋಟೆ, ದೊಡ್ಡಬಳ್ಳಾಪುರ, ಚಿಕ್ಕ ಬಳ್ಳಾಪುರ, ಪೆನುಗೊಂಡೆ, ಮಡಕಶಿರಾ, ನಂದಿದುರ್ಗ, ಹರಪನಹಳ್ಳಿ, ಗುತ್ತಿ, ನರಗುಂದ, ಕೊಡಗು, ಮಲಬಾರು ಮುಂತಾದ ಸ್ಥಳಗಳನ್ನು ಗೆದ್ದುಕೊಂಡನು. ಪ್ರಾಕೃತಿಕ ಸಂಪನ್ಮೂಲಗಳಲ್ಲಿ ಸಮೃದ್ಧವಾಗಿದ್ದ ಮತ್ತು ಪಶ್ಚಿಮ ತೀರದವರೆಗೂ ಹಬ್ಬಿದ್ದ ವಿಸ್ತಾರ ಪ್ರದೇಶವನ್ನು ಹೊಂದಿದ್ದಂಥ ಬಿದನೂರನ್ನು ಗೆದ್ದಿದ್ದು ಈ ಕಾಲದ ಇವನು ಗಳಿಸಿದ ವಿಜಯಗಳಲ್ಲೆಲ್ಲ ಅತಿ ಮುಖ್ಯವಾದದ್ದು. ಇಲ್ಲಿ ಹೈದರ್ ಅಲಿಗೆ ಅಪಾರ ಐಶ್ವರ್ಯ ಸಿಕ್ಕಿತು. ಇವನು ಇಂಗ್ಲೀಷರ ಮೇಲಿನ ಮದರಾಸು ಯುದ್ಧದಲ್ಲಿ ಜಯಗಳಿಸಿದ. ಇವರಿಬ್ಬರ ನಡುವೆ ಇತಿಹಾಸ ಪ್ರಸಿದ್ಧ ಮದರಾಸು ಒಪ್ಪಂದವಾಯಿತು. ಇದು ಭಾರತೀಯ ರಾಜನೊಬ್ಬ ಇಂಗ್ಲೀಷರ ಮೇಲೆ ಸಾಧಿಸಿದ ಮೊದಲ ವಿಜಯವಾಗಿತ್ತು.

ಈತ ನಾಣ್ಯಗಳ ವಿಷಯದಲ್ಲಿ ಹೆಚ್ಚು ಆಸಕ್ತಿ ತೋರಿಸಿದನೆಂದು ಹೇಳಲು ಆಗುವುದಿಲ್ಲ. ಇವನು ತನ್ನ ನಾಣ್ಯಗಳಲ್ಲಿ ಹೊಸ ಬದಲಾವಣೆಗಳನ್ನು ವಿಶೇಷವಾಗಿ ಮಾಡದೆ ವಿಜಯನಗರ ಮತ್ತು ಮೊಗಲ್ ರೀತಿಯ ನಾಣ್ಯದ ಪರಂಪರೆ ಯನ್ನೇ ಕೆಲವು ಸಣ್ಣ ಪುಟ್ಟ ಬದಲಾವಣೆಗಳೊಂದಿಗೆ ಮುಂದುವರೆಸಿದ. ಇವನು ಬಹಾದುರಿ ಹಣ, ದೊಡ್ಡ ತಲೆ ಬೆಂಗಳೂರಿ ಹಣ, ಪಗೋಡ, ಪಣಂ ಮುಂತಾದ ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದ್ದಾನೆ. ಇವನ ತಾಮ್ರದ ನಾಣ್ಯಗಳು ವಿಶೇಷವಾಗಿ ನಮಗೆ ದೊರೆತಿವೆ. ಇವು ವಿಶೇಷವಾಗಿ ಶ್ರೀರಂಗಪಟ್ಟಣ ಮತ್ತು ಬಳ್ಳಾರಿಗಳಲ್ಲಿ ಅಚ್ಚಾದುವು[1]. ಇವನು ಬೆಳ್ಳಿಯ ನಾಣ್ಯಗಳನ್ನು ಅಚ್ಚುಹಾಕಿಸಿದನೇ ಇಲ್ಲವೇ ಎಂಬುದು ಖಚಿತವಾಗಿ ತಿಳಿದು ಬಂದಿಲ್ಲ.

ಹೈದರ್ ಅಲಿ ಇತಿಹಾಸದ ಗಮನಾರ್ಹ ವ್ಯಕ್ತಿಗಳಲ್ಲೊಬ್ಬ. ಇವನ ದೂರದೃಷ್ಟಿ, ಚಾಣಾಕ್ಷತನ, ಧೈರ್ಯ ಮತ್ತು ಸೈನ್ಯ ಸಂಘಟನಾ ಸಾಮರ್ಥ್ಯಗಳು ದಕ್ಷಿಣ ಭಾರತದಲ್ಲಿ ವಿದೇಶಿಯರು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳದಂತೆ ಮಾಡಿದ್ದವು. ಇವನು ಆಡಳಿತದಲ್ಲಿ ನ್ಯಾಯಪರನೂ, ಉದಾರಿಯೂ, ಸಹನಾಮಯಿಯೂ ಆಗಿದ್ದನು. ಇವನ ಸಮರ್ಥ ಆಳ್ವಿಕೆಯಲ್ಲಿ ಇಡೀ ಕರ್ನಾಟಕ ಒಗ್ಗೂಡಿ ದಕ್ಷ ಮತ್ತು ದೃಢ ಸರ್ಕಾರ ಪಡೆದಿತ್ತು.

ಕ್ರಿ.ಶ. 1782 ರಲ್ಲಿ ಎರಡನೆಯ ಮೈಸೂರು ಯುದ್ಧವು ನಡೆಯುತ್ತಿದ್ದಾಗಲೇ

ಹೈದರ್ ಅಲಿಯು ಮರಣ ಹೊಂದಿದ್ದರಿಂದ ಅವನ ಮಗ ಟಿಪ್ಪು ಸುಲ್ತಾನನು ಈ ಯುದ್ಧವನ್ನು ಮುಂದುವರೆಸಿ ಕ್ರಿ.ಶ. 1784 ರಲ್ಲಿ ಯಶಸ್ವಿಯಾಗಿ ಕೊನೆಗೊಳಿಸಿದ. ಉತ್ತರದಲ್ಲಿ ಕೃಷ್ಣಾನದಿಯಿಂದ ದಕ್ಷಿಣದ ದಿಂಡಿಗಲ್ಲಿನವರೆಗೂ ಮತ್ತು ಪಶ್ಚಿಮದಲ್ಲಿ ಮಲಬಾರಿನಿಂದ ಪೂರ್ವ ಘಟ್ಟಪ್ರದೇಶಗಳವರೆಗೂ ವಿಸ್ತಾರವಾಗಿದ್ದು ಒಂದು ಲಕ್ಷ ಚದರ ಮೈಲಿಗಳಿಗೂ ಹೆಚ್ಚು ವಿಸ್ತೀರ್ಣವನ್ನು ಪಡೆದಿದ್ದ ಸಾಮ್ರಾಜ್ಯಕ್ಕೆ ಇವನು ಉತ್ತರಾಧಿಕಾರಿಯಾದನು. ಟಿಪ್ಪು ಸುಲ್ತಾನನು ಅಧಿಕಾರಕ್ಕೆ ಬಂದಾಗ ಅವನ ಮನೋಭಾವವು ಹೈದರ್ ಅಲಿಯ ಭಾವನೆಗಿಂತ ಭಿನ್ನವಾಗಿತ್ತು. ಆತನು ಈ ರಾಜ್ಯಕ್ಕೆ ಸರ್ವಾಧಿಕಾರಿಯಾದರೂ ಇದರ ಒಡೆತನ ಹಿಂದೂ ರಾಜರದು ಎಂಬುದನ್ನು ಮನಗಾಣಲಿಲ್ಲ. ಇದು ತನಗೆ ದೈವದತ್ತವಾಗಿ ಬಂದ ಅಧಿಕಾರ ಎಂದು ಭಾವಿಸಿದ. ಮೈಸೂರು ತಾಲ್ಲೂಕಿನ ಆನಂದೂರಿನಲ್ಲಿ ದೊರೆತ ಶಾಸನ ಮೈಸೂರು ರಾಜ್ಯವನ್ನು 'ಸರ್ಕಾರೆ ಖುದಾದಾದ್' ಅಂದರೆ "ದೈವದತ್ತವಾದ ರಾಜ್ಯ" ಎಂದು ವರ್ಣಿಸಿದೆ[2]. ದೇವರೇ ತನ್ನನ್ನು ಈ ರಾಜ್ಯಕ್ಕೆ ಬಾದಶಹನನ್ನಾಗಿ ನೇಮಿಸಿದ್ದಾನೆ ಎಂಬುದು ಈ ಮನೋಭಾವಕ್ಕೆ ಕಾರಣವಾಗಿತ್ತೆಂಬುದು ಈ ಶಾಸನದಿಂದ ಸ್ಪಷ್ಟವಾಗುವುದು. ಇವನ ಕಾಲದಲ್ಲಿ ಇತಿಹಾಸ ಪ್ರಸಿದ್ಧವಾದ ಮೂರು ಮತ್ತು ನಾಲ್ಕನೆಯ ಮೈಸೂರು ಯುದ್ಧಗಳು ನಡೆದುವು. ಕ್ರಿ.ಶ. 1799 ರಲ್ಲಿ ಲಾರ್ಡ್ ವೆಲ್ಲಸ್ಲಿಯು ಟಿಪ್ಪು ಸುಲ್ತಾನನ ವಿರೋಧವನ್ನಡಗಿಸಲು ನಿರ್ಧರಿಸಿ ಮಂಡ್ಯ ಜಿಲ್ಲೆಯ ಮಳವಳ್ಳಿ, ಅರಕೆರೆ ಮತ್ತು ಇತರ ಕಡೆಗಳಲ್ಲಿ ಟಿಪ್ಪು ಸುಲ್ತಾನನ ಸೈನ್ಯವನ್ನುಸೋಲಿಸಿ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದನು. ಆಗ ನಡೆದ ಭೀಕರ ಹೋರಾಟದಲ್ಲಿ ಟಿಪ್ಪು ಸುಲ್ತಾನನು ವೀರಾವೇಶದಿಂದ ಹೋರಾಡುತ್ತಾ ರಣರಂಗದಲ್ಲಿ ಮಡಿದನು. ನಂತರ ರಾಜ್ಯದ ಹೆಚ್ಚು ಭಾಗವನ್ನು ಬ್ರಿಟೀಷರು ತಾವೇ ವಹಿಸಿಕೊಂಡು ಹಿಂದಿನ ಮೈಸೂರು ರಾಜ್ಯವನ್ನು ಒಡೆಯರ್ ಸಂತತಿಗೆ ಕೊಟ್ಟು ಶ್ರೀರಂಗಪಟ್ಟಣದಿಂದ ರಾಜಧಾನಿಯನ್ನು ಮೈಸೂರಿಗೆ ವರ್ಗಾಯಿಸಿದರು. ನೂರಾರು ವರ್ಷಗಳ ಕಾಲ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣವು ಕ್ರಮೇಣ ತನ್ನ ರಾಜಕೀಯ ಮಹತ್ವವನ್ನು ಕಳೆದುಕೊಂಡಿತು. ದಕ್ಷಿಣ ಭಾರತದ ರಾಜಕೀಯ ಶಕ್ತಿಯುತ ಕೇಂದ್ರವಾಗಿದ್ದ ಇದು ಈಗ ಪ್ರೇಕ್ಷಣೀಯ ಸ್ಥಳವಾಗಿ ಉಳಿದಿದೆ.

ಅಲ್ಪಕಾಲವಾದರೂ ಬಿರುಗಾಳಿಯೋಪಾದಿಯಲ್ಲಿದ್ದ ಟಿಪ್ಪು ಸುಲ್ತಾನನ ಆಳ್ವಿಕೆ ಕರ್ನಾಟಕ ಹಾಗೂ ಭಾರತದ ಇತಿಹಾಸದ ಪ್ರಮುಖ ಅಧ್ಯಾಯ. ಭಾರತದಲ್ಲಿ ಬ್ರಿಟೀಷರ ವಿರುದ್ಧ ಪ್ರಬಲವ್ಯವಸ್ಥಿತ ಹೋರಾಟ ನಡೆಸಿದ್ದವರಲ್ಲಿ ಟಿಪ್ಪು ಸುಲ್ತಾನನು ಮೊದಲಿಗ. ಇಂಗ್ಲೀಷರನ್ನು ಭಾರತದಿಂದ ಓಡಿಸುವುದನ್ನೇ ತನ್ನ ಜೀವನದ ಪರಮ ಆಕಾಂಕ್ಷೆಯನ್ನಾಗಿ ಮಾಡಿಕೊಂಡಿದ್ದನು. ಅದಕ್ಕಾಗಿ ಅವನು ತನ್ನ ಎಲ್ಲ ಐಶ್ವರ್ಯ, ಶಕ್ತಿ, ಕೊನೆಗೆ ತನ್ನ ಜೀವವನ್ನೇ ಪಣವಾಗಿ ಇರಿಸಿದ.

ಕರ್ನಾಟಕವನ್ನು ಸಮೃದ್ಧವಾದ ರಾಜ್ಯವಾಗಿ ಮಾಡಲು ಅವಿಶ್ರಾಂತವಾಗಿ ಶ್ರಮಿಸಿದನು. ವಾಣಿಜ್ಯ ಕ್ಷೇತ್ರದಲ್ಲಿ ಅನೇಕ ಆಶ್ಚರ್ಯಕರವಾದ ಪ್ರಯೋಗಗಳನ್ನು ಇವನು ಮಾಡಿದನು. ವಿಶೇಷವಾದ ಹಾಗೂ ಪ್ರತ್ಯೇಕವಾದ ವಾಣಿಜ್ಯ ಇಲಾಖೆಯನ್ನು ಏರ್ಪಡಿಸಿದ್ದನು ದೇಶದ ದೂರ ದೂರದ ಪ್ರದೇಶಗಳಲ್ಲೂ ಹಾಗೂ ಪರದೇಶಗಳಲ್ಲೂ ವ್ಯಾಪಾರದ ಕೋಠಿಗಳನ್ನು ಸ್ಥಾಪಿಸಿದ್ದನು. ಕೋವಿ, ಕಾಗದ ಮುಂತಾದ ಅನೇಕ ಪದಾರ್ಥಗಳನ್ನು ತಯಾರಿಸುವ ಸಲುವಾಗಿ ವಿದೇಶಗಳಿಂದ ತಜ್ಞರನ್ನು ಕರೆಸಿಕೊಂಡಿದ್ದನು. ಹಣಕಾಸು ಬ್ಯಾಂಕಿಂಗ್, ತೂಕ, ಅಳತೆ, ಕಂದಾಯ, ನ್ಯಾಯಾಡಳಿತ, ಸೈನ್ಯ, ನೌಕಾದಳ ಮುಂತಾದ ಆಡಳಿತ ರೀತಿ ನೀತಿಗಳ ಬಗ್ಗೆ ನಡೆಸಿದ ಸುಧಾರಣೆಗಳು ಇತಿಹಾಸದಲ್ಲಿ ಇವನಿಗೆ ಗಣ್ಯಸ್ಥಾನವನ್ನು ಗಳಿಸಿ ಕೊಟ್ಟಿವೆ. ಇವನು ಒಳ್ಳೆಯ ನೌಕಾಪಡೆಯನ್ನು, ವ್ಯಾಪಾರದ ಹಡಗುಗಳ ಪಡೆಯನ್ನು ಕಟ್ಟಿದನು. ನೌಕಾಧಿಕಾರಿಗಳಿಗೆ ಶಿಕ್ಷಣ ನೀಡಲು ನೌಕಾಶಾಲೆಯೊಂದಿತ್ತು. ಸಮರ್ಥವಾದ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಿದ ಟಿಪ್ಪು ಸುಲ್ತಾನನು ಪಾಶ್ಚಿಮಾತ್ಯ ತತ್ತ್ವಗಳನ್ನು ಸಂಸ್ಥಾನಗಳ ಆಡಳಿತದಲ್ಲಿ ಅಳವಡಿಸಿದವರಲ್ಲಿ ಮೊದಲಿಗನೆಂದು ಹೇಳಬಹುದು. ಉಳುವವರಿಗೆ ಭೂ ಒಡೆತನ ಎಂಬ ತತ್ತ್ವದ ಆಧಾರದ ಮೇಲೆ ರಚಿಸಲ್ಪಟ್ಟ ಕಂದಾಯ ವ್ಯವಸ್ಥೆಯ ಮೂಲಕವು, ಬಂಜರು ಭೂಮಿಯನ್ನು ಕೆಲವು ವರ್ಷಗಳ ಕಾಲ ತೆರಿಗೆ ರಹಿತ ಗುತ್ತಿಗೆ ಕೊಡುವ ಕ್ರಮದಿಂದಲೂ, ತೆರಿಗೆ ವಸೂಲಿ ಮಾಡುವ ಕ್ರಮದಲ್ಲಿ ಮಧ್ಯವರ್ತಿಗಳನ್ನು ತೆಗೆದುಹಾಕಿ ಅವರ ಸ್ಥಾನದಲ್ಲಿ ಕಂದಾಯ ಅಧಿಕಾರಿಗಳನ್ನು ನೇಮಿಸುವುದರ ಮೂಲಕವು, ಜಹಗಿರಿ ಪದ್ಧತಿಯನ್ನು ರದ್ದು ಮಾಡಿ ಅದಕ್ಕೆ ಬದಲಾಗಿ ಅಧಿಕಾರಿಗಳಿಗೆ ಸಂಬಳವನ್ನು ನಿಗದಿಮಾಡುವುದರ ಮೂಲಕವು ಟಿಪ್ಪು ಸುಲ್ತಾನನು ಕೃಷಿಯ ಸರ್ವತೋಮುಖವಾದ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದನು. ನ್ಯಾಯವನ್ನು ವಿಶಿಷ್ಟ ರೀತಿಯಲ್ಲಿ ನಡೆಯುವಂತೆ ಬೇಕಾದ ಏರ್ಪಾಡುಗಳನ್ನು ಮಾಡಿದ್ದನು.

ಕಲಾತ್ಮಕವೂ ವೈವಿಧ್ಯಪೂರ್ಣವೂ ಆದ ಅನೇಕ ನಮೂನೆಯ ನಾಣ್ಯಗಳು ಹಾಗೂ ಪಂಚಾಂಗದ ಸುಧಾರಣೆ ಇವನ ಇತರ ಕೊಡುಗೆಗಳು. ಇವನ ಕಾಲದಲ್ಲಿ ಕೊನೆಯ ಪಕ್ಷ ಹದಿನೈದು ವಿವಿಧ ಸ್ಥಳಗಳಲ್ಲಿ ಟಂಕಸಾಲೆಗಳಿದ್ದವು. ಇವುಗಳಲ್ಲಿ ಒಂದು ಶ್ರೀರಂಗಪಟ್ಟಣದಲ್ಲಿತ್ತು.[3] ನಾಣ್ಯಗಳ ಮೇಲೆ ಕಾಲವನ್ನು ನಮೂದಿಸುವ ವಿಷಯದಲ್ಲಿಯೂ ಟಿಪ್ಪು ಸುಲ್ತಾನನು ಅನೇಕ ಬದಲಾವಣೆಗಳನ್ನು ಮಾಡಿದನು. ತನ್ನ ಆಳ್ವಿಕೆಯ ಮೊದಲ ನಾಲ್ಕು ವರ್ಷಗಳು ನಾಣ್ಯಗಳ ಮೇಲೆ "ಹಿಜರಿ" ಕಾಲವನ್ನು ಅಚ್ಚುಹಾಕಿಸಿದನು, ಐದನೆಯ ವರ್ಷದಿಂದ ತನ್ನ ಆಳ್ವಿಕೆಯ ಕೊನೆಯವರೆಗೂ 'ಮೌಲೂದೀ' ಕಾಲ ಮಾನವನ್ನು ಅಚ್ಚು ಹಾಕಿಸಿದನು. ಇದರಲ್ಲಿ ಸಂಖ್ಯೆಗಳು ಬಲದಿಂದ ಎಡದ ಕಡೆಗೆ ಬರೆಯಲ್ಪಡುತ್ತವೆ. ನಾಣ್ಯಗಳ ಮೇಲೆ ವರ್ಷಗಳನ್ನು ಸೂಚಿಸುವಾಗ ಮೊದಲು 'ಅಬ್ಜದ್' ಎಂಬ ಪ್ರಕಾರವನ್ನು ಅನಂತರ 'ಅಬ್ತತ್' ಎಂಬ ಪ್ರಕಾರವನ್ನು ಅನುಸರಿಸಿದ.

ಇವೆರಡರಲ್ಲಿಯೂ ಅರಬ್ಬೀ ಅಕ್ಷರಗಳಿಗೆ ಕೆಲವು ಸಂಖ್ಯಾ ಮೌಲ್ಯಗಳನ್ನು ಕೊಡುವ ಕ್ರಮವಿದೆ. ಇವನು ಚಿನ್ನದ ನಾಣ್ಯಗಳ ಜೊತೆಗೆ ಬೆಳ್ಳಿಯ ಹಾಗೂ ತಾಮ್ರದ ನಾಣ್ಯಗಳನ್ನೂ ಅಚ್ಚು ಹಾಕಿಸಿದ್ದಾನೆ.

ಟಿಪ್ಪು ಸುಲ್ತಾನನ ಕಾಲದ ವಾಸ್ತುಕೃತಿಗಳನ್ನು ಸ್ಥೂಲವಾಗಿ ಎರಡು ಬಗೆಯಾಗಿ ವಿಂಗಡಿಸಬಹುದು. ರಕ್ಷಣಾದೃಷ್ಟಿಯಿಂದ ರಾಜ್ಯದ ನಾನಾ ಭಾಗಗಳಲ್ಲಿ ಕಟ್ಟಿಸಿರುವ ಕೋಟೆ ಕೊತ್ತಲುಗಳು, ಮದ್ದಿನ ಮನೆಗಳು ಭದ್ರವಾದ ನೆಲಮಾಳಿಗೆಯ ಕಾರಾಗೃಹಗಳು ಒಂದು ಬಗೆಯಾದರೆ ಅರಮನೆಗಳು, ಮಸೀದಿಗಳು ಮತ್ತು ಸಮಾಧಿಗಳು ಇನ್ನೊಂದು ಬಗೆಯವು. ಅವುಗಳಲ್ಲಿ ಶ್ರೀರಂಗಪಟ್ಟಣದಲ್ಲಿರುವ ಟಿಪ್ಪು ಸುಲ್ತಾನನ ಅರಮನೆ ದರಿಯಾ ದೌಲತ್, ಹೈದರ್ ಅಲಿಯ ಸಮಾಧಿ (ಗುಂಬಸ್), ಜುಮ್ಮಾ ಮಸೀದಿ, ನೆಲ ಮಾಳಿಗೆಗಳು, ಮದ್ದಿನ ಮನೆಗಳು ಮುಖ್ಯವಾದವು. ಕರ್ನಾಟಕದ ದಕ್ಷಿಣ ಭಾಗದಲ್ಲಿರುವ ಮುಸ್ಲಿಂ ರೀತಿಯ ಕೆಲವೇ ಕಟ್ಟಡಗಳಲ್ಲಿ ಟಿಪ್ಪು ಸುಲ್ತಾನನು ಕಟ್ಟಿಸಿದ ಈ ಮೇಲಿನ ಕಟ್ಟಡಗಳು ಅತ್ಯಂತ ಪ್ರಾಮುಖ್ಯತೆಯನ್ನು ಪಡೆದಿವೆ.

ಮಂಡ್ಯ ಜಿಲ್ಲೆಯಲ್ಲಿ ನಮಗೆ ದೊರೆತಿರುವ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರ ಶಾಸನಗಳು[4] ಅವರ ರಾಜಕೀಯ ಕೊಡುಗೆಯ ಮೇಲೆ ಇನ್ನಷ್ಟು ಬೆಳಕು ಚೆಲ್ಲುತ್ತವೆ. ಈ ಶಾಸನಗಳು ಪರ್ಶಿಯನ್ ಮತ್ತು ಅರೇಬಿಕ್ ಭಾಷೆಯಲ್ಲಿವೆ. ಇವಲ್ಲದೆ ಕನ್ನಡ ಭಾಷೆಯ ಶಾಸನಗಳೂ ಇವೆ. ಅವುಗಳಲ್ಲಿ ಕೆಲವು ಶಾಸನಗಳಲ್ಲಿ ಈ ದೊರೆಗಳು ಬ್ರಾಹ್ಮಣರಿಗೂ, ದೇವಸ್ಥಾನಗಳಿಗೂ, ಮುಸಲ್ಮಾನರಿಗೂ ಅವರ ಸ್ಮಶಾನ ಭೂಮಿಗಳಿಗೂ ದತ್ತಿ ಕೊಟ್ಟಿರುವ ಪ್ರಸ್ತಾಪಗಳಿವೆ. ಇನ್ನು ಕೆಲವು ಶಾಸನಗಳಲ್ಲಿ ಕೋಟೆಗಳನ್ನು, ಮಸೀದಿಗಳನ್ನು ಮತ್ತು ಗೋರಿಗಳನ್ನು ಕಟ್ಟಿಸಿರುವ ಪ್ರಸ್ತಾಪಗಳಿವೆ. ಉಳಿದ ಶಾಸನಗಳಲ್ಲಿ ರಾಜ್ಯಾಡಳಿತ ವಿಷಯ, ದೇವರು (ಅಲ್ಲಾಹ್) ಮತ್ತು ಪ್ರವಾದಿಯ (ಮೊಹಮ್ಮದ್ ಪೈಗಂಬರ್) ಹೆಸರುಗಳು, ಟಿಪ್ಪು ಸುಲ್ತಾನ, ಆತನ ಮಗ, ದಂಡನಾಯಕ ಮುಂತಾದ ಪ್ರಮುಖ ವ್ಯಕ್ತಿಗಳ ವರ್ಣನೆಯ ಪ್ರಸ್ತಾಪಗಳಿವೆ.

ಇಮ್ಮಡಿ ಕೃಷ್ಣರಾಜ ಒಡೆಯನ ಕಾಲದ, ಚಟ್ಟಂಗೆರೆ ಗ್ರಾಮಕ್ಕೆ ಸೇರಿರುವ, ಕ್ರಿ.ಶ. 1759 ರ ಮೂರು ಶಾಸನಗಳಲ್ಲಿ ಅರಸನು ಹೈದರ್ ಅಲಿ ಬಹದೂರನಿಗೆ ಚಟ್ಟಂಗೆರೆ ಗ್ರಾಮವನ್ನು ಕೊಟ್ಟನೆಂದು ಹೇಳಿದೆ.[5] ತೊಣ್ಣೂರಿನ ನಿಲಮುಸೂದಖಾದರಿ ದರಗಾದಲ್ಲಿ ನಡೆಸುವ ದರಿದ್ರರ ಧರ್ಮಕ್ಕೆ—ಅಂದರೆ ಅವರ ಆಹಾರದಾನಕ್ಕೆ—ಈ ಗ್ರಾಮವನ್ನು ದಾನಮಾಡಲಾಯಿತೆಂದು ಮೊದಲನೆಯ ಶಾಸನದಲ್ಲಿ ಹೇಳಿದೆ. ಎರಡನೆಯ ಶಾಸನದಲ್ಲಿ ಗ್ರಾಮದ ಹುಟ್ಟುವಳಿಯ ಜೊತೆಗೆ ಅಡಕೆ ತೋಟದ ಹುಟ್ಟುವಳಿಯನ್ನು ದಾನಮಾಡಲಾಯಿತೆಂದಿದೆ, ಈ ತೋಟವನ್ನು ಹೈದರ್ ಅಲಿಯು 4300 ವರಹಗಳಿಗೆ ಕೊಂಡು ದಾನಮಾಡಿದನು. ಮೂರನೆಯ ಶಾಸನದಲ್ಲಿ ಫಕೀರರ ಪ್ರಸ್ತಾಪ ಇದೆ. ಬಹುಶಃ ಅವರಿಗೂ ಇಂತಹ ವ್ಯವಸ್ಥೆಯನ್ನು ಮಾಡಲಾಯಿತು. ಶಾಸನ ಕಾಲದ

ವೇಳೆಗಾಗಲೇ ದಳವಾಯಿ ನಂಜರಾಜಯ್ಯನು ಹೈದರ್ ಅಲಿಗೆ ನವಾಬ್ ಹೈದರ್ ಅಲಿಖಾನ್ ಬಹದೂರ್ ಎಂಬ ಬಿರುದನ್ನಿತ್ತಿದ್ದು, ಆ ಬಿರುದನ್ನೆ ಈ ಶಾಸನಗಳಲ್ಲಿ ಉಪಯೋಗಿಸಲಾಗಿದೆ.

ಕೆಲವು ಇಂಗ್ಲೀಷ್ ಬರಹಗಾರರು ಟಿಪ್ಪು ಸುಲ್ತಾನನನ್ನು ಮತಾಂಧ ಮತ್ತು ಕ್ರೂರಿ ಎಂದು ಚಿತ್ರಿಸಿದ್ದಾರೆ. ಆದರೆ ಟಿಪ್ಪು ಸುಲ್ತಾನನ ಜೀವನವನ್ನು ಸೂಕ್ಷ್ಮವಾಗಿ ಅಭ್ಯಸಿಸಿದಾಗ ಇಂಗ್ಲೀಷ್ ಬರಹಗಾರರ ಅಭಿಪ್ರಾಯ ಸುಳ್ಳೆಂದು ವ್ಯಕ್ತವಾಗುತ್ತದೆ. ಪ್ರತಿಯಾಗಿ ಟಿಪ್ಪು ಸುಲ್ತಾನನು ತಿಳಿವಳಿಕೆಯುಳ್ಳ ಅರಸನಾಗಿದ್ದರಿಂದ ಮುಸ್ಲಿಮೇತರನ್ನು ಬಹಳ ಔದಾರ್ಯದಿಂದಲೇ ನಡೆಸಿಕೊಂಡನು. ಅವರಿಗೆ ಗೌರವಯುತ ಅಧಿಕಾರ ಸ್ಥಾನಮಾನಗಳನ್ನು ಕೊಟ್ಟು ಅವರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ಕೊಟ್ಟನು. ದೇವಸ್ಥಾನಗಳಿಗೂ ಬ್ರಾಹ್ಮಣರಿಗೂ ದತ್ತಿ ಬಿಟ್ಟನು. ವಿಗ್ರಹಗಳ ಪುನಃ ಪ್ರತಿಷ್ಠಾಪನೆಗೆ ಹೇರಳ ಹಣ ನೀಡಿ ದೇವಾಲಯಗಳಿಗೆ ಬೆಳ್ಳಿ ಹಾಗೂ ಚಿನ್ನದ ಪದಾರ್ಥಗಳನ್ನು ಕಾಣಿಕೆಯಾಗಿ ಕೊಟ್ಟನಲ್ಲದೆ ದೇವಾಲಯದ ನಿರ್ಮಾಣಕ್ಕೂ ಒಮ್ಮೆ ಆಜ್ಞಾಪಿಸಿದನು.[6]

ಟಿಪ್ಪು ಸುಲ್ತಾನನು ಮಂಡ್ಯ ಜಿಲ್ಲೆಯ ಮೇಲುಕೋಟೆಯ ತಿರುನಾರಾಯಣ ಸ್ವಾಮಿ ಮತ್ತು ನರಸಿಂಹಸ್ವಾಮಿ ದೇವಸ್ಥಾನಗಳಿಗೂ ಮತ್ತು ಇದೇ ಜಿಲ್ಲೆಯ ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ದೇವಸ್ಥಾನಕ್ಕೂ ಬೆಳ್ಳಿಯ ಬಟ್ಟಲುಗಳನ್ನು, ಬೆಳ್ಳಿಯ ಪಂಚಾರತಿಯನ್ನು ಕಾಣಿಕೆಯಾಗಿ ಕೊಟ್ಟಿದ್ದನ್ನು ಈ ಜಿಲ್ಲೆಯ ಶಾಸನಗಳಿಂದ ತಿಳಿಯಬಹುದು.[7]

ಇದಲ್ಲದೆ ಮೇಲುಕೋಟೆಯ ನಾರಾಯಣಸ್ವಾಮಿ, ನರಸಿಂಹಸ್ವಾಮಿ ದೇವಸ್ಥಾನಗಳಿಗೆ ತನ್ನ ರಾಜಧಾನಿಯಾದ ಶ್ರೀರಂಗಪಟ್ಟಣದಿಂದ ತನ್ನ ಆಸ್ಥಾನ ನಾಯಕನಾದ (ಹುಜೂರ ನಾಯಕ) ಶ್ರೀನಿವಾಸಾಚಾರಿ ಮತ್ತು ಹರಿಕಾರಭಕ್ಷಿಯ ಮುಖಾಂತರ ಆನೆ 2 (ಗಂಡು) ಮತ್ತು ಹೆಣ್ಣಾನೆ 10 ನ್ನು ಮೇಲುಗೋಟೆಯ (ಮೇಲುಕೋಟೆ) ಪಾರಪತಿ ಕಾಶಿರಾಉ ಮತ್ತು ವಿಹಾರ ಜೈನುಲುನ್ (ವಿಹಾರ್ ಜೈನ್ ಉಲ್) ರ ಮೂಲಕ ದಾನವಾಡಿದುದಾಗಿ ಕ್ರಿ.ಶ. 1785 ರ ಟಿಪ್ಪು ಸುಲ್ತಾನನ ಶಾಸನದಿಂದ[8] ತಿಳಿದು ಬರುತ್ತದೆ. ಇವು ಅಲ್ಲದೆ ಟಿಪ್ಪು ಸುಲ್ತಾನನು ಮಾಡಿದ ಇನ್ನೂ ಅನೇಕ ದತ್ತಿಗಳನ್ನು ನಾವು ಇತರೆ ಜಿಲ್ಲೆಗಳ ಶಾಸನಗಳಿಂದಲೂ ಮತ್ತು ಇತರೆ ದಾಖಲೆಗಳಿಂದಲೂ ಕಾಣುತ್ತೇವೆ. ಈ ಸಂದರ್ಭದಲ್ಲಿ ನಾವು ಟಿಪ್ಪು ಸುಲ್ತಾನನು ನಂಜನಗೂಡಿನ ದೇವಸ್ಥಾನಕ್ಕೆ ಬೆಳ್ಳಿಯ ಪಾತ್ರೆಯನ್ನೂ, ಆನೆಯನ್ನೂ ದಾನವಾಗಿ ಕೊಟ್ಟಿದ್ದನ್ನು ಮತ್ತು ಶೃಂಗೇರಿ ಸ್ವಾಮಿಗಳ ಸನ್ನಿಧಿಗೆ ಟಿಪ್ಪು ಸುಲ್ತಾನನು ಬರೆದ ಪತ್ರದಲ್ಲಿರುವಂತೆ ಅವನು ಇನ್ನೂರು ರಹತಿ ನಗದನ್ನು, ಇನ್ನೂರು ರಹತಿ ಬೆಲೆಯ ಧಾನ್ಯವನ್ನೂ ಶಾರದಾ ದೇವಿಗೆ ಅರ್ಪಿಸಿದುದನ್ನು ಸ್ಮರಿಸಬಹುದು. ಇಷ್ಟೇ ಅಲ್ಲದೆ ಈ ಕಾಣಿಕೆಯನ್ನು ಅರ್ಪಿಸಿ ಅವನ ದಿಗ್ವಿಜಯಕ್ಕೂ ಶತ್ರುಗಳ ವಿನಾಶಕ್ಕೂ ಪ್ರಾರ್ಥಿಸಿಕೊಳ್ಳಲು ಕೇಳಿ

ಕೊಂಡಿದ್ದಾನೆ.[9]

ಶೃಂಗೇರಿಯ ಸ್ವಾಮಿಗಳ ಸನ್ನಿಧಿಗೆ ಟಿಪ್ಪು ಸುಲ್ತಾನನು ಬರೆದ ಪತ್ರದಿಂದಲೂ ಅನೇಕ ಹಿಂದೂ ದೇವಾಲಯಗಳಿಗೆ ದತ್ತಿ ಕೊಟ್ಟ ಶಾಸನಗಳಿಂದಲೂ ಹಿಂದುಗಳಿಗೆ ಇಚ್ಛೆ ಬಂದ ದೈವವನ್ನು ಪೂಜಿಸಲು ಸಂಪೂರ್ಣ ಸ್ವಾತಂತ್ರ್ಯವಿತ್ತೆಂದು ತಿಳಿದು ಬರುತ್ತದೆ. ಅವರಿಗೆ ಒಳ್ಳೆಯ ಅಧಿಕಾರ ಸ್ಥಾನಮಾನಗಳನ್ನು ಕೊಟ್ಟಿದ್ದುದು ಹಿಂದುಗಳ ಬಗೆಗೆ ಆತನಿಗಿದ್ದ ಒಳ್ಳೆಯ ಮನೋಭಾವವನ್ನು ತೋರಿಸುತ್ತದೆ. 'ಹೈದರ್ ನಾಮ' ದ ಕರ್ತೃ ಹೈದರ್ ಅಲಿಯನ್ನು 'ದೈವ ಬ್ರಹ್ಮದ್ವೇಷರಹಿತ' ಎಂದರೆ ದೇವ ಬ್ರಾಹ್ಮಣರಲ್ಲಿ ದ್ವೇಷವಿಲ್ಲದಿರುವವನು ಎಂದು ಕರೆಯುತ್ತಾನೆ. ಈ ಮಾತನ್ನು ನಾವು ಟಿಪ್ಪು ಸುಲ್ತಾನನಿಗೂ ಹೋಲಿಸಿ ಟಿಪ್ಪು ಸುಲ್ತಾನನು ಮತೀಯ ಸೂಕ್ಷ್ಮಾಂಶಗಳಿಗೆ ಹೆಚ್ಚು ಗಮನ ಕೊಡದೆ ಮತ ಸಹಿಷ್ಣುವಾಗಿದ್ದನೆಂಬುದಾಗಿ ಹೇಳಬಹುದು.

ಟಿಪ್ಪು ಸುಲ್ತಾನನು 500 ಗಜ ಉದ್ದ–ಅಗಲವಿರುವ ಭೂಮಿಯನ್ನು ಮುಸ್ಲಿಮರಿಗೆ ಶ್ಮಶಾನಭೂಮಿಯಾಗಿ ದತ್ತಿ ಕೊಟ್ಟು ಅದರ ಸಂರಕ್ಷಣಾರ್ಥವಾಗಿ 60 ಪಗೋಡಗಳನ್ನು ಬಹುಮಾನವಾಗಿ ಕೊಟ್ಟಿದುದಲ್ಲದೆ ಅದಕ್ಕೆ ಲಗತ್ತಿರುವ ತರಿ ಮತ್ತು ಖುಷ್ಕಿ ಜಮೀನನ್ನು ಮಂಜೂರು ಮಾಡಿ ಅದನೆಲ್ಲಾ ನೋಡಿಕೊಳ್ಳುವುದಕ್ಕೋಸ್ಕರವಾಗಿ ಷಾಃಮೀರ್ ದರ್‌ವೇಷ್ ಎಂಬ ಧರ್ಮಕರ್ತನನ್ನು ನೇಮಿಸಿದುದಾಗಿ ಶ್ರೀರಂಗಪಟ್ಟಣದ ತಾಲ್ಲೂಕಿನ ಪಾಲಹಳ್ಳಿಯ ಕ್ರಿ.ಶ. 1793 ರ ಪರ್ಶಿಯನ್ ಶಾಸನದಿಂದ[10] ತಿಳಿದು ಬರುತ್ತದೆ. ಇದೇ ರೀತಿಯಾಗಿ ಟಿಪ್ಪು ಸುಲ್ತಾನನು ಶ್ಮಶಾನಭೂಮಿಯನ್ನು ದತ್ತಿ ಕೊಟ್ಟಿದ್ದನ್ನು ನಾವು ಇನ್ನೆರಡು ಶಾಸನಗಳಲ್ಲಿಯೂ ಕಾಣಬಹುದು. ಕ್ರಿ.ಶ. 1793 ರ ಇದೇ ತಾಲ್ಲೂಕಿನ (ಶ್ರೀರಂಗಪಟ್ಟಣ) ದೊಡ್ಡ ಕಿರಂಗೂರಿನ ಶಾಸನವು[11] 500 ಗಜ ಚಚೌಕವಾದ ಶ್ಮಶಾನಭೂಮಿಯನ್ನು ಮುಸ್ಲಿಮರಿಗೆ ಕೊಟ್ಟು ಪಘ್‌ಖತ್ ಷಾಃ ದರ್‌ವೇಷ್ ಎಂಬ ಧರ್ಮಕರ್ತನನ್ನು ನೇಮಿಸಿದುದಾಗಿ ತಿಳಿದುಬರುತ್ತದೆ. ಈ ಶಾಸನದ ಕಾಲವನ್ನು ಹಿಜರಿ ಮತ್ತು ಮೌಲೂದಿ ಶಕೆ–ಇವೆರಡರಲ್ಲೂ ಕೊಟ್ಟಿರುವುದು ಗಮನಾರ್ಹ.[12] ಇದೇ ದೊಡ್ಡ ಕಿರಂಗೂರಿಗೆ ಸೇರಿದ ಇನ್ನೊಂದು ಶಾಸನದಲ್ಲಿ[13] ಈ ರೀತಿ ಹೇಳಿದೆ. 'ಮುಸಂದೂರ ಕಬರಸ್ಥಾನದ ಬಗೆ ಕೊಟ್ಟ ಭೂಮಿ'. ಈ ಕಬರಸ್ಥಾನ ಅಥವ ಶ್ಮಶಾನ ಭೂಮಿಯನ್ನು ಮುಸ್ಲಿಮರಿಗೆ ಬಹುಶಃ ಟಿಪ್ಪು ಸುಲ್ತಾನನೇ ಕೊಟ್ಟಿರಬೇಕು.[14]

ಶ್ರೀರಂಗಪಟ್ಟಣದಲ್ಲಿರುವ ಕೋಟೆಯ ಆನೆಯ ಬಾಗಿಲಿನ ಮೇಲಿರುವ ಕ್ರಿ.ಶ. 1791 ರ ಶಾಸನವು[15] ಟಿಪ್ಪು ಸುಲ್ತಾನನು ಕಟ್ಟಿಸಿದ ಕೋಟೆಯ ಶಂಕುಸ್ಥಾಪನೆಯನ್ನು, ಅದರ ಕಾಲವನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಅತ್ಯಂತ ಗಮನಾರ್ಹವಾದ ಸಂಗತಿ ಎಂದರೆ ಗ್ರಹಗತಿಗಳ ವರ್ಣನೆ. ಈ ಗ್ರಹಗತಿಗಳ ವರ್ಣನೆಯಿಂದ ಕೋಟೆಗಳನ್ನು ಮಂದಿರಗಳನ್ನು ಕಟ್ಟಿಸಬೇಕಾದರೆ ಮತ್ತು ಇತರ ಶುಭಕಾರ್ಯಗಳನ್ನು ಮಾಡಬೇಕಾದರೆ

ಜ್ಯೋತಿಷ್ಯ ಶಾಸ್ತ್ರಕ್ಕೆ ಜನತೆ ಕೊಡುತ್ತಿದ್ದ ಮಹತ್ವವನ್ನು ನಾವು ಕಾಣಬಹುದು.

ಶ್ರೀರಂಗಪಟ್ಟಣದಲ್ಲಿನ ಮಸೀದಿಗೆ ಸೇರಿದ ಕ್ರಿ.ಶ. 1782 ರ ಶಾಸನವು[16] ಶ್ರೀರಂಗಪಟ್ಟಣದಲ್ಲಿ ಟಿಪ್ಪು ಸುಲ್ತಾನನು ಕಟ್ಟಿಸಿದ ಬೃಹದಾಕಾರದ ಮಸೀದಿಯ (ಮಸ್‌ಜಿದ್-ಇ-ಆಲಾ) ವರ್ಣನೆಯನ್ನು ಮತ್ತು ಅದರ ಕಾಲವನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಟಿಪ್ಪು ಸುಲ್ತಾನನು ಕಟ್ಟಿಸಿದ ಮಸೀದಿಯನ್ನು ಹಿಂದೆ ಸಾಲೋಮನ್ನನು ಕಟ್ಟಿಸಿದ ಎನ್ನಲಾದ 'ಅಕ್ಷ' (Aksha) ಎಂಬ (ಅತಿ ಎತ್ತರವಾದ ಜೆರುಸಲೆಂನಿನ ದೇವಸ್ಥಾನ) ಮಂದಿರಕ್ಕೆ ಹೋಲಿಸಿದೆ ಈ ಮಸೀದಿಯ ಪ್ರಾರ್ಥನಾ ಸಭಾಗೃಹವನ್ನು 'ಮರ್ವ' (Marva) ಎಂಬ ಮಕ್ಕಾದಲ್ಲಿರುವ ಪರ್ವತಕ್ಕೆ ಹೋಲಿಸಿ ಅದರ ಮಿಹರಾಬ (Pulpet) ಅನ್ನು ಮಕ್ಕಾದ (ಮುಸ್ಲಿಮರ ಪವಿತ್ರ ಸ್ಥಳ) ಇನ್ನೊಂದು ಹೆಸರಾದ 'ಬತ್' (Bath) ಎಂದು ಕರೆದಿದೆ.

ಇದೇ ಮಸೀದಿಯಲ್ಲಿರುವ ನಾಲ್ಕು ಶಾಸನಗಳು[17] ಮುಸ್ಲಿಮರ ದೇವರು ಮತ್ತು ಪ್ರವಾದಿಯ ತೊಂಬತ್ತೊಂಬತ್ತು ಹೆಸರುಗಳನ್ನು ತಿಳಿಸುತ್ತವೆ.

ನಾಗಮಂಗಲ ತಾಲ್ಲೂಕಿನ ಬೆಳ್ಳೂರಿನ ಮಸೀದಿಯೊಂದರ ಒಳಭಾಗಿಲ ಮೇಲೆ ಕ್ರಿ. ಶ. 1786ರ ಶಾಸನವು ಇಬ್‌ರಾಹಿಂ (ಇಬ್ರಾಹಿಂ) ಎಂಬುವನಿಂದ ಆ ಮಸೀದಿಯು ಕಟ್ಟಿಸಲ್ಪಟ್ಟಿತು ಎಂಬುದಾಗಿ ತಿಳಿಸುತ್ತದೆ.[18]

ಹೀಗೆ ಟಿಪ್ಪು ಸುಲ್ತಾನನ ಕಾಲದಲ್ಲಿ ಮುಸ್ಲಿಮರಿಗೆ ಶ್ಮಶಾನ ಭೂಮಿಯನ್ನು ಕೊಡುಗೆಯಾಗಿ ಕೊಟ್ಟಿರುವುದಲ್ಲದೆ ಪ್ರಾರ್ಥನಾಮಂದಿರಗಳನ್ನು ಕಟ್ಟಿಸಿಕೊಟ್ಟಿರುವು ದಾಗಿ ಈ ಶಾಸನಗಳಿಂದ ತಿಳಿದು ಬರುತ್ತದೆ. ಈ ಸಂದರ್ಭದಲ್ಲಿ ನಾವು ಟಿಪ್ಪು ಸುಲ್ತಾನನ ಜೀವನ ಚರಿತ್ರೆಯನ್ನು ಬರೆದಿರುವ ಕೀರ್ಮಾನಿಯವರು "ಟಿಪ್ಪು ಪ್ರತಿಯೊಂದು ಹಳ್ಳಿಯಲ್ಲೂ ಮಸೀದಿಗಳನ್ನು ಕಟ್ಟಿಸಿ ಮುಲ್ಲಾಗಳನ್ನು ನೇಮಿಸಿದನು. ಇದು ಮುಸ್ಲಿಂ ಯುವಕರಿಗೆ ಭೌತಿಕ ಮತ್ತು ಧಾರ್ಮಿಕ ವಿದ್ಯಾಭ್ಯಾಸ ಮಾಡಿಸುವ ತೀವ್ರಪ್ರಯತ್ನಕ್ಕೆ ಎಡೆಮಾಡಿಕೊಟ್ಟಿತು" ಎಂಬುದಾಗಿ ಹೇಳಿರುವ ಮಾತನ್ನು ಜ್ಞಾಪಿಸ್ಕ ಹೇಳಬಹುದು.[19]

ಶ್ರೀರಂಗಪಟ್ಟಣದ ಗುಂಬಜಿಗೆ ಸೇರಿದ ಕ್ರಿ. ಶ. 1782ರ ಶಾಸನವು[20] ಹೈದರ್ ಅಲಿಯ ಮರಣವನ್ನು ಮತ್ತು ಅವನ ಬೃಹತ್ ಗೋರಿಯ ನಿರ್ಮಾಣವನ್ನು ಸೂಚಿಸು ತ್ತದೆ. ಚಿತ್ತೂರಿನ ಬಳಿ ಇರುವ ನರಸಿಂಗರಾಯನಪೇಟೆ ಎಂಬಲ್ಲಿ ನಡೆದ ಯುದ್ಧ ಒಂದರಲ್ಲಿ ತನ್ನ ಅರವತ್ತನೆಯ ವಯಸ್ಸಿನಲ್ಲಿ (1782 ರಲ್ಲಿ) ಮರಣವನ್ನಪ್ಪಿದ ಹೈದರ್ ಅಲಿಯ ಕಳೇಬರವನ್ನು ಮೊದಲು ಕೋಲಾರದಲ್ಲಿ ಫತೇಮುಹಮ್ಮದನ ಗೋರಿಯ ಬಳಿಯೇ ಹೂಳಲಾಯಿತು. ನಂತರ ಅದನ್ನು ಅಲ್ಲಿಂದ ತೆಗೆದು ಟಿಪ್ಪು ಸುಲ್ತಾನನು ನಿರ್ಮಿಸಿದ್ದ ಈ ಬೃಹತ್ ಗೋರಿಯಲ್ಲಿ ಹೂಳಲಾಯಿತು.[21], ಈ ಶಾಸನವು ಧರ್ಮಪ್ರವರ್ತಕರ ಹೆಸರಿನಿಂದ ಪ್ರಾರಂಭವಾಗಿ ನಂತರ ಗುಂಬಜಿನ ಬಹು

ಸುಂದರವಾದ ವರ್ಣನೆಯನ್ನು ಕೊಡುತ್ತದೆ. ಇದರಲ್ಲಿ ಗುಂಬಜನ್ನು ಕವಿಯು ಚಂದ್ರ ಮತ್ತು ಸೂರ್ಯನಿಗೆ ಹೋಲಿಸಿದ್ದಾನೆ. ಅವರ ಕಲಶದಿಂದ ಚಂದ್ರನು ಬೆಳಕು ತೆಗೆದು ಕೊಂಡಿದ್ದಾನೋ ಎಂಬಂತಿದೆ ಎಂಬುದಾಗಿಯೂ ಆ ಗುಂಬಜನ್ನು ಸುಂದರವಾದ ಮಲಗುವ ಕೋಣೆ ಎಂಬುದಾಗಿಯೂ ಕವಿಯು ಕರೆದಿರುವುದು ಗಮನಾರ್ಹ. ಈ ಶಾಸನದಲ್ಲಿ ಹೈದರ್ ಅಲಿಯು ಮೃತನಾದ 'ಹಿಜರಿ' ವರ್ಷವನ್ನು ಅಬ್ಜಾದ್ ಪದ್ಧತಿ ಯಲ್ಲಿ[23] (objad system) ಕೊಟ್ಟಿದೆ (1195=1782 A D)

ಇದೇ ಗುಂಬಜಿಗೆ ಸೇರಿದ ಇನ್ನೆರಡು ಶಾಸನಗಳು ಟಿಪ್ಪು ಸುಲ್ತಾನನು ಅವಿಶ್ವಾಸಿ ಗಳ ಬಗ್ಗೆ ಅವನ ಸೈನಿಕರಿಗೆ ಅನುಸರಿಸಲು ಹೇಳಿದ ಮಾರ್ಗಗಳನ್ನು ತಿಳಿಸುತ್ತವೆ. ಧರ್ಮನಿಂದಕರೆನ್ನಲಾದ ಬನಿ ಖುರೈಜಗಳು (Bani Khuraiza) ಸೋತು ಓಡಿ ಹೋದಮೇಲೂ ಅವರ ಜೊತೆಗೆ ಯುದ್ಧವನ್ನು ಮುಂದುವರಿಸಬೇಕೆಂದು ಆಜ್ಞೆ ಯನ್ನು ಹೊರಡಿಸಿದುದಾಗಿ ಕ್ರಿ ಶ. 1787ರ ಶಾಸನದಿಂದ ತಿಳಿದುಬರುತ್ತದೆ. ಅವರು ಮುಸ್ಲಿಮರೊಂದಿನ ಸ್ನೇಹಸಂಬಂಧಗಳನ್ನು ಕಡಿದುಕೊಂಡು ವೈರಿಗಳೊಂದಿಗೆ ಸೇರಿ ಆ ಒಕ್ಕೂಟಕ್ಕೆ ಸಹಾಯಮಾಡಿದುದೇ ಯುದ್ಧ ಮುಂದುವರಿಸುವ ಕಾರಣವೆಂದು ಈ ಶಾಸನದಿಂದ ತಿಳಿದುಬರುತ್ತದೆ. ಅಲ್ಲದೆ ಮುಸ್ಲಿಂ ಸೈನ್ಯ 15 ಹಗಲು, 15 ರಾತ್ರಿ ಅವರಿದ್ದೆಡೆಗೆ ಮುತ್ತಿಗೆ ಹಾಕಿ ಅವರನ್ನು ಅತಿಯಾತನೆಗೆ ಗುರಿಮಾಡಿ ವಶಪಡಿಸಿ ಕೊಂಡಿತೆಂದು, ವಯಸ್ಕ ಪುರುಷರನ್ನು ಖಡ್ಗಕ್ಕೆ ಆಹುತಿ ಕೊಡಬೇಕು, ಹೆಣ್ಣುಮಕ್ಕ ಳನ್ನು ಚಿಕ್ಕ ಮಕ್ಕಳನ್ನು ಗುಲಾಮರನ್ನಾಗಿ ಮಾಡಿಕೊಳ್ಳಬೇಕು ಎಂಬುದಾಗಿ ತೀರ್ಮಾ ನಿಸಿದ ಸಾದ್‌ಬಿನ್‌ಮಾಜ್‌ನ ಮಾತನ್ನು ಈ ಶಾಸನವು ತಿಳಿಸುತ್ತದೆ. ಇದೇ ರೀತಿಯಾಗಿ ಪ್ರವಾದಿಯು (ಮೊಹಮ್ಮದ್ ಪೈಗಂಬರನು) ಪುರಾತನ ಒಡಂಬಡಿಕೆಯಲ್ಲಿ ನಂಬಿಕೆ ಯುಳ್ಳವನಾಗಿದ್ದ ಯಹೂದಿಗಳನ್ನು (Jews) ಶಿಕ್ಷಿಸಿದ ಸಂದರ್ಭವನ್ನು ವಿವರಿಸುತ್ತಾ ಸಾದ್‌ಬಿನ್‌ಮಾಜ್‌ನು ತೀರ್ಮಾನಿಸಿದ ಅವಿಶ್ವಾಸಿಗಳಿಗೆ ಶಿಕ್ಷಿಸುವ ಮಾರ್ಗವನ್ನು ಟಿಪ್ಪು ಸುಲ್ತಾನನು ಒಪ್ಪಿಕೊಳ್ಳುತ್ತಾ 'ಅದು ಸಪ್ತಲೋಕಗಳಿಂದಾಚೆಗಿರುವ ದೊಡ್ಡವರು ಇತ್ತ ಆಜ್ಞೆಯೇ ಆಗಿದೆ' ಎಂಬ ಹೇಳಿಕೆಯೂ ಈ ಶಾಸನದಲ್ಲಿದೆ ಈ ಹೇಳಿಕೆ ಖೈಬರ್, ಟರ್ಕಿ ಮತ್ತು ಪರ್ಷಿಯ ದೇಶಗಳಿಗೂ ಅಲ್ಲದೆ ಇನ್ನು ಮುಂದೆ ಯಾವುದೇ ದೇಶವನ್ನು ಅಧೀನಕ್ಕೊಳಪಡಿಸಿಕೊಳ್ಳಲಿ ಅಲ್ಲೆಲ್ಲಾ ಅನ್ವಯವಾಗುತ್ತದೆ ಎಂಬ ಮಾತನ್ನು ಸಹಾ ಈ ಶಾಸನದಲ್ಲಿ ಕಾಣಬಹುದು

ಇದೇ ರೀತಿಯಾಗಿ ಕ್ರಿ. ಶ 1788 ರ ಗುಂಬಜಿಗೆ ಸೇರಿದ ಶಾಸನದಿಂದ[24] ಪ್ರವಾದಿಯಾದ ಮೊಹಮ್ಮದ್ ಪೈಗಂಬರನು ತನ್ನ ಅವಿಶ್ವಾಸಿಗಳಿಗೆ ಅನುಸರಿಸಿದ ಮಾರ್ಗವನ್ನು ತಿಳಿಸುವುದಲ್ಲದೆ ಅದೇ ಮಾರ್ಗವನ್ನ ಇಲ್ಲಿ ಅವಿಶ್ವಾಸಿಗಳಿಗೆ ಅನುಸರಿ ಸಲು ಆಜ್ಞಾಪಿಸಿದ ಟಿಪ್ಪು ಸುಲ್ತಾನನ ಅಪ್ಪಣೆ ಈ ಶಾಸನದಿಂದ ತಿಳಿದುಬರುತ್ತದೆ. ಯಾರು ಅವಿಶ್ವಾಸಿಗಳಿಗೆ ಯುದ್ಧದಲ್ಲಿ ತಾನೇ ಯುದ್ಧಮಾಡುತ್ತಿರುವಾಗ ಸಹಾಯ

ಮಾಡುತ್ತಾನೋ ಅಥವಾ ಶಸ್ತ್ರವನ್ನಾಗಲಿ ಮತ್ತು ಹಣವನ್ನಾಗಲೀ ಕೊಟ್ಟು ಸಹಾಯ ಮಾಡುತ್ತಾನೋ ಅವನೂ ಸಹ ಅವಿಶ್ವಾಸಿ ಅಲ್ಲದೆ ಅವನು ಅವರ (ಅವಿಶ್ವಾಸಿಗಳ) ಧರ್ಮದ ಬಗ್ಗೆ ಇಚ್ಛೆಯುಳ್ಳವನಾಗಿದ್ದು ಅಂತಹ ಇಚ್ಛೆಯನ್ನು ತೋರಿಸಿದ ಪಕ್ಷದಲ್ಲಿ ಅವನಿಗೆ ಕೇವಲ ಬಂಧಿಸಬೇಕು ಮತ್ತು ಶಿಕ್ಷಿಸಬೇಕು ಎಂಬುದಾಗಿ ಈ ಶಾಸನದಲ್ಲಿ ಬರುವ ವರ್ಣನೆಯಿಂದ ಟಿಪ್ಪು ಸುಲ್ತಾನನು ಅವಿಶ್ವಾಸಿಗಳ ಬಗ್ಗೆ ಅನುಸರಿಸಲು ಆಜ್ಞಾಪಿಸಿದ ಮಾರ್ಗವನ್ನು ತಿಳಿಯಬಹುದು.

ಇದೇ ಗುಂಬಜಿಗೆ ಸೇರಿದ ಕ್ರಿ. ಶ. 1799ರ ಶಾಸನವು[35] 'ಮೈಸೂರು ಹುಲಿ' ಎನ್ನಿಸಿದ ಟಿಪ್ಪು ಸುಲ್ತಾನನ ವೀರ ಮರಣವನ್ನು ಬಹು ಸುಂದರವಾಗಿ ಚಿತ್ರಿಸುತ್ತದೆ. ಇದನ್ನು ರಚಿಸಿದ ಮೀರ್ ಹುಸೇನ್ ಆಲಿ ಮತ್ತು ಕೆತ್ತಿದ ಅಬ್ದುಲ್ ಖಾದರ್ ಎಂಬುವರು ಕೆಲವು ಮುಸ್ಲಿಂ ಬರಹಗಾರರ ಹೇಳಿಕೆಗಳನ್ನು ತೆಗೆದುಕೊಂಡು ಹೃದಯಕ್ಕೆ ನಾಟುವಂತೆ ಟಿಪ್ಪು ಸುಲ್ತಾನನ ಮರಣದಿಂದಾದ ಶೋಕವನ್ನು ಚಿತ್ರಿಸಿದ್ದಾರೆ. 'ಯಾವ ರಾಜ್ಯವು ಒಬ್ಬರ ಕೈಯಿಂದ ಇನ್ನೊಬ್ಬರಿಗೆ ಹೋಗುತ್ತದೋ ಅದು ದೈವಕೃಪೆಯಿಂದ' ಎಂಬ ಸ್ವಾರಸ್ಯಕರವಾದ ಮಾತನ್ನು ಈ ಶಾಸನದಲ್ಲಿ ನಾವು ಕಾಣಬಹುದು. ಟಿಪ್ಪು ಸುಲ್ತಾನನ ಮರಣದಿಂದಾಗಿ ಟರ್ಕಿ ಮತ್ತು ಇಂಡಿಯಾ—ಇವೆರಡರ ಕೀರ್ತಿಗೂ ಕುಂದು ಬಂದಿದೆ ಎಂದು ಕವಿಯು ಈ ಶಾಸನದಲ್ಲಿ ಹೇಳಿದ್ದಾನೆ.

ಇದೇ ಗುಂಬಜಿಗೆ ಸೇರಿದ ಕ್ರಿ.ಶ. 1791ರ[36] ಮತ್ತು 1792ರ[37] ಶಾಸನಗಳು ಕ್ರಮವಾಗಿ ಟಿಪ್ಪು ಸುಲ್ತಾನನ ಮಗ ನಿಜಾಮುದ್ದೀನ್ ಮತ್ತು ಪ್ರಧಾನ ದಂಡನಾಯಕ ಸಯ್ಯಿದ್ ಹಮೀದ್ ಎಂಬುವರ ಮರಣವನ್ನು ತಿಳಿಸುತ್ತವೆ.

ಹೀಗೆ ನಾವು ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನರ ಕಾಲದ ಶಾಸನಗಳಿಂದ, ನಾಣ್ಯಗಳಿಂದ, ವಾಸ್ತುಕೃತಿಗಳಿಂದ ಹಾಗೂ ಇನ್ನಿತರ ಮೂಲ ದಾಖಲೆಗಳಿಂದ ಅಂದಿನ ಭಾಷೆ, ಜನಜೀವನ, ಸಂಸ್ಕೃತಿ, ಇತಿಹಾಸ ಇತ್ಯಾದಿ ವಿಷಯಗಳನ್ನು—ಅಂದರೆ ಅವರ ರಾಜಕೀಯ ಕೊಡುಗೆಗಳನ್ನು—ತಿಳಿಯಬಹುದು.

ಕೆ. ಮೊಹಮ್ಮದ್ ಶರೀಫ್

ಅಡಿ ಟಿಪ್ಪಣಿಗಳು

1. ಬಿದನೂರು, ಬೆಂಗಳೂರು, ಗುತ್ತಿ ಇವು ಹೈದರ್‌ಆಲಿಯ ಟಂಕಸಾಲೆಗಳಿದ್ದ ಇತರ ಕೆಲವು ಸ್ಥಳಗಳು.
2. ಎ. ಕ. V (1976) ಮೈ 112 (ಎಕ=ಎಪಿಗ್ರಾಫಿಯ ಕರ್ನಾಟಿಕ)

3. ನಗರ (ಬಿದನೂರು), ಗುತ್ತಿ, ಬೆಂಗಳೂರು, ಚಿತ್ರದುರ್ಗ, ಕಲ್ಲಿಕೋಟೆ. ಸತ್ಯಮಂಗಲ, ದಿಂಡಿಗಲ್. ಗುರುಂಕೊಂಡ, ಧಾರವಾಡ, ಮೈಸೂರು ಇತ್ಯಾದಿ—ಇವು ಇವನ ಟಂಕಸಾಲೆಗಳಿದ್ದ ಇತರ ಸ್ಥಳಗಳು.
4. ನೋಡಿ ; ಇಕ್ಷುಕಾವೇರಿ —ಐವತ್ತೆಂಟನೆಯ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನ ಸಂಚಿಕೆ, ಪುಟ 91 ರಿಂದ 98
5. ಎ. ಕ. VI (1977). ಕೃಪೆ 102 ರಿಂದ 104
6. ಕರ್ನಾಟಕ ಪರಂಪರೆ. ಸಂ 2, ಪು 255
7. ಎ. ಕ. VI (1977). ಪಾಂಪು 171 : ಶ್ರೀಪ 12, 13, 14, 16
8. ಎ. ಕ. VI (1977), ಪಾಂಪು 197
9. ಕರ್ನಾಟಕ ಪರಂಪರೆ. ಸಂ, 2 ಪು 260 — ಕ್ರಿ. ಶ. 1793ರಲ್ಲಿ ಟಿಪ್ಪು ಸುಲ್ತಾನನು ಸ್ವಾಮಿಗಳಿಗೆ ಬರೆದ ಪತ್ರದಲ್ಲಿ 'ನೀವು ಜಗದ್ಗುರುಗಳು. ಲೋಕೋದ್ಧಾರಕ್ಕೂ, ಮಾನವ ಕಲ್ಯಾಣಕ್ಕೂ ನೀವು ಯಾವಾಗಲೂ ತಪಸ್ಸನ್ನು ಆಚರಿಸುತ್ತಿದ್ದೀರಿ. ನಮ್ಮ ಏಳಿಗೆ ಮತ್ತು ಅಭಿವೃದ್ಧಿಗಾಗಿ ಪ್ರಾರ್ಥಿಸಿ. ನಿಮ್ಮಂತಹ ಪವಿತ್ರ ಜೀವಿಗಳು ಯಾವ ನಾಡಿನಲ್ಲೇ ವಾಸಿಸುತ್ತಿರಲಿ ಆ ನಾಡು ಒಳ್ಳೆಯ ಮಳೆ ಬೆಳೆಗಳಿಂದ ವರ್ಧಿಸುತ್ತದೆ' ಎಂಬುದಾಗಿ ಹೇಳಿದ್ದಾನೆ.
10. ಎ. ಕ. VI (1977), ಶ್ರೀಪ 68
11. ಎ. ಕ. VI (1977), ಶ್ರೀಪ 92
12. ಈ ಮೌಲೂದಿ ಶಕೆಯನ್ನು ಕೀರ್ಮಾನಿಯವರು 'ಮುಹಮ್ಮದಿ' ಶಕೆ ಎಂಬುದಾಗಿ ಕರೆದಿದ್ದಾರೆ (ನೋಡಿ Mohibbul Hasan–History of Tippu Sultan, p. 400
13. ಎ. ಕ VI (1977), ಶ್ರೀ ಪ 91
14. ಎಂ. ಎ. ಆರ್. (ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್ 1912, ಪುಟ 58
15. ಎ. ಕ. VI (1977), ಶ್ರೀಪ 46
16. ಎ. ಕ. VI (1977), ಶ್ರೀಪ 48
17. ಎ. ಕ. VI (1977), ಶ್ರೀಪ 49
18. ಎ. ಕ. VII (1979), ನಾಮಂ 95
19. ಕರ್ನಾಟಕ ಪರಂಪರೆ, ಸಂ 2, ಪು, 390
20. ಎ. ಕ. VI (1977), ಶ್ರೀಪ 59
21. ಕರ್ನಾಟಕ ಪರಂಪರೆ, ಸಂ 2 ಪು, 251

22. ವಿವರಗಳಿಗೆ ನೋಡಿ ಅ) (Mohibbul Hasan-History of Tippu Sultan p, 339

ಆ) Taylor-The coins of Tippu Sultan p. 16-18

23. ಎ. ಕ. VI (1977), ಶ್ರೀಪ 47,50

24. ಎ. ಕ. VI (1977), ಶ್ರೀಪ 47

25. ಎ. ಕ. VI (1977), ಶ್ರೀಪ 60

26. ಎ. ಕ. VI (1977), ಶ್ರೀಪ 64

27. ಎ. ಕ. VI (1977), ಶ್ರೀಪ 61

(ಶ್ರೀಪ=ಶ್ರೀರಂಗಪಟ್ಟಣ ; ನಾಮಂ=ನಾಗಮಂಗಲ ; ಮೈ=ಮೈಸೂರು ; ಪಾಂಪು=ಪಾಂಡವಪುರ ; ಕೃಪೆ=ಕೃಷ್ಣರಾಜಪೇಟೆ ತಾಲ್ಲೂಕುಗಳು)

ಮಂಡ್ಯ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮ

ಮಂಡ್ಯ ಜಿಲ್ಲೆ : ಒಂದು ಪಕ್ಷಿನೋಟ

ಶ್ರೀಮಂತ ಸಾಂಸ್ಕೃತಿಕ ಪರಂಪರೆ, ಪ್ರಗತಿಪರ ರಾಜಕೀಯ ಹಾಗೂ ಸತತವಾದ ಆರ್ಥಿಕ ಚಟುವಟಿಕೆಗಳ ನೆಲೆಯಾದ ಮಂಡ್ಯ ಜಿಲ್ಲೆ ನೆರೆಯ ಹಾಗೂ ಬೆಂಗಳೂರು ಜಿಲ್ಲೆಗಳ ಹಿರಿಮೆಯಿಂದಾಗಿ ಅವಜ್ಞತೆಗೆ ಒಳಗಾಗಿದೆ. 1936ನೆಯ ಇಸವಿಯವರೆಗೆ ಮೈಸೂರು ಜಿಲ್ಲೆಯ ಭಾಗವಾಗಿದ್ದ ಮಂಡ್ಯ ಜಿಲ್ಲೆಯ ಗಣ್ಯ ಕ್ಷೇತ್ರಗಳಾದ ಕೃಷ್ಣರಾಜಸಾಗರ, ಶ್ರೀರಂಗಪಟ್ಟಣ ಮತ್ತು ಮೇಲುಕೋಟೆಗಳನ್ನು ಅವುಗಳು ಮೈಸೂರಿಗೆ ಹತ್ತಿರವೂ ಆಗಿರುವ ಕಾರಣದಿಂದ ಮೈಸೂರು ಜಿಲ್ಲೆಯ ಭಾಗಗಳೇ ಆಗಿವೆ ಎಂದು ಭಾವಿಸಿದವರೂ ಇದ್ದಾರೆ.

ಕನ್ನಡವೇ ಮಾತೃಭಾಷೆಯಾಗಿರುವ ಜನರ ಸಂಖ್ಯೆ ಸರ್ವಾಧಿಕ (1971ರಲ್ಲಿ ಶೇಕಡಾ 92) ವಾಗಿರುವ ಜಿಲ್ಲೆ ಮಂಡ್ಯ. ಹೀಗಾಗಿ ಇದರ ಸ್ಥಾನಮಾನ ಅನನ್ಯ. ಜಿಲ್ಲೆಯ ಜನಸಾಂದ್ರತೆ ಚದರ ಕಿಲೋಮೀಟರಿಗೆ 186 ಆಗಿ, ಬೆಂಗಳೂರು ಜಿಲ್ಲೆಯ ನಂತರ ಜನಸಾಂದ್ರತೆಯಲ್ಲಿ ಈ ಜಿಲ್ಲೆಗೆ ಎರಡನೆಯ ಸ್ಥಾನ. (ಜಿಲ್ಲೆಯ ವಿಸ್ತಾರ 4, 961 ಕಿ. ಮೀ ; ಜನಸಂಖ್ಯೆ : 15,18,109—1981 ರಲ್ಲಿ

ಕರ್ನಾಟಕದ ಒಂದು ಅತ್ಯಂತ ಹಿರಿಯ ಜಾತಿಸಮುದಾಯವಾದ ಒಕ್ಕಲಿಗರ ಗುರುಪೀಠವಿರುವುದು ಇದೇ ಜಿಲ್ಲೆಯ ಶ್ರೀ ಆದಿಚುಂಚನಗಿರಿಯಲ್ಲಿ. ಕರ್ನಾಟಕದ ಕೆಲವು ಅತ್ಯಂತ ಗಣ್ಯ ವ್ಯಕ್ತಿಗಳಾದ ಬಿ.ಎಂ.ಶ್ರೀ : ಮಾಳವಳ್ಳಿ ಸುಂದರಮ್ಮ, ಸಂಚಿಯ ಹೊನ್ನಮ್ಮ, ಕನ್ನಡ ಸರ್ವೋದಯದ ನಾಯಕರಾದ ಎಂ. ಎಲ್. ಶ್ರೀಕಂಠೇಶಗೌಡ ಬಿ. ವೆಂಕಟಾಚಾರ್ಯ, ವೀರಕೇಸರಿ ಸೀತಾರಾಮಶಾಸ್ತ್ರಿ, ವಿಜ್ಞಾನಿ ರಾಜಾರಾಮಣ್ಣ ಇವರೆಲ್ಲ ಈ ಜಿಲ್ಲೆಗೆ ಸೇರಿದವರು.

ಮಂಡ್ಯ ಜಿಲ್ಲೆಯು ತನ್ನ ಪ್ರಗತಿಪರ ರೈತರು ಹಾಗೂ ಮುಂದುವರಿದ ಕೃಷಿಯಿಂದ ಬಹುಮಟ್ಟಿಗೆ ಪ್ರಸಿದ್ಧವಾಗಿದೆ. ಕೊಡಗಿಗಿಂತ ಗಾತ್ರದಲ್ಲಿ ಸ್ವಲ್ಪ ದೊಡ್ಡದಾದ ಜಿಲ್ಲೆ ಇದು. ಜಿಲ್ಲೆಯ ಕೃಷಿಭೂಮಿಯಲ್ಲಿ (ಒಟ್ಟು 2,51.597 ಹೆಕ್ಟೇರ್) ಶೇಕಡ 47 ಭಾಗ ನೀರಾವರಿ ಸವಲತ್ತನ್ನು ಹೊಂದಿದ್ದು ಬಹುಪಾಲು ನದಿ ನೀರಾವರಿಯ ಅನುಕೂಲವನ್ನೇ ಪಡೆದಿದೆ. ಸುಮಾರು 24.000 ಹೆಕ್ಟೇರ್‌ನಲ್ಲಿ ಕಬ್ಬು ಬೆಳೆಯಲಾಗುತ್ತಿದ್ದು, ಬೆಳಗಾವಿ ಜಿಲ್ಲೆಯ ನಂತರ ಈ ಬೆಳೆಯಲ್ಲಿ ಮಂಡ್ಯಕ್ಕೆ ಎರಡನೆಯ ಸ್ಥಾನ. ಇದರಿಂದ ಮೂರು ಸಕ್ಕರೆ ಕಾರ್ಖಾನೆಗಳು ಈ ಜಿಲ್ಲೆಯಲ್ಲಿ ನಡೆಯುತ್ತಿವೆ.

ಇದಲ್ಲದೆ 60,000 ಹೆಕ್ಟೇರ್ ಪ್ರದೇಶದಲ್ಲಿ ಜಿಲ್ಲೆಯಲ್ಲಿ ಭತ್ತವನ್ನು ಬೆಳೆಯಲಾಗುತ್ತದೆ.

ಕೈಗಾರಿಕೆ (ಒಟ್ಟು 163 ಘಟಕಗಳಲ್ಲಿ 17, 494 ಕಾರ್ಮಿಕರಾಗಿದ್ದಾರೆ) ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲೂ ಜಿಲ್ಲೆಯ ಹೆಚ್ಚುಗಾರಿಕೆಯನ್ನು ಕಡೆಗಣಿಸುವಂತಿಲ್ಲ. ಮಂಡ್ಯ ಜಿಲ್ಲೆಯ ಶಿವನಸಮುದ್ರ ಜಲಪಾತದ ಬಳಿಯೇ 1902ರಲ್ಲಿ ಮೊದಲಬಾರಿ ವಿದ್ಯುದುತ್ಪಾದನೆ ಆರಂಭಿಸಲಾಯಿತು. (ಇದು ಪ್ರಥಮ ಬೃಹತ್ಪ್ರಮಾಣದ ಯತ್ನ. ಕಿರು ಪ್ರಮಾಣದಲ್ಲಿ 1887ರಲ್ಲಿ ಗೋಕಾಕ್ ಫಾಲ್ಸನಲ್ಲಿ ವಿದ್ಯುತ್ತನ್ನು ಉತ್ಪಾದಿಸಲಾಗಿತ್ತು) ಭಾರತದ ಪ್ರಥಮ ರಾಸಾಯನಿಕ ಗೊಬ್ಬರದ ಕಾರ್ಖಾನೆಯನ್ನು ಬೆಳಗೊಳದಲ್ಲಿ 1937ರಲ್ಲಿ ಆರಂಭಿಸಲಾಯಿತು. ಉತ್ಕೃಷ್ಟವೆನಿಸುವ ಗಂಗ, ಚೋಳ ಹಾಗೂ ಹೊಯ್ಸಳರ ಕಲೆಯ ದೃಷ್ಟಿಯಿಂದ ತೀರ ಮಹತ್ವದ್ದೆನಿಸಿರುವ ದೇವಾಲಯಗಳು ಈ ಜಿಲ್ಲೆಯಲ್ಲಿದ್ದರೂ ಅವುಗಳನ್ನು ಸಂದರ್ಶಿಸುವ ಪ್ರವಾಸಿಗಳ ಸಂಖ್ಯೆ ಅತ್ಯಲ್ಪ. ಶ್ರೀರಂಗಪಟ್ಟಣ, ಮೇಲುಕೋಟೆ ಹಾಗೂ ಕೃಷ್ಣರಾಜಸಾಗರಗಳು ಜಿಲ್ಲೆಯ ಉಳಿದ ಕೇಂದ್ರಗಳನ್ನು ಮರೆಮಾಡಿದಂತೆ ಇವೆ. ಮಂಡ್ಯ, ನಾಗಮಂಗಲ, ಮದ್ದೂರು: ಅಗ್ರಹಾರ ಬಾಚಹಳ್ಳಿ, ಬೆಳ್ಳೂರು, ಮೇಲುಕೋಟೆ, ತೊಣ್ಣೂರು, ಬಿಂಡಿಗನವಿಲೆ, ಪಾಲಗ್ರಹಾರಗಳಂಥ ಹಲವಾರು ಅಗ್ರಹಾರವನ್ನು ಹೊಂದಿದ ಈ ಜಿಲ್ಲೆ ಹಲವಾರು ಗಣ್ಯ ಬುದ್ಧಿಜೀವಿಗಳನ್ನು ಕೊಡುಗೆಯಾಗಿ ನೀಡಿದೆ.

ಮಂಡ್ಯ ಜಿಲ್ಲೆಯ ಜನ ತಮ್ಮ ಸ್ವತಂತ್ರ ವಿಚಾರ ಸರಣಿಗೂ ಖ್ಯಾತರು. ಅನೇಕ ಜನಪ್ರಿಯ ಕೂಗು, ಘೋಷಣೆಗಳ ವಿರುದ್ಧ ಮಂಡ್ಯ ಜಿಲ್ಲೆಯ ಜನ ಧ್ವನಿ ಎತ್ತಿದ್ದವರು. ಕಾಂಗ್ರೆಸ್ಸಿಗೆ ವಿರುದ್ಧವಾಗಿ ಪ್ರಜಾಸಂಯುಕ್ತ ಪಕ್ಷವು 1937ರಲ್ಲಿ ಕಾಂಗ್ರೆಸ್ಸಿನ ಜೊತೆ ಐಕ್ಯವಾಗಲು ನಿರ್ಧರಿಸಿದಾಗ, ಈ ಐಕ್ಯತೆಯ ಠರಾವನ್ನು ವಿರೋಧಿಸಿದವರು ಮಂಡ್ಯ ಜಿಲ್ಲೆಯವರೇ ಆದ ಒಬ್ಬಿಬ್ಬರು ನಾಯಕರು. ಇಡೀ ದೇಶದಲ್ಲೂ ಸಮಗ್ರ ಮೈಸೂರು ಸಂಸ್ಥಾನದಲ್ಲೂ ಕ್ವಿಟ್ ಇಂಡಿಯಾ ಚಳವಳಿಯು ಉಗ್ರರೂಪದಲ್ಲಿ ನಡೆದಿರಲು ಬ್ರಿಟಿಷರಿಗೆ ತಮ್ಮ ಬೆಂಬಲ ಸೂಚಿಸಿ ಹಲವಾರು ಸಭೆಗಳನ್ನು ನಡೆಸಿದ್ದು ಈ ಜಿಲ್ಲೆಯಲ್ಲೇ. ಕರ್ನಾಟಕ ಏಕೀಕರಣಕ್ಕೆ ವಿರೋಧವನ್ನು ಬಹಿರಂಗವಾಗಿ ಸಭೆ ನಡೆಸಿ ಸೂಚಿಸಿದ್ದು ಮಂಡ್ಯಜಿಲ್ಲೆಯಲ್ಲಿಯೇ. ದೇವರಾಜ ಅರಸು ಅವರು ಜನಪ್ರಿಯತೆಯ ತುಟ್ಟ ತುದಿಯಲ್ಲಿ ಓಲಾಡುತ್ತಿರಲಾಗಿ, ವರುಣಾನಾಲೆಯ ವಿಚಾರದಲ್ಲಿ ಅವರಿಗೆ ಉಗ್ರವಿರೋಧ ಪ್ರಕಟಿಸಿ 'ಚಡ್ಡಿ ಚಳವಳಿ' ನಡೆದದ್ದು ಮಂಡ್ಯ ಜಿಲ್ಲೆಯಲ್ಲೇ. ವಿಚಾರ ಮಾಡುವ ವಿಧಾನದಲ್ಲಿ ಜಿಲ್ಲೆಯ ಸ್ವಂತಿಕೆಯನ್ನು ಉದ್ದೇಶಿಸಿ ಈ ಉದಾಹರಣೆಗಳನ್ನು ನೀಡಿದೆ: ಜಿಲ್ಲೆಯ ಈ ಸ್ವಂತಿಕೆಯನ್ನು ಯಾರೂ ಕಡೆಗಣಿಸುವಂತಿಲ್ಲ. ಮಿಸಲಾತಿ ನೀತಿಗೆ ವಿರುದ್ಧವಾಗಿದ್ದರೆಂದು ಬಹುಪಾಲು ಜನ ಖಾಸಗಿಯಾಗಿಯಾದರೂ ಸರ್ ಎಂ. ವಿಶ್ವೇಶ್ವರಯ್ಯನವರನ್ನು ಟೀಕಿಸುತ್ತಿದ್ದರೆ, ಸರ್ ಎಂ. ವಿ. ಈ ಜಿಲ್ಲೆಗೆ

ಮಾಡಿದ ಸೇವೆಯನ್ನು ಸ್ಮರಿಸಿ ಈ ಜಿಲ್ಲೆಯ ಜನ ಅವರ ಪ್ರತಿಮೆಗೆ ಕಬ್ಬಿನ ಹಾಲಿನ ಅಭಿಷೇಕ ಮಾಡಿದ್ದುಂಟು.

ಮಂಡ್ಯ ಜಿಲ್ಲೆಯ ಇಂದಿನ ಸಂವೃದ್ಧಿಗೆ ನಾಲ್ಮಡಿಕೃಷ್ಣರಾಜರು, ಸರ್ ಎಂ. ವಿ. ಕಾಸರಣಕರ್ತರೆಂಬ ಬಗ್ಗೆ ಸಂದೇಹವಿಲ್ಲ. ಅವರ ದೂರದೃಷ್ಟಿ, ಸತ್ವಯುತ ಪ್ರಯತ್ನ, ಯೋಜನಾಶಕ್ತಿ ಹಾಗೂ ತಾಂತ್ರಿಕ ಕೌಶಲ್ಯಗಳಿಂದಾಗಿಯೇ ಕೃಷ್ಣರಾಜಸಾಗರ ಅಣೆಕಟ್ಟಿನ ನಿರ್ಮಾಣ ಹಾಗೂ ಇರ್ವಿನ್ ನಾಲೆಯೆಂದು ಹೆಸರಿಸಲ್ಪಟ್ಟ (ಈಗ ವಿಶ್ವೇಶ್ವರಯ್ಯ ನಾಲೆಯೆಂದು ಪರಿಚಿತವಾಗಿರುವ)ಭೂಗತ ಕಾಲುವೆಯಿಂದಾಗಿ ಸರಾಸರಿ 747ಮಿಲಿಮಿಟರ್ ನಷ್ಟು ಮಾತ್ರ ಮಳೆಯನ್ನು ಹೊಂದಿ ಮಳೆಯಿಂದಲೇ ಬದುಕಬೇಕಾಗಿದ್ದ ಒಣ ಜಿಲ್ಲೆಯಾದ ಮಂಡ್ಯ ಜಿಲ್ಲೆ ಒಂದು ಸಮೃದ್ಧ ಕೃಷಿಪ್ರಧಾನ ಜಿಲ್ಲೆಯಾಗಿ ಮಾಂಗುಡಿಯಿಟ್ಟು ಅರಳಲು ಸಾಧ್ಯವಾಯಿತು. ಈಗ ನಾಗಮಂಗಲ ತಾಲ್ಲೂಕಿನ ಕೆಲಭಾಗ ಹೇಗಿದೆಯೋ ಆಗ ಇಡೀ ಮಂಡ್ಯ ಜಿಲ್ಲೆ ಹಾಗಿತ್ತು. ನಾಗಮಂಗಲ ತಾಲ್ಲೂಕು ಉತ್ತರದ ಭೂ ಪ್ರದೇಶದಲ್ಲಿ ಇರುವುದರಿಂದ ಕಾವೇರಿ ನೀರನ್ನು ಒಳಸುವುದಾಗಲಿಲ್ಲ ಬಡತನವಲ್ಲಿ ಇಂದಿಗೂ ಒದ್ದಾಡುತ್ತಿರುವ ಈ ತಾಲ್ಲೂಕಿನಿಂದ ಬಂದ ಜನರೇ ಬಹುಮಟ್ಟಿಗೆ ಬೆಂಗಳೂರು, ಮೈಸೂರು ನಗರಗಳಲ್ಲಿನ ಕಚೇರಿಗಳಲ್ಲಿನ 'ಡಿ' ಗುಂಪಿನ ನೌಕರರೂ ವಾಹನಚಾಲಕರೂ, ರಿಕ್ಷಾ ಚಾಲಕರೂ, ಆಗಿದ್ದಾರೆ.(ಆದರೆ ಶೀಘ್ರವೇ ನಾಗಮಂಗಲ ತಾಲ್ಲೂಕು ಹೇಮಾವತಿಯಿಂದ ನೀರನ್ನು ಪಡೆಯಲಿದೆ) ಈ ಜಿಲ್ಲೆಯಲ್ಲಿ ಬಂಡೂರು ತಳಿಯ ಕುರಿಗಳು ಬಹಳ ಪ್ರಸಿದ್ಧವಾಗಿದ್ದವು. ಧನಗೂರಿನಲ್ಲಿ ಈ ತಳಿಗೆ ಸಂಬಂಧಿಸಿದ ಒಂದು ಸರಕಾರಿ ಫಾರ್ಮ್ ಕೂಡ ಇದೆ. ಆದರೆ ನೀರಾವರಿಯಿಂದ ಬೆಳೆದ ಕೆಲವು ವಿಶಿಷ್ಟ ಸನ್ನಿವೇಶಗಳಿಂದಾಗಿ ಈ ಶ್ರೇಷ್ಠ ತಳಿಯ ಅಭಿವೃದ್ಧಿ ಕುಂಟಿತವಾಗಿದೆ.

ಮಂಡ್ಯ ಜಿಲ್ಲೆಯ ಇತಿಹಾಸವು ಶ್ರೀಮಂತವಾದುದು ಹಾಗೂ ವೈವಿಧ್ಯಮಯವಾದುದು. ಗಂಗ, ಹೊಯ್ಸಳ ಹಾಗೂ ಮೈಸೂರು ಅರಸರ ರಾಜ್ಯಗಳ ತಿರುಳುನಾಡಿನಲ್ಲಿ ಈ ಜಿಲ್ಲೆ ಇತ್ತು. ಇದರಿಂದ ಜಿಲ್ಲೆಯ ಬಹುಮುಖಿ ಬೆಳವಣಿಗೆ ಸಾಧ್ಯವಾಯಿತು. ಇಲ್ಲಿ ಕೆರೆಗಳನ್ನು ಕಟ್ಟಿಸಿ ನಾಲೆಗಳನ್ನು ತೆಗೆಸಿ, ಒಡ್ಡುಗಳನ್ನು ನಿಲ್ಲಿಸಿ, ಕರಕುಶಲ ಕಸಬುಗಾರರಿಗೆ ಪ್ರೋತ್ಸಾಹ ನೀಡುವುದು ಸಾಧ್ಯವಾಯಿತು. ಕಲಾಪತ್ತಿನ ಅಂಚಿನ ಸುಂದರ ಪಂಚೆಗಳನ್ನು, ಶಾಲುಗಳನ್ನು ಮೇಲುಕೋಟೆಯ ನೇಕಾರರು ಮೈಸೂರು ಅರಮನೆಗೂ ಪೂರೈಸುತ್ತಿದ್ದರು. ಇಲ್ಲಿನ ಕಲ್ಕುಟಿಗರು, ರೂವಾರಿಗಳು ಉತ್ತಮ ಬೆಂಬಲ ಪಡೆದರು. ವಿದ್ವಾಂಸರಿಗೂ, ಕಲಾವಿದರಿಗೂ ಪ್ರೋತ್ಸಾಹ ನೀಡುವ ಅಗ್ರಹಾರಗಳೂ, ದೇವಾಲಯಗಳೂ ಸ್ಥಾಪಿಸಲ್ಪಟ್ಟವು. ವಿವಿಧ ಲಲಿತ ಕಲೆಗಳೂ, ಜಾನಪದ ಕಲೆಗಳೂ ಸಮೃದ್ಧವಾಗಿ ಬೆಳೆದವು. ವಿದ್ವತ್ತಿನ ಹಾಗೂ ಕಲಿಕೆಯ ಕೇಂದ್ರವಾಗಿದ್ದ ಈ ಜಿಲ್ಲೆಯ ದೇವಾಲಯ ಹಾಗೂ ಅಗ್ರಹಾರಗಳ ಪಟ್ಟಿ ದೀರ್ಘವಾಗಿದ್ದು ಬೆರಗುಗೊಳಿಸುವಂಥದ್ದು. ಇವು ಬ್ರಾಹ್ಮಣರಷ್ಟೇ ಅಲ್ಲ ಎಲ್ಲ ಜಾತಿಗಳ

ಜನರ ಜೀವನದ ಮೇಲೆ ಪ್ರಭಾವ ಬೀರಿವೆ: ದೇವಾಲಯಗಳು ಹಲವು ವಿಧದ ಕರಕುಶಲ ಕಲೆಗಳಿಗೂ ಲಲಿತ ಕಲೆಗಳಿಗೂ ಅವಕಾಶ ನೀಡುವಂತೆ ದತ್ತಿದಾನಗಳನ್ನು ಹೊಂದಿದ್ದವು. ಅಲ್ಲಿನ ಉತ್ಸವ, ಜಾತ್ರೆಗಳು ಜಾನಪದ ಕಲೆಗಳಿಗೂ ಬೆಂಬಲ ನೀಡಿದವು.

ಧಾರ್ಮಿಕ ಕೇಂದ್ರಗಳು ಎಲ್ಲ ಅರಸರಿಂದಲೂ ಬೆಂಬಲವನ್ನು ಪಡೆದವು. ಜೈನ ವೀರಶೈವ, ಶೈವ, ಶ್ರೀವೈಷ್ಣವ ಪಂಥಗಳು ಜನಪ್ರಿಯವಾದವು. ಮೈಲಾರ ಮಾರ್ತಾಂಡ ಅಥವಾ ಖಂಡೋಬಾ ಎಂದು ಪರಿಚಿತನಾದ ಮೈಲಾರದೇವನ ಪೂಜೆಯ ಕೇಂದ್ರಗಳು ಬೆಳ್ಳೂರು, ಮೈಲಾರಪಟ್ಣಗಳಲ್ಲಿ ಇವೆ. ಕುದುರೆಯನ್ನೇರಿ ಖಡ್ಗ (ಖಂಡೆಯ) ಧರಿಸಿದ ಶಿವನ ಸ್ವರೂಪದ ಈ ದೇವರ ಭಕ್ತರು ಬಬ್ಬೂರುಕಮ್ಮೆ ಬ್ರಾಹ್ಮಣರು, ಒಕ್ಕಲಿಗರು ಹಾಗೂ ಕುರುಬರಲ್ಲೂ ಇದ್ದಾರೆ. ನಾಥ ಪಂಥವು ಭೈರವನ ಆರಾಧನೆಗೆ ಸಂಬಂಧಿತವಾಗಿದ್ದು ಅದೂ ಈ ಜಿಲ್ಲೆಯಲ್ಲಿ ಪ್ರಸಿದ್ಧವಾಗಿದೆ. ಶ್ರೀಆದಿ ಚುಂಚನಗಿರಿಯು ಭೈರವ ಆರಾಧನೆಯ ಒಂದು ಕೇಂದ್ರ. ಪ್ರಶಾಂತವಾದ ಉತ್ತರದ ಬೆಟ್ಟಪ್ರಾಂತರ ಮೇಲೆ ದಟ್ಟಡವಿಯ ನಡುವೆ ಇರುವ ಈ ಕ್ಷೇತ್ರದಲ್ಲಿ ಒಕ್ಕಲಿಗರ ಶ್ರೀ ಆದಿಚುಂಚನಗಿರಿಮಠವಿದೆ. ಈ ಮಠದ ಸ್ವಾಮಿಗಳು ಇಲ್ಲಿ ಹಲವು ಶಿಕ್ಷಣ ಸಂಸ್ಥೆಗಳ ಜೊತೆಗೆ ಸಂಸ್ಕೃತ ಪಾಠಶಾಲೆಯೊಂದನ್ನೂ ನಡೆಸುತ್ತಿದ್ದು ಗಂಗಾಧರೇಶ್ವರ, ಚಂದ್ರಮೌಳೀಶ್ವರ ದೇವಾಲಯಗಳೂ ಸಿದ್ಧೇಶ್ವರ ಹಾಗೂ ಸೋಮೇಶ್ವರ ಗುಹಾಲಯಗಳೂ ಇಲ್ಲಿವೆ. ಮನಸೆಳೆಯುವ ಕೆರೆ ಹಾಗೂ ತೊರೆಗಳಿಂದ ತುಂಬಿದ ಈ ನೆಲೆಯಲ್ಲಿ ಒಂದು ರಾಷ್ಟ್ರೀಯ ನವಿಲು ಉದ್ಯಾನವನ್ನೂ ತೆರೆದಿದ್ದಾರೆ.

ಹೊಯ್ಸಳರು ಈ ಜಿಲ್ಲೆಯಲ್ಲಿ ಸೊಗಸಾದ ದೇವಾಲಯಗಳನ್ನು ಕಟ್ಟಿಸಿದರು. ಆಚಾರ್ಯ ರಾಮಾನುಜರು ಈ ಜಿಲ್ಲೆಗೆ ಬಂದು ತೊಂಡನೂರು ಹಾಗೂ ಮೇಲುಕೋಟೆಗಳಲ್ಲಿ ಕೆಲಕಾಲ ನೆಲೆಸಿದ್ದರು. ಅವರ ಪ್ರೇರಣೆಯಿಂದಲೇ ಇಲ್ಲಿ ಹಲವು ಅಗ್ರಹಾರಗಳು ಸ್ಥಾಪನೆಗೊಂಡವು, ಜಿಲ್ಲೆಯಲ್ಲಿರುವ ಹೊಯ್ಸಳ ದೇವಾಲಯಗಳಲ್ಲಿ ಕಿಕ್ಕೇರಿ (ಕೃಷ್ಣರಾಜಪೇಟೆಯಿಂದ 10 ಕಿ ಮೀ. ದೂರ), ಹಾಗೂ ಬಸರಾಳುವಿನವು ತೀರ ಪ್ರಸಿದ್ಧ. ಬಮ್ಮವ್ವ ನಾಯಕಿತಿ ಎಂಬ ಮಹಿಳೆ ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯವನ್ನು 1171ರಲ್ಲಿ ಕಟ್ಟಿಸಿದಳು. ಇದೇ ಸ್ಥಳದಲ್ಲಿ ಹೊಯ್ಸಳ ಶೈಲಿಯ ಮಲ್ಲೇಶ್ವರ ಹಾಗೂ ಜನಾರ್ದನ ದೇವಾಲಯಗಳೂ ಇದ್ದು ಅವು ಜೀರ್ಣಾವಸ್ಥೆಯಲ್ಲಿ ಇವೆ. ಬೇಲೂರು ದೇವಾಲಯದ ಅಗ್ರಸ್ಥಪತಿಯಾಗಿದ್ದ ಬಳ್ಳಿಗಾವೆಯ ದಾಸೋಜ ಕಂಡರಿಸಿದ್ದ ಇಲ್ಲಿನ ಒಂದು ಕೇಶವ ವಿಗ್ರಹವು ನ್ಯೂಯಾರ್ಕಿನ ಮೆಟ್ರೊಪಾಲಿಟನ್ ಮ್ಯೂಸಿಯಂನ ಆಶ್ರಯ ಪಡೆದಿದೆ. ಸೇವುಣ (ಯಾದವ)ರ ವಿರುದ್ಧ ಗಳಿಸಿದ್ದ ವಿಜಯದ ನೆನಪಿಗಾಗಿ ಹೊಯ್ಸಳ ವೀರನಾರಸಿಂಹನ ಸೇನಾನಿಯಾಗಿದ್ದ ಹರಿಹರ ದಂಡನಾಯಕನು ಕಟ್ಟಿಸಿದ ಬಸರಾಳಿನ ಮಲ್ಲಿಕಾರ್ಜುನ ದೇವಾಲಯವು ಅಷ್ಟೇ ಪ್ರಸಿದ್ಧವಾಗಿದೆ.

ಜಿಲ್ಲೆಯ ಇತರ ಗಣ್ಯ ಹೊಯ್ಸಳದೇವಾಲಯಗಳೆಂದರೆ ಹುಳಿಪಳ್ಳಿಯ ಸಾರಂಗಪಾಣಿ ಮಂದಿರ, ಮೂರು ಮೀಟರ್‌ಗೂ ಎತ್ತರದ ಹೊಯ್ಸಳ ಪೂರ್ವಕಾಲದ ವರದರಾಜಸ್ವಾಮಿಯ ಮೂರ್ತಿಯನ್ನು ಹೊಂದಿರುವ ಮದ್ದೂರಿನ ದೇವಾಲಯ, ಅದೇ ಊರಿನ ನರಸಿಂಹ ಮಂದಿರ, ಮಾರಾಪುರದ ತ್ರಯಂಬಕೇಶ್ವರ, ಬಿಂಡಿಗನವಿಲೆ ಕೇಶವ ದೇವಾಲಯ, ಗೋವಿಂದನಹಳ್ಳಿಯ ಪಂಚಲಿಂಗೇಶ್ವರ, ಹೊಸಹೊಳಲಿನ ಲಕ್ಷ್ಮೀನಾರಾಯಣ, ಹಾಗೂ ತೊಣ್ಣೂರಿನ ಲಕ್ಷ್ಮೀನಾರಾಯಣ, ಯೋಗಾನರಸಿಂಹ ಹಾಗೂ ಕೈಲಾಸೇಶ್ವರ ಮಂದಿರಗಳು. ಮೇಲುಕೋಟೆಯ ತಿರುನಾರಾಯಣ ದೇವಾಲಯ ಹೊಯ್ಸಳರ ರಚನೆಯಾಗಿದ್ದು ಮುಂದೆ ಧ್ವಂಸವಾಗಿ ನಂತರ ವಿಜಯನಗರದ ಕಾಲದಲ್ಲಿ ನಾಗಮಂಗಲದ ತಿಮ್ಮಣ್ಣ ದಂಡನಾಯಕನಿಂದ 1460 ರಲ್ಲಿ ಜೀರ್ಣೋದ್ಧಾರ ಹೊಂದಿತು. ಈ ದೇವಾಲಯದ ಪ್ರಸಿದ್ಧ ವೈರಮುಡಿ ಉತ್ಸವ ಒಂದು ವರ್ಣರಂಜಿತ ದೃಶ್ಯ. ಈ ಸ್ಥಳದ ವಿದ್ವತ್ ಪರಂಪರೆಯನ್ನು ಇಲ್ಲಿನ ಸಂಸ್ಕೃತ ಅಕಾದೆಮಿ ಮುಂದುವರಿಸಿಕೊಂಡು ಬಂದಿದೆ. ಖ್ಯಾತ ಕವಿ ಪು. ತಿ. ನರಸಿಂಹಾಚಾರ್ ಹಾಗೂ ಖ್ಯಾತ ಪತ್ರಕರ್ತ ಖಾದ್ರಿ ಶಾಮಣ್ಣ ಇದೇ ಊರಿನವರು.

ಮೈಸೂರಿನ ರಾಜಒಡೆಯರು 1610 ರಲ್ಲಿ ಶ್ರೀರಂಗಪಟ್ಟಣವನ್ನು ಅಲ್ಲಿ ಅಧಿಕಾರಸ್ಥನಾಗಿದ್ದ ವಿಜಯನಗರದ ಮಾಂಡಳಿಕ ಅಧಿಕಾರಿಯನ್ನು ಸೋಲಿಸಿ ಗೆದ್ದು ಕೊಂಡು ಅದನ್ನೇ ರಾಜಧಾನಿಯಾಗಿ ಮಾಡಿಕೊಂಡರು. ಟಿಪ್ಪುವಿನ ಪತನ (1799)ದ ವರೆಗೂ ಶ್ರೀರಂಗಪಟ್ಟಣವೇ ಮೈಸೂರಿನ ರಾಜಧಾನಿಯಾಗಿ ಮುಂದುವರಿಯಿತು. ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿ ಶ್ರೀರಂಗಪಟ್ಟಣಕ್ಕೆ ವಿಶ್ವಖ್ಯಾತಿ ಬಂತು. ತನ್ನ ಕೋಟೆ, ಕೊತ್ತಲಗಳು, ದೇವಾಲಯಗಳು, ಸಮಾಧಿಗಳು ಮತ್ತು ಉದ್ಯಾನಗಳಿಂದ ಈ ಊರು ಒಂದು ಗಣ್ಯ ಪ್ರವಾಸೀಕೇಂದ್ರವಾಗಿದೆ. ಮೈಸೂರಿನಿಂದ ಕೇವಲ 14 ಕಿಲೊಮೀಟರ್ ದೂರದ ಈ ತಾಲ್ಲೂಕುಕೇಂದ್ರವು ಕಾವೇರಿಯ ಮಧ್ಯೆ ಒಂದು ದ್ವೀಪವಾಗಿದ್ದು ಕಾವೇರಿಯ ಎರಡು ಶಾಖೆಗಳ ಅಪ್ಪುಗೆಯಲ್ಲಿ ಇದ್ದಂತಿದೆ. ಇಲ್ಲಿನ ಖ್ಯಾತ ಶ್ರೀರಂಗನಾಥ ದೇವಾಲಯವನ್ನು ಗಂಗರ ಒಬ್ಬ ಅಧಿಕಾರಿ ತಿರುಮಲಯ್ಯನು 894ರಲ್ಲಿ ಕಟ್ಟಿಸಿದನು. (ಇದನ್ನು ಆದಿರಂಗನ ಸ್ಥಳವೆಂದು ಕರೆಯುತ್ತಿದ್ದು ಶಿವನ ಸಮುದ್ರವು ಮಧ್ಯರಂಗಕ್ಷೇತ್ರವೆಂದೂ ತಿರುಚನಾಪಳ್ಳಿ ಜಿಲ್ಲೆಯ ಶ್ರೀರಂಗ ಅಂತ್ಯರಂಗ ಕ್ಷೇತ್ರವೆಂದೂ ಪರಿಚಿತವಾಗಿ, ಈ ಮೂರೂ ಕ್ಷೇತ್ರಗಳು ಕಾವೇರಿಯ ಮಡಿಲಲ್ಲಿವೆ.) ವಿಷ್ಣುವರ್ಧನನ ಸೋದರನಾದ ಉದಯಾದಿತ್ಯನು ಈ ದೇವಾಲಯವನ್ನು 1120ರಲ್ಲಿ ವಿಸ್ತರಿಸಿದನು. ಮುಂದೆ ವಿಜಯನಗರ ಹಾಗೂ ಮೈಸೂರು ಅರಸರು ಇದನ್ನು ಒಹಾಯಿಸಿದರಲ್ಲದೆ ಟಿಪ್ಪುವು ಇದಕ್ಕೆ ದತ್ತಿದಾನಗಳನ್ನು ನೀಡಿದ. ಇಲ್ಲಿ ನರಸಿಂಹ ಹಾಗೂ ಶ್ವೇತರಾಗ ದೇವಾಲಯವನ್ನು ಕಂಠೀರವ ನರಸಿಂಹರಾಜ ಒಡೆಯರು ಕಟ್ಟಿಸಿದ್ದು ಎರಡನೆಯದು ಮುಂದೆ ಧ್ವಂಸವಾಯಿತು. ಇದೇ ಭಾಗದಲ್ಲಿ ಟಿಪ್ಪು ಕಟ್ಟಿಸಿದ ಒಂದು

ಮಸೀದಿಯೂ ಇದೆ. ಅವನು ಕಟ್ಟಿಸಿದ ಹೊಸ ಬಡಾವಣೆಯಲ್ಲಿ ದರಿಯಾದೌಲತ್ ಅಥವಾ 'ಸಾಗರಸಂಪದ'ವೆನಿಸಿರುವ ಅವನ ಬೇಸಿಗೆಯ ಅರಮನೆಯಿದೆ, ಅದರ ಗೋಡೆಗಳಲ್ಲಿ ಭಾರೀ ಸಂಖ್ಯೆಯ ವರ್ಣಚಿತ್ರಗಳಿವೆಯಲ್ಲದೆ ಅರಮನೆಯ ಒಳ ಛಾವಣಿಯು ಗಾರೆಯ ಸುಂದರ ಜ್ಯಾಮಿತಿಯ ಹಾಗೂ ಪುಷ್ಪವಿನ್ಯಾಸಗಳನ್ನು ಹೊಂದಿದೆ ಈ ವಿನ್ಯಾಸಗಳನ್ನು ಉಜ್ವಲ ವರ್ಣಗಳಿಂದ ಅಲಂಕರಿಸಲಾಗಿದೆ. ಈ ಅರಮನೆಯಲ್ಲಿ ಒಂದು ವಸ್ತುಸಂಗ್ರಹಾಲಯವೂ ಇದ್ದು ಟಿಪ್ಪುವು ಬಳಸುತ್ತಿದ್ದ ವಿವಿಧ ವಸ್ತುಗಳು ಹಾಗೂ ಅವನ ಕಾಲದ ಹಲವು ವರ್ಣಚಿತ್ರಗಳೂ ಅದರಲ್ಲಿ ರಕ್ಷಿತವಾಗಿವೆ. ಇದೇ ಪ್ರದೇಶದಲ್ಲಿ ಸುಂದರ ಉದ್ಯಾನವೊಂದರ ನಡುವೆ 'ರುವ ಟಿಪ್ಪು ಮತ್ತು ಹೈದರರ ಸಮಾಧಿಗಳು ಇಲ್ಲಿನ ಇನ್ನೊಂದು ಆಕರ್ಷಣೆ,

ಶ್ರೀರಂಗಪಟ್ಟಣವು ಒಂದು ವೈಭವದ ರಾಜಧಾನಿಯಾಗಿದ್ದು ಸಾಮರ್ಥ್ಯಶೀಲ ಅರಸರಾದ ಕಂಠೀರವ ನರಸರಾಜ (1638-59) ಚಿಕ್ಕದೇವರಾಜ (1673-1704) ಇವರೆಲ್ಲ ಇಲ್ಲಿಂದ ಆಳಿದರು. ಭಾರತೀನಂಜನ 'ಕಂಠೀರವನರಸರಾಜ ವಿಜಯ'ದಲ್ಲಿ ಕಂಠೀರವನ ಆಳ್ವಿಕೆಯ ವರ್ಣನೆ ಇದೆ. ಚಿಕ್ಕದೇವರಾಜ ಒಡೆಯರು ಸ್ವತಃ ತಾವೇ 'ಚಿಕ್ಕದೇವರಾಜ ಬಿನ್ನಪಂ' ವನ್ನು ರಚಿಸಿದ್ದಲ್ಲದೆ ಅವರ ಮಂತ್ರಿಯಾದ ಕವಿ ತಿರುಮಲಾರ್ಯ, ಅಲ್ಲದೆ ಸಿಂಗರಾರ್ಯ, ಚಿಕ್ಕುಪಾಧ್ಯಾಯ, ಸಂಚಿಯ ಹೊನ್ನಮ್ಮ ಮುಂತಾದ ಕವಿಗಳಿಗೆ ಆಶ್ರಯದಾತರಾಗಿದ್ದರು. ಕನ್ನಡ ಸಾಹಿತ್ಯವನ್ನು ಈ ಶ್ರೀ ವೈಷ್ಣವ ಕವಿಗಳು ಈ ಕಾಲದಲ್ಲಿ ಶ್ರೀಮಂತಗೊಳಿಸಿದರು. 'ಮಿತ್ರವಿಂದ ಗೋವಿಂದ' ಸಿಂಗರಾರ್ಯನು ಬರೆದ ಪ್ರಥಮ ಉಪಲಬ್ಧ ಕನ್ನಡ ನಾಟಕವಾಗಿದೆ.

ಶ್ರೀರಂಗಪಟ್ಟಣದ ಸಮೀಪದಲ್ಲಿಯೇ ಕಾವೇರಿಯ ಹಲವಾರು ದ್ವೀಪ ಸಮೂಹ ಗಳಲ್ಲಿ ಪ್ರಸಿದ್ಧ ರಂಗನತಿಟ್ಟು ಪಕ್ಷಿಧಾಮವಿದೆ. ಕೊಕ್ಕರೆ ಬೆಳ್ಳೂರು ಮದ್ದೂರಿನಿಂದ 15 ಕಿ. ಮೀ. ದೂರದಲ್ಲಿ ಇರುವ ಇನ್ನೊಂದು ಪಕ್ಷಿಧಾಮವಾಗಿದ್ದು ಪೆಲಿಕನ್ ಹಕ್ಕಿಗಳು ಅಸಂಖ್ಯ ಪ್ರಮಾಣದಲ್ಲಿ ಇಲ್ಲಿಗೆ ಸಂದರ್ಶನ ನೀಡುತ್ತವೆ. ಮದ್ದೂರು–ಮಳವಳ್ಳಿ ರಸ್ತೆಯಲ್ಲಿ ಶಿವನ ಸಮುದ್ರವಿದ್ದು ಇಲ್ಲಿ ಕಾವೇರಿಯು ಮತ್ತೆ ಎರಡು ಶಾಖೆಗಳಾಗಿ ಒಡೆಯುತ್ತದೆ. ಸುಮಾರು 100 ಮೀಟರ್ ಎತ್ತರದಿಂದ ಉರುಳುವ ಕಾವೇರಿಯ ಎರಡು ಜಲಪಾತಗಳು ಶಿವನ ಸಮುದ್ರದಲ್ಲಿದ್ದು ಗಗನಚುಕ್ಕಿ ಹಾಗೂ ಬರಚುಕ್ಕಿ ಎಂದು ಇವು ಪ್ರಸಿದ್ಧವಾಗಿವೆ. ಇವುಗಳಿಂದ ನೀರನ್ನು ಕೊಳಾಯಿಗಳ ಮೂಲಕ ಸಾಗಿಸಿ ಬ್ಲಫ್ ಎಂಬಲ್ಲಿ 1902 ರಲ್ಲಿ ವಿದ್ಯುತ್ತನ್ನು ಉತ್ಪಾದಿಸಲು ಆರಂಭಿಸಿದರು. ಈ ದ್ವೀಪದಲ್ಲಿ ಹೊಯ್ಸಳರ ಕಾಲದ ರಂಗನಾಥ ಮಂದಿರ ಹಾಗೂ ಸೋಮೇಶ್ವರ ಮತ್ತು ವೀರಭದ್ರ ದೇವಾಲಯಗಳಿವೆ, ಸೋಮೇಶ್ವರ ದೇವಾಲಯ ಪ್ರವೇಶದ್ವಾರವು ಆಕರ್ಷಕವಾಗಿದೆ. ಕೃಷ್ಣದೇವರಾಯನು ಉಮ್ಮತ್ತೂರು ಪಾಳಯಗಾರನ ವಶವಿದ್ದ ಈ ಸ್ಥಳವನ್ನು ಗೆಲ್ಲಲು ಸ್ವತಃ ಇದಕ್ಕೆ ಮುತ್ತಿಗೆ ಹಾಕಿದ್ದನು. ಕೃಷ್ಣದೇವರಾಯನ ಪಟ್ಟದ ರಾಣಿ

ತಿರುಮಲಾದೇವಿಯು ಶ್ರೀರಂಗಪಟ್ಟಣದ ಪಾಳೆಯಗಾರನ ಮಗಳಾಗಿದ್ದಳು. ಬ್ಲಫ್‌ನಿಂದ 14 ಕಿ.ಮೀ. ದೂರದಲ್ಲಿ ಶಿಂಷಾ ಎಂಬ ಕಾವೇರಿಯ ಉಪನದಿಯು ಕಾವೇರಿಗೆ ಸೇರುವ ಮೊದಲು 94 ಮೀಟರ್ ಎತ್ತರದಿಂದ ಕೆಳಕ್ಕೆ ಜಿಗಿಯುವ ಆಕರ್ಷಕ ಶಿಂಷಾ ಜಲಪಾತವಿದೆ.

ಶ್ರವಣಬೆಳಗೊಳದಿಂದ ಕೆಲವೇ ಕಿಲೊಮೀಟರ್ ದೂರದಲ್ಲಿರುವ ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿಯಲ್ಲಿ ಗಂಗರ ಕಾಲದ ಒಂದು ಪಂಚಕೂಟ ಬಸದಿಯಿದ್ದು ಇದರ ಗೋಡೆ ಮತ್ತು ಒಳಛಾವಣಿಯಲ್ಲಿ ಸುಂದರ ಶಿಲ್ಪಗಳಿವೆಯಲ್ಲದೆ, ಈ ಬಸದಿಗೆ ಸಂಬಂಧಿಸಿ 14 ಮೀಟರ್ ಎತ್ತರದ ಸುಂದರ ಬ್ರಹ್ಮದೇವರ ಸ್ತಂಭವಿದೆ. ಇದರಿಂದಲೇ ಈ ಊರಿಗೆ ಕಂಬದಹಳ್ಳಿಯೆಂಬ ಹೆಸರು ಬಂದಿದೆ. ಅಲ್ಲಿನ ಶಾಂತಿನಾಥ ಬಸದಿಯನ್ನು ವಿಷ್ಣುವರ್ಧನನ ಸೇನಾನಿ ಗಂಗರಾಜನ ಮಗ ಬೊಪ್ಪನು ಕಟ್ಟಿಸಿದನು. ಗರ್ಭಗೃಹದಲ್ಲಿ ತೀರ್ಥಂಕರ ಮೂರ್ತಿ ಎರಡು ಮೀಟರ್‌ಗೂ ಎತ್ತರವಾಗಿದೆ. ಈಗ ಒಂದು ಸಕ್ಕರೆ ಕಾರ್ಖಾನೆಯನ್ನು ಹೊಂದಿರುವ ಪಾಂಡವಪುರವು ಹೈದರ್ ಮತ್ತು ಟಿಪ್ಪುಗಳ ಕಾಲದಲ್ಲಿ ಅವರ ಸೇನೆಯಲ್ಲಿ ಇದ್ದ ಫ್ರೆಂಚ್ ಸೈನಿಕರ ನೆಲೆವೀಡಾಗಿದ್ದುದರಿಂದ ಹಿಂದೆ ಫ್ರೆಂಚ್ ರಾಕ್ಸ್ ಎಂಬ ಹೆಸರು ಪಡೆದಿತ್ತು. ಅದಕ್ಕೂ ಹಿಂದೆ ಹಿರೋಡೆ ಎಂಬ ಹೆಸರಿದ್ದ ಈ ಊರಲ್ಲಿ ಎರಡು ಆಕರ್ಷಕ ಬಂಡೆಗಲ್ಲಿನ ಬೆಟ್ಟಗಳಿದ್ದು ಅವುಗಳ ಜೊತೆ ಪಾಂಡವರ ಸಂಪರ್ಕವನ್ನು ಜೋಡಿಸಲಾಗುತ್ತದೆ. ಕೃಷ್ಣರಾಜಪೇಟೆ (ಹಿಂದಿನ ಅತ್ತಿಗುಪ್ಪೆ) ತಾಲ್ಲೂಕಿನಲ್ಲಿ ತೊಣಚಿಯಂಥ ಆಕರ್ಷಕ ಪ್ರವಾಸೀಕೇಂದ್ರಗಳಿವೆ. ಅಘಲಯ ಮತ್ತು ತೆಂಗಿನಘಟ್ಟಗಳಲ್ಲಿ ಹೊಯ್ಸಳ ದೇವಾಲಯಗಳಿದ್ದು ಸಾಸಲು ಒಂದು ಪುಣ್ಯಕ್ಷೇತ್ರವಾಗಿದೆ.

ಮಳವಳ್ಳಿ ತಾಲ್ಲೂಕಿನ ಬೊಪ್ಪಗೌಡನ ಪುರದಲ್ಲಿ ಖ್ಯಾತ ಸಂತ ಮಂಟೇಸ್ವಾಮಿಗಳ ಸಮಾಧಿಯಿದ್ದು ಇದು ಇನ್ನೊಂದು ಗಣ್ಯ ಯಾತ್ರಾಸ್ಥಾನ. ಈ ಸಂಪ್ರದಾಯದ ನೀಲಗಾರರೆಂಬ ಜಾನಪದ ಕಲಾವಿದರ ಪರಂಪರೆ ಪ್ರಸಿದ್ಧವಾದುದು. ಇಡೀ ಮಂಡ್ಯ ಜಿಲ್ಲೆಯಲ್ಲಿ ಜಾನಪದ ಸಾಹಿತ್ಯ ಮತ್ತು ಕಲೆಗಳ ಶ್ರೀಮಂತ ಪರಂಪರೆಯಿದೆ. ಯಕ್ಷಗಾನ, ಕಂಸಾಳೆ ಮೇಳ, ದೊಂಬಿದಾಸರ ಆಟ, ಡೊಳ್ಳಿನ ಕುಣಿತ, ಜಡೆಕೋಲಾಟ, ಬೊಂಬೆಯಾಟ ಇವೆಲ್ಲ ಪ್ರಸಿದ್ಧ ಜಾನಪದ ಕಲೆಗಳು. ನಾಗಮಂಗಲದ ಹೊಂಬಯ್ಯನ ಬೊಂಬೆಯಾಟದ ಮೋಡಿ ಅಸಾಧಾರಣವಾದದ್ದು. ಎಚ್. ಎಲ್. ನಾಗೇಗೌಡ, ಹ. ಕ. ರಾಜೇಗೌಡ, ಜೀ. ಶಂ. ಪರಮಶಿವಯ್ಯ ಮುಂತಾದ ವಿದ್ವಾಂಸರು ಈ ಕ್ಷೇತ್ರದಲ್ಲಿ ಅಧ್ಯಯನ ನಡೆಸಿದ ಈ ಜಿಲ್ಲೆಯ ಗಣ್ಯವಿದ್ವಾಂಸರಾಗಿದ್ದಾರೆ.

ಶ್ರೀರಂಗಪಟ್ಟಣದ ಆಸ್ಥಾನದಲ್ಲಿ ಇದ್ದವರೇ ಅಲ್ಲದೆ 'ಭೈರವೇಶ್ವರ ಕಾವ್ಯ' ಬರೆದ ನಂಜುಂಡ ಆರಾಧ್ಯ (1550) ಈ ಜಿಲ್ಲೆಯ ಉಲ್ಲೇಖನೀಯ ಕವಿ. ಗಣ್ಯ ಕನ್ನಡ ಕವಿ ಷಡಕ್ಷರದೇವ (1655) ನು 'ರಾಜಶೇಖರ ವಿಲಾಸ', 'ವೃಷಭೇಂದ್ರ

ವಿಜಯ' ಮುಂತಾದ ಕನ್ನಡ ಕೃತಿಗಳನ್ನೂ 'ಕರ್ಣರಸಾಯನ' ಎಂಬ ಸಂಸ್ಕೃತ ಕೃತಿಯನ್ನೂ ಬರೆದವನಾಗಿದ್ದು ಮಳವಳ್ಳಿ ತಾಲ್ಲೂಕಿನ ಧನಗೂರು ವೀರಶೈವ ಮಠದ ಪೀಠಾಧಿಪತಿಯಾಗಿದ್ದನು. ಇಂದಿಗೂ ಈ ಮಠವು ವಿದ್ವತ್ತು, ಅಧ್ಯಯನಗಳನ್ನು ಪ್ರೋತ್ಸಾಹಿಸುತ್ತಾ ಬಂದಿದೆ.

ಕನ್ನಡ ನವೋದಯದ ಅಧ್ವರ್ಯುಗಳಾದ ಶ್ರೀಕಂಠೇಶಗೌಡ, ಬಿ. ವೆಂಕಟಾಚಾರ್ಯ ಹಾಗೂ ಬಿ. ಎಂ. ಶ್ರೀಕಂಠಯ್ಯ, ಬಿ.ಎಂ.ಶ್ರೀ ಅವರ ಸೋದರರ ಪುತ್ರಿಯರಾದ ತ್ರಿವೇಣಿ ಹಾಗೂ ಆರ್ಯಾಂಬಾಪಟ್ಟಾಭಿ, ಪ್ರೊ. ಎ. ಎನ್. ಮೂರ್ತಿರಾವ್, ಮದ್ದೂರಿನ ಸೀತಾರಾಮಶಾಸ್ತ್ರಿ ('ವೀರಕೇಸರಿ'),ಅವರ ಪುತ್ರ ರಾಮಮೂರ್ತಿ, ಖ್ಯಾತ ಕನ್ನಡ ಕವಿ ಕೆ. ಎಸ್. ನರಸಿಂಹಸ್ವಾಮಿ, ಯುವ ಪೀಳಿಗೆ ಸಾಹಿತಿಗಳಾದ ನಾಗತಿಹಳ್ಳಿ ಚಂದ್ರಶೇಖರ, ಬೆಸಗರಹಳ್ಳಿ ರಾಮಣ್ಣ ಇದೇ ಜಿಲ್ಲೆಯವರು. ಪಿಟೀಲು ಸುಬ್ಬಣ್ಣ, ಮಳವಳ್ಳಿ ಸುಂದರಮ್ಮ, ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್ ಹಾಗೂ ವರದರಾಜ ಅಯ್ಯಂಗಾರ್, ಶ್ರೀರಂಗಪಟ್ಟಣದ ಮುಖ್ಯ ವೀಣಾಪಟು ಎ. ವಿ. ನಾರಣಪ್ಪ ಇವರೆಲ್ಲ ಶ್ರೇಷ್ಠ ಕಲಾವಿದರು.

ಸ್ವಾತಂತ್ರ್ಯ ಸಂಗ್ರಾಮಕ್ಕೆ ಶಿವಪುರದಲ್ಲಿ (ಮದ್ದೂರು) ನಡೆದ ಪ್ರಥಮ ಮೈಸೂರು ಕಾಂಗ್ರೆಸ್ ಅಧಿವೇಶನದಿಂದ (1938) ಹೆಚ್ಚಿನ ಚಾಲನೆ ಬಂತು. ಅದನ್ನು ಇಲ್ಲಿ ಸಂಘಟಿಸುವ ಹೊಣೆಹೊತ್ತು ಕೆಲಸ ಸಾಧಿಸಿದವರು ಎಚ್. ಕೆ. ವೀರಣ್ಣಗೌಡರು. (1930-31ರಲ್ಲಿ ಇಲ್ಲಿನ ಇರ್ವಿನ್‌ನಾಲಾ ರೈತರಚಳವಳಿಯಲ್ಲಿ 4,000 ರೈತರ ಜಾಥಾ ಕಾಲ್ನಡಿಗೆಯಿಂದ ಮದ್ದೂರಿನಿಂದ ಬೆಂಗಳೂರಿಗೆ ಸಾಗಿದ್ದು ಇವರ ನಾಯಕತ್ವದಲ್ಲೇ). ಶಿವಪುರ ಕಾಂಗ್ರೆಸ್ಸಿನ ಒಂದು ಭವ್ಯ ಸ್ಮಾರಕ ಈಗ ಅಲ್ಲಿ ತಲೆಎತ್ತಿದೆ. ಕೆ.ವಿ. ಶಂಕರಗೌಡ, ಕೆ. ಸಿಂಗಾರಿಗೌಡ, ಮಳವಳ್ಳಿ ವೀರಪ್ಪ, ಎಂ.ಆರ್.ಎಸ್. ಶಾಸ್ತ್ರಿ, ಟಿ. ಎನ್. ಮಾದಪ್ಪಗೌಡ, ಜಿ. ಎಸ್. ಜವರಪ್ಪಗೌಡ, ಟಿ. ಮರಿಯಪ್ಪ, ಕೃಷ್ಣಮೂರ್ತಿ ಇವರೆಲ್ಲ ಜಿಲ್ಲೆಯ ಗಣ್ಯ ಸ್ವಾತಂತ್ರ್ಯ ಯೋಧರು. ಕಾಂಗ್ರೆಸ್ಸಿನಲ್ಲಿ ಇರದಿದ್ದರೂ ಜಿಲ್ಲೆಯ ಪ್ರಗತಿಗೆ ತಮ್ಮದೇ ಕೊಡುಗೆ ನೀಡಿದ ನಾಯಕರು ಎಸ್.ಸಿ. ಮಲ್ಲಯ್ಯ, ಬಿ.ಜಿ. ಲಿಂಗೇಗೌಡ ಹಾಗೂ ವರ್ಣರಂಜಿತ ವ್ಯಕ್ತಿತ್ವದ ಮೈಲಾರಪಟ್ಟಣದ ಶಂಕರಲಿಂಗೇಗೌಡ.

ಇತ್ತೀಚೆಗೆ ಶಿಕ್ಷಣ ಮತ್ತು ಸಹಕಾರ ರಂಗದಲ್ಲಿ ಜಿಲ್ಲೆಯು ಉಲ್ಲೇಖನೀಯ ಪ್ರಗತಿ ಸಾಧಿಸಿದೆ. ಈ ಪ್ರಸಂಗದಲ್ಲಿ ಉಲ್ಲೇಖಿಸಲೇಬೇಕಾದ ಗಣ್ಯರು ಕೆ,ವಿ. ಶಂಕರೇಗೌಡರು. ಖ್ಯಾತ ಸಂಸತ್‌ಪಟು ಎಸ್. ಎಂ. ಕೃಷ್ಣ ಕೂಡ ಜಿಲ್ಲೆಯಲ್ಲಿನ ಅನೇಕ ಪ್ರಗತಿಕಾರ್ಯಗಳಿಗೆ ಕಾರಣಕರ್ತರು. ಗೃಹಕೈಗಾರಿಕೆಗಳಾದ ಕಾಗದ, ಗಾಜು ಮತ್ತು ಕಲಾಪತ್ತಿನ ನೇಯ್ಗೆಯಲ್ಲಿ ಜಿಲ್ಲೆಗೆ ಗಣ್ಯಸ್ಥಾನವಿತ್ತು. ನಾಗಮಂಗಲದ ಲೋಹ ಕರ್ಮಿಗಳು ಪ್ರತಿಮೆಗಳ ನಿರ್ಮಾಣದಲ್ಲಿ ಎತ್ತಿದ ಕೈ ಎಂದು ಪ್ರಸಿದ್ಧರು. ಹೊಸ ಕೈಗಾರಿಕೆಗಳ ಕ್ಷೇತ್ರದಲ್ಲೂ ಈ ಜಿಲ್ಲೆಗೆ ಒಳ್ಳೆಯ ಭವಿಷ್ಯವಿದೆ. ಇಲ್ಲಿಯ ಜನ ಕಾರ್ಯ

ಶೀಲರು, ಹೊಸದಾಗಿ ದೊರಕಿದ ನೀರಾವರಿ ಹಾಗೂ ವಿದ್ಯುತ್ ಸೌಲಭ್ಯಗಳ ಬಳಕೆಯ ಬಗ್ಗೆ ಉತ್ಸಾಹವುಳ್ಳವರು. ಖ್ಯಾತ ಕೃಷ್ಣರಾಜಸಾಗರ ಅಣೆಕಟ್ಟು ವೃಂದಾವನ ಉದ್ಯಾನವೂ ಇರುವುದು ಇದೇ ಜಿಲ್ಲೆಯಲ್ಲಿ.

ಮಂಡ್ಯ ಜಿಲ್ಲೆಯ ಸಮೃದ್ಧಿಗೆ ಕಾರಣ ಅದರ ಮೂಲಕ ಹರಿಯುವ ಕಾವೇರಿ ಮತ್ತು ಅದರ ಉಪನದಿಗಳು. ಈ ನದಿಗಳು ಈ ಜಿಲ್ಲೆಗೆ ನೀಡಿದ ಸಮೃದ್ಧಿಯ ವರದಾನ ಸಹ ಸ್ಮರಣೀಯ.

ಸೂರ್ಯನಾಥ ಕಾಮತ್

ನಾಗಮಂಗಲ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ

'ನಾಚ್ಕೆಗೀಚ್ಕೆ ನಾಗಮಂಗಲದಿಂದ ಆಚ್ಗೆ' ಎಂಬ ನಾಣ್ಣುಡಿಯೊಂದುಂಟು. ಈ ಗಾದೆಯು ಪೂರ್ಣ ಅರ್ಥವಾಗಬೇಕಾದರೆ ನಾಗಮಂಗಲಕ್ಕೇ ಹೋಗಬೇಕು. ಅಲ್ಲಿಯ ಜನರ ನಡವಳಿಕೆಗಳನ್ನು ನೋಡಿಯೇ ತಿಳಿಯಬೇಕು. ಭ್ರಷ್ಟಾಚಾರ, ಮೋಸ, ಧಗಗಳೇ ತುಂಬಿರುವ ಈ ಕಾಲದಲ್ಲೂ ಅಂಜಿಕೆ, ನಾಚಿಕೆ, ಮಾನ, ಮರ್ಯಾದೆ, ನೀತಿ, ನಿಯಮ ಇತ್ಯಾದಿಗಳೇನಾದರೂ ಉಳಿದಿದ್ದರೆ ನಾಗಮಂಗಲದಲ್ಲಿ ಎಂದೇ ಹೇಳಬೇಕು. ಕಾರಣ ಇಷ್ಟೆ ; ನೀವು ಯಾವುದೇ ಪ್ರದೇಶ ಅಥವಾ ವರ್ಗದ ಜನರನ್ನು ಗಮನಿಸಿ, ಎಲ್ಲಿ ಅನಕ್ಷರತೆ, ಒಡತನ ಇರುತ್ತದೊ ಅಂತಹವರಲ್ಲಿ ಈ ಗುಣಗಳೆಲ್ಲ ಇರುತ್ತವೆ. ಪಾಪ, ಪುಣ್ಯ, ಧರ್ಮ–ಕರ್ಮಗಳ ಬಗ್ಗೆ ಯೋಚಿಸುವ ಜನ ಅಲ್ಲಿ ಇರುತ್ತಾರೆ. ಇವುಗಳಿಗೆ ಅರ್ಥ ಸಿಗುವುದೂ ಇಲ್ಲಿಯೆ. ಇದೆಲ್ಲ ಹಿಂದಿನ ಮಾತು, ಈಗ ಇಲ್ಲೂ ಪರಿಸ್ಥಿತಿ ಬದಲಾಗಿದೆ. ಅಂದರೆ, ಅದಕ್ಕೆ ವಿದ್ಯಾವಂತನಾಗಿರಿಕರು ಎನ್ನಿಸಿಕೊಂಡ ನಾವೇ ಕಾರಣರು ಅನ್ನಿಸುತ್ತದೆ.

ಹಣ, ವಿದ್ಯೆ, ಹೆಚ್ಚಿದಂತೆಲ್ಲ ವ್ಯಕ್ತಿ ಸ್ವಾರ್ಥಿಯಾಗುತ್ತಾನೆ. ಲೋಭಿಯಾಗುತ್ತಾನೆ. ಅವನ ಪರಿಸರವೂ ಅದಕ್ಕೆ ಕಾರಣ. ತೀರಾ ಗರೀಬನೋ ಇಲ್ಲ ಹಣವಂತನೋ ಆದಲ್ಲಿ ಅವನು ಯಾವ ಸಾಮಾಜಿಕ ಕಟ್ಟುಪಾಡಿಗೂ ಹೆದರಲಾರ. ಮಧ್ಯಮ ವರ್ಗದವನೇ ಇವುಗಳ ನಡುವೆ ಸಿಲುಕಿ ನರಳುವವನು. ನಾಗಮಂಗಲದ ಜನ ಇಂಥ ಪರಿಸ್ಥಿಯಲ್ಲಿದ್ದಾರೆ.

ನಮ್ಮ ಅಜ್ಜ, ಅಜ್ಜಿ, ಅಪ್ಪ, ಅವ್ವರಲ್ಲಿ ಇರಬಹುದಾದ ಒಳ್ಳೆಯಗುಣ–ನಾಲ್ಕು ಜನಕ್ಕೆ ತನ್ನ ಕೈಲಾದ ಸಹಾಯ ಮಾಡುವ ಮನಸ್ಸು, ಎಲ್ಲರೊಡನೆಯೂ ಹೊಂದಿಕೊಂಡು ಜೀವನ ಮಾಡುವ ಗುಣ ನಮ್ಮಲ್ಲಿ ಇರಲಾರವು. ನಮಗೆ ಗುಮಾಸ್ತೆಯಂತಹ ಒಂದು ಹುದ್ದೆ ಸಿಕ್ಕರೂ ಸಾಕು, ಹಳ್ಳಿಗೆ ನಮಸ್ಕಾರ ಹೇಳಿಬಿಡುತ್ತೇವೆ : ಹೆಂಡಿರು ಮಕ್ಕಳೊಡನೆ ಪಟ್ಟಣ ಸೇರಿ ಪ್ರತ್ಯೇಕವಾಗಿಯೇ ಇದ್ದುಬಿಡುತ್ತೇವೆ. ನಾವು ದುಡಿದದ್ದು ನಮಗೇ ಸಾಲದಿದ್ದಾಗ ಅನಿವಾರ್ಯವಾಗಿ ಹೊಟ್ಟೆ ಬಟ್ಟೆ ಕಟ್ಟಿ ಓದಿಸಿದ್ದ ಅಪ್ಪ ಅವ್ವರನ್ನೂ ಮರೆತುಬಿಡುತ್ತೇವೆ. ಇಷ್ಟಾದರೂ ಗ್ರಾಮೀಣ ಮನಸ್ಸು ತಮ್ಮ ಮಕ್ಕಳ ಮೇಲಿನ ಮಮಕಾರವನ್ನು ತೊರೆಯಲಾರದು. ನಮ್ಮ ತೊಂದರೆಯನ್ನೇ ಕೇಳಿ ಮರುಗುತ್ತದೆ. ತಾವು ಬೆಳೆದದ್ದನ್ನೂ ಹೊರಿಸಿ ಕಳುಹಿಸು

ತ್ತಾರೆ ಇದು ನಾಗಮಂಗಲದ ಜನರ ಮನಸ್ಥಿತಿ.

ಇನ್ನು ಅವರ ಬದುಕು ಬವಣೆಗಳೇ ಬೇರೆ. ನಾಗಮಂಗಲ ಎಂದರೆ ಬೆಂಗಾಡಿಗೆ ಮತ್ತೊಂದು ಹೆಸರು. ಇಲ್ಲಿಯವರನ್ನು ಕಲ್ಲು ತುಣಿದ ಜನ ಎಂದೇ ಕರೆಯುತ್ತಾರೆ. ಇಲ್ಲಿಯ ಬಡತನ, ಬರಗಾಲಗಳು ಅವರನ್ನು ಪ್ರಪಂಚದ ಮೂಲೆ ಮೂಲೆಗೂ ಕಳಿಸಿವೆ. ಬೊಂಬಾಯಿಯಲ್ಲಂತೂ ಉಡುಪಿಯವರಿಗೂ ನಾಗಮಂಗಲದವರಿಗೂ ಪೈಪೋಟಿಯೇ ನಡೆದಿದೆ. ಇತ್ತೀಚೆಗೆ ದುಬಾಯಿಯ ಹಣವೂ ಬರತೊಡಗಿದೆ. ಹಳ್ಳಿಗಳಲ್ಲೂ ಸೌಧಗಳು ಎದ್ದಿವೆ. ಪ್ರಪಂಚದ ಯಾವುದೇ ಮೂಲೆಯಲ್ಲಿ ಕನ್ನಡ ಶಬ್ದವೇನಾದರೂ ಕಿವಿಯ ಮೇಲೆ ಬಿದ್ದರೆ ಅವನು ನಾಗಮಂಗಲದವನೇ ಇರಬೇಕೆಂಬ ಅನುಮಾನ ಸಹಜವಾಗಿಯೇ ಮೂಡುತ್ತದೆ. (ಗುಲ್ಬರ್ಗ, ಬಿಜಾಪುರ, ರಾಯಚೂರು ಭಾಗದವರೂ ದೇಶದ ನಾನಾಕಡೆ ಇದ್ದರೂ ಅವರ ಉಡುಪಿನಿಂದಾಗಿ ನೇರವಾಗಿ ಗುರುತಿಸಲ್ಪಡುತ್ತಾರೆ) ಈ ಬಗ್ಗೆ ಒಂದು ತಮಾಷೆಯ ಕಥೆಯೇ ಹುಟ್ಟಿಕೊಂಡಿದೆ. ಅದೇನೆಂದರೆ : ಅಮೇರಿಕನ್ನರು ಚಂದ್ರಲೋಕಕ್ಕೆ ಹೋಗಿ ಬಂದದ್ದು ಸರಿಯಷ್ಟೆ. ಇವರು ಚಂದ್ರನ ಮೇಲೆ ಬರುತ್ತಾರೆಂದು ಅಷ್ಟರಲ್ಲಿ ಅಮೇರಿಕನ್ನರಿಗಿಂತ ಮೊದಲೇ ಹೋಗಿ ಉಡುಪಿಯವನು ಹೋಟೆಲ್ ತೆರೆದಿದ್ದನಂತೆ. ಅಲ್ಲಿ ಒಂದು ಹೋಟೇಲ್ ಆಗುತ್ತದೆಂದು ತಿಳಿದು ನಾಗಮಂಗಲದವನು ಉಡುಪಿಯವನಿಗಿಂತ ಮೊದಲೇ ಹೋಗಿ ಹಸು ಎಮ್ಮೆ ಕಟ್ಟಿಕೊಂಡಿದ್ದನಂತೆ.

ಈ ಬಡ ತಾಲ್ಲೂಕು ನಾಡಿಗೆ ಹೆಸರಾದ ಪ್ರಸಿದ್ಧ ಸಾಹಿತಿಗಳನ್ನು ಅಧಿಕಾರಿಗಳನ್ನೂ ಕೊಟ್ಟಿದೆ. ಆಚಾರ್ಯ ಬಿ. ಎಂ. ಶ್ರೀಯವರೇ ಮೊದಲಾದ ಸಾಹಿತಿಗಳು, ಹೆಸರಾಂತ ಸಾಹಿತಿಗಳೂ, ಜಾನಪದ ಕ್ಷೇತ್ರ ಪರಿಣಿತರೂ ಆದ ಎಚ್. ಎಲ್. ನಾಗೇಗೌಡರು, ಬಿ. ಎನ್. ಗುರುಡಾಚಾರ್, ಎಂ. ಮುನಿಸ್ವಾಮಿ ಮೊದಲಾದ ದಕ್ಷ ಅಧಿಕಾರಿಗಳು, ಕರ್ನಾಟಕದ ಪ್ರಥಮ ಜಾನಪದ ಪ್ರಾಧ್ಯಾಪಕರಾದ ಡಾ॥ ಜೀ.ಶಂ. ಪರಮಶಿವಯ್ಯನವರು, ದಕ್ಷಿಣ ಕರ್ನಾಟಕದ ಜನಪದ ಗೀತ ಸಾಹಿತ್ಯದ ಪ್ರಮುಖ ಸಂಗ್ರಹಕಾರರಲ್ಲಿ ಒಬ್ಬರಾದ ಕರಾಕೃ ಅವರು, ಜಾನಪದ ಮತ್ತು ಸಂಶೋಧನೆ ಎರಡೂ ಕ್ಷೇತ್ರದಲ್ಲಿ ಪ್ರಸಿದ್ಧರಾದ ಹ. ಕ. ರಾಜೇಗೌಡರು ಈ ತಾಲ್ಲೂಕಿನವರು. ಕನ್ನಡ ಕಥಾಲೋಕದಲ್ಲಿ ಹೆಸರಾಗಿರುವ ನಾಗತಿಹಳ್ಳಿ ಚಂದ್ರಶೇಖರ, ಜಾನಪದಕ್ಕೆ ಮೀಸಲಾದ 'ಜಾನಪದ ಜಗತ್ತು' ನಂತಹ ಅಪೂರ್ವ ಪತ್ರಿಕೆಯ ಸಂಪಾದಕ ವಿ. ಎನ್. ಶಿವರಾಮು ಮೊದಲಾದ ಯುವ ಪೀಳಿಗೆಯವರೂ ಈ ಮಣ್ಣ ಮಕ್ಕಳು. ಇವರೆಲ್ಲ ಹಣ ಮತ್ತು ಶ್ರಮದ ಬೆಲೆಯನ್ನು ಅರಿತವರು. ಶಾಲಾಕಾಲೇಜಿಗಿಂತ ನಿಜ ಜೀವನದಲ್ಲಿ ಹೆಚ್ಚು ಕಲಿತವರು. ಹೀಗಾಗಿ ಅವರವರ ಕ್ಷೇತ್ರದಲ್ಲಿ ಪ್ರಾಮಾಣಿಕ ದುಡುಮೆಯಿಂದಾಗಿ ಹೆಸರುಗಳಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟದಲ್ಲೂ ನಾಗಮಂಗಲ ತಾಲ್ಲೂಕು ಹಿಂದುಳಿದಿಲ್ಲ. ಮಂಡ್ಯ

ಜಿಲ್ಲೆಯಲ್ಲಿ ನಾಗಮಂಗಲಕ್ಕೆ ವಿಶಿಷ್ಟ ಸ್ಥಾನವಿದೆ. ಜಿಲ್ಲಾ ಕೇಂದ್ರದಲ್ಲಿ ನಡೆಸಲಾಗದ ಸ್ವಾತಂತ್ರ್ಯಸಂಗ್ರಾಮದ ಸಭೆಗಳು ನಾಗಮಂಗಲದಲ್ಲಿ ನಡೆದಿವೆ. ಮಂಡ್ಯದಲ್ಲಿ ಸ್ಥಾಪಿಸಲಾಗದ ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ನಾಗಮಂಗಲದಲ್ಲಿ ತೆರೆಯಲಾಯಿತು. ಗಾಂಧಿಟೋಪಿ ಹಾಕಲೂ ಸ್ವಾತಂತ್ರ್ಯಘೋಷಣೆ ಕೂಗಲೂ ಭಯಪಡುತ್ತಿದ್ದ ಆ ಕಾಲದಲ್ಲಿ ನಾಗಮಂಗಲದವರು ಇಂತಹ ಸಾಹಸಕಾರ್ಯಕ್ಕೆ ಕೈಹಾಕಿದ್ದಾರೆ.

1938ರ ಶಿವಪುರ ಸತ್ಯಾಗ್ರಹ, 1939ರ ಧ್ವಜ ಸತ್ಯಾಗ್ರಹ ಮತ್ತು ಪ್ಯಾಮಿಲ್ಟನ್ ಸತ್ಯಾಗ್ರಹ, 1942ರ ಕ್ವಿಟ್ ಇಂಡಿಯಾ ಚಳುವಳಿ, 1949ರ ಜವಾಬ್ದಾರಿ ಸರ್ಕಾರದ ಹೋರಾಟ, ಅಸಹಕಾರ ಚಳುವಳಿ ಮೊದಲಾದವುಗಳಲ್ಲೆಲ್ಲ ಭಾಗವಹಿಸಿ ಜೈಲುವಾಸ ಅನುಭವಿಸಿದವರಿದ್ದಾರೆ. ತಾಲ್ಲೂಕಿನಲ್ಲಲ್ಲದೆ ಜಿಲ್ಲಾ ಕೇಂದ್ರದಲ್ಲಿ, ಕಾಂಗ್ರೆಸ್ ಸಮಿತಿಯಲ್ಲಿ ಸಕ್ರಿಯವಾಗಿ ಕೆಲಸ ಮಾಡಿದಂತಹ ಪಿ ಎಸ್. ಜವರಪ್ಪಗೌಡರು, ಬೆಂಗಳೂರು ಜಿಲ್ಲಾ ಕೇಂದ್ರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದ ಎಂ. ಆರ್. ಎನ್. ಶಾಸ್ತ್ರಿ ಅವರಂತಹವರೂ ತಾಲ್ಲೂಕಿನಲ್ಲಿದ್ದಾರೆ ಎಚ್. ಕೆ. ವೀರಣ್ಣಗೌಡರು, ಹೆಚ್. ಸಿ. ದಾಸಪ್ಪ ಅವರು, ಕೆ. ಹೆಚ್. ರಾಮಯ್ಯ ಟಿ. ಮರಿಯಪ್ಪರವರು, ಕೆ. ಎಂ. ಕೃಷ್ಣಪ್ಪಗೌಡರು ಮೊದಲಾದವರ ಮುಂದಾಳತ್ವದಲ್ಲಿ ಪ್ರಾರಂಭಗೊಂಡ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟ ಬಹು ಬಿರುಸಾಗಿಯೇ ನಡೆದಿದೆ. ಕೆ. ಟಿ. ಬಾಷ್ಯಂ, ಚಂಗಲ್‌ರಾಯರೆಡ್ಡಿ, ಕೆ. ಟಿ. ಸುಬ್ರಮಣ್ಯಂ. ತಗಡೂರುರಾಮಚಂದ್ರರಾವ್ ಮುಂತಾದ ರಾಷ್ಟ್ರೀಯ ನಾಯಕರೆಲ್ಲ ಇಲ್ಲಿಗೆ ಬಂದು ಭಾಷಣ ಮಾಡಿದ್ದಾರೆ.

ನಾಗಮಂಗಲದಲ್ಲಿ ಸ್ಥಾಪಿಸಲಾದ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಪ್ರತ್ಯೇಕ ಕಛೇರಿ ಅಥವಾ ಕೊಠಡಿ ಇರಲಿಲ್ಲ. ಬಹಳಷ್ಟು ದಿನ ಮೊಬೈಲ್ ಆಫೀಸ್ ಆಗಿ ಇದ್ದು ಇಡೀ ಕಛೇರಿ ಕಾರ್ಯದರ್ಶಿಗಳಾದ ಎಂ. ಆರ್. ಎಸ್. ಶಾಸ್ತ್ರಿ ಅವರ ಕೈಚೀಲದಲ್ಲೇ ಇತ್ತು.

ಚುಂಚನಗಿರಿ ಪೀಠದ ಬಗ್ಗೆ ಕಪಾಲಿಗರಿಗೂ ಒಕ್ಕಲಿಗರಿಗೂ ವ್ಯಾಜ್ಯ ನಡೆಯುತ್ತಿದ್ದ ಕಾಲ. ಹೆಚ್ ಸಿ. ದಾಸಪ್ಪ, ಕೆ. ಹೆಚ್. ರಾಮಯ್ಯ, ನಾಗಪ್ಪ ಮೊದಲಾದ ಒಕ್ಕಲಿಗ ಮುಖಂಡರೆಲ್ಲ ನಾಗಮಂಗಲ ಟಿ. ಬಿ ಯಲ್ಲಿ ಅಥವಾ ಪ ಲಗ್ರಹಾರದಲ್ಲಿ ತಂಗುತ್ತಿದ್ದರು. ಈ ಸಮಯದಲ್ಲಿ ಅವರು ರಾಜಕೀಯ ವಿಷಯಗಳನ್ನೆಲ್ಲಾ ಮಾತಾಡುತ್ತಿದ್ದರು. ಹೀಗಾಗಿ ಪಾಲಗ್ರಹಾರದಲ್ಲೆ ಹೆಚ್ಚು ಜನ ಸ್ವಾತಂತ್ರ್ಯ ಹೋರಾಟಗಾರರು ಹುಟ್ಟಿಕೊಳ್ಳಲು ಸಾಧ್ಯವಾಯಿತು. ಅಲ್ಲದೆ ಮುಂದೆ ತಾಲ್ಲೂಕಿನಲ್ಲಿ ಪಾಲಗ್ರಹಾರವೇ ಸ್ವಾತಂತ್ರ್ಯ ಹೋರಾಟಗಾರರ ಪ್ರಮುಖ ಕೇಂದ್ರವಾಯಿತು. ಇತರ ಕೇಂದ್ರಗಳೆಂದರೆ, ಎ. ನಾಗತಿಹಳ್ಳಿ, ಮಣಿಯೂರು, ಚಿಣ್ಯ, ತಟ್ಟೇಕೆರೆ, ಭೀಮನಹಳ್ಳಿ, ಬಿಂಡಿಗನವಿಲೆ, ಹೆರಗನಹಳ್ಳಿ ಮೊದಲಾದವು.

ದೇಶದಲ್ಲಿ ಹತ್ತಾರು ಪ್ರಮುಖ ಸತ್ಯಾಗ್ರಹ, ಚಳುವಳಿಗಳು ನಡೆದವು. ದುರೀಣರನೇಕರು ಜೈಲಿಗೆ ತೆರಳಿದರು. ಈ ಬಿಸಿ ತಾಲ್ಲೂಕಿಗೂ ಮುಟ್ಟಿತು. ಆಗ ಜನ

ಎಚ್ಚೆತ್ತರು. ತಮ್ಮವರಿಗೆ ಬೆಂಬಲ ಕೊಡತೊಡಗಿದರು. ಈ ಸಂದರ್ಭದಲ್ಲಿ ಸ್ವಾತಂತ್ರ್ಯದ ನಿಜವಾದ ಅರ್ಥ ಅದರ ಬೆಲೆಯ ಅರಿವು ಆಗ ತೊಡಗಿತು. ಕೊನೆ ಕೊನೆಗೆ 'ಗಾಂಧೀಜಿಕಿ ಜೈ' ಅನ್ನೋದೆ ಒಂದು ಪುಣ್ಯ ಎಂಬ ಭಾವನೆ ಜನರಲ್ಲಿ ಮೂಡಿತು. ಮಹಾತ್ಮಗಾಂಧಿ ಮನುಷ್ಯನಲ್ಲ ದೇವರ ಅವತಾರ ಎಂಬ ಕಲ್ಪನೆಯೂ ಮೂಡತೊಡಗಿತು. ಈ ಸಂದರ್ಭದಲ್ಲಿ ಮಹಾತ್ಮನ ಬಗ್ಗೆ ಹಲವಾರು ದಂತಕಥೆಗಳೂ ಹುಟ್ಟಿಕೊಂಡವು. ಅವುಗಳಲ್ಲಿ, 'ಗಾಂಧೀಜಿಯವರು ಜೈಲಿನಲ್ಲಿದ್ದಾಗ ಬ್ರಿಟಿಷ್ ಅಧಿಕಾರಿ ಅವರಿಗೆ ತಟ್ಟೆಯಲ್ಲಿ ಮಾಂಸ ಕೊಡಲು ಹೋದನಂತೆ, ಆವಾಗ ಆ ಮಹಾತ್ಮ ಅದರ ಮೇಲೆ ಕೈಯಾಡಿಸಿದ್ದೇ ತಡ ಅದು ಅನ್ನವಾಯಿತಂತೆ' ಎಂಬುದೂ ಒಂದು.

ಸ್ವಾತಂತ್ರ್ಯ ಹೋರಾಟಗಾರರು ತಾಲ್ಲೂಕಿನಲ್ಲೆಲ್ಲ ಕಾಲ್ನಡಿಗೆ ಮತ್ತು ಸೈಕಲ್ಲಿನಲ್ಲೇ ಪ್ರವಾಸ ಮಾಡಿದರು. ಕಾಂಗ್ರೆಸ್ಸಿಗೆ ಸದಸ್ಯರನ್ನು ಮಾಡಿಕೊಳ್ಳುವುದು ಸ್ವಾತಂತ್ರ್ಯದ ಬಗ್ಗೆ ಪ್ರಚಾರ ಭಾಷಣ ಮಾಡುವುದು ಅವರ ಉದ್ದೇಶ ಹೊತ್ತಿಲ್ಲ, ಗೊತ್ತಿಲ್ಲ, ತಲೆ ಮರೆಸಿಕೊಂಡು ತಿರುಗಬೇಕಾದ ಕಾಲ

ನಾಟಕ ನಡೆಯುವ ಸ್ಥಳ ಇವರ ಪ್ರಚಾರ ಭಾಷಣಕ್ಕೆ ತಕ್ಕ ವೇದಿಕೆ. ತಾಲ್ಲೂಕಿನ ಯಾವ ಮೂಲೆಯಲ್ಲೇ ಆಗಲಿ ನಾಟಕ ನಡೆಯುವ ವಿಷಯ ತಿಳಿದರೆ ಸಾಕು, ಅಲ್ಲಿಗೆ ಈ ತಂಡ ಹಾಜರ್. ಹೋದ ಕಡೆಗಳಲ್ಲೆಲ್ಲ ಇವರಿಗೆ ಆತ್ಮೀಯ ಸ್ವಾಗತ, ತಮ್ಮಿಂದ ಸಾಧ್ಯವಾದ ಮಟ್ಟಿಗೆ ಉಪಚಾರ ಆದರೆ ಸ್ವಾತಂತ್ರ್ಯ ಹೋರಾಟಗಾರರಿಗೆ ಹೆಣ್ಣು ಕೊಡುವವರೂ ಹಿಂದು ಮುಂದು ನೋಡುತ್ತಿದ್ದ ಪರಿಸ್ಥಿತಿ. ಪುಂಡುತನ ಮಾಡಿಕೊಂಡು ಅಲ್ಲಿ ಇಲ್ಲಿ ಅಲೆಯುತ್ತಾರೆಂಬ ಕಾರಣ. ಈ ವರ್ಗದ ಜನರನ್ನೆಲ್ಲಾ ಗೆಲ್ಲಲು ಹೋರಾಟಗಾರರು ನಿಧಾನವಾಗಿಯಾದರೂ ಸಫಲರಾದರು

ತಾಲ್ಲೂಕಿನಲ್ಲಿ ಜಾತೀಯತೆಯ ಪ್ರಶ್ನೆಯೇ ಉದ್ಭವಿಸಲಿಲ್ಲ. ಗಾಂಧೀಜಿಯವರ 'ಅಸ್ಪೃಶ್ಯತಾ ನಿವಾರಣಾವಾಣಿಗೆ ಇಲ್ಲಿ ಅರ್ಥವೇ ಇರಲಿಲ್ಲ. ಇಂದಿಗೂ ಸಹ ಹರಿಜನ, ಒಕ್ಕಲಿಗರಾದಿಯಾಗಿ ಇಲ್ಲಿನ ಜನರೆಲ್ಲ ಅಣ್ಣ, ಅಕ್ಕ, ಅತ್ತೆ, ಮಾವ ಮುಂತಾಗಿ, ಸಂಭೋದಿಸುತ್ತಾರೆ. ಸ್ವಾತಂತ್ರ್ಯ ಹೋರಾಟಗಾರರಲ್ಲಿ ಸವರ್ಣೀಯರೂ ಹರಿಜನರ ಮನೆಗಳಲ್ಲಿ ಉಂಡಿದ್ದಾರೆ.

ಇಲ್ಲಿ ಅಹಿತಕರ ಘಟನೆಗಳು ನಡೆದ ಉದಾಹರಣೆಗಳಿಲ್ಲ. ತಾಲ್ಲೂಕಿನಲ್ಲಿ ಲಾಟಿ ಚಾರ್ಜ್ ಕೂಡ ಎಲ್ಲೂ ನಡೆಯಲಿಲ್ಲ. ಬೆಳ್ಳೂರು ರಸ್ತೆಯಲ್ಲಿ ತಂತಿ ಕಡಿದು, ಕಂಬಗಳನ್ನು ಉರುಳಿಸಲಾಯಿತು ಅಲ್ಲಲ್ಲಿ ಈಚಲು ಮರಗಳನ್ನು ಕಡಿದು, ಹೆಂಡದ ಗಡಿಗೆಗಳನ್ನೂ ಒಡೆಯಲಾಯಿತು. ಆದರೂ ಗಲಭೆಗಳು ನಡೆಯಲಿಲ್ಲ. ಗಾಂಧಿ ಮಹಾತ್ಮನ ಅಹಿಂಸಾ ತತ್ವವನ್ನು ಇಲ್ಲಿ ಅಕ್ಷರಶಃ ಅನುಸರಿಸಲಾಯಿತು.

ಜೈಲು ಶಿಕ್ಷೆಗಳೂ ಸಾಧಾರಣ. ಸತ್ಯಾಗ್ರಹಿಗಳಿಗೆ ಕೊಡುತ್ತಿದ್ದ ಶಿಕ್ಷೆಯೆಂದರೆ ರಾಗಿ ಹಿಟ್ಟನ್ನು ಅವರಿಂದಲೇ ಬೀಸಿಸಲಾಗುತ್ತಿತ್ತು. ಒಬ್ಬೊಬ್ಬರೂ ಪ್ರತ್ಯೇಕವಾಗಿ

ಇಂತಿಷ್ಟು ಬೀಸಬೇಕೆಂಬ ನಿಯಮ. ಇದಕ್ಕಾಗಿ ರಾಗಿಕಲ್ಲಿರುವ ಕೊಠಡಿಯಲ್ಲಿ ಕೂಡಿಹಾಕಲಾಗುತ್ತಿತ್ತು. ತಮ್ಮ ಪಾಲಿನ ರಾಗಿ ಬೀಸಿದ ನಂತರವೇ ಮುದ್ದೆ, ರೊಟ್ಟಿ, ಕೊಡುತ್ತಿದ್ದುದು. ಮುಂದೆ ಕದ್ದು ಸಾರಾಯಿ ದೂರಾಟ ಮಾಡುತ್ತಿದ್ದ ಅಪಾದನೆಯ ಮೇಲೆ ಜೈಲಿಗೆ ಬಂದ ಕೊರಮರ ಹೆಂಗಸರು ಇವರಿಗೆ ನೆರವಾದರು. ಅವರು ಹೇಳಿಕೊಟ್ಟಂತೆ ರಾಗಿಕಲ್ಲಿಗೆ ಅಗತ್ಯಕ್ಕಿಂತ ಹೆಚ್ಚು ರಾಗಿ ತುಂಬಿ ಒಮ್ಮೆ ಮೇಲಿನ ಕಲ್ಲನ್ನು ಸ್ವಲ್ಪ ಎತ್ತಿ ಬೀಸಿದರೆ ರಾಗಿ ಹಿಟ್ಟಾಗುವ ಬದಲು ತರಿತರಿಯಾಗಿ ಉದುರುತ್ತಿತ್ತು. ಹೀಗಾಗಿ ತಮಗೆ ಬೀಸಲು ಕೊಟ್ಟ ರಾಗಿಯನ್ನು ಬೇಗನೇ ಬೀಸಿ ಮುಗಿಸುತ್ತಿದ್ದರು. ಇದನ್ನು ತಿಳಿದ ಇಂಗ್ಲಿಷ್ ಜೈಲು ಅಧಿಕಾರಿಗಳು ಬಂದು ಪರಿಶೀಲಿಸಿದಾಗ ಹಾಗೆಯೇ ಮಾಡಲಾಗಿ ಬೀಸುವ ಕಲ್ಲಿನದೇ ದೋಷ ಎಂದು ತಿಳಿದು ಸುಮ್ಮನಾದರು. ಈ ನಡುವೆ ಕೆಲವರು ರಾಗಿಕಲ್ಲನ್ನು ಒಡೆದುಹಾಕಿದರು. ಬತ್ತಕುಟ್ಟುವ ಪತಗಳನ್ನು ಮುರಿದು ಹಾಕಿದರು. ಸುಳ್ಳು ಹೇಳಬಾರದು. ಇಂಥ ಅಕೃತ್ಯಗಳನ್ನು ಮಾಡಬಾರದು ಎಂಬ ಗಾಂಧಿ ನುಡಿ ಗೊತ್ತಿದ್ದರೂ ಆ ಸಂದರ್ಭ ಹಾಗೆ ಮಾಡಿಸಿತು.

ಕಠಿಣವಾದ ಶಿಕ್ಷೆಯೆಂದರೆ ರಸ್ತೆಗೆ ಹಾಕಿದ್ದ ಜಲ್ಲಿಕಲ್ಲಿನ ಮೇಲೆ ಬರಿಕಾಲಿನಲ್ಲಿ ರೋಣು ಎಳೆಯುವುದು. ಲಾಕಪ್ಪಿನಲ್ಲಿ ಮೊದಮೊದಲಿಗೆ ಪೊಲೀಸಿನವರ ಕಿರುಕುಳ ಎಷ್ಟಿತ್ತೆಂದರೆ, ಸೀಸೆಯಲ್ಲಿ ಮೂತ್ರ ವಿಸರ್ಜನೆ ಮಾಡಿ ಇವರ ಬಾಯಿಗೆ ಸುರಿಯುವ ತನಕ ನಡೆಯಿತು. ಇದನ್ನು ಸಹಿಸದ ಕೆಲವರು ಪೊಲೀಸಿನವರ ಹಲ್ಲುಗಳನ್ನು ಮುರಿದು ಪೊಲೀಸಿನವರು ತಮ್ಮ ತಮ್ಮೊಳಗೆ ಹೊಡೆದಾಡಿಕೊಂಡು ಹಲ್ಲು ಮುರಿದುಕೊಂಡಿದ್ದಾರೆ ಎಂದು ಅಧಿಕಾರಿಗಳಿಗೆ ಸುಳ್ಳು ಹೇಳಿ ತಪ್ಪಿಸಿಕೊಳ್ಳುತ್ತಿದ್ದರು.

ಜೈಲಿನಲ್ಲಿ ಮೊದ ಮೊದಲಿಗೆ ಸ್ವಾತಂತ್ರ್ಯ ಹೋರಾಟಗಾರರಿಗೆ ಸರಿಯಾಗಿ ಊಟವೂ ಇಲ್ಲ, ಮಲಗುವ ವ್ಯವಸ್ಥೆಯನ್ನಂತೂ ಕೇಳುವಂತೆಯೇ ಇರಲಿಲ್ಲ. ರಾಗಿ ಮುದ್ದೆಯೇ ದಿನನಿತ್ಯದ ಊಟ. ಅದೂ ರುಚಿಯಿಲ್ಲ, ಶುಚಿಯಿಲ್ಲ. ಕಕ್ಕಸ, ಮಾಡುವ ಜಾಗದಲ್ಲಿ ಮರೆಯೇ ಇಲ್ಲ : ಎಲ್ಲರೂ ಸಾಲಾಗಿ ಕೂರಬೇಕಾಗಿತ್ತು. ಇಂಥವುಗಳ ಸುಧಾರಣೆಗೂ ಜೈಲಿನಲ್ಲೇ ಚಳುವಳಿ. ಅನಂತರ ಇವರಿಗೇ ಅಡಿಗೆ ಮಾಡಿಕೊಳ್ಳಲು ಅನುಮತಿ. ಆದರೂ ಮೊದಲಿಗೆ ಬೆಲ್ಲ, ಮಜ್ಜಿಗೆಗಳೂ ಇಲ್ಲ. ಸ್ವಲ್ಪ ದಿನಗಳಲ್ಲೇ ಇವರಿಗೆ ಬೇಕಾದ ತಿಂಡಿ, ತೀರ್ಥ. ವಿಶೇಷ ಅಡಿಗೆ ಮಾಡಿಕೊಳ್ಳಲು ಅವಕಾಶ. ಅಡಿಗೆ ಮಾಡುವಲ್ಲಿ, ಬಡಿಸುವಲ್ಲಿ ಜಾತಿಭೇದ ವಿಲ್ಲ : ಒಂದೇ ಪಂಕ್ತಿಯಲ್ಲಿ ಊಟ.

ಯಾವ ಖೈದಿಗಳನ್ನೂ ಒಂದೇ ಜೈಲಿನಲ್ಲಿ ಹೆಚ್ಚು ದಿವಸ ಉಳಿಸಿಕೊಳ್ಳುತ್ತಿರಲಿಲ್ಲ. ಗುಂಪುಕಟ್ಟಿಕೊಂಡು ಚಳುವಳಿ ಇತ್ಯಾದಿ ಮಾಡಿಯಾರೆಂದು ಮೈಸೂರು, ಶ್ರೀರಂಗಪಟ್ಟಣ, ಬೆಂಗಳೂರು, ತೀರ್ಥಹಳ್ಳಿ, ಚಿಕ್ಕಮಗಳೂರು ಮುಂತಾದ ಕಡೆಗಳಿಗೆಲ್ಲಾ ಆಗಿಂದಾಗ್ಗೆ ಬದಲಾಯಿಸಲಾಗುತ್ತಿತ್ತು.

ಜೈಲಿನಲ್ಲಿ ರಾತ್ರಿ ಬಟ್ಟಿಗೇ ಊಟ ಮಾಡಿ ಮಲಗಿಕೊಂಡವರಲ್ಲಿ ಬೆಳಗ್ಗೆ ಎದ್ದು

ನೋಡಿದರೆ ಕೆಲವರು ಇರುತ್ತಿರಲಿಲ್ಲ. ಇದೇನಿರಬಹುದು ಎಂದು ಕಾದು ನೋಡಲಾಗಿ, ಕೆಲವರನ್ನು ರಾತ್ರೋರಾತ್ರಿ ನೀಲಗಿರಿ ಮುಂತಾದ ದಟ್ಟಕಾಡುಗಳ ಮಧ್ಯೆ ಬಿಟ್ಟು ಬರುತ್ತಿರುವುದಾಗಿ ತಿಳಿಯಿತು. ದಿನೇ ದಿನೇ ಹೆಚ್ಚುತ್ತಿದ್ದ ಖೈದಿಗಳಿಗೆ ಜೈಲಿನಲ್ಲಿ ಸ್ಥಳಾವಕಾಶ ಮಾಡಿಕೊಡಲಾಗದ ಬ್ರಿಟಿಷ್ ಅಧಿಕಾರಿಗಳು ಹುಡುಕಿದ ತಂತ್ರ ಇದು. ಗಂಧದ ಕೋಟೆಗಳೂ ಜೈಲಾಗಿ ಏರ್ಪಟ್ಟಿದ್ದವು. ಆದರೂ ಜಾಗ ಸಾಲದಾಗಿತ್ತು. ಕೊನೆ ಕೊನೆಗೆ ಅರೆಸ್ಟ್ ಆದವರನ್ನು ಜೈಲಿಗೆ ಕರೆತರುವಾಗಲೇ ಕಾಡುಗಳಲ್ಲಿ ಇಳಿಸಿ ಬರುವುದು ನಡೆಯತೊಡಗಿತು. ದಟ್ಟವಾದ ಕಾಡಿನಲ್ಲಿ ನಡುರಾತ್ರಿಯಲ್ಲಿ ನಾಲ್ಕೈದು ಮೈಲಿ ದೂರಕ್ಕೆ ಒಬ್ಬೊಬ್ಬರಂತೆ ಬಿಡುತ್ತಿದ್ದುದರಿಂದ ಎಷ್ಟೋ ಜನ ಕಾಡು ಪ್ರಾಣಿಗಳ ಪಾಲಾಗಿರಬಹುದು ಎನ್ನುತ್ತಾರೆ. ಈ ಬಗ್ಗೆಯೂ ಜೈಲಿನಲ್ಲಿ ಚಳುವಳಿ ನಡೆಯಿತು.

ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ನಾಗಮಂಗಲ ತಾಲ್ಲೂಕಿನ ಪ್ರಮುಖರು.

ಸರ್ವಶ್ರೀ ದಿ: ಟಿ ಮರಿಯಪ್ಪ (ಬೀರೇಶ್ವರಪುರ). ದಿ: ಕೆ ಎಂ ಕೃಷ್ಣಪ್ಪಗೌಡ (ಕರಡಹಳ್ಳಿ), ದಿ: ಎಸ್ ಡಿ ಶಂಕರ (ನಾಗಮಂಗಲ) ದಿ: ನಾಗಪುರಿ ಗೋವಿಂದೇಗೌಡ (ಅಂಚೆ ಚಿಟ್ಟನಹಳ್ಳಿ) ದಿ: ಓಬೆಗೌಡ (ಪಾಲಗ್ರಹಾರ), ದಿ: ತಿಮ್ಮೇಗೌಡ (ಮಣಿಯೂರು), ದಿ: ಕಪನೀಗೌಡ (ತಟ್ಟೇಕೆರೆ), ದಿ: ತೋಟೇಗೌಡ (ಗಂಗವಾಡಿ), ನರಸಿಂಹಮೂರ್ತಿ (ಹೊನ್ನೇನಹಳ್ಳಿ), ಪಿ. ಜವರಪ್ಪಗೌಡ (ಪಾಲಗ್ರಹಾರ), ಎಂ. ಆರ್ ಎಸ್ ಶಾಸ್ತ್ರಿ (ನಾಗಮಂಗಲ), ಪಿ. ಎನ್ ನರಸಿಂಹಯ್ಯ (ಪಾಲ ಅಗ್ರಹಾರ), ಪಿ. ಎಸ್. ಜವರಪ್ಪಗೌಡ (ಪಾಲಅಗ್ರಹಾರ) ಪಿ. ಕೆ. ವೆಂಕಟಾಚಲಶೆಟ್ಟಿ (ಪಾಲಗ್ರಹಾರ), ದಿ: ಟಿ ಎಸ್ ಮಾದಪ್ಪಗೌಡ (ತಟ್ಟೇಕೆರೆ), ಪಿ. ಟಿ ಕೃಷ್ಣಪ್ಪ (ಪಾಲಗ್ರಹಾರ), ಮಲ್ಲೇಗೌಡ (ಹೊನ್ನೇನಹಳ್ಳಿ), ದಿ: ಕೆ. ನರಸೇಗೌಡ (ತಟ್ಟಹಳ್ಳಿ), ಎಸ್ ಹೆಚ್. ತಿರುಮಲೇಗೌಡ (ನಾಗತಿಹಳ್ಳಿ), ದಿ: ಟಿ. ಎನ್ ಬಸವೇಗೌಡ (ತಟ್ಟೇಕೆರೆ). ನಾಗಮಂಗಲದ ಎಸ್. ಕೆ ಸುಬ್ಬರಾಯಶೆಟ್ಟಿ, ಎನ್. ವಿ. ಸುಬ್ಬರಾಯ, ಎಂ. ವಿ. ವೆಂಕಟಾಚಲಶೆಟ್ಟಿ. ಮತ್ತು ಎನ್. ಅಶ್ವತ್ಥನಾರಾಯಣ. ಎಂ. ನಂಜಪ್ಪ (ಮೂಳಕಟ್ಟೆ), ಚಿಣ್ಯದ ಸಿ ಕೆ. ಸಂಪತ್ತು, ಸಿ. ಜಿ. ಶೇಷಪ್ಪ, ಸಿ ವಿ. ನಾಗರಾಜಯ್ಯ, ಪಿ ಎಸ್. ವೆಂಕಟಾಚಲಯ್ಯ, ಮತ್ತು ಸಿ ಕೆ. ರಾಮಸ್ವಾಮಿ, ಭೀಮನಹಳ್ಳಿಯ ಬಿ. ಎಸ್. ಶ್ರೀನಿವಾಸಯ್ಯ. ಬಿ ಹುಚ್ಚಪ್ಪಶೆಟ್ಟಿ. ಡಿ. ನರಸಿಂಹಶೆಟ್ಟಿ ಡಿ. ವೆಂಕಟರಮಣಸ್ವಾಮಿ ಮತ್ತು ನಾಗರಾಜ, ಟಿ ಡಿ. ಬಸವರಾಜು (ತುಪ್ಪದ ಮಾಡು), ನಾಗತಿಹಳ್ಳಿಯ ದಿ: ಎನ್. ಕೆ. ಸಣ್ಣೇಗೌಡ, ದಿ: ಎನ್ ಕೆ. ಕೆಂಪೇಗೌಡ, ಎನ್ ಟಿ. ಚಿಕ್ಕಣ್ಣಗೌಡ, ವೀರಭದ್ರಚಾರ್ ಮತ್ತು ಚಂದಚಾರ್. ಎಂ. ಹೆಚ್. ತಿಮ್ಮೇಗೌಡ.

(ಮಣಿಯೂರು) ಸಿ. ವಿ. ರಾಧಾಕೃಷ್ಣ (ಚಿಣ್ಯ), ಪಿ. ಕೆ. ಚಾಮಪ್ಪ (ಚಿಣ್ಯ), ಕೆಂಪಯ್ಯ (ತಿಟ್ಟನಹಳ್ಳಿ) ಮತ್ತು ಐ. ಸ್ವಾಮಿಗೌಡ (ಮಣಿಯೂರು)*

ಇವರಲ್ಲದೆ ಸ್ವಾತಂತ್ರ್ಯ ಹೋರಾಟಗಾರರು ಕಾಂಗ್ರೆಸಿಗೆ ಸದಸ್ಯರನ್ನು ಮಾಡಲು ಹೋದಾಗ, ಪ್ರಚಾರ ಭಾಷಣಕ್ಕೆ ಹೋದಾಗ ಅವರಿಗೆ ಊಟ, ವಸತಿ ಇತ್ಯಾದಿಗಳನ್ನು ಏರ್ಪಾಡು ಮಾಡುವುದರ ಮೂಲಕ ನೆರವಾದವರೂ ಹಲವರು.

ವಿ. ಎನ್. ಶಿವರಾಮು

* ಈ ಹೆಸರುಗಳು ಅವರು ಜೈಲುಶಿಕ್ಷೆ ಅನುಭವಿಸಿದ ಕಾಲಾವಧಿಯ ಕ್ರಮದಲ್ಲಿ ಇವೆ.

ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ

ಯಾವುದೇ ಚಳುವಳಿಯ ಬಿಸಿ, ಕಾವು, ವೇಗ ತಾಗುವುದು ಮೊದಲು ನಗರ ಪ್ರದೇಶದ ಜನರನ್ನು. ಈ ಹೇಳಿಕೆಗೆ ಸ್ವಾತಂತ್ರ್ಯ ಚಳುವಳಿ ಕೂಡ ಹೊರತಲ್ಲ. ಭಾರತದ ಸ್ವಾತಂತ್ರ್ಯ ಹೋರಾಟದ ಉಗ್ರ ಸ್ವರೂಪವನ್ನು ರುದ್ರ ತಾಂಡವವನ್ನು ಕಂಡು ಉಂಡವರಲ್ಲಿ ಪ್ರಮುಖರು ಪಟ್ಟಣಿಗರೆ, ನಗರವಾಸಿಗಳೆ. ಇದಕ್ಕೆ ಕಾರಣ ಇಲ್ಲದೆ ಇಲ್ಲ. ನಗರ ಪ್ರದೇಶಗಳು ಆಡಳಿತ ಕೇಂದ್ರಗಳಾಗಿರುತ್ತವೆ. ವಿವಿಧ ಬಗೆಯ ಜನರಿರುತ್ತಾರೆ. ಯಾವುದೇ ವಿಷಯದ ಬಗೆಗೆ ಪರ–ವಿರೋಧಗಳು ರೂಪು ತಳೆಯುತ್ತವೆ. ಅಲ್ಲದೆ ಜನನಾಯಕರು ಮೊದಲು ನಗರ ನಿವಾಸಿಗಳಿಗೆ ವಿಷಯ ಮನದಟ್ಟು ಮಾಡುವ ಪ್ರಯತ್ನ ಮಾಡುತ್ತಾರೆ. ಅದಕ್ಕೆ ಬೇಕಾದ ಸೌಕರ್ಯ ಸವಲತ್ತುಗಳು ಅನಾಯಾಸವಾಗಿ ಅವರಿಗೆ ದೊರಕುತ್ತವೆ. ಭಾಷಣಗಳಿಗೆ ಜನಸೇರುತ್ತಾರೆ, ಬಂದ್, ರಸ್ತೆತಡೆ ಇತ್ಯಾದಿಗಳ ಪರಿಣಾಮ ಎದ್ದು ಕಾಣುವಂಥದ್ದಾಗಿರುತ್ತದೆ. ಇಂಥದೆಲ್ಲ ಒಂದು ಚಳುವಳಿಯ ಏಳುಬೀಳುಗಳನ್ನು ಅಳೆಯುವ ಸಾಧನವಾಗುತ್ತದೆ.

ಸ್ವಾತಂತ್ರ್ಯ ಚಳುವಳಿ ನಗರ ಪ್ರದೇಶಗಳಲ್ಲಿ ವಿಶೇಷ ಪ್ರಚೋದನೆಗೆ ಒಳಗಾಗುತ್ತಿದ್ದುದಕ್ಕೆ ಕಾರಣ ರಾಜ್ಯದ ರಾಷ್ಟ್ರದ, ನಾಯಕರು, ನೇತಾರರು, ಖುದ್ದಾಗಿ ಪ್ರಮುಖ ಪಟ್ಟಣಗಳಿಗೆ ಭೇಟಿ ಕೊಡುತ್ತಿದ್ದುದು ; ಭಾಷಣ ಮಾಡುತ್ತಿದ್ದುದು ಜನರ ಮೇಲೆ ನೇರವಾಗಿ ಪ್ರಭಾವ ಬೀರುವಲ್ಲಿ ಯಶಸ್ವಿಯಾಗುತ್ತಿತ್ತು. ಅಷ್ಟೇ ಪ್ರಭಾವ ಸಮೂಹ ಮಾಧ್ಯಮಗಳಿಂದಲೂ ಇವರಿಗೆ ಸಾಧಿತವಾಗುತ್ತಿತ್ತು. ಹೀಗಾಗಿ ಸ್ವಾತಂತ್ರ್ಯದ ಕಹಳೆ ಮೊಳಗಿದ ಮೇಲೆ ಅದರ ಲಾಭಕ್ಕೆ ಪಟ್ಟಣದ ಜನ ಎಷ್ಟು ಭಾಜನರೋ ಅದರ ಬಗೆಗೆ ನಡೆದ ಹೋರಾಟದ ಸಮಯದಲ್ಲಾದ ಸಾವುನೋವುಗಳಲ್ಲೂ ಅವರದ್ದು ಸಿಂಹ ಪಾಲು. ವಿದ್ಯಾರ್ಥಿಗಳು, ಕಾರ್ಮಿಕರು, ಬುದ್ಧಿಜೀವಿಗಳು ರಾಜಕೀಯಪ್ರಜ್ಞೆ ವಿಶೇಷವಾಗಿ ಇದ್ದ ಜನ ಗಾಂಧೀಜಿಯ ಸ್ವಾತಂತ್ರ್ಯದ ಕರೆಗೆ ಓಗೊಟ್ಟು ಚಳುವಳಿಯಲ್ಲಿ ಧುಮುಕಿ ತನು, ಮನ, ಧನ ಅರ್ಪಿಸಿದರು. ಜನ ಜಾಗೃತಿಯ ಸಲುವಾಗಿ ಹಳ್ಳಿಗಳ ಕಡೆಗೆ ವಾಲಿದರು. ತತ್ಫಲವಾಗಿ ಗ್ರಾಮ ಪ್ರದೇಶಗಳೂ ಸ್ವಾತಂತ್ರ್ಯ ಸಂಗ್ರಾಮದ ಜೀವ ಜ್ಯೋತಿಗಳಾದವು. ನಗರ, ಪಟ್ಟಣಗಳಿಗೆ ಹೋಲಿಸಿದರೆ ಗ್ರಾಮಾಂತರ ಪ್ರದೇಶಗಳಲ್ಲಿ ಚಳುವಳಿಯ ತೀವ್ರತೆ ಕಡಿಮೆ ಎಂದೇ ಹೇಳಬಹುದು. ಆದಕ್ಕೆ ಕಾರಣ ಕೂಡ

ಸ್ಪಷ್ಟವಿದೆ. ಹಳ್ಳಿಯ ಜನರ ಸುಪ್ತ ಚೇತನವನ್ನು ಬಡಿದೆಬ್ಬಿಸುವಂಥ ರಾಷ್ಟ್ರ ನಾಯಕರು ಹಲವಾರು ಕಾರಣಗಳಿಂದ ಹಳ್ಳಿಗರನ್ನು ತಲುಪುತ್ತಿದ್ದುದು ವಿರಳ. ಹೀಗಾಗಿ ಈ ಕೆಲಸವನ್ನು ಅಲ್ಲಿನ ಸ್ಥಳೀಯ ನಾಯಕರು ಇಲ್ಲವೆ ಗುಪ್ತ ವೇಷಧಾರಿಗಳಾಗಿ ಬರುತ್ತಿದ್ದ ಜನಪ್ರಿಯ ನೇತಾರರು ನಿರ್ವಹಿಸಬೇಕಾಗಿ ಬರುತ್ತಿತ್ತು. ಇವರ ಪ್ರಚೋದನೆಯಿಂದ ಎಚ್ಚೆತ್ತ ಜನಕ್ಕೆ ಸೋಂಕಿದ ಚಳುವಳಿಯ ಕಿಡಿ, ಬೆಂಕಿಯಾಗಿ ದಾವಾನಲವಾಗಿ ಕಂಡದ್ದನ್ನೆಲ್ಲ ದಹಿಸುವ ಶಕ್ತಿ ಪಡೆಯುತ್ತಿದ್ದುದು ಭೂಗತ ರಾಷ್ಟ್ರ ನಾಯಕರುಗಳಿಂದ. ಪಟ್ಟಣದ ಜನ ಸಾಧಕ ಬಾಧಕಗಳ ಪರಿವೆ ಇದ್ದು ಮುಂದಡಿ ಇಡುವಂಥವರಾದರೆ, ಗ್ರಾಮಾಂತರದ ಜನ ಭೋರ್ಗರೆದು ನುಗ್ಗಿ ಅಡ್ಡವಾದದ್ದನ್ನೆಲ್ಲ ಕೊಚ್ಚಿ, ನುಂಗಿ ನೊಣೆಯುವ ಪ್ರವೃತ್ತಿಯವರು. ಈ ಹಿನ್ನೆಲೆಯಲ್ಲಿ ಪರಿವೀಕ್ಷಿಸಿದಾಗ ಮಾತ್ರ ಗ್ರಾಮಾಂತರ ಪ್ರದೇಶಗಳಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಸಮೀಕ್ಷೆ ಸಾಧ್ಯ.

1938ರ ಶಿವಪುರದ ಸತ್ಯಾಗ್ರಹ ಅಧಿವೇಶನ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಅಸ್ತಿಭಾರ ಹಾಕಿತೆನ್ನಲಡ್ಡಿಯಿಲ್ಲ. ಈ ಅಧಿವೇಶನದಲ್ಲಿ ಕರ್ನಾಟಕದ ನಾನಾ ಮೂಲೆಗಳಿಂದ ಜನ ಬಂದು ನೆರೆದಿದ್ದರು. ಅವರಿಗೆಲ್ಲ ಸ್ವಾತಂತ್ರ್ಯ ಚಳುವಳಿಯ ದೀಕ್ಷೆ ಇಲ್ಲಿ ಲಭಿಸಿತು. ಹೀಗೆ ದೀಕ್ಷಾ ಬದ್ಧರಾದ ಜನ ಶತಾಯಗತಾಯ ಬ್ರಿಟಿಷರ ವಿರುದ್ಧ ಹೋರಾಡುವ ದೃಢ ನಿರ್ಧಾರ ತಳೆದರು. ಅನಾಮಧೇಯರಾಗಿದ್ದ ಎಷ್ಟೋ ಜನ ಇಲ್ಲಿಂದ ಮುಂದೆ ಜನನಾಯಕರಾದರು. ಮಂಡ್ಯ ಜಿಲ್ಲೆಯ ಮದ್ದೂರಿನ ಬಳಿ ಇರುವ ಶಿವಪುರ ಈ ಅಧಿವೇಶನದಿಂದಾಗಿ ಇತಿಹಾಸ ನಿರ್ಮಿಸಿತು. ಈ ಅಧಿವೇಶನದಲ್ಲಿ ಪಾಲ್ಗೊಳ್ಳುವುದರ ಮೂಲಕ ಕೃಷ್ಣರಾಜಪೇಟೆಯ ತಾಲ್ಲೂಕಿನ ಜನ ಸ್ವಾತಂತ್ರ್ಯ ಹೋರಾಟಕ್ಕಿಳಿದರುಎಂಬುದಿಲ್ಲಿ ಗಮನಾರ್ಹ. ಅಂದಿನಿಂದ ಮುಂದಾಗಿ ಸ್ವಾತಂತ್ರ್ಯ ಗಳಿಸುವವರೆಗೂ ಕೃಷ್ಣರಾಜಪೇಟೆಯ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಚಳುವಳಿ ಅಷ್ಟೇನು ಉಗ್ರಸ್ವರೂಪ ತಾಳದಿದ್ದರೂ, ತಾಟಸ್ಥ್ಯವಾಗಿರದೆ ಸೌಮ್ಯ ರೀತಿಯಲ್ಲಿ ಬೂದಿ ಮುಚ್ಚಿದ ಕೆಂಡದಂತೆ ಸುಪ್ತವಾಗಿ ಸಾಗುತ್ತಲೇ ಇತ್ತು ಎನ್ನುವುದಕ್ಕೆ ಸಾಕ್ಷ್ಯಾಧಾರಗಳಿವೆ, ಚಳುವಳಿಗಳಲ್ಲಿ ಭಾಗವಹಿಸಿದ ಜನರಿದ್ದಾರೆ.

ಶಿವಪುರದ ಸತ್ಯಾಗ್ರಹ ಚಳುವಳಿಯಲ್ಲಿ ಪಾಲ್ಗೊಂಡ ಈ ತಾಲ್ಲೂಕಿನ ಅಂದಿನ ಧುರೀಣರೆಂದರೆ, ಹೊಸಹೊಳಲಿನ ಎಚ್. ಗೋವಿಂದೇಗೌಡರು ಮತ್ತು ಕಾಗೇಪುರದ ಕೆ. ಎನ್. ಸುಬ್ಬೇಗೌಡರು ಸೇವಾದಳ ನೇತಾರರಾಗಿದ್ದ ಎಚ್. ಗೋವಿಂದೇಗೌಡರು ಅಲ್ಲಿ ಭಾಗವಹಿಸಿದ ನಾಯಕರ ಗಮನ ಸೆಳೆದರೆ ತಮ್ಮ ಅಮೋಘ ಭಾಷಣದಿಂದ ಸುಬ್ಬೇಗೌಡರು ಕೂಡ ಸ್ವಾತಂತ್ರ್ಯ ಹೋರಾಟಕ್ಕೆ ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಚಾಲನೆ ಕೊಡಬಲ್ಲ ಆಶಾಕಿರಣವೆನಿಸಿದರು.

ಶಿವಪುರ ಸತ್ಯಾಗ್ರಹದ ಪ್ರಭಾವದಿಂದ ಪ್ರೇರೇಪಿತರಾದ ಜನ ಸುಮ್ಮನೆ ಕೂರದೆ ಗ್ರಾಮಾಂತರ ಪ್ರದೇಶಗಳಲ್ಲಿ ಜನಜಾಗೃತಿಯ ಕೈಂಕರ್ಯ ಸ್ವೀಕರಿಸಿದರು. ಆ ಬಗೆಯ

ಜಾಗೃತಿ ಕೃಷ್ಣರಾಜಪೇಟೆಯ ತಾಲ್ಲೋಕಿನಲ್ಲಿ ಕೂಡ ನಡೆದು ಅದರ ಫಲವಾಗಿ 1939 ರಲ್ಲಿ ಮೈಸೂರಿನಲ್ಲಿ ನಡೆದ ಕಾನೂನು ಭಂಗ (Violation of 144 Seetion) ಚಳುವಳಿಯಲ್ಲಿ ಭಾಗವಹಿಸಲು ಅಲ್ಲಿಂದ ಅನೇಕ ಜನ ಮೈಸೂರಿಗೆ ಬಂದಿದ್ದರು. ಅವರಲ್ಲಿ ಪ್ರಮುಖರೆಂದರೆ ಮಡುವಿನ ಕೋಡಿಯ ಎಂ. ಆರ್. ಗಿರಿಗೌಡರು, ಕಾವೇರಿ ಗೌಡರು, ಹುಚ್ಚಲಿಂಗೇಗೌಡರು, ಸಿಂದಘಟ್ಟದ ಮಲ್ಲೇಗೌಡರು ಹಾಗೂ ಮರುವನಹಳ್ಳಿಯ ಅಂಗಡಿ ಸಿದ್ದೇಗೌಡರು ಮತ್ತು ತಿಮ್ಮಪ್ಪಾಚಾರಿ ಅವರು. ಇವರೆಲ್ಲ ಕಾನೂನು ಭಂಗ ಕಾಯಿದೆ ಅನ್ವಯ ಅರೆಸ್ಟ್ ಆಗಿ ಸೆರೆವಾಸ ಅನುಭವಿಸಿದವರು.

"ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಎಂಬ ಮಹಾತ್ಮ ಗಾಂಧೀಜಿಯ 1942ರ ಕರೆ "ಕ್ವಿಟ್ ಇಂಡಿಯಾ" ಎಂಬ ಚಳುವಳಿಯ ಹೆಸರಿನಲ್ಲಿ ಭಾರತದಾದ್ಯಂತ ಅತ್ಯುಗ್ರ ಸ್ವರೂಪವನ್ನು ತಾಳಿ ಬ್ರಿಟಿಷರ ಅಧಿಕಾರಶಾಹಿ ಬುಡವನ್ನು ಅಲ್ಲಾಡಿಸಿತು. ಕೃಷ್ಣರಾಜಪೇಟೆ ತಾಲ್ಲೋಕಿನ ಸ್ವಾತಂತ್ರ್ಯ ಹೋರಾಟದ ಮಹತ್ತರ ಘಟ್ಟ ಈ ಸಂದರ್ಭದಲ್ಲಿ ಕಾಣುವಂಥದು. ವಿದ್ಯಾರ್ಥಿಗಳು, ಹೆಂಗಸರು, ಮಕ್ಕಳು, ರೈತರು ಈ ಚಳುವಳಿ ಅತ್ಯಂತ ಯಶಸ್ವಿಯಾಗುವಲ್ಲಿ ದುಡಿದಿರುವುದು ಕಂಡುಬರುತ್ತದೆ. ಚಳುವಳಿ ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ ಹೋರಾಟದ ಸ್ವರೂಪ ಪಡೆದದ್ದು, ಜನರ ಮನದಲ್ಲಿ ಸ್ವಾತಂತ್ರ್ಯದ ಆಸೆಯ ಕುಡಿ ಬೇರುಬಿಟ್ಟು ಚಿಗುರೊಡೆದು ಜೀವದ ಹಂಗು ತೊರೆದು ಹೋರಾಡಲು ಮುಂದಾಗುವಂತೆ ಪ್ರೇರೇಪಣೆಗೊಂಡದ್ದು ಈ ಕಾಲದಲ್ಲಿಯೆ. ಕೃಷ್ಣರಾಜಪೇಟೆ ತಾಲ್ಲೂಕಿನ ಸಾವಿರಾರು ಜನ ಕ್ವಿಟ್ ಇಂಡಿಯ' ಚಳುವಳಿಯಲ್ಲಿ ಪಾಲ್ಗೊಂಡಿದ್ದರೆಂಬುದು ಸ್ಪಷ್ಟವಿದೆ. ಈ ತಾಲ್ಲೋಕಿನ ಸಂತೇಬಾಚಹಳ್ಳಿ, ಕಸಬ ಮುಂತಾದ ಹೋಬಳಿಯ ಜನ ಪೂರ್ಣವಾಗಿಯೂ, ಕಿಕ್ಕೇರಿ ಅಕ್ಕಿಹೆಬ್ಬಾಳು ಇತ್ಯಾದಿ ಹೋಬಳಿಗಳ ಜನ ಆಂಶಿಕವಾಗಿಯೂ ಕ್ವಿಟ್ ಇಂಡಿಯಾ ಚಳುವಳಿಗೆ ಬೆಂಬಲಿಸಿದ್ದ ವಿವರಗಳು ದೊರೆಯುತ್ತವೆ.

ಪಕ್ಕದ ಚನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳದಲ್ಲಿ ನಡೆದ 'ಗುಂಡಿನ ಪ್ರಕರಣ'ದ ಕಾರಣಕರ್ತರು ಕೃಷ್ಣರಾಜಪೇಟೆ ತಾಲ್ಲೂಕಿನ ಜನ. ಈ ಪ್ರಕರಣದಲ್ಲಿ ಏಳೆಂಟು ಜನ ಮೃತರಾಗಿ ಚಳುವಳಿಯ ಉಗ್ರರೂಪ ತಾಳಿದ್ದು ವಾಸ್ತವವಾಗಿ ಕೃಷ್ಣರಾಜಪೇಟೆಯ ತಾಲ್ಲೂಕಿನ ಜನರಿಗೆ. ಶ್ರವಣಬೆಳಗೊಳದಲ್ಲಿ ಚಟುವಟಿಕೆ ತಟಸ್ಥವಾಗಿದ್ದಂತೆ ಕಂಡಾಗ ಇಲ್ಲಿಂದ ಹೋದ ಜನ ಅಲ್ಲಿನ ಗಂಭೀರ ಪರಿಸ್ಥಿತಿಗೆ ಕಾರಣರಾದರು. ಜನರನ್ನು ಉದ್ರೇಕಿಸಿ, ಕಲ್ಲುತೂರಿ, ಗುಂಡುಹಾರಿಸುವಷ್ಟರ ಮಟ್ಟಿಗೆ ಪೋಲೀಸರನ್ನು ಕೆರಳಿಸಿದರು. ಜನರ ಕಲ್ಲುತೂರಾಟಕ್ಕೆ ಸಿಕ್ಕಿ ಕಾನ್‌ಸ್ಟೇಬಲ್ ಕಾಶಿವಿಶ್ವನಾಥ ಸತ್ತ ನಂತರ, ಜನರ ಮೇಲೆ ಪೋಲೀಸರು ಗುಂಡಿನಮಳೆ ಸುರಿಸಿದರು. ಸತ್ತವರಲ್ಲಿ ಕೃಷ್ಣರಾಜಪೇಟೆ ತಾಲ್ಲೂಕಿನ ನಾರಾಯಣಪುರದ ಬೋರೇಗೌಡರು ಕೂಡ ಒಬ್ಬರು. ಕಾನ್‌ಸ್ಟೇಬಲ್ ಸಾವಿನ ಅಪಾದನೆಯನ್ನು ಹೊತ್ತು ಅರೆಸ್ಟ್ ಆದವರು ಇದೇ ತಾಲ್ಲೂಕಿನ

ಸಂತೇಬಾಚಹಳ್ಳಿ ಹೋಬಳಿಗೆ ಸೇರಿದ ನಗಾರಿಗೌಡರು, ಅಘಲಯದ ಎ ಎಸ್. ವೀರಭದ್ರೇಗೌಡರು, ದೊಡ್ಡೇಗೌಡರು ಇತ್ಯಾದಿ. ಇವರಿಗೆಲ್ಲ ಜೀವಾವಧಿ ಶಿಕ್ಷೆ ವಿಧಿಸಲಾಗಿತ್ತು.

ಶ್ರವಣಬೆಳಗೊಳದ ಪ್ರಕರಣ ಅಷ್ಟೊಂದು ಉದ್ರೇಕಕಾರಿಯಾಗುವಲ್ಲಿ ಕೃಷ್ಣರಾಜಪೇಟೆ ತಾಲ್ಲೂಕಿಗೆ ಸೇರಿದ ಐಯ್ನೋರ ಹಳ್ಳಿಯ ವೀರಮಹಿಳೆ ಸಾವಿತ್ರಮ್ಮನವರು ಕಾರಣ. ಜನ ಪೋಲೀಸರ ಲಾಠಿಗೆ ಹೆದರಿ ಹಿಮ್ಮೆಟ್ಟುತ್ತಿದ್ದಾಗ ಈಕೆ ಕೆರಳಿದ ಸಿಂಹಿಣಿಯಂತೆ ಸ್ವಾತಂತ್ರ್ಯ ಧ್ವಜ ಹಿಡಿದು ಮುನ್ನುಗ್ಗಿ ಲಾಠಿ ಪೆಟ್ಟಿಗೆ ಅಂಜದೆ ಜನರನ್ನು ಹೀಯಾಳಿಸಿ, ಹುರಿದುಂಬಿಸಿ ಪೋಲೀಸರನ್ನು ಕಂಗೆಡಿಸುವ ರೀತಿಯಲ್ಲಿ ಹುಚ್ಚೆಬ್ಬಿಸಿದರು. ಅದರ ಫಲ ಗೋಲಿಬಾರ್. ಆದರೆ ಈಕೆಗೆ ಗುಂಡುತಾಗಿ ಗಾಯಗಳಾದವೇ ವಿನಃ ಮತ್ತೇನೂ ಆಗಲಿಲ್ಲ. ಈ ಕಾರಣದಿಂದಾಗಿ ಈಕೆ ಕೃಷ್ಣರಾಜಪೇಟೆ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟದ ವೀರವನಿತೆ ಎನಿಸಿಕೊಂಡರು. ಇವರು ಅಂದು ಜನರನ್ನು ಆ ಮಟ್ಟದಲ್ಲಿ ಉದ್ರೇಕಗೊಳಿಸದೆ ಹೋಗಿದ್ದರೆ ಪ್ರಾಯಶಃ ಗುಂಡಿನ ಪ್ರಕರಣ ಶ್ರವಣಬೆಳಗೊಳದಲ್ಲಿ ನಡೆಯುತ್ತಿರಲಿಲ್ಲ ಎಂದು ಭಾವಿಸುವ ಸತ್ಯಾಗ್ರಹಿಗಳಿದ್ದಾರೆ. ಇಂಥ ಅಪೂರ್ವ ಚಳುವಳಿ ನಡೆದ ತಾಣ ಬೇರೆಯ ತಾಲ್ಲೂಕಿನದಾದರೂ ಇದರಲ್ಲಿ ಪ್ರಧಾನ ಪಾತ್ರ ವಹಿಸಿದವರು ಮಾತ್ರ ಕೃಷ್ಣರಾಜಪೇಟೆಯ ತಾಲ್ಲೂಕಿಗೆ ಸೇರಿದವರು ಎಂಬುದು ನಿರ್ವಿವಾದದ ಸಂಗತಿ.

ಶ್ರವಣಬೆಳಗೊಳದ ಈ ಪ್ರಕರಣವನ್ನು ಬಿಟ್ಟರೆ ಕೆ.ಆರ್. ಪೇಟೆಯ ಇನ್ನಾವುದೇ ಸ್ಥಳದಲ್ಲಿ ಇಂಥ ತೀವ್ರತರ ಚಳುವಳಿ ನಡೆದಂತೆ ಕಂಡುಬರುವುದಿಲ್ಲ. ಆದರೆ ಅನೇಕ ಊರುಗಳಲ್ಲಿ ಚಳುವಳಿಯ ಕಾವು ಇತ್ತು, ಪ್ರತಿಭಟನೆಗಳು, ಆದರಿಂದಾಗಿ ಅರೆಸ್ಟ್‌ಗಳು ನಡೆಯುತ್ತಲೇ ಇದ್ದವು. ತಾಲ್ಲೂಕಿನಾದ್ಯಂತ ಜನ ಈ ಬಗೆಯ ಪ್ರವೃತ್ತಿಯಿಂದಾಗಿ ಸೆರೆಮನೆ ಸೇರುತ್ತಲೇ ಇದ್ದರು.

ಇಲ್ಲಿ ಗಮನಿಸಬೇಕಾದ ಅಂಶ ಎಂದರೆ ಕೃಷ್ಣರಾಜಪೇಟೆ ತಾಲ್ಲೂಕಿನ ಜನ ಸ್ವಾತಂತ್ರ್ಯ ಚಳುವಳಿಯ ಹೋರಾಟವನ್ನು ತಮ್ಮ ತಮ್ಮ ಸ್ಥಳಗಳಲ್ಲಿಯೇ ನಡೆಸಿ ಹೆಸರು ಮಾಡಬೇಕೆಂದು ಬಯಸದೆ ಚಳುವಳಿಯ ತೀವ್ರತೆ ಇದ್ದ ಕಡೆಗೆ ಭಾಗವಹಿಸಲು ಹೋಗುತ್ತಿದ್ದುದು. ಇದರ ಫಲವೇ ಅವರು ಮೈಸೂರಿನ ಕಾನೂನು ಭಂಗ ಚಳುವಳಿಯಲ್ಲಿ ಪಾಲ್ಗೊಂಡದ್ದು, ಶ್ರವಣಬೆಳಗೊಳಕ್ಕೆ ಹೋಗಿ ಅಲ್ಲಿನ ಚಳುವಳಿಯನ್ನು ಐತಿಹಾಸಿಕವಾಗಿಸಿದ್ದು: ಇವೇ ಅಲ್ಲದೆ ಮೇಲುಕೋಟೆ, ಕೃಷ್ಣರಾಜನಗರ, ಹಾಸನ, ಇತ್ಯಾದಿ ನೆರೆಯ ಪ್ರದೇಶಗಳ ಹೋರಾಟಗಳಲ್ಲಿ ಕೂಡ ಇವರು ಭಾಗಿಗಳಾಗುತ್ತಿದ್ದರೆಂಬುದು ತಿಳಿದುಬರುತ್ತದೆ. ತಮ್ಮ ಸುತ್ತಮುತ್ತಣ ಪ್ರದೇಶಗಳಲ್ಲಿ ಜರುಗುತ್ತಿದ್ದ ಸಂತೆ, ಜಾತ್ರೆ ಇತ್ಯಾದಿಗಳಲ್ಲಿ ಭಾಷಣ, ಮೆರವಣಿಗೆ ಇತ್ಯಾದಿಗಳ ಮುಖಾಂತರ ಜನರಿಗೆ ಅರಿವು ಮೂಡಿಸುವ ಯತ್ನ ನಿರಂತರವಾಗಿ ಕಾರ್ಯಕರ್ತರಿಂದ ನಡೆದೇ ಇತ್ತು. ಇಂಥ ಕೆಲಸ

ಗಳನ್ನು ಕೃಷ್ಣರಾಜಪೇಟೆ ತಾಲ್ಲೂಕಿನ ಸ್ಥಳೀಯ ನಾಯಕರುಗಳು ನೆರವೇರಿಸು ತ್ತಿದ್ದರು. ಕೆ ಆರ್ ಪೇಟೆಸಂತೆ, ತೆಂಡೆಕೆರೆಸಂತೆ. ಮೇಲುಕೋಟೆ, ಶ್ರೀರಂಗಪಟ್ಟಣದ ಜಾತ್ರೆಗಳು, ಇತ್ಯಾದಿ ಇದಕ್ಕೆ ನಿದರ್ಶನವಾಗಿವೆ.

ಈ ತಾಲ್ಲೂಕಿಗೆ ಸೇರಿದ ಅಂದಿನ ಅತ್ಯಂತ ಜಾಗೃತ ಗ್ರಾಮಗಳಲ್ಲಿ ಸಂತೇ ಬಾಚಳ್ಳಿ, ಸಿಂದಘಟ್ಟ, ಬೊಮ್ಮನಾಯಕನಹಳ್ಳಿ, ಶೀಳ್ನೆರೆ, ಮರಡಳ್ಳಿ, ಚೌಡಿಘಟ್ಟ, ಅಘಲಯ, ಮಡುವಿನಕೋಡಿ, ನಾರಾಯಣಪುರ, ರಾಯಸಂದ್ರ, ಮಾರಗೌಡನಹಳ್ಳಿ, ಭೈರಾಪುರ, ಅಗ್ರಹಾರಬಾಚಳ್ಳಿ, ಸೋಳ್ಳೆಪುರ, ರಾಜಘಟ್ಟ, ನಾಗರಘಟ್ಟ. ಆಗಸರಹಳ್ಳಿ, ಲೋಕನಹಳ್ಳಿ, ಐಯ್ಯನೀರಹಳ್ಳಿ, ಸೋಮೇನಹಳ್ಳಿ, ಅಕ್ಕಿಹೆಬ್ಬಾಳು ಮತ್ತು ಕಿಕ್ಕೇರಿ ಹೆಸರಿಸುವಂಥವು.

ಸ್ಥಳೀಯ ನಾಯಕರುಗಳಲ್ಲಿ ಪ್ರಮುಖರೆಂದರೆ, ಸಿಂದಘಟ್ಟದ ಬುದ್ಧಲಿಂಗೇ ಗೌಡರು, ಮಲ್ಲೇಗೌಡರು, ಮಿಷನ್ ನಿಂಗೇಗೌಡರು, ದೊಣ್ಣೆ ಬೋರನ ನಿಂಗೇಗೌಡರು, ಶಿವಬಸವಯ್ಯನವರು, ನಂಜಪ್ಪನವರು. ಲಿಂಗೇಗೌಡರ ಮಗ ಬುದ್ಧೇಗೌಡರು. ಮಾಜಿ ಛೇರ್ಮನ್ ಚೆಟ್ಟೇಗೌಡರು, ಕಾಳೇಗೌಡರು ಆಗಿನ್ನೂ ವಿದ್ಯಾರ್ಥಿಯಾಗಿದ್ದ ರಾಮೇ ಗೌಡರು, ಇವರೆಲ್ಲ ಸೆರೆವಾಸ ಅನುಭವಿಸಿದರು.

ಬೊಮ್ಮನಾಯಕನ ಹಳ್ಳಿಯ ಬಿ. ವಿ. ನಾರಾಯಣ್ಣನವರು ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮನ್ನು ಅರ್ಪಿಸಿಕೊಂಡ ವ್ಯಕ್ತಿ. ಜನಜಾಗೃತಿಗೊಳಿಸುವಲ್ಲಿ, ಗುಪ್ತವಾಗಿ ಅಡಗಿಕೊಂಡು ಜನರನ್ನು ಪ್ರಚೋದಿಸುವ ಕಾರ್ಯಕರ್ತರಾಗಿ ಕೆಲಸ ಮಾಡಿದ್ದು ಇವರ ಹಿರಿಮೆ. ಇಂದಿಗೂ ಯಾವ ಸ್ಥಾನ ಮಾನಗಳಿಗೂ ಆಪೇಕ್ಷಿಸದೆ, ಯಾವ ಪಕ್ಷಕ್ಕೂ ಸೇರದೆ, ಅಪ್ಪಟ ಗಾಂಧಿವಾದಿಯಾಗಿ ನಿರಂತರ ಮುಗ್ಧ ಜನರ ಸೇವೆಗೆ ತಾಲ್ಲೂಕಿನಲ್ಲಿ ತಮ್ಮನ್ನು ಮುಡಿಪಾಗಿಸಿಕೊಂಡಿದ್ದಾರೆ. ಲಂಚ, ರುಸುವತ್ತು, ಅಧಿಕಾರಿಗಳ ದಬ್ಬಾಳಿಕೆ, ಜೂಜು ಇತ್ಯಾದಿ ಇವರ ಕಣ್ಣಿಗೆ ಬಿದ್ದರೆ ಎಂಥವರನ್ನೂ ಎದುರಿಸಲು ಹಿಂಜರಿಯು ವಂಥವರಲ್ಲ. ನಿಸ್ವಾರ್ಥ ಗಾಂಧಿವಾದಿಯಾಗಿ, ಗಟ್ಟಿಮುಟ್ಟಾಗಿದ್ದುಕೊಂಡು ಹಳೇಮೌಲ್ಯ ಗಳ ಪಳಯುಳಿಕೆಯಂತಿರುವ ನಾರಾಯಣ್ಣ ಒಂದು ಅಪರೂಪದ ವ್ಯಕ್ತಿಯೆನ್ನಬಹುದು.

ಶೀಳನೆರೆಯ ಎಸ್. ಎಂ. ಲಿಂಗಪ್ಪನವರು ಈ ನಿಟ್ಟನಲ್ಲಿ ಸ್ಮರಿಸಬೇಕಾದ ಇನ್ನೊಂದು ಹೆಸರು, ಇವರು ಸ್ವಾತಂತ್ರ್ಯ ಚಳುವಳಿಯಲ್ಲಿ ಅಂಥ ಉಗ್ರ ಹೋರಾಟ ವೇನನ್ನೂ ಮಾಡದಿದ್ದರೂ, ಆ ಸಮಯದಲ್ಲಿ ಸೆರೆಮನೆಯ ಸವಿಯುಂಡವರು. ಸ್ವಾತಂತ್ರ್ಯ ನಂತರದ ತಾಲ್ಲೂಕಿನ ರಾಜಕೀಯ ಹುಲಿ, ಗಾಂಧಿವಾದಿಯಾಗಿ, ಸಮಾಜ ಸೇವಕರಾಗಿ, ಶುದ್ಧಹಸ್ತರಾಗಿ, ಸಾರ್ವಜನಿಕ ಸೇವೆ ಮಾಡುತ್ತ ಬಂದಿರುವ ಇವರ ಸೇವೆ ತಾಲ್ಲೂಕಿನ ಇತಿಹಾಸದಲ್ಲಿ ಚಿರಂತನವಾದುದು. ಶೀಳನೆರೆ ಗ್ರಾಮದ ಸ್ವಾತಂತ್ರ್ಯ ಹೋರಾಟದ ಇತರ ಗಣ್ಯರೆಂದರೆ ಕೆ.ಎಸ್. ಬೋರೇಗೌಡರು, ಎಸ್.ಕೆ. ತಿಮ್ಮೇಗೌಡರು. ಬೋರೇಗೌಡರು ಮತ್ತು ಒಳ್ಳೆಯ ಮಾತುಗಾರಿಕೆಗೆ ಆಗಲೇ ಹೆಸರಾಗಿದ್ದ ವಿದ್ಯಾರ್ಥಿ

ಉರಿಗೌಡರು.

ಇವರೇ ಅಲ್ಲದೆ ಕಾಗೆಪುರದ ಚಿಕ್ಕಬೋರೇಗೌಡರು. ಮರೀಗೌಡರು. ಮರಡ ಹಳ್ಳಿಯ ಎಂ.ಪಿ. ಬೋರೇಗೌಡರು, ಚೌಡಿಘಟ್ಟದ ಸಿದ್ದೇಗೌಡರು, ನಾರಾಯಣಪುರದ ಬೋರೇಗೌಡರು. ಜೋಗಿಗೌಡರು, ಮಾರಗೌಡನಹಳ್ಳಿಯ ಚನ್ನಪ್ಪನವರು, (ಬೆಳಗೊಳದ ಪ್ರಕರಣದಲ್ಲಿ ಗುಂಡೇಟು ತಿಂದವರು.) ಮಡುವಿನ ಕೋಡಿಯ ಎಸ್ ಕೆ. ಸಿದ್ದೇಗೌಡರು, ಬೋಳಾರಿಗೌಡರು, ರಾಯಸಮುದ್ರದ ಆರ್. ಕೆ. ತಿಮ್ಮೇಗೌಡರು ಮತ್ತು ಆರ್.ಕೆ. ಕಾಳೇಗೌಡರು, ಭೈರಾಪುರದ ಡಿ. ಬೋರಯ್ಯನವರು, ಅಗ್ರಹಾರಬಾಚಹಳ್ಳಿಯ ಬಿ.ಟಿ. ತಿಮ್ಮೇಗೌಡರು, ಬಿ. ಸತ್ಯನಾರಾಯಣ ಅವರು, ಸೊಳ್ಳೇಪುರದ ಬೋರಣ್ಣನವರು ತಮ್ಮಯ್ಯ ಉರುಫ್ ಕರಿಯಪ್ಪನವರು, ಕೆ. ಆರ್, ಪೇಟೆಯ ಕೆ. ವಿ. ತಿಮ್ಮೇಗೌಡರು, ಬೋರಲಿಂಗೇಗೌಡರು, ತಮ್ಮಣ್ಣಗೌಡರು. ಸಂತೇಬಾಚಹಳ್ಳಿಯ ಸಿಂಗೇಗೌಡರ ದೇವೆಗೌಡರು ರಾಜಘಟ್ಟದ ಅಂದಾನಿಗೌಡರು, ಅಗಸರಹಳ್ಳಿಯ ತಿಮ್ಮೇಗೌಡರು, ಅಘಲಯದ ಎಂ. ಸಿದ್ಧಲಿಂಗೇಗೌಡರು, ಜವರೇಗೌಡರು, ಎಂ. ಎಸ್. ವೀರಭದ್ರೇಗೌಡರು, ನಾಗರಘಟ್ಟದ ಗವಿಗೌಡರು, ಲೋಕನಹಳ್ಳಿಯ ಎನ್. ತಿಮ್ಮೇಗೌಡರು, ಎಲ್. ವಿ. ಗೋವಿಂದೇಗೌಡರು, ಎಲ್. ವಿ. ಶಿವರಾಮೇಗೌಡರು, ಆಕ್ಕಿಹೆಬ್ಬಾಳಿನ ಎ.ಬಿ. ಜವರಪ್ಪನವರು, ಸೋಮನ ಹಳ್ಳಿಯ ಎಸ್.ಎನ್. ಲಿಂಗಯ್ಯನವರು, ಇತ್ಯಾದಿ ನೂರಾರು ಗ್ರಾಮ ಮುಖಂಡರು ಈ ಚಳುವಳಿಯಲ್ಲಿ ಭಾಗವಹಿಸಿ, ಲಾಠಿ ಪೆಟ್ಟು ತಿಂದು, ಸೆರೆವಾಸ ಅನುಭವಿಸಿದಂಥ ಈ ತಾಲ್ಲೂಕಿನ ಮಹನೀಯರು.

ಈ ಮೇಲಿನ ಪಟ್ಟಿಯಲ್ಲಿ ಹೆಸರಿರುವಂಥವರ ರೀತಿಯಲ್ಲಿ ಶ್ರಮಿಸಿದ ಇನ್ನೂ ಹಲವಾರು ಜನರ ಹೆಸರುಗಳು ಇಲ್ಲಿ ಉಪಲಬ್ಧವಿಲ್ಲ. ಅದಕ್ಕೆ ಕಾರಣ ಮಾಹಿತಿಯ ಕೊರತೆ ಅಷ್ಟೆ. ಹೀಗಾಗಿ ಇಲ್ಲಿ ಹೆಸರಿಸದೆ ಬಿಟ್ಟು ಹೋಗಿರಬಹುದಾದ ಮಹನೀಯರು ಅವರಿಗೆ ಸಂಬಂಧಿಸಿದವರು ಅನ್ಯಥಾ ಭಾವಿಸಬಾರದು. ಇಲ್ಲಿ ಪಟ್ಟಿ ಮಾಡಲಾಗಿರುವ ಮಹನೀಯರಲ್ಲಿ ಕೆಲವರು 1938 ರ ಶಿವಪುರದ ಸತ್ಯಾಗ್ರಹದಲ್ಲಿ ಪಾಲ್ಗೊಂಡವರು. ಮತ್ತೆ ಕೆಲವರು 1939 ರ ಮೈಸೂರಿನ ಕಾನೂನು ಭಂಗ ಚಳುವಳಿಯಲ್ಲಿ ಭಾಗಿಗಳಾದವರು. ಇನ್ನೂ ಕೆಲವರು 1947ರ ಸ್ವಾತಂತ್ರ್ಯ ನಂತರದ 'ಅರಮನೆ ಸತ್ಯಾಗ್ರಹ'ದಲ್ಲಿ ಪಾಲ್ಗೊಳ್ಳಲು ಹೋಗಿ ಶ್ರೀರಂಗಪಟ್ಟಣದ ಬಳಿಯೇ ಅರೆಸ್ಟ್ ಆಗಿ ಸೆರೆವಾಸ ಅನುಭವಿಸಿದವರು. ಪಟ್ಟಿಯಲ್ಲಿನ ಬಹುಪಾಲು ಜನ 1942ರ 'ಕ್ವಿಟ್ ಇಂಡಿಯ' ಚಳುವಳಿಯಲ್ಲಿ ಕ್ರಿಯಾಶೀಲರಾದವರು ಎನ್ನಲಡ್ಡಿಯಿಲ್ಲ,

ಸ್ವಾತಂತ್ರ್ಯ ಹೋರಾಟದಲ್ಲಿ ಈ ತಾಲ್ಲೂಕಿನ ರೈತರು, ಸ್ತ್ರೀಯರು, ವಿದ್ಯಾರ್ಥಿಗಳು ಅಪಾರ ಸೇವೆ ಸಲ್ಲಿಸಿದ್ದಾರೆ. ಅವರೆಲ್ಲರ ಪಟ್ಟಿ ಮಾಡುವುದು ಇಲ್ಲಿ ಸಾಧ್ಯವಾಗಿಲ್ಲ. ಸಿಂದಘಟ್ಟ ಮತ್ತು ಚೌಡಿಘಟ್ಟದ ಮಹಿಳೆಯರು ಚಳುವಳಿಯ ಮುಂಚೂಣಿಯಲ್ಲಿದ್ದರೆಂದು ತಿಳಿದುಬರುತ್ತದೆ. ಆರ್.ಕೆ. ತಿಮ್ಮೇಗೌಡ, ಉರಿಗೌಡ, ಎಸ್.ಡಿ. ರಾಮೇಗೌಡ,

ಎಂ.ಕೆ. ಬೊಮ್ಮೇಗೌಡ, ತಾಲ್ಲೂಕಿನ ಮಾಜಿ ಎಂ.ಎಲ್.ಎ. ನಂಜಪ್ಪನವರು ಹಾಗೂ ಪ್ರಸ್ತುತ ಎಂ.ಎಲ್.ಎ. ಕೃಷ್ಣರವರು ಅಂದು ವಿದ್ಯಾರ್ಥಿ ದಸೆಯಲ್ಲಿದ್ದು, ಚಳುವಳಿಯಲ್ಲಿ ಉತ್ಸಾಹದಿಂದ ಧುಮುಕಿ ಇವರಲ್ಲಿ ಕೆಲವರಾದರು ಸೆರೆಮನೆವಾಸ ಅನುಭವಿಸಿದವರಾಗಿದ್ದಾರೆ.

ಎಂ. ಕೆ. ಬೊಮ್ಮೇಗೌಡರು ಹಾಸ್ಟಲಿಗೆ ಬಂದಿದ್ದ ಐ. ಜಿ. ಪಿ. ಯವರಿಗೇ ತಿನ್ನುತ್ತಿದ್ದ ಉಪ್ಪಿಟ್ಟಿನಿಂದಲೇ ಹೊಡೆದು ಕಾಕನಕೋಟೆಯ ಕಾಡಿಗೆ ಗಡೀಪಾರಾಗಿದ್ದವರು. ಹಾಗೆಯೇ ಸಂತೇಬಾಚಹಳ್ಳಿ ಹೋಬಳಿಗೆ ಸೇರಿದ ಹುಬ್ಬನಹಳ್ಳಿಯ ಎಚ್. ಜವರೇಗೌಡರು, ಎಸ್. ಡಿ. ಸಿಂಗೇಗೌಡರು ವಿದ್ಯಾರ್ಥಿ ದೆಸೆಯಿಂದಲೇ ರಾಷ್ಟ್ರನಾಯಕರಾದ ಗಾಂಧಿ, ನೆಹರು, ಸುಭಾಷ್ ಇತ್ಯಾದಿಯವರ ಪ್ರಭಾವದಿಂದ ಪ್ರೇರೇಪಿತರಾಗಿ ಚಳುವಳಿ ಹಾದಿ ಹಿಡಿದವರು. ಜವರೇಗೌಡರ ತಂದೆ ಶಿವಪುರದ ಸತ್ಯಾಗ್ರಹದಲ್ಲಿ ಪಾಲ್ಗೊಂಡವರು. ಇವರಿಂದಾಗಿ ಮಗ ಸ್ವಾತಂತ್ರ್ಯ ಬರುವವರೆಗೆ ವಿವಿಧ ರೀತಿಯಲ್ಲಿ ಹೋರಾಡಿದರು. ಗಡಿಪಾರು, ಸೆರೆವಾಸ ಇತ್ಯಾದಿಗಳನ್ನು ಹೋರಾಟಕ್ಕೆ ಬಳುವಳಿಯಾಗಿ ಸ್ವೀಕರಿಸಿದವರು, ವಿದ್ಯಾರ್ಥಿ ಜೀವನದ ಒಂದೆರಡು ವರ್ಷಗಳನ್ನು ಈ ಕಾರಣಕ್ಕಾಗಿ ಕಳೆದುಕೊಂಡವರು. ಇವರೆಲ್ಲ ಅಂದು ವಿದ್ಯಾರ್ಥಿಗಳಾಗಿ ಚಳುವಳಿಯನ್ನು ಅಪ್ಪಿಕೊಂಡವರಲ್ಲಿ ಪ್ರಮುಖರು.

ಕೆ. ಆರ್. ಪೇಟೆ ತಾಲ್ಲೂಕಿಗೆ ಸೇರಿದ ಅಕ್ಕಿ ಹೆಬ್ಬಾಳು ಹೋಬಳಿಯ ಕೆಲವು ಹಳ್ಳಿಗಳು ಸಾರಿಗೆ ಸಂಪರ್ಕವಿರದ ಕಾರಣ, ಚಳುವಳಿಯ ಬಿಸಿತಾಗದ, ಪೋಲೀಸರ ಕಣ್ಣಿಗೆ ಬೀಳದೆ ಸುರಕ್ಷಿತ ಸ್ಥಳಗಳೆನಿಸಿದ್ದವು. ತಲೆತಪ್ಪಿಸಿಕೊಂಡು ತಿರುಗುತ್ತಿದ್ದ ನಾಯಕರು ಪೋಲೀಸರ ಕಣ್‌ತಪ್ಪಿಸಲು ಇಂಥ ಸ್ಥಳಗಳಲ್ಲಿ ಬಂದು ಅಡಗಿಕೊಳ್ಳುತ್ತಿದ್ದರು. ಈ ಹಳ್ಳಿಗಳು ಇಂಥ ನಾಯಕರಿಗೆ ಅನ್ನ, ಆಹಾರಾದಿಗಳನ್ನಿತ್ತು, ಯೋಗಕ್ಷೇಮ ನೋಡಿಕೊಳ್ಳುವುದರ ಮೂಲಕ ಪರೋಕ್ಷವಾಗಿ ರಾಷ್ಟ್ರ ಚಳುವಳಿಗೆ ಬೆನ್ನು ಕೊಡುತ್ತಿದ್ದವು. ಅಂತಹ ಹಳ್ಳಿಗಳಲ್ಲಿ ತೀರಾ ಮೂಲೆಯಲ್ಲಿರುವ ಅಂಬಿಗರಹಳ್ಳಿ ಕೂಡ ಒಂದು. ಇದೊಂದು ಪರ್ಯಾಯ ದ್ವೀಪವೆಂದು ಹೇಳಬಹುದಾದ ಗ್ರಾಮ. ಈ ಗ್ರಾಮದ ಮೂರೂ ಕಡೆಗೆ ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ ನದಿಗಳು ಹರಿದು ಸಂಗಮಗೊಂಡಿವೆ. ಈ ಗ್ರಾಮ ಪ್ರವೇಶ ಕೇವಲ ಒಂದು ಕಡೆಯಿಂದ ಮಾತ್ರ ಸಾಧ್ಯ. ಇಲ್ಲಿ ಬಂದು ತಲೆಮರೆಸಿಕೊಳ್ಳುತ್ತಿದ್ದ ನಾಯಕರ ತಲೆಕಾಯ್ದು, ಅವರಿಗೆ ಬೇಕಾದ ಎಲ್ಲ ವ್ಯವಸ್ಥೆಗಳನ್ನೂ ಒದಗಿಸಿಕೊಡುತ್ತಿದ್ದ ಮನೆಯೆಂದರೆ ಸಾಹುಕಾರ್ ಕೆ. ಮಾಯಿಶೆಟ್ಟಿಗೌಡರದ್ದು. ಎಸ್. ಎಂ. ಲಿಂಗಪ್ಪ, ಚನ್ನಬಸಪ್ಪ, ಮಾಯಣ್ಣನವರಾದಿಯಾಗಿ ಅನೇಕ ಜನನಾಯಕರು ಇಂದಿಗೂ ಇವರನ್ನು ನೆನಪಿಸಿಕೊಳ್ಳುತ್ತಾರೆ.

ಕೃಷ್ಣರಾಜಪೇಟೆಯ ಜನ ಜಾಗೃತರಾಗುವಲ್ಲಿ, ಚಳುವಳಿ ಗರಿಗಟ್ಟುವಲ್ಲಿ ಸ್ಥಳೀಯ ನಾಯಕರ ಜೊತೆಗೆ ಹೊರಗಡೆಯಿಂದ ಬಂದು ದುಡಿದ ಜನರ ಪಾತ್ರವೂ

ಮಹತ್ವದ್ದು. ಈ ಪಟ್ಟಿನಲ್ಲಿ ನೆನಪಿಸಿಕೊಳ್ಳಬೇಕಾದ ಹೆಸರುಗಳೆಂದರೆ ಹೆಚ್. ಸಿ. ದಾಸಪ್ಪನವರು, ಯಶೋಧರಮ್ಮ ದಾಸಪ್ಪನವರು, ಎಂ ವಿ. ಕೃಷ್ಣಪ್ಪನವರು, ಟಿ.ಎಸ್. ಸುಬ್ಬಣ್ಣನವರು, ಸಂಜೀವಯ್ಯನವರು ಡಾ. ಸಿ. ಬಂದೀಗೌಡರು, ಈರೇಗೌಡರು, ಕೆ. ಎಂ. ನಿಂಗೇಗೌಡರು, ನಂಜೇಗೌಡರು ಇತ್ಯಾದಿ ಇವರೆಲ್ಲ ಮೈಸೂರು, ಶ್ರೀರಂಗ ಪಟ್ಟಣ, ನಾಗಮಂಗಲ, ತಗಡೂರು, ಕ್ಯಾತನಹಳ್ಳಿ ಇತ್ಯಾದಿ ಸ್ಥಳಗಳಿಂದ ಬಂದಿದ್ದವರು. ಅದರಲ್ಲೂ ಎಂ. ವಿ. ಕೃಷ್ಣಪ್ಪ, ಟಿ. ಎಸ್. ಸುಬ್ಬಣ್ಣ ಇವರ ಕಾಟದಿಂದ ತತ್ತರಿಸಿದ ಪೋಲೀಸ್ ಅಧಿಕಾರಿಗಳು ಇವರನ್ನು ಕಂಡಲ್ಲಿ ಗುಂಡಿಕ್ಕಲು ಆದೇಶಿಸಿದ್ದರಂತೆ. ಹೀಗಾಗಿ ಸದಾ ಇವರು ತಲೆತಪ್ಪಿಸಿಕೊಂಡು ತಿರುಗಾಡಬೇಕಾಗಿತ್ತು. ಅದಕ್ಕನುಗುಣವಾಗಿ ಇವರು ದಾಸಯ್ಯ, ಗೊರವಯ್ಯ, ಬುಡುಬುಡಕೆ, ಹಾವಾಡಿಗ ವೇಷಗಳನ್ನು ಧರಿಸಿ ಸಂಚರಿಸುತ್ತಿದ್ದು, ತಮಗೆ ಮಾತ್ರ ಅರ್ಥವಾಗುವ ರೀತಿಯಲ್ಲಿ ಕನ್ನಡದ ಗುಪ್ತಭಾಷೆ ಯೊಂದನ್ನು ಸೃಷ್ಟಿಸಿಕೊಂಡು ಮಾತಾಡುತ್ತಿದ್ದರಂತೆ. ಆಗಾಗ ಯಶೋಧರಮ್ಮ ನವರ ಮನೆಯಲ್ಲಿ ರಾತ್ರಿವೇಳೆ ಸಭೆ ಸೇರುತ್ತಾರೆಂಬ ಸುಳುಹಿನ ಮೇರೆಗೆ ಪೋಲೀಸರು ದಾಳಿ ಇಟ್ಟಾಗ, ಕೃಷ್ಣಪ್ಪನವರನ್ನು ದೇವರಕೋಣೆಯಲ್ಲಿ ವಿಗ್ರಹದ ರೀತಿ ಮಲಗಿಸಿ ಯಶೋಧರಮ್ಮನವರು ಸೀರೆ ಹೊದ್ದಿಸಿದ್ದರಂತೆ.ಹೀಗಾಗಿ ಪೋಲೀಸರ ಕೈನಿಂದ ಅಂದು ಅವರು ಬಚಾವಾದುದಾಗಿ ತಿಳಿದುಬರುತ್ತದೆ. ಹೀಗೆ ಒಮ್ಮೆ ವೇಷಮರೆಸಿಕೊಂಡು ಜೋಳದ ಬಣವೆಯೊಂದರೊಳಗೆ ಗುಪ್ತಭಾಷೆಯಲ್ಲಿ ಸುಬ್ಬಣ್ಣನವರೊಡನೆ ಕೃಷ್ಣಪ್ಪ ನವರು ಸಂಭಾಷಿಸುತ್ತಿದ್ದದ್ದನ್ನು ಆಲಿಸಿದ ವ್ಯಕ್ತಿಗಳಿಬ್ಬರು ಪಿಶಾಚಿಗಳಿರಬಹುದೆಂದು ಬಣವೆಗೆ ಬೆಂಕಿಹಚ್ಚಲು ಏರ್ಪಾಡು ಮಾಡಿಕೊಳ್ಳುತ್ತಿದ್ದಾಗ ಅಲ್ಲಿಂದ ಇವರಿಬ್ಬರೂ ಓಡಿ ತಪ್ಪಿಸಿಕೊಂಡ ಕಥೆ ತಾಲ್ಲೂಕಿನ ಹಲವು ಜನ ಇವರ ಸತ್ಯಾಗ್ರಹ ಸ್ನೇಹಿತರುಗಳಿಗೆ ತಿಳಿದಿವೆ. ಜೈಲಿನಲ್ಲಿ ಖುದ್ದು ಅವರೇ ಇಂಥ ರೋಚಕ ಕಥೆಗಳನ್ನು ಹೇಳುತ್ತಿದ್ದರೆಂದು ಮಾಯಣ್ಣ ನೆನಪಿಸಿಕೊಳ್ಳುತ್ತಾರೆ.

ಹಾಗೆಯೇ ತಗಡೂರಿನ ಟಿ. ಎಸ್. ಸುಬ್ಬಣ್ಣನವರು ಸಿಡಿಗುಂಡು ಹಾರಿಸಲು ಹೋಗಿ ಮೈ ಕೈ ಸುಟ್ಟುಕೊಂಡು ಜೈಲಿನಲ್ಲಿದ್ದಾಗ ಅವರ ಅಗತ್ಯ ಶೌಚಕ್ರಿಯಾನಂತರದ ಸೇವೆ ಮಾಡಿದ್ದನ್ನು ಮಾಯಣ್ಣನವರು ಸಂತೋಷದಿಂದ ಬೀಗುತ್ತಾ ಹೇಳುತ್ತಾರೆ. ಸ್ವಾತಂತ್ರ್ಯಕ್ಕಾಗಿ ಮನೆಮಠ ತೊರೆದು, ಬ್ರಹ್ಮಚಾರಿಯಾಗಿದ್ದುಕೊಂಡು, ಇಂದಿಗೂ ಸಮಾಜ ಸೇವೆಯಲ್ಲಿ ನಿರತರಾಗಿರುವ ಅವರ ಪರಿ ವಿಸ್ಮಯಕಾರಿಯಾಗಿದೆ. ಕೆ. ಆರ್. ಪೇಟೆಯ ಜನರನ್ನು ಹುರಿದುಂಬಿಸುವುದರಲ್ಲಿ ಈ ಗಾಂಧಿವಾದಿಯ ಪಾತ್ರಕೂಡ ಸ್ಮರಣಾರ್ಹವಾದದ್ದು. ಇನ್ನು ಡಾ. ಸಿ. ಬಂದೀಗೌಡರು ಎಚ್. ಸಿ. ದಾಸಪ್ಪನವರು, ಯಶೋಧರ ದಾಸಪ್ಪನವರು ಇಲ್ಲಿನ ಹಲವಾರು ಕಡೆಗಳಲ್ಲಿ ತಮ್ಮ ಅಮೋಘ ಭಾಷಣ ಕಲೆಯಿಂದ, ದೇಶ ನಿಷ್ಠೆಯಿಂದ ಜನರನ್ನು ಸ್ವಾತಂತ್ರ್ಯ ಹೋರಾಟಕ್ಕೆ ಅಣಿಮಾಡಿ ದ್ದಾರೆ. ಮಾನ್ಯ ಎಚ್. ಜವರೇಗೌಡರು ಚಳುವಳಿಗೆ ಧುಮುಕಲು ನಿರ್ಧರಿಸಿದ್ದು

ದಾಸಪ್ಪನವರ ಭಾಷಣದ ಪ್ರಚೋದನೆಯಿಂದ ಎಂದು ಸ್ಮರಿಸಿರುವುದನ್ನು ಗಮನಿಸಿದಾಗ ಇಂಥ ಎಷ್ಟು ಜನರನ್ನು ಇವರು ಪರೋಕ್ಷವಾಗಿ ಚಳುವಳಿಗೆ ಎಳೆದು, ಸೆಳೆದು ತಂದಿರಬಹುದು ಎಂಬುದನ್ನು ಊಹಿಸಲು ಬರುವುದಿಲ್ಲ.

ಕೆ. ಆರ್. ಪೇಟೆಯ ವಿವಿಧ ಸ್ಥಳಗಳಲ್ಲಿ ಜನನಾಯಕರು, ಜನರನ್ನು ಚಳುವಳಿಗೆ ಅಣಿಮಾಡುತ್ತಿದ್ದ ಬಗೆ ಗಮನಾರ್ಹವಾದುದು. ಚಳುವಳಿಯ ಸ್ವರೂಪ ಮುಖ್ಯವಾಗಿ ಕರನಿರಾಕರಣೆ, ಸುಂತೆಸುಂಕ, ಹಳ್ಳಿಗಂಡಾಯ ಕೊಡದೆ ಸರ್ಕಾರದ ಬಲ ಕುಗ್ಗಿಸುವ ಪ್ರಯತ್ನ ಇವರದಾಗಿತ್ತು. ಜೊತೆಗೆ ಅಸಹಾಕಾರ ಚಳುವಳಿ ; ಕೆಲಸದಲ್ಲಿದ್ದವರು ಕೆಲಸಕ್ಕೆ ಹೋಗದಿರುವುದು, ವಿದ್ಯಾರ್ಥಿಗಳು ಶಾಲೆಗೆ ಬಹಿಷ್ಕಾರ ಹಾಕುವುದು ; ಕಾರ್ಮಿಕರು ದುಡಿಮೆಗೆ ಹಾಜರಾಗದಿರುವುದು ಇತ್ಯಾದಿ. ಪ್ರತಿದಿವಸ ಬೆಳಿಗ್ಗೆ ಊರೊಟ್ಟಿನ ಮಕ್ಕಳೊಡನೆ 'ಪ್ರಭಾತ್ ಭೇರಿ' ಹೊರಡುವುದು. ಊರಿನ ಯುವಕರ ಸಹಾಯದಿಂದ ಈಚಲು ಪೇಟೆಗಳಿಗೆ (ಮರುವನ ಹಳ್ಳಿ, ಹಡುವನ ಹಳ್ಳಿ ಇತ್ಯಾದಿ ಈಚಲು ಪೇಟೆಗಳು) ನುಗ್ಗಿ ದಿನಕ್ಕೆ ಕನಿಷ್ಠ ನೂರು ಈಚಲು ಮರಗಳನ್ನು ಕಡಿದುರುಳಿಸುವುದು. ಹೆಂಡದ ಗಡಿಗೆಗಳನ್ನು ಒಡೆಯುವುದು, ಹೆಂಡದ ಅಂಗಡಿಗಳನ್ನು ಸುಡುವುದು ಇಲ್ಲವೆ ಅವುಗಳ ಮುಂದೆ ಹರತಾಳ ನಡೆಸುವುದು, ಪಿಕೆಟಿಂಗ್ ಮಾಡುವುದು. ಹಳ್ಳಿ ಹಳ್ಳಿಗೂ ಮಾರುವೇಷಗಳಲ್ಲಿ ಹೋಗಿ ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಜನರನ್ನು ಎತ್ತಿಕಟ್ಟಲು ಸೊಗಸಾದ ಲಾವಣಿಗಳನ್ನು, ಸ್ವಾತಂತ್ರ್ಯ ಗೀತೆಗಳನ್ನು ಹಾಡುವುದು, ಜನಸೇರಿಸಿ ಭಾಷಣ ಮಾಡುವುದು, ಹುಡುಗರನ್ನು ಸೇರಿಸಿಕೊಂಡು ಸ್ವಾತಂತ್ರ್ಯ ಬಾವುಟ ಹಿಡಿದುಕೊಂಡು ಹಾಡುಹೇಳುತ್ತ ಮೆರವಣಿಗೆ ಮಾಡುವುದು, ಖಾದಿ ಬಟ್ಟೆ ಹಾಗೂ ಟೋಪಿ ಧರಿಸುವಂತೆ ಆಗ್ರಹಿಸುವುದು, ಇವೇ ಮುಂತಾದ ಚಟುವಟಿಕೆಗಳು ಇಲ್ಲಿ ನಡೆದ ಚಳುವಳಿಯ ಸ್ವರೂಪವನ್ನು ನಮಗೆ ಮನದಟ್ಟು ಮಾಡಿಸುತ್ತವೆ.

ಸೆರೆವಾಸದ ಝಳ ಈ ಭಾಗದ ಜನರಿಗೆ ಅಷ್ಟಾಗಿ ತಟ್ಟಿದಂತೆ ಕಾಣುವುದಿಲ್ಲ. ಏಕೆಂದರೆ ಇಲ್ಲಿನ ಸತ್ಯಾಗ್ರಹಿಗಳಿಗೆ ಜೈಲಿನ ಶಿಕ್ಷೆ ಅದರಲ್ಲೂ ಶ್ರೀರಂಗಪಟ್ಟಣ, ಮೈಸೂರಿನಲ್ಲಿ ಅಷ್ಟೇನೂ ಕಷ್ಟಕರವಾದುದಾಗಿರಲಿಲ್ಲವೆಂದು ತಿಳಿದುಬರುತ್ತದೆ. ಕಾಗೇಪುರದ ಚಿಕ್ಕಬೋರೇಗೌಡ ಹಾಗೂ ಬೊಮ್ಮನಾಯಕನ ಹಳ್ಳಿಯ ಬಿ. ಎ. ಮಾಯಣ್ಣ ಇವರೇ ಗರಿಷ್ಟ ಶಿಕ್ಷೆಯನ್ನು ಈ ತಾಲ್ಲೂಕಿನ ಸತ್ಯಾಗ್ರಹಿಗಳಾಗಿ ಅನುಭವಿಸಿದವರು, 194?ರ ಆಕ್ಟೋಬರ್ 10 ರಿಂದ 15 ತಿಂಗಳು ಇವರಿಬ್ಬರು ಸೆರೆವಾಸದಲ್ಲಿದ್ದವರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಶ್ರಮಿಸಿದ ಎಷ್ಟೋಜನ ಸ್ವಾತಂತ್ರ್ಯಾನಂತರ ಯಾವ ಸವಲತ್ತನ್ನೂ ಅನುಭವಿಸದ ತೀರಿಕೊಂಡಿದ್ದಾರೆ. ಅಂತಹ ದುರ್ದೈವಿಗಳಲ್ಲಿ ಐಯ್ನೋರಹಳ್ಳಿಯ ಸಾವಿತ್ರಮ್ಮನವರು ಸ್ಮರಣಾರ್ಹರು. ಇಂದು, ಸ್ವಾತಂತ್ರ್ಯ

ಚಟುವಟಿಕೆಯಲ್ಲಿ ಭಾಗಿಗಳಾಗಿ ಉಳಿದಿರುವಂಥವರು ಸರ್ಕಾರದಿಂದ ಮಾಶಾಸನ ಇತ್ಯಾದಿ ಭತ್ಯೆಗಳನ್ನು ಪಡೆಯುತ್ತಿದ್ದಾರೆ ; ಸಂಚಾರ ಸೌಲಭ್ಯ, ಉಚಿತ ಪ್ರಯಾಣ ಇತ್ಯಾದಿಗಳಿಗೆ ಪಾತ್ರರಾಗಿದ್ದಾರೆ. ಇದನ್ನೆಲ್ಲ ಬಳಸಿಕೊಳ್ಳುವ ದೈಹಿಕ ಸಾಮರ್ಥ್ಯ ಬಹಳ ಮಂದಿಗಿಲ್ಲ. ಆದರೆ ಇಂದಿಗೂ ಇಂತಹ ಸೌಲಭ್ಯಗಳಿಕೆ ಅಂದು ರಾಷ್ಟ್ರಕ್ಕಾಗಿ ದುಡಿದ ಹಕ್ಕು ಎನ್ನುವಷ್ಟು ನಂಬಿಕೆ ತಳೆದು ಫಲಾನುಭವಿಗಳಾಗಿರುವ ಬಿ. ವಿ. ಮಾಯಣ್ಣನವರು ಈ ಲೇಖನ ರಚನೆಗೆ ಸಾಕಷ್ಟು ಮಾಹಿತಿ ಒದಗಿಸಿದ್ದಾರೆ ಅವಸರ ದಲ್ಲಿದ್ದ ಅವರಿಂದ ಇಷ್ಟು ಲಭ್ಯವಾದುದರಿಂದ, ಜೊತೆಗೆ ಹಿರಿಯರಾದ ಎಸ್. ಎಂ. ಲಿಂಗಪ್ಪನವರು ತಮ್ಮ ಅನಾರೋಗ್ಯದ ಬಳಲಿಕೆಯ ನಡುವೆಯೂ ಒದಗಿಸಿದ ಮೌಖಿಕ ವಿವರಗಳಿಂದ ಅಲ್ಲದೆ ಎಚ್. ಜವರೇಗೌಡರ ಬಗೆಗೆ ಶ್ರೀಮಾನ್ ಡಿ. ಎಂ. ಮಾಪಪ್ಪ ನವರು ಸಂಗ್ರಹಿಸಿ ಕೊಟ್ಟ ವರದಿಯನ್ನು ಗಮನಿಸಿದ್ದರಿಂದ, ಇಷ್ಟು ಬರೆಯುವುದು ಪ್ರಸ್ತುತ ಲೇಖನಿಗೆ ಸಾಧ್ಯವಾಯಿತು.

ಈ ತಾಲ್ಲೋಕಿನ ಸ್ವಾತಂತ್ರ್ಯ ಹೋರಾಟದ ಸಂಪೂರ್ಣಚಿತ್ರ ಮುಂದೆ ಶ್ರೀ ಹ. ಕ. ರಾಜೇಗೌಡರು ಶಿವಪುರದ ಸತ್ಯಾಗ್ರಹವನ್ನೂ ಒಳಗೊಂಡಂತೆ ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಯ ಕೊಡಿಗೆಯನ್ನು ಕುರಿತಾದ ಯೋಜನೆಯನ್ನು ಕೈಗೆತ್ತುಕೊಂಡ ಸಂದರ್ಭಕ್ಕೆ ನಮಗೆಲ್ಲ ಲಭಿಸುತ್ತದೆ. ಈಗ ಪ್ರಸ್ತಾಪಿಸದೆ, ಮಾಹಿತಿಯ ಕೊರತೆಯಿಂದ ಬಿಟ್ಟುಹೋಗಿರಬಹುದಾದ ಎಲ್ಲ ವಿವರಗಳೂ ಆಗ ನಮ್ಮವಾಗುತ್ತವೆ ಎಂದು ಆಶಿಸೋಣ. ಪ್ರಸ್ತುತ ಲೇಖನ ಈ ದಿಕ್ಕಿನಲ್ಲಿ ಚಳುವಳಿಯ ಸ್ವರೂಪವನ್ನು ಗೆರೆ ಎಳೆದು ತೋರಿಸುವ ನಕ್ಷೆ ಮಾತ್ರ ; ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟದ ಪರಿಪೂರ್ಣ ಚಿತ್ರಣವೇನಲ್ಲ.

ಸೋಮಶೇಖರಗೌಡ

ಪಾಂಡವಪುರ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ

'ಸ್ವಾತಂತ್ರ್ಯ ಹೋರಾಟ' ಆ ಶಬ್ದವನ್ನು ಕೇಳಿದ ಹಿಂದಿನ ತಲೆಮಾರಿನ ಹಿರಿಯರಿಗೆ ರೋಮಾಂಚನ. ಕೆಲವರು ಭಾವುಕರಾಗುತ್ತಾರೆ. ಸಹಸ್ರ ಮಂದಿಯ ತ್ಯಾಗ ಬಲಿದಾನಗಳಿಂದ ಪಡೆದ ಸ್ವತಂತ್ರ ಭಾರತ ಇಂದು ತಲುಪಿರುವ ದುಃಸ್ಥಿತಿಯನ್ನು ಕಂಡು ಕೆಲವರಿಗೆ ನೋವು, ನಿರಾಶೆ ಸಂಕಟ, ಕೆಲವರಿಗೆ ರೋಷ.

ಅಂದಿನ ಆಂದೋಲನದಲ್ಲಿ ಭಾಗವಹಿಸಿದ ಹಿರಿಯ ತಲೆಗಳನ್ನು ತಮ್ಮ ಅನುಭವಗಳ ಬಗೆಗೆ ಕೆದಕಿ ಕೇಳಿದಾಗ ನೆನಪಿನ ರೀಲುಗಳು ಒಂದೊಂದಾಗಿ ಬಿಚ್ಚಿಕೊಳ್ಳುತ್ತವೆ. ತಲೆ ಕೆರೆದುಕೊಂಡು ಸ್ಮರಿಸಿಕೊಳ್ಳಲು ಪ್ರಯತ್ನಿಸುತ್ತಾರೆ.

ಸ್ವಾತಂತ್ರ್ಯಾಂದೋಲನದ ನೀಲಾಕಾಶದಲ್ಲಿ ಉಜ್ವಲವಾಗಿ ಮಿನುಗಿದ ಬೆಳ್ಳಿ ಚುಕ್ಕಿ ಮಹಾತ್ಮಾಗಾಂಧಿಯ ಹಿಂದೆ ಅವೊತ್ತು ಊರೆನ್ನದೆ, ಕೇರಿ ಎನ್ನದೆ, ಕಾಡು ನಾಡು, ಬಡವ ಬಲ್ಲಿದ, ಹೆಣ್ಣು ಗಂಡು ಹೀಗೆ ಇಡೀ ಭಾರತ ಒಂದಾಗಿ ಬ್ರಿಟಿಷರ, ಕ್ರೂರ ಅಟ್ಟಹಾಸದೆದುರು ಬಂಡೆಗಲ್ಲಾಗಿ ನಿಂತು. ಲಾಟಿಏಟು, ಬೂಟಿನ ಒದೆತ, ಉಪವಾಸ, ತುರಂಗವಾಸಗಳನ್ನು ಅನುಭವಿಸಿ, ಗುಂಡಿನ ಸುರಿಮಳೆಗೆ, ಜಗ್ಗದೆ ಕುಗ್ಗದೆ ಕೇವಲ ಅಹಿಂಸೆಯಿಂದ ನಡೆದ ಸ್ವಾತಂತ್ರ್ಯ ಹೋರಾಟ ಇಂಡಿಯಾದ ಇತಿಹಾಸದಲ್ಲಿ ಒಂದು ದೊಡ್ಡ ಸಾಧನೆ. ಅದೊಂದು ಚಿರಂತನಸ್ಮೃತಿ.

ದೇಶಾದ್ಯಂತ ನಡೆದ ಈ ಬಗೆಯ ಹೋರಾಟದಲ್ಲಿ ಕರ್ನಾಟಕ ಕೂಡ ಮಹತ್ತರ ಪಾತ್ರವನ್ನು ವಹಿಸಿತು. ಈಸೂರಿನ ಘಟನೆ, ಶಿವಪುರ ಧ್ವಜಸತ್ಯಾಗ್ರಹ ಇಂಥವನ್ನು ಇಲ್ಲಿ ಸ್ಮರಿಸಬಹುದು. ಅಸಹಕಾರ ಆಂದೋಲನದಲ್ಲಿ ಕರ್ನಾಟಕದ ಲಕ್ಷಾಂತರ ಮಂದಿ ಭಾಗವಹಿಸಿ ಬಿಳಿಯರ ವಿರುದ್ಧ ಪ್ರಬಲವಾಗಿ ಅಹಿಂಸಾತ್ಮಕ ಹೋರಾಟವನ್ನು ಮಾಡಿದರು. ಈ ಬಗೆಯ ಹೋರಾಟಕ್ಕೆ ಜನಗಳನ್ನು ಪ್ರೇರೇಪಿಸಿ, ಅವರನ್ನು ಅಣಿಗೊಳಿಸಲು ಅಲ್ಲಲ್ಲೇ ಕೆಲವು ಮುಖಂಡರುಗಳು ಮುಂದಾಗಿ ಹಳ್ಳಿ ಹಳ್ಳಿಗಳಿಗೆ ಭೇಟಿಕೊಟ್ಟು ಗುಲಾಮಗಿರಿಯ ವಿರುದ್ಧ ಜನರನ್ನು ಎತ್ತಿಕಟ್ಟಿ, ಚುರುಕುಗೊಳಿಸುವ ಕೆಲಸದಲ್ಲಿ ತೊಡಗಿದ್ದರು.

ಮಂಡ್ಯಜಿಲ್ಲೆಯಲ್ಲಿ ಇಂತಹ ಮುಖಂಡತ್ವವನ್ನು ವಹಿಸಿದ್ದವರು ಎಚ್. ಸಿ. ದಾಸಪ್ಪ, ಸಾಹುಕಾರ್‌ಚನ್ನಯ್ಯ, ಎಚ್. ಕೆ. ವೀರಣ್ಣಗೌಡ, ಎ. ಜಿ. ಬಂದೀಗೌಡ

ಟಿ. ಮರಿಯಪ್ಪ, ಕರಡಹಳ್ಳಿ ಕೃಷ್ಣಪ್ಪಗೌಡ ಮುಂತಾದವರು. ಈ ಮುಖಂಡರುಗಳು ಊರೂರು ಸುತ್ತಿ, ಮುಗ್ಧ ಗ್ರಾಮೀಣ ವಾಸಿಗಳಿಗೆ ಸ್ವಾತಂತ್ರ್ಯದ ಮಹತ್ವದ ಅರಿವು ಮಾಡಿಕೊಟ್ಟು ಆಂದೋಲನದಲ್ಲಿ ಭಾಗವಹಿಸುವಂತೆ ಉದ್ದೀಪಿಸುತ್ತಿದ್ದರು.

ಕ್ಯಾತನಹಳ್ಳಿ ಪಾಂಡವಪುರ ತಾಲ್ಲೂಕಿನಲ್ಲಿಯೇ ದೊಡ್ಡ ಊರಾಗಿದ್ದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಕೆಲವು ಮುಖಂಡರುಗಳು ದೊರಕುವ ಸಂಭವವಿದ್ದುದರಿಂದ ಮೇಲೆ ತಿಳಿಸಿದ ಮಹನೀಯರು ಕ್ಯಾತನಹಳ್ಳಿಗೆ ಭೇಟಿ ಕೊಟ್ಟರು. ಚೌಕದ ಬೀದಿಯಲ್ಲಿ ಬಹಿರಂಗ ಸಭೆ. ಮುಖಂಡರುಗಳು ಬ್ರಿಟಿಷರ ದೌರ್ಜನ್ಯ ದಬ್ಬಾಳಿಕೆಗಳನ್ನು ಕೇಳುಗರಲ್ಲಿ ದೇಶಾಭಿಮಾನ, ಆತ್ಮಾಭಿಮಾನ ಮೂಡುವಂತೆ ಬಣ್ಣಿಸಿದರು. ಬ್ರಿಟಿಷ್ ಗುಲಾಮತನದ ವಿರುದ್ಧ ಹೋರಾಡಲು ಇಡೀ ನಾಡಿಗೆ ನಾಡೇ ಎದ್ದು ನಿಲ್ಲಬೇಕಾಗುತ್ತದೆ. ನಿಮ್ಮ ಗ್ರಾಮದಿಂದಲೂ ಕೆಲವು ಮುಖಂಡರು ಇಂಥ ಪವಿತ್ರ ಕಾರ್ಯಕ್ಕೆ ಮುಂದೆ ಬರಬೇಕು ಎಂದು ಕೊಟ್ಟ ಆಹ್ವಾನಕ್ಕೆ ಆ ಸಭೆಯಲ್ಲಿ ಹಲವಾರು ಮಂದಿ ಸ್ವಯಂ ಸ್ಫೂರ್ತಿಯಿಂದ ಸ್ವಾತಂತ್ರ್ಯಾಂದೋಲನದಲ್ಲಿ ದುಡಿಯಲು ಮುಂದಾದರು. ಅವರುಗಳಲ್ಲಿ ಶ್ರೀ ಕಪನೀಗೌಡರು, ಮೇಸ್ತ್ರಿ ನಂಜುಂಡೇಗೌಡರು, ಹುಲಿಗೌಡರು, ಲಿಂಗೇಗೌಡರು, ವೀರೇಗೌಡರು, ಕೆ. ಜಿ. ತಿಮ್ಮೇಗೌಡರು, ಶಿವನಂಜೇಗೌಡರು ಮುಖ್ಯರು. ಎಚ್. ಕೆ. ವೀರಣ್ಣಗೌಡರು ಅವರೆಲ್ಲರನ್ನೂ ನಾಲ್ಕಾಣೆ ಮೆಂಬರ್ ಮಾಡಿದರು, ಎಲ್ಲರ ತಲೆ ಮೇಲೆ ಗಾಂಧಿಟೋಪಿ ರಾರಾಜಿಸುತ್ತಿದ್ದವು. ಪಾಂಡವಪುರ ತಾಲ್ಲೂಕಿನಲ್ಲಿ ಹೀಗೆ ಸ್ವಾತಂತ್ರ್ಯ ಸಮರಕ್ಕೆ ನಾಂದಿಯಾಯಿತು.

1939ರಲ್ಲಿ ಮೊದಲಬಾರಿಗೆ ಸತ್ಯಾಗ್ರಹದಲ್ಲಿ ಸುಮಾರು ಮುವ್ವತ್ತು ನಲ್ವತ್ತು ಮಂದಿ ಸತ್ಯಾಗ್ರಹಿಗಳು ಭಾಗವಹಿಸಿದ್ದರು. ಅವರಲ್ಲಿ ಆರು ಜನರನ್ನು ಮಾತ್ರ ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರು. ಮೊದಲಿಗೆ ಮೈಸೂರಿನಲ್ಲಿ ನಂತರ ಬೆಂಗಳೂರಿನ ಕಾರಾಗೃಹದಲ್ಲಿ ಕೂಡಿಟ್ಟರು. ಒಟ್ಟು ಐದು ತಿಂಗಳ ಸೆರೆವಾಸ. ಇದರಿಂದ ಸತ್ಯಾಗ್ರಹಿಗಳೇನೂ ವಿಚಲಿತರಾಗಲಿಲ್ಲ : ಭಯದಿಂದ ಹಿಮ್ಮೆಟ್ಟಲಿಲ್ಲ, ಬದಲಾಗಿ ಮತ್ತಷ್ಟು ರೊಚ್ಚು, ರೋಷ ಹೆಚ್ಚಾದುವು, ಹಿಂದಿಗಿಂತಲೂ ಹೆಚ್ಚಾಗಿ ಪ್ರಚಾರ, ಪ್ರತಿಭಟನೆಯನ್ನು ಶುರುಮಾಡಿದರು.

1939 ರಲ್ಲಿ ಎರಡನೆಯ ಬಾರಿಗೆ ಸಾಹುಕಾರ್ ಚನ್ನಯ್ಯ ಮುಂತಾದ ಮುಖಂಡರುಗಳ ನೇತೃತ್ವದಲ್ಲಿ ಕ್ಯಾತನಹಳ್ಳಿ ಸಭೆ. ಅಸಹಕಾರ ಚಳುವಳಿಯನ್ನು ಕುರಿತಂತೆ ಜನರಿಗೆ ಮನವರಿಕೆ ಮಾಡಿಕೊಟ್ಟು, ಅಹಿಂಸಾತ್ಮಕವಾಗಿ ಹೋರಾಡಲು ಪ್ರೇರೇಪಿಸಿತು. ಊರಿನ ತುಂಬ ದೊಡ್ಡ ಮೆರವಣಿಗೆಯನ್ನು ತೆಗೆಯಲಾಯಿತು, ನಂತರ ಐದು ಜನ ಮುಖಂಡರನ್ನು ತಮ್ಮೊಡನೆ ಮೈಸೂರಿಗೆ ಕರೆದೊಯ್ದರು. ಟೌನ್‌ಹಾಲ್‌ನಲ್ಲಿ ಭಾರೀ ಬಹಿರಂಗ ಸಭೆ ನಡೆಯುತ್ತಿರುವ ಕಾಲಕ್ಕೆ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಲಾಗಿ ಹಲವರ ದಸ್ತಗಿರಿ ನಡೆಯಿತು. ಕ್ಯಾತನಹಳ್ಳಿಯಿಂದ ಹೋಗಿದ್ದ

ಐದು ಜನಗಳೂ ಅದರಲ್ಲಿ ಸೇರಿದ್ದರು. ಆರು ತಿಂಗಳ ಸಜ ಜೊತೆಗೆ ಐದುನೂರು ರೂಪಾಯಿಗಳು ಜುಲ್ಮಾನೆ. ಜುಲ್ಮಾನೆ ಕೊಡದಿದ್ದುದಕ್ಕೆ ಪುನಃ ಒಂದು ತಿಂಗಳ ಸಜ. 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪಾಂಡವಪುರ ತಾಲ್ಲೂಕಿನಿಂದ ಐವತ್ತಕ್ಕೂ ಹೆಚ್ಚು ಜನ ಭಾಗವಹಿಸಿ. ಯಶಸ್ವಿಯಾಗಿ ಹೋರಾಟ ನಡೆಸಿದರು. ತಮ್ಮೊಡನೆ ಇನ್ನೂ ನೂರಾರು ಸಂಖ್ಯೆಯಲ್ಲಿ ಹೋರಾಟಗಾರರು ಸೇರಿಕೊಳ್ಳುವಂತೆ ಪ್ರೇರೇಪಿಸಿದರು.

1945 ಸೆಪ್ಟಂಬರ್ ತಿಂಗಳಲ್ಲಿ ಕ್ಯಾತನಹಳ್ಳಿಯಲ್ಲಿ ಎಂ. ಸಿ. ಸಿ. (ಮೈಸೂರು ಕಾಂಗ್ರೆಸ್ ಕಮಿಟಿ) ಸಭೆ. ತುರುವೇಕೆರೆಯ ಸುಪ್ರಸಿದ್ಧ ಅಡ್ವೋಕೇಟ್ ಸುಬ್ರಹ್ಮಣ್ಯಂ ಅಧ್ಯಕ್ಷತೆ, ಎಚ್. ಸಿ. ದಾಸಪ್ಪನವರು, ಎ. ಜಿ. ಬಂದೀಗೌಡರು, ಸಾಹುಕಾರ್ ಚೆನ್ನಯ್ಯನವರು. ವೈ. ಸಿ. ಮರಿಯಪ್ಪನವರು, ಎಂ ಆರ್. ಎನ್ ಶಾಸ್ತ್ರಿ ಮುಂತಾದ ಮುಖಂಡರೆಲ್ಲ ಅವೊತ್ತು ಅಲ್ಲಿ ಸೇರಿದ್ದರು. ಭಾರೀಜಪ್ಪರ ಸಾವಿರಾರು ಮಂದಿ ಸ್ವಾತಂತ್ರ್ಯ ಹೋರಾಟಗಾರರ ಸಮಾವೇಶ ಹರವು, ಎಣ್ಣೆಹೊಳೆಕೊಪ್ಪಲು, ಚಲುವೇ ಅರಸಿನಕೊಪ್ಪಲು, ಶಂಭೂನಹಳ್ಳಿ. ಲಕ್ಷ್ಮೀಸಾಗರ, ಹಿರಿಮರಳಿ, ಮಹದೇಶ್ವರಪುರು ಬೆಟ್ಟಳ್ಳಿ, ಮುಂತಾದ ಸುತ್ತ ಮುತ್ತಿನ ಹಳ್ಳಿಗಳಿಂದೆಲ್ಲ ಜನ ಜಮಾಯಿಸಿದ್ದರು ಐದು ಸಾವಿರಕ್ಕೂ ಮಿಕ್ಕಿತ್ತು ಸಭೆ. ಧ್ವಜಾರೋಹಣದ ನಂತರ ಜವಾಬ್ದಾರಿ ಸರ್ಕಾರದ ಸಲುವಾಗಿ ಅಮೋಘವಾದ ಭಾಷಣ, ಹಲವಾರು ಮುಖಂಡರು ಅಂದಿನ ಸಭೆಯಲ್ಲಿ ಮಾತನಾಡಿದರು. ಅರವತ್ತರಿಂದ ಎಪ್ಪತ್ತರವರೆಗೆ ಸತ್ಯಾಗ್ರಹಿಗಳನ್ನು ದಸ್ತಗಿರಿ ಮಾಡಿದರು. ಸಭೆ ಒಟ್ಟು ಮೂರುದಿನ ನಡೆಯಿತು. ಸಭೆಗೆ ಮುಂಚೆ ಊರಿನ ತುಂಬ ಮುಖಂಡರ ಮೆರವಣಿಗೆ.

'ಮಾಡು ಇಲ್ಲವೆ ಮಡಿ' ಘೋಷಣೆಯೊಂದಿಗೆ ಸ್ವಾತಂತ್ರ್ಯ ಹೋರಾಟಗಾರರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತಾಲ್ಲೂಕು ಕಛೇರಿ ಮುಂದೆ ಪಿಕೆಟಿಂಗ್‌ನಲ್ಲಿ ತೊಡಗಿದರು. ಅವೊತ್ತು ತಾಲ್ಲೂಕು ಕಛೇರಿಯ ಮುಂದೆ ಜನವೋ ಜನ. ಅಹಿಂಸಾತ್ಮಕವಾಗಿ, ಶಾಂತರೀತಿಯಿಂದ ನಡೆಯುತ್ತಿದ್ದ ಚಳುವಳಿಗಾರರತ್ತ ಆಗ ಇನ್‌ಸ್ಪೆಕ್ಟರ್ ಆಗಿದ್ದ ಮುಸ್ಲಿಂ ವ್ಯಕ್ತಿ ಮುಸ್ತಫಾ ತಾನೇ ಕಲ್ಲುಬೀರಿ, ಗಲಾಟೆಯೆಬ್ಬಿಸಿ, ಗುಂಡು ಹಾರಿಸಿದ. ಗೋಲಿಬಾರ್‌ನಲ್ಲಿ ಮೂವರು ಮೃತಪಟ್ಟರು ಅನೇಕರಿಗೆ ಮರಣಾಂತಿಕ ಘಾಯ, ಲಾಠಿಏಟು ಹಲವರ ದಸ್ತಗಿರಿ

ದಸ್ತಗಿರಿ ಮಾಡಲ್ಪಟ್ಟವರು ಸತ್ಯಾಗ್ರಹಿಗಳಾದರೂ ಕೂಡ ಜೈಲಧಿಕಾರಿಗಳು ಅವರನ್ನು ಖೂನಿ, ದರೋಡೆ ಮಾಡಿದ ಕಳ್ಳರಂತೆಯೇ ನಡೆಸಿಕೊಳ್ಳುತ್ತಿದ್ದರು. ಸತ್ಯಾಗ್ರಹಿಗಳ ಬಗ್ಗೆ ವಿಶೇಷ ಮುತುವರ್ಜಿಯನ್ನೇನೂ ತೋರಿಸುತ್ತಿರಲಿಲ್ಲ. ಮಣ್ಣಿನ ಮುಚ್ಚಳದ ಊಟದ ತಟ್ಟೆ, ತೂಕದ ಮುದ್ದೆ. ಅರುಚಿಯಾದ ಸಾರು, ರಾತ್ರಿ ಹೊದೆಯಲು ಮುಳ್ಳಿನಂತಹ ಒರಟು ಕರಿಯ ಕಂಬಳಿ. ಗುಂಡಿಯಲ್ಲಿಟ್ಟ ಮಡಕೆಯಲ್ಲಿ ಮಲವಿಸರ್ಜನೆ ತಮ್ಮ ಮಲವನ್ನು ತಾವೇ ಎತ್ತಿ ಹೊರಹಾಕಬೇಕು. ಈ

ಎಲ್ಲ ದುರವಸ್ಥೆಗಳನ್ನೂ ಸಹಿಸಿದ ಸತ್ಯಾಗ್ರಹಿಗಳು ಪ್ರತಿಭಟಿಸಿ, ನಿರಶನವನ್ನು ಕೈಗೊಂಡರು. ಆಗ ಮೈಸೂರಿನಲ್ಲಿ ದಿವಾನರಾಗಿದ್ದವರು ಮಿರ್ಜಾ ಸಾಹೇಬರು.

ಜೈಲಿನಲ್ಲಿ ಸತ್ಯಾಗ್ರಹಿಗಳು ಅನುಭವಿಸುತ್ತಿದ್ದ ತೊಂದರೆಗಳನ್ನು ಮನಗಂಡು ಎಚ್. ಸಿ. ದಾಸಪ್ಪನವರು ವಾರ್ಧಾಕ್ಕೆ ಹೋಗಿ, ಮಹಾತ್ಮ ಗಾಂಧಿಯವರನ್ನು ಭೇಟಿಯಾಗಿ ಜೈಲಿನ ಅಮಾನುಷಕತೆಯ ಬಗೆಗೆ ದೂರು ಹೇಳಿದರು. ಆಗ ಗಾಂಧಿಜಿಯವರು ತಮ್ಮ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿಯವರನ್ನು ತಮ್ಮ ಪರವಾಗಿ ಮೈಸೂರಿಗೆ ಕಳುಹಿಸಿದರು. ಜೈಲಿನಲ್ಲಿ ಸತ್ಯಾಗ್ರಹಿಗಳು ಅನುಭವಿಸುತ್ತಿದ್ದ ತೊಂದರೆಗಳನ್ನು ಕಣ್ಣಾರೆ ಕಂಡ ದೇಸಾಯಿಯವರು ಮಿರ್ಜಾಸಾಹೇಬರನ್ನು ಸಂಪರ್ಕಿಸಿ ಸತ್ಯಾಗ್ರಹಿಗಳನ್ನು ಗೌರವಯುತವಾಗಿ ನಡೆಸಿಕೊಳ್ಳುವಂತೆ ಹೇಳಿದರು. ಅವರಿಗೆ ಸರಿಯಾದ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ಆಗ್ರಹ ಪಡಿಸಿದರು. ಪರಿಣಾಮವಾಗಿ ಮಣ್ಣಿನ ಮುಚ್ಚಳದ ಬದಲು ಸ್ಟೀಲಿನ ತಟ್ಟೆ, ಸರಿಯು ಹರಕು ಕಂಬಳಿಗೆ ಬದಲಾಗಿ ರಗ್ಗುಗಳು, ಗೊಡ್ಡು ಸಾರಿನ ಬದಲು ತರಕಾರಿ ಹಾಕಿದ ನಾಲಗೆಗೆ ರುಚಿ ಹತ್ತುವ ಸಾರು ಬಂದವು.

ಇದೇ ಸಂದರ್ಭದಲ್ಲಿ ಮೈಸೂರಿನ ಟೌನ್‌ಹಾಲ್ ಮೈದಾನದಲ್ಲಿ ಭಾರೀ ಬಹಿರಂಗ ಸಭೆ ಏರ್ಪಟ್ಟಿತ್ತು, ಸಭೆಯನ್ನು ಉದ್ದೇಶಿಸಿ ಮಹದೇವ ದೇಸಾಯಿಯವರು ಅಮೋಘವಾಗಿ, ಕೇಳುಗರ ಮೈನವಿರೇಳುವಂತೆ ಮಾತನಾಡಿ ಸಭಿಕರಲ್ಲಿ ಸ್ವಾತಂತ್ರ್ಯದ ಕಿಚ್ಚು ಹಚ್ಚಿದರು.

ಮುಂದೆ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾದಾಗೊಮ್ಮೆ ಕ್ಯಾತನಹಳ್ಳಿಗೆ ಭೇಟಿ ನೀಡಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಮುಂದಾಳತ್ವ ವಹಿಸಿದ್ದ ಮುಖಂಡರೆಲ್ಲ ಅಲ್ಲಿ ಸಮಾವೇಶಗೊಂಡಿದ್ದರು. ಊರಿನ ಪ್ರಮುಖ ಬೀದಿಗಳಲ್ಲಿ ಅಧ್ಯಕ್ಷರ ಮೆರವಣಿಗೆಯ ನಂತರ ಭಾಷಣದ ಕಾರ್ಯಕ್ರಮ. ಅಧಿವೇಶನ ಮುಗಿದ ಮೇಲೆ ಪಾನನಿರೋಧದ ಕಾರ್ಯಕ್ರಮದನ್ವಯ ಈಚಲು ಮರಗಳನ್ನು ಕಡಿದು ಉರುಳಿಸಲಾಯಿತು.

'ಇಂಗ್ಲೀಷರೆ, ದೇಶಬಿಟ್ಟು ಹೋಗಿ,' ಎನ್ನುವ ಒಕ್ಕೊರಲಿನ ಕೂಗು ಎಲ್ಲೆಲ್ಲೂ ಮಾರ್ದನಿಸುತ್ತಿತ್ತು. ಕಾಂಗ್ರೆಸ್ಸಿಗೆ ಪ್ರತಿ ಮನೆಯಲ್ಲೂ ಬೆಂಬಲ. ಪೋಲೀಸರು ಕೆಲವರನ್ನು ಬಂಧಿಸಿದರು. ಮುಖಂಡರನ್ನು ದೂರದ ಕಾಡಿಗೆ ಬಿಟ್ಟರು. ಮೈಸೂರು ಬೆಂಗಳೂರು ಕಾರಾಗೃಹಗಳಲ್ಲಿ ಒಂದು [illegible] ಎರಡು ತಿಂಗಳು ಸೆರೆಯಲ್ಲಿಟ್ಟರು.

ಸೆರೆಮನೆಯಿಂದ ಬಿಡುಗಡೆಯಾದ ಮೇಲೆ ತಾಲ್ಲೂಕು ಆಫೀಸನ್ನೂ ವಶಪಡಿಸಿಕೊಳ್ಳಬೇಕೆಂದು ಕಾಂಗ್ರೆಸ್ ಕಾರ್ಯಕರ್ತರು ತೀರ್ಮಾನಿಸಿ ಪಾಂಡವಪುರ ತಾಲ್ಲೂಕು ಕಛೇರಿಯ ಒಳ ಸಂಘಟಿತರಾದರು. 'ಭಾರತ ಮಾತಾಕಿ ಜೈ' ಎಂದು ಎಲ್ಲರೂ ಘೋಷಣೆಯನ್ನು ಕೂಗುತ್ತಾ ಒಳ ನುಗ್ಗಿದರು. ಆಗ ತಹಸೀಲ್ದಾರರಾಗಿದ್ದವರು ಶ್ರೀ ಮಹದೇವಪ್ಪ ಎಂಬುವರು. ಅವರನ್ನು ಕುರ್ಚಿಯಿಂದ ಎಳೆದು ಹಾಕಿದ ಸತ್ಯಾಗ್ರಹಿ

ಯೊಬ್ಬರು ತಹಶೀಲ್ದಾರರ ಕುರ್ಚಿಯಲ್ಲಿ ಕೂತರು ಚಿಣ್ಯದ ಸಬ್‌ಇನ್‌ಸ್ಪೆಕ್ಟರ್ ಕೃಷ್ಣಪ್ಪ ಸತ್ಯಾಗ್ರಹಿಯ ಎದೆಗೆ ಪಿಸ್ತೂಲು ತೋರಿಸಿದ. ಸತ್ಯಾಗ್ರಹಿ ಅಂಜದೆ ಆ ಪಿಸ್ತೂಲನ್ನು ಧೈರ್ಯದಿಂದ ಕಿತ್ತು ದೂರ ಬಿಸಾಡಿದ. ನಂತರ ಸತ್ಯಾಗ್ರಹಿಗಳ ದಸ್ತಗಿರಿಯಾಯಿತು. ಜೈಲಿಗೆ ತಂದು ತುಂಬಿದರು. ಜೈಲು ಪೂರ್ತಿ ಭರ್ತಿಯಾಯಿತು.

1947ರಲ್ಲಿ ಸತ್ಯಾಗ್ರಹ ಹಿಂದಿಂದಿಗಿಂತಲೂ ಉಗ್ರವಾಗಿ ನಡೆಯಿತು. ವಿದ್ಯುಚ್ಛಕ್ತಿ ತಂತಿಗಳನ್ನು ಕೀಳುವುದು, ಹೆಂಡದ ಅಂಗಡಿಗಳಿಗೆ ಬೆಂಕಿಯಿಡುವುದು ಅವ್ಯಾಹತವಾಗಿ ನಡೆಯುತ್ತಿದ್ದುವು. ಕೆ. ಸಿ. ರೆಡ್ಡಿಯವರು ಆಗ ಕಾಂಗ್ರೆಸ್ ಅಧ್ಯಕ್ಷರು. ಜವಾಬ್ದಾರಿ ಸರ್ಕಾರದ ಸಲುವಾಗಿ ಜೈಲು ತುಂಬುವ ಚಳುವಳಿ ಒಂದು ತಿಂಗಳು ನಡೆಯಿತು. ಇಪ್ಪತ್ತು ಸಾವಿರ ಸತ್ಯಾಗ್ರಹಿಗಳು ಜೈಲು ತುಂಬಿದರು. ಪ್ರಚಂಡವಾದ ಚಳುವಳಿ ಎಲ್ಲೆಲ್ಲೂ ಉತ್ಸಾಹ. ಲಾಠಿಏಟು. ಫೈರಿಂಗ್. ಶಂಭೂನಹಳ್ಳಿಯ ಕೆ. ಕೆಂಪೇಗೌಡ ಎಂಬ ಸತ್ಯಾಗ್ರಹಿ ಸ್ಥಳದಲ್ಲೇ ಸತ್ತ. ವೈ. ಸಿ. ಮರಿಯಪ್ಪನವರ ಕಾಲಿಗೆ ಏಟು ಬಿದ್ದು ಮೂಳೆ ಮುರಿಯಿತು.

ಇಡೀ ಮಂಡ್ಯ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡವರಲ್ಲಿ ಪಾಂಡವಪುರ ತಾಲ್ಲೂಕಿನಲ್ಲಿರುವಷ್ಟು ಮಂದಿ ಬೇರಾವ ತಾಲೂಕಿನಲ್ಲಿಯೂ ಇಲ್ಲವೆನ್ನುತ್ತಾರೆ? ಅದರಲ್ಲೂ ಕ್ಯಾತನಹಳ್ಳಿಯದೇ ಸಿಂಹಪಾಲು ಎಂದು ಹೆಮ್ಮೆಯಿಂದ, ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಆಗ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿದ್ದ ಶ್ರೀ ಲಿಂಗೇಗೌಡರು.

ಹರವು-ತಿರುನಾರಾಯಣಯ್ಯಂಗಾರ್, ಲಕ್ಷ್ಮಿಸಾಗರ–ಶ್ರೀಕಂಠೇಗೌಡ ಚಲುವೇಗೌಡ, ಶಂಭೂನಹಳ್ಳಿ–ಲಕ್ಷ್ಮೇಗೌಡ, ಹಿರೀಮರಳಿ–ಈರೇಗೌಡ, ಸಣ್ಣಪ್ಪ, ಮಹದೇಶ್ವರಪುರ–ಕರೀಗೌಡ, ಚಿಕ್ಕಣ್ಣ,ಕ್ಯಾತನಹಳ್ಳಿ-ಗೋವಿಂದೇಗೌಡ, ಚಿಕ್ಕಲಿಂಗೇಗೌಡ, ಭದ್ರಣ್ಣ, ಪುಟ್ಟಸ್ವಾಮಿಗೌಡ, ಸಿದ್ದೇಗೌಡ, ನಂಜುಂಡೇಗೌಡ, ಯಾಲಕ್ಕಿಗೌಡ, ಬೋರೇಗೌಡ, ಕೆ. ಎಚ್. ನಂಜುಂಡೇಗೌಡ, ಎಂ. ಈರೇಗೌಡ, ಕೆ. ಎನ್, ನಂಜೇಗೌಡ ಚಲುವೇ ಅರಸಿನಕೊಪ್ಪಲು–ಸುಬ್ಬೇಗೌಡ, ಪಾಂಡವಪುರ–ಗೋವಿಂದಸ್ವಾಮಿ, ಶಾಸ್ತ್ರಿ, ಬಲ್ಲದ ಪುಟ್ಟಸ್ವಾಮಯ್ಯ, ಎಣ್ಣೆಹೊಳೆ ಕೊಪ್ಪಲು–ಅಪ್ಪೂಗೌಡ ಉ: ಕರೀಗೌಡ, ಗೋವಿಂದೇಗೌಡ. ತಿಮ್ಮೇಗೌಡ, ವೈಕುಂಠೇಗೌಡ, ಜವರೇಗೌಡ ಮುಂತಾಗಿ ಪಾಂಡವಪುರ ತಾಲ್ಲೂಕಿನಲ್ಲಿ ಸುತ್ತಮುತ್ತಲ ಹಳ್ಳಿಗಳಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರ ಪಟ್ಟಿಯನ್ನು ನೋಡಿದರೆ ಅವರ ಹೆಮ್ಮೆ ಒಣಹೆಮ್ಮೆಯಿಲ್ಲ, ಅಭಿಮಾನ ಸುಳ್ಳಲ್ಲ ಎನ್ನಿಸುತ್ತದೆ.

ಏನೇ ಇರಲಿ ಸ್ವಾತಂತ್ರ್ಯ ಹೋರಾಟಕ್ಕೆ ಪಾಂಡವಪುರ ತಾಲ್ಲೂಕು ತನ್ನ ಅಳಿಲುಸೇವೆ ಸಲ್ಲಿಸಿದ. ಇಲ್ಲಿನ ಜನ ಹೇಡಿಗಳಂತೆ ತಲೆಮರೆಸಿ ಕೂರಲಿಲ್ಲ. ಜೀವನದ

ಹಂಗು ತೊರೆದು, ಬ್ರಿಟಿಷ್ ಆಡಳಿತಾಧಿಕಾರಗಳ ವಿರುದ್ಧ ಸಡ್ಡು ಹೊಡೆದು ಪ್ರತಿಭಟಿಸಿದ್ದಾರೆ, ಸೆರೆಮನೆವಾಸ ಅನುಭವಿಸಿದ್ದಾರೆ. ಅಹಿಂಸಾತ್ಮಕವಾದ ರೀತಿಯಲ್ಲಿ ಗಾಂಧೀ ಮಾರ್ಗದಂತೆ ಚಳುವಳಿ ನಡೆಸಿದ್ದಾರೆ. ಅಂಥ ಸತ್ಯಾಗ್ರಹಿಗಳು ಈಗಲೂ ಕೆಲವರು ಬದುಕಿರುವುದು ನಾಡಿನ ಪುಣ್ಯ.

ಸದಾಶಿವ ಎಣ್ಣೆಹೊಳೆ

ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ

ನಮ್ಮ ದೇಶದ ಇತಿಹಾಸದಲ್ಲಿ ನಡೆದಿರುವ ಪ್ರಮುಖ ಘಟನೆಗಳಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟ ಅಗ್ರಸ್ಥಾನೀಯವಾದುದು. ಅದು ಜಗತ್ತಿನ ಇತಿಹಾಸದಲ್ಲಿಯೇ ವಿಶಿಷ್ಟವೂ, ವಿನೂತನವೂ, ಅಪೂರ್ವವೂ ಆದ ಚಳುವಳಿ. ಮದ್ದು ಗುಂಡುಗಳ ಸಿಡಿತವಿಲ್ಲದೆ, ಕತ್ತಿ ಗುರಾಣಿಗಳ ಝಣತ್ಕಾರವಿಲ್ಲದೆ ಸತ್ಯ ಅಹಿಂಸೆ ಮುಂತಾದ ಶಾಂತಿ ಮಂತ್ರಗಳ ಮಾಂತ್ರಿಕತೆಯ ಮೂಲಕ ನಡೆದ ಏಕಮಾತ್ರ ಚಳುವಳಿ. ಹಿಂಸಾತ್ಮಕವಾಗಿ ರಣರಂಗದಲ್ಲಿ ಹೋರಾಟ ನಡೆದಿದ್ದಲ್ಲಿ ಇದಕ್ಕೆ ವಿಶೇಷವಾದ ಸ್ಥಾನವೇನೂ ಇರದೆ ಜಗತ್ತಿನಲ್ಲಿ ನಡೆದ ಅಂತಹ ನೂರಾರು ಯುದ್ಧಗಳಲ್ಲಿ ಇದೂ ಒಂದಾಗಿರುತ್ತಿತ್ತು. ಇದಕ್ಕೆ ವಿಶೇಷವಾದ ಸ್ಥಾನವೇನೂ ದೊರಕುತ್ತಿರಲಿಲ್ಲ. ಈ ಚಳುವಳಿಯ ಉದ್ದೇಶವೂ ಸ್ವಾತಂತ್ರ್ಯಗಳಿಕೆಯೇ ಆದರೂ ಅನುಸರಿಸಿದ ಮಾರ್ಗದಿಂದಾಗಿ ಜಗತ್ತಿನ ಇತಿಹಾಸದಲ್ಲಿ ಹೊಸ ಮೈಲಿಗಲ್ಲಾಯಿತು. ಮಹಾತ್ಮ ಗಾಂಧಿಜೀಯವರ ಸರಳ ಸತ್ಯಮಾರ್ಗಗಳೇ ಇದಕ್ಕೆ ಕಾರಣ. ಗಾಂಧಿಜೀಯವರ ಸತ್ಯ, ಅಹಿಂಸೆಯ ಮಾರ್ಗಗಳಾಗಿ ಉಪವಾಸ, ಸತ್ಯಾಗ್ರಹ, ಅಸಹಕಾರ ಬ್ರಿಟೀಷರ ನಿರಂಕುಶ ಅಧಿಕಾರವನ್ನು ಅಲುಗಿಸುವಲ್ಲಿ ಸಫಲವಾದವು. ಬ್ರಿಟೀಷರ ದರ್ಪ, ದಮನ ನೀತಿ ಹಿಮವಾಗದಂತೆ, ಬದಲಾಗಿ ಅವರ ವೀರ ಅಭಿಮಾನ ವ್ಯಕ್ತಿತ್ವಗಳು ಪ್ರಭಾವಿತವಾಗುವಂತೆ ಮಾಡಿದ ಚಳುವಳಿ ಇದು. ತನ್ನ ಗುಣ ವೈಶಿಷ್ಟ್ಯಗಳಿಂದಾಗಿ ಈ ಚಳುವಳಿ ಭಾರತದ ಕೋಟಿ ಕೋಟಿ ಜನರು ಏಕಕಾಲದಲ್ಲಿ ಪಾಲ್ಗೊಳ್ಳುವಂತೆ ಮಾಡಿತು. ಕೇವಲ ಸೈನಿಕರ ಮಟ್ಟದಲ್ಲಿ ರಣರಂಗದಲ್ಲಿ ನಡೆಯಬಹುದಾಗಿದ್ದ ಹೋರಾಟ, ನಗರ, ಗ್ರಾಮಾಂತರ ಹಳ್ಳಿ ಹಳ್ಳಿಗಳಿಗೆ ವ್ಯಾಪಿಸಿಕೊಂಡಿತು. ಹಳ್ಳಿಯ ಜನರು ಸಂಘರ್ಷಣಾ ಮನೋಭಾವದಿಂದ ವಿವಿಧ ರೀತಿಗಳಲ್ಲಿ ಈ ಚಳುವಳಿಯಲ್ಲಿ ಪಾಲ್ಗೊಂಡರು. ಈ ದೃಷ್ಟಿಯಿಂದ ನೋಡಲು ಹಾಗ ಇದುವರೆಗೆ ನಡೆದಿರುವ ಇತಿಹಾಸದ ಹೋರಾಟಗಳಲ್ಲಿ ಇದು ಪ್ರಮುಖ ಘಟನೆಯಾಗಿದೆ ಎನ್ನಿಸುತ್ತದೆ. ಹಾಗಾಗಿ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ನಡೆದ ಚಳವಳಿಯ ಸ್ವರೂಪದ ಅಧ್ಯಯನ ಅತ್ಯಗತ್ಯವೆನಿಸುತ್ತದೆ. ಇದರಿಂದ ರಾಷ್ಟ್ರವ್ಯಾಪಿಯಾಗಿ ನಡೆದ ಪ್ರಮುಖ ಘಟನೆಗಳು ಗ್ರಾಮೀಣ ಜನರ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತಿದ್ದವು, ಅವರು ಹೇಗೆ ಪ್ರಯತ್ನಗಳಿಗೆ ಪ್ರತಿಕ್ರಿಯಿಸುತ್ತಿದ್ದರು

ಸ್ವತಃ ಅವರು ಚಳುವಳಿಯಲ್ಲಿ ಹೇಗೆ ಪಾಲ್ಗೊಂಡರು. ಎಂಬ ಕುತೂಹಲಕರ ಅಂಶ ಹೊರ ಹೊಮ್ಮುತ್ತದೆ. ಈ ಹಿನ್ನೆಲೆಯಲ್ಲಿ ಮಂಡ್ಯಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಸ್ವರೂಪವನ್ನು ಇಲ್ಲಿ ವಿವೇಚಿಸಲಾದೆ.

ಮಂಡ್ಯಜಿಲ್ಲೆಯಲ್ಲಿ ಶ್ರೀರಂಗಪಟ್ಟಣ ತಾಲ್ಲೂಕಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ ಅದು ತನ್ನದೇ ಆದ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ಬ್ರಿಟಿಷರ ಕುಟಿಲ ನೀತಿಯನ್ನು ಬಹಳ ಹಿಂದೆಯೆ ಅರಿತುಕೊಂಡು ಉಗ್ರವಾಗಿ ಪ್ರತಿಭಟಿಸಿದ ವೀರಗಲಿಗಳ ನಾಡು ಅದು. ಹೈದರ್ ಮತ್ತು ಟಿಪ್ಪು ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದದು ಚರಿತ್ರೆಯ ಅಧ್ಯಯನದಿಂದ ಸುವ್ಯಕ್ತವಾಗುತ್ತದೆ. ಇಂತಹ ವೀರ್ಯವತ್ತಾದ ಗಂಡುಮೆಟ್ಟಿನ ನೆಲದ ಜನ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ನಡೆಸಿದ ಸ್ವಾತಂತ್ರ್ಯ ಹೋರಾಟದಲ್ಲಿ ಹುರುಪು, ಹುಮ್ಮಸ್ಸುಗಳಿಂದ ಭಾಗವಹಿಸಿದ್ದು ಸಹಜವೇ ಆಗಿದೆ.

ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ನಡೆದ ಸ್ವಾತಂತ್ರ್ಯಚಳುವಳಿಗೆ ಪ್ರೇರಕವಾದ ಅಂಶಗಳ ಬಗ್ಗೆ ಚರ್ಚಿಸುವುದು ಸೂಕ್ತವೆನಿಸುತ್ತದೆ. ಈ ಕುರಿತ ವಿವೇಚನೆಯಲ್ಲಿ ಪ್ರಮುಖ ಅಂಶವೆಂದರೆ ಶ್ರೀರಂಗಪಟ್ಟಣ ತಾಲ್ಲೂಕು ಭೌಗೋಳಿಕವಾಗಿ ಆಯಕಟ್ಟಿನ ಸ್ಥಳದಲ್ಲಿರುವುದೂ ಒಂದು. ಇದು ಬೆಂಗಳೂರು ಮೈಸೂರು ನಗರಗಳ ಹೆದ್ದಾರಿಯ ಆಸುಪಾಸಿನಲ್ಲಿ ಹರಡಿಕೊಂಡಿದೆ. ಶ್ರೀರಂಗಪಟ್ಟಣನಗರ ಹೆದ್ದಾರಿಯಲ್ಲಿಯೇ ಇದೆ. ಈ ಕಾರಣದಿಂದಾಗಿ ಬೆಂಗಳೂರು ಮೈಸೂರಿನಲ್ಲಿ ನಡೆಯುತ್ತಿದ್ದ ಯಾವುದೇ ಘಟನೆಗಳು ಕೂಡಲೇ ಶ್ರೀರಂಗಪಟ್ಟಣ ಮತ್ತು ಹೆದ್ದಾರಿಯಲ್ಲಿನ ಇತರ ಊರುಗಳಿಗೆ ತಲುಪುತ್ತಿದ್ದವು. ಸ್ವಾತಂತ್ರ್ಯ ಚಳುವಳಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದ ರಾಷ್ಟ್ರೀಯ ನಾಯಕರುಗಳು ಯಾರೇ ಮೈಸೂರಿಗೆ ಬಂದರೂ ಅವರು ನಡುವೆ ಶ್ರೀರಂಗಪಟ್ಟಣದಲ್ಲಿ ನಿಂತು ಅಲ್ಲಿನ ಜನರನ್ನು ಉದ್ದೇಶಿಸಿ ಭಾಷಣಮಾಡಿಯೇ ಹೋಗುತ್ತಿದ್ದರು. ಶ್ರೀರಂಗಪಟ್ಟಣಕ್ಕೆ ಮೊದಲೇ ಬರುವ ಹಳ್ಳಿಗಳಲ್ಲಿಯೂ ಒಮ್ಮೊಮ್ಮೆ ನಿಂತು ಅಲ್ಲಿನ ಜನತೆಯೊಡನೆ ಮಾತುಕತೆ ನಡೆಸುತ್ತಿದ್ದರು. ಇದು ಇಲ್ಲಿನ ಜನತೆ ಸ್ವಾತಂತ್ರ್ಯಚಳುವಳಿಯಲ್ಲಿ ಹೆಚ್ಚಿನ ಮಟ್ಟದಲ್ಲಿ ತೊಡಗಿಸಿಕೊಳ್ಳಲು ಕಾರಣವಾದ ಅಂಶವಾಯಿತು.

1927ರಲ್ಲಿ ಗಾಂಧೀಜೀಯವರು ವಿಶ್ರಾಂತಿಗಾಗಿ ನಂದಿಬೆಟ್ಟದಲ್ಲಿ ತಂಗಿದ್ದರು. ಸುಮಾರು ನಾಲ್ಕು ತಿಂಗಳುಗಳ ಕಾಲ ಮೈಸೂರು ರಾಜ್ಯದಲ್ಲಿದ್ದ ಗಾಂಧೀಯವರು ಇಲ್ಲಿನ ವಿದ್ಯಮಾನಗಳನ್ನೆಲ್ಲಾ ವಿವರವಾಗಿ ಅರಿತು ಕೊಂಡರು. ಆಗ ಮೈಸೂರು ನೇರವಾಗಿ ಬ್ರಿಟಿಷರ ಆಡಳಿತಕ್ಕೊಳಗಾಗದೆ, ಬ್ರಿಟೀಷರ ಅಧೀನವಾಗಿದ್ದು ಮೈಸೂರು ದೊರೆಗಳ ಆಡಳಿತಕ್ಕೆ ಒಳಪಟ್ಟಿತ್ತು. ಗಾಂಧೀಜೀಯವರು ಮೈಸೂರು ಮಹಾರಾಜರ ಆಡಳಿತ ಇತರ ರಾಜ್ಯಗಳಿಗಿಂತ ಉತ್ತಮವಾಗಿದೆಯೆಂದು ನಂಬಿಕೊಂಡಿದ್ದರು. ಆದರೂ ಬ್ರಿಟೀಷರ ವಿರುದ್ಧದ ನೀತಿಯಲ್ಲಿ ಯಾವುದೇ ಬದಲಾವಣೆ ಇರಲಿಲ್ಲ. ಆದಕ್ಕಾಗಿ ಅವರು

ತೀವ್ರವಾದ ಪ್ರಚಾರ ನಡೆಸುತ್ತಿದ್ದರು. ಈ ಸಮಯದಲ್ಲಿ ಅವರು ಮೈಸೂರಿಗೆ ಭೇಟಿ ಕೊಟ್ಟರು. ಮೈಸೂರಿಗೆ ಬರುವ ಮಾರ್ಗದಲ್ಲಿ ಶ್ರೀರಂಗಪಟ್ಟಣದಲ್ಲಿನ ರಂಗನಾಥ ದೇವಾಲಯದ ಮುಂಭಾಗದಲ್ಲಿ ಭಾಷಣ ಮಾಡಿದರು. ಅಂದಿನ ಗಾಂಧೀಜಿಯವರ ಭಾಷಣಕ್ಕೆ ಸುತ್ತಮುತ್ತಲ ಹಳ್ಳಿಗಳಿಂದ ಅಪಾರ ಸ್ವಯಂಪ್ರೇರಿತರಾಗಿ ಸಾವಿರಾರು ಜನ ಭಾಗವಹಿಸಿದ್ದರು. ಮಹಿಳೆಯರ ಸಂಖ್ಯೆಯೂ ಕಡಿಮೆಯಿರಲಿಲ್ಲ. ಅಂದಿನ ಗಾಂಧೀಜಿಯವರ ಭಾಷಣ ಜನತೆಯ ಮೇಲೆ ತುಂಬಾ ಪರಿಣಾಮ ಬೀರಿತು. ಈ ಸಭೆಯಲ್ಲಿ ಗಾಂಧೀಜಿಯವರು ಬ್ರಿಟಿಷರ ದಬ್ಬಾಳಿಕೆಯನ್ನೂ, ಸ್ವಾತಂತ್ರ್ಯದ ಮಹತ್ವವನ್ನೂ ಪರಿಣಾಮಕಾರಿಯಾಗಿ ವಿವರಿಸಿದರು. ಈ ಸಭೆಯಲ್ಲಿ ಭಾಗವಹಿಸಿದ್ದ ಜನ ತಾವು ಪ್ರಚೋದನೆಗೊಂಡದ್ದಲ್ಲದೆ ತಮ್ಮತಮ್ಮ ಹಳ್ಳಿಗಳಲ್ಲಿ ಗಾಂಧೀಜಿಯವರ ವಿಚಾರಗಳನ್ನು ಇತರರಿಗೂ ಹೇಳಿದರು. ಸ್ವಾತಂತ್ರ್ಯದ ಹಂಬಲ ಈ ಮೂಲಕ ಹಳ್ಳಿಗಳಿಗೂ ತಲುಪಿತು. ಜನರು ಭಾವನಾತ್ಮಕವಾಗಿ ಈ ಚಳುವಳಿಯೊಡನೆ ಸ್ಪಂದಿಸತೊಡಗಿದರು. ಆ ನಂತರ ಗಾಂಧೀಜೀಯವರು ಮತ್ತೆ 1934ರಲ್ಲಿ ಮೈಸೂರಿಗೆ ಭೇಟಿಯಿತ್ತರು. ಅವರು ಈ ಸಾರಿ ಹರಿಜನೋದ್ಧಾರ ನಿಧಿಗಾಗಿ ಧನಸಂಗ್ರಹಿಸಲು ಬಂದಿದ್ದರು. ಮೈಸೂರಿನ ಮಹಾರಾಜರ ಅತಿಥಿಯಾಗಿ ಶೇಷಾದ್ರಿ ಭವನದಲ್ಲಿ ತಂಗಿದ್ದ ಅವರು 6-1-1934 ರಂದು ಬೆಳಿಗ್ಗೆ ಬೆಂಗಳೂರಿನ ಕಡೆ ಹೊರಟರು. ಅಷ್ಟಕ್ಕೂ ಮಾರ್ಗಮಧ್ಯದಲ್ಲಿ ಮುಖ್ಯವಾದ ಸ್ಥಳಗಳಲ್ಲಿ ನಿಂತು ಸಂಕ್ಷಿಪ್ತ ಉಪನ್ಯಾಸ ನೀಡಿ ಅಸ್ಪೃಶ್ಯತೆಯ ಭೂತವನ್ನು ತೊಲಗಿಸಲು ಕರೆಯಿತ್ತರು. ಈ ನಡುವೆ ಬ್ರಿಟಿಷರ ಆಳ್ವಿಕೆಯನ್ನು ನಿವಾರಿಸುವ ಅಗತ್ಯವನ್ನೂ ಹೇಳದಿರಲಿಲ್ಲ. ಅಂದು ಅವರು ಶ್ರೀರಂಗಪಟ್ಟಣದಲ್ಲಿ ಮಾಡಿದ ಭಾಷಣವು ಸ್ಮರಣೀಯವಾದುದಾಗಿತ್ತು. ನಮ್ಮ ಸಮಾಜದಲ್ಲಿಯೇ 'ಸ್ಪೃಶ್ಯ' 'ಅಸ್ಪೃಶ್ಯ' ನೆಂಬ ಭೇದ ಭಾವವನ್ನು ಹೊಂದಿದ್ದು ಬ್ರಿಟಿಷರೊಡನೆ ಹೋರಾಡಲು ಸಮಗ್ರ ಭಾರತೀಯರು ಒಂದಾಗುವುದು ಸಾಧ್ಯವಿಲ್ಲವೆಂಬ ಕಠೋರ ಸತ್ಯವನ್ನು ಅತ್ಯಂತ ಮಾರ್ಮಿಕವಾಗಿ ವಿವರಿಸಿದರು. ಈ ಭಾಷಣ ಶ್ರೀರಂಗಪಟ್ಟಣ ತಾಲ್ಲೂಕಿನ ಜನತೆಯ ಮೇಲೆ ಗಾಢವಾದ ಪರಿಣಾಮ ಬೀರಿತು.

1937ರಲ್ಲಿ ಶ್ರೀ ಜವಹರಲಾಲ್ ನೆಹರೂ ಅವರು ಮೈಸೂರಿಗೆ ನೀಡಿದ ಭೇಟಿಯೂ ಈ ದೃಷ್ಟಿಯಿಂದ ಗಮನಾರ್ಹವಾದುದು. 31-5-1937ರಂದು ಅವರು ಮೈಸೂರಿನಲ್ಲಿ ಭಾಷಣ ಮಾಡುತ್ತಾ ಆಡಿದ ಮಾತುಗಳು ಇಲ್ಲಿನ ಜನತೆಯ ಮೇಲೆ ತುಂಬಾ ಪರಿಣಾಮ ಬೀರಿದವು. ಅವರು ಹೀಗೆ ಹೇಳಿದರು "ಮೈಸೂರಿನವರೆ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ನೀವು ಎಷ್ಟಿಷ್ಟು ಪ್ರಯತ್ನಮಾಡಿಲ್ಲ ನೀವು ಪ್ರಯತ್ನ ಪಡದಿದ್ದರೆ ಹೊರಗಿನವರು ನಿಮ್ಮ ಸಹಾಯಕ್ಕೆ ಬರುವರೆ?" ಅವರು ಈ ಅವಧಿಯಲ್ಲಿ ಬೆಂಗಳೂರಿನಲ್ಲಿ ಮಾಡಿದ ಭಾಷಣವೂ ಅಷ್ಟೇ ಪ್ರಭಾವಶಾಲಿಯಾದುದು. "ನಮಗೆ ಸ್ವಾತಂತ್ರ್ಯವು ಇಂದೇ ಬರುವುದೋ? ನಾಳೆ ಬರುವುದೋ? ನಾನು ಹೇಳಲಾರೆ. ಆದರೆ

ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳುವ ಶಕ್ತಿಯು ನಮಗಿದೆ ಎಂಬುದು ನನಗೆ ಗೊತ್ತಿದೆ. ಲಾಯರುಗಳ ಯುಕ್ತಿವಾದದಿಂದ ಸ್ವರಾಜ್ಯವು ಬರುವುದಿಲ್ಲ, ಜಯ ಜಯಕಾರಗಳಿಂದ ಬರುವುದಿಲ್ಲ ; ಆದರೆ ಸ್ಥಿರವಾದ ಕಾರ್ಯಕ್ರಮಗಳಿಂದ ಬರುವುದು. ನಮಗೆ ಧೈರ್ಯ ಸಾಹಸಗಳು ಬೇಕು. ನೀವುಗಳು 'ಬುಲ್‌ಡಾಗಿ'ಗಿರುವ ಪಟ್ಟುದಲೆಯು ನಮಗೆ ಬೇಕು. ಶಕ್ತಿಯನ್ನು ಶೇಖರಿಸಿಕೊಳ್ಳಿ, ಮುಂದೆ ದೇಶಮಾತೆಯು ನಿಮ್ಮನ್ನು ಕರೆದರೆ ನೀವು ಸಿದ್ಧರಾಗಿರಬೇಕು. ಇದೇ ನನ್ನ ಪ್ರಾರ್ಥನೆ" ನೆಹರೂರವರ ಈ ಮಾತುಗಳು ಮೈಸೂರು ದೇಶದ ಜನತೆಯ ಮೇಲೆ ಎಂತೋ ಅಂತೆಯೆ ಶ್ರೀರಂಗಪಟ್ಟಣದ ಜನತೆಯ ಮೇಲೆಯೂ ಪ್ರಭಾವ ಬೀರಿದವು.

ಹೀಗೆ ಅನೇಕ ವ್ಯಕ್ತಿಗಳಿಂದ ಘಟನೆಗಳಿಂದ ಜಾಗೃತರಾದ ಜನತೆ ಹಲವಾರು ಚಳುವಳಿಗಳನ್ನು ನಡೆಸಿದರು, ಅವುಗಳೆಲ್ಲ ಸರ್ಕಾರದ ನಿರಂಕುಶ ಪ್ರಭುತ್ವವನ್ನು ವಿರೋಧಿಸುವವೇ ಆಗಿದ್ದವು. ಅರ್ಥಾತ್ ಜವಾಬ್ದಾರಿ ಸರ್ಕಾರಕ್ಕೆ ನಡೆಸಿದ ಹೋರಾಟಗಳಾಗಿದ್ದವು. ಮೈಸೂರು ಸಂಸ್ಥಾನದಲ್ಲಿ ನಡೆದ ಇಂಥ ಹಲವಾರು ಚಳುವಳಿಗಳಲ್ಲಿ ಶ್ರೀರಂಗಪಟ್ಟಣದ ಅನೇಕ ಜನ, ಹಲವಾರು ಹಳ್ಳಿಗಳು ಭಾಗವಹಿಸಿದ್ದವು 1930ನೇ ಜನವರಿ 26ರಂದು ನಡೆದ ಸಂಪೂರ್ಣ ಸ್ವರಾಜ್ಯ ದಿನಾಚರಣೆಯ ಪ್ರತಿಧ್ವನಿ ಶ್ರೀರಂಗಪಟ್ಟಣದಲ್ಲಿಯೂ ಕೇಳಿ ಬಂದಿತು. ಸಂಪೂರ್ಣ ಸ್ವರಾಜ್ಯವು ಭರತಖಂಡವನ್ನು ಪಾರತಂತ್ರ್ಯಕೂಟಕ್ಕೆ ತಳ್ಳುತ್ತದೆ. ಎಂದು ದಿವಾನ್ ಮಿರ್ಜಾರವರು ಹೇಳಿ ಜನತೆಯನ್ನು ಒಲಿಸಿಕೊಳ್ಳಲು ಮಾಡಿದ ಯತ್ನ ಫಲಿಸಲಿಲ್ಲ. 1931ರಲ್ಲಿ ಉತ್ತರ ಕನ್ನಡದ ಸಿರಸಿ, ಸಿದ್ದಾಪುರ, ಅಂಕೋಲಗಳಲ್ಲಿ ನಡೆದ ಕರನಿರಾಕರಣೆ ಚಳುವಳಿ ಗಮನಾರ್ಹವಾದುದು. ಈ ಚಳುವಳಿಯಲ್ಲಿ ಹಳೆಯ ಮೈಸೂರು ಪ್ರಾಂತ್ಯದಿಂದ ಹಲವಾರು ಜನ ಭಾಗವಹಿಸಿದರು. ಇವರಲ್ಲಿ ಶ್ರೀರಂಗಪಟ್ಟಣದ ತಾಲ್ಲೂಕಿನವರೂ ಸೇರಿದ್ದರು

ಮಂಡ್ಯಜಿಲ್ಲೆಯಲ್ಲಿ ನಡೆದ ಇರ್ವಿನ್ ನಾಲೆ ರೈತರ ಚಳುವಳಿ ಪ್ರಮುಖವಾದುದು. ಮಂಡ್ಯ ಜಿಲ್ಲೆಯ ಗೆಜೆಟಿಯರ್‌ನಲ್ಲಿ ಬೇಸಾಯಗಾರರ ಚಳುವಳಿ ಎಂದು ವರ್ಣಿಸಲಾಗಿರುವ ಈ ಚಳುವಳಿ ಶ್ರೀಮಾನ್ ಎಚ್. ಕೆ ವೀರಣ್ಣಗೌಡ ಮತ್ತು ಎಚ್. ಕೆ. ಪುಟ್ಟಣ್ಣನವರ ನೇತೃತ್ವದಲ್ಲಿ ನಡೆಯಿತು. ಇರ್ವಿನ್ ನಾಲಾ ಪ್ರದೇಶದಲ್ಲಿ (ಈಗಿನ ವಿಶ್ವೇಶ್ವರಯ್ಯನಾಲಾ) ಬ್ಲಾಕ್ ಸಸ್ಯನಲ್ಲಿ ಕೃಷಿ ಮಾಡಲು ಶ್ರೀ ವಿಶ್ವೇಶ್ವರಯ್ಯನವರು ಮಾಡಿದ ಸಲಹೆಯನ್ನು ಸರ್ಕಾರ ಒಪ್ಪಿರಲು ಅದನ್ನು ವಿರೋಧಿಸುವುದು ರೈತರ ಉದ್ದೇಶ. ಯಾವಾಗ ಬೇಕಾದರೂ ಬೆಳೆತೆಗೆಯುವ ಅವಕಾಶ ರೈತರಿಗೆ ಇರಬೇಕು, ವ್ಯವಸಾಯ ಇಲಾಖೆಯ ತಜ್ಞರಾದ ಡಾ: ಬಿ. ನರಸಿಂಹ ಅಯ್ಯಂಗಾರ್ಯರು ಸಲ್ಲಿಸಿದ್ದ ಒಂಬತ್ತು ವಿಧಿಗಳ ಪದ್ಧತಿಯ ಪ್ರತ್ಯಾಕಾರವಾದ ವರದಿಯನ್ನು ಜಾರಿಗೆ ತರಬೇಕು. ಕಾಂಟ್ರಿಬ್ಯೂಷನ್ನಿನ ಮೇಲೆ ವಿಧಿಸಿದ್ದ ಬಡ್ಡಿಯನ್ನು ವಜಾಮಾಡಬೇಕು ಎಂಬಂತಹುದುವು ರೈತರ ಬೇಡಿಕೆಗಳಾಗಿದ್ದವು. ರೈತರ ಪರವಾಗಿ

ಡಾ: ಬಿ. ನರಸಿಂಗಅಯ್ಯಂಗಾರ್ಯರ ಈ ವರದಿಯನ್ನು ನೋಡಿ ಸರ್ಕಾರದವರು ಬೆಚ್ಚಿಬಿದ್ದರು. ಎಕ್ಸಿಕ್ಯೂಟಿವ್ ಇಂಜಿನಿಯರ್ ಆಫೀಸಿನಲ್ಲಿದ್ದ ಶ್ರೀ ಎಂ. ಎಲ್. ಲಿಂಗಣ್ಣ ಎಂಬುವರ ಸಹಾಯದಿಂದ ಶ್ರೀ ಎಚ್. ಕೆ. ವೀರಣ್ಣಗೌಡ ಮತ್ತು ಅವರ ಸಂಗಡಿಗರು ಅದನ್ನು ಉಪಾಯವಾಗಿ ಪಡೆದುಕೊಂಡು ಜನರಲ್ಲಿ ಪ್ರಚಾರಮಾಡಿಬಿಟ್ಟರು. ಜಿಲ್ಲೆಯಾದ್ಯಂತ ನಡೆದ ಈ ಪ್ರಚಾರಕಾರ್ಯ ಅರಕೆರೆ, ಶ್ರೀರಂಗಪಟ್ಟಣಗಳಲ್ಲಿಯೂ ನಡೆಯಿತು. ಹೀಗೆ ನಡೆಸಿದ ನೂರಾರು ಸಭೆಗಳ ಮೂಲಕ ಜನತೆಯನ್ನು ಸಂಘಟಿಸಿ ಸುಮಾರು 4000ಕ್ಕಿಂತಲೂ ಹೆಚ್ಚು ರೈತರು ಬೆಂಗಳೂರಿಗೆ ಕಾಲ್ನಡಿಗೆಯಲ್ಲಿ ಹೋಗಿ ದಿವಾನ್ ಮಿರ್ಜಾರವರನ್ನು ಕಂಡು ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು. ಶ್ರೀರಂಗಪಟ್ಟಣ ಪ್ರಾಂತ್ಯದ ಅರಕೆರೆ, ಶೆಟ್ಟಹಳ್ಳಿ, ಗಂಜಾಂ, ಕೋಡಿಹಳ್ಳಿ, ಇಂಡುವಾಳು ಮುಂತಾದ ಗ್ರಾಮಗಳ ನೂರಾರು ಜನ ರೈತರು ಈ ಚಳುವಳಿಯಲ್ಲಿ ಭಾಗವಹಿಸಿದರು. ಇಂತಹ ಚಳುವಳಿಗಳಲ್ಲಿ ಭಾಗವಹಿಸುವುದರ ಮೂಲಕ ಈ ಜನರಿಗೆ ಸ್ವಾತಂತ್ರ್ಯದ ಬಗ್ಗೆ ಕಳಕಳಿ ಹೆಚ್ಚಾಯಿತು. ಬ್ರಿಟಿಷರ ಅಡಿಯಾಳಾಗಿದ್ದ ರಾಜಪ್ರಭುತ್ವದ ಮೇಲೆ ಅವರಿಗೆ ತಿರಸ್ಕಾರ ಹೆಚ್ಚಾಗತೊಡಗಿತು. ಈ ಚಳುವಳಿಯ ನೇತೃತ್ವವಹಿಸಿದ್ದ ನಾಯಕರೇ ಮುಂದೆ ಸ್ವಾತಂತ್ರ್ಯ ಹೋರಾಟದ ನೇತೃತ್ವವನ್ನು ವಹಿಸಿದ್ದು ಒಂದು ವಿಶೇಷ. ಈ ಚಳುವಳಿಯ ಸಾರ್ಥಕತೆ ಮುಂದೆ 1938 ರಲ್ಲಿ ಮದ್ದೂರಿನಲ್ಲಿ ನಡೆದ ಐತಿಹಾಸಿಕ ಮಹತ್ವದ ಶಿವಪುರ ಧ್ವಜಸತ್ಯಾಗ್ರಹಕ್ಕೆ ನಾಂದಿಯಾಯಿತು

ಶಿವಪುರ ಧ್ವಜಸತ್ಯಾಗ್ರಹ ಮಂಡ್ಯ ಜಿಲ್ಲೆಯಲ್ಲಿಯೇ ಅಲ್ಲ ಇಡೀ ಮೈಸೂರು ಸೀಮೆಯಲ್ಲಿ ತುಂಬ ಮಹತ್ವಪೂರ್ಣವಾದುದು. 1938ನೇ ಇಸ್ವಿ ಏಪ್ರಿಲ್ 10 ರಿಂದ ಒಂದುವಾರ ನಡೆದ ಈ ಐತಿಹಾಸಿಕ ಸತ್ಯಾಗ್ರಹ,ಆ ವರ್ಷ ಫೆಬ್ರವರಿಯಲ್ಲಿ ಗುಜರಾತಿನ ಹರಿಪುರದಲ್ಲಿ ನಡೆದಿದ್ದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನಕ್ಕೆ ಪರ್ಯಾಯವಾದುದಾಗಿತ್ತು. ಹರಿಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದ ಮೈಸೂರಿನ ನಾಯಕರು ಮಹಾತ್ಮಗಾಂಧಿಜೀ ಮತ್ತು ನೆಹರು ಅವರೊಡನೆ ಮೈಸೂರಿನ ರಾಜಕೀಯ ವಿದ್ಯಮಾನಗಳನ್ನು, ಮಹಾರಾಜರ ಆಡಳಿತದ ದೋಷಗಳನ್ನು ಚರ್ಚಿಸಿ ಇಂತಹದೇ ಮಾದರಿಯ ಚಳುವಳಿಯನ್ನು ನಡೆಸಲು ಅನುಮತಿ ಪಡೆದು ಬಂದಿದ್ದರು. ಸರಕಾರದ ದಬ್ಬಾಳಿಕೆಯನ್ನು ಪ್ರತಿಭಟಿಸುವುದು, ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳನ್ನು ನಿಷ್ಕರ್ಷಿಸುವುದು, ಕಾಂಗ್ರೆಸ್ಸಿನ ವ್ಯಕ್ತಿತ್ವವನ್ನು ಸಂಸ್ಥಾನದಲ್ಲಿ ಸ್ಥಾಪಿಸುವುದು, ಜವಾಬ್ದಾರಿ ಸರ್ಕಾರದ ಕನಸನ್ನು ನನಸಾಗಿಸುವುದು ಈ ಶಿವಪುರ ರಾಷ್ಟ್ರಕೂಟದ ಉದ್ದೇಶವಾಗಿದ್ದಿತು. ಈ ರಾಷ್ಟ್ರಕೂಟ ಎಲ್ಲಿ ನಡೆಯಬೇಕು ಎಂಬ ಚರ್ಚೆ ಮೈಸೂರಿನ ಸಾಹುಕಾರ್ ಚೆನ್ನಯ್ಯನವರ ಮನೆಯಲ್ಲಿ ಸೇರಿದ್ದ ಸಭೆಯಲ್ಲಿ ದೀರ್ಘವಾಗಿ ಚರ್ಚಿತವಾಯಿತು. ಶ್ರೀರಂಗಪಟ್ಟಣದ ಸಮೀಪದ ಪಶ್ಚಿಮವಾಹಿನಿಯಲ್ಲಿ ನಡೆಸಿದರೆ ಸರ್ವದೃಷ್ಟಿಯಿಂದಲೂ

ಸೂಕ್ತವೆಂಬ ಅಭಿಪ್ರಾಯವೂ ಬಂದಿತು. ಆದರೆ ಮದ್ದೂರಿನ ಶ್ರೀ ತಿರುಮಲೇಗೌಡರು ಶ್ರೀ ಎಚ್.ಕೆ. ವೀರಣ್ಣಗೌಡರು, ಎಚ್. ಷಣ್ಮುಖಯ್ಯನವರು ಮುಂತಾದವರು ಸಮೀಪದ ಶಿವಪುರದಲ್ಲೇ ನಡೆಸಬೇಕೆಂದು ಕೇಳಿ ತಾವು ಎಲ್ಲಾ ಸೌಕರ್ಯಗಳನ್ನು ಒದಗಿಸಲು ಮುಂದಾದುದರಿಂದ ಅಲ್ಲಿಯೇ ನಡೆಸಲಾಯಿತು. ಈ ಧ್ವಜಸತ್ಯಾಗ್ರಹ ಅಥವಾ ರಾಷ್ಟ್ರ ಕೂಟದಲ್ಲಿ ಶ್ರೀರಂಗಪಟ್ಟಣ ತಾಲ್ಲೂಕಿನ ಜನರ ಪಾತ್ರವೂ ಮಹತ್ತ್ವದ್ದಾಗಿದ್ದಿತು. ಶಿವಪುರ ರಾಷ್ಟ್ರಕೂಟದ ಸ್ವಾಗತಸಮಿತಿಯ ಕಾರ್ಯದರ್ಶಿಗಳಲ್ಲಿ ಅರಕೆರೆಯ ವಕೀಲರು ಶ್ರೀ ಎ.ಜಿ. ಬಂದೀಗೌಡರು ಒಬ್ಬರಾಗಿದ್ದರು. (ಮತ್ತೊಬ್ಬರು ಶ್ರೀ ಎಚ್.ಕೆ. ವೀರಣ್ಣ ಗೌಡರು) ಈ ರಾಷ್ಟ್ರಕೂಟದ ಮುಂಚೂಣಿಯಲ್ಲಿದ್ದವರಲ್ಲಿ ಶ್ರೀ ಪಾಲಹಳ್ಳಿ ಸೀತಾ ರಾಮಯ್ಯನವರು ಪ್ರಮುಖರಾಗಿದ್ದರು. ಇವರಲ್ಲದೆ ಈ ಧ್ವಜಸತ್ಯಾಗ್ರಹದಲ್ಲಿ ಹಲ ವಾರು ಮಂದಿ ಯುವಕರು,ಸ್ವಯಂಸೇವಕರಾಗಿ ಭಾಗವಹಿಸಿದ್ದರು. ಅವರಲ್ಲಿ ಬಹುಜನ ಅರಕೆರೆ ಗ್ರಾಮದವರಾಗಿದ್ದುದು ವಿಶೇಷ. ಆ ಊರವರೇ ಆದ ಶ್ರೀ ಬಂದೀಗೌಡರು ಸ್ವಾಗತ ಸಮಿತಿಯ ಕಾರ್ಯದರ್ಶಿಗಳಲ್ಲೊಬ್ಬರಾಗಿದ್ದುದು ಪ್ರಮುಖವಾದ ಕಾರಣವಿರ ಬೇಕು. ಶ್ರೀ ಕೆ. ಪುಟ್ಟಸ್ವಾಮಿ, ಶ್ರೀ ಎ.ಸಿ. ಮರೀಗೌಡ, ಶ್ರೀ ಎ.ಸಿ. ಭೈರಪ್ಪ ಶ್ರೀ ಎಂ. ಪುಟ್ಟೇಗೌಡ, ಶ್ರೀ ಎ. ಜಿ. ಸಿಂಗಪ್ಪ, ಶ್ರೀ ಎ. ಕೆಂಚಪ್ಪ, ಶ್ರೀ ಯು. ಕೆಂಚಪ್ಪ (ಎಲ್ಲರೂ ಅರಕೆರೆಯವರು) ಶ್ರೀ ಎಸ್. ಬೋರಯ್ಯನವರು (ನಗುವನಹಳ್ಳಿ) ಶ್ರೀ ಚಿಕ್ಕಲಿಂಗಯ್ಯ, ಶ್ರೀ ಮಂಚಪ್ಪ, ನರಸೇಗೌಡರು (ಶ್ರೀನಿವಾಸ ಅಗ್ರಹಾರ). ಶ್ರೀ ಸಿ. ಬಂದೀಗೌಡರು ಇವರಲ್ಲದೆ ಅನೇಕ ಹಳ್ಳಿಗಳಿಂದ ಬಂದವರು ಭಾರಿ ಸಂಖ್ಯೆಯಲ್ಲಿ ಸ್ವಯಂ ಸೇವಕರಾಗಿ ಭಾಗವಹಿಸಿದ್ದರು. ಶ್ರೀರಂಗಪಟ್ಟಣದಿಂದ ಗುಂಪಿನಲ್ಲಿ ನಡೆದುಕೊಂಡು ಹೋದ ಈ ಯುವಕರತಂಡ ಶಿವಪುರ ರಾಷ್ಟ್ರಕೂಟದಲ್ಲಿ ತಮ್ಮ ಶಿಸ್ತಿನ ನಡವಳಿಕೆಯಿಂದ ಅಲ್ಲಿನ ನಾಯಕರ ಗಮನ ಸೆಳೆಯಿತು. ಸ್ವಯಂಸೇವಕರ ತಂಡದ ನಾಯಕರಾದ ಶ್ರೀ ಎಂ.ಎನ್. ಜೋಯಿಸರು ಪೂರ್ವಭಾವಿಯಾಗಿ ನಡೆಸಿದ್ದ ತರಬೇತಿ ಶಿಬಿರದಲ್ಲಿ ಯಾರೇ ಆಗಲಿ ಬ್ಯಾಡ್ಜ್ ಧರಿಸಿಕೊಂಡು ಬರದವರನ್ನು ಒಳಗೆ ಬಿಡಬೇಡಿ ಎಂದು ಹೇಳಿದ್ದರು. ಈ ವಿಷಯವನ್ನು ಸ್ವಯಂಸೇವಕರು ಎಷ್ಟು ಶ್ರದ್ಧೆಯಿಂದ ಪಾಲಿಸಿದರೆಂದರೆ, ಓಡಾಟದ ಮಧ್ಯೆ ಸ್ವಾಗತಸಮಿತಿಯ ಕಾರ್ಯದರ್ಶಿಗಳಾಗಿದ್ದ ಶ್ರೀ ಎಚ್.ಕೆ. ವೀರಣ್ಣ ಗೌಡರು ಬ್ಯಾಡ್ಜ್ ಧರಿಸದೆ ಬಂದಾಗ ಅವರನ್ನೇ ತಡೆದು ನಿಲ್ಲಿಸಿದರು.

ಶಿವಪುರ ರಾಷ್ಟ್ರಕೂಟದಲ್ಲಿ ಧ್ವಜಾರೋಹಣ ಪ್ರಧಾನ ಕಾರ್ಯವಾದುದರಿಂದ ಅದನ್ನು ತಡೆಯಬೇಕೆಂಬುದು ಸರ್ಕಾರದ ಉದ್ದೇಶವಾಗಿತ್ತು. ಧ್ವಜಾರೋಹಣ ನಡೆಸದಂತೆ ತಡೆಯುವುದರ ಜೊತೆಗೆ ಇಡೀ ರಾಷ್ಟ್ರಕೂಟವನ್ನೇ ಯಶಸ್ವಿಯಾಗದಂತೆ ಮಾಡಲು ಸಕಲ ಪ್ರಯತ್ನವನ್ನೂ ಮಾಡಿದ್ದರು. ಪೋಲೀಸ್ ಕಾಯಿದೆಯ 39ನೆಯ ನಿಯಮದ ಪ್ರಕಾರ ಒಂದು ಆಜ್ಞೆ ಹೊರಡಿಸಿ ಮದ್ದೂರು ತಾಲ್ಲೂಕಿನ ಶಿವಪುರ ಎಂಬ ಹಳ್ಳಿಯ ಸುತ್ತಮುತ್ತಲಿನ ಐದು ಮೈಲಿ ಪ್ರದೇಶದಲ್ಲಿ ಎಲ್ಲಿಯೂ 'ಕಾಂಗ್ರೆಸ್ ಧ್ವಜ

ವೆಂಬುವನ್ನು ಆರೋಹಣ ಮಾಡಬಾರದೆಂದು ಆಜ್ಞೆ ವಿಧಿಸಿದರು. ಈ ಆಜ್ಞೆಯನ್ನು ವಿರೋಧಿಸಿದ ಇಪ್ಪತ್ತೈದು ಜನ ಮುಖಂಡರಲ್ಲಿ ಶ್ರೀರಂಗಪಟ್ಟಣದ ಶ್ರೀ ವಿ.ಜಿ. ಬಂದೀಗೌಡರು ಹಾಗೂ ಪಾಲಹಳ್ಳಿ ಸೀತಾರಾಮಯ್ಯನವರು ಸೇರಿದ್ದರು ಶಿವಪುರ ರಾಷ್ಟ್ರಕೂಟ ಇಷ್ಟೆಲ್ಲ ವಿರೋಧಗಳ ನಡುವೆಯೂ ತನ್ನ ಧ್ವಜಾರೋಹಣ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿತು. ಪ್ರಮುಖ ನಾಯಕರಾದ ಶ್ರೀ ಟಿ. ಸಿದ್ದಲಿಂಗಯ್ಯನವರು, ಎಚ್. ಸಿ. ದಾಸಪ್ಪನವರು ಶ್ರೀ ಕೆ. ಸಿ. ರೆಡ್ಡಿ ಮುಂತಾದವರನ್ನು ದಸ್ತಗಿರಿ ಮಾಡಲಾಯಿತು. ಇಷ್ಟೆಲ್ಲದರ ಮಧ್ಯೆಯೂ ಭಾಗವಹಿಸಿದ್ದ ನಲವತ್ತು ಸಾವಿರಕ್ಕೂ ಹೆಚ್ಚು ಜನ ಶಿಸ್ತು, ಶ್ರದ್ಧೆಗಳಿಂದ ವರ್ತಿಸಿ ಸರ್ಕಾರಕ್ಕೆ ದಿಗಿಲು ಹುಟ್ಟಿಸುವಲ್ಲಿ ಯಶಸ್ವಿಯಾದರು. ಶಿವಪುರ ಧ್ವಜಸತ್ಯಾಗ್ರಹದ ಯಶಸ್ಸು ನಾಡಿನಾದ್ಯಂತ ಪ್ರತಿಧ್ವನಿತವಾಯಿತು. ಶ್ರೀರಂಗಪಟ್ಟಣದ ಸುತ್ತಮುತ್ತಲಹಳ್ಳಿಗಳಲ್ಲಿಯೂ ಇದರ ಬಿಸಿ ತಟ್ಟಿತು. ಜನರು ಸರ್ಕಾರದ ಲೋಪದೋಷಗಳ ಬಗ್ಗೆ ಮಾತನಾಡಲಾರಂಭಿಸಿದರು. ಅಲ್ಲಲ್ಲಿಯೆ ಪ್ರತಿಭಟಿಸಲಾರಂಭಿಸಿದರು. ಇದು ಜನರಿಗೆ ಸ್ವಾತಂತ್ರ್ಯ ಪಡೆಯುವ ಆಕಾಂಕ್ಷೆಯನ್ನು ಹೆಚ್ಚು ಮಾಡಿತು. ಹಳ್ಳಿ ಹಳ್ಳಿಗಳಲ್ಲಿ ಮುಷ್ಕರಗಳು, ಪ್ರತಿಭಟನೆಗಳು ದಿನನಿತ್ಯದ ಚಟುವಟಿಕೆಗಳಾದವು. ವಿದ್ಯಾವಂತ ಯುವಕರಿಂದ ಪತ್ರಿಕೆಗಳಲ್ಲಿ ಪ್ರಕಟವಾಗುವ ಸುದ್ದಿಗಳನ್ನು ಓದಿಸಿ ತಿಳಿಯುವುದು ಮಾಮೂಲಿಯಾಯಿತು. ಇದು ಮುಂದೆ 1942 ರಲ್ಲಿ ನಡೆದ ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ಚಳುವಳಿಗೆ ಜನತೆ ಒಕ್ಕೊರಲಿನಿಂದ ಭಾಗವಹಿಸಲು ಪ್ರೇರಣೆಯಾಯಿತು

1942 ರಲ್ಲಿ ಭಾರತದಾದ್ಯಂತ ನಡೆದ ಕ್ವಿಟ್ ಇಂಡಿಯಾ ಚಳುವಳಿಗೆ ಶ್ರೀರಂಗಪಟ್ಟಣವೂ ಸ್ಪಂದಿಸಿತು. ಶ್ರೀರಂಗಪಟ್ಟಣದ ಸುತ್ತಮುತ್ತಲ ಹಳ್ಳಿಗಳಲ್ಲಿ ಜನರು ತಮ್ಮ ತಮ್ಮ ಊರುಗಳಲ್ಲಿಯೇ ಪ್ರತಿಭಟನೆ ಮಾಡಲಾರಂಬಿಸಿದರು. ಸರ್ಕಾರಿ ಕಛೇರಿಗಳ ಎದುರು ಪಿಕೆಟಿಂಗ್ ನಡೆಸಿದರು. ಬಹಳ ಜನರನ್ನು ಪೋಲೀಸರು ಇಂತಹ ಚಟುವಟಿಕೆಗಳಿಗಾಗಿ ಬಂಧಿಸಿದ್ದೂ ಉಂಟು ಸ್ವಾತಂತ್ರ್ಯದ ಬಗೆಗಿನ ಕಳಕಳಿ ಅವರಿಗೆ ಯಾವ ಮಟ್ಟದ್ದಾಗಿತ್ತೆಂದರೆ ಬಂಧನಕ್ಕೆ ಗುರಿಯಾಗಲು ಯಾರೂ ಸಹ ಹೆಂಜರಿಯುತ್ತಿರಲಿಲ್ಲ. ದೇಶದ ಸ್ವಾತಂತ್ರ್ಯಕ್ಕಾಗಿ ಯಾವುದೇ ಬಗೆಯ ತ್ಯಾಗಕ್ಕೆ ಅವರು ಸಿದ್ಧವಾಗಿದ್ದರು. ಹಗಲಿರುಳೆನ್ನದೆ ತಮ್ಮ ಮನೆಯ ಕೆಲಸಬಿಟ್ಟು ಸ್ವಂತ ಹಣ ವೆಚ್ಚಮಾಡಿಕೊಂಡು ಚಳುವಳಿಯಲ್ಲಿ ಭಾಗವಹಿಸುವುದು. ಸಂದರ್ಭಬಂದರೆ ಬಂಧನಕ್ಕೆ ಗುರಿಯಾಗಿ ಅನೇಕ ದಿನಗಳಕಾಲ ಜೈಲಿನಲ್ಲಿರುವುದು ಸುಲಭವಾದ ವಿಷಯವಾಗಿರಲಿಲ್ಲ. ಇಂದಿಗೂ ಸಹ ನಾವು ದೇಶಭಕ್ತರೆಂದುಕೊಳ್ಳುವವರಲ್ಲಿ ಸಹ ಈ ಬಗೆಯ ತ್ಯಾಗವನ್ನು ನಿರೀಕ್ಷಿಸುವುದು ಕಷ್ಟವಾಗಿದೆ. ಇಂದಿನ ದೇಶಸೇವಕರೆಲ್ಲರೂ ಸ್ವಹಿತಸಾಧನೆಯನ್ನೇ ಪ್ರಮುಖ ಗುರಿಯನ್ನಾಗಿಟ್ಟುಕೊಂಡಿರುವುದು ದಿನನಿತ್ಯದ ಸಂಗತಿಯಾಗಿದೆ. ಈ ಹಿನ್ನೆಲೆಯಿಂದ ನೋಡಿದಾಗ ಅಂದಿನ ಸ್ವಾತಂತ್ರ್ಯಹೋರಾಟಗಾರರ ಸ್ವಾತಂತ್ರ್ಯ

ಪ್ರೇಮ, ನಿಷ್ಠೆ, ತ್ಯಾಗಗಳು ಎದ್ದು ಕಾಣುತ್ತವೆ.

ಶ್ರೀರಂಗಪಟ್ಟಣದ ಇತಿಹಾಸದಲ್ಲಿ ಜನ ಸಕ್ರಿಯವಾಗಿ ಪಾಲ್ಗೊಂಡ ಚಳುವಳಿಯೆಂದರೆ 1947ರಲ್ಲಿ ನಡೆದ ಮೈಸೂರು ಚಲೋ ಚಳುವಳಿ. 1947 ಆಗಸ್ಟ್ 15ರಂದು ದೇಶಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರಿಗೆ ಸ್ವಾತಂತ್ರ್ಯ ಬಂದಿರಲಿಲ್ಲ. ಬ್ರಿಟೀಷರ ಅಧೀನದಲ್ಲಿದ್ದ ಮೈಸೂರಿನ ದೊರೆಗಳು ಬ್ರಿಟಿಷರ ನಿರ್ಗಮನದ ನಂತರ ತಾವೇ ಸ್ವತಂತ್ರವಾಗಿರುವುದಾಗಿ ಘೋಷಿಸಿದರು. ಹೀಗಾಗಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರವೂ ಸ್ವಾತಂತ್ರ್ಯಕ್ಕಾಗಿ ಅಂದರೆ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ನಡೆಸಬೇಕಾಯಿತು. ಇದಕ್ಕಾಗಿ ನಡೆದದ್ದೇ ಆ ಘಟನಾಕಾರ್ಯ ಚಳುವಳಿ ಆರಂಭಗೊಂಡವು. ಮುಖ್ಯ ಪಟ್ಟಣಗಳಲ್ಲೆಲ್ಲಾ ಪ್ರಚಾರ ಸಭೆಗಳು ನಡೆದವು. ಶ್ರೀ ಕೆ. ಹನುಮಂತಯ್ಯ ಹಾಗು ಶ್ರೀ ಕೆ. ಸಿ. ರೆಡ್ಡಿ ಮುಂತಾದವರ ನೇತೃತ್ವದಲ್ಲಿ ಮೈಸೂರಿನ ಅರಮನೆಯ ಮುಂದೆ ಚಳುವಳಿ ನಡೆಸುವ ಕಾರ್ಯಕ್ರಮ ನಿಗದಿಯಾಯಿತು. ಇದಕ್ಕೆ ಇತರ ರಾಜ್ಯಗಳ ಬೆಂಬಲವೂ ದೊರಕಿತು. ಹಳ್ಳಿ ಹಳ್ಳಿಗಳಿಂದ ಸಾವಿರಾರು ಜನ ಈ ಚಳುವಳಿಯಲ್ಲಿ ಸ್ವಯಂಸ್ಫೂರ್ತಿಯಿಂದ ಪಾಲ್ಗೊಂಡರು. ಬೆಂಗಳೂರಿನಿಂದ ಹೊರಟ ಜನರ ಗುಂಪು ಕಾಲುನಡಿಗೆಯಲ್ಲಿ ಬಂದು ಮೈಸೂರು ಸೇರಿದರು. ಮಾರ್ಗಮಧ್ಯದಲ್ಲಿ ಶ್ರೀರಂಗಪಟ್ಟಣದಲ್ಲಿ ಅಲ್ಲಿಂದ ಬಂದ ಜನರೆಲ್ಲರಿಗೂ ಶ್ರೀ ಎ. ಜಿ. ಬಂದೀಗೌಡರ ನೇತೃತ್ವದಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿ ಊಟ ಮುಗಿಸಿ ಅನಂತರ ಅರಕೆರೆ, ಬಿದುಗಾಲ, ನಗುವನಹಳ್ಳಿ, ಶೆಟ್ಟಹಳ್ಳಿ, ಗಂಜಾಂ ಮುಂತಾದ ಹಳ್ಳಿಗಳಿಂದ ಬಂದಿದ್ದ ಸಹಸ್ರಾರು ಜನರನ್ನು ಕೂಡಿಕೊಂಡು ಮೈಸೂರಿಗೆ ಬಂದರು. ಮಹಾರಾಜರ ಆಪ್ತಕಾರ್ಯದರ್ಶಿಗಳಾಗಿದ್ದ ಶ್ರೀ ತಂಬೂಚೆಟ್ಟರು ನಾಯಕರನ್ನು ಬಂಧಿಸಲು ಆಜ್ಞೆಯಿತ್ತರು. ಶ್ರೀ ಎ.ಜಿ.ಬಂದೀಗೌಡ, ಡಾ. ಸಿ. ಬಂದೀಗೌಡ, ಕೆಂಚಪ್ಪ, ಎ.ಸಿ. ಮಹಾದೇವಗೌಡ ಮುಂತಾದ ಅನೇಕ ಶ್ರೀರಂಗಪಟ್ಟಣದ ಗಣ್ಯರು ಈ ಸಮಯದಲ್ಲಿ ಬಂಧಿತರಾದರು. ತಮ್ಮ ನಾಯಕರನ್ನೆಲ್ಲಾ ಬಂಧಿಸಿದ್ದರಿಂದ ಕುಪಿತರಾದ ಜನ "ಅರ್ಕಾಟ್ ಬಾಯ್ಕಾಟ್, ತಂಬೂಚೆಟ್ಟಿ ಚಟ್ಟ ಕಟ್ಟಿ, ಕೆ. ಸಿ. ರೆಡ್ಡಿ ಪಟ್ಟ ಕಟ್ಟಿ" ಎಂಬ ಘೋಷಣೆಗಳನ್ನು ಕೂಗಿದರು. ಲಾಟಿ ಏಟು, ಗೋಲಿಬಾರ್, ಬಂಧನಗಳು ಲೆಕ್ಕವಿಲ್ಲದಷ್ಟು ನಡೆದವು. ಚಳುವಳಿಯನ್ನು ತಡೆಗಟ್ಟಲು ಸರ್ಕಾರದಿಂದ ಸಾಧ್ಯವಾಗಲಿಲ್ಲ 6–10–1947ರಂದು ಸರ್ಕಾರ ಬಂಧಿತರನ್ನು ಬಿಡುಗಡೆಮಾಡಿತು 11-10-1947ರಂದು ಮೈಸೂರು ಸರ್ಕಾರಕ್ಕೂ ಕಾಂಗ್ರೆಸ್ಸಿಗೂ ಒಪ್ಪಂದವಾಯಿತು. 13–10–1947ರಂದು ಸರ್ಕಾರ "ಪ್ರಜಾಪ್ರತಿನಿಧಿಗಳ ಮಂತ್ರಿಮಂಡಲ ಸ್ಥಾಪನೆಯಾಗಿದೆ ಎಂದು ಘೋಷಿಸಿತು. 24–10–87ರಂದು ವಿಜಯದಶಮಿಯ ದಿನ ಶ್ರೀ ಕೆ. ಸಿ. ರೆಡ್ಡಿಯವರ ನೇತೃತ್ವದ ಮಂತ್ರಿಮಂಡಲ ಸ್ಥಾಪನೆಯಾಯಿತು. ಅಂದೇ ಮಂತ್ರಿಗಳು ಮೈಸೂರಿನ ಅಠಾರ ಕಛೇರಿಯಲ್ಲಿ ರಾಜ್ಯದ ಆಡಳಿತ ಸೂತ್ರವಹಿಸಿಕೊಂಡರು. ಹೀಗೆ ಸ್ವಾತಂತ್ರ್ಯ ಹೋರಾಟ ಕಾಂಗ್ರೆಸ್ ಸರ್ಕಾರ ಸ್ಥಾಪನೆ

ಯಾಗುವುದರ ಮೂಲಕ ಕೊನೆಗೊಂಡಿತು.

ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಜನತೆ ಭಾಗವಹಿಸಿದ ಪ್ರಮುಖ ಚಳುವಳಿಯನ್ನು ಸಾಕಷ್ಟು ವಿವೇಚಿಸಿದ್ದೇನೆ. ಈ ಭಾಗದಲ್ಲಿ ನಡೆದ ಚಳುವಳಿಯಲ್ಲಿ ಅನೇಕ ಜನ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪಾಲ್ಗೊಂಡಿದ್ದಾರೆ. ತಮ್ಮ ತನು ಮನ ಧನಗಳನ್ನು ಧಾರೆಯೆರೆದಿದ್ದಾರೆ. ಹಳ್ಳಿಹಳ್ಳಿಗಳಿಂದ ಸಾವಿರಾರು ಜನ ಒಂದಲ್ಲ ಒಂದು ಬಗೆಯಲ್ಲಿ ಭಾಗಿಗಳಾಗಿದ್ದಾರೆ. ಅವರೆಲ್ಲರ ವಿವರಗಳು ಇಂದು ಅಲಭ್ಯವಾಗಿವೆ. ಪ್ರಾಯಃ ಆ ಜನರಿಗೆ ತಾವು ಇತಿಹಾಸ ನಿರ್ಮಿಸುತ್ತಿದ್ದೇವೆ. ಎಂಬ ಕಲ್ಪನೆ ಇರದಿರುವುದೂ ಇದಕ್ಕೆ ಕಾರಣವಿರಬಹುದು. ಆದರೂ ಶ್ರೀರಂಗಪಟ್ಟಣದ ನೆರೆಹೊರೆಯುವರು ಗ್ರಾಮಗಳಲ್ಲಿನ ಕೆಲವು ವ್ಯಕ್ತಿಗಳು ಮುಂಚೂಣಿಯಲ್ಲಿ ನಿಂತು ಹೋರಾಡಿದ್ದಾರೆ. ಅಂತಹವರ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸುವುದು ಉಚಿತವೆನಿಸುತ್ತದೆ.

ಇಡೀ ಶ್ರೀರಂಗಪಟ್ಟಣ ಭಾಗದ ಸ್ವಾತಂತ್ರ್ಯ ಚಳುವಳಿಯ ಸಮಗ್ರ ಅಧ್ಯಯನ ಮಾಡಿದವರಿಗೆ ಪ್ರಮುಖವಾಗಿ ಕಾಣಬರುವ ಹೆಸರು, ಶ್ರೀ ಎ. ಜಿ. ಬಂದೀಗೌಡರದು. ಅರಕೆರೆಯ ರೈತಕುಟುಂಬಕ್ಕೆ ಸೇರಿದ ಇವರು ಆನಂತರದ ವಕೀಲಿ ವೃತ್ತಿಜೀವನದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು. ಸ್ವಾತಂತ್ರ್ಯ ಹೋರಾಟದ ವಿವಿಧ ಹಂತಗಳಲ್ಲಿ ನಡೆದ ಎಲ್ಲ ಚಳುವಳಿಗಳಲ್ಲೂ ಇವರದು ಸಕ್ರಿಯಪಾತ್ರ. ಶಿವಪುರಧ್ವಜಸತ್ಯಾಗ್ರಹದಲ್ಲಿ ಇವರದು ಬಹುಮುಖ್ಯ ಪಾತ್ರ. ಸ್ವಾಗತ ಸಮಿತಿಯ ಕಾರ್ಯದರ್ಶಿಗಳಲ್ಲೊಬ್ಬ ಮುಖ್ಯರಾಗಿದ್ದ ಇವರು ಶ್ರೀರಂಗಪಟ್ಟಣದ ಆಸುಪಾಸಿನ ಹಳ್ಳಿಗಳಲ್ಲಿ ಧನ ಧಾನ್ಯ ಸಂಗ್ರಹವಾಡುವುದರ ಜೊತೆಗೆ ಅನೇಕ ಮಂದಿ ಸ್ವಯಂ ಸೇವಕರನ್ನೂ ತೊಡಗಿಸಿದರು. ಸ್ವಾತಂತ್ರ್ಯಾನಂತರ ಶ್ರೀರಂಗಪಟ್ಟಣ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದ ಇವರು ಆ ಭಾಗದ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು.

ಪಾಲಹಳ್ಳಿ ಸೀತಾರಾಮಯ್ಯನವರು ಸ್ವಾತಂತ್ರ್ಯ ಚಳುವಳಿಯಲ್ಲಿ ಮಹತ್ವದ ಪಾತ್ರ ವಹಿಸಿದ ಕೆಲವೇ ಜನರಲ್ಲಿ ಪ್ರಮುಖರು. ಇವರು ಆ ಕಾಲಕ್ಕಾಗಲೇ ಮೈಸೂರಿನಲ್ಲಿ ನೆಲೆಸಿದ್ದುದರಿಂದ ಇವರ ಕಾರ್ಯಕ್ಷೇತ್ರ ಶ್ರೀರಂಗಪಟ್ಟಣವಾಗಿರಲಿಲ್ಲ.ಶ್ರೀರಂಗಪಟ್ಟಣ ತಾಲ್ಲೂಕಿನ ಪಾಲಹಳ್ಳಿ ಗ್ರಾಮದವರಾದ್ದರಿಂದ ಇವರ ಹೆಸರು ಇಲ್ಲಿ ಉಲ್ಲೇಖನಾರ್ಹ. ಮೈಸೂರಿನಲ್ಲಿದ್ದರೂ ಇವರ ಪಾತ್ರ ಬಹಳ ದೊಡ್ಡದು. ಇವರ ಮಡದಿ ಶ್ರೀಮತಿ ವೆಂಕಮ್ಮ ಸೀತಾರಾಮಯ್ಯನವರು ಸಹ ತಮ್ಮ ಪತಿಯಷ್ಟೇ ಸಕ್ರಿಯವಾಗಿ ಈ ಹೋರಾಟದಲ್ಲಿ ತೊಡಗಿಸಿಕೊಂಡವರು. ಮೈಸೂರಿನ ಎಚ್, ಸಿ, ದಾಸಪ್ಪ ಮತ್ತು ಯಶೋಧರಾ ದಾಸಪ್ಪ ದಂಪತಿಗಳಂತೆ ಇವರೂ ಸಹ ತುಂಬಾ ಸಮರ್ಪಣ ಮನೋಭಾವದಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ದುಡಿದಿದ್ದಾರೆ.

ಶ್ರೀರಂಗಪಟ್ಟಣ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಡಾ. ಸಿ. ಬಂದೀಗೌಡರದು ಬಹುಮುಖ್ಯ ಹೆಸರು. ವೃತ್ತಿಯಲ್ಲಿ ವೈದ್ಯರಾದ ಇವರು ಶ್ರೀನಿವಾಸ

ಅಗ್ರಹಾರದವರು. ತಮ್ಮ ವಿದ್ಯಾಭ್ಯಾಸದ ಅವಧಿಯಲ್ಲಿ ಮೈಸೂರಿನಲ್ಲಿದ್ದ ಅವರು ಅಲ್ಲಿನ ಚಟುವಟಿಕೆಗಳಿಂದ ಪ್ರಭಾವಿತರಾದರು. ಮಹಾತ್ಮಗಾಂಧೀಜಿಯವರ ಮೊಮ್ಮಗ ಕಾಂತಿಲಾಲ್‌ಗಾಂಧಿ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಇವರ ಸಹಪಾಠಿಯಾಗಿದ್ದರು. ಮೈಸೂರಿನ ಚಳುವಳಿಯಲ್ಲಿ ವಿದ್ಯಾರ್ಥಿ ನಾಯಕರಾಗಿದ್ದ ಶ್ರೀ ಬಂದೀಗೌಡರು ಸಕ್ರಿಯ ಪಾತ್ರವಹಿಸಿದರು. 1942 ರಲ್ಲಿ ಅಧ್ಯಯನ ಮುಗಿಸಿ ಶ್ರೀರಂಗಪಟ್ಟಣಕ್ಕೆ ಬಂದು ಇಲ್ಲಿನ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಶಿವಪುರ ಧ್ವಜಸತ್ಯಾಗ್ರಹದಲ್ಲಿ ಮೈಸೂರಿನ ಸಂಗಡಿಗರೊಡನೆ ಭಾಗವಹಿಸಿದ್ದರು. 1947 ರ ವೇಳೆಗೆ ತಾಲ್ಲೂಕು ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿದ್ದ ಇವರು ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ವಾಸವನ್ನು ಅನುಭವಿಸಿದರು. ಇವರು ಗಾಂಧೀ ತಲೆಮಾರಿನ ಆದರ್ಶಗಳ ಪ್ರತಿನಿಧಿಯಾಗಿದ್ದಾರೆ,

ಶ್ರೀರಂಗಪಟ್ಟಣದ ಸ್ವಾತಂತ್ರ್ಯಹೋರಾಟವನ್ನು ಕುರಿತು ಬರೆಯುವಾಗ ಅರಕೆರೆಯ ಶ್ರೀ ಎ. ಸಿ. ಮಾದೇಗೌಡರನ್ನು ಅಗತ್ಯವಾಗಿ ಹೆಸರಿಸಬೇಕು. ಇವರು ಶ್ರೀರಂಗಪಟ್ಟಣದಲ್ಲಿ ನಡೆದ ಎಲ್ಲ ಪ್ರಮುಖ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಶಿವಪುರ ಧ್ವಜಸತ್ಯಾಗ್ರಹದಲ್ಲಿ ಸ್ವಯಂಸೇವಕರಾಗಿ ಭಾಗವಹಿಸಿದ್ದ ಗುಂಪಿನಲ್ಲಿ ಪ್ರಮುಖ ಪಾತ್ರ ಇವರದು. 1934ರಲ್ಲಿ ಗಾಂಧಿಜೀಯವರು ಮೈಸೂರಿಗೆ ಬಂದಿದ್ದಾಗ ನಡೆದ ಸ್ವಾರಸ್ಯಕರ ಘಟನೆಯೊಂದನ್ನು ಇಂದಿಗೂ ಅವರು ಸ್ಮರಿಸುತ್ತಾರೆ. ಮೈಸೂರಿನ ಟೋಲ್ ಗೇಟಿನ ಬಳಿ ಅಪಾರ ಜನ ಗಾಂಧಿಜೀಯವರನ್ನು ಸ್ವಾಗತಿಸಲು ಕಾದಿದ್ದರು. ಮೊದಲು ಕಾರಿನಲ್ಲಿ ಬಂದ ರಿಕ್ಕಾ ಎಂಬ ಇಂಗ್ಲೀಷ್ ಕೈಗಾರಿಕೋದ್ಯಮಿ ಕಾದುನಿಂತಿದ್ದ ಜನತೆಯನ್ನು ಕುರಿತು ವ್ಯಂಗ್ಯವಾಗಿ your Gandi is coming ! ಎಂದು ನುಡಿದನು. ಕುಪಿತರಾದ ಜನ ಅವನ ಮೇಲೆ ತಿರುಗಿಬಿದ್ದರು. ಅವನಿಂದ ಕ್ಷಮಾಪಣೆ ಕೇಳಿಸಿದವರಲ್ಲಿ ಶ್ರೀ ಮಾದೇಗೌಡರು ಒಬ್ಬರು. 1942 ರ ಕ್ವಿಟ್ ಇಂಡಿಯಾ ಚಳುವಳಿ 1947 ರ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದವರು. ಸೆರೆಮನೆಯಲ್ಲಿದ್ದಾಗಲೂ ತಮ್ಮದೇ ಆದ ಹೋರಾಟವನ್ನು ನಡೆಸಿದ ಇವರ ಮೇಲೆ ಸರ್ಕಾರ ಮೊಕದ್ದಮೆಗಳನ್ನು ಹೂಡಿದ್ದಿತು.

ಶ್ರೀರಂಗಪಟ್ಟಣ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟದಲ್ಲಿ ಪರಿಣಾಮಕಾರಿಯಾದ ಪಾತ್ರವಹಿಸಿದವರಲ್ಲಿ ಅರಕೆರೆಯ ಶ್ರೀ ಎ ಕೆಂಚಪ್ಪ, ಶ್ರೀ ಯು. ಕೆಂಚಪ್ಪ, ಶ್ರೀ ಎಂ. ಪುಟ್ಟೇಗೌಡ, ಶ್ರೀ ಎ.ಜಿ. ಲಿಂಗಪ್ಪ ಹಾಗೂ ಶ್ರೀ ಎ.ಜಿ ಚುಂಚೇಗೌಡರು, ಶ್ರೀನಿವಾಸ ಅಗ್ರಹಾರದ ಶ್ರೀ ನರಸೇಗೌಡರು ಮತ್ತು ಶ್ರೀ ಜವರೇಗೌಡರು ಪ್ರಮುಖರು. ಅರಕೆರೆಯ ಎ. ಕೆಂಚಪ್ಪನವರು ಶಿವಪುರ ರಾಷ್ಟ್ರಕೂಟದಲ್ಲಿ ಸ್ವಯಂಸೇವಕರಾಗಿ ಭಾಗವಹಿಸಿದ್ದರು. 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಹಳ್ಳಿಗಳಲ್ಲಿ ಪೋಲಿಸರ ಕೈಗೆ ಸಿಗದೆ ತಮ್ಮ ಸ್ನೇಹಿತರ ಜೊತೆಗೂಡಿ ಸೇಂದಿಅಂಗಡಿಗಳ ಮುಂದೆ ಪಿಕೆಟಿಂಗ್

ನಡೆಸುವುದು, ಜನರಿಗೆ ಸೇಂದಿ ಕುಡಿಯಬಾರದೆಂದು ತಿಳುವಳಿಕೆ ಹೇಳುವುದು, ಪರದೇಶಿ ವಸ್ತುಗಳನ್ನು ಬಹಿಷ್ಕರಿಸಲು ಪ್ರಚಾರ ಮಾಡುವುದರಲ್ಲಿ ತೊಡಗಿದ್ದರು. ಬೆಳ್ಳಿಕೆರೆ, ನೇರಲಕೆರೆ, ತರಗವಾಡಿ, ಕೊಡಿಯಾಲ, ಕೊಡಗಳ್ಳಿ, ಬನ್ನೂರು, ಅಂಗರಹಳ್ಳಿ, ಅರವಟಿಗೆಕೊಪ್ಪಲುಗಳಲ್ಲಿ ಇವರು ಈ ಬಗೆಯ ಪ್ರಚಾರನಡೆಸಿದರು. ಈ ಎಲ್ಲ ಚಟುವಟಿಕೆಗಳನ್ನೂ ನಡೆಸುವಲ್ಲಿ ಒಂದು ಸಿದ್ಧಪಡೆಯೇ ಕಾರ್ಯಪ್ರವೃತ್ತವಾಗಿತ್ತು. ಶ್ರೀಯುತರಾದ ಯು. ಕೆಂಚಪ್ಪನವರು ಎಂ. ಪುಟ್ಟೇಗೌಡರು, ಎ. ಜಿ. ಚುಂಚೇಗೌಡರು ಎ. ಜಿ. ಲಿಂಗಪ್ಪನವರು ಈ ಗುಂಪಿಗೆ ಸೇರಿದವರು ಧನಿಕರಾಗಿದ್ದ ಶ್ರೀ ಎ ಜಿ. ಚುಂಚೇಗೌಡರು ಮಹತ್ವದ ಚಳುವಳಿಗಳಲ್ಲಿ ಧನ ಧಾನ್ಯಗಳ ಮೂಲಕ ಸಹಾಯ ಮಾಡುವುದರ ಮೂಲಕ ತಮ್ಮದೇ ಆದ ಕೊಡುಗೆ ನೀಡಿದರು. ಶ್ರೀ ಕೆ. ಪುಟ್ಟಸ್ವಾಮಿಯವರು ಸಹ ಈ ಗೆಳೆಯರ ಗುಂಪಿನ ಕಾರ್ಯಕರ್ತರಾಗಿದ್ದು ಸತತವಾಗಿ ಚಳುವಳಿಯಲ್ಲಿ ಪಾಲ್ಗೊಂಡರು ಚಳುವಳಿಯಲ್ಲಿ ಭಾಗವಹಿಸುವುದು ಉತ್ಸಾಹೀ ಯುವಕರಾದ ಇವರಿಗೆ ತುಂಬಾ ಅಭಿಮಾನದ ವಿಷಯವಾಗಿತ್ತು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವುದಕ್ಕಾಗಿ ಎಲ್ಲ ಬಗೆಯ ತ್ಯಾಗಗಳಿಗೂ ಇವರು ಸಿದ್ಧವಾಗಿದ್ದರು. ಹಗಲಿರುಳೆನ್ನದೆ ನಿರ್ದಿಷ್ಟ ಸ್ಥಳವೆನ್ನದೆ, ನಿಗದಿಯಾದ ಊಟೋಪಚಾರವಿಲ್ಲದೆ ಸತತವಾಗಿ ಹೋರಾಟ ನಡೆಸಿದರು. ಇದೇ ರೀತಿಯಲ್ಲಿ ಪಾಲಹಳ್ಳಿ, ಬೆಳಗೊಳ, ಚಂದಗಾಲು, ನಗುವನಹಳ್ಳಿ, ಗಂಜಾಂ ಮುಂತಾದ ಊರುಗಳವರೂ ತಮ್ಮ ನೆರೆಹೊರೆಯ ಊರಿನ ಗೆಳೆಯರು ಒಂದುಗೂಡಿ ಚಳುವಳಿಗಳನ್ನು ನಡೆಸಿದರು. ಬೆಳಗೊಳದ ದಾಸೇಗೌಡರು (ಇವರು ಕಾಂಗ್ರೆಸ್ ದಾಸೇಗೌಡರು ಎಂದೇ ಪ್ರಸಿದ್ಧಿಯಾಗಿದ್ದಾರೆ) ನಗುವನಹಳ್ಳಿ ಬೋರಪ್ಪನವರು, ಚಂದಗಾಲದ ಮರಿಯಪ್ಪನವರು, ದೊಡ್ಡಪಾಳ್ಯದ ಪಿ.ಚನ್ನಪ್ಪ, ಬಿ.ಎನ್. ವಿರೇಗೌಡರು, ಶ್ರೀನಿವಾಸ ಅಗ್ರಹಾರದ ಮುದ್ದೇಗೌಡರು, ಗಂಜಾಂನ ಜಿ ಕೋದಂಡರಾಮಯ್ಯ ಬಿ. ಸುಬ್ಬಯ್ಯ ನಾಯ್ಡು, ಮರಳಾಲದ ಎಂ.ಜಿ. ಚೌಡೇಗೌಡರು, ಕೆ.ಶೆಟ್ಟಹಳ್ಳಿಯ ಕೆ.ಎನ್. ನರಸಯ್ಯನವರು ಈ ಬಗೆಯ ಹೋರಾಟದಲ್ಲಿ ಭಾಗವಹಿಸಿದ ಪ್ರಮುಖರಾಗಿದ್ದಾರೆ. ಶ್ರೀರಂಗಪಟ್ಟಣ ಭಾಗದ ಪ್ರತಿಹಳ್ಳಿಗಳಲ್ಲಿಯೂ ಇಂತಹ ವ್ಯಕ್ತಿಗಳು ಇದ್ದಾರೆ. ಅವರೆಲ್ಲರ ನಿರ್ದಿಷ್ಟ ವಿವರಗಳು ಲಭ್ಯವಾಗದಿರುವುದು ಒಂದು ಕೊರತೆಯಾಗಿದೆ.

ಏನೇ ಆಗಲಿ ಸ್ವಾತಂತ್ರ್ಯ ಚಳುವಳಿ ಆಗಿನ ಕಾಲದಲ್ಲಿ ಹಳ್ಳಿಹಳ್ಳಿಯ, ಮನೆಮನೆಯ ಮಾತಾಗಿದ್ದಿತೆಂಬುದು ನಿಸ್ಸಂದೇಹವಾದ ವಿಷಯವಾಗಿರುತ್ತದೆ, ಗ್ರಾಮೀಣ ಭಾಗದ ಜನ ತಾವು ಹಲವಾರು ಕಾರಣಗಳಿಗಾಗಿ ಪ್ರತ್ಯಕ್ಷವಾಗಿ ಭಾಗವಹಿಸಲಾಗದಿದ್ದರೂ ನಡೆದ ಸಂಗತಿಗಳನ್ನು ಕುತೂಹಲದಿಂದ ಕೇಳಿತಿಳಿಯುತ್ತಿದ್ದರು, ತಮ್ಮ ಬೆಂಬಲ ಸೂಚಿಸುತ್ತಿದ್ದರು. ಹೀಗೆ ಜನಸಾಮಾನ್ಯರ ಮಟ್ಟಕ್ಕೆ ಚಳುವಳಿಯನ್ನು ಕೊಂಡೊಯ್ಯುವಲ್ಲಿ ವಿದ್ಯಾವಂತ ಯುವಕರ ಪಾತ್ರ ಬಹು ಮುಖ್ಯವಾದುದಾಗಿತ್ತು. ತಾವು ಚಳುವಳಿಗಳಲ್ಲಿ ಭಾಗವಹಿಸುವುದರ ಜೊತೆಗೆ ಕೇಳಿ ತಿಳಿದ, ಪತ್ರಿಕೆಗಳ ಮೂಲಕ ಓದಿದ ಅನೇಕ ವಿಚಾರ

ಗಳನ್ನು ತಮ್ಮ ತಮ್ಮ ಭಾಗದ ಜನರಿಗೆ ಪರಿಣಾಮಕಾರಿಯಾಗಿ ಮುಟ್ಟಿಸುತ್ತಿದ್ದರು. ಈ ಸಂದರ್ಭದಲ್ಲಿ ಶ್ರೀರಂಗಪಟ್ಟಣದ ಪತ್ರಕರ್ತ ಶ್ರೀ ಸಂಪತ್‌ಕುಮಾರ್ ಅವರ ಪಾತ್ರ ಹಿರಿದಾದುದು. ಪತ್ರಿಕಾವರದಿಗಾರರೂ ಹೋರಾಟಗಾರರೂ ಆಗಿದ್ದ ಇವರು ಇಲ್ಲಿನ ಪ್ರತಿಯೊಂದು ಘಟನೆಗಳನ್ನೂ ಪತ್ರಿಕೆಗಳಿಗೆ ವರದಿ ಮಾಡುತ್ತಿದ್ದರು. ತಾವೂ ಸಹ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಪಾತ್ರವಹಿಸಿದ್ದ ಇವರು ಪತ್ರಕರ್ತರಾಗಿಯೂ ಅಪಾರ ಸೇವೆ ಮಾಡಿದರು.

ಕಡೆಯದಾಗಿ, ಶ್ರೀರಂಗಪಟ್ಟಣ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟದ ಸಮಗ್ರ ಚಿತ್ರಣ ನೀಡುವುದು ಇಲ್ಲಿ ಸಾಧ್ಯವಾಗಿಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕು. ಅದು ತುಂಬಾ ವ್ಯಾಪಕವಾದುದು. ಹಳ್ಳಿಹಳ್ಳಿಗಳಲ್ಲಿ ಸಂಚರಿಸಿ, ಚರ್ಚಿಸಿ ಅಧ್ಯಯನ ಮಾಡಿದಲ್ಲಿ ಅನೇಕ ರೋಚಕ ಸಂಗತಿಗಳು ಹೊರಬೀಳುವುದರಲ್ಲಿ ಸಂದೇಹವಿಲ್ಲ. ಅದೊಂದು ಬೃಹತ್ ಕೃತಿಯೇ ಆಗುತ್ತದೆ, ಇಲ್ಲಿನ ಸೀಮಿತ ಅವಕಾಶದಲ್ಲಿ ಇಡೀ ತಾಲ್ಲೂಕಿನಲ್ಲಿ ನಡೆದ ಒಂದು ಒಟ್ಟಾರೆ ನೋಟವನ್ನಷ್ಟೆ ನೀಡುವುದು ಸಾಧ್ಯವಾಗಿದೆ. ಈ ಲೇಖನದಲ್ಲಿ ಉದ್ದಕ್ಕೂ ಶ್ರೀರಂಗಪಟ್ಟಣ ತಾಲ್ಲೂಕು ಎಂದು ಹೇಳಲಾಗಿದೆ. ವಾಸ್ತವವಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು ಪ್ರತ್ಯೇಕವಾಗಿರಲಿಲ್ಲ. ಅದು ಮಂಡ್ಯ ತಾಲ್ಲೂಕಿನ ಅಂಗವಾಗಿತ್ತು. ಈಗ ಈ ತಾಲ್ಲೂಕಿನಲ್ಲಿ ಕಸಬ, ಬೆಳಗೊಳ, ಕೆ. ಶೆಟ್ಟಹಳ್ಳಿ ಮತ್ತು ಅರಕೆರೆ ನಾಲ್ಕು ಹೋಬಳಿಗಳಿವೆ, ಸುಮಾರು ಒಂದು ಲಕ್ಷ ಮೀರಿ ಜನಸಂಖ್ಯೆ ಇದೆ. ಮಂಡ್ಯ ಜಿಲ್ಲೆಯಲ್ಲಿಯೇ ಹೆಚ್ಚಿನ ನೀರಾವರಿ ಪ್ರದೇಶವನ್ನೊಳಗೊಂಡ ಶ್ರೀಮಂತ ಪ್ರದೇಶವಾಗಿದೆ.

ಎಂ. ಶಿ. ಕೆಂಪೇಗೌಡ

ಮಳವಳ್ಳಿ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ

ಮಳವಳ್ಳಿ ತಾಲ್ಲೂಕು ಮಂಡ್ಯ ನಗರದಿಂದ ಆಗ್ನೇಯ ದಿಕ್ಕಿನಲ್ಲಿದೆ. ಇದು ಜಿಲ್ಲೆಯ ಅತ್ಯಂತ ದೊಡ್ಡ ತಾಲ್ಲೂಕುಗಳಲ್ಲಿ ಒಂದು. ಈ ತಾಲ್ಲೂಕಿನ ಕೇಂದ್ರ ಪಟ್ಟಣವಾದ ಮಳವಳ್ಳಿಯ ಜನಸಂಖ್ಯೆ ಇಪ್ಪತ್ತೈದು ಸಾವಿರಕ್ಕೂ ಮಿಕ್ಕಿದೆ. ಈ ತಾಲ್ಲೂಕು ನೈಸರ್ಗಿಕವಾಗಿ ವೈವಿಧ್ಯಮಯವಾಗಿದೆ. ಈ ತಾಲ್ಲೂಕು ಬೆಟ್ಟ ಗುಡ್ಡಗಳಿಂದಲೂ ಕಾವೇರಿ ನದಿಯ ಸೀಮಾರೇಖೆಯಿಂದಲೂ ಕೂಡಿದೆ. ನಿಸರ್ಗ ರಮ್ಯ ತಾಣಗಳಾದ ಗಗನಚುಕ್ಕಿ ಮತ್ತು ಬರಚುಕ್ಕಿ ಜಲಪಾತಗಳು, ಸುಪ್ರಸಿದ್ಧ ಮುತ್ತತ್ತಿ ಕ್ಷೇತ್ರ, ಮಂಟೆಸ್ವಾಮಿ ಕ್ಷೇತ್ರ ಇಲ್ಲಿನ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಾಗಿವೆ. ಇಲ್ಲಿನ ವ್ಯವಸಾಯ ಪ್ರಮುಖವಾಗಿ ನೀರಾವರಿ ಮತ್ತು ಮಳೆ ಎರಡನ್ನೂ ಆಶ್ರಯಿಸಿದೆ. ಭಾರತದಲ್ಲೆ ಅತ್ಯಂತ ಹಳೆಯದಾದ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಇಲ್ಲಿನ ಬ್ಲಫ್ ಮತ್ತು ಶಿಂಷಾ ಪುರಗಳಲ್ಲಿ ಕಾಣಬಹುದು. ಮೈಸೂರು ಅರಸರಾದ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಇವು ಆರಂಭವಾದವುಗಳಾಗಿವೆ. ಈ ತಾಲ್ಲೂಕಿನ ಹವಾಮಾನ ರೇಷ್ಮೆ ಕೃಷಿಗೆ ಹಿತಕರವಾಗಿದ್ದು, ಇಡೀ ಮಂಡ್ಯ ಜಿಲ್ಲೆಯಲ್ಲೇ ಇದು ರೇಷ್ಮೆಯ ಉತ್ಪಾದನೆಗೆ ಅಗ್ರ ಸ್ಥಾನದಲ್ಲಿದೆ.

ಐತಿಹಾಸಿಕವಾಗಿ ಮಹತ್ವದ ಘಟನೆಗಳನ್ನು ಕಂಡ ಪಟ್ಟಣ ಮಳವಳ್ಳಿ. ಇದು ವಿಭಿನ್ನ ಕಾಲಗಳಲ್ಲಿ ಗಂಗರ, ಚೋಳರ, ಹೊಯ್ಸಳರ, ವಿಜಯನಗರ ಸಾಮ್ರಾಜ್ಯ ಅರಸರ, ಮುಸ್ಲಿಮರ ಆಳ್ವಿಕೆಗೆ ಒಳಪಟ್ಟಿತ್ತು. ಉನ್ನತ ಇತಿಹಾಸಕ್ಕೆ ಕನ್ನಡಿ ಹಿಡಿಯುವಂತೆ ಇಲ್ಲಿನ ಕೋಟೆಗಳು, ಕಂದಕಗಳು, ದೇವಸ್ಥಾನಗಳು ಮತ್ತು ಶಾಸನಗಳನ್ನು ಕಾಣಬಹುದಾಗಿದೆ. ವಿಜಯನಗರ ಚಕ್ರವರ್ತಿಯಾದ ಶ್ರೀಕೃಷ್ಣದೇವರಾಯನಿಗೂ ಗಂಗವಂಶದ ಉಮ್ಮತ್ತೂರಿನ ರಾಜನಿಗೂ ಈ ಪ್ರದೇಶದಲ್ಲಿ ಯುದ್ಧವಾಗಿ ನಂಜರಾಜ ಸೋತರು ಕಾವೇರಿ ನದಿಗೆ ಹಾರಿದುದನ್ನು [illegible] ಅಲ್ಲೇ ಅವಸಾನ ಹೊಂದುತ್ತಾನಂತೆ. ಈಗಲೂ ಜಲಪಾತದ ಮುಂದಿನ ಕಾವೇರಿ ನದಿಯ ಮಡು 'ಗಂಗರಾಯ ಮಡು' ಎಂಬುದಾಗಿ ಹೆಸರುವಾಸಿಯಾಗಿದೆ. ಹೊಯ್ಸಳರ ವಿಷ್ಣುವರ್ಧನ ಒಂದು ಕಾಲದಲ್ಲಿ ಚೋಳರ ಆಳ್ವಿಕೆಗೆ ಒಳಪಟ್ಟಿದ್ದ ಈ ಸ್ಥಳದಲ್ಲಿ ಪದಾಕ್ರಾಂತವಾಡಿ ಅವರನ್ನು ಸದೆಬಡಿದ ಘಟನೆಯನ್ನು ಇಲ್ಲಿನ ಮಣ್ಣು ಮರೆಯದು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿನ ಮೊಟ್ಟ ಮೊದಲನೆಯ ಮಹಾಯೋಧ ಎಂದು ಕರೆಯಲಾಗುವ

ಟಿಪ್ಪುಸುಲ್ತಾನನು ಬ್ರಿಟಿಷ್ ಚಕ್ರಾಧಿಪತ್ಯದ ಲಾರ್ಡ್‌ವೆಲ್ಲೆಸ್ಲಿಯ ಮೇಲೆ ಕ್ರಿ. ಶ. 1799 ರಲ್ಲಿ ಯುದ್ಧ ಮಾಡಿ ಸೋತ ಘಟನೆ ನಡೆದುದು ಇಲ್ಲಿಯೇ. ತನ್ನ ರಾಜಧಾನಿಯಾದ ಶ್ರೀರಂಗಪಟ್ಟಣದಿಂದ ಅವನು ತಿರುಗಾಡುತ್ತಿದ್ದ ರಸ್ತೆ ಇಲ್ಲಿ ಸುಲ್ತಾನ್ ರಸ್ತೆ ಎಂಬುದಾಗಿಯೇ ಹೆಸರಾಗಿದೆ. ಹೀಗಾಗಿ ರಾಜರುಗಳ ಪರಸ್ಪರ ಹೋರಾಟರಂಗದ ವೇದಿಕೆಯಾಗಿ, ದಾಸ್ಯವಿಮುಕ್ತಿಯ ಪ್ರಥಮ ಪ್ರತಿಭಟನೆಯ ಮೊಳಕೆಯಾಗಿ ಇಲ್ಲಿನ ಪೃಥ್ವಿ ಪುನೀತಳಾಗಿದ್ದಾಳೆ.

ಮಳವಳ್ಳಿ ತಾಲ್ಲೂಕು ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಚಳವಳಿಯಲ್ಲಿ ತನ್ನದೇ ಆದ ಅಳಿಲು ಸೇವೆಯನ್ನು ಸಲ್ಲಿಸಿದೆ. ತಾಲ್ಲೂಕು ಮಟ್ಟದಲ್ಲಿ ಇಲ್ಲಿ ಪ್ರತಿಭಟನೆ ಮುಷ್ಕರಗಳು ನಡೆದುದಲ್ಲದೆ, ಇಲ್ಲಿನ ನಾಯಕರು ಹಳೇ ಮೈಸೂರಿನ ಪ್ರಾದೇಶಿಕ ಮಟ್ಟದಲ್ಲೂ ಹೆಸರು ಗಳಿಸಿದ್ದಾರೆ ಕೆಲವರು ತಾಲ್ಲೂಕಿನಿಂದ ಆಚೆ ವಲಸೆ ಹೋಗಿ ನೆಲೆಸಿ ದುಡಿದಿದ್ದಾರೆ. ಆಗ್ಗಿಂದಾಗ್ಗೆ ತಮ್ಮ ಸ್ವಂತ ತಾಲ್ಲೂಕಿಗೂ ಭೇಟಿ ನೀಡಿ ಸ್ವಾತಂತ್ರ್ಯ ಹೋರಾಟದ ಜ್ವಾಲೆ ನಂದಿ ಹೋಗದಂತೆ ಜನಮನವನ್ನು ಪ್ರೇರೇಪಿಸಿ ದ್ದಾರೆ. ಕೆಲವರು ತಮ್ಮ ಮನೆ ಮಠ ತೊರೆದು ಸ್ವಾರ್ಥವನ್ನು ಬದಿಗೊತ್ತಿ ತಮ್ಮ ಜೀವನವನ್ನೇ ಒತ್ತೆ ಇಟ್ಟು ಹೋರಾಟ ನಡೆಸಿದರೆ ಮತ್ತೆ ಕೆಲವರು ತಮ್ಮ ಜೀವನದ ಚೌಕಟ್ಟಿನಲ್ಲಿ ,ಒದಗಿ ಬಂದ ಸನ್ನಿವೇಶಗಳಿಗೆ ಜೀವ ತುಂಬಿ ಧ್ವನಿ ನೀಡಿ ಹೋರಾಟ ಗಾರರಾಗಿದ್ದಾರೆ. ಕೆಲವರು ನೇರವಾಗಿ ಸ್ವಾತಂತ್ರ್ಯ ಹೋರಾಟದ ಕಣದಲ್ಲಿ ಧುಮುಕಿ ರಾಷ್ಟ್ರ ಪ್ರಜ್ಞೆಯನ್ನು, ಮನಸ್ಸಿನ ಪದರದಲ್ಲಿ ಚಿರಸ್ಥಾಯಿಯಾಗಿ ಉಳಿಸಿಕೊಂಡು ಅಡ್ಡಿ ಆತಂಕಗಳನ್ನು ಲೆಕ್ಕಿಸದೆ ಮುಂದೆ ಸಾಗಿದರೆ, ಇನ್ನು ಕೆಲವರು ಪರೋಕ್ಷವಾಗಿ ತಮ್ಮ ಕೈಲಾದ ಸಹಕಾರವನ್ನು ನೀಡಿದ್ದಾರೆ.

ಸ್ವಾತಂತ್ರ್ಯ ಹೋರಾಟದ ಚಳವಳಿ ಗ್ರಾಮೀಣ ಪ್ರದೇಶಗಳಿಗಿಂತ ಇಲ್ಲಿನ ಪಟ್ಟಣ ಪ್ರದೇಶಗಳಲ್ಲಿ ಇದ್ದುದೇ ಹೆಚ್ಚು. ಪಟ್ಟಣದತ್ತ ಬಂದು ದೇಶ ದಾಸ್ಯದಿಂದ ಬಿಡುಗಡೆ ಗೊಳ್ಳಬೇಕಾದ ಎಚ್ಚರವನ್ನು ಪಡೆದು ತಮ್ಮ ಹಳ್ಳಿಗಳಿಗೆ ಹಿಂದಿರುಗಿ ತಮ್ಮ ತಮ್ಮ ನೆಲೆಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಜನರಲ್ಲಿ ಎಚ್ಚರವನ್ನು ತುಂಬಲು ಪ್ರಯತ್ನಿಸಿದವರೂ ಇದ್ದಾರೆ. ಇಂಥವರು ಪಟ್ಟಣದಲ್ಲಿ ನಡೆದ ಚಳವಳಿಗಳಲ್ಲಿ ನಾಯಕ ಪಾತ್ರವನ್ನು ವಹಿಸಿದುದೂ ಉಂಟು. ಈ ಗುಂಪಿಗೆ ಇಲ್ಲಿನ ಆಗಸನಪುರದ ಲಿಂಗೇಗೌಡರು ಒಟ್ಟನಹಳ್ಳಿಕೊಪ್ಪಲಿನ ಎಚ್. ವಿ. ವೀರೇಗೌಡರು, ಕಾಲೋನಿ ಮರಿಯಪ್ಪನವರು ಮೊದಲಾದವರು ಸೇರುತ್ತಾರೆ.

ಒಂದೆರಡು ಕಿರು ಘಟನೆಗಳನ್ನು ಬಿಟ್ಟರೆ ಇಲ್ಲಿ ನಡೆದು ಹೋದ ಎಲ್ಲ ಮುಷ್ಕರ ಗಳೂ ಚಳುವಳಿಗಳೂ ಹಿಂಸಾತ್ಮಕ ಸ್ವರೂಪವನ್ನು ತಳೆದದ್ದೇ ಅಪರೂಪ. ಇಲ್ಲಿಗೆ ಯಾವ ರಾಷ್ಟ್ರಮಟ್ಟದ ಸ್ವಾತಂತ್ರ್ಯ ಹೋರಾಟದ ನಾಯಕರುಗಳೂ ಭೇಟಿಕೊಟ್ಟ ಪುರಾವೆಗಳಿಲ್ಲ, ಮೇಲಾಗಿ ಇಲ್ಲಿನ ಹಿರಿಯನಾಯಕರಾದ ವೀರಪ್ಪನವರು, ಜೆ. ಲಿಂಗಯ್ಯ

ನವರು ಮೊದಲಾದವರು ತಾಲ್ಲೂಕಿನಿಂದ ಹೊರಗಡೆ ಹೆಚ್ಚಾಗಿ ದುಡಿದಿದ್ದಾರೆ. ಇಂಥ ಹೋರಾಟವಲ್ಲಿ ಮಹಿಳೆಯ ಭಾವನೆ ಹಿಂದೆ ಸರಿದುದು ಗಮನಾರ್ಹ.

1936ರಲ್ಲಿ ಮಳವಳ್ಳಿ ತಾಲ್ಲೂಕಿನಲ್ಲಿ ಕಾಂಗ್ರೆಸ್ ಕಮಿಟಿ ಸ್ಥಾಪನೆಯಾಗಿ ಪುಟ್ಟಸ್ವಾಮಿಗೌಡರು ಅಧ್ಯಕ್ಷರಾಗಿಯೂ, ಮುತ್ತುರಾಯಶೆಟ್ಟರು ಕಾರ್ಯದರ್ಶಿಯಾಗಿಯೂ, ಶೀನಪ್ಪ, ಕೃಷ್ಣಪ್ಪ, ಅಪ್ಪಾಜಿ, ದೊಡ್ಡಣ್ಣ, ಟೈಲರ್‌ನಂಜುಂಡಯ್ಯ ಮತ್ತು ಸುಬ್ಬಯ್ಯ ಇವರುಗಳು ಸದಸ್ಯರುಗಳಾದರು. ಈ ಕಮಿಟಿಯ ಪತಿಯಿಂದ ಭಾಷ್ಯಂಅಯ್ಯಂಗಾರ್ ಎಚ್. ಸಿ. ದಾಸಪ್ಪ, ರಾಜಗೋಪಾಲ್ ಮೊದಲಾದ ಹೊರಗಿನ ನಾಯಕರನ್ನು ಕರೆಸಿ ಉಪನ್ಯಾಸ ಕಾರ್ಯಕ್ರಮವನ್ನು ನಿಯೋಜಿಸಿ ಕೊಂಡಿದ್ದರು. 1939 ರಲ್ಲಿ ತಗಡೂರ ರಾಮಚಂದ್ರರಾಯರ ನೇತೃತ್ವದಲ್ಲಿ ಆದಿ ಕರ್ನಾಟಕರನ್ನು ಮೆರವಣಿಗೆ ಹೊರಡಿಸಿ ಸಾರ್ವಜನಿಕರೆಲ್ಲರೂ ಪಟ್ಟಣದ ನಡುವೆ ಇರುವ (ಈಗ ಬಸ್ ನಿಲ್ದಾಣವಾಗಿರುವ ಸ್ಥಳ) 'ಕುನ್ನೀರು ಕಟ್ಟೆ' ಎಂಬ ಕುಡಿಯುವ ನೀರಿನ ಕೆರೆಯಲ್ಲಿ ಜಾತಿ ಭೇದ ಮರೆತು ನೀರು ಕುಡಿದರು. ಈ ಹಿಂದೆ ಆದಿ ಕರ್ನಾಟಕರಿಗೂ ಸವರ್ಣೀಯ ಹಿಂದೂಗಳಿಗೂ ನೀರು ಮೊಗೆಯುವ ವಿಚಾರದಲ್ಲಿ ಘರ್ಷಣೆ ನಡೆದಿತ್ತು. ಅನಂತರ ಸಂತೆಯ ಮೈದಾನದಲ್ಲಿ ಭಾಷಣ ಕಾರ್ಯಕ್ರಮ ನಡೆದು, ಊರಿನ ಜನರು ರಾಮಚಂದ್ರರಾಯರಿಗೆ ಹಣ ಸಂಗ್ರಹಿಸಿ ಸ್ವಾತಂತ್ರ್ಯ ನಿಧಿ ಸಮರ್ಪಿಸಿದರು. ಈ ಸಂದರ್ಭದಲ್ಲಿಯೇ ಅನೇಕರು ಪ್ರೇರಣೆಗೊಂಡು ವಿದೇಶೀ ವಸ್ತ್ರಗಳನ್ನು ಸುಟ್ಟು ಖಾದಿ ತೊಡಲು ಪ್ರಾರಂಭಿಸಿದರು.

1942 ನೇ ಇಸವಿಯ 'ಕ್ವಿಟ್ ಇಂಡಿಯಾ' ಚಳವಳಿಯ ಬಿಸಿ ಮಳವಳ್ಳಿಗೆ ತೀವ್ರವಾಗಿಯೇ ತಟ್ಟಿತ್ತು. ಕಾಂಗ್ರೆಸ್ ನಾಯಕರು ಸ್ಕೂಲುಮುಚ್ಚಿಸುವ, ಸರ್ಕಾರೀ ಕಟ್ಟಡಗಳಿಗೆ ಬೆಂಕಿಹಚ್ಚಿ ತಂತಿಕತ್ತರಿಸುವ ಕಾರ್ಯಕ್ರಮಗಳನ್ನು ಯೋಜಿಸಿಕೊಂಡರು. ಇಲ್ಲಿನ ಕಾಂಗ್ರೆಸ್ ಮಿತ್ರರೆಲ್ಲ ಆಗಾಗ್ಗೆ ಒಂದೆಡೆ ಕಲೆತು ದೇಶದ ಮಟ್ಟದಲ್ಲಿ ನಡೆಯುತ್ತಿದ್ದ ಘಟನೆಗಳನ್ನು ಮತ್ತು ಬೆಳವಣಿಗೆಗಳನ್ನು ಕುರಿತು ಚರ್ಚಿಸುತ್ತಿದ್ದರು. ಇಂಥ ಸಮಾನ ವಿಚಾರಶೀಲ ಮಿತ್ರರ ಚರ್ಚೆಗೆ ಗ್ರಾಸವನ್ನು ಒದಗಿಸುತ್ತಿದ್ದುವು, ಇವರುಗಳು ಹೊರಗಡೆಯಿಂದ ತರಿಸಿಕೊಳ್ಳುತ್ತಿದ್ದ ಪತ್ರಿಕೆಗಳು. ಕೆಲವು ಗೋಪ್ಯವಾಗಿಯೂ ಕೆಲವು ಬಹಿರಂಗವಾಗಿಯೂ ಇವರನ್ನು ಬಂದು ತಲುಪುತ್ತಿದ್ದುವು. ಇಲ್ಲಿನ ಹೈಸ್ಕೂಲ್ ವಿದ್ಯಾರ್ಥಿಗಳಲ್ಲಿ ಕೆಲವರು ಹೊರಗಡೆ ಕಾಲೇಜು ಓದುತ್ತಿದ್ದು ಊರಿಗೆ ಬಂದು ಸೇರಿದ ಕೆಲವರು ನಾಯಕತ್ವವನ್ನು ವಹಿಸಿ ಅಧ್ಯಾಪಕರುಗಳಿಂದ ತರಗತಿಗಳನ್ನು ಬಿಡಿಸಿಕೊಂಡು ತ್ರಿವರ್ಣ ಧ್ವಜವನ್ನು ಹುಮ್ಮಸ್ಸಿನಿಂದ ಹಾರಿಸಿ ಜನರಲ್ಲಿ ಸ್ವಾತಂತ್ರ್ಯದ ಎಚ್ಚರವನ್ನು ಮೂಡಿಸಿದ್ದಾರೆ. ಪ್ರಾಂತ್ಯದ ಹಿರಿಯ ನಾಯಕರಿಂದ ಮುಷ್ಕರದ ಕರೆಗಳು ಆಗ್ಗಿಂದಾಗ್ಗೆ ಬಂದಾಗ ಇಂಥ ಪ್ರತಿಭಟನೆಗಳು ನಡೆಯುತ್ತಿದ್ದುವು. ಇಂಥ ಮುಷ್ಕರಗಳು ಎಷ್ಟೋ ಸಾರಿ ಶಾಲಾಅಧ್ಯಾಪಕರು

ಗಳಿಂದಲೂ ಪ್ರಚೋದಿತವಾಗಿರುತ್ತಿದ್ದುವು. ಇಂಥ ಅಧ್ಯಾಪಕರಲ್ಲಿ ಸೀತಾರಾಮ ಮಾಸ್ತರು ಒಬ್ಬರು. ಸಿದ್ದೇಗೌಡ, ಮರಿಶೆಟ್ಟರು ಮೊದಲಾದವರು ತಮ್ಮ ಪಾಠಶಾಲೆಯನ್ನು ತೊರೆದು ಮುಷ್ಕರದಲ್ಲಿ ಭಾಗವಹಿಸಿದ ತಪ್ಪಿಗಾಗಿ ಸೆರೆಮನೆವಾಸವನ್ನು ಅನುಭವಿಸಿದ್ದಾರೆ.

1942 ರಲ್ಲಿ ವ್ಯಾಪಕವಾಗಿ ವಿದೇಶೀ ವಸ್ತ್ರವನ್ನು ಸುಡಲಾಯಿತು. ಮಳವಳ್ಳಿಯಲ್ಲಿನ ಹೆಂಡದಂಗಡಿಗೆ ನುಗ್ಗಿ ಧಾಳಿ ಮಾಡಿ ಹೆಂಡವನ್ನೆಲ್ಲಾ ಬಗ್ಗಿಸಿ, ಸುರಿದು ಆ ಅಂಗಡಿಯೇ ಮುಚ್ಚಿಹೋಗುವಂತೆ ಮಾಡಿ ಸರ್ಕಾರದ ಆದಾಯಕ್ಕೆ ಕತ್ತರಿ ಹಾಕಿದರು. ಡಾ: ಪುಟ್ಟಮಾದಪ್ಪನವರು ಬೆಂಗಳೂರಿನಲ್ಲಿ ವೈದ್ಯಕೀಯ ಶಿಕ್ಷಣ ಮುಂದುವರಿಸುತ್ತಿದ್ದು, ಬೆಂಗಳೂರಿನ ಮುಷ್ಕರಗಳಲ್ಲಿ ಸೆರೆಮನೆವಾಸ ಅನುಭವಿಸಿದ್ದಲ್ಲದೆ ತಮ್ಮ ಹುಟ್ಟೂರಿಗೆ ಮರಳಿ ಮುಷ್ಕರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದುಂಟು. ಎಷ್ಟೋ ಜನ ಸಾಮೂಹಿಕವಾಗಿ ಸೈಕಲ್‌ಗಳಿಗೆ ಧ್ವಜ ಕಟ್ಟಿ ಜಯಘೋಷ ಹಾಕುತ್ತಾ ತಿರುಗಾಡಿದ್ದಾರೆ. ನಡೆಯುತ್ತಿರುವ ವಿಧ್ಯಮಾನಗಳನ್ನು ತೀವ್ರವಾಗಿ ಪರಿಗಣಿಸಿದ ಪೋಲೀಸಿನವರು ಕಾರ್ಯಪ್ರವೃತ್ತರಾಗಿ ಕಾಂಗ್ರೆಸ್ ಸುಬ್ಬಣ್ಣ ಡಾ: ಪುಟ್ಟಮಾದಯ್ಯ, ದಫೇದಾರ್ ವೆಂಕಟಪ್ಪನವರ ಮಗ ಪುಟ್ಟಸ್ವಾಮಿ, ಹಲಗೂರು ರಾಮಚಂದ್ರಯ್ಯ, ಭೀಮಯ್ಯ ಮೊದಲಾದವರನ್ನು ಬಂಧಿಸಿ, ಗಡೀಪಾರು ಶಿಕ್ಷೆ ವಿಧಿಸಿದರು. ಇವರುಗಳು ಶಿಕ್ಷೆ ಮುಗಿಸಿ ಮತ್ತೆ ಸ್ವಸ್ಥಾನವನ್ನು ಬಂದು ತಲುಪಿದರು. ಅನಂತರ 1943 ರಿಂದ 46 ರ ವರೆಗೂ ಅನೇಕ ನಾಯಕರುಗಳು ಬಂದು ಉಪನ್ಯಾಸ ಮಾಡಿ ಮುಷ್ಕರ ಆಚರಿಸಿ ಹೋದರು.

1947 ರ ಧ್ವಜ ಮೆರವಣಿಗೆಯಲ್ಲಿ ತಾಲ್ಲೂಕು ಕಮಿಟಿಯ ವೀರೇಗೌಡ ಮತ್ತು ಪುಟ್ಟಸ್ವಾಮಿಗೌಡರು ಪ್ರತ್ಯೇಕವಾಗಿ ಬಂಧಿಸಲ್ಪಟ್ಟರು. ಅನಂತರ ವ್ಯವಸಾಯದ ಕೆಲಸ ಕಾರ್ಯಗಳಲ್ಲಿ ಮಗ್ನರಾಗಿದ್ದ ಕಾಂಗ್ರೆಸ್‌ಸುಬ್ಬಣ್ಣ ಮೊದಲಾದವರು ಶಾಲೆಗಳನ್ನು ಮುಚ್ಚಿಸಿ ಊರ ಬೀದಿಗಳಲ್ಲಿ ಮೆರವಣಿಗೆ ಮಾಡಿ ಪ್ರಪ್ರಥಮ ಭಾರಿಗೆ ತಾಲ್ಲೂಕು ಕಛೇರಿಯ ಮೇಲೆ ಬಾವುಟ ಹಾರಿಸಿದರು. ಆಗ ಸರ್ಕಲ್ ಇನ್ಸ್ಪೆಕ್ಟರ್ ಆಗಿದ್ದ ಗಾಯಕವಾಡ್ ಎಂಬುವರು 'ನಿಮ್ಮ ಕಾರ್ಯಕ್ರಮ ಆಯಿತು. ನಿಮ್ಮ ಗುಂಪನ್ನು ಕರೆದುಕೊಂಡು ಹೋಗಿ' ಎಂದು ಸೂಚಿಸಿದರು. ಸುಮಾರು ಎರಡು ಸಾವಿರದಷ್ಟು ಜನ ಆಗ ಜಮಾಯಿಸಿದ್ದರು. ಜನರು ಅಮಲ್ದಾರರನ್ನು ಎಳೆದು ಹಾಕಿ ನಾವೇ ದರ್ಬಾರು ಮಾಡತ್ತೇವೆಂದು ಆರ್ಭಟಿಸಿದರು. ಇವರನ್ನೆಲ್ಲಾ ಸಮಾಧಾನ ಮಾಡಿದ ಚಳವಳಿ ನಾಯಕರು ತಮ್ಮ ಮನೆಗಳಲ್ಲಿ ಊಟಮಾಡಿ ಕಾಂಗ್ರೆಸ್ ಕಛೇರಿ ತಲುಪುವ ಹೊತ್ತಿಗೆ ಪೋಲೀಸರಿಂದ ಆಕಸ್ಮಿಕವಾಗಿ ಬಂಧಿತರಾದರು. ಬಂಧಿತರಾದವರಲ್ಲಿ ಮುಖ್ಯರಾದವರು ಮುತ್ತುರಾಯಶೆಟ್ಟರು, ಅಗಸನ ಪುರದ ಲಿಂಗೇಗೌಡರು, ಮರಿಶೆಟ್ಟರ ಮಗ ರಾಜಶೇಖರ, ಮಾದಪ್ಪನವರ ಮಗಟೈಲರ್

ನರಸಿಂಹಯ್ಯ, ಇಂಜಿನಿಯರ್ ಅಪ್ಪಾಜಿ, ಬಿ. ಎಸ್. ಸಿದ್ದಪ್ಪ, ಮಾಯಣ್ಣ, ಕಾಲೋನಿಮರಿಯಪ್ಪ, ಸುಂದರರಾಜು, ಅಕ್ಕಿವ್ಯಾಪಾರಿ ಹುಚ್ಚಯ್ಯನವರ ಮಗ ಅಪ್ಪಾಜಿ, ದಫೇದಾರ್ ಮುತ್ತಯ್ಯನವರ ಮಗ ನಂಜಯ್ಯ, ಸಿದ್ದೇಗೌಡ ಮೊದಲಾದವರು. ವ್ಯಾನ್‌ನಲ್ಲಿ ಒಯ್ಯುವಾಗ ಮಳೆ ಸುರಿಯುತ್ತಿದ್ದರೂ ಹೂವೆರಚಿ ಮೂರು ಫರ್ಲಾಂಗ್ ನಡೆದು ಬಂದು ಜನರು ಸ್ವಾತಂತ್ರ್ಯ ಯೋಧರನ್ನು ಜೈಲಿಗೆ ಬೀಳ್ಕೊಟ್ಟರು. ಈ ಅವಧಿಯಲ್ಲಿ ಬಂಧಿತರನ್ನು ಸೆರೆಮನೆಯಲ್ಲಿ ಅತ್ಯುತ್ತಮವಾಗಿ ನೋಡಿಕೊಂಡರೆಂಬುದು ನಿವೃತ್ತ ಮುಖ್ಯೋಪಾಧ್ಯಾಯರಾದ ಸಿದ್ದೇಗೌಡರ ಅಭಿಪ್ರಾಯ.

ಕೆಲವರು ಉದ್ದೇಶಪಟ್ಟು ಹೋರಾಟ ನಡೆಸಿ ಬಂಧನಕ್ಕೆ ಒಳಗಾಗಿ ಸೆರೆಮನೆಯ ಶಿಕ್ಷೆಯನ್ನು ಅನುಭವಿಸಿದರೆ, ಕೆಲವರು ಸಮಯ ಸ್ಫೂರ್ತಿಯಿಂದ ಹೋರಾಟ ನಡೆಸಿ ಸೆರೆಮನೆಯ ಶಿಕ್ಷೆಗೆ ಒಳಗಾಗದವರುಂಟು. ಇದಕ್ಕೆ ಅವರದೇ ಕೌಟುಂಬಿಕ ಕಾರಣಗಳನ್ನು ಕೆಲವರು ಹೇಳುವುದೂ ಉಂಟು. ಬಂಧಿತವಾಗುವ ಸಂದರ್ಭಗಳಲ್ಲಿ ಇಂಥವರು ಉಪಾಯವಾಗಿ ತಪ್ಪಿಸಿಕೊಳ್ಳುತ್ತಿದ್ದರು. ಊರನ್ನು ಬಿಟ್ಟ ಕೆಲವರು ತಮ್ಮ ಇಳಿವಯಸ್ಸಿನಲ್ಲಿ ಸ್ವಂತಸ್ಥಳಕ್ಕೆ ಮರಳಿದ್ದಾರೆ ಹೋರಾಟದಲ್ಲಿ ನಿಷ್ಠಾವಂತರಾಗಿ ಸೇವೆ ಸಲ್ಲಿಸಿದ ಕೆಲವರಿಗೆ ಚುನಾವಣೆಗಳಲ್ಲಿ ಕಾಂಗ್ರೆಸ್‌ನಿಂದ ಸೀಟು ಸಿಗದೆ ನಿರಾಶರಾದದ್ದುಂಟು. ಸ್ವಾತಂತ್ರ್ಯ ಪೂರ್ವ ಚುನಾವಣೆಗಳಲ್ಲಿ ಎಷ್ಟೋ ಜನರ ನಾಮಪತ್ರಗಳು ತಿರಸ್ಕೃತವಾಗಿ ಅವರು ಹತಾಶರಾಗಿ ಕೊನೆಗೆ ಅಧಿಕಾರಶಾಹಿ ವಿರುದ್ಧ ಹೋರಾಟಮಾಡಿ ಹಣ, ಕಾಲ ಶ್ರಮವನ್ನು ವ್ಯಯಿಸಿದ್ದಾರೆ. ಬ್ರಿಟಿಷರ ವಿರುದ್ಧವಾಗಿ ಸ್ವಾತಂತ್ರ್ಯ ಹೋರಾಟಗಾರರಿಗೆ ಇದೂ ಒಂದು ಹೋರಾಟ ರಂಗವೇ ಆಗಿದೆ. ಅರ್ಹರಾದವರ ಮತ್ತು ಹೋರಾಟಗಾರರ ನಾಮ ಪತ್ರಗಳನ್ನು ಕ್ಷುಲ್ಲಕಾತ್ಮಕವಾಗಿ ಮಾಡುವುದು ಬ್ರಿಟಿಷ್ ಅಧಿಕಾರಷಾಹಿಗೆ ಒಂದು ವಿನೋದವಾಗಿತ್ತು. ಅವರಿಗೆ ತಮ್ಮ ಮಾತುಗಳನ್ನೇ ಕೇಳುವ ಅಭ್ಯರ್ಥಿಗಳೇ ಬೇಕಾಗಿದ್ದರು. ಅಂಥವರ ನಾಮಪತ್ರಗಳು ಬೇಗ ಅಂಗೀಕಾರದ ಮುದ್ರೆಯನ್ನು ಪಡೆಯುತ್ತಿದ್ದುವು.

ದೇಶಕ್ಕಾಗಿ ಹೋರಾಟ ಮಾಡಿ ಸರ್ವಸ್ವವನ್ನೂ ಕಳೆದುಕೊಂಡ ಸ್ವಾತಂತ್ರ್ಯ ಹೋರಾಟಗಾರರ ಮಕ್ಕಳು ಇಂದು ನಿರ್ಗತಿಕರಾಗಿ ಬಾಳು ನೂಕುತ್ತಿರುವುದನ್ನು ನೋಡಬಹುದು. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ ಮಾಡಿದ ಅಲ್ಪ ಸೇವೆಯನ್ನೇ ಅಬ್ಬರವಾಗಿ ಪ್ರಚಾರಿಸಿಕೊಂಡು ಪ್ರತಿಷ್ಠೆ ಬೆಳೆಸಿಕೊಂಡವರನ್ನೂ ಕಾಣಬಹುದು. ಈ ಹೋರಾಟದ ಹೆಸರಿನಲ್ಲೇ ಸಾಕಷ್ಟು ಆಸ್ತಿ ಪಾಸ್ತಿ ಸಂಪಾದಿಸಿಕೊಂಡವರನ್ನೂ ಇಲ್ಲಿ ಕಾಣಬಹುದಾಗಿದೆ.

ಮಳವಳ್ಳಿ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟದಲ್ಲಿ ಅವಿಶ್ರಾಂತವಾಗಿ ದುಡಿದ ನಾಯಕ ಮಹನೀಯರುಗಳೆಂದರೆ ಮಳವಳ್ಳಿ ವೀರಪ್ಪನವರು ಮತ್ತು ಕಾಂಗ್ರೆಸ್

ಸುಬ್ಬಣ್ಣನವರು. ವೀರಪ್ಪನವರು ಸ್ವಾತಂತ್ರ್ಯ ಹೋರಾಟದಲ್ಲಿ ದಿಟ್ಟ ಹೆಜ್ಜೆಯನ್ನು ಇಟ್ಟವರು. ಈ ಕ್ಷೇತ್ರದಲ್ಲಿ ಇವರದು ನಿಸ್ವಾರ್ಥ ಹೋರಾಟ. ಮನೆ ಮಠ ಯಾವುದನ್ನು ಇವರು ಲೆಕ್ಕಿಸಲಿಲ್ಲ. ತಮ್ಮ ಸ್ವಂತ ತಾಲ್ಲೂಕಿನಲ್ಲಿ ಉರಿಯುತ್ತೊಡಗಿದ ಇವರ ಮನೋದಯವಾದ ಸ್ವಾತಂತ್ರ್ಯ ಜ್ಯೋತಿ ತಾಲ್ಲೂಕನ್ನೂ ಮೀರಿ ರಾಜ್ಯ ಮಟ್ಟಕ್ಕೆ ವ್ಯಾಪಿಸಿತು. ಕಾಂಗ್ರೆಸ್ಸಿನ ಮೌಲ್ಯ ನಿಷ್ಠೆಗಳ ಮುಂದೆ ಇವರಿಗೆ ಏನೂ ಬೇಡವಾಯಿತು. ಅನೇಕ ಹಿರಿಯರ ಪರಿಚಯ ಸಹಚರ ಮಿತ್ರರ ಆಸರೆ, ಇವರ ಇನ್ನೂ ಆದಾರಿಯಲ್ಲಿ ಭದ್ರವಾಗಿ ನಿಲ್ಲುವಂತೆ ಮಾಡಿತು. ಮಳವಳ್ಳಿಯಲ್ಲಿನ ಅನೇಕರಿಗೆ ಆ ಕಾಲದಲ್ಲಿ ಸ್ವಾತಂತ್ರ್ಯದ ಹುಚ್ಚು ಹಿಡಿಸುವ ಕೆಲಸವನ್ನು ತೀವ್ರವಾಗಿ ಮಾಡಿದವರು ವೀರಪ್ಪನವರು. ತಮಗಿಂತ ಕಿರಿಯರಿಗೆ ಸೂಕ್ತ ಮಾರ್ಗದರ್ಶನ ಮಾಡುತ್ತಾ ಪಟ್ಟಣಗಳಲ್ಲಿ ಚಳವಳಿ, ಪ್ರತಿಭಟನೆ ಮೊದಲಾದುವನ್ನು ನಡೆಸುತ್ತಿದ್ದರು.

ವೀರಪ್ಪನವರು ಜನಿಸಿದ್ದು 1899 ನೇ ಇಸವಿಯಲ್ಲಿ. ಇವರ ತಂದೆ ಕರಿಗಿರಿ ವೀರಪ್ಪನವರು ವೀರಪ್ಪನವರು ಬದುಕಿನಲ್ಲಿ ಆಶ್ರಯ ಪಡೆದ ಮುಖ್ಯ ಕಸಬು ವ್ಯಾಪಾರ. ಇವರ ಉಪಕಸಬು ವ್ಯವಸಾಯ. ಇವರು ಇಂಟರ್ ಮೀಡಿಯಟ್‌ವರಗೂ ವ್ಯಾಸಂಗ ಮಾಡಿದ್ದಾರೆ, ತಗಡೂರು ರಾಮಚಂದ್ರರಾಯರ ಮಾರ್ಗದರ್ಶನದಲ್ಲಿ ಮಳವಳ್ಳಿಯ ಸಂತೇಮಾಳದಲ್ಲಿ ವಿದೇಶೀ ಮಿಲ್ ಬಟ್ಟೆಯನ್ನು ಸುಟ್ಟು ಎಲ್ಲರ ಸಮ್ಮುಖದಲ್ಲಿ ಖಾದಿ ವಸ್ತ್ರಧರಿಸಿ ದೀಕ್ಷಾಬದ್ಧರಾದರು. ಅಂದಿನಿಂದ ದೇಶದ ಬಿಡುಗಡೆಯೇ ಇವರ ಮಂತ್ರವಾಯಿತು. ಖಾದಿಯನ್ನೇ ಜೀವನದ ಕೊನೆಯವರೆಗೂ ಉಳಿಸಿಕೊಂಡರು ಮತ್ತು ಸರಳವಾದ ಬದುಕನ್ನು ರೂಪಿಸಿಕೊಂಡರು. ಆಗಿಂದಾಗ್ಗೆ ಮಳವಳ್ಳಿ ಪಟ್ಟಣದಲ್ಲಿ ಉಪನ್ಯಾಸಗಳನ್ನು ಏರ್ಪಡಿಸಿ ಜನಮನವನ್ನು ಎಚ್ಚರಗೊಳಿಸುತ್ತಿದ್ದರು. ಕಾಂಗ್ರೆಸ್ ಸುಬ್ಬಣ್ಣನವರ ಜತೆ ಮಳವಳ್ಳಿಯ ತಾಲ್ಲೂಕು ಕಛೇರಿಯ ಮೇಲೆ ಬಾವುಟ ಹಾರಿಸುವುದರಲ್ಲಿ ಹೆಚ್ಚಿನ ಧೈರ್ಯ ತೋರಿದರು. ಇವರ ಪ್ರತಿಭಟನೆಯನ್ನು ತಾಳಿಕೊಳ್ಳದ ಸರ್ಕಾರ 1937ರಲ್ಲಿ ಪ್ರಥಮಬಾರಿಗೆ ಇವರನ್ನು ಬಂಧಿಸಿತು. 1938ರಲ್ಲಿ ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ ಹನುಮಂತಯ್ಯನವರ ಜೊತೆ ಸೆರೆಮನೆಯಲ್ಲಿ ಕಠಿಣ ಶಿಕ್ಷೆ ಅನುಭವಿಸಿದರು. 1939ರಲ್ಲಿ ರಾಜದ್ರೋಹದ ಆರೋಪವನ್ನು ಹೊರಿಸಿದ ಸರ್ಕಾರ ಐದೂವರೆ ವರ್ಷ ಕಾರಾಗೃಹ ವಾಸ ವಿಧಿಸಿತು. ಒಂದೂವರೆ ವರ್ಷದಲ್ಲೇ ಇವರ ಬಿಡುಗಡೆ ಆಯಿತು. ತುಮಕೂರಿನಲ್ಲಿ ಸ್ವಾತಂತ್ರ್ಯ ಹೋರಾಟದ ಬಗೆಗೆ ಬಹಿರಂಗ ಭಾಷಣ ಮಾಡಿದುದೇ ಈ ಶಿಕ್ಷೆಗೆ ಕಾರಣ. 1942 ರಲ್ಲಿ ಕ್ವಿಟ್ ಇಂಡಿಯಾ ಚಳವಳಿಯ ಮುಂಬೈ ಅಧಿವೇಶನವನ್ನು ಮುಗಿಸಿಕೊಂಡು ಬೆಂಗಳೂರಿಗೆ ಹಿಂತಿರುಗಿದಾಗ ಇವರನ್ನು ಯಶವಂತಪುರದ ರೈಲ್ವೆ ನಿಲ್ದಾಣದ ಬಳಿ ಆಗಸ್ಟ್ 8 ರಂದು ಬಂಧಿಸಿದರು. ಇವರ ಜೊತೆಯಲ್ಲಿ ತಾಳಿಕೆರೆ ಸುಬ್ರಮಣ್ಯಂ. ಕೆ.ಟಿ. ಭಾಷ್ಯಂ ಎಸ್. ನಿಜಲಿಂಗಪ್ಪ, ತಿಮ್ಮಾರೆಡ್ಡಿ ಮೊದಲಾದವರೂ ಬಂಧಿತರಾದರು.

1947 ರ ಮೈಸೂರು ಚಲೋಜಾವ್ ಚಳವಳಿಯಲ್ಲೂ ಭಾಗವಹಿಸಿ ಬಂಧನಕ್ಕೆ ಒಳಗಾದರು. ಜೈಲಿನಲ್ಲಿದ್ದಾಗ ಪತ್ನಿ ಮತ್ತು ಪುತ್ರಿಯ ವಿಯೋಗವಾದಾಗ್ಯೂ ಇವರುಗಳ ಸಂಸ್ಕಾರದಲ್ಲಿ ಶ್ರೀಯುತರಿಗೆ ಭಾಗವಹಿಸಲು ಸರ್ಕಾರ ಅನುಮತಿ ನೀಡಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಸ್ಥಳೀಯ ಕಾಂಗ್ರೆಸ್ಸಿಗರ ಅಧಿಕಾರ ಲಾಲಸೆಯಿಂದ ಬೇಸತ್ತರು, 1957 ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ದೊರೆಯದೆ ನಿರಾಶರಾದರೂ ಧೈರ್ಯ ಗುಂದಿದವರಲ್ಲ. ಮಲೀರಿಯಾದ ಸೋಂಕೆಂಬ ಅನುಮಾನದಿಂದ ಜನ ಒಡೆದು ಹಾಕಿದ ಕೆರೆಯನ್ನು ಹನುಮಂತಯ್ಯನವರು ಮುಖ್ಯ ಮಂತ್ರಿಯಾಗಿದ್ದಾಗ ಹೋರಾಟ ನಡೆಸಿ ಪುನರ್ ನಿರ್ಮಾಣ ಮಾಡಿಸಿದರು. ಇದಲ್ಲದೆ ಕನಕಪುರದ ಕಡೆಗಿನ ಮಳವಳ್ಳಿ ಪಟ್ಟಣದ ಪೂರ್ವದಿಕ್ಕಿನ ರಸ್ತೆ, ಹೆಬ್ಬಳ್ಳ ನಾಲೆಯ ರಚನೆ ಇವರ ಪರಿಶ್ರಮದ ಫಲವೇ ಆಗಿದೆ. ದೇಶಕ್ಕಾಗಿ ಮನೆ ಮಠ ಕಳೆದುಕೊಂಡ ಇವರು ಅದಕ್ಕಾಗಿಪೆಚ್ಚು ಕೊರಗಿದವರೂ ಅಲ್ಲ. ಶ್ರೀಯುತರು ದಿನಾಂಕ 6–2–1968 ರಂದು ದಿವಂಗತರಾದರು. ಇಂತಹ ಸ್ವಾತಂತ್ರ್ಯ ಹೋರಾಟಗಾರರ ಮಕ್ಕಳಾದ ಎಂ ವಿ ನಾರಾಯಣ, ಎಂ.ವಿ. ಕೃಷ್ಣಪ್ಪ ಮೊದಲಾದವರು ಲಾಟರಿ ಟಿಕೆಟ್ ಮಾರಾಟ ಮಾಡಿಕೊಂಡು ಜೀವನ ಸಾಗಿಸಬೇಕಾದ ಪರಿಸ್ಥಿತಿ ಬಂದಿದೆ.

ಇಡೀ ಹಳೇ ಮೈಸೂರು ಪ್ರಾಂತ್ಯದಲ್ಲಿ ಸ್ವಾತಂತ್ರ್ಯ ಚಳವಳಿಯ ಹೋರಾಟದ ಅಂಗವಾಗಿ ತಾಲ್ಲೂಕು ಕಛೇರಿಯ ಮೇಲೆ ತ್ರಿವರ್ಣ ಧ್ವಜವನ್ನು ಪ್ರಪ್ರಥಮ ಭಾರಿಗೆ ಏರಿಸಿದ್ದು ಮಳವಳ್ಳಿ ಪಟ್ಟಣದಲ್ಲಿಯೇ ಎನ್ನಬಹುದು. ಇದು 1947 ನೇ ಇಸವಿಯಲ್ಲಿ ನಡೆಯಿತು. ಈ ಪ್ರಕರಣದಲ್ಲಿ ಧೈರ್ಯವಾಗಿ ಹೋರಾಡಿ ಮುನ್ನುಗ್ಗಿ ದವರೆಂದರೆ ಕಾಂಗ್ರೆಸ್ ಸುಬ್ಬಣ್ಣನವರು. ಇವರು ಮಳವಳ್ಳಿ ತಾಲ್ಲೂಕಿನ ಹೊರಗಡೆ ಕೆಲಸ ಮಾಡಿರುವುದಲ್ಲದೆ ತಾಲ್ಲೂಕಿನೊಳಗೂ ಇದ್ದುಕೊಂಡು ಸಾಕಷ್ಟು ಕೆಲಸ ಮಾಡಿದವರು. 1901 ರಲ್ಲಿ ಜನಿಸಿದ ಸುಬ್ಬಣ್ಣನವರು 1929 ರಿಂದಲೇ ಕಾಂಗ್ರೆಸ್‌ನ ಚಟುವಟಿಕೆಗಳಲ್ಲಿ ಆಸಕ್ತರಾಗಿ 1932 ರಲ್ಲಿ ಕಾಂಗ್ರೆಸ್‌ನ ನಾಲ್ಕಾಣೆ ಸದಸ್ಯರಾದರು. 1934 ರಲ್ಲಿ ಎಚ್. ಕೆ. ವೀರಣ್ಣಗೌಡ ಮತ್ತು ಮಹಾಬಲರಾಯರ ಪ್ರೇರಣೆಯಂತೆ ಕಾಂಗ್ರೆಸ್‌ನ ಸಕ್ರಿಯ ಸದಸ್ಯರಾಗಿ ಕ್ರಿಯಾತ್ಮಕವಾಗಿ ದುಡಿಯ ತೊಡಗಿದರು. 1938 ರಲ್ಲಿ ನಡೆದ ಶಿವಪುರದ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ ಆದಿ ಕರ್ನಾಟಕ ಹುಡುಗರು ಊಟ ಬಡಿಸುವ ಸಾಲಿನಲ್ಲಿ ಕುಳಿತು ಊಟ ಮಾಡಿ ಊರಿಗೆ ಮರಳಿದರು.

1940 ರಲ್ಲಿ ಬಂದೀಗೌಡರು ಮತ್ತು ಸಾಹುಕಾರ್ ಚನ್ನಯ್ಯನವರ ಪ್ರೇರಣೆ ಯಂತೆ 250 ರೂ. ಫೀ ತುಂಬಿ, ಅರ್ಜಿ ಸಲ್ಲಿಸಿ ಅಸೆಂಬ್ಲಿ ಚುನಾವಣೆಗೆ ನಿಂತರು. ಇವರ ಅರ್ಜಿ ತಿರಸ್ಕೃತವಾಯಿತು. ಲಾಯರ್‌ಗೆ ಶುಲ್ಕ ತುಂಬಿ ಕೋರ್ಟಿಗೆ ಹೋದರು. ತೀರ್ಪು ಇವರ ಪರವಾಯಿತು. ಸರ್ಕಾರ ಹೈಕೋರ್ಟ್‌ಗೆ ಹೋಯಿತು, ಜನ್ಮ ದಿನಾಂಕದ ಬಗೆಗೆ ಸರಿಯಾದ ಸ್ಪಷ್ಟೀಕರಣ ಇಲ್ಲ ವಾದುದಾಗಿ ಕೋರ್ಟು ಇವರ

ವಿರುದ್ಧ ತೀರ್ಪು ನೀಡಿ ಇನ್ನೂರು ರೂಪಾಯಿಗಳ ಪರಿಹಾರ ಕೇಳಿತು. ಹೀಗಾಗಿ ಕೋರ್ಟಿನ ಮಟ್ಟದಲ್ಲೂ ಸರ್ಕಾರದ ವಿರುದ್ಧ ಹೋರಾಟ ನಡೆಸಿದವರೆಂದರೆ ಸುಬ್ಬಣ್ಣನವರು. 1942 ರ ಚಳವಳಿಯಲ್ಲಿ ಬಂಧಿತರಾಗಿ ಆರು ತಿಂಗಳು ಜಿಲ್ಲೆಯಿಂದಲೇ ಇವರನ್ನು ಗಡೀಪಾರು ಮಾಡಿದರು. ಇವರು ಬೆಂಗಳೂರು ಅರಸೀಕೆರೆ, ಹುಬ್ಬಳ್ಳಿ, ಬಾಗಲಕೋಟೆ, ವಿಜಾಪುರ, ಪಂಡರಾಪುರ ಮೊದಲಾದ ಸ್ಥಳಗಳನ್ನು ಸುತ್ತಿ 1943 ನೇ ಇಸವಿಯಲ್ಲಿ ಊರಿಗೆ ಹಿಂತಿರುಗಿದರು. ಸ್ವಾತಂತ್ರ್ಯ ಹೋರಾಟದ ದೆಸೆಯಿಂದ ಸುಬ್ಬಣ್ಣನವರು ಸಾಕಷ್ಟು ಆಸ್ತಿಯನ್ನೂ ಕಳೆದುಕೊಂಡಿದ್ದಾರೆ.

ಗ್ರಾಮೀಣ ಸಮುದಾಯದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಸಾಕಷ್ಟು ಕೆಲಸ ಮಾಡಿದವರೆಂದರೆ ಪಿಟ್ಟನಹಳ್ಳಿ ಕೊಪ್ಪಲು ವೀರೇಗೌಡರು. ಇವರು ಕಾಂಗ್ರೆಸ್ ಸಕ್ರಿಯಾ ಕಾರ್ಯಕರ್ತರಾಗಿ 1942 ಮತ್ತು 1947ರ ಚಳವಳಿಯಲ್ಲಿ ಹೋರಾಟ ನಡೆಸಿ ಸೆರೆಮನೆ ವಾಸ ಅನುಭವಿಸಿದವರು. ತಾಲ್ಲೂಕಿನ ಅನೇಕರು ಇವರಿಂದ ಪ್ರೇರಣೆ ಪಡೆದದ್ದೂ ಇದೆ. ಸಾಹುಕಾರ್ ಚನ್ನಯ್ಯ ಮತ್ತು ಬಂದೀಗೌಡರ ಸೂಚನೆಯಂತೆ ಜಿಲ್ಲಾಬೋರ್ಡ್‌ಗೆ ನಿಂತು ಗೆದ್ದರು. ಮುಂದೆಯೂ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ತಾಲ್ಲೂಕಿನ ಅಭಿವೃದ್ಧಿಯಲ್ಲಿ ಸಾಕಷ್ಟು ದುಡಿದವರಾಗಿದ್ದಾರೆ.

ತಾವು ಮಾಡುತ್ತಿದ್ದ ವೈದ್ಯಕೀಯ ವಿದ್ಯಾಭ್ಯಾಸವನ್ನು ತಾತ್ಕಾಲಿಕವಾಗಿ ಮುಂದೂಡಿ ಸ್ವಾತಂತ್ರ್ಯ ಚಳವಳಿಯಲ್ಲಿ ಹೋರಾಡಿದವರೆಂದರೆ ಡಾ: ಎಂ. ಎನ್. ಪುಟ್ಟಮಾದಯ್ಯ. 1942 ರ 'ಮಾಡು ಅಥವಾ ಮಡಿ' ಚಳವಳಿಯಲ್ಲಿ ಬೆಂಗಳೂರಿನಲ್ಲಿ ಹೋರಾಟಗಾರರ ಮೇಲೆ ಗುಂಡಿನ ಮಳೆ ಕರೆದಾಗ ಗಾಯಗೊಂಡವರ ಶುಶ್ರೂಸೆಯಲ್ಲಿ ನೆರವಾದವರು. ಪ್ರೌಢಶಾಲಾ ವಿದ್ಯಾರ್ಥಿಗಳು ನಡೆಸಿದ ಮುಷ್ಕರದಲ್ಲಿ ಹಲಗೂರು ರಾಮಚಂದ್ರೇಗೌಡ, ಕಂಚನ ಹಳ್ಳಿ ಭೀಮಯ್ಯ, ಎಂ. ವಿ. ಪುಟ್ಟಸ್ವಾಮಿ ಮೊದಲಾದವರ ಜೊತೆ ಇವರನ್ನೂ ಬಂಧಿಸಿ ಮೈಸೂರು ಸಬ್ ಜೈಲಿಗೆ ಡೆಟಿನ್ಯೂಗಳಾಗಿ ಹಾಕಿದರು. ಜೈಲಿನ ಆವರಣದಲ್ಲಿ ಪ್ರತಿಭಟನೆ ಮುಷ್ಕರಗಳನ್ನು ಆಚರಿಸಿದರು. ಲಾಠಿಚಾರ್ಜಿನಲ್ಲಿ ಶಂಕರಪ್ಪ ಎಂಬ ಮರಿಮಲ್ಲಪ್ಪ ಪ್ರೌಢಶಾಲೆಯ ವಿದ್ಯಾರ್ಥಿಗೆ ಎದೆ ಗೂಡಿನ ಮೂಳೆ ಮುರಿದು ಕೆಮ್ಮುವಾಗ ಶ್ವಾಸಕೋಶದಿಂದ ರಕ್ತ ಬರುತ್ತಿತ್ತು. ಇವರು ಆತನನ್ನು ಅತಿ ಆಸಕ್ತಿಯಿಂದ ಉಪಚರಿಸಿದರು. ಪೋಲೀಸರ ಸುಳ್ಳು ದಾಖಲೆಗಳಿಗೆ ರುಜು ಹಾಕಲು ನಿರಾಕರಿಸಿದರು. ಇವರ ತಂದೆ ತಾಯಿಗಳು ಇವರನ್ನು ಸೆರೆಮನೆಯಿಂದ ಬಿಡಿಸಿಕೊಳ್ಳಲು ಪ್ರಯತ್ನಪಟ್ಟಾಗ ಜೈಲು ಅಧಿಕಾರಿಗಳಿಗೆ ಕ್ಷಮಾಪಣಾ ಪತ್ರ ಬರೆದುಕೊಡಲು ನಿರಾಕರಿಸಿದರು. ಇವರನ್ನು ಆನಂತರ ಸ್ವಲ್ಪ ಕಾಲ ಸಿಂಗಲ್ ಸೆಲ್‌ನಲ್ಲಿ ಇರಿಸಿದ್ದರು. ಮೈಸೂರು ಹುಣಸೂರು ರಸ್ತೆಯ ಬೇರೊಂದು ಸೆರೆಮನೆಯ ಕಟ್ಟಡಕ್ಕೆ ಇವರನ್ನು ವರ್ಗಾಯಿಸಿ ಅನಂತರ ನವೆಂಬರ್ 1942 ರಲ್ಲಿ ಬಿಡುಗಡೆ ಮಾಡಿದರು. 1947 ರಲ್ಲಿ ಮೈಸೂರು ಚಲೋ ಚಳವಳಿಯಲ್ಲಿ

ಬೆಂಗಳೂರಿನ ಹಾಸ್ಟೆಲ್‌ನಲ್ಲಿ ಬಂಧಿತರಾದರು. 1948 ರಲ್ಲಿ ತಮ್ಮ ವೈದ್ಯಕೀಯ ಶಿಕ್ಷಣ ಮುಗಿಸಿ ಸ್ವಲ್ಪ ಕಾಲ ಸರ್ಕಾರಿ ಸೇವೆಯಲ್ಲಿದ್ದು ಆಮೇಲೆ ಸ್ವತಂತ್ರ ಡಾಕ್ಟರಾಗಿ ಉದ್ಯೋಗ ನಡೆಸುತ್ತಿದ್ದಾರೆ.

ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಅಧ್ಯಕ್ಷರೇ ಶ್ರೀ ಕಾಲೋನಿ ಮರಿಯಪ್ಪನವರು. 1920ನೇ ಇಸವಿಯಲ್ಲಿ ಜನಿಸಿದ ಇವರು ಮುಂದೆ ಕಾಂಗ್ರೆಸ್ ಚಟುವಟಿಕೆಯಲ್ಲಿ ಆಸಕ್ತರಾದರು. 1942 ಮತ್ತು 47ರ ಚಳವಳಿಯಲ್ಲಿ ಸೆರೆಮನೆಗೆ ಹೋಗಿದ್ದವರು. ಕೆ. ವಿ. ವೀರಪ್ಪ, ಎಚ್. ಸಿ. ದಾಸಪ್ಪ, ಟಿ. ಮರಿಯಪ್ಪ ಇವರುಗಳೇ ತಮ್ಮ ರಾಜಕೀಯ ಗುರುಗಳೆಂದು ಇವರು ಹೇಳುತ್ತಾರೆ.

ಅಗಸನ ಪುರದ ಲಿಂಗೇಗೌಡರು, ಬಸವಾಪುರದ ಶಿವಲಿಂಗೇಗೌಡರು ಪಟ್ಟಣದ ಮಟ್ಟದಿಂದ ಗ್ರಾಮಿಣ ಮಟ್ಟದವರೆಗೆ ಸ್ವಾತಂತ್ರ್ಯ ಹೋರಾಟದ ಜ್ಯೋತಿಯನ್ನು ನಂದದಂತೆ ಕಾಪಾಡಿದವರು. ಗ್ರಾಮ ಮಟ್ಟದಲ್ಲೂ ತಮ್ಮ ತಮ್ಮ ಸ್ಥಳಗಳಲ್ಲಿ ಚಳುವಳಿಯ ಕಾವು ಆರದಂತೆ ನೋಡಿಕೊಂಡವರು ಮತ್ತು ಸೆರೆಮನೆ ವಾಸ ಕಂಡವರು.

1939 ನೇ ಇಸವಿಯಿಂದಲೂ ಕಾಂಗ್ರೆಸ್ ಸದಸ್ಯರಾಗಿ ಹೋರಾಟ ಮಾಡಿ, 1942 ಮತ್ತು 47ರ ಚಳವಳಿಗಳಲ್ಲಿ ಕಾಂಗ್ರೆಸ್ ಸಂಬ್ಬಯ್ಯನವರ ಜತೆ ಓಡಾಡಿ ಸೆರೆಮನೆ ಕಾಣದೆ ದುಡಿದವರೆಂದರೆ ಚನ್ನೇಗೌಡನ ದೊಡ್ಡಿಯ ಬಂದಿಗೇಗೌಡರು. ಮಳವಳ್ಳಿಯ ಎಚ್. ಕೆ. ರಾಮಚಂದ್ರಯ್ಯನವರು ಜೈಲು ಕಾಣದಿದ್ದರೂ ಸೈಕಲ್‌ಗೆ ಧ್ವಜ ಕಟ್ಟಿ ಮೈಸೂರಿನಲ್ಲಿ ಓಡಾಡಿ, ಸ್ವಾತಂತ್ರ್ಯಾಭಿಮಾನವನ್ನು ಮೆರೆದವರು. ಮಳವಳ್ಳಿ ವೆಂಕಟಪ್ಪನವರು ಸ್ವಾತಂತ್ರ್ಯ ಹೋರಾಟಗಾರರಿಗೆ ಪರೋಕ್ಷವಾಗಿ ನೆರ ವಾದವರು. ಮುತ್ತುರಾಯ ಶೆಟ್ಟರು ಹಳೆಯ ತಲೆಮಾರಿನ ನಿಷ್ಠಾವಂತ ಹೋರಾಟ ಗಾರರು. ಎಷ್ಟೋ ಜನಕ್ಕೆ ಪ್ರೇರಕರು, ಮಳವಳ್ಳಿ ವಿದ್ಯಾರ್ಥಿ ಕಾಂಗ್ರೆಸ್‌ನ ಮುಂದಾಳುಗಳಾಗಿದ್ದವರು. ಇವರ ಪ್ರೇರಣೆಯಿಂದ ಸ್ವಾತಂತ್ರ್ಯ ಚಳವಳಿಗೆ ದುಮುಕಿದ ವಿಶಿಷ್ಟ ವ್ಯಕ್ತಿಯೆಂದರೆ ದಾಸನದೊಡ್ಡಿ ವೆಂಕಟಪ್ಪನವರು ಇವರು ತಮ್ಮಟೆ ಹೊಡೆಯುವುದನ್ನು ಕಲಿತು ಆ ಮೂಲಕ ಜನರ ಗಮನವನ್ನು ತಮ್ಮಕಡೆಗೆ ಸೆಳೆದು ಸ್ವಾತಂತ್ರ್ಯದ ಬಗೆಗಿನ ಎಚ್ಚರವನ್ನು ಜನರಲ್ಲಿ ಮೂಡಿಸುತ್ತಿದ್ದರು. ಶಾಲಾ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಪೇಟೆಯ ಶ್ರೀ ಸಿದ್ಧೇಗೌಡರು ಕಾರಾಗೃಹವಾಸ ಅನುಭವಿಸಿದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರು. ಇದಲ್ಲದೆ ರಾಗಿ ಬೊಮ್ಮನ ಹಳ್ಳಿಯ ಕೆಂಪನಂಜಪ್ಪ, ತಿರುಮಲೇಗೌಡರು, ಜೆ. ಲಿಂಗಯ್ಯನವರು, ರಾಮಚಂದ್ರೇಗೌಡರು, ಕೃಷ್ಣಪ್ಪನವರು, ಇನ್ನೂ ಮೊದಲಾದ ಅನೇಕ ಮಹ ನೀಯರು ಸ್ವಾತಂತ್ರ್ಯ ಹೋರಾಟದಲ್ಲಿ ಸಾಕಷ್ಟು ದುಡಿದವರಾಗಿದ್ದಾರೆ.

ಹೀಗೆ ಮಳವಳ್ಳಿ ತಾಲ್ಲೂಕು ತನ್ನದೇ ಆದ ಇತಿಮಿತಿಗಳೊಳಗೆ ಸ್ವಾತಂತ್ರ್ಯ ಹೋರಾಟದಲ್ಲಿ ಅಳಿಲು ಸೇವೆಯನ್ನು ಸಲ್ಲಿಸಿದೆ.

ಡಿ. ದೊಡ್ಡಲಿಂಗೇಗೌಡ

ಮದ್ದೂರು ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ

ಮಾನವ ಮೂಲತಹ ಪ್ರಕೃತಿ ಪ್ರೇಮಿ, ಸ್ವಾತಂತ್ರ್ಯ ಶೀಲ, ಮಾನಸಿಕವಾಗಿಯಾಗಲಿ, ದೈಹಿಕವಾಗಿಯಾಗಲಿ ಮತ್ತೊಂದರ ದಬ್ಬಾಳಿಕೆಗೆ ಅನುಗಾಲ ಮಾರುಹೋಗಲಾರದ ಪ್ರವೃತ್ತಿವುಳ್ಳವನು. ತನ್ನ ಬುದ್ಧಿಶಕ್ತಿ ಮತ್ತು ಮನಸ್ಸಿನ ದೃಢತೆ ಮತ್ತು ಧೈರ್ಯಗಳಿಗನುಗುಣವಾಗಿ ನೇರವಾಗಿಯೋ, ಸಂಘಸಂಸ್ಥೆಗಳ ಮೂಲಕವೋ ತನ್ನ ಮೇಲಿರುವ ದಬ್ಬಾಳಿಕೆಯನ್ನು ತಿರಸ್ಕರಿಸಿ ಸ್ವೇಚ್ಛೆಯಾಗಿ ಬದುಕು ಸಾಗಿಸಲು ನಿರಂತರವಾಗಿ ಹೋರಾಟ ಮಾಡುವ ಗುಣವನ್ನು ಅನಾದಿ ಮಾನವನ ಚರಿತ್ರೆಯಿಂದ ಇಲ್ಲಿಯವರೆವಿಗೂ ಕಾಣುತ್ತಿದ್ದೇವೆ. ತನ್ನ ಮೇಲಿನ ದಬ್ಬಾಳಿಕೆಯನ್ನು ಕೊನೆಗಾಣಿಸಲು ಮಾನವ ನಾನಾ ರೀತಿಯ ಪ್ರಯತ್ನಗಳ ಮೂಲಕ ಯತ್ನಿಸಿದ್ದಾನೆ. ಅದರಿಂದ ಸಿಗುವ ಫಲಾಫಲಗಳನ್ನು ಚಿಂತಿಸಿ ತನ್ನ ಪ್ರಯತ್ನಗಳ ಮಾಧ್ಯಮವನ್ನು ಬದಲಾಯಿಸುತ್ತಾ ಬಂದಿದ್ದಾನೆ. ಶತಶತಮಾನಗಳು ಕಳೆದಂತೆಲ್ಲಾ ಅವನ ಹೋರಾಟದ ಅನುಭವಗಳು ಮಾನವನನ್ನು ಶಿಸ್ತಿನ ಕಡೆಗೆ, ವೈಜ್ಞಾನಿಕ ಚಿಂತನೆಗಳ ಕಡೆಗೆ ಕೊಂಡೊಯ್ದಿದೆ. ಶಿಸ್ತು ಮತ್ತು ವೈಜ್ಞಾನಿಕ ಚಿತನೆ ಮೂಡಿದಂತೆಲ್ಲಾ ಕೆಲವು ಜೀವನ ಮೌಲ್ಯಗಳು ಅಂಕುರಿಸುತ್ತಿವೆ'

ಭರತ ಭೂಮಿ ಸಹೃದಯತೆಯ ಸಹಶೃತ ಲೋಕ, ತನ್ನ ಸಹೃದಯತೆಯ ಕಾರಣದಿಂದಾಗಿಯೆ ವಿಶ್ವದ ವೈವಿಧ್ಯಮಯ ಜನತೆಯನ್ನು ಒಂದಲ್ಲ ಒಂದು ಕಾರಣಕ್ಕಾಗಿ ತನ್ನ ದೇಶದಲ್ಲಿ ನೆಲೆಸಲು ಆಹ್ವಾನ ಕೊಟ್ಟಿತು. ಕ್ರಮೇಣ ಅವರ ದಬ್ಬಾಳಿಕೆಗೂ ಗುರಿಯಾಯಿತು. ದಬ್ಬಾಳಿಕೆಯಿಂದ ಬಿಡುಗಡೆಯಾಗಲು ಹೋರಾಟ ಅನಿವಾರ್ಯವಾಯಿತು. ಸಾವಿರಾರು ಜನರ ಬಲಿದಾನವಾಯಿತು ; ರಕ್ತದ ಹೊಳೆ ಹರಿಯಿತು.

ವ್ಯಾಪಾರದ ಕಾರಣಕ್ಕಾಗಿ ಇಂಗ್ಲೆಂಡಿನಿಂದ ಭಾರತಕ್ಕೆ ಆಗಮಿಸಿದ ಆಗ್ಲರು ಕ್ರಮೇಣ ಆಡಳಿತ ಸೂತ್ರವನ್ನು ಹಿಡಿಯುವ ವಾತಾವರಣ ಸೃಷ್ಟಿ ಮಾಡಿಕೊಂಡರು. ಸುಮಾರು ಎರಡು ಶತಮಾನಗಳ ಕಾಲ ಉತ್ತರ ಭಾರತದ ಪೂರ್ಣ ಮತ್ತು ದಕ್ಷಿಣ ಭಾರತದ ಕೆಲವು ಕಡೆ ನೇರವಾಗಿ ಚಕ್ರವರ್ತಿಗಳಾಗಿ ಭಾರತೀಯರನ್ನು ಆಳಿದರು. ಬಂಗಾಳ, ಒರಿಸ್ಸ, ಬಿಹಾರ್, ಮಧ್ಯಪ್ರಾಂತ್ಯ, ಉತ್ತರ ಪ್ರಾಂತ್ಯ, ಬೊಂಬಾಯಿ, ಮದ್ರಾಸಿನ ಕೆಲವು ಭಾಗ ಸಿಂದ್ (ಪಾಕಿಸ್ತಾನ) ಬೆಲೂಚಿ ಸ್ಥಾನ-

ಮುಂತಾದ ಉತ್ತರ ಭಾಗಗಳು ಬ್ರಿಟಿಷ್ ಪ್ರಾಂತ್ಯಗಳೇ ಆಗಿ ಹೋಗಿದ್ದವು. ಮೈಸೂರು ಪ್ರಾಂತ್ಯ, ಟ್ರಾವಂಕೂರ್, ಹೈದರಾಬಾದ್, ಬರೋಡ, ಗ್ವಾಲಿಯರ್ ರಾಜಸ್ಥಾನ್, ಕಾಶ್ಮೀರ್ ಹೀಗೆ 563 ದೇಶೀಯ ಸಂಸ್ಥಾನಗಳು ಆಯಾ ಪ್ರಾಂತ್ಯದ ರಾಜರುಗಳ ಮತ್ತು ಪಾಳಯಗಾರರ ದಬ್ಬಾಳಿಕೆಯಲ್ಲಿದ್ದರೂ, ಪರೋಕ್ಷವಾಗಿ ಆಂಗ್ಲರ ನಿರ್ಣಯ ಗಳ ವ್ಯಾಪ್ತಿಯಲ್ಲಿ ಆಡಳಿತ ನಡೆಯುತ್ತಿತ್ತು. ಆಂಗ್ಲರಿಂದ ನೇಮಿಸಲ್ಪಟ್ಟ ರಿಜೆಂಟರು, ದಿವಾನರು ದಕ್ಷಿಣ ಪ್ರಾಂತ್ಯದ ಅನೇಕ ರಾಜರುಗಳ ಮತ್ತು ಪಾಳೆಯಗಾರರ ಆಡಳಿತ ಸೂತ್ರದ ಸೂತ್ರಧಾರಿಗಳಾಗಿದ್ದರು. ಯಾವುದೇ ನಿರ್ಣಯಗಳು ರಿಜೆಂಟರ, ದಿವಾನರ ಅಧ್ಯಕ್ಷತೆಯಲ್ಲಿ ನಡೆಯಬೇಕಾಗಿತ್ತು. ಸಮಸ್ಯೆಗಳ ಪರಿಹಾರೋಪಾಯಗಳು ದಿವಾನರ ತೀರ್ಮಾನದಂತೆ ಅಥವಾ ಆಂಗ್ಲರ ಪ್ರತಿನಿಧಿಗಳ ತೀರ್ಮಾನದಂತೆ ನಿರ್ಣಯವಾಗುತ್ತಿತ್ತು. ಪ್ರಜೆಗಳಿಗೆ ಸ್ವಯಂ ನಿರ್ಣಯ ಕೈಗೊಳ್ಳುವ ಯಾವ ಸ್ವಾತಂತ್ರ್ಯವೂ ಇರಲಿಲ್ಲ. ಹೀಗಾಗಿ ಇಡೀ ದೇಶವೇ ಆಂಗ್ಲರ ದಬ್ಬಾಳಿಕೆಗೆ ಒಳಗಾಗಿತ್ತು ಎಂಬುದು ಸ್ಪಷ್ಟ. ಸುಮಾರು ಇನ್ನೂರು ವರ್ಷಗಳ ಅವಧಿಯಲ್ಲಿ ಆಂಗ್ಲರ ಆಡಳಿತ ದಿಂದ ಕ್ರಮೇಣ ಎಚ್ಚೆತ್ತ ಭಾರತೀಯರು ಅಲ್ಲಲ್ಲಿ ಬ್ರಿಟಿಷರನ್ನು ಸ್ವದೇಶಕ್ಕೆ ತೊಲಗಿಸಲು ಕ್ರಾಂತಿ ನಡೆಸಿದುದು ನಿಜವಾದರೂ ತಮ್ಮ ಗುರಿ ಸೇರಲು ಸಾಧ್ಯ ವಾಗಲಿಲ್ಲ. ಇದಕ್ಕೆ ಕಾರಣಗಳು ಬಹಳ. ಸೂಕ್ಷ್ಮಬುದ್ಧಿಯ ಆಂಗ್ಲರು ಕ್ರಾಂತಿಕಾರರನ್ನು ಹತ್ತಿಕ್ಕುವ ಅನೇಕ ಉಪಾಯಗಳನ್ನು ಬಲ್ಲವರಾಗಿದ್ದರು. ಅವರ ವೈಜ್ಞಾನಿಕ ಉಪಕರಣಗಳಾದ ಬಂದೂಕಗಳ ಮುಂದೆ ಭಾರತೀಯರ ಶಕ್ತಿ ನಿಷ್ಪ್ರಾಣವಾಗುತಿತ್ತು. ಭಾರತೀಯ ಬಿನ್ನಧರ್ಮ, ಭಿನ್ನಸಂಸ್ಕೃತಿ, ಭಿನ್ನಭಾಷೆ, ಮತೀಯ ಭಾವನೆ, ಯೋಜನಾ ರಹಿತವಾದ ಕ್ರಾಂತಿ, ಮುಂತಾದ ಜನಾಂಗದ ದೌರ್ಬಲ್ಯಗಳನ್ನು ಆಂಗ್ಲರು ಚನ್ನಾಗಿ ಅರಿತುಕೊಂಡಿದ್ದರು. ಭಾರತೀಯರ ಅಜ್ಞಾನ, ಅಂತಃಕಲಹ : ಜಾತೀಯ ವೈಶಮ್ಯ, ಒಗ್ಗಟ್ಟಿನಕೊರತೆ, ಸ್ವಾರ್ಥ ಸ್ವಹಿತ ಸಾಧನೆಯ ಗುಣಗಳಿಂದಾಗಿ, ಇವರ ಮಧ್ಯೆ ಕುತಂತ್ರ ನಡೆಸುವುದು 'ಅಂಗೈ ಮೇಲಿನ ಹುಣ್ಣಿನಂತೆ ಸಲೀಸಾಯಿತು, ನೂರೆಂಟು ಆಮಿಷಗಳೊಡನೆ, ಸ್ವದೇಶಿಯವರೇ ಪರಸ್ಪರ ಕಾದಾಡು ವಂತೆ ಮಾಡಿ ದೇಶದ ಒಗ್ಗಟ್ಟನ್ನು ಛಿದ್ರಗೊಳಿಸುತ್ತಿದ್ದರು. ಇದರ ಫಲವಾಗಿ ಎರಡು ಶತಮಾನಗಳ ನಿರಂತರ ದಾಸ್ಯಕ್ಕೆ ಭಾರತೀಯರು ಒಳಗಾದರು.

"ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ"—ಎಂಬ ಭಾರತೀಯ ವಾಣಿಯಂತೆ ಯುಗ ಪ್ರವರ್ತಕರಾದ ಮಹಾತ್ಮ ಗಾಂಧೀಜಿಯವರ ಮಾನವ ಪ್ರೇಮದ ಫಲವಾಗಿ, ಸ್ವಾತಂತ್ರ್ಯ ಚಳುವಳಿ ಭಾರತಾದ್ಯಂತ ಪ್ರಾರಂಭ ವಾಯಿತು. ಹಿಂದಿನ ಅನೇಕ ಅನುಭವಗಳ ಫಲವಾಗಿ ಶಾಂತಿ ಮತ್ತು ಅಹಿಂಸಾ ಮಾರ್ಗವೇ ಚಳುವಳಿಯ ಶ್ರೇಷ್ಠ ಮಾಧ್ಯಮವೆಂದು ತಿಳಿದು, ಪ್ರಭಲವಾದ ಈ ಮಾನವೀಯ ಅಸ್ತ್ರವನ್ನು ಸಾಮೂಹಿಕವಾಗಿ ಹಂಚುವ ಪ್ರಯತ್ನ ಮಾಡಿದರು.

ಗಾಂಧೀಜಿಯವರ ಚಳುವಳಿಯ ಘೋಷಣೆಯು ದೇಶದ ಮೂಲೆ ಮೂಲೆಗಳನ್ನು ಆಕ್ರಮಿಸಿತು. ಸ್ವಾತಂತ್ರ್ಯ ಪ್ರೇಮಿಗಳಾದ ಭಾರತೀಯರು ಗಾಂಧೀಜಿ ಕರೆಗೆ ಓಗೊಟ್ಟರು. ಇಷ್ಟಾದರೂ ಗಾಂಧಿಜೀಯವರ ಸ್ವಾತಂತ್ರ್ಯ ಕಹಳೆ ಬ್ರಿಟೀಷ್ ಪ್ರಾಂತ್ಯಗಳಲ್ಲಿ ಮೊಳಗಿದಷ್ಟು ರಾಜರಿದ್ದ ಪ್ರಾಂತ್ಯಗಳಲ್ಲಿ ಮೊಳಗಲಿಲ್ಲ. ದಕ್ಷಿಣ ಪ್ರಾಂತ್ಯಗಳು ಸ್ವಾತಂತ್ರ್ಯ ಸಮರಕ್ಕೆ ನಿಲ್ಲಲಾರವು ಎಂಬುದು ಗಾಂಧೀಜಿಯವರ ನಿಲುವಾಗಿತ್ತು. ಗಾಂಧೀಜಿಗೆ ದಕ್ಷಿಣದವರ ಬಗೆಗೆ ಹೆಚ್ಚು ನಂಬಿಕೆಯೂ ಸಾಲದಾಗಿತ್ತು. ಕಾರಣ ಒಗ್ಗಟ್ಟು ಕಾಣದ ಈ ಜನ ಆಂಗ್ಲರ ಆಧಿಪತ್ಯಕ್ಕೆ ನೇರವಾಗಿ ಭಾಗಿಗಳಾದ ಜನ ಪ್ರಾಂತೀಯ ರಾಜರ ಮತ್ತು ಪಾಳೆಯಗಾರರ ಬಗ್ಗೆ ಹೆಚ್ಚು ವಿಶ್ವಾಸವಿರುವ ಜನ, ಮಂತ್ರ ಮತ್ತು ಧರ್ಮಗಳಲ್ಲಿ ನಂಬಿಕೆ ಇರುವವರು, ವಿವಿಧ ಭಾಷೆಯ, ವಿವಿಧ ಸಂಸ್ಕೃತಿಯ ಜನ ಇವರಾಗಿರುವುದರಿಂದ ರಾಜನನ್ನೆ ದೇವರೆಂದು ಕಾಣುವ ಈ ಪ್ರಾಂತೀಯ ಪ್ರಜೆಗಳಿಗೆ ಸ್ವಾತಂತ್ರ್ಯದ ಮೌಲ್ಯ ತಿಳಿಯಲಾರದೆಂದು ಭಾವಿಸಿದ್ದರು. ಪ್ರಾಂತೀಯ ಪ್ರಜೆಗಳನ್ನು ಒಟ್ಟುಗೂಡಿಸಿ ಸ್ವಾತಂತ್ರ್ಯ ಚಳುವಳಿ ನಡೆಸುವ ಕ್ರಾಂತಿ ವೀರರ ಅಭಾವವೂ ಈ ಜನತೆಯಲ್ಲಿತ್ತು. ಸತ್ವಶೀಲ ಮಾರ್ಗದರ್ಶಕನೂ ಇಲ್ಲ, ಬೆಂಬಲವಾಗಿ ನಿಲ್ಲುವ ಪ್ರಜೆಗಳೂ ಇಲ್ಲದ ಕಾರಣ ದಕ್ಷಿಣ ಪ್ರಾಂತ್ಯಗಳಲ್ಲಿ ಚಳುವಳಿ ಸಾಧ್ಯವಿಲ್ಲ ಎಂಬ ತೀರ್ಮಾನ ಉತ್ತರ ಪ್ರಾಂತ್ಯಗಳಿಗೆ ಸ್ಪಷ್ಟವಾಗಿತ್ತು. ಇಂತಹ ಪ್ರಾಂತೀಯ ಭಿನ್ನ ಭಾವಗಳಿದ್ದಾಗ ಚಳುವಳಿ ಯಶಸ್ವಿಯಾಗಲಾರದೆಂಬ ಕಾರಣದಿಂದ ಇಡೀ ಭಾರತದಲ್ಲೇ ಅಹಿಂಸಾತ್ಮಕ ರೀತಿಯಲ್ಲಿ ಸ್ವಾತಂತ್ರ್ಯ ಸಮರ, ಏಕ ರೀತಿಯಾಗಿ ನಡೆಯಬೇಕೆಂಬ ಸದುದ್ದೇಶದಿಂದ, ದಕ್ಷಿಣ ಪ್ರಾಂತ್ಯಗಳಲ್ಲಿ ಪರಿಣಾಮಾತ್ಮಕವಾಗಿ ಚಳುವಳಿ ಸಾರುವಂತೆ ಪ್ರೇರೇಪಿಸಬೇಕೆಂಬುದು ಕಾಂಗ್ರೇಸ್ ನಾಯಕರುಗಳ ಮನಸ್ಸಿನಲ್ಲಿ ಉದ್ಭವಿಸಿತು. ಇದಕ್ಕಾಗಿ ರಾಷ್ಟ್ರೀಯ ಕಾಂಗ್ರೇಸ್ ಮಹಾ ಮುಖಂಡರುಗಳಾದ ಶ್ರೀ ಜವಹರ್‌ಲಾಲ್‌ನೇಹರು, ಡಾ: ಪಟ್ಟಾಬಿ ಸೀತಾರಾಮಯ್ಯ, ಶ್ರೀ ವಲ್ಲಭಭಾಯಿ ಪಟೇಲ್ ಮುಂತಾದವರ ನೇತೃತ್ವದಲ್ಲಿ 1907ನೇ ಇಸವಿಯಲ್ಲಿ ಕಲ್ಕತ್ತಾ ನಗರದಲ್ಲಿ ಸಭೆ ಸೇರಲಾಯಿತು. ಈ ಮಹಾ ಸಭೆಗೆ ಪ್ರಾಂತೀಯ ಮುಂಡರುಗಳನ್ನು ಆಹ್ವಾನಿಸಲಾಯಿತು. ಕರ್ನಾಟಕ ಪ್ರಾಂತ್ಯದಿಂದ ಮದ್ದೂರಿನವರಾದ ಶ್ರೀ ಎಚ್ ಕೆ ವೀರಣ್ಣಗೌಡ ಅವರು ಸಭೆಗೆ ಹಾಜರಾದರು. ಈ ಮಹಾ ಸಭೆಯಲ್ಲಿ "ಪ್ರಾಂತೀಯ ಸಂಸ್ಥಾನಗಳ ಪ್ರಜಾ ಕೋಟಿಯ ಮನಸ್ಸಿನಲ್ಲಿ ಹೊಸ ರಾಜಕೀಯ ಪರಿಜ್ಞಾನವನ್ನು ಮೂಡಿಸಬೇಕು. ಇಡೀ ದೇಶದಲ್ಲೇ ಪ್ರಜಾಪ್ರಭುತ್ವ ರೀತಿಯ ಜವಾಬ್ದಾರಿ ಸರ್ಕಾರ ಸ್ಥಾಪನೆ ಆಗಬೇಕು, ಆಂಗ್ಲರು ಸ್ವದೇಶಕ್ಕೆ ತೆರಳಬೇಕು, ಇಡೀ ದೇಶದ ಜನತೆಯಲ್ಲಿ ಜಾಗ್ರತಾ ಭಾವನೆ ಮೂಡುವಂತೆ ಪ್ರಜಾ ಕೋಟಿಯನ್ನು ಜಾಗ್ರತಗೊಳಿಸಬೇಕು, ಪ್ರತಿ ಪ್ರಾಂತ್ಯಗಳಲ್ಲೂ ಮಹಾ ಮುಖಂಡರುಗಳು ದೇಶ ಭಕ್ತಿಯಿಂದ ಜವಾಬ್ದಾರಿ ಹೊತ್ತು ಜನತೆಯ ಒಲವು ಸಂಪಾದಿಸಿಕೊಂಡು ಒಗ್ಗಟ್ಟಾಗಿ ಚಳುವಳಿಗೆ ಬೆಂಬಲ ಕೊಡಬೇಕು" ಎಂಬ ನಿರ್ಣಯ

ವಾಯಿತು.

ಮದ್ದೂರಿನ ಶ್ರೀ ಎಚ್ ಕೆ ವೀರಣ್ಣಗೌಡರು ಉತ್ಸಾಹಿ ತರುಣರು, ಅತಿಶಯವಾದ ದೇಶಭಕ್ತಿ ಉಳ್ಳವರು, ಗಾಂಧೀಜಿಯವರ ಸತ್ಯ, ಅಹಿಂಸೆ ತತ್ವವನ್ನು ಹೃದಯದಲ್ಲಿ ತುಂಬಿಕೊಂಡಿದ್ದವರು. ಮೊದಲಿನಿಂದ ಅನೇಕ ಚಳುವಳಿಗಳ ಮುಂದಾಳಾಗಿದ್ದು, ಜನಹಿತ ಕೆಲಸಗಳಲ್ಲಿ ಭಾಗಿಗಳಾಗಿದ್ದವರು. ಕಲ್ಕತ್ತ ಸಭೆಯ ಸ್ವಾತಂತ್ರ್ಯ ಚಳುವಳಿಯ ಸಂದೇಶ ಇವರ ಮನಸ್ಸನ್ನು ತುಂಬಿಕೊಂಡಿತ್ತು. ಮೈಸೂರು ಸಂಸ್ಥಾನಕ್ಕೆ ಹಿಂದಿರುಗಿದೊಡನೆ, ಇಡೀ ಪ್ರಾಂತ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಬಲಪಡಿಸಿ ಜವಾಬ್ದಾರಿ ಸರ್ಕಾರಕ್ಕಾಗಿ ಕಾಯಾವಾಚಾಮನಸಾ ಬೆಂಬಲ ಕೊಡಬೇಕೆಂಬ ದೃಢತೆ ಬಲವಾಯಿತು. ಅದಕ್ಕಾಗಿ ಹೋರಾಟದ ಪ್ರಚಾರ ಕಾರ್ಯವನ್ನು ಕೈಗೊಂಡರು.

ಅಂದು ಮೈಸೂರು ಪ್ರಾಂತ್ಯದಲ್ಲಿ ಪ್ರಧಾನವಾಗಿ ಎರಡು ವರ್ಗಗಳಿದ್ದವು, 1. ಕಾಂಗ್ರೆಸ್ ಪಕ್ಷ 2. ಪ್ರಜಾ ಪಕ್ಷ. ಕಾಂಗ್ರೆಸ್ ಪಕ್ಷದಲ್ಲಿ ಸಂಜೀವಯ್ಯ ಬೆಂಗಳೂರು, ತಗಡೂರು ರಾಮಚಂದ್ರರಾಯರು ನಂಜನಗೂಡು ಟಿ. ಸಿದ್ದಲಿಂಗಯ್ಯನವರು ದೊಡ್ಡಬಳ್ಳಾಪುರ, ವೀರಕೇಸರಿ ಸೀತಾರಾಮ ಶಾಸ್ತ್ರಿ, ಕೆ ಟಿ ಭಾಷ್ಯಂ ಅಯ್ಯಂಗಾರ್, ಬೆಂಗಳೂರು. ಬೀಮಪ್ಪ ನಾಯಕ ಚಿತ್ರದುರ್ಗ. ಎಚ್ ಕೆ ವೀರಣ್ಣಗೌಡ ಮದ್ದೂರು, ಪಾಲಹಳ್ಳಿ ಸೀತಾರಾಮಯ್ಯ, ಪಾರ್ಥಸಾರಾಯಣ ಪಂಡಿತ್ ಮೈಸೂರು ಇನ್ನೂ ಮುಂತಾದವರು ರಾಷ್ಟ್ರೀಯ ಕಾಂಗ್ರೆಸ್ ಧೋರಣೆಯನ್ನು ಹೊತ್ತು ಕೆಲಸ ಮಾಡುತ್ತಿದ್ದರು. ಪ್ರಜಾ ಪಕ್ಷದಲ್ಲಿ ಎಚ್. ಸಿ ದಾಸಪ್ಪ ಮೈಸೂರು, ಕೆ ಚಂಗಲರಾಯ ರೆಡ್ಡಿ ಕೋಲಾರ, ವಿ ವೆಂಕಟಪ್ಪ ಚನ್ನಪಟ್ಟಣ, ಎಚ್. ಬಿ ಗುಂಡಪ್ಪಗೌಡ ಹಾಸನ, ಮಹಮದ್ ಇಮಾಮ್, ಚಿತ್ರದುರ್ಗ, ಬಿ. ಎಸ್ ಪುಟ್ಟಸ್ವಾಮಿ, ಮೈಸೂರು, ಎಸ್ ಸಿ ಮಲ್ಲಯ್ಯ ಸೋಮನ ಹಳ್ಳಿ. ಎಚ್. ಸಿ ಲಿಂಗೇಗೌಡ ಮದ್ದೂರು—ಇನ್ನೂ ಮುಂತಾದವರು ಪ್ರಬಲವಾಗಿ ಬೆಳೆಯುತ್ತ ರಾಜರೊಡನೆ ಸೇರಿ ಪ್ರಜಾಹಿತ ಕೆಲಸಗಳಲ್ಲಿ ಭಾಗಿಗಳಾಗಿದ್ದರು. ಪ್ರಜಾ ಪಕ್ಷಕ್ಕೆ ಕಾಂಗ್ರೆಸ್ ನಿರ್ಣಯಗಳು ಬೇಸರವಾಗಿದ್ದವು. ಪ್ರಜಾ ಪಕ್ಷವು ಬ್ರಾಹ್ಮಣೇತರರ ಗುಂಪಾಗಿತ್ತು, ಸ್ವಾತಂತ್ರ್ಯದ ಹಂಬಲ ಆ ಪಕ್ಷಕ್ಕೆ ಇರಲಿಲ್ಲ. ರಕ್ತಪಾತ ಹಿಂಸಾ ಚಳುವಳಿಯಲ್ಲಿ ಪ್ರಜಾ ಪಕ್ಷಕ್ಕೆ ನಂಬಿಕೆ ಇರಲಿಲ್ಲ. ಆಂಗ್ಲರಿಂದ ಸ್ವಾತಂತ್ರ್ಯ ದೊರೆಯುವುದು ಅಷ್ಟು ಸುಲಭದ ವಿಷಯವಲ್ಲ ಎಂಬುದೇ ಪ್ರಜಾ ಪಕ್ಷದ ಅಭಿಪ್ರಾಯವಾಗಿತ್ತು. ಆದುದರಿಂದ ಅಧಿಕಾರ ಇರುವವರ ಪರ ನಿಂತು ಜನಹಿತ ಕೆಲಸಗಳ ಕಡೆಗೆ ಹೆಚ್ಚು ಗಮನ ಕೊಡುತ್ತಿತ್ತು.

ಶ್ರೀ ಎಚ್. ಕೆ ವೀರಣ್ಣಗೌಡರಂತಹ ಕಾಂಗ್ರೆಸ್ ಧುರೀಣರಿಗೆ ಈ ಎರಡೂ ಪಕ್ಷಗಳು ಒಂದಾಗದೆ ಸ್ವಾತಂತ್ರ್ಯ ಸಾಧ್ಯವಾಗಲಾರದು ಎಂದನಿಸಿತು. ಶ್ರೀ ಗೌಡರ ಮುಂದಾಳುತನದಲ್ಲಿ ಮೈಸೂರಿನ ಪಾಲಹಳ್ಳಿ ಚಾರ್ಯರ ಛತ್ರದಲ್ಲಿ ಈ ಎರಡೂ ಪಕ್ಷದ ಸದಸ್ಯರು ಒಂದೆಡೆ ಸಭೆ ಸೇರಿದರು. ಪ್ರಜಾ ಪಕ್ಷದ ಕೆ ಚಂಗಲರಾಯರೆಡ್ಡಿ

ವಿ ವೆಂಕಟಪ್ಪ, ಎಚ್ ಸಿ ದಾಸಪ್ಪ, ಕರಡಳ್ಳಿಕೃಷ್ಣಪ್ಪಗೌಡ, ಸೋಮನಹಳ್ಳಿ ಎಸ್ ಸಿ ಮಲ್ಲಯ್ಯ, ಮದ್ದೂರಿನ ಎಂ ಸಿ ಲಿಂಗೇಗೌಡ, ಹಾಸನದ ಗುಂಡಪ್ಪಗೌಡ ಮುಂತಾದ ಸುಮಾರು ಇನ್ನೂರು ಜನ ಸದಸ್ಯರುಗಳು ಆ ಸಭೆಯಲ್ಲಿ ಹಾಜರಿದ್ದರು. ಪ್ರಜಾಪಕ್ಷ ಪ್ರಜಾಮಿತ್ರ ಪಕ್ಷಗಳು ಸೇರಿ ಪ್ರಜಾಸಂಯುಕ್ತ ಪಕ್ಷವಾಗಿ ಈ ಪಕ್ಷ ಕಾಂಗ್ರೆಸ್ಸಿನಲ್ಲಿ ಲೀನವಾಯಿತು. ಪ್ರಜಾಪಕ್ಷವು ಕಾಂಗ್ರೆಸ್ ಪಕ್ಷದೊಡನೆ ವಿಲೀನ ಗೊಂಡು ಮೈಸೂರು ಮಹಾರಾಜರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸ ಬೇಕೆಂದೂ ಮುಂದೆ ನಡೆಯುವ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್ ಮಿರ್ಜಾ ಸಾಹೇಬರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯನ್ನು ಧಿಕ್ಕರಿಸಿ ಪ್ರತಿನಿದಿಗಳು ಹೊರಕ್ಕೆ ಬರಬೇಕೆಂದೂ ನಿರ್ಣಯಿಸಿ,ಬಹುಮತದಿಂದ ಆ ನಿರ್ಣಯವನ್ನು ಅಂಗೀಕರಿಸ ಲಾಯಿತು. ಅಂದಿನಿಂದ ಪ್ರಜಾ ಪಕ್ಷವು ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಕೊಡುವುದೆಂದೂ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಚಳುವಳಿಯಲ್ಲಿ ಭಾಗವಹಿಸುವುದೆಂದೂ ಒಪ್ಪಿಕೊಂಡಂತಾಯಿತು. ಆದರೆ ಪ್ರಜಾಪಕ್ಷದಲ್ಲಿದ್ದ ಸೋಮನಹಳ್ಳಿ ಎಸ್ ಸಿ ಮಲ್ಲಯ್ಯನವರು ಮತ್ತು ಮದ್ದೂರಿನ ಎಂ ಸಿ ಲಿಂಗೇಗೌಡರು ಈ ನಿರ್ಣಯವನ್ನು ತಿರಸ್ಕರಿಸಿ ಸಭೆಯಿಂದ ಹೊರ ಬಂದರು. ಯಾವುದೇ ಕಾರಣದಿಂದ ಆಳುವ ಪಕ್ಷವನ್ನು ದೂರೀಕರಿಸಲು ಇವರು ಇಷ್ಟ ಪಡಲಿಲ್ಲ, ಸ್ವಾತಂತ್ರ್ಯ ಚಳುವಳಿ ಇವರ ಮನಸ್ಸಿನಿಂದ ದೂರವಾಗಿಯೇ ಉಳಿಯಿತು. ರಾಜಕೀಯ ಭಿನ್ನಭಾವಗಳು ಇವರ ಮನಸ್ಸಿನಲ್ಲಿ ತುಂಬಿಕೊಂಡವು.

ಹೆಚ್ಚು ಜನ ಬೆಂಬಲ ಪಡೆದ ಮೈಸೂರಿನ ಕಾಂಗ್ರೆಸ್ ಪಕ್ಷ ಪ್ರಜಾ ಕೋಟಿಯಲ್ಲಿ ಚಳುವಳಿಯನ್ನು ಜಾಗ್ರತಗೊಳಿಸುವ ಜಾಗರೂಕತೆಯಿಂದ ಕಾರ್ಯ ಕೈಗೊಂಡಿತು. ಮದ್ದೂರಿನ ಶ್ರೀ ಎಚ್ ಕೆ ವೀರಣ್ಣಗೌಡರು ತಮ್ಮ ಗೆಳೆಯರೊಡನೆ ಮೈಸೂರು ಪ್ರಾಂತ್ಯದ ಸುಮಾರು ಎಂಟು ಜಿಲ್ಲೆಗಳನ್ನು ಸಂಚರಿಸಿ ಕಾರ್ಯ ಕೈಗೊಂಡರು. ಅದೇ ವೇಳೆಯಲ್ಲಿ ಗೌಡರ ವಿರುದ್ಧ ದಿವಾನರಿಗೆ ದೂರು ಕೊಡುವವರು ಹೆಚ್ಚಾದರು, ಪ್ರಯೋಜನವಿಲ್ಲದೆ ಜನ ಕಾಂಗ್ರೆಸ್ ಧೋರಣೆಯನ್ನು ಧಿಕ್ಕರಿಸಿದರು. ಗೌಡರ ಚಳು ವಳಿಯ ಪ್ರಚಾರ ಮತ್ತು ಜವಾಬ್ದಾರಿ ಸರ್ಕಾರದ ಅಪ್ರಯೋಜನಗಳನ್ನು ಜನತೆ ಯಲ್ಲಿ ಸಾರುತ್ತಾ ಇದ್ದರು, ಶ್ರೀಮನ್ ಮಹಾರಾಜರ ಆಳ್ವಿಕೆಗೆ ಆಂಗ್ಲರ ಬೆಂಬಲವೇ ಸರಿಯಾದ ಮಾರ್ಗವೆಂಬುದು ವಿರೋಧಿಗಳ ಮತವಾಗಿತ್ತು. ಸ್ವಾತಂತ್ರ್ಯ ಚಳುವಳಿಯು ಕೆಲಸಕ್ಕೆ ಬಾರದ ಪುಂಡರ ಗುಂಪು ಎಂಬುದು ಗೌಡರ ವಿರೋಧಿಗಳ ಮತವಾಗಿತ್ತು. ಆದರೂ ಶ್ರೀ ಗೌಡರು ತಮ್ಮ ಪ್ರಚಾರ ಕಾರ್ಯವನ್ನು ನಿಲ್ಲಿಸಲಿಲ್ಲ.

ಮದ್ದೂರು ತಾಲ್ಲೂಕಿನ ಸ್ವಾತಂತ್ರ್ಯ ಚಳುವಳಿಯು ಮೈಸೂರು ಪ್ರಾಂತ್ಯಕ್ಕೆ ಮಾತ್ರವಲ್ಲದೇ ಇಡೀ ದೇಶಕ್ಕೆ ಜಾಗೃತಿಯನ್ನುಂಟುಮಾಡಿದ ಮಹತ್ತರವಾದ ಕ್ರಾಂತಿ. ಭಾರತೀಯ ಚರಿತ್ರೆಯಲ್ಲಿ ಸಂಸ್ಮರಣೆಗೆ ಸಾಕ್ಷಿಯಾದ ಕ್ರಾಂತಿ. ಅಖಿಲ ಭಾರತದಲ್ಲ

ಪ್ರಖ್ಯಾತಿ ಪಡೆದ ಕ್ರಾಂತಿ, ದಕ್ಷಿಣ ಪ್ರಾಂತ್ಯದ ಬಗ್ಗೆ ನಿರಾಸೆಯಿದ್ದ ಮಹಾತ್ಮಾ ಗಾಂಧೀಜಿಯವರ ಮೆಚ್ಚಿಗೆಯನ್ನು ಸಂಪಾದಿಸಿದ ಕ್ರಾಂತಿ. ಇದೊಂದು ಅಖಂಡ ಭಾರತದ ಸ್ವಾತಂತ್ರ್ಯಚಳುವಳಿಗೆ ಮೂಲ ಪ್ರೇರಣೆಯಾದ ಕ್ರಾಂತಿ.

ಮೈಸೂರು ಪ್ರಾಂತ್ಯದ ರಾಜಕೀಯ ಶಕ್ತಿಯಲ್ಲಿ ನಿಂತು ಬ್ರಿಟಿಷರ ವಿರುದ್ಧ ಕ್ರಾಂತಿಯಲ್ಲಿ ಭಾಗವಹಿಸುತ್ತಿರುವ ಶ್ರೀ ಎಚ್ ಕೆ ವೀರಣ್ಣಗೌಡರು ಮದ್ದೂರಿನವ ರಾದರೂ ಮದ್ದೂರಿನಲ್ಲಿ ಸ್ವಾತಂತ್ರ್ಯಚಳುವಳಿಯ ಜಾಗೃತಿಯನ್ನು ಮೂಡಿಸುವ ಪ್ರಯತ್ನವನ್ನು ಮಾಡಿರಲಿಲ್ಲ. ಕಾಂಗ್ರೆಸ್‌ಗೆ ಬೆಂಬಲಕೊಡುವ ಮತ್ತು ಇವರ ಧ್ಯೇಯ ಧೋರಣೆಗಳನ್ನು ಜನತೆಯಲ್ಲಿ ಪ್ರಚಾರ ಮಾಡುವ, ಸ್ವಾತಂತ್ರ್ಯ ಸಮರದತ್ತ ಜನರ ಮನಸ್ಸನ್ನು ಸೆಳೆಯುವ ಯಾವ ಸಮಿತಿಯೂ, ಮದ್ದೂರಿನಲ್ಲಿ ಇರಲಿಲ್ಲ. ಬಿಸಿಲು ಮಳೆ ಯಲ್ಲಿ, ಹೊಲ ಗದ್ದೆಗಳಲ್ಲಿ ದುಡಿದು, ಹೊಟ್ಟೆ ಪಾಡು ನಡೆಸುವ ಕರ್ಮ ಒಂದೇ ತಮ್ಮ ಬದುಕು ಎಂದು ತಿಳಿದಿದ್ದ ಮುಗ್ದಪ್ರಜೆಗಳನ್ನು ದೇಶಭಕ್ತಿಯತ್ತ ಸೆಳೆಯಲು ಅತ್ಯ ಮೂಲ್ಯವಾದ ಒಂದು ಸಮಿತಿ ಮದ್ದೂರಿಗೆ ಅಗತ್ಯವಾಗಿ ಬೇಕಿತ್ತು. ಕ್ರಮೇಣ ಇದರ ಚಿಂತೆ ಶ್ರೀ ಗೌಡರ ಮನಸ್ಸಿನಲ್ಲಿಯೂ ಮೂಡಿತು. ಈ ಚಿಂತೆಗನುಗುಣವಾಗಿ ಹೆಸರಿಗೆ ಒಂದು ಸಮಿತಿ ರಚಿಸುವಂತೆ ಮದ್ದೂರಿನವರೇ ಆದ ಶ್ರೀ ಎಂ. ಪಿ. ಶ್ರೀನಿವಾಸ ಅಯ್ಯಂಗಾರರಿಗೆ ವಹಿಸಿ ಕೊಡಲಾಯಿತು. ದೇಶದ ಕೆಲಸದಲ್ಲಿ ಉತ್ಸಾಹವಿದ್ದ ತರುಣ ರಾದ ಎಂ. ಪಿ. ಶ್ರೀನಿವಾಸಅಯ್ಯಂಗಾರರು ಆ ಮಾತಿಗೆ ಸಂಪೂರ್ಣವಾಗಿ ಒಪ್ಪಿ ಉತ್ತಮ ರೀತಿಯ ಒಂದು ಸಮಿತಿ ರಚಿಸಲು ಉದ್ಯುಕ್ತರಾದರು.

ದಿನಾಂಕ 31-12-1937 ರಂದು ಅಯ್ಯಂಗಾರ್‌ರವರ ಮನೆಯಲ್ಲಿ ಸಭೆ ಸೇರಿ ಒಂದು ತಾಲ್ಲೂಕು ಕಾಂಗ್ರೆಸ್ ಸಮಿತಿ ರಚಿಸಿದರು. ಆ ಸಮಿತಿಗೆ ಈ ಕೆಳಕಂಡ ಸದಸ್ಯರುಗಳನ್ನು ಚುನಾಯಿಸಿಕೊಂಡರು.

1.	ಶ್ರೀಮತಿ ತಾಯಮ್ಮ ವೀರಣ್ಣಗೌಡ	ಮದ್ದೂರು	ಅಧ್ಯಕ್ಷರು
2.	ಕೊಪ್ಪದ ಜೋಗಿಗೌಡ	ಕೊಪ್ಪ	ಉಪಾಧ್ಯಕ್ಷರು
3.	ಎಂ.ಪಿ. ಶ್ರೀನಿವಾಸಅಯ್ಯಂಗಾರ್	ಮದ್ದೂರು	ಕಾರ್ಯದರ್ಶಿ
4.	ಪಿ. ತಿರುಮಲೇಗೌಡ	ಶಿವಪುರ	ಖಜಾಂಚಿ
5.	ಎನ್. ಪಿ. ಲಿಂಗೇಗೌಡ	ನಗರಕೆರೆ	ಸದಸ್ಯರು
6.	ಜಿ. ಕೆಂಪೇಗೌಡ	ಗುರುದೇವರಹಳ್ಳಿ	ಸದಸ್ಯರು
7.	ಬಿಲ್ಲಪ್ಪನ ತಮ್ಮಯ್ಯ	ವಳಗೆರಹಳ್ಳಿ	ಸದಸ್ಯರು
8.	ತಮ್ಮಯ್ಯ	ದೇಶಹಳ್ಳಿ	ಸದಸ್ಯರು
9.	ಶ್ರೀ ಅನಂತರಾಮಯ್ಯ	,,	ಸದಸ್ಯರು
10.	ಭಾಷಾ ಸಾಹೇಬ್	ಮದ್ದೂರು	ಸದಸ್ಯರು

11. ಸ್ವತ್ತಲಿಂಗೇಗೌಡ	ಹನುಮಂತಪುರ	ಸದಸ್ಯರು
12. ಪಟೇಲ್ ಮಲ್ಲಯ್ಯ	ಕಾಡುಕೊತ್ತನಹಳ್ಳಿ	ಸದಸ್ಯರು
13. ತಮ್ಮಯ್ಯ	ಬಿದರುಕೋಟೆ	ಸದಸ್ಯರು

ಈ ಮೇಲಿನ ಕಾರ್ಯಕಾರಿ ಮಂಡಳಿಯೊಡನೆ, ಹಳ್ಳಿಗಳಲ್ಲಿ ನೂರಾರು ಮಂದಿ ಒಂದು ಸಾವಿರಕ್ಕೂ ಹೆಚ್ಚು ಸಂಖ್ಯೆಯಲ್ಲಿ ಸಾಮಾನ್ಯ ಸದಸ್ಯರುಗಳನ್ನು ಕೂಡಿಸಲಾಯಿತು.

ಮೇಲಿನ ಸಭೆಯು ರಚನೆಯಾದ ಮೇಲೆ ಮದ್ದೂರು ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಸ್ವಾತಂತ್ರ್ಯದ ಪ್ರಚಾರ ಕಾರ್ಯ ಬಿರುಸಿನಿಂದ ನಡೆಸಿ, ಸರ್ಕಾರದ ಕೆಲವು ಧೋರಣೆಗಳನ್ನು ನೇರವಾಗಿ ಪ್ರತಿಭಟಿಸುತ್ತ ಬಂದರು. ಆಗಾಗಲೇ ದಸ್ತಗಿರಿಯಾಗಿದ್ದ ಟಿ. ಸಿದ್ಧಲಿಂಗಯ್ಯ, ಕೆ. ಟಿ. ಭಾಷ್ಯಂ, ತಗಡೂರು ರಾಮಚಂದ್ರ ರಾಯರು ಇವರುಗಳನ್ನು ತಕ್ಷಣವೇ ಬಿಡುವಂತೆ ಸರ್ಕಾರದ ವಿರುದ್ಧ ಪ್ರತಿಭಟಿಸಲಾಯಿತು. ಕೆ ನಾರಿಮನ್ ಚಳುವಳಿಯಲ್ಲಿ ಮೃತಪಟ್ಟ ವೀರ ಗುಂಡಪ್ಪನವರ ಆತ್ಮಕ್ಕೆ ಶಾಂತಿ ಕೋರಲಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ಸ್ವಾತಂತ್ರ್ಯದ ಅರಿವು ಮೂಡಿಸಿದರು. ಸಮಿತಿ ಪ್ರಾರಂಭಿಸಿದ ಕೆಲವೇ ದಿನಗಳಲ್ಲಿ ಸಮಿತಿಯು ನಿಷ್ಠೆ, ಉತ್ಸಾಹ, ದೇಶಭಕ್ತಿ, ಕಾರ್ಯತತ್ಪರತೆಗಳು ಸಂಸ್ಥಾನದ ಮಹಾನಾಯಕರನ್ನು ಸೆಳೆದು ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿಗಳು ಎಚ್. ಕೆ. ವೀರಣ್ಣಗೌಡರು, ಟಿ. ಸಿದ್ಧಲಿಂಗಯ್ಯನವರು ಶ್ರೀಮತಿ ಬಿ. ಸುನಂದಮ್ಮನವರು, ಶ್ರೀ ವಿ. ವೆಂಕಟಪ್ಪನವರು ಈ ಸಮಿತಿಗೆ ಚೇತನ ತುಂಬಿದರು. ಮದ್ದೂರು ಜನತೆಯ ಸ್ವಾತಂತ್ರ್ಯದ ಉತ್ಸಾಹ ದೇಶದ ನಾಯಕರನ್ನು ಸೆಳೆಯಿತು. ಗಾಂಧೀಜಿಗೆ ಕುತೂಹಲ ಕೆರಳಿಸಿತು. ದೇಶದ ಚರಿತ್ರೆಯಲ್ಲಿ ಅಮರವಾಗಿ ರಾರಾಜಿಸುವ ಶಿವಪುರದ ಮಹಾಧಿವೇಶನಕ್ಕೆ ಈ ಸಮಿತಿ ನಾಂದಿ ಹಾಡಿತು. ಭಾರತದ ಸ್ವಾತಂತ್ರ್ಯದ ಶಾಂತಿಸಮರಕ್ಕೆ ಜ್ಯೋತಿ ಬೆಳಗಿತು. ಮುಗ್ಧ ಜನತೆಯಲ್ಲಿ ದೇಶಾಭಿಮಾನವನ್ನು ತುಂಬಿತು. ಇದರಿಂದಾಗಿ "ದೇಶಕ್ಕಾಗಿ ದುಡಿ ಇಲ್ಲವೆ ಮಡಿ" ಎಂಬುದು ಜನತೆಯಲ್ಲಿ ಬೇರೂರಿತು, ಜವಾಬ್ದಾರಿ ಸರ್ಕಾರದ ಪ್ರಜ್ಞೆ ತಲೆದೋರಿತು.

ಮದ್ದೂರಿನ ಪ್ರಚಾರ ಕಾರ್ಯದಿಂದ ಸರ್ಕಾರ ದಿಗಿಲುಗೊಂಡಿತು. ಪ್ರಚಾರಕರಿಗೆ ಅಡ್ಡಿ ಆತಂಕಗಳನ್ನು ಉಂಟುಮಾಡಿದ್ದೂ ಉಂಟು. ತಾಲ್ಲೂಕಿನ ಸುತ್ತ ಪೋಲೀಸ್ ಬಂದೋಬಸ್ತ್ ಆಯಿತು. ಕಾಂಗ್ರೆಸ್ ವಿರೋಧಿಗಳಿಂದ ಸ್ಥಳೀಯ ನಾಯಕರುಗಳ ಮೇಲೆ ದೂರು ಹೋದವು. ಸಮಿತಿಯವರ ಮನೆ, ಆಸ್ತಿಗಳ ಮೇಲೆ ಸರ್ಕಾರ ಕಾನೂನು ಕ್ರಮ ಜರುಗಿಸಿತು. ಆದರೂ ನಿಷ್ಠಾವಂತ ಸದಸ್ಯರು ಯಾವುದಕ್ಕೂ ಭಯಪಡದೆ ತಮ್ಮ ಪ್ರಚಾರ ಕಾರ್ಯವನ್ನು ಮುಂದುವರಿಸಿದರು.

ಅಖಿಲ ಭಾರತ ಪ್ರಜಾ ಪರಿಷತ್ತಿನ ಅಧ್ಯಕ್ಷರಾದ ಡಾ: ಪಟ್ಟಾಭಿಸೀತಾರಾಮಯ್ಯನವರ ನೇತೃತ್ವದಲ್ಲಿ ದೇಶಾದ್ಯಂತ ಸ್ವಾತಂತ್ರ್ಯ ಪ್ರಚಾರ ಕಾರ್ಯ ನಡೆಯುತ್ತಿತ್ತು.

ಮೈಸೂರು ಪ್ರಾಂತ್ಯಕ್ಕೂ, ಪ್ರಚಾರಕ್ಕಾಗಿ ಇವರ ಆಗಮನವಾಯಿತು ಇವರೊಡನೆ ಪ್ರಾಂತ್ಯದ ನಾಯಕರಾದ ಎಚ್. ಕೆ. ವೀರಣ್ಣಗೌಡ ಕೆ. ಚೆಂಗಲ್‌ರಾಯರೆಡ್ಡಿ, ಎಚ್. ಸಿ. ದಾಸಪ್ಪ, ವಿ. ವೆಂಕಟಪ್ಪನವರು ಪ್ರವಾಸ ಕೈಗೊಂಡರು. ಇವರ ಪ್ರಚಾರ ಪ್ರವಾಸ ಮದ್ದೂರಿಗೂ ಬರುವಂತೆ ಏರ್ಪಾಡು ಮಾಡಲಾಯಿತು. ಮದ್ದೂರಿನಲ್ಲಿ ಪ್ರಚಾರ ಭಾಷಣ ಮಾಡಲು ಜನ ಬೆಂಬಲ ಸಾಲದು ಎಂಬ ಕಾರಣದಿಂದ ಶ್ರೀ ಸೀತಾರಾಮಯ್ಯನವರಿಗೂ ಶ್ರೀ ಮೆಸ್ತ್ರರವರಿಗೂ ಮದ್ದೂರು ಸಮಿತಿಯು ಗೌರವದಿಂದ ಹೂವಿನ ಹಾರ ಅರ್ಪಿಸಿದರೆ ಸಾಕು ಎಂಬುದೇ ಸಂಸ್ಥಾನದ ನಾಯಕರ ಅಭಿಪ್ರಾಯವಾಗಿತ್ತು. ಆದರೆ ಸಮಿತಿಯ ನಾಯಕರು ಮದ್ದೂರು ತಾಲ್ಲೂಕಿನ ಜನತೆಯ ಬೆಂಬಲವನ್ನು ಕೋರುವ ಸಲುವಾಗಿ ಹಳ್ಳಿಹಳ್ಳಿಗಳಲಿ ಪ್ರಚಾರ ಮಾಡಿ ಬೃಹತ್ ಸಭೆಯನ್ನೆ ಏರ್ಪಡಿಸಿದರು. ಮದ್ದೂರು ಟೌನಿನ ಮೂಡಶೆಟ್ಟರ ತೋಪಿನಲ್ಲಿ ಈ ಬೃಹತ್ ಸಭೆ ಏರ್ಪಾಡಾಗಿತ್ತು.

ಈ ವಿಚಾರವನ್ನು ತಿಳಿದ ವಿರೋಧಿ ಗುಂಪು ಸಭೆಗೆ ಜನ ಬಾರದ ರೀತಿಯಲ್ಲಿ ಪೋಲೀಸ್ ಬಂದೋಬಸ್ತು ಮಾಡಿಸಿದ್ದರು. 25–12–37ರ ಬೆಳಿಗ್ಗೆ 12 ಗಂಟೆಗೆ ಸರಿಯಾಗಿ ನಾಯಕರುಗಳು ಸಭೆಗೆ ಆಗಮಿಸಿದರು. ಅವರನ್ನು ಗೌರವಿಸಿ ಸಭೆಗೆ ಕರೆತರಲಾಯಿತು. ಪ್ರಾರಂಭದಲ್ಲಿ ಸಭೆಗೆ ಜುಗುಪ್ಸೆ ಬರುವಷ್ಟು ಸಂಖ್ಯೆ ಕೇವಲವಾಗಿತ್ತು. ಜನಸಂಖ್ಯೆ ಇಲ್ಲದಿರುವುದನ್ನು ಕಂಡು ಶ್ರೀ ಗೌಡರು ಬೇಸರವನ್ನು ವ್ಯಕ್ತಪಡಿಸಿದರು. ಬರೀ ಹಾರ ಕೊಟ್ಟಿದ್ದರೆ ಸಾಕಿತ್ತು. ಸಭೆ ಏರ್ಪಾಡು ಬೇಡವಾಗಿತ್ತು ಎಂದು ಗೊಣಗಿದರು. ಸಮಿತಿಯವರಿಗೆ ದಿಗಿಲಾಯಿತು. ಆದರೂ ಸಭೆಯಲ್ಲಿರುವ ಕೇವಲ 10–15 ಜನರನ್ನೇ ಉದ್ದೇಶಿಸಿ ಪ್ರಚಾರ ಭಾಷಣ ಮಾಡಲು ಶ್ರೀ ಸೀತಾರಾಮಯ್ಯನವರು ಎದ್ದು ನಿಂತರು. ತಕ್ಷಣವೇ 3,000 ಜನ ಯಾವ ಮೂಲೆಯಲ್ಲಿತ್ತೋ ಏನೋ, ಪೋಲೀಸಿನವರ ಬಂದೋಬಸ್ತನ್ನು ಮುರಿದು ನುಗ್ಗಿ ಬಂದು ಶಾಂತವಾಗಿ ಸಭೆಯಲ್ಲಿ ಕುಳಿತರು. ಎಲ್ಲರಿಗೂ ಆಶ್ಚರ್ಯವಾಯಿತು. ಜನ ಸೇರಿಸುವ ಏರ್ಪಾಡಿನಲ್ಲಿ ಒಳಗೆರಹಳ್ಳಿಯ ಬಿಳ್ಳಪ್ಪನ ತಮ್ಮಯ್ಯ ಮತ್ತು ಕೊಪ್ಪದ ಜೋಗಿಗೌಡರ ಶ್ರಮ ಸ್ಮರಣೀಯವಾದುದು. ಮುಂಬಪ್ರ ವ್ಯಕ್ತಿಗಳಿಂದ ಅಮೋಘ ಭಾಷಣಗಳೊಡನೆ ಜವಾಬ್ದಾರಿ ಸರ್ಕಾರದ ಮಹತ್ವವನ್ನು ಜನತೆಯ ಮುಂದೆ ಮಂಡಿಸಿ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರೆನೀಡಿದರು. ಉತ್ತೇಜಿತ ಜನ ಕಾಂಗ್ರೆಸ್‌ಗೆ ಗಾಂಧೀಜಿಗೆ, ಭಾರತ ದೇಶಕ್ಕೆ ಜೈಕಾರ ಮಾಡಿ ಒಗ್ಗಟ್ಟು ಸೂಚಿಸಿದರು. ಮದ್ದೂರು ಜನತೆಯ ಸ್ಫೂರ್ತಿ ಮತ್ತು ಒಗ್ಗಟ್ಟು ರಾಷ್ಟ್ರ ನಾಯಕರಿಗೆ ಆಶಾಭಾವನೆಯನ್ನು ಮೂಡಿಸಿತು.

ಕಾಂಗ್ರೆಸ್ ಮತ್ತು ಪ್ರಜಾ ಪಕ್ಷವು ಸಮಾನ ಧೋರಣೆಯಿಂದ ಒಂದಾಗಿ ನಿಂತು ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳವಳಿಯನ್ನು ಪ್ರಾರಂಭಿಸಬೇಕೆಂದು ತೀರ್ಮಾನವನ್ನು ಕೈಗೊಂಡ ಮೇಲೆ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವ ಹಂಬಲ

ಜನತೆಯಲ್ಲಿ ಇಮ್ಮಡಿಸುತ್ತ ಬಂತು. ಕಾಂಗ್ರೆಸ್‌ನ ಸ್ವಾತಂತ್ರ್ಯದ ಧೋರಣೆಗಳು ಜನತೆಯ ಮುದುಡಿದ್ದ ಮನಸ್ಸನ್ನು ಅರಳಿಸಿತು. "ಸರ್ಕಾರದ ಏಕನಾಯಕತ್ವವಾದ ದಬ್ಬಾಳಿಕೆ ಕೊನೆಯಾಗಬೇಕು, ಆಂಗ್ಲರ ಆಡಳಿತ ಧೋರಣೆ ಬದಲಾಗಬೇಕು, ಸರ್ವಜನರ ಏಳಿಗೆಗಾಗಿ ಚಿಂತಿಸುವ, ಶ್ರಮಿಸುವ ಪ್ರಜಾಪ್ರಭುತ್ವ ನೀತಿಯ ಜವಾಬ್ದಾರಿ ಸರ್ಕಾರ ದೇಶದಲ್ಲಿ ನೆಲೆಯಾಗಬೇಕು" ಎಂಬುವು ಕಾಂಗ್ರೆಸ್‌ನ ಘೋಷಣೆಗಳಾಗಿದ್ದುವು. ಈ ಘೋಷಣೆಗಳು ನನಸಾಗಲು ವಿಚಾರವಿನಿಮಯಕ್ಕಾಗಿ ಒಂದು ರಾಷ್ಟ್ರಕೂಟ ಸಭೆಯನ್ನು ಏರ್ಪಡಿಸಬೇಕೆಂದು ಕಾಂಗ್ರೆಸ್ ಪಕ್ಷವು ಉದ್ದೇಶಿಸಿತು. ಇದಕ್ಕಾಗಿ ಶ್ರೀ ಸಾಹುಕಾರ್ ಚನ್ನಯ್ಯನವರ ಮನೆಯಲ್ಲಿ ಸಭೆ ಸೇರಿ ಚರ್ಚಿಸಿ ಚಿತ್ರದುರ್ಗ, ನಂಜನಗೂಡು ಶ್ರೀರಂಗ ಪಟ್ಟಣ ಈ ಸ್ಥಳಗಳಲ್ಲಿ ನಡೆಸಬೇಕೆಂದು ಪ್ರಯತ್ನಿಸಿದರು. ಆದರೆ ಅಲ್ಲಿ ಸಭೆಗೆ ಅನು ಕೂಲವಾಗಲಿಲ್ಲ. ಕೊನೆಗೆ ಎಚ್. ಕೆ. ವೀರಣ್ಣಗೌಡರ ಆಹ್ವಾನ ಮತ್ತು ಭರವಸೆಯ ಮೇರೆಗೆ ಮದ್ದೂರಿನ ಶಿವಪುರದಲ್ಲಿ ರಾಷ್ಟ್ರಕೂಟ ಸಭೆಯನ್ನು ಏರ್ಪಡಿಸುವಂತೆ ತೀರ್ಮಾನಿಸಲಾಯಿತು 1931ರ ಇರ್ವಿನ್ ನಾಲಾ ರೈತರ ಚಳುವಳಿಯಲ್ಲಿ ಸಿಂಹದಂತೆ ನಾಯಕತ್ವ ವಹಿಸಿ ಮಂಡ್ಯ ಜಿಲ್ಲೆಯ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದ ಶ್ರೀ ಗೌಡರ ಧೈರ್ಯ ಸಂಸ್ಥಾನದ ನಾಯಕರಿಗೆ ಅರಿವಾಗಿತ್ತು. ಇವರೊಡನೆ ಶಿವಪುರದ ಅಧಿವೇಶ ನಕ್ಕೆ ಸಂಪೂರ್ಣ ಬೆಂಬಲ ಕೊಡುವುದಾಗಿ ಇಂಡುವಾಳಿನ ಶ್ರೀ ಹೆಚ್. ಹೊನ್ನಯ್ಯ ನವರೂ ಮದ್ದೂರು ಸಮಿತಿಯ ಖಜಾಂಚಿಗಳಾದ ಪಿ. ತಿರುಮಲೇಗೌಡರೂ ನೆರ ವಾದರು ಮದ್ದೂರು ತಾಲ್ಲೂಕಿನ ಜನತೆ ರಾಷ್ಟ್ರಕೂಟಸಭೆಯ ಯಶಸ್ಸಿಗೆ ದುಡಿಯಲು ಸಿದ್ಧರಾಗಿ ನಿಂತರು. ಈ ಶಿವಪುರದ ರಾಷ್ಟ್ರಕೂಟ ಸಭೆಯ ಫಲಿತಾಂಶ ವನ್ನು ಇಡೀ ಭಾರತವೇ ಕಾತರತೆಯಿಂದ ನಿರೀಕ್ಷಿಸುತ್ತಿತ್ತು.

ರಾಷ್ಟ್ರಕೂಟ ಸಭೆಗೆ ಸುಮಾರು 30-40 ಸಾವಿರ ಜನ ಸೇರುವವರಿದ್ದರು. ಇದು ಮೂರು ದಿನಗಳ ಸಮಾರಂಭ, ಇದಕ್ಕನುಕೂಲವಾದ ಸ್ಥಳ ಬೇಕು. ಸಮಾರಂಭದ ಏರ್ಪಾಡು ಸುವ್ಯವಸ್ಥಿತವಾಗಿ ನಡೆಯಬೇಕು. ಅರ್ಥಿಕ ವ್ಯವಸ್ಥೆ, ನಿಷ್ಠೆಯಿಂದ ಕೆಲಸ ಕೈಗೊಳ್ಳುವ ವಿವಿಧ ಸಮಿತಿಯ ವ್ಯವಸ್ಥೆ ತ್ವರಿತವಾಗಿ ಜರುಗಬೇಕು.

ಹೆಚ್ಚು ಜನ ಸೇರುವ ಬೃಹತ್ ಸಭೆಗೆ, ಸಾವಿರಾರು ಜನ ಆಹ್ವಾನಿತ ಮುಖಂಡ ರನ್ನು ಸಂಸ್ಥಾನಾದ್ಯಂತ ಆಹ್ವಾನಿಸವುದು ಅದಕ್ಕನುಗುಣವಾದ ಸ್ಥಳವನ್ನು ಆಯ್ಕೆ ಮಾಡುವುದು ಅಗತ್ಯ ಎಂಬುದು ಎಲ್ಲ ನಾಯಕರ ಮನಸ್ಸಿನಲ್ಲಿಯೂ ಬಂದಿತು. ಅಂದು ಕಾಂಗ್ರೆಸ್ ಸಂಸ್ಥೆಯನ್ನು ಕಂಡರೆ ಸರ್ಕಾರಕ್ಕೆ ವಿರೋಧವಿದ್ದು ಸರ್ಕಾರವು ಈ ರಾಷ್ಟ್ರ ಕೂಟ ಸಮಾರಂಭಕ್ಕೆ ಯಾವುದೇ ಸ್ಥಳವನ್ನು ಕೊಡಲು ಸಾಧ್ಯವಿರಲಿಲ್ಲ. ಸರ್ಕಾರಿ ಸ್ಥಳ ದಲ್ಲಿ ವಿರೋಧಿ ಸಮಾರಂಭವನ್ನು ನಡೆಸುವಂತೆಯೂ ಇರಲಿಲ್ಲ. ಈ ಬೃಹತ್ ಸಭೆಗೆ ಖಾಸಗಿ ಸ್ಥಳವೇ ಅಗತ್ಯವಾಗಿಬೇಕಾಗಿತ್ತು. ಅಲ್ಲಿ ನೀರಿನ ಅನುಕೂಲವಿರಬೇಕು. ಸುತ್ತ ಮುತ್ತ ರಸ್ತೆಯ ಅನುಕೂಲವಿರಬೇಕು. ಗಾಳಿ ಬೆಳಕಿನ ಅನುಕೂಲ, ವಿದ್ಯುಚ್ಛಕ್ತಿಯ

ಅನುಕೂಲ, ಇತ್ಯಾದಿಗಳ ಆಗತ್ಯವಿತ್ತು. ಇಷ್ಟು ಸುಲಭವಾಗಿ ಈ ಎಲ್ಲಾ ಅನುಕೂಲ ವಿರುವ ಮತ್ತು ವಿಸ್ತಾರವಾದ ಖಾಸಗಿ ಸ್ಥಳ ಸಭೆಗೆ ದೊರಕುವುದು ಶಿವಪುರ ಭಾಗದಲ್ಲಿ ದುರ್ಲಭವೇ ಆಗಿತ್ತು. ಅಂತಹ ಸಂದರ್ಭದಲ್ಲಿ ಶಿವಪುರದ ಪಿ. ತಿರುಮಲೇಗೌಡರ ಉದಾರವ್ಯಕ್ತಿತ್ವ ಸ್ಮರಣೀಯವಾದುದು. ವಮಾನ್ಯ ಗೌಡರು ತಮ್ಮ ಮನೆಯ ಹಿಂಭಾಗದ ತರೀಭೂಮಿಯನ್ನೂ ಪಕ್ಕದಲ್ಲೇ ಇದ್ದ ತಮ್ಮ ತಮ್ಮನ ಭೂಮಿಯನ್ನೂ ರಾಷ್ಟ್ರಕೂಟ ಸಭೆಗೆ ಬಿಟ್ಟುಕೊಡುವುದಾಗಿ ವಿಶಾಲ ಮನಸ್ಸಿನಿಂದ ಒಪ್ಪಿದರು. ಅವರ ದೇಶಾ ಅಭಿಮಾನ, ಸ್ವಾತಂತ್ರ್ಯದ ಕಾಳಜಿ, ಜನಹಿತಭಾರವಸೆ, ಸ್ವಯಂಸೇವಾ ಮನೋವೃತ್ತಿ, ಇವುಗಳಿಂದಾಗಿ ಅಂದಿನ ರಾಷ್ಟ್ರಕೂಟ ಮಹಾ ಸಭೆಯ ಯಶಸ್ಸಿನಲ್ಲಿ ಇವರಿಗೂ ಒಂದು ಸಿಂಹಪಾಲು ಇರುವುದನ್ನು ಸ್ಮರಿಸಿಕೊಳ್ಳಬೇಕು. ಅಷ್ಟು ವಿಶಾಲವಾದ ಜಾಗ ವನ್ನು ಕೊಡದಿದ್ದರೆ ಭಾರತದ ಚರಿತ್ರೆಯಲ್ಲಿ ಶಿವಪುರದ ಸ್ವಾತಂತ್ರ್ಯಚಳುವಳಿ ಆಮರವಾಗಿ ನಿಲ್ಲುತ್ತಿರಲಿಲ್ಲ :

ಕಛೇರಿ ಸ್ಥಾಪನೆ : ಸಭೆಯ ಏರ್ಪಾಡಿಗಾಗಿ ಒಂದು ವಿಶಾಲವಾದ ಕೊಠಡಿ ಅಗತ್ಯವಾಗಿ ಬೇಕಾಗಿತ್ತು. ದೊಡ್ಡ ಕೊಠಡಿ ಮದ್ದೂರಿನಲ್ಲಿ ಸಿಗುವುದು ಅಭಾವವೇ. ತಿರುಮಲೇಗೌಡರೇ ತಮ್ಮ ವಿಶಾಲವಾದ ಮನೆಯನ್ನೇ ರಾಷ್ಟ್ರಕೂಟ ಸಭೆಯ ಕಛೇರಿ ಯನ್ನಾಗಿ ಮಾರ್ಪಡಿಸಿಕೊಳ್ಳಲು ವಿಶಾಲ ಮನಸ್ಸಿನಿಂದ ಬಿಟ್ಟುಕೊಟ್ಟರು. ಮುಂದೆ ವಿವಿಧ ಕೆಲಸ ಕಾರ್ಯಗಳನ್ನು ಪ್ರಾರಂಭಗೊಳಿಸಲು ಬೇರೆ ಬೇರೆ ಸಮಿತಿಗಳನ್ನು ರಚನೆ ಮಾಡಬೇಕಿತ್ತು. ಈ ಎಲ್ಲಾ ಸಮಿತಿಗಳಲ್ಲೂ ಮೈಸೂರು ಪ್ರಾಂತ್ಯದ ಎಲ್ಲಾ ಭಾಗದ ನಾಯಕರೂ ಮುಂಚೂಣಿ ಕೆಲಸವನ್ನು ನಿರ್ವಹಿಸಬೇಕೆಂಬ ತೀರ್ಮಾನವಿತ್ತು. ಸಮಿತಿ ರಚನಗೆ ಮೊದಲು ಎಲ್ಲಾ ನಾಯಕರನ್ನು ಸಭೆಗೆ ಕರೆಯಬೇಕು. ಇದಕ್ಕೆ ಹಣ ಬೇಕು. ಮೊದಲೇ ಎಂ ಸಿ ಲಿಂಗೇಗೌಡರ ತಮ್ಮಂದಿರಾದ ಶ್ರೀ ತಮ್ಮಣ್ಣಗೌಡರು ಸಭೆ ಏರ್ಪಾಡಿಗಾಗಿ ಐವತ್ತು ರೂಪಾಯಿಗಳನ್ನು ಕೊಡುಗೆಯಾಗಿ ಕೊಟ್ಟರು. ದೇಶಹಳ್ಳಿ ಶಿವಲಿಂಗಯ್ಯನವರು 101 ರೂಗಳನ್ನು ಸಮಿತಿಗೆ ದಾನ ಮಾಡಿದರು. ಈ 151 ರೂಪಾಯಿಗಳ ಬಂಡವಾಳದಿಂದ ವಿವಿಧ ಸಮಿತಿಗಳನ್ನು ರಚಿಸಲು ಸಭೆ ಕರೆಯ ಲಾಯಿತು.

ದೊಡ್ಡಬಳ್ಳಾಪುರದ ಟಿ. ಸಿದ್ದಲಿಂಗಯ್ಯನವರು ಸಂಸ್ಥಾನದ ಮುಂಚೂಣಿ ನಾಯಕರಾಗಿ ಸಿತು ಜೈಲು ವಾಸವನ್ನು ಅನುಭವಿಸಿ ಬಂದಿದ್ದರು. ಹಿರಿಯರೂ ವಿಚಾರವಂತರೂ ದೇಶಭಕ್ತಿ ದ್ಯೋತಕರೂ ಆದ ಶ್ರೀ ಟಿ. ಸಿದ್ದಲಿಂಗಯ್ಯನವರನ್ನು ಮಹಾಧಿವೇಶನದ ಅಧ್ಯಕ್ಷರನ್ನಾಗಿ ಆಯ್ಕೆಮಾಡಲಾಯಿತು.

ಎಚ್. ಸಿ. ದಾಸಪ್ಪನವರು ಸ್ವಾಗತ ಸಮಿತಿಯ ಅಧ್ಯಕ್ಷರಾದರು, ಇಲ್ಲಿಯ ತನಕ ರಾಜಕೀಯದಿಂದ ದೂರವಿದ್ದ ಮೈಸೂರಿನ ಸಾಹುಕಾರ್ ಚನ್ನಯ್ಯನವರು ವೀರಣ್ಣ ಗೌಡರ ಚಾಣಾಕ್ಷತೆಯಿಂದ ಈ ಅಧಿವೇಶನದಲ್ಲಿ ಭಾಗವಹಿಸಿ ಸ್ವಾಗತ ಸಮಿತಿಯ

ಉಪಾಧ್ಯಕ್ಷರಾದರು. ಕಾರ್ಯದಕ್ಷತೆಯುಳ್ಳ ನಿಪುಣರಾದ ಎಚ್. ಕೆ ವೀರಣ್ಣಗೌಡರು ಮಹಾಧಿವೇಶನದ ಕಾರ್ಯದರ್ಶಿಗಳಾದರು. ಕೊಪ್ಪದ ಜೋಗಿಗೌಡರು ಖಜಾಂಚಿಗಳಾದರು. ಪಿ. ತಿರುಮಲೇಗೌಡ, ಎಂ. ಪಿ ಶ್ರೀನಿವಾಸ ಅಯ್ಯಂಗಾರ್, ಗುರುದೇವರಹಳ್ಳಿ ಜಿ. ಕೆಂಪೇಗೌಡ ಇವರುಗಳು ಸದಸ್ಯರಾದರು.

ಮೈಸೂರಿನ ಸಾಹುಕಾರ್ ಚೆನ್ನಯ್ಯನವರ ನೇತೃತ್ವದಲ್ಲಿ ಧನ ಸಂಗ್ರಹ ಸಮಿತಿ ರಚನೆಯಾಯಿತು. ಇವರೊಡನೆ ಎಚ್. ಕೆ. ವೀರಣ್ಣಗೌಡರು ಸೇರಿದರು. ಬೇರೆ ಬೇರೆ ಗ್ರಾಮಗಳಲ್ಲಿ ಸಂಚರಿಸಿ ಹೆಚ್ಚಿನ ಹಣಸಂಗ್ರಹ ವ್ಯವಸ್ಥೆಯಲ್ಲಿ ಇವರ ಕಾರ್ಯ ಅತಿಯಾಗಿತ್ತು. ನೇರವಾಗಿ ಸಾಹುಕಾರ್ ಚೆನ್ನಯ್ಯನವರೇ ಈ ಸಭೆಗೆ ಹೆಚ್ಚಿನ ಹಣ ಸಹಾಯ ಮಾಡಿದರು. ಒಳಗರಹಳ್ಳಿ, ಗೆಜ್ಜಲಗೆರೆ, ಕುದುರುಗುಂಡಿ, ಗೊರವನಹಳ್ಳಿ, ಚನ್ನಸಂದ್ರ, ನಗರಕೆರೆ, ಸಾದೊಳಲು ದೇಶಹಳ್ಳಿ, ಕೆಸ್ತೂರು, ಕೊಪ್ಪ, ಮುಂತಾದ ಕಡೆಗಳಲ್ಲಿ ಹೆಚ್ಚು ಹಣ ಸಂಗ್ರಹವಾಯಿತು, ಗೌಡಗೆರೆಯಲ್ಲಿ ತಿರುಪತಿಯ ಹರಕೆ ಹಣವನ್ನು ರಾಷ್ಟ್ರಕೂಟ ಸಭೆಯ ಖರ್ಚಿಗಾಗಿ ಅರ್ಪಿಸಿದರು. [illegible] ಒಳಗೆರೆಹಳ್ಳಿ ಕರಡಣ್ಣಯ್ಯನವರು ಹಣ ಸಂಗ್ರಹಣೆಯ ಜೊತೆಗೆ [illegible] ಒದಗಿಸಿ ಕೊಟ್ಟು ಸಭೆಯ ಯಶಸ್ವಿಗೆ ಕಾರಣರಾದರು.

ಎಂ ಎಸ್ ಜೋಯಿಸರ ನೇತೃತ್ವದಲ್ಲಿ ಸ್ವಯಂಸೇವಕರ ಸಮಿತಿ ರಚನೆಯಾಯಿತು. ಸಂಸ್ಥಾನದ ಎಲ್ಲಾ ಭಾಗಗಳಿಂದ ಸ್ವಯಂಸೇವಕರು [illegible] ಸಭೆಗೆ ಆಗಮಿಸಿ ಕೆಲಸ ನಿರ್ವಹಿಸಿ ರಾಷ್ಟ್ರಕೂಟ ಸಭೆಗೆ ಕೀರ್ತಿ ತಂದರು.

ಮೂರು ದಿನಗಳ ಕಾಲ ನಡೆಯುವ ಮಹಾಸಭೆಯ ಊಟೋಪಚಾರದ ವ್ಯವಸ್ಥೆಯನ್ನು ಮದ್ದೂರಿನ ಎಂ ಪಿ ಶ್ರೀನಿವಾಸ ಅಯ್ಯಂಗಾರ್ ಹಾಗು ಗುರುದೇವರಹಳ್ಳಿ ಬಿ. ಕೆಂಪೇಗೌಡರು ವಹಿಸಿಕೊಂಡರು. ಸ್ವಯಂಸೇವಕ ದಳಕ್ಕೆ ಹಾಗು ಆಹ್ವಾನಿತರಿಗೆ ಊಟದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಲಾಗಿತ್ತು. ಪಾಕಶಾಲೆಯ ಜವಾಬ್ದಾರಿ ಮತ್ತು ಬೇಕಾಗುವ ಪದಾರ್ಥಗಳೆಲ್ಲವನ್ನು ಈ ಸಮಿತಿ ತುಂಬ ಎಚ್ಚರಿಕೆಯಿಂದ ನಿರ್ವಹಿಸಿತು.

ಶ್ರೀ ಎಚ್. ಕೆ. ವೀರಣ್ಣಗೌಡರ ನೇತೃತ್ವದಲ್ಲಿ ಪ್ರಚಾರ ಸಮಿತಿ ರಚನೆಯಾಯಿತು. ತುಂಬಾ ಪರಿಣಾಮಾತ್ಮಕವಾಗಿ ಅಧಿವೇಶನದ ಪ್ರಚಾರ ಕಾರ್ಯ ನಡೆದು ಜನಸ್ತೋಮದ ಸಹಕಾರಕ್ಕೆ ಈ ಸಮಿತಿ ಕಾರಣವಾಯಿತು.

ಕೊಪ್ಪದ ಜೋಗಿಗೌಡರ ಮಗ ರಮೇಶ, ಬೆಸಗರಹಳ್ಳಿಯ ಅಪ್ಪಾಜಿ, ಒಳಗರಹಳ್ಳಿ ಕರಡಣ್ಣಯ್ಯ, ಹನುಮಂತಪುರದ ಸ್ವತ್ತಲಿಂಗೇಗೌಡ, ಗೆಜ್ಜಲಗೆರೆ ಮರಿಸ್ವಾಮಿಗೌಡ, ಕುದರಗುಂಡಿ ಮರಿಸ್ವಾಮಿ, ದೇಶಹಳ್ಳಿ ತಮ್ಮಯ್ಯ, ಚಿಕ್ಕಬೀರೇಗೌಡ, ನಗರಕೆರೆ ಎಂ ಪಿ ಲಿಂಗೇಗೌಡರಾದಿಯಾಗಿ ಸುಮಾರು 400 ಜನ ಸ್ವಯಂಸೇವಕರು ಅಧಿವೇಶನದ ಒಂದು ತಿಂಗಳು ಮುಂಚಿತವಾಗಿ ಎಲ್ಲಾ ಪೂರ್ವದಿನ ಕೆಲಸ ಕಾರ್ಯಗಳನ್ನು

ನಿರ್ವಹಿಸಿದರು.

ಮಹಿಳಾ ಸ್ವಯಂಸೇವಕಿಯರ ತಂಡವು ತುಂಬ ಜಾಗ್ರತೆಯಿಂದ ಶಿವಪುರದ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಿದ್ದರು. ಪಾಜಹಳ್ಳಿಯ ಶ್ರೀಮತಿ ವೆಂಕಟಮ್ಮನವರು, 24 ಮಂದಿ ಮಹಿಳಾ ಸ್ವಯಂ ಸೇವಕಿಯರಿಗೆ ತರಬೇತು ಕೊಟ್ಟು ದೇಶದ ಸ್ವಾತಂತ್ರ್ಯ ಸೇವೆಯಲ್ಲಿ ಭಾಗವಹಿಸುವಂತೆ ಸಹಕರಿಸಿದರು. ಇವರಲ್ಲಿ ಬಡವ ಶ್ರೀಮಂತರೆಂಬ ಭೇದವಿಲ್ಲದೆ ಎಲ್ಲ ವರ್ಗದ ಸ್ತ್ರೀ ಸ್ವಯಂಸೇವಕಿಯರೂ ಸೇರಿದ್ದರು. ವಿದ್ಯಾರ್ಥಿನಿಯರು ಸ್ವಯಂಸೇವಕಿಯರಾಗಿ ನಿಂತು ಸ್ಫೂರ್ತಿಯಿಂದ ಕೆಲಸ ನಿರ್ವಹಿಸಿದರು. ಸಾಹುಕಾರ್ ಚನ್ನಯ್ಯನವರ ಮಗಳು ಪ್ರಮೀಳಾ ಅವರು ಸ್ವಯಂಸೇವಕಿಯರ ತಂಡದಲ್ಲಿ ಒಬ್ಬರಾಗಿದ್ದರು. ಸ್ವಯಂಸೇವಕ ಸೇವಕಿಯರ ಕವಾಯಿತುಗಳು ನೋಟಕರಿಗೆ ಆನಂದ ಕೊಡುವಂತಿತ್ತು.

ತಿರುಮಲೇಗೌಡರ ಮನೆಯ ಹಿಂಭಾಗದ ವಿಶಾಲಮೈದಾನದಲ್ಲಿ ಬಹಿರಂಗ ಸಭೆಗಾಗಿ ಎತ್ತರದ ವೇದಿಕೆಯೊಂದು ನಿರ್ಮಾಣಗೊಂಡಿತು. ಅದರ ಎದುರು ಪೂರ್ವಾಭಿಮುಖವಾಗಿ 60 ಅಡಿ ಎತ್ತರದ ಧ್ವಜಸ್ತಂಭವನ್ನು ನಿಲ್ಲಿಸಲಾಗಿತ್ತು. ಪಕ್ಕದಲ್ಲಿ ಸುಮಾರು ಎರಡುಸಾವಿರ ಜನ ಒಂದೇಸಾರಿ ಕುಳಿತು ಊಟ ಮಾಡುವಂತಹ ಭೋಜನ ಶಾಲೆಯನ್ನು ನಿರ್ಮಾಣ ಮಾಡಲಾಗಿತ್ತು. ಇದಕ್ಕೆ ಹೊಂದಿಕೊಂಡಂತೆ ಪಾಕಶಾಲೆ ಇತ್ತು. ತಿರುಮಲೇಗೌಡರ ಮನೆಯ ಮುಂಭಾಗದಲ್ಲಿ ಪ್ರತಿನಿಧಿಗಳ ವಸತಿ, ಮತ್ತು ವಿಷಯನಿಯಾಮಕ ಸಭೆಯ ವ್ಯವಸ್ಥೆ ಆಗಿತ್ತು. [illegible] ಶೇಷಾದ್ರಿ ಅಯ್ಯಂಗಾರ್ ನಾಯಕತ್ವದಲ್ಲಿ ಸುಮಾರು 35 ಜನ [illegible] ಸ್ವಯಂಸೇವಕರಾಗಿ ಶಿಸ್ತಿನಿಂದ ಕೆಲಸ ನಿರ್ವಹಿಸುತ್ತಿದ್ದರು.

ಒಂದೆಡೆ ಶಿವಪುರದಲ್ಲಿ ರಾಷ್ಟ್ರೀಯ ಧ್ವಜ ಹಾರಿಸುವ [illegible] ವೈವಿಧ್ಯಮಯ ರೀತಿಯಲ್ಲಿ ಕಾರ್ಯಾಚರಣೆಗಳು ನಡೆಯುತ್ತಿದೆ. ಮತ್ತೊಂದೆಡೆ ಇವೆಲ್ಲದರ ವಿನಾಶಕ್ಕಾಗಿ ದ್ವೇಷದ ಬೆಂಕಿ ಜ್ವಾಲೆಯನ್ನು ಕಾರುತ್ತಿದೆ. ಕಾಂಗ್ರೆಸ್ ವಿರೋಧಿಗುಂಪೊಂದು ಆಗಾಗ್ಗೆ ಪ್ರಜಾ ಚಳವಳಿಗಳ ಮೇಲೆ [illegible] ತ್ತಿತ್ತು. ಅಂದಿನ ಮೈಸೂರು ಸಂಸ್ಥಾನದ ದಿವಾನರಾದ ಮಿರ್ಜಾ ಇಸ್ಮಾಯಿಲರು [illegible] ರದ ಸಿದ್ಧಾಂತಗಳ ಪ್ರತಿ ವಿಚಾರಗಳನ್ನು ನಾನಾ ಮಾಧ್ಯಮಗಳ ಮೂಲಕ ಹರಿಬಿಡುತ್ತಿದ್ದರು. ಆಗಾಗ್ಗೆ ಸೋಮನಹಳ್ಳಿ ಎನ್.ಸಿ. ಮಲ್ಲಯ್ಯನವರ ಮನೆಗೆ [illegible] ಕಾಂಗ್ರೆಸಿನ ವಿರುದ್ಧ ಕಿತಾಪತಿ ನಡೆಸುತ್ತಿದ್ದರು. ತಿರುಮಲೇಗೌಡರಿಗೂ ಚಿಕ್ಕಣ್ಣಗೌಡರಿಗೂ ವಾರೆಂಟ್ ಕೊಡುತ್ತಿದ್ದುದೂ ಉಂಟು. ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟ್ ಆದ ಶ್ರೀ ಜಿ ಎಂ ಮಕ್ರಿಯವರಿಂದ ಮದ್ದೂರಿನ ಸುತ್ತ ಮುತ್ತ ಒಂದು ತಿಂಗಳ ನಿಷೇಧಾಜ್ಞೆಯನ್ನು ಹೊರಡಿಸಿದರು. ಬರುಬರುತ್ತಾ ಗಲಾಟೆಕಾರರ ಗುಂಪು ಮಿತಿಮೀರಿತ್ತು. ಐದುಸಾವಿರ ಪೋಲೀಸ್ ಪಡೆಗಳು ಶಿವಪುರದಲ್ಲಿ ಹಾಜರಾಗುವ ಪ್ರಸಂಗವಾಯಿತು.

600 ಜನ ಬಂದೂಕಧಾರಿಗಳು ಶಿವಪುರವನ್ನು ಮುತ್ತಿದರು. ಎಲ್ಲಾ ಪೋಲಿಸ್ ಅಧಿಕಾರಿಗಳೂ ಶಿವಪುರದಲ್ಲಿ ಟಿಕಾಣಿ ಹೂಡಿದರು. ಎಲ್ಲೆಲ್ಲೂ ಭಯಾನಕ ವಾತಾವರಣ ಆವರಿಸಿತು. ಕಾರ್ಯಕರ್ತರ ದಕ್ಷತೆ, ಉತ್ಸಾಹ ಮತ್ತು ಶಾಂತಿ ಶಿಸ್ತಿನ ಕಾರಣದಿಂದಾಗಿ ಯಾವ ತೊಂದರೆಗಳೂ ಆಗಲಿಲ್ಲ. ಮೈಸೂರು ರಾಜ್ಯದ ವಕೀಲರ ಸಂಘ ಈ ಶಾಂತಿ ಸಮರಕ್ಕೆ ಬೆನ್ನೆಲುಬಾಗಿ ನಿಂತಿತು. ಸಂಸ್ಥಾನದ ಸುತ್ತ ಮುತ್ತಲಿನ ಸಾವಿರಾರು ಪ್ರಜೆಗಳು, ಯುವಚೇತನಗಳು, ಶಿವಪುರಕ್ಕೆ ಆಗಮಿಸಿದವು.

ದಿನಾಂಕ 10. 4. 38 ರಂದು ಅಧಿವೇಶನದ ಎಲ್ಲ ಏರ್ಪಾಡುಗಳೂ ಮುಗಿದುವು. ಬಿದಿರು ತಟ್ಟಿಗಳಿಂದ ವಿಶಾಲವಾದ ಸಭಾಂಗಣ ನಿರ್ಮಾಣವಾಗಿತ್ತು. ಅದಕ್ಕೆ ಹೊಂದಿಕೊಳ್ಳುವಂತಹ ಮಹಾದ್ವಾರ ರಚನೆಯಾಗಿತ್ತು. ಮಹಾದ್ವಾರದ ಮುಂದೆ ಗಾಂಧೀಜಿಯವರ ಭಾವಚಿತ್ರ, ನೆಹರೂ ಭಾವಚಿತ್ರ ಮತ್ತು ಭಾರತಮಾತೆಯ ಭಾವಚಿತ್ರವನ್ನು ಸ್ಫೂರ್ತಿದಾಯಕ ರೀತಿಯಲ್ಲಿ ತೂಗುಹಾಕಲಾಗಿತ್ತು. ಅಂದು ಹರಿಪುರವೋ, ಶಿವಪುರವೋ ಎನ್ನುವಂತೆ ಸಭಾಂಗಣ ರೋಮಾಂಚನವಾಗಿತ್ತು.

10-4-30ರ ಸಂಜೆ 6-00 ಗಂಟೆಯಲ್ಲಿ ಮದ್ದೂರಿನ ಪಶ್ಚಿಮ ದ್ವಾರದಿಂದ ಅಧ್ಯಕ್ಷರಾದ ಟಿ ಸಿದ್ದಲಿಂಗಯ್ಯನವರನ್ನು 101 ಜೊತೆ ಎತ್ತಿನ ಗಾಡಿಯಲ್ಲಿ ಮೆರವಣಿಗೆ ಮಾಡಿಸಿಕೊಂಡು ಶಿವಪುರಕ್ಕೆ ಕರೆತರಲಾಯಿತು. ಇದಕ್ಕೆ ಮೊದಲು ಶ್ರೀ ಸಿದ್ಧಲಿಂಗಯ್ಯನವರ ಪತ್ನಿ ಶ್ರೀಮತಿ ಪಾರ್ವತಮ್ಮನವರು ತಮ್ಮ ಪತಿಯ ಪಾದಪೂಜೆ ಮಾಡಿ ಮಂಗಳಾರತಿ ಬೆಳಗಿದರು. ತಮ್ಮ ತಾಳಿಯನ್ನು ಮುಟ್ಟಿ ವಂದಿಸಿ ಆನಂತರ ತನ್ನ ಪತಿದೇವರನ್ನು ಸ್ವಾಗತ ಸಮಿತಿ ಅಧ್ಯಕ್ಷರಾದ ಎಚ್ ಸಿ ದಾಸಪ್ಪನವರ ಹಸ್ತ ಅರ್ಪಿಸಿದರು. ಸಿದ್ಧಲಿಂಗಯ್ಯನವರು ಬಿಳಿಟೋಪಿ ಸರಳವಾದ ಪೈಜಾಮ, ಜುಬ್ಬ ಧರಿಸಿ ರಥಾರೋಹಣವಾಗಿ ಕೈಮುಗಿದು ನಿಂತರು. ಅಂಕೂಗೌಡರು ಸಾರಥಿಯಾಗಿ ರಥ ನಡೆಸಿದರು. ರಥದ ಗಾಲಿಗಳು ನಿಧಾನವಾಗಿ ಚಲಿಸಿದವು, "ಏನೇ ಬರಲಿ ಒಗ್ಗಟ್ಟು ಇರಲಿ" ಎಂಬ ಘೋಷಣೆ ಗಗನವನ್ನು ಭೇದಿಸಿತು. ಜೈಕಾರಗಳ ಸುರಿಮಳೆಯಾಯಿತು. ಸರ್ಕಾರದ ದಬ್ಬಾಳಿಕೆಗೆ ಧಿಕ್ಕಾರವೂ ಆಯಿತು. ಶ್ರೀಮತಿ ಟಿ. ಸುನಂದಮ್ಮನವರು ತಮ್ಮ ಶುಶ್ರಾವ್ಯ ಕಂಠದಿಂದ "ವಂದೇ ಮಾತರಂ" ಗೀತೆಯನ್ನು ಹಾಡಿದರು. ಶಾಂತಿ ಶಿಸ್ತಿನಿಂದ ಮೆರವಣಿಗೆ ಸಾಗಿ ರಾತ್ರಿ 11 ಗಂಟೆಗೆ ನಿಶ್ಚಿತ ಸ್ಥಳವನ್ನು ತಲುಪಿದರು.

ಇತ್ತ ಸರ್ಕಾರದ ಸ್ಥಿತಿ ಇಕ್ಕಟ್ಟಿನದಾಗಿತ್ತು. ಒಂದೆಡೆ ಜನರ ಪ್ರವಾಹ ಮತ್ತೊಂದೆಡೆ ಕಾಂಗ್ರೆಸ್ ವಿರುದ್ಧ ರೋಷ. ಇವರ ಮಧ್ಯೆ ಪೋಲಿಸ್ ಕಾಯಿದೆಯ 39ನೇ ನಿಯಮದ ಪ್ರಕಾರ ಶಿವಪುರದ 5 ಮೈಲಿಗಳ ಸುತ್ತ ಒಂದು ತಿಂಗಳ ಕಾಲ ಎಲ್ಲಿಯೂ ಕಾಂಗ್ರೆಸ್ ತ್ರಿವರ್ಣ ಧ್ವಜವನ್ನು ಆರೋಹಣ ಮಾಡಬಾರದೆಂಬ ಕಟ್ಟು ನಿಟ್ಟಾದ ಅಜ್ಞೆ. ಶ್ರೀ ಟಿ. ಸಿದ್ದಲಿಂಗಯ್ಯನವರನ್ನೂ ಸೇರಿಸಿ ಪ್ರಧಾನ ವ್ಯಕ್ತಿಗಳ ಮೇಲೆ

ಈ ಆಜ್ಞೆಯ ಪ್ರಯೋಗ ಪ್ರಬಲವಾಗಿತ್ತು. ಸರ್ಕಾರದ ಪ್ರತಿಬಂಧಕಾಜ್ಞೆಯನ್ನು ಅಖಂಡ ಜನಸ್ತೋಮಕ್ಕೆ ಪೋಲಿಸ್ ಸಾರುತ್ತಿದೆ. ಜನಸ್ತೋಮದ ಧೈರ್ಯ ಕುಂದುತ್ತಿದೆ. ನಾಳಿನ ಧ್ವಜಾರೋಹಣ ಸಂದರ್ಭದಲ್ಲಿ ಎಷ್ಟು ಜನರ ಜೀವ ಭೂಮಿಗುರುಳುತ್ತದೋ ಎಂಬ ಭಯ ಸೃಷ್ಟಿಯಾಯಿತು. ಆ ದಿನ ರಾತ್ರಿ ಸಭೆ ಸೇರಿ ಶಾಂತಿ ಮತ್ತು ಶಿಸ್ತಿನಿಂದ ನಾಳೆಯ ಧ್ವಜಾರೋಹಣ ಕೆಲಸ ನಡೆಸಬೇಕು "ಸರ್ಕಾರದ ಆಜ್ಞೆ ಮುರಿಯುವ ಸತ್ಯಾಗ್ರಹಿಗಳು ನಾವು" ಎಂಬ ಪ್ರತಿಜ್ಞೆ ನಡೆಯಿತು. ಪ್ರತಿಬಂಧಕಾಜ್ಞೆ ಇರುವುದರಿಂದ ಧ್ವಜಾರೋಹಣ ಬೇಡ, ಬರಿಯ ಸಭೆ ನಡೆಸೋಣ ಎಂಬ ವಾದವೂ ಕೆಲವರಲ್ಲಿ ಮೂಡಿಬಂತು. ಧ್ವಜಾರೋಹಣ ಮಾಡುವ ಜಾಗ ಖಾಸಗಿಸ್ಥಳವಾಗಿರುವುದರಿಂದ ನಿಷೇದಾಜ್ಞೆಯನ್ನು ಮುರಿಯಲೇಬೇಕು ಎಂದು ಶ್ರೀಮತಿ ಸುನಂದಮ್ಮ ಶ್ರೀಮತಿ ಯಶೋದಮ್ಮ ದಾಸಪ್ಪ ಮುಂತಾದ ಸ್ತ್ರೀಶಕ್ತಿ ಧ್ವನಿಗೂಡಿಸಿತು. "ನಾನೇ ಧ್ವಜಾರೋಹಣ ಮಾಡುತ್ತೇನೆ ಮುಂದಿನದನ್ನು ನೀವು ನೋಡಿಕೊಳ್ಳಿ" ಎಂದು ಟಿ. ಸುನಂದಮ್ಮ ಸ್ವರ ಏರಿಸಿದರು. ಇವರ ದಿಟ್ಟ ನಿಲುವು, ದೇಶಾಭಿಮಾನ, ಅದಮ್ಯ ಉತ್ಸಾಹ ಸರ್ವರಲ್ಲೂ ಚೇತನ ತುಂಬಿತು. ಪ್ರಳಯ ರೂಪದ ಸ್ತ್ರೀ ಶಕ್ತಿಯ ಧ್ವನಿ ಸರ್ಕಾರದ ಮತ್ತು ಪೋಲಿಸರ ಹೃದಯವನ್ನು ಅಲ್ಲಾಡಿಸಿತು. ರಾತ್ರಿಯೆಲ್ಲಾ ಯಾರಿಗೂ ನಿದ್ರೆಯಿಲ್ಲ, ಧೈರ್ಯ ಆತಂಕಗಳ ದ್ವಂದ್ವದಲ್ಲಿ ಬೆಳಗು ಮಾಡಿದರು.

11–4–38 ಮದ್ದೂರಿನ ಶಾಂತಿ ಸಮರದ ಚಿರಸ್ಮರಣೆಯ ದಿನ. ಮೈಸೂರು ಸಂಸ್ಥಾನದ ರಾಜಕೀಯ ಇತಿಹಾಸದಲ್ಲಿ ಹೊಸ ಬೆಳಕೊಂದು ಮೂಡಿದ ದಿನ. ಭಾರತೀಯ ಸ್ವಾತಂತ್ರ್ಯ ಪ್ರೇಮಿಗಳಲ್ಲಿ ದೇಶಭಕ್ತಿ, ಸಾಮರ್ಥ್ಯ, ಶಾಂತಿ, ಸಂಘಟನಾ ಶಕ್ತಿಯನ್ನು ಪ್ರಚೋದಿಸಿದ ಮಂಗಳ ದಿನ.

ಶಾಂತಿ ಸತ್ಯಾಗ್ರಹಿಗಳ ಕಾರ್ಯಾಚರಣೆಯನ್ನು ನೇರವಾಗಿ ವೀಕ್ಷಿಸುವ ಕುತೂಹಲದಿಂದ ಮೂಡಣದಿಕ್ಕಿನಲ್ಲಿ ಸಪ್ತಾಶ್ವರಥದಲ್ಲಿ ಸೂರ್ಯದೇವ ಉದಯಿಸಿ ಬಂದನು. ಅಖಂಡ ಜನಸ್ತೋಮ ಧೈರ್ಯ ಆತಂಕಗಳಿಂದ ನಿತ್ಯಕರ್ಮ ಮುಗಿಸಿ, ಧ್ವಜದ ಸುತ್ತ ನೆರೆದರು. ಧ್ವಜಕ್ಕೇ ಆಗಲಿ, ಜನತೆಗೇ ಆಗಲಿ, ಯಾವುದೇ ಅಪಾಯವಾಗದಂತಹ ರೀತಿಯಲ್ಲಿ ಶಿಸ್ತಿನಿಂದ ಎಲ್ಲಾ ಏರ್ಪಾಡು ಮಾಡಿಯಾಯಿತು. ಧ್ವಜಮೈದಾನದಲ್ಲಿ 60 ಅಡಿ ಎತ್ತರದ ಅಡಿಕೆ ಮರದ ಧ್ವಜಸ್ತಂಭ ಸಕಲ ಪೂಜೆ ಮರ್ಯಾದೆಗಳೊಡನೆ ಕಳಸ ಸಮೇತ ರಾರಾಜಿಸುತ್ತಿದೆ. ಧ್ವಜದ ತುದಿಯಲ್ಲಿ ಕೇಸರಿ ಬಿಳಿ ಹಸಿರು ಬಣ್ಣದ ಬಾವುಟವನ್ನು ಬಿಗಿದು ಕಟ್ಟಿದ್ದಾರೆ, ಬೆಳಿಗ್ಗೆ 8–00 ಗಂಟೆಗೆ ಅಧ್ಯಕ್ಷರು ಬಾವುಟದ ದಾರ ಎಳೆದು ಬಾನಿನಗಲ ಪಟಪಟಿಸುವಂತೆ ಧ್ವಜಾರೋಹಣ ಮಾಡಬೇಕು, ಇದು ಸುಲಲಿತವಾದರೆ ಎಲ್ಲವೂ ಸಲೀಸಾಗುತ್ತದೆ. ಸುಮಾರು 10,000 ಜನತೆ ಧ್ವಜದ ಸುತ್ತ ನಿರ್ದಿಷ್ಟ ಅಳತೆಯ ದೂರದಲ್ಲಿ ಶಾಂತಿ ಮತ್ತು ಶಿಸ್ತಿನಿಂದ ಧ್ವಜ ಮತ್ತು ಪೋಲಿಸ್ ಬಂದೂಕುಗಳನ್ನೇ ದಿಟ್ಟಿಸುತ್ತ ಪಟ್ಟುಹಿಡಿದು ಕುಳಿತಿದ್ದಾರೆ. ಧ್ವಜಾರೋಹಣ

ಸಮಯಕ್ಕೆ ಸ್ವಲ್ಪ ಮುಂಚಿತವಾಗಿ ಎನ್ನುವಂತೆ ಪೋಲಿಸ್ ಶಕ್ತಿಗಳು ಧ್ವಜ ಮೈದಾನದ ಒಳಗೆ ಸಾಗಿಬಂದರು. ಪಾಂಡವಪುರದ ಪೋಲಿಸ್ ಸೂಪರಿಂಟೆಂಡೆಂಟ್ ಶ್ರೀಮುತ್ಯಾಲರಾವ್ ಸಿಂಧ್ಯಾ, ಮಂಡ್ಯದ ಸಬ್ ಡಿವಿಜನ್ ಆಫೀಸರ್ ಬಿ. ವೀರಪ್ಪ ಸಬ್‌ಇನ್ಸ್‌ಪೆಕ್ಟರ್ ರಾಮಕೋಟಿಬಿರಯ್ಯ, ಬಸವರಾಜೇ ಅರಸ್, ರಿಸರ್ವ್‌ಪೋಲಿಸ್ ಇನ್ಸ್‌ಪೆಕ್ಟರ್ ಎ. ಎ. ಪರಡೂರ್ ಇವರುಗಳು ಶಸ್ತ್ರ ಸಜ್ಜಿತರಾಗಿ ಸೇರಿ ಬಂದರು. ಅಷ್ಟರಲ್ಲಿ ಪೋಲಿಸ್ ವ್ಯಾನುಗಳು, ಬಸ್ಸುಗಳು ಸಾಲುಸಾಲಾಗಿ ಬಂದವು. ಒಂದು ಸಾವಿರ ಪೋಲಿಸರು ಕೈಯಲ್ಲಿ ಲಾಟಿ ಹಿಡಿದು ಸಭೆಯನ್ನು ಸುತ್ತುಗಟ್ಟಿದರು. ಅವರ ಹಿಂದೆ 600 ಜನ ಬಂದೂಕು ದಾರಿಗಳು ಗುಂಡು ತುಂಬಿದ ತಮ್ಮ ಅಸ್ತ್ರವನ್ನು ಗುರಿ ಹಿಡಿದುಕೊಂಡು ಬಂದೂಕದ ಕುದುರೆಯ ಮೇಲೆ ತಮ್ಮ ತಮ್ಮ ಬಲಗೈಯಿನ ಬೆರಳಿಟ್ಟು ಯಮಲೋಕದ ದೂತರ ಪ್ರತಿ ದೂತರಂತೆ ಕೆಂಗಣ್ಣುಗಳಿಂದ ಕಿಕ್ಕರಿಸುತ್ತ, ಅಧಿಕಾರಿಗಳ ಆಜ್ಞೆಗಾಗಿ ಕಾದು ನಿಂತಿದ್ದಾರೆ. ಮತ್ತೊಂದು ಕಡೆ ಕಾರ್ಯಕರ್ತರು ಧ್ವನಿವರ್ಧಕಗಳ ಮೂಲಕ ಶಾಂತಿ ಮತ್ತು ಶಿಸ್ತಿಗಾಗಿ ಜನ ಸಮೂಹವನ್ನು ಕೇಳುತ್ತಾ, "ಏನೇ ಬರಲಿ ಒಗ್ಗಟ್ಟಿರಲಿ" ಎಂಬ ಘೋಷಣೆಯನ್ನು ಸಾರುತ್ತಿದ್ದಾರೆ.

ಸರಿಯಾಗಿ 8 ಗಂಟೆ ಮೊಳಗಿತು. ಧ್ವಜಾರೋಹಣಕ್ಕಾಗಿ ಅಧ್ಯಕ್ಷ ಶ್ರೀ ಸಿದ್ಧಲಿಂಗಯ್ಯನವರು ಸ್ವಯಂಸೇವಕರೊಡನೆ ಧ್ವಜದ ವೇದಿಕೆಯತ್ತ ಗಂಭೀರವಾಗಿ ಧಾವಿಸಿದರು. ಸ್ವಯಂಸೇವಕ ದಳದ ಜಿ. ಒ. ಸಿ. ಗಳಾಗಿದ್ದ ಶ್ರೀ ಎಂ. ಎನ್. ಜೋಯಿಸರು ಧ್ವಜಾರೋಹಣ ಮಾಡಬೇಕೆಂದು ಅಧ್ಯಕ್ಷರನ್ನು ಸಾಂಪ್ರದಾಯಿಕವಾಗಿ ಕೇಳಿಕೊಂಡರು. ಅಧ್ಯಕ್ಷರು ವೇದಿಕೆಯನ್ನು ಏರಿನಿಂತು ಸಾಗರ ರೀತಿಯ ಜನಸ್ತೋಮದ ಕಡೆ ಒಮ್ಮೆ ಕಣ್ಣಾಡಿಸಿ ಕೈಮುಗಿದರು. ಜನಸ್ತೋಮ ಚಪ್ಪಾಳೆ ತಟ್ಟಿ ಜೈಕಾರ ಮೊಳಗಿಸಿತು. ವೇದಿಕೆಯ ಹತ್ತಿರ ಶ್ರೀಗಳಾದ ಎಚ್. ಸಿ. ದಾಸಪ್ಪ, ಸಾಹುಕಾರ್ ಚನ್ನಯ್ಯ ಕೆ. ಟಿ. ಭಾಷ್ಯಂ, ಕೆ. ಸಿ. ರೆಡ್ಡಿ, ಹೆಚ್. ಬಿ. ಗುಂಡಪ್ಪಗೌಡ, ಕೆ. ವಿಶ್ವೇಶ್ವರಗೌಡ, ಎಚ್. ಕೆ. ವೀರಣ್ಣಗೌಡ, ಕೆ. ಹನುಮಂತಯ್ಯ, ಮೇಗಳ್ಳಿ ವೀರಪ್ಪ, ಎಚ್ ಸಿದ್ಧಯ್ಯ ಮುಂತಾದ ಮುಖಂಡರೂ ಶ್ರೀಮತಿ ಯಶೋಧರಮ್ಮ ದಾಸಪ್ಪ, ಪಾರ್ವತಮ್ಮ ಸಿದ್ಧಲಿಂಗಯ್ಯ, ವೆಂಕಮ್ಮ ಸೀತಾರಾಮಯ್ಯ, ಸುಬ್ಬಮ್ಮ ಜೋಯಿಸ್, ಇಂದಿರಾ ಕೃಷ್ಣಮೂರ್ತಿ, ಟಿ. ಸುನಂದಮ್ಮ ಮೊದಲಾದ ಮಹಿಳಾ ಧೀಶಕ್ತಿಗಳು ಸತ್ಯಾಗ್ರಹಿಗಳು, ಸ್ವಯಂ ಸೇವಕ ಸೇವಕಿಯರು, ನೆರೆದಿದ್ದಾರೆ. ಸ್ವಲ್ಪ ದೂರದಲ್ಲಿ ಜಿಲ್ಲಾಧಿಕಾರಿ ಶ್ರೀ ಮಕ್ರಿಸಾಹೇಬರು ಜೀಪಿನಲ್ಲಿ ಕುಳಿತಿದ್ದಾರೆ. ಜಿಲ್ಲಾಧಿಕಾರಿಗಳ ಆದೇಶಕ್ಕಾಗಿ ಡಿ. ಎಸ್. ಪಿ. ಶ್ರೀ ಬೀರಪ್ಪನವರು ಕಾದಿದ್ದಾರೆ. ಸಂಸ್ಥಾನದ ಮದ್ದೂರಿನ ಶಿವಪುರದಲ್ಲಿ ಬಡಬಾಗ್ನಿ ದಗದಗಿಸುತ್ತಿರುವಾಗ ತಂಪು ಹವಾ ಸೇವಿಸಿಕೊಳ್ಳಲು ಸಂಸ್ಥಾನದ ಅರಸರು ದಿವಾನ್ ಮಿರ್ಜಾರ ಜೊತೆಯಲ್ಲಿ ಉದಕ ಮಂಡಲದಲ್ಲಿ ಮಂದಾಸಿಕೆಯ ಮೇಲೆ ಪವಡಿಸಿದ್ದಾರೆ.

ಸಮಯ ಜಾರುತ್ತಾ ಬಂತು. ಸತ್ಯಾಗ್ರಹಿಗಳಿಗೆ [illegible] ಇದೊಂದು ರೀತಿಯ [illegible] ಸತ್ಯಾಗ್ರಹಿಗಳ ಧೈರ್ಯದ [illegible] ಸವಾಲು ಇದೆ. ಸ್ವಲ್ಪ ವ್ಯತ್ಯಾಸವಾಗಿ ಶಸ್ತ್ರಧಾರಿಗಳು [illegible] ಆದುದರಿಂದ ಸಾವಿರಾರು ಜನರ ರಕ್ತ ಹರಿದು ಹೋಗಬಹುದು. [illegible] ರೊಚ್ಚಿಗೆದ್ದ ಜನಸ್ತೋಮದಿಂದ ಪೊಲೀಸ್ [illegible] ಪಾರ್ವತಮ್ಮ ಸಿದ್ಧಲಿಂಗಯ್ಯ ತಮ್ಮ ತಾಲಿಯನ್ನೊಮ್ಮೆ ಮುಟ್ಟಿ [illegible] ಪತಿದೇವರನ್ನೊಮ್ಮೆ ನೋಡುತ್ತಾ, ಸಭೆಯನ್ನು ವೀಕ್ಷಿಸುತ್ತಾ, [illegible] ನೋಡುತ್ತಾ, ಮನದೇವರ ಮೇಲೆ ಹರಕೆ ಹೊತ್ತು ಕಲ್ಲಿನ [illegible] ನಿಂತಿದ್ದಾರೆ. ಸಿದ್ಧಲಿಂಗಯ್ಯನವರು ಬಾವುಟದ ಗಂಟನ್ನು ಬಿಚ್ಚಲು ದಾರ ಹಿಡಿದರು. ತಕ್ಷಣವೇ ಪೊಲೀಸ್ ಇನ್ಸ್‌ಪೆಕ್ಟರ್ ರಾಜಶೇಖರಯ್ಯನವರು ಪ್ರತಿಬಂಧಕಾಜ್ಞೆಯನ್ನು ನೆನಪಿಸಿ ಧ್ವಜಾರೋಹಣ ಮಾಡದಂತೆ ಸಿದ್ಧಲಿಂಗಯ್ಯನವರ ಕೈ ಹಿಡಿದರು. ಅಷ್ಟರಲ್ಲಿ ಜನಸ್ತೋಮದಲ್ಲಿ ಅಶಾಂತಿ ತಲೆದೋರಿತು. ಶ್ರೀ ಜೋಯಿಸರು ಪೊಲೀಸ್ ಅಧಿಕಾರಿಗಳನ್ನು ವೇದಿಕೆಯಿಂದ ಇಳಿಯುವಂತೆ ಸ್ವಲ್ಪ ನೂಕಿದರು. ಪೊಲೀಸರಿಗೂ ಸ್ವಯಂಸೇವಕರಿಗೂ ಸ್ವಲ್ಪ ನೂಕಾಟವಾಯಿತು. ಗಲಭೆ ಪ್ರಾರಂಭವಾಗುವಷ್ಟರಲ್ಲಿ ಯಶೋಧರಮ್ಮ ದಾಸಪ್ಪನವರು ವೇದಿಕೆ ಹತ್ತಿ "ದಯಮಾಡಿ ಪೋಲೀಸಿನವರು ವೇದಿಕೆ ಬಿಟ್ಟು ದೂರ ನಿಂತರೆ ಶಿಸ್ತಿನಿಂದ ಆಜ್ಞೆ ಪಾಲಿಸುತ್ತೇವೆ ಯಾರಿಗೂ ಘರ್ಷಣೆ ಅನಗತ್ಯ ಎಂದು" ಮನವಿ ಮಾಡಿಕೊಂಡರು. ಇಕ್ಕೆಡೆಗಳಲ್ಲಿ ಶಾಂತಿ ಕಾಣಿಸಿತು. ಸುನಂದಮ್ಮನವರು ಒಂದೇ ಮಾತರಂ' ರಾಷ್ಟ್ರಗೀತೆಯನ್ನು ಮಧುರವಾಗಿ ಹಾಡಿದರು. ಪುನಃ ಟಿ. ಸಿದ್ಧಲಿಂಗಯ್ಯನವರು ಬಾವುಟ ಬಿಚ್ಚಲು ಯತ್ನಿಸಿದರು. ಪೋಲೀಸರು ಅವಕಾಶ ಕೊಡಲಿಲ್ಲ. ಎಲ್ಲೆಲ್ಲೂ ನಿಶ್ಶಬ್ದ ಅತ್ತ ಶಸ್ತ್ರಧಾರಿಗಳು ಬಂದೂಕದ ಟ್ರಿಗರ್ ಮೇಲೆ ಬೆರಳಿಟ್ಟು ಆದೇಶಕ್ಕಾಗಿ ಕಾಯುತ್ತಿದ್ದಾರೆ. ಜನಸ್ತೋಮಕ್ಕೆಲ್ಲ ಅಧ್ಯಕ್ಷರ ದೇಹ ಇನ್ನೇನು ರಕ್ತಚಿಮ್ಮಿ ನೆಲಕ್ಕೆ ಕುಸಿಯುತ್ತದೆ ಎನ್ನುವ ಭಾವನೆ ಬಂದಿದೆ. ಭಯ ಕಾತರತೆಯಿಂದ ಜೀವ ಮಿಡಿಯುತ್ತಿದೆ. ಶ್ರೀಮತಿ ಪಾರ್ವತಮ್ಮನವರ ಕಣ್ಣಾಲಿ ತೇಲಿ ತಲೆ ತಿರುಗಿ ದೇಹ ತತ್ತರಿಸುತ್ತಿದೆ, ಅಧ್ಯಕ್ಷರು ಮಾತ್ರ ಯಾವುದಕ್ಕೂ ಬೆದರದೆ ಪರ್ವತದಂತೆ ನಿಶ್ಚಲವಾಗಿದ್ದಾರೆ. ಸ್ವಲ್ಪ ಹೊತ್ತು, ಭಯಂಕರವಾದ ಮೌನ, ಪ್ರತಿಯೊಬ್ಬರ ಎದೆಯ ಬಡಿತವು ಹೊರಕ್ಕೆ ಕೇಳುವಂತಹ ಮೌನ. ಈ ಮೌನವನ್ನು ಮುರಿದು ತಮ್ಮ ಗಂಭೀರವಾಣಿಯಿಂದ "ನಾನು ಈಗ ಧ್ವಜಾರೋಹಣ ಮಾಡುತ್ತೇನೆ"ಂದು ಧೀರ ಹೇಳಿದರು. "ನಿಮ್ಮನ್ನು ದಸ್ತಗಿರಿ ಮಾಡಿದ್ದೇವೆ" ಎಂದು ಪೋಲೀಸರು ಅಧ್ಯಕ್ಷರನ್ನು ಬಂಧಿಸಿದರು. ಹಾರಾಡಿದ ಧ್ವಜಕ್ಕೆ ವಂದನೆ ಸಲ್ಲಿಸಿದ ಶ್ರೀ ಎಂ. ಎನ್. ಜೋಯಿಸರನ್ನು ದಸ್ತಗಿರಿ ಮಾಡಿದರು. ಜನಸ್ತೋಮದ ಅನಿಸಿಕೆಯಂತೆ ರಕ್ತಪಾತವಿಲ್ಲದೆ ದಸ್ತಗಿರಿ ಮಾಡುವುದರಲ್ಲಿ ಧ್ವಜಾರೋಹಣಕಾರ್ಯ ಮುಕ್ತಾಯ

ವಾಯಿತು. ಜನಶಕ್ತಿಗೆ ಗೆಲವು ದೊರಯಿತು: ಹಿಂದುಸ್ಥಾನದ ಸ್ವಾತಂತ್ರ್ಯ ಸಮರಕ್ಕೆ ಜಯವಾಯಿತು. ಧ್ವಜ ಹಾರಾಡಿತು, "ಗಾಂಧೀಜಿಯವರ ಶಾಂತಿ ಮತ್ತು ಅಹಿಂಸಾತ್ಮಕ ರೀತಿಯಲ್ಲಿ ಭಾರತ ದೇಶದ ಮಾನ ಕಾಪಾಡಿ ಯಾವ ರೀತಿಯಲ್ಲೂ ಪ್ರತೀಕಾರ ಭಾವನೆ ಬೇಡ" ಎಂದು ಸಾರಿ ಅಧ್ಯಕ್ಷರು ಸೆರೆಮನೆಗೆ ತೆರಳಿದರು. ತೆರವಾದ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಎಚ್. ಸಿ. ದಾಸಪ್ಪನವರು ನಿಯೋಗವಾದರು, ಶ್ರೀ ಪಿ. ಎಸ್. ಜೋಯಿಸರ ಸ್ಥಾನಕ್ಕೆ ಡಾ: ಪಾರ್ಥನಾರಾಯಣ ಪಂಡಿತರು ನೇಮಕವಾದರು. ತೆರವಾದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಎಸ್. ಚನ್ನಯ್ಯನವರು ನೇಮಕವಾದರು, ಗಾಂಧೀಜಿ ತತ್ವವನ್ನು ಅನುಸರಿಸಿ ಮುಂದಿನ ಕಾರ್ಯಕ್ಕೆ ನೆರವಾದರು. ಮಂಡ್ಯದ ನ್ಯಾಯಾಲಯದಲ್ಲಿ ಶ್ರೀ ಟಿ ಸಿದ್ದಲಿಂಗಯ್ಯನವರಿಗೆ ಎರಡೂವರೆ ತಿಂಗಳು ಜೋಯಿಸರಿಗೆ ಮೂರುವರೆ ತಿಂಗಳು, ಸಾದಾ ಸಜಾ ವಿಧಿಸಲಾಯಿತು.

ಸಭೆಯು ಪ್ರಶಾಂತವಾಯಿತು, ಅಂದಿನ ವಿಷಯ ನಿಯಾಮಕ ಸಭೆಯಲ್ಲಿ 1) ಮೈಸೂರು ಸಂಸ್ಥಾನದ ಕಾಂಗ್ರೆಸ್ ಪಕ್ಷವನ್ನು ಸರ್ಕಾರ ಒಪ್ಪಿಕೊಳ್ಳಬೇಕು. (2) ಶ್ರೀಮನ್ ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದು, ಕಾಂಗ್ರೆಸಿನ ಗುರಿಯಾಗಬೇಕು ಎಂಬ ನಿರ್ಣಯವಾಯಿತು. ಸಂಜೆ ಆರು ಗಂಟೆಯ ಮಹಾಸಭೆಯಲ್ಲಿ ಈ ಮೇಲಿನ ಎರಡೂ ವಿಷಯಗಳ ಬಗ್ಗೆ ದೀರ್ಘ ಭಾಷಣ ಜರುಗಿದವು. ಎಚ್. ಕೆ. ವೀರಣ್ಣಗೌಡ, ಕೆ. ಹನುಮಂತಯ್ಯ, ಪಿ. ವೆಂಕಟಪ್ಪ ಎ. ಜಿ. ಬಂದೀಗೌಡರು ಮಾತಾಡಿದರು. ಸಂಜೆಯಾದಮೇಲೆ ಭಕ್ತಿ ಗೌರವಗಳಿಂದ ಎಚ್. ಸಿ. ದಾಸಪ್ಪನವರು ಧ್ವಜವನ್ನು ಅವರೋಹಣ ಮಾಡಿದರು. ಮಾಮೂಲಿನಂತೆ ಊಟದ ವ್ಯವಸ್ಥೆ ನಡೆಯಿತು.

12-4-38ರ ಬೆಳಿಗ್ಗೆಯೂ ಭಯಾನಕ ವಾತಾವರಣ ಸಹಜವಾಗಿಯೇ ಇತ್ತು, ಆದರೆ ಮೊದಲನೆ ದಿನದ ತೀವ್ರತೆ ಇರಲಿಲ್ಲ ಬೆಳಗಾಗುತ್ತಿದ್ದಂತೆ ಜನಸ್ತೋಮ ನೆರೆಯಿತು. ಮಾಮೂಲಿನಂತೆ ಪೋಲಿಸ್ ಆವರಿಸಿತು. ಹೊಸ ಹೊಸ ಪ್ರೇಕ್ಷಕರ ಸಮೂಹ ಆಳತೆ ಮೀರಿ ಆಗಮಿಸುತ್ತಿತ್ತು. ಶಾಂತಿ ಮತ್ತು ಶಿಸ್ತಿನ ಕಹಳೆ ಧ್ವನಿವರ್ಧಕಗಳಲ್ಲಿ ಕೇಳಿ ಬರುತ್ತಿತ್ತು.

ಧ್ವಜಾರೋಹಣ ಸಮಯ ಸಮೀಪಿಸಿತು. ಸ್ವಯಂಸೇವಕರಿಂದ ಝಂಡಾ ಊಂಚಾ ರಹೇ ಹಮಾರಾ ಗೀತೆ ಮೊಳಗಿತು. ಧ್ವಜವನ್ನು ಕಿತ್ತೆಸೆಯಲು ಆಗಮಿಸಿದ ಪೋಲಿಸ್ ಶಕ್ತಿಯನ್ನು ಬಳ್ಳಾರಿಸಿದ್ದಮ್ಮ ಮುಂತಾದ ಸ್ವಯಂಸೇವಕಿಯರು ತಡೆದರು. ಗಲಿಭೆಯಾಗಲು ಅವಕಾಶ ಕೊಡಲಿಲ್ಲ. ಅಧ್ಯಕ್ಷರಾದ ಶ್ರೀ ಎಚ್. ಸಿ. ದಾಸಪ್ಪನವರು ಪಾರ್ಥನಾರಾಯಣಪಂಡಿತರೊಡನೆ ಧ್ವಜದಸ್ಥಳದ ಬಳಿಗೆ ಆಗಮಿಸಿದರು. ಧ್ವಜಾರೋಹಣ ಮಾಡಕೂಡದೆಂದು ಇನ್ಸ್‌ಪೆಕ್ಟರ್ ಸಿಂಧ್ಯಾ ತಪಡರು. ಮಾತುಕತೆಗಳು ಬೆಳೆದು ಕೊನೆಗೆ ಎಚ್. ಸಿ. ದಾಸಪ್ಪನವರನು

ದಸ್ತಗಿರಿ ಮಾಡಿದರು. ಅವರ ಸ್ಥಾನವನ್ನು ಆಕ್ರಮಿಸಿದ ಶ್ರೀ ವಿ. ವೆಂಕಟಪ್ಪನವರೂ ದಸ್ತಗಿರಿಗೆ ಒಳಗಾದರು. ಅನಂತರ ಶ್ರೀ ಕೆ. ಸಿ. ರೆಡ್ಡಿಯವರು ಧ್ವಜಾರೋಹಣ ಕಾರ್ಯಕ್ಕೆ ಮುಂದಾದರು. ಪೋಲೀಸರು ತಡೆಯುವ ಹಾಗೆ ಸ್ತ್ರೀಸ್ವಯಂಸೇವಕರ ಗುಂಪು ಸುತ್ತುಗಟ್ಟಿತ್ತು. ಮುಂದೇನಾಗುವುದೆಂಬ ಭಯ ಜನರಲ್ಲಿ ಮೂಡಿತು. ಅಷ್ಟರಲ್ಲಿ ಕೆ ಸಿ. ರೆಡ್ಡಿಯವರು ಧ್ವಜಾರೋಹಣ ಕಾರ್ಯವನ್ನು ಮುಂದುವರಿಸಿದರು. ಜನತೆ ಶಾಂತಿಯಿಂದ ವೇದಿಕೆಯಿಂದ ತೆರಳಿದರು. ತತ್‌ಕ್ಷಣವೇ ಪೋಲೀಸರು ಬಂದು ಬಾವುಟವನ್ನು ಇಳಿಸುವ ಪ್ರಯತ್ನ ಮಾಡಿದರು. ಇಳಿಸಕೊಡನೆಂದು ರೆಡ್ಡಿಯವರಿಗೂ, ಪೋಲೀಸಿನವರಿಗೂ ಮಾತಿನ ಘರ್ಷಣೆಯಾಯಿತು. ಕೊನೆಗೆ ಶ್ರೀ ಕೆ. ಸಿ. ರೆಡ್ಡಿಯವರನ್ನು ಪೋಲೀಸರು ದಸ್ತಗಿರಿ ಮಾಡಿದರು. ಮುಂದಿನ ಜವಾಬ್ದಾರಿಯ ಹೊಣೆ ಶ್ರೀ ಭಾಷ್ಯಂ ಅವರಿಗೆ ಸೇರಿತು. ದಸ್ತಗಿರಿ ಮಾಡಿದ ಈ ಮೂವರು ಮುಖಂಡರನ್ನು ಮಂಡ್ಯದ ಮ್ಯಾಜಿಸ್ಟ್ರೇಟರ್ ಮುಂದೆ ನಿಲ್ಲಿಸಲಾಯಿತು. ಶ್ರೀ ದಾಸಪ್ಪನವರಿಗೆ 4 ತಿಂಗಳ ಸಜಾ, 200 ರೂ ದಂಡ, ಶ್ರೀ ವೆಂಕಟಪ್ಪ ಮತ್ತು ರೆಡ್ಡಿಯವರಿಗೆ 3 ತಿಂಗಳು ಸಜಾ 200 ರೂ ದಂಡ ವಿಧಿಸಲಾಯಿತು.

ರಾಷ್ಟ್ರಧ್ವಜವನ್ನು ಗೌರವದಿಂದ ಇಳಿಸಿದ ಮೇಲೆ ಸಂಜೆ 6–30 ಗಂಟೆಗೆ ಎರಡನೇ ಬೃಹತ್ ಸಭೆ ನಡೆಯಿತು. ಕೆ. ಟಿ. ಭಾಷ್ಯಂ, ಎಸ್ ಚನ್ನಯ್ಯ, ಪಾರ್ಥ ನಾರಾಯಣಪಂಡಿತ್‌ರವರು ವೇದಿಕೆಯನ್ನೇರಿ ಬೃಹತ್‌ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಪ್ರಾರಂಭದಲ್ಲಿ ಕೆ. ಟಿ. ಭಾಷ್ಯಂ ಭಾಷಣ ಮಾಡಿ ಜನತೆಯಲ್ಲಿ ನೆಲಸಿದ್ದ ಶಾಂತಿ ಮತ್ತು ಶಿಸ್ತಿಗೆ ನಮನಗಳನ್ನು ಅರ್ಪಿಸಿದರು. ಇನ್ನು ಮುಂದೆ ಇದೇ ಒಗ್ಗಟ್ಟಿನಿಂದ ಕಾರ್ಯಕಾರಿ ಮಂಡಳಿ, ತನ್ನ ಕೆಲಸವನ್ನು ಮುಂದುವರಿಸುವಂತೆ ಕೇಳಿಕೊಂಡರು. ನಾಳೆ ತಾವೇ ಧ್ವಜಾರೋಹಣ ಕೆಲಸಕ್ಕೆ ಮುಂದಾಗುವುದಾಗಿ ಸಾರಿದರು. ಧ್ವಜರಕ್ಷಣೆಗಾಗಿ ಇಡೀ ಸಂಸ್ಥಾನದ ಜನರೆಲ್ಲ ಜೈಲಿಗೆ ಹೋಗಬೇಕಾದರೂ ಭಯಪಡಬೇಕಾಗಿಲ್ಲ, ಎಂದು ಧೈರ್ಯ ತುಂಬಿದರು. ಇದೇ ಧಾಟಿಯಲ್ಲಿ ವೇದಿಕೆಯಲ್ಲಿನ ಮಹನೀಯರೆಲ್ಲ ಮಾತನಾಡಿದರು. ಅದೇ ಸಭೆಯಲ್ಲಿ ದಸ್ತಗಿರಿಯಾಗಿದ್ದವರ ಮನವಿ ಪತ್ರವನ್ನು ಓದಲಾಯಿತು. ಆಫ್ರಿಕಾದೇಶಗಳಲ್ಲಿ ಭಾರತೀಯರ ಪಾಡನ್ನು ಖಂಡಿಸಿ ಟಿ. ಎನ್. ರಾಜಗೋಪಾಲ ಅಯ್ಯಂಗಾರ್ ಸಭೆಗೆ ವಿಷಯವನ್ನು ಮಂಡಿಸಿದರು. ಗಣಪತಿ ಶಾಸ್ತ್ರಿಗಳಿಂದ ಅನುಮೋದನೆಗೊಂಡು ಸಭೆ ವಿಚಾರ ಮಾಡಿತು. ಸರ್ಕಾರದ ಪೈಶಾಚಿಕ ನಡತೆಯನ್ನು ಕೆಲವು ನಾಯಕರು ಖಂಡಿಸಿದರು. ಸರ್ಕಾರದ ಪರ ನಿಂತು ಕೆಲಸ ಮಾಡುವ ಕೆಲವು ಮುಖಂಡರು ಸರ್ಕಾರಕ್ಕೆ ಸೊಪ್ಪು ಹಾಕಿ ಸ್ವಾತಂತ್ರ್ಯ ಸಮರದಲ್ಲಿ ಭಾಗಿಯಾದರು, ಶಾಂತಿಯಿಂದ ಸಭೆ ಮುಕ್ತಾಯವಾಯಿತು.

ಮೊದಲನೆಯ ದಿನದ ಭಯದ ವಾತಾವರಣ ಇಲ್ಲದಿದ್ದರೂ ಜನತೆಯಲ್ಲಿ ಭೀತಿ

ಆಡಿದೇಯಾಗಿರಲಿಲ್ಲ. 13-4-38ರ ಬೆಳಗ್ಗೆ ಧ್ವಜಾರೋಹಣಕ್ಕಾಗಿ ಎಲ್ಲ ಸಿದ್ಧತೆಗಳೂ ನಡೆದವು. ಪೋಲೀಸರ ದಸ್ತಗಿರಿ ಕೆಲಸ ಕೊನೆಯಾಗಿರಲಿಲ್ಲ. ನಿಶ್ಚಯ ತೀರ್ಮಾನದಂತೆ ಕೆ. ಟಿ. ಭಾಷ್ಯಂ ಅಯ್ಯಂಗಾರ್ ವೇದಿಕೆಯತ್ತ ನಡೆದರು. ಅದರೊಡನೆ ಜೆ. ಒ. ಸಿ. ಗಳಾದ ಶ್ರೀ ಪಾರ್ಥಸಾರಥಿಯಯ್ಯಂಗಾರ್ ಇದ್ದರು. ಶ್ರೀ ಭಾಷ್ಯಂ ರವರು [illegible]ಕ್ಕೆ ಸರಿಯಾಗಿ ಧ್ವಜಾರೋಹಣ ಮಾಡುವಾಗ, ಪೋಲೀಸರು ತಡೆದರು. "ಸರ್ಕಾರದ ಅಪ್ಪಣೆಯನ್ನು ಉಲ್ಲಂಘಿಸಿ ಧ್ವಜಾರೋಹಣ ಮಾಡುತ್ತಿರುವಿರಿ" ಎಂದು ಪೊಲೀಸ್ ಅಧಿಕಾರಿಯವರು ಶ್ರೀ ಭಾಷ್ಯಂ ರವರಿಗೆ ಹೇಳಿದರು. ತತ್‌ಕ್ಷಣ ಇವರನ್ನು ದಸ್ತಗಿರಿ ಮಾಡಲಾಯಿತು. ಶ್ರೀ ಭಾಷ್ಯಂ ರವರು ಅವರ ಸ್ಥಾನಕ್ಕೆ ಶಿವಮೊಗ್ಗದ ಎಚ್. ಸಿದ್ದಯ್ಯನವರನ್ನು ನೇಮಿಸಿ ತಾವು ದಸ್ತಗಿರಿಗೊಳಗಾದರು. ಶ್ರೀ ಎಚ್. ಸಿದ್ಧಯ್ಯನವರು ಧ್ವಜಾರೋಹಣ ಮಾಡುವಾಗ ಅವರನ್ನು ದಸ್ತಗಿರಿ ಮಾಡಲಾಯಿತು. ಅನಂತರ ಧ್ವಜಾರೋಹಣ ಕಾರ್ಯವನ್ನು ಶ್ರೀಮತಿ ಬಳ್ಳಾರಿಸಿದ್ಧಮ್ಮನವರು ನೆರವೇರಿಸಲು ಮುಂದಾದರು. ಸ್ತ್ರೀ ಶಕ್ತಿಯ ದ್ಯೋತಕವಾಗಿ ನೇರವಾಗಿ ವೇದಿಕೆಯನ್ನು ಏರಿ ಧ್ವಜಾರೋಹಣವನ್ನು ಮಾಡಿಯೇ ಬಿಟ್ಟರು. ಜನಸ್ತೋಮ ಜಯಘೋಷೋದ್ಗಾರ ಮಾಡಿತು. ಶ್ರೀಮತಿ ಟಿ. ಸುಬ್ಬಮ್ಮನವರು "ವಂದೇ ಮಾತರಂ ಹಾಡಿದರು" ಅನಂತರ ಪೋಲೀಸರು ಶ್ರೀಮತಿ ಸಿದ್ದಮ್ಮನವರನ್ನು ದಸ್ತಗಿರಿ ಮಾಡಿದರು. ಹಾಸನದ ಎಚ್. ಬಿ. ಗುಂಡಪ್ಪಗೌಡರು ಮುಂದಿನ ಕೆಲಸಕ್ಕೆ ಸಿದ್ಧರಾದರು. ಅಂದು ದಸ್ತಗಿರಿಯಾದ 3 ಜನ ದೇಶಭಕ್ತರೂ ಜನತೆಗೆ ಕೈಮುಗಿದು ಪೋಲೀಸ್‌ವ್ಯಾನಿನಲ್ಲಿ ಮಂಡ್ಯಕ್ಕೆ ತೆರಳಿದರು. ದಸ್ತಗಿರಿಯಾದ ಸಂದರ್ಭದಲ್ಲಿ ಶ್ರೀ ಭಾಷ್ಯಂ ಅವರ ಮಾತು ಗಮನಾರ್ಹವಾದುದಾಗಿದೆ. "ಕಾಂಗ್ರೆಸ್‌ನ ಈ ತ್ರಿವರ್ಣಧ್ವಜವು ನಮ್ಮೆಲ್ಲರ ರಾಷ್ಟ್ರೀಯ ಪ್ರತಿನಿಧಿ, ಭಾರತೀಯ ಸಂಘಟನೆಯ ಚಿಹ್ನೆ. ತ್ಯಾಗ, ಶಾಂತಿ, ಅಹಿಂಸೆಗಳೆಂಬ ಮಾನವೀಯ ಮೌಲ್ಯಗಳ ಸಂಕೇತ. ಇದನ್ನರಿತು ನಾವೆಲ್ಲರೂ ದೃಢ ಮನಸ್ಕರಾಗಿ ಕಾರ್ಯೋನ್ಮುಖರಾಗಬೇಕು. ಈ ನಮ್ಮ ಧ್ವಜದಿಂದ ಮಹಾರಾಜರ ಸರ್ಕಾರಕ್ಕೆ ಯಾವ ಅವಮಾನವೂ ಇಲ್ಲ. ಇದನ್ನು ಚಿಂತಿಸದ ಸರ್ಕಾರ ಈ ಕಾರ್ಯ ಕ್ರಮಕ್ಕೆ ಪ್ರತಿಬಂಧಕಾಜ್ಞೆಯನ್ನು ವಿಧಿಸಿರುವುದು ಖಂಡನೀಯ. ಜನತೆಯ ಆಶೋತ್ತರ ಗಳಿಗನುಗುಣವಾಗಿ ಆಡಳಿತವ್ಯವಸ್ಥೆ ಇರಬೇಕು. ಕಾಂಗ್ರೆಸ್‌ಸಂಸ್ಥೆ ಪ್ರಜಾ ಭಾವನೆಗಳ ಗೌರವದ ಕೆಲಸ ಮಾಡಿದೆ. ಇಷ್ಟಾದರೂ ನಮ್ಮನ್ನು ದಸ್ತಗಿರಿ ಮಾಡಿದೆ. ಶಾಂತಿಯಿಂದ ಗುರಿ ತಲುಪಬೇಕೆಂಬ ದೃಢತೆ ನಿಮ್ಮಲ್ಲಿರಲಿ" ಎಂದು ಆಶಿಸಿ, ವ್ಯಾನಿನಲ್ಲಿ ಕುಳಿತರು. ಮಂಡ್ಯದ ನ್ಯಾಯಾಲಯದಲ್ಲಿ ಕೆ. ಟಿ ಭಾಷ್ಯಂ ಮತ್ತು ಎಚ್. ಸಿದ್ದಯ್ಯನವರಿಗೆ ನಾಲ್ಕು ತಿಂಗಳ ಸಜೆ ಮತ್ತು 200 ರೂ ದಂಡ ವಿಧಿಸಲಾಯಿತು. ಬಳ್ಳಾರಿ ಸಿದ್ಧಮ್ಮನವರಿಗೆ 25 ದಿನಗಳ ಸಾದಾ ಶಿಕ್ಷೆಯನ್ನು ವಿಧಿಸಲಾಯಿತು.

ಅನಂತರ ಕಾಂಗ್ರೆಸಿನ ಮುಂದಿನ ಕಾರ್ಯಕ್ರಮಗಳ ಮುಂದಾಳುತ್ವವನ್ನು

ಹಾಸನದ ಶ್ರೀ ಗುಂಡಪ್ಪಗೌಡರಿಗೆ ವಹಿಸಿಕೊಡಲಾಯಿತು. ಅಂದು ಸಂಜೆ ತಿರುಮಲೇ ಗೌಡರ ಮನೆಯಲ್ಲಿ ಸಭೆ ಸೇರಿ ಇದೇ ಶಿವಪುರದಲ್ಲಿ ಇನ್ನು ಮುಂದೆ ನಿಷೇಧಾಜ್ಞೆಯ ಕೊನೆಯ ದಿನಗಳ ತನಕ ಧ್ವಜ ಸತ್ಯಾಗ್ರಹವನ್ನು ಆಚರಿಸಬೇಕೆಂಬ ದೃಢನಿರ್ಧಾರ ವಾಯಿತು. ಇದರ ಪೂರ್ಣ ಜವಾಬ್ದಾರಿಯನ್ನು ಶ್ರೀಮಾನ್ ತಗಡೂರು ರಾಮಚಂದ್ರ ರಾಯರು ವಹಿಸಿಕೊಂಡರು. ಮದ್ದೂರಿನ ಜನಸ್ತೋಮ ಈ ತೀರ್ಮಾನಕ್ಕೆ ಕಳೆ ತುಂಬಿತ್ತು. ತಿರುಮಲೇಗೌಡರ ಒಂದು ಕುಟೀರವನ್ನೇ ಕಛೇರಿಯನ್ನಾಗಿ ಮಾಡಿ ಕೊಂಡು ಧ್ವಜಸತ್ಯಾಗ್ರಹ ಮುಂದುವರಿಯಿತು. ಸರ್ಕಾರದ ಪ್ರತಿಬಂಧಕಾಜ್ಞೆಯನ್ನು ಮುರಿದು, ಜವಾಬ್ದಾರಿ ಸರ್ಕಾರದ ಕಡೆಗೆ ಸರ್ಕಾರ ಮನಸ್ಸು ಮಾಡಬೇಕೆಂಬುದೇ ಈ ಸತ್ಯಾಗ್ರಹದ ಮುಖ್ಯ ಉದ್ದೇಶವಾಗಿತ್ತು. ಮುಂದಿನ ದಿನಗಳಲ್ಲಿ ಶ್ರೀ ಗುಂಡಪ್ಪಗೌಡರು ಧ್ವಜಾರೋಹಣ ಮಾಡಿ ಪ್ರತಿಬಂಧಕಾಜ್ಞೆಯನ್ನು ಮುರಿದರು. ಪೋಲಿಸರು ಅವರನ್ನು ದಸ್ತಗಿರಿ ಮಾಡಲಿಲ್ಲ. ಆದರೆ ಮಾರನೆಯ ದಿನ ಭೂಪಾಲಂ ಪುಟ್ಟನಂಜಪ್ಪನವರು ಪ್ರತಿಬಂಧಕಾಜ್ಞೆಯನ್ನು ಮುರಿದು ಧ್ವಜಾರೋಹಣ ಮಾಡಿದರು. ಅವರನ್ನು ದಸ್ತಗಿರಿ ಮಾಡಲಾಯಿತು. ಕೆ. ಹನುಮಂತಯ್ಯನವರೂ ದಸ್ತಗಿರಿಗೆ ಒಳಗಾದರು. ಇದರ ಮಧ್ಯೆ ಶಿವಪುರದ ದೊಳ್ಳಯ್ಯ, ಇವರ ಗೆಳೆಯ ಲಿಂಗಯ್ಯನವರು, ಪ್ರತಿ ಬಂಧಕಾಜ್ಞೆಯನ್ನು ಮುರಿದು ಸೆರೆಮನೆ ಸೇರಿದರು. ಇನ್ನೂ ಅನೇಕ ಜನ ಧ್ವಜಾರೋಹಣ ಮಾಡುವಾಗ ಸೆರೆಮನೆ ಸೇರಬೇಕಾಗಿ ಬಂತು.

9–5–38ರ ಸಂಜೆ ಹಾಸನದ ಎಚ್. ಬಿ. ಗುಂಡಪ್ಪಗೌಡರ ನೇತೃತ್ವದಲ್ಲಿ ರಾಷ್ಟ್ರಧ್ವಜವನ್ನು ಭಕ್ತಿ ಗೌರವಗಳಿಂದ ಇಳಿಸಲಾಯಿತು. ಇಲ್ಲಿಗೆ ಒಂದು ತಿಂಗಳ ಶಿವಪುರದ ಧ್ವಜಸತ್ಯಾಗ್ರಹ, ಮದ್ದೂರಿನ ಸ್ವಾತಂತ್ರ್ಯ ಸಮರ ಕೊನೆಯಾಯಿತು.

ಶಿವಪುರದ ರಾಷ್ಟ್ರಕೂಟ ಧ್ವಜಸತ್ಯಾಗ್ರಹದಿಂದ ದೇಶದಲ್ಲಿ ಅತಿಶಯವಾದ ಪರಿಣಾಮ ಉಂಟಾಯಿತು. ಹಿಂದುಳಿದ ವರ್ಗದವರು ಗುಲಾಮಗಿರಿಯಿಂದ ಹೊರ ಬಂದು ಸ್ವತಂತ್ರ ಜೀವನ ನಡೆಸುವ ಹಂಬಲ ಪಡೆದರು. ಜನತೆಯಲ್ಲಿ ರಾಜಕೀಯ ಮತ್ತು ಸಾಮಾಜಿಕ ವಿಚಾರ ಕ್ರಾಂತಿ ಮೊಳಗಿತು. ಸ್ವಾತಂತ್ರ್ಯದ ವಿರಾಟ್ ಸ್ವರೂಪ ಜನತೆಗೆ ತಿಳಿಯಿತು. ಒಗ್ಗಟ್ಟಿನ ಬಲ ಗೆಲುವನ್ನು ತರುತ್ತದೆಂಬುದರ ದರ್ಶನ ವಾಯಿತು. ರಾಜಕೀಯರಂಗದಲ್ಲಿ ಸ್ತ್ರೀಜಾಗೃತಿ ಉಂಟಾಯಿತು. ರಾಷ್ಟ್ರಕೂಟ ಸಭೆಯಿಂದ ಮತೀಯಭಾವನೆ ಅಳಿಯುತ್ತಾ ಬಂತು. ಶಾಂತಿ ಸಮರದ ಮಹತ್ವ ವನ್ನು ಜನತೆ ಕಂಡುಕೊಂಡರು. ದಕ್ಷಿಣ ಪ್ರಾಂತ್ಯದಲ್ಲಿ ಮೊದಲು ನಡೆದ ಈ ಮದ್ದೂರಿನ ಚಳುವಳಿ ಪ್ರಾಂತ್ಯದ ಬೇರೆ ಬೇರೆ ಚಳುವಳಿಗಳಿಗೆ ನಾಂದಿಯಾಯಿತು, ಮತ್ತು ಮಾರ್ಗದರ್ಶನವಾಯಿತು. ಸತ್ಯಾಗ್ರಹ ಸಾಧನೆಯಲ್ಲಿ ಅದ್ಭುತ ಮಹತ್ವ ಇದೆ ಎಂಬುದನ್ನು ರಾಷ್ಟ್ರನಾಯಕರಿಗೆ ಮದ್ದೂರಿನ ಈ ಚಳುವಳಿ ತೋರಿಸಿ ಕೊಟ್ಟಿತು. ಈ ಚಳುವಳಿಯಿಂದ ಸ್ಫೂರ್ತಿಗೊಂಡ ದೇಶದ ಸಾವಿರಾರು ಜನ

ಸತ್ಯಾಗ್ರಹಿಗಳು ನಾಡಿನ ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನಕ್ಕೆ ಸಿದ್ಧರಾಗಿ ನಿಂತರು. ಆಡಳಿತ ವರ್ಗದವರಲ್ಲಿ ಭಯ ಉಂಟಾಯಿತು. ಒಟ್ಟಿನಲ್ಲಿ ಭಾರತದ ಇತಿಹಾಸದಲ್ಲೇ ಮದ್ದೂರಿನ ಈ ಸ್ವಾತಂತ್ರ್ಯ ಸಮರವು ಮಹತ್ವಪೂರ್ಣವಾದುದು, ಮೈಸೂರು ಚರಿತ್ರೆಯಲ್ಲಿ ಚಿರಸ್ಥಾಯಿಯಾದುದು.

ಎಚ್. ಬಿಳಿಗೌಡ

ಮಂಡ್ಯ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಮಂಡ್ಯ ತಾಲ್ಲೂಕಿನ ದೇಶಪ್ರೇಮಿಗಳು ಸ್ವಪ್ರೇರಣೆಯಿಂದ ಪಾಲುಗೊಂಡು ಗಮನಾರ್ಹವಾದ ರೀತಿಯಲ್ಲಿ ಹೋರಾಟ ನಡೆಸಿರುವುದು ಕಂಡು ಬರುತ್ತದೆ.

ಭಾರತೀಯರ ದುಃಖಕ್ಕೆ ಬಡತನಕ್ಕೆ ಪರತಂತ್ರವೇ ಕಾರಣ: ಈ ಪರತಂತ್ರದಿಂದ ಪಾರಾಗಿ ಸ್ವತಂತ್ರರಾದರೆ ಮಾತ್ರ ಸುಖ ಶಾಂತಿ ನೆಮ್ಮದಿ ಸಮೃದ್ಧಿ ಸಾಧಿತವಾಗುತ್ತದೆಂದು ಬಗೆದ ವಿಚಾರವಂತ ದೇಶಪ್ರೇಮಿಗಳು ಭಾವೈಕ್ಯದಿಂದ ಬ್ರಿಟಿಷ್ ಸರಕಾರದ ವಿರುದ್ಧ ಹೋರಾಟ ಪ್ರಾರಂಭಿಸಿದರು.

ಭಾರತದ ರಾಜಕೀಯ ಮುಖಂಡರ ಮಾರ್ಗದರ್ಶನದಿಂದಲೂ, ಸಾಂಸ್ಕೃತಿಕವಾಗಿ ಆಧ್ಯಾತ್ಮಿಕವಾಗಿ ಮಹಾಪುರುಷರ ಬದುಕು–ಬರಹದಿಂದಲೂ ಮಂಡ್ಯತಾಲ್ಲೂಕಿನ ದೇಶಪ್ರೇಮಿಗಳು ಪ್ರಭಾವಿತರಾಗಿ ಚಳುವಳಿಯಲ್ಲಿ ಪಾಲುಗೊಂಡರು.

ಮಂಡ್ಯ ತಾಲ್ಲೂಕಿನ ದೇಶಪ್ರೇಮಿಗಳು ನಿಷೇಧಾಜ್ಞೆಗಳ ಧಿಕ್ಕಾರ, ಧ್ವಜಸತ್ಯಾಗ್ರಹ, ಕಾನೂನುಭಂಗ–ಮೊದಲಾದ ಚಳುವಳಿಯಲ್ಲಿ ಪಾಲ್ಗೊಂಡು ಜೈಲುವಾಸವನ್ನು ಅನುಭವಿಸಿದ್ದಾರೆ.

1930–31 ರಲ್ಲಿ ಮಂಡ್ಯತಾಲ್ಲೂಕಿನಲ್ಲಿ ರೈತರ ಸಂಘಟನಾ ಕಾರ್ಯವು ಇಂಡುವಾಳಿನ ಶ್ರೀ ಎಚ್ ಹೊನ್ನಯ್ಯ, ಹೊಸಗಾನಹಳ್ಳಿ ಶ್ರೀ ಎಚ್. ಕೆ. ಪುಟ್ಟಣ್ಣ, ಮದ್ದೂರಿನ ಶ್ರೀ ಎಚ್. ಕೆ. ವೀರಣ್ಣಗೌಡ, ಇವರ ನೇತೃತ್ವದಲ್ಲಿ ಇರ್ವಿನ್ ನಾಲೆಗೆ ಸಂಬಂಧಿಸಿದಂತೆ ನಡೆಯಿತು. ಇರ್ವಿನ್‌ನಾಲೆಯ ರೈತಚಳುವಳಿಯು 14–15 ತಿಂಗಳು ನಡೆಯಿತು. ಈ ಚಳವಳಿ ಬಹಳಷ್ಟು ಜನ ಹೋರಾಟಗಾರರಿಗೆ ತರಬೇತಿ ನೀಡಿತು. ಇಲ್ಲಿ ತರಬೇತಿ ಪಡೆದ ದೇಶಪ್ರೇಮಿಗಳು ಸ್ವಾತಂತ್ರ್ಯಚಳವಳಿಯಲ್ಲಿ ಸಕ್ರಿಯವಾಗಿ ಪಾಲುಗೊಂಡರು.

1938 ರಲ್ಲಿ ಮಂಡ್ಯತಾಲ್ಲೂಕಿನಲ್ಲಿ, ಮೈಸೂರು ಜಿಲ್ಲೆಯಿಂದ ಮಂಡ್ಯವನ್ನು ಪ್ರತ್ಯೇಕಗೊಳಿಸಿ ಜಿಲ್ಲೆಯನ್ನಾಗಿ ಮಾಡಬೇಕೆಂಬ ಚಳುವಳಿ ಆರಂಭವಾಯಿತು. ಆಗ ಈ ತಾಲ್ಲೂಕಿನ ಬಹಳಷ್ಟು ದೇಶಪ್ರೇಮಿಗಳು ಮೈಸೂರು ಸೆರೆಮನೆಯನ್ನು ಸೇರಬೇಕಾಯಿತು. ಈ ಚಳುವಳಿಗಾರರ ಬೇಡಿಕೆ ಈಡೇರಿ 1939 ರಲ್ಲಿ ಮಂಡ್ಯ ಜಿಲ್ಲೆಯು ಉಗಮವಾಯಿತು.

ಸ್ವಾತಂತ್ರ್ಯ ಹೋರಾಟದಲ್ಲಿ ಶ್ರೀರಂಗಪಟ್ಟಣದ ಸೆರೆಮನೆ ಸೇರಿ ಅಲ್ಲಿಯೇ ಮೃತನಾದ ದೇಶಭಕ್ತ ಶ್ರೀ ಪಿ. ವೆಂಕಟಗಿರಿಯಯ್ಯ ಅವರು ಮಂಡ್ಯದ ವರ್ತಕರು.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ ಈ ತಾಲ್ಲೂಕಿನ ಅಮರ ದೇಶ ಪ್ರೇಮಿಗಳೆಂದರೆ–ದಿವಂಗತರಾದ ಜಿ. ಎಸ್. ಬೊಮ್ಮೇಗೌಡ, ಎಚ್ ಸಿದ್ಧರಾಮಯ್ಯ, ಈಡಿಗರ ರಾಮು, ಡಿ. ವಿದ್ಯಾಧರಪ್ಪ, ಎ. ಸಿ ಚನ್ನಪ್ಪ, ಕೆ. ಚಿಕ್ಕಲಿಂಗಯ್ಯ. ಎಂ. ವಿ ಅನಂತರಾಮಭಟ್ಟ, ಎಂ. ಎಲ್ ನಾಗಪ್ಪ ಬಿ. ಸಿ. ಗೌಡ ಚಂದಗಾಲು ಕಾಡಯ್ಯ ಕೆರಗೋಡು, ಬಿ. ಕೆಂಪೇಗೌಡ ಇವರ ಸೇವೆ ಸ್ಮರಣೀಯವಾದುದು.

ಡಾ. ಪಶುಪತಿರಾವ್, ಅನಂತರಾಮಶೆಟ್ಟಿ, ಕೆ ಬೆಟ್ಟಶೆಟ್ಟಿ, ಪಿ. ಎಸ್ ಜವರಪ್ಪ ಗೌಡ, ಬಾಣಸವಾಡಿಯ ಬಿ ಎಂ ಸಿದ್ದೇಗೌಡ, ಎಂ. ಕೆಂಪಯ್ಯ. ಎಂ.ಆರ್ ಕೃಷ್ಣಮೂರ್ತಿ ಪಿ. ಸಿ. ಕೃಷ್ಣಪ್ಪಗೌಡ, ಡಾ ವೈ. ಎಸ್ ರಾಮರಾವ್, ಜಿ ಪುಟ್ಟಸ್ವಾಮಿ, ಎಚ್. ಚಿಕ್ಕ ಲಿಂಗೇಗೌಡ, ಎ. ಸಿ. ಮಾದೇಗೌಡ. ಟಿ ಎಂ ತಮ್ಮಯ್ಯ, ಶುಗರ್‌ಟೌನ್‌ನ ಕೆ. ಎಸ್. ರಾಮಯ್ಯ, ಪಂಚಲಿಂಗೇಗೌಡನ ದೊಡ್ಡಿ ಪಂಚಯ್ಯ. ನಾಗಪ್ಪ, ಕೆ. ವಿ. ಶಂಕರಗೌಡ, ಜಿ. ಮಾದೇಗೌಡ, ರಾಜಶೇಖರ್, ಎಚ್. ಸಿ. ಚನ್ನಯ್ಯ. ಪಿ. ಸಿ. ಕೃಷ್ಣಪ್ರಸಾದ್ ಮಲ್ಲಿಗೆರೆಪಾಪಯ್ಯ ಎಂ. ಕೆಂಪಯ್ಯ ಈ ಮಹನೀಯರುಗಳೆಲ್ಲ ಮಂಡ್ಯ ತಾಲ್ಲೂಕಿನಿಂದ ಸ್ವಾತಂತ್ರ್ಯಚಳವಳಿಯಲ್ಲಿ ಪಾಲುಗೊಂಡಿದ್ದರು. ಇವರೆಲ್ಲ ಜೈಲುವಾಸವನ್ನು ಅನುಭವಿಸಿದವರು. ಇವರು ಶ್ರೀರಂಗಪಟ್ಟಣ, ಮೈಸೂರು, ಮಂಡ್ಯ, ಬೆಂಗಳೂರು, ಶಿವಮೊಗ್ಗದ ಜೈಲುಗಳಲ್ಲಿದ್ದರು.

ಸ್ವಾತಂತ್ರ್ಯಚಳುವಳಿಗಾರರಲ್ಲಿ ಕೆಲವರು ತಮ್ಮ ವಿಶಿಷ್ಟ ಸೇವೆ ಹಾಗೂ ಹೋರಾಟದಿಂದ ವಿಶೇಷ ಗಮನ ಸೆಳೆಯುತ್ತಾರೆ. ಬಿ. ಸಿ. ಕೃಷ್ಣಪ್ಪಗೌಡರ ಅಣ್ಣನವರಾದ ವರ್ತಕ (ವೃತ್ತಿಯಿಂದ) ಪಿ. ಸಿ. ಶ್ರೀನಿವಾಸಯ್ಯನವರು ಸ್ವಾತಂತ್ರ್ಯ ಹೋರಾಟಗಾರರಿಗೆ ಊಟ ಮತ್ತು ವಸತಿಸೌಕರ್ಯವನ್ನು ಏರ್ಪಡಿಸುತ್ತಿದ್ದರು.

ಎಚ್. ಸಿ ಚನ್ನಯ್ಯನವರು ಕಾಂಗ್ರೆಸ್‌ನ ಕಾರ್ಯಚಟುವಟಿಕೆಗಾಗಿ ಈಗಿನ ಸಂದ್ಯಾ ಟಾಕೀಸಿನ ಎದುರು ತಮ್ಮ ಮನೆಯನ್ನೇ ಬಿಟ್ಟುಕೊಟ್ಟಿದ್ದರು. ಈ ಮನೆ ಚಳವಳಿಗಾರರ ಕಾರ್ಯ ಚಟುವಟಿಕೆಯ ಕೇಂದ್ರಸ್ಥಾನವಾಗಿತ್ತು, ಈ ತಾಲ್ಲೂಕಿನಲ್ಲಿ.

ಅರಳಿ ಸಂಗಪ್ಪನವರು ಮಂಡ್ಯದ ಶ್ರೀಮಂತರಲ್ಲೊಬ್ಬರು. ಇವರ ಮಗ ರಾಜಶೇಖರ. 1942 ರಲ್ಲಿ ರಾಜಶೇಖರ್ ವಿದ್ಯಾರ್ಥಿ. ಈಗಿನ ಪುರಸಭಾಪ್ರೌಢಶಾಲೆಯ ಕಟ್ಟಡದ ಕಾರ್ಯ ನಡೆಯುತ್ತಿದ್ದಾಗ ಪಿ. ಎಸ್. ಜವರಪ್ಪಗೌಡರೊಡನೆ ಸೇರಿ, ಕಾರ್ಮಿಕರಂತೆ ವೇಷ ಹಾಕಿ ಕಟ್ಟಡದ ಮೇಲೆ ಹೋಗಿ ಕಾಂಗ್ರೆಸ್ಸಿನ ತ್ರಿವರ್ಣ ಧ್ವಜವನ್ನು ಹಾರಿಸಿದರು.

ಹೊಸ ಬೂದನೂರಿನ ಗೋಸಪ್ಪನ ಜವರಾಯಿಗೌಡರು ಕಾಂಗ್ರೆಸ್ಸಿಗೆ ತಮ್ಮ ಅಚಲವಾದ ನಿಷ್ಠೆಯನ್ನು ವ್ಯಕ್ತಪಡಿಸಿ ಭಾರತದ ಸ್ವಾತಂತ್ರ್ಯಕೋಸ್ಕರ ಹಲವಾರು

ಚಳುವಳಿಗಳಲ್ಲಿ ಭಾಗಿಯಾಗಿ ಜೈಲುವಾಸವನ್ನು ಅನುಭವಿಸಿ ಕೀರ್ತಿಗಳಿಸಿದರು. ದಿ: ಗೋಸನ್ನನ ಜವರಾಯಿಗೌಡರು ಶ್ರೀರಂಗಪಟ್ಟಣ,ಶಿವಮೊಗ್ಗ ಜೈಲಿನಲ್ಲಿ ಸುಮಾರು ಆರು ತಿಂಗಳ ಕಾಲ ಸೆರೆವಾಸ ಅನುಭವಿಸಿದರು. ಇವರು ಸ್ವಾತಂತ್ರ್ಯ ಪೂರ್ವದಲ್ಲಿ ಮಂಡ್ಯ ಜಿಲ್ಲಾ ಬೋರ್ಡ್ ಸದಸ್ಯಸ್ಥಾನಕ್ಕೆ ಸ್ಪರ್ಧಿಸಿ ಜಯಗಳಿಸಿ ಕಾರ್ಯ ನಿರ್ವಹಿಸಿದರು. ವಿಧಾನಸಭಾ ಸದಸ್ಯತ್ವಕ್ಕೆ ಸ್ಪರ್ಧಿಸಿ ಸೋಲನ್ನನುಭವಿಸಿದರು. ಇವರು ಪಾರಿತ್ಯ್ರಾಧಾರಿತ ರಾಜಕಾರಣಿಗಳಲ್ಲಿ ಒಬ್ಬರು. ಇವರು ತಮ್ಮ ಮಗನಿಗೆ ತಿಳಿಸಿದ ಎರಡು ಪ್ರಸಂಗಗಳು ಉಲ್ಲೇಖಾರ್ಹ. ಒಂದು ಜಿಲ್ಲಾ ಬೋರ್ಡಿನ ಅಧ್ಯಕ್ಷಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ವಿರೋಧ ಪಕ್ಷದಲ್ಲಿ ತೀವ್ರ ಪೈಪೋಟಿ ಇದ್ದು, ವಿರೋಧ ಪಕ್ಷಕ್ಕೆ ಮತ ನೀಡಿದರೆ ನೀವು ಕೇಳಿದ ಕಡೆ 25 ಎಕರೆ ಜಮೀನು 10ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಜಿಲ್ಲಾಧಿಕಾರಿಗಳು ಆಮಿಷವೊಡ್ಡಿದಾಗ ಜವರಾಯಿಗೌಡರು–ಭೂಮಿಗಾಗಿ ಹಣಕ್ಕಾಗಿ ಪಕ್ಷದ್ರೋಹ ದೇಶ ದ್ರೋಹದ ಕಾರ್ಯ ಮಾಡಲಾರೆ ಎಂದು ಕಾಂಗ್ರೆಸ್ಸಿಗೆ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸಿದರಂತೆ. ಎರಡು–ನೀರಿನ ಕಂದಾಯವನ್ನು ಒಂದೇ ಕಂತಿನಲ್ಲಿ ಸಂದಾಯ ಮಾಡಬೇಕೆಂಬ ರಾಜಾಜ್ಞೆಯ ವಿರುದ್ಧ ಎಚ್ ಕೆ ವೀರಣ್ಣಗೌಡರ ನೇತೃತ್ವದಲ್ಲಿ ಬೆಂಗಳೂರಿಗೆ ಜಾತಾ ಹೊರಟಾಗ ಅಂದಿನ ದಿವಾನರು ಜನತಾ ಮುಖಂಡರನ್ನು ಕರೆದು ನೂರು ಎಕರೆ ಜಮೀನು ಕೊಡುತ್ತೇವೆ ಜಾತ ನಿಲ್ಲಿಸಿ ಎಂದಾಗ ಅವರ ಆಮಿಷವನ್ನು ನಿರಾಕರಿಸಿ ನೀರಿನ ಕಂದಾಯವನ್ನು ಕಂತುಗಳಲ್ಲಿ ಕಟ್ಟುವಂತೆ ಆಜ್ಞೆ ಹೊರಡಿಸುವಂತೆ ಮಾಡಿದರಂತೆ. ಗೋ. ಜವರಾಯಿಗೌಡರು ಸ್ವಾತಂತ್ರ್ಯ ಪೂರ್ವದಲ್ಲಿ ಸಲ್ಲಿಸಿದ ಸೇವೆಯನ್ನು ಮನ್ನಣೆಮಾಡಿ ಕರ್ನಾಟಕ ಸರಕಾರ ಎರಡು ಎಕರೆ ಜಮೀನು ನೀಡಿದೆ.*

ಕ್ಯಾತಂಗೆರೆಯ ಕೆ. ಬೆಟ್ಟಸೆಟ್ಟರು ಸ್ವಾತಂತ್ರ್ಯಚಳುವಳಿಯಲ್ಲಿ ಪಾಲ್ಗೊಂಡು ದೇಶಭಕ್ತಿಯನ್ನು ವ್ಯಕ್ತಪಡಿಸಿದ್ದಾರೆ ಇವರು ನೇತಾಜಿ, ಗಾಂಧಿ, ನೆಹರು ಮೊದಲಾದ ನಾಯಕರ ಕರೆಗೆ ಮಾಧ್ಯಮಿಕ ಶಾಲೆಯಲ್ಲಿದ್ದಾಗಲೇ ಓಗೊಟ್ಟವರು. ವಿವೇಕಾನಂದ, ಪರಮಹಂಸರ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿದುದರಿಂದ ಭಾರತದ ಸಂಸ್ಕೃತಿ ಸಂರಕ್ಷಿತವಾಗಬೇಕಾದರೆ ದೇಶ ಸ್ವತಂತ್ರವಾಗಬೇಕೆಂದು ಬಯಸಿ ಚಳುವಳಿಯಲ್ಲಿ ಭಾಗವಹಿಸಿದರು. ಎಂ. ಪಿ. ಕೃಷ್ಣಪ್ಪ, ಶಾರದಾ ಪ್ರಸಾದ್, ಗಫಾರ್ ಮೊದಲಾದ ವಿದ್ಯಾರ್ಥಿ ನಾಯಕರೊಡನೆ ಸೇರಿ ಹೋರಾಟ ನಡೆಸಿದರು.ಇವರು ಎಸ್.ಎಸ್.ಎಲ್.ಸಿ, ಆದ ಮೇಲೆ ಜಿಲ್ಲಾ ವಿದ್ಯಾಧಿಕಾರಿಗಳ ಕಛೇರಿಯಲ್ಲಿ ನೌಕರರಾದರು. ಚಲೋ ಮೈಸೂರು ಚಳುವಳಿಯಲ್ಲಿ ಭಾಗವಹಿಸಿ-ಬಹಿರಂಗ ಸಭೆಯ ವ್ಯವಸ್ಥೆ, ಪ್ರಚಾರಕಾರ್ಯ, ಸತ್ಯಾಗ್ರಹಿಗಳನ್ನು ಕಲೆ ಹಾಕುವ ಕಾರ್ಯವನ್ನು ನಿರ್ವಹಿಸಿದುದರಿಂದ ನೌಕರಿ ಕಳೆದುಕೊಂಡರು.

---

* ದಿ ಗೋ. ಜವರಾಯಿಗೌಡರ ಮಗ ಶಿವರಾಮು ಎಂ. ಎ. ವಿಷಯ ನೀಡಿದ್ದು.

1947 ರಲ್ಲಿ ದಸ್ತಗಿರಿಯಾಗಿ ಮಂಡ್ಯ ಸಬ್‌ಜೈಲ್, ಬೆಂಗಳೂರು ಸೆಂಟ್ರಲ್ ಜೈಲ್, ಕೃಷ್ಣರಾಜಪುರದ ಜೈಲಿನಲ್ಲಿ ಬಂಧಿಯಾಗಿದ್ದರು. 1947 ರಲ್ಲಿ ಜೈಲಿನಲ್ಲಿರುವಾಗಲೇ ಸಮಾಜವಾದಿ ಪಕ್ಷ ಸೇರಿದರು. 1947ರಲ್ಲಿ ಸೆರೆಮನೆಯಿಂದ ಬಿಡುಗಡೆಯಾದರು. ದೇಶದ ಶಾಂತ ರಾಜಕಾರಣಿ ಕೆ. ವಿ. ಶಂಕರಗೌಡರು ಮಾಧ್ಯಮಿಕ ಶಾಲೆಯಲ್ಲಿ ಇವರಿಗೆ ಗುರು, ಮುಂದೆ ರಾಜಕೀಯ ಗುರುವೂ ಆದರು. 1975 ರಲ್ಲಿ ಜಯಪ್ರಕಾಶ ನಾರಾಯಣ್ ಅವರ ನೇತೃತ್ವದಲ್ಲಿ ಅಖಿಲ ಭಾರತ ಮಟ್ಟದಲ್ಲಿ ನಡೆದ ಚಳುವಳಿಯಲ್ಲೂ ಭಾಗವಹಿಸಿದರು. ಸಮಾಜವಾದಿ ಪಕ್ಷದಿಂದಲೇ ಇವರು ಎರಡುಸಾರಿ ನಗರಸಭಾ ಸದಸ್ಯರಾದರು. 1977ರಲ್ಲಿ ಸಮಾಜವಾದಿ ಪಕ್ಷ ಜನತಾದಲ್ಲಿ ಲೀನವಾಯಿತು. ಅಂದಿನಿಂದ ಜನತಾ ಪಕ್ಷದ ಮೂಲಕ ಸಮಾಜ ಸೇವೆ ಸಲ್ಲಿಸುತ್ತಿದ್ದಾರೆ.

ಮಂಡ್ಯ ತಾಲ್ಲೂಕು ಕೀಲಾರ ಗ್ರಾಮದಲ್ಲಿ 1920ರಲ್ಲಿ ಜನಿಸಿದ ಕೆ.ಸಿ. ಚನ್ನಯ್ಯನವರು ಸ್ವಾತಂತ್ರ್ಯ ಹೋರಾಟಗಾರರು, ಇವರ ತಂದೆ ಚಿಕ್ಕಸಿದ್ದೇಗೌಡರು. ಕೀಲಾರದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಅಧ್ಯಯನ ಮಾಡಿ 1931-32 ರಲ್ಲಿ ಕನ್ನಡ ಲೋಯರ್ ಸೆಕೆಂಡರಿ ಮಾಡಿದರು. ಮದ್ದೂರು ತಾಲ್ಲೂಕು ಬೆಸಗರಹಳ್ಳಿಯ ಇಂಗ್ಲಿಷ್ ಮಿಡಲ್ ಸ್ಕೂಲಿನಲ್ಲಿ ಇಂಗ್ಲಿಷ್ ಲೋಯರ್ ಸೆಕೆಂಡರಿ ಮಾಡಿದರು. ಮೈಸೂರಿನ ವೆಸ್ಲಿಮಿಷನ್ ಹೈಸ್ಕೂಲಿನಲ್ಲಿ ಫೋರ್ತ್‌ಫಾರಂವರೆಗೆ ಅಧ್ಯಯನ ಮಾಡಿದ ಇವರು 1938ರಲ್ಲಿ ಶಿವಪುರದಲ್ಲಿ ನಡೆದ ಧ್ವಜಸತ್ಯಾಗ್ರಹದಲ್ಲಿ ಖಾದಿಧಾರಿಯಾಗಿ ಅಂದೇ ಕಾಂಗ್ರೆಸ್ ಸದಸ್ಯರಾದರು. 1939ರಲ್ಲಿ ಮೈಸೂರಿನ ಟೌನ್‌ಹಾಲ್‌ನಲ್ಲಿ ನಡೆದ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಇದಕ್ಕಾಗಿ ಏಳು ತಿಂಗಳ ಕಠಿಣ ಸಜ ಹಾಗೂ ಐವತ್ತು ರೂ ಜುಲ್ಮಾನೆ ಕೊಡಬೇಕಾಯಿತು. ಜುಲ್ಮಾನೆ ಕೊಡಲಿಲ್ಲವಾದ್ದರಿಂದ ಉಳುವ ಎತ್ತುಗಳನ್ನು ಹರಾಜು ಮಾಡಿ ಹಣ ವಸೂಲಿ ಮಾಡಿಕೊಂಡರು. ಇವರು ಏಳು ತಿಂಗಳು ಮೈಸೂರು ಜೈಲಿನಲ್ಲಿ ಕಠಿಣ ಸಜ ಅನುಭವಿಸಿದರು. 1942ರ ಭಾರತ ಬಿಟ್ಟು ತೊಲಗಿ ಚಳುವಳಿ ಮತ್ತು 1947ರ ಅರಮನೆ ಸತ್ಯಾಗ್ರಹಗಳಲ್ಲಿ ಭಾಗವಹಿಸಿದ್ದರು. ಇತ್ತೀಚೆಗೆ ಶಿವಪುರದ ಸತ್ಯಾಗ್ರಹ ಸೌಧದಿಂದ ಪವಿತ್ರ ಮೃತ್ತಿಕೆಯನ್ನು ದೆಹಲಿಗೆ ತೆಗೆದುಕೊಂಡು ಹೋಗಿದ್ದರು. ಇಂದೂ ರಾಜಕೀಯದಲ್ಲಿ ಸಕ್ರಿಯವಾಗಿ ಕಾರ್ಯಕರ್ತರಾಗಿ ಸೇವೆಸಲ್ಲಿಸುತ್ತಿದ್ದಾರೆ.

ಕೆ. ವಿ. ಶಂಕರಗೌಡರು ಮಂಡ್ಯ ತಾಲ್ಲೂಕಿನ ಕೀಲಾರದವರು, ಪದವೀಧರರು. ಮಂಡ್ಯದ ಕ್ರಿಯಾಶೀಲ ರಾಜಕಾರಣಿ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದರು. ಸ್ವಾತಂತ್ರ್ಯ ಪ್ರೇಮಿಗಳಿಗೆ ಮಾರ್ಗದರ್ಶನ ನೀಡಿದವರು. ರಾಜಕೀಯರಂಗಕ್ಕೆ ಬಹಳಷ್ಟು ಜನರನ್ನು ಪರಿಚಯಿಸಿದವರು. ಸ್ವಾತಂತ್ರ್ಯಾನಂತರ ಹಲವಾರು ಸಂಘ ಸಂಸ್ಥೆಗಳ ಉಗಮಕ್ಕೆ ಕಾರಣರು. ಶಿಕ್ಷಣ ಸಚಿವರಾಗಿ ಉತ್ತಮ ಸೇವೆ ಸಲ್ಲಿಸಿದರು. ಗಾಂಧಿ ತತ್ವಗಳಲ್ಲಿ ಅಚಲ ನಂಬಿಕೆವುಳ್ಳವರು ಇಂದು ಲೋಕಸಭಾ

ಸದಸ್ಯರಾಗಿ ಜನ ಸೇವೆ ಮಾಡುತ್ತಿದ್ದಾರೆ.

ಜಿ. ಮಾದೇಗೌಡರು ವಿದ್ಯಾರ್ಥಿ ಜೀವನದಲ್ಲೇ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಜೈಲುವಾಸ ಅನುಭವಿಸಿದರು. ಪದವೀಧರರಾದ ಇವರು ಭಾರತೀ ವಿದ್ಯಾಸಂಸ್ಥೆಯ ಸ್ಥಾಪಕರು. ಅರಣ್ಯ ಸಚಿವರಾಗಿದ್ದರು. ಇಂದು ಶಾಸಕರಾಗಿ ಸೇವೆಸಲ್ಲಿಸುತ್ತಿದ್ದಾರೆ.

ಭಾರತದ ಸ್ವಾತಂತ್ರ್ಯಕ್ಕಾಗಿ ತನುಮನ ಧನವನ್ನರ್ಪಿಸಿದ ಮಹಾ ದೇಶ ಪ್ರೇಮಿಗಳು. ಸ್ವಾತಂತ್ರ್ಯ ಹೋರಾಟಗಾರರ ಸಾಲಿನಲ್ಲಿ ಮಿಂಚುವಂಥ ಹೆಸರುಗಳಲ್ಲಿ ಮಂಡ್ಯ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರ ಹೆಸರುಗಳೂ ಸೇರುತ್ತವೆ.

ರಾಜಕೀಯ ಸ್ವಾರ್ಥ ಸಾಧನೆಗಾಗಿ ಅಲ್ಲ, ಸರ್ವರ ಹಿತ ಸಾಧನೆಗಾಗಿ ಎಂಬ ಧೋರಣೆವುಳ್ಳ ಚಳುವಳಿಗಾರರು ಮಂಡ್ಯ ತಾಲ್ಲೂಕಿನವರು.

ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಈ ತಾಲ್ಲೂಕಿನ ಸ್ವಾತಂತ್ರ್ಯ ಪ್ರೇಮಿಗಳಿಗೆ ಆದ್ಯಗೌರವ ಸಲ್ಲುವಂತೆ ನಗರ ಸಭೆಯುವರು ನಗರದ ಬೀದಿಗಳಿಗೆ, ಉದ್ಯಾನವನಗಳಿಗೆ ರಾಷ್ಟ್ರಪ್ರೇಮಿ ಚಳುವಳಿಗಾರರ ಹೆಸರನ್ನಾರಿಸುವುದು ಸ್ತುತ್ಯಕಾರ್ಯ.

ಜಿ. ವಿ. ದಾಸೇಗೌಡ

ಮಂಡ್ಯ ಜಿಲ್ಲೆಯಲ್ಲಿ ಕ್ವಿಟ್ ಇಂಡಿಯಾ ಚಳುವಳಿ

'ಕ್ವಿಟ್ ಇಂಡಿಯಾ' ಚಳುವಳಿಯನ್ನು ಹೂಡಿದಾಗ ಆಗಸ್ಟ್ 9 (1942)ಕ್ಕೆ ಗಾಂಧೀಜಿಯವರ ಮತ್ತು ಅನ್ಯ ಗಣ್ಯನಾಯಕರ ಬಂಧನವಾಯಿತು. ಕರ್ನಾಟಕದಿಂದ ಮುಂಬೈ ಎ.ಐ.ಸಿ.ಸಿ.ಗೆ ಹೋಗಿದ್ದ ನಾಯಕರೂ ಊರಿಗೆ ಮರಳುವ ಮೊದಲೇ ಬಂಧಿತರಾದರು. ಇಂಥ ಪರಿಸ್ಥಿತಿಯಲ್ಲಿ ಚಳುವಳಿ ಅನಾಯಕವಾಗುವಂತಿದ್ದರೂ ವಿದ್ಯಾರ್ಥಿ ಹಾಗೂ ರೈತಸಮುದಾಯದಿಂದ ನವನಾಯಕವರ್ಗ ತಾನೇತಾನಾಗಿ ಸೃಷ್ಟಿಯಾಯಿತು. ಸರಕಾರ ನಡೆಯಗೊಡಬಾರದು, ವಿಧ್ವಂಸಕ ಕೃತ್ಯಗಳನ್ನು ನಡೆಸಿ ಸರಕಾರೀ ಯಂತ್ರ ಮುರಿಯಬೇಕು ಹಾಗೂ ಬ್ರಿಟಿಷರ ಯುದ್ಧ ಯತ್ನಗಳಿಗೆ (ಎರಡನೆಯ ಮಹಾಯುದ್ಧಕ್ಕೆ) ಬೆಂಬಲ ಸಿಗದಂತಾಗಬೇಕು, ಎಂದು ಸ್ಥೂಲವಾಗಿ ಕಾರ್ಯಕ್ರಮವನ್ನು ರೂಪಿಸಲಾಗಿತ್ತು. ಕಿರಿದಾದ ಮಂಡ್ಯ ಜಿಲ್ಲೆಯೂ ಆ ಚಳುವಳಿಯಲ್ಲಿ ತನ್ನದೇ ಆದ ಕೊಡುಗೆ ನೀಡಿತು.

1939ರಲ್ಲಿ ಸ್ವತಂತ್ರ ಅಸ್ತಿತ್ವ ಪಡೆದ ಮಂಡ್ಯ ಜಿಲ್ಲೆಯು ಅದಕ್ಕೂ ಮೊದಲೆ 1938ರಲ್ಲಿ ನಡೆದ ಶಿವಪುರ ಕಾಂಗ್ರೆಸ್ಸಿನಿಂದಾಗಿ ಕಾಂಗ್ರೆಸ್ಸಿಗೆ ಸಾಕಷ್ಟು ಬೆಂಬಲ ನೀಡಲು ಮುಂದಾಗಿತ್ತು. ಎಚ್. ಕೆ. ವೀರಣ್ಣಗೌಡ, ಎ. ಜಿ. ಬಂದೀಗೌಡ, ಮಂಡ್ಯದ ಮಹಾಬಲರಾವ್, ಡಾ : ಪಶುಪತಿ, ಕೆ. ಎಸ್. ಜವರಪ್ಪಗೌಡ, ನಾಗಮಂಗಲದ ಎಂ. ಆರ್. ಎನ್. ಶಾಸ್ತ್ರಿ ಹಾಗೂ ಟಿ. ಮರಿಯಪ್ಪ, ಮಳವಳ್ಳಿವೀರಪ್ಪ ಮುಂತಾದವರ ನಾಯಕತ್ವದಲ್ಲಿ ಸಾಕಷ್ಟು ಜನಪ್ರಿಯತೆಯನ್ನು ಗಳಿಸಿತ್ತು. ಆದರೆ ಕಾಂಗ್ರೆಸ್ಸಿಗೆ ಈ ಜಿಲ್ಲೆಯಲ್ಲಿ ಅಷ್ಟೇ ಉಗ್ರ ವಿರೋಧವೂ ಇತ್ತು.

ಗಾಂಧೀಜಿಯವರ ಬಂಧನವಾದ ತಕ್ಷಣ ಎಲ್ಲೆಡೆ ಪ್ರತಿಭಟನೆಗಳಾದಂತೆ ವಿದ್ಯಾರ್ಥಿ ಪ್ರತಿಭಟನೆಯು ದಿನಾಂಕ 10ರಿಂದ, ಮಂಡ್ಯ, ಮಳವಳ್ಳಿ, ನಾಗಮಂಗಲಗಳಲ್ಲಿ ಕಾಣಿಸಿತು. ಒಂದು ತಿಂಗಳ ಕಾಲ ಭೂಗತರಾಗಿ ಎಚ್. ಕೆ. ವೀರಣ್ಣಗೌಡರು ತಮ್ಮ ಬಂಧನವಾಗುವ ತನಕ (8.9.42) ಚಳವಳಿಗೆ ಮಾರ್ಗದರ್ಶನ ಮಾಡಿದರು.

ಗಾಂಧೀಜಿಯವರ ಕಾರ್ಯದರ್ಶಿ ಮಹಾದೇವಭಾಯಿದೇಸಾಯಿ ನಿಧನರಾದಾಗ ಬೆಂಗಳೂರು ಮೈಸೂರುಗಳಲ್ಲಿ ಉಗ್ರ ಪ್ರತಿಭಟನೆ ಆಯಿತು. ಬೆಂಗಳೂರಲ್ಲಿ ದಿನಾಂಕ 17ಕ್ಕೆ ಗೋಲೀಬಾರಿಗೆ ಹಲವರು ನಿಧನರಾದರು. ಮಂಡ್ಯದಲ್ಲಿ ಮುಖ್ಯವಾಗಿ ಮುನಿಸಿಪಲ್ ಹೈಸ್ಕೂಲಿನ ವಿದ್ಯಾರ್ಥಿಗಳ ಮುಷ್ಕರ, ಪ್ರತಿಭಟನಾ ಮೆರವಣಿಗೆ

ಸಾಗಿದ್ದವು. ಪಿ. ಎನ್. ಜವರಪ್ಪಗೌಡ, ಸಿದ್ದರಾಮಯ್ಯ ಹಾಗೂ ಕೆಂಪಯ್ಯ ಮಂಡ್ಯದಲ್ಲಿ ಸಕ್ರಿಯವಾಗಿ ಕೆಲಸಮಾಡುತ್ತಿದ್ದರು. ಮಳವಳ್ಳಿಯಲ್ಲಿ 'ಕಾಂಗ್ರೆಸ್' ಸುಬ್ಬಯ್ಯ ಅಥವಾ ದೊಡ್ಡಪುಟ್ಟಸುಬ್ಬಯ್ಯ ಇವರ ನೇತೃತ್ವದಲ್ಲಿ ಆಗಸ್ಟ್ ಎರಡನೆಯ ವಾರದಲ್ಲಿ ನಿತ್ಯ ವಿದ್ಯಾರ್ಥಿಗಳ ಮೆರವಣಿಗೆ ನಡೆದಿರಲು ವಿದ್ಯಾರ್ಥಿಗಳಾದ ಹಾ: ನಂಜಪ್ಪ, ಪುಟ್ಟನಾರಾಯಣ, ಪುಟ್ಟಸ್ವಾಮಿ, ಹಲಗೂರು ರಾಮಚಂದ್ರಪ್ಪ, ಬಿಣಮನಹಳ್ಳಿ ಭೀಮಯ್ಯ ಹಾಗೂ 'ಕಾಂಗ್ರೆಸ್' ಸುಬ್ಬಯ್ಯನವರನ್ನು ಬಂಧಿಸಲಾಯಿತು.

18. 8. 42 ರಿಂದ ಮಂಡ್ಯ ಸಕ್ಕರೆ ಕಾರ್ಖಾನೆಯ 385 ಕಾರ್ಮಿಕರು, ಸರ್ಕಾರೀ ಡೈಕೊ ಪ್ಲೈಡ್ ಕಾರ್ಖಾನೆಯ 150 ಕಾರ್ಮಿಕರೂ ಮೈಸೂರು ಕೆಮಿಕಲ್ಸ್ ಅಂಡ್ ಮ್ಯಾನುಫ್ಯಾಕ್ಚರ್ ಕಾರ್ಖಾನೆಯ 60 ನೌಕರರು ಸ್ವಾತಂತ್ರ್ಯ ಚಳುವಳಿಗೆ ಬೆಂಬಲ ಸೂಚಿಸಲು ಹಾಗೂ ಮಹಾದೇವದೇಸಾಯಿಯವರ ಮರಣಕ್ಕಾಗಿ ಸಂತಾಪ ಸೂಚಿಸಲು ಮುಷ್ಕರ ಹೂಡಲು, ಮುಷ್ಕರವು ಮೂರು ದಿನಗಳ ಕಾಲ ನಡೆಯಿತು. ಸಕ್ಕರೆ ಕಾರ್ಖಾನೆಯ ನೌಕರರಾದ ಅನಂತಭಟ್ಟ ಎಂಬುವರು ನೌಕರಿಗೆ ರಾಜೀನಾಮೆ ಕೊಡಲು, ಅವರು ರಾಜೀನಾಮೆಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಬೇಕೆಂದು ಮುಷ್ಕರಕಾರರು ಬೇಡಿಕೆ ಮುಂದಿಟ್ಟರು. ಮಂಡ್ಯದ ಎಂ. ಪುಟ್ಟೇಗೌಡ ಮಂಡ್ಯದಲ್ಲಿ ಚಳುವಳಿಯ ಪ್ರಚೋದಕರೆಂದೂ ಸಿದ್ದರಾಮಯ್ಯ ಹಾಗೂ ಎಂ. ಕೆಂಪಯ್ಯ ಮುಷ್ಕರ ಹೂಡಲು ಕಾರ್ಮಿಕರಿಗೆ ಪ್ರಚೋದನೆ ನೀಡುತ್ತಿದ್ದಾರೆಂದೂ ಸರಕಾರದ ಗುಪ್ತ ವರದಿಗಳು ತಿಳಿಸಿವೆ.

18. 8. 42 ಹಾಗೂ 19. 8. 42 ರಂದು ಕ್ಲೋಸ್‌ಪೇಟೆ (ರಾಮನಗರ) ಹಾಗೂ ಚನ್ನಪಟ್ಟಣಗಳ 300 ವಿದ್ಯಾರ್ಥಿಗಳು ರೈಲಿನಲ್ಲಿ ಮದ್ದೂರಿಗೆ ಬಂದು ಊರಲ್ಲಿ ಮೆರವಣಿಗೆ ನಡೆಸಿ ಹರತಾಳ ನಡೆಸುವಂತೆ ಅಂಗಡಿಯವರನ್ನು ಒತ್ತಾಯ ಮಾಡಿದರು.

ಚಳವಳಿ ಆರಂಭ ಆದಾಗಲೇ ಅರಕೆರೆಯವರಾದ ಎ. ಕೆಂಚಪ್ಪ, ಎ. ಜಿ. ಲಿಂಗಪ್ಪ, ಯು. ಕೆಂಚಪ್ಪ, ಎಂ. ಸಿ. ಪುಟ್ಟೇಗೌಡ, ಎ ಸಿ. ಮಾದೇಗೌಡ ಇವರೆಲ್ಲರೂ ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆ ಬೆಳ್ಳಿಕರೆ, ನೇರಲಕೆರೆ, ತರಗಮಾಡಿ, ಕೊಡಿಯಾಲ ಕೊಡಗಹಳ್ಳಿ, ಬನ್ನೂರು, ಅಂಗರಹಳ್ಳಿ, ಅರಪಟ್ಟಿಗೆಕೊಪ್ಪಲುಗಳಲ್ಲಿ ಸೇಂದಿ ಅಂಗಡಿಗಳ ಮುಂದೆ ಪಿಕೆಟಿಂಗ್, ಪ್ರಭಾತ್‌ಫೇರಿ ಮುಂತಾದ ಚಟುವಟಿಕೆಗಳನ್ನು ನಡೆಸಿದ್ದಲ್ಲದೆ ಮೂರು ಊರುಗಳಲ್ಲಿ ಸೇಂದಿ ಅಂಗಡಿಗಳನ್ನು ನಾಶಮಾಡಿದರು.

ದಿನಾಂಕ 23ಕ್ಕೆ ಮದ್ದೂರಿನಲ್ಲಿ ನ್ಯಾಯವಿಧಾಯಕ ಸಭೆಯ ಉಪಾಧ್ಯಕ್ಷ ಎಂ.ಸಿ. ಲಿಂಗೇಗೌಡರ ಅಧ್ಯಕ್ಷತೆಯಲ್ಲಿ ಒಂದು ರಾಜಕೀಯ ಸಭೆ ನಡೆಯಿತು. ಈ ಸಭೆಗೆ ಆಮಂತ್ರಣ ನೀಡಲು ಮುದ್ರಿಸಿದ ಕರಪತ್ರದಲ್ಲಿ ಲಿಂಗೇಗೌಡರೇ ಅಲ್ಲದೆ ಪಿ.

ಶಿವಲಿಂಗಯ್ಯ, ಎಂ. ಶ್ರೀನಿವಾಸಶೆಟ್ಟಿ, ಕೆ. ಪುಟ್ಟಯ್ಯ, ಎಸ್. ಸಿ. ಮಲ್ಲಯ್ಯ, ಕೊಪ್ಪದ ಜೋಗಿಗೌಡ, ಮೊಹಮ್ಮದ್ ಫಕರುದ್ದೀನ್, ಪಿ. ಎಸ್. ಗುಂಡೂರಾವ್, ನಾಡಗೌಡ, ಜವರಾಯಿಗೌಡ, ಚಿಕ್ಕೇಗೌಡ, ಇವರುಗಳು ಸಹಿ ಮಾಡಿದ್ದರು. ಕೆಸ್ತೂರು, ಆತಕೂರು ಸರಕಾರಿ ಶಾಲೆಗಳ ಕಟ್ಟಡಗಳಿಗೂ ಶೆಟ್ಟಿಹಳ್ಳಿಯ ತಂಬಾಕು ಉಗ್ರಾಣಕ್ಕೂ 18–19ಕ್ಕೆ ಚನ್ನಪಟ್ಟ–ರಾಮನಗರಗಳಿಂದ ಬಂದ ವಿದ್ಯಾರ್ಥಿಗಳು ಜಖಂ ಮಾಡಿದ್ದರೆಂದೂ ಮದ್ದೂರಿನಲ್ಲಿ ದೌರ್ಜನ್ಯ ನಡೆಸಿದರೆಂದೂ ಹೇಳಿ ಅವುಗಳನ್ನು ಖಂಡಿಸುವ ನಿರ್ಣಯವನ್ನು ಸಭೆಯಲ್ಲಿ ಮಾಡಿದರಾದೆ ಮಹಾರಾಜರಿಗೆ ನಿಷ್ಠೆ ಪ್ರದರ್ಶಿಸುವ ನಿರ್ಣಯವನ್ನು ಮಾಡಲಾಯಿತು. ಪತ್ರಕರ್ತರಾದ ಎಂ. ಎಸ್. ಶ್ರೀನಿವಾಸಮೂರ್ತಿ ಹಾಗೂ ಎಸ್. ಸಿ. ಮಲ್ಲಯ್ಯ ಸಭೆಯಲ್ಲಿ ಮಾತನಾಡಿದರು.

ಇದೇ ಕಾಲಕ್ಕೆ ನಾಗಮಂಗಲ ತಾಲ್ಲೂಕು ಚೌಡೇನಹಳ್ಳಿಯ ಹತ್ತಿರ ಟೆಲಿಗ್ರಾಫ್ ತಂತಿ, ಕಂಬಗಳನ್ನು ಕತ್ತರಿಸಿದ ಬಗ್ಗೆ ಪೋಲೀಸರು ವರದಿ ಮಾಡಿದ್ದಾರೆ. "ಚೌಡೇನಹಳ್ಳಿಯ ಪ್ರಕರಣಕ್ಕೆ ಪಾಲಗ್ರಹಾರದ ಪಿ. ಎಸ್. ನರಸಿಂಹಯ್ಯ ಕಾರಣವಿರಬೇಕು. ಅವರನ್ನು ಬಂಧಿಸಲಾಗುವುದು" ಎಂದು ಆಗಸ್ಟ್ 30ರ ವರದಿ ತಿಳಿಸುತ್ತದೆ. ಪಿ.ಎಸ್. ನರಸಿಂಹಯ್ಯ ಹೀಗೆ ಹೇಳಿದ್ದಾರೆ. : "ಗೌಪ್ಯವಾಗಿ ಊರ ಹೊರಗಡೆ ಹೊಲವಾಳದಲ್ಲಿ ಸುಮಾರು ಇಪ್ಪತ್ತೈದು ಜನಗಳು ಚಳುವಳಿಯ ಬಗ್ಗೆ ತೀರ್ಮಾನ ಕೈಗೊಂಡೆವು. ಅದೇ ದಿನ ರಾತ್ರಿ ಹನ್ನೆರಡೂವರೆ ಗಂಟೆಗೆ ಚೌಡೇನಹಳ್ಳಿ ಹತ್ತಿರ ಟೆಲಿಗ್ರಾಫ್ ಕಂಬ ಮತ್ತು ತಂತಿ ಕತ್ತರಿಸಲಾಯಿತು. ನಾವು ಹುಡುಗರಾಗಿದ್ದೆವು. ವೀರಪ್ಪಪೂಜಾರಿ ಎಂಬವರು ದೊಡ್ಡವರಿದ್ದರು. ಅವರ ಸಹಾಯದಿಂದ ಕತ್ತರಿಸಲಾಯಿತು." ಶೀಘ್ರವೇ ನರಸಿಂಹಯ್ಯನವರ ಬಂಧನವಾಯಿತು. "ಮಂಡ್ಯ ಜಿಲ್ಲೆಯಲ್ಲಿ ಎಚ್. ಕೆ. ವೀರಣ್ಣಗೌಡರು ಬಹಳ ಚೆನ್ನಾಗಿ ಹಳ್ಳಿಹಳ್ಳಿಯಲ್ಲಿ ಚಳುವಳಿಗೆ ವ್ಯವಸ್ಥೆ ಮಾಡಿದ್ದರು." "ಪೋಲೀಸರು ಟೆಲಿಗ್ರಾಫ್ ತಂತಿ ಮತ್ತು ಕಂಬ ಮುರಿದ ಕೇಸನ್ನು ಹಾಕಲು ಸತತ ಪ್ರಯತ್ನಮಾಡಿದರು. ನಮ್ಮ ತಾಲ್ಲೂಕಿನಲ್ಲಿ ಸಾಕ್ಷಿ ಹೇಳಲು ಒಬ್ಬರೂ ಮುಂದೆ ಬರಲಿಲ್ಲ", ಎಂದು ನರಸಿಂಹಯ್ಯ ತಿಳಿಸಿದ್ದಾರೆ.

ಮಂಡ್ಯ ಮುನಿಸಿಪಲ್ ಹೈಸ್ಕೂಲಿನಲ್ಲಿ ಮುಷ್ಕರ ಸಾಗಿ ಮುಂದೆ ಆಗಸ್ಟ್ 27ಕ್ಕೆ 277ರಲ್ಲಿ 173 ವಿದ್ಯಾರ್ಥಿಗಳು ಶಾಲೆಗೆ ಹಾಜರಾಗಿದ್ದರೆಂದು ಸರಕಾರವೇ ತನ್ನ ವರದಿಯಲ್ಲಿ ಹೇಳುತ್ತದೆ. ಆಗಸ್ಟ್ 28ರಂದು ಪಾಂಡವಪುರ ತಾಲ್ಲೂಕು ಮೇಲುಕೋಟೆಯಲ್ಲಿ ಮೆರವಣಿಗೆ ನಡೆದು ಶಾಲೆಗೆ ಜಖಂ ಮಾಡಿ, ಬಂಡಿಯ ಮೇಲೆ ಒಯ್ಯುತ್ತಿದ್ದ ಸೇಂದಿ ಶಿಪಾಯಿಗೆ ಹಾನಿಮಾಡಲಾಯಿತೆಂದು ಸರಕಾರೀ ವರದಿ ಹೇಳುತ್ತದೆ. ಇದಕ್ಕೆಲ್ಲ ಪ್ರೇರಣೆನೀಡಿದವರು ! ಮೈಸೂರಿನಿಂದ ಕಾಲೇಜು ತ್ಯಜಿಸಿ ಬಂದ ಕೆ. ಶ್ರೀನಿವಾಸ ಅಯ್ಯಂಗಾರ್, ಬಾದ್ರಿಶಾಮಣ್ಣ, ಕಟ್ಟಿ ಹಾಗೂ ಎಂ. ಎಸ್. ಶಿವರಾಮು. "ಸುತ್ತಲ ಹಳ್ಳಿಗಳಿಗೆ ಹೋಗಿ ಪ್ರಚಾರ ಮಾಡಿದೆವು. ಪೋಲೀಸರು

ಹೆದರಿಸಿದರೂ ಧೈರ್ಯದಿಂದ ಜನ ಸಭೆಗೆ ಬರುತ್ತಿದ್ದರು. ಮೇಲುಕೋಟೆಯಲ್ಲಿ ಮಕ್ಕಳನ್ನು ಶಾಲೆ ಬಿಡಿಸಿ ನಂಜೀಯರ್ ಸನ್ನಿಧಿಬಳಿ ಸಭೆ ನಡೆಸುತ್ತಿದ್ದೆವು. ಪಾನನಿರೋಧ ಸತ್ಯಾಗ್ರಹ ಬಿರುಸಾಗಿ ನಡೆಸಿದೆವು. ಪಿಕೆಟಿಂಗ್ ನಡೆಸಿ ಕಡೆಗೆ ಪಡಯಾನೆ ಉರುಳಿಸಿದೆವು," ಎಂದು ಈ ಬಗ್ಗೆ ಕೆ. ಶ್ರೀನಿವಾಸಯ್ಯಂಗಾರ್ ಹೇಳಿದ್ದಾರೆ. ಮೇಲುಕೋಟೆಯಲ್ಲಿ ಸಂಪತ್ಕುಮಾರಾಚಾರ್, ನರಸಿಂಹಮೂರ್ತಿ, ಸಂಜಯ್ಯ, ವೆಂಕಟಾಚಾರ್ಯ ಇವರನ್ನು ಆಗಸ್ಟ್ 30ಕ್ಕೆ ಬಂಧಿಸಲಾಯಿತೆಂದು ಸರಕಾರಿ ವರದಿ ಹೇಳಿದೆ. ಮೇಲೆ ಹೇಳಿದವರು ತಲೆಮರೆಸಿಕೊಂಡು ಹಲವು ಪಾರ ತಮ್ಮ ಚಟುವಟಿಕೆಗಳನ್ನು ಮುಂದುವರಿಸಿದರು.

ಮಂಡ್ಯದಲ್ಲಿ ಸೆಪ್ಟೆಂಬರ್ 3ಕ್ಕೆ ಮಂಡ್ಯದ ಮುನಿಸಿಪಲ್ ಶಾಲೆಯ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು. ಒಟ್ಟು 70 ಜನ ಇವರಲ್ಲಿ ಪಾಲ್ಗೊಂಡಿದ್ದರು; ಶಾಲೆಯ ಹಾಜರಾತಿ 277ರಲ್ಲಿ 159 ಇತ್ತು, ಎಂದು ಸರಕಾರಿವರದಿ ತಿಳಿಸಿದೆ. ಅದೇ ದಿನ ಮೇಲುಕೋಟೆಯ ಶಾಲೆಗೆ ಬೆಂಕಿಹಚ್ಚಲಾಯಿತು. ನಾಗಮಂಗಲದಲ್ಲಿ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳ ಮುಷ್ಕರ ನಡೆದಿರಲು ಸೆಪ್ಟಂಬರ್ 4ಕ್ಕೆ ನಾಲ್ಕು ವಿದ್ಯಾರ್ಥಿಗಳನ್ನು ಬಂಧಿಸಲಾಯಿತು. ಕೋಟೆಬೆಟ್ಟ ಊರಲ್ಲಿ ಸೆ 6ಕ್ಕೆ ನಾಗಮಂಗಲದ ವಿದ್ಯಾರ್ಥಿಗಳು ಪಿಕೆಟಿಂಗ್ ಮಾಡಿದರೆಂದು ಸರಕಾರಿ ವರದಿ ಹೇಳಿದೆ. ಸೆಪ್ಟೆಂಬರ್ 6ರಂದು ನಾಗಮಂಗಲದಲ್ಲಿ ರಾಜನಿಷ್ಠರ ಸಭೆಯು ಎಂ. ಸಿ. ಲಿಂಗೇಗೌಡರ ಅಧ್ಯಕ್ಷತೆಯಲ್ಲಿ ನಡೆದು ಅಬ್ದುಲ್‌ರಹೀಂ, ಪಿ ಎಸ್. ಶಂಕರಯ್ಯ, ಅಬ್ದುಲ್‌ಅಜೀಜ್ ಮುಂತಾದವರು ಮಾತಾಡಿದವರಲ್ಲದೆ "ಮಹಾರಾಜರ ಸಿಂಹಾಸನ ಮತ್ತು ವ್ಯಕ್ತಿತ್ವಕ್ಕೆ ತಮ್ಮ ಗಾಢವಾದ ನಿಷ್ಠೆ"ಯನ್ನು ಪ್ರಕಟಿಸಿ "ಬುಡಮೇಲು ಕೃತ್ಯಗಳನ್ನು ಉಗ್ರವಾಗಿ ಖಂಡಿಸಿ" ಠರಾವುಗಳನ್ನು ಮಾಡಲಾಯಿತು. ಈ ಬಗ್ಗೆ ಎಂ ಸಿ. ಲಿಂಗೇಗೌಡರು ಮುಖ್ಯ ಕಾರ್ಯದರ್ಶಿಗಳಿಗೆ 6.9.42ರಂದು ಪತ್ರವನ್ನು ಬರೆದು ತಿಳಿಸಿದ್ದಾರೆ.

ಗಾಂಧೀಜಿಯವರ ಬಂಧನದ ಮಾಸಿಕ ದಿನವನ್ನು ಸೆಪ್ಟಂಬರ್ 9ಕ್ಕೆ ಆಚರಿಸಲು ಸೆಪ್ಟಂಬರ್ 8ಕ್ಕೆ ಪ್ರಚಾರ ನಿರತರಾದ ಕೆಂಪಯ್ಯ ಮತ್ತು ವೆಂಕಟಗಿರಿಯಪ್ಪ ಅವರನ್ನು ಮಂಡ್ಯದಲ್ಲಿ ಬಂಧಿಸಲಾಯಿತು. ಮಂಡ್ಯದ ಹೈಸ್ಕೂಲು ಕಟ್ಟಡದ ಮೇಲೆ ಧ್ವಜಹಾರಿಸಲು ಯತ್ನಿಸಿದ ನಾಲ್ವರು ವಿದ್ಯಾರ್ಥಿಗಳನ್ನು 10.9.42ರಂದು ಬಂಧಿಸಲಾಯಿತು. ಅದೇ ದಿನ 80 ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು. 11.9.42ರಂದು ವಿದ್ಯಾರ್ಥಿಗಳ ಹಾಜರಾತಿ 274 ರಲ್ಲಿ 68 ಮಾತ್ರ ಇತ್ತು. 8.9.42ರಂದು ಮಳವಳ್ಳಿಯ ಹೈಸ್ಕೂಲು ವಿದ್ಯಾರ್ಥಿಗಳು ಮುಷ್ಕರ ಆರಂಭಿಸಿದರು. ನಾಲ್ಕು ವಿದಾರ್ಥಿಗಳನ್ನು ಬಂಧಿಸಲಾಯಿತು (ಇದೇ ಹೊತ್ತಿಗೆ ಎಚ್. ಕೆ. ವೀರಣ್ಣಗೌಡರ ಬಂಧನವಾಯಿತು).

ಸೆಪ್ಟಂಬರ್ ತಿಂಗಳಿನಲ್ಲಿ ವಿಧ್ವಂಸ ಕೃತ್ಯಗಳು ಹೆಚ್ಚಾದವು. ಕಿಕ್ಕೇರಿ ಮತ್ತು ಅನಗೋಳ ನಡುವೆ 19ರ ರಾತ್ರಿ ಟೆಲಿಗ್ರಾಫ್ ತಂತಿ ಕತ್ತರಿಸಿ ನಾಲ್ಕು ಕಂಬಗಳನ್ನು

ಕಿತ್ತುಹಾಕಲಾಗಿತ್ತು. ಕೃಷ್ಣರಾಜಪೇಟೆ–ಚನ್ನಪಟ್ಟಣ ರಸ್ತೆಯಲ್ಲಿ 1000 ಅಡಿಯಷ್ಟು ಟೆಲಿಗ್ರಾಫ್ ತಂತಿಯನ್ನು 21.9.42ರಂದು ಕಿತ್ತು ಹಾಕಲಾಗಿತ್ತು.

ನೆರೆಯ ಹಾಸನ ಜಿಲ್ಲೆಯಲ್ಲಿ ಸಂತೆಸುಂಕದ ಪಾವತಿ ವಿರುದ್ಧ ಉಗ್ರ ಚಳುವಳಿ ಸಂಘಟಿತವಾಗಿತ್ತು. ಅದರಂತೆ 21.9.42ರಂದು ಕೃಷ್ಣರಾಜಪೇಟೆಯ ತೆಂಡೇಕೆರೆಯಲ್ಲಿ ಸಂತೆಯ ಪಿಕೆಟಿಂಗ್ ನಡೆಯಿತು. 28.9.42ರಲ್ಲೂ ಪಿಕೆಟಿಂಗ್ ನಡೆಯಲು ಎಂಟು ಜನರ ಬಂಧನವಾಯಿತು. ಸೆಪ್ಟಂಬರ್ 28ರ ಬಂಧನಗಳ ನಂತರವೂ ಅಕ್ಟೋಬರ್ 5ಕ್ಕೆ ತೆಂಡೇಕೆರೆಯಲ್ಲಿ ಪಿಕೆಟಿಂಗ್ ಇನ್ನೂ ಉಗ್ರವಾಗಿ ನಡೆಯಿತು. "ಪೋಲೀಸರ ಸಂಖ್ಯೆ ಸಾಕಷ್ಟು ಇರದಿದ್ದುದರಿಂದ ಯಾರನ್ನೂ ಬಂಧಿಸಲಿಲ್ಲ" ಎಂದು ಸರಕಾರದ ವರದಿ ಹೇಳುತ್ತದೆ. 8 10.42ರಲ್ಲಿ ಪಾಂಡವಪುರದಲ್ಲೂ ಸಂತೆಯ ಪಿಕೆಟಿಂಗ್ ಮಾಡಲಾಯಿತು." ವ್ಯಾಪಾರಮಾಡಲು ಸಂತೆಗೆ ಸಾಮಾನು ತಂದವರು ('ವೆಂಡರ್ಸ್') ಅನೇಕರು ಸುಂಕಕೊಡಲು ನಿರಾಕರಿಸಿದರು. ಬಹುಮಟ್ಟಿಗೆ ಪ್ರೇಕ್ಷಕರಂತಿರುವ 1000–1500 ಜನ ಸಂತೆಯಲ್ಲಿ ಸೇರಿದ್ದರು. ಈ ಚಳುವಳಿಗೆ ಜನರ ಹೃತ್ಪೂರ್ವಕ ಬೆಂಬಲವಿದೆ." ಎಂದು ಜಿಲ್ಲಾ ಪೋಲೀಸ್ ಅಧಿಕಾರಿ ದಿನಾಂಕ 8ರ ಘಟನೆಯ ಬಗ್ಗೆ ಬರೆದಿದ್ದಾರೆ. ಪಿಕೆಟಿಂಗ್ ಮಾಡಿದವರು ಕ್ಯಾತನಹಳ್ಳಿ, ಲಕ್ಷ್ಮೀಸಾಗರ, ಇನಾಂಹಿರೇಹಳ್ಳಿಯವರು, ಎಂದೂ ತಿಳಿಸಿದ್ದಾರೆ. ಈ ಸಂಬಂಧ 10 ಜನರನ್ನು ಬಂಧಿಸಲಾಯಿತು. "ಪರಿಸ್ಥಿತಿಯನ್ನು ನಿಭಾಯಿಸಲು ಕಷ್ಟವಾಗುತ್ತಿದೆ" ಎಂದು ಜಿಲ್ಲಾಧಿಕಾರಿಗಳು ವರದಿ ಮಾಡಿದ್ದು 50 ಪೋಲೀಸರ ಒಂದು ತುಕಡಿ ('ಮೊಬೈಲ್') ಕಳುಹಿಸಬೇಕೆಂದು ಮುಖ್ಯ ಕಾರ್ಯದರ್ಶಿಗಳನ್ನು ಕೇಳಿಕೊಂಡಿದ್ದಾರೆ.

ಮುಂದೆ 15ನೆಯ ದಿನಾಂಕ ಸಂತೆಯ ಕಾಲಕ್ಕೆ ಪಾಂಡವಪುರದಲ್ಲಿ ಪಿಕೆಟಿಂಗ್ ನಡೆಸಿದ 25 ಜನರನ್ನು ಬಂಧಿಸಲಾಯಿತು. ಈ ಕಾಲದಲ್ಲಿ ಪಾಂಡವಪುರದಲ್ಲಿ ಮದ್ಯವನ್ನು ಚೆಲ್ಲಿ ಮದ್ಯದ ಅಂಗಡಿಗೆ ಬೆಂಕಿ ಇಟ್ಟುದಾಗಿಯೂ ಸಂತೆಗೆ ಬಂದವರಿಗೆ ಸಂತೆಸುಂಕ ಕೊಡದಂತೆ ಹೇಳಿ ಸಂತೆಸುಂಕ ವಸೂಲಾಗದಂತೆ ಮಾಡಿದಾಗಿಯೂ ವೈ. ಸಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದ್ದಾಗಿಯೂ ಲಕ್ಷ್ಮೀಸಾಗರದ ಚಲುವೇಗೌಡರು ತಿಳಿಸಿದ್ದಾರೆ. 19.10.44ಕ್ಕೆ ತೆಂಡೇಕೆರೆಯಲ್ಲಿ ಪಿಕೆಟಿಂಗ್ ನಡೆದು ಏಳು ಜನರ ಬಂಧನವಾಯಿತು. 'ವಾರ್‌ಫ್ರಂಟ್'ಗೆ ಬೆಂಬಲ ಸೂಚಿಸಲು ಮೇಲುಕೋಟೆಯಲ್ಲಿ ನಡೆದ ಸಭೆಯಲ್ಲಿ ಪ್ರತಿಭಟನಾ ಭಾಷಣ ಮಾಡಿ ಸಭೆ ನಿಲ್ಲಿಸಿದ (ಅಕ್ಟೋಬರ್ 19) ಶ್ರೀನಿವಾಸಯ್ಯಂಗಾರ್ ಹಾಗೂ ಎಂ. ಎನ್. ಶಿವರಾಮು ಅವರ ಮೇಲೆ ವಾರೆಂಟ್ ಹೊರಡಿಸಲು ಅವರು ತಲೆತಪ್ಪಿಸಿಕೊಂಡಿದ್ದು ನವೆಂಬರ್ 15ಕ್ಕೆ ಬಂಧಿತರಾದರು.

ಇಷ್ಟುಹೊತ್ತಿಗಾಗಲೇ ಹಳೆಯ ಮೈಸೂರಲ್ಲಿ ರೊಚ್ಚಿಗೆದ್ದ ರೈತರು ಕೆಲವೆಡೆ ಹಿಂಸಾಚಾರ ನಡೆಸಿದರು. ಶ್ರವಣಬೆಳಗೊಳದ ಸಂತೆಯಲ್ಲಿ ಹಿಂಸಾಚಾರವಾಗಿ ಒಬ್ಬ

ಪೋಲೀಸನ ಹತ್ಯೆಯಾಗಿ ಗೋಲೀಬಾರಿನಿಂದ 5–6 ಜನ ದಿವಂಗತರಾದರು. ಶಿವಮೊಗ್ಗ ಜಿಲ್ಲೆಯ ಈಸೂರಿನಲ್ಲಿ ದೇಶಭಕ್ತರಾದ ಜನ ರೊಚ್ಚಿಗೆದ್ದು ತಹಸೀಲ್ದಾರ ಹಾಗೂ ಪೋಲೀಸ್ ಅಧಿಕಾರಿಯೊಬ್ಬರ ಹತ್ಯೆಯಾಗಿ ಅಲ್ಲಿ ಮುಂದೆ ಪೋಲೀಸರು ನಡೆಸಿದ ಅತ್ಯಾಚಾರದಿಂದ ಜನ ದಂಗಾದರು. ಅಹಿಂಸಾಮಾರ್ಗದಲ್ಲಿ ಸಾಕಷ್ಟು ತರಬೇತಿ ಪಡೆಯದ ಗ್ರಾಮಾಂತರಗಳ ಜನರ ನಾಯಕತ್ವವಹಿಸುವುದು ಹಳ್ಳಿಗಾಡಿನ ಕಾಂಗ್ರೆಸ್ಸ್‌ನಾಯಕರಿಗೆ ಕಷ್ಟದ್ದೆನಿಸಿತು. ಗಣ್ಯ, ಅನುಭವಸ್ಥ ನಾಯಕರು ಆಗಲೇ ಜೈಲು ಸೇರಿದ್ದರು. ಬೆಂಗಳೂರು, ಮೈಸೂರುಗಳ ಕಾರ್ಮಿಕ ಹಾಗೂ ವಿದ್ಯಾರ್ಥಿ ಚಳುವಳಿಯೂ ಅಕ್ಟೋಬರ್‌ನಲ್ಲಿ ನಿಂತುಹೋಯಿತು. ಮಂಡ್ಯ ಜಿಲ್ಲೆಯಲ್ಲೂ ಚಳುವಳಿ ತಣ್ಣಗಾಯಿತು. ಅಲ್ಲೊಂದು ಇಲ್ಲೊಂದು ಬಿಡಿ ಬಿಡಿಯಾದ ಘಟನೆ, ಬಂಧನಗಳು ಮುಂದೆ ನಡೆದವು. ಆದರೆ ಜಿಲ್ಲೆಯ ವಿದ್ಯಾರ್ಥಿಗಳೂ ಕಾರ್ಮಿಕರೂ ರೈತರೂ ಈ ಚಳುವಳಿಯಲ್ಲಿ ತಮ್ಮದೇ ಆದ ಕೊಡುಗೆ ನೀಡಿದರು. ಮುಖ್ಯ ಉಲ್ಲೇಖನೀಯ ಘಟನೆಗಳನ್ನು ಇಲ್ಲಿ ಹೇಳಲು ಸಾಧ್ಯವಾಗಿದೆ, ಇಡೀ ಜಿಲ್ಲೆಯಲ್ಲಿ ನಡೆದ ಸಭೆ, ಮೆರವಣಿಗೆ ಹಾಗೂ ವಿಧ್ವಂಸಕ ಕೃತ್ಯಗಳ ಪೂರ್ತಿ ವರದಿ ಲಭ್ಯವಾಗಿಲ್ಲ.

ಸೂರ್ಯನಾಥ ಕಾಮತ್

ಆಧಾರ

1. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, II ಮತ್ತು III (ಸಂಪುಟ ಸೂರ್ಯನಾಥ ಕಾಮತ್) 1976 ಮತ್ತು 1980

2. ಕಾನ್ಫಿಡೆನ್ಶಿಯಲ್ ಬ್ರಾಂಚ್, ಕಡತ 147-42-26, 49—42-43ರಂದು (ರಾಜ್ಯ ಪತ್ರಾಗಾರ, ಬೆಂಗಳೂರು).

ಇರ್ವಿನ್ ನಾಲಾ ರೈತರ ಹೋರಾಟ

ಹತ್ತಾರು ಸಾವಿರಕ್ಕೂ ಹೆಚ್ಚು ರೂಪಾಯಿ ಸಾಲದ ಹೊರೆ ಹೊತ್ತುಕೊಂಡು ಚಿತ್ರಗುಪ್ತ ಪತ್ರಿಕೆಯನ್ನು ನಿಲ್ಲಿಸಿ, ಕೆಲವು ಕಾಲ ವಿಶ್ರಾಂತಿಗೆಂದು ಮದ್ದೂರಿಗೆ ಬಂದು ಮಾವನವರ ಮನೆಯಲ್ಲಿ ಠಿಕಾಣಿ ಹೂಡಿದೆ. ನಾನು ಮದ್ದೂರಿಗೆ ಬರುವುದನ್ನೇ ಕಾದಿದ್ದರೋ ಎನ್ನುವಂತೆ ಒಂದೆರಡು ವಾರಗಳಲ್ಲೇ ಮಂಡ್ಯದಿಂದ ಎಚ್. ಹೊನ್ನಯ್ಯನವರೂ, ಹೊನಗಾನಹಳ್ಳಿ ಕೆ. ಪುಟ್ಟಣ್ಣನವರೂ ಒಂದುದಿನ ಬೆಳಿಗ್ಗೆ ತೋಟದ ಮನೆ ಬಾಗಿಲಲ್ಲಿ ಸುಳಿದಾಡಿದರು. ಆಗ ನಾನು ಹಜಾರದಲ್ಲಿ ಏನೋ ಓದುತ್ತಾ ಕುಳಿತಿದ್ದೆ. ನಮ್ಮ ಮಾವನವರೂ ಅಲ್ಲೇ ಇದ್ದರು. ತೋಟದ ಬಾಗಿಲು ಮುಂದೆ ಇತ್ತಿಂದತ್ತ ಅತ್ತಿಂದಿತ್ತ ಸುಳಿದಾಡುತ್ತಿದ್ದ ಅವರಿಬ್ಬರನ್ನೂ ನಮ್ಮ ಮಾವನವರು ನೋಡಿದರು. ಕೂಡಲೇ ಅವರು ಆ ಸ್ನೇಹಿತರನ್ನು ಹೆಸರಿಸಿ, ಒಳಕ್ಕೆ ಬನ್ನಿ. ಅದೇಕೆ ರಸ್ತೆಯಲ್ಲಿ ತಿರುಗಾಡುತ್ತಿದ್ದೀರಿ ಎಂದು ಕರೆದರು. ಅವರಿಬ್ಬರೂ ಬಂದು ಕುಳಿತುಕೊಂಡರು,

ಇರ್ವಿನ್‌ನಾಲಾ (ಈಗಿನ ವಿಶ್ವೇಶ್ವರಯ್ಯ ನಾಲೆ) ರೈತರಿಗೆ ಪ್ರಾಪ್ತವಾಗಿರುವ ಕಷ್ಟ ನಷ್ಟಗಳ ಕತೆಯನ್ನು ಪುಟ್ಟಣ್ಣನವರು ಯಥಾ ಸಾವಧಾನವಾಗಿ ವಿವರಿಸಿ, ನಾನು ರೈತರ ನೆರವಿಗೆ ಬರಬೇಕೆಂದು ಕೋರಿದರು. ಕೃಷ್ಣರಾಜಸಾಗರ (ಕನ್ನಂಬಾಡಿ) ದಿಂದ ಹೊರಡುವ ಕಾವೇರಿ ಶಾಖೆ, ಲಿಂಷಾ ಶಾಖೆಗಳ ರೈತರು ಅನುಸರಿಸಬೇಕಾದ ವ್ಯವಸಾಯ ಕ್ರಮ, ನೀರಾವರಿಯಾಗುವ ಜಮೀನುಗಳಿಗೆ ಅವರು ಕೊಡಬೇಕಾಗಿರುವ ಕಂದಾಯ, ಕಾಂಟ್ರಿಬ್ಯೂಷನ್ (ಸಹಾಯ ಧನ) ಹಣ ಕೊಡುವುದು ತಡವಾದರೆ ಅದಕ್ಕೆ ಕೊಡಬೇಕಾಗಿರುವ ಬಡ್ಡಿ ಇತ್ಯಾದಿ ವಿಷಯಗಳ ಬಗ್ಗೆ ಸರ್ಕಾರದವರು ಹೊರಡಿಸಿದ್ದ ಹುಕ್ಕುಂನಿಂದ ರೈತರು ಯಾವ ಯಾವ ಕಷ್ಟ ನಷ್ಟಗಳಿಗೆ ಗುರಿಯಾಗಬೇಕಾಗಿದೆ ಯೆಂಬುದನ್ನು ಸುದೀರ್ಘವಾಗಿ ವಿವರಿಸಿ, ಅವುಗಳ ನಿವಾರಣೆಗಾಗಿ ರೈತರು ನಡೆಸುವ ಹೋರಾಟದ ಮುಂದಾಳುತನವನ್ನು ನಾನು ವಹಿಸಿಕೊಳ್ಳಬೇಕೆಂದು ಪುಟ್ಟಣ್ಣನವರು ಸ್ಪಷ್ಟಪಡಿಸಿದರು. ತಮ್ಮ ವಾದವನ್ನು ಪುಷ್ಟೀಕರಿಸಲು ಕೆಲವು ಸರ್ಕಾರಿ ಕಾಗದ ಪತ್ರಗಳನ್ನೂ ಮ್ಯಾಪುಗಳನ್ನೂ ನನ್ನ ಮುಂದಿಟ್ಟು ಅವುಗಳನ್ನು ವಿವರವಾಗಿ ತಿಳಿಸಿದರು, ಸಾಯಂಕಾಲದ ಊಟದ ವೇಳೆಗೆ ಈ ವಿಷಯದಲ್ಲಿ ನನಗೆ ತಕ್ಕಮಟ್ಟಿಗೆ ಮನವರಿಕೆಯಾಯಿತು. ರೈತರ ಪರ ನಿಂತು ಹೋರಾಡುವುದು ತಪ್ಪಲ್ಲವೆಂದು ನನ್ನಗನ್ನಿಸಿತು. ಆದರೆ ನಾನು ಮಂಡ್ಯ ಜಿಲ್ಲೆಯವನಾಗಿರಲಿಲ್ಲ. ಆ ಜಿಲ್ಲೆಯ ಯಾವ ತಾಲ್ಲೂಕಿನಿಂದಲೂ

ನಾನೂ ಪ್ರಜಾಪ್ರತಿನಿಧಿ ಸಭೆಯ ಸದಸ್ಯನಾಗಿರಲಿಲ್ಲ. ಅಲ್ಲದೆ ಬೆಂಗಳೂರಿನಲ್ಲಿ ನಡೆದ ಗಣಪತಿ ಗಲಭೆ ಸಂಬಂಧವಾಗಿಯೂ ಚಿತ್ರಗುಪ್ತ ಪತ್ರಿಕೆಯು ಸರ್ಕಾರದ ಆಡಳಿತದ ಬಗ್ಗೆ ತಳೆದಿದ್ದ ಧೋರಣೆಯಿಂದಲೂ ಸರ್ಕಾರದವರು ನನ್ನನ್ನು ಒಬ್ಬ ಚಳುವಳಿಗಾರ ನೆಂದು ಭಾವಿಸಿಕೊಂಡು ನನ್ನ ಮೇಲೆ ಕಣ್ಣಿಟ್ಟಿದ್ದರು. ಇರ್ವಿನ್‌ನಾಲಾ ರೈತರ ಬೇಡಿಕೆ ಗಳು ನ್ಯಾಯವಾಗಿದ್ದರೂ ನಾನು ಅವರ ಪರ ನಿಂತಿದ್ದೇನೆಂಬುದು ಗೊತ್ತಾದ ಕೂಡಲೆ ಸರ್ಕಾರದವರು ನನ್ನ ಬಗ್ಗೆ ತಳೆದಿದ್ದ ಧೋರಣೆಗೆ ಬೆಂಬಲ ಸಿಕ್ಕಿದಂತಾಗಿ, ನಾನಲ್ಲಿದ್ದರೆ ಅಲ್ಲಿ ಜನರನ್ನು ಎತ್ತಿಕಟ್ಟುವ ಚಳುವಳಿಗಾರನೆಂದು ಭಾವಿಸಿಕೊಂಡು ರೈತರ ನ್ಯಾಯ ವಾದ ಬೇಡಿಕೆಗಳನ್ನು ಕಡೆಗೊತ್ತುವ ಪರಿಸ್ಥಿತಿ ಬರಬಹುದು. ಈ ರೀತಿ ಯಾವ ದೃಷ್ಟಿಯಿಂದ ನೋಡಿದರೂ ನಾನು ಇರ್ವಿನ್‌ನಾಲಾ ರೈತರ ಹೋರಾಟದಲ್ಲಿ ನಾಯಕನಾಗಿ ನಿಲ್ಲುವುದು ಸರಿಯಲ್ಲವೆಂದು ನನ್ನಗನ್ನಿಸಿತು. ಈ ನನ್ನ ಅಭಿಪ್ರಾಯವನ್ನು ಆ ಇಬ್ಬರು ಸ್ನೇಹಿತರಿಗೂ ತಿಳಿಸಿ, ಇನ್ನು ಕೆಲವು ವಾರಗಳೊಳಗಾಗಿ ನಾನು ಬೆಂಗಳೂರಿಗೆ ಹಿಂದಿರುಗುವೆನಾದುದರಿಂದ ಅವರಿಗೆ ನನ್ನಿಂದ ಏನೇನೂ ಪ್ರಯೋಜನವಾಗಲಾರದೆಂದು ಸ್ಪಷ್ಟಪಡಿಸಿದೆ. ರೈತರ ಹೋರಾಟ ಮುಗಿಯಬೇಕಾದರೆ ಎಷ್ಟು ಕಾಲ ಹಿಡಿಯುತ್ತೋ ಏನೋ, ನಾನು ಅಷ್ಟರಲ್ಲೇ ಬೆಂಗಳೂರಿಗೆ ಹಿಂದಿರುಗಿ ಸ್ಥಳೀಯ ಸಂಸ್ಥೆಗಳಿಗೆ ಉಪಯೋಗವಾಗುವಂತಹ ಒಂದು ವಾರ ಅಥವಾ ಪಕ್ಷಪತ್ರಿಕೆಯನ್ನು ಹೊರಡಿಸ ಬೇಕೆಂದಿದ್ದೇನೆ. ಈ ಎಲ್ಲ ಕಾರಣದಿಂದ ಅವರು ನನ್ನ ಕೈಬಿಡಬೇಕೆಂದು ಕೇಳಿಕೊಂಡೆ. ನಾನು ರೈತರ ಮುಂದಾಳುತನ ವಹಿಸಿಕೊಳ್ಳಲು ಸಾಧ್ಯವಾಗದೆಂದು ಹೇಳಿದ ಪ್ರತಿ ಯೊಂದು ಕಾರಣಕ್ಕೂ ಪುಟ್ಟಣ್ಣನವರು ಒಂದೊಂದು ಉತ್ತರವನ್ನು ಇಟ್ಟೇ ಇದ್ದರು, ತಮ್ಮಿಂದ ಓಟುಪಡೆದು ಹೋಗಿರುವ ಪ್ರತಿನಿಧಿಗಳು ದಿವಾನರ ದಾಕ್ಷಿಣ್ಯಕ್ಕೆ ಒಳಗಾಗಿ ತಮ್ಮನ್ನು ಕೈಬಿಟ್ಟಿದ್ದಾರೆ. ಮೈಸೂರಿನ ನಮ್ಮ ನಾಯಕರೊಬ್ಬರು ಕಳೆದ ಮೇ ತಿಂಗಳಲ್ಲಿ ನಮ್ಮ ಕೋರಿಕೆಯಂತೆ ಒಮ್ಮೆ ಮಂಡ್ಯಕ್ಕೆ ಬಂದು ಬಹಿರಂಗ ಸಭೆಯೊಂದರಲ್ಲಿ ರೈತರ ಬೇಡಿಕೆಗಳು ನ್ಯಾಯವಾದವುಗಳೆಂದು ಭಾಷಣ ಮಾಡಿದರು. ಒಡನೆಯೆ ದಿವಾನರವರು ಅವರನ್ನು ಕರೆಸಿಕೊಂಡು ಆ ರೀತಿ ರೈತರಿಗೆ ಆಸರೆ ಕೊಡಬಾರದೆಂದು ಎಚ್ಚರಿಸಿದರಂತೆ. ಆಮೇಲ ಅವರೂ ನಮ್ಮನ್ನು ಹತ್ತಿರ ಸೇರಿಸಲಿಲ್ಲ. ಈಗ ನೀವೂ ನಮ್ಮನ್ನು ಕೈಬಿಟ್ಟರೆ ನಮ್ಮ ಜನ ನಗ್ಗಿ ಹೋಗುತ್ತಾರೆ. ನೀವು ನಮ್ಮ ನಾಯಕರಾಗಿದ್ದೀರೆಂಬ ಕಾರಣ ದಿಂದಾಗಿ ನಮ್ಮ ಕೆಲಸ ಕೆಟ್ಟರೂ ಚಿಂತೆಯಿಲ್ಲ.ನೀವು ಮಾತ್ರ ಬೆಂಗಳೂರಿಗೆ ಹಿಂತಿರುಗುವ ಮಾತು ಬಿಟ್ಟು ನಮ್ಮೊಡನೆಯೆ ಇದ್ದುಕೊಂಡು ಮಾರ್ಗದರ್ಶನ ಮಾಡಬೇಕೆಂದು ಒತ್ತಾಯಪಡಿಸಿದರು. ಹೀಗೆ ಮಾತು ಕತೆಗಳು ನಡೆದು ರಾತ್ರಿ ಹನ್ನೆರಡು ಗಂಟೆಯಾ ಯಿತು. ನಾಳೆ ಮಾತಾಡೋಣವೆಂದು ಮಲಗಿದೆವು.

ಮಾರನೆ ದಿನವೂ ಅದೇ ಮಾತು ; ಅದೇ ವಾದ, ಅದೇ ಉತ್ತರ.ಹೀಗೆ ಆ ದಿನವೂ ನಾನು ಮನಸ್ಸು ಮಾಡಲಿಲ್ಲ, ರೈತರ ಸಹಾಯಾರ್ಥ ನಿಂತು ಅವರ ಸೇವೆ

ಮಾಡಬಾರದೆಂಬುದು ನನ್ನ ಅಭಿಪ್ರಾಯವಾಗಿರಲಿಲ್ಲ. ನನ್ನ ಪ್ರೇರಣೆಯಿಂದಾಗಿ ಅವರ ಕೆಲಸದಲ್ಲಿ ಅನ್ಯಾಯಕ್ಕೆ ಗುರಿಯಾಗುವುದೇ ಎಂಬುದೊಂದು ನನಗಿದ್ದ ಆತಂಕ. ಪುಟ್ಟಣ್ಣ ನವರೂ ಹೊನ್ನಯ್ಯನವರೂ ನನ್ನ ಮಾವನವರಿಗೂ ನನ್ನ ಹೆಂಡತಿಗೂ ಹೇಳಿಕೊಂಡು ನನ್ನನ್ನು ಒಪ್ಪಿಸಿ ಇಲ್ಲಿ ನಿಲ್ಲಿಸಿಕೊಳ್ಳಬೇಕೆಂದು ಕೇಳಿಕೊಂಡರು. ಹೀಗೆ ಎರಡು ದಿನಗಳು ಕಳೆದ ಮೇಲೆ ಮೂರನೆ ದಿನ ನಾನು ರೈತರ ಹೋರಾಟದಲ್ಲಿ ಭಾಗಿಯಾಗುವೆ ನೆಂದೂ ನನ್ನ ಮಾತಿನಂತೆ ಎಲ್ಲರೂ ನಡೆದುಕೊಳ್ಳಬೇಕೆಂದೂ ತಿಳಿಸಿ, ಬೆಂಗಳೂರಿಗೆ ಹಿಂದಿರುಗುವ ಆಲೋಚನೆಯನ್ನು ಸದ್ಯಕ್ಕೆ ಬಿಟ್ಟು ಕೆಲವು ತಿಂಗಳಾದರೂ ರೈತರ ಸೇವೆ ಮಾಡಬೇಕೆಂದು ಮನಸ್ಸು ಮಾಡಿದೆ. ಕೂಡಲೆ ಮುಂದೇನೇನು ಕಾರ್ಯ ಮಾಡ ಬೇಕೆಂದು ಚರ್ಚಿಸಿ ಕಾರ್ಯಕ್ರಮ ಸಿದ್ಧಪಡಿಸಿಕೊಂಡೆವು.

ಸರ್ಕಾರದ ಹುಕುಂನಿಂದ ರೈತರಿಗಾಗುವ ಕಷ್ಟನಷ್ಟಗಳನ್ನು ಕುರಿತು ನಾಲಾ ಪ್ರದೇಶದ ಎಲ್ಲ ತಾಲ್ಲೂಕುಗಳ ಪ್ರತಿಹಳ್ಳಿಗೂ ಹೋಗಿ ರೈತರಿಗೆ ತಿಳುವಳಿಕೆ ಹೇಳುವುದು, ಮತ್ತು ಆ ವಿಷಯ ಕುರಿತು ಅಂಕಿ ಅಂಶಗಳನ್ನೊಳಗೊಂಡ ಒಂದು ಪ್ರಕಟನೆ ಹೊರಡಿಸುವುದು ಈ ಕಾರ್ಯಗಳನ್ನು ಒಡನೆಯೆ ಕೈಗೊಳ್ಳಬೇಕೆಂದು ತೀರ್ಮಾನಿಸಿದೆವು. ಈ ಕಾರ್ಯಗಳಿಗೆಲ್ಲಾ ಹಣ ಬೇಕಾಗುವುದೆಂದೂ ಈಗ ರೈತರಿಂದ ಹಣ ಕೇಳುವುದಾದರೆ ಅದೊಂದು ವಿಧ ಅಪಪ್ರಚಾರ ಮಾಡಲು ವಿರೋಧ ಪಕ್ಷದವರಿಗೆ ಅವಕಾಶವಾಗುವುದೆಂದೂ ಈ ಕಾರಣದಿಂದ ಜನರಿಂದ ಚಂದಾ ಕೇಳಕೂಡದೆಂದೂ ನಿರ್ಧರಿಸಿಕೊಂಡೆವು. ಹಾಗಾದರೆ ಅಗತ್ಯವಾದ ವೆಚ್ಚಗಳಿಗೇನು ಮಾಡಬೇಕೆಂದು ಆಲೋಚಿಸುತ್ತಿರುವಾಗ ಹೊನ್ನಯ್ಯನವರು ತಾವು ತಮ್ಮ ಗ್ರಾಮದಲ್ಲಿ (ಇಂಡವಾಳು) ಮನೆ ಕಟ್ಟಿಸಬೇಕೆಂದು ಸ್ವಲ್ಪ ಹಣ ಇಟ್ಟುಕೊಂಡಿರುವುದಾಗಿಯೂ ಹಣವನ್ನು ತಾವು ಈ ಹೋರಾಟದ ವೆಚ್ಚಕ್ಕೆ ಕೊಡುವುದಾಗಿಯೂ ಹಿಂದಿಡಿದು ತಮ್ಮ ಹಣ ವನ್ನು ತಮಗೆ ಕೊಟ್ಟರೆ ಸಾಕೆಂದು ತಿಳಿಸಿದರು. ಹೊನ್ನಯ್ಯನವರು ಮುಂಗಡವಾಗಿ ಕೊಟ್ಟ ಹಣವನ್ನು ಮಂಡ್ಯ ಸಹಕಾರ ಸಂಘದಲ್ಲಿ ಠೇವಣಿಮಾಡಿ, ಬೇಕುಬೇಕಾದಾಗ ಅಗತ್ಯವಾದಷ್ಟು ಹಣವನ್ನು ಹೊನ್ನಯ್ಯನವರೂ ಪುಟ್ಟಣ್ಣನವರೂ ರುಜು ಮಾಡಿ ಪಡೆಯಬೇಕೆಂದು ತೀರ್ಮಾನಿಸಿದೆವು. ಹಣಕಾಸಿನ ವಹಿವಾಟನ್ನು ನಾನು ಯಾವಾಗಲೂ ಯಾವ ಸಂಸ್ಥೆಯಲ್ಲೂ ಇಟ್ಟುಕೊಂಡಿಲ್ಲ. ಪ್ರಚಾರ ಸಭೆ ನಡೆಯುವ ಸ್ಥಳಗಳಿಗೆ ಹೋಗುವ ವ್ಯವಸ್ಥೆ ವಿಚಾರ ಕುರಿತು ಮಾತಾಡಿದೆವು. ಹಳ್ಳಿಯಿಂದ ಹಳ್ಳಿಗೆ ರೈತರು ಎತ್ತಿನ ಗಾಡಿಗಳನ್ನು ಕಟ್ಟಿಸಿಕೊಡುವಂತೆ ಏರ್ಪಡಿಸಬಹುದೆಂಬ ಸಲಹೆ ಬಂತು. ಆ ಸಲಹೆಯನ್ನು ನಾನು ಒಪ್ಪಲಿಲ್ಲ. ಯಾವ ಹಳ್ಳಿಗೆ ಹೋದರೂ ನಮ್ಮ ಊಟದ ವ್ಯವಸ್ಥೆ ನಡೆಯುತ್ತೆ.ಅದರ ಜೊತೆಗೆ ನಮ್ಮ ಪ್ರಯಾಣಕ್ಕಾಗಿ ಗಾಡಿಗಳನ್ನು ಕಟ್ಟಿಸುವಂತೆ ಹೇಳುವುದು ಒಂದು ವಿಧ ಅಪಪ್ರಚಾರಕ್ಕೆ ಅವಕಾಶವಾಗುವುದೆಂಬುದೇ ನನ್ನ ಆಕ್ಷೇಪ, ಬಿಟ್ಟಿ ಊಟ, ಬಿಟ್ಟಿ ಗಾಡಿ ಪ್ರಯಾಣ ಸಿಗುವುದರಿಂದ ಮಾಡುವುದಕ್ಕೆ ಕೆಲಸವಿಲ್ಲದ

ನಾಲ್ಕಾರು ಜನರು ರೈತರನ್ನು ತಪ್ಪುದಾರಿಗೆ ಎಳೆಯುವ ಕಾರ್ಯದಲ್ಲಿ ತೊಡಗಿದ್ದಾರೆಂದು ಎದುರು ಪಕ್ಷದವರು ಮಾತನಾಡಿಕೊಳ್ಳಲು ಅವಕಾಶವಾಗುವುದರಿಂದ ಎತ್ತಿನ ಗಾಡಿ ವ್ಯವಸ್ಥೆಯನ್ನು ಒಪ್ಪಲಿಲ್ಲ. ಹಾಗಾದರೆ ಬೈಸಿಕಲ್‌ಗಳ ಸವಾರಿ ಗೊತ್ತಿಲ್ಲ. ಅಲ್ಲದೆ ನಾವು ಮೂವರ ಜೊತೆ ಯಾವಾಗಲೂ ನಾಲ್ಕಾರು ಜನರಾದರೂ ಇದ್ದೇ ಇರುತ್ತಿದ್ದರು. ಆದುದರಿಂದ ಎಲ್ಲೆಲ್ಲೂ ನಡೆದೇ ಹೋಗತಕ್ಕದೆಂದು ಗೊತ್ತುಮಾಡಿಕೊಂಡೆವು.

ನಮ್ಮ ಮೊದಲನೆಯ ಪ್ರಚಾರ ಸಭೆ ಮಳವಳ್ಳಿ ತಾಲ್ಲೂಕು ಮತ್ತಿತಾಶೇಳ್ವಿರನ ತೋಪಿನಲ್ಲಿ ನಮ್ಮ ಮಾಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಮೇಲೆ ಆಗಿಂದಾಗ್ಗೆ ಚಿಕ್ಕ ಅರಸಿನಕೆರೆ, ಗೆಜ್ಜಲಗೆರೆ, ಗೌಡಗೆರೆ, ಹೊಳಲು, ಕೆರೆಗೋಡು ಗ್ರಾಮಗಳಲ್ಲೂ. ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ, ಫ್ರೆಂಚ್‌ರಾಕ್ಸ್ (ಈಗಿನ ಪಾಂಡವಪುರ) ತಾಲ್ಲೂಕುಗಳಲ್ಲಿಯೂ ಅನೇಕಾನೇಕಾ ದೊಡ್ಡ ದೊಡ್ಡ ಗ್ರಾಮಗಳಲ್ಲೂ ಪ್ರಚಾರ ಸಭೆಗಳನ್ನು ನಡೆಸಿದೆವು. ಅದೇ ರೀತಿ ಚುಂಚನಕಟ್ಟೆ ಜಾತ್ರೆಯಲ್ಲೂ ಪ್ರಚಾರ ಸಭೆಯಲ್ಲಿ ಭಾಷಣ ಮಾಡಿದೆವು. ಈ ರೀತಿ ನಾಲ್ಕುವರೆ ತಿಂಗ ಕಾಲ ನೂರಾರು ಪ್ರಚಾರ ಸಭೆಗಳನ್ನು ನಡೆಸಿ ಈ ವಿಚಾರದಲ್ಲಿ ಜನರಿಗೆ ಸಾಕಷ್ಟು ಮನವರಿಕೆಯಾಗುವಂತೆ ಭಾಷಣಗಳನ್ನು ಮಾಡಿದೆವು. ಏತನ್ಮಧ್ಯೆ ನಾವು ಪ್ರಕಟಿಸಬೇಕೆಂದಿದ್ದ ಪುಸ್ತಕಕ್ಕೆ ಬೇಕಾದ ಅಂಕಿ ಅಂಶಗಳನ್ನು ಸಂಗ್ರಹಿಸುವುದಕ್ಕೂ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೂ ಬೇರೆ ಬೇರೆ ಸ್ಥಳಗಳಿಗೆ ಭೇಟಿಕೊಡುತ್ತಿದ್ದೆವು.

ಇರ್ವಿನ್‌ನಾಲಾ ಪ್ರದೇಶದಲ್ಲಿ ಬ್ಲಾಕ್‌ಸಿಸ್ಟಂ ಅಂದರೆ ಒಂದು ನಿಗದಿಯಾದ ಪ್ರದೇಶದ ಜಮೀನಿನಲ್ಲಿ ಅಥವಾ ಒಂದು ನಾಲೆ ಹಾಗು ಸೀಳು ನಾಲೆ ಕೆಳಗಿರುವ ಜಮೀನುಗಳಲ್ಲಿ ಒಂದು ವರ್ಷ ಕಬ್ಬು, ಎರಡನೇ ವರ್ಷ ಬತ್ತ, ಮೂರನೇ ವರ್ಷ ಕುಪ್ಪಿ ಈ ರೀತಿ ಬೆಳೆ ಮಾಡಬೇಕೆಂದು ವಿಶ್ವೇಶ್ವರಯ್ಯನವರು ಸ್ಥೂಲವಾಗಿ ತಿಳಿಸಿದ್ದರು. ಅವರ ಸಲಹೆಯನ್ನು ಯಾವ ರೀತಿ ಕಾರ್ಯಗತಗೊಳಿಸಬೇಕೆಂಬುದರ ವಿವರಗಳನ್ನು ಸಿದ್ಧಪಡಿಸಬೇಕೆಂದು ಸರ್ಕಾರದವರು ಸಂಬಂಧಪಟ್ಟ ಇಲಾಖೆಗಳ ಮುಖ್ಯಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದರು. ವ್ಯವಸಾಯದ ಇಲಾಖೆಯ ಡೈರೆಕ್ಟರ್ ಆಗಿದ್ದ ಡಾ. ಲೆಸ್ಲಿಕೋಲ್ಮನ್‌ರವರು ವಿಶ್ವೇಶ್ವರಯ್ಯನವರ ಸಲಹೆಯನ್ನೇ ಸ್ವಲ್ಪ ಹೆಚ್ಚು ಕಡಿಮೆ ಎತ್ತಿ ಹಿಡಿದರು. ಅಷ್ಟರಲ್ಲಿ ಸರ್ಕಾರದವರೇ ನಾಲಾ ಪ್ರದೇಶದಲ್ಲೆಲ್ಲಾ ಸರ್ವೆ ನಡೆಸಿ ಯಾವ ಯಾವ ಪ್ರದೇಶದಲ್ಲಿ ಎಂತೆಂತಹ ಭೂಗುಣವಿದೆಯೆಂಬುದನ್ನು ಬೇರೆ ಬೇರೆ ಕಡೆಗಳಿಂದ ತರಿಸಿದ್ದ ಮಣ್ಣಿನ ಪರೀಕ್ಷೆ ಮಾಡಿಸಿದ್ದರು. ಮಂಡ್ಯ ಸಕ್ಕರೆ ಕಂಪನಿಯ ಜನರಲ್ ಮ್ಯಾನೇಜರಾಗಿ ನಿವೃತ್ತರಾಗಿರುವ ಬಿ. ಜಿ. ದಾಸೇಗೌಡರೂ, ಪೋಲೀಸ್ ಇಲಾಖೆಯಲ್ಲಿ ತೊಡ್ಡ ಹುದ್ದೆಯಲ್ಲಿದ್ದು ನಿವೃತ್ತರಾಗಿರುವ ಎಸ್. ವಿ. ಬಾಬುರೆಡ್ಡಿಯವರೂ ಈ ಭೂಗುಣ ಸರ್ವೆ ಕಾರ್ಯದಲ್ಲಿ ನಿಯೋಜಿತರಾಗಿದ್ದರೆಂದು ನನ್ನ ಜ್ಞಾಪಕ. ಈ ಭೂಗುಣ ಪರೀಕ್ಷಾ ಫಲಿತಾಂಶಗಳನ್ನು ಗಮನಕ್ಕೆ ತೆಗೆದುಕೊಂಡು

ವ್ಯವಸಾಯದ ಇಲಾಖೆಯಲ್ಲಿ ದೊಡ್ಡ ತಜ್ಞಪದವಿಯಲ್ಲಿದ್ದು ಆ ಮೇಲೆ ಆ ಇಲಾಖೆಯ ಡೈರೆಕ್ಟರಾಗಿ ನಿವೃತ್ತಿ ಹೊಂದಿದ ಡಾ; ಬಿ. ನರಸಿಂಹಯ್ಯಂಗಾರ್‌ರವರು ಒಂಬತ್ತು ವಿಧಗಳನ್ನೊಗೊಂಡ ಬ್ಲಾಕ್‌ಸಿಸ್ಟಂ ಒಂದನ್ನು ರೂಪಿಸಿ ಸರ್ಕಾರಕ್ಕೆ ವರದಿ ಮಾಡಿದ್ದರು. ಆ ವರದಿಯಲ್ಲಿದ್ದ ಸಲಹೆಗಳು ಡಾ : ಕೋಲ್ಮನ್‌ರವರ ಸಲಹೆಗಳಿಗಿಂತ ಉತ್ತಮವಾಗಿಯೂ ಅವನ್ನು ರೈತರು ಕಾರ್ಯಗತಮಾಡಲು ಹೆಚ್ಚು ಅನುಕೂಲವಾಗಿಯೂ ಇವೆಯೆಂದು ಒಂದು ವರ್ತಮಾನ ನನ್ನ ಕಿವಿಗೆ ಬಿತ್ತು. ಡಾ : ನರಸಿಂಹಯ್ಯಂಗಾರ್ ಅವರ ವರದಿಯನ್ನು ಡಾ : ಕೋಲ್ಮನರ ಇಷ್ಟಾನುಸಾರ ಸರ್ಕಾರದವರೆ ಮುಚ್ಚಿಟ್ಟುಬಿಟ್ಟಿದ್ದರು. ಅದರ ಒಂದು ಪ್ರತಿ ಮಂಡ್ಯಜಿಲ್ಲಾ ಎಕ್ಸಿಕ್ಯುಟಿವ್ ಇಂಜನಿಯರ್ ಆಫೀಸಿನಲ್ಲಿದೆಯೆಂದೂ ಅದನ್ನು ಆ ಅಧಿಕಾರಿಯವರು ಬಹಳ ಎಚ್ಚರಿಕೆಯಿಂದ ಬೀಗ ಹಾಕಿ ಇಟ್ಟುಕೊಂಡಿದ್ದಾರೆಂದೂ ತಿಳಿದುಬಂತು. ಆ ಆಫೀಸಿನಲ್ಲಿ ನಮ್ಮ ಮಿತ್ರರೊಬ್ಬರು ಎಂ. ಎಲ್. ಲಿಂಗಣ್ಣ ಎಂಬುವರು ಗುಮಾಸ್ತರಾಗಿದ್ದರು. ಒಂದು ದಿನ ರಾತ್ರಿ ಅವರನ್ನು ಮಂಡ್ಯದಲ್ಲಿ ನಾನು ತಂಗಿದ್ದಲ್ಲಿಗೆ ಕರೆಸಿಕೊಂಡು ಆ ವರದಿ ವಿಚಾರ ಪ್ರಸ್ತಾಪಿಸಿದೆ. ಮೊದಲು ಆ ವಿಚಾರ ತಮಗೇನೂ ತಿಳಿಯದೆಂದೇ ಅವರು ಸಾಧಿಸಿದರು ಅಂತಹ ವರದಿ ಇರುವುದು ಅದೂ ಆ ಆಫೀಸಿನಲ್ಲಿರುವುದು ಖಂಡಿತವೆಂದೂ ಅದನ್ನು ಪ್ರಕಟಿಸುವುದರಿಂದ ಸರ್ಕಾರದ ಹಠದ ಮನೋಭಾವನೆಯನ್ನು ತಿದ್ದುವುದರ ಮೂಲಕ ರೈತರಿಗೆ ಸಹಾಯ ಮಾಡಿದಂತಾಗುವುದೆಂದೂ, ರೈತರ ಋಣ ತೀರಿಸುವುದು ನಮ್ಮೆಲ್ಲರ ಕರ್ತವ್ಯವೆಂದೂ ನಾನಾ ಬಗೆಯಾಗಿ ಆ ಮಿತ್ರರಿಗೆ ಬೋಧನೆ ಮಾಡಿದೆ. ಕಡೆಗೆ ಒಂದು ದಿನದ ಮಟ್ಟಿಗೆ ಅದನ್ನು ನಮಗೆ ತಂದುಕೊಡುವುದಾಗಿ ಒಪ್ಪಿಕೊಂಡು ಅದೇ ರೀತಿ ಮಾಡಿದರು. ಡಾ ; ನರಸಿಂಹಅಯ್ಯಂಗಾರ್‌ರವರ ವರದಿ ಟೈಪ್ ಆಗಿದ್ದ ಎಪ್ಪತ್ತೆರಡು ಪುಟಗಳಷ್ಟಿತ್ತು. ಒಂದೇ ರಾತ್ರಿ ಅದರ ಮೂರು–ನಾಲ್ಕು ಪ್ರತಿಗಳನ್ನು ಟೈಪ್ ಮಾಡಿಸಿಕೊಂಡು, ಆ ಮಿತ್ರರ ಪ್ರತಿಯನ್ನು ಅವರಿಗೆ ಹಿಂದಿರುಗಿಸಿದೆವು. ನರಸಿಂಹಅಯ್ಯಂಗಾರ್ಯರ ವರದಿಯಲ್ಲಿ ಅಡಕವಾಗಿದ್ದ ಅಂಶಗಳನ್ನು ನಾವು ಜಿಲ್ಲೆಯಾದ್ಯಂತ ನಡೆಸುತ್ತಿದ್ದ ಬಹಿರಂಗ ಸಭೆಗಳಲ್ಲಿ ವಿವರಿಸುತ್ತಿದ್ದೆವು. ಅಲ್ಲದೆ ನ್ಯಾಯವಿಧಾಯಕ ಸಭಾಸದ್ಯರಾಗಿದ್ದ ಡಿ. ಎಸ್. ಮಲ್ಲಪ್ಪನವರ ಮೂಲಕ ಪ್ರಶ್ನೆಯೊಂದನ್ನು ನ್ಯಾಯ ವಿಧಾಯಕ ಸಭೆಗೆ ಕಳುಹಿಸಲೂ ಏರ್ಪಡಿಸಿದೆವು. ಅದರಲ್ಲಿ ನರಸಿಂಹ ಅಯ್ಯಂಗಾರ್ಯರ ವರದಿಯಲ್ಲಿ ಉಪಯುಕ್ತ ಅಂಶಗಳಿವೆಯೆಂದೂ ಅದನ್ನು ಸರ್ಕಾರದವರೇಕೆ ಪ್ರಕಟಿಸಬಾರದೆಂದೂ ಶ್ರೀ ಮಲ್ಲಪ್ಪನವರು ಪ್ರಶ್ನಿಸುವಂತೆ ಮಾಡಿದ್ದೆವು. ಆ ಪ್ರಶ್ನೆಗೆ ಉತ್ತರವಾಗಿ ಸರ್ಕಾರದವರು ಸರ್ಕಾರಕ್ಕೆ ಅಂತಹ ಯಾವ ವರದಿಯನ್ನೂ ಯಾರೂ ಕಳುಹಿಸಲೇ ಇಲ್ಲವೆಂದು ಹೇಳಿಬಿಟ್ಟರು.

ಸರ್ಕಾರದ ಹುಕ್ಕುಂನಿಂದ ರೈತರಿಗಾಗುವ ಕಷ್ಟ ನಷ್ಟಗಳ ವಿವರಗಳನ್ನೆಲ್ಲಾ ಮನನ ಮಾಡಿಕೊಂಡ ಮೇಲೆ ಗೆಜ್ಜಲಗೆರೆಯಲ್ಲಿ ಸೇರಿದ್ದ ಬೃಹತ್ ಸಭೆಯಲ್ಲಿ ಹತ್ತು

ಸಾವಿರ ಮಂದಿ ರೈತರು ಕಾಲುನಡಗೆಯಲ್ಲಿ ಬೆಂಗಳೂರಿಗೆ ಜಾತಾ ಹೊರಟು ದಿವಾನ್‌ರವರಲ್ಲಿ ನಮ್ಮ ಕೋರಿಕೆಗಳನ್ನು ಸಲ್ಲಿಸಬೇಕೆಂದು ತೀರ್ಮಾನಿಸಿದೆವು. ದಿವಾನ್‌ರವರಿಗೆ ರೈತರ ತೀರ್ಮಾನವನ್ನು ತಿಳಿಸಿ ಅವರಿಗೆ ಅನುಕೂಲವಾದ ದಿನ ಮತ್ತು ಸಮಯವನ್ನು ತಿಳಿಸಿದರೆ ರೈತರು ದಿವಾನ್‌ರವರನ್ನು ಕಾಣಬಯಸುವರೆಂದು ಕಾಗದ ಬರೆದೆವು. ಹತ್ತು ಸಾವಿರದಷ್ಟು ದೊಡ್ಡ ಸಂಖ್ಯೆಯಲ್ಲಿ ರೈತರು ಬರಬೇಕಾದ ಅಗತ್ಯವಿಲ್ಲವೆಂದೂ ಸಾಧ್ಯವಾದಷ್ಟು ಕಡಿಮೆ ಸಂಖ್ಯೆಯಲ್ಲಿ 1932ನೇ ಇಸವಿ ಜನವರಿ ನಾಲ್ಕನೇ ತಾರೀಕು ಮಧ್ಯಾಹ್ನ ಎರಡು ಗಂಟೆಗೆ ಬೆಂಗಳೂರು ಅಠಾರ ಕಛೇರಿಯಲ್ಲಿ ರೈತರು ದಿವಾನರನ್ನು ಭೇಟಿ ಮಾಡಬಹುದೆಂದೂ ದಿವಾನರ ಆಪ್ತ ಕಾರ್ಯದರ್ಶಿಯವರಿಂದ ನಮಗೆ ಉತ್ತರ ಬಂತು. ಬೆಂಗಳೂರಿಗೆ ಜಾಥ ಹೋಗುವ ಸಂಬಂಧವಾಗಿ ಅಗತ್ಯವಾದ ವಿವರಗಳನ್ನೆಲ್ಲಾ ಚರ್ಚಿಸಿ, ತೀರ್ಮಾನಿಸಿಕೊಂಡು ಅದರಂತೆ ನಡೆಸಲು ಕಾರ್ಯೋನ್ಮುಖರಾದೆವು. ಹೊನ್ನಯ್ಯನವರೂ ಪುಟ್ಟಣ್ಣನವರೂ ಮುಂಚಿತವಾಗಿ ಕಾಲು ನಡಿಗೆಯಲ್ಲಿ ಬೆಂಗಳೂರಿಗೆ ಹೋಗಿ ಯಾವ ಯಾವ ಸ್ಥಳದಲ್ಲಿ ಹಗಲು ಅಥವಾ ರಾತ್ರಿ ಬಿಡಾರ ಮಾಡಬೇಕೆಂಬುದನ್ನು ಅನುಭವದಿಂದ ತಿಳಿದುಕೊಂಡು ಬಂದಿದ್ದರು. ಜಾತ ಸಂಬಂಧವಾಗಿ ನಾವು ನಿರ್ಧರಿಸಿದ ಕೆಲವು ಮುಖ್ಯ ನಿಯಮಗಳನ್ನು ಇಲ್ಲಿ ಕ್ರೋಢೀಕರಿಸಿದ್ದೇನೆ. ಏತನ್ಮಧ್ಯೆ ಹತ್ತುಸಾವಿರ ರೈತರು ಬೆಂಗಳೂರಿಗೆ ಬಂದು ತಮ್ಮ ಕಷ್ಟ ನಿಷ್ಠುರಗಳನ್ನು ದಿವಾನರಲ್ಲಿ ಅರಿಕೆ ಮಾಡಿಕೊಳ್ಳಲು ಅವಕಾಶ ಕೊಡಬೇಕೆಂದೂ ದಿವಾನರಿಗೆ ಮತ್ತೆ ಒಂದು ಪತ್ರ ಬರೆದಿದ್ದೆವು.

1 ನಾಲಾ ಪ್ರದೇಶದಲ್ಲಿರುವ ಪ್ರತಿ ಗ್ರಾಮದಿಂದಲೂ ರೈತರು ಆಯಾ ಗ್ರಾಮದ ಜನಸಂಖ್ಯೆಗನುಸಾರವಾಗಿ ಬೆಂಗಳೂರಿಗೆ ಹೋಗಬೇಕು.

2. ಆಯಾ ಗ್ರಾಮದಿಂದ ಹೊರಡುವ ಜನಸಂಖ್ಯೆಗನುಸಾರವಾಗಿ ಒಂದೋ ಎರಡೋ ಎತ್ತಿನಗಾಡಿಗಳನ್ನು ಕಟ್ಟಿಕೊಂಡು ಅವುಗಳಲ್ಲಿ ಎಂಟು ದಿನಗಳಿಗೆ ತಮ್ಮವರಿಗೆ ಬೇಕಾದ ಆಹಾರಪದಾರ್ಥಗಳು, ಸೌದೆ, ಪಾತ್ರೆಗಳು ಮುಂತಾದುವುಗಳನ್ನು ತುಂಬಿ ಕೊಳ್ಳಬೇಕು. ದಾರಿಯಲ್ಲಿ ಯಾರಾದರೂ ಖಾಯಿಲೆಯಾದರೆ ಅಥವಾ ಮುದುಕರು ಮುಂತಾದವರು ಇದ್ದರೆ ಅಂಥವರಿಗೆ ಒಂದೊಂದು ಗಾಡಿಯಲ್ಲೂ ಒಬ್ಬೊಬ್ಬರನ್ನು ಕೂರಿಸಿಕೊಳ್ಳಲು ಸ್ಥಳವಿರಬೇಕು.

3. ಪ್ರಯಾಣ ಮಾಡುವಾಗ ರಸ್ತೆಯ ಎಡಗಡೆ ಚರಂಡಿ ಪಕ್ಕದಲ್ಲೇ ಇಬ್ಬಿಬ್ಬ ರಂತೆ ಶಿಸ್ತಿನಿಂದ ಸಾಲಾಗಿ ನಡೆಯಬೇಕು.

4. ದಾರಿಯಲ್ಲಿ ತಂಬುಲ ಉಗುಳುವುದು ಮುಂತಾದ ಹೊಲಸು ಮಾಡ ಬಾರದು.

5. ರಸ್ತೆಯಲ್ಲಿ ಹೋಗಿಬರುವ ಗಾಡಿ, ಲಾರಿ, ಕಾರು ಮುಂತಾದುವುಗಳಿಗೆ ಸ್ವಲ್ಪವೂ ಅಡ್ಡಿಯಾಗದಂತೆ ರಸ್ತೆಯ ಎಡಗಡೆ ಮಾತ್ರ ನಡೆಯಬೇಕು. ಯಾರೂ

ಸಾಲು ಬಿಟ್ಟು ಕದಲಬಾರದು. ಹಾಗೂ ಇಬ್ಬರಿಗಿಂತ ಹೆಚ್ಚಾಗಿ ಒಂದು ಸಾಲಿನಲ್ಲಿ ಸೇರಬಾರದು.

6. ದಾರಿಯಲ್ಲಿ ಸಿಕ್ಕುವ ಪಟ್ಟಣಗಳಲ್ಲಿ ಎಲೆ, ಅಡಿಕೆ, ಬೀಡಿ ಸಿಗರೇಟು ಮುಂತಾದುವುಗಳನ್ನು ಕೊಳ್ಳುವ ನೆಪದಿಂದ ಯಾರೂ ಸಾಲುಬಿಟ್ಟು ಕದಲಬಾರದು. ತಮಗೆ ಬೇಕಾದ ಅಂತಹ ಎಲ್ಲ ಪದಾರ್ಥಗಳನ್ನೂ ಪ್ರಯಾಣಿಕರ ಜತೆಯಲ್ಲೇ ಇರುವ ಗಾಡಿಯೊಂದರ ಅಂಗಡಿಯಲ್ಲೇ ಬಿಡಾರ ಮಾಡುವ ಸ್ಥಳ ಮತ್ತು ಕಾಲದಲ್ಲಿ ಕೊಂಡು ಕೊಳ್ಳಬೇಕು.

7. ಅದೇ ರೀತಿ ಬಿಡಾರ ಹೂಡುವ ಕಾಲದಲ್ಲಿ ಮಾತ್ರ ರಸ್ತೆಗೆ ದೂರವಾಗಿ ಹೋಗಿ ಜಲ ಮಲ ಬಾಧೆಗಳನ್ನು ನಿವಾರಿಸಿಕೊಳ್ಳಬೇಕೇ ವಿನಹ ರಸ್ತೆ ಪಕ್ಕದಲ್ಲಿ ಕೊಳಕು ಮಾಡಲು ಅವಕಾಶ ಕೊಡಬಾರದು.

ಇವೇ ಮುಂತಾದ ನಿಯಮಾವಳಿಗಳನ್ನು ಅಚ್ಚುಹಾಕಿಸಿ ಸಾವಿರಾರು ಪ್ರತಿಗಳನ್ನು ನಾಲಾ ಪ್ರದೇಶದ ಹಳ್ಳಿಗಳಲ್ಲೆಲ್ಲಾ ಹಂಚಿಸಲಾಯಿತು. ಬೆಂಗಳೂರಿಗೆ ಜಾತ ಹೊರಡುವ ವರೆಲ್ಲಾ 1931ನೇ ಇಸವಿ ಡಿಸೆಂಬರ್ 31ನೇ ತಾರೀಖಿನ ದಿನ ಉಪವಾಸವಿದ್ದು, ಸ್ನಾನ ಮಾಡಿಕೊಂಡು ತಂತಮ್ಮ ಗ್ರಾಮಗಳಲ್ಲಿರುವ ದೇವಸ್ಥಾನಗಳಿಗೆ ಹೋಗಿ ನಮ್ಮ ಕಷ್ಟನಷ್ಟಗಳು ಪರಿಹಾರವಾಗುವಂತೆ ಕರುಣಿಸಬೇಕೆಂದು ದೇವರನ್ನು ಪ್ರಾರ್ಥಿಸಿಕೊಂಡು ಆ ಸಾಯಂಕಾಲ ಏಳು ಗಂಟೆಗೆ ಮದ್ದೂರು ಸೇತುವೆ ಬಳಿ ಸೇರಬೇಕೆಂದು ತಿಳಿಸಿತ್ತು.

ಮದ್ದೂರು ಸೇತುವೆ ಬಳಿ ಸೇರುವ ರೈತರನ್ನು ಹೆದರಿಸಿ, ಬೆದರಿಸಿ, ಆ ದಿನ ದಿವಾನರು ಬೆಂಗಳೂರಲ್ಲಿರುವುದಿಲ್ಲವೆಂದು ಸುಳ್ಳು ಹೇಳಿ, ಇನ್ನೇನು ಬೇಕಾದರೂ ಮಾಡಿ ಅವರೆಲ್ಲರೂ ಚದುರಿ ಹೋಗುವಂತೆ ಮಾಡಬೇಕೆಂದು ಮಂಡ್ಯ ಪೊಲೀಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟರು ಇನ್ನಿತರ ಅಧಿಕಾರಿಗಳು ಮುಂತಾದವರು ಪೋಲಿಸ್ ಕಾನ್‌ಸ್ಟೇಬಲ್‌ಗಳ ಗುಂಪೊಂದನ್ನು ಕರೆದುಕೊಂಡು ಸಾಯಂಕಾಲ ಆರು ಗಂಟೆಗೆ ಮದ್ದೂರು ಸೇತುವೆ ಬಳಿ ಸೇರಿದ್ದರಂತೆ.

ತಾನೊಂದೆಣಿಸಿದರೆ ದೈವ ತಾ ಬೇರೊಂದೆಣಿಸುವುದು ಎಂಬ ಗಾದೆಗನುಸಾರವಾಗಿ ಅಧಿಕಾರಿಗಳ ಕುಹಕ ವ್ಯವಸ್ಥೆಯಿಂದ ಅವರೇ ಬೇಸ್ತು ಬೀಳುವಂತಾಯಿತು. ಮದ್ದೂರು ಸೇತುವೆಗೆ ಹತ್ತಿರವಾಗಿರುವ ಕೆಲವು ಗ್ರಾಮಗಳಲ್ಲಿ ಕಾಲರಾ ಇದೆಯೆಂದು ಒಂದು ವರ್ತಮಾನಕೊಟ್ಟು, ರೈತರು ಮದ್ದೂರು ಸೇತುವೆ ಬಳಿ ಸೇರುವ ಬದಲು ಸೇತುವೆಗೆ ಒಂದು ಮೈಲಿ ದಕ್ಷಿಣಕ್ಕಿರುವ ಕೋಡಿಹಳ್ಳಿ ಗುಂಡುತೋಪಿನಲ್ಲಿ ಸೇರಬೇಕೆಂದು ತಿಳಿಸಿದ್ದೆವು. ಸ್ಥಳೀಯ ಅಧಿಕಾರಿಗಳು ಸೇತುವೆ ಬಳಿ ಕಾದಿದ್ದಾರೆಂಬುದು ನಮಗೆ ತಿಳಿದೇ ಇರಲಿಲ್ಲ. ಅಂತು ಅಧಿಕಾರಿಗಳು ರಾತ್ರಿ ಒಂಭತ್ತು ಗಂಟೆಯವರೆಗೂ ಸೇತುವೆ ಬಳಿ ಕಾದಿದ್ದು ಯಾರೂ ಬಾರದ್ದರಿಂದ ವೀರಣ್ಣಗೌಡನ ಮಾತಿಗೆ ಸಾವಿರಾರು ಜನ ಬರುತ್ತಾರೆಯೆ ? ಸಾವಿರಾರೂ ಇಲ್ಲ ನೂರಾರೂ ಇಲ್ಲ. ಒಬಿಬ್ಬಬ್ಬರೂ ಇಲ್ಲ ಎಂದು

ಅಪಹಾಸ್ಯ ಮಾಡಿಕೊಂಡು ಮಂಡ್ಯಕ್ಕೆ ಹಿಂದಿರುಗಿದರಂತೆ. ಆದರೆ ಸಾಯಂಕಾಲ ಏಳು–ಎಂಟು ಗಂಟೆಯಿಂದಲೇ ರೈತರು ಗಾಡಿಗಳ ಸಮೇತ ನಾವು ಕಡೇ ಘಳಿಗೆಯಲ್ಲಿ ನಿರ್ಧರಿಸಿದ್ದ ಗುಂಡುತೋಪಿನಲ್ಲಿ ಬಂದು ಸೇರುತ್ತಿದ್ದರು. ರಾತ್ರಿ ಸುಮಾರು ಹನ್ನೆರಡು–ಒಂದು ಗಂಟೆವರೆಗೂ ರೈತರೂ ಗಾಡಿಗಳೂ ಬರುತ್ತಲೇ ಇದ್ದರು; ಆ ರಾತ್ರಿ ನಾನೂ ಅಲ್ಲೇ ಮಲಗಿದ್ದೆ. ಬೆಳಿಗ್ಗೆ ಎದ್ದು ನೋಡುವಲ್ಲಿ ನೂರಾರು ಗಾಡಿಗಳು ಮತ್ತು ಸಾವಿರಾರು ಜನರಿದ್ದ ಒಂದು ದೊಡ್ಡ ಪರಿಷೆಯೇ ಅಲ್ಲಿ ಸೇರಿತ್ತು.

ಬೆಳಿಗ್ಗೆ ಆರು ಗಂಟೆಗೇ ರೈತರನ್ನೆಲ್ಲಾ ಸಾಲಾಗಿ ನಿಲ್ಲಿಸಲು ಪ್ರಯತ್ನಿಸಿದೆ. ಕೆಲವರು ನನ್ನ ಪ್ರಯತ್ನವನ್ನು ಅಷ್ಟಾಗಿ ಮಾನ್ಯ ಮಾಡಲಿಲ್ಲ, ಅಡ್ಡಾಡುತ್ತಲೇ ಇದ್ದರು. ಶಿಸ್ತು ಸಂಯಮಗಳೇನೆಂಬುದನ್ನು ಅರಿಯದಿರುವ ಸಾವಿರಾರು ಮಂದಿ ಈ ಜನರನ್ನು ಯಾವ ತೊಂದರೆಯೂ ಇಲ್ಲದಂತೆ ನಾಲ್ಕುದಿನ ಪ್ರಯಾಣ ಮಾಡಿ ಬೆಂಗಳೂರು ಮುಟ್ಟಿಸುವುದು ಹೇಗೆಂದು ನನಗೆ ದಿಗಿಲಾಯಿತು. ಜತೆಗೆ ಕೋಪವೂ ಬಂತು. ನನ್ನ ಮಾತನ್ನು ಲೆಕ್ಕಿಸದೆ ಅಡ್ಡಾಡುತ್ತಿದ್ದ ಕೆಲವರನ್ನು ರಟ್ಟೆ ಹಿಡಿದು ಎಳೆದು ಜನರ ಸಾಲಿಗೆ ನೂಕಿದೆ. ನಾನು ಹಾಗೆ ಮಾಡಿದಾಗ ತಂತಮ್ಮ ಗ್ರಾಮದ ಯಜಮಾನರು ಎನಿಸಿಕೊಂಡಿದ್ದ ಒಬ್ಬಿಬ್ಬರು ಕೆಳಗೆ ಬಿದ್ದುಬಿಟ್ಟರು. ಒಬ್ಬರು "ನಮ್ಮನ್ನು ಈ ರೀತಿ ಎಳೆದಾಡುವುದಕ್ಕೆ ನಾವೇನು ಮನುಷ್ಯರಲ್ಲವೆ ?" ಎಂದು ಕೂಗಾಡಿದರು. ಆಗ ನಾನು ಸಿಟ್ಟೆದ್ದು ನಿಂತು, "ನಾನು ಹೇಳಿದಂತೆ ಚಾಚೂ ತಪ್ಪದೆ ಪ್ರತಿಯೊಬ್ಬರೂ ನಡೆದುಕೊಳ್ಳುವುದಾದರೆ ಮಾತ್ರ ನಾನು ಬೆಂಗಳೂರಿಗೆ ಬರುತ್ತೇನೆ; ಹೀಗೆಲ್ಲಾ ಹಕ್ಕಲು ಭಾಗವತ ಮಾಡುವುದಾದರೆ ನೀವೇ ಬೇಕಾದರೆ ಬೆಂಗಳೂರಿಗೆ ಹೋಗಿ. ಇಲ್ಲವೆ ನಿಮ್ಮೂರುಗಳಿಗೆ ಹಿಂದುರುಗಿ" ಎಂದು ನಿರ್ಧಾರವಾಗಿ ತಿಳಿಸಿಬಿಟ್ಟೆ. ಆಗ ಮುಖಂಡರೆಲ್ಲ ಸೇರಿ ಎಲ್ಲರೂ ನಾನು ಹೇಳಿದಂತೆ ಚಾಚೂ ತಪ್ಪದೆ ನಡೆಯುವುದಾಗಿ ಭರವಸೆ ಕೊಟ್ಟು ಕೂಗಾಡಿದವರನ್ನು ಛೀಮಾರಿ ಮಾಡಿ ನನ್ನನ್ನು ಸಮಾಧಾನ ಪಡಿಸಿದರು. ಅಂತು ಒಂದು ಗಂಟೆ ತಡೆದು, ಎಲ್ಲರೂ ಇಬ್ಬಿಬ್ಬರು ಸಾಲಾಗಿ ಶಿಸ್ತಿನಿಂದ ಪ್ರಯಾಣ ಪ್ರಾರಂಭಿಸಿದೆವು.

ಪ್ರತಿದಿನವೂ ಹನ್ನೆರಡು–ಹದಿನೈದು ಮೈಲಿ ಪ್ರಯಾಣ ಮಾಡುವುದು, ಮೊದಲೇ ಗೊತ್ತಾಗಿದ್ದ ಸ್ಥಳಗಳಲ್ಲಿ ಸಾಮಾನ್ಯವಾಗಿ ನೆರಳು ನೀರಿಗೆ ಅನುಕೂಲವಾಗಿದ್ದ ತೋಪುಗಳಲ್ಲಿ ಮಧ್ಯಾಹ್ನ ಅಡುಗೆ ಊಟಕ್ಕೂ, ರಾತ್ರಿ ಊಟ, ನಿದ್ರೆಗೂ ನಿಲ್ಲುತ್ತಿದ್ದೆವು. ಚಳಿಗಾಲವಾದರೂ ರೈತರೆಲ್ಲರು ''ಭೂಮಿಯೇ ಹಾಸಿಗೆ, ಆಕಾಶವೇ ಹೊದಿಕೆ'' ಯಾಗಿ ನಾಲ್ಕು ದಿನಗಳು ಪ್ರಯಾಣ ಮಾಡಿ, 1932ನೇ ಇಸವಿ ಜನವರಿ ನಾಲ್ಕನೆ ತಾರೀಕು ಮಧ್ಯಾಹ್ನ ಹನ್ನೆರಡುಗಂಟೆ ಸುಮಾರಿಗೆ ಬೆಂಗಳೂರು ಅಠಾರ ಕಛೇರಿ ತಲುಪಿದೆವು.

ರೈತರ ಕಾಲುನಡಗೆಯ ಈ ಜಾತ ಸ್ಮರಣೀಯವಾಗಿದೆ. ರೈತರು ಶಿಸ್ತಿನ

ಸಿಪಾಯಿಗಳಂತೆ ನಡೆದುಕೊಂಡರು. ಸುಮಾರು ನೂರು ಗಾಡಿಗಳೂ ನಾಲ್ಕು ಸಾವಿರ ಜನರೂ ಇದ್ದ ಈ ರೈತರ ಜಾತ ರಸ್ತೆಯಲ್ಲಿ ಒಂದೂವರೆ ಮೈಲಿ ದೂರ ಪಸರಿಸಿತ್ತು. ರೈತರಲ್ಲಿ ಇಬ್ಬರು ಕುರುಡರೂ ನಾಲ್ಕು ಮಂದಿ ಮುದುಕಿಯರೂ ಅನೇಕ ಮುದುಕರೂ ಇದ್ದರು. ನಾವು ಬಿಡಾರ ಮಾಡಿದ ಕಡೆಗಳಲ್ಲಿ ತಮಗೆ ಬೇಕಾದ ಹೊಗೆಸೊಪ್ಪು, ಎಲೆ, ಅಡಿಕೆ, ಬೀಡಿ, ಸಿಗರೇಟು, ಬೆಂಕಿಕಡ್ಡಿ ಪೊಟ್ಟಣಗಳು, ಬ್ರೆಡ್ಡು, ಬಿಸ್ಕತ್ತು ಮುಂತಾದ ರೈತರಿಗೆ ಬೇಕಾದ ಸಾಮಾನುಗಳನ್ನು ತುಂಬಿಕೊಂಡು ಮಂಡ್ಯದ ಪಿ. ವೆಂಕಟಗಿರಿಯಯ್ಯ ಎಂಬುವರು ಒಂದು ಗಾಡಿಯಲ್ಲಿ 'ಅಂಗಡಿ' ಇಟ್ಟುಕೊಂಡು ನಮ್ಮ ಜತೆಯಲ್ಲೇ ಬಂದಿದ್ದರು, ವೆಂಕಟಗಿರಿಯಯ್ಯನವರು ಆಮೇಲೆ ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿ, ಸರ್ಕಾರದ ಉದಾಸೀನತೆ ಹಾಗೂ ಕ್ರೂರ ನಡವಳಿಕೆಯಿಂದ ನ್ಯುಮೋನಿಯ ರೋಗಕ್ಕೆ ತುತ್ತಾಗಿ ಮಂಡ್ಯ ಆಸ್ಪತ್ರೆಯಲ್ಲಿ ಪೊಲೀಸ್ ಕಾವಲಿನಲ್ಲೇ ಸಾವನ್ನಪ್ಪಿದರು. ಜಾತದವರು ಸಾಲು ಬಿಟ್ಟು ರಸ್ತೆ ಮಧ್ಯಕ್ಕೆ ಬರದಂತೆ ನೋಡಿಕೊಳ್ಳಲು ಮಲ್ಲಿಗೆರೆ ಪಾಪಣ್ಣನವರ ನೇತೃತ್ವದಲ್ಲಿ ಸುಮಾರು ನೂರು ಮಂದಿ ಸವಾರರು ರೈತರ ಸಾಲುಗಳ ಪಕ್ಕದಲ್ಲೇ ಸೈಕಲ್ ಮೇಲೇರಿ ದಾಟಿದ ಮೇಲೆ ಬೆಂಗಳೂರಿನಿಂದ ಮೈಸೂರಿಗೆ ಕಾರಿನಲ್ಲಿ ಬರುತ್ತಿದ್ದ ಮೈಸೂರು ಜಿಲ್ಲಾಧಿಕಾರಿಗಳಾಗಿದ್ದ ಅಬ್ದುಲ್ ವಾಜಿದ್ ಸಾಹೇಬರು ನಮ್ಮನ್ನು ಸಂಧಿಸಿದಾಗ ಕಾರ್ ನಿಲ್ಲಿಸಿ ನನ್ನನ್ನು ಕರೆದು "ನೀವು ಶಿಸ್ತಿನಿಂದ ರೈತರನ್ನು ಕರೆದೊಯ್ಯುತ್ತಿರುವುದು ದಿವಾನ್ ಸಾಹೇಬರಿಗೆ ತಿಳಿದು ಅವರು ಬಹಳ ಸಂತೋಷ ಪಟ್ಟುಕೊಂಡಿದ್ದಾರೆ. ಅಲ್ಲದೆ ನಿಮಗೆ ದಾರಿಯಲ್ಲಿ ಯಾವ ತೊಂದರೆಯೂ ಆಗದಂತೆ ಆಗತ್ಯವಾದ ಸಹಾಯ ಸೌಕರ್ಯಗಳನ್ನು ಏರ್ಪಡಿಸಿಕೊಡುಮತೆ ಎಲ್ಲಾ ಸ್ಥಳೀಯ ಅಧಿಕಾರಿಗಳಿಗೂ ತಿಳಿಸಿದ್ದಾರೆ ನಿಮ್ಮ ಪ್ರಯತ್ನಕ್ಕೆ ಯಶಸ್ಸು ಕೋರುತ್ತೇನೆ" ಎಂದು ಹೇಳಿದರು. ರಸ್ತೆಯ ಪಕ್ಕದಲ್ಲಿದ್ದ ಎಲ್ಲ ಗ್ರಾಮ ಮತ್ತು ಪಟ್ಟಣಗಳವರೂ ತಂತಮ್ಮ ಊರ ಮುಂದೆ ಹಸಿರುವಾಣಿ ಚಪ್ಪರಗಳನ್ನು ಹಾಕಿಕೊಂಡು ಕಾದಿದ್ದು, ರೈತ ಮುಖಂಡರಿಗೆ ಹಾರ ತುರಾಯಿಗಳನ್ನು ಕೊಟ್ಟು ಅವರಿಗೆ ಯಶಸ್ಸು ಕೋರುತ್ತಿದ್ದರು. ಕೆಲವು ಗ್ರಾಮಗಳ ಮುಂದೆ ಅನೇಕ ಸ್ತ್ರೀಯರು ಕಾದಿದ್ದು ಆರತಿ ಬೆಳಗಿ. ಸಾಲಿನಲ್ಲಿದ್ದ ಮುದುಕಿಯರನ್ನು ಮಾತಾಡಿಸಿ, "ದೇವರು ನಿಮಗೆ ಈ ಕಷ್ಟ ತಂದುಕೊಟ್ಟ ನಲ್ಲಾ ನಿಮ್ಮ ಕಷ್ಟವನ್ನು ಕಡೆಗೆ ಅವನೇ ಕೊನೆಗಾಣಿಸುತ್ತಾನೆ ಹೋಗಿ ಬನ್ನಿ" ಎಂದು ಕಣ್ಣಿನಲ್ಲಿ ನೀರು ತಂದುಕೊಂಡು ಆತ್ಮೀಯತೆಯಿಂದ ಸುಖ ಪ್ರಯಾಣ ಕೋರುತ್ತಿದ್ದ ದೃಶ್ಯ ಸ್ಮರಣೀಯವಾದುದು.

ಕಡೇ ರಾತ್ರಿ ನಾವು ತಂಗಿದ್ದುದು ಕೆಂಗೇರಿಯಲ್ಲಿ. ಕೆಂಗೇರಿ ನಾಗಣ್ಣನವರ ಛತ್ರದಲ್ಲಿ ಆ ರಾತ್ರಿ ನಡೆದ ಸಭೆಯಲ್ಲಿ ನಾಗಣ್ಣನವರೂ ಉಪಸ್ಥಿತರಾಗಿದ್ದು, ನಮಗೆ ಯಶಸ್ಸು ಕೋರಿದರು. ಜಾತ ಬಂದಿದ್ದ ಪ್ರತಿಯೊಬ್ಬ ರೈತನ ರುಜು ಅಥವಾ ಹೆಬ್ಬೆರಳಿನ ಗುರ್ತು ಹಾಕಿಸಿಕೊಂಡುದು ಆ ಸಭೆಯಲ್ಲೇ ಈ ಕೆಲಸಕ್ಕಾಗಿ ಹತ್ತಾರು

ಜನ ಯುವಕರನ್ನು ನೇಮಿಸಿದ್ದೆವು. ಅವರು ಬೇರೆ ಬೇರೆ ಹಾಳಿಗಳಲ್ಲಿ ರೈತರ ರುಜು ಪಡೆದುಕೊಂಡರು. ಈ ರುಜುಗಳಿದ್ದ ನೂರಾರು ಹಾಳಿಗಳನ್ನು ಆ ರಾತ್ರಿಯೇ ಬೆಂಗಳೂರಿಗೆ ಕಳುಹಿಸಿ ಬೈಂಡ್ ಮಾಡಿಸಿ ಇರ್ವಿನ ನಾಲಾ ರೈತರ ರುಜುಗಳ ಪುಸ್ತಕ ಎಂದು ಅಚ್ಚುಮಾಡಿಸಿದ್ದೆವು ಮತ್ತು ಆ ಮೊದಲೇ ದಿವಾನರಿಗೊಂದು ಅರ್ಜಿ ತಯಾರಿಸಿ ರೈತರ ಹದಿನಾಲ್ಕು ಬೇಡಿಕೆಗಳನ್ನು ಅದರಲ್ಲಿ ನಮೂದಿಸಿ ಅದರ ಸಾವಿರಾರು ಪ್ರತಿಗಳನ್ನು ಅಚ್ಚು ಮಾಡಿಸಿದ್ದೆವು. ದಿವಾನರಿಗೂ ಕೌನ್ಸಿಲರ್‌ಗಳಿಗೂ ಉನ್ನತಾಧಿಕಾರಿಗಳಿಗೂ ಕೊಡುವುದಕ್ಕಾಗಿ ಚನ್ನಾಗಿರುವ ಕಾಗದದಲ್ಲಿ ಕೆಲವು ಪ್ರತಿಗಳನ್ನು ಅಚ್ಚು ಮಾಡಿಸಿ ಇಟ್ಟುಕೊಂಡಿದ್ದೆವು.

ಬೆಂಗಳೂರು ಪೇಟೆಯಲ್ಲಿ ರೈತರ ಜಾತ ಬರುತ್ತಿದ್ದುದನ್ನು ಸಾವಿರಾರು ಜನ ಬೆಂಗಳೂರಿನ ನಾಗರಿಕರು ರಸ್ತೆಗಳಲ್ಲೂ ತಂತಮ್ಮ ಮನೆಗಳ ಮುಂದೂ ಮಹಡಿಗಳ ಮೇಲೂ ನಿಂತು ನೋಡಿ ಚಪ್ಪಾಳೆ ತಟ್ಟುತ್ತಿದ್ದರು. ನಾವು ಮೈಸೂರು ರಸ್ತೆಯಿಂದ ಚಾಮರಾಜ ಪೇಟೆ ಒಂದನೇ ರಸ್ತೆಗೆ ಬಂದು ಕೋಟೆ ಮುಂದುಗಡೆ ಹಾದು ಅಠಾರ ಕಛೇರಿಯನ್ನು ಸೇರಿ ಅಲ್ಲಿ ಶಿಸ್ತಿನಿಂದ ಮೈದಾನದಲ್ಲಿ ಸಾಲಾಗಿ ಕುಳಿತುಕೊಂಡೆವು. ಹಾಗೆ ಕುಳಿತಿರುವಾಗ ಯಾರೂ ಬೀಡಿ ಸಿಗರೇಟು ಸೇದಿ ಆ ತುಂಡುಗಳನ್ನು ಬಿಸಾಡಬಾರದೆಂದೂ ಎಲೆ ಅಡಿಕೆ ಅಗಿದು ತಂಬುಲವನ್ನು ಉಗಿದು ಸ್ಥಳವನ್ನು ಹೊಲಸು ಮಾಡಬಾರದೆಂದೂ ಗೊತ್ತುಮಾಡಿದ್ದೆವು. ಪ್ರಯಾಣಕಾಲದಲ್ಲೂ ಬೆಂಗಳೂರು ಅಠಾರ ಕಛೇರಿ ಮೈದಾನದಲ್ಲೂ ರೈತರು ತೋರಿಸಿದ ಶಿಸ್ತು, ಸಂಯಮಗಳು ಯಾರಿಗಾದರೂ ಹೆಮ್ಮೆಯನ್ನುಂಟುಮಾಡುವಂತಿದ್ದುವು.

ದಿವಾನರವರ ಆಪ್ತ ಕಾರ್ಯದರ್ಶಿಯವರು ನನ್ನಲ್ಲಿಗೆ ಬಂದು ದಿವಾನ್ ಸಾಹೇಬರು ನಿಮ್ಮನ್ನು ನೋಡಬಯಸುತ್ತಾರೆ ಎಂದರು. ನಾನು ಅವರ ಹಿಂದೆಯೇ ಹೋಗಿ ದಿವಾನ್‌ರವರಿಗೆ ಕೈಮುಗಿದೆ. ಅವರು ಪ್ರತಿ ವಂದನೆಮಾಡಿ, "ನಿಮ್ಮಲ್ಲಿ ಮುಖಂಡರಾಗಿರುವ ಎಂಟು–ಹತ್ತು ಮಂದಿ ನನ್ನ ಛೇಂಬರಿಗೆ ಬಂದು ಮಾತಾಡಬಹುದು" ಎಂದರು. ಅದಕ್ಕೆ ನಾನು "ತಮ್ಮ ಭೇಟಿಗಾಗಿ, ಸಾವಿರಾರು ಮಂದಿ ರೈತರು ಅರವತ್ತು ಮೈಲಿಗಳಿಗೂ ಹೆಚ್ಚು ದೂರ ನಡೆದು ಬಂದಿದ್ದಾರೆ, ಅವರೆಲ್ಲರನ್ನೂ ತಾವು ಭೇಟಿಮಾಡುವುದು ಅಗತ್ಯ. ಅಲ್ಲದೆ ನಮ್ಮಲ್ಲಿ ಮುಖಂಡರು ಯಾರೂ ಇಲ್ಲ. ನಾವೆಲ್ಲರೂ ರೈತರು. ನಮಗೆ ನಾವು ಮುಖಂಡರು"ಎಂದು ಹೇಳಿದೆ. "ಅಷ್ಟು ಮಂದಿಗೆ ನನ್ನ ಛೇಂಬರಿನಲ್ಲಿ ಸ್ಥಳವಿದೆಯೇ ?" ಎಂದು ದಿವಾನರು ಕೇಳಿದರು. "ಅಷ್ಟು ಜನರೂ ತಮ್ಮನ್ನು ತಮ್ಮ ಛೇಂಬರ್‌ನಲ್ಲಿ ನೋಡಲು ಸಾಧ್ಯವಿಲ್ಲ ನಿಜ. ಆದರೆ ಅವರಿರುವಲ್ಲಿಗೆ ತಾವೇ ದಯಮಾಡಿಸಬಹುದಲ್ಲ," ಎಂದೆ. ಅವರು ನಗೆಮುಖದಿಂದ ಹಾಗೆಯೇ ಮಾಡುವುದಾಗಿ ಹೇಳಿ ನನ್ನ ಕೈಕುಲುಕಿ ಕಳುಹಿಸಿಕೊಟ್ಟರು, ಒಂದು ಗಂಟೆಯೊಳಗಾಗಿ ಅಠಾರ ಕಛೇರಿಯ ದಕ್ಷಿಣ ಭಾಗದ ಹುಲ್ಲಿನ ಮೈದಾನದಲ್ಲಿ ವಿಶಾಲವಾದ ವೇದಿಕೆ

ಯೊಂದು ನಿವರ್ಾಣವಾಯಿತು. ವೇದಿಕೆ ಎದುರಿಗೆ ನಾನೂರು ಐನೂರು ಕುರ್ಚಿಗಳನ್ನು ಜೋಡಿಸಿದ್ದರು. ಈ ಕುರ್ಚಿಗಳು ಎಲ್ಲ ರೈತರಿಗೂ ಸಾಕಾಗುವುದಿಲ್ಲವಾದುದರಿಂದ ನಾವೆಲ್ಲರೂ ನೆಲದಮೇಲೆಯೇ ಕುಳಿತುಗೊಳ್ಳುತ್ತೇವೆ. ಕುರ್ಚಿಗಳನ್ನು ತೆಗೆಸಿಬಿಡಿ ಎಂದು ಅಲ್ಲಿದ್ದ ಅಧಿಕಾರಿಗಳಿಗೆ ಹೇಳಿದೆ. ಅವರು ಅದೇ ರೀತಿ ಮಾಡಿದರು. ದಿವಾನ್‌ರವರೂ ಕೌನ್ಸಿಲರುಗಳೂ ಸರ್ಕಾರಿ ಕಾರ್ಯದರ್ಶಿಗಳೂ ಇಲಾಖೆಗಳ ಮುಖ್ಯಾಧಿಕಾರಿಗಳೂ ವೇದಿಕೆಯ ಅಕ್ಕಪಕ್ಕದಲ್ಲಿದ್ದ ಪೀಠಗಳ ಮೇಲೆ ಮಂಡಿಸಿದ್ದರು. ಅವರ ಜತೆ ಕೆಲವು ಖಾಸಗಿ ಮುಖಂಡರೂ ಕುಳಿತಿದ್ದರು. ನಾವೆಲ್ಲರೂ ನೆಲದ ಮೇಲೆ ಸಾಲಾಗಿ ಶಿಸ್ತಿನಿಂದ ಕುಳಿತುಕೊಂಡೆವು.

ದಿವಾನ್‌ರವರು ರೈತರನ್ನು ಕುರಿತು. "ನೀವು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಅರವತ್ತು ಎಪ್ಪತ್ತು ಮೈಲಿ ದೂರ ನಡೆದು ಕಷ್ಟಪಟ್ಟುಕೊಂಡು ಬಂದಿದ್ದೀರಿ. ರೈಲಿನಲ್ಲಿ ಬರಬಹುದಾಗಿತ್ತು" ಎಂದು ಹೇಳಿದರು. "ನಾವೆಲ್ಲರೂ ರೈಲಿನಲ್ಲಿ ಬೆಂಗಳೂರಿಗೆ ಬಂದು ಹೋಗುವುದಕ್ಕೂ ಬೆಂಗಳೂರಿನಲ್ಲಿ ತಂಗಲು ಸ್ಥಳ ಊಟ ಮುಂತಾದ ಖರ್ಚಿಗೂ ಏನಿಲ್ಲವೆಂದರೂ ಹದಿನೈದು-ಇಪ್ಪತ್ತು ಸಾವಿರ ರೂಪಾಯಿಗಳು ಖರ್ಚಾಗುತ್ತಿತ್ತು. ಬಡವರಾದ ರೈತರಿಗೆ ಅಷ್ಟು ಹಣ ಖರ್ಚುಮಾಡಲು ಹೇಗೆ ಸಾಧ್ಯ ಸ್ವಾಮಿ ?" ಎಂದೆ. ಎಲ್ಲರೂ ನಕ್ಕರು. ಆಮೇಲೆ ಕೌನ್ಸಿಲರ್ ಕೆ. ಮ್ಯಾತನ್ ಸಾಹೇಬರು, ರೈತರನ್ನು ಕುರಿತು, "ಸರ್ಕಾರದ ಹುಕ್ಕುಂ ಅನ್ನು ನೀವು ಸರಿಯಾಗಿ ಅರ್ಥಮಾಡಿಕೊಂಡಿಲ್ಲ, ಆದರಂತೆ ನೀವು ನಡೆದುಕೊಂಡರೆ ನಿಮಗೇನೂ ತೊಂದರೆಯಾಗುವುದಿಲ್ಲವೆಂದೇ ನಾನು ಹೇಳುತ್ತೇನೆ. ಆ ರೀತಿ ಮಾಡಿ" ಎಂದು "ಬುದ್ಧಿವಾದ" ಹೇಳಿದರು. ಆಗ ಇದ್ದಕ್ಕಿದ್ದಂತೆ ನಮ್ಮ ಮಾನವರು ಎದ್ದು, "ಅಪ್ಪಣೆಯಾದಂತೆ ನಾವು ನಡೆದುಕೊಳ್ಳಲು ಸಿದ್ಧರಾಗಿದ್ದೇವೆ" ಎಂದು ಹೇಳಿಯೇ ಬಿಟ್ಟರು : ಆ ಕೂಡಲೆ ನಾನೆದ್ದು ನಮ್ಮ ಮಾನವರನ್ನು ಕುರಿತು. "ಚನ್ನೇಗೌಡರೇ, ನೀವು ಸ್ವಲ್ಪ ದಯಮಾಡಿ ಕುಳಿತುಕೊಳ್ಳಿ. ವಿಷಯ ಅಷ್ಟು ಸುಲಭವಲ್ಲ"ಎಂದು ಹೇಳಿದೆ. ದಿವಾನ್ ಸಾಹೇಬರಾದಿಯಾಗಿ ಅಧಿಕಾರಿಗಳೂ ಸಭಿಕರೂ ಗೊಳ್ಳೆಂದು ನಕ್ಕುಬಿಟ್ಟರು. ನಾವು ಸಿದ್ಧಪಡಿಸಿಕೊಂಡು ಹೋಗಿದ್ದ ಅರ್ಜಿಯಲ್ಲಿದ್ದ ಹದಿನಾಲ್ಕು ಅಂಶಗಳಲ್ಲಿ ಒಂದೊಂದನ್ನೇ ಓದಿ ವಿಷಯ ಎಷ್ಟು ಗಹನವಾದುದು, ಎಷ್ಟು ತೊಡಕಾದುದು ? ಎಂಬುದನ್ನು ವಿವರಿಸಿ, ಈ ಮಾತುಗಳು ರೈತರ ಅನುಭವದಿಂದ ಮೂಡಿರುವ ಅಂಶಗಳು ಆದುದರಿಂದ ಸರ್ಕಾರದವರು ಈ ವಿಷಯಗಳನ್ನು ಕೂಲಂಕುಷವಾಗಿ ಪರಿಶೀಲಿಸಬೇಕಾದ ಅಗತ್ಯ ಬಹಳವಾಗಿದೆ ಎಂದು ಅರಿಕೆ ಮಾಡಿಕೊಂಡೆ, ಮತ್ತು ಅರ್ಜಿಯನ್ನು ದಿವಾನರ ಕೈಗಿತ್ತೆ. ಅದರ ಪ್ರತಿಗಳನ್ನು ಅಲ್ಲಿದ್ದ ಅಧಿಕಾರಿಗಳಿಗೂ ಇತರ ದೊಡ್ಡ ಮನುಷ್ಯರಿಗೂ ಹಂಚುವ ಏರ್ಪಾಟು ಮಾಡಿದ್ದೆ. ಅರ್ಜಿ ಜತೆಗೆ ರೈತರುಗಳ ರುಜುಗಳಿದ್ದ ಹೊತ್ತಿಗೆಯನ್ನು ದಿವಾನ್‌ರವರಿಗೆ ಕೊಟ್ಟೆ. ಇದೇನೆಂದು ಕೇಳಿದರು. ತಮಗೆ ಕೊಟ್ಟಿರುವ ಅರ್ಜಿಗೆ ರೈತರ ರುಜು ಇರುವ ಪುಸ್ತಕ

ಎಂದೆ. ರುಜುಗಳೇಕೆ ಬೇಕು ? ಎದುರಿಗೇ ಕಾಣಿಸುತ್ತಿದ್ದಾರಲ್ಲ ! ಎಂದು ದಿವಾನರು ನಗೆಮುಖದಿಂದ ರುಜುಗಳಿದ್ದ ಆ ಹೊತ್ತಿಗೆಯನ್ನೂ ತೆಗೆದುಕೊಂಡರು.

ನಾವು ಕೊಟ್ಟಿದ್ದ ಅರ್ಜಿಯಲ್ಲಿ ನಮೂದಿಸಿದ್ದ ಹದಿನಾಲ್ಕು ಅಂಶಗಳ ಪೈಕಿ ಕಾಂಟ್ರಿಬ್ಯೂಷನ್ ಮೊಬಲಗನ್ನು ಒಂದೇಸಾರಿ ಕೊಡಬೇಕೆಂದೂ ಇಲ್ಲವಾದರೆ ಶೇಕಡಾ ಆರೂಕಾಲರಂತೆ ಬಡ್ಡಿ ಕೊಡಬೇಕೆಂದೂ ಸರ್ಕಾರದವರು ತಮ್ಮ ಹುಕ್ಕುಂನಲ್ಲಿ ಹೇಳಿರುವುದು ಅನ್ಯಾಯವೆಂದು ನಾನು ವಿವರಿಸುತ್ತಿದ್ದಾಗ,ದಿವಾನರು ಮಧ್ಯೆ ಮಾತಾಡಿ "ನಿಮಗಾಗಿ ಖರ್ಚು ಮಾಡಿರುವ ಹಣಕ್ಕೆ ಬಡ್ಡಿ ಕೇಳುವುದು ಹೇಗೆ ಅನ್ಯಾಯ?" ಎಂದರು. ಆದಕ್ಕೆ ನಾನು, "ಸ್ವಾಮಿ ಈ ಕಾಂಟ್ರಿಬ್ಯೂಷನ್ ಹಣ ಸರ್ಕಾರದವರು ನಮಗೆ ನಗದು ಕೊಟ್ಟದ್ದಲ್ಲ ಸಾಲಮಾಡಿದ ಹಣಕ್ಕೇ ಬಡ್ಡಿ ಕೊಡಲು ನಮಗೆ ಕಷ್ಟವಾಗಿರುವಾಗ ಕೈಮೇಲೆ ಕೊಡದೇ ಇರುವ ಹಣಕ್ಕೆ ಬಡ್ಡಿ ಕೇಳುವುದು ಅನ್ಯಾಯವಲ್ಲದೆ ಮತ್ತೇನು ಸ್ವಾಮಿ"ಎಂದೆ.ಆಗ ದಿವಾನರು"ಕೊಡದಿದ್ದರೂ ನಿಮ್ಮ ಅನುಕೂಲಕ್ಕಾಗಿ ಸರ್ಕಾರದವರು ಖರ್ಚುಮಾಡಿರುವ ಹಣದಲ್ಲಿ ಕೇವಲ ಸ್ವಲ್ಪ ಭಾಗವನ್ನು ಮಾತ್ರ ಸರ್ಕಾರ ಕೇಳುತ್ತಿದೆ, ಅದನ್ನು ಕೊಡದಿದ್ದರೆ ಬಡ್ಡಿ ಸೇರಿಸಬೇಕಾಗುತ್ತದೆ. ಇದರಲ್ಲೇನು ಅನ್ಯಾಯವಿದೆ ?" ಎಂದು ಮತ್ತೆ ಪ್ರಶ್ನಿಸಿದರು. ಆಗ ನಾನು"ಸ್ವಾಮಿ ರೈತರಿಗೆ ಅನುಕೂಲವಾಗಲೆಂದು ಘನ ಉದ್ದೇಶದಿಂದಲೇ ಸರ್ಕಾರದವರು ಕೋಟ್ಯಂತರ ರೂಪಾಯಿ ಖರ್ಚುಮಾಡಿ ಅಣೆಕಟ್ಟೆ ಕಟ್ಟಿಸಿ ಕಾಲುವೆ ತೋಡಿಸಿರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈ ಉಪಕಾರಕ್ಕಾಗಿ ನಾವು ಸರ್ಕಾರದವರಿಗೆ ಕೃತಜ್ಞರಾಗಿಯೂ ಇದ್ದೇವೆ. ಆದರೆ ಈ ಸಂದರ್ಭದಲ್ಲಿ ಉಂಟಾಗಿರುವ ತೊಡಕುಗಳ ಪರಿಹಾರಕ್ಕಾಗಿ ನಾವು ಇಷ್ಟು ದೂರ ನಡೆದು ಬಂದು ನಿಮ್ಮನ್ನು ಪ್ರಾರ್ಥಿಸಿಕೊಳ್ಳುತ್ತಿದ್ದೇವೆ. ಸರ್ಕಾರದವರು ರೈತರ ಪ್ರಯೋಜನಕ್ಕಾಗಿ ಮಾಡಿರುವ ಈ ಕೆಲಸದಿಂದ ಇದುವರೆಗೆ ರೈತರಿಗೆ ಒಂದು ಕಾಸಿನ ಉತ್ಪತ್ತಿಯೂ ಆಗಿಲ್ಲ. ಉತ್ಪತ್ತಿಬರುವ ವರೆಗೆ ಅಸಲು ಕೇಳುವುದನ್ನು ಸರ್ಕಾರ ನಿಲ್ಲಿಸಬೇಕು. ಈ ಖರ್ಚು ಮಾಡಿರುವ ಹಣದ ಮೇಲೆ ಕೊಡಬೇಕೆನ್ನುವ ಬಡ್ಡಿ ವಜಾ ಮಾಡಬೇಕೆಂಬುದೇ ರೈತರ ನ್ಯಾಯವಾದ ಬೇಡಿಕೆ" ಎಂದು ವಿವರಿಸಿದೆ. ನನ್ನ ವಿವರಣೆ ದಿವಾನರದರ ಮನತಟ್ಟಿದಂತೆ ಕಂಡಿತು. ಅಧಿಕಾರಿಗಳೂ ಅಲ್ಲಿದ್ದ ಖಾಸಗಿ ದೊಡ್ಡ ಮನುಷ್ಯರೂ ನನ್ನ ವಾದ ಸರಿಯಾದುದೆನ್ನುವಂತೆ ತಲೆ ಅಲ್ಲಾಡಿಸುತ್ತಿದ್ದರು.

ಕಡೆಗೆ ದಿವಾನರವರು ಎದ್ದು ನಿಂತುಕೊಂಡು "ನಿಮಗಾಗುವ ತೊಂದರೆಗಳೆಂದು ನೀವು ಭಾವಿಸಿಕೊಂಡಿರುವ ವಿಷಯಗಳನ್ನು ಸರ್ಕಾರದಲ್ಲಿ ಅರಿಕೆಮಾಡಿಕೊಂಡರೆ ಪರಿಹಾರವಾಗುತ್ತವೆಂಬ ಭರವಸೆಯಿಂದ ನೀವು ಸರ್ಕಾರದಲ್ಲಿ ನಂಬಿಕೆಯಿಟ್ಟು ಇಷ್ಟೊಂದು ಸಾವಿರ ಜನ ಇಷ್ಟುದೂರ ಬಂದಿರುವುದು ನನಗೆ ಸಂತೋಷವನ್ನುಂಟು ಮಾಡಿದೆ. ಆದರೂ ಇಷ್ಟು ಕಷ್ಟಪಟ್ಟು ಈ ಚಳಿಯಲ್ಲಿ ನಡೆದುಬಂದಿರುವುದನ್ನು ನೋಡಿ ನನಗೆ ವ್ಯಸನವೂ ಆಗಿದೆ. ನಿಮ್ಮ ಅಹವಾಲುಗಳನ್ನು ಸರ್ಕಾರದವರು

ಸಹಾನುಭೂತಿಯಿಂದ ಪರಿಶೀಲಿಸಿ ಹುಕ್ಕುಂ ಹೊರಡಿಸುವರು. ಕಾಂಟ್ರಿಬ್ಯೂಷನ್ ಹಣದ ಮೇಲೆ ಬಡ್ಡಿ ಹಾಕಿರುವುದನ್ನು ವಜಾ ಮಾಡಬೇಕೆಂದು ನೀವು ಕೇಳಿರುವುದನ್ನು ಸರ್ಕಾರದವರು ಒಪ್ಪಿಕೊಳ್ಳುತ್ತಾರೆ. ಆದುದರಿಂದ ಕಾಂಟ್ರಿಬ್ಯೂಷನ್ ಹಣವನ್ನು ಬಡ್ಡಿಯಿಲ್ಲದೆ ಹತ್ತು ವಾರ್ಷಿಕ ಕಂತುಗಳಲ್ಲಿ ತೀರಿಸಬಹುದು. ಹತ್ತು ವರ್ಷ ಕಳೆದ ಮೇಲೆ ಉಳಿದುಕೊಳ್ಳುವ ಹಣದಮೇಲೆ ಬಡ್ಡಿ ಕೊಡಬೇಕಾಗುತ್ತದೆ" ಎಂದು ಹೇಳಿದರು. ಇದರಿಂದ ರೈತರಿಗಾದ ಹರ್ಷ ಹೇಳತೀರದು. ಎಲ್ಲರೂ ಕೆಲವು ನಿಮಿಷಗಳು ಕಿವಿಗಡಚುವಂತೆ ಕೈ ಚಪ್ಪಾಳೆ ತಟ್ಟಿ ದಿವಾನರ ಮಾತನ್ನು ಸ್ವಾಗತಿಸಿದರು. ದಿವಾನರವರು ತಮ್ಮ ಮಾತನ್ನು ಮುಂದುವರಿಸಿ, "ನಾನೇ ಇನ್ನು ಕೆಲವು ದಿನಗಳಲ್ಲಿ ಮಂಡ್ಯಕ್ಕೆ ಬಂದು ಸ್ಥಳ ಪರಿಶೀಲನೆಯಿಂದ ವಿಷ್ಯಮಾನಗಳನ್ನು ತಿಳಿದುಕೊಳ್ಳುತ್ತೇನೆ. ನೀವು ಸುಖವಾಗಿ ಹಿಂದಿರುಗಿ" ಎಂದು ಹೇಳಿದರು. ಪುನಃ ಚಪ್ಪಾಳೆಗಳ ಸುರಿಮಳೆಯಲ್ಲಿ ಸಭೆ ಮುಕ್ತಾಯವಾಯಿತು.

ಬೆಂಗಳೂರಿನ ಮಂಡಿ ವರ್ತಕ ಮಹನೀಯರು ರೈತರೆಲ್ಲರಿಗೂ ಒಕ್ಕಲಿಗರ ಸಂಘದ ಆವರಣದಲ್ಲಿ ಆ ರಾತ್ರಿ ತಂಗಿದ್ದು ತಮ್ಮ ಆತಿಥ್ಯವನ್ನು ಸ್ವೀಕರಿಸಬೇಕೆಂದು ಚಿಕ್ಕವೀರಪ್ಪನವರ ಮೂಲಕ ಆಹ್ವಾನಿಸಿದರು. ಸಭೆ ನಡೆಯುತ್ತಿರುವಾಗಲೇ ಚಿಕ್ಕವೀರಪ್ಪನವರು ಆ ವಿಷಯ ನನಗೆ ತಿಳಿಸಿದರು. ನಾವೆಲ್ಲರೂ ಅದೇ ಶಿಸ್ತಿನಿಂದ ಒಕ್ಕಲಿಗರ ಸಂಘದ ಆವರಣಕ್ಕೆ ಹೋದೆವು. ಆ ರಾತ್ರಿ ವರ್ತಕರು ಘನವಾದ ಔತಣ ಏರ್ಪಡಿಸಿದ್ದರು. ಅಷ್ಟಕ್ಕೇ ವರ್ತಕರು ತೃಪ್ತರಾಗದೆ ಮಾರನೆಯ ದಿನ ರೈತರು ಹಿಂದಿರುಗುವ ಮೊದಲು ದಾರಿಗೆಂದು ಹುಳಿ ಅನ್ನ, ಮೊಸರನ್ನಗಳ ಬುತ್ತಿ ಕಟ್ಟಿಕೊಟ್ಟರು. ಮತ್ತೆ ನಾಲ್ಕು ದಿನಗಳು ಪ್ರಯಾಣ ಮಾಡಿ ರೈತರು ತಂತಮ್ಮ ಊರುಗಳಿಗೆ ಸುಖವಾಗಿ ಹಿಂದಿರುಗಿದರು. ಪ್ರಯಾಣ ಕಾಲದಲ್ಲಿ ಯಾವ ತೊಂದರೆಯೂ ಉಂಟಾಗಲಿಲ್ಲ. ನಾಲ್ಕಾರು ಮಂದಿ ವಯಸ್ಸಾಗಿದ್ದವರಿಗೆ ಒಂದೆರಡು ದಿನ ಜ್ವರ, ತಲೆನೋವು, ನೆಗಡಿ ಮುಂತಾದ ಸಣ್ಣಪುಟ್ಟ ಕಾಯಿಲೆಗಳು ತಲೆದೋರಿದ್ದುವು. ಅಂತಹ ಕಾಯಿಲೆಗಳಿಗೆ ವೆಂಕಟಗಿರಿಯಯ್ಯನವರ ಗಾಡಿ ಅಂಗಡಿಯಲ್ಲೇ ಮದ್ದಿಟ್ಟಿದ್ದರು. ಆ ಔಷಧಿಯ ಪ್ರಯೋಗದಿಂದಲೇ ಕಾಯಿಲೆಯಾದವರಿಗೆ ಗುಣವಾಯಿತು. ಹೀಗೆ ಮೈಸೂರು ದೇಶದಲ್ಲಿ ಎಂದೂ ನಡೆಯದಿದ್ದ, ಈವರೆಗೆ ಇನ್ನೂ ನಡೆಯದಿರುವ ಇಂತಹ ಚರಿತ್ರಾರ್ಹವಾದ ರೈತರ ಕಾಲುನಡೆಯ ಯಾತ್ರೆ ಅತ್ಯಂತ ಯಶಸ್ವಿಯಾಗಿ ದೇವರ ದಯೆಯಿಂದ ಕೊನೆಗೊಂಡಿತು. ಇದರಿಂದ ರೈತರಿಗೆ ಹತ್ತಿರ ಹತ್ತಿರ ಒಂದುಕೋಟಿ ರೂಪಾಯಿಸಷ್ಟು ರಿಯಾಯಿತಿ ದೊರೆಯಿತು. ಈ ಜಾತ ಕುರಿತು ಇತ್ತೀಚೆಗೆ ಸರ್ಕಾರದವರು ಪ್ರಕಟಿಸಿರುವ ಮಂಡ್ಯಜಿಲ್ಲಾ ಗೆಜೆಟಿಯರ್‌ನಲ್ಲಿ ಇದು ಬೇಸಾಯಗಾರರ ಚಳುವಳಿ (ಆಗ್ರೇರಿಯನ್ ರೆವಲ್ಯೂಷನ್) ಎಂದು ವರ್ಣಿಸಿದ್ದಾರೆ.

ಆ ಸಮಯದಲ್ಲಿ ''ಇರ್ವಿನ್ ನಾಲಾ ರೈತರ ಕಷ್ಟನಷ್ಟಗಳು'' ಎಂಬ ಪುಸ್ತಕ

ವೊಂದನ್ನು ನಾನು ಬರೆದು ರೈತರ ಸಂಘದಿಂದ ಪ್ರಕಟಿಸಿದೆವು. ಈ ವಿಷಯು ಸರ್ಕಾರದ ಕಿವಿಗೆ ಬಿದ್ದು, ಆ ಪುಸ್ತಕಗಳು ರೈತರಿಗೆ ಸಿಕ್ಕದ ಹಾಗೆ ವಶಪಡಿಸಿ ಕೊಳ್ಳಬೇಕೆಂದು ಹವಣಿಸಿದರು. ಅದು ಎಲ್ಲಿ ಅಚ್ಚಾಗುತ್ತಿದೆಯೆಂಬುದನ್ನು ನಾವು ಬಹಿರಂಗಪಡಿಸಿರಲಿಲ್ಲ. ಸರ್ಕಾರದ ಪ್ರಯತ್ನ ನಮಗೆ ತಿಳಿದ ಒಡನೆ, ಆ ಪುಸ್ತಕದ ಸಾವಿರಾರು ಪ್ರತಿಗಳನ್ನು ಗೋಣೀಚೀಲಗಳಲ್ಲಿ ತುಂಬಿ, ಯಾವುದೋ ಮೂಟೆಗಳು ಎಂದು ಕಾಣುವಂತೆ ಮಾಡಿ, ಅವನ್ನು ಒಂದು ಲಾರಿಯಲ್ಲಿ ರಾತ್ರಿ ಕಾಲದಲ್ಲಿ ಮೈಸೂರಿಗೆ ಸಾಗಿಸಿಬಿಟ್ಟು, ಒಂದೆರಡು ದಿನಗಳಲ್ಲೇ ಅವುಗಳನ್ನು ನಾಲಾ ಪ್ರದೇಶದಲ್ಲಿರುವ ಪ್ರತಿ ಹಳ್ಳಿಗೂ ಹಂಚಿಸುವ ವ್ಯವಸ್ಥೆ ಮಾಡಿದೆವು. ಈ ರೀತಿ ನಾವು ಮಾಡಿದ ಮೋಜಿಯೋ ನಮ್ಮ ಕಾರ್ಯ ಸರ್ಕಾರಕ್ಕೆ ಗೊತ್ತಾದುದು. ಈ ಸಂಗಿವನ್ನು ಮೊದಲೇ ತಿಳಿದುಕೊಳ್ಳಲು ಪ್ರಯತ್ನ ಮಾಡದಿದ್ದ ಪೊಲೀಸ್ ಅಧಿಕಾರಿಗಳ ಮೇಲೆ ಸರ್ಕಾರದವರು ಅಸಮಾಧಾನ ಸೂಚಿಸಿದರೆಂದೂ ಗೊತ್ತಾಯಿತು

ದಿವಾನರು ತಾವೇ ಮಂಡ್ಯಕ್ಕೆ ಬಂದು ಸ್ಥಳ ವಿದ್ಯಮಾನಗಳನ್ನು ಪರಿಶೀಲಿಸುವು ದಾಗಿ ಬೆಂಗಳೂರಲ್ಲಿ ರೈತರಿಗೆ ಭರವಸೆ ಕೊಟ್ಟಿದ್ದರಷ್ಟೆ. ಅವರು ಯಾವ ದಿನ ಎಷ್ಟು ಹೊತ್ತಿಗೆ ಬರುತ್ತಾರೆಂಬುದನ್ನು ನಮಗೆ ತಿಳಿಸುತ್ತಾರೆಂದು ನಾವು ಭಾವಿಸಿದ್ದೆವು. ಅದಕ್ಕೆ ಬದಲಾಗಿ ಅವರು ಜಿಲ್ಲಾಧಿಕಾರಿಗಳಿಗೆ ಬರೆದು, ತಮ್ಮ ಮಂಡ್ಯ ಭೇಟಿ ವಿಚಾರ ಬಹಳ ಗೋಪ್ಯವಾಗಿಟ್ಟುಕೊಂಡು ಸರ್ಕಾರದ ದಾಕ್ಷಿಣ್ಯಕ್ಕೆ ಮಣಿಯುವ ಸುಮಾರು ಐವತ್ತು–ನೂರು ಮಂದಿಯನ್ನು ಮಾತ್ರ ಮಂಡ್ಯದ ಟ್ರಾವಲರ್ಸ್ ಬಂಗಲೆ ಬಳಿ ಸೇರಿಸಿರಬೇಕೆಂದು ತಿಳಿಸಿದ್ದರಂತೆ ಅವರು ಬರುವ ಹಿಂದಿನ ದಿನ ಮಾತ್ರ ನಮಗೆ ಈ ವಿಷಯ ತಿಳಿಯಿತು ಒಡನೆ ನಾವು ಮಲ್ಲಿಗೆರೆ ಪಾಪಣ್ಣನವರನ್ನು ಬರಮಾಡಿ ಕೊಂಡು ಬೈಸಿಕಲ್ ಸವಾರರ ಮೂಲಕ ಪ್ರತಿ ಹಳ್ಳಿಗೂ ವರ್ತಮಾನಕೊಟ್ಟು ಮಾರನೆದಿನ ಬೆಳಗ್ಗೆ ಹತ್ತುಗಂಟೆ ಒಳಗಾಗಿ ಮಂಡ್ಯದಲ್ಲಿ ಜನ ಸೇರಿಸಬೇಕೆಂದು ವ್ಯವಸ್ಥೆ ಮಾಡಿದೆವು. ದಿವಾನರು ಆ ದಿನ ಹನ್ನೊಂದು ಹನ್ನೆರಡು ಗಂಟೆಗೆ ಮಂಡ್ಯಕ್ಕೆ ಬರುವುದಾಗಿತ್ತು. ಬೆಳಗಿನ ಹತ್ತುಗಂಟೆ ಒಳಗಾಗಿ ಏನಿಲ್ಲವೆಂದರೂ ಹತ್ತುಸಾವಿರ ಜನ ಮಂಡ್ಯಕ್ಕೆ ಬಂದು ಸೇರಿದ್ದರು. ಎಲ್ಲೆಲ್ಲೂ ಜನರೇ, ಯಾವ ಬೀದಿಯಲ್ಲೂ ಜನ ಸಂದಣಿಯೇ ಟ್ರಾವಲರ್ಸ್ ಬಂಗ್ಲೆ ಆವರಣ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ಕಾಲಿಡುವುದಕ್ಕೂ ಎಡೆಯಿಲ್ಲದಷ್ಟು ಜನ ಸೇರಿದ್ದರು. ಒಂದು ವಾರ ಕಾಲ ಮಂಡ್ಯ ಟೌನ್ ಮತ್ತು ಒಂದು ಮೈಲಿ ಸುತ್ತಳತೆಯಲ್ಲಿ ಐದು ಮಂದಿಗಿಂತ ಹೆಚ್ಚು ಜನ ಒಂದು ಕಡೆ ಸೇರಬಾರದೆಂದು ಮ್ಯಾಜಿಸ್ಟ್ರೇಟರು ನಿಷೇಧಾಜ್ಞೆ ಹೊರಡಿಸಿದ್ದರು. ಈ ಆಜ್ಞೆ ಏನೂ ಪ್ರಯೋಜನಕ್ಕೆ ಬರಲಿಲ್ಲ. ಅಷ್ಟರಲ್ಲಿ ನಾವು ಕೃಷ್ಣರಾಜಸಾಗರದ ಹೆದ್ದ್ವಾರದ ಮಂಟಪದಲ್ಲಿ ಸೇರಿಸಿರುವ ಟಿಪ್ಪುಸುಲ್ತಾನರ ಶಾಸನದ ಕನ್ನಡ ಭಾಷಾಂತರದ ಹತ್ತುಸಾವಿರ ಪ್ರತಿಗಳನ್ನು ಅಚ್ಚುಹಾಕಿಸಿ ಆ ದಿನ ಸೇರಿದ್ದ ಜನರಿಗೆ

ಹಂಚಿಸಿದೆವು. ಆ ಶಾಸನದಲ್ಲಿ ಟಿಪ್ಪುಸುಲ್ತಾನರು ತಾವು ಕಟ್ಟಿಸುತ್ತಿರು ಅಣೆಕಟ್ಟಿನ ನೀರಿನಿಂದ (ಕೃಷ್ಣರಾಜಸಾಗರ ನಿರ್ಮಾಣಕ್ಕೆ ಏಷ್ಟೋ ವರ್ಷಗಳು ಮೊದಲು ಟಿಪ್ಪುಸುಲ್ತಾನರು ಎಪ್ಪತ್ತು ಅಡಿಗಳ ಎತ್ತರದ ಒಂದು ಅಣೆಕಟ್ಟು ನಿರ್ಮಿಸಿದ್ದು, ಇತ್ತೀಚೆಗೆ ಅದು ಹಾಳಾಗಿಹೋಗಿದೆ) ಬೇಸಾಯ ಮಾಡುವ ರೈತರು ಬೇರೆ ಕಡೆಗಳಲ್ಲಿ ತರಿ ವ್ಯವಸಾಯದ ರೈತರು ಕೊಡುವ ಕಂದಾಯದಲ್ಲಿ ರೂಪಾಯಿಗೆ ಹನ್ನೆರಡಾಣೆ ಯಷ್ಟನ್ನು ಮಾತ್ರ ಕೊಟ್ಟರೆ ಸಾಕೆಂದೂ ಉಳಿದ ನಾಲ್ಕಾಣೆಯನ್ನು ದೇವರ ಹೆಸರಿನಲ್ಲಿ ಧರ್ಮವಾಗಿ ಬಿಟ್ಟಿರುವುದಾಗಿಯೂ ಇದಕ್ಕೆ ವಿರೋಧವಾಗಿ ನಡೆದು ಕೊಳ್ಳುವವರು ಸೈತಾನರು ಎಂದು ಅರ್ಥ ಬರುವ ರೀತಿಯಲ್ಲಿ ಬರೆಸಿದ್ದರು. ಪರ್ಷಿಯನ್ ಭಾಷೆಯಲ್ಲಿದ್ದ ಮೂಲ ಶಾಸನವನ್ನೂ ಅವರ ಇಂಗ್ಲಿಷ್ ಮತ್ತು ಕನ್ನಡ ಭಾಷಾಂತರಗಳನ್ನೂ ಬೇರೆ ಬೇರೆ ಶಿಲೆಗಳಲ್ಲಿ ಕೆತ್ತಿಸಿ ಸರ್ಕಾರದವರೇ ಅದನ್ನು ಕೃಷ್ಣರಾಜಸಾಗರದ ಹೆಬ್ಬಾಗಿಲಿನ ಮಂಟಪದಲ್ಲಿ ಸ್ಥಾಪಿಸಿದ್ದಾರೆ. ಈ ಶಾಸನದ ಸಾವಿರಾರು ಕನ್ನಡ ಪ್ರತಿಗಳನ್ನು ನಾವು ಹಂಚಿಸಿದುದು ಸರ್ಕಾರದವರ ಕಣ್ಣು ಕೆಂಪಾಗುವಂತೆ ಮಾಡಿತು. ದಿವಾನರು ಬಂದು ಏನು ಮಾತಾಡಲು ಸಾಧ್ಯವಾಗಲಿಲ್ಲ. ಜನರ ಗುಂಪಿನಲ್ಲಿ ಯಾರೂ ಯಾವ ಮಾತನ್ನೂ ಗಮನಿಸುವಂತಿರಲಿಲ್ಲ. ಸ್ವಲ್ಪ ಹೊತ್ತು ಟಿ. ಬಿ. ಯಲ್ಲಿದ್ದು ದಿವಾನರು ಮೈಸೂರಿಗೆ ಹೊರಟು ಹೋದರು. ಸರ್ಕಾರದ ಬಾಲ ಬಡುಕರು ಕೆಲವರನ್ನು ಗುಟ್ಟಾಗಿ ಸೇರಿಸಿ, ಸರ್ಕಾರದ ಹುಕ್ಕುಂ ಕಾರ್ಯಗತಮಾಡಲು ಸಾಧ್ಯವೆಂದೂ, ಅದರಲ್ಲಿ ಸೂಚಿಸಿರುವ ಅಂಶಗಳು ರೈತರ ಹಿತಕ್ಕೆ ಅನುಕೂಲವಾಗಿವೆಯೆಂದು ಹೇಳಿಸಿಕೊಂಡು ಅದರ ಪ್ರಚಾರಮಾಡಿ ಇರ್ವಿನ್ ನಾಲಾ ರೈತರ ಸಂಘದವರು ಕೇವಲ ಚಳವಳಿಗಾರರೆಂದೂ ಅವರ ವಿಚಾರದಲ್ಲಿ ರೈತರಿಗೆ ಅಭಿಮಾನವಿಲ್ಲವೆಂದೂ ಜನತೆಯಲ್ಲಿ ಸುದ್ದಿ ಹರಡುವಂತೆ ಮಾಡಿದ ಸರ್ಕಾರದ ಹುನ್ನಾರು ಫಲಕಾರಿಯಾಗಲಿಲ್ಲ,

ನಾವು ನಿಷೇಧಾಜ್ಞೆಯನ್ನು ಉಲ್ಲಂಘಿಸಿದೆವೆಂದು ನನ್ನನ್ನೂ ಸೇರಿಸಿ ಹತ್ತು ಹದಿನೈದು ಮಂದಿ ರೈತರ ಮೇಲೆ ಕ್ರಿಮಿನಲ್ ಕೇಸ್ ಒಂದನ್ನು ದಾಖಲು ಮಾಡಿದರು. ಮತ್ತು ಸನ್ನಡತೆಯ ಬಗ್ಗೆ ಜಾಮೀನು ಕೊಡಬೇಕೆಂದು ಇನ್ನೂ ಹೆಚ್ಚು ಮಂದಿ ರೈತರು ಮತ್ತು ನನ್ನ ಮೇಲೆ ಇನ್ನೊಂದು ಮೊಖದ್ದಮೆಯನ್ನು ಹೂಡಿದರು. ಬೆಂಗಳೂರು ಗಣಪತಿ ಗಲಭೆಯಲ್ಲಿ ಅನುಸರಿಸಿದ ನೀತಿಯನ್ನೇ ಸರ್ಕಾರದವರು ಮಂಡ್ಯದಲ್ಲೂ ಅನುಸರಿಸಿದರು.

ಇರ್ವಿನ್ ನಾಲ್ಲಾ ರೈತರ ಸಂಘದವರನ್ನು ಬಗ್ಗುಬಡಿಯಲು ಸರ್ಕಾರದವರು ಬಹುಮುಖ ಪ್ರಯತ್ನ ನಡೆಸಿದರು. ಕೃಷ್ಣರಾಜಸಾಗರದಿಂದ ಹೊರಡುವ ದೊಡ್ಡ ಹಾಗೂ ಸಣ್ಣ ನಾಲೆಗಳಲ್ಲಿ ನೀರು ಯಥೇಚ್ಛವಾಗಿ ಹರಿಯುತ್ತಿತ್ತು. ಆದರೆ ರೈತರು ಮಾತ್ರ ಆ ನೀರನ್ನು ಸಾಗುವಳಿಗೆ ಉಪಯೋಗಿಸಿಕೊಳ್ಳಲು ಒಪ್ಪಲಿಲ್ಲ. ಸರ್ಕಾರದ

ಅಧಿಕಾರಿಗಳು ರೈತರನ್ನು ಒತ್ತಾಯಪಡಿಸಿದಾಗ, ಅನೇಕ ಮಂದಿ ರೈತರಿಗೆ ಏನು ಮಾಡಬೇಕೆಂಬುದು ಗೊತ್ತಾಗಲಿಲ್ಲ. ಅವರು ರೈತ ಸಂಘದವರ ಸಲಹೆ ಕೇಳಿದರು. "ಕೃಷ್ಣರಾಜಸಾಗರ ಕಟ್ಟಿಸಿ ಸಾಗುವಳಿಗೆ ನೀರು ಒದಗಿಸಿಕೊಡಬೇಕೆಂದು ಸರ್ಕಾರದವರನ್ನು ರೈತರು ಕೇಳಿರಲಿಲ್ಲ. ಆ ನೀರನ್ನು ಸಾಗುವಳಿಗೆ ಉಪಯೋಗಿಸಿಕೊಳ್ಳುವರು ಇಂತಿಷ್ಟೇ ಕಂದಾಯ ಕಾಂಟ್ರಿಬ್ಯೂಷನ್ ಕೊಡಬೇಕೆಂದು ರೈತರಿಂದ ಸರ್ಕಾರದವರು ಒಪ್ಪಿಗೆ ಪತ್ರ ಪಡೆಯಲಿಲ್ಲ. ಈ ನಾಲೆ ಆಶ್ರಯದಲ್ಲಿ ಸರ್ಕಾರದವರು ನಿರ್ಧರಿಸುವ ವ್ಯವಸಾಯ ಕ್ರಮವನ್ನು ಅನುಸರಿಸುತ್ತೇವೆಂದು ರೈತರು ಒಪ್ಪಿರಲಿಲ್ಲ. ಆದುದರಿಂದ ರೈತರನ್ನು ಕಷ್ಟನಷ್ಟಗಳಿಗೆ ಗುರಿಮಾಡುವವರು ಏಕಪಕ್ಷೀಯವಾಗಿ ನಿರ್ಧರಿಸಿಕೊಂಡು ರೈತರ ಮೇಲೆ ಹೇರುವುದು ಧರ್ಮವಲ್ಲ. ಸರ್ಕಾರದವರು ಉತ್ಪತ್ತಿ ಮಾಡುತ್ತಿರುವ ವಿದ್ಯುಚ್ಛಕ್ತಿಯನ್ನು ಕೊಳ್ಳಬೇಕೆಂದು ಕಡ್ಡಾಯ ಇಲ್ಲದಿರುವ ಹಾಗೆಯೇ, ಏಕಪಕ್ಷೀಯವಾಗಿ ಸರ್ಕಾರದವರು ನಿರ್ಮಿಸುತ್ತಿರುವ ನಾಲೆ ನೀರನ್ನು ರೈತರು ಉಪಯೋಗಿಸಿಕೊಳ್ಳಬೇಕೆಂಬ ನಿರ್ಬಂಧ ಹೇರಲಾಗದು. ರೈತರು ಕೇಳಿರುವ ರಿಯಾಯಿತಿಗಳನ್ನು ಸರ್ಕಾರದವರು ನಡೆಸಿಕೊಡುವವರೆಗೆ ರೈತರು ನಾಲಾ ನೀರನ್ನು ಉಪಯೋಗಿಸಿಕೊಳ್ಳಬಾರದು" ಎಂದು ರೈತಸಂಘದವರು ನಿರ್ಣಯವೊಂದನ್ನು ಅಂಗೀಕರಿಸಿ ಪ್ರಕಟಿಸಿದರು. ಆದುದರಿಂದ ನಾಲೆಗಳಲ್ಲಿ ನೀರು ಕೆಲವು ತಿಂಗಳ ಕಾಲ ನಿರರ್ಥಕವಾಗಿ ಹರಿಯುತ್ತಿತ್ತು.

ರೈತರನ್ನು ಒಪ್ಪಿಸುವುದಕ್ಕಾಗಿ ಸರ್ಕಾರದವರು ನಾನಾ ಮಾರ್ಗಗಳನ್ನು ಅನುಸರಿಸಿದರು. ಅವುಗಳಲ್ಲಿ ಒಂದು ನನ್ನನ್ನು ತಮ್ಮ ಕೈವಶ ಮಾಡಿಕೊಳ್ಳುವುದು. ಆಗ ಮಂಡ್ಯ ತಾಲ್ಲೂಕು ಕೊಡಿಯಾಲ ಬಳಿಯಲ್ಲಿ ಕ್ಯಾಂಪ್ ಮಾಡಿದ್ದ ಅಸಿಸ್ಟೆಂಟ್ ಇಂಜಿನಿಯರೊಬ್ಬರನ್ನು ನಾನು ಬೆಂಗಳೂರು ಒಕ್ಕಲಿಗರ ಹಾಸ್ಟೆಲ್‌ನಲ್ಲಿದ್ದಾಗಿನಿಂದಲೂ (ಇತ್ತೀಚೆಗವರು ದೈವಾಧೀನರಾದರು) ಬಲ್ಲೆ. ಅವರು ಆಗಾಗ್ಗೆ ಮಂಡ್ಯ ಮದ್ದೂರುಗಳಿಗೆ ತಮ್ಮ ಕೆಲಸಕ್ಕಾಗಿ ಬರುತ್ತಿದ್ದರು. ಒಂದು ದಿನ ಅವರು ನನ್ನನ್ನು ಕುರಿತು "ಎಷ್ಟೋಸಾರಿ ಮಂಡ್ಯಕ್ಕೆ ಬರುತ್ತೀರಿ. ನಾನಿರುವ ಕ್ಯಾಂಪಿಗೂ ಬನ್ನಿ, ಸಂತೋಷವಾಗಿ ಕಾಲ ಕಳೆಯೋಣ" ಎಂದರು. ನಾನು ಒಪ್ಪಿಕೊಂಡು ಹೋದೆ. ಅವರ ಮನೆಯಲ್ಲಿ ಊಟ ಮಾಡಿದೆ. ಆಮೇಲೆ ಆ ಮಾತು ಈ ಮಾತು ಆಡುತ್ತಾ ಇರ್ವಿನ್‌ನಾಲಾ ರೈತರ ಚಳುವಳಿ ಮಾತು ಬಂತು. ಅವರು ನನ್ನನ್ನು ಕುರಿತು, "ಈ ಚಳುವಳಿಯಲ್ಲಿ ನೀವು ನಿಮ್ಮ ಕೈಲಾದಷ್ಟು ಸೇವೆಯನ್ನು ರೈತರಿಗೆ ಸಲ್ಲಿಸಿದ್ದೀರಿ. ಇದಕ್ಕಿಂತ ಹೆಚ್ಚೇನು ತಾನೆ ಮಾಡುವುದಕ್ಕೆ ಸಾಧ್ಯ ? ಇನ್ನು ಮೇಲೆ ನೀವು ಇದರಿಂದ ದೂರ ಇದ್ದುಬಿಡಿ, ಸರ್ಕಾರದಿಂದ ನಿಮಗೇನು ಸಹಾಯ ಬೇಕಾದರೂ ಮಾಡಿಸಿಕೊಡುತ್ತೇನೆ. ನಾಲಾ ಬಯಲಿನಲ್ಲಿ ನೀವು ಕೇಳುವ ಕಡೆ ಮೂರು ಎಕರೆ ನೀರಾವರಿ ಸಾಗುವಳಿಗೆ ಲಾಯಕ್ಕಾದ ಜಮೀನು ಕೊಡಿಸುತ್ತೇನೆ"ಎಂದು ಸ್ಪಷ್ಟವಾಗಿಯೇ ಹೇಳಿದರು. ನನ್ನ ಸ್ವಭಾವವೆಂತಹದೆಂಬುದನ್ನು ಅರಿತಿದ್ದ ಅವರು ಈ ರೀತಿ ಸ್ವಾರ್ಥ ಸಾಧಿಸಿಕೊಳ್ಳಬೇಕೆಂದು ನನ್ನನ್ನು ಪ್ರೇರೇಪಿಸುತ್ತಾ

ರೆಂದು ನಾನು ತಿಳಿದಿರಲಿಲ್ಲ. ಆದ್ದರಿಂದ ಅವರ ವಿಚಾರದಲ್ಲಿ ಸ್ವಲ್ಪ ಅಸಮಾಧಾನವೇ ಆಯಿತು. "ಹಾಗೆ ಜಮೀನು ಮತ್ತೊಂದು ಸಂಪಾದಿಸಿಕೊಳ್ಳುವುದಕ್ಕಾಗಿ ನಾನು ಈ ಚಳುವಳಿಯಲ್ಲಿ ಭಾಗವಹಿಸಿರಲಿಲ್ಲ. ರೈತರು ನನ್ನ ಕುಲಬಾಂಧವರು, ಅವರಿಗೆ ಒದಗ ಬಹುದಾದ ಕಷ್ಟನಷ್ಟಗಳನ್ನು ತಪ್ಪಿಸಲು ಹೋರಾಡಬೇಕೆಂಬುದೇ ನನ್ನ ಆಶಯ. ನನ್ನನ್ನು ಚನ್ನಾಗಿ ಬಲ್ಲವರಾಗಿ ನೀವು ಈ ರೀತಿ ಹೇಳುವುದು ನನಗೆ ವ್ಯಸನವನ್ನುಂಟು ಮಾಡಿದೆ." ಎಂದು ಹೇಳಿ ಅವರಿಂದ ಬೀಳ್ಕೊಂಡೆ. ನಾನು ಮಂತ್ರಿಯಾಗಿದ್ದಾಗ ಈ ಇಂಜಿನಿಯರ್ ಸಹಬಬ್ಬರು ಚೀಫ್ ಇಂಜಿನಿಯರ್ ಆಗಿದ್ದರು. ನಾನವರ ಮಾತಿ ನಂತೆ ನಡೆದುಕೊಂಡಿದ್ದರೆ ನಾನೊಬ್ಬ ಲಂಚಕೋರ ಮನುಷ್ಯ ಎಂದು ಅವರು ನನ್ನ ವಿಚಾರದಲ್ಲಿ ಸಣ್ಣ ಅಭಿಪ್ರಾಯ ಹೊಂದಿರುತ್ತಿದ್ದರು.

ಈ ಅಸಿಸ್ಟೆಂಟ್ ಇಂಜಿನಿಯರ್ ನನಗೆ ಜಮೀನು ಕೊಡಿಸುವುದಾಗಿ ಹೇಳುವುದಕ್ಕೆ ಎಷ್ಟೋ ತಿಂಗಳು ಮೊದಲು ಎರಡು–ಮೂರು ಗ್ರಾಮಗಳ ರೈತರು ನಾನು ಸದಾ ಅವರ ಮಧ್ಯೆ ಉಳಿದು ಕೊಂಡಿರಬೇಕಾದರೆ ನನಗೆ ಜಮೀನು ಮಾಡಿಕೊಡಬೇಕೆಂದು ಭಾವಿಸಿದ್ದ ರೆಂದು ಕಾಣುತ್ತೆ. ನನ್ನ ಸಹಪಾಠಿಗಳಾಗಿ ಕೆಲಸ ಮಾಡುತ್ತಿದ್ದ ಹೊನ್ನಯ್ಯನವರು ತಮ್ಮ ಗ್ರಾಮಕ್ಕೆ (ಇಂಡುವಾಳು) ಹತ್ತಿರದಲ್ಲಿದ್ದ ಬೆಂಗಳೂರು ಮೈಸೂರು ರಸ್ತೆ ಪಕ್ಕದಲ್ಲಿ ತಮಗಿದ್ದ ಮೂವತ್ತು ಎಕರೆ ಜಮೀನನ್ನು ನನ್ನ ಹೆಸರಿಗೆ ಬರೆದುಕೊಡುವು ದಾಗಿ ಮುಂದೆ ಬಂದರು. ತಾವು ಕೊಂಡುಕೊಂಡಿರುವ ಸುಮಾರು ನೂರು ಎಕರೆ ಜಮೀನನ್ನು ನನಗೆ ಬರೆದುಕೊಡುವುದಾಗಿ ಒಳಗೆರೆಹಳ್ಳಿ ರೈತರು ತಿಳಿಸಿದರು. ಆದರೆ ಇಲ್ಲಿ ಜಮೀನು ಸಂಪಾದನೆ ಮಾಡಿಕೊಳ್ಳುವ ಉದ್ದೇಶ ನನಗಿರಲಿಲ್ಲ. ರೈತರೂ ಇದನ್ನು ತಿಳಿದಿದ್ದರು. ಆದರೂ ನನಗಿಷ್ಟು ಜಮೀನು ಮಾಡಿಕೊಂಡುವುದರಿಂದ ಆದರ ಸಾಗು ವಳಿ ಮಾಡಿಸಿಕೊಂಡು ನಾನೀ ಜಿಲ್ಲೆಯಲ್ಲೇ ಉಳಿದುಕೊಳ್ಳುವ ಅವಕಾಶ ಕಲ್ಪಿಸಿಕೊಡ ಬೇಕೆಂಬುದು ಅವರ ಉದ್ದೇಶವಾಗಿತ್ತು. ಈ ತಮ್ಮ ಉದ್ದೇಶವನ್ನು ಅವರು ಸ್ಪಷ್ಟಪಡಿಸಿದರು, ಏನೇ ಆದರೂ ನಾನು ಆ ರೀತಿ ಬಿಟ್ಟಿ ಜಮೀನು ಮಾಡಿಕೊಳ್ಳಲು ಒಪ್ಪಲಿಲ್ಲ.

ನನ್ನನ್ನು ತಮ್ಮ ವಶಕ್ಕೆ ಒಳಪಡಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ತಿಳಿದಾಗ ಸರ್ಕಾರದವರು ಬೇರೆ ಒಂದು ನೇರ ಕಾರ್ಯಕ್ರಮ ಕೈಗೊಂಡರು. ಸರ್ಕಾರದವರು ರೈತರ ಕೋರಿಕೆಗಳನ್ನು ಮಂಜೂರು ಮಾಡುವವರೆಗೆ ನಾಲಾ ನೀರನ್ನು ಉಪಯೋಗಿಸಿ ಕೊಳ್ಳಬಾರದೆಂದು ರೈತ ಸಂಘದವರು ನಿರ್ಣಯವೊಂದನ್ನು ಅಂಗೀಕರಿಸಿ ಪ್ರಕಟಿಸಿದ್ದ ರಷ್ಟೆ. ಅದರಂತೆ ರೈತರು ನಡೆದುಕೊಂಡರು. ಸರ್ಕಾರದಿಂದ ಮತ್ತು ಸಹಕಾರ ಸಂಘ ಗಳಿಂದ ಸಾಲ ಪಡೆದು ಅನೇಕ ವರ್ಷಗಳಾದರೂ ಸಾಲ ತೀರಿಸದ್ದಿದವರು, ರೈತರಿಂದ ವಸೂಲಾದ ಕಂದಾಯ ಕೌಳಿಗೆಗಳನ್ನು ಕಿಸ್ತುವಾರು ಸರ್ಕಾರಕ್ಕೆ ಕಟ್ಟದೆ ದಸ್ತು ಮಾಡಿರುವ ಪಟೇಲರು ಮತ್ತು ಶ್ಯಾನುಭೋಗರು, ವ್ಯವಸಾಯಾಭಿವೃದ್ಧಿಗೆ ಸಾಲ

ಕೊಡಬೇಕೆಂದು ಅರ್ಜಿ ಹಾಕಿಕೊಂಡಿದ್ದವರು ಈ ಬಗೆಯ ಜನರನ್ನು ಸ್ಥಳೀಯ ಅಧಿಕಾರಿಗಳು ಕರೆಸಿಕೊಂಡು ಅವರು ನಾಲೆ ನೀರು ಉಪಯೋಗಿಸಿಕೊಳ್ಳುವುದಾದರೆ ಅವರ ಮೇಲೆ ಯಾವ ಕ್ರಮವನ್ನೂ ಜರುಗಿಸುವುದಿಲ್ಲವೆಂದೂ ಅದಕ್ಕೆ ಬದಲಾಗಿ ಸರ್ಕಾರದವರೇ ವ್ಯವಸಾಯದ ಇಲಾಖೆಯ ಮೂಲಕ ಎಲ್ಲಾ ಸಹಾಯಗಳನ್ನೂ ಅಂಥವರಿಗೆ ಒದಗಿಸಿಕೊಟ್ಟು ಅವರವರ ಜಮೀನುಗಳಲ್ಲಿ ಸಾಗು ಮಾಡಿಸಿ ಅದರಿಂದ ಬರುವ ಸಂಪಾದನೆಯಲ್ಲಿ ಕಂತುವಾರಾಗಿ ಸರ್ಕಾರದ ಸಾಲ ವಜಾಮಾಡಿಕೊಂಡು ಉಳಿದುದನ್ನು ಆಯಾ ರೈತರಿಗೆ ಕೊಡುವುದೇ ಸರ್ಕಾರದ ಅಭಿಪ್ರಾಯವೆಂದೂ ಭರವಸೆ ಕೊಟ್ಟರು. ನಾಲೆ ನೀರು ಉಪಯೋಗಿಸಿಕೊಳ್ಳಲು ಒಪ್ಪುವುದರಿಂದ ತಾವು ಜೈಲಿಗೆ ಹೋಗುವುದು ತಪ್ಪಿ ಸರ್ಕಾರದ ಹಿಡಿತದಿಂದ ಪಾರಾಗುವುದು ಮಾತ್ರವಲ್ಲದೆ ಹೆಚ್ಚು ಖರ್ಚಿಲ್ಲದೆ ಸರ್ಕಾರದ ಸಹಾಯದಿಂದ ಬೇಸಾಯ ಮಾಡಿ ಹಣಗಳಿಸುವುದಕ್ಕೆ ಇದಕ್ಕಿಂತಲೂ ಒಳ್ಳೆ ಅವಕಾಶ ಸಿಕ್ಕುವುದಿಲ್ಲವೆಂದು ಅಂತಹ ರೈತರು ಭಾವಿಸುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಹಾಗೆ ನೋಡಿದರೆ ಸಾಗುವಳಿಗೆ ನೀರಿಲ್ಲದೆ ಒಣಪ್ರದೇಶದಲ್ಲಿ ಅರ್ಧಂಬರ್ಧ ಕುಷ್ಕಿ ಬೆಳೆಯಿಂದ ಜೀವನ ಮಾಡುತ್ತಿದ್ದವರು ತಮ್ಮ ಜಮೀನು ಪಕ್ಕದಲ್ಲೇ ಕಾವೇರಿ ತಾಯಿ ಹರಿಯುತ್ತಿರುವಾಗ ಸುಮಾರು ಎರಡು ವರ್ಷಗಳ ಕಾಲ ನಾಲೆ ನೀರಿಗೆ ಆಶೆಪಡದಿದ್ದುದೇ ಹೆಚ್ಚು. ಎರಡನೆಯದಾಗಿ ಅನೇಕ ರೈತಮುಖಂಡರ ಮೇಲೆ ಕೇಸುಗಳನ್ನು ಹಾಕಿಸಿದ್ದವರ ಮನೆಯವರನ್ನೂ ಬಂಧುಗಳನ್ನೂ ಅಧಿಕಾರಿಗಳು ಸಂಧಿಸಿ, ಮೊಖದ್ದಮೆಗಳಿಗೆ ಒಳಪಟ್ಟಿರುವವರು ನೀರು ತೆಗೆದುಕೊಳ್ಳುತ್ತೇವೆಂದು ಮುಚ್ಚಳಿಕೆ ಬರೆದುಕೊಡುವುದಾದರೆ ಅಂತಹವರ ಮೇಲಿನ ಮೊಖದ್ದಮೆ ಗಳನ್ನು ಸರ್ಕಾರದವರು ಹಿಂದೆಗೆದು ಕೊಳ್ಳುವರೆಂಬ ಆಶೋತ್ತರಗಳನ್ನು ತೋರಿಸಿದರು. ಅವರು ಆ ರೀತಿ ಮಾಡದಿದ್ದರೆ ರೈತರಿಗೆ ಜೈಲು ಶಿಕ್ಷೆಯಾಗುವುದು ಖಂಡಿತವೆಂದೂ ಹೆದರಿಸಿದರು. ಆ ಕಾಲದಲ್ಲಿ ಜೈಲಿಗೆ ಹೋಗುವುದು ಅವಮಾನಕರವಾದ ಸಂಗತಿಯಾಗಿತ್ತು. ಖೂನಿ. ದರೋಡೆ, ಕಳ್ಳತನ ಮಾಡಿದವರಿಗೆ ಮಾತ್ರ ಜೈಲು ಶಿಕ್ಷೆಯಾಗಿತ್ತು. ಕೆಲವರು ಸರ್ಕಾರದ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದವರು, "ಏನಮ್ಮ ಕದೀಲಿಲ್ಲ, ಕಳ್ಳತನಮಾಡಲಿಲ್ಲ, ಖೂನಿ ದರೋಡೆ ಮಾಡಲಿಲ್ಲ ನಿಮ್ಮ ಗಂಡಂದಿರನ್ನು ವೀರಣ್ಣಗೌಡ ಜೈಲಿಗೆ ಹೋಗುವಂತೆ ಮಾಡುತ್ತಿದ್ದಾನೆ" ಎಂದು ನಾಟಕೀಯವಾಗಿ ಹೆಂಗಸರ ಮನ ಕರಗುವಂತೆ ಹೇಳಿ ರೈತ ಚಳುವಳಿಯನ್ನು ನಿಲ್ಲಿಸಲು ಯತ್ನಿಸಿದ್ದುಂಟು. ಯಾವ ಕೆಟ್ಟ ಕೆಲಸವನ್ನೂ ಮಾಡದೆ ಜೈಲಿಗೆ ಹೋಗುವುದೆಂದರೆ ಅದನ್ನು ಯಾರೂ ಒಪ್ಪರು. ಈರೀತಿ ಭಾವಿಸಿದ ಅನೇಕ ರೈತರು ನಾಲಾ ನೀರು ಉಪಯೋಗಿಸಿಕೊಂಡು ಸಾಗುವಳಿ ಮಾಡಲು ಒಪ್ಪಿ ಮುಚ್ಚಳಿಕೆಗಳನ್ನು ಬರೆದುಕೊಟ್ಟರು. ಅಂತಹವರ ಜಮೀನುಗಳಲ್ಲಿ ವ್ಯವಸಾಯದ ಇಲಾಖೆಯವರು ಸರ್ಕಾರದಿಂದ ಕಬ್ಬಿಣದ ನೇಗಿಲು ಮುಂತಾದ ಆಧುನಿಕ ವ್ಯವಸಾಯೋಪಕರಣಗಳನ್ನೂ, ಉತ್ತಮವಾದ ಬೀಜ, ಗೊಬ್ಬರಗಳನ್ನೂ ಒದಗಿಸಿಕೊಟ್ಟುದಲ್ಲದೆ, ತಾವೇ ಸ್ವತಃ ನಿಂತು

ವ್ಯವಸಾಯ ಮಾಡಿಸಿಕೊಟ್ಟರು. ಇಂತಹ ಜಮೀನುಗಳಲ್ಲಿ ಕಡಲೆಕಾಯಿ, ಭತ್ತ ಮುಂತಾದ ಬೆಳೆಗಳು ಹುಲುಸಾಗಿ ಬೆಳೆದುದರಿಂದ ಅವು ಜನತೆಯ ಕಣ್ಮನಗಳನ್ನು ಆಕರ್ಷಿಸುತ್ತಿದ್ದುವು. ಆ ಬೆಳೆಗಳನ್ನು ಕಟಾವು ಮಾಡಿಸಿ ಸರ್ಕಾರಕ್ಕೆ ಬರಬೇಕಾಗಿದ್ದ ಸಾಲಕ್ಕಾಗಿ ಸ್ವಲ್ಪ ಭಾಗ ಮಾತ್ರ ಹಿಡಿದುಕೊಂಡು ಉಳಿದ ಹಣವನ್ನು ಆಯಾ ರೈತರಿಗೆ ಕೊಡುತ್ತಿದ್ದರು. ಇದು ಇತರ ರೈತರ ಬಾಯಲ್ಲಿ ನೀರೂರುವಂತೆಯೂ ಮಾಡಿತು. ಅನೇಕ ರೈತರು ವೀರಣ್ಣಗೌಡರ ಮಾತು ಕೇಳದಿದ್ದರೆ ನಮಗೂ ಈ ರೀತಿ ಹಣ ಸಂಪಾದನೆಯಾಗುತ್ತಿತ್ತು ಎಂದು ಬಹಿರಂಗವಾಗಿ ಗೊಣಗಾಡಿಕೊಳ್ಳುವುದಕ್ಕೂ ಪ್ರಾರಂಭಿಸಿದರು.

ಅನೇಕ ರೈತರ ಮುಖಂಡರ ಮೇಲೆ ಹೂಡಿದ್ದ ಮೊಕದ್ದಮೆಗಳ ವಿಚಾರಣೆ ನಡೆಯುತ್ತಲೇ ಇತ್ತು. ಸನ್ನಡತೆಗಾಗಿ (ನೇಕಚಾಲ್ ಜಾಮೀನು) ಹಾಕಿದ್ದ ಮೊಕದ್ದಮೆ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ (ಸಬ್ ಡಿವಿಜನ್ ಆಫೀಸರು) ಕೋರ್ಟಿನಲ್ಲೂ ನಿಷೇದಾಜ್ಞೆ ಉಲ್ಲಂಘನೆ ಕೇಸು ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲೂ ನಡೆಯುತ್ತಿದ್ದವು. ಅಲ್ಲಿ ವಿಚಾರಣೆ ನಡೆಸುತ್ತಿದ್ದ ಮ್ಯಾಜಿಸ್ಟ್ರೇಟರು ನನಗೆ ಗೊತ್ತಿದ್ದವರು. ಅಷ್ಟೇ ಅಲ್ಲ, ಬೆಂಗಳೂರು ಗಣಪತಿ ಗಲಭೆಯಲ್ಲಿ ನನ್ನ ಪಾತ್ರವೇನೆಂಬುದನ್ನು ತಿಳಿದಿದ್ದು ಆ ಬಗ್ಗೆ ನನ್ನನ್ನು ಒಂದು ಸಾರಿ ಅಭಿನಂದಿಸಿದ್ದವರು. ಆದರೂ ವಿಚಾರಣೆ ಕಾಲದಲ್ಲಿ ಅವರಿಗೆ ನನ್ನ ಪರಿಚಯವೇ ಇಲ್ಲದವರಂತೆ ನಡೆದುಕೊಳ್ಳುತ್ತಿದ್ದರು. ಮತ್ತು ಕೋರ್ಟು ಮುಗಿಯುವ ಮುನ್ನ ಎಂದರೆ ಸಾಯಂಕಾಲ ಐದುಗಂಟೆಗೆ ತಮ್ಮ ಜವಾನನನ್ನು ನನ್ನಲ್ಲಿಗೆ ಕಳುಹಿಸಿ, ನಾನು ಮದ್ದೂರಿಗೆ ರೈಲಿನಲ್ಲಿ ಹೋಗಬೇಕಾಗಿಲ್ಲವೆಂದೂ ತಾವೂ ಮದ್ದೂರಿಗೆ ಬರುವುದರಿಂದ ತಮ್ಮ ಕಾರಿನಲ್ಲೇ ನನ್ನನ್ನು ಕರೆದೊಯ್ಯುವುದಾಗಿಯೂ ತಿಳಿಸುತ್ತಿದ್ದರು. ಆ ಕಾಲದಲ್ಲಿ ಮಂಡ್ಯ ಇನ್ನೂ ಜಿಲ್ಲೆಯಾಗಿರಲಿಲ್ಲ. ಮದ್ದೂರಿನಲ್ಲಿ ಟೆನ್ನಿಸ್ ಕೋರ್ಟು ಇತ್ತು. ಒಂದು 'ಕ್ಲಬ್' ಸಹ ಇತ್ತು. ಆದ್ದರಿಂದ ಮಂಡ್ಯದ ಮ್ಯಾಜಿಸ್ಟ್ರೇಟರು, ಮುನಸೀಫರು, ಆರೋಗ್ಯಕೇಂದ್ರದ ಡಾಕ್ಟರು, ಕೆಲವು ಪ್ರಮುಖ ವಕೀಲರು ಮುಂತಾದವರು ಪ್ರತಿದಿನ ಸಾಯಂಕಾಲವೂ ಮದ್ದೂರಿಗೆ ಬಂದು ಟೆನ್ನಿಸ್ ಆಟ ಮತ್ತು ಕ್ಲಬ್ಬಿನಲ್ಲಿ ಇಸ್ಪೀಟು ಆಟ ಮುಗಿಸಿಕೊಂಡು ರಾತ್ರಿ ಒಂಬತ್ತು ಗಂಟೆ ಮೇಲೆ ಮಂಡ್ಯಕ್ಕೆ ಹಿಂದಿರುಗುತ್ತಿದ್ದರು. ಮದ್ದೂರು ರೈಲ್ವೆಸ್ಟೇಷನ್‌ನಲ್ಲಿ ಬ್ರಾಂದಿ, ಬೀರ್ ವಗೈರೆ ಸಿಕ್ಕುತ್ತಿತ್ತು. ಕೇಸ್ ಇದ್ದ ದಿನ ಕೋರ್ಟ್ ಮುಗಿದ ಮೇಲೆ ಮ್ಯಾಜಿಸ್ಟ್ರೇಟರು ನನ್ನನ್ನು ತಮ್ಮ ಕಾರಿನಲ್ಲಿ ಕೂರಿಸಿಕೊಂಡು ಮದ್ದೂರಿಗೆ ಬರುತ್ತಿದ್ದರು. ಆಮೇಲೆ ಅವರಿಗೆ ಬೇರೆ ಕಡೆ ವರ್ಗವಾಯಿತು. ಮಂಡ್ಯದಿಂದ ಹೊರಡುವ ಮುನ್ನ ತಾವು ವಿಚಾರಣೆಮಾಡಿದ್ದ ಕೇಸ್‌ನಲ್ಲಿ ತೀರ್ಪು ಹೇಳಬೇಕಾಗಿತ್ತು. ಅವರು ಅದೇ ರೀತಿ ಮಾಡಿ ನನಗೆ ಐವತ್ತೈದು ರೂಪಾಯಿ ಜುಲ್ಮಾನೆ ವಿಧಿಸಿದರು. ಆದರೆ ಕೋರ್ಟು ಮುಗಿದ ಮೇಲೆ ತಮ್ಮ ಛೇಂಬರ್‌ಗೆ ಹೋಗಿ ನನಗೆ ಐವತ್ತೈದು ರೂಪಾಯಿ ಜುಲ್ಮಾನೆ ಹಾಕಿರುವುದು ನಾನು ಜಿಲ್ಲಾಕೋರ್ಟಿನಲ್ಲಿ

ಅಪೀಲು ಮಾಡಲು ಅವಕಾಶವುಂಟುಮಾಡಿಕೊಡುವ ಉದ್ದೇಶದಿಂದ ಮಾತ್ರವೆಂದೂ ಅದಕ್ಕಿಂತ ಕಡಿಮೆ ಜುಲ್ಮಾನೆ ಹಾಕಿದ್ದರೆ ಹೈಕೋರ್ಟಿಗೆ ಅಪೀಲು ಮಾಡಬೇಕಾಗುತ್ತಿತ್ತೆಂದೂ, ಜುಲ್ಮಾನೆ ಶಿಕ್ಷೆಯನ್ನು ವಿಧಿಯಿಲ್ಲದೆ ಹಾಕಬೇಕಾಯಿತೆಂದೂ ನಾನು ಅಪೀಲ ಮಾಡುವುದಾದರೆ ಖಂಡಿತ ಕೇಸುವಜಾ ಆಗುವುದೆಂದೂ, ನಾನು ಅಪೀಲು ಹಾಕಲೇ ಬೇಕೆಂದೂ ತಮ್ಮ ಗುಮಾಸ್ತರೊಬ್ಬರ ಕೈಲಿ ಹೇಳಿಕಳುಹಿಸಿ, ತಾವು ಆದಿನ ಮದ್ದೂರಿಗೆ ಬರುವುದಿಲ್ಲವೆಂದೂ ತಿಳಿಸಿದ್ದರು. ಆ ಕೇಸನ್ನು ಅಪೀಲ್‌ನಲ್ಲಿ ಮೈಸೂರು ಡಿಸ್ಟ್ರಿಕ್ಟ್ ಜಡ್ಜ್ ಆಗಿದ್ದ ನಾರಾಯಣಸ್ವಾಮಿ ನಾಯ್ಡು ಅವರು ವಜಾ ಮಾಡಿದರು.

ಸನ್ನಡತೆ (ನೇಕಜ಼ಾಲ್ ಜಾಮೀನು) ಬಗ್ಗೆ ನಡೆಯುತ್ತಿದ್ದ ಮೊಖದ್ದಮೆ ಒಬ್ಬರಾದ ಮೇಲೆ ಒಬ್ಬರಂತೆ ಇಬ್ಬರು ಎಕ್ಸ್ ಅಫಿಷಿಯೋ ಫಸ್ಟ್ ಕ್ಲಾಸ್ (ಸಬ್ ಡಿವಿಜನ್ ಆಫೀಸರು) ಮ್ಯಾಜಿಸ್ಟ್ರೇಟರ ಮುಂದೆ ನಡೆಯಿತು. ಅಮೇಲೆ ಅವರಿಗೆ ವರ್ಗವಾಗಿ ವೇದವ್ಯಾಸಚಾರ್ ಎಂಬುವರು ವಿಚಾರಣೆ ಕಾಲದಲ್ಲಿ ನಾನು ಸತ್ಯವಾಗಿ ಹೇಳುತ್ತೇನೆ ಎಂಬ ಪ್ರಮಾಣವಚನ ಸ್ವೀಕರಿಸುವಾಗ ಮ್ಯಾಜಿಸ್ಟ್ರೇಟರು "ನಿಮ್ಮ ಉದ್ಯೋಗವೇನು?" ಎಂದು ಕೇಳಿದರು. ಬಹುಶಃ ನಾನು ಯಾವ ಉದ್ಯೋಗವೂ ಇಲ್ಲದ ಜಗಳಗಂಟ ನೆಂದು ಭಾವಿಸಿ ಹಾಗೆ ಕೇಳಿರಬೇಕೆಂದು ಅವರ ಮಾತಿನಧೋರಣೆಯಿಂದ ನನ್ನಗನ್ನಿಸಿತು. "ನನ್ನ ಉದ್ಯೋಗ ಫ್ರೀಲ್ಯಾನ್ಸ್‌ಜರ್ನಲಿಸಮ್" (ಸ್ವತಂತ್ರ ಲೇಖಕ ಮತ್ತು ಬಾತ್ಮಿದಾರ) ಎಂದೆ. "ಅಂದರೆ, ನಿಮ್ಮ ಮನಸ್ಸಿಗೆ ಬಂದಂತೆ ಬರೆಯುವುದೋ?" ಎಂದು ಅಪಹಾಸ್ಯದ ಧ್ವನಿಯಲ್ಲಿ ಅವರು ಪ್ರಶ್ನಿಸಿದರು. ಅವರ ಅಜ್ಞಾನ ಹಾಗೂ ಮನೋವೃತ್ತಿಯಿಂದ ನನಗೆ ಆಶ್ಚರ್ಯ ಹಾಗೂ ಅಸಮಾಧಾನ ಉಂಟಾಯಿತು. ನಾನು ಸ್ವಲ್ಪ ಗಡುಸಾಗಿಯೇ "ನೀವು ಫ್ರೀಲ್ಯಾನ್ಸ್ ಜರ್ನಲಿಸಮ್ ಎಂಬ ಪದದ ಅರ್ಥ ಸರಿಯಾಗಿ ತಿಳಿದುಕೊಳ್ಳದೆ ಹಾಗನ್ನುತ್ತಿದ್ದೀರಿ. ಫ್ರೀಲ್ಯಾನ್ಸ್‌ಜರ್ನಲಿಸಮ್ ಎಂದರೆ ಮನಸ್ಸಿಗೆ ಬಂದಂತೆ ಹುಚ್ಚಾಪಟ್ಟೆ ಬರೆಯುವುದಲ್ಲ. ಯಾವ ಪತ್ರಿಕೆಗೂ ಅಂಟಿಕೊಳ್ಳದೆ ಆಗಿಂದಾಗ್ಗೆ ಲೇಖನಗಳನ್ನೋ ಬಾತ್ಮಿಗಳನ್ನೋ ಬರೆದು ಬೇರೆ ಬೇರೆ ಪತ್ರಿಕೆಗಳಿಗೆ ಕಳುಹಿಸುವುದು. ಅದಕ್ಕಾಗಿ ಗೊತ್ತಾಗಿರುವ ರುಸುಂ ಪಡೆದುಕೊಳ್ಳುವುದು. ಇದು ಆ ಪದದ ಅರ್ಥ ಇದು ನಿಮಗೆ ತಿಳಿಯದೆ ನೀವು ದುಡುಕಿ ಮಾತಾಡಿದಿರಿ" ಎಂದೆ. ಅವರು ವಿನಯವಂತರು. ನನ್ನ ಉತ್ತರದಿಂದ ಸ್ವಲ್ಪ ಪೆಚ್ಚುಮೋರೆ ಹಾಕಿಕೊಂಡರು. ಕಡೆಗೆ "ಸಾರಿ" ಎಂದು ಹೇಳಿ ವಿಚಾರಣೆ ಮುಂದುವರಿಸಿದರು. ಅವರ ಕೋರ್ಟಿನಲ್ಲಿ ಕೆಲವು ತಿಂಗಳು ಕೇಸು ನಡೆದ ಮೇಲೆ ಅದನ್ನು ಸರ್ಕಾರದವರು ಹಿಂತೆಗೆದುಕೊಂಡರು.

ಅಂತು ಇಷ್ಟರಲ್ಲಿ ಬೇರೆ ಬೇರೆ ಕಾರಣಗಳಿಂದ ಬಹುಮಂದಿ ರೈತರು ನೀರು ತೆಗೆದುಕೊಳ್ಳುವುದಕ್ಕೆ ಒಪ್ಪಿ ಮುಚ್ಚಳಿಕೆ ಬರೆದುಕೊಟ್ಟಿದ್ದರು. ಇರ್ವಿನ್‌ನಾಲಾ ರೈತರ ಸಂಘದ ಚಟುವಟಿಕೆಗಳು ಕೊನೆಗೊಂಡವು.

ಎಚ್. ಕೆ. ವೀರಣ್ಣಗೌಡ

[ದಿವಂಗತ ಎಚ್. ಕೆ. ವೀರಣ್ಣಗೌಡರ ಬದುಕು-ಮೆಲಕು ಆತ್ಮ ಕಥನದಿಂದ ಈ ಭಾಗವನ್ನು ತೆಗೆದುಕೊಳ್ಳಲಾಗಿದೆ]

ಶಿವಪುರದ ರಾಷ್ಟ್ರಕೂಟ

ಕಾಂಗ್ರೆಸ್ ಪ್ರಚಾರ ಸಮಿತಿ ಕಾರ್ಯ 1937ನೇ ಡಿಸೆಂಬರ್ ಕಡೆಯ ವಾರದಲ್ಲಿ ಮುಗಿಯಿತು. ಮುಂದೇನು ಮಾಡಬೇಕೆಂಬ ಬಗ್ಗೆ ಬೆಂಗಳೂರಲ್ಲೂ ಮೈಸೂರಲ್ಲೂ ಕಾಂಗ್ರೆಸ್ ಮುಖಂಡರು ಅಲ್ಲಲ್ಲೇ ಸರಿ ಮಾತುಕತೆ ನಡೆಸುತ್ತಿದ್ದರು. ಕಾಂಗ್ರೆಸ್ ಕಚೇರಿ ಬೆಂಗಳೂರು, ಕೆಂಗೇರಿ ಗೇಟ್ ಪೋಲೀಸ್ ಸ್ಟೇಷನ್ ಎದುರಿಗಿದ್ದ ಮಹಡಿಯಲ್ಲಿ ಒಂದು ಸಣ್ಣ ಕೊಠಡಿಯಲ್ಲಿತ್ತು. ಒಂದು ಜಮಖಾನ, ಒಂದು ಜಾಯಿಕಾಯಿ ಹಲಗೆ ಪೆಟ್ಟಿಗೆ, ಒಂದು ಹಳೆ ಟೈಪ್‌ರೈಟರು, ಕೆಲವು ರಿಜಿಸ್ಟರ್‌ಗಳು, ಪುಸ್ತಕಗಳು, ಕಾಗದಪತ್ರಗಳು--ಇವು ಕಾಂಗ್ರೆಸ್ ಆಫೀಸಿನಲ್ಲಿದ್ದ ಆಸ್ತಿ. ಟೈಪ್‌ರೈಟರನ್ನು ಕಾರ್ಯದರ್ಶಿ ಎ. ಎಸ್. ನಾರಾಯಣರಾಯರು ಯಾರಿಂದಲೋ ಬೇಡಿ ತಂದಿದ್ದರು. ಎಸ್. ಎನ್. ಗುಪ್ತ (ಅನಂತರ ಕಟಕ ಪ್ರಕಟನಾಲಯದ ಮಾಲೀಕರು) ಎಂಬ ಯುವಕ ಸಂಬಳವಿಲ್ಲದ ಕಾಂಗ್ರೆಸ್ ಆಫೀಸ್ ಸ್ವಯಂ ಸೇವಕ.

ಆ ವರ್ಷದ ಫೆಬ್ರವರಿ ಅಂತ್ಯದಲ್ಲಿ ಮೈಸೂರು ನಗರದಲ್ಲಿ ಸೇರಿದ್ದ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ಏಪ್ರಿಲ್ ಮಧ್ಯಭಾಗದಲ್ಲಿ ಒಂದು ರಾಷ್ಟ್ರಕೂಟವನ್ನು ನಡೆಸಬೇಕೆಂದು ತೀರ್ಮಾನವಾಯಿತು. ಆ ಸಮಾರಂಭವನ್ನು ಎಲ್ಲಿ ನಡೆಸಬೇಕೆಂಬ ಬಗ್ಗೆ ವಿಪುಲ ಚರ್ಚೆಯಾಯಿತು. ಪಶ್ಚಿಮವಾಹಿನಿ, ಶ್ರೀರಂಗಪಟ್ಟಣ, ಅಥವಾ ನಂಜನಗೂಡಿನಲ್ಲಿ ಸಭೆಸೇರಿಸಬೇಕೆಂದು ಗೊತ್ತಾಯಿತು. ಆದರೆ ಇದಕ್ಕೆ ಮುಂದಾಗಿ ನಿಂತು ಕೆಲಸ ಮಾಡುವವರು ಯಾರು ? ಶ್ರೀರಂಗಪಟ್ಟಣ ಅಥವಾ ಪಶ್ಚಿಮವಾಹಿನಿಯಲ್ಲಿ ಏರ್ಪಡಿಸುವುದಾದರೆ ಆಗ ಅಡ್ವೋಕೇಟ್ ವೃತ್ತಿ ಅವಲಂಬಿಸಿದ್ದ ಎ. ಜಿ. ಬಂಡಿಗೌಡರು ನಿಂತು ಆ ಕೆಲಸ ಮಾಡಬೇಕು. ಆದರೆ ಅವರು ಒಂದೂವರೆ ತಿಂಗಳು ತಮ್ಮ ವೃತ್ತಿಯನ್ನು ಬಿಟ್ಟು ಬೇರೆ ಕೆಲಸ ಕೈಗೊಳ್ಳುವುದು ಸಾಧ್ಯವಿರಲಿಲ್ಲ. ನಂಜನಗೂಡಿನಲ್ಲಿ ಕೆ. ವಿಶ್ವೇಶ್ವರಗೌಡರು ಮುಂದೆ ಬರಬೇಕು. ಅವರು ಆ ಕೆಲಸ ತಮ್ಮಿಂದ ಸಾಧ್ಯವಿಲ್ಲವೆಂದುಬಿಟ್ಟರು. ಈ ಮೂರು ಸ್ಥಳಗಳಲ್ಲಿ ಯಾವುದಾದರೊಂದು ಸ್ಥಳದಲ್ಲಿ ನಡೆಸಬೇಕೆಂಬುದಕ್ಕೆ ಕಾರಣ ಆ ಪ್ರತಿಯೊಂದು ಸ್ಥಳದಲ್ಲೂ ನೀರು ಮತ್ತು ಛತ್ರಗಳ ಸೌಕರ್ಯವಿದ್ದುದು. ಈಗ ಮೂರು ಸ್ಥಳಗಳಲ್ಲೂ ಸಭೆ ನಡೆಸಲು ಸಾಧ್ಯವಾಗಲಿಲ್ಲ. ಆದುದರಿಂದ ಮದ್ದೂರಿನಲ್ಲಿ ನಡೆಸಲು ಅವಕಾಶ ಕೊಟ್ಟರೆ ನಾನು ಆ ಕಾರ್ಯವನ್ನು ಕೈಗೊಳ್ಳುವೆನೆಂದು ಹೇಳಿದೆ. ಮದ್ದೂರು, ಬೆಂಗಳೂರು ಮೈಸೂರು

ಪಟ್ಟಣಗಳಿಗೆ ಸ್ವಲ್ಪ ಹೆಚ್ಚು ಕಡಿಮೆ ಮಧ್ಯಮಾರ್ಗದಲ್ಲಿರುವುದರಿಂದಲೂ, ಪಕ್ಕದಲ್ಲೇ ಶಿಂಷಾ ನದಿ ಹರಿಯುತ್ತಿರುವುದರಿಂದಲೂ ಮದ್ದೂರಲ್ಲೇ ರಾಷ್ಟ್ರಕೂಟ ಸೇರಿಸುವುದು ಸರಿಯೆಂದು ತೀರ್ಮಾನವಾಯಿತು.

ಮದ್ದೂರಲ್ಲಿ ರಾಷ್ಟ್ರಕೂಟ ನಡೆಯದಂತೆ ಮಾಡಬೇಕೆಂದು ಸರ್ಕಾರದವರು ಬಹಳ ಪ್ರಯತ್ನಮಾಡಿದರು. ಮದ್ದೂರು ತಾಲ್ಲೂಕು ಅಮಲ್ದಾರರು ನನ್ನಲ್ಲಿಗೆ ಬಂದು ನಾವು ಮದ್ದೂರಿಗೆ ಬದಲಾಗಿ ನಂಜನಗೂಡಿನಲ್ಲಿ ರಾಷ್ಟ್ರಕೂಟ ನಡೆಸುವುದಾದರೆ ತಾವು ನಮಗೆ ಬೇಕಾದ ಸಹಾಯ ಒದಗಿಸುವುದಾಗಿ ಹೇಳಿದರು. ಒಬ್ಬ ಅಮಲ್ದಾರನ ನೆರವಿನಿಂದ ರಾಷ್ಟ್ರಕೂಟ ನಡೆಯುವುದಾದರೆ ಅಂತಹ ರಾಷ್ಟ್ರಕೂಟವೇ ನಡಯಬೇಕಾ ಗಿಲ್ಲವೆಂದು ನಾನು ಹೇಳಿಬಿಟ್ಟೆ. ಸರ್ಕಾರದ ವಿರೋಧ ಪ್ರಯತ್ನ ಯಶಸ್ವಿ ಯಾಗಲಿಲ್ಲ !

ಇಂತಹ ಸಭೆ ಸಂಸ್ಥಾನದ ಇತಿಹಾಸದಲ್ಲೇ ಮೊದಲನೆಯದಾದ್ದರಿಂದ ಈ ದೊಡ್ಡ ಜವಾಬ್ದಾರಿಯನ್ನು ಹೊತ್ತು ನೆರವೇರಿಸಲು ನಾನು ನನಗೆ ನೆರವಾಗಬಲ್ಲರೆಂದು ಯಾರಲ್ಲಿ ವಿಶ್ವಾಸವಿದೆಯೋ ಅಂತಹವರನ್ನೊಳಗೊಂಡ ಸ್ವಾಗತ ಸಮಿತಿ ರಚಿಸಿಕೊಳ್ಳು ವುದಕ್ಕೆ ನನಗೇ ಅಧಿಕಾರಕೊಟ್ಟರು. ನಾನು ಮೂರು ದಿನಗಳು ಮೈಸೂರಲ್ಲೇ ನಿಂತು ಕಾಂಗ್ರೆಸ್ಸಿನ ಮುಖಂಡರನ್ನು ಭೇಟಿಮಾಡಿ ಪರಸ್ಪರ ಸಮಾಲೋಚನೆ ನಡೆಸಿದೆ. ಮೈಸೂರಿನ ಎಸ್. ಚನ್ನಯ್ಯನವರನ್ನು ಸ್ವಾಗತ ಸಮಿತಿ ಅಧ್ಯಕ್ಷರನ್ನಾಗಿ ಮಾಡಿಕೊಳ್ಳು ವುದಾದರೆ ಅನುಕೂಲವಾಗುವುದೆಂಬ ಸಲಹೆ ಬಂತು. ಚನ್ನಯ್ಯನವರು ಆಗಿನ್ನೂ ಪೂರ್ತ ರಾಜಕೀಯಕ್ಕೆ ಇಳಿದಿರಲಿಲ್ಲ. ಪರದೆ ಹಿಂದಿದ್ದುಕೊಂಡೇ ರಾಜಕೀಯ ಮುಖಂಡರಿಗೆ ಒತ್ತಾಸೆ ಕೊಡುತ್ತಿದ್ದರು. ಆದುದರಿಂದ ಅವರು, ತಾವು ಏನಾದರೂ ಧನಸಹಾಯ ಮಾಡಲು ಮಾತ್ರ ಸಿದ್ಧವಾಗಿರುವುದಾಗಿಯೂ, ಸ್ವಾಗತ ಸಮಿತಿ ಅಧ್ಯಕ್ಷತೆ ತಮಗೆ ಬೇಡವೆಂದೂ ತಿಳಿಸಿದರು. ಆದರೂ ಅವರನ್ನೇ ಅಧ್ಯಕ್ಷರನ್ನಾಗಿ ಮಾಡಿಕೊಳ್ಳುವುದಾದರೆ ನಮ್ಮ ಕಾರ್ಯಜಯಪ್ರದವಾಗಿ ನಡೆಯಲು ಏನೇನೂ ಸಂದೇಹವಿಲ್ಲವೆಂದು ಸ್ನೇಹಿತರು ನನಗೆ ತಿಳಿಸಿದರು. ಚನ್ನಯ್ಯನವರಿಗೂ ನನಗೂ ಅಷ್ಟೇನೂ ಪರಿಚಯವಿರಲಿಲ್ಲ. ಆದುದರಿಂದ ಎಚ್. ಸಿ. ದಾಸಪ್ಪನವರಲ್ಲಿ ಹೋಗಿ ಚನ್ನಯ್ಯನವರಿಗೆ ಒಂದು ಮಾತು ಹೇಳಬೇಕೆಂದು ಕೇಳಿಕೊಂಡೆ. ಅವರು, ಚನ್ನಯ್ಯ ನವರು ವ್ಯಾಪಾರಸ್ಥರು, ಅವರನ್ನೇಕೆ ರಾಜಕೀಯಕ್ಕೆ ಎಳೆಯಬೇಕೆಂದಿರುವೆ ? ಬೇರೆಯವರು ಯಾರನ್ನಾದರೂ ಆಲೋಚಿಸೋಣ ಎಂದರು. ನಾನು ಮಾತ್ರ ಚನ್ನಯ್ಯನವರೇ ಆಗಬೇಕೆಂದು ಹಟ ಹಿಡಿದೆ. ಈ ರೀತಿ ಪರಸ್ಪರಾಲೋಚನೆಯಲ್ಲಿ ಮೂರು ದಿನಗಳು ಕಳೆದ ಮೇಲೆ ಚನ್ನಯ್ಯನವರು ಒಪ್ಪಿಕೊಂಡರು. ನಾನೇ ಜನರಲ್ ಸೆಕ್ರೆಟರಿಯಾಗಿರಬೇಕೆಂದೂ ಬೇಕಾದರೆ ಎ. ಜಿ. ಬಂದಿಗೌಡರನ್ನು ನನ್ನ ಜೊತೆಗೆ ಸೇರಿಸಿಕೊಳ್ಳಬಹುದೆಂದೂ ಚನ್ನಯ್ಯನವರೂ ಇತರ ಸ್ನೇಹಿತರೂ

ಸೂಚಿಸಿದರು. ಇದೆಲ್ಲಾ ಮಾತಂ ಕತೆ ಮುಗಿದ ಮೇಲೆ ಶಿವಪುರ ರಾಷ್ಟ್ರಕೂಟದ ಸ್ವಾಗತ ಸಮಿತಿಗೆ ಎಸ್. ಚನ್ನಯ್ಯನವರು ಅಧ್ಯಕ್ಷರೆಂದೂ ಎ. ಜಿ. ಬಂದಿಗೌಡರೂ ನಾನೂ ಕಾರ್ಯದರ್ಶಿಗಳೆಂದೂ ಎಚ್. ಸಿ. ದಾಸಪ್ಪನವರು, ಶಿವಪುರದ ಸಿ. ತಿರುಮಲೇಗೌಡರು. ಎಸ್. ರಂಗರಾಮಯ್ಯನವರು ಉಪಾಧ್ಯಕ್ಷರುಗಳೆಂದೂ ಕೊಪ್ಪದ ಜೋಗಿಗೌಡರು ಖಜಾಂಚಿಯೆಂದೂ, ಎಂ. ಎನ್. ಜೋಯಿಸರು ಜಿ. ಓ. ಸಿ. (ಜನರಲ್ ಆಫೀಸರ್ ಕಮಾಂಡಿಂಗ್) ಎಂದೂ ನಾನು ಮೈಸೂರಲ್ಲಿದ್ದಾಗಲೇ ಪ್ರಕಟಿಸಿದೆ. ಯಾರು ಯಾರು ನೂರು ರೂಪಾಯಿಗೆ ಕಡಿಮೆ ಇಲ್ಲದೆ ಚಂದಾ ಕೊಡುತ್ತಾರೋ ಅಂತಹವರು ಸ್ವಾಗತ ಸಮಿತಿ ಸದಸ್ಯರಾಗುವರೆಂದೂ, ಐದು ರೂಪಾಯಿ ಕೊಡುವವರು ಪ್ರತಿನಿಧಿಗಳಾಗುವರೆಂದೂ ಗೊತ್ತುಮಾಡಿದೆವು. ಸ್ವಾಗತ ಸಮಿತಿಯ ಕಚೇರಿಯನ್ನು ಶಿವಪುರದ ತಿರುಮಲೇಗೌಡರ ಮನೆಯ ಮಹಡಿ ಮೇಲೆ ಸ್ಥಾಪಿಸಿದೆವು. ಮಹಡಿ ಮುಂಭಾಗದಲ್ಲಿದ್ದ ತಿರುಮಲೇಗೌಡರ ಇನ್ನೊಂದು ಮನೆಯಲ್ಲಿ ಸ್ವಯಂಸೇವಕರ ಬಿಡಾರ ಮಾಡಲು ಗೊತ್ತುಮಾಡಿದೆವು. ಇಷ್ಟೆಲ್ಲಾ ಕಾರ್ಯಗಳು ಮುಂಗಿಯಬೇಕಾದರೆ ಮಾರ್ಚಿ ತಿಂಗಳು ಅರ್ಧ ಕಳೆದು ಹೋಯಿತು. ಏಪ್ರಿಲ್ ಒಂಬತ್ತು-ಹತ್ತು ಹನ್ನೊಂದನೇ ತಾರೀಕುಗಳಲ್ಲಿ ರಾಷ್ಟ್ರಕೂಟ ಸೇರಿಸಬೇಕೆಂದು ಸ್ವಾಗತ ಸಮಿತಿಯವರು ತೀರ್ಮಾನಿಸಿದರು. ಕೇವಲ ಇಪ್ಪತ್ತು ಇಪ್ಪತ್ತೈದು ದಿನಗಳಲ್ಲಿ ಸಿದ್ಧತೆಗಳೆಲ್ಲಾ ಮುಗಿಯಬೇಕಾಗಿತ್ತು.

ಬೇರೆಬೇರೆ ಕಾರ್ಯನಿರ್ವಹಣೆಗಾಗಿ ನಾಲ್ಕಾರು ಉಪಸಮಿತಿಗಳನ್ನು ನೇಮಕ ಮಾಡಿದೆವು. ವಸತಿ ವ್ಯವಸ್ಥೆಯ ಉಪಸಮಿತಿಗೆ ಎಚ್. ಸಿ. ದಾಸಪ್ಪನವರು ಅಧ್ಯಕ್ಷರು, ಸ್ವಯಂಸೇವಕರ ವ್ಯವಸ್ಥೆಗೆ ಎಂ. ಎನ್. ಜೋಯಿಸರು ಅಧ್ಯಕ್ಷರು, ಹೀಗೆ ಊಟದವ್ಯವಸ್ಥೆ, ಮೆರವಣಿಗೆವ್ಯವಸ್ಥೆ, ಅಲಂಕಾರವ್ಯವಸ್ಥೆ ಮುಂತಾದ ಕಾರ್ಯ ನಿರ್ವಹಣೆಗಾಗಿ ಉಪಸಮಿತಿಗಳು ರಚಿತವಾದವು. ಸ್ವಾಗತ ಸಮಿಯ ಕಚೇರಿ ಕೆಲಸ ನಿರ್ವಹಿಸಲು ವಿ. ಎಸ್. ನಾರಾಯಣರಾಯರ ಸಲಹೆಯಂತೆ ಚಿಕ್ಕಬಳ್ಳಾಪುರದಲ್ಲಿ ಅಡ್ವೊಕೇಟ್ ಆಗಿದ್ದ ಕೆ. ಸಂಪಂಗಿರಾಮಯ್ಯನವರನ್ನೂ ಅಲ್ಲೇ ಲಾಯರ್ ಆಗಿದ್ದ ಸಂಪತ್ಕುಮಾರನ್‌ರವರನ್ನೂ ಬರಮಾಡಿಕೊಂಡೆ. ಅವರು ಇಪ್ಪತ್ತು ದಿನಗಳು ಶಿವಪುರದಲ್ಲೇ ಇದ್ದುಕೊಂಡು ಕಛೇರಿ ಕಾರ್ಯಗಳನ್ನು ತಂತಮ್ಮಲ್ಲೇ ಹಂಚಿಕೊಂಡು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದರು.

ಅಧ್ಯಕ್ಷರ ಚುನಾವಣೆ ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಂದ ನಡೆಯಿತು. ಕೆ. ಟಿ. ಭಾಷ್ಯಂ ಅಯ್ಯಂಗಾರ್ಯರೂ ಟಿ. ಸಿದ್ಧಲಿಂಗಯ್ಯನವರೂ ಉಮೇದುವಾರರಾಗಿದ್ದರು. ಆಗಿನ ಮೈಸೂರು ಸಂಸ್ಥಾನದಲ್ಲಿ ಒಂಬತ್ತು ಜಿಲ್ಲೆಗಳು ಮಾತ್ರ ಇದ್ದವು. ಐದು ಜಿಲ್ಲಾ ಸಮಿಗಳು ಸಿದ್ಧಲಿಂಗಯ್ಯನವರ ಹೆಸರನ್ನೂ, ನಾಲ್ಕು ಜಿಲ್ಲಾ ಸಮಿತಿಗಳು ಕೆ. ಟಿ. ಭಾಷ್ಯಂ ಅವರ ಹೆಸರನ್ನೂ ಸೂಚಿಸಿದ್ದರು. ಆದುದರಿಂದ ಟಿ. ಸಿದ್ಧಲಿಂಗಯ್ಯ

ನವರು ಮೈಸೂರು ಸಂಸ್ಥಾನದ ಮೊದಲನೆ ರಾಷ್ಟ್ರಕೂಟದ ಅಧ್ಯಕ್ಷರಾಗಿ ಚುನಾಯಿತರಾದರು.

ಶಿವಪುರದಲ್ಲಿ ಸ್ವಾಗತ ಸಿದ್ಧತೆಗಳು ಭರದಿಂದ ಸಾಗಿದವು. ಪಾಕಶಾಲೆ, ಭೋಜನ ಶಾಲೆಗೆ ದೊಡ್ಡ ದೊಡ್ಡ ಚಪ್ಪರಗಳನ್ನೂ ಪ್ರತಿನಿಧಿಗಳು ಮತ್ತು ಮುಖಂಡರಿಗಾಗಿ ಕುಟೀರಗಳನ್ನೂ ನಿರ್ಮಿಸುವುದಕ್ಕಾಗಿ ಮೈಸೂರಿಂದ ಗಳು,ಬೊಂಬು, ಸರ, ಮುಂತಾದ ಸಾಮಾನುಗಳು ರೈಲ್ವೆ ವ್ಯಾಗಿನ್‌ಗಳಲ್ಲಿ ಬರುವಂತೆ ಎಸ್. ಚನ್ನಯ್ಯನವರು ಏರ್ಪಡಿಸಿದ್ದರು. ಎಚ್. ಸಿ. ದಾಸಪ್ಪನವರು ಹತ್ತು ಹನ್ನೆರಡು ದಿನ ಮುಂಚಿತವಾಗಿಯೇ ಶಿವಪುರಕ್ಕೆ ಬಂದು ಕಾರ್ಯನಿರತರಾದರು. ಮದ್ದೂರು ಮತ್ತು ಹತ್ತಿರದಲ್ಲೇ ಇರುವ ಚನ್ನಪಟ್ಟಣ ತಾಲ್ಲೂಕು ಎರಡರಲ್ಲೂ ತೆಂಗಿನಮರಗಳು ಹೆಚ್ಚಾಗಿರುವುದರಿಂದ ಬಿದಿರು ತಟ್ಟಿಗಳನ್ನು ಕೊಳ್ಳಬೇಕಾಗಿಲ್ಲವೆಂದೂ ಹೆಣೆದ ತೆಂಗಿನ ಗರಿಗಳನ್ನು ನಾನು ತರಿಸಿಕೊಡುವುದಾಗಿಯೂ ಹೇಳಿದೆ. ಅದೇ ರೀತಿ ಚನ್ನಪಟ್ಟಣಕ್ಕೆ ಹೋಗಿ ಒಬ್ಬರು ದೊಡ್ಡ ಜಮೀನ್ದಾರರನ್ನು ಕಂಡು ಗರಿಗಳನ್ನು ಹೆಣೆಸಿಕೊಡಬೇಕೆಂದು ಹೇಳಿದೆ. ಅವರು ಮೂವತ್ತು ನಲವತ್ತು ಗಾಡಿಗಳು ಭರ್ತಿಯಾಗುವಷ್ಟು ತೆಂಗಿನ ಹೆಣೆದ ಗರಿಗಳನ್ನು ಉಚಿತವಗಿ ಕಳುಹಿಸಿಕೊಡುವುದಾಗಿಯೂ ಗಾಡಿ ಬಾಡಿಗೆ ಸಹ ಕೊಡಬೇಕಾಗಿಲ್ಲವೆಂದೂ ತಿಳಿಸಿದರು. ಚಪ್ಪರ ಮತ್ತು ಕುಟೀರಗಳಿಗೆ ಸರಗಳು, ಬೊಂಬುಗಳು ಮತ್ತು ಗಳುಗಳನ್ನು ಕಟ್ಟಿಸಿ ಮುಗಿಸಲಾಯಿತು. ಇನ್ನು ಮೇಲ್‌ಛಾವಣಿ ಹಾಕಿ, ಸುತ್ತಲೂ ಮರೆಮಾಡುವುದೊಂದೇ ಬಾಕಿ. ಅಧಿವೇಶನಕ್ಕೆ ಕೇವಲ ನಾಲ್ಕು ದಿನಗಳಿರುವಾಗಲೂ ಗರಿಗಳು ಚನ್ನಪಟ್ಟಣದಿಂದ ಬರಲೇ ಇಲ್ಲ. ದಾಸಪ್ಪನವರು ಗರಿಗಳಿಲ್ಲದೆ ತಮ್ಮ ಕೆಲಸಕ್ಕೆ ಅಡಚಣೆಯಾಗಿದೆಯೆಂದು ಕೂಗಾಡುವುದಕ್ಕೆ ಪ್ರಾರಂಭಿಸಿದರು. ನಾನು ಚನ್ನಪಟ್ಟಣಕ್ಕೆ ಹೋಗಿ ಆ ಮಹನೀಯರನ್ನು ನೋಡಿದೆ. ಅವರು ಓಹೋ, ಮರೆತೇ ಹೋಯಿತು ನೋಡಿ ನಾಳೆ ನಾಡಿದ್ದು ಒಂದೆರಡು ಗಾಡಿಗಳಲ್ಲಾದರೂ ಮಟ್ಟೆಗರಿ (ಹೆಣೆಯದೆ ಇರುವ ಗರಿಗಳು) ಗಳನ್ನು ಕಳುಹಿಸುವುದಾಗಿ ತಿಳಿಸಿದರು. ನನಗೆ ಎದೆದಸಕ್ಕೆಂದಿತು. ಅವರ ಮೇಲೆ ಕೋಪವೂ ಬಂತು. ಏನು ಪ್ರಯೋಜನ ? ಮದ್ದೂರಿಗೆ ಬಂದು ಎ. ಜಿ. ಬಂದೀಗೌಡರನ್ನೂ ಎಂ. ಎನ್. ಜೋಯಿಸರನ್ನೂ ಬೆಂಗಳೂರಿಗೆ ಕಳುಹಿಸಿದೆ. ಅವರು ಮಾರನೆ ದಿನವೇ ಒಂದು ಸ್ಪೆಷಲ್ ರೈಲ್ವೆ ವಾಗಿನ್‌ನಲ್ಲಿ ನಮಗೆ ಬೇಕಾಗುವಷ್ಟು ಬಿದಿರಿನ ತಟ್ಟಿಗಳನ್ನು ತಂದರು. ಸಕಾಲದಲ್ಲಿ ಚಪ್ಪರ ಮತ್ತು ಕುಟೀರಗಳ ಕಾರ್ಯ ಮುಗಿಯಿತು.

ರಾಷ್ಟ್ರಕೂಟದ ವೆಚ್ಚಕ್ಕಾಗಿ ಹಣ ಕೂಡಿಸುವ ಜವಾಬ್ದಾರಿಯನ್ನು ಚನ್ನಯ್ಯನವರೂ ನಾನೂ ಹೊತ್ತುಕೊಂಡಿದ್ದೆವು. ನಾನು ಮದ್ದೂರು, ಮಂಡ್ಯ ಮತ್ತು ಚನ್ನಪಟ್ಟಣ ತಾಲ್ಲೂಕಿನ ಕೆಲವು ಹಳ್ಳಿಗಳಿಗೆ ಹೋಗಿ ಅಲ್ಲಲ್ಲಿನ ಮುಖಂಡರನ್ನು ಭೇಟಿಮಾಡಿದೆ. ಹಳ್ಳಿಹಳ್ಳಿಗೂ ಜನರ ಉತ್ಸಾಹ, ಯಾವ ಹಳ್ಳಿಯವರೂ ಹಣ

ಕೊಡಲು ಹಿಂತೆಗೆಯಲಿಲ್ಲ. ಒಳಗೆರೆ ಹಳ್ಳಿಯವರು ಧಾರಾಳವಾಗಿ ಹಣ ಕೊಟ್ಟರಲ್ಲದೆ ಬಹಿರಂಗ ಅಧಿವೇಶನ ನಡೆಯುವ ಕಡೆ ರಂಗಮಂಟಪ ಮತ್ತು ವೇದಿಕೆ ನಿರ್ಮಾಣದ ಜವಾಬ್ದಾರಿಯನ್ನೂ ಹೊತ್ತು ನಿರ್ವಹಿಸಿದರು. ದಾಸೇಗೌಡರ ತಿಮ್ಮಯ್ಯನವರ ಮುಂದಾಳುತನದಲ್ಲಿ ಊರು ಬಹಳ ಒಗ್ಗಟ್ಟಿನಿಂದ ಕೆಲಸ ಮಾಡುತ್ತಿತ್ತು. ಒಳಗೆರೆಹಳ್ಳಿ ಕಾಂಗ್ರೆಸ್ ಕೆಲಸಗಳಿಗೆ ಒಂದು ಸ್ಫೂರ್ತಿಯ ನೆಲೆಯಾಗಿತ್ತು.ಗೌಡಗೆರೆಗೆ ನಾವು ಹಣಕ್ಕಾಗಿ ಹೋದಾಗ ಸಾಯಂಕಾಲವಾಗಿತ್ತು, ಊರಿನವರೆಲ್ಲರೂ ತಿರುಪತಿಗೆ ಯಾತ್ರೆ ಹೋಗಲು ಒಳ್ಳೇ ಲಗ್ನದಲ್ಲಿ ಊರುಬಿಟ್ಟು ಹೊರಗಡೆ ಇದ್ದ ದೇವಸ್ಥಾನದಲ್ಲಿ ತಂಗಿದ್ದರು. ನಾವು ಅವರಲ್ಲಿಗೆ ಹೋದ ವಿಚಾರ ತಿಳಿಸಿದೆವು, ಯಾತ್ರೆಗಾಗಿ ಊರುಬಿಟ್ಟು ಹೊರಗೆ ಬಂದು ಬಿಟ್ಟಿರುವುದರಿಂದ ಪುನಃ ಊರೊಳಕ್ಕೆ ಹೋಗುವುದು ಪದ್ಧತಿಗೆ ವಿರೋಧವೆಂದೂ ತಾವು ತಿರುಪತಿಯಿಂದ ಹಿಂತಿರುಗಿದ ಮೇಲೆ ಹಣ ಕೊಡುವುದಾಗಿಯೂ ಒಬ್ಬೊಬ್ಬರು ಮುಖಂಡರು ತಿಳಿಸಿದರು. ಇನ್ನೊಬ್ಬರು ಮುಖಂಡರು, ಕಾಂಗ್ರೆಸ್ ಕೆಲಸ ದೇವರ ಕೆಲಸವೇ ಆದುದರಿಂದ ದೇವರಿಗೆ ಕಾಣಿಕೆ, ಹರಕೆ ಸಲ್ಲಿಸಲು ನಮ್ಮಲ್ಲಿರುವ ಹಣವನ್ನೇ ಕೊಡುತ್ತೇವೆ ಮತ್ತು ನಮ್ಮ ಸ್ವಂತ ವೆಚ್ಚಕ್ಕೆಂದು ನಮ್ಮಲ್ಲಿರುವ ಹಣದಲ್ಲೂ ಸ್ವಲ್ಪ ಕೊಡುತ್ತೇವೆ. ಹೇಗೋಹಾಗೆ ಇದ್ದುದರಲ್ಲೇ ನಮ್ಮ ಪ್ರಯಾಣ ವೆಚ್ಚವನ್ನೂ ಸರಿದೂಗಿಸಿ ಕೊಳ್ಳುತ್ತೇವೆ. ಯಾತ್ರೆಯಿಂದ ಹಿಂದಿರುಗಿದ ಮೇಲೆ ದೇವರಿಗೆ ತಪ್ಪು ಸಹಿತ ಮುಡುಪಿನ ಹಣವನ್ನು ತಿರುಪತಿಗೆ ಕಳುಹಿಸಿ ಕೊಡುತ್ತೇವೆ ಎಂದು ಹೇಳಿದರು. ಎಲ್ಲರೂ ಒಪ್ಪಿದರು. ದೇವರ ಮುಡುಪಿನ ಹಣವನ್ನೂ ತಮ್ಮ ಪ್ರಯಾಣದ ವೆಚ್ಚಕ್ಕಾಗಿ ಇಟ್ಟುಕೊಂಡಿದ್ದ ಹಣದಲ್ಲಿ ಸ್ವಲ್ಪ ಭಾಗವನ್ನೂ ನಮಗೆ ಕೊಟ್ಟರು. ಅವರು ಆ ರೀತಿ ಕೊಟ್ಟ ಹಣ, ಆ ಊರಿಂದ ನಿರೀಕ್ಷಿಸಿದ್ದುದಕ್ಕಿಂತಲೂ ಹೆಚ್ಚಾಗಿಯೇ ಇತ್ತು. ಗೆಜ್ಜಲಗೆರೆಯಲ್ಲಿ ಊರಿನ ಮುಖಂಡರು ನೂರು ರೂಪಾಯಿ ಜಮಾ ಮಾಡಿ ಕೊಂಡು ಕಾದಿದ್ದರು. ಆ ದೊಡ್ಡ ಊರಿಗೆ ನೂರು ರೂಪಾಯಿ ಸಾಲದೆಂದು ಮನೆಮನೆಗೆ ಹೋಗಿ ಬೇಡಿದೆ. ಒಂದು ಗಂಟೆ ಒಳಗಾಗಿ ಐನೂರು ರೂಪಾಯಿಗಳ ಶೇಖರಣೆಯಾಯಿತು.

ಅಧ್ಯಕ್ಷರು ಟಿ. ಸಿದ್ಧಲಿಂಗಯ್ಯನವರ ಮೆರವಣಿಗೆ 1938ನೇ ಇಸವಿ ಏಪ್ರಿಲ್ ಎಂಟನೇ ತಾರೀಖು ಅತಿ ವಿಜೃಂಭಣೆಯಿಂದ ನಡೆಯಿತು. ಸುಣ್ಣಬಣ್ಣಗಳಿಂದ ಅಲಂಕೃತವಾಗಿದ್ದ ಎತ್ತಿನಗಾಡಿ ಮೇಲೆ ಬಾಳೆಕಂಬ, ಹೂಗುಚ್ಛಗಳು, ಬಾವುಟಗಳು ಮುಂತಾದುವುಗಳಿಂದ ಅಲಂಕೃತವಾಗಿದ್ದ ಪ್ರಭಾವಳಿ ಸಹಿತ ಮಂಟಪದಲ್ಲಿ ಅಧ್ಯಕ್ಷರು ಮಂಡಿಸಿದ್ದರು. ಹಳ್ಳಿಗಳವರು ಶೃಂಗಾರ ಮಾಡಿಕೊಂಡು ತಂದಿದ್ದ ನೂರೊಂದು ಜತೆ ಎತ್ತುಗಳನ್ನು ಗಾಡಿಗೆ ಹೂಡಿದ್ದರು. ಮದ್ದೂರು ಟ್ರಾವಲರ್ಸ್ ಬಂಗಲೆಯಿಂದ ಮದ್ದೂರು ಪೇಟೆ ಬೀದಿಯಲ್ಲೂ ಶಿವಪುರದ ಬೀದಿಯಲ್ಲೂ ವರ್ತಕರೂ ಮಹಾಜನರೂ ಎಷ್ಟೋ ಹಸುರುವಾಣಿ ಚಪ್ಪರಗಳನ್ನು ಹಾಕಿಕೊಂಡಿದ್ದು ಅಧ್ಯಕ್ಷರಿಗೆ ಹಾರ ತುರಾಯಿ

ಗಳನ್ನು ಒಪ್ಪಿಸಿದರು. ಹತ್ತು ಸಾವಿರ ಜನರಾದರೂ ಮೆರವಣಿಗೆಯಲ್ಲಿ ಭಾಗವಹಿಸಿದ್ದರೆಂದು ಜನ ಹೇಳುತ್ತಿದರು. ಬ್ಯಾಂಡ್, ಬಾಗ್, ಕರಡಿ, ಓಲಗ ಇವುಗಳು ಗಾಡಿಗೆ ಹೂಡಿದ್ದ ಎತ್ತುಗಳ ಸಾಲಿನ ಮುಂದೆ ನಡೆದಿದ್ದುವು. ಐದುನೂರು ಮಂದಿ ಸ್ವಯಂಸೇವಕರೂ, ನೂರು ಮಂದಿ ಸ್ವಯಂಸೇವಿಕೆಯರೂ ಮೆರವಣಿಗೆಯ ಮುಂಭಾಗದಲ್ಲಿ ಶಿಸ್ತಾಗಿ ಸಾಗುತ್ತಿದ್ದರು. ಇಂತಹ ನೋಟ ಮದ್ದೂರಲ್ಲಿ ಮಾತ್ರವೇ ಏಕೆ ದೇಶದ ಯಾವ ಊರಲ್ಲೂ ನಡೆದಿರಲಿಲ್ಲವೆಂದು ಜನ ಆಡಿಕೊಳ್ಳುತ್ತಿದ್ದರು. ಮಧ್ಯೆ ಮಧ್ಯೆ ಜಯಕಾರಗಳು, 'ಏನೇ ಬರಲಿ ಒಗ್ಗಟ್ಟಿರಲಿ' ಎಂಬ ಘೋಷಣೆಯೂ ಕಿವಿ ಕಿವುಡಾಗುವಷ್ಟು ಗಟ್ಟಿಯಾಗಿ ಕೇಳಿಬರುತ್ತಿದ್ದುವು. ಮಹಾತ್ಮಗಾಂಧಿಯವರೇ ಮುಂತಾದ ರಾಷ್ಟ್ರ ನಾಯಕರ ಹೆಸರುಗಳಿಗೂ ಕಾಂಗ್ರೆಸ್ಸಿಗೂ ಜಯಕಾರಗಳು ಎಡಬಿಡದೆ ನಡೆಯುತ್ತಿದ್ದುವು, ಸಾಯಂಕಾಲ ಆರು ಗಂಟೆಗೆ ಪ್ರಾರಂಭವಾದ ಈ ಮೆರವಣಿಗೆ ಶಿವಪುರದ ಟ್ರಾವಲರ್ಸ್ ಬಂಗಲೆ ಸೇರಬೇಕಾದರೆ ರಾತ್ರಿ ಹನ್ನೊಂದು ಗಂಟೆಗೂ ಮೇಲಾಗಿತ್ತು.

ಅಷ್ಟರಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರು (ಜಿ.ಎಂ.ಮೊಕ್ರಿಯವರು) ಮದ್ದೂರು ಸುತ್ತಳತೆ ಮೂರ ಮೈಲಿಗಳೊಳಗೆ ಒಂದು ತಿಂಗಳ ಕಾಲ ಮೆರವಣಿಗೆ ಸಭೆ ಮುಂತಾದುವು ಸೇರಕೂಡದೆಂದೂ ಧ್ವಜಾರೋಹಣ ಮಾಡಕೂಡದೆಂದೂ ನಿಷೇದಾಜ್ಞೆ ಹೊರಡಿಸಿದ್ದರು.

ಅಧ್ಯಕ್ಷರ ಮೆರವಣಿಗೆ ಮುಗಿದ ಮೇಲೆ ಅವರು ಅಲ್ಲಿ ಸೇರಿದ್ದ ಸಹಸ್ರಾರು ಜನರನ್ನು ಕುರಿತು, ರಾಷ್ಟ್ರಕೂಟದ ಉದ್ದೇಶವನ್ನು ವಿವರಿಸಿ, ನಿಷೇಧಾಜ್ಞೆಯ ಬಗ್ಗೆ ಕಟುವಾಗಿ ಟೀಕಿಸಿ, ಆ ಆಜ್ಞೆಗೆ ಯಾರೂ ಹೆದರಬಾರದೆಂದೂ, ಅದನ್ನು ಲೆಕ್ಕಿಸದೆ ನಾವು ನಮ್ಮ ಕಾರ್ಯ ನೆರವೇರಿಸಬೇಕೆಂದೂ ಒಂದು ಉಜ್ವಲ ಭಾಷಣ ಮಾಡಿದರು. ಅಷ್ಟರಲ್ಲಿ ದೇಶದ ನಾನಾಕಡೆಗಳಿಂದ ಪ್ರತಿನಿಧಿಗಳೂ ಪ್ರೇಕ್ಷಕರೂ ನೂರು, ಸಾವಿರಗಟ್ಟಲೆ ಶಿವಪುರಕ್ಕೆ ಬರುತ್ತಿದ್ದರು. ಬಂದಂತಹ ಪ್ರತಿನಿಧಿಗಳನ್ನೂ ಮುಖಂಡರನ್ನೂ ರೈಲ್ವೆ ನಿಲ್ದಾಣದಲ್ಲಿ ಸ್ವಾಗತಿಸಿ ಅವರ ಗಂಟು ಮೂಟೆಗಳನ್ನು ಹೊತ್ತು ಅವರಿಗಾಗಿ ಗೊತ್ತಾಗಿದ್ದ ಬಿಡಾರಗಳಿಗೆ ಕರೆದುಕೊಂಡು ಬರುತ್ತಿದ್ದ ಸ್ವಯಂಸೇವಕರಿಗೂ ಸ್ವಯಂಸೇವಿಕೆಯರಿಗೂ ಆ ರಾತ್ರಿಯೆಲ್ಲಾ ಬಿಡುವೇ ಇರಲಿಲ್ಲ. ಸ್ವಯಂಸೇವಿಕೆಯರ ಮುಂದಾಳಾಗಿ ಶ್ರೀಮತಿ ವೆಂಕಮ್ಮಪಾಲಹಳ್ಳಿಸೀತಾರಾಮಯ್ಯ, ಇಂದಿರಾಬಾಯಿಕೃಷ್ಣಮೂರ್ತಿ ಕೆಲಸ ಮಾಡಿದರು. ರಾತ್ರಿ ಸುಮಾರು ಒಂದು ಗಂಟೆಗೆ ಮದ್ದೂರಿಗೆ ಬಂದ ರೈಲಿನಲ್ಲಿ ಆರುನೂರು ಮಂದಿ ಸಶಸ್ತ್ರ ರಿಸರ್ವ್ ಪೊಲೀಸರು ಶಿವಪುರಕ್ಕೆ ಬಂದಿಳಿದರು. ಇದನ್ನು ತಿಳಿದ ಜನರು ಗುಂಪುಗುಂಪಾಗಿ ಚರ್ಚೆ ನಡೆಸುತ್ತಾ ರಾತ್ರಿಯೆಲ್ಲಾ ಕುತೂಹಲದಿಂದ ಎಚ್ಚರವಾಗಿಯೇ ಇದ್ದರೆನ್ನಬಹುದು. ಸ್ವಾಗತ ಸಮಿತಿಯವರೂ ಮುಖಂಡರೂ ರಾತ್ರಿ ಒಂದು ಗಂಟೆಗೆ ಸಭೆ ಸೇರಿ ನಿಷೇಧಾಜ್ಞೆಯನ್ನು ಮುರಿಯಬೇಕೆಂದೂ, ಪೂರ್ವಭಾವಿಯಾಗಿ ನಿಶ್ಚಿತವಾಗಿದ್ದಂತೆ ಕಾರ್ಯ ನಡೆಸಬೇಕೆಂದೂ ತೀರ್ಮಾನಿಸಿದರು.

ತೀರ್ಮಾನವಾದನಂತರ ದಾವಣಗೆರೆಯ ಡಿ. ಹೆಚ್. ಚಂದ್ರಶೇಖರಯ್ಯನವರು ಶಿವಮೊಗ್ಗದ ಎಚ್. ಸಿದ್ಧಯ್ಯನವರೂ ಚರ್ಚೆಮಾಡಿ, ದಾವಣಗೆರೆಯವರು ರಾತ್ರಿ ಗಾಡಿಯಲ್ಲೆ ಬೆಂಗಳೂರಿಗೆ ಹೊರಟು ಹೋದರು. ಚಿತ್ರದುರ್ಗದ ನಿಜಲಿಂಗಪ್ಪನವರು ಆಗಿನ್ನೂ ಇಂತಹ ರಾಜಕೀಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವ ಮಟ್ಟಿಗೆ ರಾಜಕೀಯದಲ್ಲಿ ಮುಂದೆ ಬಂದಿರಲಿಲ್ಲ. ಮಾರನೆ ಬೆಳಿಗ್ಗೆ ಏನಾಗುವುದೋ ಎಂಬ ಕೌತುಕದಿಂದ ಕೂಡಿದ್ದ ಜನರು ರಾತ್ರಿಯಲ್ಲಿ ಉಳಿದಿದ್ದ ಎರಡು ಮೂರು ಗಂಟೆಗಳನ್ನು ಅರೆನಿದ್ದೆಯಲ್ಲೊ ಎಚ್ಚರವಾಗಿದ್ದುಕೊಂಡೂ ಕಳೆದರು.

ಜಿಲ್ಲಾ ಮ್ಯಾಜಿಸ್ಟ್ರೇಟರ ನಿಷೇಧಾಜ್ಞೆಯನ್ನು ಉಲ್ಲಂಘಿಸಬೇಕೆಂದು ಹಿಂದಿನ ರಾತ್ರಿ ಮುಖಂಡರುಗಳು ಮಾಡಿದ್ದ ತೀರ್ಮಾನಕ್ಕನುಸಾರವಾಗಿ 1938ನೇ ಏಪ್ರಿಲ್ ಒಂಬತ್ತನೇ ತಾರೀಖು ಬೆಳಿಗ್ಗೆ ಎಂಟೂಕಾಲು ಗಂಟೆಗೆ ಧ್ವಜವಂದನೆ ಮತ್ತು ಆರೋಹಣಕ್ಕೆ ಸರ್ವ ಸಿದ್ಧತೆಗಳೂ ನಡೆದಿದ್ದವು. ಸಮವಸ್ತ್ರಧಾರಿಗಳಾದ ಸ್ವಯಂಸೇವಕರೂ ಸ್ವಯಂಸೇವಿಕೆಯರೂ ಶಿಸ್ತಿನಿಂದ ಜಿ. ಓ. ಸಿ. ಆಜ್ಞೆಗಾಗಿ ತಂತಮ್ಮ ಸಾಲುಗಳಲ್ಲಿ ನಿಂತಿದ್ದರು. ಅದೇ ರೀತಿ ರಿಸರ್ವ್ ಪೋಲೀಸರೂ ಅನತಿ ದೂರದಲ್ಲಿ ಸಾಲು ಸಾಲಾಗಿ ಕೋವಿಗಳನ್ನು ಹಿಡಿದು ಮ್ಯಾಜಿಸ್ಟ್ರೇಟರ ಹುಕ್ಕುಂ ನಿರೀಕ್ಷಣೆಯಿಂದ ಯಾವಾಗೆಂದರೆ ಆಗ ಜನರ ಮೇಲೆ ಗುಂಡು ಹಾರಿಸಲು ಕಾಯುತ್ತಿದ್ದರು. ಆದರೆ ಜಿಲ್ಲಾ ಮ್ಯಾಜಿಸ್ಟ್ರೇಟರು ದುಡುಕುಸ್ವಭಾವದವರಲ್ಲ. ಅವರೂ ಮಂಡ್ಯ ಸಬ್‌ಡಿವಿಷನ್ ಆಫೀಸರು ಬೀರಪ್ಪನವರೂ ಸ್ವಲ್ಪ ದೂರದಲ್ಲಿ ಆಸನಾರೂಢರಾಗಿ ತಮ್ಮ ಸಿಬ್ಬಂದಿವರ್ಗದ ಅಧಿಕಾರಿಗಳೊಡನೆ ಏನಾಗುತ್ತದೆಂಬುದನ್ನು ವೀಕ್ಷಿಸುತ್ತಿದ್ದರು ಕಾಂಗ್ರೆಸ್ ಅಧ್ಯಕ್ಷರೂ ಮುಖಂಡರೂ ಧ್ವಜಸ್ತಂಭವಿದ್ದ ವೇದಿಕೆಯ ಮೇಲೆ ನಿಂತಿದ್ದರು. ಅನೇಕ ಮಂದಿ ಸ್ತ್ರೀ ಮುಖಂಡರೂ ವೇದಿಕೆಯ ಮೇಲೆ ಕುಳಿತಿದ್ದರು. ಸುಮಾರು ಮೂವತ್ತು ನಲವತ್ತು ಸಾವಿರ ಜನರು ಸೇರಿದ್ದರೂ ಎಲ್ಲೆಲ್ಲೂ ನಿಶ್ಶಬ್ದ ಒಂದು ವಿಧ ಗಂಭೀರತೆ ಎದ್ದುಕಾಣುತ್ತಿತ್ತು. ಬಿಳಿ ಟೋಪಿ ಖಾದಿ ವಸ್ತ್ರಾಲಂಕೃತರಾಗಿದ್ದ ಆ ಜನ ಸಮೂಹ ಬಿಳಿ ಟೋಪಿಗಳ ಸಮುದ್ರದ ಅಲೆಗಳಂತೆ ಕಾಣುತ್ತಿದ್ದರು. ನಿಯಮಿತ ಕಾಲ ಅಂದರೆ ಎಂಟು ಹದಿನೈದು ಗಂಟೆಗೆ ಸರಿಯಾಗಿ ಎಂ ಎನ್. ಜೋಯಿಸ್ ಅವರು ಬಂದು ಅಧ್ಯಕ್ಷರಿಗೆ ವಂದನೆ ಮಾಡಿ ಧ್ವಜಾರೋಹಣ ಮಾಡಬೇಕೆಂದು ಪ್ರಾರ್ಥಿಸಿದರು. ಅಧ್ಯಕ್ಷರು ಒಂದು ಪುಟ್ಟ ಭಾಷಣ ಮಾಡಿ ಜನತೆಯನ್ನು ಹತ್ತಿಕ್ಕುವಂತಹ ಸರ್ಕಾರದ ನಿಷೇದಾಜ್ಞೆಯನ್ನು ತಾವು ಉಲ್ಲಂಘಿಸುವುದಾಗಿ ಹೇಳಿ ಧ್ವಜಾರೋಹಣ ಮಾಡಿದರು ಕೂಡಲೇ ಪೋಲೀಸ್ ಅಧಿಕಾರಿಯೊಬ್ಬರು ವೇದಿಕೆಯ ಮೇಲೆ ಹತ್ತಿ ಅಧ್ಯಕ್ಷರನ್ನು ಕುರಿತು ಆಜ್ಞೋಲ್ಲಂಘನೆಗಾಗಿ ನಿಮ್ಮನ್ನು ದಸ್ತಗಿರಿ ಮಾಡಿದ್ದೇವೆ ಎಂದು ಗಂಭೀರವಾಗಿ ನುಡಿದರು. ಅಧ್ಯಕ್ಷರು ಸಿದ್ಧನಾಗಿದ್ದೇನೆ ಎಂದು ಹೇಳಿ ಅವರ ಹಿಂದೆ

ಹೊರಟರು. ಅನಂತರ ಎಂ. ಎನ್. ಜೋಯಿಸರು ವೇದಿಕೆಯ ಮೇಲೆ ಹತ್ತಿ ತಾವೂ ಆಜ್ಞೋಲ್ಲಂಘನೆ ಮಾಡುವುದಾಗಿ ಸಾರಿದರು. ಅವರ ದಸ್ತಗಿರಿಯೂ ಆಯಿತು. ಅನಂತರ ಇನ್ನೊಬ್ಬ ಕಾಂಗ್ರೆಸ್ ಮುಖಂಡರು ವೇದಿಕೆಯ ಮೇಲೆ ನಿಂತು ತಾವೂ ಸಹ ಆಜ್ಞೋಲ್ಲಂಘನೆ ಮಾಡುವುದಾಗಿ ಸಾರಿದರು. ಅವರ ದಸ್ತಗಿರಿಯೂ ಆಯಿತು. ಹೀಗೆ ಮೊದಲನೆ ದಿನ ಅಧ್ಯಕ್ಷರೂ ಸೇರಿ ಮೂರು ಮಂದಿ ಮುಖಂಡರ ದಸ್ತಗಿರಿಯಾಯಿತು. ಅಂದಿನ ವಿಶೇಷ ಪರಿಸ್ಥಿತಿಯೆಂದರೆ ಆ ದೊಡ್ಡ ಜನ ಸಮುದಾಯ ಯಾವ ಆಕ್ರೋಶವನ್ನೂ ಕಾಣದೆ ಒಬ್ಬೊಬ್ಬ ಮುಖಂಡರ ದಸ್ತಗಿರಿಯಾದಾಗಲೂ ಕೇವಲ ಜಯಕಾರ ಮತ್ತು ಕರತಾಡನಗಳಿಂದ ತೃಪ್ತರಾಗಿ ಶಿಸ್ತಿನಿಂದ ನಡೆದು ಕೊಂಡುದು. ಅಂತೆಯೇ ಪೊಲೀಸರು ಸಹ ಯಾವ ವಿಧವಾಗಿಯೂ ದುಡುಕದೆ, ದಸ್ತ ಗಿರಿಯಾದ ಮುಖಂಡರನ್ನು ಗೌರವದಿಂದ ಪೊಲೀಸ್ ವ್ಯಾನಿಗೆ ಹತ್ತಿಸಿ, ಅದರ ಬಾಗಿಲು ಮುಚ್ಚುವಾಗ ಮುಖಂಡರಿಗೆ ನಮಸ್ಕಾರ ಮಾಡಿದರು. ಆ ದಿನ ಇನ್ನೂ ಹೆಚ್ಚು ಮಂದಿಯನ್ನು ದಸ್ತಗಿರಿ ಮಾಡುವುದಿಲ್ಲವೆಂದು ಪೊಲೀಸ್ ಅಧಿಕಾರಿಯೊಬ್ಬರು ನಮಗೆ ತಿಳಿಸಿದರು.

ಪೊಲೀಸರೆಲ್ಲಿಯಾದರೂ ಧ್ವಜವನ್ನು ಕಿತ್ತುಹಾಕಿಯಾರೆಂಬ ಸಂದೇಹದಿಂದ ಅನೇಕ ಸ್ತ್ರೀಯರು ವೇದಿಕೆಯ ಮೇಲೆ ಧ್ವಜ ರಕ್ಷಣೆಗಾಗಿ ಕುಳಿತರು. ಏಪ್ರಿಲ್ ತಿಂಗಳ ಉರಿಯುವ ಬಿಸಿಲಿನ ತಾಪವನ್ನು ಲೆಕ್ಕಿಸದೆ ಧ್ವಜಾರೋಹಣ ನಡೆದ ಮೂರೂ ದಿನ ಗಳೂ ಧ್ವಜ ರಕ್ಷಣೆಗಾಗಿ ಈ ರೀತಿ ಕಾವಲು ಕೂತಿದ್ದ ಸ್ತ್ರೀಯರ ಮುಖ ಕಪ್ಪಿಟ್ಟಿತು ಪ್ರತಿದಿನವೂ ದಸ್ತಗಿರಿ ಕಾರ್ಯ ನಿಂತಮೇಲೆ, ಅಲ್ಲಿ ಸಹಸ್ರ ಸಂಖ್ಯೆಯಲ್ಲಿರುತ್ತಿದ್ದ ಜನ ಸ್ತೋಮವನ್ನು ಕುರಿತು ಮುಖಂಡರು ಭಾಷಣಗಳನ್ನು ಮಾಡುತ್ತಿದ್ದರು ಅದಕ್ಕಾಗಿಯೇ ರಚಿತವಾಗಿದ್ದ ವಿಶಾಲವಾದ ಬೇರೆ ಮಂಟಪದಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಸಭೆ ನಡೆಯುತ್ತಿತ್ತು. ಅಲ್ಲಿ ಈ ಸಂಸ್ಥೆಯ ಹೆಸರು ಮೈಸೂರು ಕಾಂಗ್ರೆಸ್. ಎಂದಿರಬೇಕೆಂದೂ ಉದ್ದೇಶ ಶ್ರೀಮಾನ್ ಮಹಾರಾಜರ ನೇತೃತ್ವದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಹೋರಾಟ ನಡೆಸತಕ್ಕದ್ದೆಂದೂ ತೀರ್ಮಾನವಾಯಿತಲ್ಲದೆ, ಕಾಂಗ್ರೆಸ್ ಸಂಘಟನೆಯ ಒಂದೊಂದು ನಿಯಮವನ್ನೂ ದೀರ್ಘವಾಗಿ ಚರ್ಚಿಸಿ ಅಂಗೀಕರಿಸುತ್ತಿದ್ದರು. ಆ ಸಭೆಯಲ್ಲಾದ ತೀರ್ಮಾನಗಳನ್ನು ಆಗಿಂದಾಗ್ಗೆ ಬಹಿರಂಗ ಅಧಿವೇಶನದಲ್ಲಿ ವಿವರಿಸಿ ಜನತೆಯ ಒಪ್ಪಿಗೆ ಪಡೆಯಲಾಗುತ್ತಿತ್ತು.

ಮಧ್ಯಾಹ್ನ ಊಟವಾದ ಮೇಲೆ ಪುನಃ ಸಾಯಂಕಾಲ ನಾಲ್ಕು ಗಂಟೆಗೆ ಬಹಿರಂಗ ಅಧಿವೇಶನ ಸೇರಿ ಭಾಷಣಗಳೂ ಕಾಂಗ್ರೆಸ್ ಅಂಗರಚನೆಯ ನಿಯಮಗಳೂ ಒಂದೊಂದಾಗಿ ಬಹಿರಂಗ ಅಧಿವೇಶನದಲ್ಲಿ ಒಪ್ಪಿಗೆ ಪಡೆಯುವ ಕಾರ್ಯ ನಡೆಯು ತ್ತಿತ್ತು. ಸಾಯಂಕಾಲ ಸೂರ್ಯಾಸ್ತಕ್ಕೆ ಮೊದಲು ಧ್ವಜಾವರೋಹಣಕಾರ್ಯ ನೆರವೇರುತ್ತಿತ್ತು.

ಈ ರೀತಿ ಮದ್ದೂರು ಶಿವಪುರದಲ್ಲಿ ಸೇರಿದ್ದ ರಾಷ್ಟ್ರಕೂಟವು ಮೂರು ದಿನಗಳ ಕಾರ್ಯಕಲಾಪಗಳನ್ನು ನಡೆಸಿ, ಮೈಸೂರು ಸಂಸ್ಥಾನದಲ್ಲಿ ಶ್ರೀಮಾನ್ ಮಹಾರಾಜರ ನೇತೃತ್ವದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯನ್ನು ಕೈಗೊಡಿಸುವುದಾಗಿ ಮೈಸೂರು ಕಾಂಗ್ರೆಸ್ ರಾಜಕೀಯ ಸಂಸ್ಥೆ ಸ್ಥಾಪಿತವಾಯಿತು. ಪ್ರತಿದಿನವೂ ಬೆಳಿಗ್ಗೆ ಧ್ವಜಾರೋಹಣ ಕಾಲದಲ್ಲಿ ಮೂರು ಮಂದಿಯಂತೆ ಮುಖಂಡರು ದಸ್ತಗಿರಿಯಾಗಿ ಜೈಲಿಗೆ ಹೋಗುತ್ತಿದ್ದರು. ಏಪ್ರಿಲ್ ಹನ್ನೊಂದನೇ ತಾರೀಖು ಸಾಯಂಕಾಲ ರಾಷ್ಟ್ರಕೂಟ ಸಮಾಪ್ತವಾಯಿತು,

ಪ್ರತಿದಿನವೂ—ನಲವತ್ತು ಸಾವಿರ ಜನ ಈ ರಾಷ್ಟ್ರಕೂಟದಲ್ಲಿ ಭಾಗವಹಿಸಿದ್ದರೆಂದು ಅಂದಾಜು ಮಾಡಿದ್ದರು. ಯಾವ ದಿನವೂ ಏನೊಂದೂ ಅಚಾತುರ್ಯ ನಡೆಯಲಿಲ್ಲ, ದಿನಕ್ಕೆ ಮೂರು ಮಂದಿಯಂತೆ ಒಟ್ಟು ಒಂಬತ್ತು ಮಂದಿ ಮುಖಂಡರನ್ನು ದಸ್ತಗಿರಿ ಮಾಡಿದರಲ್ಲದೆ ಪೋಲೀಸರು ಜನರನ್ನು ಕೆರಳಿಸುವುದೇ ಮುಂತಾದ ಕಾರ್ಯವನ್ನು ಮಾಡಲಿಲ್ಲ. ಎರಡನೆ ದಿನ ಮಧ್ಯಾಹ್ನ ಶ್ರೀಮಾನ್ ಯುವರಾಜರು ಶ್ರೀಕಂಠೀರವ ನರಸಿಂಹರಾಜ ಒಡೆಯರು ಮೈಸೂರಿಂದ ಬೆಂಗಳೂರಿಗೆ ಹೋಗುತ್ತ, ಶಿವಪುರದ ರಾಷ್ಟ್ರಕೂಟ ನಡೆಯುತ್ತಿದ್ದುದನ್ನು ರಸ್ತೆಯಲ್ಲಿ ಕಾರಿನಲ್ಲೇ ಕುಳಿತು ಹತ್ತು ಹದಿನೈದು ನಿಮಿಷ ನೋಡಿಕೊಂಡು ಹೋದರಂತೆ.

ನಾಲ್ಕನೆಯ ದಿನ ಎಚ್. ಬಿ, ಗುಂಡಪ್ಪಗೌಡರು ಅಧ್ಯಕ್ಷರಾಗಿ ನಾಮಕರಣವಾಗಿ ಧ್ವಜಾರೋಹಣ ಮಾಡಬೇಕೆಂದೂ ನಿಷೇಧಾಜ್ಞೆ ಜಾರಿಯಲ್ಲಿರುವವರೆಗೆ ಅಂದರೆ ಒಂದು ತಿಂಗಳ ಕಾಲ ದಿನವೂ ಧ್ವಜಸತ್ಯಾಗ್ರಹ ಆಚರಿಸಬೇಕೆಂದೂ ಬಹಿರಂಗ ಅಧಿವೇಶನದಲ್ಲಿ ತೀರ್ಮಾನವಾಗಿತ್ತು, ಅದರಂತೆ ನಾಲ್ಕನೆ ದಿನ ಎಚ್, ಬಿ, ಗುಂಡಪ್ಪ ಗೌಡರು ಧ್ವಜಾರೋಹಣ ಮಾಡಿದರು. ಅವರ ದಸ್ತಗಿರಿಯಾಗಲಿಲ್ಲ, ಅದೇ ರೀತಿ ಎರಡು ದಿನ ಕಳೆದ ಮೇಲೆ ಶಿವಪುರದ ದೊಳ್ಳಯ್ಯ ಮತ್ತು ಇನ್ನೊಬ್ಬರನ್ನು (ಅವರ ಹೆಸರು ಜ್ಞಾಪಕವಿಲ್ಲ) ನಿಷೇಧಾಜ್ಞೆ ಉಲ್ಲಂಘಿಸಿ ಧ್ವಜಾರೋಹಣ ಮಾಡಿದುದಕ್ಕಾಗಿ ಅವರನ್ನು ದಸ್ತಗಿರಿಮಾಡಿದರು, ಮತ್ತೆ ಎರಡು ಮೂರು ದಿನಗಳು ಯಾರನ್ನೂ ದಸ್ತಗಿರಿ ಮಾಡಲಿಲ್ಲ, ಆಮೇಲೆ ಒಂದೆರಡು ದಿನಗಳಲ್ಲಿ ಎರಡು ಮೂರು ಜನರನ್ನು ದಸ್ತಗಿರಿ ಮಾಡಿದರು. ಒಂದು ವಾರ ಕಳೆದ ಮೇಲೆ ಯಾರನ್ನೂ ದಸ್ತಗಿರಿ ಮಾಡಲಿಲ್ಲ, ಶಿವಪುರದ ಧ್ವಜಸತ್ಯಾಗ್ರಹ ಒಂದು ತಿಂಗಳ ಕಾಲ ಅಂದರೆ ನಿಷೇಧಾಜ್ಞೆ ಜಾರಿಯಲ್ಲಿರುವವರೆಗೆ ಯಶಸ್ವಿಯಾಗಿ ನಡೆಯಿತು, ನಾನು ರಾಷ್ಟ್ರಕೂಟದ ಜನರಲ್ ಸೆಕ್ರೆಟರಿಯಾಗಿದ್ದು ಸಾವಿರಾರು ರೂಪಾಯಿಗಳ ಜಮಾಖರ್ಚಿನ ಜವಾಬ್ದಾರಿ ಹೊತ್ತು ಸಮಿತಿಗೆ ಲೆಕ್ಕ ಒಪ್ಪಿಸ ಬೇಕಾಗಿದ್ದುದರಿಂದ ಸತ್ಯಾಗ್ರಹ ಮಾಡಬಾರದೆಂದು ಸ್ವಾಗತ ಸಮಿತಿಯವರು ತೀರ್ಮಾನಿಸಿದ್ದರು. ಆ ಪ್ರಕಾರ ರಾಷ್ಟ್ರಕೂಟ ನಡೆದ ದಿನಗಳಲ್ಲಾಗಲೀ ಆಮೇಲೆ ಒಂದು ತಿಂಗಳು ನಡೆದ ಧ್ವಜಸತ್ಯಾಗ್ರಹದಲ್ಲಾಗಲೀ ನಾನು ಪಾಲುಗೊಳ್ಳಲು ಅವಕಾಶವಾಗಲಿಲ್ಲ.

ಎಚ್. ಕೆ. ವೀರಣ್ಣಗೌಡ

[ದಿವಂಗತ ಎಚ್. ಕೆ. ವೀರಣ್ಣಗೌಡರ ಬದುಕು–ಮೇಲು ಆತ್ಮಕಥನದಿಂದ ಈ ಭಾಗವನ್ನು ತೆಗೆದುಕೊಳ್ಳಲಾಗಿದೆ].

ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು

[ಮಂಡ್ಯ ಜಿಲ್ಲೆಯಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲುಗೊಂಡು ಈಗ ದಿವಂಗತರಾಗಿರುವ, ಜೀವನ ವಿವರಗಳು ದೊರೆತ ಕೆಲವು ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಸಂಕ್ಷಿಪ್ತ ಜೀವನ ಚಿತ್ರಗಳು.]

ಸಾಹುಕಾರ್ ಚನ್ನಯ್ಯ

ಒಂದೆಡೆ ರಾಜಕೀಯ ಪೊಳಗು, ಮತ್ತೊಂದೆಡೆ ಬ್ರಿಟಿಷರ ದಬ್ಬಾಳಿಕೆ ದಿಗ್ ದಿಗಂತದಲ್ಲಿ ವ್ಯಾಪಿಸಿದಾಗ, ಅರಮನೆಯ ಒಳವಲಯದಲ್ಲಿಯೇ ಇದ್ದುಕೊಂಡು ಮೈಸೂರನ್ನು ರಾಷ್ಟ್ರೀಯ ವಾಹಿನಿಯಲ್ಲಿ ತೊಡಗಿಸಿದಂತಹ ಅಧ್ವರ್ಯುವಾಗಿ ಸಾಹುಕಾರ ಚನ್ನಯ್ಯನವರು ನಿಲ್ಲುತ್ತಾರೆ. ರಾಜಭಕ್ತಿ ಮತ್ತು ದೇಶಪ್ರೇಮಗಳು ಮುಖಾಮುಖಿಯಾಗಿ ಸ್ಪರ್ಧಿಸದೆ, ಪರಸ್ಪರ ಬೆಸೆದುಕೊಂಡು ಹೋದದ್ದು ಇಲ್ಲಿನ ವೈಶಿಷ್ಟ್ಯ, ಇದನ್ನು ಸಾಧಿಸಿ 'ಗಾಂಧೀಜಿಯವರಿಂದಲೇ 'ಭೇಷ್' ಎಂದು ಕರೆಸಿಕೊಂಡ ಕೀರ್ತಿ ಚನ್ನಯ್ಯನವರದು,

ಹಳೇ ಮೈಸೂರಿನ 'ರಾಜಕೀಯ ಹುಲಿ ಎಂದು ಖ್ಯಾತನಾಮರಾದ ಸಾಹುಕಾರ ಚನ್ನಯ್ಯನವರು ಜನ್ಮತಾಳಿದ್ದು 1902ರ ಏಪ್ರಿಲ್ 26ನೇ ತಾರೀಖು. ಮೈಸೂರಿನಲ್ಲಿ. ಇವರ ತಂದೆ ಆಗರ್ಭ ಶ್ರೀಮಂತರೂ, ವ್ಯವಹಾರಕುಶಲಿಯೂ ಆಗಿದ್ದ ಸಾಹುಕಾರ್ ಸಿದ್ದಣ್ಣನವರು ; ತಾಯಿ ವಾತ್ಸಲ್ಯಮಯಿ ಪುಟ್ಟಮ್ಮನವರು, ಈ ದಂಪತಿಗಳ ಏಕೈಕ ಪುತ್ರರತ್ನ ಚನ್ನಯ್ಯನವರು. ಇವರಿಗೆ ಒಬ್ಬ ಅಕ್ಕ ಹಾಗೂ ಒಬ್ಬ ತಂಗಿ ಇದ್ದರು. ಮಗನಾದಂದರಿಂದ ತಂದೆತಾಯಿಗಳಿಗೆ ಚನ್ನಯ್ಯನವರೊಂದು ಅಮೂಲ್ಯ ಆಸ್ತಿ, ಅವರ ಮೇಲೆ ಮುದ್ದಿನ ಸುರಿಮಳೆ. ಎಳಂವರ್ಷದ ಬಾಲಕ ಚನ್ನಯ್ಯನವರನ್ನು ಅಜ್ಜಿ ಕಂಕುಳಲ್ಲಿ ಹೊತ್ತು ತಿರುಗುತ್ತಿದ್ದರೆಂದರೆ ಇವರ ಮೇಲೆ ಮನೆಯವರಿಗಿದ್ದ ಅಕ್ಕರೆಯು ಅರಿವಾಗದೇ ಇರದು,

ಅಪಾರ ಸಂಪತ್ತಿಗೆ ಏಕಮಾತ್ರ ವಾರಸುದಾರರಾಗಿದ್ದ ಚನ್ನಯ್ಯನವರನ್ನು ವಿದ್ಯಾವಂತರಾಗಿ ಮಾಡುವುದಕ್ಕಿಂತ ವ್ಯವಹಾರಕುಶಲಿಯಾಗಿ ರೂಪಿಸಬೇಕೆಂಬುದು ಅವರ ತಂದೆಯವರ ಅಪೇಕ್ಷೆ ಹೀಗಾಗಿ ಚನ್ನಯ್ಯನವರ ಬಾಲ್ಯ ಮುದ್ದಿನಿಂದ ಮುಂದಾದರೆ, ವಿದ್ಯೆಯನ್ನು ಗಳಿಸುವಲ್ಲಿ ಹಿಂದಾಯಿತು ಎಂದೇ ಹೇಳಬೇಕು. ಹಾಗೆಂದ ಮಾತ್ರಕ್ಕೆ ಅವರೇನೂ ಅನಕ್ಷರಸ್ಥರಾಗಿಬಿಡಲಿಲ್ಲ, ನಜರ್‌ಬಾದಿನ 'ಮೆಥಡಿಕ್' ಶಾಲೆ ಯಲ್ಲಿ ಅವರ ವ್ಯಾಸಂಗ ಮುಂದುವರಿಯಿತು. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಉಪಕುಲಪತಿಯಾಗಿದ್ದ ನಿಕ್ಕಂ ಅಂದು ಅವರ ಸಹಪಾಠಿಯಾಗಿದ್ದವರು. ದೊಡ್ಡ ಡಿಗ್ರಿಗಳಿಗೆ ಹಂಬಲಿಸುವ ಮನಸ್ಥಿತಿ ಮತ್ತು ಪರಿಸ್ಥಿತಿ ಚನ್ನಯ್ಯನವರದ್ದಾಗಿರಲಿಲ್ಲ. ಅದಕ್ಕೆ ಸಾಹುಕಾರ್ ಸಿದ್ದಣ್ಣನವರೂ ಅವಕಾಶ ಕೊಡಲಿಲ್ಲ. ಸಾಧ್ಯವಾದಷ್ಟು ಬೇಗ

ತಮ್ಮ ಮೇಲಿದ್ದ ಯಜಮಾನಿಕೆಯ ವಹಿವಾಟನ್ನು ಮಗನ ಹೆಗಲಿಗೆ ವರ್ಗಾಯಿಸುವುದು ಅವರಿಗೆ ಎಲ್ಲಕ್ಕಿಂತ ಹೆಚ್ಚಿನ ಅಂಶವಾಗಿತ್ತು. ಅದಕ್ಕೆ ಬೇಕಾದ ತರಬೇತು ಪಡೆಯಲು ಚನ್ನಯ್ಯನವರನ್ನು ತಮಗೆ ಆಪ್ತರಾಗಿದ್ದ ಸಾಹುಕಾರ್ ಬಸಮಯ್ಯನವರ ಗರಡಿಯಲ್ಲಿ ಪಳಗಿಸಿದರು.

ಮಗ ವಯಸ್ಕನಾಗುತ್ತಿದ್ದಂತೆಯೇ ತಿರುಮಕೂಡಲು ನರಸೀಪುರ ತಾಲ್ಲೂಕಿನ ಬನ್ನೂರಿನ ಬಳಿಯಿರುವ ಕೇತಪುರದಿಂದ ಅಷ್ಟೇನೂ ಶ್ರೀಮಂತವಲ್ಲದ ಕುಟುಂಬದಿಂದ ಲಿಂಗಮ್ಮ ಎಂಬ ಹೆಣ್ಣುಮಗಳನ್ನು ತಂದು ಮಗನಿಗೆ ಸಹಧರ್ಮಿಣಿಯಾಗಿಸಿದರು. ಮನೆಯ ಭಾಗ್ಯಲಕ್ಷ್ಮಿಯಾಗಿರಬೇಕಾಗಿದ್ದ ಈಕೆ ಚನ್ನಯ್ಯನವರ ಬಾಳಿನುದ್ದಕ್ಕೂ ಬೇಗುದಿಯ ಬೆಂಕಿಯಾದರು. ಕೇವಲ ನಾಲ್ಕಾರು ವರ್ಷಗಳಲ್ಲಿಯೇ ಅವರ ದಾಂಪತ್ಯ ಜೀವನದಲ್ಲಿ ಬಿರುಕುಂಟಾಯಿತು. ಕ್ಷುಲ್ಲಕ ಕಾರಣದಿಂದ ಮುನಿಸಿನಿಂದ ಮನೆಬಿಟ್ಟು ಹೋದ ಪತ್ನಿ ಮತ್ತೆ ಮನೆ ಹೊಸಿಲು ತುಳಿದದ್ದು ಕೇವಲ ಎರಡುಬಾರಿ. ಒಮ್ಮೆ ಮಗಳ ಮದುವೆಗಾಗಿ ; ಮತ್ತೊಮ್ಮೆ ವೈಧವ್ಯ ಸ್ವೀಕರಿಸಲು. ಆದರೆ ಚನ್ನಯ್ಯನವ ರೆಂದೂ ಇದಕ್ಕೆ ಸೊಪ್ಪುಹಾಕಿದವರಲ್ಲ. ತಮ್ಮ ಸೇವಾಕಾರ್ಯ ಕ್ಷೇತ್ರವನ್ನು ವಿಸ್ತರಿಸಿ ಕೊಂಡು ತನ್ನ ಬರಡು ಬದುಕಿಗೆ ಜೀವಂತಿಕೆಯನ್ನು ತಂದುಕೊಳ್ಳಲು ಪ್ರಯತ್ನಿಸಿದರು. ಕೇವಲ ಎರಡೇ ವರ್ಷವಾಗಿದ್ದ ಮಗಳು ಪ್ರಮೀಳೆಯನ್ನು ತಮ್ಮ ವಶಕ್ಕೆ ತೆಗೆದು ಕೊಂಡರು. ತಾವೇ ಖುದ್ದಾಗಿ ತಾಯಿಯ ಪ್ರೀತಿಯನ್ನು ಧಾರೆ ಎರೆದರು. ತಮ್ಮ ಕನಸುಗಳಿಗೆ ಅರ್ಥವಂತಿಕೆ ಮೂಡಿಸಿದರು, ತಂದೆಯ ಬಳಿ ಬೆಳೆದ ಮಗಳು ಮುಂದೆ ಎದುರಿಸಬಹುದಾದ ತೊಂದರೆಗಳನ್ನು ಮುಂದಾಲೋಚಿಸಿ, ಮಗಳನ್ನು ಬೆಂಗಳೂರಿನ 'ಹೋಮ್ ಸ್ಕೂಲ್' ನಲ್ಲಿ ಬಿಟ್ಟರು. ಇದು "ಮಿಷನ್‌ರಿ ಸ್ಕೂಲ್" ಆಗಿತ್ತು. ಐದು ವರ್ಷಗಳಿಗೊಮ್ಮೆ ಬದಲಾಗುತ್ತಿದ್ದ ಹೊರದೇಶದ ಬಿಷಪ್‌ಗಳಿಂದ ನಡೆಸಲ್ಪಡುತ್ತಿದ್ದ ಈ ಶಾಲೆಗೆ ಪ್ರವೇಶಾವಕಾಶವಿದ್ದದ್ದು ಕೇವಲ ಹತ್ತು ವಿದ್ಯಾರ್ಥಿಗಳಿಗೆ ಮಾತ್ರ. ಇಲ್ಲಿ ಸಹಶಿಕ್ಷಣ (co-education) ವಿತ್ತು ; ಊಟ ವಸತಿ ಸೌಕರ್ಯವಿತ್ತು. ಆಗರ್ಭ ಶ್ರೀಮಂತ ಪುತ್ರಿ ಪ್ರಮೀಳ ತನ್ನ ಭವ್ಯ ಭವಿಷ್ಯತ್ತಿಗಾಗಿ ಕೇವಲ ಎರಡುವರ್ಷದ ಶಿಶು ವಾಗಿದ್ದಾಗಲೇ ತಾಯಿಯ ಪ್ರೀತಿಯಿಂದ ವಂಚಿತರಾದವರು ಈಗ ತಂದೆಯಿಂದಲೂ ದೂರವಿರಬೇಕಾಗಿ ಬಂತು. ಪಮದ್ದಿನಿಂದ ತಮಗೆ ವಿದ್ಯೆ ನೈವೇದ್ಯವಾದಂತೆಯೇ ಮಗಳಿಗೂ ಆಗಬಾರದೆಂಬ ತಂದೆಯ ಹಾರೈಕೆ, ಅಪೇಕ್ಷೆಯಿಂದಾಗಿ ಮಗಳು ವಿದ್ಯಾ ವಂತೆಯಾಗುವುದು ಸಾಧ್ಯವಾಯಿತು.

ತುಂಬುಹರೆಯದಲ್ಲಿ, ಮನೆ-ಮನವನ್ನು ತುಂಬಿ ಆರಳಿಸಬೇಕಾದ ಮಡದಿ ಇಲ್ಲದ್ದನ್ನು ಮರೆಯಲು ಚನ್ನಯ್ಯನವರು ತಮ್ಮ ಮಡಿಲಲ್ಲಿ ಜವಾಬ್ದಾರಿಯುತ ಕೆಲಸ ಗಳನ್ನು ತುಂಬಿಕೊಂಡರು ಯೋಚಿಸುವುದಕ್ಕೂ ಬಿಡುವಿರದ ಹಾಗೆ ವ್ಯವಹಾರಗಳು ಮೈಯಾಂತವು. ಎಂಥ ಸಂದರ್ಭದಲ್ಲೂ ಎದೆಗುಂದದೆ, ಬೇಸರಿಸದೆ, ವ್ಯವಹಾರಗಳನ್ನು

ಜಾಣ್ಮೆಯಿಂದ ಕುದುರಿಸುತ್ತಿದ್ದದ್ದು ಅವರ ವ್ಯವಹಾರ ಕೌಶಲ್ಯಕ್ಕೆ ಸಾಕ್ಷಿ; ಬುದ್ಧಿವಂತಿಕೆಯ ಪ್ರತೀಕ.

ಮೈಸೂರು ಅರಸುಮನೆತನ ಉಚ್ಛ್ರಾಯ ಸ್ಥಿತಿಯಿಂದ ಕೆಳಹಂತಕ್ಕೆ ಇಳಿಯುತ್ತಿದ್ದ ಕಾಲ. ಆಗ ಕುಸ್ತಿಗೆ ವಿಶೇಷ ಮಾನ್ಯತೆ ಕೊಟ್ಟಿತ್ತು. ಕುಸ್ತಿ ಸ್ಪರ್ಧೆಗಳು ಅರಸುತನದ ಧೀಮಂತಿಕೆಯ ವೈಭವದ ಸಂಕೇತವಾಗಿತ್ತು. ಚನ್ನಯ್ಯನವರು ಆ ಕಾಲದ ಅಸಾಧಾರಣ ಕುಸ್ತಿಪಟು; ಅನೇಕ ಚಿನ್ನದ ಪದಕಗಳನ್ನು ಗೆದ್ದವರು. ಮಿಗಿಲಾಗಿ ಮೈಸೂರು ರಾಜಮನೆತನದವರೊಡನೆ ಗರಡಿಯಲ್ಲಿ 'ಗುದ್ದಾಡಿ ಛೇಪ್' ಎನಿಸಿಕೊಂಡ ಅಪರೂಪದವರು, ಸಹಜವಾಗಿಯೇ ಅರಮನೆಯವರೊಡನೆ ಇವರ ಸಂಪರ್ಕ ಗಾಢವಾಗಿತ್ತು. ಫಲವಾಗಿ ಜನತೆಯನ್ನು ಹತ್ತಿರದಿಂದ ಆತ್ಮೀಯತೆಯಿಂದ ಕಾಣಲು ಸಾಧ್ಯವಾಯಿತು. ಇದಲ್ಲದೆ, ಅವರ ಮೆಚ್ಚಿನ ಮತ್ತೊಂದು ಆಟವೆಂದರೆ ಫುಟ್‌ಬಾಲ್ ಆಟ. ಇವನ್ನು ಗಮನಿಸಿದರೆ ಸಾಕು, ಚನ್ನಯ್ಯನವರ ಉಕ್ಕಿನ ಮೈಕಟ್ಟಿಗೆ ದೇಹಸ್ವಚ್ಛತೆ ಮನಸ್ಸಿನ ಸ್ವಚ್ಛತೆಯನ್ನು ಪ್ರತಿನಿಧಿಸುವಂಥ ಸತ್ಯಶೌಚಗುಣಗಳ ಆಗರ ಇವರಾಗಿದ್ದರು.

ಆ ಕಾಲಕ್ಕೆ ಅರಸುಮನೆತನವನ್ನು ಬಿಟ್ಟರೆ ಶ್ರೀಮಂತಿಕೆಯಲ್ಲಿ ಗಣ್ಯತೆಯಲ್ಲಿ ಹೆಸರಾಗಿದ್ದ ಕುಟುಂಬಗಳು ಎರಡೇ. ಚನ್ನಯ್ಯನವರ ತಂದೆ ಸಾಹುಕಾರ್ ಸಿದ್ಧಣ್ಣ ಮತ್ತು ಸಾಹುಕಾರ್ ಬಸವಯ್ಯನವರದು. ವಾಸ್ತವದಲ್ಲಿ ಸಿದ್ಧಣ್ಣನವರ ಮೂಲಸ್ಥಳ ಮಂಡ್ಯಜಿಲ್ಲೆಯ ಉಮರಹಳ್ಳಿ. ಮೈಸೂರಿಗೆ ಬಂದು ಅಕ್ಕಿ ಮಾರಾಟಗಾರರಾಗಿ ವ್ಯಾಪಾರ ಆರಂಭಿಸಿದ ಶ್ರೀಯುತರು ಇದೇ ವ್ಯವಹಾರವನ್ನು ಊಟಿಯವರೆಗೆ ವಿಸ್ತರಿಸಿದ್ದರು. ಈಗ ಆ ಜವಾಬ್ದಾರಿಯೆಲ್ಲ ಚನ್ನಯ್ಯನವರ ಮೇಲೆ ಬಿತ್ತು. ಅಕ್ಕಿಯನ್ನು ಸಗಟಾಗಿ ಊಟಿ ಎಸ್ಟೇಟ್‌ಗಳಿಗೆ ಸರಬರಾಜು ಮಾಡುತ್ತಿದ್ದ ಚನ್ನಯ್ಯನವರು ಅಲ್ಲಿ ತಮ್ಮದೇ ಆಸ್ತಿಯನ್ನು ಮಾಡಿದರು. ಊಟಿಯ ಪ್ರವಾಸ ಅವರ ಬದುಕಿಗೆ ಅವಿಭಾಜ್ಯ ನಂಟಾಗಿ ಅಂಟಿಕೊಂಡಿತು. ಮುಂದೆ ರಾಜ್ಯದ, ರಾಷ್ಟ್ರದ ಬಹುಗಣ್ಯ ರಾಜಕಾರಣಿಯಾದ ಮೇಲಂತೂ ಅವರು ಮನಃಶಾಂತಿಗಾಗಿ, ಕ್ಲಿಷ್ಟಕರ ಸಮಸ್ಯೆಗಳಿಗೆ ತೀರ್ಮಾನ ತೆಗದುಕೊಳ್ಳುವುದಕ್ಕಾಗಿ ಊಟಿಗೆ ಹೋಗಿ ಬೀಡುಬಿಡುತ್ತಿದ್ದದ್ದು ಸಾಮಾನ್ಯ ಪ್ರಚಲಿತ ಸಂಗತಿ. ಉದ್ಯಮಗಳೇ ಇರದಿದ್ದ ಅಂಥ ಕಾಲದಲ್ಲೂ ಆ ಪಟ್ಟಣದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿ ಉದ್ಯಮೀಕರಣಗೊಳಿಸಿದವರೇ ಚನ್ನಯ್ಯನವರು ಎಂಬುದು ಬಹುಶ್ರುತ ವಿಚಾರ.

ಸೆಂಟಸ್ತನ ಮಾಡುವಲ್ಲಿ ತಮ್ಮ ತಂದೆಯ ಜಾಡಿನಲ್ಲಿ ಸಾಗದೆ, ವಯಸ್ಸಿಗೆ ಬಂದ ವಿದ್ಯಾವಂತೆ ಮಗಳಿಗೆ ಘನವಾದ ಸಂಬಂಧವನ್ನೇ ಆಯ್ಕೆಮಾಡಿದರು. ಫಲವಾಗಿ ಅಂದು ಕರ್ನಾಟಕದ ಒಕ್ಕಲಿಗರಲ್ಲಿ ಅಪಾರ ಜನಪ್ರಿಯತೆ ಪಡೆದಿದ್ದ ಕೆ. ಎಚ್. ರಾಮಯ್ಯನವರ ಪುತ್ರ ಕ್ಯಾಪ್ಟನ್ ಕೃಷ್ಣ ಅವರನ್ನು ತಮ್ಮ ಅಳಿಯನನ್ನಾಗಿಸಿಕೊಂಡರು. ಪ್ರಮಿಳಾ ಮತ್ತು ಕೃಷ್ಣರವರದು ಅಪರೂಪದ ಭಲೇಜೋಡಿ. ಅವರ

ಸುಮಧುರ ದಾಂಪತ್ಯದ ಕುಡಿಗಳೇ ಚಂದ್ರಪ್ರಕಾಶ ಮತ್ತು ಲೀಖ. ಚನ್ನಯ್ಯನವರು ಮೊಮ್ಮಕ್ಕಳಿಂದ ಅದುವರೆಗೂ ವಂಚಿತವಾಗಿದ್ದ ಪ್ರೇಮ ಪ್ರೀತಿ ವಾತ್ಸಲ್ಯ ಅಕ್ಕರೆ ಅನುಬಂಧಗಳ ಮಹಾಪೂರವನ್ನೇ ಸವಿದರು. ಈ ಸಿಟ್ಟಿನಲ್ಲಿ ಉಡುಗಿ ಹೋಗಿದ್ದ ಅವರ ಜೀವನಕ್ಕೆ ಭೀಮಬಲ ಸಂಚಯವಾಯಿತು. 1944ರ ಹೊತ್ತಿಗೆ ಮಗಳ ಮದುವೆ ಮಾಡಿ ಅದರ ಫಲ ಸವಿದು ಸುಪ್ರಸನ್ನರಾಗಿದ್ದ ಸಾಹುಕಾರರಿಗೆ, ಆ ವೇಳೆಗೆ ಕಾವುಗೊಳ್ಳುತ್ತಿದ್ದ ಸ್ವಾತಂತ್ರ್ಯ ಚಳುವಳಿ ಕೈಬೀಸಿ ಕರೆಯಿತು. ಎಲ್ಲ ಅಂತರಿಕ ಬಾಹ್ಯ ಕೊಂಡಿಗಳನ್ನು ಕಳಚಿಕೊಂಡ ಚನ್ನಯ್ಯನವರು ಮದಗಜದಂತೆ ಚಳುವಳಿಯ ಮಹಾಪೂರಕ್ಕೆ ಧುಮುಕಿದರು. ತಮ್ಮ ಬದುಕಿಗೆ ಹೊಸ ಆಯಾಮವನ್ನು ನೀಡಿದರು. ಇಲ್ಲಿಯವರೆಗೆ ಕೇವಲ ಸಾಹುಕಾರರಾಗಿ, ಮೈಸೂರು ನಗರದ ಗಣ್ಯವ್ಯಕ್ತಿಯಾಗಿ, ನಾಲ್ಕಾರು ಜನರಿಗೆ ಬೇಕಾಗಿದ್ದ ಚನ್ನಯ್ಯನವರು ಇಲ್ಲಿಂದ ಮುಂದೆ ಕೊಡುಗೈ ದಾನಿಯಾಗಿ' ರಾಜ್ಯ ಹಾಗೂ ರಾಷ್ಟ್ರನಾಯಕರಾಗಿ ಲಕ್ಷಾಂತರ ಜನರ ನೇತಾರರಾಗಿ ರೂಪುಗೊಂಡು ರಾಜಕೀಯ ದ್ರಷ್ಟಾರರಾದರು.

ವಾಸ್ತವದಲ್ಲಿ 1933 ರ ವೇಳೆಗಾಗಲೇ ಚನ್ನಯ್ಯನವರಿಗೆ ರಾಜಕೀಯ ದೀಕ್ಷೆಯಾಗಿತ್ತು. ಅಳಿಯ ಕ್ಯಾಪ್ಟನ್‌ಕೃಷ್ಣ ಅವರ ಹಿರಿಯಕ್ಕ ಯಶೋಧರದಾಸಪ್ಪ ಮತ್ತವರ ಪತಿ ಎಚ್. ಸಿ. ದಾಸಪ್ಪ, ಟಿ ಮರಿಯಪ್ಪ ಹಾಗೂ ನಾರಿಮನ್‌ರ ಪ್ರಭಾವ ಪ್ರೇರಣೆಯಿಂದ ಚನ್ನಯ್ಯನವರು ರಾಜಕೀಯಕ್ಕಿಳಿದರು ; ಮೈಸೂರು ಕಾಂಗ್ರೆಸ್ ಪಕ್ಷ ಸಂಸ್ಥಾಪಕರೆನಿಸಿದರು. ಅದುವರೆಗೆ ವಿದೇಶಗಳಲ್ಲಿಯೇ ತಯಾರಾಗುತ್ತಿದ್ದ ಬೆಲೆಬಾಳುವ ಸೂಟುಬೂಟುಗಳನ್ನೇ ಧರಿಸುತ್ತಿದ್ದ ಅವರು ಅಂದಿನಿಂದ ಖಾದಿಧಾರಿಗಳಾದರು ; ಗಾಂಧಿ ಟೋಪಿ ಧರಿಸಿದರು. ಹಳೇಮೈಸೂರು ರಾಜಕೀಯನಭದ ನೇಸರು ಎನಿಸಿದರು. ಇಂದು ನಾವು ಕೇಳುವ ಬಹುತೇಕ ದೊಡ್ಡಹೆಸರುಗಳೆಲ್ಲ ಈ ನೇಸರ ಪ್ರಭೆಯಿಂದ ಪ್ರತಿಫಲನಗೊಂಡಂಥವು ಎಂಬುದರಲ್ಲಿ ಏನೇನೂ ಉತ್ಪ್ರೇಕ್ಷೆಯಿಲ್ಲ. ಕೆಂಗಲ್ ಹನುಮಂತಯ್ಯ, ನಿಜಲಿಂಗಪ್ಪ, ದೇವರಾಜ ಅರಸು ಇತ್ಯಾದಿ ಕರ್ನಾಟಕದ ಮುಖ್ಯಮಂತ್ರಿಗಳೇ ಚನ್ನಯ್ಯನವರಿಂದ ರೂಪಿತಗೊಂಡವರು ಎಂದ ಮೇಲೆ ಉಳಿದ ಕರ್ನಾಟಕದ ರಾಜಕೀಯ ವ್ಯಕ್ತಿಗಳನ್ನು ಈ ನಿಟ್ಟಿನಲ್ಲಿ ಪಟ್ಟಿಮಾಡುವ ಅಗತ್ಯ ಕಂಡುಬರುವುದಿಲ್ಲ. ಚನ್ನಯ್ಯ-ನಿಜಲಿಂಗಪ್ಪನವರ ಸಂಬಂಧ ಮೂರು ದಶಕಗಳಷ್ಟು ಗಾಢವೂ ಮಧುರವೂ ಆದದ್ದು. ಹನುಮಂತಯ್ಯನವರ ಏಳುಬೀಳುಗಳಲ್ಲಿ ಚನ್ನಯ್ಯನವರದು ಕೃಷ್ಣಪಾತ್ರ. ಇನ್ನು ಅರಸು ಅವರಂತೂ ಚನ್ನಯ್ಯನವರ ಕೃಪಕಟಾಕ್ಷದಿಂದಲೇ ಮೇಲೆ ಬಂದವರು.

ಮೊದಮೊದಲು ಇವರು "ಪ್ರಜಾ ಮಿತ್ರಮಂಡಲಿ" ಯ ಕೆಲಸ ಕಾರ್ಯಗಳಲ್ಲಿ ಭಾಗಿಯಾದವರು, ಇದು ಕಾಲಾನಂತರ 'ಪ್ರಜಾಸಂಯುಕ್ತ ಪಕ್ಷ' ದಲ್ಲಿ ಸೇರಿಕೊಂಡಿತು. ಪ್ರಜಾಸಂಯುಕ್ತಪಕ್ಷ ಕಾಂಗ್ರೆಸಿನಲ್ಲಿ 1937ರಲ್ಲಿ ವಿಲೀನಗೊಳ್ಳುವಲ್ಲಿ ಮಹತ್ತ್ವದ ಪಾತ್ರ ಚನ್ನಯ್ಯನವರದು. ಅಲ್ಲಿಂದ ಮುಂದೆ ಅವರೊಬ್ಬ ಮೊದಲದರ್ಜೆಯ ನಾಯಕ

ರಾದರು, ಸ್ವಾತಂತ್ರ್ಯ ಚಳುವಳಿಯಲ್ಲಿ ಚನ್ನಯ್ಯನವರದು ಉಗ್ರಹೋರಾಟ. ಅದಕ್ಕಾಗಿ 1939, 1942 ಮತ್ತು 1947 ರಲ್ಲಿ ಸೆರೆಮನೆವಾಸ. ಇತರರಿಗೆ ಸಾದಾಸಜೆಯಾದರೆ, ಚನ್ನಯ್ಯನವರಿಗೆ ಕಠಿಣ ಸಜೆ. ಇದಕ್ಕೆ ಕಾರಣ ಸ್ವಯಂವೇದ್ಯ. ಅಸಾಧಾರಣ ಕರ್ತೃತ್ವ ಶಕ್ತಿಯುಳ್ಳವರೂ. ಸಂಘಟನಾ ಚತುರರೂ ಆಗಿದ್ದ ಇವರು ಹೊರಗಿದ್ದರೆ ಚಳುವಳಿಗೆ ಬೇಕಾದ ಸಮಸ್ತ ಸವಲತ್ತುಗಳನ್ನು ಒದಗಿಸಿಕೊಡಬಲ್ಲ ಸಮರ್ಥರಾಗಿದ್ದುದು ಈ ಪ್ರದೇಶದಲ್ಲಿ ಚನ್ನಯ್ಯನವರ ಚಟುವಟಿಕೆ ಬ್ರಿಟಿಷರನ್ನು ಉಸಿರು ಕಟ್ಟುವಂತೆ ಮಾಡಿತ್ತು ಎಂಬುದನ್ನು ನೆನಪಿಡಬೇಕು, ಜೈಲಿನಿಂದ ಬಿಡುಗಡೆಯಾದ ಮೇಲೂ ಅವರ ಮೊದಲ ಕೆಲಸ ನಿರ್ಗತಿಕರು, ಮನೆಮಠ ಕಳೆದುಕೊಂಡು ಬೀದಿಪಾಲಾದವರನ್ನು ಗುರುತಿಸಿ ಪೋಷಿಸಿದ್ದು. 1924ರಿಂದಲೂ ಸ್ವಾತಂತ್ರ್ಯ ಚಳುವಳಿಯಲ್ಲಿ ಆಸಕ್ತರಾಗಿದ್ದ ಚನ್ನಯ್ಯನವರು 1938ರಲ್ಲಿ ಐತಿಹಾಸಿಕ ಶಿವಪುರದ ಸತ್ಯಾಗ್ರಹ ಚಳುವಳಿಯ ಸ್ವಾಗತಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದಾಗ ತಾರಕಕ್ಕೇರಿತು, 1938ರಲ್ಲಿ ನಡೆದ ಶಿವಪುರ ಚಳುವಳಿ ಕಾಂಗ್ರೆಸ್ಸಿಗೆ. ಕರ್ನಾಟಕ ರಾಜಕೀಯಕ್ಕೆ ಹಾಗೂ ಚನ್ನಯ್ಯನವರಿಗೆ ವಿಶೇಷ ಮೆರಗನ್ನಿತ್ತಿತು. ಬೆಳಗಾಗುವುದರಲ್ಲಿ ಚನ್ನಯ್ಯನವರು ರಾಷ್ಟ್ರನಾಯಕರಾಗಿಬಿಟ್ಟಿದ್ದರು. ಅಲ್ಲಿಂದ ಮುಂದೆ ಕರ್ನಾಟಕದ ರಾಜಕೀಯ ಚಟುವಟಿಕೆಗಳಲ್ಲಿ ಅವರದು ಸಿಂಹಪಾಲು. ಅವರ ನಿಲುವಿಗೆ ವಿಶೇಷ ಮನ್ನಣೆ ; ಅವರ ಧ್ವನಿಗೆ ಅಪಾರ ಮಹತ್ತ್ವ.

ಸ್ವತಂತ್ರ ಮೈಸೂರು ರಾಜ್ಯದ ಮುಖ್ಯ ಮಂತ್ರಿಯಾಗಿ ಕೆ. ಸಿ. ರೆಡ್ಡಿಯವರು ಆಯ್ಕೆಯಾಗುವುದರಲ್ಲಿ ಚನ್ನಯ್ಯನವರದೇ ಪ್ರಮುಖ ಪಾತ್ರ. 1957ರಲ್ಲಿ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯ ನಂತರ ಕೆಂಗಲ್ ಹನುಮಂತಯ್ಯನವರು ಮುಖ್ಯ ಮಂತ್ರಿಯಾದದ್ದನ್ನು ಚನ್ನಯ್ಯ, ರೆಡ್ಡಿ ಇವರಿದ್ದ ಗುಂಪು ತೀವ್ರವಾಗಿ ವಿರೋಧಿಸಿತು. ಅಲ್ಲದೆ ಮುಂದೆ ಹನುಮಂತ್ಯನವರು ಮುಖ್ಯಮಂತ್ರಿ ಪದವಿಯಿಂದ ಇಳಿಯುವುದಕ್ಕೂ ಚನ್ನಯ್ಯನವರೇ ಕಾರಣಕರ್ತರಾದರು. 1957ರಲ್ಲಿ ಮಂಡ್ಯ ಕ್ಷೇತ್ರದಿಂದ ಶಾಸಕ ಸ್ಥಾನಕ್ಕೆ ಸ್ಪರ್ಧಿಸಿದ್ದ ಚನ್ನಯ್ಯನವರು ಸೋಲಿನ ಕಹಿಯನ್ನು ಅನುಭವಿಸಬೇಕಾಯಿತು. ಆದರೆ ಎಂ.ಪಿ.ಸಿ.ಸಿ.ಯ ಅಧ್ಯಕ್ಷರಾಗಿ ಆಯ್ಕೆಯಾದ ಸವಿ ಅವರಿಗೆ ದಕ್ಕಿತು. 1960ರಲ್ಲಿ ಚನ್ನಯ್ಯನವರು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಆಯ್ಕೆಯಾಗಿ ಆರು ವರ್ಷಗಳ ಪೂರ್ಣಾ ಅವಧಿ ಸೇವೆ ಸಲ್ಲಿಸಿದರು.

ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿದ್ದಾಗ 1966 ರಲ್ಲಿ, ಚನ್ನಯ್ಯನವರು ಅವರೊಡನ ಮನಸ್ತಾಪಕ್ಕೆ ತುತ್ತಾಗಿ, ತಮ್ಮ ದಶಕಗಳ ಸ್ನೇಹಕ್ಕೆ ಧಕ್ಕೆ ತಂದುಕೊಂಡರು. ಅಲ್ಲಿಂದ ಮುಂದ ಕೊಂಚ ಅವರ ರಾಜಕೀಯ ತೀವ್ರತೆಗೆ ಕುಂದುಂಟಾದರೂ, ಅದೆಂದೂ ಹಿಂದೆ ಬೀಳಲಿಲ್ಲ. ಧುರೀಣರ ತಿಕ್ಕಾಟಕ್ಕೆ ಬಿರುಕು ಬಿಟ್ಟ ಕಾಂಗ್ರೆಸ್ಸಿನಲ್ಲಿ ಒಡಕುಂಟಾದಾಗ ಚನ್ನಯ್ಯನವರು ಕಾಂಗ್ರೆಸ್ ತ್ಯಜಿಸಿ, ಜನತಾಪಕ್ಷ ಹುಟ್ಟುಹಾಕುವಲ್ಲಿ ಯಶಸ್ವಿಯಾದರು. ಇದರ ಪ್ರಮುಖ ಹೊಡೆತ

ನಿಜಲಿಂಗಪ್ಪನವರ ವಿರುದ್ಧವಾಗಿತ್ತು. ರಾಜ್ಯದ ಇನ್ನೊಬ್ಬ ಸಮಕಾಲೀನ ರಾಜಕೀಯ ಧುರೀಣ ಟಿ. ಸುಬ್ರಹ್ಮಣ್ಯ. ಜನತಾ ಪಕ್ಷಕ್ಕೆ ಅಧ್ಯಕ್ಷರಾದರು. ಇದರ ಪ್ರಭಾವ ರಾಜ್ಯದ ರಾಜಕೀಯದ ಮೇಲೆ ತತ್ಕ್ಷಣವೇ ಉಂಟಾಯಿತು ಈ ಜನತಾ ಪಕ್ಷದವತಿಯಿಂದ ಚನ್ನಯ್ಯ 1967 ರಲ್ಲಿ ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ ನಿಂತು ಗೆದ್ದು ಬಂದರು. ಮಾತ್ರವಲ್ಲ ಇಪ್ಪತ್ತೈದು ಸೀಟುಗಳಲ್ಲಿ ತಮ್ಮ ಪಕ್ಷದ ಗೆಲುವಿನ ಪತಾಕೆಯನ್ನು ಹಾರಿಸಿದರು. ಇವರೆಲ್ಲ 1971ರಲ್ಲಿ ಅಸೆಂಬ್ಲಿ ವಿಸರ್ಜನೆಯಾಗುವವರೆಗೂ ಶಾಸಕರಾಗಿದ್ದರು. ಇಲ್ಲಿ ಗಮನಿಸುವ ಅಂಶವೆಂದರೆ, ಚನ್ನಯ್ಯನವರು ಹಿಡಿದ ಪಟ್ಟು ಬಿಡದಂಥವರು ಎಂಬುದು ಮತ್ತು ಅವರ ಮಾತನ್ನು ವೇದವಾಕ್ಯದಂತೆ ಜನರು ಸ್ವೀಕರಿಸಿ ಗೌರವಿಸುತ್ತಿದ್ದರು ಎಂಬುದು. ಕಾಂಗ್ರೆಸ್ ಒಡೆದುಹೋದಮೇಲೆ ಚನ್ನಯ್ಯನರು ಸಿದ್ದವೀರಪ್ಪ ಮೊದಲಾದ ಜನತಾ ಸದಸ್ಯರು ಹನ್ನೊಂದು ಮಂದಿ ಹೊಸ ಕಾಂಗ್ರೆಸ್‌ಗೆ ಸೇರಿದರು. ಅದೂ ನೆಹರೂ, ಲಾಲ್‌ಬಹದ್ದೂರ್‌ಶಾಸ್ತ್ರಿಯಂಥವರು ಪತ್ರ ಬರೆದ ತರುವಾಯ, ಕೆಲಕಾಲ ಇವರೂ ನ್ಯೂ ಕಾಂಗ್ರೆಸ್ ಲೆಜಿಸ್ಲೇಟಿವ್ ಪಾರ್ಟಿಯ ಉಪಾಧ್ಯಕ್ಷರು ಕೂಡ ಆಗಿದ್ದರು. ಚನ್ನಯ್ಯನವರು ಇಷ್ಟಪಟ್ಟಿದ್ದರೆ, ಮನಸ್ಸು ಮಾಡಿದ್ದರೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗುವುದು ಅವರ ಕೈಯಲ್ಲೇ ಇತ್ತು. ಅಧಿಕಾರಕ್ಕಾಗಿ ಅವರು ಎಂದೂ ಆಸೆಪಡಲಿಲ್ಲ. ಅಧಿಕಾರಕ್ಕಾಗಿ ಆಸೆ ಪಡುವುದಿಲ್ಲ ಎಂದು ಗಾಂಧೀಜಿಗೆ ಅವರು ಕೊಟ್ಟಿದ್ದ ಮಾತನ್ನು ಕಡೆಯವರೆಗೂ ಅಕ್ಷರಶಃ ಕಾಯ್ದುಕೊಂಡವರು ಚನ್ನಯ್ಯ. ರಾಜಕೀಯದಿಂದ ತಮ್ಮನ್ನು, ತಮ್ಮ ಪರಿವಾರವನ್ನು ಪೊರೆಯುವ ಇಂದಿನ ಧುರಿಣರಿಗೆ ಘೋರವಾದ ವ್ಯಕ್ತಿತ್ವ ಚಿಂತನೆ ಇವರದು. ರಾಜಕೀಯದಿಂದ ಇವರು ಎಂದೂ ಲಾಭನಷ್ಟಗಳನ್ನು ಲೆಕ್ಕಹಾಕಲಿಲ್ಲ. ಕೀರ್ತಿಯೊಂದನ್ನುಳಿದು ಅವರಿಗೆ ಲಾಭಕ್ಕಿಂತ ನಷ್ಟವೇ ಹೆಚ್ಚು ಸಂದದ್ದು.

ರಾಜಕೀಯದಲ್ಲೆಂತೋ ಅಂತೆಯೇ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕ್ಷೇತ್ರಕ್ಕೂ ಚನ್ನಯ್ಯನವರದು ಮಹತ್ವದ ಕೊಡುಗೆ ಇವರು ಮೈಸೂರು ಜನತೆಯ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜೀವನದ ಅವಿಭಾಜ್ಯ ಅಂಗವಾಗಿದ್ದರು. ಅವರು ಒಕ್ಕಲಿಗ ಜಾತಿಯ ಅಗ್ರಗಣ್ಯವ್ಯಕ್ತಿಯಾಗಿದ್ದರೂ, ತಮ್ಮ ಜಾತಿಗೆ ದುಂಬಾಲು ಬೀಳದೆ ಸರ್ವರನ್ನು ಸರ್ವಜಾತಿಯನ್ನು ಆದರಿಸಿ ಗೌರವಿಸಿದರು. ಅವರ ಸ್ನೇಹ ಬಳಗವೇ ಇದಕ್ಕೆ ಸಾಕ್ಷಿ. ಅವರ ಮನೆಯೇ ಒಂದು ಸರ್ವಮತ ಜಾತಿಗಳ ಸಮನ್ವಯದ ಸಂಕೇತವಾಗಿತ್ತು. ಹಿಂದು, ಮುಸ್ಲೀಂ, ಹರಿಜನ, ಕ್ರೈಸ್ತ ಎಲ್ಲ ಜಾತಿಯ ಜನರೂ, ಯಾವ ತಾರತಮ್ಯಕ್ಕೆ ಅವಕಾಶವಿಲ್ಲದಂತೆ ನಿಸ್ಸಂಕೋಚದಿಂದ ಅಲ್ಲಿ ದುಡಿಯುತ್ತಿದ್ದರು. ಮನೆಯವರಾದರೂ ಎಂದೂ ಅವರ ಧರ್ಮ ಜಾತಿಗಳನ್ನು ಗುರುತಿಸದಂತೆ ಆತ್ಮೀಯ ಸಂಬಂಧವನ್ನಲ್ಲಿ ನಿರ್ಮಾಣ ಮಾಡಿದ್ದರು. ಮಾತ್ರವಲ್ಲ ಎಂದೂ ಅವರು ಮೀಸಲಾತಿಯನ್ನು ಬೆಂಬಲಿಸಿದವರಲ್ಲ. ಮೊದಲು ಎಲ್ಲರೂ ದುಡಿಯುವಂತಾಗಬೇಕು. ಪ್ರತಿ

ನಿರತ ಶಿಕ್ಷಣವನ್ನು ಕೊಟ್ಟು, ಅವರಲ್ಲಿ ಸಮಾನತೆಯನ್ನು ಸ್ಥಾಪಿಸಬೇಕೇ ಹೊರತು. ಕೇವಲ ಮೀಸಲಾತಿ ಘೋಷಣೆಯಿಂದ ಯಾವ ಸಾಧನೆಯೂ ಆಗದೆಂದು ಭಾವಿಸಿದಂಥವರು.

ಅಂದಿನ ರಾಜಕೀಯ ವ್ಯಕ್ತಿಗಳಿಗೆಲ್ಲ ಚನ್ನಯ್ಯನವರ ಮನೆ ತಂಗುದಾಣವಾಗಿತ್ತು. ಅವರ ಮನೆಯಲ್ಲಿನ ಔತಣ ರಾಜಕೀಯ ಕಾರ್ಯಕರ್ತರ, ನೇತಾರರ ಸ್ಮರಣೆಯಲ್ಲಿ ಇಂದಿಗೂ ಸ್ಮರಣೀಯ ಅಂಶವಾಗಿ ಉಳಿದಿದೆ. ಸಮಯ ಸಂದರ್ಭಗಳ ಪರಿವೆಯಿಲ್ಲದೆ, ಆದರದ ಆತಿಥ್ಯ ಅಲ್ಲಿ ಎಲ್ಲರಿಗೂ ಕಾದಿರುತ್ತಿತ್ತು. ನಜರಬಾದಿನ ಚನ್ನಯ್ಯನವರ ಮನೆಯ ಹೊಸ್ತಿಲು ಪತ್ತದ ರಾಜಕಾರಣಿಯೇ ವಿರಳ ಎಂದರೆ ಉತ್ಪ್ರೇಕ್ಷೆಯಾಗುವುದಿಲ್ಲ. ಆದರಲ್ಲೂ ನೆಹರೂ ಕುಟುಂಬವಂತೂ ಇವರ ಆತ್ಮೀಯರಾಗಿದ್ದರು, ಇತ್ತೀಚೆಗೆ ಇಂದಿರಾಗಾಂಧಿಯವರವರೆಗೂ ಎಂಬುದನ್ನು ನೆನಪಿಡಬೇಕು.

ಕರ್ನಾಟಕ, ಮಹಾರಾಷ್ಟ್ರ ಗಡಿಸಮಿತಿಯ ನಾಲ್ಕು ಸದಸ್ಯರಲ್ಲಿ ಸಾಹುಕಾರ್ ಚನ್ನಯ್ಯನವರದು ಶ್ರೇಷ್ಠ ಪ್ರಾತಿನಿಧ್ಯ. ಈ ಸಮಿತಿಗೆ ಎಸ್. ಎಸ್. ಮಳೀಮಠ್ ಅಧ್ಯಕ್ಷರಾಗಿದ್ದರು; ಚನ್ನಯ್ಯನವರು ಆ ಸಮಿತಿಯಲ್ಲಿದ್ದುದರಿಂದಲೇ ಕರ್ನಾಟಕದ ಪರ ಹಿಡಿತ ಸಾಧ್ಯವಾದದ್ದು ಎನ್ನುವುದರಲ್ಲಿ ಸಂಶಯವಿಲ್ಲ. ಜೊತೆಗೆ ನೆಹರೂರವರು ಇವರ ಮಾತಿಗೆ ವಿಶೇಷ ಮನ್ನಣೆ ಕೊಡುತ್ತಿದ್ದುದರಿಂದ ಬೆಟ್ಟದಷ್ಟಿದ್ದ ಗಡಿ ಸಮಸ್ಯೆ ಸರಳವಾಗಿ ಪರಿಹಾರ ಕಂಡುಕೊಳ್ಳಲು ಸಾಧ್ಯವಾಯಿತು. ಇದು ಕರ್ನಾಟಕಕ್ಕೆ ಚನ್ನಯ್ಯನವರಿಂದ ಸಂದ ಅಪೂರ್ವ ಸಾಂಸ್ಕೃತಿಕ ಕೊಡುಗೆ.

ಕುಸ್ತಿ ಚನ್ನಯ್ಯನವರ ಅತ್ಯಂತ ಪ್ರಿಯವಾದ ಹವ್ಯಾಸ. ಸ್ವತಃ ಉಸ್ತಾದರಾಗಿದ್ದ ಚನ್ನಯ್ಯನವರ ಹೆಸರಿನಲ್ಲಿ ಅಖಾಡ ಇನ್ನೂ ಉಳಿದುಕೊಂಡಿರುವುದನ್ನು ಕಾಣಬಹುದು. ಇತ್ತೀಚೆಗೆ ಪೋಲಿಸ್ ಸೂಪರಿಂಟೆಂಡೆಂಟ್ ಡಿ. ಎಸ್. ಮುನಿಕೃಷ್ಣ ಅವರಿಂದ ಅದು ಪುನರುಜ್ಜೀವನಗೊಂಡಿದ್ದು ಸಾಂಸ್ಕೃತಿಕವಾಗಿ ದಾಖಲಿಸಬೇಕಾದ ಸಂಗತಿ. ಇದಲ್ಲದೆ ಬೇಟೆ, ಕಾಲ್ಚೆಂಡಾಟದಲ್ಲೂ ಇವರಿಗೆ ಪರಿಶ್ರಮವಿತ್ತು. ಸೆರೆಮನೆಯಲ್ಲಿದ್ದಾಗಲೂ ಅಲ್ಲಿನ ಘಟಾನುಘಟಿಗಳನ್ನು ಸೇರಿಸಿಕೊಂಡು ವ್ಯಾಯಾಮದ ನೆಪದಲ್ಲಿ ಕಾಲ್ಚೆಂಡಾಟಕ್ಕೆ ಅನುಮತಿ ಪಡೆದು ಆಡುತ್ತಿದ್ದುದು ಅವರ ಕ್ರೀಡಾ ಆಸಕ್ತಿಗೆ ಸಾಕ್ಷಿ.

ಚನ್ನಯ್ಯನವರದು ಅಜಾನುಬಾಹು ಶರೀರ, ಸುಂದರ ಮುಖ, ಬಾಹ್ಯ ಸೌಂದರ್ಯಕ್ಕೆ ಜನ ಹೇಗೆ ಬೆರಗಾಗುತ್ತಿದ್ದರೋ ಅದಕ್ಕಿಂತ ಹೆಚ್ಚಾಗಿ ಅವರ ಅಂತರಂಗಿಕ ಸೌದರ್ಯಕ್ಕೆ ಮರುಳಾದವರೇ ಬಹಳ, ಇವರ ನಡೆ ನುಡಿ ನೇರ ನಿಷ್ಠುರ. ಮನಸ್ಸು ಮೃದು ಮಧುರ. ಅವರ ಮಾತಿಗೆ ಎದುರಾಡುವ ಧೈರ್ಯ ಯಾರಿಗೂ ಇರುತ್ತಿರಲಿಲ್ಲ. ಅವರು ತೆಗೆದುಕೊಂಡ ತೀರ್ಮಾನಕ್ಕೆ ಯಾರಿಂದಲೂ ಅಡ್ಡಿ ಬರುತ್ತಿರಲಿಲ್ಲ. ಅವರು ದೊಡ್ಡವರಿರಲಿ, ಚಿಕ್ಕವರಿರಲಿ ಇವರ ಮಾತಿಗೆ ಬೆಲೆ, ಮನ್ನಣೆ

ಬಹುತೇಕ ಒಮ್ಮತವಾಗಿರುತ್ತಿತ್ತು. ಕಾರಣ ಅವರಲ್ಲಿದ್ದ ವಿಚಕ್ಷಣತೆ.

ಇವರು ಚಾಣಾಕ್ಷರೂ ಹೌದು : ಮುತ್ಸದ್ಧಿಯೂ ಹೌದು. ಓದು ಕಡಿಮೆ ಇದ್ದರೂ, ಪಂಡಿತರಲ್ಲೂ ತಪ್ಪು ಹುಡುಕಿಕೊಡಬಲ್ಲಂಥ ಪ್ರೌಢಿಮೆ ಅವರಿಗಿತ್ತು. ಗತ್ತು ಘನತೆಗಳಿಗೆ ಕೊರತೆ ಇಲ್ಲದಿದ್ದಂತೆಯೇ, ಸಹೃದಯತೆ ಔದಾರ್ಯಕ್ಕೂ ಇವರಲ್ಲಿ ಬರವಿರಲಿಲ್ಲ. ಇವರ ಮಾತಿನ, ಶಿಸ್ತಿನ ಮೋಡಿಗೆ ಸಿಕ್ಕಿಕೊಂಡವರು ಮತ್ತೆ ಬಿಡಿಸಿಕೊಂಡದ್ದು ಅಪರೂಪ, ಅಂಥ ವರ್ಚಸ್ಸು. ಒಮ್ಮೆ ತೀರ್ಮಾನಕ್ಕೆ ಬಂದರೆಂದರೆ ನಿರ್ಧಾರ ಬದಲಾಗುತ್ತಿರಲಿಲ್ಲ. ಜೈಲಿನಲ್ಲಿದ್ದಾಗ ಕೊಬ್ಬರಿ ಎಣ್ಣೆ ಕೇಳಿದಾಗ ಕೊಡದ ಅಧಿಕಾರಿಯ ಎದುರು ತಮ್ಮ ಸುಂದರ ಕೇಶವನ್ನು ಮುಂಡನ ಮಾಡಿಸಿಕೊಂಡವರು, ಕಡೆಯುವರೆಗೂ ಅದನ್ನು ಪಾಲಿಸಿದರು. ಇದು ಕೇವಲ ಅವರ ವೈಯಕ್ತಿಕ ವಿಷಯಕ್ಕೆ ಸಂಬಂಧಿಸಿದ್ದಾದರೂ ಅರ್ಥಗರ್ಭಿತ. ಇಂಥ ನೂರಾರು ಉದಾಹರಣೆಗಳು ಅವರು ವಿವಿಧ ರಂಗಗಳಿಗೆ ಸಲ್ಲಿಸಿದ ಸೇವೆಯಲ್ಲಿ ಸಿಗುತ್ತವೆ. ಅಜ್ಜನ ಬಳುವಳಿ ಎಂಬಂತೆ ಮೊಮ್ಮಗ ಚಂದ್ರಪ್ರಕಾಶನು, ಸರ್ಕಾರಿ ಉನ್ನತ ಅಧಿಕಾರ ಬಿಟ್ಟು ಸ್ವಂತ ಕಾರ್ಖಾನೆಯೊಂದನ್ನು ನಡೆಸುತ್ತಿರುವುದರ ಹಿಂದೆ ಅಜ್ಜನ ಕಟ್ಟಪ್ಪಣೆಯ ಅನುಸರಣೆಯಿದೆ. ಹೀಗೆ, ತಾವು ಗತಿಸಿದರೂ, ತಮ್ಮ ನಡವಳಿಕೆಯಿಂದ ಮಾರ್ಗದರ್ಶಕರಾಗಿರುವವರು ಚನ್ನಯ್ಯನವರು.

ಶೈಕ್ಷಣಿಕವಾಗಿ ಇವರ ಸಾಧನೆ ಶ್ರಮ ಶಾಶ್ವತ ಕೀರ್ತಿಗೆ ಅರ್ಹವಾದದ್ದು. Institute of Education ಸ್ಥಾಪಿಸಿದರಲ್ಲದೆ, ಸಾರ್ವಜನಿಕ ಹಾಸ್ಟಲುಗಳನ್ನು ಸ್ಥಾಪಿಸಿದರು. ಜಾತಿಯ ಹೆಸರಿನಲ್ಲಿ ವಸತಿನಿಲಯಗಳನ್ನು ಸ್ಥಾಪಿಸುವುದರ ವಿರುದ್ಧ ಕಟು ವಿರೋಧಿಯಾಗಿದ್ದ ಇವರು, ಜಾತಿ, ಜನರ ಏಳ್ಗೆಗೆ ಸಾಮಾನ್ಯ ಅಂಶವಾಗಬಾರದೆಂದು ನಂಬಿದ್ದರು, ಅದರಂತೆ ನಡೆದರು. ಕೆ.ಎಚ್. ರಾಮಯ್ಯ ಅನಾಥಾಲಯಕ್ಕೆ ಲಕ್ಷಾಂತರ ರೂಪಾಯಿನ ಬಹು ದೊಡ್ಡ ತಮ್ಮ ಕಟ್ಟಡವೊಂದನ್ನು ದಾನಮಾಡಿ ಸ್ಮರಣಾರ್ಹ ಸೇವೆಗೈದಿದ್ದಾರೆ ; ಮೈಸೂರಿನ ಇತಿಹಾಸದಲ್ಲಿ ಚಿರಂತನ ಸ್ಥಾನ ತಮ್ಮದಾಗಿಸಿಕೊಂಡಿದ್ದಾರೆ.

ಚನ್ನಯ್ಯನವರು ಎಲ್ಲೇ ಇರಲಿ, ಹೇಗಿರಲಿ ಮೈಸೂರಿನ ಸಂಪರ್ಕವನ್ನು ಎಂದೂ ಕಡಿದುಕೊಳ್ಳಲಿಲ್ಲ. ಮೈಸೂರಿನ ಜನರಿಗೆ ಇವರು ಸಾಂಸ್ಕೃತಿಕ ಹರಿಕಾರರಾಗಿದ್ದರು : ರಾಜಕೀಯ ಗುರುವಾಗಿದ್ದರು ನಜರ್‌ಬಾದು ನವಾಬರಾಗಿದ್ದರು.

ಇವರ ದಾನ ಧರ್ಮ ಆತಿಥ್ಯ, ಔದಾರ್ಯ, ಚಾಣಾಕ್ಷತೆ, ದಕ್ಷತೆ, ಸಾಧನೆ ಸಿದ್ಧಿಗಳನ್ನು ಹತ್ತಿರದಿಂದ ಸವಿದ ಸಾರ್ವಜನಿಕರು, ಸ್ನೇಹಿತರು, ಪತ್ರಕರ್ತರು ಇವರನ್ನು ಹಾಡಿ ಹೊಗಳಿದ್ದಾರೆ ; ಬಿರುದು ಬಾವಲಿಗಳನ್ನು ಕೊಟ್ಟಿದ್ದಾರೆ. Nawab of Nazarbad, Nizam of Nazarbad, Kamaraj of Mysore, ಎಂದೇ ಜನಮಾನದಲ್ಲಿ ಚಿರಸ್ಥಾಯಿಯಾದರು ಶ್ರೀ ಚನ್ನಯ್ಯನವರು.

ಎಪ್ಪತ್ತು ವರ್ಷಗಳ ತುಂಬು ಜೀವನ ನಡೆಸಿದ ಚನ್ನಯ್ಯನವರು ದೊಡ್ಡ

ಜಮೀನ್ದಾರವಂಶಸ್ಥರಾಗಿ ಜನ್ಮತಳೆದು, ಬಹುಬೇಗ ಸಾಂಸಾರಿಕ ಜೀವನಕ್ಕೆ ಸಿಕ್ಕಿ, ನಲುಗಿ, ಬಿಡಿಸಿಕೊಂಡು ರಾಜಕೀಯವಾಗಿ ಏರುಪೇರುಗಳನ್ನು ಕಂಡರೂ, ಕಂಗೆಡದೆ ಮುಪ್ಪಿನವರೆಗೂ ದುಡಿದು ಮುಪ್ಪಾದವರು. ಸ್ವಲ್ಪಕಾಲ ಅಸ್ವಸ್ಥರಾಗಿದ್ದ ಇವರು ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ 1971ರ. ನವಂಬರ್ 20ನೇ ತಾರೀಖು ದಿವಂಗತರಾದರು. ತಮ್ಮ ದಿವ್ಯಜೀವನ ಪಥವನ್ನು ಬೇರೆಯವರು ಕ್ರಮಿಸಲು ಬಿಟ್ಟು ಹೋಗಿದ್ದಾರೆ.

ಪದ್ಮಾಶೇಖರ್

ಆಧಾರ

೧. ಶ್ರೀಮಂತಿ ಪ್ರಮೀಳಕೃಷ್ಣ ಮತ್ತು ಕ್ಯಾಪ್ಟನ್‌ಕೃಷ್ಣ ಅವರ ಮೌಖಿಕ ಮಾಹಿತಿ.
೨. ರೈತಬಂಧು, ಸಂ 9. ಸಂಚಿಕೆ 3, ದಿ, 6-12-71
೩. ಪ್ರಜಾವಾಣಿ, ಸಂ 24, ಸಂಚಿಕೆ 316. ದಿ 21-11-71
೪. The sunday standard, vol xxxii, No. 47, Date 21-11-71
೫. Deccan Herald, vol xxxiv, No. 316, Date 21-11-71

ಟಿ. ಮರಿಯಪ್ಪ

ರಾಜಕೀಯ ರಂಗ ಇಂದು ಕೆಲವರಿಗೆ ಹೊಟ್ಟೆಪಾಡಿನ ಕ್ಷೇತ್ರ. ಇನ್ನು ಹಲವರಿಗೆ ಮೋಜಿನ ಅಥವಾ ಜೂಜಿನ ಕ್ಷೇತ್ರ, ಮತ್ತೆ ಕೆಲವರಿಗೆ ಅದು ಹಣ ಗಳಿಕೆಯ, ಇಲ್ಲವೇ ಎದುರಾಳಿಯ ಮೇಲೆ ಸೇಡು ತೀರಿಸಿಕೊಳ್ಳುವ ಬೃಹತ್ ಸಾಧನ. ಇಂದು ರಾಜಕೀಯ ರಂಗದಲ್ಲಿ ಕಾಲಿಡುವ ನೂರರಲ್ಲಿ ತೊಂಬತ್ತೊಂಬತ್ತು ಮಂದಿಯ ಚರಮಗುರಿ ಇವುಗಳಲ್ಲಿ ಯಾವುದಾದರೂ ಒಂದಾಗಿರುತ್ತದೆ, ಇಲ್ಲವೇ ಎಲ್ಲವೂ ಆಗಿರುತ್ತದೆ. ಮಿಕ್ಕ ಒಂದು ಭಾಗ ಅಪವಾದವಾಗಿ, ದೊಡ್ಡ ಭೂತಗನ್ನಡಿಯಲ್ಲಿ ಅತ್ಯಂತ ಸಣ್ಣದಾಗಿ ಕಂಡೂ ಕಾಣದಂತೆ ಗೋಚರಿಸಬಹುದು ಅಷ್ಟೇ. ಇಂತಹ ವ್ಯಕ್ತಿಗಳೂ ಇಂದು ಈ ತಿಮಿಂಗಿಲಗಳ ನಡುವೆ ಬದುಕಿ ಬಾಳುವುದು, ತಮ್ಮ ಪಾವಿತ್ರ್ಯವನ್ನು ಉಳಿಸಿಕೊಂಡು ಮುನ್ನಡೆಯುವುದು ಕಷ್ಟವೇ ಆಗಿದೆ. ಅಂತಹವರು ಒಮ್ಮೊಮ್ಮೆ ಮುಗ್ಗರಿಸಿ ಬಿದ್ದು, ಮತ್ತೆ ಎದ್ದು ನಿಲ್ಲುವುದು ಕಷ್ಟವೇ ಆಗಿ ತೋರುತ್ತದೆ. ಇದಕ್ಕೆಲ್ಲ ರಾಜಕಾರಣಿಗಳಷ್ಟೇ ಅವರ ಸುತ್ತ ಮುತ್ತ ಸೃಷ್ಟಿಯಾಗಿರುವ ಪರಿಸರವೂ ಬಹುಮುಖ್ಯ ಕಾರಣವೆಂದು ಅನುಮಾನಿಸಿ ಹೇಳಬೇಕಾಗಿಲ್ಲ.

ರಾಜಕೀಯದ ಪಾವಿತ್ರ್ಯ ಇಂದು ಧೂಳೀಪಟವಾಗಿದೆ. ಅದರ ಧ್ಯೇಯೋದ್ದೇಶಗಳು ಮಣ್ಣುಗೂಡಿವೆ. ಹಿಂದೆ ರಾಜಕೀಯ ರಂಗ ಪ್ರವೇಶ ಮಾಡುತ್ತಿದ್ದವರಲ್ಲಿ ಒಂದು ದೃಢ ಸಂಕಲ್ಪವಿರುತ್ತಿತ್ತು, ನಿಶ್ಚಿತ ಗುರಿ ಇರುತ್ತಿತ್ತು, ನಾಡು–ನುಡಿಯ ಬಗೆಗೆ, ಅಲ್ಲಿಯ ಜನತೆಯ ಬಗೆಗೆ ಅತಿಯಾದ ಅಭಿಮಾನವಿರುತ್ತಿತ್ತು. ಅವರೆಲ್ಲ ಸ್ವಾತಂತ್ರ್ಯಹೋರಾಟದ ಕಾವಿನಲ್ಲಿ ನೊಂದು–ಬೆಂದು ಬಂದವರು. ಅದಕ್ಕಾಗಿ ಪ್ರಾಣಾರ್ಪಣೆಮಾಡಲು ಸಿದ್ಧವಿದ್ದು ತಮ್ಮನ್ನು ಅದಕ್ಕೆ ತೊಡಗಿಸಿ ಕೊಂಡಿದ್ದವರು. ನಿಷ್ಠೆ–ಪ್ರಾಮಾಣಿಕತೆಗಳಿಗೆ ಮತ್ತೊಂದು ಹೆಸರಾಗಿದ್ದವರು. ಆದರೆ ಇಂದು ಅವೆಲ್ಲ ದಾರಿತಪ್ಪಿವೆ. ಸೂತ್ರ ಕಳೆದುಕೊಂಡಿವೆ. ಒಬ್ಬರ ಕಾಲೆಳೆದು ಮೇಲೇರಿ ನಿಲ್ಲುವುದೇ ರಾಜಕೀಯವೆಂದಾಗಿದೆ. ಇಂದು ಅದು ತನ್ನ ನಿಜವಾದ ಅರ್ಥವನ್ನೇ ಮಸಣವಾಗಿಸಿಕೊಂಡಿದೆ ಎಂದೆನ್ನಬಹುದು. ಇಂತಹ ಸನ್ನಿವೇಶದಲ್ಲಿ ಹಿಂದಿನ ರಾಜಕೀಯ ವ್ಯಕ್ತಿಗಳ ಬಗೆಗೆ ಆಲೋಚಿಸುವುದು ಅವರನ್ನು ಸ್ಮರಿಸಿಕೊಳ್ಳುವುದೇ ಒಂದು ರೀತಿಯ ಖುಷಿಕೊಡುವ ಸಂಗತಿಯೆನ್ನಬಹುದು. ನೀರಿನಲ್ಲಿ ಮುಳುಗುತ್ತಿರುವ ವ್ಯಕ್ತಿಯೊಬ್ಬ ಆಕಸ್ಮಿಕವಾಗಿ ಸಿಕ್ಕಿದ ಹುಲ್ಲುಗರಿಯನ್ನೇ ನಂಬಿ ಬದುಕಿದೆನೆಂದು ಸಂತೋಷ ಪಡುವಷ್ಟೇ

ಲಾಭ ಇದರಿಂದ ಎಂಬುದು ಸ್ಪಷ್ಟ ವಿಷಯವಾದರೂ, ಆ ಒಂದು ಕ್ಷಣ ಕೊಡುವ ಸಂತೋಷವೇ ಈ ನಿರಾಶೆಯ ಬದುಕಿನ ಆಶಾಕಿರಣ ಎಂದು ಭಾವಿಸಿ ಈ ಲೇಖನ ಬರೆಯುತ್ತಿದ್ದೇನೆ.

ಸ್ವಾತಂತ್ರ್ಯ ಚಳುವಳಿ ಭಾರತೀಯರನ್ನು ಒಟ್ಟುಗೂಡಿಸುವಲ್ಲಿ ದಾಸ್ಯದ ಕಿಚ್ಚನ್ನು ತಣ್ಣಗಾಗಿಸುವಲ್ಲಿ, ಒಂದು ನಿಶ್ಚಿತ ಕಾರಣಕ್ಕಾಗಿ ಹೋರಾಟ ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಬ್ರಿಟಿಷರಿಂದ ಬಿಡುಗಡೆ ಪಡೆಯುವ ಏಕೋದ್ದೇಶದಿಂದ, ಪ್ರಾಣವನ್ನು ತೃಣವಾಗಿ ಪರಿಗಣಿಸಿ ನಿಂತವರು ಅದೆಷ್ಟೋ ಮಂದಿ. ಅಂತಹವರಲ್ಲಿ ಬಹುಪಾಲು ಇಂದು ನಮ್ಮ ನಡುವೆ ಇಲ್ಲ. ಅವರು ತಮ್ಮ ಆದರ್ಶಗಳನ್ನು ಬಿಟ್ಟು ಹೋಗಿದ್ದಾರಾದರೂ ಅವು ಇಂದು ವೇದಿಕೆಯ ಮೇಲೆ ಮಾಡುವ ಭಾಷಣಗಳಿಗೆ ಮಾತ್ರ ಸೀಮಿತಗೊಂಡಿವೆ. ಇತರರಿಗೆ ಹೇಳುವುದಕ್ಕಷ್ಟೇ ಉಳಿದಿವೆ. ಅಂತಹವರ ದಕ್ಷತೆ, ಕಾರ್ಯನಿಷ್ಠೆ, ಸತ್ಯಪ್ರಿಯತೆ, ಪ್ರಾಮಾಣಿಕತೆ ಇತ್ಯಾದಿ ಇತ್ಯಾದಿಗಳು ಇಂದು ಗಗನಕುಸುಮಗಳಾಗಿವೆ. ಈ ಬಗೆಯ ಆದರ್ಶಗಳ ಬೆನ್ನು ಹತ್ತಿದ ಅವರ ವರ್ತನೆ ಇತರರಿಗೆ ಆಶ್ಚರ್ಯವಾಗಿ ತೋರುವುದರಲ್ಲಿ ವಿಶೇಷವಿಲ್ಲ. ಆ ಆದರ್ಶದ ಅಮಲಿನಲ್ಲಿ ಲೌಕಿಕದ ಅನೇಕ ವಿಚಾರಗಳ ಕಡೆಗೆ ಗಮನ ಹರಿಸಲಾಗದೆ ಪೇಚಿಗೆ ಸಿಕ್ಕಿಕೊಂಡ ಪ್ರಸಂಗಗಳು ಅದೆಷ್ಟೋ. ಹಿಡಿದ ಕಾರ್ಯದ ಗುರಿ ಸಾಧನೆಯಲ್ಲಿ ಉಳಿದ ವಿಚಾರಗಳ ಕಡೆಗೆ ಗಮನ ಕೊಡದೆ ಹೋದ ಸಂದರ್ಭಗಳೂ ಕಡಿಮೆಯಿಲ್ಲ. ಇದನ್ನು ಮರೆವು ಎಂದು ಕರೆಯಬಹುದಾದರೂ ಆ ಮರೆವು ಉದಾಸೀನ ಅಥವಾ ನಿರ್ಲಕ್ಷ್ಯದಿಂದ ಉಂಟಾದಲ್ಲ, ಹಿಡಿದ ಕಾರ್ಯದಲ್ಲಿ ಸಂಪೂರ್ಣ ತಮ್ಮನ್ನು ತಾವು ತೊಡಗಿಸಿಕೊಂಡ ಕಾರಣದಿಂದ ಉಂಟಾದುದು. ಶ್ರೀ ಟಿ. ಮರಿಯಪ್ಪನವರು ಇಂತಹ ಜಾತಿಗೆ ಸೇರಿದವರು. ಯಾವುದೇ ವಿಚಾರ ತಲೆಗೆ ಹೊಕ್ಕರೆ ಸಂಪೂರ್ಣ ಅದರಲ್ಲಿ ಮುಳುಗಿ ಬಿಡುತ್ತಿದ್ದವರು.

ಒಮ್ಮೆ ಶ್ರೀ ಮರಿಯಪ್ಪನವರು ಸಯ್ಯಾಜಿರಾವ್ ರಸ್ತೆಯಲ್ಲಿದ್ದ ತಮ್ಮ ಕಛೇರಿಯ ಮಹಡಿಯಿಂದ ಧಡಧಡನೆ ಇಳಿದು ಬಂದು ತಮ್ಮ ಕಾರಿನಲ್ಲಿ ಕುಳಿತರು. ಯಾವುದೋ ವಿಚಾರವನ್ನು ತಲೆಯಲ್ಲಿ ತುಂಬಿಕೊಂಡಿದ್ದ ಅವರು ಡ್ರೈವರ್‌ಗೆ ಹೇಳಿ ಒಂದು ದಿಕ್ಕನ್ನು ಕೈಮಾಡಿ ತೋರಿದರು. ಪಾಂಡವಪುರ ದಿಕ್ಕಿಗೆ ಮುಖಮಾಡಿ ನಿಂತಿದ್ದ ಕಾರು ಆ ಕಡೆಗೇ ಹೊರಟು ಪಾಂಡವಪುರವನ್ನು ತಲುಪಿತು. ತಲುಪಿಯಾದ ಮೇಲೆ ಶ್ರೀ ಮರಿಯಪ್ಪನವರು 'ಇದೇನಯ್ಯ ಹುಣಸೂರಿಗೆ ಹೋಗಬೇಕೆಂದಿದ್ದರೆ ಇಲ್ಲಿಗೆ ಕರೆದು ತಂದ' ಎಂದು ಹೇಳಿ ಮತ್ತೆ ಹುಣಸೂರಿಗೆ ಹೊರಡಿಸಿಕೊಂಡು ಹೊರಟರು. ಮತ್ತೊಮ್ಮೆ ಮಹಡಿಯಿಂದ ಇಳಿದು ಬಂದ ಅವರು ಧಡಕ್ಕನೆ ಕಾರಿನಲ್ಲಿ ಕುಳಿತರು. ಪಕ್ಕದಲ್ಲಿಯೇ ಹೆಂಗಸೊಬ್ಬರು ಕುಳಿತದ್ದನ್ನು ಕಂಡು ಗಾಬರಿಗೊಂಡು 'ಕ್ಷಮಿಸಿ–ಕ್ಷಮಿಸಿ' ಎಂದು ಹೇಳಿ ತಮ್ಮ ಕಾರಿನ ಕಡೆಗೆ ಹೊರಟರು.

ಶ್ರೀ ಮರಿಯಪ್ಪನವರ ಬಗೆಗೆ ಇಂತಹ ನೂರಾರು ಕತೆಗಳಿವೆ. ಅದರಲ್ಲಿ ಕೆಲವು ಆರೋಪಿತದ ಕಟ್ಟುಕತೆಗಳಿರಬಹುದಾದರೂ, ಎಲ್ಲವೂ ಅಲ್ಲ. ಅದೇ ಕೇಸುಗಳ ವಿಚಾರದಲ್ಲಿ ಅವರು ವಾದಿಸುತ್ತಿದ್ದ ರೀತಿ, ವಿಚಾರಗಳನ್ನು ಮಂಡಿಸುತ್ತಿದ ಬಗೆ, ಅಪೂರ್ವ ರೀತಿಯದಾಗಿರುತ್ತಿತ್ತು. ಚನ್ನಾಗಿ ವಾದಿಸಿ ಕೇಸುಗಳನ್ನು ಗೆದ್ದು, ಒಳ್ಳೆಯ ಹೆಸರನ್ನೂ ವಕೀಲರಾಗಿಯೂ ಅವರು ಪಡೆದಿದ್ದಾರೆ.

ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತೆ, ಸತ್ಯಪ್ರಿಯತೆ ಇವುಗಳು ಅವರ ರಕ್ತಕ್ಕಂಟಿದ ಗುಣಗಳಾಗಿದ್ದವು. ಆದರ್ಶ ನ್ಯಾಯವಾದಿಯಾಗಿ, ಸಮಾಜ ಸುಧಾರಕರಾಗಿ, ಸ್ವಾತಂತ್ರ್ಯಹೋರಾಟಗಾರರಾಗಿ ಪ್ರಾಮಾಣಿಕ ರಾಜಕಾರಣಿಯಾಗಿ ಒಳ್ಳೆಯ ಆಡಳಿತ ಗಾರರಾಗಿ, ದಕ್ಷ ಮಂತ್ರಿಯಾಗಿ—ತಮ್ಮ ಬದುಕಿನ ವಿವಿಧ ಕ್ಷೇತ್ರಗಳಲ್ಲಿ ಶ್ರೀ ಮರಿಯಪ್ಪನವರು ಈ ಗುಣಗಳನ್ನು ಉದ್ದಕ್ಕೂ ತೋರುತ್ತಾ ಬಂದವರು.

ಸ್ವಾಭಿಮಾನಿಯೂ, ಸ್ವಾತಂತ್ರ್ಯಪ್ರೇಮಿಯೂ ಆದ ಶ್ರೀ ಮರಿಯಪ್ಪನವರಿಗೆ ಸರ್ಕಾರಿ ಕೆಲಸ ಒಗಟಾಗಿ ಕಂಡಿತು. ಅವರು ಬಹುಬೇಗ ಅದರಿಂದ ಕಾಲ್ತೆಗೆದು ವಕೀಲಿ ವೃತ್ತಿಯನ್ನು ಹಿಡಿದರು. ಹಿರಿಯ ಕಾಂಗ್ರೆಸಿಗರಾದ ಶ್ರೀ ಎಚ್. ಸಿ. ದಾಸಪ್ಪ ಇವರ ವೃತ್ತಿ ಗುರುವಾದರು. ಅವರ ಮಾರ್ಗದರ್ಶನದಲ್ಲಿ ಒಳ್ಳೆಯ ನ್ಯಾಯವಾದಿಯೆಂದು ಬೇಗ ಹೆಸರಾದರು. ಹಣಕ್ಕೆ ಅವರು ಎಂದೂ ಪ್ರಾಧಾನ್ಯತೆ ಕೊಟ್ಟವರಲ್ಲ. ಬಡವರ ಬಗೆಗಿನ ಅನುಕಂಪೆ, ದೇಶದ ಪರಿಸ್ಥಿತಿ ಅವರನ್ನು ಬೇರೊಂದು ವ್ಯಕ್ತಿಯನ್ನಾಗಿಯೇ ಮಾಡಿತು. ಯಾವುದೇ ಕೇಸು ತಮ್ಮ ಬಳಿ ಬಂದರೂ, ಅದನ್ನು ಚನ್ನಾಗಿ ಪರಿಶೀಲಿಸಿ, ನ್ಯಾಯಾಲಯದ ಮೆಟ್ಟಿಲು ಹತ್ತುವ ಮೊದಲೇ ಅದನ್ನು ಬಗೆ ಹರಿಸಲು ಸಾಧ್ಯವಾಗುವಂತಿದ್ದರೆ ಆ ಕೆಲಸವನ್ನು ತಪ್ಪದೆ ಮಾಡುತ್ತಿದ್ದರು. ಅದಷ್ಟೂ ಎರಡೂ ಕಡೆಯವರನ್ನು ಬರಮಾಡಿಕೊಂಡು ರಾಜೀ ಮಾಡಲು ಪ್ರಯತ್ನಿಸುತ್ತಿದ್ದರು, ಯಾರೊಬ್ಬರೂ ವೃಥಾ ಹಣವನ್ನಾಗಲೀ, ಕಾಲವನ್ನಾಗಲಿ, ಹಾಳು ಮಾಡುವುದು ಅವರಿಗೆ ಇಷ್ಟವಾಗುತ್ತಿರಲಿಲ್ಲ. ಅಲ್ಲದೆ ಅವರಿಗೆ ಬರುವ ಕೇಸುಗಳು ಎಂಥವು, ಕೇಸುಗಳನ್ನು ತರುವವರು ಎಂತಹವರು ಎಂಬುದೂ ಅವರಿಗೆ ಚೆನ್ನಾಗಿ ಗೊತ್ತಿತ್ತು, ಯಾವುದೋ ದ್ವೇಷ, ಅಸೂಯೆ ಅಥವಾ ಇತರರ ಪಿತೂರಿ ಕಾರಣವಾಗಿ ಎಷ್ಟೋ ಕೇಸುಗಳು ಹುಟ್ಟಿಕೊಳ್ಳುತ್ತವೆ ಎಂಬುದನ್ನು ಅವರು ಬಲ್ಲವರಾಗಿದ್ದರು. ಹಾಗಾಗಿ ಅವನ್ನು ಹೋಗಲಾಡಿಸಿ ಒಂದು ಸೌಹಾರ್ದ ವಾತಾವರಣವನ್ನು ಉಂಟು ಮಾಡಿ ಶಾಶ್ವತ ಶಾಂತಿಯನ್ನುಂಟು ಮಾಡುವುದು ಅವರ ಮುಖ್ಯ ಉದ್ದೇಶವಾಗಿತ್ತು. ಅದಕ್ಕಾಗಿ ಅವರು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದರು. ಬಡವರ ಬಗ್ಗೆ ಅವರಿಗಿದ್ದ ಅನುಕಂಪೆ ಅಸಾಧಾರಣವಾದುದು. ಅನಿವಾರ್ಯವಾದ ಸಂದರ್ಭಗಳಲ್ಲಿ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಅಂತಹವರ ಪರವಾಗಿ ವಾದಿಸಿ, ಅವರಿಗೆ ನ್ಯಾಯ ದೊರಕಿಸಿಕೊಟ್ಟಿದ್ದಾರೆ. ಕೇಸುಗಳನ್ನು ತೆಗೆದುಕೊಳ್ಳುವಾಗಲೇ ಅವರು

ಅವುಗಳನ್ನು ಚೆನ್ನಾಗಿ ಅಭ್ಯಸಿಸುತ್ತಿದ್ದರು. ಅದರಲ್ಲಿ ಏನಾದರೂ ಸತ್ವ ಇದ್ದರೆ ಮಾತ್ರ ಅವುಗಳನ್ನು ತೆಗೆದುಕೊಳ್ಳುತ್ತಿದ್ದರು. ಇಲ್ಲವಾದರೆ ಬುದ್ಧಿ ಹೇಳಿ ರಾಜಿ ಮಾಡಿ ಅದನ್ನು ಬಗೆ ಹರಿಸಲು ಪ್ರಯತ್ನಿಸುತ್ತಿದ್ದರು.

ಒಬ್ಬ ಆದರ್ಶನ್ಯಾಯವಾದಿಯಾಗಿ ಶ್ರೀ ಮರಿಯಪ್ಪನವರು ಗಳಿಸಿದ ಕೀರ್ತಿ ಅಪಾರ. ಆದರೆ ಆ 'ಕೀರ್ತಿಶನಿ'ಯ ಅಪೇಕ್ಷೆ ಅವರಿಗೆಂದೂ ಇರಲಿಲ್ಲ. ಅವರಿಗಿದ್ದುದು ದೀನ ದಲಿತರ ಉದ್ಧಾರ ಒಂದೇ.

ನ್ಯಾಯವಾದಿಯಾಗಿ ಶ್ರೀ ಮರಿಯಪ್ಪನವರು ಗಳಿಸಿದ ಕೀರ್ತಿ ಮುಂದೆ ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಅವರಿಗೆ ಸೇವೆ ಸಲ್ಲಿಸಲು ತುಂಬಾ ಅನುಕೂಲ ವಾಯಿತು. ಬಹಳ ಬೇಗ ಅವರು ಜನಾನುರಾಗಿಗಳಾಗಿ ಪ್ರಸಿದ್ಧಿಗೆ ಬಂದರು. ಸಾಮಾಜಿಕ ಕ್ಷೇತ್ರವನ್ನು ಪ್ರವೇಶಿಸಿ ವಿವಿಧ ರಂಗದಲ್ಲಿ ಗಣನೀಯ ಕಾರ್ಯವೆಸಗಿದರು. ಅಪಾರ ದೇಶಭಕ್ತಿಯನ್ನು ಹೊಂದಿದ್ದ ಅವರಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕುವುದು ಅನಿವಾರ್ಯವಾಯಿತು. ಭಾರತದ ಸ್ವಾತಂತ್ರ್ಯ ಚಳುವಳಿ ದೇಶದ ಉದ್ದಗಲಕ್ಕೂ ಹಬ್ಬಿದ ಆ ಸಂದರ್ಭದಲ್ಲಿ ಶ್ರೀ ಮರಿಯಪ್ಪನವರು ನ್ಯಾಯಾಲಯ ಗಳನ್ನು ಬಹಿಷ್ಕರಿಸಿ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿದರು, 1940ರಲ್ಲಿ ಅವರನ್ನೂ ಬಂಧಿಸಲಾಯಿತು. 1942ರಲ್ಲಿ ಮಹಾತ್ಮ ಗಾಂಧೀಜಿಯವರ ಕರೆಯಾದ 'ಕ್ವಿಟ್ ಇಂಡಿಯಾ ಚಳುವಳಿ'ಯಲ್ಲಿ ಮರಿಯಪ್ಪನವರು ಹೆಚ್ಚುಕಾಲ ಜೈಲುವಾಸ ವನ್ನನುಭವಿಸಿದರು "ನಾನು ಸ್ವತಂತ್ರ ಭಾರತ ಪ್ರಜೆಯಾಗಿ ಸಾಯಬೇಕು" ಎಂಬುದು ಅವರ ಅಪೇಕ್ಷೆಯಾಗಿತ್ತು. ಜೈಲಿನ ಎಂಥಹುದೇ ಕಷ್ಟ ಪರಿಸ್ಥಿತಿಯಲ್ಲಿಯೂ ಅವರ ಬಾಯಿಂದ ಹೊರಬೀಳುತ್ತಿದ್ದ ಮಾತಿದು.

ಸ್ವತಂತ್ರ ಭಾರತದ ಪ್ರಜೆಯಾದ ಮೇಲೆ ಶ್ರೀ ಮರಿಯಪ್ಪನವರ ಕಾರ್ಯಕ್ಷೇತ್ರ ಇನ್ನೂ ಹೆಚ್ಚು ವಿಸ್ತಾರಗೊಂಡಿತು. ರಾಷ್ಟ್ರವನ್ನು ಮುನ್ನಡೆಸಬೇಕೆಂಬ ಆಸೆಯ ಜೊತೆಗೆ, ಅದಕ್ಕೆ ಬೇಕಾದ ಸರ್ವ ಸಿದ್ಧತೆಯನ್ನು ಮಾಡಬೇಕೆಂಬ ಅವರ ಮನೋಭಾವ ಅವರ ಕಾರ್ಯ ವಿಧಾನದಲ್ಲಿ ಎದ್ದು ಕಾಣುವಂತಹುದು. ಮರಿಯಪ್ಪನವರು ಸರ್ಕಾರಿ ನೌಕರಿಯನ್ನೇ ಮುಂದುವರಿಸಿದ್ದರೆ ಅಥವಾ ವಕೀಲಿ ವೃತ್ತಿಯನ್ನಷ್ಟೇ ಅವಲಂಭಿಸಿ ಉಳಿದಿದ್ದರೆ, ಸೀಮಿತವಾದ ಈ ಕ್ಷೇತ್ರದಲ್ಲಿ ಒಂದಿಷ್ಟು ಕೆಲಸವನ್ನು ಮಾಡಲು ಸಾಧ್ಯವಾಗುತ್ತಿತ್ತು ಅಷ್ಟೇ. ಆದರೆ, ಅವರ ಬೃಹತ್ ಆಸೆ ಆಕಾಂಕ್ಷೆಗೆ, ಸೇವಾ ಮನೋಭಾವಕ್ಕೆ ಅವು ಸಾಕಾಗುತ್ತಿರಲಿಲ್ಲ. ವಕೀಲಿ ವೃತ್ತಿಯ ಮೂಲಕ ಸಾರ್ವಜನಿಕ ಕ್ಷೇತ್ರದ ನಿಕಟಾನುಭವ ಅವರಿಗಾಯಿತು. ಅಲ್ಲಿಯ ಸಮಸ್ಯೆಗಳ ಕಟು ಸತ್ಯದ ಅರಿವಾಯಿತು.

ಮೈಸೂರು ಪುರಸಭೆಯ ಸದಸ್ಯರಾಗುವುದರ ಮೂಲಕ ಸಾರ್ವಜನಿಕ ಕ್ಷೇತ್ರವನ್ನು ಪ್ರವೇಶಿಸಿದ ಅವರು ಹಂತ ಹಂತವಾಗಿ ಜನಪ್ರಿಯತೆಯ ಮೂಲಕ

ಮೇಲಕ್ಕೇರಿದರು. ಬಹಳ ಬೇಗ ಅದರ ಉಪಾಧ್ಯಕ್ಷರು ಅಧ್ಯಕ್ಷರೂ ಆದರು. ಇದು ಅವರ ಪ್ರಾಮಾಣಿಕತೆ, ದಕ್ಷ ಆಡಳಿತ ಹಾಗೂ ನಿಸ್ವಾರ್ಥ ಸೇವೆಗೆ ದೊರೆತ ಫಲವೇ ಆಗಿತ್ತು. ಈ ಅಧಿಕಾರಾವಧಿಯಲ್ಲಿ ಅವರು ಅನೇಕ ಜನೋಪಯೋಗಿ ಯೋಜನೆಗಳನ್ನು ಹಮ್ಮಿಕೊಂಡರು. ಮರಿಯಪ್ಪನವರ ದೂರ ದರ್ಶಿತ್ವಕ್ಕೆ ಸಾಕ್ಷಿ, ಅಂದು ಅವರ ನೇತೃತ್ವದಲ್ಲಿ ಸ್ಥಾಪನೆಗೊಂಡ—'ನಗರಾಭಿವೃದ್ಧಿ ಸಂಸ್ಥೆ'.

ಶ್ರೀ ಮರಿಯಪ್ಪನವರು ಬಹಳ ಬೇಗ ಕಾಂಗ್ರೆಸ್ ಸಂಸ್ಥೆಯ ಒಬ್ಬ ಗಣ್ಯ ನಾಯಕರಾಗಿ ಬೆಳೆದರು. ಶ್ರೀ ಎಚ್. ಸಿ. ದಾಸಪ್ಪ, ಶ್ರೀ ಸಾಹುಕಾರ್ ಚನ್ನಯ್ಯ ನವರಂತಹ ರಾಜಕೀಯ ಧುರೀಣರ ಒಡನಾಡಿಗಳಾದ ಅವರು ಅತಿ ಶೀಘ್ರದಲ್ಲಿಯೇ ಪ್ರಖ್ಯಾತರಾದರು. ಎಲೆಮರೆಯ ಕಾಯಿಯಂತೆ ದುಡಿಯುತ್ತಿದ್ದ ಶ್ರೀ ಮರಿಯಪ್ಪ ನವರನ್ನು ನೇರ ರಾಜಕೀಯಕ್ಕೆ ಎಳೆತಂದವರು ಶ್ರೀ ಸಾಹುಕಾರ್ ಚನ್ನಯ್ಯನವರು. ಶ್ರೀ ಮರಿಯಪ್ಪನವರ ಹಿರಿಯ ಗುಣಗಳು ಅವರಿಗೆ ಬಹಳ ಮೆಚ್ಚುಗೆಯಾಗಿದ್ದುವು. ಆದರೆ ಅವರ ಸ್ವಂತ ಶಕ್ತಿ, ದುಡಿಮೆ, ಶ್ರದ್ಧೆ, ಇತ್ಯಾದಿ ಇತ್ಯಾದಿಗಳು ಅವರನ್ನು ಬಹುಬೇಗ ಜನಪ್ರಿಯಗೊಳಿಸಿ, ಮೇಲಕ್ಕೇರಿಸುವ ಮೆಟ್ಟಿಲುಗಳಾಗಿದ್ದುವು. ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾದ, ಶಾಸನ ಸಭೆಯ ಸದಸ್ಯರಾದ ಅಲ್ಪಾವಧಿಯಲ್ಲಿಯೇ ಕಾಂಗ್ರೆಸ್ ಪಕ್ಷಕ್ಕೆ ಮೈಸೂರು ಕಾಂಗ್ರೆಸ್‌ಗೆ ಜವಾಬ್ದಾರಿ ಸರ್ಕಾರ ದೊರೆತು, ಅದು ಸರ್ಕಾರ ರಚಿಸಿದಾಗ ಚಿಕ್ಕವಯಸ್ಸಿನವರಾದ ಶ್ರೀ ಮರಿಯಪ್ಪನವರನ್ನೂ ಮಂತ್ರಿ ಯನ್ನಾಗಿ ಆಯ್ಕೆ ಮಾಡಿತು. ಅನಂತರ ಎರಡು ಮೂರು ಮಂತ್ರಿ ಮಂಡಲಗಳಲ್ಲಿ ವಿವಿಧ ಶಾಖೆಗಳನ್ನು ಅತ್ಯಂತ ದಕ್ಷತೆಯಿಂದ ಕಾರ್ಯನಿರ್ವಹಿಸಿ ಒಳ್ಳೆಯ ಹೆಸರು ಮಾಡಿದರು. ಗೃಹಸಚಿವರಾಗಿ, ಹಣಕಾಸಿನಸಚಿವರಾಗಿ, ಲೋಕೋಪಯೋಗಿ ಸಚಿವರಾಗಿ, ಸಾರಿಗೆ ಸಚಿವರಾಗಿ, ಮೊದಲು ಮೈಸೂರು ಸರ್ಕಾರದ ಆಡಳಿತದಲ್ಲಿದ್ದ ರೈಲ್ವೆ ಮಂತ್ರಿಯಾಗಿಯೂ ಅವರು ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದಾರೆ. ಗೃಹಮಂತ್ರಿಗಳಾಗಿದ್ದ ಕಾಲದಲ್ಲಿ ಅವರು ಮಾಡಿದ ಕಾರ್ಯಗಳು ಶಾಶ್ವತವಾದ ಫಲವನ್ನು ಉಂಟು ಮಾಡಿವೆ. ಹಿಂದೂ–ಮುಸ್ಲಿಂ ಗಲಾಟೆಗೆ ಸಂಬಂಧಿಸಿದಂತೆ ಅವರು ಕೈಗೊಂಡ ಕ್ರಮಗಳು ಅವರ ಅಪ್ರತಿಮ ಪ್ರತಿಭಾ ಶಕ್ತಿಗೆ ಸಾಕ್ಷಿಯೆನ್ನಬಹುದು. ಅವರ ಈ ಕ್ರಮವನ್ನು ಶ್ರೀ ಕೆ. ಎಂ. ಮುನ್ಷಿಯವರು ಮನಸಾರೆ ಕೊಂಡಾಡಿ ದ್ದಾರೆ. ಹಾಗೆಯೇ ಶ್ರೀ ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿ ಅರ್ಥ ಸಚಿವರಾಗಿ ಶ್ರೀ ಮರಿಯಪ್ಪನವರು ಕೈಗೊಂಡ ಕಾರ್ಯಗಳು ಅಷ್ಟೇ ಪ್ರಮುಖವಾದವು. ಸಂಪನ್ಮೂಲದ ಯೋಗ್ಯ ವಿತರಣೆಯಲ್ಲಿ ಅವರು ತುಂಬಾ ಕಾಳಜಿವಹಿಸುತ್ತಿದ್ದರು. ನಾಡಿನ ಸರ್ವತೋಮುಖ ಬೆಳವಣಿಗೆಗೆ ಅವರು ಹಾತೊರೆದು ಹಲವು ಯೋಜನೆ ಗಳನ್ನು ಹಾಕಿಕೊಂಡು ಅವುಗಳು ಶೀಘ್ರವಾಗಿ ಫಲನೀಡಲು ಬೇಕಾದ ನೆರವನ್ನು ಸರ್ಕಾರದ ವತಿಯಿಂದ ವಿಳಂಬವಾಗದಂತೆ ನೋಡಿಕೊಳ್ಳುತ್ತಿದ್ದರು. ರೈತರ ಸಮಸ್ಯೆಗಳ

ಬಗೆಗೆ ಅವರಿಗೆ ಚನ್ನಾಗಿ ಅರಿವಿತ್ತು. ಸಮಾಜದಲ್ಲಿ ಸಮತೋಲನವನ್ನುಂಟು ಮಾಡಲು ಅವರ ಎಲ್ಲಾ ಯೋಜನೆಗಳೂ ಸಹಾಯಕವಾಗಿದ್ದುವು. ಅವರ ಆಲೋಚನೆಗಳು ಈ ಸಮಾಜದ ಮೂಲಭೂತ ಸಮಸ್ಯೆಗಳನ್ನು ಕುರಿತಾದುವುಗಳಾಗಿದ್ದುವು. ಅವುಗಳ ನಿವಾರಣೆಗೆ ಅವರು ಕೈಗೊಳ್ಳುತ್ತಿದ್ದ ಕಾರ್ಯ ವಿಧಾನಗಳೂ ಅಷ್ಟೇ ಪರಿಣಾಮಕಾರಿಯಾಗಿದ್ದುವು.

ಶ್ರೀ ಮರಿಯಪ್ಪನವರ ದೊಡ್ಡ ಗುಣವೆಂದರೆ ಅವರು ಸಮಾಜದ ಸರ್ವತೋಮುಖ ಬೆಳವಣಿಗೆಯನ್ನು ಆಶಿಸಿದ್ದು. ಬಡತನ ನಿವಾರಣೆಗೆ ಶ್ರಮಿಸಿದಂತೆಯೆ ಅದರ ಮತ್ತೊಂದು ಮುಖವಾದ—ಸಾಹಿತ್ಯ, ಸಂಸ್ಕೃತಿ ಇವುಗಳ ಅಭಿವೃದ್ಧಿಗೂ ಕಾರ್ಯ ಕೈಗೊಂಡರು. ಇವರ ಕಾಲದಲ್ಲಿ ಆದ ಒಂದು ಕಾರ್ಯವನ್ನು ಈ ಸಂಬಂಧದಲ್ಲಿ ಸ್ಮರಿಸಲೇ ಬೇಕು; ಕನ್ನಡ ಸಾಹಿತ್ಯ ಪರಿಷತ್ತು ಕೈಗೊಂಡಿದ್ದ 'ಕನ್ನಡ – ಕನ್ನಡ ನಿಘಂಟು'ವಿನ ಕಾರ್ಯ ಹಣದ ಕೊರತೆಯಿಂದಾಗಿ ನಿಂತು ಹೋಗುವುದಾಗಿತ್ತು. ಅಂತಹ ಸಂದರ್ಭದಲ್ಲಿ ಶ್ರೀ ಮರಿಯಪ್ಪನವರೇ ಮುಂದೆ ಬಂದು, ನಿಘಂಟಿನ ಕಾರ್ಯಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಆ ಕಾಲದಲ್ಲಿ ಮಂಜೂರು ಮಾಡಿ, ನಿಘಂಟುವಿನ ಕಾರ್ಯ ಮುಂದುವರೆಯುವಂತೆ ನೆರವಾದರು. ಅವರ ಈ ಸಕಾಲಿಕ ನೆರವನ್ನು ಪರಿಷತ್ತು ಕೃತಜ್ಞತೆಯಿಂದ ಸ್ಮರಿಸಿದೆ.

ಅವರು ಲೋಕೋಪಯೋಗಿ ಸಚಿವರಾಗಿ ಕೈಗೊಂಡ ಕಾರ್ಯವಾಗಲೀ, ಸಾರಿಗೆ ಸಚಿವರಾಗಿ ಕೈಗೊಂಡ ಕಾರ್ಯಗಳಾಗಲೀ ನಾಡಿನ ಹಿತ ದೃಷ್ಟಿಯಿಂದ ನಾಡಿನ ಜನರ ಹಿತದೃಷ್ಟಿಯಿಂದ ಬಹು ಅಮೂಲ್ಯವಾದವುಗಳು. ಅವರ ಕಾಲದಲ್ಲಿಯೇ ಆರಂಭವಾದ ಸಾರಿಗೆಗೆ ಮಂತ್ರಿಯಾಗಿ ಶ್ರೀ ಮರಿಯಪ್ಪನವರು ಹಲವು ಪ್ರಥಮಗಳನ್ನು ಸ್ಥಾಪಿಸಿದರು. ಹೊಸ ಶಾಖೆಯನ್ನು ವಹಿಸಿಕೊಂಡರು. ಬಸ್ ರಾಷ್ಟ್ರೀಕರಣ ಮಾಡಿ ಸರ್ಕಾರಿ ಬಸ್ಸುಗಳ ಸಮರ್ಪಕ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಹಣ ಪೋಲಾಗದಂತೆ ಎಚ್ಚರ ವಹಿಸಿದ್ದಷ್ಟೇ ಅಲ್ಲದೆ, ಜನರ ಸೌಕರ್ಯದ ಕಡೆಗೂ ತೀವ್ರ ಗಮನವನ್ನು ಕೊಟ್ಟರು. ಹಲವರಿಗೆ ಉದ್ಯೋಗಾವಕಾಶವನ್ನು ಕೊಟ್ಟು ಜನಮನದಲ್ಲಿ ಶಾಶ್ವತವಾಗಿ ಉಳಿದರು.

ಅವರ ಕಾರ್ಯಕ್ಷೇತ್ರವು ಇಷ್ಟಕ್ಕೆ ಸೀಮಿತಗೊಳ್ಳದೆ ಇತರ ವಲಯಗಳನ್ನೂ ವ್ಯಾಪಿಸಿತ್ತು. ಶ್ರೀ ಎಚ್ ಕೆ. ವೀರಣ್ಣಗೌಡರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕಾಲದಲ್ಲಿ ಶ್ರೀ ಮರಿಯಪ್ಪನವರು ಅದರ ಜನರಲ್ ಸೆಕ್ರೆಟರಿಯಾಗಿ ಸಂಸ್ಥೆಗೆ ಹಿರಿಯ ಮಟ್ಟದ ಸೇವೆ ಸಲ್ಲಿಸಿದರು. ಕರ್ನಾಟಕದಲ್ಲಿ ಕಾಂಗ್ರೆಸ್ ಸಂಸ್ಥೆ ಸುವ್ಯವಸ್ಥಿತವಾಗಿ ಹಾಗೂ ಸುಭದ್ರವಾಗಿ ಉಳಿಯಲು ಶ್ರಮಿಸಿದರು. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ 1965ರಲ್ಲಿ ಕೈಗೊಂಡ ಭೂದಾನ ಪಾದಯಾತ್ರೆಯ ಮುಂದಾಳತ್ವವನ್ನು ವಹಿಸಿದ್ದ ಶ್ರೀ ಮರಿಯಪ್ಪನವರು ಬೆಂಗಳೂರಿನಿಂದ ಚನ್ನಪಟ್ಟಣದವರೆಗೆ

ಕಾಲುನಡಿಗೆಯಲ್ಲೇ ಬಂದು ಅದು ಯಶಸ್ಸುಗೊಳ್ಳಲು ಕಾರಣರಾದರು. ಈ ಯಾತ್ರೆಯ ಮುಖ್ಯ ಉದ್ದೇಶ ಮಹಾರಾಜರನ್ನು ಕಂಡು ಅವರಿಂದ ಭೂದಾನ ಪಡೆಯಬೇಕೆಂಬುದೇ ಆಗಿತ್ತು. ಮುಂದೆ ಮೈಸೂರು ನಗರಕಾಂಗ್ರೆಸ್ಸಿನ ಅಧ್ಯಕ್ಷರಾಗಿ ನಿಷ್ಠೆಯಿಂದ ದುಡಿದರು. ವಯಸ್ಕರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ, ಮಂಡ್ಯ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಅವರು ಸಾಧಿಸಿದ ಕಾರ್ಯಗಳು ಮಹತ್ವದವು.

ಗ್ರಾಮಾಭಿವೃದ್ಧಿಗೆ ಸಂಬಂಧಿಸಿದಂತೆ ಶ್ರೀ ಮರಿಯಪ್ಪನವರು ಸಿದ್ಧಪಡಿಸಿದ ಯೋಜನೆಗಳು ಅತ್ಯಂತ ಪರಿಣಾಮಕಾರಿಯಾಗಿದ್ದುವು ಅವರ ಕಾಲದಲ್ಲಿಯೇ ಸ್ಥಾಪಿತವಾದ ತಾಲ್ಲೂಕು ಹಾಗೂ ಜಿಲ್ಲಾಭಿವೃದ್ಧಿ ಸಂಸ್ಥೆಗಳು ಗ್ರಾಮಾಭಿವದ್ಧಿ ಕಾರ್ಯಗಳಿಗೆ ಹೆಚ್ಚು ನೆರವಾದುವು. ಕಾರ್ಮಿಕ ವರ್ಗದ ಬಗ್ಗೆಯೂ ಅವರಿಗೆ ಅಷ್ಟೇ ಕಾಳಜಿ ಇತ್ತು. ಇಂತಹ ಅನೇಕ ಸಂಘ ಸಂಸ್ಥೆಗಳ ಅಧ್ಯಕ್ಷರಾಗಿ ಅವರ ಯೋಗಕ್ಷೇಮವನ್ನು ನೋಡಿಕೊಂಡಿದ್ದಾರೆ. ಅವರ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ತೋರಿಸಿದ್ದಾರೆ.

ಶ್ರೀ ಮರಿಯಪ್ಪನವರು ಬೆಳೆದಂತೆಲ್ಲಾ ಅವರ ಕಾರ್ಯಕ್ಷೇತ್ರವೂ ವಿಸ್ತಾರಗೊಳ್ಳುತ್ತಾ ಹೋಯಿತು. ಅದಕ್ಕನುಗುಣವಾಗಿ ಅವರ ಹೊಣೆಗಾರಿಕೆ ಹಾಗೂ ನಾಡು–ನುಡಿಯ ಬಗೆಗೆ ಅವರಿಗಿದ್ದ ಪ್ರೀತಿ ಅವರಿಂದ ಈ ಕೆಲಸಗಳನ್ನು ಮಾಡಿಸುತ್ತಿದ್ದುವು. ಅವರ ರಾಜಕೀಯ ಶತ್ರುಗಳೂ ಕೂಡ ಅವರ ಈ ಕಾರ್ಯವನ್ನು ಮೆಚ್ಚಿಕೊಂಡಿದ್ದರು. ಅತ್ಯಂತ ಸರಳ–ಸೌಜನ್ಯ ಸ್ವಭಾವದ ಶ್ರೀ ಮರಿಯಪ್ಪನವರು ನಾಗಮಂಗಲ ತಾಲ್ಲೂಕು ಕಳ್ಳನಕೆರೆಯವರು. ಸಾಮಾನ್ಯರ ಒಳಿತಿಗಾಗಿ ಸೇವಕರಂತೆ ಕೆಲಸ ಮಾಡಿದವರು. ಅವರ ನಿಸ್ವಾರ್ಥ ಸಾಧನೆಗಳು ಅನುಕರಣೀಯ. ಇಂದಿನ ಅನೇಕ ರಾಜಕಾರಣಿಗಳಲ್ಲಿ ಅಂಜನಹಾಕಿ ಹುಡುಕಿದರೂ ಕಾಣಲಾರದಂಥವು.

ಡಿ. ಕೆ. ರಾಜೇಂದ್ರ

ಎಚ್. ಕೆ. ಪುಟ್ಟಣ್ಣ

'ತನ್ನರಿವೇ ತನಗೆ ಗುರು' ಎಂಬ ತಿಳುವಳಿಕೆ ಯಾರಿಗಾಗುತ್ತದೆಯೋ ಆ ವ್ಯಕ್ತಿ ತನ್ನ ಬದುಕಿಗೆ ಒಂದು ಹೊಸ ಆಯಾಮ ತಂದು ಕೊಳ್ಳಬಲ್ಲ, ವಿಚಾರಶೀಲನಾಗಬಲ್ಲ. ಈ ಇಹದ ಬದುಕಿನಲ್ಲಿ ನಮ್ಮ ಇರುವಿಕೆ ಸುತ್ತಲಿನ ವಾತಾವರಣವನ್ನು ಸುಖಮಯ ವಾಗಿ ಮಾಡಬೇಕು. ಭೂಮಿಯಲ್ಲಿ ಜನಿಸಿ, ತಿಂದುಂಡು ಹತ್ತರ ನಂತರ ಹನ್ನೊಂದನೆ ಯವನಾಗಿ ಸಾಯುವುದು ಮಾತ್ರ ಜೀವನವಲ್ಲ. ಜನ್ಮ ನೀಡಿದ ನಾಡಿಗೆ ನಾನು ಏನು ಮಾಡಿದ್ದೇನೆ? ಏನು ಮಾಡಬೇಕು? ಎಂಬ ವಿಚಾರದಲ್ಲಿ ತೊಡಗಬೇಕು. ಗಾಂಧಿ, ಏಸು, ಬುದ್ಧ, ಬಸವಣ್ಣ ಮುಂತಾದವರು ತಾವು ನೋವುಂಡು ಅನೇಕ ಜನ ರನ್ನು ಸುಖಿಗಳನ್ನಾಗಿ ಮಾಡಿದವರು, ಪುಣ್ಯ ಜೀವಿಗಳು. ಅವರು ನಮಗೆ ಆದರ್ಶ ವಾಗಬೇಕು.

ಇಂತಹ ಸಾರ್ವಜನಿಕವಾದ ಸೇವೆಗೆ ವ್ಯಕ್ತಿ ತೊಡಗಬೇಕಾದರೆ ಹಲವು ಉದಾತ್ತ ಮೌಲ್ಯಗಳು ರಕ್ತಗತವಾಗಿ ಬಂದಿರಬೇಕು. ದಯೆ, ಪರೋಪಕಾರ, ಅನುಕಂಪೆ, ತ್ಯಾಗ, ಪ್ರೇಮ, ಸತ್ಯ, ನಡೆ-ನುಡಿಯಲ್ಲಿ ನೇರ-ಸ್ಪಷ್ಟ ಮುಂತಾದ ಸದ್ಗುಣಗಳು ನಾವು ಜೀವಿಸುವ ಭೂಮಿಯನ್ನು ಸ್ವರ್ಗವಾಗಿ ಮಾರ್ಪಡಿಸಬಲ್ಲವು. ತನ್ನ ಸುತ್ತಲಿನ ಕಷ್ಟದಲ್ಲಿರುವ ಇತರರನ್ನು ಯಾವ ರೀತಿಯಿಂದಲಾದರೂ ನೆಮ್ಮದಿಯ ತಾಣಕ್ಕೆ ಕೊಂಡೊಯ್ಯಲು ಹೆಣಗುವುದೇ ಜೀವಿತದ ಕೃತಾರ್ಥತೆ. ಅದೆಷ್ಟೋ ಹಿರಿಯ ಚೇತನ ಗಳು ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ನಾಡನ್ನು ದಾಸ್ಯದ ಸಂಕೋಲೆಯಿಂದ ಮುಕ್ತ ಗೊಳಿಸಲು, ಜನರ ಅಜ್ಞಾನವನ್ನು ದೂರಮಾಡಲು ಉದಿಸಿ ಹೋಗಿದ್ದಾರೆ. ನಾಡಿಗಾಗಿ ಜೀವ ತೆತ್ತ ಈ ಸ್ವಾತಂತ್ರ್ಯ ಹೋರಾಟಗಾರರು ಬದುಕಿನ ಸಾರ್ಥಕತೆ ಯನ್ನು ಕಂಡುಕೊಂಡರು.

ಮಂಡ್ಯ ಜಿಲ್ಲೆಯಲ್ಲಿ ಕೂಡ ಸಾವಿರಾರು ಮಂದಿ ಅಖಂಡ ದೇಶಾಭಿಮಾನಿಗಳು, ಸ್ವಾತಂತ್ರ್ಯ ಹೋರಾಟಗಾರರು ನಾಡು-ನುಡಿಗಾಗಿ ತ್ರಿಕರಣ ಶುದ್ಧಿಯಿಂದ ಹೋರಾಡಿ ದ್ದಾರೆ. ಸರಿ ಸುಮಾರು 1900 ರಿಂದ 1940ರವರೆಗೆ ಸ್ವಾತಂತ್ರ್ಯ ಕಹಳೆಯನ್ನು ಮಂಡ್ಯ ಜಿಲ್ಲೆಯ ಉದ್ದಗಲದಲ್ಲೂ ಮೊಳಗಿಸಿದ ಪಾದರಸದಂತಹ ವ್ಯಕ್ತಿಯೊಬ್ಬರು ಧ್ರುವ ತಾರೆಯಂತೆ ಕಂಡು ಬರುತ್ತಾರೆ. ಅವರೇ ಜಿಲ್ಲೆಯ ಪ್ರಥಮ ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಮಾಜ ಸುಧಾರಕ, ಎಚ್. ಕೆ. ಪುಟ್ಟಣ್ಣ.

ಖಾದಿ ಜುಬ್ಬ, ಕಚ್ಚೆ ಪಂಚೆ, ಹೆಗಲ ಮೇಲೊಂದು ಅಂಗವಸ್ತ್ರ. ತಲೆಯ ಮೇಲೊಂದು ಬಿಳಿಯ ಟೋಪಿ, ಕೈಯಲ್ಲೊಂದು ನಡೆದಾಡುವ ಕೋಲು, ಮುಖದಲ್ಲಿ ಮಂದಹಾಸ ಬೀರುತ್ತಿರುವ, ಬಿಳಿಯ ಮೀಸೆ. ಅದರ ಕೆಳಗೆ ಅರಳುತ್ತಿರುವ ಇವರ ಸರಳ ನಗೆಯನ್ನು ನೋಡಿದವರಿಗೆ, ಆವರು ಯಾರೆಂದು ಅರಿಯುವ ಮೊದಲು ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರ, ಎಂಬ ಅರಿವು ಹತ್ತುವುದಿಲ್ಲ.

ಹೊನಗಾನಹಳ್ಳಿ ಮಂಡ್ಯ ನಗರಕ್ಕೆ ತೀರ ಸಮೀಪದಲ್ಲಿರುವ ಒಂದು ಪುಟ್ಟ ಗ್ರಾಮ. ಅಪರೂಪದ ಮಹಾನ್ ವ್ಯಕ್ತಿಗಳಿಗೆ ಜನ್ಮ ಕೊಟ್ಟು ಪ್ರಖ್ಯಾತವಾಗುವ ಹಳ್ಳಿಯಂತೆ, ಗಾಂಧಿ ತಲೆಮಾರಿನ ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರ. ನಾಡಿನ ಅಖಂಡ ಅಭಿಮಾನಿ ಹಾಗೂ ನಿಸ್ವಾರ್ಥ ಸಮಾಜ ಸುಧಾರಕ ಎಚ್. ಕೆ. ಪುಟ್ಟಣ್ಣನವರು ಆಡಿ ಬೆಳೆದ ಊರಾಗಿ ಧನ್ಯತೆಯನ್ನು ಪಡೆದಿದೆ.

ತೀರಾ ಸಾಧಾರಣ ರೈತ ಕುಟುಂಬದಲ್ಲಿ ಜನಿಸಿದ ಇವರ ವಂಶದವರು. ಮೂಲತಃ ಪಾಂಡವಪುರದ ತಾಲ್ಲೂಕಿನ ಮಾಣಿಕನಹಳ್ಳಿಯವರು. ಎಳೆಯ ಮಗುವಾಗಿದ್ದಾಗಲೇ ತಂದೆ ತಾಯಿಯನ್ನು ಕಳೆದುಕೊಂಡು ಅನಾಥವಾದ ಮಗುವನ್ನು–ಹೊನಗಾನಹಳ್ಳಿಯ ಕರಿ ಕೆಂಪೇಗೌಡ ಮತ್ತು ಕರಿಪುಟ್ಟಮ್ಮ (ಪುಟ್ಟಣ್ಣನವರ ಸ್ವಂತ ದೊಡ್ಡಮ್ಮ) ದಂಪತಿಗಳು ಮಕ್ಕಳಿಲ್ಲದ್ದರಿಂದ ದತ್ತು ತೆಗೆದುಕೊಂಡರು. ಔಪಚಾರಿಕವಾದ ಶಿಕ್ಷಣ ಹೊನಗಾಹಳ್ಳಿಯಲ್ಲಿ ಬಾಲಕ ಪುಟ್ಟಣ್ಣನವರಿಗೆ ದೊರೆಯಲು ಸಾಧ್ಯವಿರಲಿಲ್ಲ. ದೂರದ ಊರಿನಲ್ಲಿ ಮಗುವನ್ನಿರಿಸಿ ಕಲಿಸುವ ಸೌಲಭ್ಯವೂ ಇರಲಿಲ್ಲ. ಆದರೂ ಕರಿಕೆಂಪೇಗೌಡರಿಗೆ ಓದಿಸಲೇ ಬೇಕೆಂಬ ಹಠ ಬಹಳವಾಗಿ ಬೆಸಗರಹಳ್ಳಿಯಲ್ಲಿ ಮಗನನ್ನಿರಿಸಿ ಕಲಿಸಿದರು. ಓದು ಬರಹ ಕಲಿತ ನಂತರ ಆಗಿನ ಸರ್ಕಾರದ ವಿದ್ಯಾ ಇಲಾಖೆಯಲ್ಲಿ ಮಾಸ್ತರಾಗಿ ಮಳವಳ್ಳಿ ಶಾಲೆಗೆ ನೇಮಕವಾದರು.

'ಸೂರ್ಯ ಮುಳುಗದ ಸಾಮ್ರಾಜ್ಯದವರೆಂದು ಅಹಂನಿಂದ ಬೀಗುತ್ತಿದ್ದ ಆಂಗ್ಲರನ್ನು ದೇಶಬಿಟ್ಟು ಓಡಿಸಲು ಕಾಂಗ್ರೆಸ್ ಚಳುವಳಿ ಗಾಂಧೀಜಿಯವರ ನೇತೃತ್ವದಲ್ಲಿ ಜನ ಸಾಮಾನ್ಯರನ್ನು ಆಕರ್ಷಿಸುತ್ತಿದ್ದ ಕಾಲವದು. ಗಾಂಧಿಜೀಯವರ ಗಾಢ ಪ್ರಭಾವ ಇವರ ಮೇಲಾಗಿ ಸ್ವಾತಂತ್ರ್ಯ ಹೋರಾಟಕ್ಕೆ ದೀನ ದಲಿತರ ಉದ್ಧಾರಕ್ಕೆ ಪ್ರಚೋದನೆ ನೀಡಿತ್ತು. ಇದಕ್ಕಾಗಿ ಜನರ ಒಗ್ಗಟ್ಟು ಅಗತ್ಯವೆಂದರಿತು. ಸಮಾಜಸೇವೆ ಮತ್ತು ಗ್ರಾಮೋದ್ಧಾರ ಕಾರ್ಯಗಳಲ್ಲಿ, ಮಾಸ್ತರಾಗಿದ್ದುಕೊಂಡೇ ತೊಡಗಿದರು.

ಮಳವಳ್ಳಿಯಿಂದ ನಾಗಮಂಗಲ ತಾಲ್ಲೂಕಿನ ಬೆಳ್ಳೂರಿಗೆ ವರ್ಗವಾಗಿ ಬಂದರು. ಇವರ ಎದೆಯಲ್ಲಿ ಹುದುಗಿದ್ದ ಹೋರಾಟಗಾರ ಶಕ್ತಿ ಅಲ್ಲಿಯೂ ಸುಮ್ಮನಾಗಲಿಲ್ಲ. ಒಕ್ಕಲಿಗರ ಶ್ರೀ ಆದಿಚುಂಚನಗಿರಿ ಮಠ ಈ ಮೊದಲು ಕಾಪಾಲಿಕರ ವಶವಾಗಿತ್ತು. ಆದರೂ ಒಕ್ಕಲಿಗರ ಮಠವೆಂಬ ಪ್ರತೀತಿ ಇದ್ದೇ ಇತ್ತು. ವಾಮಾಚಾರಿಗಳಾದ ಕಾಪಾಲಿಗರಿಂದ ಮಠವನ್ನು ರಕ್ಷಿಸಿ ಅದನ್ನು ಒಂದು ಸಾತ್ವಿಕ ಮಠನ್ನಾಗಿ ಪರಿವರ್ತಿಸಬೇಕು

ಎಂದು ಆಲೋಚಿಸಿ, ದಾಖಲೆಗಳನ್ನು ಕಂಡುಹಿಡಿದು ದರಸಗುಪ್ಪೆಯ ರಾಮಯ್ಯನವರನ್ನು ಭಕ್ತನಾಥರೆಂಬ ಹೆಸರಿನಿಂದ ಮಠಾಧಿಪತಿಯಾಗಿ ನೇಮಿಸಿ, ಕಪಾಲಿಗಳು ನ್ಯಾಯಾಲಯದಿಂದ ತಡೆಯಾಜ್ಞೆ ತರುವ ವೇಳೆಗೆ ಪಟ್ಟಾಭಿಷೇಕ ಮುಂಗಿಸಿದರು. ಆದಿ ಚುಂಚನಗಿರಿ ಮಠ ಮತ್ತೆ ಒಕ್ಕಲಿಗರ ವಶವಾಗಲು ಪುಟ್ಟಣ್ಣನವರ ಅವಿರತ ಶ್ರಮವೇ ಕಾರಣ.

ಈ ಮಧ್ಯೆ ವಳಗೆರೆಹಳ್ಳಿಯ ಚಿಕ್ಕವಿಾಯಮ್ಮ ಎಂಬುವರೊಡನೆ ಇವರ ವಿವಾಹ ವಾಯಿತು. ಅಲ್ಪಕಾಲದಲ್ಲಿಯೇ ಚುಂಚನಕಟ್ಟೆಯ ಹತ್ತಿರ ಬ್ಯಾಡರಹಳ್ಳಿಗೆ ವರ್ಗವಾಗಿ ಬಂದರು. ಸುಮಾರು ವರ್ಷಗಳ ಕಾಲ ಬ್ಯಾಡರ ಹಳ್ಳಿಯ ಶಾಲೆಯಲ್ಲಿ ಉಳಿದರು. ಈ ಮಧ್ಯೆ ನಾಲ್ಕು ಮಕ್ಕಳೂ ಕೂಡ ಆದವು. ಪುಟ್ಟಣ್ಣನವರು ಸಾಂಸಾರಿಕ ತಾಪತ್ರಯಗಳನ್ನಾಗಲೀ, ಕೌಟುಂಬಿಕ ಮೋಹ, ಮಹತ್ವಾಕಾಂಕ್ಷೆಗಳನ್ನಾಗಲೀ ಇರಿಸಿಕೊಂಡವರಲ್ಲ. ಸಾರ್ವಜನಿಕರ ಕೆಲಸಗಳಲ್ಲಿ ತೋರುತ್ತಿದ್ದ ಆಸಕ್ತಿ ಮತ್ತು ಕಾಳಜಿಯನ್ನು ಹೆಂಡತಿ ಮಕ್ಕಳ ವಿಷಯದಲ್ಲಿ ತೋರಿದವರಲ್ಲ. ಅವರ ಹೆಂಡತಿಯೇ ಸಂಸಾರದ ಎಲ್ಲ ಜವಾಬ್ದಾರಿ ನಿರ್ವಹಿಸುತ್ತಿದ್ದರು. ಮನೆಗೆ ಮಾರಿ ಪರರಿಗೆ ಉಪಕಾರಿ ಎಂಬಂತೆ ಕುಟುಂಬದ ವಿಷಯದಲ್ಲಿ ಮನೆ ಮಂದಿಗೆ ಪುಟ್ಟಣ್ಣ ದೊಡ್ಡ ತಲೆ ನೋವಾಗಿದ್ದರು.

ಬರಿಯ ಒಣ ಚರ್ಚೆ ಇವರಿಗೆ ಹಿಡಿಸುತ್ತಿರಲಿಲ್ಲ. ವೇದಿಕೆಯ ಮೇಲೆ ಮಾಡುವ ಬರಿದೆ ಭಾಷಣ ಇವರಿಗೆ ಹಿಡಿಸುತ್ತಿರಲಿಲ್ಲ. ಈ ಮನುಷ್ಯ ಪಕ್ಕಾ ವ್ಯವಹಾರವಾದಿ. ಇವರ ಇಷ್ಟ-ಅನಿಷ್ಟಗಳು ಏನಿದ್ದರೂ ಕೃತಿಯಿಂದಲೇ ವ್ಯಕ್ತವಾಗಲಿದ್ದವು. ಅಪ್ಪಟ ಜಾತಿವಾದಿಯಾದ ಪುಟ್ಟಣ್ಣ ಚುಂಚನಕಟ್ಟೆಯಲ್ಲಿ ಒಕ್ಕಲಿಗ ಅನಾಥ ಮಕ್ಕಳಿಗಾಗಿ ಒಂದು ಗುರುಕುಲಾಶ್ರಮ ತೆರೆಯುವ ಬಯಕೆಯನ್ನು ಕೆಲವು ಜಾತಿ ಸ್ನೇಹಿತರ ಮುಂದಿಟ್ಟು ಅವರ ಸಹಾಯ ಕೋರಿದರು. ಆದರೆ ಅಲ್ಲಿ ಒಕ್ಕಲಿಗರ ಮಠ ತೆರೆಯ ಕೊಡದೆಂದು ಬ್ರಾಹ್ಮಣರ ಪ್ರಬಲವಾದ ವಿರೋಧವಿದ್ದರೂ, ಒಂದೇ ರಾತ್ರಿಯಲ್ಲಿ ಷೆಡ್ ಹಾಕಿಸಿ ಆರು ಮಂದಿ ಬಡ ಮಕ್ಕಳನ್ನು ಸೇರಿಸಿಯೂ ಬಿಟ್ಟರು. ಆಶ್ರಮಕ್ಕೆ ಸಂಚಾಲಕರಾಗಿದ್ದುಕೊಂಡು, ನಗರಕೆರೆ, ಸಿ. ಹನುಮಂತಯ್ಯನವರನ್ನು ಮೇಲ್ವಿಚಾರಕರಾಗಿ ನೇಮಿಸಿದರು. ಒಕ್ಕಲಿಗ ಮಕ್ಕಳಿಗೆ ಉಚಿತ ಊಟ, ವಸತಿ ಮತ್ತು ವಿದ್ಯೆ ಒದಗಿಸಲು ಇವರು ಕಳೆದುಕೊಂಡದ್ದು ಅಪಾರ. ಇಂದು ಆ ಮಠ ಬೃಹತ್ತಾಗಿ ಬೆಳೆದಿದೆ. ತಮ್ಮ ಬದುಕಿನ ಕೊನೆಯವರೆಗೂ ಆ ಮಠದ ಏಳಿಗೆಗಾಗಿ ಪುಟ್ಟಣ್ಣನವರು ದುಡಿದರು.

ಬ್ಯಾಡರಹಳ್ಳಿಯಿಂದ ಅವರ ಗ್ರಾಮದ ಪಕ್ಕದ ಕೊಮ್ಮೇರಹಳ್ಳಿಗೆ ವರ್ಗವಾಗಿ ಬಂದರು. ಈ ವೇಳೆಗಾಗಲೇ ಗಾಂಧೀಜಿಯವರ ಪ್ರಭಾವ ಇವರ ಮೇಲೆ ಅಪಾರವಾಗಿ ಆಗಿತ್ತು. ಗಾಂಧೀ ತತ್ವಗಳಿಗೆ ಅಂಟಿಕೊಂಡಿದ್ದರು. 'ಹಳ್ಳಿಗಳಿಗೆ ಹೋಗಿ, ಜನಸಂಪರ್ಕ

ಬೆಳೆಸಿ, ಗ್ರಾಮೋದ್ಯೋಗ ಹರಿಜನರ ಉದ್ಧಾರ ಮಾಡಿ, ಅವರ ಉತ್ಪನ್ನ ಹೆಚ್ಚಿಸಿರಿ, ಎಂಬ ದೇಶನಾಯಕರ ಪ್ರಚಾರಕ್ಕೆ ಮನಸೋತರು ಇಂತಹ ರಚನಾತ್ಮಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು–ಅಸ್ಪೃಶ್ಯತೆಯ ನಿವಾರಣೆಮಾಡಿ, ಅವರ ಜೊತೆ ಸಮಭಾವದಿಂದ ಇರುವುದು ಮುಖ್ಯ ಎಂದು ಬಗೆದರು. ಇವರದು ಕಡಿಮೆ ಮಾತು ಹೆಚ್ಚು ಕೆಲಸ. ಸ್ವಂತ ಸುಖ ಸೌಕರ್ಯಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ಉದ್ದಾಮವಾದ ವಿಚಾರಗಳನ್ನು ಆಡುವುದು ಆಡಿದಂತೆ ನಡೆಯುವುದು.

ಕೊಮ್ಮೇರಹಳ್ಳಿ ಮತ್ತು ಹೊನಗಾನಹಳ್ಳಿ ಎರಡೂ ಗ್ರಾಮಗಳ ಮಧ್ಯೆ ಒಂದು ಕೆರೆಯಿದೆ. ಈ ಕೆರೆ ಯಾವ ಊರಿಗೆ ಸೇರಿದ್ದು ಎಂಬುದು ಇನ್ನೂ ವಿವಾದಾಸ್ಪದ ಸಂಗತಿ. ಕೊಮ್ಮೇರಹಳ್ಳಿಯಲ್ಲಿ ಹರಿಜನರು ತುಂಬಾ. ಹರಿಜನರು ನೀರು ಮುಟ್ಟು ವಂತಿರಲಿಲ್ಲ, ಪುಟ್ಟಣ್ಣ ಹರಿಜನರ ಪರವಾಗಿ ನಿಂತರು, ಮುಂದಾಳತ್ವ ವಹಿಸಿ ಹರಿಜನ ರನ್ನು ಕೆರಗೆ ಪ್ರವೇಶ ಮಾಡಿಸಿದರು. ದೇವಾಲಯಗಳಲ್ಲಿ ಪೂಜೆ ಮಾಡಿಸಿ, ತನ್ನ ಜನರಿಂದಲೇ ವಿಪರೀತ ಅವಮಾನಕರವಾದ ಪ್ರಸಂಗಗಳನ್ನು ಎದುರಿಸಿದರೂ ಇಟ್ಟ ಹೆಜ್ಜೆ ಹಿಂತೆಗೆಯಲಿಲ್ಲ. ಅವರಿಗಾಗಿ ಮಗ್ಗಗಳನ್ನು ತರಿಸಿದರು. ನೂಲುವ, ನೇಯುವ ಕೆಲಸ ಆರಂಭವಾಯಿತು. ಮತ್ತೊಮ್ಮೆ ದೇವಸ್ಥಾನ ಪ್ರವೇಶದ ಸಂದರ್ಭದಲ್ಲಿ ಹರಿಜನ ರಿಗೆ ಒಕ್ಕಲಿಗರಿಂದ ಏಟುಗಳೇ ಬಿದ್ದವು. ಇದಕ್ಕೆಲ್ಲಾ ಕಾರಣ ಪುರೋಹಿತ ವರ್ಗ ಎಂಬ ನಂಬಿಕೆ ಅವರ ತಲೆಯಲ್ಲಿ ಬಲವಾಗಿ ಬೇರುಬಿಟ್ಟಿತು. ವಾಸ್ತವವಾಗಿ ದೇವಾಲಯದ ಪೂಜಾರಿಗಳೂ ಕೂಡ ಜನರನ್ನು ಎತ್ತಿ ಕಟ್ಟಿದ್ದರು. ಸಾಮಾಜಿಕ ನೀತಿ ನಿಯಮಗಳು ಕಾಲ ಬದಲಾದ ಹಾಗೆ ತಮ್ಮ ಮೂಲ ಅರ್ಥವನ್ನು ಕಳೆದು ಕೊಂಡಿರುತ್ತವೆ. ಸಂಪ್ರದಾಯ ಮತ್ತು ಧರ್ಮದ ಹೆಸರಿನಲ್ಲಿ ಇಂತಹ ಮೌಲ್ಯ ಕಳೆದು ಕೊಂಡ ಕುರುಡು ಸಂಪ್ರದಾಯಗಳನ್ನು, ಉದರ ಪೋಷಣೆಗಾಗಿ ಮುಗ್ಧ ರೈತರ ಮೇಲೆ ಹೇರಿ ಅವರನ್ನು ಅಂಧತ್ವದತ್ತ ಕೊಂಡೊಯ್ಯುತ್ತಿರುವ, ಜಾತಿಯ ಬೇಧವನ್ನು ಸೃಷ್ಟಿಸುತ್ತಿರುವ ಬ್ರಾಹ್ಮಣರ ವಿರುದ್ಧ ತಮ್ಮ ಅಂತ್ಯದ ದಿನಗಳವರೆಗೂ ಕೆಂಡ ಕಾರುತ್ತಲೇ ಇದ್ದರಂತೆ. ಈ ಪುರೋಹಿತಶಾಹಿ ಮಂದಿಯ ಮನೋಭಾವ ಹಿಡಿಸದೆ, ತಮ್ಮ ಮಗಳ ಮದುವೆಗೆ ತಾವೇ ಪೌರೋಹಿತ್ಯ ವಹಿಸಿ. ಕಾಂಗ್ರೆಸ್ ಬಾವುಟ ಹಿಡಿದ ಅನೇಕ ವ್ಯಕ್ತಿಗಳ ಸಮ್ಮುಖದಲ್ಲಿ ಮದುವೆ ಮಾಡಿದವರು.

ಪುಟ್ಟಣ್ಣ ಮಹಾಸ್ತಗಾಗಿ ಯಾವ ಅಧಿಕಾರಿಗಳಿಗೂ ಹೆದರಿದವರಲ್ಲ. ಶಾಲೆಗೆ ತನಿಖಾಧಿಕಾರಿಗಳು ಬಂದರೆ ಕುರ್ಚಿ ಬಿಟ್ಟು ಏಳುತ್ತಿರಲಿಲ್ಲ. ಬಂದವರು ಎದುರು ಕುರ್ಚಿಯಲ್ಲಿ ಕುಳಿತು ವಿಚಾರಿಸಬೇಕಿತ್ತು. ಅಪ್ಪಟ ಸ್ವಾಭಿಮಾನಿ.

ಇದೇ ವೇಳೆಗೆ ಜಿಲ್ಲಾ ಜನರ ಸಮಸ್ಯೆಗಳತ್ತ ಅವರು ಹೊರಳಿದರು. ಕೃಷ್ಣರಾಜ ಸಾಗರದ ನಿರ್ಮಾಣ ಸಂದರ್ಭದಲ್ಲಿ ನಾಲಾ ಅಚ್ಚು ಕಟ್ಟುದಾರರು ಇಂತಿಷ್ಟು ತೆರಿಗೆ ಕೊಡಬೇಕೆಂದು ಆದೇಶವನ್ನು ಅಂದಿನ ದಿವಾನರಾಗಿದ್ದ ಮಿರ್ಜಾಇಸ್ಮಾಯಿಲ್ ಹೊರಡಿಸಿ

ದರು. ಜಿಲ್ಲಾ ಕಲೆಕ್ಟರ್ ಕಛೇರಿಯ ಮುಂದೆ ಇದನ್ನು ವಿರೋಧಿಸಿ ಪುಟ್ಟಣ್ಣನವರು ವಾರಗಳ ಕಾಲ ಅನ್ನಸತ್ಯಾಗ್ರಹ ಮಾಡಿದರು. ಯಾವುದೇ ರೀತಿಯ ಫಲ ಕಾಣಿಸದಾಗ ಸುಮಾರು ಐದುಸಾವಿರ ಮಂದಿ ರೈತರನ್ನು ಕೂಡಿಕೊಂಡು, ಇಂಡುವಾಳಿನ ಜಮೀನ್ದಾರ್ ಎಚ್. ಹೊನ್ನಯ್ಯ ಮದ್ದೂರಿನ ಎಚ್. ಕೆ. ವೀರಣ್ಣಗೌಡ ಮುಂತಾದವರ ಜೊತೆ ಬೆಂಗಳೂರಿಗೆ ಜಾಥಾ ಹೊರಟು ಕಬ್ಬನ್‌ಪಾರ್ಕಿನಲ್ಲಿ ನೆರೆದರು. ಆಂಗ್ಲಸರ್ಕಾರದ ವಿರುದ್ಧ ಘೋಷಣೆ ಕೂಗಿದರು. 'ತೆರಿಗೆ ನೀಡುವುದಿಲ್ಲ' ಎಂದು ರೈತರಿಂದ ಪ್ರತಿಜ್ಞೆ ಮಾಡಿಸಿದರು. ಮುಂಚೂಣಿಯಲ್ಲಿದ್ದ ನಾಲ್ಕು ಮಂದಿ ನಾಯಕರನ್ನು, ದಿವಾನರು ಪ್ರತ್ಯೇಕವಾಗಿ ಕರೆದು ಮಾತನಾಡಲು ಪ್ರಯತ್ನಿಸಿದಾಗ, ಪುಟ್ಟಣ್ಣಯ್ಯನವರು ಪಟ್ಟು ಹಿಡಿದು 'ನೀವು ಏನೇ ಹೇಳುವುದಿದ್ದರೂ ಎಲ್ಲಾ ರೈತರ ಮುಂದೆಹೇಳಿ' ಎಂದು ದಿವಾನ ರನ್ನು ಕಬ್ಬನ್‌ಪಾರ್ಕಿಗೆ ಕರೆತಂದರು. ಜನತೆಗೆ ಮಣಿದ ದಿವಾನರು ಕಂದಾಯವನ್ನು ವಜಾಮಾಡಿದರು. ತಕ್ಷಣ ದಿವಾನರಿಗೆ ಪುಟ್ಟಣ್ಣ ಸರ್ಕಾರಿ ನೌಕರ ಎಂಬ ವಿಷಯ ತಿಳಿದು ಪುಟ್ಟಣ್ಣನವರನ್ನು ಪ್ರಶ್ನೆ ಮಾಡಿದರು. 'ಸರ್ಕಾರಿ ನೌಕರರಾಗಿದ್ದುಕೊಂಡು ನೀವು ಇದರಲ್ಲಿ ಭಾಗವಹಿಸಬಹುದೇ ?' ಎಂದು ಕೇಳಿದರು. ಪುಟ್ಟಣ್ಣ ಆ ಕ್ಷಣವೇ ತಮ್ಮ ಮಾಸ್ತರ ಹುದ್ದೆಗೆ ರಾಜೀನಾಮೆ ನೀಡಿದರು.

ಪುಟ್ಟಣ್ಣ ಶಿವಪುರದ ಅಧಿವೇಶನದ ಸಂಘಟನಕಾರರಾಗಿದ್ದರು. 1933ರಲ್ಲಿ ಗಾಂಧೀಜಿ ಬೆಂಗಳೂರಿನ ಕುಮಾರ ಪಾರ್ಕಿನಲ್ಲಿ ಒಂದು ವಾರ ತಂಗಿದ್ದಾಗ ಅವರನ್ನು ಭೇಟಿಯಾಗಿ ಮಾತನಾಡಿದರು. ಅವರ ಆದೇಶದಂತೆ ಕಾಂಗ್ರೆಸ್ ಸೇರಿ, ಶಾಂತಿಯ, ಶಿಸ್ತಿನ ಸಕ್ರಿಯ ಸದಸ್ಯರಾಗಿ ಮುಂಚೂಣಿಯಲ್ಲಿ ಪುಟ್ಟಣ್ಣ ಧುಮುಕಿದರು. ಅಧಿಕಾರಕ್ಕೆ ಎಂದೂ ಆಸೆಪಟ್ಟವರಲ್ಲ. ಇವರಿಂದ ಉಪಕೃತರಾಗಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಂಡವರು ಜಿಲ್ಲೆಯಲ್ಲಿ ತುಂಬ ಮಂದಿ.

ಪುಟ್ಟಣ್ಣನವರು ಸಿರಿವಂತರಲ್ಲ, ಅಧಿಕಾರಿಗಳಲ್ಲ. ಗುರುತಿಸಬಹುದಾದ ಮುಖಂಡರೂ ಅಲ್ಲ. ಹಣದ ಲೋಭವಿರಲಿಲ್ಲ. ಸ್ಥಾನ ಮಾನಗಳ ಅಭಿಲಾಷೆ ಇರಲಿಲ್ಲ, ತ್ಯಾಗ, ಸೇವೆ, ರಾಷ್ಟ್ರಪ್ರೇಮ ಅವರ ಬಂಡವಾಳ. ಪರರ ಹಿತಕ್ಕಾಗಿ ದುಡಿಯುವುದ ರಲ್ಲೇ ತೃಪ್ತಿ ಕಂಡುಕೊಂಡವರು. ಪ್ರತಿಯೊಂದು ಸಂಗತಿಯ ಕಡೆಗೂ ಅವರದು ಸೂಕ್ಷ್ಮ ದೃಷ್ಟಿ. ಪೂರ್ಣ ವಿಚಾರ ಮಾಡದ ಯಾವ ಕಾರ್ಯಕ್ಕೂ ಕೈ ಹಾಕುತ್ತಿರ ಲಿಲ್ಲ, ಹಿಡಿದ ಗುರಿ ಸಾಧಿಸುವ ಛಲವಿದ್ದವರು. ಆರೆಮನಸ್ಸಿನಿಂದ ಯಾವುದೇ ಕೆಲಸ ಮಾಡುತ್ತಿರಲಿಲ್ಲ.

ಇಂತಹ ಪುಟ್ಟಣ್ಣನವರ ಕಡೆಯ ದಿನಗಳು ತುಂಬಾ ಕಷ್ಟಕರವಾದ ದಿನಗಳಾ ಗಿದ್ದವು. ಸಕ್ಕರೆ ಕಾಯಿಲೆಯಿಂದ ನರಳುತ್ತಿದ್ದ ಪುಟ್ಟಣ್ಣನವರಿಗೆ ಅಂತ್ಯದಲ್ಲಿ ಚರ್ಮ ವ್ಯಾಧಿ ಕಾಣಿಸಿಕೊಂಡಿತು. ಊರು ಹೊಲಗೇರಿ ಒಂದು ಮಾಡಿದ ಎಂಬ ಕಾರಣಕ್ಕೆ ನೆಂಟರಿಷ್ಟರೆಲ್ಲ ಅಂತ್ಯದಲ್ಲಿ ದೂರವಾಗಿದ್ದರು. ವ್ಯಾಧಿ ತೀವ್ರವಾಗಿ ಮೈಸೂರು ಆಸ್ಪತ್ರೆ

ನೇಮಿಸಲಾಗಿದ್ದರೂ [illegible] 1940 ರಲ್ಲಿ ಇದನ್ನು ತ್ಯಜಿಸಿದರು. ದೇಶ ಸ್ವಾತಂತ್ರ್ಯದಾಗಿನ [illegible] ಕಾಣುತ್ತಲೇ ಮಹಾನ್ ಜ್ಯೋತಿಯೊಂದು ನಂದಿತು. ಒಬ್ಬ ಸರ್ಕಾರಿ [illegible], ತಮಗಿರುವ ಶಕ್ತಿಯ ಅರಿವಿದ್ದು, ಪ್ರಭುತ್ವದ ವಿರುದ್ಧ ಸಾರಿದ [illegible] ಬಿಗಾರಿಕೆ ತೋರಿದ ಅಪರೂಪದ ವ್ಯಕ್ತಿ ಪುಟ್ಟಣ್ಣ ಸರ್ಕಾರಿ ಕೆಲಸವನ್ನು ತೃಣವಾಗಿ ಕಂಡವರು.

ಪುಟ್ಟಣ್ಣನವರು ತಮ್ಮ ಜೀವನ ಪೂರ್ತಿ ಹೋರಾಟದಲ್ಲೇ ಕಳೆದುದು ಒಂದು ವಿಸ್ಮಯ [illegible] ಅವರು ಏರಿದ ಎತ್ತರ, ಕಂಡ ದರ್ಶನ, ಗಳಿಸಿದ ಸಾಧನೆ ಇವನ್ನು ಕಂಡಾಗ [illegible] ವ್ಯಕ್ತವಾಗುತ್ತದೆ. ಇಂತಹ ಒಂದು ಮಹೋನ್ನತ್ಯ ಸಾಧಿಸಬೇಕಾದರೆ ಅವರು ತುಳಿದ ಕಲ್ಲು ಮುಳ್ಳು, ದಾಟಿದ ಹಳ್ಳ-ಕೊಳ್ಳ ಎದುರಾದ ಅಡೆ ತಡೆಗಳನ್ನು ಗಮನಿಸಬೇಕಾಗುತ್ತದೆ. ಇಂತಹವರ ಜೀವನ ಚರಿತ್ರೆ ನಮ್ಮಲ್ಲಿ ಮಹತ್ವಾಕಾಂಕ್ಷೆಯನ್ನು ಮೂಡಿಸುತ್ತದೆ. ನಮ್ಮ ರಾಷ್ಟ್ರಪ್ರೇಮ ಉಜ್ವಲವಾಗುವಂತೆ ಮಾಡುತ್ತದೆ. ನಮ್ಮ ವ್ಯಕ್ತಿತ್ವದಲ್ಲಿ ಹುದುಗಿರುವ ಅರೆ-ಕೊರೆಗಳನ್ನು ತಿದ್ದುತ್ತದೆ. ಬಾಳಿಗೆ ಸವಿಯನ್ನು ನೀಡುತ್ತದೆ. ಅವರ ಸಾಹಸಗಾಥೆ ಕೇಳಿದಾಗ ಎದೆಯುಬ್ಬಿ ಬಂದು, ಕಂಗಳಲ್ಲಿ ಎರಡು ಹನಿ ಕಣ್ಣೀರು ಸುರಿಸಿದರೆ, ಆ ಪುಣ್ಯಜೀವಿಗೆ ನಾವು ನೀಡುವ ತರ್ಪಣ ಅದೊಂದೇ.

ಎಚ್. ಎಸ್. ಮುದ್ದೇಗೌಡ

ಟಿ. ಎನ್. ಮಾದಪ್ಪಗೌಡ

ರಾಜಕಾರಣಕ್ಕೂ ಪ್ರಾಮಾಣಿಕತೆಗೂ ಕೊಂಚ ವಿರುದ್ಧ ಎಂದು ತೋರುತ್ತದೆ. ಭಾರತದ ರಾಜಕಾರಣಕ್ಕಂತೂ ಈ ಮಾತು ಬಹುಮಟ್ಟಿಗೆ ಅನ್ವಯವಾಗುತ್ತದೆ. ಇದಕ್ಕೆ ಹಲವಾರು ಕಾರಣಗಳಿವೆ ಎಂಬ ವಾಸ್ತವಿಕ ಸತ್ಯವನ್ನು ಯಾರೂ ಮರೆಯುವಂತಿಲ್ಲ. ರಾಜಕಾರಿಣಿಯಾದವನು ಮೊದಲು ತನ್ನ ಸ್ಥಾನ ಭದ್ರವಾಗಿದೆಯೇ ಎಂಬುದನ್ನು ಗಮನಿಸಬೇಕಾಗುತ್ತದೆ. ಅದಕ್ಕಾಗಿ ಜನರಿಗೆ ಅನೇಕವೇಳೆ ಆಶ್ವಾಸನೆಗಳ ಸುರಿಮಳೆಯಾಗುತ್ತವೆ ಈ ಆಶ್ವಾಸನೆಗಳು ಆಗುತ್ತವೆಯೆ ? ಇಲ್ಲವೆ ? ಎಂಬುದು ಈ ಹೊತ್ತಿನ ಪ್ರಶ್ನೆಯಲ್ಲ. ಒಂದುವೇಳೆ ಹಾಗೆ ಆಶ್ವಾಸನೆಗಳನ್ನು ಕೊಡದೆ ಇದ್ದರೆ ರಾಜಕಾರಣದಲ್ಲಿ ಏಳಿಗೆಗೆ ಬರುವುದು ಬಹಳ ಕಷ್ಟ. ಆದರೆ ನಾಗಮಂಗಲ ತಾಲ್ಲೂಕು ತಟ್ಟೇಕೆರೆ ಗ್ರಾಮದ ಮೇಸ್ತ್ರಿ ನಂಜಪ್ಪಗೌಡರ ಮಕ್ಕಳು ಮಾದಪ್ಪಗೌಡರು (1910–1972) ಈ ಪರಿಸ್ಥಿತಿಯಲ್ಲೂ ಪ್ರಾಮಾಣಿಕತೆಯನ್ನು ತಮ್ಮ ಮೂಲ ಮಂತ್ರವನ್ನಾಗಿ ಮಾಡಿಕೊಂಡು ರಾಜಕಾರಣದಲ್ಲಿ ದುಡಿದವರು.

ಶ್ರೀ ಮಾದಪ್ಪಗೌಡರ ತಂದೆ ನಂಜಪ್ಪಗೌಡರು ಅಗರ್ಭ ಶ್ರೀಮಂತರು. ಇವರ ವಂಶದವರು ನಾಗಮಂಗಲ ತಾಲ್ಲೂಕಿನ ಕ್ಷಾಮ ಪರಿಸ್ಥಿತಿಗೆ ಬೇಸತ್ತು ನೀಲಗಿರಿಗೆ ಹೋದರು. ಆದರೆ ನಾಗಮಂಗಲದ ತಮ್ಮ ತಾಯಿ ಬೇರನ್ನು ಎಂದೂ ಅವರು ಕತ್ತರಿಸಿಕೊಳ್ಳಲಿಲ್ಲ. ನಂಜಪ್ಪಗೌಡರ ಕಾಲಕ್ಕೆ ಅವರ ದುಡಿಮೆಯ ಫಲ ಅವರನ್ನು ಐಶ್ವರ್ಯವಂತರ ಸಾಲಿಗೆ ಸೇರಿಸಿತ್ತು. ನೀಲಗಿರಿಯಿಂದ ತಟ್ಟೇಕೆರೆಗೆ ಕಾರಿನಲ್ಲಿ ಚೀಲ ರೂಪಾಯಿ ಹೇರಿಕೊಂಡು ಬರುತ್ತಿದ್ದರೆಂಬ ಮಾತು ಇಂದಿಗೂ ಜನಜನಿತವಾಗಿದೆ. ಈ ಐಶ್ವರ್ಯ ಯಾರಿಂದಲೂ ದೋಚಿದ್ದಲ್ಲ. ದುಡಿದು ಮೈಬೆವರು ಸುರಿಸಿ ಗಳಿಸಿ-ಬೆಳೆಸಿದ್ದು. ಮಾದಪ್ಪಗೌಡರು ಲೋಕರೂಢಿಯಂತೆ ಚಿನ್ನದ ಚಮಚ ಬಾಯಲ್ಲಿಟ್ಟುಕೊಂಡು ಹುಟ್ಟಿದವರು.

ನಂಜಪ್ಪಗೌಡರಿಗೆ ನೀಲಗಿರಿಯ ತೋಟದಲ್ಲಿ ಏನೇ ಆದಾಯ ಆಕರ್ಷಣೆಗಳಿದ್ದರೂ ಅವರು ತಮ್ಮ ಪೂರ್ವಿಕರ ಊರು ತಟ್ಟೇಕೆರೆಯನ್ನು ಮರೆಯಲಿಲ್ಲ. ಇಂದಿಗೂ ನೀಲಗಿರಿಯ ಅತ್ಯಂತ ಹೆಚ್ಚು ಐಶ್ವರ್ಯವಂತರಲ್ಲಿ ಬಹುಮಂದಿ ನಾಗಮಂಗಲದವರು. ಅವರೀಗ ವರ್ಷ, ಎರಡು ವರ್ಷಕ್ಕೊಮ್ಮೆ ಬಂದು ಚುಂಚನಗಿರಿಯ ಭೈರವನಿಗೆ ಪೂಜೆಸಲ್ಲಿಸುವುದನ್ನು ಬಿಟ್ಟರೆ ನಾಗಮಂಗಲದೊಂದಿಗೆ ಹೆಚ್ಚು ಸಂಬಂಧವನ್ನೇನೂ

ಇಟ್ಟುಕೊಂಡಿರುವಂತೆ ತೋರುವುದಿಲ್ಲ. ಆದರೆ ಸಂಜಪ್ಪಗೌಡರು ನೀಲಗಿರಿಯ ತಮ್ಮ ಆದಾಯವನ್ನು ಊರಿಗೆ ತರುತ್ತಿದ್ದರು ಎಂಬುದು ಈ ನೆಲದ ಬಗ್ಗೆ ಅವರಿಗಿದ್ದ ಮಮತೆಯನ್ನು ಎತ್ತಿ ಹಿಡಿಯುತ್ತದೆ. ಏನೇ ಇರಲಿ ಆ ಕಾಲದಲ್ಲಿಯೇ ಬಡಜನತೆಯ ಬಗ್ಗೆ ಬಹು ಉದಾರವಾಗಿ ನಡೆದುಕೊಂಡು ತಟ್ಟೇಕೆರೆಯ ಸಜಂಪ್ಪಗೌಡರು ನಾಗಮಂಗಲ ತಾಲ್ಲೂಕಿನಲ್ಲಿ ಜನಪ್ರಿಯರಾಗಿದ್ದಾರೆ.

"ತಾಯಿಯಂತೆ ಮಗ ನೂಲಿನಂತೆ ಸೀರೆ'' ಎಂಬುದೊಂದು ಗಾದೆಯ ಮಾತು. ಶ್ರೀ ಮಾದಪ್ಪಗೌಡರು ತಂದೆಯಂತಷ್ಟೇ ಅಲ್ಲದೆ ಮತ್ತೂ ಮುಂದುವರಿದವರು. ಮಹಾರಾಜಾ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಮಾದಪ್ಪಗೌಡರು ರಾಷ್ಟ್ರಪಿತ ಗಾಂಧೀಜಿಯ ಕರೆಯಂತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ಮುಂದುವರಿದವರು, ಐಶ್ವರ್ಯವಂತರಾದವರು ಸ್ವಾತಂತ್ರ್ಯ ಚಳುವಳಿಯನ್ನು ವಿರೋಧಿಸುತ್ತಿದ್ದ ಆ ಕಾಲದಲ್ಲಿ ಇಂತಹ ಶ್ರೀಮಂತರ ಮಗನೊಬ್ಬ ಚಳುವಳಿಗಿಳಿದು ಬಂದುದು ಮಹತ್ವದ ಘಟನೆ. ಆದರೆ ಆ ರಕ್ತದಲ್ಲಿ ಹರಿಯುತ್ತಿದ್ದ ನಾಗಮಂಗಲದ ಬಡತನದ ಬವಣೆಯ ಕಿಚ್ಚು ಅವರನ್ನು ಈ ಸಂಗ್ರಾಮದಲ್ಲಿ ಧುಮುಕುವಂತೆ ಪ್ರೇರೇಪಿಸಿತೆಂದು ತೋರುತ್ತದೆ. ಮಾದಪ್ಪಗೌಡರಿಗೆ ಚಿಕ್ಕಂದಿನಿಂದಲೂ ಸಂಘಟನಾ ಶಕ್ತಿ ಅಪಾರವಾಗಿತ್ತು. ಅವರು ತಮ್ಮ ಶಾಲಾ ದಿನಗಳಲ್ಲಿಯೆ ಅನೇಕ ಸಂಘ ಸಂಸ್ಥೆಗಳಲ್ಲಿ ದುಡಿದಿದ್ದಾರೆ. ಅವರು ಮಹಾರಾಜ ಕಾಲೇಜಿನ ಕನ್ನಡ ಸಂಘದ ಕಾರ್ಯದರ್ಶಿಯೂ ಆಗಿದ್ದರು. ಹೀಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕುವ ಮೊದಲೇ ಅವರು ಪೂರ್ವ ಅನುಭವದ ತಯಾರಿ ಪಡೆದಿದ್ದರು. ಮಾದಪ್ಪಗೌಡರು ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮದೇ ಆದ ರೀತಿಯಲ್ಲಿ ಹೋರಾಡಿ ಜೈಲುವಾಸವನ್ನು ಅನುಭವಿಸಿದವರು.

ಸ್ವಾತಂತ್ರ್ಯ ಬಂದಮೇಲೆ ಮಾದಪ್ಪಗೌಡರ ತನು–ಮನ ಧನಗಳೆಲ್ಲ ನಾಗಮಂಗಲ ತಾಲ್ಲೂಕಿನ ಬಡಜನತೆಯ ಅಭಿವೃದ್ಧಿಗಾಗಿ ವಿನಿಯೋಗವಾಗಿವೆ. ಅವರು 1948 ರಲ್ಲಿ ಆರಂಭವಾದ ಗ್ರಾಮಾಭಿವೃದ್ಧಿ ಸಮಿತಿಯ ಸದಸ್ಯರಾಗಿ ಜನಸಾಮಾನ್ಯರ ಉನ್ನತಿಗಾಗಿ ಬಹಳ ದುಡಿದರು. ಭಾರತ ಹಳ್ಳಿಗಳ ದೇಶ. ಅವುಗಳ ಉದ್ಧಾರವಾಗದೆ ಭಾರತದ ಉದ್ಧಾರ ಸಾಧ್ಯವಿಲ್ಲ ಎಂಬ ಗಾಂಧೀಜಿಯವರ ಮಾತನ್ನು ಮಂತ್ರವೆಂದು ನಂಬಿ ತಮ್ಮ ಜನತಾ ಸೇವಾ ಮಾರ್ಗವನ್ನಾಗಿ ಮಾಡಿಕೊಂಡರು. ಆ ಕಾಲಕ್ಕೆ ಅವರು ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ ಜನಸಾಮಾನ್ಯರ ಕುಂದುಕೊರತೆಗಳನ್ನೂ ವಿಚಾರಿಸಿ, ಅವುಗಳ ನಿವಾರಣೆಗೆ ಸತತವಾಗಿ ದುಡಿಯುತ್ತಿದ್ದರು.

ಜನತೆಯು ಮುಂದುವರಿಯಬೇಕಾದರೆ ಅವರ ಜ್ಞಾನ ಹೆಚ್ಚಬೇಕು. ಅದು ಹೆಚ್ಚಬೇಕಾದರೆ ಮನುಷ್ಯನಿಗೆ ವಿದ್ಯೆ ಇರಬೇಕು. ಮಾದಪ್ಪಗೌಡರು ವಯಸ್ಕರ ಶಿಕ್ಷಣದ ಬಗ್ಗೆ ಅಪಾರ ಆಸಕ್ತಿ ತಳೆದವರಾಗಿದ್ದರು. ನಾಗಮಂಗಲ ತಾಲ್ಲೂಕಿನಲ್ಲಿ ಅಕ್ಷರ ಪ್ರಚಾರ ಚಳುವಳಿಯಲ್ಲಿ ಶ್ರೀ ಗೌಡರದು ಮಹತ್ತರವಾದ ಪಾತ್ರ. ಅವರು ಊರೂರಿಗೆ ಹೋಗಿ

ಜನತೆಯನ್ನು ಈ ಬಗ್ಗೆ ಎಚ್ಚರಿಸಿ, ಅಕ್ಷರ ಕಲಿಯುವಂತೆ ಪ್ರೇರೇಪಿಸುತ್ತಿದ್ದರು. ನಾಗಮಂಗಲ ನಗರದಲ್ಲಿ ಜನತೆಗೆ ಉಪಯುಕ್ತವಾದ ಅನೇಕ ಕೆಲಸ ಕಾರ್ಯಗಳನ್ನು ಅವರು ಮಾಡಿದರು. ನಾಗಮಂಗಲ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ಒಂದು ಆದರ್ಶ ಸಂಸ್ಥೆಯಾಗಿದೆ. ಜನರಿಗೆ ಅತಿ ಮುಖ್ಯವಾದ ದಿನ ಬಳಕೆಯ ವಸ್ತುಗಳ ಜೊತೆಗೆ ಗೊಬ್ಬರ ಬಟ್ಟೆ ಇತ್ಯಾದಿ ವಸ್ತುಗಳೂ ಯಾವ ಕಳ್ಳ ಮಾರ್ಗವೂ ಇಲ್ಲದೆ ಒದಗುತ್ತಿವೆ. ಈ ಸಂಸ್ಥೆಯನ್ನು ಸಮರ್ಥವಾಗಿ ಕಟ್ಟಿ ಬೆಳೆಸಿದ ಕೀರ್ತಿಯಲ್ಲಿ ಮಾದಪ್ಪಗೌಡರದು ಸಿಂಹಪಾಲು. ಅವರ ಶ್ರಮದಿಂದ ನಾಗಮಂಗಲ ಕ್ಕೊಂದು ಹಿತ್ತಾಳೆಕೇಂದ್ರ ಬಂದಿತು. ಈ ಸುತ್ತಮುತ್ತಲ ಹಳ್ಳಿಗಳ ವಿದ್ಯಾರ್ಥಿಗಳು ಬಂದು ಸುಖವಾಗಿ ವ್ಯಾಸಂಗಮಾಡಲು ನಾಗಮಂಗಲದಲ್ಲಿ ಒಂದು ವಿದ್ಯಾರ್ಥಿ ನಿಲಯದ ಕೊರತೆಯಿದ್ದುದನ್ನರಿತ ಶ್ರೀ ಮಾದಪ್ಪಗೌಡರು ತಮ್ಮ ಆಪ್ತಮಿತ್ರರಾದ ಕೆ. ಸಿಂಗಾರಿಗೌಡರು, ಪಿ. ಎನ್. ಜವರಪ್ಪಗೌಡರೊಂದಿಗೆ ತಾವೂ ಸೇರಿ ಅದನ್ನು ಪೂರೈಸಿದರು. ಇದೇ ಇಂದಿನ ಆದಿಚುಂಚನಗಿರಿ ವಿದ್ಯಾರ್ಥಿನಿಲಯ. ಹೀಗೆ ಅವರು ಈ ತಾಲ್ಲೂಕಿನ ಸರ್ವತೋಮುಖವಾದ ಅಭಿವೃದ್ಧಿಗೆ ಶ್ರಮಿಸಿದ್ದಾರೆ.

ಮಾದಪ್ಪಗೌಡರು 1957 ರಲ್ಲಿ ನಾಗಮಂಗಲ ಕ್ಷೇತ್ರದಿಂದ ವಿಧಾನ ಸಭೆಗೆ ಆರಿಸಿ ಹೋದರು. ರಾಜಕಾರಣಿಯಾಗಿ ಅವರು ಎಂದೂ ಪಕ್ಷಪಾತಗಳಿಗೆ ಅಂಟಿ ಕೊಂಡವರಲ್ಲ. ಚುನಾವಣೆಯಲ್ಲಿ ಯಾರೇ ಗೆಲ್ಲಲಿ ಅನಂತರ ಆ ವ್ಯಕ್ತಿ ಇಡೀ ತಾಲ್ಲೂಕಿನ ಪ್ರತಿನಿಧಿ ಎಂಬುದು ಅವರ ತತ್ವ. ಶ್ರೀ ಗೌಡರಿಗೆ ಕುಯುಕ್ತಿ ರಾಜಕೀಯ, ಪಕ್ಷಪಾತ ಎಂದೂ ಸೇರದು. 1971ರಲ್ಲಿ ನಾಗಮಂಗಲದಲ್ಲಿ ನಡೆದ ಮೂರನೆಯ ಜಾನಪದ ಸಮ್ಮೇಳನ ಸಂಸ್ಥಾ ಕಾಂಗ್ರೆಸ್ಸಿಗರದು ಎಂದು ಕೆಲವರು ಗುಲ್ಲೆಬ್ಬಿಸಲು ಯತ್ನಿಸಿದಾಗ ಶ್ರೀ ಮಾದಪ್ಪಗೌಡರು ಅಂತಹವರಿಗೆ ಛೀಮಾರಿ ಹಾಕಿ ಬುದ್ಧಿ ಹೇಳಿದರು. ರಾಜಕೀಯ ಒಳ್ಳೆಯದನ್ನು ಕೆಡಿಸುವುದಕ್ಕಲ್ಲ. ಕೆಟ್ಟದ್ದಕ್ಕೆ ಸುಳ್ಳು ಆಶ್ವಾಸನೆಗಳಿಗೆ ಗೌಡರು ಬದ್ಧ ವಿರೋಧಿ. ಅನೇಕರು ಆಡಳಿತ ಕಾಂಗ್ರೆಸ್ ಮುಖಂಡರು ನಾಗಮಂಗಲಕ್ಕೆ ಹೇಮಾವತಿ ನೀರು ಬಂದೇ ಬರುತ್ತದೆ ಎಂದು ಹೇಳುತ್ತಿದ್ದಾಗಲೂ, ಅವರು ಅದೆಲ್ಲಾ ಮದರಾಸಿ ನೊಂದಿಗೆ ಆಗುವ ಒಪ್ಪಂದವನ್ನವಲಂಬಿಸಿದೆ ಎಂದು ನೇರವಾಗಿ ಮಾತನಾಡಿದುದುಂಟು. ಯಾರಾದರೂ ಕಾಲೇಜುಗಳಲ್ಲಿ ಸೀಟುಕೊಡಿಸಿ ಎಂದು ಬಂದರೆ ಅಲ್ಲೇ ಅವನ ಯೋಗ್ಯತೆ ಪರೀಕ್ಷಿಸಿ ಉತ್ತರ ಹೇಳುವಂತಹ ನ್ಯಾಯನಿಷ್ಠುರಿ. ಹೀಗೆ ಅವರ ರಾಜಕೀಯ ಈ ಆಶ್ವಾಸನೆ, ಆಡಂಬರತೆಗಳ ಮಧ್ಯದಲ್ಲಿಯೂ ವಾಸ್ತವತೆಯಲ್ಲಿ ಬೇರಿಳಿಸಿ ಗಟ್ಟಿಯಾಗಿ ನಿಂತಿದ್ದುದು ಅವರ ಸಾತ್ವಿಕತೆಯ ದ್ಯೋತಕ.

ಮಾದಪ್ಪಗೌಡರು ಬಹುಸರಳ ವ್ಯಕ್ತಿ. ಅವರಿಗೆ ಅಹಂ ಲವಲೇಶವೂ ಇರಲಿಲ್ಲ. ಅವ ರೊಬ್ಬ ಸುಸಂಸ್ಕೃತ ವಿನಯಪರ ವ್ಯಕ್ತಿ ಅಪಾರ ಸಾಹಿತ್ಯ ಪ್ರೇಮಿ. ಅವರದೊಂದು ಅತಿ ದೊಡ್ಡ ಪುಸ್ತಕ ಭಂಡಾರ. ರಾಜಕಾರಣದ ಮಧ್ಯದಲ್ಲಿಯೂ ಅವರು ನಿರಂತರ ಅಭ್ಯಾಸ

ನಡೆಸಿದ್ದ ವಿದ್ಯಾರ್ಥಿ. ಕನ್ನಡ ಕಲೆ ಮತ್ತು ಸಂಸ್ಕೃತಿಗಳ ಏಳಿಗೆಯ ಬಗ್ಗೆ ಅವರು ಮೂರನೆಯ ಜಾನಪದ ಸಮ್ಮೇಳನದಲ್ಲಿ ಮಾಡಿದ ಭಾಷಣ ಇನ್ನೂ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಮಾದಪ್ಪಗೌಡರು ಸ್ನೇಹಪರರು. ಜಾತಿಮತ, ಪಕ್ಷಗಳ ಅತೀತವಾಗಿ ಅವರು ರಾಜ್ಯಾದ್ಯಂತ ಮಿತ್ರವೃಂದವನ್ನು ಸಂಪಾದಿಸಿದ್ದರು. "ಅವರ ಅಂತ್ಯಕ್ರಿಯೆಯಂದು ಸೇರಿದ್ದ ಜನತೆ ಅವರ ಜನ ಪ್ರಿಯತೆಗೆ ಸಾಕ್ಷಿ" ಎಂದು ಹಿರಿಯರೊಬ್ಬರು ಉದ್ಗರಿಸಿದರು.

1972ರ ಚಾರಿತ್ರಿಕ ಚುನಾವಣೆಯಲ್ಲಿ ಗೆದ್ದು ಜನಸಾಮಾನ್ಯರ ಉನ್ನತಿಗೆ ಕಂಕಣಬದ್ಧರಾಗಿದ್ದ ಮಾದಪ್ಪಗೌಡರು ಒಂದು ರೀತಿಯಲ್ಲಿ ವಿಧಿಯೊಂದಿಗೆ ಸೆಣಸಿದ್ದರೆಂದು ಹೇಳಬೇಕು. ಅವರಿಂದ ನಾಗಮಂಗಲಕ್ಕೆ, ಕನ್ನಡನಾಡಿಗೆ ಅಪಾರಸೇವೆ ಸಲ್ಲುವುದಿತ್ತು. ಅದು ಬರಿಯ ಮನುಷ್ಯನ ಹುಚ್ಚಾಸೆ ಅಷ್ಟೆ. ದಿನಾಂಕ 28–7–1972ರಂದು ಮಾದಪ್ಪಗೌಡರು ಇಹವನ್ನು ಬಿಟ್ಟು ನಡೆದರು.

ಹ. ಕ. ರಾಜೇಗೌಡ

[ಶ್ರೀ ಮಾದಪ್ಪಗೌಡರು ನಿಧನರಾದಾಗ ಪತ್ರಿಕೆಯೊಂದಕ್ಕೆ ಬರೆದ ಕಿರು ಲೇಖನ.]

ಮಳವಳ್ಳಿ ವೀರಪ್ಪ

ಮಳವಳ್ಳಿ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಜೀವನದ [illegible]ಯೊಳಗೆ ಅವಕಾಶ ಮಾಡಿಕೊಂಡು ಹೋರಾಟ ಮಾಡಿದವರ ಸಂಖ್ಯೆ ಅಪಾರ. ಜೀವನದ ಎಲ್ಲ ಪ್ರಲೋಭನೆ ಮತ್ತು ಬಂಧನಗಳನ್ನು ಕಿತ್ತೊಗೆದು ಸ್ವಾತಂತ್ರ್ಯ ಹೋರಾಟದ ಸ್ಥಾಯೀಭಾವ ಮನಸ್ಸಿನ ಪದರ ಪದರದಲ್ಲೂ ಬೇರೂರಿ ನಿಂತು, ಅದರ ಅಂತಃಪ್ರೇರಣೆಯಂತೆ ಮುನ್ನಡೆದವರೆಂದರೆ ಮಳವಳ್ಳಿ ಪಟ್ಟಣದ ವೀರಪ್ಪನವರು. ತಾಲ್ಲೂಕು ಮಟ್ಟದಲ್ಲಿ ಸ್ಫುರಣೆಗೊಂಡ ಇವರ ಮನಸ್ಸಿನ ಸ್ವಾತಂತ್ರ್ಯದ ಜ್ವಾಲೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ವ್ಯಾಪಕ ಕ್ರೀಡಾಂಗಣವನ್ನು ಆಯ್ದುಕೊಂಡಿತು. ಅನೇಕ ಕಾಂಗ್ರೆಸ್ ನಾಯಕರ ಆದರ್ಶ ಇವರ ಬಾಳಿಗೆ ಮಾರ್ಗದರ್ಶನವಾದಂತೆ, ಹಾಗೆಯೇ ಅನೇಕ ಕಿರಿಯ ಹೋರಾಟಗಾರರ ಮನಸ್ಸಿನಲ್ಲಿ ಬಿಡುಗಡೆಯ ಭಾವದ ಬೀಜವನ್ನು ಬಿತ್ತಲು ಇವರು ಕಾರಣಕರ್ತರಾದರು. ಅನೇಕ ಸಹೋದ್ಯೋಗಿ ಕಾಂಗ್ರೆಸ್ ಮಿತ್ರರು ಇವರ ಕಾರ್ಯತತ್ಪರತೆ ಮತ್ತು ಧೈರ್ಯವನ್ನು ಮೆಚ್ಚಿದ್ದರು. ಇದು ಇವರು ಆ ದಿಕ್ಕಿನಲ್ಲಿ ಭದ್ರವಾಗಿ ಹೆಜ್ಜೆಯೂರಿ ನಡೆಯಲು ಪ್ರೋತ್ಸಾಹದಾಯಕವಾಯಿಂತು.

ವೀರಪ್ಪನವರು ಜನಿಸಿದ್ದು 1899ರಲ್ಲಿ. ಇವರ ತಂದೆ ಕಂಗಿರಿ ವೀರಪ್ಪನವರು. ವೀರಪ್ಪನವರು ಆಶ್ರಯಿಸಿದ ವೃತ್ತಿ ಚಿಲ್ಲರೆಅಂಗಡಿವ್ಯಾಪಾರ ; ವ್ಯವಸಾಯವನ್ನು ಉಪಕಸುಬನ್ನಾಗಿ ಮಾಡಿಕೊಂಡಿದ್ದರು. ಇವರು ಇಂಟರ್‌ಮೀಡಿಯೇಟ್‌ವರೆಗೂ ಕಷ್ಟಪಟ್ಟು ವ್ಯಾಸಂಗ ಮಾಡಿದರು. ಅನಂತರ ವಿದ್ಯಾಭ್ಯಾಸಕ್ಕೆ ಶರಣು ಹೊಡೆದು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ಇವರಿಗೆ ಸೂಕ್ತಮಾರ್ಗದರ್ಶನ ಮಾಡಿ ಇವರ ಮನಸ್ಸಿನಲ್ಲಿ ಸ್ವಾತಂತ್ರ್ಯದ ಕಿಡಿಯನ್ನು ಹೊತ್ತಿಸಿದವರೆಂದರೆ [illegible] ರಾಮಚಂದ್ರರಾಯರು. ರಾಮಚಂದ್ರರಾಯರ ನಿರ್ದೇಶನದಂತೆ ಮಳವಳ್ಳಿಯ ಪುರಸಭೆಯ ಹಿಂಭಾಗದ ಸಂತೆಮಾಳದಲ್ಲಿ ನೂರಾರು ಜನರ ಸಮ್ಮುಖದಲ್ಲಿ ತಾವು ಧರಿಸುತ್ತಿದ್ದ ಜರತಾರಿ ಪೇಟ ಮಿಲ್ಲಿನ ಬಟ್ಟೆಗಳನ್ನು ಸುಟ್ಟು, ಖಾದಿ [illegible] ದೀಕ್ಷಾಬದ್ಧರಾದರು. ಅಂದಿನಿಂದ ದೇಶದ ದಾಸ್ಯವಿಮೋಚನೆ [illegible] ಉಸಿರಾಯಿತು. 'ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿ' [illegible] ಇವರ ತಾರಕ ಮಂತ್ರವಾಯಿತು. ಖಾದಿಯನ್ನು ಜೀವನದ ಕೊನೆಯವರೆಗೂ [illegible]

ವಶೌಲ್ಯಯುತ ಬದುಕನ್ನು ಸಾಗಿಸಿದರು.

ಅಂಗಿದಾಗ್ಗ್ಯೆ ಮಳವಳ್ಳಿ ಪಟ್ಟಣಕ್ಕೆ ಹೊರಗಿನಿಂದ ಹಿರಿಯರನ್ನು ಕರೆಯಿಸಿ ಉಪನ್ಯಾಸ ಕಾರ್ಯಕ್ರಮಂವನ್ನು ಏರ್ಪಡಿಸುತ್ತಿದ್ದರು. ಬೀದಿ ಬೀದಿಗಳಲ್ಲಿ ಮೆರವಣಿಗೆ, ಘೋಷಣೆ ಮೊದಲಾದುವುಗಳ ಮೂಲಕ ಜನರ ಗಮನವನ್ನು ಹೋರಾಟದ ಕಡೆಗೆ ಸೆಳೆಯುತ್ತಿದ್ದರು. ವೀರಪ್ಪನವರ ಪ್ರೇರಣೆಯಿಂದ ಕಾಂಗ್ರೆಸ್ ಸುಬ್ಬಣ್ಣನವರು ತಾಲ್ಲೂಕು ಕಚೇರಿಯ ಮೇಲೆ ತ್ರಿವರ್ಣ ಧ್ವಜವನ್ನು ಅತ್ಯಂತ ಅಪೂರ್ವವಾಗಿ ಏರಿಸಂವ ಸಾಹಸ ಮಾಡಿದರು. ಕಾಂಗ್ರೆಸ್ ಸುಬ್ಬಣ್ಣನವರು ತಮ್ಮ ಕೆಲವಾರು ಪತ್ರಗಳಲ್ಲಿ ವೀರಪ್ಪನವರ ಸೇವೆಯನ್ನು ಮನಸಾ ಪ್ರಶಂಸಿಸಿದ್ದಾರೆ.

ವೀರಪ್ಪನವರು ತಾಲ್ಲೂಕಿನ ಒಳಗೆ ಕೆಲಸ ಮಾಡಿರುವುದಲ್ಲದೆ ಅದಕ್ಕಿಂತ ಹೆಚ್ಚಾಗಿ ತಾಲ್ಲೂಕಿನ ಹೊರಗಡೆ ಹೆಚ್ಚಿನ ಹೋರಾಟ ಮಾಡಿದ್ದಾರೆ. ಇವರ ಉಪಟಳವನ್ನು ಸಹಿಸಿಕೊಳ್ಳದ ಸರ್ಕಾರ 1937ರಲ್ಲಿ ಇವರನ್ನು ಬಂಧಿಸಿತು. ಅನಂತರ 1938ರ ಏಪ್ರಿಲ್ 10ರಂದು ಶಿವಪುರದ ಧ್ವಜ ಸತ್ಯಾಗ್ರಹದಲ್ಲಿ ಹನುಮಂತಯ್ಯನವರ ಜತೆ ಭಾಗವಹಿಸಿ ಏಪ್ರಿಲ್ 27ರಂದು ಬಂಧನಕ್ಕೆ ಒಳಗಾಗಿ ಸೆರಮಂನೆಯಲ್ಲಿ ಕಠಿಣ ಶಿಕ್ಷೆ ಅನುಭವಿಸಿದರು. ಮುಂದೆ ಬಿಡುಗಡೆಗೊಂಡು 1939ರಲ್ಲಿ ತುಮಕೂರಿನಲ್ಲಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡಿದರು. ಮೇ 30ರಂದು ರಾಜದ್ರೋಹದ ಆರೋಪವನ್ನು ಹೊರಿಸಿದ ಬ್ರಿಟಿಷ್ ಸರ್ಕಾರ ಮತ್ತೆ ಬಂಧೀಖಾನೆಗೆ ನೂಕಿತು. ನ್ಯಾಯಾಲಯ ಐದೂವರೆ ವರ್ಷ ಕಠಿಣಶಿಕ್ಷೆ ವಿಧಿಸಿತು. ತಾವು ಮಾಡಿದ ಅಪರಾಧ ಏನೆಂದು ನ್ಯಾಯಾಲಯಕ್ಕೇ ಅರ್ಜಿಸಲ್ಲಿಸಿದರು. ತುಮಕೂರಿನ ಸೆಷನ್ ನ್ಯಾಯಾಧೀಶರಿಗೆ ಅವರು ಬರೆದುಕೊಂಡ ಪತ್ರ ಸಾಕಷ್ಟು ದೀರ್ಘವಾಗಿದ್ದು, ಅನ್ಯಾಯದ ವಿರುದ್ಧ ಪ್ರತಿಭಟನಾತ್ಮಕವಾಗಿದೆ. ಇವರ ಧೈರ್ಯ ಮತ್ತು ರುಜುಸ್ವಭಾವ ಇಂಥ ಬರಹಗಳಲ್ಲಿ ವ್ಯಕ್ತವಾಗುತ್ತದೆ. ಒಂದೂವರೆ ವರ್ಷಕ್ಕೆ ಬಂಧನ ಮುಕ್ತರಾದರು.

1942ರ 'ಬ್ರಿಟಿಷರೇ ಭಾರತವನ್ನು ಬಿಟ್ಟು ತೊಲಗಿರಿ' ಚಳುವಳಿಯಲ್ಲಿ ಇವರು ರಾಜ್ಯದಿಂದ ಆಚೆ ಪ್ರಯಾಣ ಬೆಳೆಸಿದರು ಮುಂಬೈ ಅಧಿವೇಶನವನ್ನು ಮುಗಿಸಿಕೊಂಡು ಬೆಂಗಳೂರಿಗೆ ಹಿಂದಿರುಗಿದಾಗ ಇವರನ್ನು ಯಶವಂತಪುರದ ರೈಲ್ವೆ ನಿಲ್ದಾಣದ ಬಳಿ ಆಗಸ್ಟ್ 8ರಲ್ಲಿ ಬಂಧಿಸಲಾಗಿತ್ತು. ಇವರ ಜೊತೆಯಲ್ಲಿ ತಾಳಿಕೆರೆ ಸುಬ್ರಮಣ್ಯಂ, ಕೆ. ಟಿ. ಭಾಷ್ಯಂ, ಎಸ್. ನಿಜಲಿಂಗಪ್ಪ, ಶಿವಪ್ಪಾರೆಡ್ಡಿ ಮೊದಲಾದವರು ಬಂಧಿತರಾದವರಲ್ಲಿ ಪ್ರಮುಖರು. 1947ರಲ್ಲಿ ಮೈಸೂರು ಚಲೇಜಾವ್ ಚಳವಳಿ ನಡೆದಾಗ ಬಂಧನಕ್ಕೆ ಒಳಗಾದರು, ಹೀಗೆ ಸೆರೆಮನೆ ಎಂಬುದು ವೀರಪ್ಪನವರ ಬದುಕಿನಲ್ಲಿ ಸ್ವಂತ ಮನೆಯಷ್ಟೇ ಬಳಕೆಯಾಯಿತು. ಜೈಲಿನ ಬದುಕಿಗೆ ಸಾಕಷ್ಟು ಒಗ್ಗಿ ಹೋದರು ; ತಮ್ಮ ಸ್ವಂತ ಮನೆಯವರನ್ನು ಮರೆತರು. ಸ್ವಾತಂತ್ರ್ಯ ಹೋರಾಟದ ಆವೇಗದಲ್ಲಿ 1938ರಲ್ಲಿ ತಮ್ಮ ಊರನ್ನು ಬಿಟ್ಟರು, ಇವರು ಸರಿಯಾಗಿ ಊರನ್ನು

ತಲಪಿದ್ದು 1947ನೇ ಇಸವಿಯಲ್ಲಿ. ಜೈಲಿನಲ್ಲಿ ಇದ್ದಾಗ ಇವರ ಪತ್ನಿ ತೀರಿಕೊಂಡರು. ಸರ್ಕಾರ ಇವರ ಪತ್ನಿಯ ಸಂಸ್ಕಾರ ಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನಿರಾಕರಿಸಿತು. ಇದಾದ ಅನಂತರ ಇವರ ಮಗಳು ಅನಾರೋಗ್ಯದ ನಿಮಿತ್ತ ತೀರಿಕೊಂಡಾಗಲೂ ಇವರನ್ನು ಬಿಡುಗಡೆ ಮಾಡದೆ ಕಠಿಣ ನಿಲುವನ್ನು ತಾಳಿತು. ದುಃಖ ತಪ್ತರಾದ ವೀರಪ್ಪನವರು ಸೆರೆಮನೆಯ ಸರಳುಗಳ ನಡುವಯೇ ಕಣ್ಣೀರಲ್ಲಿ ಕೈತೊಳೆದರು.

ಭಾರತಕ್ಕೆ ಸ್ವಾತಂತ್ರ್ಯ ದೊರೆತ ಅನಂತರದಲ್ಲಿ ಗಳಿಸಿದ ಸ್ವಾತಂತ್ರ್ಯವನ್ನೇ ಅರ್ಥಪೂರ್ಣಗೊಳಿಸಬೇಕಾದ ಮಾರ್ಗದಲ್ಲಿ ಸಮಾಜ ಸೇವೆಯೇ ಇವರ ಬದುಕಿನ ಧ್ಯೇಯಾದರ್ಶವಾಯಿತು. ಚುನಾವಣೆಗಳ ರಾಜಕೀಯ ಇವರಿಗೆ ಸಾಕಷ್ಟು ತಗುಲಿತು. ಅಧಿಕಾರಕ್ಕೆ ಕಿತ್ತಾಟ, ಸ್ಥಳೀಯ ಕಾಂಗ್ರೆಸಿಗರ ಭಿನ್ನಾಭಿಪ್ರಾಯಗಳನ್ನು ತಮ್ಮ ಕಣ್ಮುಂದೆಯೇ ಕಾಣಬೇಕಾಯಿತು. 1957ರಲ್ಲಿ ನಡೆದ ಚುನಾವಣೆಯಲ್ಲಿ ಮಳವಳ್ಳಿ ತಾಲ್ಲೂಕಿನ ಪ್ರಬಲ ಹೋರಾಟಗಾರರಾದಾಗ್ಯೂ ಕಾಂಗ್ರೆಸ್‌ನಿಂದ ಟಿಕೆಟ್ ದೊರೆಯದೆ ನಿರಾಶರಾದರು. ಭಾರತದ ಉಚ್ಚ ಮಟ್ಟದ ಕಾಂಗ್ರೆಸ್ ನಾಯಕರಿಗೆ ತಮ್ಮ ಮನವಿ ಸಲ್ಲಿಸಿದರು. ಆದರೆ ಇವರ ಕೂಗು ಕಾಂಗ್ರೆಸ್ ನಾಯಕರಿಗೆ ಮುಟ್ಟಲಿಲ್ಲ. ಹೀಗಾದಾಗ್ಯೂ ಇವರು ಸ್ವತಂತ್ರರಾಗಿ ನಿಂತು ತಮ್ಮ ಕೈಲಾದಷ್ಟು ಮಟ್ಟಿಗೆ ಸಮಾಜ ಸೇವೆ ಮಾಡಿದರು.

ಮಳವಳ್ಳಿ ಪಟ್ಟಣದ ಪಕ್ಕದಲ್ಲಿರುವ ಕೆರೆಯೊಂದು ಮಲೇರಿಯಾ ಮೊದಲಾದ ಖಾಯಿಲೆಗಳಿಗೆ ಕಾರಣ ಎಂಬುದಾಗಿ ಜನರಲ್ಲಿ ನಂಬಿಕೆ ಬೇರೂರ ತೊಡಗಿತು. ತತ್ಪರಿಣಾಮವಾಗಿ ತುಂಬಿದ ಕೆರೆಯನ್ನು ಜನ ಒಡೆದು ಹಾಳು ಮಾಡಿದರು. ವೀರಪ್ಪನವರು ಈ ಸಂದರ್ಭದಲ್ಲಿ ಜನರ ಈ ಮೂಢ ನಂಬಿಕೆಯನ್ನು ಮೂಲೋತ್ಪಾಟನೆ ಮಾಡಲು ಸಾಕಷ್ಟು ಶ್ರಮಿಸಿದರು. ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಹೋರಾಟ ಮಾಡಿ ಒಡೆದ ಕೆರೆಯನ್ನು ಶ್ರಮವಹಿಸಿ ಮತ್ತೆ ಕಟ್ಟಿಸಿದರು. ಇದಲ್ಲದೆ ಮಳವಳ್ಳಿಯ ಸಂಚಾರ ವ್ಯವಸ್ಥೆಯಲ್ಲಿನ ತೊಡಕನ್ನು ಕಂಡು ಕನಕಪುರದ ಕಡೆಗಿನ ಪೂರ್ವ ದಿಕ್ಕಿನ ರಸ್ತೆಯ ನಿರ್ಮಾಣಕ್ಕೆ ಕಾರಣಕರ್ತರಾದರು. ಇದಲ್ಲದೆ ಹೆಬ್ಬಾಳ್ಳ ನಾಲೆಯ ರಚನೆ ಇವರ ಪರಿಶ್ರಮದ ಫಲವೇ ಆಗಿದೆ. ಹೀಗೆ ಸ್ವಾರ್ಥದ ಕಿಲುಬೂ ಇಲ್ಲದೆ, ಅದಕ್ಕಾಗಿ ಹಂಬಲಿಸದೆ ದಿನಾಂಕ 6-2-1968ರಲ್ಲಿ ದಿವಂಗತರಾದರು. ಇಂಥ ಸ್ವಾಂತ್ರ್ಯ ಹೋರಾಟಗಾರರ ಮಕ್ಕಳಾದ ಎಂ ವಿ. ನಾರಾಯಣ, ಎಂ. ವಿ. ಕೃಷ್ಣಪ್ಪ ಮೊದಲಾದವರಿಗೆ ಲಾಟರಿ ಟಿಕೆಟ್ ಮಾರಾಟ ಮಾಡಿಕೊಂಡು ಜೀವನ ಸಾಗಿಸಬೇಕಾದ ಪರಿಸ್ಥಿತಿ ಬಂದಿದೆ ಎಂಬುದೇ ನಮ್ಮ ದೇಶದ ದೊಡ್ಡ ದುರಂತ.

ಡಿ. ದೊಡ್ಡಲಿಂಗೇಗೌಡ

ಕಾಂಗ್ರೆಸ್ ಸುಬ್ಬಯ್ಯ

ಕಾಂಗ್ರೆಸ್ ಸುಬ್ಬಯ್ಯನವರು 1901ರಲ್ಲಿ ಮಳವಳ್ಳಿಯಲ್ಲಿ ಜನಿಸಿದರು. ಇವರ ಮುಖ್ಯ ವೃತ್ತಿ ವ್ಯವಸಾಯ. ಅನಂತರ ಕಾಂಗ್ರೆಸ್ಸಿನ ಚಟುವಟಿಕೆಗಳಲ್ಲಿ ಆಸಕ್ತಿ ತಾಳಿದರು. 1929ರಲ್ಲಿ ಬೆಂಗಳೂರಿನಲ್ಲಿನ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಭಾಗವಹಿಸಲು ತೊಡಗಿದರು. 1932ರಲ್ಲಿ ಕಾಂಗ್ರೆಸ್‌ಗೆ ನಾಲ್ಕಾಣೆ ಸದಸ್ಯರಾದರು. 1934 ರಿಂದ ಕಾಂಗ್ರೆಸ್‌ನ ಸಕ್ರಿಯ ಕಾರ್ಯಕರ್ತರಾದರು. ಬೆಂಗಳೂರಿನಲ್ಲಿ ಕೆ. ಟಿ. ಭಾಷ್ಯಂರವರ ನಿಕಟವರ್ತಿಯಾಗಿದ್ದವರು ಇವರು. 1904ರಲ್ಲಿ ಮಳವಳ್ಳಿಯಲ್ಲಿ ಎಚ್. ಕೆ. ವೀರಣ್ಣ ಗೌಡರು ಮತ್ತು ಮಹಾಬಲರಾಯರ ಪ್ರೇರಣೆಯಂತೆ ಕ್ರಿಯಾಶೀಲ ಕಾರ್ಯಕರ್ತರಾದರು. 1938ರಲ್ಲಿ ಶಿವಪುರದ ಅಧಿವೇಶನಕ್ಕೆ ಮಳವಳ್ಳಿಯಿಂದ ಹೋಗಿದ್ದರು. ಅಲ್ಲಿ ಸಿದ್ಧಲಿಂಗಯ್ಯನವರ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದು ಆದಿಕರ್ನಾಟಕ ಹುಡುಗರ ಜೊತೆ ಸಹಪಂಕ್ತಿಭೋಜನ ಮಾಡಿ ಊರಿಗೆ ಮರಳಿದರು.

1940ರಲ್ಲಿ ಎ. ಜಿ. ಬಂದೀಗೌಡರೂ, ಸಾಹುಕಾರ್ ಚನ್ನಯ್ಯನವರೂ ಮಳವಳ್ಳಿಗೆ ಬಂದು ಸುಬ್ಬಯ್ಯನವರನ್ನು ಅಸೆಂಬ್ಲಿಗೆ ನಿಲ್ಲಿಸಬೇಕೆಂದು ನಿರ್ಣಯ ಮಾಡಿದರು. ಸುಬ್ಬಯ್ಯನವರು 250 ರೂ ಫೀಸು ತುಂಬಿ ಅರ್ಜಿ ಸಲ್ಲಿಸಿದರು. ಇವರ ಅರ್ಜಿ ತಿರಸ್ಕೃತವಾಯಿತು. ಸರ್ಕಾರಕ್ಕೆ ಪ್ರತಿಭಟನೆ ಸಲ್ಲಿಸಲು ಅರ್ಜಿ ತಿರಸ್ಕೃತರಾದವರೆಲ್ಲರನ್ನೂ ಬಂದೀಗೌಡರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಕಳೆಹಾಕಿದರು. ಸೋಮಶೇಖರರಾಯ ಎಂಬ ವಕೀಲರಿಂದ ಕೋರ್ಟ್‌ಗೆ 250 ರೂ ತುಂಬಿ ಖಟ್ಲೆ ಹೂಡಿದರು. ಹುಟ್ಟಿದ ದಿನಾಂಕದ ಬಗೆಗೆ ತಕರಾರು ಬಂದಾಗ ಲೋಯರ್ ಸೆಕೆಂಡರಿ ಪರೀಕ್ಷೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದರು. ಸುಬ್ಬಯ್ಯನವರ ಹೋರಾಟಕ್ಕೆ ಪ್ರತಿಫಲ ದೊರೆಯಿತು. ಸರ್ಕಾರ ಹೈಕೋರ್ಟ್‌ಗೆ ಅಪೀಲ್ ಹೋಯಿತು. ಚುನಾವಣೆಗೆ ಹಾಕಿದ ಅರ್ಜಿಯಲ್ಲಿ ನಿಗದಿತ ಸ್ಥಳದಲ್ಲಿ ಜನ್ಮದಿನಾಂಕವನ್ನು ಹಾಕಿಲ್ಲ ಎಂಬುದಾಗಿ ವಿರುದ್ಧ ತೀರ್ಮಾನ ಕೊಟ್ಟು 200ರೂ. ಪರಿಹಾರವನ್ನು ಕೊಡಬೇಕೆಂದು ತೀರ್ಪಿತ್ತಿತು. ಆ ಕಾಲದಲ್ಲಿ ಸುಬ್ಬಯ್ಯನವರು ಈ ವ್ಯವಹಾರಕ್ಕೆ ಮೂರು ನಾಲ್ಕು ಸಾವಿರ ಖರ್ಚು ಮಾಡಿದ್ದಾರೆ. ಮಳವಳ್ಳಿಯಲ್ಲಿ ಕೆಲವೊಮ್ಮೆ ಹಿರಿಯರನ್ನೂ ಕರೆಸಿ ಉಪನ್ಯಾಸ ಕಾರ್ಯಕ್ರಮವೇರ್ಪಡಿಸಿದಾಗ ಅದರ ಖರ್ಚನ್ನು ಇವರೇ ವಹಿಸಿಕೊಳ್ಳುತ್ತಿದ್ದರು. ಜಾತಿಭೇದ ಮರೆತು ಕುಡಿನೀರು ಕಟ್ಟೆಯಲ್ಲಿ ನೀರು ಹೊಗೆಯುವ ಕಾರ್ಯ

ದಲ್ಲಿ ಇವರು ಭಾಗಿಯಾಗಿದ್ದರು. 1942 ರಲ್ಲಿ ಮೆರವಣಿಗೆ ಮಾಡಿ ಸ್ಕೂಲನ್ನು ಮುಚ್ಚಿಸಿ ಸರ್ಕಾರಿ ಕಟ್ಟಡ ಸುಟ್ಟು ತಂತಿ ಕತ್ತರಿಸಬೇಕೆಂದು ಪ್ರಚಾರ ಮಾಡಿದ್ದರು. ಇದರಿಂದ ಬಂಧಿತರಾಗಿ ಆರುತಿಂಗಳು ಜಿಲ್ಲೆಯಿಂದ ಇವರು ಗಡೀಪಾರಾದರು. ಇವರು ಬೆಂಗಳೂರು, ವಿಜಾಪುರ, ಬಾಗಲಕೋಟೆ, ಹುಬ್ಬಳ್ಳಿ, ಪಂಡರಾಪುರ ಮೊದಲಾದ ಕಡೆ ಸುತ್ತಿ 12 2.1943 ರಂದು ಊರಿಗೆ ಮರಳಿ ಬಂದರು. ಅನಂತರ ಸ್ವಲ್ಪ ಕಾಲ ರೋಗಗ್ರಸ್ತರಾಗಿ ಹಾಸಿಗೆ ಹಿಡಿದಿದ್ದರು.

1947 ರಲ್ಲಿ ಪ್ರಮುಖವಾಗಿ ಇವರು ಮಾಡಿದ ಕೆಲಸವೆಂದರೆ ಸ್ವಾತಂತ್ರ್ಯ ಪ್ರಚಾರ ಮಾಡುತ್ತಾ, ಬೀದಿಯಲ್ಲಿ ಮೆರವಣಿಗೆ ನಡೆಸಿ ತಾಲೂಕು ಕಛೇರಿಯ ಮೇಲೆ ತ್ರಿವರ್ಣ ಧ್ವಜವನ್ನು ಹಾರಿಸಿದುದು. ಆಗ ಸಾವಿರಾರು ಜನ ಸೇರಿದ್ದರು. ಸರ್ಕಲ್ ಇನ್ಸ್‌ಪೆಕ್ಟರಾಗಿದ್ದ ಗಾಯಕವಾಡ್ ಎಂಬುವವರು ನಿಮ್ಮ ಕೆಲಸ ಆಯಿತಲ್ಲಾ ಹೋಗಿ ಎಂದರು. ಅಪಲ್ದಾರರನ್ನು ಎಳೆದು ಹಾಕಬೇಕೆಂದಿದ್ದ ಜನರನ್ನು ಸುಬ್ಬಯ್ಯನವರು ಸಮಾಧಾನ ಪಡಿಸಿ ಮನೆಗೆ ಮರುಳುವಂತೆ ಮಾಡಿದರು. ರಾತ್ರಿ ಊಟ ಮಾಡಿ ಕಾಂಗ್ರೆಸ್ ಆಫೀಸಿಗೆ ಬಂದಾಗ ಬಂಧಿತರಾದರು. ಆಗ ಮಂಡ್ಯದ ಜೈಲಿನಲ್ಲಿ ಒಂದು ತಿಂಗಳು ಇದ್ದರು.

1936 ರಲ್ಲಿ ಆದಿಕರ್ನಾಟಕರ ಸಹಾಯಕ್ಕಾಗಿ ಅಮಲ್ದಾರರ ಅಧ್ಯಕ್ಷತೆಯಲ್ಲಿ ನೇಮಿಸಿದ ಕಮಿಟಿಯಲ್ಲಿ ಇವರೂ ಸದಸ್ಯರಾಗಿದ್ದರು. 1934 ರಿಂದ 1951ರ ವರೆಗೆ ಸದಸ್ಯರೂ ಆಗಿದ್ದರು. ಈ ಅವಧಿಯಲ್ಲಿ ಸಾರ್ವಜನಿಕರಿಗಾಗಿ ಸಾಕಷ್ಟು ದುಡಿದಿದ್ದಾರೆ. ತಾವು ವ್ಯವಸಾಯ ಮಾಡುತ್ತಿದ್ದ ಜಮೀನನ್ನು ಸಾಲದವರಿಗೆ ಮಾರಿ ಕೊನೆಯಲ್ಲಿ ಬರಿಗೈಯಲ್ಲಿ ನಿಂತ ಸುಬ್ಬಯ್ಯನವರು ತಮ್ಮ ಕೊನೆಯ ದಿನಗಳಲ್ಲಿ ಜೀವನದಲ್ಲಿ ಅಂಥ ಸುಖವನ್ನೇನೂ ಕಾಣಲಿಲ್ಲ.

ಡಿ. ದೊಡ್ಡಲಿಂಗೇಗೌಡ

ಪಿ. ತಿರುಮಲೇಗೌಡ

ಹಿಂದೆ ಮೈಸೂರುಜಿಲ್ಲೆಗೆ ಸೇರಿದ್ದ ಮಂಡ್ಯತಾಲ್ಲೂಕಿನ ಮದ್ದೂರು ಹೋಬಳಿಯ ಶಿವಪುರ ಗ್ರಾಮದ ಶ್ರೀಮಂತ ಕುಟುಂಬದ ಶ್ರೀ ಪುಟ್ಟಸ್ವಾಮಿಗೌಡ ಮತ್ತು ತಾಯಮ್ಮನವರಿಗೆ ಜನಿಸಿದ ನಾಲ್ಕು ಜನ ಗಂಡು ಮಕ್ಕಳಲ್ಲಿ ಶ್ರೀ ತಿರುಮಲೇಗೌಡರು ಮೊದಲನೆಯವರು. ಶ್ರೀ ಪುಟ್ಟಸ್ವಾಮಿಗೌಡರು ಮಕ್ಕಳಿಗೆ ಸಾಧ್ಯವಾದಷ್ಟು ವಿದ್ಯಾಭ್ಯಾಸ ಮಾಡಿಸಿ, ಅವರ ಕುಲ ಕಸುಬಾದ ಅಬ್ಕಾರಿ ಮತ್ತು ವ್ಯವಸಾಯದಲ್ಲಿ ಮಕ್ಕಳನ್ನು ಪಳಗಿಸಿ, ಮೊದಲನೆಯವರಾದ ಶ್ರೀ ತಿರುಮಲೇಗೌಡರಿಗೆ ಎಲ್ಲಾ ಅಧಿಕಾರವನ್ನು ಬಿಟ್ಟು ದೈವಾಧೀನರಾದರು. ಇದು 1936ರ ವರೆಗೂ ನಡೆದುಕೊಂಡು ಬಂತು.

1937ರಲ್ಲಿ ಅಂದಿನ ಹಳೇಮೈಸೂರಿನ ರಾಜಕೀಯ ಪಂಗಡಗಳು ಒಂದಾಗಿ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸಬೇಕೆಂದು "ಮೈಸೂರು ಕಾಂಗ್ರೆಸ್" ಎಂಬ ರಾಜಕೀಯ ಸಂಸ್ಥೆಯನ್ನು ಆರಂಭಿಸಿದ ಅಭಿಮಾನದಿಂದ ಒಂದು ಅಧಿವೇಶನವನ್ನು ನಡೆಸಬೇಕೆಂದು ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀಗಳಾದ ಸಾಹುಕಾರ್ ಚನ್ನಯ್ಯ, ಎಚ್. ಸಿ. ದಾಸಪ್ಪ, ರಂಗರಾಮಯ್ಯ, ಟಿ. ಮರಿಯಪ್ಪ, ಎಚ್. ಕೆ. ವೀರಣ್ಣಗೌಡ. ಎ. ಜಿ. ಬಂದೀಗೌಡ, ಪಾಲಹಳ್ಳಿ ಸೀತಾರಾಮಯ್ಯ, ಎಂ. ಎನ್. ಜೋಯಿಸ್. ಕೆ. ಚೆಂಗಲರಾಯರೆಡ್ಡಿ, ಟಿ. ರಾಮಾಚಾರ್, ಪಟ್ಟಾಭಿರಾಮನ್, ಸಂಪಂಗಿ ರಾಮಯ್ಯ, ಎಸ್. ನಿಜಲಿಂಗಪ್ಪ, ಕೆ. ಟಿ. ಭಾಷ್ಯಂ, ಟಿ. ಸಿದ್ಧಲಿಂಗಯ್ಯ. ಕೆ. ಹನುಮಂತಯ್ಯ, ಡಾ. ಪಾರ್ಥನಾರಾಯಣ ಪಂಡಿತ್ ಶ್ರೀಮತಿಯವರಾದ ಯಶೋಧರದಾಸಪ್ಪ, ಬಳ್ಳಾರಿಸಿದ್ದಮ್ಮ, ಸುನಂದಮ್ಮ ನರಸಿಂಹಯ್ಯಂಗಾರ್ ಮುಂತಾದ ಬಹುತೇಕ ಮುಖಂಡರುಗಳು ಅದರಲ್ಲಿದ್ದರು. ಕಾಂಗ್ರೆಸ್ ಅಧಿವೇಶನ ನಡೆಸಬೇಕೆಂದು ತೀರ್ಮಾನವಾದದ್ದೇನೊ ಸರಿ ಎಲ್ಲಿ ನಡೆಸಬೇಕೆಂಬುದು ಒಂದು ಸಮಸ್ಯೆಯಾಗಿ ಕೊನೆಯಲ್ಲಿ ಮದ್ದೂರು ಹತ್ತಿರವಿರುವ ಶಿವಪುರದಲ್ಲಿ ನಡೆಸಬೇಕೆಂದು ತೀರ್ಮಾನವಾಯಿತು, ಏಕೆಂದರೆ ಅಧಿವೇಶನಕ್ಕೆ ಬರುವ ಹೋಗುವ ಸಾವಿರಾರು ಜನಕ್ಕೆ ಮತ್ತು ಅಸಂಖ್ಯಾತ ಸ್ವಯಂಸೇವಕರುಗಳಿಗೆ ಸ್ನಾನಕ್ಕೆ ಮತ್ತು ಕುಡಿಯಲು ಯೋಗ್ಯವಾದ ನೀರಿಗಾಗಿ ಪಕ್ಕದಲ್ಲೆ ಶಿಂಷಾ ನದಿಯು ಹರಿಯುವುದರಿಂದಲೂ ಎಲ್ಲಕ್ಕಿಂತ ಮಿಗಿಲಾಗಿ ಆಗಿನ ಕಾಲದಲ್ಲಿ ಬಸ್ಸುಗಳ ಸೌಕರ್ಯವಿಲ್ಲದೆ ಇದ್ದುದರಿಂದ ಶಿವಪುರದಲ್ಲಿ ಒಂದು ರೈಲ್ವೆ ನಿಲ್ದಾಣವಿದ್ದುದರಿಂದ

ಹೋಗಿ ಬರಲು ಆ ಸ್ಥಳವನ್ನು ಆರಿಸಲಾಯಿತು. ಇದು ಶ್ರೀ ಎಚ್. ಕೆ. ವೀರಣ್ಣ ಗೌಡರ ಸಲಹೆಯಾಗಿತ್ತು. ಸ್ಥಳ ಪರೀಕ್ಷೆಯೇನೋ ಆಯಿತು. ಆದರೆ ಅಧಿವೇಶನ ನಡೆಸಲು ಬೇಕಾಗುವ 7–8 ಎಕರ ಜಮೀನನ್ನು ಬಿಟ್ಟುಕೊಡುವವರಾರು ಎಂಬ ಒಂದು ಜಟಿಲ ಸಮಸ್ಯೆಯನ್ನು ಎದುರಿಸಬೇಕಾಯಿತು. ಆಗ ರೈಲ್ವೆ ನಿಲ್ದಾಣದ ಸಮೀಪದಲ್ಲೇ ಇದ್ದ ತಿರುಮಲೇಗೌಡರು ದೊಡ್ಡ ಜಮೀನುದಾರರಾಗಿದ್ದರು. ಅವರು ಅಬ್ಕಾರಿ ಕಂಟ್ರಾಕ್ಟರ್ ಕೂಡ ಆಗಿದ್ದುದರಿಂದ ಸರ್ಕಾರವನ್ನು ಎದುರು ಹಾಕಿಕೊಂಡು, ತಮ್ಮ ಸಂಪಾದನೆಯನ್ನೆಲ್ಲಾ ತ್ಯಾಗ ಮಾಡಿ ಜಮೀನನ್ನು ಬಿಟ್ಟುಕೊಡುತ್ತಾರೆಯೇ ಎಂಬುದನ್ನು ಬಗೆಹರಿಸಲು ಆ ಪ್ರಾಂತದ ಮುಖಂಡರಾದ ಶ್ರೀ ಎಚ್.ಕೆ. ವೀರಣ್ಣಗೌಡರನ್ನು ಸಂಧಾನಕ್ಕೆ ಬಿಡಲಾಯಿತು. ಶ್ರೀ ಗೌಡರು ಶ್ರೀ ತಿರುಮಲೇಗೌಡರನ್ನು ಸಂಧಿಸಿ ಎಲ್ಲಾ ವಿಚಾರಗಳನ್ನು ಅವರಿಗೆ ಮನದಟ್ಟಾಗುವಂತೆ ವಿವರಿಸಿದರೂ ಕೂಡ ಸರ್ಕಾರದವರು ಅವರ ಅಬ್ಕಾರಿ ಕಂಟ್ರಾಕ್ಟನ್ನು ರದ್ದುಮಾಡುವುದಲ್ಲದೆ ನಾನಾ ವಿಧದಲ್ಲಿ ತೊಂದರೆ ಕೊಡಬಹುದೆಂದು ಹೆದರಿಕೊಂಡರು. ಕೊನೆಗೆ ಶ್ರೀಗಳಾದ ಸಾಹುಕಾರ್ ಚನ್ನಯ್ಯ, ಎಚ್. ಸಿ. ದಾಸಪ್ಪ, ಎಚ್. ಕೆ. ವೀರಣ್ಣಗೌಡ, ಎ.ಜಿ. ಬಂದೀಗೌಡ ಮತ್ತು ಸ್ಥಳೀಯ ಮುಖಂಡರುಗಳು ಹುಮ್ಮಸ್ಸು ಕೊಟ್ಟು, ಏನೇ ಬಂದರೂ ನಾವುಗಳೆಲ್ಲಾ ನಿಮ್ಮ ಪರ ನಿಂತು ಕಾದಾಡಿ ನಿಮ್ಮ ರಕ್ಷಣೆಗೆ ಜವಾಬ್ದಾರರಾಗಿರುತ್ತೇವೆಂದು ಅವರಿಗೆ ಆಶ್ವಾಸನೆ ನೀಡಿ ಕಾಂಗ್ರೆಸ್ ಅಧಿವೇಶನದ ವಿವಿಧ ಕಾರ್ಯಕ್ರಮಗಳು ನಡೆಯಲು ಬೇಕಾಗಿದ್ದ 7–8 ಎಕರೆ ಜಮೀನನ್ನು ಬಿಟ್ಟುಕೊಡಲು ಅವರಿಂದ ಅನುಮತಿ ಪಡೆದರು, ಇದೆಲ್ಲಾ ಸರ್ಕಾರದವರ ಗಮನಕ್ಕೆ ಬಂದ ನಂತರ ಮೊದಲೇ ಊಹಿಸಿದ್ದಂತೆ ಶ್ರೀ ತಿರುಮಲೇ ಗೌಡರ ಅಬ್ಕಾರಿ ಗುತ್ತಿಗೆಗೆ ಸಂಚಕಾರ ಬಂದು ಅನೇಕ ವಿಧಗಳಲ್ಲಿ ಅಂದಿನ ದಿವಾನರಾದ ಸರ್ ಮಿರ್ಜಾಇಸ್ಮಾಯಿಲ್. ಜಿಲ್ಲಾಧಿಕಾರಿಗಳಾದ ಹಜರತ್ ಮೇಕ್ರಿ ಸಾಹೇಬರು, ಅಸಿಸ್ಟೆಂಟ್ ಕಮೀಷನರ್ ಮತ್ತು ಹಂಗಾಮಿ ಜಿಲ್ಲಾ ಪೋಲೀಸ್ ಅಧಿಕಾರಿಗಳಾದ ಶ್ರೀ ಬೀರಪ್ಪನವರು ಶ್ರೀ ತಿರುಮಲೇಗೌಡರನ್ನು ಬೆದರಿಸಿದರೂ ಅವರು ಹಿಮ್ಮೆಟ್ಟದೆ, ಕಾಂಗ್ರೆಸ್ ಮುಖಂಡರೊಡನೆ ಬೆರೆತು ಕಾಂಗ್ರೆಸ್ ಅಧಿವೇಶನದ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರೂ ಆದರು.

ಮೈಸೂರು ಕಾಂಗ್ರೆಸ್ ಅಂಗರಚನೆಯಂತೆ ಕಾರ್ಯಕ್ರಮಗಳು ಪ್ರಾರಂಭವಾಗುವುದಕ್ಕೆ ಮುಂಚೆಯೇ 144ನೇ ಕಾಲಂ ಪ್ರಕಾರ ಶಿವಪುರ ಮತ್ತು ಸುತ್ತಮುತ್ತ ಒಂದು ಮೈಲಿ ಪಾಸಲೆ ನಿಷೇಧಾಜ್ಞೆಯನ್ನು ಅಂದಿನ ಜಿಲ್ಲಾಧಿಕಾರಿಗಳಾದ ಹಜರತ್ ಮೇಕ್ರಿ ಸಾಹೇಬರು ಜಾರಿ ಮಾಡಿ, ಇದನ್ನು ಉಲ್ಲಂಘಿಸಿದವರಿಗೆ ಸ್ಥಳದಲ್ಲೆ ಷೂಟಿಂಗ್ ಮಾಡಲ್ಪಡಲಾಗುತ್ತದೆಂದು ಪ್ರಚುರಪಡಿಸಿ ಕಾಂಗ್ರೆಸ್‌ಕಾರ್ಯಕಾರಿ ಸಮಿತಿಯವರಿಗೂ ಇದನ್ನು ಜಾರಿ ಮಾಡಲಾಯಿತು. ಅಷ್ಟು ಹೊತ್ತಿಗೆ ದೇಶದ ನಾನಾ ಭಾಗಗಳಿಂದ ಸಾವಿರಾರು ಜನ ನೆರೆದಿದ್ದರು, ಅದೇ ದಿನ ಇಡೀ ರಾತ್ರಿಯೆಲ್ಲಾ ಕಾಂಗ್ರೆಸ್ ಕಾರ್ಯಕಾರಿಸಮಿತಿಸಭೆ

ನಮ್ಮ ಸರ್ಕಾರ ವಿಧಿಸಿರುವ 144ನೇ ವಿಧಿಯನ್ನು ಎದುರಿಸಬೇಕೆಂದು ತೀರ್ಮಾನಿಸಿದರು.

ಮಾರನೆ ಬೆಳಿಗ್ಗೆ ಎಂಟು ಗಂಟೆಗೆ ಕಾಂಗ್ರೆಸ್ ಧ್ವಜವನ್ನು ಹಾರಿಸಲು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಕಾಂಗ್ರೆಸ್ ಮುಖಂಡರುಗಳೊಡನೆ ವೇದಿಕೆಗೆ ಬಂದು, ಶ್ರೀಮತಿ ಸುಬ್ಬಮ್ಮನವರಿಂದ ವಂದೇ ಮಾತರಂ ಪ್ರಾರ್ಥನೆಯೊಡನೆ ಪ್ರಾರಂಭವಾದಾಗ ಸರ್ಕಾರದವರು ವಿಧಿಸಿದ್ದ ನಿಷೇಧಾಜ್ಞೆಯನ್ನು ಅಂದಿನ ಅಸಿಸ್ಟೆಂಟ್ ಕಮೀಷನರ್ ಆದ ಶ್ರೀ ಬೀರಪ್ಪನವರು ಅವರಿಗೆ ಮನವರಿಕೆ ಮಾಡಿಕೊಟ್ಟಾಗ, ನಾವುಗಳು ಈ ಆಜ್ಞೆಯನ್ನು ಧಿಕ್ಕರಿಸುತ್ತೇವೆಂದು ಶ್ರೀ ಪಿ. ವೆಂಕಟಪ್ಪನವರೂ ಮತ್ತು ಶ್ರೀ ಟಿ. ಸುಬ್ರಹ್ಮಣ್ಯ ಅವರು ವಿರೋಧಿಸಿದಾಗ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಸಿದ್ಧಲಿಂಗಯ್ಯನವರೊಡನೆ ದಸ್ತಗಿರಿ ಮಾಡಿ ಮಂಡ್ಯ ಜೈಲಿಗೆ ಕರೆತರಲಾಯಿತು. ಅಲ್ಲಿ ನೆರೆದಿದ್ದ ಲಕ್ಷಾಂತರ ಜನರಿಗೆ ಸಾವಿರಾರು ಪೋಲೀಸರ ಕೈಲಿ ಬಂದೂಕಗಳು ಮತ್ತು ಲಾರಿಗಳನ್ನು ನೋಡಿ ಹೆದರಿಕೆಯಾದರೂ, ಹಿಮ್ಮೆಟ್ಟದೆ ಕಾಂಗ್ರೆಸ್ ಕೀ ಜೈ, ಭಾರತ ಮಾತಾಕಿ ಜೈ ಎಂಬ ಘೋಷಣೆಯನ್ನು ಕೂಗಿದರು. ಇದನ್ನು ಕೇಳಿದ ಸರ್ಕಾರ ಸ್ವಲ್ಪ ತಲ್ಲಣಿಸುವಂತಾಯಿತು. ಅನಂತರ ಕಾಂಗ್ರೆಸ್ಸಿಗೂ ಸರ್ಕಾರಕ್ಕೂ ಸಂಧಾನವಾಯಿತು.

1938ರಲ್ಲಿ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್ ಅವರು ಏಳು ತಾಲ್ಲೂಕುಗಳನ್ನು ಒಳಗೊಂಡಂತೆ ಮಂಡ್ಯವನ್ನು ಒಂದು ಹೊಸ ಜಿಲ್ಲೆಯನ್ನಾಗಿ ಮಾರ್ಪಡಿಸಿ ಶ್ರೀ ರಾಘವೇಂದ್ರರಾಯರನ್ನು ಅದರ ಪ್ರಥಮ ಜಿಲ್ಲಾಧಿಕಾರಿಗಳನ್ನಾಗಿ ನೇಮಿಸಲಾಯಿತು.

ಅವರ ಅವಧಿಯಲ್ಲಿ ಮಂಡ್ಯ ಜಿಲ್ಲಾ ಬೋರ್ಡ್ ಚುನಾವಣೆಯೊಂದು ನಡೆಯಿತು. ಆಗ ಕಾಂಗ್ರೆಸ್ ಪರವಾಗಿ ಶ್ರೀ ಪಿ. ತಿರುಮಲೇಗೌಡರು ಮತ್ತು ಗೆಜ್ಜಲಗೆರೆ ಪಕ್ಕದಲ್ಲಿರುವ ಕುದುರುಗುಂಡಿ ಮರಿಯಪ್ಪನವರು ಕಾಂಗ್ರೆಸ್ ಸ್ಪರ್ಧಿಗಳಾಗಿ ಸರ್ಕಾರದ ಪೂರ್ಣ ಸಹಕಾರದೊಡನೆ, ದಿವಾನರಾದ ಸರ್ ಮಿರ್ಜಾ ಸಾಹೇಬರ ಆತ್ಮೀಯರೂ ಮತ್ತು ಅತ್ಯಂತ ಪ್ರತಿಭಾನ್ವಿತರೂ ಆದ ಶ್ರೀ ಎಂ. ಸಿ. ಲಿಂಗೇಗೌಡರು ಮತ್ತು ಶ್ರೀ ಎಸ್. ಸಿ. ಮಲ್ಲಯ್ಯನವರು ಸರ್ಕಾರದ ಪರವಾಗಿಯೂ ಸ್ಪರ್ಧಿಗೆ ಇಳಿದರು. ಶ್ರೀಗಳಾದ ತಿರುಮಲೇಗೌಡರು ಮತ್ತು ಶ್ರೀ ಮರಿಯಪ್ಪನವರ ಹೆಸರುಗಳನ್ನೇ ಕೇಳರಿಯದವರೂ ಕಾಂಗ್ರೆಸ್ ಉಮೇದುವಾರುಗಳಿಗೆ ಅವರುಗಳ ಪವಿತ್ರ ಮತಗಳನ್ನು ಕೊಟ್ಟು ಶ್ರೀಗಳಾದ ಎಂ. ಸಿ. ಲಿಂಗೇಗೌಡರು ಮತ್ತು ಎಸ್. ಸಿ. ಮಲ್ಲಯ್ಯನವರನ್ನು ಪರಾಭವಗೊಳಿಸಿ, ಕಾಂಗ್ರೆಸ್ಸಿನ ಕೀರ್ತಿಪತಾಕೆಗಳನ್ನು ಇಮ್ಮಡಿಗೊಳಿಸಿದರು.

ಇದಾದ ಸ್ವಲ್ಪ ಸಮಯದ ನಂತರ ಶ್ರಿ ತಿರುಮಲೇಗೌಡರನ್ನು ರಾಜಕೀಯದ ಒಂದು ಸಣ್ಣ ಕಾರಣಕ್ಕಾಗಿ ದಸ್ತಗಿರಿ ಮಾಡಿ ಶ್ರೀರಂಗಪಟ್ಟಣ ಜೈಲಿನಲ್ಲಿಟ್ಟು ಸರ್ಕಾರದವರು ತಮ್ಮ ಸೇಡನ್ನು ತೀರಿಸಿಕೊಂಡರು. ಆ ಸಮಯದಲ್ಲಿ ಅವರ ಚಿಕ್ಕಮ್ಮ

ನವರ ಅಕಾಲಮರಣದಿಂದ ಶ್ರೀ ತಿರುಮಲೇಗೌಡರನ್ನು ಮದ್ದೂರು ಪುರಸಭಾಧ್ಯಕ್ಷ ರಾದ ಅವರ ತಮ್ಮ ಶ್ರೀ ಕೃಷ್ಣಪ್ಪನವರು ಅವರನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಿಸಿಕೊಂಡು ಬಂದರು. ತದನಂತರ ಅವರ ಮೇಲೆ ಹಾಕಿದ್ದ ಮೊಕದ್ದಮೆಗಳು ಸಾಬೀತಾಗದಿದ್ದುದರಿಂದ ಅವರ ಬಿಡುಗಡೆಯಾಯಿತು.

ಶ್ರೀ ತಿರುಮಲೇಗೌಡರು ಅಬ್ಕಾರಿ ಕಂಟ್ರಾಕ್ಟರ್ ಆಗಿದ್ದ ಕಾಲದಲ್ಲಿ ಕಾರುಗಳೇ ಇರಲಿಲ್ಲ. ಆದಕ್ಕೆ ಅವರು ಅವರ ಕೆಲಸಕಾರ್ಯಗಳಿಗಾಗಿ ಟಾಂಗಗಳನ್ನು ಇಟ್ಟುಕೊಂಡಿದ್ದರು. ಕುದುರೆಗಳಿಗೆ ಹುರುಳಿ ಬೇಯಿಸುತ್ತಿದ್ದುದರಿಂದ ಅದರ ಕಟ್ಟನ್ನು ಜಲ್ವತರವ ಮಾಡಿ ಇದರ ಜೊತೆಗೆ ಅವರ ಮನೆಯಲ್ಲಿ ಸದಾ ಇರುತ್ತಿದ್ದ ಕೈಮುಂಡೆಗಳನ್ನು ಬಂದವರಿಗೆಲ್ಲ ಸದಾ ಒಡಿಸುತ್ತಿದ್ದ ಇವರ ತಾಯಿ ಮಹಾತಾಯಿ, ಅನ್ನದಾತೆ ಎಂದು ಹೆಸರು ಪಡೆದಿದ್ದರು.

ಶ್ರೀ ತಿರುಮಲೇಗೌಡರು ಶ್ರೀ ಕೆ. ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಒಮ್ಮೆ ಲೆಜಿಸ್ಲೇಟಿವ್ ಕೌನ್ಸಿಲ್ ಸದಸ್ಯರಾಗಿದ್ದರು. ಮತ್ತೊಮ್ಮೆ ಸ್ಪರ್ಧಿಸಬೇಕೆಂದಿದ್ದರು. ಅವರ ರಾಜಕೀಯ ಗುರುಗಳಾದ ಶ್ರೀ ಎಚ್. ಕೆ. ವೀರಣ್ಣಗೌಡರ ಸಹಕಾರ ಸಿಗದೆ ಹೋದ್ದರಿಂದ ಕಾಂಗ್ರೆಸನ್ನೇ ತ್ಯಜಿಸಿ ಅಂದು ಶ್ರೀ ವೀರಣ್ಣಗೌಡರ ಪ್ರತಿಸ್ಪರ್ಧಿಯಾಗಿ ಪಿ. ಎಸ್. ಪಿ. ಅಭ್ಯರ್ಥಿಯಾಗಿ ಚುನಾವಣೆಗೆ ನಿಂತಿದ್ದ ಶ್ರೀ ಎಸ್. ಎಂ. ಕೃಷ್ಣ ಅವರಿಗೆ ಇವರು ಸಂಪೂರ್ಣ ಸಹಕಾರ ನೀಡಿದರು.

ಈ ಚುನಾವಣೆಯ ಎಣಿಕೆಯು ಮಳವಳ್ಳಿಯಲ್ಲಿ ನಡೆಯುತ್ತಿದ್ದಾಗ ಶ್ರೀ ಎಸ್. ಎಂ. ಕೃಷ್ಣ ಅವರು ಚುನಾಯಿತರಾದರೆಂಬ ವಾರ್ತೆಯನ್ನು ಕೇಳುತ್ತಿದ್ದಂತೆಯೇ ಹೃದಯ ಕ್ರಿಯೆ ನಿಂತು ಕುಂತಲ್ಲಿಯೇ ಮರಣವನ್ನಪ್ಪಿದರು. ಈ ಅಕಾಲಮರಣ ಶ್ರೀ ಎಸ್. ಎಂ. ಕೃಷ್ಣ ಅವರ ವಿಜಯೋತ್ಸವಕ್ಕಾಗಿಯೋ ಅಥವಾ ಅವರ ರಾಜಕೀಯ ಗುರುಗಳಾದ ಶ್ರೀ ವೀರಣ್ಣಗೌಡರ ಸೋಲಿಗೋ ಎಂಬುದು ಈಗಲೂ ಬಗೆಹರಿಯದ ಒಂದು ಯಕ್ಷ ಪ್ರಶ್ನೆಯಾಗಿಯೇ ಉಳಿದಿದೆ.

ಎ. ಸಿ. ಮಾದೇಗೌಡ

ಎ. ಸಿ. ಬೈರಪ್ಪ

ಶ್ರೀರಂಗಪಟ್ಟಣ ತಾಲ್ಲೂಕು ಅರಕೆರೆ ಗ್ರಾಮದ ಮಧ್ಯಸ್ಥ ಕುಟುಂಬದ ಶ್ರೀ ರಾಮೇಗೌಡರ ಚುಂಚೇಗೌಡರು ಮತ್ತು ಶ್ರೀಮತಿ ದೇವಮ್ಮನವರ ಪುತ್ರರಲ್ಲಿ ಮೊದಲಿಗ ರಾಗಿ ಭೈರಪ್ಪ ಹುಟ್ಟಿದರು. ಅವರ ತಾಯಿ ಅವಿದ್ಯಾವಂತೆಯಾದರೂ ದೈವಭಕ್ತೆ ಯಾದುದರಿಂದ ಅವರ ಮನೆದೇವರಾದ ಶ್ರೀ ಆದಿಚುಂಚನಗಿರಿ ಭೈರವೇಶ್ವರನ ಹೆಸರನ್ನೇ ಇಟ್ಟು ನಾಮಕರಣ ಮಾಡಿದರು. ಭೈರಪ್ಪನವರು ಜನಿಸಿದಂದಿನಿಂದಲೂ ಅವರ ತಂದೆಯವರು ನನ್ನ ಮಗ ಒಬ್ಬ ದೊಡ್ಡ ವಿದ್ಯಾವಂತನಾಗಿ ದೇಶ ಸೇವೆ ಮಾಡುವಂತೆ ದೇವರಲ್ಲಿ ಯಾವಾಗಲೂ ಪ್ರಾರ್ಥನೆ ಮಾಡುತ್ತಿದ್ದರಂತೆ. ಅವರ ತಂದೆಯವರೇ ಹೇಳುತ್ತಿದ್ದ ಮಾತು ಇದು.

ಇವರ ಪ್ರೈಮರಿ ವಿದ್ಯಾಭ್ಯಾಸವು ಅರಕೆರೆಯಲ್ಲಿ ಅಂದಿನ ಪ್ರೈಮರಿ ಶಾಲೆಯ ಮುಖ್ಯೋಪಧ್ಯಾಯರಾಗಿದ್ದ ಶ್ರೀ ಕೇಶವಯ್ಯನವರಿಂದ ಪ್ರಾರಂಭವಾಯಿತು. ಆ ಉಪಾಧ್ಯಾಯರು ಭೈರಪ್ಪನವರ ನಡೆ ನುಡಿ, ಚುರುಕುತನವನ್ನು ಅರಿತು ಇದನ್ನು ಅವರ ತಂದೆಯವರಿಗೆ ಹೇಳುತ್ತಲೇ ಇದ್ದರು. ಕೆಲವು ವರ್ಷಗಳ ನಂತರ ಆ ಉಪಾಧ್ಯಾಯರಿಗೆ ಅರಕೆರೆಯಿಂದ ಮಂಡ್ಯದ ಹತ್ತಿರದಲ್ಲಿರುವ ದುದ್ದಕ್ಕೆ ವರ್ಗವಾಯಿತು. ಆಗ ಶ್ರೀ ಚುಂಚೇಗೌಡರು ಮಗನನ್ನು ಆ ಉಪಾಧ್ಯಾಯರ ಜತೆಯಲ್ಲೇ ವಿದ್ಯಾಭ್ಯಾಸ ಕ್ಕೆಂದು ಕಳುಹಿಸಿಕೊಟ್ಟರು. ಆ ಊರಿನಿಂದಲೂ ಮಳವಳ್ಳಿ ತಾಲ್ಲೂಕು ಹಲಗೂರಿಗೆ ವರ್ಗವಾಯಿತು. ಅವರಿಗೆ ಆಗಲೂ ಸಹ ಶ್ರೀ ಭೈರಪ್ಪನವರು ಶ್ರೀ ಕೇಶವಯ್ಯನವರ ಜತೆಯಲ್ಲಿಯೇ ಹೋದರು. ಶ್ರೀ ಕೇಶವಯ್ಯನವರ ಮನೆಯವರು ಭೈರಪ್ಪನವರನ್ನು ಜಾತಿ ಮತ ಭೇದವನ್ನೆಣಿಸದೆ ತಮ್ಮ ಸ್ವಂತ ಮಗನೆಂದೇ ತಿಳಿದುಕೊಂಡಿದ್ದರು. ಹಲಗೂರಿಗೆ ಹೋದಾಗ ಈಗಿನ ಮೈಸೂರು ಕಾರ್ಪೊರೇಷನ್ನಿನ ಉಪಮೇಯರ್ ಶ್ರೀಮತಿ ಲೀಲಾಚನ್ನಯ್ಯನವರ ಯಜಮಾನರಾದ ಶ್ರೀ ಚನ್ನಯ್ಯನವರು ಭೈರಪ್ಪನವರ ಸಹಪಾಠಿಯಾಗಿ ಶ್ರೀ ಕೇಶವಯ್ಯನವರ ನೇತೃತ್ವದಲ್ಲಿ ಲೋಯರ್ ಸೆಕೆಂಡರಿ ತರಗತಿಯಲ್ಲಿದ್ದರು. ಪರೀಕ್ಷೆಯಲ್ಲಿ ಈರ್ವರೂ ಮೊದಲನೆ ತರಗತಿಯಲ್ಲಿ ಪಾಸ್ ಮಾಡಿದರು. ಅನಂತರ ಇವರು ಉನ್ನತ ವ್ಯಾಸಂಗಕ್ಕಾಗಿ ಮೈಸೂರು ಹೈಸ್ಕೂಲಿಗೆ ಪ್ರವೇಶಮಾಡಿದರು. ಅವರ ಮುಖ್ಯೋಪಾಧ್ಯಾಯರು ಶ್ರೀ ಕಸ್ತೂರಿರಾಜಶೆಟ್ಟರು ಬಹಳ ಕಟ್ಟುನಿಟ್ಟಿನವರಾದುದರಿಂದ ವಿದ್ಯಾರ್ಥಿಗಳು ಶ್ರಮವಹಿಸಿ ಓದುತ್ತಿದ್ದರು.

ಇವರ ಊಟೋಪಚಾರ ಮೈಸೂರಿನ ಒಕ್ಕಲಿಗರ ವಿದ್ಯಾರ್ಥಿ ನಿಲಯದಲ್ಲಿ ಅಂದಿನ ವೃದ್ಧ ಮ್ಯಾನೇಜರಾದ ಶ್ರೀ ಸಿದ್ದೋಜಿರಾಯರ ನೇತೃತ್ವದಲ್ಲಿ ನಡೆಯುತ್ತಿತ್ತು. ಇವರಾದ ನಂತರ ಈ ವಿದ್ಯಾರ್ಥಿ ನಿಲಯವು, ನಿಸ್ವಾರ್ಥ ಸೇವೆಗೆ ಹೆಸರಾಗಿದ್ದ ಶ್ರೀ ಎನ್. ಜಿ, ಗುಜ್ಜೇಗೌಡರು, ಅಂದಿನ ವಿದ್ಯಾರ್ಥಿ ನಿಲಯದ ಅಧ್ಯಕ್ಷರಾಗಿದ್ದ ಶ್ರೀ ಎಚ್. ಸಿ. ದಾಸಪ್ಪನವರ ಪ್ರೇರಣೆಯಿಂದ ಅವರ ಯೂನಿವರ್ಸಿಟಿ ಕೆಲಸದ ಜತೆಗೆ ಮ್ಯಾನೇಜರ್ ಕೆಲಸವನ್ನೂ ಸೇವಾ ದೃಷ್ಟಿಯಿಂದ ವಹಿಸಿಕೊಂಡರು. ಅವರ ಕಾಲದಲ್ಲಿ ಒಬ್ಬ ಹುಡುಗನಿಗೆ ಒಂದು ತಿಂಗಳಿಗೆ ಊಟ ವಸತಿ ಸೇರಿ ಆರು ರೂಪಾಯಿಗಿಂತ ಜಾಸ್ತಿ ಬೀಳುತ್ತಲೇ ಇರಲಿಲ್ಲ. ಅನೇಕ ವೇಳೆ ಹುಡುಗರು ಹಾಸ್ಟಲ್ ಫೀಸು ಕಟ್ಟುವಾಗ ಎಂಟಾಣೆ ಅಥವಾ ಒಂದು ರೂಪಾಯಿ ಕಡಿಮೆ ಕಟ್ಟಿದರೂ ಸಹ ಅವರು ದುಡ್ಡನ್ನು ತಮ್ಮ ಕೈಯಿಂದ ಹಾಕಿ ಕಟ್ಟಿ, ಅವರೇನಾದರೂ ವಾಪಸ್ಸು ತಂದುಕೊಟ್ಟರೆ ತೆಗೆದುಕೊಳ್ಳುತ್ತಿದ್ದರೇ ಹೊರತು ಅವರು ಯಾವಾಗಲೂ ಹುಡುಗರನ್ನು ಕೇಳಿದವರೇ ಅಲ್ಲ. ಇಂತಹವರ ಗುಂಪಿಗೆ ಶ್ರೀ ಬೈರಪ್ಪನವರೂ ಸಹ ಬೇರೆಯಾಗಿರಲಿಲ್ಲ, ಶ್ರೀ ಗುಜ್ಜೇಗೌಡರು ರಾತ್ರಿವೇಳೆ ಅನಿರೀಕ್ಷಿತ ಭೇಟಿ ಕೊಟ್ಟು ಹುಡುಗರು ಓದುತ್ತಿದ್ದಾರೆಯೋ ಇಲ್ಲವೋ ಎಂಬುದನ್ನು ಗಮನಿಸುತ್ತಿದ್ದುದರಿಂದ ಎಲ್ಲರೂ ಕಷ್ಟಪಟ್ಟು ಓದುತ್ತಿದ್ದರು. ಹೀಗೆ ಓದಿ ಬೈರಪ್ಪನವರು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲೂ ಸಹ ಮೊದಲನೆಯ ಶ್ರೇಣಿಯಲ್ಲಿ ಪಾಸ್ ಮಾಡಿದರು. ಅವರು ಅವರು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಅವರ ಕನ್ನಡ ಪಠ್ಯ ಪುಸ್ತಕ ತೊರವೆ ರಾಮಾಯಣ. ಅವರ ಕನ್ನಡ ಉಪಾಧ್ಯಾಯರು ಗಾಂಧೀವಾದಿಯಾಗಿದ್ದ ಶ್ರೀ ಕೃಷ್ಣಪ್ಪನವರು,ತುಂಬಾ ಒಳ್ಳೆಯವರು. ಅವರು ಪಾಠ ಮಾಡುತ್ತಿದ್ದಾಗ ಎಲ್ಲೋ ಒಂದು ಕಡೆ ಅಲಘು ಕುಚೆ ಎಂದು ಬಂದಾಗ ಅದಕ್ಕೆ ಗೌರವವಾಗಿ ವರ್ಣನೆ ಮಾಡಿಕೊಂಡು ಮುಂದೆ ಹೋದರಂತೆ. ಶ್ರೀ ಬೈರಪ್ಪನವರ ಪಕ್ಕದಲ್ಲಿ ಬಿಸ್ಕತ್ತನ್ನು ತಿನ್ನುತ್ತಾ ಎಲ್ಲೋ ಯೋಚಿಸುತ್ತಿದ್ದ ಅವರ ಸ್ನೇಹಿತರೊಬ್ಬರು ಅಲಘು ಕುಚೆ ಎಂದರೇನು? ಎಂದು ಕೇಳಿದರಂತೆ. ಅದೇ ರೀತಿ ಅವರು ಮತ್ತೆ ಕೇಳಿದಾಗ ಅವರು ಕುಚೇಷ್ಟೆಯಿಂದ ಕೇಳುತ್ತಿದ್ದಾನೆಂದು ಭಾವಿಸಿ, ನೀನು ಹುಟ್ಟಿದಾಗ ನಿಮ್ಮವ್ವ ಹಾಲು ಉಣಿಸುತ್ತಿದ್ದರಲ್ಲ ಅದು ಎಂದು ಎರಡು ಕೈಗಳಿಂದಲೂ ತೋರಿಸಿದಾಗ ಹುಡುಗರೆಲ್ಲಾ ನಕ್ಕುನಲಿದಾಡಿದರಂತೆ. ಕನ್ನಡದ ಗುರು ಶ್ರೀ ಕೃಷ್ಣಪ್ಪನವರ ಕಾಲದಲ್ಲಿ ಹುಡುಗರಿಗೆ ಭಾಷಣ ಮಾಡಲು ಉತ್ತೇಜನ ಕೊಡುತ್ತಿದ್ದರು.ಒಂದು ಹೈಸ್ಕೂಲಿನ ಪರವಾಗಿ ಇನ್ನೊಂದು ಹೈಸ್ಕೂಲ್‌ನಲ್ಲಿ ಭಾಷಣ ಮಾಡಲಿಕ್ಕೆ ಹೋಗುತ್ತಿದ್ದವರಲ್ಲಿ ಬೈರಪನವರೂ ಒಬ್ಬರಾಗಿ ಬಹುಮಾನಗಳನ್ನು ಪಡೆಯುತ್ತಿದ್ದರು.

ಇವರು ಮೈಸೂರು ಕಾಂಗ್ರೆಸ್ ಸ್ಥಾಪನೆಯಾಗುವುದಕ್ಕಿಂತ ಮೊದಲೆ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸದಸ್ಯರಾಗಿದ್ದರು.ಇದರ ಅಧ್ಯಕ್ಷರು ಮಾಜಿ ವೈಸ್ ಛಾನ್ಸಲರ್ ಆಗಿದ್ದ ಶ್ರೀ ಎನ್. ಎಸ್. ಸುಬ್ಬರಾಯರ ಸಹಪಾಠಿ ಅಡ್ವೋಕೇಟ್ ಶ್ರೀ ಬಿ. ಕೆ.

ಮಾಧವರಾವ್ ಎಂಬುವರು. ಶ್ರೀ ಎಸ್. ಡಿ. ಶ್ರೀರಂಗಾಚಾರ್, ಕಾರ್ಯದರ್ಶಿಗಳಾಗಿಯೂ, ಸಂತೇಪೇಟೆ ಪ್ರಮುಖ ವರ್ತಕರಾಗಿದ್ದ ಶ್ರೀ ಟಿ. ಎಸ್. ಸಂಗಪ್ಪನವರು ನವರು ಖಜಾಂಚಿಯಾಗಿಯೂ, ಶ್ರೀ ಎ.ಸಿ. ಬೈರಪ್ಪನವರು ಕಾರ್ಯಕಾರಿ ಸಮಿತಿಯ ಸದಸ್ಯರಲ್ಲೊಬ್ಬರಾಗಿಯೂ ಇದ್ದರು. ಮೈಸೂರಿನಲ್ಲಿ ಯಾವ ಕಾಂಗ್ರೆಸ್ ಸಭೆ ನಡೆದರೂ ಬೈರಪ್ಪನವರು ಅಲ್ಲಿ ಹಾಜರ್ ಮತ್ತು ಭಾಷಣಕಾರರು.

ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಮೊದಲನೆ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ, ಈಗಿನ ಯುವರಾಜ ಕಾಲೇಜಿನಲ್ಲಿ ಇವರ ವ್ಯಾಸಂಗ ಪ್ರಾರಂಭವಾಯಿತು. ಅಂದಿನ ಇವರ ಪ್ರಿನ್ಸಿಪಾಲರು ಶ್ರೀ ನಾಗೇಶರಾಯರು. ಅವರನ್ನು ನೋಡಿದರೆ ಪಂಡಿತ ಮದನಮೋಹನ ಮಾಳವೀಯರಂತೆ ಪೇಟ ಧರಿಸುತ್ತಿದ್ದುದನ್ನು ಸ್ಮರಿಸಿಕೊಳ್ಳಬಹುದಾಗಿತ್ತು. ಇವರ ಕನ್ನಡ ಪ್ರಾಧ್ಯಾಪಕರು ಶ್ರೀ ಕುವೆಂಪು ಅವರು. ಇವರೂ ಇಂಟರ್ ಮಿಡಿಯಟ್‌ನಲ್ಲಿ ಓದುತ್ತಿರುವಾಗಲೇ ಕವನ ನಾಟಕಗಳನ್ನು ಬರೆದರೂ ಅವುಗಳೆಲ್ಲಾ ಅವರ ಪೆಟ್ಟಿಗೆಯಿಂದ ಹೊರಬರಲೇ ಇಲ್ಲ. ಅವರ ಇಂಗ್ಲೀಷ್ ಪ್ರಾಧ್ಯಾಪಕರಾದ ಶ್ರೀ ತ್ಯಾಗರಾಜನ್ ಅವರ ಎಸ್ಸೇಸ್‌ಗಳನ್ನು ಉರು ಹೊಡೆಯುತ್ತಿದ್ದವರಲ್ಲಿ ಇವರೂ ಒಬ್ಬರು.

ಭೈರಪ್ಪನವರು ಮಧ್ಯಮ ವರ್ಗದವರಾದ್ದರಿಂದಹೆಚ್ಚಿಗೆ ಖರ್ಚು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಇವರ ಜೊತೆಯಲ್ಲಿ ಓದುತ್ತಿದ್ದ ಇವರ ಆಪ್ತ ಮಿತ್ರರುಗಳಲ್ಲಿ ಕೆಲವರೆಂದರೆ ಮಾಜಿ ಎಂ. ಎಲ್. ಎ. ತಟ್ಟೇಕೆರೆ ಶ್ರೀ ಟಿ. ಎನ್. ಮಾದಪ್ಪಗೌಡರು, ಮೈಸೂರಿನ ಎಂ. ಎಸ್. ಸಿದ್ಧಪ್ಪ, ಹಾರ್ಮೋನಿಯಂ ಎಂದು ಆ ಕಾಲದಲ್ಲಿ ಪ್ರಸಿದ್ಧರಾಗಿದ್ದ ಶ್ರೀ ಎಂ. ಎಸ್. ಸಿದ್ದಪ್ಪನವರ ಮಾವಂದಿರಾದ ಶ್ರೀ ಎಂ.ಎಸ್. ಚನ್ನಬಸಪ್ಪನವರು ಮತ್ತು ಬನ್ನೂರು ಹತ್ತಿರ ಇರುವ ಹನುಮನಾಳು ಶ್ರೀ ಚನ್ನೇಗೌಡರು. ಇವರುಗಳಿಗೆ ಖರ್ಚಿಗೆ ಕಾಸಿಲ್ಲದಿದ್ದಾಗ ಇವರದೇ ಒಂದು ಪುಟ್ಟ ಸಭೆಗೆ ವಿಶೇಷ ಆಹ್ವಾನಿತರಾಗಿ ಪಾಂಡವಪುರ ಸಕ್ಕರೆ ಕಂಪನಿ ಛೇರ್ಮನ್ ಆಗಿದ್ದ ಶ್ರೀ. ಬಿ. ವೈ. ನೀಲೇಗೌಡರ ಆಗಮನ ಆಗ ಶ್ರೀ ನೀಲೇಗೌಡರು ಇವರುಗಳ ಮುಂದೆ ಒಂದು ಠರಾವನ್ನು ತಂದು ಈಗ ಸಧ್ಯದಲ್ಲಿ ಎಲ್ಲರೂ ಪಾಪರ್ ಆಗಿರುವುದರಿಂದ, ಸಿದ್ಧಲಿಂಗಪ್ಪನವರ ತಂದೆಯವರು ಹಾರ್ಮೋನಿಯಂ ವ್ಯಾಪಾರದ ಜತೆಗೆ ಒಡವೆಗಳನ್ನು ಗಿರವಿ ಇಟ್ಟುಕೊಳ್ಳುತ್ತಿದ್ದವುಗಳ ಪೈಕಿ ಬಹಳ ವರ್ಷಗಳಿಂದಲೂ ಅವುಗಳನ್ನು ಬಿಡಿಸಿಕೊಳ್ಳದೆ ಲಿಮಿಟೇಶನ್ ಆಗಿರುವವುಗಳ ಪೈಕಿ ಯಾವುದನ್ನಾದರೂ ಒಂದು ಚಿನ್ನದ ಒಡವೆ ತಂದು ಮಾರಿದರೆ ನಮ್ಮಗಳೆಲ್ಲರ ಬರ ಇಂಗುತ್ತದೆ ಎಂದು ಹೇಳುತ್ತಿದ್ದರಂತೆ. ಶ್ರೀಸಿದ್ಧಲಿಂಗಪ್ಪನವರು ಬಿಚ್ಚುಮನಸ್ಸಿನಿಂದ ಪುರಾತನ ಕಾಲದಿಂದಲೂ ಬಿಡಿಸಿಕೊಳ್ಳದಿದ್ದ ಒಂದು ಚಿನ್ನದ ಚೈನನ್ನು ಅಪಹರಿಸಿ ಶ್ರೀ ಚನ್ನೇಗೌಡರ ಮುಖೇನ ಮಾರಿಸಿ ಅವರ ಉದರ ಪೋಷಣೆ ಮಾಡಿಕೊಳ್ಳುತ್ತಿದ್ದರು. ಒಂದೊಂದು ಸಾರಿ ಅವರ ಹತ್ತಿರ ಮೂರು

ಕಾಸೂ ಸಹ ಇಲ್ಲದಿರುವಾಗ ಶ್ರೀ ಭೈರಪ್ಪನವರು ನನ್ನ ತಮ್ಮ ಶ್ರೀ ಎ.ಸಿ. ಮಾದೇಗೌಡ ಮಹಾರಾಜ ಹೈಸ್ಕೂಲಿನಲ್ಲಿ ಓದುತ್ತಿದ್ದಾನೆ, ಅವನ ಹತ್ತಿರ ನಮ್ಮ ತಂದೆಯವರು ಕೊಡುತ್ತಿದ್ದ ಚಿಲ್ಲರೆ ಪಲ್ಲರೆ ದುಡ್ಡನ್ನು ಖರ್ಚುಮಾಡದೆ ಇಟ್ಟಿರುತ್ತಾನೆ. ನಾನು ಕೇಳಿದರೆ ಕೊಡುವುದಿಲ್ಲ, ಮಾದಪ್ಪಗೌಡನೇ ಹೋಗಿ ಕೇಳಿದರೆ ಕೊಟ್ಟರು ಕೊಟ್ಟಾನು ಎಂದು ಹೇಳಿ ಕಳುಹಿಸಿ, ಶ್ರೀ ಗಣೇಕಲ್ ಎಂಬ ಡ್ರಾಯಿಂಗ್ ಮಾಷ್ಟರು ತರಗತಿ ತೆಗೆದುಕೊಂಡಿದ್ದಾಗ ಬಂದು ಮಾದೇಗೌಡನಹತ್ತಿರ ಇದ್ದ ಚಿಲ್ಲರೆ ದುಡ್ಡನ್ನು ತೆಗೆದು ಕೊಂಡು ಹೋದದ್ದು ಇನ್ನು ಸ್ಮೃತಿಪಥದಲ್ಲಿದೆ.

ಇಂಟರ್ ಮೀಡಿಯಟ್‌ನಲ್ಲಿ ಓದುತ್ತಿದ್ದಾಗ ಇವರು ಕರ್ನಾಟಕ ಸಂಘದ ಚುನಾಯಿತ ಕಾರ್ಯದರ್ಶಿಗಳಾಗಿ ಕೆಲಸ ಮಾಡಿ ಶ್ರೀಗಳಾದ ಕುವೆಂಪು, ಟಿ. ಎಸ್. ವೆಂಕಟಣ್ಣಯ್ಯ ಇನ್ನೂ ಮುಂತಾದ ಗಣ್ಯರ ಪ್ರೀತಿಗೆ ಪಾತ್ರರಾದರು.

ಇಂಟರ್ ಮೀಡಿಯಟ್ ಪರೀಕ್ಷೆಯಲ್ಲಿ ಉತ್ತೀರ್ಣರಾದನಂತರ ಅವರು ಮಹಾರಾಜ ಕಾಲೇಜಿಗೆ ಬಿ.ಎ. ಓದಲು ಸೇರಿಕೊಂಡರು. ಮೂರನೆ ವರ್ಷ ಇವರು ಯೂನಿವರ್ಸಿಟಿಯ ಯೂನಿಯನ್‌ನ ಉಪಾಧ್ಯಕ್ಷರಾಗಿ ಚುನಾಯಿತರಾಗಿ ಎಲ್ಲರ ವಿಶ್ವಾಸಕ್ಕೂ ಪಾತ್ರರಾದರಲ್ಲದೆ ಯೂನಿವರ್ಸಿಟಿ ಕ್ಯಾಂಟೀನ್ ಐಯ್ಯರ್ ಅವರಿಗೂ ಪರಿಚಯವಾದರು. ಏಕೆಂದರೆ ಸಾಮಾನ್ಯವಾಗಿ ಯೂನಿಯನ್‌ಗೆ ಚುನಾಯಿತರಾದವರೆಲ್ಲಾ ಕ್ಯಾಂಟೀನ್‌ಗೆ ಬಿಟ್ಟಿ ತಿನ್ನುವ ಗೌರವ ಸದಸ್ಯರಾಗುತ್ತಿದ್ದರು. ಮೊದಲನೆ ಭಾರಿ ಶ್ರೀ ಬೈರಪ್ಪನವರು ಬಿಲ್ಲು ಕೊಡಲು ಹೋದಾಗ ಶ್ರೀ ಐಯ್ಯರ್ ಇವರನ್ನು ಮೇಲಿನಿಂದ ಕೆಳಗಿನವರೆಗೂ ನೋಡಿ ಆಶ್ಚರ್ಯ ಪಟ್ಟರಂತೆ. ಕಾರಣ ಯಾವಾಗಲೂ ಯಾರೂ ಬಿಲ್ಲು ಕೊಡುವ ಪದ್ಧತಿಯನ್ನು ಇಟ್ಟುಕೊಂಡಿಲ್ಲವೆಂಬ ಅಂಶವನ್ನು ಇವರೂ ಸಹ ತಿಳಿದ ನಂತರ, ಇವರೂ ಕೂಡ ಬಿಟ್ಟಿ ತಿನ್ನುವ ಗೌರವ ಸದಸ್ಯರ ಕೂಟಕ್ಕೆ ಸೇರಿಕೊಂಡರು.

ಅನಂತರ ಇವರು ಶ್ರೀ ನಾ. ಕಸ್ತೂರಿಯವರ ಪಟ್ಟ ಶಿಷ್ಯರಾಗಿ, ಅವರ ಮಗನೋಪಾದಿಯಲ್ಲಿ ಅವರ ಮನೆಯಲ್ಲೇ ಹೆಚ್ಚಿಗೆ ಇರುತ್ತಿದ್ದರು. ಶ್ರೀ ಕಸ್ತೂರಿಯವರು ಕನ್ನಡಿಗರಾಗಿರದಿದ್ದರೂ, ಕನ್ನಡ ಕಲಿತು, ಕನ್ನಡ ನಾಟಕಗಳನ್ನು ಬರೆದು ವಿದ್ಯಾರ್ಥಿಗಳ ಜತೆ ಸೇರಿ ತಾವೂ ಸಹ ನಾಟಕದಲ್ಲಿ ಅಭಿನಯಿಸುತ್ತಿದ್ದರು. ಇವರುಗಳಲ್ಲಿ ಮುಖ್ಯರಾದವರು ಶ್ರೀಗಳಾದ ಎ. ಸಿ. ಬೈರಪ್ಪ ಸಿನಿಮಾ ನಟ ಮತ್ತು ನಿರ್ದೇಶಕರಾಗಿದ್ದ ಎ.ಸಿ. ನರಸಿಂಹಮೂರ್ತಿ, ಎ.ಸಿ. ನಾರಾಯಣಮೂರ್ತಿ, ಸಿ.ಬಿ. ಜಯರಾವ್ ಮುಂತಾದವರಿದ್ದರು. ಶ್ರೀ ಬೈರಪ್ಪನವರು ಬೇಸಿಗೆ ರಜಕ್ಕೆಂದು ಅರಕೆರೆಗೆ ಬಂದಾಗ ಇವರೇ ಊರಿನ ವಿದ್ಯಾವಂತ ಯುವಕರನೆಲ್ಲಾ ಸೇರಿಸಿ ಒಂದು ನಾಟಕ ಕಂಪನಿ ಮಾಡಿದ್ದರು. ಶ್ರೀ ಕುವೆಂಪು ವಿರಚಿತ ಜಲಗಾರ ನಾಟಕ ಅಭ್ಯಾಸ ಮಾಡಿ, ಈ ಕಂಪನಿಯವರ ಜತೆಗೆ ಮೈಸೂರಿನಿಂದ ಶ್ರೀ ಕಸ್ತೂರಿ ವಗೈರೆ ಎಲ್ಲರನ್ನೂ ಕರೆಸಿ, ಅರಕೆರೆ ಪಕ್ಕದಲ್ಲಿ ಏಕ ಮಾತ್ರ ನಾಟಕ ಶಾಲೆ ಇದ್ದ ಕೊಡಿಯಾಲ ಗ್ರಾಮದಲ್ಲಿ ನಾಟಕ ಅಭಿನಯಿಸಿದರು, ಈ

ನಾಟಕ ನೋಡಲು ಹಳ್ಳಿಗಾಡಿನ ಕಲಾಭಿಮಾನಿಗಳು ದಯಮಾಡಿಸಿ ಮಾಮೂಲಿನಂತೆ ಇದೊಂದು ಯಾವುದೋ ಪೌರಾಣಿಕ ನಾಟಕ ಎಂದು ಭಾವಿಸಿ, ಈ ಜಲಗಾರ ನಾಟಕದ ಸೊಬಗು ಅವರಿಗೆ ಹಿಡಿಸದೆ ಮಧ್ಯದಲ್ಲೇ ಎದ್ದು ಇದು "ಬೈರಪ್ಪನ ಬೈರೂಪ" ಎಂದು ನಾಮಕರಣ ಮಾಡಿ ಆ ಮಧ್ಯ ರಾತ್ರಿಯಲ್ಲೂ ಅವರವರ ಊರಿಗೆ ಮರಳಿದರು,

ಶ್ರೀ ಬೈರಪ್ಪನವರು ಸದಾ ಯಾವುದಾದರೊಂದು ಸೇವಾ ಕಾರ್ಯದಲ್ಲಿ ನಿರತರಾಗಿರುತ್ತಿದ್ದರು. ಮಂಡ್ಯದಲ್ಲಿ ಒಂದು ಒಕ್ಕಲಿಗರ ವಿದ್ಯಾರ್ಥಿ ನಿಲಯ ಸ್ಥಾಪಿಸಬೇಕೆಂದು ಮುಖ್ಯ ನ್ಯಾಯಾಧೀಶರಾಗಿದ್ದ ಶ್ರೀ ಎಚ್. ಹೊಂಬೇಗೌಡರ ನೇತೃತ್ವದಲ್ಲಿ ಒಂದು ಕಮಿಟಿ ಮಾಡಿಕೊಂಡು ಅದರಲ್ಲಿ ಶ್ರೀಗಳಾದ ಬೈರಪ್ಪ, ಪಿ. ಮಲ್ಲಯ್ಯ, ಎಂ. ಬಿ. ಬೋರೇಗೌಡ, ಸಿನಿಮಾ ಚನ್ನಯ್ಯ, ಎಚ್. ಹೊನ್ನಯ್ಯ, ಎಂ. ಎಲ್. ಲಿಂಗಣ್ಣ, ಜೆ. ದೇವಯ್ಯ ಮುಂತಾದವರಿದ್ದರು. ಶ್ರೀ ಹೊಂಬೇಗೌಡರು ಶ್ರೀ ಬೈರಪ್ಪನವರು ಮದ್ರಾಸಿಗೆ ಹೋಗಿ 'ತಂಗಮಣಿ' ಪಾರ್ಟಿ ಅವರ ಅಮೋಘ ನೃತ್ಯದ ಸಹಾಯ (Benefit show) ಪ್ರದರ್ಶನವನ್ನು ಮಂಡ್ಯದಲ್ಲಿ ಏರ್ಪಡಿಸಿ, ಎಲ್ಲಾ ಕಡೆಗಳಿಂದಲೂ ಮೊಬಲಗು ವಸೂಲ್ಮಾಡಿ, ಈಗ ಇರುವ ಪಿ. ಇ ಎಸ್. ಆರ್ಟ್ಸ ಮತ್ತು ಸೈನ್ಸ್ ಕಾಲೇಜ್ ಇರುವ ಕಡೆ ಒಂದು ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿದರು. ಅಷ್ಟರಲ್ಲಿ ಶಿವಪುರ ಕಾಂಗ್ರೆಸ್ ಅಧಿವೇಶನದ ಕಡೆ ಇವರ ಗಮನ ಹರಿಯಿತು. ಇವರು ಮೊದಲಿನಿಂದಲೂ ಕಾಂಗ್ರೆಸ್ಸಿಗರೇ ಆಗಿದ್ದುದರಿಂದ ಆರಕೆರೆಯಿಂದ ಸ್ವಯಂಸೇವಕರುಗಳನ್ನು ಕೂಡಿ ಹಾಕಿಕೊಂಡು, ಶಿವಪುರದ ಕಾಂಗ್ರೆಸ್ ಯಾತ್ರೆಗೆ ಸನ್ನದ್ಧರಾದರು. ಆಗಿನ ಕಾಲದಲ್ಲಿ ಶಿವಪುರಕ್ಕೆ ಹೋಗಬೇಕಾದರೆ ಬಸ್ಸಿನಸೌಕರ್ಯವು ಇರಲಿಲ್ಲಿ. ಕಾಲುನಡಿಗೆ ಅಥವಾ ಎತ್ತಿನ ಬಂಡಿಯಲ್ಲೇ ಹೋಗಬೇಕಾಗಿತ್ತು. ಇವರ ಜತೆಯಲ್ಲಿ ಶ್ರೀಗಳಾದ ಎ. ಜಿ. ಚುಂಚೇಗೌಡ, ಎಂ. ಪುಟ್ಟೇಗೌಡ, ಎ. ಜಿ. ಲಿಂಗಪ್ಪ, ಎ. ಸಿ. ಮಾದೇಗೌಡ, ಯು. ಕೆಂಚಪ್ಪ, ಎ. ಕೆಂಚಯ್ಯ ವಗೈರೆ ಯುವಕರು ಯುಗಾದಿ ಹಬ್ಬದ ಮಾರನೆ ದಿನ ಬೆಳಿಗ್ಗೆ ಕಾಲು ನಡಿಗೆಯಲ್ಲಿ ಹೋಗಲು ನಿರ್ಧರಿಸಿದ್ದಂತೆ ಪ್ರಯಾಣ ಬೆಳೆಸಿದರು. ಯುಗಾದಿ ಹಬ್ಬದಲ್ಲಿ ಹಳ್ಳಿ ಗಾಡಿನಲ್ಲಿ ಸಾಮಾನ್ಯವಾಗಿ ಹೋಳಿಗೆ ಕಡುಬು ಮಾಡುವ ಪದ್ಧತಿಯೇ ಜಾಸ್ತಿ. ಎಲ್ಲರೂ ಕಡುಬಿನ ಬುತ್ತಿ ಕಟ್ಟಿಕೊಂಡು ಎಲಿಯೂರಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಒಂದು ಮೈಲಿ ಈಚೆಯೇ ವಿಶ್ವೇಶ್ವರಯ್ಯ ನಾಲಾದಲ್ಲಿ ಎಲ್ಲರೂ ಮಿಂದು, ತಂದಿದ್ದ ಕಡುಬುಗಳನ್ನು ಖಾಲಿ ಮಾಡಿ ಎಲಿಯೂರು ಮಾರ್ಗವಾಗಿ ಮದ್ದೂರು ರೈಲ್ವೆ ನಿಲ್ದಾಣದಲ್ಲಿ ಬಂದಿಳಿದರು. ಅಷ್ಟು ಹೊತ್ತಿಗಾಗಲೇ ನಮಗಿಂತಲೂ ಮೊದಲೇ ಬಂದಿದ್ದ ಕಾಂಗ್ರೆಸ್ ಸ್ವಯಂಸೇವಕರುಗಳು ನಮ್ಮೆಲ್ಲರನ್ನೂ ಸ್ವಾಗತಿಸಿ, ಪಕ್ಕದಲ್ಲಿ ಇದ್ದ ಶಿವಪುರ ಕಾಂಗ್ರೆಸ್ಸಿನ ಕಾರ್ಯಾಲಯಕ್ಕೆ ಕರೆದುಕೊಂಡು ಹೋದರು. ಅಲ್ಲಿಗೆ ಹೋದ ಮೇಲೆ ನಾವೆಲ್ಲಾ ಅತಿ ಹೆಚ್ಚಿನ ಪರಿಚಯದವರೂ ಮತ್ತು ಕಾಂಗ್ರೆಸ್ ಅಧಿವೇಶನದ ಸಂಪೂರ್ಣ ಹೊಣೆಗಾರಿಕೆ ಹೊತ್ತವರೂ ಆದ ಶ್ರೀ ಎಚ್. ಕೆ. ವೀರಣ್ಣಗೌಡರನ್ನು

ಕಂಡೆವು. ಅವರು ನಮ್ಮೆಲ್ಲರನ್ನೂ ತಪಾಸೆ ಮಾಡಿ ಆಗಿನ ಜಿ.ಓ.ಸಿ. ಶ್ರೀ ಎಂ. ಎಸ್. ಜೋಯಿಸ್ ಅವರಲ್ಲಿಗೆ ಕಳುಹಿಸಿ ಕೊಟ್ಟರು. ಅವರು ನಮ್ಮೆಲ್ಲರಿಗೂ ಎಲ್ಲೆಲ್ಲಿ ಏನೇನು ಕೆಲಸ ಮಾಡಬೇಕೆಂಬುದನ್ನು ನೇಮಿಸಿ, ಮುಖ್ಯವಾಗಿ ಕಾಂಗ್ರೆಸ್ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಇರುವ ಕಡೆ ಯಾರೇ ಬರಲಿ, ಅವರು ಕಾಂಗ್ರೆಸ್ ಬ್ಯಾಡ್ಜ್‌ನ್ನು ಧರಿಸಿದ್ದರೆ ಮಾತ್ರ ಒಳಗಡೆ ಬಿಡಬೇಕೆಂಬ ಕಟ್ಟಪ್ಪಣೆ ಮಾಡಿದರು. ಒಮ್ಮೆ ರಾಷ್ಟ್ರಕೂಟದ ಸರ್ವಾಧಿಕಾರ ವಹಿಸಿಕೊಂಡಿದ್ದ ಶ್ರೀ ವೀರಣ್ಣಗೌಡರೇ ಬ್ಯಾಡ್ಜ್ ಧರಿಸದೆ ಕಾಂಗ್ರೆಸ್ ಅಧ್ಯಕ್ಷರ ಕೊಠಡಿಗೆ ಪ್ರವೇಶಿಸುವಾಗ, ಬಾಗಿಲಿನ ಎರಡೂ ಕಡೆ ನಿಂತಿದ್ದ ಸ್ವಯಂಸೇವಕರುಗಳಾದ ಶ್ರೀ ಭೈರಪ್ಪ ಮತ್ತು ಲಿಂಗಪ್ಪ ಅವರು ಅವರನ್ನು ಒಳಗೆ ಬಿಡಲಿಲ್ಲ. ಕೂಡಲೇ ಸ್ವಯಂಸೇವಕರ ನಾಯಕ ಶ್ರೀ ಎಂ. ಎಸ್. ಜೋಯಿಸ ರನ್ನು ಕರೆಸಿಕೊಂಡು ಅವರ ಅನುಮತಿ ಪಡೆದು ಒಳಗೆ ಪ್ರವೇಶಮಾಡಬೇಕಾಯಿತು. ಕಾರಣ ಅವರು ಬ್ಯಾಡ್ಜ್ ಧರಿಸದಿದ್ದುದೇ ಆಗಿತ್ತು. ಇದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಬಂದು ಸದಸ್ಯರು ಶ್ರೀ ವೀರಣ್ಣಗೌಡರನ್ನು ತಮಾಷೆಮಾಡಿ, ಸ್ವಯಂಸೇವಕರುಗಳನ್ನು ಪ್ರಶಂಸಿಸಿದರು. ಮಾರನೇ ವರ್ಷವೂ ಸಹ ಇವರೆಲ್ಲಾ ವಿಧುರಾಶ್ವತ್ಥದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಸ್ವಯಂಸೇವಕರುಗಳಾಗಿ ಹೋಗಿ ಸೇವೆ ಸಲ್ಲಿಸಿದರು.

ಶ್ರೀ ಭೈರಪ್ಪನವರು ತಮ್ಮ ಬಿ ಎ. ಪದವಿ ಪಡೆದ ನಂತರ ಪೂನಾಕ್ಕೆ ಹೋಗಿ ಎಲ್‌ಎಲ್.ಬಿ. ಓದಲು ನಿರ್ಧರಿಸಿದ್ದರು. ಆದರೆ ಸ್ವಲ್ಪ ಆರ್ಥಿಕ ಮುಗ್ಗಟ್ಟಿನಿಂದಾಗಿ ಅವರು ಹೋಗಲು ಆಗದ ಪರಿಸ್ಥಿತಿಯುತ್ತು. ಸುದ್ದಿಯನ್ನು ತಿಳಿದ ಅವರ ಆಪ್ತರ ಲ್ಲೊಬ್ಬರಾದ ಕನಕಪುರದ ಎಂ.ಎಲ್.ಎ. ಮಾಳಗಾಳು ಶ್ರೀ ಎಂ. ಲಿಂಗೇಗೌಡರು ಸಹಾಯ ಮಾಡಲು ಮುಂದೆ ಬಂದುದರಿಂದ ಪೂನಾಕ್ಕೆ ಓದಲು ಹೋದರು. ಓದು ವಾಗಲು ಶ್ರೀಗಳಾದ ವಿ. ವೆಂಕಟಪ್ಪನವರು ಎಂ. ಲಿಂಗೇಗೌಡರು ಮತ್ತು ಹೆಚ್. ಬಿ. ನಂಜಯ್ಯನವರು ಇವರ ಆಪ್ತ ಸ್ನೇಹಿತರು. ಮಾಗಡಿಯ ಎಂ.ಎಲ್‌ಎ. ಶ್ರೀ ಟಿ. ತಿಮ್ಮರಾಯಪ್ಪನವರ ಸಹೋದರಿ ಶ್ರೀಮತಿ ಗೌರಮ್ಮನವರೊಂದಿಗೆ ಇವರ ವಿವಾಹವೂ ಆಯಿತು. ಮೂರು ವರ್ಷದೊಳಗಾಗಿ ಇವರು ವಿಧುರರಾದರು. ಅನಂತರ ಶ್ರೀ ತಿಮ್ಮರಾಯಪ್ಪನವರು ಅವರ ಮಗಳು ವೆಂಕಟಲಕ್ಷ್ಮಮ್ಮ ಅವರನ್ನು ಕೊಟ್ಟು ಮರು ಮದುವೆ ಮಾಡಿಸಿದರು.

ಇವರು ಪೂನಾದಿಂದ ಎಲ್.ಎಲ್‌ಬಿ. ಪಾಸ್ ಮಾಡಿಕೊಂಡು ಬಂದ ನಂತರ ಆಗಿನ ಅಡ್ವೋಕೇಟ್ ಜನರಲ್ ಆಗಿದ್ದ ಶ್ರೀ ಲಕ್ಷ್ಮಣಗೌಡರ ಹತ್ತಿರ ಪ್ರಾಕ್ಟೀಸ್ ಮಾಡಲು ಪ್ರಾರಂಭಿಸಿದರು. ಅವರ ನಿಧನದ ನಂತರ ಅತ್ಯಂತ ಜನಾನುರಾಗಿಗಳೂ, ಮೇಧಾವಿಗಳೂ ಆದ ಅಡ್ವೋಕೇಟ್ ಶ್ರೀ ಎತಿರಾಜುಲು ನಾಯ್ಡು ಅವರ ಆಫೀಸ್

ಸೇರಿದರು. ಅವರಿಬ್ಬರೂ ಒಡಹುಟ್ಟಿದ ಅಣ್ಣ ತಮ್ಮಂದಿರುಗಳಿಗಿಂತಲೂ ಮೇಲಾಗಿ ಸಹಕರಿಸಿ, ನ್ಯಾಯಾಂಗ ಪ್ರಾಕ್ಟೀಸ್ ಮಾಡಿ ದೇಶವಲ್ಲಿ ಕೀರ್ತಿ ಸಂಪಾದಿಸಿದರು.

ಶ್ರೀ ಭೈರಪ್ಪನವರು ಬೆಂಗಳೂರು ಬಾರ್ ಅಸೋಸಿಯೇಷನ್ ಪ್ರೆಸಿಡೆಂಟ ರಾಗಿಯೂ ಮತ್ತು ಕರ್ನಾಟಕದಬಾರ್ ಕೌನ್ಸಿಲಿನ ಪ್ರಥಮ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಕೀರ್ತಿಶೇಷ ಪೂಜ್ಯ ಶ್ರೀ ಹೊಂಬೇಗೌಡರ ಕಾಲದಲ್ಲಿ ಹೈಕೋರ್ಟ್ ಜಡ್ಜ ಆಗಲು ಬಂದಿದ್ದ ಕರೆಯನ್ನು ನಿರಾಕರಿಸಿದರು. ಅವರ ಅರವತ್ತನೇ ವರ್ಷದಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

ಎ. ಸಿ. ಮಾದೇಗೌಡ

ಕ್ಯಾತನಹಳ್ಳಿ ಕಪನೀಗೌಡ

ಟೀಪುವಿನಿಂದ ರಾಜ್ಯ ವಶಪಡಿಸಿಕೊಂಡ ಬ್ರಿಟಿಷರು ಶ್ರೀರಂಗಪಟ್ಟಣವನ್ನು ಆಳ ತೊಡಗಿದರು. ಬ್ರಿಟಿಷರು ವಿದ್ಯಾಭ್ಯಾಸದ ಕಡೆ ಗಮನಕೊಟ್ಟಂತೆ ಜನರ ಆರೋಗ್ಯ, ನೈರ್ಮಲ್ಯಗಳ ಕಡೆಯೂ ಗಮನಕೊಡುತ್ತಿದ್ದರು. ಕುಡಿಯುವ ನೀರು ಯೋಗ್ಯವಾಗಿ ರಲಿ ಎನ್ನುವ ಕಾರಣಕ್ಕಾಗಿ ಬಾವಿಗಳಿಗೆ ಪೊಟ್ಯಾಶಿಯಂ ಪರ್ಮಾಂಗನೇಟ್ ಹಾಕಿಸತೊಡಗಿ ದರು. ಈ ಸುಧಾರಣೆ ಅಂದಿನ ಸಮುದಾಯಕ್ಕೆ ಹಿಡಿಸಲಿಲ್ಲ. ಗೋಮಾಂಸ, ಹಂದಿ ಮಾಂಸಗಳನ್ನು ಸೇವಿಸುವವರು, ಅವುಗಳ ಕೊಬ್ಬನ್ನು ತೋಟಾಗಳಿಗೆ ಸವರುತ್ತಿದ್ದವರು ಎಂಬ ಅಭಿಪ್ರಾಯವೂ ಜನಜನಿತವಾಗಿದ್ದ ಕಾಲ ಅದು. ಜನರ ದೃಷ್ಟಿಯಲ್ಲಿ ಕೆಟ್ಟವ ರಾದ, ಧೂರ್ತರಾದ ಜನ ಏನನ್ನು ಮಾಡಿದರೂ ಸಂಶಯದ ಕಣ್ಣಿನಿಂದಲೇ ನೋಡ ತೊಡಗಿದರು. ಬಾವಿಗಳಿಗೆ ಪೊಟ್ಯಾಶಿಯಂ ಪರ್ಮಾಂಗನೇಟ್ ಹಾಕುವ ಕಾರ್ಯವನ್ನು ಜನ ತೀವ್ರವಾಗಿ ಪ್ರತಿಭಟಿಸಿದರು. ಎಲ್ಲೆಡೆ ಇದರ ಬಗ್ಗೆ ಚರ್ಚೆ ಆಯಿತು. ಅಲ್ಲಲ್ಲಿ ಜರ ಗುಂಪುಕಟ್ಟಿಕೊಂಡು ಬ್ರಿಟಿಷ್ ಸೈನ್ಯದ ವಿರುದ್ಧ ಹೋರಾಟ ಮಾಡತೊಡಗಿದರು. ಕ್ಯಾತನಹಳ್ಳಿಯವರೂ ಹಿಂದೆ ಬೀಳಲಿಲ್ಲ. ಬ್ರಿಟಿಷ್ ಸೈನಕ್ಕೆ ಸಡ್ಡು ಹೊಡೆದ ಹುಲಿಗೌಡ ಕುದುರೆಯೇರಿ ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆಯ ಬಳಿ ಬ್ರಿಟಿಷರನ್ನು ಎದುರಿಸಿ ಮಾಯವಾಗಿ ಕಬ್ಬಿನ ಗದ್ದೆಗಳಲ್ಲಿ ಅವಿತುಕೊಂಡು, ಮತ್ತೆ ಕಾಣಿಸಿಕೊಂಡು ಬ್ರಿಟಿಷರಿಗೆ ಚಳ್ಳೆಹಣ್ಣು ತಿನ್ನಿಸತೊಡಗಿದಾಗ ಅವರು ಸುಮ್ಮನೆ ಕೈಕಟ್ಟಿ ಕೂರಲಾಗಲಿಲ್ಲ. 'ಹುಲಿಗೌಡ'ನ ಬಂಧನದ ಆಜ್ಞೆ ಹೊರಟಿತು. ಆದರೆ ಬಂಧಿಸಲು 'ಹುಲಿಗೌಡ' ಸಿಗ ಲಿಲ್ಲ! ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಯಿತು. ನ್ಯಾಯಾಧೀಶರು 'ಹುಲಿ ಗೌಡ'ನನ್ನು ಕರೆದಾಗ, ಆ ಸಮಯಕ್ಕೆ ಸರಿಯಾಗಿ ಮೇನಾದಲ್ಲಿ ಬಂದು, ಆದರಿಂದ ಧುಮುಕಿ ನ್ಯಾಯಾಧೀಶರ ಮುಂದೆ ನಿಂತಾಗ ಕಕ್ಕಾಬಿಕ್ಕಿಯಾಗದವರಿಲ್ಲ. ಮೊಕದ್ದಮೆಗೆ ಸರಿಯಾದ ಸಾಕ್ಷ್ಯಾಧಾರಗಳು ಸಿಗದ ಹುಲಿಗೌಡ ನ್ಯಾಯಾಲಯದಲ್ಲಿ ಜಯಗಳಿಸಿದ. ಜನರ ಕಣ್ಣಿನಲ್ಲಿ ಸಾಮಾನ್ಯವಾಗಿ ಕಾಣಿಸದೆ ಅಸಾಮಾನ್ಯ ವ್ಯಕ್ತಿಯಾಗಿ ಕಾಣಿಸಿದ. 'ಹುಲಿಗೌಡ'ನಾಗಿ ಜನರ ಮೆಚ್ಚುಗೆ ಗಳಿಸಿದ ತನ್ನ ಶೌರ್ಯ, ಪರಾಕ್ರಮ, ಸಾಹಸಗಳಿಂದ ಹುಲಿಗೌಡನಾಗಿ ಮೆರೆದ ವೀರನೊಬ್ಬನ ಮಗನಾಗಿ ಹುಟ್ಟಿದವರೇ ಶ್ರೀ ಕೆ ಎಚ್. ಕಪನಯ್ಯನವರು.

ಹುಲಿಗೌಡ ಮತ್ತು ಹೊನ್ನಮ್ಮನ ಹಿರಿಯ ಮಗನಾಗಿ ಹುಟ್ಟಿದ ಕಪನಯ್ಯನವರ

ವಿದ್ಯಾಭ್ಯಾಸ ಹುಟ್ಟಿದ ಊರಾದ ಕ್ಯಾತನಹಳ್ಳಿಯಲ್ಲಿಯೇ ನಡೆಯಿತು. ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಅವರ ಓದು ಮುಗಿಯಿತು. ಬಾಲ್ಯದಲ್ಲೇ ಅವರು ಕುಸ್ತಿಯ ಕಲೆಗೆ ಮಾರುಹೋದರು.

ಕಪನಯ್ಯನವರ ಸಮೀಪ ಬಂಧುಗಳಾದ ಶಿವನಂಜೇಗೌಡರು ಅಂದಿನ ಮೈಸೂರು ಪ್ರಾಂತ್ಯದ ಹೆಸರುಗಳಿಸಿದ ದೊಡ್ಡ ಕುಸ್ತಿಪಟುಗಳಾಗಿದ್ದರು. ಕೋರಾಪೇಟ್ ಶಿವನಂಜೇಗೌಡರೆಂದೇ ಅವರು ಖ್ಯಾತರಾಗಿದ್ದರು. ಕುಸ್ತಿಯಲ್ಲಿ ಯಾರಿಗೂ ಬೆನ್ನು ತೋರಿಸದ ಜಟ್ಟಿ ಶಿವನಂಜೇಗೌಡರ ಪ್ರಭಾವಲಯಕ್ಕೆ ಕಪನಯ್ಯನವರು ಸಿಲುಕಿ ಕೊಂಡರು. ಗರಡಿಮನೆ ಸೊಕ್ಕ ಕಪನಯ್ಯ ತಾವು ಕುಸ್ತಿಯನ್ನು ಕಲಿತದ್ದೆ ಅಲ್ಲದೆ ಮುಂದೆ ಕುಸ್ತಿಪಟುಗಳಿಗೆ ತುಂಬಾ ಪ್ರೋತ್ಸಾಹ ನೀಡಿದರು. ಊರಿನ ಗರಡಿ ಮನೆ ಯನ್ನು ಪುನಶ್ಚೇತನಗೊಳಿಸಿದರು. ಎಲ್ಲಿ ಹೋದರೂ ಅವರ ಮಿತ್ರರು ಕ್ಯಾತನಹಳ್ಳಿ ಪಾಳೆಯಗಾರ ಬಂದ ಎಂದು ಗುರುತಿಸುತ್ತಿದ್ದರು.

1930ನೇ ಜನವರಿ 26ರಂದು ರಾಷ್ಟ್ರಾದ್ಯಂತ ಸಂಪೂರ್ಣ ಸ್ವರಾಜ್ಯ ದಿನಾಚರಣೆ ಯನ್ನು ಆಚರಿಸಬೇಕೆಂದು ರಾಷ್ಟ್ರನಾಯಕರು ನೀಡಿದ ಕರೆಯ ಬಿಸಿ ಹಳೆ ಮೈಸೂರು ಪ್ರಾಂತಕ್ಕೂ ತಟ್ಟಿತು. ಆಗಿನ್ನು ಯೌವನದ ಹೊಸ್ತಿಲಲ್ಲಿ ಇದ್ದ ಕಪನಯ್ಯನವರು ತಮಗರಿವಿಲ್ಲದಂತೆ ಸ್ವಾತಂತ್ರ್ಯಹೋರಾಟ ಚಳವಳಿಯ ಸೆಳೆತಕ್ಕೆ ಸಿಕ್ಕಿಕೊಂಡರು.

ಶ್ರೀ ಕೆ. ಟಿ. ಭಾಷ್ಯಂಅಯ್ಯಂಗಾರ್, ಎಚ್. ಕೆ. ವೀರಣ್ಣಗೌಡ, ವಿ. ವೆಂಕಟಪ್ಪ, ಸಾಹುಕಾರ್ ಚನ್ನಯ್ಯ, ಟಿ. ಸಿದ್ಧಲಿಂಗಯ್ಯ, ನಿಜಲಿಂಗಪ್ಪ, ಕೆ. ಸಿ. ರೆಡ್ಡಿ, ಎಚ್. ಸಿ. ದಾಸಪ್ಪ ಮೊದಲಾದ ಕಾಂಗ್ರೆಸ್‌ನ ನಾಯಕರೆಲ್ಲ ಕಪನಯ್ಯನವರ ಆತ್ಮೀಯರಾಗಿದ್ದರು. ಹಾಗಾಗಿ ಕಪನಯ್ಯನವರೂ ಸ್ವಾತಂತ್ರ್ಯಹೋರಾಟಗಾರರಿಗೆ ಅಗತ್ಯವಾದ ಆರ್ಥಿಕ ಸಹಾಯವನ್ನೂ ಉದಾರವಾಗಿ ಮಾಡುತ್ತಿದ್ದರು.

ಶ್ರೀ ಕೆ. ಟಿ. ಭಾಷ್ಯಂ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದಾಗ ರಾಜ್ಯಮಟ್ಟದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವನ್ನು ತಮ್ಮ ಊರಾದ ಕ್ಯಾತನಹಳ್ಳಿಯಲ್ಲಿ ಬಹು ಸಂಭ್ರಮದಿಂದ ಆಚರಿಸಿದ್ದನ್ನು ಅಲ್ಲಿ ಈಗ ಉಳಿದಿರುವ ಹಿರಿಯರು ಇನ್ನೂ ಸ್ಮರಿಸಿ ಕೊಳ್ಳುತ್ತಾರೆ. ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಜನಾನುರಾಗಿಯಾಗಿದ್ದ ಶ್ರೀಯುತರು ಶಿವಪುರ ಧ್ವಜ ಸತ್ಯಾಗ್ರಹ, ಅರಣ್ಯಸತ್ಯಾಗ್ರಹ ಹಾಗೂ ಕ್ವಿಟ್ ಇಂಡಿಯಾ ಚಳವಳಿಗಳಲ್ಲಿ ಭಾಗವಹಿಸಿದ್ದಂತೆ ತಿಳಿದುಬರುತ್ತದೆ. ಸ್ವಾತಂತ್ರ್ಯಹೋರಾಟಕ್ಕಾಗಿ ಸೆರೆಮನೆಯನ್ನೂ ಅನೇಕಸಲ ಅನುಭವಿಸಬೇಕಾಗಿ ಬಂತು. ವೃತ್ತಿಯಿಂದ ಕೃಷಿಕರಾದ ಶ್ರೀಯುತರು ಗ್ರಾಮದಿಂದ ಹೊರಗೆ ಇರುವಾಗ ಅವರ ವ್ಯವಹಾರವನ್ನೆಲ್ಲ ಕಪನಯ್ಯ ನವರ ಧರ್ಮಪತ್ನಿ ಶ್ರೀಮತಿ ಚಿಕ್ಕತಾಯಮ್ಮ ಹಾಗೂ ಇವರ ಮಗಳಾದ ಶ್ರೀಮತಿ ನಾಗರತ್ನ ಅವರೇ ನಿರ್ವಹಿಸುತ್ತಿದ್ದರು. ಹೆಂಡತಿ ಹಾಗೂ ಮಗಳು ಸಮರ್ಥವಾಗಿ ಮನೆಯ ಜವಾಬ್ದಾರಿ ಹೊತ್ತು ನಡೆಸಿದ್ದರಿಂದ ಕಪನಯ್ಯನವರಿಗೆ ರಾಜಕೀಯ

ಚಟುವಟಿಕೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಯಿತು.

ಕಾಂಗ್ರೆಸ್‌ನಲ್ಲಿದ್ದ ಎಲ್ಲ ಉನ್ನತ ನಾಯಕರೂ ಕಪನಯ್ಯನವರ "ಆತ್ಮೀಯ ರಾದರೂ ಶ್ರೀಯುತರು ಯಾವುದೇ ವಿಧವಾದ ಅಧಿಕಾರ ಬಯಸಲಿಲ್ಲ. 'ಸ್ವಾತಂತ್ರ್ಯ ನಮ್ಮ ಉದ್ದೇಶವಾಗಿತ್ತು. ಅದು ಬಂದಾಯಿತು. ಇನ್ನು ನಮಗೇನು ಕೆಲಸ' ಎಂದು ರಾಜಕೀಯ ಸಂನ್ಯಾಸ ಸ್ವೀಕರಿಸಿದ ನಿಸ್ವಾರ್ಥಿ, ನಿಷ್ಕಪಟಿ ಕಪನಯ್ಯನವರು. ಯಾವ ಸ್ವಾರ್ಥಕ್ಕೂ ಬಲಿಯಾಗದೆ, ಕೇವಲ ಪ್ರಚಾರಗಳಿಂದ ಪ್ರಸಿದ್ಧಿಯನ್ನು ಗಳಿಸಿಕೊಳ್ಳುವ ಹಂಬಲ ಅವರದಾಗಿರಲಿಲ್ಲ. ಎಲೆಮರೆಯ ಕಾಯಿಯಂತೆ, ಕಾಡಿನಲ್ಲಿ ಯಾರ ಕಣ್ಣಿಗೂ ಬೀಳದೆ ಘಮಘಮಿಸುವ ಹೂವಿನಂತೆ ಅವರು ಬಾಳಿದರು.

ಸುಮಾರು 1897–98ರಲ್ಲಿ ಜನಿಸಿದ ಕಪನಯ್ಯ ತಮ್ಮ 75ನೆಯ ವಯಸ್ಸಿನಲ್ಲಿ ಮೈಸೂರಿನಲ್ಲಿ ತಮ್ಮ ಮಗಳು ನಾಗರತ್ನ ಅವರ ಮನೆಯಲ್ಲಿ ಹೃದಯಾಘಾತದಿಂದ 1972 ರ ಮಾರ್ಚ್‌ನಲ್ಲಿ ವಿಧಿವಶರಾದರು. ಮಂಡ್ಯ ಜಿಲ್ಲೆಯ ಆದರ್ಶವ್ಯಕ್ತಿಯಾಗಿ ಸಾರ್ಥಕ ಬದುಕನ್ನು ಸವೆಸಿದ ಕಪನಯ್ಯನವರ ಹಾದಿ ಅನುಕರಣೀಯವಾದುದು, ಅನನ್ಯವಾದುದು.

ನಾಗಚಂದ್ರ

ಕೊಪ್ಪದ ಜೋಗಿಗೌಡ

ಅಂದಿನ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಬೆಳವಣಿಗೆಯಲ್ಲಿ ಮದ್ದೂರಿನ 'ಶಿವಪುರ'ದ ಕಾಂಗ್ರೆಸ್ ಅಧಿವೇಶನ ಅತ್ಯಂತ ಮಹತ್ತರವಾದುದು ಮತ್ತು ಕರ್ನಾಟಕದಲ್ಲಿ ಕಾಂಗ್ರೆಸ್ ಬೆಳವಣಿಗೆಗೆ ಸ್ವಾತಂತ್ರ್ಯ ಚಳುವಳಿಗೆ ತಳಪಾಯ ಹಾಕಿ ಮೈಸೂರು ಪ್ರಾಂತ್ಯದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಚಾಲನೆ ಕೊಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ದೊಡ್ಡ ಪಾತ್ರವಹಿಸಿತು.

ಈ ಅಧಿವೇಶನದ ಯಶಸ್ವಿಗೆ ಶ್ರಮವಹಿಸಿದವರಲ್ಲಿ ಒಬ್ಬರಾದ ಶ್ರೀ ಕೊಪ್ಪದ ಜೋಗಿಗೌಡರು ಮದ್ದೂರು ತಾಲ್ಲೂಕು ಕೊಪ್ಪ ಗ್ರಾಮದ ಕೆ. ಚಿಕ್ಕೇಗೌಡರ ಏಳು ಮಕ್ಕಳಲ್ಲಿ ಮೊದಲನೆಯವರಾಗಿ ಜನಿಸಿದವರು. ಸಾಮಾನ್ಯ ಕೃಷಿಕ ಮನೆಯಲ್ಲಿ ಜನಿಸಿದರೂ, ಅಂದಿನ ಕೃಷಿಕರ ನೋವು ನಲಿವು. ಮುಗ್ಧತೆಯ ಒರಟುತನದ ಪ್ರಾಮಾಣಿಕತೆಯಿಂದ ಕೂಡಿದ್ದರು. ತಂದೆಯಿಂದ ಕಲಿತದ್ದು ಅಪಾರ. ತಂದೆ ಶ್ರೀ ಚಿಕ್ಕೇಗೌಡರು, ತಾಯಿ ಶ್ರೀಮತಿ ಅರಸಮ್ಮನವರು ನಿರಕ್ಷರ ಕುಕ್ಷಿಗಳಾಗಿದ್ದರೂ ಮಗನಿಗೆ ಓದು ಬರಹ ಕಲಿಸಿದರು. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಆಂಗ್ಲಭಾಷೆ ಕಲಿಯಲು ಮೈಸೂರಿಗೆ ಹೋಗಲು ಕೇಳಿದಾಗ ಅವರ ತಂದೆ "ನಾವು ಹಾರುವರ ಹಟ್ಟಿತಾವ್‌ಕೆ ಕಾಗಜವ ಗೊಪ್ಪೆಗೆ ಹಾಕ್ಕಂಡು ಹೋಗದು ತಪ್ಪಿತಲ್ಲ ಅಷ್ಟೇಸಾಕು ಬುಡು" ಎಂದು ಹೇಳಿ ಅವರ ಆಂಗ್ಲ ಶಿಕ್ಷಣ ಪಡೆಯಬೇಕೆಂದಿದ್ದ ಆಸೆಗೆ ತಡೆಯೊಡ್ಡಿ ಅಂದಿನ ಸಾಮಾಜಿಕ ಬದುಕಿಗೆ ಎಂತಹ ವಿದ್ಯೆ ಅವಶ್ಯ ಎಂಬುದನ್ನು ಸರಳವಾಗಿ ಹೇಳಿದರು ಅಲ್ಲಿಗೆ ಅವರ ವಿದ್ಯಾಭ್ಯಾಸ ಕೊನೆಗೊಂಡು ತಂದೆಯೊಡನೆ ವ್ಯವಸಾಯಕ್ಕೆ ಹೆಗಲು ಕೊಟ್ಟು ಸಹೋದರರೊಡನೆ ಕೃಷಿಕರಾಗಿ ದುಡಿಯುತ್ತಿದ್ದರು. ಇತ್ತ ದೇಶದಲ್ಲಿ "ಗಾಂಧಿ" ಎಂಬ ಮಹಾ ಚೇತನ ಭಾರತದಲ್ಲಿ ಸ್ವಾತಂತ್ರ್ಯದ ಕಹಳೆ ಊದಿ ಭಾರತದ ಹಳ್ಳಿ ಹಳ್ಳಿಗೂ ಅದು ತಲುಪಿದಂತೆ ಕೊಪ್ಪಕ್ಕೂ ತಲುಪಿ ಗಾಂಧಿಯೆಂಬ ಅಯಸ್ಕಾಂತಕ್ಕೆ ವಶವಾಗಿ ಆಗ ತಾನೆ ಮೈಸೂರು ಸಂಸ್ಥಾನದಲ್ಲಿ ಕಾಲಿಡುತ್ತಿದ್ದ ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿ ಭಾಗವಹಿಸ ತೊಡಗಿದರು.

ಅಂದು ಮಂಡ್ಯ, ಮದ್ದೂರು ಕಡೆಗಳಲ್ಲಿ ಕಾಂಗ್ರೆಸ್ ಅಭಿಮಾನಿಗಳನ್ನು ಸ್ವಾತಂತ್ರ್ಯ ಪ್ರೇಮಿಗಳನ್ನು ಸಂಘಟಿಸುವ ಕಾರ್ಯದಲ್ಲಿ ನಿರತರಾಗಿದ್ದ ಶ್ರೀಮಾನ್ ಎಚ್. ಕೆ. ವೀರಣ್ಣಗೌಡರ ಅನುಯಾಯಿಯಾಗಿ 1936ರಲ್ಲಿ ಕಾಂಗ್ರೆಸ್‌ನ ಸಕ್ರಿಯ ಕಾರ್ಯಕರ್ತರಾದರು. ಎಚ್. ಕೆ. ವೀರಣ್ಣಗೌಡರು, ಶಿವಪುರದ ತಿರುಮಲೆಗೌಡರು,

ನಗರಕೆರೆ ಎಸ್. ಪಿ. ಲಿಂಗೇಗೌಡರೊಡಗೂಡಿ ತಾಲ್ಲೂಕಿನಾದ್ಯಂತ ಹಳ್ಳಿ ಹಳ್ಳಿಗೂ ಸಂಚರಿಸಿ ದೇಶಾಭಿಮಾನಿಗಳನ್ನು ಸಂಘಟಿಸಿದರು ಹಾಗೂ ಕಾಂಗ್ರೆಸ್ ಸದಸ್ಯರನ್ನಾಗಿ ಮಾಡಿದರು.

ಇಂತಹ ಸಂದರ್ಭದಲ್ಲಿ ದೇಶಹಳ್ಳಿ ಪಿ. ತಮ್ಮಯ್ಯನವರು, ಕೊತ್ತನ ಹಳ್ಳಿ ಮಲ್ಲೇಗೌಡರು, ಮರಳಿಗದ ಪ: ತಿಮ್ಮೇಗೌಡರು, ನಾಗದೊಡ್ಡಿ (ಅರೆಕಲ್ಲುದೊಡ್ಡಿ) ನಾಗೇಗೌಡರು, ಅಪ್ಪೇರಹಳ್ಳಿ ದೊಡ್ಡ ಬಿಳಿಗೌಡರು, ಚಿಕ್ಕಬಿಳಿಗೌಡರು, ಕೊಪ್ಪದ ಕೆ. ಎಂ. ಮಲ್ಲೇಗೌಡರು, ಕೆ. ಆರ್. ಗುಂಡೂರಾಯರು, ಕೆ. ಆರ್. ಸುಬ್ಬರಾಯರು ಕಳ್ಳನಕೆರೆ ಟಿ. ಮರಿಯಪ್ಪನವರು, ಇನ್ನೂ ಮುಂತಾದ ಅನೇಕ ಮಂಡ್ಯ ಜಿಲ್ಲೆಯ ಮುಖಂಡರು, ಮದ್ದೂರು ತಾಲ್ಲೂಕು ಮರಗಳಿ ಗ್ರಾಮದ ಚನ್ನಕೇಶವ ದೇವಸ್ಥಾನದ ಸನ್ನಿಧಿಯಲ್ಲಿ ಸಭೆ ನಡೆಸುತ್ತಿದ್ದರು. ಅನಂತರ ನಾಗಮಂಗಲ ತಾಲ್ಲೂಕಿನ ಕರಡಹಳ್ಳಿಯ ಕೆ. ಎಂ. ಕೃಷ್ಣಪ್ಪಗೌಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೈಸೂರು ಪ್ರಾಂತ್ಯದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಾಯಿತು. ಅವರ ಅನುಮತಿ ಪಡೆದು 1937 ನೇ ಇಸವಿಯಲ್ಲಿ ಕಲಕತ್ತೆಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ತೀರ್ಮಾನ ದಂತೆ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ರಚಿಸಲು ತೀರ್ಮಾನಿಸಲಾಯಿತು. ಅದರಂತೆ ಮೈಸೂರು ಪ್ರಾಂತ್ಯದಲ್ಲಿ ಸಮಿತಿಯನ್ನು ರಚಿಸಿ ಮೊದಲು ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯ ಪ್ರಥಮ ಅಧಿವೇಶನವನ್ನು ನಡೆಸಬೇಕೆಂದೂ, ಆ ಅಧಿವೇಶನವನ್ನು ಶಿವಪುರದಲ್ಲಿ ಅದ್ದೂರಿಯಾಗಿ ನಡೆಸಲು ಎಂ. ಪಿ. ಸಿ. ಸಿ ಯನ್ನು ಪ್ರಾರ್ಥಿಸಿಕೊಳ್ಳಲು, ಅಂದಿನ ಕರಡಹಳ್ಳಿಯ ಸಭೆಯು ತೀರ್ಮಾನಿಸಿ ಆ ತೀರ್ಮಾನ ದಂತೆ ಎಂ. ಪಿ. ಸಿ. ಸಿ.ಯವರ ಒಪ್ಪಿಗೆ ಪಡೆದು ನಡೆಸಿದಸಾಹಸದ ಫಲವೇ ಐತಿಹಾಸಿಕ ಪ್ರಸಿದ್ಧವಾಗಿ ಶಿವಪುರ ಕಾಂಗ್ರೆಸ್ ರಾಷ್ಟ್ರಕೂಟ ಅಥವಾ ಶಿವಪುರದ ಧ್ವಜ ಸತ್ಯಾಗ್ರಹ ಎಂದು ಪ್ರಸಿದ್ಧಿ ಪಡೆದ ಕಾಂಗ್ರೆಸ್ ಅಧಿವೇಶನ. ಎಂ. ಪಿ. ಸಿ. ಸಿ. ಯವರು ಈ ಅಧಿವೇಶನಕ್ಕೆ ಒಂದು ಸ್ವಾಗತ ಸಮಿತಿಯನ್ನು ರಚಿಸಿ ಶ್ರೀಯುತ ಎಸ್. ಚನ್ನಯ್ಯ ನವರು ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿಯೂ ಶ್ರೀ ಪಿ. ತಿರುಮಲೇಗೌಡರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಎಚ್. ಕೆ. ವೀರಣ್ಣಗೌಡರನ್ನು ಕಾರ್ಯದರ್ಶಿಯನ್ನಾ ಗಿಯೂ ಮತ್ತು ಶ್ರೀ ಕೆ. ಜೋಗಿಗೌಡರನ್ನು ಖಜಾಂಚಿಯನ್ನಾಗಿಯೂ, ಇನ್ನೂ ಹದಿನೈದು ಮಂದಿಯನ್ನು ಸದಸ್ಯರ ನ್ನಾಗಿಯೂ ನೇಮಿಸಿದರು. ಈ ಅಧಿವೇಶನವನ್ನು ಶಿವಪುರದ ತಿರುಮಲೇ ಗೌಡರ ಮನೆಯ ಹಿಂದಿನ ಗದ್ದೆಯಲ್ಲಿ, ಈಗ ಸತ್ಯಾಗ್ರಹ ಸೌಧ ವಿರುವ ಸ್ಥಳದಲ್ಲಿ ನಡೆಸಲು ತೀರ್ಮಾನಿಸಲಾಯ್ತು. ಅಧಿವೇಶನವನ್ನು 1938ರ ಏಪ್ರಿಲ್ ತಿಂಗಳ 9,10,11ರಂದು ನಡೆಸಲು ತೀರ್ಮಾನಿಸಿ ಎಲ್ಲ ನಾಯಕರೂ ಜಿಲ್ಲೆಯ ತಾಲ್ಲೂಕಿನ ಎಲ್ಲ ಹಳ್ಳಿ ಹಳ್ಳಿ ತಿರುಗಿ ಪೋಲೀಸರ ಬೆದರಿಕೆಗೆ ಮಣಿಯದೆ ಸಹಸ್ರಾರು ರೂಪಾಯಿಗಳನ್ನು ಸಂಗ್ರಹಿಸಿದರು. ಶ್ರೀಯುತ ಜೋಗಿಗೌಡರು ತಮ್ಮ ಗ್ರಾಮವಾದ

ಕೊಪ್ಪದ ತಮ್ಮ ಬಂದುಗಳಿಂದ ಅಧಿವೇಶನಕ್ಕೆ ಚಪ್ಪರದ ಸಲಕರಣೆಗಳನ್ನು ಗಾಡಿಗಳಲ್ಲಿ ಹೇರಿಸಿದರು. ಹಣಸಿಕ್ಕದ ರೀತಿಯಲ್ಲಿ, ಪೋಲಿಸಿರು 144ನೇ ವಿಧಿ ಜಾರಿಗೆ ತಂದರೂ ಹೆದರದೆ ಖಜಾಂಚಿ ಕೆಲಸವನ್ನು ಅತ್ಯಂತ ಜಾಣ್ಮೆಯಿಂದ, ಶಕ್ತಿಮೀರಿ ದುಡಿದು ಎಲ್ಲ ಜನರ ಹೊಗಳಿಕೆಗೆ ಪಾತ್ರರಾದರು.

1937ನೇ ಇಸವಿಯಲ್ಲಿ ಮೈಸೂರಿನಲ್ಲಿ ನಡೆದ ಹ್ಯಾಮಿಲ್ಟನ್ ಕಟ್ಟಡದ ಸತ್ಯಾಗ್ರಹದಲ್ಲಿ ಪೊಲೀಸರ ಪಟ್ಟಿಯಲ್ಲಿ (ದಸ್ತಗಿರಿ ಮಾಡಬೇಕಾದ) ಗೌಡರ ಹೆಸರಿದ್ದು ಶ್ರೀಯುತರನ್ನು ಶ್ರೀ ಹನುಮಂತಯ್ಯ ಎಂಬ ಸಬ್‌ಇನ್ಸ್ಪೆಕ್ಟರ್ ಅವರು ಕೊಪ್ಪಕ್ಕೆ ಬಂದು ಅವರನ್ನು ದಸ್ತಗಿರಿ ಮಾಡಲಾಗದೆ ಹಿಂದಿರುಗಬೇಕಾಯಿತು.

1938 ನೇ ಇಸವಿಯಲ್ಲಿ ವಿದುರಾಶ್ವತ್ಥದಲ್ಲಿ ನಡೆದ ಮೈಸೂರು ಪ್ರಾಂತೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಅನಂತರ 1940ರಲ್ಲಿ ಶಿವಮೊಗ್ಗೆಯ ವಿನೋಬ ನಗರದಲ್ಲಿ ನಡೆದ ಅಧಿವೇಶನ ಮತ್ತು ಅದೇ ವರ್ಷ ಚನ್ನ ಪಟ್ಟಣದಲ್ಲಿ ನಡೆದ ಎಂ.ಪಿ.ಸಿ.ಸಿ. ಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಈ ಎಲ್ಲ ಅಧಿವೇಶನಗಳಲ್ಲಿ ಇವರ ಮಗ ಕೆ. ರಮೇಶ್‌ರವರು ಸ್ವಯಂಸೇವಕರಾಗಿ ಭಾಗವಹಿಸಲು ಕರೆದೊಯ್ಯಲ್ಪಡುತ್ತಿದ್ದರು.

ಹೀಗೆ ನಡೆವ ಕಾಂಗ್ರೆಸ್‌ನ ಮುಖ್ಯ ಚಳುವಳಿಗಳಾದ ಅಸಹಕಾರ, ಕ್ವಿಟ್ ಇಂಡಿಯಾ, ಉಪ್ಪಿನ ಚಳುವಳಿ, ಈಚಲ ಮರದ ಚಳುವಳಿಯಲ್ಲಿ ಬಾಗವಹಿಸಿ ಸ್ವಾತಂತ್ರ್ಯ ಹೋರಾಟ ಮತ್ತು ಮೈಸೂರಿನ ಕಾಂಗ್ರೆಸ್ ಬೆಳವಣಿಗೆಯಲ್ಲಿ ಅತ್ಯಂತ ಶಿಸ್ತಿನ ಕಟ್ಟು ನಿಟ್ಟಿನ ವ್ಯಕ್ತಿಯೆನಿಸಿದ್ದರು ಕೊಪ್ಪದ ಜೋಗಿಗೌಡರು.

ಶ್ರೀ ಗೌಡರು ಕಾಂಗ್ರೆಸ್ ಬೆಳೆಸುವುದರ ಜತೆಯಲ್ಲಿ ತಮ್ಮ ಗ್ರಾಮದ ಸುತ್ತ ಮುತ್ತಲಿನ ಅಭಿವೃದ್ಧಿಯಲ್ಲಿ ಆಸಕ್ತಿ ಹೊಂದಿದ್ದರು. ಅವರು ಸತತವಾಗಿ ಇಪ್ಪತ್ತೈದು ವರ್ಷಗಳ ಕಾಲ ಗ್ರಾಮಪಂಚಾಯಿತಿ ಅಧ್ಯಕ್ಷರಾಗಿ ದುಡಿದಿದ್ದಾರೆ. ಹಾಗೆಯೇ ಕೊಪ್ಪ ಗ್ರಾಮದ ಸೇವಾಸಹಕಾರ ಸಂಘ, ವರಮಹಾಲಕ್ಷ್ಮಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ, ಅಲ್ಲದೆ ಸರ್ವೋದಯ ವಿದ್ಯಾವರ್ಧಕ ಸಂಘದ ಸಂಸ್ಥಾಪಕರಲ್ಲೊಬ್ಬರು ಹಾಗೂ ಅದರ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇವುಗಳಲ್ಲದೆ ರಾಜ್ಯಮಟ್ಟದ, ಅಪೆಕ್ಸ್ ಬ್ಯಾಂಕಿನ ಮತ್ತು ಭೂ-ಅಭಿವೃದ್ಧಿ ಬ್ಯಾಂಕಿನ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಕೆಲಕಾಲ ಎಂ. ಆರ್. ಎ. ಆಗಿದ್ದು ಅವರ ಕೊಂಡಿಗಳಾದ ಶ್ರೀಯುತ ಕಾವೇರಿಗೌಡ, ಶ್ರೀಯುತ ಡಾ: ಕೆ. ರಮೇಶ್‌ರವರನ್ನು ಸಮಾಜಕ್ಕೆ ಬಿಟ್ಟು ಕೊಟ್ಟು 1971 ಫೆಬ್ರವರಿ 24 ರಂದು ದೈವಾಧೀನರಾದರು.

ಉಮಾಗಂಗಾಧರಗೌಡ

ಟಿ. ಎನ್. ಬಸಪ್ಪಗೌಡ

ಟಿ. ಎನ್. ಬಸಪ್ಪಗೌಡರ ತಂದೆ ಟಿ. ಎಂ, ನಂಜಪ್ಪಗೌಡರು, ತಾಯಿ ಚಿಕ್ಕಮ್ಮ. ಇವರ ತಂದೆ ಆಗರ್ಭ ಶ್ರೀಮಂತರು. ಮತ್ತು ಸ್ವಾತಂತ್ರ್ಯ ಪ್ರಿಯರು. ಇದರಿಂದ ತಮ್ಮ ಮಕ್ಕಳನ್ನು ಈ ದೃಷ್ಟಿಯಿಂದಲೇ ಬೆಳೆಸಿದ್ದರು. ಟಿ. ಎನ್. ಬಸಪ್ಪಗೌಡರ ತಂದೆ ತಾತ ಎಲ್ಲರೂ ನಾಗಮಂಗಲ ತಾಲ್ಲೂಕು ತಟ್ಟೇಕೆರೆ ಗ್ರಾಮದ ವಾಸಿಗಳು. ತಟ್ಟೇಕೆರೆ ಗ್ರಾಮದ ಮನೆಗಳೆಂದರೆ ಕಾಂಗ್ರೆಸ್ಸಿಗರ ಮನೆ ಎಂದೇ ಹೆಸರು ಪಡೆಯಲು ಬಸಪ್ಪ ಗೌಡರು ಮಾಡಿದ ಕಾರ್ಯವೇ ಸಾಕ್ಷಿ. ಇದರ ಜೊತೆಗೆ ಇವರ ಮನೆಯ ಪ್ರತಿಯೊಬ್ಬರೂ ಕಾಂಗ್ರೆಸಿಗರೆಂದು ಯಾರೇ, ಯಾವ ಸಮಯದಲ್ಲೇ ಬರಲಿ ಅವರಿಗೆ ಆದರದ ಸ್ವಾಗತ ಸಿಗುತ್ತಿತ್ತು. ಈ ಕಾರಣದಿಂದಲೇ ಆ ಮನೆ ಈ ಕೀರ್ತಿ ಪಡೆಯಿತು.

ಬಸಪ್ಪಗೌಡರು 1939ರಲ್ಲಿ ಕಾಂಗ್ರೆಸ್ಸಿಗೆ ಸೇರಿದರು. ಅನಂತರ ಕಾಂಗ್ರೆಸ್ಸಿನ ಎಲ್ಲಾರೀತಿಯ ಕಾರ್ಯ ಕ್ರಮದಲ್ಲೂ ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲೂ ಸಕ್ರಿಯ ವಾಗಿ ಭಾಗವಹಿಸಿದರು. ಇದರಿಂದ ನಾಗಮಂಗಲ ತಾಲ್ಲೂಕಿನಲ್ಲೆ, ಬಸಪ್ಪಗೌಡರ ಹೆಸರು ನೆಲೆಯರಾಗಿ ನಿಂತಿತು. ಹಾಗೇ ನಾಗಮಂಗಲ ತಾಲ್ಲೂಕಿನಲ್ಲಿ ಕಾಂಗ್ರೆಸ್ ನೆಲೆ ಯೂರಬೇಕಾದರೆ ಇವರು ತುಂಬ ದುಡಿದರು. ಇದರ ಜೊತೆಗೆ ಬೇರೆಯವರನ್ನೂ ದುಡಿಯುವಂತೆ ಅವರಿಗೆ ಪ್ರೋತ್ಸಾಹ ನೀಡಿದರು. ಬಸಪ್ಪಗೌಡರು ಸಮಯಕ್ಕೆ ತಕ್ಕ ಆಸಾಮಿ. ಇವರನ್ನು ಶಿಸ್ತಿನ ಸಿಪಾಯಿ ಎಂದೇ ಕರೆಯಬಹುದಿತ್ತು, ಇಂಥ ಸಮಯಕ್ಕೆ ಇಂಥ ಸ್ಥಳದಲ್ಲಿ ಇರಬೇಕು ಅಂದರೆ, ನಿಗದಿಯಾದ ಸ್ಥಳದಲ್ಲಿ ನಿಗದಿಯಾದ ಸಮಯಕ್ಕೆ ಅವರು ಉಪಸ್ಥಿತರಿರುತಿದ್ದರು, ಅವರಿಗೆ ಏನಾದರೂ ಕಾಯಿಲೆ ಆಗಿ ಹಾಸಿಗೆ ಹಿಡಿದ್ದಿರೆ ಹೋಯಿತು. ಆರೋಗ್ಯವಾಗಿದ್ದರಂತೂ ಏನೇ ಆದರೂ ತಪ್ಪುತ್ತಿರಲಿಲ್ಲ. ಸಮಯಕ್ಕೆ ಸರಿಯಾಗಿ ಆ ಸ್ಥಳದಲ್ಲಿ ಹಾಜರಾಗಿರುತ್ತಿದ್ದರು. ಅದೇ ರೀತಿ ಸಮಾರಂಭವಾಗಲಿ ಅಥವಾ ಯಾವುದೇ ಚಳುವಳಿಯು ನಡಯ ಬೇಕೆಂದು ಸಮಯ ನಿಗದಿಯಾಗಿದ್ದರೆ ಆ ಸಮಯಕ್ಕೆ ಸರಿಯಾಗಿ ಪ್ರಾರಂಭವಾಗಲೇ ಬೇಕು, ಇಲ್ಲದಿದ್ದರೆ ಅವರು ಸಹಿಸುತ್ತಿರಲಿಲ್ಲ ಹಾಗೇ ಅವರು ತಾವು ಯಾವ ರೀತಿ ಇರುತ್ತಿದ್ದರೋ ಅದೇ ರೀತಿ ಜೊತೆಯಲ್ಲಿ ಇದ್ದವ ರನ್ನೂ ಕಾರ್ಯ ಪ್ರವೃತ್ತರಾಗುವಂತೆ ಮಾಡುತಿದ್ದರು, ಈ ಕಾರಣದಿಂದಲೇ ಬಸಪ್ಪ ಗೌಡರನ್ನು ಕಟ್ಟುನಿಟ್ಟಿನ ಮನುಷ್ಯ ಎನ್ನುತ್ತಿದ್ದರು, ಶಿಸ್ತಿನ ಸಿಪಾಯಿ ಎನ್ನುತಿದ್ದರು.

ಆಗಿನ ಮೈಸೂರಿನ ರಾಜರ ವಿರುದ್ಧ ಚಳುವಳಿ ಹೂಡಿ, ಅದರಲ್ಲಿ ಇವರೂ ಭಾಗ

ವಹಿಸಿ ಅನೇಕ ದಿವಸ ಜೈಲಿನಲ್ಲಿ ಇದ್ದರು.

ನಾಗಮಂಗಲ ತಾಲ್ಲೂಕಿನ ವಿಧಾನ ಸಭಾ ಚುನಾವಣೆಯಲ್ಲಿ ಗೆದ್ದು ವಿಧಾನ ಸಭಾ ಸದಸ್ಯರಾಗಿದ್ದರು. ಇದಲ್ಲದೇ ಮೊಟ್ಟಮೊದಲ ಗ್ರಾಮಾಭಿವೃದಿ ಸಮಿತಿಯ ಸದಸ್ಯರಾಗಿ ಗ್ರಾಮಾಭಿವೃದಿಯ ಕೆಲಸವನ್ನು ಮಾಡಿದ್ದರು. ಅದೇ ರೀತಿ ಗ್ರಾಮಗಳು ಏಳಿಗೆಗೆ ಬರುವಂತೆ ಮಾಡಲು ತುಂಬ ಹೆಣಗಿದ್ದರು. ತಾಲ್ಲೂಕು ಸೊಸೈಟಿ ಮತ್ತು ಅನೇಕ ಸಂಘ ಸಂಸ್ಥೆಗಳಿಗೆ ಸದಸ್ಯರಾಗಿದ್ದು ಕಾರ್ಯ ಮಾಡಿದ್ದರು.

ಬಸಪ್ಪಗೌಡರು ಖಾದಿ ವಸ್ತ್ರಧಾರಣೆಯ ವ್ರತವನ್ನು ಸ್ವೀಕರಿಸಿದ ಮೇಲೆ ತಮ್ಮ ಜೀವಮಾನದಲೆಲ್ಲಾ ಖಾದಿಧಾರಣೆಯನ್ನೇ ಮಾಡಿಕೊಂಡು ಬಂದರು, ಎಂದೂ ಬೇರೆ ವಸ್ತ್ರಧಾರಣೆ ಮಾಡಿದವರಲ್ಲ. ಇವರು ಸದಾ ಬೇರೆ ಬೇರೆ ಗ್ರಂಥಗಳನ್ನು ಅಧ್ಯಯನ ಮಾಡುತಿದ್ದರು. ಇದರಿಂದ ಇವರ ಮನೆಯಲ್ಲಿ ಒಂದು ಉತ್ತಮ ಪುಸ್ತಕ ಭಂಡಾರ ವನ್ನೇ ತೆರೆದಿದ್ದರು. ಇದರಲ್ಲಿ ಬಹಳಷ್ಟು ಗ್ರಂಥಗಳನ್ನು ಸಂಗ್ರಹಿಸಿದ್ದರು. ಬಸಪ್ಪ ಗೌಡರು ಎಸ್, ಎಸ್. ಎಲ್. ಸಿ ವರೆಗೆ ಮಾತ್ರ ವ್ಯಾಸಂಘ ಮಾಡಿದ್ದರು.

ಟಿ. ಎನ್. ಬಸಪ್ಪಗೌಡರ ಮನೆತನವೆಲ್ಲಾ ಕಾಂಗ್ರೆಸ್ಸಿಗೋಸ್ಕರ ಮತ್ತು ಸ್ವಾತಂತ್ರ್ಯ ಕ್ಕೋಸ್ಕರ ದುಡಿದವರೇ, ಇವರ ಅಪ್ಪಾ ಮಾದಪ್ಪಗೌಡರು ಮತ್ತು ಇವರ ಚಿಕ್ಕಪ್ಪ ಕಪಿನಿಗೌಡರೂ ಕಾಂಗ್ರೆಸ್ಸಿಗೆ ಸೇರಿ ಸ್ವಾತಂತ್ರ್ಯ ಚಳುವಳಿಯ ಮುಂಚೂಣಿಯಲ್ಲಿ ಇದ್ದರು,

ಇವರು ವಿವಾಹವಾಗಿದ್ದರು, ಮೂರು ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಇದ್ದರು. ಸುಮಾರು ಮೂವತ್ತು ವರ್ಷಗಳ ಕಾಲ ಪಂಚಾಯಿತಿಯ ಛೇರ್ಮನ್ ಆಗಿ ಕೆಲಸ ಮಾಡಿದರು. ಇದಲ್ಲದೇ ತಟ್ಟೇಕೆರೆ ಗ್ರಾಮದ ಅಭಿವೃದಿಗೆ ತುಂಬ ಶ್ರಮಿಸಿದರು. ಆನಂತರದ ಜೀವನವನ್ನು ವ್ಯವಸಾಯದ ಕಡೆ ಗಮನ ಹರಿಸಿ ದರು. ಶ್ರೀ ಗೌಡರು 1979ರಲ್ಲಿ ದೈವಾಧೀನರಾದರು.

ಭಾರತೀ ಪುತ್ರ

ಟಿ. ಎಂ. ಕಪನಿಗೌಡ

ನಾಗಮಂಗಲ ತಾಲ್ಲೂಕು ತಟ್ಟೇಕೆರೆ ವಾದಮೇಸ್ತ್ರಿಯವರ ಮಗ ಕಪನಿಗೌಡರು. ಇವರನ್ನು ವಾದಮೇಸ್ತ್ರಿಯವರ ಸಹೋದರ ಕಾಳಾ ಮೇಸ್ತ್ರಿಯವರು ದತ್ತು ತೆಗೆದುಕೊಂಡುದ್ದರಿಂದ, ಇವರು ತಟ್ಟೇಕೆರೆಯಿಂದ ಅಂದೇನಹಳ್ಳಿಗೆ ಬರಬೇಕಾಯಿತು. ಮುಂದೆ ಇದೇ ಇವರ ಮುಖ್ಯಸ್ಥಾನವಾಯಿತು. ಈ ಕಾರಣದಿಂದಲೇ ಕಪನೀಗೌಡರ ವಾಸ ತಟ್ಟೇಕೆರೆ ಪೂರ್ವಕ್ಕೆ ಇರುವ ಅಂದೇನಹಳ್ಳಿಗೆ ವರ್ಗಾವಣೆ ಆಯಿತು ಎನ್ನಬೇಕು. ಇಷ್ಟಾದರೂ ತಂದೆ ಮನೆಗೆ ಬಂದು ಹೋಗುವುದು ಮಾತ್ರ ನಿಲ್ಲಲಿಲ್ಲ.

ಕಪನಿಗೌಡರು ಪ್ರಾಪ್ತ ಮಯಸಿಗೆ ಬಂದುದರಿಂದ ಅವರಿಗೆ ವಿವಾಹವಾಯಿತು. ಆದರೆ, ಇವರ ಮನವನ್ನು ತುಂಬಿದ ಯುವತಿಯು ಹೆಚ್ಚು ದಿನ ಇವರ ಜೊತೆ ಇರಲಿಲ್ಲ. ಅವರು ಇಹಲೋಕವನ್ನು ತೊರೆದರು. ಇದರಿಂದ ಕಪನಿಗೌಡರಿಗೆ ತುಂಬ ದುಃಖವಾಯಿತು. ಮೊದಲನೇ ಪತ್ನಿ ತೀರಿಕೊಂಡ ನಂತರ ಚಿಕ್ಕಯಗಟಿಯ ಜಮೆದಾರ್ ನರಸೇಗೌಡರ ಮಗಳನ್ನು ವಿವಾಹ ವಾದರು. ಎರಡನೇ ಹೆಂಡತಿಯಿಂದ ನಾಲ್ಕು ಜನ ಗಂಡು ಮಕ್ಕಳು, ಮತ್ತು ಇಬ್ಬರು ಹೆಣ್ಣು ಮಕ್ಕಳು ಹುಟ್ಟಿದರು.

ಕಪನಿಗೌಡರು ಓದಿದವರು, ಇದರಿಂದ ದೇಶದ ಆಗು ಹೋಗುಗಳ ಬಗ್ಗೆ ಪರಿಚಿತರಾಗಿದ್ದರು, ಇವರು ತಟ್ಟೇಕೆರೆ ಮನೆತನಕ್ಕೆ ಸೇರಿದ್ದರಿಂದ, ಅಲ್ಲಿಗೆ ಬರುತಿದ್ದ ಕಾಂಗ್ರೆಸ್ಸಿಗರ ಸಂಬಂಧ ಇವರಿಗೂ ಉಂಟಾದ್ದರಿಂದ, ಜೊತೆಗೆ ಅವರು ತರಿಸುತ್ತಿದ್ದ ಪತ್ರಿಕೆಗಳನ್ನು ಆಸಕ್ತಿಯಿಂದ ಓದುತಿದ್ದುದರಿಂದ ಅವರ ಮನಸ್ಸು ಸ್ವಾತಂತ್ರ್ಯ ಚಳುವಳಿಯ ಕಡೆಹರಿಯಿತು.

1935 ರಲ್ಲಿ ಕಾಂಗ್ರೇಸ್ ಸದಸ್ಯರಾದರು. ಆ ನಂತರ ಸಕ್ರಿಯವಾಗಿ ಕಾಂಗ್ರೇಸ್ ಸಂಸ್ಥೆಯ ಕಾರ್ಯದಲ್ಲಿ ಮಗ್ನರಾದರು. ನಾಗಮಂಗಲ ತಾಲ್ಲೂಕಿನ ಪ್ರತಿಯೊಂದು ಗ್ರಾಮವನ್ನೂ ಅಲೆದು ಕಾಂಗ್ರೇಸ್ ಸಂಸ್ಥೆಯ ಪ್ರಚಾರ ಮಾಡಿದರು. ಇದರಿಂದ ಇವರು ತಾಲ್ಲೂಕಿನ ಮುಖ್ಯಸ್ಥರಲ್ಲಿ ಒಬ್ಬರಂತೆ ಪರಿಗಣಿತವಾಗಿದ್ದರು. ಆಗ ವರ್ಷಕ್ಕೆ ಒಂದು ಬಾರಿ ನಡೆಯುತ್ತಿದ್ದ ತಾಲ್ಲೂಕಿನ ಸಮ್ಮೇಳನದಲ್ಲಿ ಭಾಗವಹಿಸುತಿದ್ದರು. ಇದನ್ನು ಸರ್ಕಾರದವರೇ ನಡೆಸುತಿದ್ದರು. ಈ ಸಮ್ಮೇಳನದಲ್ಲಿ ತಾಲ್ಲೂಕಿನ ರೈತರ ಮುಖಂಡರು ಭಾಗವಹಿಸಿ, ತಮ್ಮ ಕುಂದುಕೊರತೆಯನ್ನು ಸರ್ಕಾರಕ್ಕೆ ತಿಳಿಸುವುದಕ್ಕೆ ಪ್ರಯತ್ನಿಸುತಿದ್ದರು. ಈ ಸಮ್ಮೇಳನದಲ್ಲಿ ಕಪನಿಗೌಡರೂ ಭಾಗವಹಿಸಿ ಜನಗಳ

ಕಷ್ಟವನ್ನು ಸರ್ಕಾರಕ್ಕೆ ಮನವರಿಕೆಯಾಗುವಂತೆ ವಿವರಿಸುತಿದ್ದರು. ಇದರಿಂದ ತಾಲ್ಲೂಕಿನಲ್ಲೇ ಮುಖ್ಯರಾದವರು ಎನಿಸಿಕೊಂಡಿದ್ದರು,

ಕಪನೀಗೌಡರು ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿ ಅನೇಕದಿನ ತುರಂಗವಾಸವನ್ನು ಅನುಭವಿಸಿದ್ದರು. ಶ್ರೀ ಗೌಡರು ಶಿವಮೊಗ್ಗ, ತೀರ್ಥಹಳ್ಳಿ ಜೈಲಿನಲ್ಲಿ ಕೆಲವು ದಿವಸಗಳು ಇದ್ದರು.

ಗೌಡರು ಜಮೀನಿನ ಉಸ್ತುವಾರಿಯನ್ನು ನೋಡಿಕೊಳ್ಳುತಿದ್ದರಲ್ಲದೇ ಕಂಟ್ರಾಕ್ಟ್ ಕೆಲಸವನ್ನೂ ಮಾಡಿಸುತಿದ್ದರು. ಕುಣಿಗಲ್ ತಾಲ್ಲೂಕಿನ ಮರ್ಕೋನ ಹಳ್ಳಿಯ ಹತ್ತಿರ ಶಿಂಷಾನದಿಗೆ ಅಡ್ಡಲಾಗಿ ಅಣೆಕಟ್ಟನ್ನು ಕಟ್ಟುವಾಗ ಅಲ್ಲಿ ಕಂಟ್ರಾಕ್ಟರ್ ಆಗಿ ಕೆಲಸ ಮಾಡಿದರು. ಶಿವನಹಳ್ಳಿ ಕೆರೆಯ ಕಂಟ್ರಾಕ್ಟನ್ನೂ ತಗೆದುಕೊಂಡು ಸಂಪೂರ್ಣ ಮಾಡಿದರು. ಇದಲ್ಲದೇ ಆಗ ಚುಂಚನಗಿರಿಯಲ್ಲಿ ಹಿಂದೆ ಇದ್ದ ಕಾಪಾಲಿಗರಿಂದ ಮಠವನ್ನು ಒಕ್ಕಲಿಗರು ತಮ್ಮ ವಶಕ್ಕೇ ತೆಗೆದುಕೊಂಡಾಗ ಇವರು ಮತ್ತು ಮಾದಪ್ಪಗೌಡರು ಮುಂತಾದ ನಾಯಕರು ಸೇರಿ ಮಠವನ್ನು ಅಭಿವೃದ್ಧಿಪಡಿಸಿದರು.

ಟಿ. ಎಂ. ಕಪನಿಗೌಡರು ಒಂದು ಬಾರಿ ವಿಧಾನಸಭಾ ಸದಸ್ಯರಾಗಿದ್ದರು. ಆಗ ತಾಲ್ಲೂಕಿನಲ್ಲಿ ನಾನಾರೀತಿಯ ಕೆಲಸವನ್ನು ಮಾಡಿದರು, ಇವರು 1975 ರಲ್ಲಿ ದೈವಾದೀನರಾದರು.

ಭಾರತೀ ಪುತ್ರ

ಕಾಂಗ್ರೆಸ್ ತಿಮ್ಮೇಗೌಡ

ಕಾಂಗ್ರೆಸ್ ಅಂದರೆ ತಿಮ್ಮೇಗೌಡರು, ತಿಮ್ಮೇಗೌಡರು ಅಂದರೆ ಕಾಂಗ್ರೆಸ್ ಅಂತ ಆಗ ನಾಗಮಂಗಲ ತಾಲ್ಲೂಕಿನಲ್ಲಿ ಜನರು ಆಡಿಕೊಳ್ಳುತ್ತಿದ್ದಕಾಲ. ರಾಷ್ಟ್ರೀಯ ಚಳುವಳಿಯಲ್ಲಿ ಮಣಿಯೂರು ತಿಮ್ಮೇಗೌಡರದು ಅಂತಹ ಪ್ರಮುಖ ಪಾತ್ರ. ಆದ್ದರಿಂದ ಇವರನ್ನು ಕಾಂಗ್ರೆಸ್ ತಿಮ್ಮೇಗೌಡರೆಂದೇ ಜನ ಕರೆಯುತ್ತಿದ್ದರು. ಇಷ್ಟೆಲ್ಲಾ ತ್ಯಾಗ ಮಾಡಿದ ತಿಮ್ಮೇಗೌಡರಿಗೆ ಜೀವನದ ಕೊನೆಯ ಕೆಲವು ವರ್ಷಗಳಲ್ಲಿ, ತಮ್ಮವರಿಂದಲೇ ಮೋಸವಾಗಿ ಬುದ್ಧಿಭ್ರಮಣೆಯಾಗಿ ಹುಚ್ಚರಂತೆ ಆಗಿದ್ದರು.

ಇವರ ಗ್ರಾಮ ಮಣಿಯೂರು. ತಂದೆ ಕೆಂಗೇಗೌಡರು. ತಾಯಿ ನಂಜಮ್ಮ. ಇವರ ತಂದೆಗೆ ಇಬ್ಬರು ಹೆಂಡತಿಯರು. ತಿಮ್ಮೇಗೌಡರು ಕಿರಿಯ ಹೆಂಡತಿಯ ಮಗ. ತಿಮ್ಮೇಗೌಡರು ಓದುಬರಹ ಕಲಿತವರಲ್ಲ. ಏಕೆ ಇವರು ವಿದ್ಯಾಭ್ಯಾಸ ಮಾಡಲಿಲ್ಲವೋ ಈ ಬಗ್ಗೆ ಸರಿಯಾಗಿ ತಿಳಿಯದಾಗಿದೆ ಇಷ್ಟಾದರೂ ಗೌಡರು ಕೇವಲ 'ಕಾಂಗ್ರೆಸ್ ತಿಮ್ಮೇಗೌಡ' ಎಂದಷ್ಟೇ ಸಹಿ ಮಾಡುವುದನ್ನು ಕಲಿತಿದ್ದರು.

1935 ನೇ ಇಸವಿಯಿಂದಲೂ ಶ್ರೀ ಟಿ. ಮರಿಯಪ್ಪನವರು, ಕರಡಹಳ್ಳಿ ಶ್ರೀ ಕೃಷ್ಣೇಗೌಡರ ಜೊತೆಯಲ್ಲಿ ತಿಮ್ಮೇಗೌಡರು ಕಾಂಗ್ರೆಸ್ಸಿನ ಕಾರ್ಯವನ್ನು ಮಾಡುತ್ತಿದ್ದರು. ರಾತ್ರಿ ಹಗಲೆನ್ನದೆ ಅವರು ಕಾಂಗ್ರೆಸ್ಸಿನ ಕೆಲಸಕಾರ್ಯದಲ್ಲಿ ದುಡಿಯುತ್ತಿದ್ದರು. ರಾಷ್ಟ್ರಕ್ಕೆ ಗಾಂಧೀಜೀಯವರು ನೀಡಿದ ಸಂದೇಶದಂತೆ, ದಡಗದ ಆಸುಪಾಸಿನಲ್ಲಿ ಇದ್ದ ಈಚಲಸವನಕ್ಕೆ ತಮ್ಮ ದಂಡಿನ ಜೊತೆ ನುಗ್ಗಿ ಈಚಲಗಿಡಗಳನ್ನು ಕಡಿದುಹಾಕುತ್ತಿದ್ದರು ಅದೇ ದಡಗ ಕಾವಲಿನಲ್ಲಿ ಈಚಲಮರಕ್ಕೆ ಶೇಂದಿಯನ್ನು ಸಂಗ್ರಹಿಸಲು ಕಟ್ಟಿದ್ದ ಮಡಿಕೆಗಳನ್ನು ಒಡೆದು ಚೂರುಮಾಡುತ್ತಿದ್ದರು ಸಂತೆಗಳಿಗೆ ಗ್ರಾಮದಿಂದ ರೈತರು ತಲೆಯ ಮೇಲೆ ಹೊತ್ತುಕೊಂಡು ತಂದು ಮಾರುತಿದ್ದ ಬೆಣ್ಣೆಯನ್ನು ಕಿತ್ತುಕೊಳ್ಳುತ್ತಿದ್ದರು. ಅಂದರೆ ಆಗ ಸಂತೆಯಲ್ಲಿ ರೈತರಿಗೆ ಸರಿಯಾದ ರೀತಿಯಲ್ಲಿ ಅವರು ತರುತ್ತಿದ್ದ ಮಾಲಿಗೆ ಬೆಲೆ ದೊರೆಯುತ್ತಿರಲಿಲ್ಲ. ರೈತರು, ತಮಗೋಸ್ಕರ ಇಟ್ಟುಕೊಳ್ಳದೆ ಎಲ್ಲವನ್ನೂ ಸಂತೆಗೆ ತಂದು ಮಾರುತ್ತಿದ್ದರು. ಈ ಕಾರಣದಿಂದಲೇ ಬೆಣ್ಣೆ ಮುಂತಾದ ಅಗತ್ಯ ವಸ್ತುವನ್ನು ಸತೆಗೆ ಬಾರದಂತೆ ತಡೆಯುತ್ತಿದ್ದರು ಇವರ ಚಳುವಳಿಯು ಹೀಗೆ ನಿರಾಂತಕವಾಗಿ ನಡೆದಿತ್ತು. ಸರಕಾರಕ್ಕೆ ಚಳ್ಳೆಹಣ್ಣು ತಿನ್ನಿಸುತ್ತಿದ್ದರು. ಕದಬಳ್ಳಿ ಕಾವೇಟಿರಂಗಸ್ವಾಮಿ ದೇವಾಲಯದ ಹತ್ತಿರ ಚಳುವಳಿ ಮಾಡಿದಾಗ ಇವರನ್ನು

ದಸ್ತಗಿರಿ ಮಾಡಿದರು. ಅನೇಕ ದಿನ ಜೈಲಿನಲ್ಲಿದ್ದರು.

ತಿಮ್ಮೇಗೌಡರು ಗ್ರಾಮಗ್ರಾಮಕ್ಕೆ ಹೋಗಿ ರೈತರಿಗೆ, ಸರಕಾರಕ್ಕೆ ಕಟ್ಟಬೇಕಾಗಿದ್ದ ಕಂದಾಯವನ್ನು ಕಟ್ಟಬೇಡಿ ಎಂದು ತಿಳಿಯಹೇಳುತಿದ್ದರು. ಇವರು ಜನಗಳಿಗೆ ಸರಕಾರ ನಮ್ಮ ಕುಂದುಕೊರತೆಯನ್ನು ಗಮನಿಸುತ್ತಿಲ್ಲ. ಇಂಥ ಸರಕಾರಕ್ಕೆ ಕಂದಾಯ ಏತಕ್ಕೆ ಕೊಡಬೇಕು ? ಕೊಡಬೇಡಿ ಎಂದು ಹೇಳಿ, ಅವರ ಮನವುಟ್ಟುವಂತೆ ತಿಳಿ ಹೇಳಿ ಜನಜಾಗೃತಿ ಮೂಡಿಸಿದ್ದರು.

ತಿಮ್ಮೇಗೌಡರನ್ನು ದಸ್ತಗಿರಿಮಾಡಿ ನ್ಯಾಯಾಲಯದಲ್ಲಿ ದಾವೆಹೂಡಿದಾಗ ಶ್ರೀ ಟಿ. ಮರಿಯಪ್ಪನವರು ಇವರ ಪರ ವಾದಿಸಿದರು. ಕಾಂಗ್ರೆಸ್ ತಿಮ್ಮೇಗೌಡ ಚಳುವಳಿ ಮಾಡಿದ್ದರಿಂದ ಜೈಲಿನ ಶಿಕ್ಷೆಯನ್ನು ಅನುಭವಿಸಿದರು. ಇವರನ್ನು ಮೈಸೂರು, ತೀರ್ಥ ಹಳ್ಳಿ, ಶಿವಮೊಗ್ಗದ ಜೈಲಿನಲ್ಲಿ ಇರಿಸಿದ್ದರು. 1947, ಆಗಸ್ಟ್ 15ರಂದು ರಾಷ್ಟ್ರಕ್ಕೆ ಸ್ವಾತಂತ್ರ್ಯ ಲಭಿಸಿದನಂತರ ಇವರನ್ನು ಜೈಲಿನಿಂದ ಬಿಡುಗಡೆ ಮಾಡಿದರು. ಜೈಲಿ ನಿಂದ ಬಂದನಂತರ ಗೌಡರು ಸ್ವಾತಂತ್ರ್ಯಬಂದ ಆಗಸ್ಟ್ 15ರ ದಿನವನ್ನು ಪ್ರತಿ ವರ್ಷವೂ ವಿಜೃಂಭಣೆಯಿಂದ ತಮ್ಮ ಗ್ರಾಮದಲ್ಲಿ ಆಚರಿಸುತಿದ್ದರು. ಅಂದು ಎತ್ತಿನ ಗಾಡಿಗಳನ್ನು ಕಟ್ಟಿಸಿಕೊಂಡು, ಅವನ್ನು ಶೃಂಗರಿಸಿ ಗ್ರಾಮಗ್ರಾಮಕ್ಕೆ ಹೋಗಿ ಮೆರವಣಿಗೆ ಮಾಡುತಿದ್ದರು. ಮಕ್ಕಳಿಗೆ ತಮ್ಮ ಸ್ವಂತ ಖರ್ಚಿನಿಂದ ಸಿಹಿಯನ್ನು ತಂದು ಹಂಚುತಿದ್ದರು.

1947, 48 ರಲ್ಲಿ ಎಲ್ಲೆಡೆ ಆಹಾರ ಪದಾರ್ಥಗಳಿಗೆ ಕಂಟ್ರೋಲ್ ಆಗಿತ್ತು. ಆಗ ಜನಗಳಿಗೆ ದವಸ ಧಾನ್ಯವು ಸಿಗುವುದು ಕಷ್ಟವಾಗಿತ್ತು. ಜೊತೆಗೆ ಬರಗಾಲವೂ ಸಹ ಜನಗಳನ್ನು ಕಾಡತೊಡಗಿತ್ತು. ಇದರಿಂದ ಜನರು ತುಂಬ ಕಷ್ಟಪಡುತಿದ್ದರು. ಇದನ್ನು ನೋಡಿ ಗೌಡರು ತುಂಬ ದುಃಖಪಟ್ಟರು. ಆ ದಿನಗಳಲ್ಲಿ ಜನಗಳನ್ನು ಕರೆದು ಕೊಂಡು ಹೋಗಿ ಅವರಿಗೆ ದವಸಧಾನ್ಯವನ್ನು ಕೊಡಿಸುತ್ತಿದ್ದರು.

ತಿಮ್ಮೇಗೌಡರು ಕಂಟ್ರಾಕ್ಟರ್ ಆಗಿ ಕೆಲಸ ಮಾಡಿಸುತಿದ್ದರು. ಇದಲ್ಲದೆ ಗ್ರಾಮಪಂಚಾಯಿತಿಯ ಛೇರ್ಮನ್ ಆಗಿದ್ದರು. ಆ ಸಮಯದಲ್ಲಿ ಗ್ರಾಮದ ಅಭಿವೃದ್ಧಿ ಕೆಲಸವನ್ನು ತುಂಬ ಹೆಮ್ಮೆಯಿಂದ ಮಾಡಿದರು.

ಕಾಂಗ್ರೆಸ್ ತಿಮ್ಮೇಗೌಡರೆಂದು ಹೆಸರು ಪಡೆದಿದ್ದ ಮಣಿಯೂರು ತಿಮ್ಮೇ ಗೌಡರು 1969 ರಲ್ಲಿ ಇಹದ ಜಂಜಾಟವನ್ನು ತೊರೆದು ಮುಕ್ತರಾದರು. ಅನಕ್ಷರಸ್ಥ ರಾದ ತಿಮ್ಮೇಗೌಡರು ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ತೋರಿಸಿದ ಶಕ್ತಿ ಸಾಹಸಗಳು ಅನುಕರಣೀಯವಾದಂಥವು.

ಭಾರತೀಪುತ್ರ

ನ. ಭದ್ರಯ್ಯ

ಮಂಡ್ಯ ಜಿಲ್ಲೆಯ ನೀಲನಹಳ್ಳಿ ಒಂದು ಹಿಂದುಳಿದ ಗ್ರಾಮ. ಹೊರ ಜಗತ್ತಿನ ಅಲ್ಲಕಲ್ಲೋಲಕ್ಕೆ ಅಲುಗಾಡದ 'ಸ್ಥಿತಪ್ರಜ್ಞೆ' ಅಲ್ಲಿಯ ಕಷ್ಟಜೀವಿ ಜನಕ್ಕೆ. ನಮ್ಮ ಬಹುತೇಕ ಹಳ್ಳಿಗಳು ಇಂದಿಗೂ ಇರುವುದು ಹೀಗೆಯೇ.

ಒಂದು ದಿಸ ಆ ಹಳ್ಳಿಯಲ್ಲಿ ಮಹಾ ಕೋಲಾಹಲ. ಅಲ್ಲೊಂದು ಮನೆಯನ್ನು ಜಪ್ತಿಮಾಡುವ ಸಲುವಾಗಿ ಪೊಲೀಸರು ಬಂದಿದ್ದರು. ಖಾಕಿ ಸಮವಸ್ತ್ರ ನೋಡಿದೊಡನೆ ಜನರೆಲ್ಲ ಗಡಗಡ ನಡುಗುತ್ತಿದ್ದ ಕಾಲ ಅದು.

ಜಪ್ತಿಗೆ ಕಾರಣ ಅಪರಾಧವಲ್ಲ. ಆ ಮನೆಯ ಯುವಕರೊಬ್ಬರು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಜೈಲಿಗೂ ಹೋಗಿದ್ದರು ಆಗಿನ ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಈ ಹೋರಾಟ.

ಆಗಿನ ಕಾರಾಗೃಹಗಳು ಈಗಿನವಂತಿರಲಿಲ್ಲ. ಕಠಿಣ ಶಿಕ್ಷೆ ಎಂದರೆ ಅದು ಅಕ್ಷರಶಃ ನಿಜ. ಅನೇಕರು ನಡುಗಿಹೋಗಿದ್ದರು. ನೀಲನಹಳ್ಳಿಯ ಆ ಯುವಕರು ಜೈಲಿನಲ್ಲಿ ಅನಾರೋಗ್ಯಕ್ಕೆ ಒಳಗಾಗಿದ್ದರು.

ಸರ್ಕಾರ ಹೇಳಿದ ಹಾಗೆ ಬರೆದುಕೊಟ್ಟು ಬಿಡುಗಡೆ ಹೊಂದಿ ಆರೋಗ್ಯ ಸುಧಾರಿಸಿಕೊಳ್ಳಿ, ಎಂದು ಅಧಿಕಾರಿಗಳು ಹೇಳಿದ್ದರು ಆದರೆ ಯುವಕರದು ಒಂದೇ ಹಠ. ಇಲ್ಲೇ ಸತ್ತರೂ ಸರಿ. ನಾನೀ ಕೆಲಸ ಮಾಡಲಾರೆ. ಗಾಂಧೀ ಆಶ್ರಮದಲ್ಲಿ ಕೆಲ ತಿಂಗಳು ಇದ್ದು ಬಂದಿದ್ದ ಆ ಯುವಕರನ್ನು ಆ ಆಯಸ್ಕಾಂತ ಶಕ್ತಿ ಆವರಿಸಿತ್ತು. ಸರ್ಕಾರ ಸಾಮ ದಾನ ಭೇದ ದಂಡಗಳನ್ನು ಪ್ರಯೋಗಿಸತು. ಜಗ್ಗಲಿಲ್ಲ ಅವರು. ಕೊನೆಯ ಅಸ್ತ್ರವಾಗಿ ಸರ್ಕಾರ ಪ್ರಯೋಗಿಸಿದ್ದೆಂದರೆ, ಪೊಲೀಸರನ್ನು ಬಿಟ್ಟು ಅವರ ಮನೆಯ ಜಪ್ತಿ ಮಾಡಿಸುವುದು. ಮನೆಯೊಳಗಿನ ಪಾತ್ರ ಪರಟೆಗಳನ್ನೆಲ್ಲ ಪೊಲೀಸರಿಂದ ಹೊರಕ್ಕೆಸೆಯಿಂಸಿಬಿಟ್ಟರೆ ಹುಡುಗ ದಾರಿಗೆ ಬರುತ್ತಾನೆಂದು ಸರ್ಕಾರದ ಭ್ರಮೆ.

ಹೆದರಿದ ಹಳ್ಳಿಯ ಜನರೆಲ್ಲ ಆ ಮನೆಯ ಮುಂದೆ ಜಮಾವಣೆ. ತುಟಿಪಿಟಕ್ಕೆನ್ನದಷ್ಟು ಅಂಜಿಕೆ.

ಊರ ಹಿರಿಯರೊಬ್ಬರು ಗಂಭೀರವಾಗಿ ಮುಂದ ಬಂದರು ಪೊಲೀಸರ ಎದುರು ದೊಣ್ಣೆಯೂರಿ ನಿಂತರು. ಅಡಿಯಿಂದ ಮುಡಿಯುವರೆಗೆ ಅವರನ್ನು ಸಿಟ್ಟಿಸಿ ನೋಡಿದರು.

ಗುಡುಗಿನಂತೆ ಬಂತು ಗೌಡರ ಮಾತು : ಮನೆ ಸಾಮಾನು ಮುಟ್ಟಿಗಿಟ್ಟೀರಿ ಜೋಕೆ! ಮುಟ್ಟಿದರೆ ಏನಾದೀತೆಂಬುದನ್ನ ತಿಳಿದುಕೊಳ್ಳೋಕೆ ನಿಮ್ಮಲ್ಲಿ ಯಾರೂ ಉಳಿದಿರಾಕಿಲ್ಲ !

ಪೊಲೀಸ್ ಬಲದ ಮುಂದೆ ಈ ಮುದುಕ ಏನು ಮಾಡಿಯಾನು ? ಆದರೆ ಪೊಲೀಸರ ಎದೆ ಅಳುಕಿತು. ಕೆಲಸ ಜರುಗಿಸದೆ ಹಿಂದಕ್ಕೆ ನಡೆದುಬಿಟ್ಟರು.

ಇದಕ್ಕೆ ಕಾರಣರಾದ ಯುವಕರು ನ. ಭದ್ರಯ್ಯ. ಗುಡುಗಾಡಿದ ಹಿರಿಯರು ಅವರ ಬಂಧುಗಳಲೊಬ್ಬರು.

ಭದ್ರಯ್ಯನವರ ತಂದೆ ನಣ್ಜೇಗೌಡ, ತಾಯಿ ತಾಯಮ್ಮ. ಅವರದು ಓದು ಬರಹ ಬಾರದ ಬಡ ರೈತ ಕುಟುಂಬ.

ಭದ್ರಯ್ಯನವರು ಹುಟ್ಟಿದ್ದು 1912ರ ಸೆಪ್ಟಂಬರ್ 9 ಎಂದು ಅಧಿಕೃತ ದಾಖಲೆಗಳು ಸಾರುತ್ತವೆ. ಅನಕ್ಷರಸ್ಥ ತಂದೆ ತಾಯಿ ಅವರ ಜನ್ಮದಿನಾಂಕ ಬರೆದಿಡುವು ದಾದರೂ ಹೇಗೆ ? ಶಾಲೆಯ ಕಡತದಲ್ಲಿ ಅಧ್ಯಾಪಕರು ಬರೆದದ್ದೇ ದಾಖಲೆ. ಅವರು ಮೊದಲ ಸಾರಿ ವಿದೇಶ ಪ್ರವಾಸ ಮಾಡುವಾಗ ರಹದಾರಿಗಾಗಿ ಬರೆದುಕೊಂಡ ಅರ್ಜಿ ಯಲ್ಲಿ ಆಗ ತೋರಿದಂತೆ ಈ ದಿನಾಂಕ ಕೊಟ್ಟರಂತೆ. ಅದೇ ಉಳಿದುಕೊಂಡುಬಿಟ್ಟಿತು. ಅವರು 1908ರ ಸುಮಾರಿನಲ್ಲಿ ಹುಟ್ಟಿರಬೇಕೆಂಬುದು ಅವರ ತಮ್ಮಂದಿರ ನಂಬಿಕೆ. ಭದ್ರಯ್ಯನವರು ಬದುಕಿರುವವರೆಗೂ ತಮ್ಮ ವಯಸ್ಸನ್ನೆಂದೂ ಲೆಕ್ಕ ಹಾಕಿದವರೇ ಅಲ್ಲ. ವಯಸ್ಸಿನ ಬಗೆಗೂ, ಹುಟ್ಟುಹಬ್ಬದ ಬಗೆಗೂ ಅವರಿಗೆ ದಿವ್ಯ ನಿರ್ಲಕ್ಷ್ಯ.

ಭದ್ರಯ್ಯನವರು ತಮ್ಮ ಬದುಕಿನ ಬಗೆಗೆ ಯಾರೊಂದಿಗೂ ಹೆಚ್ಚು ಹೇಳಿಕೊಳ್ಳು ತ್ತಿರಲಿಲ್ಲ. ಅದರಲ್ಲಿ ಹೇಳಿಕೊಳ್ಳುವಂಥದೇನಿದೆ ?— ಎಂದೇ ಅವರ ಪ್ರಶ್ನೆ. ಸ್ವಂತ ವಿಚಾರವನ್ನು ಅವರು ಅಷ್ಟಾಗಿ ತಲೆಗೆ ಹಚ್ಚಿಕೊಂಡವರೇ ಅಲ್ಲ.

ಲಕ್ಷ್ಮೀಸಾಗರದಲ್ಲಿ ಭದ್ರಯ್ಯನವರ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣ, ಪ್ರೌಢ ಶಾಲೆಯ ಓದಿಗಾಗಿ ಮೈಸೂರಿನತ್ತ ಪ್ರಯಾಣ.

ಸಂಬಂಧಿಕರ ಮನೆಯಲ್ಲಿ ಊಟ ವಸತಿ. ತೋಚಿದಂತೆ ಓದು. ಅವರ ಬಾಳಿಗೆ ಅವರೇ ರೂವಾರಿ.

ಅವರಿದ್ದ ಮನೆಯಲ್ಲಿ ಒಮ್ಮೆ ಒಂದು ಒಡವೆಯು ಕಳವಾಯಿತು. ಬಡತನವೇ ಮಹಾಪರಾಧವಲ್ಲವೆ ? ಭದ್ರಯ್ಯನವರೇ ಆ ಕೃತ್ಯ ಮಾಡಿದರೆಂದು ಅನುಮಾನ.

ಎಳೆ ಹೃದಯದ ಮೇಲೆ ಬರೆ ಹಾಕಿದ ಹಾಗಾಯಿತು. ತಮ್ಮ ಪ್ರಾಮಾಣಿಕತೆಯ ನ್ನವರು ಸಾಬೀತುಪಡಿಸುವುದಾದರೂ ಹೇಗೆ ?

ಇನ್ನು ಆ ಮನೆಯಲ್ಲಿ ಊಟಮಾಡುವುದಿಲ್ಲ ಎಂದು ಶಪಥ ಮಾಡಿದರು. ಆದರೆ ಆ ಒಡವೆ ಕದ್ದವರು ಯಾರೆಂಬುದು ಸಿದ್ಧವಾಗುವವರೆಗೂ ಮನೆ ಬಿಡುವುದಿಲ್ಲ ಎಂದು ಸಂಕಲ್ಪಿಸಿದರು.

ಆ ಕೆಲಸ ಮಾಡಿದವರು ಯಾರು ಎಂಬುದು ಒಂದು ದಿನ ಪತ್ತೆಯಾಯಿತು. ಕದ್ದವನು ಯಾರಿಗೆ ಅದನ್ನು ಮಾರಿದ್ದನೆಂಬುದೂ ಗೊತ್ತಾಯಿತು.

ಭದ್ರಯ್ಯನವರ ಬಗ್ಗೆ ವೃಥಾ ಸಂಶಯಪಟ್ಟದ್ದಕ್ಕಾಗಿ ಮನೆಯವರು ಬಲು ನೊಂದುಕೊಂಡರು. ಇನ್ನು ಮೇಲಾದರೂ ಇಲ್ಲೇ ಊಟ ಮಾಡಿಕೊಂಡಿರಬೇಕೆಂದರು.

ತಾವು ನಿರಪರಾಧಿಯೆಂಬುದು ಸಿದ್ಧವಾಯಿತೆಂದು ಭದ್ರಯ್ಯನವರ ಮನಸ್ಸು ನಿರಾಳವಾಯಿತು. ಇನ್ನು ಅವರು ಆ ಮನೆಯಲ್ಲಿರಲೊಪ್ಪಲಿಲ್ಲ. ಮನೆಯವರ ಒತ್ತಾಯಕ್ಕೆ ಮಣಿಯಲಿಲ್ಲ. ವಾರದ ಏಳು ದಿನ ಏಳು ಮನೆಗಳಲ್ಲಿ ಸರದಿಯಂತೆ ಊಟ ಮಾಡುತ್ತಿದ್ದ ಭದ್ರಯ್ಯನವರು ಆ ವಾರಾನ್ನದ ಬದುಕನ್ನ ಮುಂದುವರಿಸಿದರು.

ಪ್ರೌಢಶಾಲೆ ಮುಗಿಸಿ ಇಂಟರ್‌ಮೀಡಿಯೇಟ್‌ನ ಘಟ್ಟ ಹತ್ತುವ ವೇಳೆಗೆ ಭದ್ರಯ್ಯನವರ ಮನಸ್ಸು ಹೊಯ್ದಾಡುತ್ತಿತ್ತು. ನಾಡಿನ ಬಿಡುಗಡೆಯ ಹೋರಾಟ ಬಿರುಸಾಗಿದ್ದ ಆ ಕಾಲದಲ್ಲಿ ಅವರಲ್ಲೂ ಅದಕ್ಕಾಗಿ ತುಡಿತ ಉಂಟಾಯಿತು. ಮುಂದೆ ಹೋರಾಟವೇ ಮುಂದಾಯಿತು. ಓದು ಬಿಟ್ಟೇಹೋಯಿತು. ಗಾಂಧೀ ಗುಂಗು ಮೈಯೆಲ್ಲಾ ತುಂಬಿಕೊಂಡು ದುಮುದುಮಿಸುತ್ತಿತ್ತು.

ಬಿಡುಗಡೆಯ ಹೋರಾಟದಲ್ಲಿ ದುಮ್ಮಿಕ್ಕುವುದರ ಜೊತೆಗೆ. ತಮ್ಮಂಥ ತರುಣರ ವಿದ್ಯಾರ್ಜನೆ ಸುಸೂತ್ರವಾಗುವಂತೆ ಮಾಡಬೇಕೆಂಬ ಬಯಕೆ. ಗಾಂಧೀಜಿ ನಂಬಿದ್ದ ರಚನಾತ್ಮಕ ಕಾರ್ಯಗಳಲ್ಲಿ ತೊಡಗಬೇಕೆಂಬ ಹಂಬಲ. ಗ್ರಾಮದ ಉದ್ಧಾರವಾಗದೆ ರಾಷ್ಟ್ರದ ಏಳ್ಗೆ, ಪ್ರಗತಿ ಆಗಲಾರದೆಂಬ ನಂಬಿಕೆ. ಹೀಗೆ ಮೂರು ಬಗೆಯ ಚಿಂತನದಿಂದ ಮುಪ್ಪುರಿಗೊಂಡ ಮನಸ್ಸು ಏನನ್ನಾದರೂ ಸಾಧಿಸಲು ಹಾತೊರೆಯುತ್ತಿತ್ತು.

ಬಡ ವಿದ್ಯಾರ್ಥಿನಿಲಯ ನಡೆಸಬೇಕೆಂದು ಭದ್ರಯ್ಯನವರು ತಮ್ಮ ಕೆಲವು ಮಿತ್ರರು ಹಾಗೂ ಆಶ್ರಯದಾತರೊಂದಿಗೆ ಕಾರ್ಯಪ್ರವೃತ್ತರಾದರು. ಇದರ ಫಲವೇ ವಿವೇಕಾನಂದ ವಿದ್ಯಾರ್ಥಿ ನಿಲಯ. ಶ್ರೀಮಂತರ ಮಕ್ಕಳಿಂದ ಹಣ, ಬಡವರ ಮಕ್ಕಳಿಗೆ ಉಚಿತ ಊಟ ವಸತಿ. ಇದು ಈ ನಿಲಯದ ಹಿಂದೆ ಇದ್ದ ತತ್ವ.

ಸುಮಾರು ಇದೇ ಕಾಲಕ್ಕೆ ಅವರ ಇನ್ನೊಂದು ಹಂಬಲವೂ ಕಾರ್ಯರೂಪಕ್ಕೆ ಬಂತು. ಗ್ರಾಮಸೇವೆಯ ವಿಚಾರಗಳಿಗೆ ಮೀಸಲಾದ ಪತ್ರಿಕೆ—ಗ್ರಾಮಸೇವಾ ಪತ್ರಿಕೆ. 1935ರ ವರೆಗೆ ಭದ್ರಯ್ಯನವರು ಈ ಮಾಸಪತ್ರಿಕೆಯ ಸಂಪಾದಕರಾಗಿದ್ದರು.

ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಳ್ಳುವುದಂತೂ ಇದ್ದೇ ಇತ್ತು. ಸರ್ಕಾರ ಅವರ ಮೇಲೆ ಕಣ್ಣಿಟ್ಟಿತು. ಪತ್ರಿಕೆಯ ಮೇಲೆ ಸರ್ಕಾರದ ಗದಾಪ್ರಹಾರ. ಪತ್ರಿಕೆ ನಿಂತು ಹೋಯಿತು. ವಿವೇಕಾನಂದ ವಿದ್ಯಾರ್ಥಿನಿಲಯವೂ ತಟಸ್ಥವಾಯಿತು.

ಸೋಲೊಪ್ಪಲಿಲ್ಲ ಭದ್ರಯ್ಯ. 'ಕಿರುತೆರೆ' ಎಂಬ ಪತ್ರಿಕೆಯನ್ನು ಸ್ವಲ್ಪಕಾಲ

ನಡೆಸಿದರು. ಗ್ರಾಮಸೇವಾ ವಿದ್ಯಾರ್ಥಿನಿಲಯ ತೆರೆದರು. ಅನೇಕ ಶ್ರೀಮಂತರು ಅದಕ್ಕೆ ಹಣ ನೀಡುತ್ತಿದ್ದರು. ಸಂತೇಪೇಟೆಯ ವರ್ತಕರಿಂದ ಧಾರಾಳವಾಗಿ ಧಾನ್ಯ ಸಂಗ್ರಹ ವಾಗುತ್ತಿತ್ತು. ಈ ಕಾಲದಲ್ಲಿ ಅವರ ದಸ್ತಗಿರಿ ಮಾಡಿ ಸರ್ಕಾರ ಅವರನ್ನು ತೀರ್ಥಹಳ್ಳಿ ಯಲ್ಲಿಟ್ಟಿತ್ತು. ಅವರು ಬಿಡುಗಡೆಯಾಗಿ ಬರುವ ವೇಳೆಗೆ ಗ್ರಾಮಸೇವಾ ವಿದ್ಯಾರ್ಥಿ ನಿಲಯ ಮುಚ್ಚಿಹೋಗಿತ್ತು.

ಭದ್ರಯ್ಯನವರು ಸಹಜವಾಗಿಯೇ ಬರವಣಿಗೆಯ ಅಭ್ಯಾಸ ಬೆಳೆಸಿಕೊಂಡಿದ್ದರು. ಅವರಿಗೆ ಬರವಣಿಗೆ ಕೇವಲ ಪೊತ್ತುಕಳೆಯುವ ಹವ್ಯಾಸವಲ್ಲ. ಸ್ವಂತ ಸಂತೋಷ ಕ್ಕೆಂದೇ ಬರೆದಂಥವಲ್ಲ, ಅವರ ಕೃತಿಗಳು. ಅವು ಭದ್ರಯ್ಯನವರಿಗೆ ಸಂತೋಷ ಕೊಟ್ಟಿಲ್ಲ ವೆಂದಲ್ಲ. ಓದುಗರಲ್ಲಿ, ಮುಖ್ಯವಾಗಿ ಮಕ್ಕಳಲ್ಲಿ, ಅಕ್ಷರ ಕಲಿತವರಲ್ಲಿ, ತಿಳಿವು ಮೂಡಿಸು ವುದು ಅವರ ಮುಖ್ಯ ಉದ್ದೇಶ. ತಮಗೆ ಸಂತೋಷ, ತಿಳಿವು ನೀಡಿದ ಅನುಭವ ವನ್ನು ಇತರರಿಗೂ ದೊರಕಿಸಿಕೊಡಬೇಕು.

'ಮಹಾತ್ಮಾ ಗಾಂಧಿ' ಎಂಬುದು ಅವರು ಬರೆದ ಒಂದು ಕೃತಿ. 'ಅಶೋಕ ಚಕ್ರವರ್ತಿ', 'ಪ್ರಪಂಚದ ಕಥೆ', 'ಸಾಹಸ ಕಥೆಗಳು', 'ಎವರೆಸ್ಟ್ ಆರೋಹಣ', 'ಧ್ರುವ ಸಂಶೋಧನೆ' 'ಸಾಗರ ಸಂಶೋಧನೆ', 'ಯಕ್ಷ ನೌಕೆ', 'ನಿಮ್ಮ ದೇಹ'—ಇವು ಇತರ ಕೆಲವು ಕೃತಿಗಳು. ಇವುಗಳ ಹೆಸರುಗಳಿಂದಲೇ ಈ ಪುಸ್ತಕಗಳನ್ನು ಬರೆಯುವುದರ ಹಿಂದಿದ್ದ ಉದ್ದೇಶವನ್ನು ತಿಳಿಯಬಹುದು. ಸರಳ ನೇರ ಶೈಲಿ ಪೂರ್ವಾಗ್ರಹ ದೂರವಾದ, ವಸ್ತುನಿಷ್ಠ ದೃಷ್ಟಿ. ಇವು ಈ ಕೃತಿಗಳ ಲಕ್ಷಣಗಳು. 'ಮಹಾತ್ಮಾ ಗಾಂಧಿ', 'ಅಶೋಕ ಚಕ್ರವರ್ತಿ'—ಇವು ಜೀವನಚರಿತ್ರೆಗಳಾದರೆ, 'ಎವರೆಸ್ಟ್ ಆರೋಹಣ' ಮುಂತಾದವು ಸಾಹಸ ಕಥನಗಳು, ಪ್ರದೇಶ ಪರಿಶೋಧನೆಯ ಪರಿಚಯಗಳು 'ಯಕ್ಷ ನೌಕೆ' ಎಂಬುದು ಆಕಾಶದಲ್ಲಿ ಹಾರಾಡುವ ತಟ್ಟೆಗಳನ್ನು ಕುರಿತ ಕುತೂಹಲಜನಕ ವಾದ ಒಕ್ಕಣೆ. 'ನಿಮ್ಮ ದೇಹ', 'ಜೀವ ಸಂತಾನ ಸಾಗಿದ ಬಗೆ' ಎಂಬ ಪುಸ್ತಕಗಳು ಆರೋಗ್ಯಶಾಸ್ತ್ರ, ಜೀವವಿಜ್ಞಾನ ಕುರಿತ ಕೃತಿಗಳು 'ನಡೆದು ನೋಡು ಕೊಡಗಿನ ಬೆಡಗು' ಒಂದು ಪ್ರವಾಸ ಕಥನ. 'ಆಕಾಶದ ಆಶ್ಚರ್ಯ' ಎಂಬ ಖಗೋಳಶಾಸ್ತ್ರ ಕುರಿತ ಕೃತಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ ಪ್ರಾಪ್ತವಾಯಿತು. 'ಗಾಂಧೀ ಪ್ರವಾಣ ವಚನಗಳು', 'ಕುಮಾರವ್ಯಾಸನ ಕರ್ಣ', 'ಅರ್ಪಣೆ'—ಇವು ಭದ್ರಯ್ಯನವರು ಸಂಪಾದಿಸಿ ಪ್ರಕಟಿಸಿದ ಕೃತಿಗಳು. ಗಾಂಧೀಜಿಯ ಎಪ್ಪತ್ತೊಂದನೆಯ ಜನ್ಮದಿನೋತ್ಸವ ಸಂದರ್ಭದಲ್ಲಿ ಅರ್ಪಿಸಿದ ಕೃತಿ ಅರ್ಪಣೆ.

ನ. ಭದ್ರಯ್ಯನವರ ಈ ಎಲ್ಲ ಕೃತಿಗಳೂ ಬಹಳ ಜನಪ್ರಿಯವಾದುವು. ವಿದ್ಯಾರ್ಥಿ ಗಳ ಮೆಚ್ಚುಗೆ ಗಳಿಸಿದುವು ಒಂದೆರಡು ಕೃತಿಗಳು ಪಠ್ಯಪುಸ್ತಕಗಳೂ ಆಗಿದ್ದುವು. ಸಹಜವಾಗಿಯೇ ಭದ್ರಯ್ಯನವರಿಗೆ ಒಂದಿಷ್ಟು ಹಣ ಬಂತು ಭದ್ರಯ್ಯನವರಿಗೆ ಹಣ ಒಂದು ಸಾಧನವೇ ಹೊರತು, ಅದೇ ಸಾಧನೆಯಲ್ಲ, ಅಂತಿಮ ಗುರಿಯಲ್ಲ. 'ಒದುಕು

ಸರಳ, ಬಗೆ ಗಂಭೀರ' —Simple living, high thinking—ಎಂಬ ಗಾಂಧೀ ಸೂತ್ರವನ್ನು ನಿಷ್ಠೆಯಿಂದ ಅನುಷ್ಠಾನಿಸುತ್ತಿದ್ದ ಭದ್ರಯ್ಯನವರು ಆ ಹಣವನ್ನು ಸದುಪಯೋಗಪಡಿಸಿಕೊಂಡರು. ಒಮ್ಮೆ ಬಂದ ಹಣದಿಂದ ಇಂಗ್ಲೆಂಡ್ ಪ್ರವಾಸ ಮಾಡಿದರು—ಹಡಗಿನಲ್ಲಿ ಪ್ರಯಾಣ. ಕೈಯಲ್ಲಿ ಉಳಿದ ಹಣದಿಂದ ಅವರು ಅಲ್ಲಿ ಮುದ್ರಣ ಯಂತ್ರ ಕೊಂಡು ತಂದರು. ಗ್ರಾಮಸೇವಾ ಪ್ರೆಸ್ ಪ್ರಾರಂಭಿಸಿದರು. ಸಿದ್ಧವನಹಳ್ಳಿ ಕೃಷ್ಣಶರ್ಮರ ಅನೇಕ ಪುಸ್ತಕಗಳ ಮುದ್ರಣವಾದ್ದು ಈ ಮುದ್ರಣಾಲಯದಲ್ಲಿ. ಅವರು ಸಂಪಾದಿಸಿದ 'ಅರ್ಪಣೆ' ಅಚ್ಚಾದ್ದೂ ಇಲ್ಲೇ.

ಆದರೆ ಸರ್ಕಾರಕ್ಕೆ ಅಪ್ರಿಯವಾದ ಸಾಮಗ್ರಿಯೂ ಇಲ್ಲಿ ಅಚ್ಚಾಗುತ್ತಿದೆಯೆಂಬ ಅಂಜಿಕೆಯಿಂದ ಆಗಿನ ಸರ್ಕಾರ ಅದರ ಜಪ್ತಿಗಾಗಿ ಪ್ರಯತ್ನ ನಡೆಸಿತ್ತು. ಭದ್ರಯ್ಯನವರು ಒಂದು ರೀತಿಯಲ್ಲಿ ಅಜಾತಶತ್ರು. ಸರ್ಕಾರದ ಗುಪ್ತಚಾರಿ ಪೋಲೀಸರೇ ಅನೇಕ ಸಾರಿ ಅವರಿಗೆ ಮುಂದಾಗಿ ಸರ್ಕಾರದ ಅಂಥ ಆಜ್ಞೆಯನ್ನು ತಿಳಿಸುತ್ತಿದ್ದರಂತೆ. ಕೊನೆಗೂ ಭದ್ರಯ್ಯನವರು ಆ ಮುದ್ರಣಾಲಯವನ್ನು ಮುಚ್ಚಬೇಕಾಯಿತು. ಮತ್ತೊಮ್ಮೆ ಅವರು ಲಂಡನ್ನಿಗೆ ಹೋಗಿ ಬಂದರು. ಇನ್ನೊಂದು ಅಚ್ಚುಕೂಟ ತೆರೆದರು— ಚೇತನ ಮುದ್ರಾಲಯ. ಅವರು ಕಟ್ಟಿಕೊಂಡಿದ್ದ ಹಲವಾರು ಕಲಾಪಗಳಿಂದಾಗಿ ಅದನ್ನು ಅವರು ತಮ್ಮ ಆದರ್ಶಕ್ಕೆ ಅನುಸಾರವಾಗಿ ನಡೆಸಲಾಗಲಿಲ್ಲ. ಕೊನೆಗೆ ಅದನ್ನು ತಮ್ಮ ತಮ್ಮಂದಿರಲ್ಲೊಬ್ಬರಿಗೆ ವಹಿಸಿಕೊಟ್ಟು ಕೈತೊಳೆದುಕೊಂಡರು. ಮುದ್ರಣಾಲಯವಾಗಲಿ, ಪುಸ್ತಕ ಲೇಖನವಾಗಲಿ, ಪ್ರಕಾಶನವಾಗಲಿ ಎಂದೂ ಅವರಿಗೆ ಒಂದು ವ್ಯವಹಾರವಾಗಿರಲಿಲ್ಲ. ತಮ್ಮ ಗುರಿ ಸಾಧನೆಗೆ ಅವೆಲ್ಲ ಮಾರ್ಗಗಳು.

ರಚನಾತ್ಮಕ ಕಾರ್ಯಕ್ರಮ, ಗ್ರಾಮಸುಧಾರಣೆ—ಇವುಗಳಲ್ಲಿ ಭದ್ರಯ್ಯನವರಿಗೆ ವಿಶೇಷವಾದ ಆಸಕ್ತಿ. ರಾಜಕೀಯ ದೊಂಬರಾಟವಾಗಲಿ, ಪ್ರಚಾರದ ಬೊಬ್ಬೆಯಾಗಲಿ ಅವರಿಗೆ ಎಂದೂ ಸೇರುತ್ತಿರಲಿಲ್ಲ. ಮೂಲೆಯಲ್ಲಿ ಕುಳಿತು ತಾವು ನಂಬಿದ ತತ್ವಗಳ ಸಾಧನೆಗಾಗಿ ಕಾರ್ಯಪ್ರವೃತ್ತರಾಗುವುದೇ ಅವರಿಗೆ ತುಂಬ ಪ್ರಿಯ. ವಯಸ್ಕರ ಶಿಕ್ಷಣ ಚಳವಳಿ ಅವರಿಗೆ ಹೇಳಿ ಮಾಡಿಸಿದಂತಿತ್ತು.

ಆ ಕಾಲದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕೆಲವು ಅಧ್ಯಾಪಕರು ವಯಸ್ಕರ ಶಿಕ್ಷಣ ಚಳವಳಿಯಲ್ಲಿ ವಿಶೇಷವಾದ ಆಸಕ್ತಿ ತಳೆದಿದ್ದರು. ಪ್ರೊ. ಈಗ್‍ಲ್‍ಟನ್, ಟಿ. ಕೃಷ್ಣಮೂರ್ತಿ, ಎಸ್. ವಿ. ಶ್ರೀನಿವಾಸರಾವ್ ಮುಂತಾದವರನ್ನು ಭದ್ರಯ್ಯನವರೂ ಕೂಡಿಕೊಂಡರು. ಎಲ್ಲ ಪ್ರಗತಿಗೂ ವಿದ್ಯೆಯೇ ಮೂಲ ಎಂಬುದನ್ನು ಭದ್ರಯ್ಯನವರು ಆ ವೇಳೆಗಾಗಲೇ ಕಂಡುಕೊಂಡಿದ್ದರು. ವಿದ್ಯೆ ನೀಡುವುದೆಂದರೆ ವಿಶ್ವಕ್ಕೆ, ವಿಚಾರಕ್ಕೆ, ಜ್ಞಾನವಿಜ್ಞಾನಗಳಿಗೆ ಕಿಟಕಿ ತೆರೆದಿಟ್ಟಂತೆ. ತನ್ನ ಇರವಿನ ಅರಿವು ತನಗೆ ಆದಾಗಲೇ ವ್ಯಕ್ತಿಯಲ್ಲಿ ಉದಿಸುತ್ತದೆ, ಪುರೋಗಮನದ ಅಭೀಪ್ಸೆ. ಈ ಚಳವಳಿಯಲ್ಲಿ ಅವರು ಪೂರ ಧುಮುಕಿದರು. ಮೈ, ಮನಸ್ಸು, ಆಯುಸ್ಸು ಎಲ್ಲವನ್ನೂ

ಇದಕ್ಕೆ ಅರ್ಪಿಸಿಕೊಂಡರು. ಆಗಿನ ಮೈಸೂರು ಸಂಸ್ಥಾನದಲ್ಲಿ ವಯಸ್ಕರ ಶಿಕ್ಷಣ ಚಳವಳಿಯನ್ನು ಬೆಳೆಸಿದ ಅಗ್ರಗಣ್ಯರಲ್ಲಿ ಭದ್ರಯ್ಯನವರೂ ಒಬ್ಬರು ಎಂಬುದನ್ನು ಎಲ್ಲರೂ ಬಲ್ಲರು. ಯಾವುದೇ ಲಾಭದ, ಕೀರ್ತಿಯ, ಅಧಿಕಾರದ ಆಸೆಯಿಲ್ಲದೆ ಅವರು ಇದಕ್ಕಾಗಿ ದುಡಿದರು. ಹೊಣೆಯೊಂದಿಗೆ ಅಧಿಕಾರ—ಅಥವಾ ಅಧಿಕಾರದೊಂದಿಗೆ ಹೊಣೆ—ಬಂತು. ಅವರು ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿಯೂ ಅಧ್ಯಕ್ಷರಾಗಿಯೂ ಹಲವು ವರ್ಷ ದುಡಿದರು. ಶಿಕ್ಷಣ ಕೇವಲ ಓದು ಬರಹವಲ್ಲ. ನಿತ್ಯ ಜೀವನದೊಂದಿಗೆ ಹೆಣೆದುಕೊಳ್ಳದವರೆ ಅದರಿಂದ ಹೆಚ್ಚಿನ ಪ್ರಯೋಜನವಿಲ್ಲ. ಓದಿಗೂ, ಬದುಕಿಗೂ, ಕೆಲಸಕ್ಕೂ ಸಂಬಂಧವಾದಾಗಲೇ, ಒಂದು ಇನ್ನೊಂದಕ್ಕೆ ಪೋಷಕವಾದಾಗಲೇ ಶಿಕ್ಷಣದ ಸಾರ್ಥಕತೆ. ಇಂದು ಬಹಳವಾಗಿ ಕೇಳಿ ಬರುತ್ತಿರುವ ಕ್ರಿಯಾತ್ಮಕ ಶಿಕ್ಷಣವನ್ನು ಅವರು ಆಗಲೇ ಪ್ರಯೋಗಮಾಡಿ ತೋರಿಸಿ ಕೊಟ್ಟರು. ಹಳೆಯ ಮೈಸೂರಿನಲ್ಲಿ ಜಿಲ್ಲೆಗೊಂದರಂತೆ ಅವರು ಸ್ಥಾಪಿಸಿದ ವಿದ್ಯಾಪೀಠಗಳು ಅವರ ಈ ನಂಬಿಕೆಯ ಫಲ.

ಭದ್ರಯ್ಯನವರ ಈ ಕೆಲಸ ವಿಶ್ವದ ಗಮನ ಸೆಳೆಯದೆ ಇರಲಿಲ್ಲ. ವಿಶ್ವಸಂಸ್ಥೆಯ ಶೈಕ್ಷಣಿಕ ವೈಜ್ಞಾನಿಕ ಸಾಂಸ್ಕೃತಿಕ ಸಂಸ್ಥೆಯ (ಯುನೆಸ್ಕೊ) ಕಲಾಪಗಳಲ್ಲಿ ವಯಸ್ಕರ ಶಿಕ್ಷಣವೂ ಒಂದು. ಆ ಸಂಸ್ಥೆ ಭದ್ರಯ್ಯನವರ ಸದ್ದಿಲ್ಲದ ಸೇವೆಯನ್ನು ಗುರುತಿಸಿ ಅವರನ್ನು ಈ ವಿಚಾರದಲ್ಲಿ ಸಲಹೆಗಾರರಾಗಿ ನೇಮಿಸಿಕೊಂಡಿತು. ವಯಸ್ಕರ ಶಿಕ್ಷಣ ಚಳವಳಿಯ ಅಧ್ಯಯನಕ್ಕಾಗಿ ಅವರು ಸಂಸ್ಥೆಯ ಪರವಾಗಿ ಅನೇಕ ಅಭಿವೃದ್ಧಿಶೀಲ ದೇಶಗಳಲ್ಲಿ ದುಡಿದರು. ಯುನೆಸ್ಕೊ ಮಾತ್ರವೇ ಅಲ್ಲ; ಫೋರ್ಡ್ ಪ್ರತಿಷ್ಠಾನ, ಗ್ರಾಮೀಣ ಶಿಕ್ಷಣ ಕುರಿತ ಅಂತರರಾಷ್ಟ್ರೀಯ ಸಮಿತಿ–ಇಂಥ ಸಂಸ್ಥೆಗಳು ಕೂಡ ಭದ್ರಯ್ಯನವರ ಸೇವೆಯನ್ನು ಬಳಸಿಕೊಂಡುವು. ಈ ಸಂಸ್ಥೆಗಳ ಆಶಯದಂತೆ ಅವರು ಆಫ್ರಿಕದ ಕ್ಯಾಮರೂನ್, ಪಶ್ಚಿಮ ಏಷ್ಯದ ಅರಬ್ ದೇಶಗಳು, ಇಂಡೊನೇಷ್ಯ, ಇರಾನ್, ಕೆನ್ಯ ಮುಂತಾದ ಅನೇಕ ದೇಶಗಳಿಗೆ ತಮ್ಮ ಜ್ಞಾನ ಅನುಭವಗಳ ಪ್ರಯೋಜನ ದೊರಕಿಸಿಕೊಟ್ಟರು. ಜೊತೆಗೆ ಅವರು ತಾವಾಗಿಯೇ ಅನೇಕ ದೇಶಗಳಲ್ಲಿ ಸಂಚರಿಸಿದರು. ವಯಸ್ಕರ ಶಿಕ್ಷಣ ಕುರಿತ ಅನೇಕ ಸಭೆ, ಸಮ್ಮೇಳನ, ಗೋಷ್ಠಿ, ವಿಚಾರಸಂಕಿರಣಗಳಲ್ಲಿ ಭಾಗವಹಿಸಿದರು. ಸಾಕ್ಷರತೆಯ ಪ್ರಸಾರ, ನವ ಸಾಕ್ಷರರಿಗೆ ಅಗತ್ಯವಾದ ಸಾಹಿತ್ಯದ ಸೃಷ್ಟಿ, ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಹಿಂದುಳಿದ ಜನರ ಮುನ್ನಡೆಯ ಸಾಧನೆ–ಇವೇ ಭದ್ರಯ್ಯನವರ ಮುಖ್ಯ ಕಾಳಜಿಗಳಾದುವು.

ನಮ್ಮ ಅನೇಕ ಸಮಾಜ ಸುಧಾರಕರೂ ಶಿಕ್ಷಣ ಪ್ರೇಮಿಗಳೂ ಸಾಮಾನ್ಯವಾಗಿ ಪ್ರಚಾರಪ್ರಿಯರು, ಪ್ರಶಂಸೆ ಪ್ರಶಸ್ತಿಗಳ ಮೇಲೆ ಕಣ್ಣಿಟ್ಟವರು. ಇದೊಂದು ಮಾನವ ದೌರ್ಬಲ್ಯ. ಆದರೆ ಭದ್ರಯ್ಯನವರು ಈ ಮಾತಿಗೆ ಅಪವಾದ. ಅವರೆಂದೂ ತಮಗಾಗಲಿ ತಾವು ಮಾಡುತ್ತಿದ್ದ ಕೆಲಸಕ್ಕಾಗಲಿ ಪ್ರಚಾರ ಬಯಸಿದವರಲ್ಲ. ಒಳ್ಳೆಯ ಕೆಲಸ

ಕಸ್ತೂರಿಯ ಪರಿಮಳದಂತೆ, ಅದು ತಾನಾಗಿಯೇ ಸುತ್ತೆಲ್ಲ ಪಸರಿಸುತ್ತದೆ. ಯಾರಿಗಾಗಿ ಆ ಕೆಲಸ ಕೈಗೊಳ್ಳಲಾಗುವುದೋ ಅವರ ಪ್ರೀತಿ ಅಭಿಮಾನ ಮೆಚ್ಚುಗೆಗಳಿಗಿಂತ ಬೇರೇನು ಬೇಕು ? ಅವರ ವಿಕಾಸವನ್ನು ನೋಡುವುದೇ ಆನಂದ. ಭದ್ರಯ್ಯ ಅವರು ಯಾವ ಯಾವ ದೇಶಗಳಲ್ಲಿ ಸಾಕ್ಷರತೆ ಹಾಗೂ ಸಾಹಿತ್ಯ ರಚನೆಯ ಕಾರ್ಯಕ್ಕಾಗಿ ನಿಯೋಜಿತ ರಾಗಿದ್ದರೋ, ಅಲ್ಲಲ್ಲಿಯ ಜನರೊಂದಿಗೆ ಬೆರೆಯುತ್ತಿದ್ದರು ; ಅವರ ಕಷ್ಟಸುಖಗಳಲ್ಲಿ ಭಾಗಿಗಳಾಗುತ್ತಿದ್ದರು. ಅವರ ವೈಯಕ್ತಿಕ ಹಾಗೂ ಕೌಟುಂಬಿಕ ಸಮಸ್ಯೆಗಳನ್ನು ಪರಿಹರಿಸಲು ಯತ್ನಿಸುತ್ತಿದ್ದರು; 'ನೀವು ನಮ್ಮನ್ನಗಲಿ ಹೋಗಬೇಡಿ, ಇಲ್ಲೇ ಇರಿ' ಎಂದು ಅವರು ಒತ್ತಾಯ ಮಾಡುವ ಮಟ್ಟಿಗೆ ಭದ್ರಯ್ಯನವರು ಅವರ ಪ್ರೀತಿ ವಿಶ್ವಾಸ ಗಳಿಸುತ್ತಿದ್ದರು. ಆ ದೇಶಗಳ ಸರ್ಕಾರಗಳು ತಾವಾಗಿಯೇ ಆ ಸಂಸ್ಥೆಗಳಿಗೆ ಬರೆದು, ಅವರ ಸೇವೆಯನ್ನು ಇನ್ನಷ್ಟು ಕಾಲ ಮುಂದುವರಿಸಬೇಕೆಂದು ಕೋರುತ್ತಿದ್ದುವು. ಇಂಡೊನೇಷ್ಯಕ್ಕೆ ಒಂದು ವರ್ಷಕ್ಕೆಂದು ಹೋದ ಭದ್ರಯ್ಯನವರು ಅಲ್ಲಿ ಮೂರು ವರ್ಷ ಇದ್ದರು. ಕೆನ್ಯದಲ್ಲಿ ಒಂದೇ ವರ್ಷ ಇರುತ್ತೇನೆಂದರೆ ಅಲ್ಲಿಯವರು ಐದು ವರ್ಷ ಅವರನ್ನು ತಮ್ಮಲ್ಲಿರಿಸಿಕೊಂಡರು. ಎಲ್ಲೆಲ್ಲೂ ಸರ್ಕಾರದ, ಜನತೆಯ ಹೊಗಳಿಕೆ, ಕೃತಜ್ಞತೆ, ಅನಂದಬಾಷ್ಪ. ಇದು ಎಲ್ಲರಿಗೂ ಲಭ್ಯವಾಗುವ ಭಾಗ್ಯವಲ್ಲ. ಇದರ ಹಿಂದೆ ಇದ್ದ ಗುಣಗಳೆಂದರೆ ಭದ್ರಯ್ಯನವರ ಸೇವಾಕಾಂಕ್ಷೆ, ನಿಷ್ಠೆ, ಪ್ರಾಮಾಣಿಕತೆ, ತಮ್ಮ ಕೆಲಸದಲ್ಲೂ ಸುತ್ತಣ ಜನರಲ್ಲೂ ತಾದಾತ್ಮ್ಯ.

ಯಾವುದೇ ದೇಶಕ್ಕೆ ಹೋದರೂ ಅಲ್ಲಿಯ ಜನರಲ್ಲಿ ಒಂದಾಗಿ ಅವರ ಕಷ್ಟ ಸುಖಗಳಲ್ಲಿ ಭಾಗಿಯಾಗುವುದು ಭದ್ರಯ್ಯನವರಿಗಿದ್ದ ಒಂದು ಸ್ವಭಾವ. ವಯಸ್ಕರ ಶಿಕ್ಷಣವೆಂಬುದು ಕೇವಲ ಓದುಬರಹ ಕಲಿಸುವುದಲ್ಲ ಎಂಬುದನ್ನು ಅವರು ಬಾಯಲ್ಲಿ ಹೇಳುವುದು ಮಾತ್ರವಲ್ಲ, ಅಂತೆಯೇ ನಂಬಿ ನಡೆಯುತ್ತಿದ್ದರು. ಜನಜೀವನವನ್ನು ಸಂಪದ್ಭರಿತವಾಗಿ ಮಾಡುವುದು ಹೇಗೆಂಬುದೇ ಸದಾ ಅವರ ಚಿಂತೆ. ಹಲವೆಡೆಗಳಲ್ಲಿ ಅವರು ಶಿಕ್ಷಣದ ಜೊತೆಗೆ, ವಯಸ್ಕರ ಶಿಕ್ಷಣ ಕುರಿತ ತರಬೇತಿ ಕೇಂದ್ರಗಳನ್ನು ನಿರ್ದೇಶಿಸುವುದರ ಜೊತೆಗೆ ಅಲ್ಲಿಯ ಜನರ ಜೀವನೋಪಾಯದ ಸಮಸ್ಯೆಗಳ ಪರಿಹಾರಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದೂ ಉಂಟು, ಜೀವನಕ್ರಮ ಸುಧಾರಣೆಗೆ ಶ್ರಮಿಸಿದ್ದೂ ಉಂಟು, ಆ ಜನರ ಕಲಾಪ್ರಕಾರಗಳಲ್ಲಿ ಆಸಕ್ತಿ ವಹಿಸಿ ಅವರಿಗೆ ತಮ್ಮ ನಾಡಿನ ಜನರ ಕಲೆಗಳ ಪರಿಚಯ ಮಾಡಿಕೊಡುತ್ತಿದ್ದುದೂ ಉಂಟು. ಒಮ್ಮೆ ಇಂಡೊನೇಷ್ಯದ ಗ್ರಾಮಪ್ರದೇಶದಲ್ಲಿ ಪ್ರವಾಸ ಮಾಡುತ್ತಿದ್ದಾಗ ಒಂದು ಹಳ್ಳಿಯಲ್ಲಿ ಹೆಂಗಸೊಬ್ಬಳು ಒನಕೆಯಿಂದ ಬತ್ತ ಕುಟ್ಟುತ್ತಿದ್ದುದು ಕಂಡುಬಂತು. ಅಲ್ಲಿಯ ಜನ ಕಲಾವಂತರು. ಆದರೆ ಬತ್ತ ಕುಟ್ಟುವ ವಿಚಾರದಲ್ಲಿ ಮಾತ್ರ ಕೌಶಲ, ಕಲಾಸಂತಿಕೆಗಳನ್ನೇಕೆ ಅವರು ಪ್ರದರ್ಶಿಸದೆ ಆಯಾಸವಾಗುವ ರೀತಿಯಲ್ಲಿ ಕುಟ್ಟುತ್ತಿದ್ದಾರೆ ಎನಿಸಿತು ಭದ್ರಯ್ಯನವರಿಗೆ. ಬತ್ತವನ್ನು ಸುಲಭವಾಗಿ, ಆಯಾಸವಾಗದಂತೆ ಕುಟ್ಟುವ

ರೀತಿಯನ್ನು ಅವರು ತೋರಿಸಿಕೊಟ್ಟರು. ಅಲ್ಲಿಯ ಜನಕ್ಕೂ, ಭದ್ರಯ್ಯನವರ ಜೊತೆ ಗಾರರಿಗೂ ಪರಮಾಶ್ಚರ್ಯ. ಪ್ರತಿಯೊಂದು ಹಳ್ಳಿಯಲ್ಲೂ ನೀವು ಈ ಪ್ರದರ್ಶನ ವನ್ನೂ ನೀಡಿ ಎಂದು ಅವರು ಭದ್ರಯ್ಯನವರಿಗೆ ದುಂಬಾಲು ಬಿದ್ದರಂತೆ.

ಭದ್ರಯ್ಯನವರಿಗೆ ನಮ್ಮ ಜನಪದ ಕಲಾಪ್ರಕಾರಗಳ ಪರಿಚಯ ಚೆನ್ನಾಗಿತ್ತು. ಇಂಡೊನೇಷ್ಯದಲ್ಲಿ ಹಲವೆಡೆ ಇಂದಿಗೂ ರಾಮಾಯಣ ಮಹಾಭಾರತ ಕಥೆಗಳನ್ನು ಆಧರಿಸಿದ ತೊಗಲುಗೊಂಬೆ ಪ್ರದರ್ಶನಗಳು ನಡೆಯುವುವಂತೆ, ಇಂಥ ಒಂದು ಪ್ರದರ್ಶನದಲ್ಲಿ ಅವರು ಮುಖ್ಯ ಅತಿಥಿಯಾಗಿದ್ದರು. ಆಗ ಅವರು ನಮ್ಮಲ್ಲಿಯ ತೊಗಲುಗೊಂಬೆ ಆಟವನ್ನು ವಿವರಿಸಿದರು. ಆ ಜನಕ್ಕೆ ಕುತೂಹಲ ಕೆರಳಿತು, ಅವರ ಒತ್ತಾಯಕ್ಕೆ ಕಟ್ಟುಬಿದ್ದು ಭದ್ರಯ್ಯನವರು ಪ್ರದರ್ಶನ ನೀಡಿದರು. ಇಡೀ ದಿನವೇ ಅವರ ತೊಗಲುಗೊಂಬೆಯಾಟಕ್ಕೆ ಮೀಸಲಾಯಿತಂತೆ.

ಎಂಥ ಪ್ರಸಂಗದಲ್ಲೂ ಸಹನೆ ಕಳೆದುಕೊಳ್ಳದ, ಭೀತಿಗೆ ಒಳಗಾಗದ ಪ್ರಸಂಗಾವ ಧಾನ ಭದ್ರಯ್ಯನವರದು, ಅವರ ಪ್ರವಾಸಗಳಲ್ಲಿ ಅನೇಕ ವೇಳೆ ಅವರು ದಾರಿತಪ್ಪಿದ್ದೂ ಪತ್ನಿಯೊಂದಿಗೆ ಅಪರಿಚಿತ ಹಾಗೂ ಅಪಾಯಕಾರಿ ಸನ್ನಿವೇಶದಲ್ಲಿ ಸಿಕ್ಕಿಬಿದ್ದದ್ದೂ ಉಂಟು. ಅಂಥ ಸಂದರ್ಭಗಳಲ್ಲಿ ಅವರು ಧೈರ್ಯಗೆಡದೆ ಪರಿಸ್ಥಿತಿಯಿಂದ ಪಾರಾಗು ತ್ತಿದ್ದರು. ಇದನ್ನೆಲ್ಲ ಅವರು ತಮ್ಮ ಪ್ರವಾಸ ಕಥನಗಳಲ್ಲಿ ಹೇಳಿಕೊಂಡಿದ್ದಾರೆ.

ನ. ಭದ್ರಯ್ಯನವರದು ನೇರ ಸರಳವಾದ, ಮುಚ್ಚುಮರೆಯಿಲ್ಲದ ಜೀವನ. ಅವರ ಬದುಕು ಒಂದು ತೆರೆದ ಪುಸ್ತಕ. ಅವರು ಯಾರಿಗೂ ಏನೂ ಉಪದೇಶ ಮಾಡು ತ್ತಿರಲಿಲ್ಲ. ತಮ್ಮ ತಮ್ಮಂದಿರಿಗೆ ಕೂಡ. ದೊಡ್ಡ ದೊಡ್ಡ ಆದರ್ಶಗಳ ಮಾತಾಡದೆ, ಅವನ್ನು ನಂಬಿದಂತೆ ನಡೆಯುವುದಷ್ಟೇ ಅವರ ರೀತಿ. ಇತರರ ಕಷ್ಟದಲ್ಲಿ ಸದ್ದಿಲ್ಲದೆ ನೆರವು ನೀಡುವುದು, ಅನಂತರ ಅದನ್ನು ಮರೆತುಬಿಡುವುದು ಅವರ ಗುಣ. ಈಚೆಗೆ ಅವರೊಮ್ಮೆ ಅನಾರೋಗ್ಯದಿಂದ ಆಸ್ಪತ್ರೆ ಸೇರಿದಾಗ ಅದೇ ಆಸ್ಪತ್ರೆಯಲ್ಲಿ ಬೇರೊಂದೆಡೆ ಅವರ ಪರಿಚಿತರೊಬ್ಬರ ಬಂಧುಗಳು ಮಲಗಿದ್ದರು. ಆ ಪರಿಚಿತರು ಭದ್ರಯ್ಯನವರನ್ನು ನೋಡಿದಾಗ ತಮ್ಮ ಕಷ್ಟ ಹೇಳಿಕೊಂಡರು. ಆರ್ಥಿಕವಾಗಿ ಅವರು ತೊಂದರೆಯಲ್ಲಿ ದ್ದರು. ಭದ್ರಯ್ಯನವರು ಹಿಂದುಮುಂದು ನೋಡದೆ ಅವರಿಗೆ ಬೇಕಾದಷ್ಟು ಹಣಕ್ಕೆ ಚೆಕ್ ಬರೆದುಕೊಟ್ಟೇಬಿಟ್ಟರು. ಆ ಮೇಲೆ ಆ ಬಗ್ಗೆ ಚಕಾರವನ್ನೂ ಯಾರಲ್ಲೂ ಎತ್ತ ಲಿಲ್ಲ. ಎಷ್ಟೋ ಕಾಲವಾದ ಮೇಲೆ ಆ ಉಪಕೃತರು ಅವರಲ್ಲಿಗೆ ಬಂದು ಆ ಹಣವನ್ನು ಹಿಂದಿರುಗಿಸಿದಾಗ ಭದ್ರಯ್ಯನವರಿಗೇ ಅದರ ನೆನಪಿರಲಿಲ್ಲ. ಮನೆಯವರಿಗೂ ಆ ಸಂಗತಿ ತಿಳಿದದ್ದು ಆಗಲೇ. ಅವರ ಬದುಕಿನಲ್ಲಿ ಇಂಥ ಪ್ರಸಂಗಗಳು ಎಷ್ಟೋ.

ಅಂತರರಾಷ್ಟ್ರೀಯ ಸಂಸ್ಥೆಗಳ ಪ್ರತಿನಿಧಿಯಾಗಿ ಹಲವಾರು ದೇಶಗಳಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗಿ ಸಂಚಾರ ಮಾಡುತ್ತಿದ್ದಾಗಲೂ ತಮ್ಮ ಹಿರಿಮೆ ಗರಿಮೆಗಳ ಪರಿವೆಯೇ ಇಲ್ಲದೆ. ಅವನ್ನು ಇತರರಿಗೆ ತೋರಗೊಡದೆ ಇದ್ದಾಗ ಎಷ್ಟೋ ವಿನೋದಕರ

ಸನ್ನಿವೇಶಗಳು ಉದ್ಭವಿಸಿದ್ದೂ ಉಂಟು. ಪ್ರವಾಸಕಾಲದಲ್ಲಿ ಒಮ್ಮೆ ಅವರು ಸಿಂಗಪುರದಲ್ಲಿ ತಂಗಿದಾಗಿನ ಸಂದರ್ಭವನ್ನು ನಿದರ್ಶನವಾಗಿ ಕೊಡಬಹುದು. ಅಲ್ಲಿಯ ವಿಮಾನ ನಿಲ್ದಾಣದಲ್ಲಿ ಇಳಿದಾಗ ಅವರು ಇತರ ಪ್ರಯಾಣಿಕರೊಂದಿಗೆ ಬಸ್ಸನ್ನೇರಿದರು. ಅದು ಸಿಂಗಪುರದ ಸುಪ್ರಸಿದ್ಧ ಹೋಟೆಲೊಂದರ ಮುಂದೆ ನಿಂತಿತು. ಭದ್ರಯ್ಯನವರೂ ಸಹಪ್ರಯಾಣಿಕರೊಂದಿಗೆ ಬಸ್ಸಿನಿಂದ ಇಳಿದರು. ಉಳಿದ ಪ್ರಯಾಣಿಕರ ಸಾಮಾನುಗಳನ್ನು ಹೋಟೆಲು ಸಿಬ್ಬಂದಿಯ ಜನ ಎತ್ತಿಕೊಂಡರು. ಆದರೆ ಭದ್ರಯ್ಯನವರ ಸೂಟ್‌ಕೇಸ್ ತೆಗೆದುಕೊಳ್ಳಲು ಯಾರೂ ಮುಂದೆ ಬರಲಿಲ್ಲ. ಅವರ ಕೃಶ ದೇಹ, ಕೊಳೆಯಾದ ಉಡುಪು–ಇವನ್ನು ನೋಡಿ ಹೋಟಲ ಸಿಬ್ಬಂದಿ ಅವರನ್ನು ಯಾರೋ ಎಂದು ತಿಳಿದರು. 'ಇದು ರ್‍ಯಾಫಲ್ ಹೋಟೆಲ್, ಗೊತ್ತಾಯಿತೆ ?' ಎಂದು ಕೂಡ ಒಬ್ಬ ಅರಚಿದ. ಭದ್ರಯ್ಯನವರು ಮಾತಾಡಲಿಲ್ಲ. ತಮ್ಮ ಸೂಟ್‌ಕೇಸನ್ನು ತಾವೇ ಎತ್ತಿಕೊಂಡು ಹೋಟೆಲಿನ ಒಳ ನಡೆದರು. ಹೋಟೆಲಿನ ಸ್ವಾಗತಕಾರ ಅವರು ಯಾರೆಂಬುದನ್ನು ತಿಳಿದು ಮರ್ಯಾದೆಯಿಂದ ನಡೆದುಕೊಂಡು ಅವರಿಗಾಗಿ ಒಳ್ಳೆಯ ಕೊಠಡಿಯನ್ನೇ ಗೊತ್ತುಮಾಡಿದ. ಅವರ ಕೈಪೆಟ್ಟಿಗೆಯನ್ನು ಎತ್ತಿಕೊಳ್ಳಲೊಲ್ಲದೆ ಸಿಡುಕಾಡಿದ ಆಳಿನ ಮುಖ ಹೇಗಿತ್ತೆಂಬುದನ್ನು ಊಹಿಸಿಕೊಳ್ಳಬೇಕು !

ನ. ಭದ್ರಯ್ಯನವರು ಈ ಪ್ರವಾಸವನ್ನು ಕೈಗೊಳ್ಳುವುದಕ್ಕೆ ಮುಂಚೆ ರಚಿಸಿದ್ದ ಪುಸ್ತಕಗಳ ವಿಚಾರವನ್ನು ಹಿಂದೆ ಹೇಳಿದ್ದೇನೆ. ನಾನಾ ದೇಶಗಳಲ್ಲಿ ಅವರು ಮಾಡಿದ ಪ್ರವಾಸದ ಅನುಭವಗಳನ್ನೂ, ಮಾಡಿದ ಕೆಲಸದ ಸ್ವರೂಪವನ್ನೂ, ಆ ದೇಶಗಳ ಭೌಗೋಳಿಕ ಐತಿಹಾಸಿಕ ಆರ್ಥಿಕ ಸಾಮಾಜಿಕ ಸಾಂಸ್ಕೃತಿಕ ಸ್ವರೂಪವನ್ನೂ, ಸಮಸ್ಯೆಗಳನ್ನೂ ಕುರಿತು ಅವರು ಮೂರು ಮಹತ್ವದ ಕೃತಿಗಳನ್ನು ಬರೆದಿದ್ದಾರೆ. 'ಕ್ಯಾಮರೂನಿನ ಬಣಗಳೊಡನೆ' ಎಂಬುದು ಒಂದು. 'ಪ್ರಪಂಚ ಪರ್ಯಟಣೆ' ಇನ್ನೊಂದು, 'ಯುನೆಸ್ಕೋ ಸೇವೆಯಲ್ಲಿ' ಎಂಬುದು ಮೂರನೆಯದು. ತಮ್ಮ ದಿನಚರಿಯ ನಮೂದುಗಳನ್ನು ಆಧರಿಸಿ ರಚಿಸಿರುವ ಈ ಕೃತಿಗಳಲ್ಲಿ ಭದ್ರಯ್ಯನವರ ವ್ಯಕ್ತಿತ್ವ ನಮ್ಮ ಕಣ್ಣ ಮುಂದೆ ನಿಲ್ಲುತ್ತದೆ. ಆತ್ಮೀಯವಾದ ಗದ್ಯಶೈಲಿಯ ಈ ಕಥನಗಳು ಕನ್ನಡದ ಉತ್ತಮ ಪ್ರವಾಸ ಸಾಹಿತ್ಯವೆಂಬುದರಲ್ಲಿ ಸಂಶಯವಿಲ್ಲ. 'ಭದ್ರಯ್ಯನವರ ಸರಳ ನಡೆನುಡಿಗಳು, ಉದಾತ್ತವಾದ ಆಚಾರ ವಿಚಾರಗಳು, ಅವರು ಜನಜೀವನವನ್ನು ಕಾಣುವ ಸಮಗ್ರ ದೃಷ್ಟಿ ಧೋರಣೆಗಳು ಪುಟ ಪುಟಗಳಲ್ಲಿಯೂ ಪ್ರತಿಬಿಂಬಿಸಿವೆ' ಎನ್ನುತ್ತಾರೆ, ಡಾ. ಶಿವರುದ್ರಸ್ವಾಮಿ. ಈ ಮಾತು ನೂರಕ್ಕೆ ನೂರರಷ್ಟು ನಿಜ. ನ. ಭದ್ರಯ್ಯನವರ ಕಾವ್ಯನಾಮ 'ನಭ'. 'ಆಕಾಶ' ಎಂದು ಇದರ ಅರ್ಥ. ವಿಶ್ವವನ್ನೇ ಅಪ್ಪಿಕೊಳ್ಳುವ ವ್ಯಕ್ತಿತ್ವ ಅವರದು. 'ನಭ' ಅವರ ಕೃತಿಗಳು ಈ ಮಾತಿಗೆ ಸಾಕ್ಷಿ.

ನ. ಭದ್ರಯ್ಯನವರು ಗಾಂಧಿಯವರಂತೆಯೇ. ಅವರದು ನಿಷ್ಠಾವಂತ ಜೀವನ. ಅವರ ಪತ್ನಿ ಶಾಂತಿ ಅವರು ಅಮೆರಿಕನರು. ವಯಸ್ಕರ ಶಿಕ್ಷಣದಲ್ಲಿ ಸ್ನಾತಕೋತ್ತರ

ಪದವೀಧರರಾದ ಇವರು ಭದ್ರಯ್ಯನವರ ನಿಷ್ಠೆಯ ಬದುಕಿಗೆ ಮನಸೋತು ಒಲಿದರು. ಭಾರತೀಯ ಜೀವನ ಸಂಸ್ಕೃತಿಗಳಿಗೆ ಮಾರುಹೋದರು. ಭದ್ರಯ್ಯನವರ ಕೊನೆಯ ದಿನಗಳಲ್ಲಿ ಇವರು ತಮ್ಮ ಪತಿಗೆ ಮಾಡಿದ ಸೇವೆ ಅನುಪಮವಾದ್ದು. ಭದ್ರಯ್ಯನವರ ಆಯುಸ್ಸು ಇನ್ನಷ್ಟು ವಿಸ್ತರಿಸಲು ಸಾಧ್ಯವಾದ್ದು ಇವರಿಂದಾಗಿ,

ಭದ್ರಯ್ಯನವರ ವಿಶ್ರಾಂತ ಜೀವನ ಆಡಂಬರರಹಿತವಾದ್ದು. ನಾಡ ಬಿಡುಗಡೆಯ ಹೋರಾಟ, ಗ್ರಾಮಸೇವೆ, ವಿದ್ಯಾರ್ಥಿನಿಲಯಗಳ ಸ್ಥಾಪನೆ, ವಯಸ್ಕರ ಶಿಕ್ಷಣ ಮುಂತಾದ ಹಲವೆಂಟು ಚಳವಳಿಗಳನ್ನು ಹಮ್ಮಿಕೊಂಡು ನಿರ್ವಹಿಸಿದರೂ ಅವನ್ನೆಂದೂ ಅವರು ಸ್ವಪ್ರತಿಷ್ಠೆಯ ಅಥವಾ ಸ್ವಲಾಭದ ಸಾಧನಗಳಾಗಿ ಮಾಡಿಕೊಳ್ಳಲಿಲ್ಲ. ಪ್ರಚಾರಕ್ಕೂ ಅವರಿಗೂ ಬಹಳ ದೂರ. ತಮ್ಮ ದೂರವಾಣಿಯ ಸಂಖ್ಯೆ ಕೂಡ ಗುಟ್ಟಾಗಿರಬೇಕೆಂದು ಅವರು ಬಯಸಿದ್ದರು. ವಿನಾ ಕಾರಣ ಆವರು ಯಾರನ್ನಾದರೂ ಸಂಪರ್ಕಿಸುವುದಾಗಲಿ, ಇತರರು ಆವರನ್ನು ಸಂಪರ್ಕಿಸುವುದಾಗಲಿ ಅವರಿಗೆ ಹಿಡಿಸುತ್ತಿರಲಿಲ್ಲ. ನಗರದ ದೂರವಾಣಿ ಕೈಪಿಡಿಯಲ್ಲಿ ಅವರ ಹೆಸರು, ನಂಬರು ಇರಬಾರದೆಂದು ಆವರು ಬಯಸಿದ್ದರು.

ಬದುಕಿನಲ್ಲಿ ಹೇಗೋ ಹಾಗೆ ಸಾವಿನಲ್ಲೂ ಅವರು ಪ್ರಚಾರವನ್ನು ದೂರ ಇಟ್ಟರು. ತಾವು ಸತ್ತಾಗ ತಮ್ಮ ದೇಹಕ್ಕೆ ಸ್ನಾನ ಮಾಡಿಸುವುದಾಗಲಿ. ಬಟ್ಟೆ ಬದಲಾಯಿಸುವುದಾಗಲಿ ಕೂಡದು. ಸತ್ತ ನಾಲ್ಕು ಗಂಟೆಯೊಳಗಾಗಿ ದೇಹವನ್ನು ವಿದ್ಯುಚ್ಛಕ್ತಿ ಚಿತಾಗಾರಕ್ಕೆ ಕೊಂಡೊಯ್ದು ಅಲ್ಲಿ ಚಿತೆಗೆ ಕೊಡಬೇಕು. ಯಾರಿಗೂ ಕಾಯಬೇಕಾಗಿಲ್ಲ, ಯಾವ ಉತ್ತರಾದಿ ಕ್ರಿಯೆಗಳೂ ಬೇಕಿಲ್ಲ. ಚಿತಾಭಸ್ಮವನ್ನು ತಂದು ತಮ್ಮ ತೋಟದ ಗಿಡಗಳಿಗೆ ಹಾಕಿದರೆ ಸಾಕು. ಇದು ಭದ್ರಯ್ಯನವರ ಅಂತ್ಯೇಚ್ಛೆ.

ಭದ್ರಯ್ಯನವರಿಗೆ ಅಂದವಾದ ಕೈತೋಟಗಾರಿಕೆಯಲ್ಲಿ ಅಪಾರವಾದ ಆಸಕ್ತಿ. ಮನೆಯ ಸುತ್ತಣ ಹೂಗಿಡಗಳೇ ಆವರ ಸಂಗಾತಿಗಳು. ಅರಳುವ ಹೂಗಳಲ್ಲಿ ಭದ್ರಯ್ಯನವರು ವಿಶ್ವಾತ್ಮವನ್ನೇ ಕಾಣುತ್ತಿದ್ದರು, ಆದರಲ್ಲಿ ಲೀನವಾಗುವುದಷ್ಟೇ ಅವರಿಗಿದ್ದ ಬಯಕೆ. ಕರ್ನಾಟಕದಲ್ಲೂ, ವಿಶ್ವದ ಇತರ ಹಲವು ಎಡೆಗಳಲ್ಲೂ ನಡೆದಾಡಿದಲ್ಲೆಲ್ಲ ನಗೆಯ ನೆಮ್ಮದಿಯ ಹೂ ಅರಳಬೇಕೆಂದು ಹಂಬಲಿಸಿದವರು, ನ. ಭದ್ರಯ್ಯ.

ಎಚ್ಚೆಸ್ಕೆ

ಎ. ಜಿ. ಬಂದೀಗೌಡ

''ಅರಕೆರೆ ಬನ್ನೂರು ಅದು ನನ್ನ ತೌರೂರು'' ಎಂದು ಜನಪದ ಹೆಣ್ಣು ಮಗಳೊಬ್ಬಳು ಗೀತೆಯೊಂದರಲ್ಲಿ ಹೆಮ್ಮೆಯಿಂದ ಹೇಳಿ ಕೊಂಡಿದ್ದಾಳೆ. ಒಂದು ಊರು ಅನೇಕ ಕಾರಣಗಳಿಗಾಗಿ ಮಹತ್ವದೆನ್ನಿಸುತ್ತದೆ. ಮಂಡ್ಯಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆಗ್ರಾಮ ಜನಪದ ಸಾಹಿತ್ಯದಲ್ಲಿಯಷ್ಟೇ ಅಲ್ಲ ಚರಿತ್ರೆಯಲ್ಲೂ ಹೆಸರಾದ ಊರು. ಇಂಗ್ಲಿಷರಿಗೂ ಟಿಪ್ಪುವಿಗೂ ಈ ಊರ ಹತ್ತಿರ ಮಹಾನ್ ಯುದ್ಧಗಳಾದ ನಾಲ್ಕೂ ಮೈಸೂರು ಯುದ್ಧಗಳೂ ನಡೆದವು. ಮುಂದೆ ಭಾರತೀಯ ಸ್ವಾತಂತ್ರ್ಯ ಸಮರಕ್ಕೆ ಈ ಊರಿನ ಕೊಡುಗೆ ಮಂಡ್ಯ ಜಿಲ್ಲೆಯಲ್ಲೇ ಅತಿ ವಿಶಿಷ್ಟವಾದುದು. ಈ ಕೀರ್ತಿಗೆ ಕಾರಣರು ಈ ಊರಿನ ಎ. ಜಿ. ಬಂದೀಗೌಡರು.

ವ್ಯವಸಾಯ ಪ್ರಧಾನವಾದ ಅರಕೆರೆಯ ಬಂದೀಗೌಡ ಮತ್ತು ಹೊನ್ನಮ್ಮ ದಂಪತಿಗಳು ಊರಿನ ಪ್ರಮುಖಕುಳ. ಊರಿನ ಯಜಮಾನರು ಕೂಡ ಆಗಿದ್ದರು. ಅವರಿಗೆ ಗೌಡಯ್ಯ ಎಂಬ ಹೆಸರಿನ ಮಗ. ಆಗಿನ ಗ್ರಾಮ ಪದ್ಧತಿಯಂತೆ ಹದಿನಾರು ಮಂದಿ ಕುಲ ಮುಖಂಡರು ಊರಿನ ಆಡಳಿತ, ನ್ಯಾಯ, ನಿಷ್ಠುರ, ತಪ್ಪು ನೆಪ್ಪುಗಳನ್ನು ನೋಡಿಕೊಳ್ಳುತ್ತಿದ್ದರು. ಈ ಹದಿನಾರು ಮಂದಿಯಲ್ಲಿ ಗೌಡಯ್ಯನವರೂ ಒಬ್ಬರು ಊರಿನ ಯಜಮಾನರು. ಇವೆಲ್ಲಾ ಒಂದು ರೀತಿಯಲ್ಲಿ ವಂಶ ಪಾರಂಪರ್ಯವಾಗಿ ಬರುವತಕ್ಕವು. ಗೌಡಯ್ಯನವರ ಪತ್ನಿ ಲಕ್ಷ್ಮಮ್ಮನವರು. ಈ ದಂಪತಿಗಳಿಗೆ ಎಂಟು ಜನ ಮಕ್ಕಳು, ಐದು ಹೆಣ್ಣು ಮೂರು ಗಂಡು. ಈ ಮೂವರು ಗಂಡು ಮಕ್ಕಳಲ್ಲಿ ಮಧ್ಯದವರೇ ಎ. ಜಿ. ಬಂದೀಗೌಡರು. ಮಿಕ್ಕ ಇಬ್ಬರು ಶಂಭುಗೌಡ ಮತ್ತು ಲಿಂಗಪ್ಪ. ಬಂದೀಗೌಡ ಎಂದು ತಾತನ ಹೆಸರನ್ನೇ ಮೊಮ್ಮಗನಿಗೂ ಇಟ್ಟರು. ಈ ಪದ್ಧತಿ ಭಾರತೀಯ ಸಮಾಜದಲ್ಲಿ ನಡೆದು ಬಂದುದು.

ಎ. ಜಿ. ಬಂದೀಗೌಡರ ಬಾಲ್ಯ ಅರಕೆರೆ ಗ್ರಾಮದಲ್ಲಿ ಕಳೆಯಿತು. ಊರಿನ ಪ್ರಮುಖ ಕುಳವಾದವರ ಮನೆಯ ಮಗನಾದುದರಿಂದ ನಮ್ಮ ಗ್ರಾಮಾಂತರ ಮಕ್ಕಳಿಗಿರುವ ಯಾವುದೇ ಕಷ್ಟ ಕಾರ್ಪಣ್ಯಗಳು ಬಾಲಕ ಬಂದೀಗೌಡರಿಗೆ ಇರಲಿಲ್ಲವೆಂದೇ ಹೇಳಬೇಕು. ಅರಕೆರೆ ಆ ಕಾಲಕ್ಕೆ ಸಾಕಷ್ಟು ಮುಂದುವರಿದ, ಪ್ರಸಿದ್ಧಿಯ ಊರಾದರಿಂದ ಆ ಊರಿನಲ್ಲಿ ಆ ಕಾಲಕ್ಕಾಗಲೆ ಮಾಧ್ಯಮಿಕ ಶಾಲೆಯೂ ಆರಂಭವಾಗಿತ್ತು. ಆದುದರಿಂದ ಬಂದೀಗೌಡರ ಪ್ರಾಥಮಿಕ ಶಿಕ್ಷಣ ಅರಕೆರೆಯಲ್ಲಿಯೇ ಕಳೆಯಿತು. ತಂದೆ

ತಾತ ಇಬ್ಬರೂ ಊರಿನ ಪ್ರಮುಖರು. ವ್ಯವಹಾರ ಬಲ್ಲವರು ಅಕ್ಷರಸ್ಥರೂ ಆದುದರಿಂದ ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಬೇಕೆಂಬುದು ಅವರ ಆಕಾಂಕ್ಷೆಯಾಗಿತ್ತು. ಬಂದೀಗೌಡರು ಶಿಕ್ಷಣದಲ್ಲಿ ಚುರುಕಾಗಿದ್ದರು ಮತ್ತು ಕಲಿಯುವ ಆಸಕ್ತಿಯಿತ್ತು. ಅರಕೆರೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ ಅವರು ತಮ್ಮ ಪ್ರೌಢಶಾಲಾ ಶಿಕ್ಷಣವನ್ನು ಶ್ರೀರಂಗಪಟ್ಟಣದಲ್ಲಿ ಮುಂದುವರಿಸಿದರು. ಶ್ರೀರಂಗಪಟ್ಟಣ ಅರಕೆರೆಗೆ ಹತ್ತಿರದ ನಗರ. ತಮ್ಮ ಪ್ರೌಢಶಾಲಾ ದಿನಗಳಲ್ಲಿ ಬಂದೀಗೌಡರು ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದರು. ಶಾಲೆಯ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳುತ್ತಿದ್ದರು. ಚರ್ಚಾಸ್ಪರ್ಧೆಯೆಂದರೆ ಅವರಿಗೆ ಎಲ್ಲಿಲ್ಲದ ಆಸೆ. ಯಾವುದೇ ವಿಷಯ ಕುರಿತು ಅವರು ಸಮರ್ಥವಾಗಿ ವಾದಿಸುತ್ತಿದ್ದರು. ಮುಂದೆ ಅವರು ನ್ಯಾಯವಾದಿಯಾಗುವ ಬಯಕೆ ಈ ದಿನಗಳಲ್ಲೇ ಬಾಲಕ ಬಂದೀಗೌಡರ ಹೃದಯದಲ್ಲಿ ಚಿಗುರೊಡೆಯುತ್ತಿತ್ತೆಂದು ಕಾಣುತ್ತದೆ.

ಶ್ರೀರಂಗಪಟ್ಟಣದಲ್ಲಿ ತಮ್ಮ ಪ್ರೌಢಶಾಲಾ ಶಿಕ್ಷಣ ಮುಗಿಸಿದ ಎ. ಜಿ. ಬಂದೀಗೌಡರು ತಮ್ಮ ಮುಂದಿನ ಕಾಲೇಜು ಶಿಕ್ಷಣಕ್ಕೆ ಮೈಸೂರಿಗೆ ಹೋದರು. ಹಳ್ಳಿಯ ಹುಡುಗನೊಬ್ಬ ಕಾಲೇಜು ಮೆಟ್ಟಿಲು ಹತ್ತುವುದು ಆ ಕಾಲಕ್ಕೆ ಪವಾಡ ಸದೃಶ ಸಂಗತಿಯಾಗಿತ್ತು. ತಮ್ಮ ಕಾಲೇಜು ದಿನಗಳ ನಾಲ್ಕುವರ್ಷ ಬಂದೀಗೌಡರು ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ವ್ಯಾಸಂಗಮಾಡಿ ಬಿ. ಎ. ಪದವೀಧರರಾದರು. ಇದು ಅವರ ಮನೆ ತನಕ್ಕೊಂದು ಕೋಡಿನ ಸಂಗತಿಯಾಯಿತು ಆಗಿನ ಕಾಲದಲ್ಲಿ ಈಗಿನಷ್ಟು ಸರ್ಕಾರಿ ಕೆಲಸದ ಹುಚ್ಚು ಇರಲಿಲ್ಲ. ಅನೇಕರು ನ್ಯಾಯವಾದಿಗಳಾಗಿ ಸ್ವತಂತ್ರ ಜೀವನ ಬಯಸುತ್ತಿದ್ದರು. ಕಾರಣ ಆ ಕಾಲದಲ್ಲಿ ನ್ಯಾಯಾಲಯ ಮತ್ತು ನ್ಯಾಯವಾದಿಗಳನ್ನು ಸಮಾಜದ ಅತ್ಯಂತ ಗಣ್ಯರೆಂದು ಪರಿಗಣಿಸಲಾಗುತ್ತಿತ್ತು. ಸ್ವಲ್ಪ ಪ್ರಮುಖ ಮನೆತನದವರಂತೂ ನ್ಯಾಯವಾದಿಯಾದರೇ ತಮ್ಮ ಮಕ್ಕಳ ಶಿಕ್ಷಣ ಸಾರ್ಥಕ ಎಂದು ನಂಬಿದ್ದರು ಶ್ರೀ ಬಂದೀಗೌಡರ ಮನೆತನವೂ ಅಂತಹುದೆ. ಆ ಕಾಲದಲ್ಲಿ ನ್ಯಾಯಶಾಸ್ತ್ರ ವ್ಯಾಸಂಗಮಾಡಲು ಮದರಾಸು ಇಲ್ಲವೇ ಮಹಾರಾಷ್ಟ್ರ ರಾಜ್ಯಗಳಿಗೇ ಹೋಗ ಬೇಕಾಗಿತ್ತು. ಅದರಂತೆ ಶ್ರೀ ಎ. ಜಿ. ಬಂದೀಗೌಡರು ತಮ್ಮ ಬಿ. ಎ. ಪದವಿಯ ನಂತರ ಬೆಳಗಾಂಗೆ ಹೋಗಿ ಬಿ. ಎಲ್. ಪದವಿ ಪಡೆದುಕೊಂಡು ಬಂದು ಶ್ರೀರಂಗಪಟ್ಟಣದಲ್ಲಿ ತಮ್ಮ ವಕೀಲಿ ವೃತ್ತಿಯನ್ನು ಆರಂಭಿಸಿದರು.

ನ್ಯಾಯವಾದಿಯಾಗಿ ಬಂದೀಗೌಡರು ಬಹು ಬೇಗ ಹೆಸರು ಮಾಡಿದರು. ಅವರ ಅಕ್ಕ ಕೆಂಪಮ್ಮ ಎಂಬುವರನ್ನು ಹಂಗರಹಳ್ಳಿ ಪಾಪೇಗೌಡರಿಗೆ ಕೊಟ್ಟು ಮದುವೆಯಾಗಿತ್ತು. ಈ ದಂಪತಿಗಳಿಗೆ ಹೊನ್ನಮ್ಮ ಮುದ್ದಿನ ಮಗಳು. ಈ ಹೊನ್ನಮ್ಮನನ್ನು ಬಂದೀಗೌಡರಿಗೆ ತಂದುಕೊಂಡು ಮದುವೆಯಾಯಿತು. ತಾತ ಮತ್ತು ಅಜ್ಜಿಯರ ಹೆಸರೇ ಈ ಬಂದೀಗೌಡ ದಂಪತಿಗಳಿಗೂ ಇದ್ದದ್ದು ಆಶ್ಚರ್ಯದ ಸಂಗತಿ. ಶ್ರೀ ಬಂದೀ

ಗೌಡರ ವಕೀಲಿವೃತ್ತಿ ಮತ್ತು ಸಾಂಸಾರಿಕ ಜೀವನ ಎರಡೂ ಸುಖಕರವಾಗಿದ್ದುವು.

ಬಂದೀಗೌಡರು ತಮ್ಮ ಕಾಲೇಜು ದಿನಗಳಲ್ಲಿಯೇ ಗಾಂಧೀ, ತಿಲಕ್, ಬೋಸ್ ಮುಂತಾದವರ ವಿಚಾರಧಾರೆಗೆ ಮಾರುಹೋಗಿದ್ದರು. ಆಗಿನ್ನೂ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಕನಸು ಸ್ಪಷ್ಟ ರೂಪು ತಳೆದಿರಲಿಲ್ಲ ಮೈಸೂರು ದೇಶದಂತಹ ದೇಶೀಯ ಸಂಸ್ಥಾನಗಳಲ್ಲಂತೂ ಅದು ಇನ್ನೂ ಭ್ರೂಣಾವಸ್ಥೆಯಲ್ಲಿತ್ತೆಂದೇ ಹೇಳಬೇಕು. ಅದರಲ್ಲೂ ಬಂದೀಗೌಡರಂತಹ ಪ್ರಮುಖ ಮನೆತನದವರು ಅಪ್ಪಟ ರಾಜನಿಷ್ಠರು. ರಾಜನನ್ನೆ ಪ್ರತ್ಯಕ್ಷ ದೈವವೆಂದು ನಂಬಿದವರು. ಆದರೆ ಹೊಸ ರೀತಿಯ ಶಿಕ್ಷಣ ಪಡೆದಿದ್ದ ಬಂದೀಗೌಡರ ಹೃದಯದಲ್ಲಿ ಅಂಕುರಿಸಿದ್ದ ಸ್ವಾತಂತ್ರ್ಯದ ಕಿಡಿ ಅವರು ಬೆಳಗಾಂನಲ್ಲಿ ನ್ಯಾಯ ಶಿಕ್ಷಣ ಪಡೆಯುವಾಗ ಉರಿಯಾಗಿ ಹತ್ತಿ ಧಗಧಗಿಸಲಾರಂಭಿಸಿತು. ಆಗ ಮಹಾರಾಷ್ಟ್ರದಲ್ಲಿ ಈ ಸ್ವಾತಂತ್ರ್ಯ ಸಂಗ್ರಾಮದ ಕಿಚ್ಚು ಹತ್ತಿ ಉರಿಯುತ್ತಿತ್ತು. ಬೆಳಗಾಂನಲ್ಲಿದ್ದ ಬಂದೀಗೌಡರ ಮೇಲೂ ಅದು ತನ್ನ ಪ್ರಭಾವವನ್ನು ಆಚ್ಚೊತ್ತಿತು. ಶ್ರೀರಂಗಪಟ್ಟಣದಲ್ಲಿ ತಮ್ಮ ವಕೀಲಿವೃತ್ತಿಯನ್ನು ಆರಂಭಿಸಿದ ಮೇಲೆ ಬಂದೀಗೌಡರಿಗೆ ಆ ಕಾಲದ ಪ್ರಮುಖರಾದ ಸಾಹುಕಾರ್ ಚನ್ನಯ್ಯ, ಎಚ್. ಸಿ. ದಾಸಪ್ಪ, ಎಚ್. ಕೆ. ವೀರಣ್ಣಗೌಡ, ಟಿ. ಮರಿಯಪ್ಪ ಮುಂತಾದವರ ಪರಿಚಯವಾಯಿತು. ಗೌಡರಲ್ಲಿ ಸುಪ್ತವಾಗಿದ್ದ ಸ್ವಾತಂತ್ರ್ಯದ ಹಂಬಲ ಈ ಪ್ರಮುಖರ ಸಂಪರ್ಕದಿಂದ ಉಜ್ವಲಗೊಂಡು ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಮುಕಿದರು.

1938ರಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಶಿವಪುರದಲ್ಲಿ ರಾಷ್ಟ್ರಕೂಟವೊಂದು ನಡೆಯಬೇಕೆಂದು ತೀರ್ಮಾನಿಸಲಾಯಿತು. ಆಗ ಈ ರಾಷ್ಟ್ರಕೂಟದ ಸ್ವಾಗತ ಸಮಿತಿಯ ಕಾರ್ಯದರ್ಶಿಗಳಲ್ಲೊಬ್ಬರಾಗಿ ಬಂದೀಗೌಡರು ಆಯ್ಕೆಯಾದರು. ಈ ರಾಷ್ಟ್ರಕೂಟ ಇಡೀ ರಾಷ್ಟ್ರದಲ್ಲಿಯೇ ಅದ್ದೂರಿಯಾಗಿ ನಡೆಯಿತು. ಈ ಯಶಸ್ಸಿನ ಹಿಂದೆ ಶ್ರೀ ಬಂದೀಗೌಡರ ದುಡಿಮೆಯೂ ಇದೆ. ಶಿವಪುರ ರಾಷ್ಟ್ರಕೂಟದನಂತರ ಮೈಸೂರು ದೇಶದಲ್ಲಿ ಸ್ವಾತಂತ್ರ್ಯ ಚಳುವಳಿ ಕಾವೇರುತ್ತಾ ನಡೆಯಿತು. ಈ ನಾಯಕರುಗಳೆಲ್ಲಾ ಜನರಲ್ಲಿ ಸ್ವಾತಂತ್ರ್ಯದ ಹಂಬಲವನ್ನು ತುಂಬುತ್ತಾ ನಡೆದರು. ಕ್ವಿಟ್ ಇಂಡಿಯಾ ಚಳುವಳಿ, ಮೈಸೂರು ಚಲೋ ಚಳುವಳಿಗಳಲ್ಲಿ ಬಂದೀಗೌಡರೂ ಮುಂಚೂಣಿಯ ನಾಯಕರುಗಳಲ್ಲೊಬ್ಬರಾಗಿ ಕೆಲಸಮಾಡಿ 1940, 47ರಲ್ಲಿ ಸೆರೆಮನೆವಾಸ ಅನುಭವಿಸಿದರು. 1942ರಲ್ಲಿ ಕೆ.ಸಿ. ರೆಡ್ಡಿ 1945ರಲ್ಲಿ ಸಾಹುಕಾರ್ ಚನ್ನಯ್ಯ ಇವರೊಂದಿಗೆ ಸೆರೆವಾಸದಲ್ಲಿದ್ದರು. 1947ರಲ್ಲಿ ತಗಡೂರು ರಾಮಚಂದ್ರರಾಯರು ಇವರೊಂದಿಗೆ ಸೆರೆಯಲ್ಲಿದ್ದರು.

1947ರ ಆಗಸ್ಟ್ 15ರಂದು ಭಾರತ ಸ್ವತಂತ್ರವಾದರೂ ಮೈಸೂರು ದೇಶ ಸ್ವಲ್ಪ ತಡವಾಗಿ ಸ್ವಾತಂತ್ರ್ಯಪಡೆಯಿತು. ಕಾರಣ ಬ್ರಿಟಿಷರ ಒಡೆದು ಆಳುವ ನೀತಿ. ಸ್ವಾತಂತ್ರ್ಯ ಬಂದನಂತರ 1949ರಲ್ಲಿ ಶ್ರೀ ಬಂದೀಗೌಡರನ್ನು ಮಂಡ್ಯ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಈ ಕಾರ್ಖಾನೆಯ ಸರ್ವತೋಮುಖ ಅಭಿವೃದ್ಧಿಗೆ

ಮತ್ತು ಕಬ್ಬು ಬೆಳೆಯುವ ರೈತರ ಹಿತರಕ್ಷಣೆಗೆ ಶ್ರೀ ಬಂದೀಗೌಡರು ಅಪಾರ ಸೇವೆ ಸಲ್ಲಿಸಿದರು. ಈ ಸಕ್ಕರೆ ಕಾರ್ಖಾನೆಯ ಅನೇಕ ಯಂತ್ರೋಪಕರಣಗಳನ್ನು ಆಧುನಿಕ ಗೊಳಿಸಿದ್ದಷ್ಟೇ ಅಲ್ಲ ಈ ಉದ್ಯಮಕ್ಕೆ ಪೂರಕವೂ ಪೋಷಕವೂ ಆದ ಅನೇಕ ಉಪ ಉದ್ಯಮಗಳನ್ನು ಆರಂಭಿಸಲು ಕಾರಣರಾದರು. ಇದರೊಂದಿಗೆ ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ ಕಂಪನಿಯ ನಿರ್ದೇಶಕರಲ್ಲೊಬ್ಬರಾಗಿದ್ದರು. ದಕ್ಷಿಣ ಭಾರತದ ಸಕ್ಕರೆ ಕಂಪನಿಗಳ ಒಕ್ಕೂಟದ ಅಧ್ಯಕ್ಷರಾಗಿದ್ದರು. ಇವೆಲ್ಲಾ ಶ್ರೀ ಬಂದೀಗೌಡರು ತಾವು ವಹಿಸಿಕೊಂಡ ಕೆಲಸಗಳಲ್ಲಿ ತೋರಿದ ನಿಷ್ಠೆಯ ಫಲವೆಂದು ಹೇಳಬಹುದು.

ರಾಜಕೀಯವಾಗಿಯೂ ಅವರೊಬ್ಬ ಪ್ರಮುಖ ವ್ಯಕ್ತಿಯಾಗಿದ್ದರು. ಅವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು. ರಾಜ್ಯಾಂಗ ರಚನಾ ಸಭೆಗೆ ಮಂಡ್ಯ ಜಿಲ್ಲೆಯ ಪ್ರತಿನಿಧಿಗಳಲ್ಲೊಬ್ಬರಾಗಿದ್ದರು. ಆಗಿನ ಮೈಸೂರು ರಾಜ್ಯದ ರಾಜಕಾರಣದಲ್ಲಿ ಎ. ಜಿ. ಬಂದೀಗೌಡರದು ಒಂದು ಪ್ರಮುಖ ಹೆಸರು. ಆದುದರಿಂದ ಅವರು ಜಿಲ್ಲೆಯ ಮತ್ತು ರಾಜ್ಯದ ರಾಜಕೀಯ ಸಂಘಟನೆಯ ಪ್ರತಿ ಹಂತ ಗಳಲ್ಲಿಯೂ ಇರುತ್ತಿದ್ದರು.

ಶ್ರೀ ಬಂದೀಗೌಡರಿಗೆ ರಾಜಕೀಯವೊಂದೇ ಪರಮ ಗುರಿಯಾಗಿರಲಿಲ್ಲ. ಅವರು ಗ್ರಾಮಾಂತರ ಜನರ ವಿಶೇಷವಾಗಿ ರೈತರು ಮತ್ತು ಕೃಷಿಕಾರ್ಮಿಕರ ಉನ್ನತಿಗಾಗಿ ಅನೇಕ ಕೆಲಸಗಳನ್ನು ಕೈಗೊಂಡರು. ದುಡಿಮೆ ಮತ್ತು ಆದಾಯ ಸಮಸಮವಾಗಿರಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಗಾಂಧೀಜಿಯ ಗ್ರಾಮಾಭಿವೃದ್ಧಿಯ ಕನಸುಗಳನ್ನು ತುಂಬಿಕೊಂಡವರವರು. ಅವರು ಸಕ್ಕರೆ ಕಂಪನಿಯ ಅಧ್ಯಕ್ಷರಾಗಿದ್ದಾಗ ಕಾರ್ಮಿಕರಿಗೆ ಅನೇಕ ಅನುಕೂಲಗಳನ್ನು ಒದಗಿಸಿದರು. ಅವರಿಗೆ ವಾಸದ ಮನೆಗಳು ಅವರ ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯುವ ಏರ್ಪಾಡು ಮಾಡಿದರು. ಇಂದು ಸಕ್ಕರೆ ನಗರದಲ್ಲಿರುವ ಶಿಕ್ಷಣ ಸಂಸ್ಥೆಗಳು ಶ್ರೀ ಬಂದೀಗೌಡರ ದೂರದೃಷ್ಟಿಯ ಫಲವೆಂದೇ ಹೇಳಬೇಕು. ಶ್ರೀ ಬಂದೀಗೌಡರು ಅಧ್ಯಕ್ಷರಾಗಿದ್ದಾಗ ಸಕ್ಕರೆ ಕಂಪನಿಯ ಅಭಿವೃದ್ಧಿಯ ಬಗ್ಗೆ ಅನೇಕ ಮಹನೀಯರು ಒಳ್ಳೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ನಮ್ಮಲ್ಲಿ ಕೆಲವರಿರುತ್ತಾರೆ ಅವರಿಗೆ ಪಾಶ್ಚಿಮಾತ್ಯ ದೇಶಗಳತ್ತಲೇ ಕಣ್ಣು. ಅವು ಗಳನ್ನು ಬಿಟ್ಟರೆ ಬೇರಿಲ್ಲ ಎಂಬುದೇ ಅವರ ವಾದ, ಹೀಗಾಗಿಯೇ ಅವರು ಸದಾ ಇಂಗ್ಲೀಷ್ ಶಿಕ್ಷಣ ಮಾಧ್ಯಮದ ದಾಸರಾಗಿಬಿಡುತ್ತಾರೆ. ಆದರೆ ಶ್ರೀ ಬಂದೀಗೌಡರು ಆಗಿನ ಕಾಲದಲ್ಲಿಯೇ ನಮಗೆ ನಮ್ಮ ಮಕ್ಕಳಿಗೆ ಕನ್ನಡದಿಂದಲೇ ಮುಕ್ತಿಯೆಂದು ನಂಬಿ ದವರು. ಅವರು ಕರ್ನಾಟಕ ಏಕೀಕರಣ ಸಮಿತಿ, ಕನ್ನಡಮಾಧ್ಯಮ ಅನುಷ್ಠಾನ ಸಮಿತಿ, ವಯಸ್ಕರ ಶಿಕ್ಷಣ ಸಮಿತಿ ಇವುಗಳಲ್ಲೆಲ್ಲಾ ಸದಸ್ಯರಾಗಿದ್ದುಕೊಂಡು ಕನ್ನಡ ಭಾಷೆ ಮತ್ತು ಕನ್ನಡ ಜನರ ಪರವಾಗಿ ಹೋರಾಡಿದವರು. ಅತ್ಯಂತ ಶಾಂತಸ್ವಭಾವದ ಬಂದೀಗೌಡರು ಕನ್ನಡ ಮತ್ತು ಕನ್ನಡಭಾಷೆ ಜನತೆಯ ಬಗ್ಗೆ ಅಪಮಾನದ ಪ್ರಸಂಗಗಳು

ಬಂದರೆ ಅತ್ಯಂತ ಭಾವಾವಿಷ್ಟರಾಗಿ ಸಿಡಿದೇಳುತ್ತಿದ್ದರು.

ಬಂದೀಗೌಡರು ಒಳ್ಳೆಯ ನ್ಯಾಯವಾದಿ, ಆದರ್ಶ ರಾಜಕಾರಣಿ, ದಕ್ಷ ಆಡಳಿತ ಗಾರ, ಜನಾನುರಾಗಿ ವ್ಯಕ್ತಿ ಹೀಗೆ ಅನೇಕ ಮುಖದ ವ್ಯಕ್ತಿತ್ವ ಹೊಂದಿದ್ದವರು. ಅವರ ತಮ್ಮ ಎ. ಜಿ. ಲಿಂಗಪ್ಪ ಅವರೂ ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಡಿದವರು. ನಮ್ಮ ಗ್ರಾಮಾಂತರದ ಮದುವೆಮುಂಜಿಗಳಲ್ಲಿರುತ್ತಿದ್ದ ಅನೇಕ ಮೂಢಸಂಪ್ರದಾಯ ಗಳನ್ನು ತಪ್ಪಿಸಿ ಸುಧಾರಣೆ ತಂದವರು. ಅಣ್ಣ ಬಂದೀಗೌಡರ ಆದರ್ಶವನ್ನು ನನಸಾಗಿ ಸಲು ದುಡಿದವರು. ಶ್ರೀ ಬಂದೀಗೌಡರು ತಾವು ಹುಟ್ಟಿದ ನೆಲ ತನ್ನ ಪರಿಸರ ತನ್ನ ದೇಶಕ್ಕೆ ಅನೇಕ ರೀತಿಯ ಸೇವೆಸಲ್ಲಿಸಿದ ಮಹಾನ್ ವ್ಯಕ್ತಿ. ಅವರು 1968ರಲ್ಲಿ ತಮ್ಮ ಇಹವನ್ನು ತ್ಯಜಿಸಿದರು. ಬಂದೀಗೌಡರ ಜೀವನ ನಮ್ಮ ಇಂದಿನ ಇಬ್ಬಂದಿ ಜೀವನದಲ್ಲಿ ಒಂದು ಅನುಕರಣೀಯ ಆಶಾಕಿರಣ.

ನಗುವನಹಳ್ಳಿ ಪಿ. ರತ್ನ

ಜಿ. ಎಸ್. ಬೊಮ್ಮೇಗೌಡ

ಹಚ್ಚಹಸುರಿನ ಪಚ್ಚೆಪೈರುಗಳ ನಾಡು, ಅಕ್ಕರೆಯ ಸಕ್ಕರೆಗೆ ಹೆಸರಾದ ಬೀಡು ಈ ಮಂಡ್ಯದ ನಾಡು. ಇಂತಹ ಪರಿಸರದ ಮಧ್ಯೆ ಇರುವ ಊರೇ ಗಾಣದಾಳು. ಈ ಊರು ಮಂಡ್ಯ ಜಿಲ್ಲೆಯ ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರಕ್ಕೆ ಅನೇಕ ರೀತಿಯಲ್ಲಿ ಸ್ಪಂದಿಸಿದೆ. ಈ ಊರಿನ ಅನೇಕ ಗೌಡರ ಉದಾರತೆ, ಧಾರ್ಮಿಕ ಕಳಕಳಿ ಅನುಕರಣೀಯ ವಾದಂತಹವು. ಅಂತಹ ಹಿರಿಯ ತಲೆಮಾರಿನ ಜನರಲ್ಲಿ ಗಾಣದಾಳಿನ ಬಸವೇಗೌಡರೂ ಒಬ್ಬರು. ಅವರು ತಮ್ಮ ಸಮೀಪ ವಲಯದಲ್ಲದಷ್ಟೇ ಅಲ್ಲ ಇಡೀ ಜಿಲ್ಲೆಯಲ್ಲಿಯೇ ಹೆಸರಾಂತ ವ್ಯಕ್ತಿಯಾಗಿದ್ದರು. ಬಸವೇಗೌಡರು ವೃತ್ತಿಯಲ್ಲಿ ಬೇಸಾಯಗಾರರು. ಉಪವೃತ್ತಿಯಾಗಿ ಕಂಟ್ರಾಕ್ಟ್ ಕೆಲಸವನ್ನೂ ಮಾಡಿಸುತ್ತಿದ್ದರು. ಇವರ ಕಂಟ್ರಾಕ್ಟ್ ಕೆಲಸದ ಕ್ಷೇತ್ರ ನಾಗಮಂಗಲ ತಾಲ್ಲೂಕು. ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಹೊಸತಾಗಿ ನಿರ್ಮಿತವಾದ, ದುರಸ್ತಿಯಾದ ಈ ತಾಲ್ಲೂಕಿನ ಅನೇಕ ಕೆರೆಗಳು ಇವರು ನಿಂತು ಕೆಲಸ ಮಾಡಿಸಿದಂತಹವೆಂದು ಹೇಳುತ್ತಾರೆ

ಬಸವೇಗೌಡರು ತಮಗೆ ಬೇಕಾಗುವ ಕೆಲಸಗಾರರನ್ನು ತಮಿಳು ನಾಡಿನಿಂದ ಕರೆಸುತ್ತಿದ್ದರು. ಇದಕ್ಕೆ ಕಾರಣ ಕರ್ನಾಟಕದ ಜನ ಕೆರೆ, ಕಟ್ಟೆ, ಅಣೆಕಟ್ಟುಗಳಂತಹ ಕಷ್ಟಕರವಾದ ಕೆಲಸಗಳಿಗೆ ಬಗ್ಗುತ್ತಿರಲಿಲ್ಲ ಈ ಮಾತು ಕರ್ನಾಟಕದವರಿಗೆ ಸಂಬಂಧಿಸಿ ದಂತೆ ಈಗಲೂ ಸತ್ಯ. ನಮ್ಮ ಬಹುತೇಕ ಅಣೆಕಟ್ಟುಗಳಲ್ಲಿ ಕೆಲಸ ಮಾಡುವವರು ಇಂದಿಗೂ ತಮಿಳುನಾಡು ಮತ್ತು ಆಂಧ್ರಪ್ರದೇಶದವರು ಎಂಬುದು ಗಮನಾರ್ಹ ಸಂಗತಿ. ಬಸವೇಗೌಡರು ಹೀಗೆ ಕರೆಸಿಕೊಂಡ ಆ ಜನರನ್ನು ತಮ್ಮ ಕುಟುಂಬ ದವರೋ ಎಂಬಂತೆ ನೋಡಿಕೊಳ್ಳುತ್ತಿದ್ದರು. ಅಂತಹ ಒಬ್ಬ ಕೂಲಿಯವನು ಒಮ್ಮೆ ತನ್ನ ಊರಿಗೆ ಹೋದವನು ಕಾಯಿಲೆ ಬಿದ್ದು ಅಲ್ಲಿಯೇ ತೀರಿಕೊಂಡ. ಆತ ಅತ್ಯಂತ ನಂಬಿಕಸ್ತ ಕೆಲಸಗಾರ. ಬಸವೇಗೌಡರು ಅವನಿಗಾಗಿ ಮರುಗಿದರಷ್ಟೇ ಅಲ್ಲ ಅವನ ಊರಾದ ತಮಿಳುನಾಡಿನ ಹಳ್ಳಿಗೆ ಹೋಗಿ ಅವನ ಸಂಸಾರದವರಿಗೆ ಹಣ ಸಹಾಯವನ್ನು ಮಾಡಿ ಬಂದರು.

ಗಾಣದಾಳು ಗ್ರಾಮ ವೈಷಮ್ಯದ ನೆಲೆಬೀಡೂ ಹೌದು. ಒಂದು ರೀತಿಯಲ್ಲಿ ಅದು ಇಂದಿಗೂ ಸತ್ಯವಾದ ಮಾತಾಗಿದೆ. ಶ್ರೀ ಬಸವೇಗೌಡರು ಈ ಊರಿನ ಎರಡೂ ಗುಂಪುಗಳ ಮಧ್ಯೆ ಘರ್ಷಣೆಯಾಗದಂತೆ ಅನೇಕರೀತಿಯಿಂದ ಪ್ರಯತ್ನಿಸುತ್ತಿದ್ದರು.

ಅವರ ಈ ಘನತೆಗೆ ಒಂದು ಉದಾಹರಣೆ. ಆಗಿನ್ನೂ ಕನ್ನಂಬಾಡಿ ಆಗಿ ಕಾವೇರಿ ನೀರೂ ಹರಿದಿರಲಿಲ್ಲ. ಒಮ್ಮೆ ಭಾರಿ ಮಳೆ ಬಿತ್ತು. ಗೌಡರು ತಮ್ಮ ಹೊಲದ ಬದುಗಳನ್ನು ನೋಡಲು ಗುದ್ದಲಿ ಹಿಡಿದು ಹೋದರು. ಅವರ ಹೊಲದ ಬದುಗಳು ಒಡೆದಿರಲಿಲ್ಲ. ಆದರೆ ಎದುರು ಗುಂಪಿನವರ ಪಕ್ಕದ ಹೊಲದ ಬದು ಒಡೆದು ನೀರು ಆಚೆ ಹರಿಯುವ ಸ್ಥಿತಿಯಲ್ಲಿದ್ದಿತು. ಹಾಗೆ ಹರಿದರೆ ಭೂಮಿಯ ಸಾರವೆಲ್ಲಾ ಕೊಚ್ಚಿ ಹೋಗುತ್ತದೆ. ಮಣ್ಣಿನ ಮಗ ಬಸವೇಗೌಡರು ಕೂಡಲೇ ಅದನ್ನು ತಡೆದರು. ತಂದೆಯನ್ನು ಹಿಂಬಾಲಿಸಿ ಬಂದಿದ್ದ ಗೌಡರ ಮಗ ಅವರು ಶತ್ರುಗುಂಪಿನ ಹೊಲದ ರಕ್ಷಣೆಯಲ್ಲಿ ನಿರತರಾಗಿದ್ದುದನ್ನು ಕಂಡು ಆಕ್ಷೇಪಿಸಿದ. ಆಗ ಬಸವೇಗೌಡರು ತಮ್ಮ ಮಗನನ್ನು ಕುರಿತು "ಜಮೀನು ಒಡೆತನ ಯಾರದಾದರೇನು ? ಭೂಮಿತಾಯಿ ಒಬ್ಬಳೆ. ರೈತನಾಗಿದ್ದು ಅದು ಹಾಳಾಗುವುದನ್ನು ನೋಡಿ ಸುಮ್ಮನಿರುವುದೆ ?" ಮಗ ಶಿವಗೇಗೌಡ ನಿರುತ್ತರನಾದ. ತಂದೆಯ ಉದಾರತೆಯ ಮುಂದೆ ತಾನು ಕುಬ್ಜ ನೆನಿಸಿತು. ತಾನೂ ತನ್ನ ಜೀವನದಲ್ಲಿ ತಂದೆಯ ಗುಣಗಳನ್ನು ಅಳವಡಿಸಿಕೊಳ್ಳ ಬೇಕೆಂದು ನಿರ್ಧರಿಸಿದ.

ಗಾಣವಾಳು ಬಸವೇಗೌಡರ ಮಗ ಶಿವಗೇಗೌಡ ಮತ್ತು ಚೌಡಮ್ಮ ದಂಪತಿಗಳ ಮಗ ಶ್ರೀ ಜಿ. ಎಸ್. ಬೊಮ್ಮೇಗೌಡರು. ದಂಪತಿಗಳ ಐದು ಜನ ಮಕ್ಕಳಲ್ಲಿ ಬೊಮ್ಮೇಗೌಡರು ಮಧ್ಯದವರು. ಈ ಐದೂ ಜನರೂ ತಾತ ಬಸವೇಗೌಡರ ಆದರ್ಶವನ್ನು ಅನುಭವಿಸಿದ ಒಟ್ಟು ಕುಟುಂಬದಲ್ಲಿ ಬೆಳೆದವರು. ಗ್ರಾಮೀಣ ಬದುಕಿನ ಜಂಜಾಟದಲ್ಲಿ ಮನೆಯಲ್ಲಿ ಎಷ್ಟು ಮಕ್ಕಳಿದ್ದರೂ ಸಾಲದು. ವ್ಯವಸಾಯ ನೂರು ಕೈಗಳನ್ನು ಬಯಸುತ್ತದೆ. ಅಲ್ಲದೆ ವೃತ್ತಿ ಧರ್ಮದ ಮುಂದೆ ಓದು ಬರಹ ಅನಗತ್ಯ ಎಂಬುದೂ ಆಗಿನ ಕಾಲದ ಗ್ರಾಮೀಣ ಜನರ ಭಾವನೆಯಾಗಿತ್ತು. ಹೀಗಾಗಿ ಬೊಮ್ಮೇಗೌಡರ ಶಿಕ್ಷಣ ಪ್ರಾಥಶಾಲೆಯ ಮಟ್ಟಕ್ಕೆ ಮುಗಿಯಿತು. ಮುಂದೆ ಅವರು ತಾತ, ತಂದೆಯಂತೆ ಕೃಷಿ ಮತ್ತು ಕಂಟ್ರಾಕ್ಟ್ ವೃತ್ತಿಯನ್ನೇ ಅವಲಂಬಿಸಿ ದರು ಮತ್ತು ಅದರಲ್ಲಿ ಹಣ ಸಂಪಾದನೆ, ಹೆಸರು ಸಂಪಾದನೆ ಎರಡನ್ನೂ ಮಾಡಿದರು. ಆದರೊಂದಿಗೆ ವ್ಯಾಪಾರದ ಸಂಕೇತವಾಗಿ ಜವಳಿ ಅಂಗಡಿ, ಉದ್ಯಮದ ಸಂಕೇತವಾಗಿ ಬೀಡಿ ಕಾರ್ಖಾನೆಯನ್ನು ನಡೆಸಿ ತಾತ ತಂದೆಗಿಂತ ಒಂದು ಹೆಜ್ಜೆ ಮುಂದೆ ಹೋದರು.

1939ರಲ್ಲಿ ಮಂಡ್ಯ ಜಿಲ್ಲೆಯ ಉದಯವಾಯಿತಷ್ಟೆ. ಸುಮಾರು 1940ರಲ್ಲಿ ಈ ಹೊಸ ಜಿಲ್ಲೆಯ ಜಿಲ್ಲಾ ಬೋರ್ಡ್ ಚುನಾವಣೆ ನಡೆಯಿತು. ಆಗ ಶ್ರೀ ಬೊಮ್ಮೇಗೌಡರು ಸಕ್ರಿಯವಾಗಿ ಚುನಾವಣಾ ಪ್ರಚಾರದಲ್ಲಿ ತೊಡಗಿ ರಾಜಕೀಯದಲ್ಲಿ ಕಾಣಿಸಿಕೊಂಡರು.

1945ರಲ್ಲಿ ಜಿಲ್ಲಾ ಬೋರ್ಡಿನ ಎರಡನೇ ಚುನಾವಣೆ ಪ್ರಾರಂಭವಾದವು. ಆ ಸಮಯದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಉಮೇದುವಾರರುಗಳನ್ನು ನಿಲ್ಲಿಸಲು

ನಿಶ್ಚಯಿಸಲಾಯಿತು. ಬೇಗ್‌ನಿಂದ ನ್ಯಾಯ ಶಾಸ್ತ್ರ ಪಾರಂಗತರಾಗಿ ಬಂದ ಕೀಲಾರದ ಶ್ರೀ ಕೆ. ವಿ. ಶಂಕರಗೌಡರು ಮಂಡ್ಯದಲ್ಲಿ ವಕೀಲರಾಗಿ ಆಗಷ್ಟೆ ಸೇವೆ ಪ್ರಾರಂಭಿಸಿದ್ದರು. ಕಾಂಗ್ರೆಸ್ ಪ್ರಮುಖರುಗಳಾದ ಸಾಹುಕಾರ್ ಚನ್ನಯ್ಯನವರು, ಎಚ್.ಕೆ. ವೀರಣ್ಣಗೌಡರು, ಎ.ಜಿ. ಬಂದೀಗೌಡರು ಜಿಲ್ಲಾ ಬೋರ್ಡಿನ ಚುನಾವಣೆಗೆ ಹುರಿಯಾಳುಗಳನ್ನು ಆಯ್ಕೆ ಮಾಡುವ ಸಲುವಾಗಿ ಪ್ರವಾಸ ಮಾಡಿ ಮಂಡ್ಯದ ಯುವಕ ಶ್ರೀ ಕೆ. ವಿ. ಶಂಕರಗೌಡರನ್ನು ನಿಲ್ಲಿಸಲು ಯೋಚಿಸಿ ಶ್ರೀಯುತರನ್ನು ಭೇಟಿ ಮಾಡಿ ಅವರ ಅಭಿಪ್ರಾಯ ಕೇಳಿದರು ಆಗ ಶಂಕರಗೌಡರು ಜಿ. ಎಸ್. ಬೊಮ್ಮೇ ಗೌಡರನ್ನು ತಮ್ಮ ಜೊತೆಗೆ ಕೊಡುವುದಾದರೆ ಚುನಾವಣೆಗೆ ನಾನು ನಿಲ್ಲುತ್ತೇನೆ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಕೆ ವಿ. ಶಂಕರಗೌಡರ ಪ್ರೀತಿ ಆದರಾಭಿ ಮಾನಕ್ಕೆ ಸೋತು ಅವರ ಸೂಚನೆಯನ್ನು ಸ್ವೀಕರಿಸಿ ಚುನಾವಯಲ್ಲಿ ಸ್ಪರ್ಧಿಸಲು ಒಪ್ಪಿದರು. ಕಾಂಗ್ರೆಸ್ ಮುಖಂಡರು ಬೊಮ್ಮೇಗೌಡರ ಒಪ್ಪಿಗೆಯನ್ನು ತಿಳಿದು ಗೌಡರನ್ನು ಕಾಂಗ್ರೆಸ್ ಹುರಿಯಾಳನ್ನಾಗಿ ಆಯ್ಕೆ ಮಾಡಿದರು. ಆ ಚುನಾವಣೆಯಲ್ಲಿ ಬೊಮ್ಮೇಗೌಡರು ತಮ್ಮ ವರ್ಚಸ್ಸು, ವಿನಯಶೀಲತೆ, ಉದಾರತೆಯ ಮೂಲಕ ಜನರ ಮನಸ್ಸನ್ನು ಸೂರೆಗೊಂಡು ಕಾಂಗೆ ಸ್ ಅಭ್ಯರ್ಥಿಯಾಗಿ ಆಯ್ಕೆಗೊಂಡು ಜನರ ಸೇವಾ ಕೈಂಕರ್ಯ ಕೈಗೊಂಡರು.

ಗೌಡರ ಸೇವಾಕೈಂಕರ್ಯದ ವಿಸ್ತಾರ ಬೆರಳೆಣಿಕೆಯಷ್ಟಲ್ಲ ಪಟ್ಟಿಮಾಡಲಾಗದಷ್ಟು ಪಾದರಸದಂತೆ ಹರಿದಾಡುತ್ತಿದ್ದ ಗೌಡರ ಸೇವಾಮನೋಭಾವದ ಚಟುವಟಿಕೆ ಜಿಲ್ಲೆಯ ನಾನಾ ರಚನಾತ್ಮಕ ಕಾರ್ಯಗಳಲ್ಲಿ ಎದ್ದು ಕಾಣುತ್ತದೆ. ಹುಮ್ಮಸ್ಸಿನ ಉದಾರಿ, ಜನಸೇವೆಯ ರೂವಾರಿ ಬೊಮ್ಮೇಗೌಡರು ಶ್ರೀ ಕೆ. ವಿ. ಶಂಕರಗೌಡರ ಮುಂದಾಳತ್ವ ದಲ್ಲಿ ರೈತರ ಸಂಘಟನೆ ಮಾಡಲು ಆಸ್ಥೆ ವಹಿಸಿದರು. ಇದಕ್ಕೆ ಪೂರಕವಾಗಿ ರೈತ ಸೋದರರ ಅನುಕೂಲಕ್ಕಾಗಿ ರೈತರ ಸಹಕಾರ ಸಂಘ ಸ್ಥಾಪಿಸುವ ಕೆಲಸಕ್ಕೆ ಪ್ರಥಮ ಆದ್ಯತೆ ನೀಡಿ ಶ್ರೀ ಶಂಕರಗೌಡರು ಶ್ರೀ ಕೆ. ಬೆಟ್ಟಶೆಟ್ಟರು ಮುಂತಾದವರೊಡನೆ ಗೌಡರು ಜಿಲ್ಲೆಯಾದ್ಯಂತ ಪ್ರವಾಸ ಮಾಡಿ ರೈತರ ಸಹಕಾರ ಸಂಘ ಸ್ಥಾಪಿಸಲು ಕಾರಣ ರಾದರು. ಅಷ್ಟೇ ಅಲ್ಲದೆ ಸಂಘದ ಶಾಖೆಗಳನ್ನು ನಾಗಮಂಗಲ ಮತ್ತು ಶ್ರೀರಂಗಪಟ್ಟಣ ಗಳಲ್ಲಿ ಪ್ರಾರಂಭಿಸಿ ಜನರಿಗೆ ದುಭಾರಿ ಬೆಲೆಯ ಪದಾರ್ಥಗಳು ನ್ಯಾಯಬೆಲೆಯಲ್ಲಿ ಸಿಗುವಂತೆ ವ್ಯವಸ್ಥೆಮಾಡುವಲ್ಲೂ ಬೊಮ್ಮೇಗೌಡರು ನೆರವಾದರು,

ಗೌಡರ ಸಾರ್ವಜನಿಕ ಸೇವಾಕಾರ್ಯದ ಚಟುವಟಿಕೆಗಳಿಗೆ ಹಲವಾರು ನಿದರ್ಶನಗಳು ಉಂಟು. ಅಂತಹ ನಿದರ್ಶನಗಳಲ್ಲಿ ಇದು ಒಂದು.

ಮಂಡ್ಯದಲ್ಲಿ ವಿದ್ಯಾರ್ಥಿನಿಲಯ ಸ್ಥಾಪನೆಗೆ ಯೋಜಿಸಲಾಯ್ತು. ಅದಕ್ಕಾಗಿ ಹಣದ ಯೋಜನೆಯು ಒಂದಿರಬೇಕು. ಆಗ ನಾಟಕ ಪ್ರದರ್ಶನ ಮಾಡಿ ಅದರ ಮೂಲಕ ಹಣ ಸಂಗ್ರಹ ಮಾಡಿ ವಿದ್ಯಾರ್ಥಿನಿಲಯ ಸ್ಥಾಪನೆ ಮಾಡುವ ಪ್ರಯತ್ನ

ಮಾಡಿದರು. ಅಂತೆಯೇ "ದಾನಶೂರ ಕರ್ಣ" ಎಂಬ ಪೌರಾಣಿಕ ನಾಟಕವನ್ನು ಅಭ್ಯಾಸ ಮಾಡಿ ಮಂಡ್ಯ ಮತ್ತು ನಾಗಮಂಗಲಗಳಲ್ಲಿ ನಾಟಕ ಪ್ರದರ್ಶನ ನೀಡಿದರು. ನಾಟಕ ಪ್ರದರ್ಶನದ ಪ್ರವೇಶ ಧನ ಒಂದು ಸಾವಿರ ರೂಪಾಯಿಗಳಿಂದ ಐನೂರು ರೂಪಾಯಿಗಳಾಗಿತ್ತು. ನಾಟಕದಲ್ಲಿ ಜಿ. ಎಸ್ ಬೊಮ್ಮೇಗೌಡರು ವಿಧುರನ ಪಾತ್ರವನ್ನು ಬಹಳ ಸೊಗಸಾಗಿ ನಿರ್ವಹಿಸಿ ಇವರು ಸೇವಾ ಧುರೀಣ ಮಾತ್ರವಲ್ಲ ಅಭಿನಯ ಭಾರ್ಗವ ಕೂಡ ಎಂಬ ಭಾವನೆ ಜನರ ಮನದಲ್ಲಿ ಮೂಡುವಂತೆ ಮಾಡಿದರು. ಈ ನಾಟಕ ಪ್ರದರ್ಶನಗಳಿಂದ ಬಂದ ಉತ್ಪತ್ತಿಯ ಪ್ರತೀಕವಾಗಿ ಮಂಡ್ಯ ನಗರದಲ್ಲಿ ಒಕ್ಕಲಿಗರ ಸಾರ್ವಜನಿಕ ವಿದ್ಯಾರ್ಥಿನಿಲಯ ಮತ್ತು ನಾಗಮಂಗಲ ದಲ್ಲಿ ಶ್ರೀ ಆದಿಚುಂಚನಗಿರಿ ಮಠದ ಹೆಸರಿನಲ್ಲಿ ವಿದ್ಯಾರ್ಥಿನಿಲಯಗಳು ರೂಪು ಗೊಂಡವು.

ಮುಂದೆ ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾಗಿ, ಅನಂತರ ಅಧ್ಯಕ್ಷರಾಗಿ ದುಡಿದು ಸೇವೆ ಸಲ್ಲಿಸಿದ ಗೌಡರು ರೈತರ ಸಹಕಾರ ಸಂಘದ ಅಧ್ಯಕ್ಷರಾಗಿ ಜಪಾನಿನ ಮಾದರಿಯಲ್ಲಿ ಅಕ್ಕಿಗಿರಣಿ, ತೌಡಿನಿಂದ ಎಣ್ಣೆ ತೆಗೆಯುವ ಯಂತ್ರ. ವ್ಯವಸಾಯ ಉಪಕರಣಗಳ ತಯಾರಿಕಾ ಘಟಕಗಳು ರೈತರ ಸೊಸೈಟಿಗೆ ಸೇರ್ಪಡೆಯಾಗಲು ಕಾರಣ ರಾದರು. ಮೈಸೂರು ಸಕ್ಕರೆ ಕಂಪನಿಯ ಡೈರೆಕ್ಟರಾಗಿ ಸೇವೆಗೆ ಕೈ ಹಚ್ಚಿದ ಬೊಮ್ಮೇಗೌಡರು, ರೈತರ ಬೆವರಿನ ಬೆಲೆಗೆ ಸ್ಪಂದಿಸಿ ಅವರು ಬೆವರಿಳಿಸಿ ಬೆಳೆದ ಕಬ್ಬಿಗೆ ನ್ಯಾಯಯುತವಾದ ಬೆಲೆ ಸಿಗುವಂತೆಮಾಡಲು ಹೋರಾಡಿದರು.

ಗ್ರಾಮೀಣ ಜನರ ಬದುಕಿನ ಬಗ್ಗೆ ಕಾಳಜಿ ವಹಿಸುತ್ತಿದ್ದ ಗೌಡರ ಮನಸ್ಸು ಗ್ರಾಮೀಣ ಪರಿಸರದಲ್ಲಿ ಹೆಚ್ಚಿನ ವಿದ್ಯಾಭ್ಯಾಸದ ವ್ಯವಸ್ಥೆ ಇಲ್ಲದೆ ಎಷ್ಟೋ ಗ್ರಾಮೀಣ ಪ್ರತಿಭೆಗಳು ಕಮರಿಹೋಗುತ್ತಿದ್ದನ್ನು ಕಂಡು ಮಂಡ್ಯ ತಾಲ್ಲೂಕಿನ ವಿ. ಸಿ. ಫಾರಂ ನಲ್ಲಿ ಪ್ರೌಢಶಾಲೆಯೊಂದನ್ನು ತೆರೆಯಲು ಗಮನ ಹರಿಸಿತು. ಕೈ ಹಾಕಿದ್ದನ್ನು ಮಾಡಿ ಮುಗಿಸುವ ಛಲಗಾರರು ಬೊಮ್ಮೇಗೌಡರು ಅಂತೆಯೇ ವಿ. ಸಿ. ಫಾರಂನಲ್ಲಿ ಪ್ರೌಢಶಾಲೆ ತಲೆ ಎತ್ತಲು ಕಾರಣರಾದರು. ಗೌಡರ ಶ್ರಮದಿಂದ ತಲೆ ಎತ್ತಿದ ಆ ಶಾಲೆ ಈಗ ಪದವಿಪೂರ್ವ ಕಾಲೇಜಾಗಿ ಪರಿವರ್ತನೆಗೊಂಡು ಬೊಮ್ಮೇಗೌಡರ ಧೀಮಂತ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಅಷ್ಟೇ ಅಲ್ಲದೆ ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ ಕಂಪನಿಯ ಡೈರೆಕ್ಟರ್ ಸ್ಥಾನವನ್ನು ಅಲಂಕರಿಸಿ, ನಾನಾ ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿ ಸ್ಥಾನದಲ್ಲಿ ಮಿಂಚಿನ ಸೇವೆಸಲ್ಲಿಸಿದ ಗೌಡರು. ತಮ್ಮ ಸೇವಾ ಸೌಗಂಧ ವನ್ನು ಜಿಲ್ಲೆಯ ಎಲ್ಲೆಡೆಯಲ್ಲಿ ಹರಡಿದ್ದಾರೆ.

1952ರಲ್ಲಿ ಶ್ರೀ ಕೆ. ವಿ. ಶಂಕರಗೌಡರು ಶಾಸನ ಸಭೆಗೆ ರಾಜಿನಾಮೆ ಇತ್ತರು. ಆ ಸಮಯದಲ್ಲಿ ತೆರವಾದ ಆ ಸ್ಥಾನಕ್ಕೆ ಮರು ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದು ವಾರರಾಗಿ ಸ್ಪರ್ಧಿಸಿದ್ದ ಜನನಾಯಕ ಶ್ರೀ ಜಿ. ಎಸ್. ಬೊಮ್ಮೇಗೌಡರನ್ನು ಜನರು

ತಮ್ಮ ಪ್ರತಿನಿಧಿಯಾಗಿ ಆರಿಸಿದರು.

ಮುಂದಿನ ಶಾಸನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆ ಉಂಟಾಗಿ ಕೆ. ವಿ. ಶಂಕರಗೌಡರಿಗೆ ಕಾಂಗ್ರೆಸ್ ಉಮೇದುವಾರಿಕೆ ದೊರೆಯದಂತೆ ಉದ್ದೇಶಪೂರ್ವಕವಾಗಿ ತಪ್ಪಿಸಲಾಯ್ತು. ಆ ಒಂದು ಪ್ರಕರಣದಿಂದ ಮಂಡ್ಯ ತಾಲ್ಲೂಕಿನ ಬಹುತೇಕ ಜನರಿಗೆ ಬೇಸರವಾಯಿತು. ಆ ಕಾರಣವಾಗಿ ಅವರು ರೊಚ್ಚಿಗೆದ್ದರು. ಸೇರಿಗೆ ಸವಾಸೇರು ಎನ್ನುವಂತೆ ಆಗ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸಾಹುಕಾರ್ ಚನ್ನಯ್ಯನವರ ವಿರುದ್ಧ ತಮ್ಮ ನೆಚ್ಚಿನ ಹುರಿಯಾಳು ಬೊಮ್ಮೇಗೌಡರನ್ನು ಸ್ಪರ್ಧೆಗೆ ನಿಲ್ಲಿಸಿ ಜಯದ ಮಾಲೆಯಿಂದ ಗೌಡರ ಕೊರಳನ್ನು ಅಲಂಕರಿಸುವ ಮೂಲಕ ತಮ್ಮ ಸೇಡಿನ ಕಿಡಿಯನ್ನು ಶಮನಗೊಳಿಸಿಕೊಂಡರು. ಈ ಪ್ರಕರಣವಂತು ಭಾರತಾದ್ಯಂತ ವಾರ್ತಾ ಪತ್ರಿಕೆಗಳ ಮುಖ ಪುಟಗಳಲ್ಲಿ ಪ್ರಮುಖ ಸುದ್ದಿಯಾಗಿ ಪ್ರತಿಧ್ವನಿಗೊಂಡಿತು. ಮಂಡ್ಯ ಜಿಲ್ಲೆಯ ರಾಜಕೀಯ ಚರಿತ್ರೆಯ ಪುಟಗಳಲ್ಲಿ ಬರೆದಿಡಬಹುದಾದ ಪ್ರಾಮುಖ್ಯತೆಯನ್ನು ಪಡೆಯಿತು. ಜನಮನದ ಪ್ರೀತಿ ಅಭಿಮಾನಗಳನ್ನು ಗೌಡರು ಗಳಿಸಿದರು. ಜಿ. ಎಸ್. ಬೊಮ್ಮೇಗೌಡರು ಚಾಣಾಕ್ಷತನದ ಮುತ್ಸದ್ದಿ ಕೂಡ. ಶಕ್ತಿಯಿಂದಾಗದ ಕೆಲಸವನ್ನು ಯುಕ್ತಿಯಿಂದ ಮಾಡು ಎಂಬ ನೀತಿಯ ಮಾತಿನಂತೆ ಎಂತಹ ಸಂದಿಗ್ಧ ಪರಿಸ್ಥಿತಿಯನ್ನೂ ಚಾಣಾಕ್ಷತನದಿಂದ ಬಗೆಹರಿಸಿ ತಿಳಿಗೊಳಿಸುತ್ತಿದ್ದ ಗೌಡರ ವ್ಯಕ್ತಿತ್ವಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು.

ಮಂಡ್ಯ ತಾಲ್ಲೂಕು ಅಭಿವೃದ್ಧಿ ಮಂಡಳಿಗೆ ಉಮೇದುವಾರರನ್ನು ಆರಿಸಬೇಕಿತ್ತು. ಅದರಲ್ಲಿ ಮುಖ್ಯವಾಗಿ ಕೊತ್ತತ್ತಿ ಹೋಬಳಿಯಿಂದ ಉಮೇದುವಾರರನ್ನು ಆರಿಸುವಾಗ ಗೆಲ್ಲುವ ಭರವಸೆಯುಳ್ಳ ಹುರಿಯಾಳನ್ನು ನಿಲ್ಲಿಸಬೇಕೆಂದು ಯೋಚಿಸಿ ಅಂತಹ ಅಭ್ಯರ್ಥಿಯನ್ನು ಆರಿಸಿದರು. ಆದರೆ ಆ ಅಭ್ಯರ್ಥಿ ತಾನು ಸ್ಪರ್ಧೆಯಲ್ಲಿ ಭಾಗವಹಿಸುವುದಿಲ್ಲವೆಂದು ಹೇಳಿದರು. ಆಗ ಅವರ ಮನಸ್ಸು ಒಲಿಸಿ ಚುನಾವಣೆಯ ಕಣಕ್ಕಿಳಿಸಲು ಗೌಡರು ಪ್ರಯತ್ನಿಸಿದರು. ಅತ ಇವರ ಪ್ರಯತ್ನಕ್ಕೆ ಬಗ್ಗಲಿಲ್ಲ. ಅದಕ್ಕಾಗಿ ವಾದ ವಿವಾದಗಳಾದವು. ಯಾವುದರಿಂದಲೂ ಬಗೆ ಹರಿಯದಿದ್ದಾಗ ಬೊಮ್ಮೇಗೌಡರು ತಮ್ಮ ಚಾಣಾಕ್ಷತನದ ಬಾಣ ಬಿಟ್ಟರು. ಗೌಡರು ಬಿಟ್ಟ ಬಾಣ ಅಂದರೆ ತಾವು ಆರಿಸಿದ್ದ ಅಭ್ಯರ್ಥಿಯ ಹೆಸರು ಮತ್ತು ಇನ್ನೊಬ್ಬ ಅಭ್ಯರ್ಥಿಯ ಹೆಸರು ಇವೆರಡನ್ನೂ ಒಂದೊಂದು ಚೀಟಿಯಲ್ಲಿ ಬರೆದು ಹಾಕಿ ಪುಟ್ಟ ಮಗುವಿನ ಕೈಯಲ್ಲಿ ಒಂದನ್ನು ಎತ್ತಿಸಿದರು. ಆ ಪುಟ್ಟ ಮಗು ಇವರು ಆರಿಸಿದ್ದ ಅಭ್ಯರ್ಥಿಯ ಹೆಸರಿರುವ ಚೀಟಿಯನ್ನೇ ಎತ್ತಿಕೊಟ್ಟಿತು. ಆಗ ಗೌಡರಿಗೆ ಮತ್ತು ಅವರ ಸಂಗಡಿಗರಿಗೆ ಆನಂದವಾಯಿತು. ಚೀಟಿ ಎತ್ತುವ ಮೊದಲೇ ಮಗು ನಿಮ್ಮ ಹೆಸರಿರುವ ಚೀಟಿಯನ್ನೇನಾದರೂ ಎತ್ತಿದರೆ ಖಂಡಿತ ನೀವು ನಮ್ಮ ಮಾತಿನಂತೆ ಸ್ಪರ್ಧೆಗೆ ನಿಲ್ಲಬೇಕು ಎಂದು ಅಭ್ಯರ್ಥಿಗೆ ಖಚಿತವಾಗಿ ಹೇಳಿ ಈ ವ್ಯವಸ್ಥೆ ಮಾಡಿದ್ದುದರಿಂದ ಆ ಅಭ್ಯರ್ಥಿ

ಮರು ಮಾತಿಲ್ಲದೆ ಒಪ್ಪಬೇಕಾಯಿತು. ಚುನಾವಣೆಯ ಕಣಕ್ಕೆ ಇಳಿದ ಆ ಅಭ್ಯರ್ಥಿಗೆ ಜಯದ ಮಾಲೆಯು ಬಿದ್ದಿತು. ಆದರೆ ಗೌಡರ ಚಾಣಾಕ್ಷತನದ ಮಹಿಮೆ ಹೇಗಿತ್ತೆಂದರೆ ಎರಡೂ ಚೀಟಿಗಳಲ್ಲಿ ಇದ್ದ ಹೆಸರೂ ತಾವು ಆರಿಸಬೇಕೆಂದಿದ್ದ ಒಬ್ಬನೇ ಅಭ್ಯರ್ಥಿಯ ಹೆಸರೇ ಆಗಿತ್ತು. ಹೀಗೆ ನಾನಾ ಬಗೆಯ ಸಮಸ್ಯೆಗಳನ್ನು ಬಗೆ ಹರಿಸುತ್ತಿದ್ದ ಬೊಮ್ಮೇ ಗೌಡರು 1947ರಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಅನೇಕಸಲ ಸೆರೆಮನೆ ವಾಸ ಅನುಭವಿಸಿದರು. ಮೈಸೂರು ಚಲೋ ಚಳುವಳಿಯಲ್ಲಿ ಪಾಲ್ಗೊಂಡು ಸೆರೆಮನೆ ಬಂಧಿಯಾದರು.

ಶಾಂತ ಸ್ವಭಾವದ ಯಾರನ್ನೂ ನೋಯಿಸದ ಯಾವ ಕೆಟ್ಟ ಹವ್ಯಾಸಗಳು ಇಲ್ಲದ, ಜಿಲ್ಲೆಯ ಎಲ್ಲರ ಅಭ್ಯುದಯಕ್ಕಾಗಿ ದುಡಿದ ರೈತಮಕ್ಕಳ ಶ್ರೇಯಸ್ಸಿಗಾಗಿ ಶ್ರಮಿಸಿದ ಜಿ. ಎಸ್. ಬೊಮ್ಮೇಗೌಡರು ಮಂಡ್ಯಜಿಲ್ಲೆಯ ಹೆಮ್ಮೆಯ ಪುತ್ರ ಎಂದರೆ ಉತ್ಪ್ರೇಕ್ಷೆಯಾಗಲಾರದು.

ಪದ್ಮಾ ಕೆಂಪೇಗೌಡ

ಕೆ. ಪುಟ್ಟಸ್ವಾಮಿ

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಮುಕಿ ಈ ನಾಡಿನ ಬಂಧನ ಮುಕ್ತಿಗೆ ದುಡಿವರು ಅದೆಷ್ಟೋ ಮಂದಿ. ಅವರಿಗೆಲ್ಲಾ ತಾವು ಈ ದೇಶದದಲ್ಲಿ ಒಂದು ಹೊಸ ಯುಗಕ್ಕಾಗಿ ಬಲಿಧಾನಗೈಯ್ಯುತ್ತಿದ್ದೇವೆಂಬ ನೆನಪಿದ್ದು ಅವರ ಸಾಹಸ ಯಾತ್ರೆಯು ನೆನಪುಗಳನ್ನು ಬಿಟ್ಟುಹೋಗಿದ್ದರೆ ಅದೇ ಒಂದು ಇತಿಹಾಸವಾಗುತ್ತಿತ್ತು. ಆದರೆ ಅವರೆಲ್ಲರ ಮುಂದಿದ್ದುದು ಒಂದೇ ಗುರಿ ಬ್ರಿಟಿಷರನ್ನು ತೊಲಗಿಸುವುದು, ಭಾರತವನ್ನು ಸ್ವತಂತ್ರ್ಯಗೊಳಿಸುವುದು. ಈ ಯಜ್ಞನದಲ್ಲಿ ಬೆಂದು ಉಳಿದು ಬಂದ ಕೆಲವರು ಆನಂತರ ಸ್ವಾತಂತ್ರ್ಯ ಬಂದ ಮೇಲೆ ಭಾರತದ ರಾಜಕೀಯದಲ್ಲೂ ಪ್ರವೇಶಿಸಿ ಅನೇಕ ಸ್ಥಾನಮಾನಗಳನ್ನು ಪಡೆದರು. ಅಂತಹದರಲ್ಲಿ ಶ್ರೀ ಕೆ. ಪುಟ್ಟಸ್ವಾಮಿ ಕೂಡ ಒಬ್ಬರೆಂದು ಹೇಳಬಹುದು.

ಮೈಸೂರು ತಾಲ್ಲೂಕು ಕಳಸ್ತವಾಡಿಯಲ್ಲಿ ಕುನ್ನಿಂಗೇಗೌಡ ಎಂಬ ರೈತರಿದ್ದರು. ಅವರಿಗೆ ಅರಕೆರೆಯ ಕೆಂಪೇಗೌಡ ಎಂಬುವರ ಮಗಳು ಕುನ್ನಿಂಗಮ್ಮ ಎಂಬುವರನ್ನು ಕೊಟ್ಟು ಮದುವೆಯಾಗಿತ್ತು. ಮುಂದೆ ಅವರು ತಮ್ಮ ಸಂಸಾರವನ್ನು ಅರಕೆರೆಗೆ ಬದಲಾಯಿಸಿದರು. ಅಲ್ಲಿಯೂ ಇವರನ್ನು ಕಳಸ್ತವಾಡಿಯವರೆಂದೇ ಜನ ಗುರುತಿಸುತ್ತಿದ್ದರು. ಕುನ್ನಿಂಗೇಗೌಡ ಕುನ್ನಿಂಗಮ್ಮ ದಂಪತಿಗಳಿಗೆ ಲಿಂಗೇಗೌಡ ಒಬ್ಬನೇ ಮಗ. ಇವರನ್ನು ಕೂಡ ಜನರು ಕಳಸ್ತವಾಡಿಯ ಲಿಂಗೇಗೌಡ ಎಂದೇ ಕರೆಯುತ್ತಿದ್ದರು. ಲಿಂಗೇಗೌಡರಿಗೆ ಅರಕೆರೆಯ ನಿಂಗಮ್ಮ ಎಂಬುವರೊಡನೆ ಮದುವೆಯಾಗಿತ್ತು. ಈ ದಂಪತಿಗಳ ಮಗನಾಗಿ ಶ್ರೀ ಕೆ. ಪುಟ್ಟಸ್ವಾಮಿ 1919ರಲ್ಲಿ ಅರಕೆರೆ ಗ್ರಾಮದಲ್ಲಿ ಜನ್ಮ ತಳೆದರು.

ಪುಟ್ಟಸ್ವಾಮಿಯವರ ಬಾಲ್ಯ ಅರಕೆರೆಯಲ್ಲಿಯೇ ಕಳೆಯಿತು. ಅವರ ಪ್ರಾಥಮಿಕ ಶಿಕ್ಷಣ ಕೂಡ ಅರಕೆರೆಯಲ್ಲಿಯೇ ಆಯಿತು ಮುಂದ ಪ್ರೌಢ ಶಾಲೆಯ ಶಿಕ್ಷಣಕ್ಕೆ ಅವರು ಮೈಸೂರಿನ ಮಹಾರಾಜ ಪ್ರೌಢಶಾಲೆಯ ವಿದ್ಯಾರ್ಥಿಯಾದರು. ತಮ್ಮ ಇಂಟರ್ ಮೀಡಿಯೇಟ್ ಶಿಕ್ಷಣ ಮುಗಿಸಿದ ಪುಟ್ಟಸ್ವಾಮಿಯವರು ಮನಶಾಸ್ತ್ರ ಆನರ್ಸ್‌ಗೆ ಸೇರಿದರು, ಮನಶಾಸ್ತ್ರದಲ್ಲಿ ಉನ್ನತ ಶಿಕ್ಷಣ ಪಡೆಯುವುದು ಅವರ ಉದ್ದೇಶವಾಗಿತ್ತೆಂದು ಕಾಣುತ್ತದೆ. ಆದರೆ ಆ ದಿನಗಳಲ್ಲಿ ಹಳ್ಳಿಯ ಹುಡುಗರು ಉನ್ನತ ಶಿಕ್ಷಣ ಪಡೆಯುವುದನ್ನು ಅನೇಕ ಮುಂದುವರಿದ ಜನಾಂಗದ ಪ್ರಾಧ್ಯಾಪಕರೇ ಸಹಿಸುತ್ತಿರಲಿಲ್ಲ

ವೆಂದೂ ಆನರ್ಸ್, ಎಂ.ಎ, ಅಂತಹ ತರಗತಿಗಳಲ್ಲಿ ಈ ವಿದ್ಯಾರ್ಥಿಗಳಿಗೆ ಕಡಿಮೆ ಅಂಕ ಕೊಡುವುದರ ಮೂಲಕ ಅವರನ್ನು ನಿರಾಶೆಗೊಳಿಸುತ್ತಿದ್ದರೆಂದೂ ಅನೇಕರು ಹೇಳುತ್ತಾರೆ. ಮನಶ್ಶಾಸ್ತ್ರ ಆನರ್ಸ್ ಮುಗಿಸಿದ ಪುಟ್ಟಸ್ವಾಮಿ ಅವರು ಎಂ.ಎ. ಗೆ ಹೋಗುವ ಬದಲು ಪೂನಕ್ಕೆ ಹೋಗಿ ನ್ಯಾಯ ಶಾಸ್ತ್ರ ಅಭ್ಯಸಿಸಲು ಅದೇ ಕಾರಣ ಎಂಬ ಅಭಿಪ್ರಾಯವಿದೆ.

ಲಿಂಗೇಗೌಡರು ಶ್ರೀಮಂತರೇನಲ್ಲ, ಮಗನನ್ನು ಮೈಸೂರಿನಲ್ಲಿಟ್ಟು ಅವರು ಓದಿಸಿದ್ದೇ ದೊಡ್ಡದು. ಈ ಪರಿಸ್ಥಿತಿಯಲ್ಲಿ ಮಗನನ್ನು ಪೂನದಂತಹ ದೂರದ ಊರಿಗೆ ಕಳಿಸುವುದು ಅವರಿಗೆ ಕಷ್ಟವಾಗಿತ್ತು. ಆದರೆ ಬಡವರಿಗೆ ಯಾವ ಮೂಲದಿಂದಲಾದರೂ ದೈವ ಸಹಾಯ ಒದಗಬಹುದು. ಅರಕೆರೆಯ ಹತ್ತಿರದ ಚಿಂದೇಗೌಡನ ಕೊಪ್ಪಲು ಗ್ರಾಮದ ಸಿ. ಕರಿಘಟ್ಟೇಗೌಡರು ಪುಟ್ಟಸ್ವಾಮಿಯವರಿಗೆ ಸಹಾಯ ಹಸ್ತ ನೀಡಿದರು. ಕರಿಘಟ್ಟೇಗೌಡರು ಜಮೀನ್ದಾರರು, ಗೌರವಾನ್ವಿತರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರು. ಗ್ರಾಮಾಂತರದ ಆದರಲ್ಲೂ ತನ್ನ ಕುಲದ ಹುಡುಗನೊಬ್ಬ ಓದಿ ಮುಂದೆ ಬರುತ್ತಿದ್ದಾನೆನ್ನುವುದು ಅವರಿಗೆ ಅಭಿಮಾನದ ಸಂಗತಿಯಾಗಿತ್ತು. ಶ್ರೀ ಕರಿಘಟ್ಟೇಗೌಡರು ಪುಟ್ಟಸ್ವಾಮಿಯವರಿಗೆ ನ್ಯಾಯಶಾಸ್ತ್ರ ಓದಲು ಪೂನಾಕ್ಕೆ ಹೋಗಲು ಸಹಾಯಮಾಡಿದರು.

ಪೂನಾದಲ್ಲಿ ಪುಟ್ಟಸ್ವಾಮಿಯವರು ನ್ಯಾಯಶಾಸ್ತ್ರ ಅಭ್ಯಾಸ ಮಾಡುವ ಕಾಲಕ್ಕೆ ಮಹಾರಾಷ್ಟ್ರದಲ್ಲಿ ವಿಶೇಷವಾಗಿ ಮುಂಬಯಿ, ಪೂನಾಗಳಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿ ಕಾವೇರುತ್ತಿದ್ದ ಕಾಲವಾಗಿತ್ತು. ಶ್ರೀ ಪುಟ್ಟಸ್ವಾಮಿಯವರೂ ಈ ರಾಷ್ಟ್ರ ಯಜ್ಞದತ್ತ ಆಕರ್ಷಿತರಾದರು. ಆದರೆ ಅವರು ತಮ್ಮ ವ್ಯಾಸಂಘವನ್ನು ಕಡೆಗಣಿಸಲಿಲ್ಲ. ಏಕೆಂದರೆ ಅವರ ಬಾಳಿನ ಭವಿಷ್ಯ ಅವರ ಶಿಕ್ಷಣವನ್ನು ಅವಲಂಬಿಸಿತ್ತು. ತಂದೆಯ ಕಷ್ಟ, ಕರಿಘಟ್ಟೆಗೌಡರ ಅಭೀಪ್ಸೆ ಅವರ ಮನಸ್ಸಿನಲ್ಲಿದ್ದುವು. ಆದುದರಿಂದ ಅವರು ತಮ್ಮ ನ್ಯಾಯಶಾಸ್ತ್ರ ಪದವಿಯನ್ನು ಪಡೆದು ಕೊಂಡು ಪೂನಾದಿಂದ ಹಿಂತಿರುಗಿದರು.

ಆಗಿನ ದಿನಗಳಲ್ಲಿ ಶ್ರೀ ಎಚ್. ಸಿ ದಾಸಪ್ಪನವರು ಮೈಸೂರು ನಗರದಲ್ಲಿ ಹೆಸರಾಂತ ವಕೀಲರು. ಶ್ರೀ ಟಿ. ಮರಿಯಪ್ಪನವರೂ ಸಹ ದಾಸಪ್ಪನವರಲ್ಲಿ ಕಿರಿಯ ವಕೀಲರಾಗಿದ್ದರು. ಶ್ರೀ ಪುಟ್ಟಸ್ವಾಮಿಯವರೂ ತಮ್ಮ ವಕೀಲ ವೃತ್ತಿಯ ಮಾರ್ಗದರ್ಶಕರಾಗಿ ಶ್ರೀ ದಾಸಪ್ಪ ಅವರನ್ನೇ ಆರಿಸಿಕೊಂಡರು. ಸುಮಾರು 1944ರಲ್ಲಿ ಬನ್ನೂರಿನ ಗವೀಗೌಡರ ಮಗಳು ಶ್ರೀಮತಿ ಜಯಲಕ್ಷ್ಮಮ್ಮ ಅವರೊಂದಿಗೆ ಇವರ ಮದುವೆಯಾಯಿತು. ಈ ಮದುವೆ ಕರಿಘಟ್ಟೇಗೌಡರ ಅಪೇಕ್ಷೆಯಂತೆ ಆಯಿತಂತೆ. ಶ್ರೀ ಪುಟ್ಟಸ್ವಾಮಿ ಅವರಿಗೆ ತಮಗೆ ಸಹಾಯ ಮಾಡಿದವರ ಬಗೆಗಿದ್ದ ಅಭಿಮಾನ ಎಷ್ಟೆಂಬುದು ಇದರಿಂದ ಗೊತ್ತಾಗುತ್ತದೆ.

ಶ್ರೀ ಎಚ್. ಸಿ, ದಾಸಪ್ಪನವರು ಆ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟದ

ಮುಂಚೂಣಿಯ ನಾಯಕರಾಗಿದ್ದರು. ಅವರು ಅನೇಕ ಯುವಕರಿಗೆ ಸ್ವಾತಂತ್ರ್ಯ ಸಂಗ್ರಾಮ ದೀಕ್ಷೆಯನ್ನು ಕೊಟ್ಟಿದ್ದರು. ಮೈಸೂರು ರಾಜ್ಯದಲ್ಲಿಯೇ ದಾಸಪ್ಪ ದಂಪತಿಗಳು ಸಮಾಜ ಸೇವೆಗೆ, ಗಾಂಧೀ ತತ್ವಕ್ಕೆ ಹೆಸರಾಗಿದ್ದವರು. ಸ್ವಾಭಾವಿಕವಾಗಿಯೆ ಶ್ರೀ ಪುಟ್ಟಸ್ವಾಮಿಯವರು ಇತರೆಲ್ಲ ಯುವಕರಂತೆಯೇ ಶ್ರೀ ದಾಸಪ್ಪನವರ ಧ್ಯೇಯಾದರ್ಶಗಳಿಗೆ ಮಾರು ಹೋದರು. ಅವರನ್ನು ತಮ್ಮ ರಾಜಕೀಯ ಮಾರ್ಗದರ್ಶಕರಾಗಿಯೂ ಮಾಡಿಕೊಂಡರು. ನಜರಬಾದಿನ ನವಾಬರೆನಿಸಿದ ಸಾಹುಕಾರ್ ಚನ್ನಯ್ಯನವರು ಪುಟ್ಟಸ್ವಾಮಿಯವರ ರಾಜಕೀಯ ಗುರುವಾದರು. ಮುಂದೆ ಮೈಸೂರು ನಗರವೇ ಶ್ರೀ ಪುಟ್ಟಸ್ವಾಮಿ ಅವರ ಕಾರ್ಯ ಕ್ಷೇತ್ರವಾಯಿತು.

ಶ್ರೀಯುತರು ವಿದ್ಯಾರ್ಥಿ ದೆಸೆಯಿಂದಲೂ ಮುಂದಾಳತ್ವವನ್ನು ಕೈಗೊಂಡಿದ್ದರು. ಒಕ್ಕಲಿಗರ ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೆರೆಮನೆವಾಸವನ್ನನುಭವಿಸಿದ್ದರು. ಆರಕೆರೆ ಗ್ರಾಮದಲ್ಲಿ ಕಡುಬಡತನದಲ್ಲಿ ಜನಿಸಿ ಅತ್ಯಾಸಕ್ತಿಯಿಂದ ವಿದ್ಯಾಭ್ಯಾಸವನ್ನು ಮುಂದುವರಿಸಿದ್ದರು. ನ್ಯಾಯಶಾಸ್ತ್ರದ ಪದವೀಧರರಾದ ನಂತರ ವಕೀಲವೃತ್ತಿಯನ್ನು ಆರಂಭಿಸಿದ್ದರು. ಕೆ. ಪುಟ್ಟಸ್ವಾಮಿ ಅವರು ಹೆಸರಾಂತ ವಕೀಲರಾಗಿದ್ದರು. ಈ ಕ್ಷೇತ್ರದಲ್ಲಿ ಹಣಕ್ಕಾಗಿ ಹಾತೊರೆಯಲಿಲ್ಲ. ಹಿತಮಿತ ಭಾಷಿಯೂ ಆಗಿದ್ದರು. ವಿದ್ಯಾರ್ಥಿ ಜೀವನದಲ್ಲಿ ಉತ್ತಮವಾದ ಹೆಸರನ್ನು ಗಳಿಸಿದ್ದರು. ಕರ್ನಾಟಕ ಸಂಘ, ವಿದ್ಯಾರ್ಥಿ ಸಂಘಗಳ ಅಭ್ಯುದಯಕ್ಕೆ ಕಾರಣರಾಗಿದ್ದರು. ಕೆ. ಪುಟ್ಟಸ್ವಾಮಿಯವರ ಸಂಘಟನಾ ಶಕ್ತಿ, ಕರ್ತವ್ಯ ನಿಷ್ಠೆ, ಕಾರ್ಯ ಚಟುವಟಿಕೆಯನ್ನು ಎಲ್ಲರೂ ಮೆಚ್ಚುತ್ತಿದ್ದರು. ಬಡವ ಬಲ್ಲಿದ ಎಂಬ ತಾರತಮ್ಯವಿಲ್ಲದೆ ಎಲ್ಲರ ನೆಚ್ಚಿನ ಗೆಳೆಯರಾಗಿ, ನಾಯಕರಾಗಿ, ಉದಾತ್ತ ಧ್ಯೇಯಗಳನ್ನಿಟ್ಟುಕೊಂಡು ಸಾಹಸಮಯ ಜೀವನವನ್ನು ನಡೆಸಿ, ಅಭಿಮಾನರೆನಿಸಿ ಕೀರ್ತಿ ಪಡೆದ ವ್ಯಕ್ತಿ ಕೆ. ಪುಟ್ಟಸ್ವಾಮಿ ಅವರು.

ಡಾ. ಸಿ ಒಂದೀಗೌಡರು, ಎಚ್. ಕೆಂಪೇಗೌಡರು, ಬಿ. ಸಿ. ಲಿಂಗಯ್ಯ, ಕುಪ್ಪೆಗಾಲದ ಚೆನ್ನಸ್ವಾಮಿ, ಸೀದುವಳ್ಳಿ ಸುಬ್ರಮಣ್ಯ, ಡಿ. ಸೂರ್ಯನಾರಾಯಣ್, ಎಸ್. ಚನ್ನಪ್ಪಯ್ಯ ಇವರುಗಳೆಲ್ಲಾ ಕೆ. ಪುಟ್ಟಸ್ವಾಮಿ ಅವರ ಆಪ್ತ ಸ್ನೇಹಿತರಾಗಿದ್ದರು ಪುಟ್ಟಸ್ವಾಮಿ ಅವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಮಂಡ್ಯಜಿಲ್ಲಾ ಬೋರ್ಡ್ ಸದಸ್ಯರಾಗಿದ್ದರು. 1952ರಲ್ಲಿ ಕೆ. ಪುಟ್ಟಸ್ವಾಮಿ ಅವರು ಶ್ರೀರಂಗಪಟ್ಟಣ ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾಗಿದ್ದರು. 1953ರಲ್ಲಿ ಎರಡುವರ್ಷಗಳ ಕಾಲ ಸತತವಾಗಿ ಮೈಸೂರು ಪುರಸಭೆಯ ಅಧ್ಯಕ್ಷರಾಗಿ ಸೇವೆಸಲ್ಲಿಸಿದರು. ಆ ಅವಧಿಯಲ್ಲಿ ಅನೇಕ ಸ್ಮರಣೀಯ ಕಾರ್ಯಗಳನ್ನು ಮಾಡುವ ಅವಕಾಶ ದೊರೆಯಿತು. ಮೈಸೂರು ನಗರದ ಸುತ್ತಮುತ್ತ ಇರುವ ಕುಂಬಾರ ಕೊಪ್ಪಲು, ಕ್ಯಾತಮಾರನಹಳ್ಳಿ, ಕನ್ನೆಗೌಡನ ಕೊಪ್ಪಲು ಇತ್ಯಾದಿ ಸ್ಥಳಗಳಿಗೆ ನಲ್ಲಿನೀರು ಒಳಚರಂಡಿ ವ್ಯವಸ್ಥೆ ಮಾಡಿಸಿಕೊಟ್ಟರು.

ಮೈಸೂರು ನಗರದಲ್ಲಿ ಕಾಂಕ್ರೀಟ್ ರಸ್ತೆಗಳು, ನಗರದ ಬೃಹತ್ ನೀರುಸರಬರಾಜು ಯೋಜನೆ, ವಿಶ್ವೇಶ್ವರಯ್ಯಭವನ, ದನ್ವಂತ್ರಿ ಕಾಂಪ್ಲೆಕ್ಸ್‌ಗಳು ಇವರ ನೇತೃತ್ವದಲ್ಲಿ ನಿರ್ಮಾಣಗೊಂಡವು.

ದೇಶದ ಬಂಧ ವಿಮೋಚನೆಗೆ ಶ್ರಮಿಸಿದ ಕಾಂಗ್ರೆಸ್ ಸಂಸ್ಥೆಗೆ ಸೇರಿ ಮಾನನೀಯ ಸೇವೆ ಸಲ್ಲಿಸಿರುತ್ತಾರೆ. ನಮ್ಮ ರಾಜ್ಯದ ಅಭ್ಯುದಯ, ರಾಷ್ಟ್ರದ ಅಭ್ಯುದಯ ಎಲ್ಲಾ ಕ್ಷೇತ್ರಗಳಲ್ಲೂ ಸಹಕಾರ ಜೀವನವನ್ನೇ ಅವಲಂಬಿಸಿದೆ ಎಂಬುದನ್ನರಿತು ನಾನಾ ಕ್ಷೇತ್ರಗಳಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಿ ಜನರಲ್ಲಿ ಸೌಹಾರ್ದ ಭಾವನೆಯನ್ನು ಬೆಳೆಸಲು ಕೆ. ಪುಟ್ಟಸ್ವಾಮಿ ಅವರು ಪಟ್ಟ ಶ್ರಮ ಸಾರ್ಥಕವಾದುದು.

ಮೈಸೂರು ರಾಜ್ಯಾಂಗರಚನಾಸಭೆ, ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಮತ್ತು ಅಕಾಡೆಮಿಕ್ ಕೌನ್ಸಿಲ್‌ಗಳಲ್ಲಿ ಸದಸ್ಯರಾಗಿ ಅಮೂಲ್ಯ ಸೇವೆಸಲ್ಲಿಸಿದರು. ಮೈಸೂರು ಜಿಲ್ಲಾ ಕಾಂಗ್ರೆಸ್ಸಿನ ಸಂಘಟನೆಯಲ್ಲಿ ಅಮೋಘ ಪಾತ್ರವನ್ನು ವಹಿಸಿ ಸಂಸ್ಥೆಯನ್ನು ಬೆಳಗಿದ ವ್ಯಕ್ತಿ ಪುಟ್ಟಸ್ವಾಮಿ ಅವರು. ನಗರದ ಸೌಂದರ್ಯ ಸಮೃದ್ಧಿಗಳನ್ನು ವರ್ಧಿಸಲು ಹಗಲಿರುಳು ಶ್ರಮಿಸಿ ಮಹತ್ಕಾರ್ಯವನ್ನು ಮಾಡಿದಂತಹವರು. ರಾಜ್ಯದಲ್ಲಿ ಭೂರಹಿತ ರೈತರು ಅನುಭವಿಸುವ ಕಷ್ಟ ಪರಂಪರೆಗಳನ್ನು ನಿವಾರಿಸಲು ಉತ್ತಮ ಕಾನೂನು ಕಾಯಿದೆಗಳ ರಚನೆಯಾಗಬೇಕೆಂದು ಶ್ರಮಿಸಿದ ಮೇಧಾವಿಗಳಲ್ಲಿ ಕೆ. ಪುಟ್ಟಸ್ವಾಮಿ ಅವರು ಪ್ರಪ್ರಥಮರು. ಇವರು ಮಾಡಿದ ಕೆಲಸಗಳು ಕೈಬೆರಳೆಣಿಕೆಯಷ್ಟಲ್ಲ. ನೂರಾರು ಅಚ್ಚಳಿಯದ ಕೆಲಸವನ್ನು ಮಾಡಿ ನಿರಂತರ ಹೆಸರನ್ನು ಪಡೆದ ವ್ಯಕ್ತಿ ಇವರಾಗಿದ್ದಾರೆ.

1962 ರಿಂದ 1971ರ ವರೆಗೆ ಕ್ಯಾಬಿನೆಟ್ ದರ್ಜೆಯ ಸಚಿವರಾಗಿ ಸೇವೆ ಸಲ್ಲಿಸಿದರು. ಸಚಿವ ಸ್ಥಾನದಲ್ಲಿದ್ದಾಗ ಅವರು ನಿರ್ವಹಿಸಿದ ಖಾತೆಗಳು ಪೌರಾಡಳಿತ ಸಹಕಾರ, ಕಾರ್ಮಿಕ, ಕಾನೂನು, ಆರೋಗ್ಯ ಮತ್ತು ಸಂಸದೀಯ ವ್ಯವಹಾರ ಅವರ ಈ ಕೆಲವು ಸಾಧನೆಗಳು ಪ್ರಮುಖವಾಗಿದ್ದವು.

1938ರಲ್ಲಿ ಶಿವಪುರ ಸತ್ಯಾಗ್ರಹದಲ್ಲಿಯೂ, 1947ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿಯೂ 1947ರಲ್ಲಿ ಜವಾಬ್ದಾರಿ ಸರ್ಕಾರದ ನಿಮಿತ್ತ ಮೈಸೂರು ಅರಮನೆಯ ಸತ್ಯಾಗ್ರಹದಲ್ಲಿಯೂ ಪಾಲ್ಗೊಂಡಿದ್ದರು.

ಮೈಸೂರು ನಗರದ ವಿದ್ಯಾವರ್ಧಕ ಸಂಘ ಶಿಕ್ಷಣ ಸಂಸ್ಥೆಯ ಸ್ಥಾಪಕ ಸದಸ್ಯರಾಗಿ, ಕಾರ್ಯದರ್ಶಿಯಾಗಿ, ಪ್ರಪ್ರಥಮ ಪ್ರಿನ್ಸಿಪಾಲರಾಗಿ ದುಡಿದಿದ್ದಾರೆ. ವಿದ್ಯಾವರ್ಧಕ ಪ್ರೌಢಶಾಲೆ, ಪ್ರಥಮ ದರ್ಜೆ ಕಾಲೇಜು ಮತ್ತು ಕಾನೂನು ಕಾಲೇಜಿನ ಸ್ಥಾಪಕರಾಗಿದ್ದಾರೆ. ಕೆ. ಪುಟ್ಟಸ್ವಾಮಿ ಅವರು ತಮ್ಮ ಕಡೆ ಉಸಿರಿರುವ ತನಕವೂ ಆ ವಿದ್ಯಾಸಂಸ್ಥೆಗಾಗಿ ದುಡಿದರು. ಮೈಸೂರು ಮೆಡಿಕಲ್ ಕಾಲೇಜಿನ ಸೆಲೆಕ್ಷನ್ ಕಮಿಟಿಯ ಸದಸ್ಯರಾಗಿದ್ದರು.

ರಾಜಕೀಯ ವ್ಯಕ್ತಿಗಿರಬೇಕಾದ ನಿಷ್ಠೆ ಮತ್ತು ಪ್ರಾಮಾಣಿಕತೆ ಕೆ ಪುಟ್ಟಸ್ವಾಮಿ ಅವರಲ್ಲಿ ತುಂಬಿ ತುಳುಕಿತು ಎಂದು ಅವರ ಸ್ನೇಹಿತರೆಲ್ಲರೂ ತಿಳಿಸುತ್ತಾರೆ. ಸಂಸದೀಯ ವ್ಯವಹಾರದಲ್ಲಿ ಅತ್ಯಂತ ವ್ಯವಹಾರಿಕ ವ್ಯಕ್ತಿ ಆಗಿದ್ದರು. ಅಸೆಂಬ್ಲಿಯಲ್ಲಿ ಶ್ರೀಯುತರು ಮಾತನಾಡಲು ನಿಂತರೆ ಸಭೆಯು ನಿಶ್ಯಬ್ದತೆಯಿಂದ ಅವರ ಮಾತುಗಳನ್ನು ಆಲಿಸುತ್ತಿತ್ತಂತೆ. ಇವರ ನಿಷ್ಠೆ ಮತ್ತು ಪ್ರಮಾಣಿಕತೆಯಿಂದ ರಾಜಕೀಯದಲ್ಲಿ ಅನೇಕಬಾರಿ ಅಡಚಣೆ ಆಗುತ್ತಿತ್ತು. ಪ್ರಜಾಪ್ರಭುತ್ವದ ಯಶಸ್ಸು ಹಾಗೂ ಸಾರ್ಥಕ್ಯ ಶ್ರೀಮಾನ್ ಕೆ. ಪುಟ್ಟಸ್ವಾಮಿ ಅವರಂತಹ ವ್ಯಕ್ತಿಗಳಲ್ಲಿ ಪ್ರತಿಪಲಿಸಿದೆ. ಕೆ. ಪುಟ್ಟಸ್ವಾಮಿ ಅವರು ತಮ್ಮ ಸ್ವಂತ ಸಾಮರ್ಥ್ಯದಿಂದ ನೀತಿ ನಿಷ್ಠೆಗಳಿಂದ ಹೆಸರಾಂತ ಸಂಸಧೀಯ ಪಟುವಾಗಿ ರೂಪುಗೊಂಡರು. 1978ರ ಏಪ್ರಿಲ್ 30 ರಂದು ಹೃದಯಾಘಾತದಿಂದ ಮರಣ ಹೊಂದಿದರು.

ನಗುವನಹಳ್ಳಿ ಪಿ. ರತ್ನ

ಎಚ್. ಕೆ. ವೀರಣ್ಣಗೌಡ

ಕನ್ನಡ ನಾಡಿನ ಸ್ವಾತಂತ್ರ್ಯ ಸಂಗ್ರಾಮ ಮತ್ತು ರಾಜಕೀಯ ಇತಿಹಾಸದಲ್ಲಿ ದಿವಂಗತ ಹೊಸಹಳ್ಳಿ ಕೆಂಚೇಗೌಡ ವೀರಣ್ಣಗೌಡರ ಹೆಸರು ಗಣನೀಯವಾದುದು. ತಮ್ಮ ಕಿರಿಯ ವಯಸ್ಸಿನಿಂದಲೂ ವೀರಣ್ಣಗೌಡರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲುಗೊಂಡವರು. ಮುಂದೆ ಪತ್ರಿಕೋದ್ಯಮಿಯಾಗಿ, ರಾಜಕಾರಿಣಿ ಯಾಗಿ, ಜನನಾಯಕರಾಗಿ, ಸಮಾಜ ಸೇವಕರಾಗಿ ಅವರು ಈ ಮಣ್ಣಿಗೆ ಸಲ್ಲಿಸಿದ ಸೇವೆ ಅವಿಸ್ಮರಣೀಯವಾದುದು. ಅತ್ಯಂತ ಪ್ರಗತಿಪರ ಧೋರಣೆಯುಳ್ಳ ಶ್ರೀ ಗೌಡರು ಆರುವತ್ತು ವರ್ಷಗಳಷ್ಟು ಹಿಂದೆಯೇ ವಿಧವೆಯೊಬ್ಬರನ್ನು ಮದುವೆಯಾಗುವ ಮೂಲಕ ಬೆಂಗಳೂರು ಜಿಲ್ಲೆಯಿಂದ ಮಂಡ್ಯ ಜಿಲ್ಲೆಗೆ ರಾಜಕೀಯ ವಲಸೆ ಬಂದವರು. ಬಂದವರು ಅನ್ಯರಾಗಿ ಉಳಿಯದೆ ನಿಂತ ನೆಲದವರೇ ಆದರು. ಮಂಡ್ಯ ಜಿಲ್ಲೆಗೆ ಶ್ರೀ ವೀರಣ್ಣಗೌಡರ ಕೊಡುಗೆಯೂ ಮಹತ್ತರವಾದುದೆಂಬುದರಲ್ಲಿ ಅನುಮಾನವಿಲ್ಲ.

ವೀರಣ್ಣಗೌಡರು ಚನ್ನಪಟ್ಟಣ ತಾಲ್ಲೂಕು ಹೊಸಹಳ್ಳಿ ಯವರು. ಇವರ ತಂದೆ ಕೆಂಚೇಗೌಡರು. ತಾಯಿ ಕೆಂಪಮ್ಮ ಅವರು. ವೀರಣ್ಣಗೌಡರ ಬಾಲ್ಯ ಹೊಸಹಳ್ಳಿ ಮತ್ತು ಅವ್ವೇರ ಹಳ್ಳಿಯಲ್ಲಿ ಕಳೆಯಿತು. ತಮ್ಮ ಚಿಕ್ಕವಯಸ್ಸಿನಿಂದಲೂ ಗ್ರಾಮಾಂತರ ಬದುಕಿನೊಂದಿಗೆ ಬೆರೆತು, ತೆರೆದ ಕಣ್ಣುಗಳಿಂದ ಅದನ್ನು ನೋಡುತ್ತಾ ಬಂದ ವೀರಣ್ಣ ಗೌಡರಿಗೆ ಆ ಸಮಾಜದ ಬಗೆಗೆ ಅಪಾರ ಕಳಕಳಿ. ಮುಂದೆ ಅವರು ನಾಡಿನ ರಾಜಕೀಯ ದಲ್ಲಿ ಪ್ರಭಾವಶಾಲಿ ಸ್ಥಾನಗಳನ್ನು ಹೊಂದಿದಾಗಲೆಲ್ಲಾ ಆ ಸಮಾಜಕ್ಕೆ ಸೇವೆಸಲ್ಲಿ ಸಲು ಅದನ್ನು ಅವರು ಮರೆಯಲಿಲ್ಲ. ಚಿಕ್ಕಂದಿನಿಂದಲೂ ಅವರು ಒಂದು ರೀತಿಯ ಹೋರಾಟದ ಬದುಕನ್ನೇ ನಡೆಸಿ ಮೇಲೇರುತ್ತಾ ಬಂದವರು.

ಚನ್ನಪಟ್ಟಣದಲ್ಲಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುವಾಗಲೇ ಶ್ರೀ ವೀರಣ್ಣ ಗೌಡರು ಸಾರ್ವಜನಿಕ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡದ್ದನ್ನು ಕಾಣಬಹುದು. ಆಗ ಸಂಸ್ಥಾನದಲ್ಲಿಯೇ ಅತ್ಯಂತ ಗಣ್ಯವ್ಯಕ್ತಿಗಳೂ, ಬ್ರಾಹ್ಮಣೇತರರ ಉನ್ನತಿಗಾಗಿ ಶ್ರಮಿಸಿದ ಹಿರಿಯರೂ ಆದ ಕೆ. ಎಚ್. ರಾಮಯ್ಯನವರ ಪ್ರಭಾವಕ್ಕೆ ಇವರು ಒಳಗಾದರು. ಶ್ರೀ ಕೆ. ಎಚ್. ರಾಮಯ್ಯನವರು ಥಿಯಾಸಫಿಷ್ಟರಾಗಿದ್ದರು. ಆದುದರಿಂದ ಅವರ ಪ್ರಭಾವ ಆಗಿನ ಅನೇಕ ಬ್ರಾಹ್ಮಣೇತರ ಯುವಕರ ಮೇಲೆ ಉಂಟಾಗಿತ್ತು. ಶ್ರೀ ವಿ. ವೆಂಕಟಪ್ಪ ಮತ್ತು ಶ್ರೀ ವೀರಣ್ಣಗೌಡರೂ ರಾಮಯ್ಯನವರ

ಈ ಪ್ರಭಾವ ವಲಯಕ್ಕೆ ಸೇರಿದವರಾಗಿದ್ದರು. ಚನ್ನಪಟ್ಟಣದ ಒಕ್ಕಲಿಗರ ವಿದ್ಯಾರ್ಥಿ ನಿಲಯವನ್ನು ಕೇಂದ್ರವಾಗಿಟ್ಟುಕೊಂಡು ಶ್ರೀ ವಿ. ವೆಂಕಟಪ್ಪ ಮತ್ತು ವೀರಣ್ಣ ಗೌಡರು ಒಕ್ಕಲಿಗ ವಿದ್ಯಾರ್ಥಿಗಳ ಸಾಹಿತ್ಯ, ಸಾಂಸ್ಕೃತಿಕ ಬೆಳವಣಿಗೆಯ ಬಗೆಗೆ ಅನೇಕ ಕಾರ್ಯಕ್ರಮಗಳನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸಿದರು. ಶ್ರೀ ಕುವೆಂಪು ಅವರು ಸಹ ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ಈ ಕಾರ್ಯಕ್ರಮಗಳಲ್ಲಿ ಪಾಲುಗೊಂಡಿದ್ದರೆಂಬುದು ಇವುಗಳ ಮಹತ್ವವನ್ನು ಶ್ರೀ ವೀರಣ್ಣಗೌಡ, ವೆಂಕಟಪ್ಪ ಅವರ ಸಾಮಾಜಿಕ ಕಳಕಳಿಯನ್ನೂ ತೋರಿಸುತ್ತದೆ.

ವೀರಣ್ಣಗೌಡರು ತಮ್ಮ ಬಾಲ್ಯವನ್ನು ಅವ್ವೇರ ಹಳ್ಳಿ, ಹೊಸಹಳ್ಳಿಗಳಲ್ಲಿ ಕಳೆದರು. ಅವರ ತಂದೆ ಕೆಂಚೇಗೌಡರು ಆಗಿನ ಕಾಲಕ್ಕೆ ಸ್ವಲ್ಪ ಓದು ಬರಹ ಬಲ್ಲವರಾಗಿದ್ದು ವಿದ್ಯೆಯ ಮಹತ್ವವನ್ನು ಅರಿತವರಾಗಿದ್ದರು ಅವರು ಆಗಿನ ಕಾಲಕ್ಕೆ ಪ್ರಕಟವಾಗುತ್ತಿದ್ದ ಕನ್ನಡ ಪತ್ರಿಕೆಗಳನ್ನೆಲ್ಲಾ ತರಿಸುತ್ತಿದ್ದರು. ಅಂತಹ ಪತ್ರಿಕೆಗಳಿಂದ ಆಯ್ದ ಭಾಗಗಳನ್ನು ಪ್ರತಿ ಮಾಡುವಂತೆ ಬಾಲಕ ವೀರಣ್ಣಗೌಡರಿಗೆ ನಿಗದಿ ಮಾಡಿದ್ದರು. ಈ ಪದ್ಧತಿಯಿಂದಾಗಿಯೇ ಶ್ರೀ ಗೌಡರಿಗೆ ಭಾಷೆ ಮತ್ತು ಬರವಣಿಗೆಯ ಮೇಲೆ ಹಿಡಿತ ಸಾಧ್ಯವಾಯಿತು.

ಪತ್ರಿಕೆಗಳ ಸುದ್ದಿಯನ್ನು ಪ್ರತಿ ಮಾಡಿದುದರಿಂದ ಆಗ ದೇಶದಲ್ಲಿ ನಡೆಯುತ್ತಿದ್ದ ರಾಜಕೀಯ ಆಂದೋಲನ ವೀರಣ್ಣಗೌಡರನ್ನು ಆಕರ್ಷಿಸಿತು. ಗೋಖಲೆ ಬೆಸೆಂಟ್ ಮುಂತಾದವರ ಪ್ರಭಾವ ಇವರ ಮೇಲಾಯಿತು. ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಗೋಖಲೆಯವರ ಚಿತ್ರವೊಂದನ್ನು ಕತ್ತರಿಸಿ ತಮ್ಮ ಪೆಟ್ಟಿಗೆಯ ಮೇಲೆ ಅಂಟಿಸಿಕೊಂಡಿದ್ದರು. ಅವರನ್ನು ತಮ್ಮ ಆದರ್ಶದ ವ್ಯಕ್ತಿಯಾಗಿಸಿಕೊಂಡಿದ್ದರು. ಗೋಖಲೆಯವರ ಪ್ರಭಾವ ಇವರ ಮೇಲೆ ಎಷ್ಟು ಆಗಿತ್ತು ಎಂದರೆ ಒಮ್ಮೆ ಅಧ್ಯಾಪಕರೊಬ್ಬರು ತರಗತಿಯಲ್ಲಿ ಮಹಾತ್ಮಗಾಂಧೀಜಿ ಯವರನ್ನು ಹೊಗಳಿ ಮಾತನಾಡಿದಾಗ ಇವರು ಅದನ್ನು ಕಟುವಾಗಿ ವಿರೋಧಿಸಿದರು. ಈ ವಾದ ವಿವಾದ ಎರಡು ಮೂರು ದಿನ ನಡೆಯಿತು. ಕಡೆಗೆ ನಿಧಾನವಾಗಿ ವೀರಣ್ಣಗೌಡರು ಗಾಂಧೀ ವಿಚಾರ ಧಾರೆಗಳತ್ತ ಒಲಿಯ ತೊಡಗಿದರು. ಕ್ರಮೇಣ ಗಾಂಧಿಜೀ ಮತ್ತು ಸ್ವಾತಂತ್ರ್ಯ ಚಳುವಳಿ ಇವರನ್ನು ಆಕರ್ಷಿಸಿ ಆವರಿಸಿ ತಮ್ಮತ್ತ ಎಳೆದು ಕೊಂಡವು.

ತಮ್ಮ ವಿದ್ಯಾರ್ಥಿ ದೆಸೆಯಲ್ಲಿ ವೀರಣ್ಣಗೌಡರು ಸ್ಕೌಟ್ ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿದರು. ಗ್ರಾಮಾಭಿವೃದ್ಧಿಯ ಬಗೆಗೆ ಇವರು ಚಿಕ್ಕ ವಯಸ್ಸಿನಿಂದಲೇ ಚಿಂತಿಸುತ್ತಿದ್ದರು ಆಗ ದಿವಾನರಾಗಿದ್ದ ವಿಶ್ವೇಶ್ವರಯ್ಯನವರಿಂದ ರೂಪಿತವಾದ ಹೋಬಳಿ ಮಟ್ಟದ ಆರ್ಥಿಕ ಸಮ್ಮೇಳನದಲ್ಲಿ ಇವರು ಪಾಲುಗೊಂಡು "ರೈತರಿಗೆ ವಿದ್ಯಾಭ್ಯಾಸ ಅವಶ್ಯಕತೆ" ಎಂಬ ವಿಚಾರವಾಗಿ ಮಾತನಾಡಿದರು. ಇದಕ್ಕಾಗಿ ಅವರಿಗೆ ಐದು ರೂಪಾಯಿ ಬಹುಮಾನವೂ ಬಂತು. "ಕರ್ನಾಟಕ ವಿದ್ಯಾರ್ಥಿ" ಎಂಬ

ಪತ್ರಿಕೆಯನ್ನು ವೀರಣ್ಣಗೌಡರು ನಡೆಸುತ್ತಿದ್ದರು. ಶ್ರೀ ಟಿ. ಮಹಾದೇವಗೌಡರು ಇದರ ಸಂಪಾದಕರು, ವೀರಣ್ಣಗೌಡರು ಉಪ ಸಂಪಾದಕರು. ಮೈಸೂರು, ಹಾಸನ ಮುಂತಾದ ಕಡೆ ಒಕ್ಕಲಿಗರ ವಿದ್ಯಾರ್ಥಿನಿಲಯ ಆರಂಭಿಸಲು ಪ್ರಮುಖ ಪಾತ್ರ ವಹಿಸಿದರು. ಆ ಕಾಲಕ್ಕೆ ವೀರಣ್ಣಗೌಡರುಭಾಷಣ ಚರ್ಚಾ ಸ್ಪರ್ಧೆ, ಬರವಣಿಗೆ ಮುಂತಾದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಕಾಲೇಜು ವ್ಯಾಸಂಗಕ್ಕಾಗಿ ಮೈಸೂರಿಗೆ ಹೋದದ್ದು ವೀರಣ್ಣಗೌಡರ ಜೀವನ ಸಾರ್ವಜನಿಕ ಸೇವೆಯತ್ತ ತಿರುಗಲು ಕಾರಣವಾಯಿತು. ಹೊಸಪೇಟೆಯ ಸಿ. ಹನುಮಂತಗೌಡ, ಮುದವೀಡು ಕೃಷ್ಣರಾಯರು ಮಾಡಿದ ಭಾಷಣಗಳು ಇವರ ಮೇಲೆ ಅಪಾರ ಪ್ರಭಾವ ಬೀರಿದವು. ಮುಂದೆ ನಿರಂತರವಾಗಿ ರಾಷ್ಟ್ರೀಯ ನಾಯಕರ ಭಾಷಣಗಳು ವೀರಣ್ಣಗೌಡರನ್ನು ಸಂಪೂರ್ಣವಾಗಿ ಸ್ವಾತಂತ್ರ್ಯ ಸಂಗ್ರಾಮದತ್ತ ಸೆಳೆದುವು. ಮೊದಲ ಬಿ.ಎ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಇವರು ರಾಷ್ಟ್ರ ನಾಯಕರ ಕರೆಯಂತೆ ಕಾಲೇಜು ತ್ಯಜಿಸಿ ಹೊರ ಬಂದು ರಾಷ್ಟ್ರೀಯ ಅಸಹಕಾರ ಚಳುವಳಿಯಲ್ಲಿ ಧುಮುಕಿದರು. ಅವರು ಕಾಲೇಜಿನತ್ತ ಮತ್ತೆ ಮುಖ ಹಾಕಲಿಲ್ಲ. ಹೋರಾಟವೇ ಅವರ ಕಾಲೇಜಾಯಿತು. 1924ರಲ್ಲಿ ತಮ್ಮ ಮಿತ್ರರು ವಿ. ವೆಂಕಟಪ್ಪ, ವಿ. ಎಲ್. ರಾಮಯ್ಯ ಮುಂತಾದವರನ್ನು ಕೂಡಿಕೊಂಡು ಬೆಳಗಾಂ ಕಾಂಗ್ರೆಸ್ ಅಧಿವೇಶನಕ್ಕೂ ಹೋಗಿ ಬಂದರು.

ಆಗಾಗ ಚಳುವಳಿಯ ಕಾವು ತಗ್ಗಿದಾಗ ಬಿಡುವಿದ್ದಾಗ ಪತ್ರಿಕೆಗಳಿಗೆ ಲೇಖನ ಬರೆಯುವುದನ್ನು ವೀರಣ್ಣಗೌಡರು ಹವ್ಯಾಸವನ್ನಾಗಿಸಿಕೊಂಡರು. ವೃತ್ತಾಂತಪತ್ರಿಕೆ, ಅರ್ಥಸಾಧಕ ಪತ್ರಿಕೆಗಳಲ್ಲಿ ಅವರ ಲೇಖನಗಳು ಪ್ರಕಟವಾಗುತ್ತಿದ್ದವು. ಇವರ ಲೇಖನಗಳು ಜನಪ್ರಿಯವಾಗಿದ್ದುವು. ಇದರ ಫಲ 1927 ರಲ್ಲಿ ಒಕ್ಕಲಿಗರ ಪತ್ರಿಕೆಗೆ ಸಂಪಾದಕರಾಗಿ ಸೇರಿದರು. ವೀರಣ್ಣಗೌಡರು ಸಂಪಾದಕರಾದ ಮೇಲೆ ಒಕ್ಕಲಿಗರ ಪತ್ರಿಕೆಯ ಪ್ರಸಾರ ಬಹಳವಾಗಿ ಹೆಚ್ಚಿತು. ಆದರೆ ತಾತ್ವಿಕ ಭಿನ್ನಾಭಿಪ್ರಾಯಗಳ ಕಾರಣದಿಂದಾಗಿ 1928 ರಲ್ಲಿ ಗೌಡರು ತಮ್ಮ ಸಂಪಾದಕ ಹುದ್ದೆಗೆ ರಾಜೀನಾಮೆ ನೀಡಿದರು.

ಚಿಕ್ಕಂದಿನಿಂದ ಪತ್ರಿಕೆಗಳೊಂದಿಗಿದ್ದ ಸಂಬಂಧ ವೀರಣ್ಣಗೌಡರನ್ನು ಪತ್ರಿಕೆಯೊಂದನ್ನು ಹೊರಡಿಸಲು ಪ್ರೇರೇಪಿಸಿತು. ಶ್ರೀ ವಿ.ವೆಂಕಟಪ್ಪ ಮತ್ತು ಶ್ರೀ ಬಿ.ಎನ್. ಗುಪ್ತ ಅವರ ನೆರವಿನಿಂದ 1928 ರಲ್ಲಿ ಗೌಡರು ಚಿತ್ರಗುಪ್ತ ಪತ್ರಿಕೆಯನ್ನು ಆರಂಭಿಸಿದರು. ಬೆಂಗಳೂರಿನಲ್ಲಿ ನಡೆದ ಗಣಪತಿ ಗಲಾಟೆಯ ವರದಿಯನ್ನು ನೈಜವಾಗಿ ಪ್ರಕಟಿಸಿದ ಚಿತ್ರಗುಪ್ತ ಪತ್ರಿಕೆಯ ಮೇಲೆ ಸರ್ಕಾರದ ವಕ್ರದೃಷ್ಟಿಬಿದ್ದಿತು. ಗಣಪತಿ ಗಲಾಟೆಗೆ ಸಂಬಂಧಿಸಿದ ವಿಶ್ವೇಶ್ವರಯ್ಯ ಸಮಿತಿಯ ವರದಿಯನ್ನು ಸರ್ಕಾರ ಮುಚ್ಚಿಹಾಕಲು ಪ್ರಯತ್ನಿಸಿತು. ಆಗ ವೀರಣ್ಣಗೌಡರು ಹೇಗೋ ಆ ವರದಿಯ ಒಂದು ಪ್ರತಿಯನ್ನು

ಸಂಪಾದಿಸಿ ತಮ್ಮ ಚಿತ್ರಗುಪ್ತ ಪತ್ರಿಕೆಯಲ್ಲಿ ಪ್ರಕಟಿಸಿದರು. ದೇಶಾದ್ಯಂತ ಇದರಿಂದ ಅಲ್ಲೋಲಕಲ್ಲೋಲ ಉಂಟಾಯಿತು. ಇದರಿಂದ ಸರ್ಕಾರ ಸಿಟ್ಟಾಗಿ ಈ ಪತ್ರಿಕೆಗೆ ಕೊಡುತ್ತಿದ್ದ ಜಾಹಿರಾತುಗಳನ್ನು ನಿಲ್ಲಿಸಿತು. ಸಹಾಯಮಾಡುತ್ತಿದ್ದ ಮಿತ್ರರು ಅನೇಕ ಕಾರಣಗಳಿಗಾಗಿ ಅದನ್ನು ಹಿಂತೆಗೆದುಕೊಂಡರು. ಪತ್ರಿಕೆ ತೀವ್ರವಾದ ಆರ್ಥಿಕಮುಗ್ಗಟ್ಟಿಗೆ ತುತ್ತಾಯಿತು. ಇದರಿಂದ ದಿನಪತ್ರಿಕೆಯಾಗಿದ್ದ ಚಿತ್ರಗುಪ್ತ ಅನಿಯತಕಾಲಿಕವಾಯಿತು. ಈ ಹೊತ್ತಿಗೆ ವೀರಣ್ಣಗೌಡರಿಗೆ ಕಾಂಗ್ರೆಸ್ ಸಂಪರ್ಕ ಹೆಚ್ಚಿ ಪತ್ರಿಕೆ ಕಾಂಗ್ರೆಸ್‌ಪರ ನಿಲುವು ತಳೆಯಿತು. ಈ ಎಲ್ಲಾ ಕಾರಣಗಳಿಂದಾಗಿ 1931ರಲ್ಲಿ ಚಿತ್ರಗುಪ್ತ ಪತ್ರಿಕೆ ನಿಂತಿತು.

ಚಿತ್ರಗುಪ್ತ ಪತ್ರಿಕೆ ನಿಂತಮೇಲೆ ವೀರಣ್ಣಗೌಡರು ಮದ್ದೂರಿಗೆ ಮರಳಿದರು. ಅದು ಅವರ ಪತ್ನಿಯ ಮನೆ. ಅನಾರೋಗ್ಯ ಮತ್ತು ಪತ್ರಿಕೆನಿಂತ ನೋವಿನ ವಿಶ್ರಾಂತಿಗೆ ಮಾವನ ಮನೆಗೆ ಬಂದ ವೀರಣ್ಣಗೌಡರು ಮುಂದೆ ಮಂಡ್ಯ ಜಿಲ್ಲೆಯಲ್ಲೇ ಖಾಯಂ ನೆಲೆ ನಿಲ್ಲುವಂತಾಯಿತು. ಹೊನಗಾನಹಳ್ಳಿ ಪುಟ್ಟಣ್ಣ ಮತ್ತು ಇಂಡುವಾಳು ಹೊನ್ನಯ್ಯ ವೀರಣ್ಣಗೌಡರನ್ನು ರೈತರಪರ ಹೋರಾಟರಂಗಕ್ಕೆ ಇಳಿಸಿದರು. ಆಗ ಗೌಡರು ಇಡೀ ನಾಲಾಪ್ರದೇಶವನ್ನು ಸುತ್ತಿ ರೈತರ ಕಷ್ಟಗಳನ್ನು ಅರಿತರು. ಇದರ ಫಲವಾಗಿ ಅವರ ಮುಖಂಡತ್ವದಲ್ಲಿ ದೇಶದಲ್ಲೇ ಅಪೂರ್ವವಾದ ಇರ್ವಿನ್ ನಾಲಾ ಚಳುವಳಿ ಮತ್ತು ಸಾವಿರಾರು ಜನರ ಬೆಂಗಳೂರು ಕಾಲುನಡಿಗೆ ಜಾತಾ ಪ್ರಸಂಗಗಳು ನಡೆದವು. 1933 ರಲ್ಲಿ ಗೌಡರು ಪ್ರಜಾಪತಿ ನಿಧಿ ಸಭೆಗೆ ಕಾಂಗ್ರೆಸ್‌ನಿಂದ ನಿಂತು ಸೋತರೂ 1934ರಲ್ಲಿ ಡಿವಿಬಿಗೆ ಆಯ್ಕೆಯಾದರು. ಅಲ್ಲಿಂದ ಮುಂದೆ ಅವರ ರಾಜಕೀಯ ಕ್ಷೇತ್ರ ಮದ್ದೂರೇ ಆಯಿತು. ಅನೇಕ ಭಾರಿ ಆ ಕ್ಷೇತ್ರದಿಂದಲೇ ಗೌಡರು ಗೆದ್ದುಬಂದರು.

1938 ರಲ್ಲಿ ಮದ್ದೂರು ಹತ್ತಿರದ ಶಿವಪುರದಲ್ಲಿ ನಡೆದ ರಾಷ್ಟ್ರಕೂಟ ಮತ್ತು ಧ್ವಜಸತ್ಯಾಗ್ರಹ ವೀರಣ್ಣಗೌಡರ ಕರ್ತೃತ್ವಶಕ್ತಿ ಪ್ರತೀಕವಾದುದು. ಮೈಸೂರು ರಾಜ್ಯ ದೇಶೀಯ ಸಂಸ್ಥಾನವಾಗಿದ್ದು ಗ್ರಾಮಾಂತರದ ಜನ, ಐಶ್ವರ್ಯವಂತರು ರಾಜನಿಷ್ಠ ರಾಗಿಯೇ ಇದ್ದರು. ಮೈಸೂರು ರಾಜ್ಯದಲ್ಲಿ ಸ್ವಾತಂತ್ರ್ಯ ಚಳುವಳಿ ರೂಪುತಳೆಯುವ ಬಗ್ಗೆ ಸ್ವತಃ ಗಾಂಧೀಜಿಯವರಿಗೇ ಅನುಮಾನವಿದ್ದಿತು. ಅಂತಹ ಸಮಯದಲ್ಲಿ ಶ್ರೀ ವೀರಣ್ಣಗೌಡರು ರಾಜ್ಯಾದ್ಯಂತ ಪ್ರವಾಸಮಾಡಿ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಜನ ಜಾಗೃತಿಯನ್ನುಂಟುಮಾಡಿದರು. ಇದನ್ನು ಒರೆಗೆ ಹಚ್ಚಲೋ ಎಂಬಂತೆ ಶಿವಪುರದ ರಾಷ್ಟ್ರಕೂಟವನ್ನು ಸಂಘಟಿಸುವ ಹೊಣೆಯನ್ನು ವೀರಣ್ಣಗೌಡರೇ ಹೊತ್ತುಕೊಂಡರು. ಆದರೆ ಶ್ರೀ ಗೌಡರ ನಂಬಿಕೆಯನ್ನು ಗ್ರಾಮಾಂತರದ ಜನ ಉಳಿಸಿದರು. 1938 ಏಪ್ರಿಲ್ 9, 10, 11 ರಂದು ಮೂರು ದಿನ ಶಿವಪುರ ರಾಷ್ಟ್ರಕೂಟವೂ ಒಂದು ತಿಂಗಳ ಕಾಲ ಧ್ವಜಸತ್ಯಾಗ್ರಹವೂ ನಡೆದು ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ, ಸ್ವಾತಂತ್ರ್ಯಸಂಗ್ರಾಮಗಳು ಆರಂಭವಾಗಲು ಕಾರಣವಾಯಿತು.

ಶಿವಪುರದ ರಾಷ್ಟ್ರಕೂಟದನಂತರ ಮೈಸೂರು ರಾಜ್ಯದಲ್ಲಿ ಸ್ವಾತಂತ್ರ್ಯ ಚಳುವಳಿ

ತೀವ್ರತೆಯನ್ನು ಕಂಡಿತು. ಶ್ರೀ ವೀರಣ್ಣಗೌಡರು ಚಳುವಳಿ ನಡೆದಲ್ಲೆಲ್ಲಾ ಪಾಲುಗೊಂಡರು. 1939ರಲ್ಲಿ ಕೋಲಾರ ಜಿಲ್ಲೆಯ ಸ್ವರ್ಣಕುಪ್ಪಂನಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯೊಂದಿಗೆ ಹೋದಾಗ ಇವರ ಬಂಧನವಾಯಿತು. ಇವರ ಜೊತೆ ಶ್ರೀ ಕೆ.ಸಿ. ರೆಡ್ಡಿ, ಪಟ್ಟಾಭಿರಾಮನ್, ವಿ. ವೆಂಕಟಪ್ಪ ಭಾಷ್ಯಂ ಮುಂತಾದವರೆಲ್ಲಾ ಇದ್ದರು. ಅವರೆಲ್ಲರಿಗೂ ಮೂರು ತಿಂಗಳಕಾಲ ಕಠಿಣ ಶಿಕ್ಷೆಯಾಯಿತು. ಇದೇ ಶ್ರೀ ವೀರಣ್ಣಗೌಡರ ಮೊದಲ ಜೈಲುವಾಸ. ಇಲ್ಲಿಂದ ಬಿಡುಗಡೆಯಾದನಂತರ ಅವರು ಮದ್ದೂರಿನಿಂದ ಪ್ರಜಾಪ್ರತಿನಿಧಿ ಸಭೆಗೆ ಸ್ಪರ್ಧಿಸಿ ಆರಿಸಿಹೋದರು.

1942ರ ಚಳುವಳಿಯ ಕಾಲಕ್ಕೆ ಇವರು ಮೈಸೂರಿನಲ್ಲಿ ಭಾಷಣ ಮಾಡಿ ದಿನಾಂಕ 8-9-42 ರಂದು ಬಂಧಿತರಾದರು. ಸುಮಾರು ಹದಿನೈದುದಿನಗಳ ಕಾಲ ಮೈಸೂರು ಜೈಲಿನಲ್ಲಿಟ್ಟಿದ್ದು ಅನಂತರ ಬೆಂಗಳೂರು, ಕರುಹಟ್ಟಿ, ಶ್ರೀರಂಗಪಟ್ಟಣದ ಜೈಲುಗಳಿಗೆ ಸ್ಥಳಾಂತರಿಸಿದರು. 1943ರ ಕೊನೆಯುತನಕ ಈ ಜೈಲುವಾಸ ಮುಂದುವರಿಯಿತು. ಸೆರೆಯಿಂದ ಬಿಡುಗಡೆಯಾದಮೇಲೆ 1944 ರಲ್ಲಿ ಇವರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾದರು. ಪತ್ರಿಕಾವ್ಯವಸಾಯ ಗೌಡರ ಬೆನ್ನಿಗಂಟಿಯೇ ಇರುತ್ತಿತ್ತು. 1946ರಲ್ಲಿ ಕಂಪನಿಯೊಂದು ನಡೆಸುತ್ತಿದ್ದ "ವಾರ್ತಾ" ಎಂಬ ಪತ್ರಿಕೆಯ ಸಂಪಾದಕರಾದರು. ಈ ಪತ್ರಿಕೆ ದೇಶಕ್ಕೆ ಸ್ವಾತಂತ್ರ್ಯ ಬರುವವರೆಗೆ ನಡೆಯಿತು. 1947ರಲ್ಲಿ ಮತ್ತೊಮ್ಮೆ ಬೆಂಗಳೂರಿನಲ್ಲಿ ವೀರಣ್ಣಗೌಡರ ಬಂಧನವಾಯಿತು. ಸುಮಾರು ಆರು ವಾರಗಳ ಕಾಲ ಸೆರೆಯಲ್ಲಿದ್ದು ಹೊರಬಂದರು. ಮತ್ತೆ ಪತ್ರಿಕಾವ್ಯವಸಾಯ, ತಮ್ಮ ಚಿತ್ರಗುಪ್ತ ಪತ್ರಿಕೆಯನ್ನು ಆರಂಭಿಸಿದರು. ಇದು ಬಹಳ ಕಾಲನಡೆಯಲಿಲ್ಲ. ಮುಂದೆ ಈ ಪತ್ರಿಕೆಯನ್ನು ಶ್ರೀ ಬಿ. ಎನ್. ಗುಪ್ತ ಅವರು ವಹಿಸಿಕೊಂಡು ವಾರ ಪತ್ರಿಕೆಯಾಗಿ ನಡೆಸುತ್ತಿದ್ದರು. ಮುಂದೆ ಅವರೂ ನಿಲ್ಲಿಸಿಬಿಟ್ಟರು.

ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಕಾಂಗ್ರೆಸ್ ಒಂದು ರಾಜಕೀಯ ಪಕ್ಷವಾಗಿ ಅಧಿಕಾರವಹಿಸಿತು. ಆ ಸಂಸ್ಥೆಯ ವಿವಿದ ಹಂತಗಳಲ್ಲಿ ಶ್ರೀ ವೀರಣ್ಣಗೌಡರು ಸೇವೆ ಸಲ್ಲಿಸಿದರು. 1952 ರಲ್ಲಿ ಅವರು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. 1956ರಲ್ಲಿ ನಿಜಲಿಂಗಪ್ಪನವರ ಸಂಪುಟದಲ್ಲಿ ಲೋಕೋಪಯೋಗಿ ಸಚಿವರಾಗಿದ್ದರು. 1958ರಲ್ಲಿ ಮತ್ತೆ ವಿಶಾಲ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. 1959ರಲ್ಲಿ ಮತ್ತೆ ಜತ್ತಿ ಸಂಪುಟದಲ್ಲಿ ಮಂತ್ರಿಯಾದರು. 1964 ರಿಂದ 67ರ ವರೆಗೆ ಲೋಕಸಭಾ ಸದಸ್ಯರಾಗಿದ್ದರು. ಹೀಗೆ ಸರ್ಕಾರದ ಮತ್ತು ಕಾಂಗ್ರೆಸ್ ಸಂಸ್ಥೆಯಲ್ಲಿ ಶ್ರೀ ವೀರಣ್ಣಗೌಡರು ದುಡಿದವರು. 1975 ರಲ್ಲಿ ಅವರ ಆತ್ಮಕಥನ ಬದುಕು-ಮೆಲುಕು ಪ್ರಕಟವಾಯಿತು. ಹೃದಯ ಕಾಯಿಲೆ ಪೀಡಿತರಾಗಿದ್ದ ಶ್ರೀ ವೀರಣ್ಣಗೌಡರು ಮುಂದೆ ಕೆಲವೇ ಕಾಲದಲ್ಲಿ ಇಹವನ್ನು ತೊರೆದರು. ಶ್ರೀ ಗೌಡರು ಮಂಡ್ಯ ಜಿಲ್ಲೆಗೆ ಕನ್ನಡ ನಾಡಿಗೆ, ರಾಷ್ಟ್ರಕ್ಕೆ ಸಲ್ಲಿಸಿದ ಸೇವೆ ಚಿರಸ್ಮರಣೀಯವಾದುದು.

ಹ. ಕ. ರಾಜೇಗೌಡ

ಕರಡಹಳ್ಳಿ ಕೃಷ್ಣಪ್ಪಗೌಡ

ನಾಗಮಂಗಲ ತಾಲ್ಲೂಕು ರಾಜಕೀಯ, ಸಾಮಾಜಿಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರಣಗಳಿಂದಾಗಿ ಈಚಿನ ದಿನಗಳಲ್ಲಿ ಬರಗಾಲ ಮತ್ತು ಬಡತನಗಳಿಂದಾಗಿ ದೇಶದಲ್ಲಿ ಹೆಸರು ಪಡೆದ ಒಂದು ಪ್ರದೇಶವಾಗಿದೆ. ಈ ಪ್ರದೇಶದ ಅನೇಕ ಊರುಗಳು ಅತ್ಯಂತ ಪ್ರಾಚೀನ ಕಾಲದಿಂದಲೂ ಇತಿಹಾಸ ಪ್ರಸಿದ್ಧವಾಗಿದುದ್ದು ಕಂಡುಬರುತ್ತದೆ. ಅತ್ಯಂತ ಪ್ರಾಚೀನ ಕಾಲದಿಂದಲೂ ಈ ಭಾಗ ಅನೇಕ ಶೂರರನ್ನು, ಮಂತ್ರಿದಂಡ ನಾಯಕರನ್ನು, ರಾಜಕಾರಣ ಪಟುಗಳನ್ನು ಕೊಡುತ್ತಾ ಬಂದಿದೆ. ಕರಡಹಳ್ಳಿಯ ಕೃಷ್ಣಪ್ಪಗೌಡರು ಈ ಪರಂಪರೆಯೇ ಮತ್ತೆ ಮೈವೆತ್ತಂತಹ ಒಬ್ಬ ಸ್ವಾತಂತ್ರ್ಯ ಹೋರಾಟಗಾರರು.

ನಾಗಮಂಗಲದಿಂದ ಮಂಡ್ಯಕ್ಕೆ ಹೋಗುವ ರಸ್ತೆಯಲ್ಲಿ ನಾಗಮಂಗಲದಿಂದ ಸುಮಾರು ಐದುಮೈಲಿ ದೂರದಲ್ಲಿ ರಸ್ತೆಯ ಬಲ ಭಾಗದ ತಗ್ಗಿನಲ್ಲಿ ಕರಡಹಳ್ಳಿ ಇದೆ, ಈ ಊರಿನ ಪ್ರಾಚೀನತೆಯ ಬಗೆಗೆ ಖಚಿತವಾದ ಆಧಾರಗಳು ದೊರೆಯುವುದಿಲ್ಲ. ನಾಗಮಂಗಲ ಪ್ರದೇಶದಲ್ಲಿ ದೊರೆಯುವ ಅನೇಕ ಪ್ರಾಚೀನ ಶಾಸನಗಳಲ್ಲಿ ಈ ಊರಿನ ಹೆಸರು ಕಂಡುಬರುವುದಿಲ್ಲ. ಆದರೆ ಈ ಊರಿನ ಅಸ್ತಿತ್ವದ ಬಗ್ಗೆ ದೊರೆಯುವ ಮಾಹಿತಿ ಪ್ರಕಾರ ಇದಂ ಸುಮಾರು ಹದಿನೈದನೆಯ ಶತಮಾನದ ಊರೆಂದು ಊಹಿಸಲವಕಾಶ ವಿದೆ. ಕೆಲವೇ ವರ್ಷಗಳ ಹಿಂದೆ ರಸ್ತೆಯಲ್ಲಿ ಹೋಗುವವರಿಗೆ ಕರಡಹಳ್ಳಿ ಕಾಣುತ್ತಿರ ಲಿಲ್ಲ. ಕಾರಣ ಊರಿನ ಸುತ್ತ ಬೆಳೆದಿದ್ದ ಮರಗಳು, ಈಗ ಕರಡಹಳ್ಳಿ ಸಾಕಷ್ಟು ಬೆಳೆದಿದೆ ಅಭಿವೃದ್ಧಿಯನ್ನು ಹೊಂದಿದೆ.

ಮೈಸೂರು ರಾಜ್ಯದಲ್ಲಿ ಹಳ್ಳಿಕಾರತಳಿಯ ದನಗಳು ಹೆಸರುವಾಸಿ. ಹಾಲು ಕರೆಯು ವುದರಲ್ಲಿ ಕಡಿಮೆಯಿದ್ದರೂ ಆ ಜಾತಿಯ ಹೋರಿಗಳು ಬಹಳ ಬೆಲೆ ಬಾಳುವಂಥವು. ಒಂದು ಕಾಲದಲ್ಲಿ ಅಂತಹ ಒಂದು ಜೊತೆ ಎತ್ತುಗಳನ್ನು ಕಟ್ಟುವ ರೈತ ಅತ್ಯಂತ ಪ್ರತಿ ಷ್ಟಿತನೆಂಬ ಭಾವನೆಯಿತ್ತು. ಈ ಜಾತಿಯ ದನಗಳನ್ನು ಸಾಕುವುದರಲ್ಲಿ ಕರಡಹಳ್ಳಿಯ ಮರಿಗೌಡರು ಪ್ರಸಿದ್ಧರು. ಅವರು ಇಂತಹ ನೂರಾರು ದನಗಳನ್ನು ಅತ್ಯಂತ ಸಮರ್ಪಕ ವಾಗಿ ಸಾಕುತ್ತಿದ್ದರು. ಮರಿಗೌಡರಿಂದ ಈ ತಳಿಯ ಹೋರಿಗಳನ್ನು ಕೊಳ್ಳಲು ದೇಶದ ನಾನಾ ಕಡೆಗಳಿಂದ ವ್ಯಾಪಾರಗಾರರು ಕರಡಹಳ್ಳಿಗೆ ಬರುತ್ತಿದ್ದರು. ಮೈಸೂರು ಅರಮನೆಯ ಗಾಡಿಗಳಿಗೆ ಕಟ್ಟಲು ಬೇಕಾಗುತ್ತಿದ್ದ ನೂರಾರು ಉತ್ತಮ ಜಾತಿಯ

ಎತ್ತುಗಳನ್ನು ಒಪಗಿಸುತ್ತಿದ್ದವರು ಶ್ರೀ ಮರಿಗೌಡರು. ಆಗಿನಕಾಲದಲ್ಲಿಯೇ ಮರಿಗೌಡರು ವಿದ್ಯಾವಂತರೂ ವ್ಯವಹಾರ ಕುಶಲಿಯೂ ಆಗಿದ್ದರು. ಶ್ರೀ ಗೌಡರು ಊರಪ್ರಮುಖರೂ ನಾಡಗೌಡರೂ ಆಗಿದ್ದರು. ಈ ಮರಿಗೌಡರ ಮಗನೇ ಶ್ರೀ ಕೃಷ್ಣಪ್ಪಗೌಡರು.

ಕರಡಹಳ್ಳಿ ಕೃಷ್ಣಪ್ಪಗೌಡರೂ ಸಹ ಉತ್ತಮ ಜಾತಿಯ ಜಾನುವಾರುಗಳನ್ನು ಸಾಕುವುದರಲ್ಲಿ ಎತ್ತಿದ ಕೈ ಎಂಬುದು ಗ್ರಾಮಾಂತರ ಜನರ ಅಭಿಪ್ರಾಯ. ಅವರ ರಾಜಕೀಯ, ಸಾಮಾಜಿಕ ಪ್ರತಿಷ್ಠೆಗಳು ನಗರದವರಿಗೆ, ವಿದ್ಯಾವಂತರಿಗೆ. ಹೀಗೆ ಒಬ್ಬ ವ್ಯಕ್ತಿ ಅದರಲ್ಲಿಯೂ ಗ್ರಾಮಾಂತರದಲ್ಲಿ ಹುಟ್ಟಿ ಬೆಳೆದವನು ತನ್ನ ಬಹುಮುಖ ವ್ಯಕ್ತಿತ್ವವನ್ನು ಬೆಳೆಸಿ ಉಳಿಸಿಕೊಳ್ಳುವುದು ಅಪರೂಪದ ಸಂಗತಿ. ನಮ್ಮ ನಾಡಿನ ವರ್ಣಧರ್ಮ ಮತ್ತು ಪರಂಪರೆಯ ಬೇಲಿಯನ್ನು ದಾಟಿ ಸ್ವಂತಿಕೆಯನ್ನು ಕಾಯ್ದುಕೊಳ್ಳುವುದು ಕಷ್ಟಸಾಧ್ಯವಾಗಿತ್ತು. ಆದರೆ ಅದೆಷ್ಟೋ ಆದಮ್ಯ ಚೇತನಗಳು ಇಂತಹ ಅಡ್ಡಿ ಆತಂಕಗಳ ಕಟ್ಟನ್ನು ಕಿತ್ತು ಆಚೆ ಬಂದು ತಮ್ಮ ಪ್ರತಿಭೆಯನ್ನು ಬೆಳೆಸಿಕೊಂಡುದುಂಟು. ಅಂತಹ ಒಂದು ಚೇತನ ಕೃಷ್ಣಪ್ಪಗೌಡರದು. ಉತ್ತಮ ತಳಿಯ ದನಗಳನ್ನು ಸಾಕಿ ಅವುಗಳ ಉತ್ತಮ ಮಾದರಿಗಳನ್ನು ಅಭಿವೃದ್ಧಿ ಪಡಿಸುವುದು ಕೃಷ್ಣಪ್ಪಗೌಡರಿಗೆ ಪರಂಪರೆಯಿಂದ ಬಂದ ಪದ್ಧತಿಯಾಗಿತ್ತು. ಇದರೊಂದಿಗೆ ವ್ಯವಸಾಯ ನಮ್ಮ ನಾಡಿನ ರೈತವರ್ಗದವರಿಗೆ ಜೀವನದ ಅವಿಭಾಜ್ಯ ಅಂಗವಾಗಿರುವಂತೆಯೇ ಕೃಷ್ಣಪ್ಪಗೌಡರು ನಾಗಮಂಗಲದ ಸುತ್ತಿಗೇ ಒಳ್ಳೆಯ ಬೇಸಾಯಗಾರರೆಂದೂ ಹೆಸರುವಾಸಿಯಾಗಿದ್ದರು.

ಮರೀಗೌಡರು ತಕ್ಕಮಟ್ಟಿಗೆ ವಿದ್ಯಾವಂತರಾಗಿದ್ದವರು. ಆಗಿನ ಕಾಲದಲ್ಲಿ ಗ್ರಾಮಾಂತರದ ಮಕ್ಕಳಿಗೆ ಶಿಕ್ಷಣ ಸೌಲಭ್ಯಗಳು ಇರಲಿಲ್ಲ. ಈ ಅನುಕೂಲಗಳೆಲ್ಲಾ ಕೇವಲ ನಗರಗಳಿಗೆ, ಅಲ್ಲಿಯೂ ಮೇಲುವರ್ಗದವರೆನಿಸಿಕೊಂಡವರಿಗೆ ಮೀಸಲಾಗಿದ್ದುವು. ಹಳ್ಳಿಯವರು ತಮ್ಮ ಮಕ್ಕಳನ್ನು ನಗರಗಳಿಗೆ ಕಳಿಸಿ ಶಿಕ್ಷಣ ಕೊಡಿಸಲು ಸಮರ್ಥರಾಗಿರಲಿಲ್ಲ. ಅಲ್ಲದೆ ಅವರಿಗೆ ಶಿಕ್ಷಣ ಪಡೆಯುವ ಪಾರಂಪರಿಕ ಹಕ್ಕೂ ಇರಲಿಲ್ಲ. ಮತ್ತೂ ಒಂದು ಕಾರಣ ಮನೆಯಲ್ಲಿ ಎಷ್ಟು ಜನರಿದ್ದರೂ ರೈತನಾದವನಿಗೆ ಕೆಲಸಗಳಿದ್ದೇ ಇರುತ್ತಿದ್ದವು. ವ್ಯವಸಾಯವೇ ಅಂಥದು. ಇಂದಿಗೂ ಹಳ್ಳಿಯ ಹುಡುಗರು ತಮ್ಮ ಮನೆಯ ವ್ಯವಸಾಯ ಸಂಬಂಧವಾದ ಕೆಲಸಕಾರ್ಯಗಳಿಗೆ ನೆರವಾಗಿಯೇ ಶಾಲಾಕಾಲೇಜುಗಳಿಗೆ ಬರುತ್ತಾರೆ. ಇಂದಿಗೂ ನೂರಕ್ಕೆ ಎಪ್ಪತ್ತೈದು ಜನ ರೈತರಿಗೆ ತಮ್ಮ ಮಕ್ಕಳನ್ನು ಉತ್ತಮ ದರ್ಜೆಯ ವಿದ್ಯಾರ್ಥಿ ನಿಲಯಗಳಲ್ಲಿ ಇಟ್ಟು ಓದಿಸುವುದು ಆಗದ ಪರಿಸ್ಥಿತಿಯೇ ಇದೆ. ಇಂತಹ ಪರಿಸ್ಥಿತಿಯಲ್ಲಿ ಎಷ್ಟೋಂದು ಗ್ರಾಮಾಂತರ ಪ್ರತಿಭೆಗಳು ಅವಕಾಶ ದೊರೆಯದೆ ನಶಿಸಿ ಹೋಗಿವೆ ಎಂಬುದನ್ನು ನೆನದಾಗ ಈ ದೇಶದ ಇಂದಿನ ಪರಿಸ್ಥಿತಿಗೆ ಕಾರಣ ಹೊಳೆಯದಿರದು. ಭಾರತಕ್ಕೆ ಇಂಗ್ಲಿಷರ ಆಗಮನ ಈ ದೃಷ್ಟಿಯಿಂದ ಸ್ವಾಗತಾರ್ಹ ಎನಿಸದಿರದು. ಅವರು ಶಾಲಾ ಕಾಲೇಜು

ಗಳನ್ನು ತೆರೆದು ಕಡೆಯ ಪಕ್ಷ ಈಗಿರುವ ರೀತಿಯ ಶಿಕ್ಷಣವನ್ನಾದರೂ ಕೊಡದಿದ್ದರೆ ನಾವೆಲ್ಲ ಎಲ್ಲಿರುತ್ತಿದ್ದೆವೋ ? ನಮ್ಮ ದೇಶದ ಇಂತಹ ಪರಿಸ್ಥಿತಿಯಲ್ಲೂ ಕೆಲವರು ತಮ್ಮ ಮಕ್ಕಳಿಗೆ ಓದು ಬರಹವನ್ನು ಕಲಿಸಲು ಯತ್ನಿಸಿರುವ ಅಪರೂಪದ ಪ್ರಸಂಗಗಳು ದೊರೆಯುತ್ತವೆ. ಮರೀಗೌಡರು ಓದು ಕಲಿತದ್ದು ಅಂತಹ ಒಂದು ಪ್ರಸಂಗ. ಈ ಕಾರಣದಿಂದಾಗಿ ಅವರು ತಮ್ಮ ಮಗ ಕೃಷ್ಣಪ್ಪಗೌಡರಿಗೆ ಆಧುನಿಕ ಶಿಕ್ಷಣ ಕೊಡಿಸಲು ಮನಸ್ಸು ಮಾಡಿದರೆಂದು ಕಾಣುತ್ತದೆ.

ಊರಿನಲ್ಲಿ ಶಾಲೆಗಳಿಲ್ಲದಿದ್ದರೂ ಅಯ್ಯಗಳನ್ನು ಕರೆತಂದು ತಮ್ಮ ಮಕ್ಕಳಿಗೆ ಓದು ಬರಹ ಕಲಿಸುವ ಪದ್ಧತಿ ನಮ್ಮ ಗ್ರಾಮಾಂತರ ಸಮಾಜದಲ್ಲಿದ್ದಿತು. ಹೀಗೆ ಉಪಾಧ್ಯಾಯರನ್ನು ತಂದು ಮನೆಯಲ್ಲಿರಿಸಿಕೊಳ್ಳುವುದು, ಅವರಿಗೆ ಸಂಬಳ, ಉಂಬಳಿ ಕೊಡುವುದು, ಎಲ್ಲರಿಗೂ ಸಾಧ್ಯವಾಗುವಂಥದಲ್ಲ. ಊರಿನ ಮುಖಂಡರು, ತೈನಾತಿ ಕುಳಗಳು ಮಾತ್ರ ತಮ್ಮ ಮಕ್ಕಳಿಗಾಗಿ ಈ ಏರ್ಪಾಡುಗಳನ್ನು ಮಾಡುತ್ತಿದ್ದರು. ಅಂತಹ ಮಠಗಳಲ್ಲಿ ಮುಖಂಡರ ಮಗ ಒಬ್ಬನೇ ಓದುವುದು ಸಾಧ್ಯವೆ ? ಹೀಗಾಗಿ ಆಸಕ್ತರಾದ ಇನ್ನು ಕೆಲವು ಹುಡುಗರಿಗೆ ಅಕ್ಷರದರ್ಶನವಾಗುತ್ತಿತ್ತು. ಈ ಮಠಗಳು ಕನ್ನಡ ಕಲಿಕೆಗೆ ಮಾತ್ರ ಸೀಮಿತ. ಅವನು ಜೈಮಿನಿ ಓದಿಬಿಟ್ಟರೆ ಮಹಾಪಂಡಿತ ಎಂದೇ ನಿರ್ಣಯ. ಮರೀಗೌಡರೂ ಒಬ್ಬ ಉಪಧ್ಯಾಯರನ್ನು ತಂದಿರಿಸಿ ತಮ್ಮ ಮಗನಿಗೆ ಶಿಕ್ಷಣ ಆರಂಭಿಸಿದರು. ಆ ಹೊತ್ತಿಗೆ ಅಲ್ಲಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ, ಮುಖ್ಯ ಊರುಗಳಲ್ಲಿ ಸರ್ಕಾರವೋ ಇಲ್ಲ ಕ್ರೈಸ್ತ ಮಿಷನರಿಗಳೋ ಶಾಲೆಗಳನ್ನು ಆರಂಭಿಸಿದರು. ಈ ಶಾಲೆಗಳಲ್ಲಿ ಲೋಯರ್ ಸೆಕೆಂಡರಿಯವರೆಗೆ ಮಾತ್ರ ಶಿಕ್ಷಣ. ಯಾವುದಾದರೂ ಹಳ್ಳಿಯ ಹುಡುಗ ಈ ಪರೀಕ್ಷೆಯನ್ನು ಪಾಸುಮಾಡಿದರೆ ಅದೊಂದು ದೊಡ್ಡ ಸುದ್ದಿಯಾಗಿ ಮುಂದೆ ಅವನು ಅಮಲ್ದಾರನೋ ಸುಬೇದಾರನೋ ಆಗೇ ಆಗುತ್ತಾನೆಂದು ಜನ ಅವನನ್ನು ನೋಡಲು ನೆರೆಯುತ್ತಿದ್ದರಂತೆ. ಕೃಷ್ಣಪ್ಪಗೌಡರೂ ಈ ಮಹಾಪದವಿಯವರೆಗೆ ಓದಿದವರು.

ಕೃಷ್ಣಪ್ಪಗೌಡರು ಆಗಿನ ಪದ್ಧತಿಯಲ್ಲಿ ಭಾರೀ ವಿದ್ಯಾವಂತರು. ಅಂತಹವರಿಗೆ ಸರ್ಕಾರಿ ಹುದ್ದೆಗಳು ಅರಸಿಕೊಂಡು ಬರುತ್ತಿದ್ದುವು. ಕೃಷ್ಣಪ್ಪಗೌಡರನ್ನು ಅರಿಸಿಕೊಂಡು ಒಂದು ಹುದ್ದೆ ಬಂದಿತು ಅದು ಪೊಲೀಸ್ ದಫೇದಾರಿಗೆ. ಇಷ್ಟೇ ಶಿಕ್ಷಣ ಹೊಂದಿದ ಮೇಲು ವರ್ಗದವರಿಗೆ ಇನ್ನೂ ಉತ್ತಮ ಹುದ್ದೆಗಳು ಕಾದಿರುತ್ತಿದ್ದುವು ಆದರೆ ಗ್ರಾಮಾಂತರದವರಿಗೇನಿದ್ದರೂ ಪೋಲೀಸು, ಸೇನೆ ಇತ್ಯಾದಿಯವು ತಾನೆ ? ದಫೇದಾರಿಕೆ ಬಂದುದರಿಂದ ಹಿಗ್ಗಿ ಹೀರೇಕಾಯಿಯಾಗಿ ಅದನ್ನು ಒಪ್ಪಿಕೊಂಡೇ ಬಿಟ್ಟರು. ಮಗನ ರೀತಿಯಿಂದ ಮರೀಗೌಡರಿಗೆ ಬಹಳ ನೋವಾಯಿತು. ಅವರು ಮಗನಿಗೆ ಶಿಕ್ಷಣ ಕೊಡಿಸಿದ್ದು ಆತ ಗ್ರಾಮದಲ್ಲಿ ನಿಂತು ಇಲ್ಲಿನ ಜನರ ಉದ್ಧಾರಕ್ಕೆ ಕಾರಣನಾದಾನೆ, ತಮ್ಮ ಮನೆವಾಳ್ತೆಯನ್ನು ಇನ್ನೂ ಉತ್ತಮವಾಗಿ ನಡೆಸಿಯಾನೆ

ಎಂದು. ಆದರೆ ಮಗ ಸರ್ಕಾರಿ ನೌಕರಿಯ ಹಾದಿ ಹಿಡಿದುದು ಮರೀಗೌಡರಿಗೆ ನಿರಾಶೆಯಾಯಿತು. ಈ ಬಗ್ಗೆ ತಂದೆ ಮಕ್ಕಳಲ್ಲಿ ವಾದವಿವಾದ ನಡೆದು ಕೆಲಕಾಲ ಮುನಿಸಿಗೂ ಅದು ಕಾರಣವಾಯಿತು. ಅಂತೂ ತಂದೆಯ ಆಸೆ ಮತ್ತು ಮಾತನ್ನು ಮೀರಿ ಕೃಷ್ಣಪ್ಪಗೌಡರು ತಮ್ಮ ದಫೇದಾರಿಕೆಯ ಮೇಲೆ ನಡೆದೇಬಿಟ್ಟರು.

ಅತ್ಯಂತ ಸ್ವತಂತ್ರ ವಾತಾವರಣದಲ್ಲಿ ಊರ ಗೌಡರ ಮಗನಾದ ಕೃಷ್ಣಪ್ಪಗೌಡರಿಗೆ ದಫೇದಾರಿಕೆ ಗೌಡಿಕೆಯ ಮುಂದೆ ಏನೇನೂ ಅಲ್ಲ ಎಂಬುದು ಬಹುಬೇಗ ಅರ್ಥವಾಯಿತು. ಕುಂತರೆ ನಿಂತರೆ ಮೇಲಾಧಿಕಾರಿಗಳಿಗೆ ಸಲಾಮು ಹಾಕಬೇಕು. ಅಂತಹ ಅಧಿಕಾರಿ ಬಿಳಿಯನಾಗಿದ್ದರಂತೂ ಈ ದೇಶೀಯ ದಫೇದಾರ ನಾಯಿಗಿಂತ ಕಡೆ. ತಮ್ಮ ಕಮಾನು ಗಾಡಿಯಲ್ಲಿ ಕುಳಿತು ಗೌಡಿಕೆ ಮಾಡುವುದರಲ್ಲಿ ಸದಾ ನಿಂತು ಸಲಾಮು ಹಾಕುವ ಈ ತಾಪೇದಾರಿ ಎಲ್ಲಿ ? ತಂದೆಯ ಮಾತನ್ನು ಮೀರಿ ಬರಬಾರದಿತ್ತೆಂಬ ಅರಿವು ಕೃಷ್ಣಪ್ಪಗೌಡರಿಗೆ ಬೇಗ ಮೂಡಿತು. ಆದರೆ ಅತ್ಯಂತ ಸ್ವಾಭಿಮಾನಿ ಬಡಪಟ್ಟಿಗೆ ಸೋಲೊಪ್ಪುವ ಸ್ವಭಾವ ಅವರದಲ್ಲ. ತಾವೇ ಗೆಲ್ಲಬೇಕೆಂಬ ಹಠ. ಈ ಎಲ್ಲಾ ಹಠಂ ಛಲಗಳ ಗೊಂದಲದಲ್ಲಿ ಆರು ತಿಂಗಳ ಕಾಲ ದಫೇದಾರಿ ನಡೆಸುವಲ್ಲಿ ಗೌಡರಿಗೆ ಸಾಕೋ, ಸಾಕಾಗಿ ಹೋಯಿತು. ಇನ್ನು ಈ ದಫೇದಾರಿ ನನ್ನಿಂದ ಸಾಧ್ಯವಿಲ್ಲ ಎನ್ನಿಸಿತು. ತನ್ನ ಹಳ್ಳಿಯಲ್ಲಿ ಹುಲಿಯಾಗಿದ್ದ ಗೌಡರು ಇಲ್ಲಿ ಇಲಿಯಾಗಿ ಬಾಳುವುದು ಸಾಧ್ಯವಿರಲಿಲ್ಲ ತಂದೆಯ ಎದುರು ಅಭಿಮಾನವೆಂಥದು. ಆರು ತಿಂಗಳು ತುಂಬುವ ಮೊದಲೆ. ಕೃಷ್ಣಪ್ಪಗೌಡರು ತಮ್ಮ ದಫೇದಾರಿಯನ್ನು ಅತ್ತ ಒಗೆದು ತಾಯಿಯ ಬಳಿ ಓಡುವ ಕರುವಿನಂತೆ ತಮ್ಮ ಊರಿಗೆ ಓಡಿದರು. ಮಗ ದಾರಿತಪ್ಪಿದನೆಂದು ತಮ್ಮ ಮನೆವಾಳ್ತೆಯ ಭವಿಷ್ಯದ ಬಗೆಗೆ ಯೋಚನೆಗೀಡಾಗಿದ್ದ ಮರೀಗೌಡರಿಗೆ ಮಗ ಹಿಂತಿರುಗಿದುದು ಬಹಳ ಸಮಾಧಾನ ಮತ್ತು ಸಂತೋಷವನ್ನುಂಟುಮಾಡಿತು.

ನಾಗಮಂಗಲದಿಂದ ಕೃಷ್ಣರಾಜಪೇಟೆಗೆ ಹೋಗುವ ರಸ್ತೆಯಲ್ಲಿ ಲೋಕಪಾವನಿ ನದಿಯನ್ನು ದಾಟಿದ ಕೂಡಲೆ ಕರಿಕ್ಯಾತನಹಳ್ಳಿ ಸಿಗುತ್ತದೆ. ಈ ಹಳ್ಳಿಯ ಬಲಭಾಗದಲ್ಲಿರುವ ತೋಪಿನ ಮೂಲಕ ರಸ್ತೆಯೊಂದು ಹಾದು ಹೋಗುತ್ತದೆ. ನಮ್ಮ ಎಷ್ಟೊ ದೊಡ್ಡ ಹಳ್ಳಿಗಳು ರಸ್ತೆಯನ್ನು ಕಾಣುವ ಮೊದಲೇ ಈ ರಸ್ತೆ ಆಗಿದ್ದಿತೆಂದು ಜನ ಹೇಳುತ್ತಾರೆ. ಆ ರಸ್ತೆಯಲ್ಲಿ ಮೂರು ನಾಲ್ಕು ಕಿಲೋಮೀಟರು ಹೋದರೆ ತಟ್ಟೇಕೆರೆ ಸಿಗುತ್ತದೆ. ಈ ಊರಿನ ರೈತರೊಬ್ಬರು ಆರ್ಥಿಕ ಮುಗ್ಗಟ್ಟುಗಳಿಂದ ಸಂಗಾಲಾಗಿ ಜೀವನ ನಿರ್ವಹಣೆ ಮತ್ತು ತಮ್ಮ ಒಟ್ಟು ಕುಟುಂಬವನ್ನು ಸಾಕಲು ಕೆಲಸವನ್ನರಸಿ ನೀಲಗಿರಿಗೆ ಹೋದರು, ಅಲ್ಲಿನ ಇಂಗ್ಲಿಷ್ ಟೀ ತೋಟದಲ್ಲಿ ಮೇಸ್ತ್ರಿಯಾಗಿ ಸೇರಿದರು. ಕಾಲಾನುಕ್ರಮದಲ್ಲಿ ಇವರು ತಮ್ಮ ಸ್ವಂತ ಟೀ ತೋಟಮಾಡಿ ಶ್ರೀಮಂತರಾದರು. ಆದರೆ ಅವರು ತಮ್ಮ ಹಳ್ಳಿ ತಟ್ಟೇಕೆರೆಯನ್ನು ಮರೆಯಲಿಲ್ಲ. ತಮ್ಮ ಶ್ರೀಮಂತಿಕೆಯನ್ನು ತಟ್ಟೇಕೆರೆಗೆ ವರ್ಗಾಯಿಸಿದರು. ಕಾಲಾಕ್ರಮದಲ್ಲಿ ತಟ್ಟೇಕೆರೆಯ ಈ ಮನೆತನ ಇಡೀ

ತಾಲ್ಲೂಕಿನಲ್ಲಿ ಹೆಸರುವಾಸಿಯಾಯಿತು. ಒಂದು ಪ್ರತಿಷ್ಠಿತ ಮನೆತನವೆಂದು ಪ್ರಸಿದ್ಧಿಗೂ ಬಂದಿತು. ಈ ಮನೆಯವರು ನೀಲಗಿರಿಯ ತಮ್ಮ ತೋಟದ ಆದಾಯದ ಹಣವನ್ನು ಗಾಡಿಗಳಲ್ಲಿ ಹೇರಿ ತರುತ್ತಿದ್ದರೆಂಬ ದಂತಕತೆಗಳು ಇಂದಿಗೂ ಒದುಕಿ ಜನಮನದಲ್ಲಿ ಉಳಿದಿವೆ. ಮುಂದೆ ಈ ಮನೆತನ ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿಯೂ ಪ್ರಮುಖ ಪಾತ್ರವಹಿಸಿತು. ಈ ವಂಶದ ಟಿ. ಎನ್. ಕಪನಿಗೌಡ, ಟಿ. ಎನ್. ಮಾದಪ್ಪ ಗೌಡರು ಮತ್ತು ಟಿ. ಎನ್. ಬಸಪ್ಪಗೌಡ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖವಾದ ವರು. ಕಪನೀಗೌಡರು, ಮಾದಪ್ಪಗೌಡರು ಮತ್ತು ಬಸಪ್ಪಗೌಡರು ಅನೇಕ ವರ್ಷ ರಾಜಕಾರಣದಲ್ಲಿಯೂ ಇದ್ದವರು. ಮಾದಪ್ಪಗೌಡರು ಶಾಸನ ಸಭಾ ಸದಸ್ಯರೂ ಆಗಿದ್ದರು. ಈ ಮನೆತನದ ಮಾದಾಮೇಸ್ತ್ರಿಯವರು ಕರಡಹಳ್ಳಿ ಮರಿಗೌಡರ ಸಮ ಕಾಲೀನರು. ಗ್ರಾಮ, ಪಂಚಾಯಿತಿಯ ಅನೇಕ ಕೆಲಸಗಳಿಗಾ ಈ ಇಬ್ಬರೂ ಆಗಾಗ ಸೇರುತ್ತಿದ್ದುದುಂಟು. ದಫೇದಾರಿಯನ್ನು ತೊರೆದು ಬಂದ ಮಗ ಕೃಷ್ಣಪ್ಪಗೌಡನಿಗೆ ಮದುವೆ ಮಾಡಬೇಕೆಂದು ಮರೀಗೌಡರು ನಿರ್ಧರಿಸಿದರು. ಆಗ ಅವರಿಗೆ ನೆನಪಿಗೆ ಬಂದುದು ತಟ್ಟೇಕೆರೆ ಮಾದಾಮೇಸ್ತ್ರಿಯವರ ಮಗಳು ನಿಂಗಮ್ಮ.

ನಿಂಗಮ್ಮ ನಮ್ಮ ಪ್ರಾಚೀನ ಸ್ತ್ರೀಕುಲದ ಸಂಕೇತ. ಎತ್ತರದ ನಿಲುವು. ಗ್ರಾಮಾಂತರ ಹೆಣ್ಣು ಮಕ್ಕಳಲ್ಲಿ ಅಪರೂಪವಾದ ಬಣ್ಣ, ಲಕ್ಷಣಯುತ ಮೈ ಕಟ್ಟು, ಸರಳ ಸೌಜನ್ಯಯುತ ವ್ಯಕ್ತಿತ್ವ. ಒಟ್ಟು ಕುಟುಂಬದಲ್ಲಿ ಬೆಳೆದ ಹೆಣ್ಣುಮಕ್ಕಳಲ್ಲಿರುವ ಉದಾರತೆ. ಕೃಷ್ಣಪ್ಪಗೌಡ ಮತ್ತು ನಿಂಗಮ್ಮ ಇವರ ಮದುವೆ ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಮದುವೆಯಾದ ಮೇಲೆ ಸಾಮಾನ್ಯವಾಗಿ ಹುಡುಗಿಯರ ಮನಸ್ಸು ನಾಚಿಕೆಯಿಂದ ಹೊಣೆಗಾರಿಕೆಯತ್ತ ತಿರುಗುತ್ತದೆಂದು ಹೇಳುತ್ತಾರೆ. ನಿಂಗಮ್ಮನವರು ಒಂದು ದೊಡ್ಡ ಮನೆಯ ಮಗಳಾಗಿ ಮತ್ತೊಂದು ದೊಡ್ಡ ಮನೆಯ ಸೊಸೆಯಾಗಿ ಕಾರ್ಯನಿರ್ವಹಿಸುವುದು ಅಷ್ಟೇನು ಕಷ್ಟವೆನಿಸಲಿಲ್ಲ. ಸಾಮಾನ್ಯವಾಗಿ ಈ ಮನೆತನಗಳಲ್ಲಿ ಸ್ತ್ರೀಯರ ಜವಾಬ್ದಾರಿಗಳು ಒಂದೇ ರೀತಿಯಲ್ಲಿರುತ್ತವೆ. ನಿಂಗಮ್ಮನವರದು ಅಹಂ ಇಲ್ಲದ ವ್ಯಕ್ತಿತ್ವವಾದುದರಿಂದ ಬಹುಬೇಗ ಕಾಲಿರಿಸಿದ ಮನೆಯಲ್ಲಷ್ಟೇ ಅಲ್ಲ ಆ ಊರಿನಲ್ಲಿಯೂ ಜನಪ್ರಿಯರಾಗಿ, ನಾಲ್ಕು ಜನರಿಗೆ ಬೇಕಾದವರಾದರು. ದಾಂಪತ್ಯ ಜೀವನದ ಫಲವಾಗಿ ನಿಂಗಮ್ಮನವರಿಗೆ ಒಂದು ಹೆಣ್ಣು ಒಂದು ಗಂಡು ಮಕ್ಕಳೂ ಆದರು. ಆದರೆ ವಿಧಿಯ ಆಟವೇ ಬೇರೆ ಯಾಗಿತು. 1981ರಲ್ಲಿ ಜರ್ಮನಿಯಿಂದ ಸಾಂಕ್ರಾಮಿಕವಾಗಿ ಹರಡಿದ ಇನ್‌ಫ್ಲುಯೆಂಜಾ ಎಂಬ ಮಾರಿಜ್ವರ ಭಾರತದ ಅನೇಕ ಮನೆಗಳನ್ನೇ ಬರಿದು ಮಾಡಿತು. ಆ ಭಯಂಕರ ವ್ಯಾಧಿಯಿಂದ ಬದುಕಿ ಉಳಿದವರು ಹೇಳುವ ಚಿತ್ರ ಮೈನಡುಗಿಸುತ್ತದೆ. ಒಂದು ಹೆಣ ವನ್ನು ಸ್ಮಶಾನದಲ್ಲಿ ಮಣ್ಣು ಮಾಡಿ ಬರುವ ಹೊತ್ತಿಗೆ ಮತ್ತೊಂದು ಮಗದೊಂದು : ವಿಧಿಯಂತೆ ಅಂತ್ಯಕ್ರಿಯೆ ನಡೆಯುವುದು ಸಾಧ್ಯವಾಗದೆ ಊರಿಂದ ಗಾಡಿಗಳಲ್ಲಿ ಸಾಗಿಸಿ

ಬಿಸಾಡಲಾರಂಭಿಸಿದರು. ಕಡೆಕಡೆಗೆ ಅದೂ ಆಗದೆ ಎಷ್ಟೋ ಊರನ್ನೇ ತೊರೆದು ಹೋದ ರಂತೆ. ಶ್ರೀಮತಿ ನಿಂಗಮ್ಮನವರು ತಮ್ಮ ಇಬ್ಬರು ಚಿಕ್ಕಮಕ್ಕಳನ್ನು ಬಿಟ್ಟು ಈ ಮಾರಿಗೆ ತುತ್ತಾದರು. ತಮ್ಮ ಹೊರಗಿನ ಕೆಲಸಗಳೊಂದಿಗೆ ಮನೆ, ಮಕ್ಕಳನ್ನೂ ನೋಡಿಕೊಳ್ಳು ವುದು ಅಸಾಧ್ಯವಾದುದರಿಂದ ಕೃಷ್ಣಪ್ಪಗೌಡರು ಕಾಂತರಾಜಪುರದ ಲಿಂಗಣ್ಣನವರ ಮಗಳು ನಂಜಮ್ಮ ಅವರನ್ನು ತಮ್ಮ ಎರಡನೆಯ ಹೆಂಡತಿಯಾಗಿ ಮದುವೆಯಾದರು.

ತಂದೆ ತೀರಿಕೊಂಡ ಮೇಲೆ ಕೃಷ್ಣಪ್ಪಗೌಡರು ಸಕಲ ಜವಾಬ್ದಾರಿಯನ್ನೂ ಹೊತ್ತರು. ವಂಶಪಾರಂಪರ್ಯವಾಗಿ ಬಂದ ಬೇಸಾಯ ಉತ್ತಮ ತಳಿಯ ರಾಸು ಗಳನ್ನು ಸಾಕುವುದರೊಂದಿಗೆ ವಿದ್ಯಾವಂತರಾದುದರಿಂದ ದೇಶದ ಆಗುಹೋಗುಗಳ ಬಗ್ಗೆಯೂ ಓದಿ ತಿಳಿಯಲಾರಂಭಿಸಿದರು. ಆಗಷ್ಟೇ ಭಾರತೀಯ ಸ್ವಾತಂತ್ರ್ಯ ಚಳುವಳಿ ಹಳ್ಳಿಹಳ್ಳಿಯನ್ನೂ ತನ್ನ ಬಾಹುವಿಗೆ ತೆಗೆದುಕೊಳ್ಳುತ್ತಿದ್ದ ಕಾಲ, ದೇಶದ ನಾನಾ ಕಡೆ ಗಳಲ್ಲಿ ಇಂಗ್ಲಿಷರು ಭಾರತೀಯರ ಮೇಲೆ ನಡೆಸಿದ ದೌರ್ಜನ್ಯದ ಕಥೆಗಳನ್ನು ಓದಿದಾಗ ಕೇಳಿದಾಗ ಕೃಷ್ಣಪ್ಪಗೌಡರಲ್ಲಿ ರೋಷ ಉಕ್ಕುತ್ತಿತ್ತು. ತಮ್ಮ ದಫೇದಾರಿಯ ದಿನಗಳಲ್ಲಿ ಆಂಗ್ಲರ ದರ್ಪ ಮತ್ತು ಅಹಂಕಾರಗಳನ್ನು ಕಂಡಿದ್ದ ಗೌಡರಿಗೆ ಅವರನ್ನು ಈ ನಾಡಿನಿಂದ ತೊಲಗಿಸುವ ಕಾಯಕದಲ್ಲಿ ತಾನು ಪಾಲುಗೊಳ್ಳಬೇಕೆಂದು ನಿರ್ಧರಿಸಿದರು. ತಾವು ನ್ಯಾಯ ಪಂಚಾಯಿತಿಗಳಿಗೆ ಹೋದೆಡೆಯಲ್ಲೆಲ್ಲಾ ಸ್ವಾತಂತ್ರ್ಯ ಸಂಗ್ರಾಮದ ಬಗೆಗೆ ಜನರಿಗ ತಿಳಿಯಂ ಹೇಳಲಾರಂಭಿಸಿದರು. ಅನೇಕ ದಿನಗಳ ಕಾಲ ಇವರ ಚಟುವಟಿಕೆಗಳು ನಿರಾತಂಕವಾಗಿ ನಡೆದುವು. ಆದರೆ ಈ ಸ್ವಾತಂತ್ರ್ಯದ ಹಂಬಲ ಇನ್‌ಫ್ಲುಯೆಂಜಾದಂತೆ ಮನೆಮನೆಯನ್ನು ಹೊಕ್ಕಾಗ ಆಳರಸರು ಹಳ್ಳಿಗಳತ್ತಲೂ ಗಮನ ಹರಿಸಬೇಕಾಯಿತು. ಕೃಷ್ಣಪ್ಪಗೌಡರು ಮೊದಮೊದಲು ಮಹಾರಾಜರ ಪರವಾಗಿದ್ದವರು. ಅದು ಆಗಿನ ಕಾಲದ ಗ್ರಾಮಾಂತರದವರ ಸ್ವಭಾವವೂ ಆಗಿತ್ತು. ಆದರೆ ಸ್ವಾತಂತ್ರ್ಯದ ಅರಿವು ಮತ್ತು ಮಹತ್ವಗಳ ಆಕಾಂಕ್ಷೆ ಬೆಳೆದಂತೆಲ್ಲಾ ಕೃಷ್ಣಪ್ಪಗೌಡರು ಬಹುಬೇಗ ತಮ್ಮ ಪರಂಪರಾನುಗತ ಭಾವನೆಗಳಿಗೆ ತಿಲಾಂಜಲಿಯಿತ್ತು ಹೊಸದರತ್ತ ತಿರುಗಿದರು. ಮಂಡ್ಯ ಮೈಸೂರು ಪ್ರಾಂತವನ್ನೆಲ್ಲಾ ಸುತ್ತಿ ಸ್ವಾತಂತ್ರ್ಯ ಸಂಗ್ರಾಮದ ಬಗೆಗೆ ಪ್ರಚಾರ ನಡೆಸಿದರು. ಇಂಡವಾಳು ಹೊನ್ನಯ್ಯ, ಹೊಸಗಾವ ಹಳ್ಳಿ ಪುಟ್ಟಣ್ಣ ಇವರು ಗೌಡರ ಆಪ್ತರು. ಕೃಷ್ಣಪ್ಪ ಗೌಡರ ಹೋರಾಟದ ಪ್ರಭಾವ ಎಲ್ಲಿಯವರಗಿತ್ತೆಂದರೆ ಕೆಲವು ಕಾಲ ಅವರನ್ನು ಮೈಸೂರು ಜಿಲ್ಲೆಯಿಂದ ಗಡೀಪಾರು ಮಾಡಲಾಗಿತ್ತು. ಆಗ ಮಂಡ್ಯ ಜಿಲ್ಲೆ ಇನ್ನು ಆಗಿರಲಿಲ್ಲ. ಹೀಗೆ ಪ್ರಜಾಕಂಟಕ ದಫೇದಾರನಾಗಬೇಕಿದ್ದ ಕೃಷ್ಣಪ್ಪಗೌಡರು ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯ ನಾಯಕರಾದರು.

ಜನಸಮುದಾಯದ ಹೃದಯದಲ್ಲಿ ಭುಗಿಲೆದ್ದ ಸ್ವಾತಂತ್ರ್ಯದ ಆಸೆಯನ್ನು ಹತ್ತಿಕ್ಕುವುದು ಆಳರಸರಾದ ಬ್ರಿಟಿಷರಿಗಾಗಲಿ ಅವರ ಕೈಗೊಂಬೆಗಳಾಗಿದ್ದ ದೇಶೀಯ ರಾಜರಿಗಾಗಲಿ ಸಾಧ್ಯವಿಲ್ಲದ ಮಾತು ಎಂಬುದು ಅರಿವಾದಾಗ ಅಲ್ಲಲ್ಲಿ ಪ್ರಜಾಪ್ರತಿನಿಧಿ

ಸಭೆಗಳು ಆರಂಭವಾದುವು. ಆಡಳಿತದಲ್ಲಿ ಪ್ರಜೆಗಳೂ ಪಾಲುಗೊಳ್ಳುವುದರ ಮೊದಲ ಹಂತ ಇದು. ಇಲ್ಲಿಯೂ ಆಳುವವರ ಕುತಂತ್ರವೇ ಪ್ರಧಾನವಾಗಿತ್ತು. ಏಕೆಂದರೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗುತ್ತಿದ್ದವರು ಸಾಮಾನ್ಯವಾಗಿ ಶ್ರೀಮಂತರು, ಪ್ರತಿಷ್ಠಿತರು, ಊರ ಮುಖಂಡರುಗಳು ಮಾತ್ರ. ಇವರಲ್ಲಿ ಬಹುಪಾಲು ಜನರು ಸರ್ಕಾರದೊಂದಿಗಿನ ತಮ್ಮ ಕೃಪಾಶ್ರಯ ಸಂಬಂಧಗಳಿಂದಾಗಿ ಸ್ವಾತಂತ್ರ್ಯವಿರೋಧಿಗಳೇ ಆಗಿದ್ದರು. ಆದರೆ ಅವರಲ್ಲಿಯೂ ನಿಜವಾದ ದೇಶಪ್ರೇಮಿಗಳಿದ್ದರು. ಕೃಷ್ಣಪ್ಪಗೌಡರನ್ನು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ನೇಮಿಸಲಾಯಿತು. ಅಲ್ಲಿ ಗೌಡರು ತಮ್ಮ ಗ್ರಾಮಾಂತರ ಜನಗಳಿಗೆ ಅನುಕೂಲವೊದಗಿಸುವ ಕೆಲಸಗಳ ಬಗ್ಗೆ ತಳೆಯುತ್ತಿದ್ದ ಹಠಮಾರಿ ನಿಲುವು ಅನೇಕ ವೇಳೆ ಈತನನ್ನು ಯಾಕಾದರೂ ಸದಸ್ಯನನ್ನಾಗಿ ಮಾಡಿದೆವೋ ಎಂದು ಪರಿತಪಿಸುವಂತಾಗುತ್ತಿತ್ತು. ಶ್ರೀ ಕೃಷ್ಣಪ್ಪಗೌಡರು ಅನೇಕ ವರ್ಷಗಳ ಕಾಲ ಈ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು.

1947ರಲ್ಲಿ ಸ್ವಾತಂತ್ರ್ಯ ಲಭಿಸಿತು. ಆಗ ಕೃಷ್ಣಪ್ಪಗೌಡರು ಪ್ರಮುಖ ವ್ಯಕ್ತಿಯಾಗಿದ್ದರು. ಅವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದಾಗಲೇ ಮಂಡ್ಯ ಜಿಲ್ಲೆಯ ಕನಸು ಕಂಡಿದ್ದರು. ಮುಂದೆ ಅವರು ಮೈಸೂರು ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾದಾಗ ಏನಾದರೂ ಸರಿಯೆ ಮಂಡ್ಯ ಜಿಲ್ಲೆ ರಚನೆಯಾಗಬೇಕೆಂದು ಈ ಭಾಗದ ಅನೇಕ ಪ್ರತಿನಿಧಿ ಮಿತ್ರರೊಂದಿಗೆ ಚರ್ಚಿಸಿದರು. ಈ ಎಲ್ಲಾ ಫಲಗಳಿಂದಾಗಿ 1939ರಲ್ಲಿ ಮಂಡ್ಯ ಜಿಲ್ಲೆ ರಚನೆಯಾಯಿತು. ಕೃಷ್ಣಪ್ಪಗೌಡರು ಮಂಡ್ಯ ಜಿಲ್ಲಾ ಬೋರ್ಡಿನ ಅಧ್ಯಕ್ಷರೂ ಆದರು. ಸ್ವಾತಂತ್ರ್ಯ ಬಂದ ಮೇಲೆ ಅವರು ಮೇಲ್ಮನೆಯ ಸದಸ್ಯರೂ ಆಗಿ ಕೆಲಸ ಮಾಡಿದರು. ಪ್ರಾಯಶಃ ಅವರು ದಫೇದಾರರಾಗಿ ಮುಂದುವರಿದಿದ್ದರೆ ಏನಾಗುತ್ತಿದ್ದರೋ ತಿಳಿಯದು. ಅದನ್ನು ತೊರೆದುದರಿಂದ ಜನಮನದಲ್ಲಿ ಉಳಿದರು. ಕೃಷ್ಣಪ್ಪಗೌಡರು ಭೋಜನ ಪ್ರಿಯರು. ಮೇಲುಕೋಟೆ ಕೆಂಪಂಚಿನ ಕಚ್ಚೆಪಂಚೆ, ಕೋಟು ಜರಿ ಪೇಟಗಳ ಈ ಅಜಾನುಬಾಹು ನೋಡಿದವರಲ್ಲಿ ಭಯಹುಟ್ಟುವಂತೆ ಕಂಡರೂ ಅಂತರಂಗದಲ್ಲಿ ಅತ್ಯಂತ ಮೃದುವಾದ ವ್ಯಕ್ತಿತ್ವವನ್ನು ಹೊಂದಿದ್ದರು.

ಹ. ಕ. ರಾಜೇಗೌಡ

ಪಾಲಹಳ್ಳಿ ಸೀತಾರಾಮಯ್ಯ ದಂಪತಿಗಳು

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಅವಧಿಯಲ್ಲಿ ದೇಶದಾದ್ಯಂತ ಸತತವಾಗಿ ಹೋರಾಟ ನಡೆಯಿತು. ಹಲವಾರು ಹೋರಾಟಗಳು ಭಾರತದ ಎಲ್ಲ ಭಾಗಗಳಲ್ಲೂ ನಡೆದುವು. ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ 'ಸತ್ಯಾಗ್ರಹ' ರೂಪದಲ್ಲಿ ನಡೆದ ಈ ಹೋರಾಟ ಮಹತ್ತರವಾದುದು. ಇದರಲ್ಲಿ ಕರ್ನಾಟಕದ ಪಾತ್ರವೂ ಮಹತ್ತರವಾದುದು. ವೀರಮಹಿಳೆಯರನ್ನೂ ಒಳಗೊಂಡಂತೆ ಅಸಂಖ್ಯಾತ ಸ್ವಾತಂತ್ರ್ಯಯೋಧರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೀರ್ತಿ, ಘನತೆಯನ್ನು ಎತ್ತಿ ಹಿಡಿದಿದ್ದಾರೆ. ಕರ್ನಾಟಕದ ಸತ್ಪುತ್ರರಲ್ಲಿ ಒಬ್ಬರಾದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಅಂಥವರಲ್ಲಿ ಒಬ್ಬರಾಗಿರುವುದು ಹೆಮ್ಮೆಯ ಸಂಗತಿ.

ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರದು ಆಕರ್ಷಕ ವ್ಯಕ್ತಿತ್ವ. ಕೆಂಪು ಬಣ್ಣ, ಎತ್ತರವಾದ ನಿಲುವು. ಕಚ್ಚೆಪಂಚೆ, ಖಾದಿ ಜುಬ್ಬ ಹಾಗೂ ಕನ್ನಡಕ ಧರಿಸುತ್ತಿದ್ದರು. ಕಾಂಗ್ರೆಸ್ ಸೇರುವ ಮೊದಲಿಗೆ ಶ್ರೀಮಂತಿಕೆಯ ಸಂಕೇತವಾಗಿದ್ದ ಕಲಾಪತ್ತು ಪೇಟ, ಟೈ ಧರಿಸಿ, ವಿಪ್‌ಕಾರ್ಡ್ ಕೋಟ್ ಧರಿಸಿ ಕೋರ್ಟಿಗೆ ಹೋಗುತ್ತಿದ್ದರು.

1892ರಲ್ಲಿ ಜನಿಸಿದ ಸೀತಾರಾಮಯ್ಯನವರು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೋಕು, ಪಾಲಹಳ್ಳಿ ಗ್ರಾಮದವರು. ಅವರದು ಜಮೀನುದಾರರ ಮನೆತನ. ಶ್ರೀಯುತರು ಬಿ.ಎ. ಬಿ.ಎಲ್. ಪದವೀಧರರು. ಮದರಾಸು ವಿಶ್ವವಿದ್ಯಾನಿಲಯದಿಂದ ಪದವೀಧರರಾಗಿ, ಮೈಸೂರಿನಲ್ಲಿ ವಕೀಲರಾಗಿ ವೃತ್ತಿ ಆರಂಭಿಸಿದರು. ಮೈಸೂರು ಶ್ರೀಯುತರ ಸಾಧನೆಯ ಕಾರ್ಯಕ್ಷೇತ್ರವಾಗಿತ್ತು. ಮೈಸೂರಿನ ಗಣ್ಯ ವಕೀಲರಾಗಿ ಅಪಾರ ಜನಪ್ರಿಯತೆ ಪಡೆದು ಕೊಂಡವರು. ಅಪಾರ ದೇಶಪ್ರೇಮಿಯಾದ ಸೀತಾರಾಮಯ್ಯನವರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಕಾರ್ಯಕರ್ತರಾಗಿ ತಮ್ಮನ್ನು ತೊಡಗಿಸಿಕೊಂಡರು. 1930-31ರಲ್ಲಿ ಪಂಡಿತ ಜವಾಹರಲಾಲ್ ನೆಹರೂ ಅವರು ಮೊಟ್ಟ ಮೊದಲ ಬಾರಿಗೆ ಮೈಸೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಸೀತಾರಾಮಯ್ಯನವರು ಸಕ್ರಿಯವಾಗಿ ಪಾಲ್ಗೊಂಡಿದ್ದರು. 1938ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮೈಸೂರು ಶಾಖೆಯ ಸದಸ್ಯರಾಗಿ ಸೇವೆ ಸಲ್ಲಿಸಿದ ಕೀರ್ತಿ ಅವರದು. ಶ್ರೀಯುತರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ ಆಗಿದ್ದರು. ಶ್ರೀಯುತರುಗಳಾದ ಎಂ.ವೆಂಕಟ ಕೃಷ್ಣಯ್ಯ (ತಾತಯ್ಯ), ಎಚ್. ಸಿ. ದಾಸಪ್ಪ, ಅಗರು ರಂಗಯ್ಯ, ಎ. ಕೃಷ್ಣರಾವ್

ಎಂ.ಲಕ್ಷ್ಮೀನಾರಾಯಣರಾವ್, ಮಹಮ್ಮದ್ ಸೇಟ್, ರಂಗರಾಮಯ್ಯ, ಸಿ.ನರಸಿಂಹಯ್ಯ ಎಸ್. ಕೃಷ್ಣಸ್ವಾಮಿರಾವ್, ಡಿ. ಒನುಮಯ್ಯ, ಅಂಬಳೆ ಅಣ್ಣಯ್ಯಪಂಡಿತ, ಅಡ್ವೊಕೇಟ್ ರಾಮಣ್ಣ, ರಾವ್‌ಬಹದ್ದೂರ್ ರಾಮಸ್ವಾಮಿ, ಎಂ. ಎನ್. ಜೋಯಿಸ್, ಎಂ. ಸಿ. ತಮ್ಮಯ್ಯ, ಯು. ಎಲ್. ರಾಮಚಂದ್ರರಾವ್, ಎಫ್. ಸಿ. ದೇವರಾಜೆ ಅರಸ್–ಇವರೇ ಮೊದಲಾದ ಗಣ್ಯರೊಡನೆ ಪಾಲಹಳ್ಳಿ ಸೀತಾರಾಮಯ್ಯನವರು ಸಾರ್ವಜನಿಕ ಕಾರ್ಯ ಕ್ಷೇತ್ರದಲ್ಲಿ ನಿಕಟ ಸಂಪರ್ಕವಿರಿಸಿಕೊಂಡು ಗಣನೀಯ ಸೇವೆ ಸಲ್ಲಿಸಿದ್ದಾರೆ.

ಸಾಹುಕಾರ್ ಚೆನ್ನಯ್ಯನವರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಮುನ್ನಡೆದ ಪಾಲಹಳ್ಳಿ ಸೀತಾರಾಮಯ್ಯನವರು ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ಗಣ್ಯರಾಗಿ, ಕಾಂಗ್ರೆಸ್ಸಿನ ಧುರೀಣರಲ್ಲೊಬ್ಬರಾಗಿ ಬೆಳೆದವರು ಮೈಸೂರು ನಗರ ಕಾಂಗ್ರೆಸ್ ಕಾರ್ಯ ಚಟುವಟಿಕೆ ಗಳಲ್ಲಿ ಪದಾಧಿಕಾರಿಗಳಲ್ಲೊಬ್ಬರಾಗಿ ಸಕ್ರಿಯವಾಗಿ ಭಾಗಿಯಾದವರು. ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆ ನಡೆಸಿದ ಅನೇಕ ಅಧಿವೇಶನಗಳಲ್ಲಿ ಪಾಲ್ಗೊಂಡಿದ್ದರು.

ಪಾಲಹಳ್ಳಿ ಸೀತಾರಾಮಯ್ಯನವರು 1938ರ ಶಿವಪುರದ ಮೊದಲ ಕಾಂಗ್ರೆಸ್ ಅಧಿವೇಶನದ ಸ್ವಾಗತಸಮಿತಿ ಸದಸ್ಯರಾಗಿದ್ದರು ಶಿವಪುರದ ರಾಷ್ಟ್ರಕೂಟದ ಮಹಾಧಿ ವೇಶನದಲ್ಲಿ ಕಾಂಗ್ರೆಸ್ ಧ್ವಜಾರೋಹಣ ಪ್ರಧಾನ ಕಾರ್ಯವಾಗಿತ್ತು. ಆ ಕಾರ್ಯಕ್ರಮವನ್ನು ವಿಫಲಗೊಳಿಸಲು ಸರಕಾರ ಆಜ್ಞೆಹೊರಡಿಸಿ ಇಪ್ಪತ್ತೈದು ಜನ ಮುಖಂಡರ ಮೇಲೆ ಪ್ರಯೋಗಿಸಿತು. ಅವರಲ್ಲಿ ಪಾಲಹಳ್ಳಿ ಸೀತಾರಾಮಯ್ಯನವರೂ ಒಬ್ಬರಾಗಿದ್ದರು. ಶ್ರೀಯುತರು ಶಿವಪುರ ರಾಷ್ಟ್ರಕೂಟದ ಮೈಸೂರು ಕಾಂಗ್ರೆಸ್‌ನ ಬಹಿರಂಗ ಅಧಿವೇಶನ ದಲ್ಲಿ ಜವಾಬ್ದಾರಿ ಸರಕಾರದ ಅಗತ್ಯವನ್ನು ಸಮರ್ಥಿಸಿ ಮಾತನಾಡಿದವರಲ್ಲಿ ಪ್ರಮುಖ ರಾಗಿದ್ದಾರೆ. ಜೊತೆಗೆ ಬಹಿರಂಗ ಅಧಿವೇಶನದ ನಿರ್ಣಯಗಳಿಗೆ ಸಂಬಂಧಿಸಿದಂತೆ, ಸರಕಾರದ ಸುಧಾರಣಾ ಸಮಿತಿಯನ್ನು ಟೀಕಿಸಿ "ಈ ಸಮಿತಿಗಳು ಕಾಂಗ್ರೆಸ್ ಚಳುವಳಿಯ ಬಿಸಿಯನ್ನು ಆರಿಸಲು ಸರಕಾರವು ಮಾಡುತ್ತಿರುವ ಚಾಕಚಕ್ಯತೆ" ಎಂಬುದಾಗಿ ವಾದಿಸುತ್ತಾರೆ.

1942ರಲ್ಲಿ ಶ್ರೀಯುತರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದರು. ಇದಲ್ಲದೆ 1947ರಲ್ಲಿ ಜವಾಬ್ದಾರಿ ಸರಕಾರದ ಸತ್ಯಾ ಗ್ರಹಗಳಲ್ಲಿಯೂ ಭಾಗವಹಿಸಿ ಅಲ್ಪಾವಧಿಯ ಸೆರೆವಾಸ ಅನುಭವಿಸಿದರು. ಹೀಗೆ ಹಲವಾರು ಬಾರಿ ಬಂಧನಕ್ಕೆ ಒಳಗಾಗಿ, ಮೈಸೂರು, ಶ್ರೀರಂಗಪಟ್ಟಣ, ಬೆಂಗಳೂರು, ಹಾಸನದ ಜೈಲುಗಳಲ್ಲಿ ಸೆರೆವಾಸ ಅನುಭವಿಸಿ, ದೇಶಸೇವೆಗೆ ತೊಡಗಿಸಿಕೊಂಡವರು· ಸೀತಾರಾಮಯ್ಯನವರು.

ಮೈಸೂರಿನ ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ಗಮನಾರ್ಹ ಪಾತ್ರವಹಿಸಿ, ಮೈಸೂರು ಪೌರಸಭೆಯ ಸದಸ್ಯರಾಗಿ, ನಂತರ ಮೈಸೂರು ಪೌರಸಭೆ ಹಾಗೂ ನಗರಾಭಿವೃದ್ಧಿ

ಸಮಿತಿಗಳೆರಡರ ಮೊದಲನೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಕೀರ್ತಿ ಅವರದು. ಸಹಕಾರ ತತ್ವದಲ್ಲಿ ಅಪಾರ ನಂಬಿಕೆಯಿದ್ದ ಶ್ರೀಯುತರು ಉತ್ತಮ ಸಹಕಾರಿಗಳಾಗಿ ಮಾರ್ಗ ದರ್ಶಕರಾದರು. ತಾತಯ್ಯನವರು ಸ್ಥಾಪಿಸಿದ ಖದ್ದರ್ ಪರಸ್ಪರ ಸಹಾಯ ಸಂಘದ ಡೈರೆಕ್ಟರಾಗಿದ್ದರು. ಮೈಸೂರಿನ ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಡೈರೆಕ್ಟರ್ ಹಾಗೂ ಅಧ್ಯಕ್ಷರೂ ಆಗಿದ್ದರು. ಅವರ ಕಾರ್ಯಕ್ಷೇತ್ರ ವಿಸ್ತಾರಗೊಂಡಂತೆ ವಿಧಾನ ಪರಿಷತ್ತಿನ ಸದಸ್ಯರಾಗಿ, ಶ್ರೀ ಕೆ ಸಿ. ರೆಡ್ಡಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ವಿಧಾನಪರಿಷತ್ತಿನ ಅಧ್ಯಕ್ಷರೂ ಆಗಿ ಗಮನಾರ್ಹ ಸೇವೆ ಸಲ್ಲಿಸಿದರು.

ಶ್ರೀಯುತರಿಗೆ ಕಾರ್ಮಿಕರ ಜೊತೆ ನಿಕಟ ಸಂಪರ್ಕವಿದ್ದಿತು. ಮೈಸೂರು ಕಾರ್ಮಿಕರ ಯೂನಿಯನ್‌ನ ಮುಖಂಡರಾಗಿ ಕಾರ್ಮಿಕರ ಕಲ್ಯಾಣಕ್ಕಾಗಿ ದುಡಿದ ಕೀರ್ತಿ ಇವರದು. ಮಾಜಿ ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರೊಡನೆ ಪಾಲಹಳ್ಳಿ ಸೀತಾ ರಾಮಯ್ಯನವರು ಆತ್ಮೀಯ ಸಂಬಂಧ ಹೊಂದಿದ್ದವರು. ಶ್ರೀಯುತರು ತಮ್ಮ ದೇಶ ಸೇವೆ, ಸಾಧನೆಗಳಿಂದ ಚಿರಸ್ಮರಣೀಯರಾಗಿದ್ದಾರೆ.

ಶ್ರೀಮತಿ ವೆಂಕಮ್ಮನವರು ಶ್ರೀಪಾಲಹಳ್ಳಿ ಸೀತಾರಾಮಯ್ಯನವರ ಧರ್ಮಪತ್ನಿ. ಪತಿಗೆ ತಕ್ಕ ಆದರ್ಶಸತಿ ಸ್ವಾತಂತ್ರ್ಯ ಹೋರಾಟ, ಸಮಾಜ ಸೇವೆಗಾಗಿ ತಮ್ಮನ್ನು ತೊಡಗಿಸಿಕೊಂಡವರು. ಶ್ರೀಮತಿ ವೆಂಕಮ್ಮನವರು ವೀರವಹಿಳೆ ಎಂಬ ಕೀರ್ತಿಗೆ ಪಾತ್ರರಾದವರು.

1938ರಲ್ಲಿ ಮೈಸೂರು ಕಾಂಗ್ರೆಸ್ ರಾಷ್ಟ್ರಕೂಟ ಶಿವಪುರದ ಅಧಿವೇಶನದ ಸಂದರ್ಭದಲ್ಲಿ ಶ್ರೀಮತಿ ವೆಂಕಮ್ಮನವರು ಸ್ವಯಂ ಸೇವಿಕೆಯರಿಗೆ ಮಾರ್ಗದರ್ಶಕರಾಗಿ ಸಕ್ರಿಯವಾಗಿ ಪಾಲ್ಗೊಂಡಿರುವವರು. ಮಹಿಳೆಯರಿಗೆ ಸ್ವಯಂ ಸೇವೆಯ ತರಬೇತಿ. ನೀಡಿದ ಕೀರ್ತಿ ಅವರದು.

ಶಿವಪುರದ ಅಧಿವೇಶನದ ಸಂದರ್ಭದಲ್ಲಿ ಶ್ರೀಮತಿ ವೆಂಕಮ್ಮನವರೊಡನೆ ಶ್ರೀಮತಿಯರಾದ ಯಶೋಧರಮ್ಮ ದಾಸಪ್ಪ, ಪಾರ್ವತಮ್ಮ ಸಿದ್ದಲಿಂಗಯ್ಯ, ಸುಬ್ಬಮ್ಮ ಜೋಯಿಸ್, ಇಂದಿರಾ ಕೃಷ್ಣಮೂರ್ತಿ, ಟಿ. ಸುನಂದಮ್ಮ ಮೊದಲಾದ ಮಹಿಳಾ ಮುಖ್ಯರು ಪಾಲ್ಗೊಂಡಿದ್ದರು.

ಮೈಸೂರಿನ ನಾನಾ ಮಹಿಳಾ ಸಂಘ ಸಂಸ್ಥೆಗಳ ಮುನ್ನಡೆಯಲ್ಲಿ ಶ್ರೀಮತಿ ವೆಂಕಮ್ಮನವರು ವಿಶೇಷ ಪಾತ್ರ ವಹಿಸುತ್ತಾ ಬಂದಿದ್ದಾರೆ. ವನಿತಾಸದನ, ಸೀತಾಸದನ ಗಳ ಕಾರ್ಯಕಾರಿಸಮಿತಿಗಳಲ್ಲಿ ಹಾಗೂ ಲಲಿತ ಕಲಾಮಂದಿರದ ಅಧ್ಯಕ್ಷರಾಗಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಶ್ರೀಮತಿ ವೆಂಕಮ್ಮನವರಿಗೆ ಸಹಕಾರ ತತ್ವದಲ್ಲಿ ಅಪಾರ ವಿಶ್ವಾಸ. ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಹಾಗೂ ಮೈಸೂರು ಡಿಸ್ಟ್ರಿಕ್ಟ್ ಕೋ-ಆಪರೇಟಿವ್

ಹೋಲ್‌ಸೇಲ್ ಸ್ಟೋರ್ಸ್‌ನ ಡೈರೆಕ್ಟರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಮತಿಯವರು ಮಹಿಳೆಯರಿಗೆ ತಮ್ಮ ಆದರ್ಶಗಳಿಂದ ಮೇಲ್ಪಂಕ್ತಿಯಾಗಿದ್ದಾರೆ. ಮೈಸೂರು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲಹಳ್ಳಿ ಸೀತಾರಾಮಯ್ಯ ದಂಪತಿಗಳ ಹೆಸರು ಚಿರಸ್ಮರಣೀಯವಾದುದು.

ಕೆ. ಭೈರವಮೂರ್ತಿ

ಪಿ. ಆರ್. ರಾಮಯ್ಯ

ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಭಾರತೀಯರಿಗೂ ಬ್ರಿಟಿಷರಿಗೂ ನಿರಂತರವಾಗಿ ಆಗುತ್ತಿದ್ದ ಹೋರಾಟ ದಿನೇ ದಿನೇ ಕಾವೇರುತ್ತಿತ್ತು. ಗಾಂಧೀಜಿಯವರು ಆ ಶತಮಾನದ ಮಧ್ಯಭಾಗದಲ್ಲಿ ಜನಿಸಿದರು. ಸ್ವಾತಂತ್ರ್ಯದ ಮಹತ್ವ ಮತ್ತು ಅದರ ಆವಶ್ಯಕತೆಯನ್ನು ಕುರಿತು ಭಾಷಣದ, ಸತ್ಯಾಗ್ರಹದ ಮೂಲಕ ಭಾರತೀಯರನ್ನು ಪ್ರಚೋದಿಸುತ್ತಿದ್ದರು ಅವರು ಹುಟ್ಟಿ ಇಪ್ಪತ್ತೈದು ವರ್ಷಗಳ ಅನಂತರ ಪಿ. ಆರ್. ರಾಮಯ್ಯನವರು ಜನ್ಮ ತಾಳಿದರು, ಅಂದರೆ ದಿ 10-9-1894ರಲ್ಲಿ ಶ್ರೀರಂಗಪಟ್ಟಣದ ತಾಲ್ಲೂಕಿಗೆ ಸೇರಿದ ಪಾಲಹಳ್ಳಿಯ ರಾಮಸ್ವಾಮಿಯವರು ಅವರ ತಂದೆ ಮರದ ವ್ಯಾಪಾರದಿಂದ ಬಹಳ ಕಷ್ಟದ ಜೀವನ ಸಾಗಿಸುತ್ತಿದ್ದರು. ತಮ್ಮ ಮಗನನ್ನು ಓದಿಸಬೇಕೆಂಬ ಹಂಬಲ; ತುಂಬಾ ಶ್ರಮದಿಂದಲೇ ಮಗನನ್ನು ಮೈಸೂರಿನ ಮರಿಮಲ್ಲಪ್ಪನವರ ಪಾಠಶಾಲೆಗೆ ಸೇರಿಸಿದರು. ಬಾಲಕ ರಾಮಯ್ಯ ಬಹು ಚುರುಕು, ನಿಗರ್ವಿ, ವಿದ್ಯಾಭ್ಯಾಸದಲ್ಲಿ ನಿಷ್ಠೆ, ಎಸ್. ಎಸ್. ಎಲ್. ಸಿ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿ ಗಳಿಸಿದ. ಆಗ ತಂದೆಗೆ ಆದ ಸಂತೋಷಕ್ಕೆ ಪಾರವೇ ಇಲ್ಲ. ಮಗನನ್ನು ಮುಂದೆ ಓದಿಸಬೇಕೆಂಬ ಆಕಾಂಕ್ಷೆ ಹಿಂದೂ ಕಾಶೀ ಸೆಂಟ್ರಲ್ ಕಾಲೇಜಿನಲ್ಲಿ ಎಂಟ್ರನ್ಸ್ ಪರೀಕ್ಷೆಯಲ್ಲೂ ಪ್ರಥಮದರ್ಜೆಯಲ್ಲಿ ರಾಮಯ್ಯ ತೇರ್ಗಡೆಯಾದರು. ಅನಂತರ ಬಿ. ಎಸ್‌ಸಿ ಪದವಿಯನ್ನು 1919ರಲ್ಲಿ ಪಡೆದರು. ಓದುವ ಹಂಬಲ ಇನ್ನೂ ಅಧಿಕವಾಗಿತ್ತು. ಎಂ. ಎಸ್‌ಸಿ ಡಿಗ್ರಿಯನ್ನು ಹೊಂದಲು ಅದೇ ಕಾಲೇಜಿನಲ್ಲಿ ವ್ಯಾಸಂಗ ಮುಂದುವರಿಸಿದರು ; ಆದರೆ ಅವರ ಆಸೆ ಕೈಗೂಡಲಿಲ್ಲ; ಕಾರಣ ಆಗಾಗಲೇ ದೇಶದಲ್ಲೆಲ್ಲಾ ಸ್ವಾತಂತ್ರ್ಯ ಚಳುವಳಿ ತೀವ್ರ ಸ್ವರೂಪವನ್ನು ತಾಳಿತ್ತು. ಗಾಂಧೀಜಿಯವರು ಆ ಆಂದೋಳನಕ್ಕೆ ಸೇರಲು ಭಾರತೀಯರೆಲ್ಲರಿಗೂ ಕರೆಗೊಟ್ಟರು. ಎಲ್ಲೆಲ್ಲಿಯೂ ವಂದೇ ಮಾತರಂ ಗೀತೆ ಮೊಳಗುತ್ತಿತ್ತು. ಬ್ರಿಟೀಷರೇ ಭಾರತ ಬಿಟ್ಟು ತೊಲಗಿ, ಭಾರತ ಮಾತಾಕೀ ಜೈ, ಏಸೇ ಬರಲಿ ಒಗ್ಗಟ್ಟಿರಲಿ ಎಂಬ ಘೋಷಗಳು ಅಲೆ ಅಲೆಯಾಗಿ ರಾಮಯ್ಯನವರ ಕಿವಿಯ ಬಳಿ ಗರ್ಜಿಸುತ್ತಾ ಬಡಿದು ಅಪ್ಪಳಿಸುತ್ತಿದ್ದುವು. ದೇಶಾದ್ಯಂತ ಸಹಸ್ರ ಸಹಸ್ರ ತರುಣರು ತಮ್ಮ ತನು ಮನ ಧನಗಳನ್ನು ಲೆಕ್ಕಿಸದೆ ರಸ್ತೆಗಿಳಿದು ಗಾಂಧೀಜಿಯವರಿಗೆ ಬೆಂಬಲ ನೀಡಿದರು. ಇಂತಹ ಸಮಯದಲ್ಲಿ ಪ್ರಬುದ್ಧತೆಯ ಹಾದಿಯಲ್ಲಿದ್ದ ರಾಮಯ್ಯನವರಿಗೆ ಗಾಂಧೀಜಿಯವರ ಮಾರ್ಗ ಸರಿ

ಎನಿಸಿತು. ಕೂಡಲೇ ವಿದ್ಯಾಭ್ಯಾಸಂಗಕ್ಕೆ ತಿಲಾಂಜಲಿಯಿತ್ತು ಚಳುವಳಿಗೆ ಧುಮುಕಿದರು; ಸೆರೆಮನೆಯನ್ನು ಸೇರಿದರು. ಆ ವೇಳೆಗಾಗಲೇ ಕಾಂಗ್ರೆಸ್ಸಿನ ಅನೇಕ ಪ್ರಮುಖರು ಪರಿಚಿತರಾಗಿದ್ದರು, ಗಾಂಧೀಜಿಯವರ ದರ್ಶನ ಲಾಭವಾಯಿತು. ರಾಷ್ಟ್ರೀಯ ಸೇವಾದಳ ಮುಖಂಡ ನಾ. ಸು. ಹರ್ಡೀಕರರ ಪರಿಚಯವಾಯಿತು. ರಾಷ್ಟ್ರನಾಯಕರ ಭಾಷಣ ಗಳನ್ನು ಸಂಗ್ರಹಿಸಿ ರಾಷ್ಟ್ರದ ಅನೇಕ ಪತ್ರಿಕೆಗಳಿಗೆ ಕಳುಹಿಸಿ ಅಚ್ಚಾಗುವಂತೆ ಮಾಡಿದರು. 'ಸ್ವರಾಜ್ಯ'ದ ಸಂಪಾದಕರು ಅವರನ್ನು ವರದಿಗಾರರನ್ನಾಗಿ ನೇಮಿಸಿದರು. ಕೋಮು ಗಲಭೆಯನ್ನು ನಿಲ್ಲಿಸಲು ಗಾಂಧೀಜಿಯವರು ಉಪವಾಸ ಸತ್ಯಾಗ್ರಹ ಮಾಡಿದಾಗ, ಬೆಂಗಳೂರಿನಲ್ಲಿ ಡಾ. ಬಿ ಸಿ. ರಾಮರಾವ್ ಅವರ ಅಧ್ಯಕ್ಷತೆಯಲ್ಲಿ ಹಲವಾರು ರಾಷ್ಟ್ರ ನಾಯಕರನ್ನು ಕರೆಸಿ ಭಾಷಣ ಮಾಡಿದರು. ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ಸು ಅಧಿವೇಶನದಲ್ಲಿ ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ್ದರು. ಅಲ್ಲಿ ತಾವು ಭಾಗವಹಿ ಸಿದ್ದು ತಮ್ಮ ಪುಣ್ಯ ವಿಶೇಷವೆಂದೇ ರಾಮಯ್ಯನವರು ಭಾವಿಸಿದ್ದರು.

ದೇಶದ ಸ್ವಾತಂತ್ರ್ಯ ಚಳುವಳಿಯನ್ನು ಚುರುಕುಗೊಳಿಸಲು ಮತ್ತೊಂದು ಮಾರ್ಗವನ್ನು ಕಂಡುಕೊಂಡರು. ಗಾಂಧೀಜಿಯವರ ವಿಚಾರ ಧಾರೆಗಳನ್ನು ಪತ್ರಿಕೋದ್ಯಮದ ಮೂಲಕ ಪ್ರಸಾರ ಮಾಡುವುದು. ಕೊನೆಗೆ ಪತ್ರಿಕೋದ್ಯಮದ ಕಡೆಗೆ ಮನಸ್ಸು ಹರಿದು ತಮ್ಮ ಸೇವೆಯನ್ನು ಆ ಮೂಲಕ ಸಲ್ಲಿಸುತ್ತ, ಸ್ವಾತಂತ್ರ್ಯ ಚಳುವಳಿಗೆ ಬೆಂಬಲ ನೀಡಿದರು. ತೀರ ಅಗತ್ಯವಿದ್ದಾಗ ಚಳುವಳಿಯಲ್ಲಿ ಭಾಗವಹಿಸಿ ತುರಂಗವಾಸವನ್ನು ಅನುಭವಿಸಲೂ ಹಿಂಜರಿಯಲಿಲ್ಲ.

ಪತ್ರಿಕೋದ್ಯಮ ನಮ್ಮ ದೇಶದಲ್ಲಿ ಇನ್ನೂ ಪ್ರಸಿದ್ಧಿಗೆ ಬಂದಿರದ ಕಾಲ. ಪ್ರಪಂಚದಲ್ಲಿ ಮೊಟ್ಟ ಮೊದಲು ಆರಂಭವಾಗಿದ್ದು ಜರ್ಮನಿಯಲ್ಲಿ 1615ರಲ್ಲಿ ಕಾಲ ಕ್ರಮೇಣ ಭಾರತದಲ್ಲಿ ಮಿಸ್ಟರ್ ಬೋಲ್ಟ್ಸ್ ಎಂಬವನು ಹಸ್ತಪ್ರತಿಯಿಂದ ಈ ಪ್ರಸಾರ ಕಾರ್ಯವನ್ನು ಪ್ರಾರಂಭಿಸಿದನು. ಆತನ ಸ್ನೇಹಿತ ಜೇಮ್ಸ್ ಅಗಸ್ಟಸ್ ಎಂಬವನು 'ದಿ ಬೆಂಗಾಲ್ ಗೆಜಿಟ್' ಎಂಬ ಹೆಸರಿನಲ್ಲಿ ದಿ. 29-1-1780ರಲ್ಲಿ ಹೊರತಂದನು. ಕನ್ನಡದಲ್ಲಿ ಪ್ರಥಮ ಪತ್ರಿಕೆಯಾಗಿ 'ಮಂಗಳೂರು ಸಮಾಚಾರ' ವನ್ನು ರೆವರೆಂಡ್ ಹರ್ಮನ್ ಮೊಗ್ಲಿಂಗ್ ಎಂಬುವರು ದಿ. 1-7-1843 ರಲ್ಲಿ ಪ್ರಸಿದ್ಧಿ ಪಡಿಸಿದರು. ಮೈಸೂರಿನಲ್ಲಿ ಮೊದಲ ಮಾಸಪತ್ರಿಕೆ 1881ರಲ್ಲಿ; ಆದರೆ ಇವೆಲ್ಲಕ್ಕಿಂತಲೂ ವಿಶೇಷಾಂಶಗಳಿಂದ ಕೂಡಿದ 'ವೃತ್ತಾಂತ ಚಿಂತಾಮಣಿ' ಎಂಬ ವಾರ ಪತ್ರಿಕೆಯನ್ನು ಎಂ. ವೆಂಕಟಕೃಷ್ಣಯ್ಯನವರು 1885ರಲ್ಲಿ ಪ್ರಾರಂಭಿಸಿದರು. ಈ ಪತ್ರಿಕೆ ಚಳುವಳಿಗೆ ಸಂಬಂಧಿಸಿದಂತೆ ಅನೇಕ ಲೇಖನಗಳಿಗೆ ಆಗರವಾಗಿ ನಿಂತಿತು, ಪತ್ರಿಕೋದ್ಯಮದಲ್ಲಿ ತುಂಬಾ ದೊಡ್ಡ ಹೆಸರು ಮಾಡಿದವರು. ಅವರು ಮುಂದೆ ದಯಾಸಾಗರ, ಭೀಷ್ಮಾಚಾರ್ಯ, ವೃದ್ಧ ಪಿತಾಮಹ, ತಾತಯ್ಯ ಎಂಬ ಅನ್ವರ್ಥ ನಾಮಗಳನ್ನು ಗಳಿಸಿದರು. ಅವರ ಪ್ರತಿಮೆ ಮೈಸೂರಿನಲ್ಲಿ ಸ್ಥಾಪಿತವಾಗಬೇಕಾದರೆ

ಅವರ ಪಟ್ಟ ಶಿಷ್ಯರಾದ ಪಿ. ಆರ್. ರಾಮಯ್ಯನವರೇ ಕಾರಣರು.

ರಾಮಯ್ಯನವರು ಯುವಕರಾಗಿದ್ದ ಕಾಲದಲ್ಲಿ ಯಾವ ಉದ್ಯೋಗವು ದೊರೆಯ ಲಿಲ್ಲ ; ದೊರೆತರೂ ಅವರಿಗೆ ಒಗ್ಗುವಂತಹ ಕೆಲಸ ಸಿಗಲಿಲ್ಲ. ಪತ್ರಿಕೋದ್ಯಮದ ಕಡೆಗೇ ಮನಸ್ಸಿದ್ದುದರಿಂದ ಬೇರಾವ ಉದ್ಯೋಗವು ಬೇಡವೆನಿಸಿತು; ಹಾಗಾಗಿ ಮದರಾಸಿನಿಂದ ಪ್ರಕಟವಾಗುತ್ತಿದ್ದ ಸ್ವರಾಜ್ಯ ಪತ್ರಿಕೆಯ ಪತ್ರಿಕಾಲಯಕ್ಕೆ ಹೋಗಿ ಮಾಲೀಕರಾಗಿದ್ದ ಟಿ. ಪ್ರಕಾಶಂ ಅವರನ್ನು ಕಂಡು ತಮ್ಮ ಆಕಾಂಕ್ಷೆಯನ್ನು ತಿಳಿಸಿದರು, ಅವರು ಕಚೇರಿಯಲ್ಲಿಯೇ ಜಾಗ ಕೊಟ್ಟು 'ಇಲ್ಲಿಯೇ ಏನಾದರೂ ಬರೆಯುತ್ತಿರು. ಮುಂದೆ ನೋಡೋಣ' ಎಂದರು. ರಾಮಯ್ಯನವರ ಸಂತೋಷಕ್ಕೆ ಪಾರವಿಲ್ಲದಾಯಿತು. ಇಂಗ್ಲಿಷ್, ಕನ್ನಡ, ಹಿಂದಿ ಭಾಷೆಗಳು ಕರಗತವಾಗಿದ್ದುದರಿಂದ ಹಿಂದೀ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಅನೇಕ ಉತ್ತಮ ಲೇಖನಗಳನ್ನು ಇಂಗ್ಲಿಷಿಗೆ ಅನುವಾದಿಸಿ 'ಸ್ವರಾಜ್ಯ'ದಲ್ಲಿ ಅಚ್ಚಾಗುವಂತೆ ಮಾಡಿದರು. ಸ್ವಾತಂತ್ರ್ಯಯೋಧರಾದ ಸಿ. ಆರ್. ದಾಸ್, ಮೌಲಾನ್ ಹಜರತ್‌ರ ಬಗ್ಗೆ ಲೇಖನಗಳು ಪ್ರಕಟವಾಗಿ ಓದುಗರ ಪ್ರಶಂಸೆಗೆ ಪಾತ್ರವಾದುವು. ಅವರ ಭಾಷೆ, ಶೈಲಿ, ಸ್ಪಷ್ಟತೆ, ಗೊತ್ತುಗುರಿ ಇವೆಲ್ಲವೂ ಲೇಖನ ಗಳಲ್ಲಿ ಪ್ರಕಟಗೊಂಡು ಬಹು ಬೇಗ ಪ್ರಸಿದ್ಧಿಗೆ ಬಂದರು.

ಮೈಸೂರಿನ ತಾತಯ್ಯ ವೆಂಕಟಕೃಷ್ಣಯ್ಯನವರಲ್ಲದೆ ಇನ್ನೊಬ್ಬ ಸಾಹಿತಿ, ಶಾಸನತಜ್ಞ, ಸ್ವಾತಂತ್ರ್ಯಯೋಧ, ರಾಜಕಾರಣಿ, ಸಮಾಜ ಸೇವಕರಾದ ತಿರುಮಲೆ ತಾತಾಚಾರ್ಯ ಶರ್ಮರು ಪತ್ರಿಕೆಯ ಬಗ್ಗೆ ಹೇಳಿರುವ ಮಾತುಗಳನ್ನು ಇಲ್ಲಿ ಉದ್ಧರಿಸ ಬಹುದು. ಅವರ ಅಂದಿನ ಅಭಿಪ್ರಾಯ ಇಂದಿಗೂ ಮಾನ್ಯ. ದಿನಪತ್ರಿಕೆಗಳು ಆಚರಿಸುವ ನಿತ್ಯ ಶ್ರಾದ್ಧ ..ಸೈನ್ಯವು ಚತುರಂಗಗಳಿಲ್ಲದೆ ಹೇಗೆ ಪರಿಪೂರ್ಣವಲ್ಲವೋ ಹಾಗೆ ಆಡಳಿತಾಂಗ, ಶಾಸಕಾಂಗ, ನ್ಯಾಯಾಂಗಗಳ ಜತೆಗೆ ಪತ್ರಿಕಾಂಗವೆಂಬ ನಾಲ್ಕನೆಯ ಅಂಗವೊಂದಿಲ್ಲವಾದರೆ ಪ್ರಜಾತಂತ್ರವು ಪೂರ್ಣವಾಗುವುದಿಲ್ಲ. ಸಂವಿಧಾನಕ್ಕೆ ನ್ಯಾಯ ಸ್ಥಾನ ಹೇಗೆ ಕಟ್ಟಕಡೆಯ ಅರ್ಥನಿರ್ಣಯ ಸ್ಥಾನವೋ ಹಾಗೆ ಸಾರ್ವಜನಿಕಾಭಿ ಪ್ರಾಯಕ್ಕೆ ಪತ್ರಿಕಾಸ್ಥಾನವೇ ರೂಪನಿರ್ಣಯ ಮತ್ತು ಜ್ಞಾನದಾನ ಸಾಧನ. ಪತ್ರಿಕೆಗಳು ಸ್ವತಂತ್ರವಾಗಿಲ್ಲವಾದರೆ ಅವು ಹಿಂಸಕರ, ಸೂರೆಗಾರರ ಕೈಶಸ್ತ್ರಗಳಾಗುವುವು' (ತಿ. ತಾ. ಶರ್ಮ. ಲೇ: ಅರಳು ಮಲ್ಲಿಗೆ ಪಾರ್ಥ ಸಾರಥಿ. ಐ. ಬಿ. ಎಚ್. ಪ್ರಕಾಶನ 1975. ಪುಟ. 43, ಬೆಂಗಳೂರು)

ರಾಮಯ್ಯನವರಿಗೆ ಪತ್ರಿಕೆಯನ್ನು ತೆರೆಯಬೇಕು ಎಂಬ ಆಸೆ ಅಂಕುರಿಸಿದಾಗ ಮೇಲಿನ ವಾಕ್ಯಗಳನ್ನು ಮೊದಲೇ ಮನನ ಮಾಡಿಕೊಂಡಿದ್ದರೆನ್ನಬಹುದು. ಇವೆಲ್ಲ ಕ್ಕಿಂತ ಹೆಚ್ಚಾಗಿ ಪತ್ರಿಕೋದ್ಯಮಿಗೆ ಇರಬೇಕಾದ ಸತ್ಯನಿಷ್ಠೆ, ಶ್ರದ್ಧೆ ; ಧೈರ್ಯ, ಕೆಚ್ಚೆದೆ, ಸದಾ ದುಡಿವ ಮನಸ್ಸು, ವರದಿಯಲ್ಲಿ ಸ್ಪಷ್ಟತೆ, ಜಾತ್ಯಾತೀತತೆ, ನಿಷ್ಪಕ್ಷಪಾತ ಮನೋಭಾವ ಸರ್ಕಾರದ ಆಡಳಿತದಲ್ಲಿ ಕಂಡುಬರುವ ಗುಣದೋಷಗಳ ವಿಶ್ಲೇಷಣೆ;

ಗುಣಗಳಿದ್ದರೆ ಪ್ರಶಂಸೆ, ಅವಗುಣಗಳಿದ್ದರೆ ಟೀಕೆ ಇವೆಲ್ಲಾ ಗುಣಗಳು ಅವರಲ್ಲಿ ಹುಟ್ಟಿನಿಂದಲೇ ಬಂದಿದ್ದುವು; ಹಾಗಾಗಿ ಪತ್ರಿಕೋದ್ಯಮ ಕೈಗೆ ಎಟುಕುವ ಹಣ್ಣಾಯಿತು.

1926ರಲ್ಲಿ 'ತಾಯಿನಾಡು' ಪತ್ರಿಕೆಯನ್ನು ಆರಂಭಿಸುವ ಮೊದಲು ತಮ್ಮ ಗುರುಗಳಾದ ಎಂ. ವೆಂಕಟಕೃಷ್ಣಯ್ಯನವರಲ್ಲಿದ್ದು ಅವರು ನಡೆಸುತ್ತಿದ್ದ ಸಾಧ್ವಿ ಮತ್ತು ವೆಲ್ತ್ ಆಫ್ ಮೈಸೂರ್ (ಆಂಗ್ಲಭಾಷೆ) ಪತ್ರಿಕೆಗಳ ಉಪಸಂಪಾದಕರಾಗಿ ಅವರಿಗೆ ತೃಪ್ತಿ ಬರುವಂತೆ ನಡೆಸಿದರು. ಅನಂತರ ಅವರ ಆಶೀರ್ವಾದವನ್ನು ಪಡೆದು 'ತಾಯಿನಾಡು' ಪತ್ರಿಕೆಯನ್ನು ಆರಂಭಿಸಿ ಅನಂತರ ಬೆಂಗಳೂರಿಗೆ 1927 ರಲ್ಲಿ ವರ್ಗಾಯಿಸಿ ತಮ್ಮ ಜೀವನವನ್ನೇ ಅದರ ಬೆಳವಣಿಗೆಗೆ ಮುಡಿಪಾಗಿಟ್ಟರು. ಅದು ದಿನಗಳೆದಂತೆಲ್ಲಾ ಉತ್ತಮ ಪತ್ರಿಕೆ ಎನಿಸಿತು. ಮೊಟ್ಟಮೊದಲು ನಾಲ್ಕು ಪುಟಗಳ ವಾರ ಪತ್ರಿಕೆಯಾಗಿ ಅನಂತರ ಆರು ಎಂಟು ಪುಟಗಳ ದಿನಪತ್ರಿಕೆಯಾಗಿ ಪ್ರಸಿದ್ಧಿ ಪಡೆಯಿತು. ಅದರಲ್ಲಿದ್ದ ಗಾಂಧೀವಾದ, ಸಮಾಜ ಸುಧಾರಣೆಯ ವಿಚಾರಗಳು, ಸ್ವಾತಂತ್ರ್ಯದ ಅಗತ್ಯ ಮತ್ತು ಬ್ರಿಟಿಷರನ್ನು ಈ ದೇಶದಿಂದ ತೊಲಗಿಸಲು ಮಾಡಬೇಕಾದ ಹೋರಾಟ, ಜನರಲ್ಲಿ ಎಚ್ಚರಿಸುವ ಸ್ವಾತಂತ್ರ್ಯದ ಕಹಳೆ ಇವೇ ಮೊದಲಾದ ಗಹನ ವಿಚಾರಗಳನ್ನು ಜನತೆಯ ಮುಂದಿರಿಸುತ್ತಿದ್ದರು. ಇವುಗಳೊಡನೆ ಕಾಂಗ್ರೆಸ್ಸಿನ ಕಾರ್ಯಕ್ರಮಗಳ ಪ್ರಕಟನೆ, ರಾಷ್ಟ್ರೀಯನಾಯಕರ ಭಾಷಣಗಳು ಅಚ್ಚುಕಟ್ಟಾಗಿ ಅಚ್ಚಾಗುತ್ತಿದ್ದುವು.

'ತಾಯಿನಾಡು' ಪತ್ರಿಕೆಯ ಸಂಪಾದಕರಾಗಿದ್ದ ಪಿ. ಬಿ. ಶ್ರೀನಿವಾಸನ್ ಅವರ "ನಗರ ಸಂಚಾರಿ ಡೈರಿ" ಎಂಬ ಕಂಡುಂಡ ಅನುಭವಗಳನ್ನೊಳಗೊಂಡ ಅಂಕಣ ಓದುಗರಿಗೆ ಕುತೂಹಲವನ್ನು ತರುತ್ತಿದ್ದುದುಂಟು. 1936ರಲ್ಲಿ ಮೈಸೂರು ಮಹಾರಾಜ ಶ್ರೀ ನಾಲ್ವಡಿ ಕೃಷ್ಣರಾಜವಡೆಯರವರು ಯೂರೋಪ್, ಇಂಗ್ಲೆಂಡ್ ದೇಶಗಳಿಗೆ ಪ್ರವಾಸ ಹೊರಟಾಗ ಅವರೊಡನೆ 'ತಾಯಿನಾಡು' ಪತ್ರಿಕೆಯು ತನ್ನ ಸ್ವಂತ ವೆಚ್ಚದಲ್ಲಿ ಒಬ್ಬ ಬಾತ್ಮೀದಾರನನ್ನು ಕಳುಹಿಸಿ ಅಲ್ಲಿ ನಡೆದ ಕಾರ್ಯಕ್ರಮಗಳನ್ನು ಚಿತ್ರಸಹಿತ ಪ್ರಕಟಿಸಿದರು. ಹಾಗೆಯೇ ಶಿವಪುರದ ಸತ್ಯಾಗ್ರಹ, ವಿದುರಾಶ್ವತ್ಥದಲ್ಲಿ ಕಾಂಗ್ರೆಸ್, ಅಲ್ಲಿ ನಡೆದ ಪೊಲೀಸ್ ಗೋಲಿಬಾರ್ ಮೊದಲಾದ ವಾಸ್ತವಾಂಶಗಳಿಂದ ಕೂಡಿದ ಸಮಾಚಾರಗಳನ್ನು ಪತ್ರಿಕೆಯ ಮೂಲಕ ಪ್ರಸಿದ್ಧಿ ಪಡಿಸಿದರು. ಈಗಿನ ಹಾಗೆ ಪತ್ರಿಕಾ ಶಾಸನವಿರಲಿಲ್ಲ; ಹಾಗಾಗಿ ಸರ್ಕಾರವು ಮನಸ್ಸು ಮಾಡಿದಾಗಬೇಕಾದರೂ ಸಂಪಾದಕರಿಗೆ ಕಿರುಕುಳ ಕೊಡಬಹುದಾಗಿತ್ತು. ಆದರೆ ರಾಮಯ್ಯನವರು ಅಪ್ಪಟ ಗಾಂಧೀವಾದಿಗಳಾಗಿದ್ದುದರಿಂದ ಅಂತಹ ಬೆದರಿಕೆಗೆ, ತೊಂದರೆಗೆ ಧೈರ್ಯಗೆಡುತ್ತಿರಲಿಲ್ಲ. ಅವರ ಪತ್ರಿಕಾ ಜೀವನದಲ್ಲಾದ ಒಂದೆರಡು ಘಟನೆಗಳನ್ನು ಇಲ್ಲಿ ಗಮನಿಸಬಹುದು

1. ಮೈಸೂರಿನ ದಿವಾನ್ ಸರ್ ಎಂ. ಇಸ್ಮಾಯಿಲ್ ಅವರು ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿದ್ದವರು. 'ತಾಯಿನಾಡು' ಪತ್ರಿಕೆಯಲ್ಲಿ ಬರುತ್ತಿದ್ದ ಟೀಕೆಗಳಿಗೆ ಉದ್ರಿಕ್ತರಾಗುತ್ತಿದ್ದರು; ಅಲ್ಲದೆ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದರು. ಅದನ್ನು

ರಾಮಯ್ಯನವರು ಉಗ್ರವಾಗಿ ಖಂಡಿಸಿ ಪತ್ರಿಕೆಯಲ್ಲಿ ಬರೆದು ಬಿಟ್ಟರು. ದಿವಾನರು ಕಂಪಿತರಾಗಿ ಆ ಪತ್ರಿಕೆಯನ್ನು ತರಿಸಿ ಓದುವುದನ್ನೇ ನಿಲ್ಲಿಸಿದರು; ಆದರೆ ಅವರು ಮುಂಬಯಿ ಪತ್ರಿಕೆಗೆ ನೀಡಿದ ದರ್ಶನದ ಹಲವು ಉತ್ತಮ ಭಾಗಗಳನ್ನು ಆಯ್ದು 'ತಾಯಿನಾಡು' ಪತ್ರಿಕೆ ಮುದ್ರಿಸಿತು. ಆಗ ತಮ್ಮ ತಪ್ಪಿನ ಅರಿವಾಗಿ ದಿವಾನರು ಪತ್ರಿಕೆಯ ಬಗ್ಗೆ ಮೆಚ್ಚಿಗೆ ಸೂಚಿಸಿದರು.

2. ವಿದ್ಯಾ ಇಲಾಖೆಯಲ್ಲಿ ಮುಖ್ಯಾಧಿಕಾರಿಯಾಗಿದ್ದ ಕೆ. ಮ್ಯಾಥನ್ ಎಂಬುವನು ಕ್ರೈಸ್ತ ಮಿಷನ್ ಶಾಲೆಗಳಿಗೆ ಅತಿ ಉದಾರವಾಗಿ ಧನ ಸಹಾಯ ಮಾಡುತ್ತಿದ್ದುದನ್ನು 'ತಾಯಿನಾಡು' ಟೀಕಿಸಿ ಆರೋಪಗಳನ್ನು ಪಟ್ಟಿಮಾಡಿ ಮುದ್ರಿಸಿದಾಗ ಸರ್ಕಾರವು ಕುಪಿತಗೊಂಡುದುಂಟು ; ಆದರೆ ತನಿಖೆ ನಡೆಸಿದಾಗ ಆರೋಪಗಳಲ್ಲಿ ಸತ್ಯವಿದ್ದುದರಿಂದ ತೆಪ್ಪಗಾಯಿತು.

3. ಮೈಸೂರು ಮಹಾರಾಜರ ದರ್ಬಾರಿಗೆ ಹೋಗುವುದೇ ಆ ಕಾಲದಲ್ಲಿ ಅತ್ಯಂತ ಗೌರವದ ಮಾತಾಗಿತ್ತು. ಆಗ ಕರೀ ಉದ್ದನೆಯ ಕೋಟು, ಗರಿಗರಿಯಾಗಿ ಮಡಿಸಿದ ಉತ್ತರೀಯ, ಬಿಳೀ ಷರಾಯಿ, ಜರೀ ಪೇಟ ಇವುಗಳನ್ನು ಧರಿಸಿ ಬಂದವರಿಗೆ ಮಾತ್ರ ಅಲ್ಲಿ ಪ್ರವೇಶ. ಈ ಪದ್ಧತಿ ಅಪ್ಪಟ ಗಾಂಧೀವಾದಿ ಖಾದಿ ವಸ್ತ್ರಧಾರಿ ರಾಮಯ್ಯನವರಿಗೆ ಸುತರಾಂ ಹಿಡಿಸಲಿಲ್ಲ. ಸುಮ್ಮನಿರದೆ 'ವೆಲ್ತ್ ಆಫ್ ಮೈಸೂರ್' ಎಂಬ ತಮ್ಮ ಪತ್ರಿಕೆಯಲ್ಲಿ ಟೀಕಿಸಿ ಬರೆದರು. ಸರ್ಕಾರದ ಕಣ್ಣಿಗೆ ಬಿದ್ದು ಅವರನ್ನು ಕರೆಸಿ ತನಿಖಿಸಿದಾಗ 'ಈ ಕಾಲದಲ್ಲಿ ಇಂತಹ ಪದ್ಧತಿ ಸೂಕ್ತವಲ್ಲ. ಶುಭ್ರವಾದ ಉಡುಪಾದರೆ ಸಾಕು' ಎಂದು ವಾದಿಸಿದರು.

ಹೀಗೆ ತಮ್ಮ ಪತ್ರಿಕೆಯಲ್ಲಿ ಇಂತಹ ಸೂಕ್ಷ್ಮ ವಿಚಾರಗಳು, ಚಳುವಳಿ, ರಾಷ್ಟ್ರನಾಯಕರ ಭಾಷಣಗಳಲ್ಲದೆ ಸರ್ಕಾರದ ಕುಂದು ಕೊರತೆಗಳನ್ನು ಜನತೆಗೆ ತೋರಿಸಿ ಅವನ್ನು ಪ್ರತಿಭಟಿಸಲು ಪ್ರಚೋದಿಸುತ್ತಿದ್ದರು. ಏನೇ ಆಗಲಿ ಸತ್ಯ ಪ್ರಕಟನೆ ಅವರ ಮುಖ್ಯ ಗುರಿ. ಅದು ಕೂಡ ಪತ್ರಿಕಾ ಧರ್ಮವೇ ತಾನೆ ? ಪತ್ರಿಕಾ ಶಾಸನವಿಲ್ಲದಿದ್ದ ಕಾಲದಲ್ಲಿಯೂ 'ತಾಯಿನಾಡು' ಆದರ್ಶಪ್ರಾಯವಾಗಿ ಮೆರೆಯಿತು. 1946ರಲ್ಲಿ ಯುದ್ಧವಾದಾಗ ಬಾತ್ಮೀದಾರರಾಗಿ ವರದಿ ಮಾಡಲು ರಾಮಯ್ಯನವರನ್ನು ಆಹ್ವಾನಿಸಲಾಗಿತ್ತು. ಒಟ್ಟಿನಲ್ಲಿ ಪತ್ರಿಕೆಯ ಬೆಳವಣಿಗೆಗೆ ಹಗಲಿರುಳು ದುಡಿದು ತಮ್ಮ ಜೀವವನ್ನೇ ಧಾರೆಯೆರೆದರು. ಆಗಿನ ಕಾಲದಲ್ಲಿಯೇ ದೇಶ ವಿದೇಶಗಳಿಂದ ಸುದ್ದಿಯನ್ನು ತಂತೀ ಮೂಲಕ ತರಿಸಿಕೊಂಡ ಪ್ರಥಮ ಪತ್ರಿಕೆ 'ತಾಯಿನಾಡು.

ಸುಮಾರು ಮೂವತ್ತು ವರ್ಷಗಳ ಕಾಲ ಪತ್ರಿಕಾರಂಗದಲ್ಲಿ ಸೇವೆ ಸಲ್ಲಿಸಿದ ರಾಮಯ್ಯನವರು ತುಂಬಾ ಬಳಲಿದರು. ಮುದ್ರಣಾಲಯವನ್ನು ನವೀಕರಿಸುವಲ್ಲಿ ಹಣದ ತೊಂದರೆಯನ್ನು ಎದುರಿಸಬೇಕಾಯಿತು; ಆದರೆ ಅದರಲ್ಲಿಯೇ ತೃಪ್ತಿಪಡೆದರು. 1956–57ರಲ್ಲಿ ಪತ್ರಿಕೆಯನ್ನು ನಡೆಸುವುದು ದುಸ್ತರವಾಯಿತು. ಮುದ್ರಣಾಲಯ

ವನ್ನು ಎಂ. ಎಸ್. ರಾಮಯ್ಯ ಎಂಬ ಒಬ್ಬ ಉದ್ಯಮಿಗೆ ಮಾರಿ ಸಂಪೂರ್ಣವಾಗಿ ಪತ್ರಿಕಾ ಪ್ರಪಂಚದಿಂದ ನಿವೃತ್ತರಾದರು. ಮುಂದೆ ಆ ಪತ್ರಿಕೆ 1969ರಲ್ಲಿ ನಿಂತು ಹೋಯಿತು.

ರಾಮಯ್ಯನವರು ಪತ್ರಿಕಾರಂಗದಲ್ಲಲ್ಲದೆ ಸ್ವಾತಂತ್ರ್ಯ ಚಳುವಳಿಯಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದರಷ್ಟೆ. ಅಂದು ನಾಡಿನ, ರಾಷ್ಟ್ರದ ಸೇವೆಯನ್ನು ಹಲವು ಮುಖದಲ್ಲಿ ಸಲ್ಲಿಸಿದರು. ಬೆಂಗಳೂರು ನಗರ ಮುನಿಸಿಪಾಲಿಟಿ, ವಿಧಾನ ಸಭೆಗಳಲ್ಲಿ ಸದಸ್ಯರಾಗಿ ಜನಸೇವೆ ಮಾಡಿದರು. ದೀನದಲಿತರ ಕಲ್ಯಾಣದಲ್ಲಿಯೂ ಎತ್ತಿದ ಕೈಯೆನಿಸಿದ್ದರು. ವಿದ್ಯಾರ್ಥಿಗಳಿಗೆ ಕೈ ತುಂಬಾ ಸಹಾಯ ಮಾಡುತ್ತಿದ್ದರು. ಹಿಂದೀ ಪ್ರಚಾರದಲ್ಲಿ, ಸಹಕಾರ ಚಳುವಳಿಯಲ್ಲಿ ಪಾಲ್ಗೊಂಡಿದ್ದರು. ಅವರ ಸೇವೆಯನ್ನು ಕರ್ನಾಟಕ ಸರ್ಕಾರ ಪರಿಗಣಿಸಿ 1969ರಲ್ಲಿ ರಾಜ್ಯ ಪ್ರಶಸ್ತಿಯನ್ನು ಕೊಟ್ಟು ಗೌರವಿಸಿತು. ಈ ಎಲ್ಲಾ ಕಾರ್ಯಗಳಿಗೆ, ಗೌರವಗಳಿಗೆ ಪ್ರೇರಕರಾಗಿದ್ದವರು ಅವರ ಧರ್ಮಪತ್ನಿ ಶ್ರೀಮತಿ ಜಯಲಕ್ಷ್ಮಮ್ಮನವರು. ಶ್ರೀಮತಿಯವರಲ್ಲಿಯೂ ಪತಿಯಂತೆ ದೀನದಲಿತರ ಬಗ್ಗೆ ಸಹಾನುಭೂತಿ, ಪ್ರೀತಿ, ವಿದ್ಯಾಸಂಸ್ಥೆಗಳಿಗೆ ಸಹಾಯಧನ, ಬಡ ವಿದ್ಯಾರ್ಥಿಗಳಿಗೆ ಆಶ್ರಯವನ್ನು ನೀಡುತ್ತಿದ್ದರು. ಮುಂದೆ ಬೆಂಗಳೂರು ಕಾರ್ಪೋರೇಷನ್ನಿಗೆ ಉಪ ಮೇಯರಾಗಿ ಸೇವೆ ಸಲ್ಲಿಸಿದರು. 'ತಾಯಿನಾಡು' ಪತ್ರಿಕೆ ಆರಂಭವಾದಾಗ ಮುದ್ರಣದಿಂದ ಮೊದಲುಗೊಂಡು ಓದುಗರ ಕೈ ಸೇರುವವರೆಗಿನ ಜವಾಬ್ದಾರಿಯನ್ನು ಹೊತ್ತು ಪತಿಗೆ ಸಹಾಯಕರಾಗಿದ್ದರು.

ಶ್ರೀ. ಪಿ. ಆರ್. ರಾಮಯ್ಯನವರು 1969ರಲ್ಲಿ ಸರ್ಕಾರ ನೀಡಿದ ಪ್ರಶಸ್ತಿಯನ್ನು ಸಂತೋಷದಿಂದ, ತೃಪ್ತಿಯಿಂದ ಸ್ವೀಕರಿಸಿದರು. ಆದರೆ ಮರುವರ್ಷವೇ ಅಂದರೆ ದಿನಾಂಕ 5-5-1970ರಲ್ಲಿ ವಿಧಿವಶರಾದರು.

ಕೆ. ಆರ್. ಶೇಷಗಿರಿ

ವೀರಕೇಸರಿ ಸೀತಾರಾಮ ಶಾಸ್ತ್ರಿ

ಎಂ. ಸೀತಾರಾಮ ಶಾಸ್ತ್ರಿ ಅವರು ಹುಟ್ಟಿದ್ದು ವೈದಿಕ ಮನೆತನದಲ್ಲಿ, ಬೆಳೆದದ್ದು ಸಾಂಪ್ರದಾಯಿಕ ಮಠಮಾನ್ಯಗಳ ಗುರು ಪರಂಪರೆಯಲ್ಲಿ; ಆಯ್ದುಕೊಂಡ ಕ್ಷೇತ್ರಗಳು-ಪತ್ರಿಕೋದ್ಯಮ, ದೇಶಭಕ್ತಿಪ್ರೇರಿತ ರಾಜಕಾರಣ ಹಾಗೂ ಸಾಹಿತ್ಯ. ಈ ಮೂರು ಕ್ಷೇತ್ರಗಳಲ್ಲೂ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ನಾಡು–ನುಡಿಗೆ ಸೇವೆಸಲ್ಲಿಸಿದವರು ವೀರ ವೀರಕೇಸರಿ ಸೀತಾರಾಮಶಾಸ್ತ್ರಿಗಳು.

ಸೀತಾರಾಮ ಶಾಸ್ತ್ರಿಗಳು ಜನಿಸಿದ್ದು ನಂಜನಗೂಡಿನಲ್ಲಿ (ಜನನ ೧೮೯೩). ಮದ್ದೂರಿನ ಪ್ರಖ್ಯಾತ ಪುರೋಹಿತ ಮನೆತನದ ನಾಗೇಶಶಾಸ್ತ್ರಿಗಳು ಇವರ ತಂದೆ; ತಾಯಿ ಪಾರ್ವತಮ್ಮ. ಶಾಸ್ತ್ರಿಗಳು ತಮ್ಮ ಬಾಲ್ಯವನ್ನು ಕಳೆದದ್ದು ಶೃಂಗೇರಿಯಲ್ಲಿ. ಬಾಲ್ಯದಲ್ಲಿನ ಅಲ್ಲಿನ ಪರಿಸರ ಶಾಸ್ತ್ರಿಗಳ ವ್ಯಕ್ತಿತ್ವ ವಿಕಸನಕ್ಕೆ ಬಹುಮಟ್ಟಿಗೆ ಕಾರಣ ವಾಯಿತು. ಬಾಲ್ಯದಲ್ಲಿ ಚಿಣ್ಣಿಕೋಲು ಆಟವಾಡುತ್ತಿದ್ದಾಗ ಚಿಣ್ಣಿಯು ಹಟಿಸಿದ ಒಂದು ಕಣ್ಣು ಕಳೆದುಕೊಂಡರು. ಆದರೆ ಈ ಊನತೆ ಅವರ ಪ್ರಗತಿಗೆ ಯಾವಾಗಲೂ ತೊಡಕಾಗಿರಲಿಲ್ಲ. ೧೯೪೭ರಲ್ಲಿ ಮತ್ತೊಂದು ಕಣ್ಣನ್ನೂ ಕಳೆದುಕೊಂಡರು.

ಸಂಸ್ಕೃತ ಭಾಷೆ ಸಾಹಿತ್ಯಗಳ ಉತ್ತಮ ಅರಿವಿದ್ದ ಶಾಸ್ತ್ರಿಗಳು ಆರಂಭದಲ್ಲಿ ಸಂಸ್ಕೃತದಲ್ಲೇ ಕಾವ್ಯರಚನೆಗೆ ಪ್ರಯತ್ನಿಸಿದ್ದರಂತೆ. ತಮ್ಮ ೧೪–೧೫ ವಯಸ್ಸಿನಲ್ಲಿಯೇ 'ಸಾಧ್ವಿ' ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು. ಅವರು ಆರಿಸಿಕೊಳ್ಳುತ್ತಿದ್ದ ವಿಷಯಗಳು ಅವರ ವಯಸ್ಸಿಗೆ ಮೀರಿದವಾಗಿದ್ದವು. ಭಾವೀ ಪತ್ರಿಕೋದ್ಯಮಿಯಾಗ ಲಿದ್ದವರಿಗೆ ಇದು ತರಬೇತಿಯ ಅವಕಾಶವನ್ನು ಕಲ್ಪಿಸಿರಬಹುದು. ಶಾಸ್ತ್ರಿಗಳು ಶೃಂಗೇರಿ ಯಲ್ಲಿದ್ದ ಸಮಯದಲ್ಲಿಯೇ 'ಆರ್ಯಮಹಿಳಾ' ಎಂಬ ಮಾಸಪತ್ರಿಕೆ ಪ್ರಾರಂಭಿಸಿದರು. ಸುಮಾರು ಒಂದು ವರ್ಷಕಾಲ ಅದನ್ನು ನಡೆಸಿಕೊಂಡೂ ಬಂದರು. 'ಸಂಪದಭ್ಯು ದಯ' ಪತ್ರಿಕೆಯಲ್ಲಿಯೂ ಕೆಲಸ ಮಾಡಿದರು ಶಾಸ್ತ್ರಿಗಳು. ಶಾಸ್ತ್ರಿಗಳು ೧೯೧೯ರಲ್ಲಿ ಶೃಂಗೇರಿಯಿಂದ ಬೆಂಗಳೂರಿಗೆ ಹೊರಟರು. ಶಂಕರಮಠದ ಭಾರತೀಯ ಗೀರ್ವಾಣ ಪ್ರೌಢಶಾಲೆಯ ಸಂಸ್ಕೃತ ವಿಭಾಗದಲ್ಲಿ ಕೆಲಸ ಮಾಡಿದರು. ಸ್ವಲ್ಪ ಕಾಲಾನಂತರ ತಿರುಚಿರಾಪಳ್ಳಿಯಲ್ಲಿ ಚಿತ್ರಮಂದಿರ ಕಟ್ಟಿದರು. ಕಾವೇರಿಯ ಪ್ರವಾಹದಲ್ಲಿ ಈ ಚಿತ್ರ ಮಂದಿರ ನೀರುಪಾಲಾಯಿತು ಇದರಿಂದ ಅವರಿಗೆ ಆದ ನಷ್ಟ ಅಪಾರ.[ಪ್ರಾಯಃ ಇಂಥ ಹಲವು ಕಷ್ಟ–ನಷ್ಟಗಳೇ ಮುಂದೆ ತಮ್ಮ ಪುತ್ರ ಎಂ. ರಾಮಮೂರ್ತಿಯವರು

೧೯೬೭ರಲ್ಲಿ ಅಕಾಲ ಮರಣಕ್ಕೆ ಗುರಿಯಾದಾಗ ಇಳಿವಯಸ್ಸಿನಲ್ಲಿಯೂ ದುಃಖಭರಿಸುವಂಥ ಚೈತನ್ಯ ನೀಡಿರಬೇಕೆನಿಸುತ್ತದೆ. ಇದರ ಪರಿಣಾಮ : ಕಾಶೀಯಾತ್ರೆ. ಭಾರತದ ಹಲವು ವಿದ್ಯಾಕೇಂದ್ರಗಳಿಗೆ ಭೇಟಿ ; ಪಂಡಿತರೊಡನೆ ವಿಚಾರವಿನಿಮಯ. ಪಡೆದದ್ದು ಅಪಾರ ಅನುಭವ. ಈ ಅವಧಿಯಲ್ಲಿಯೇ ಶಾಸ್ತ್ರಿಗಳಿಗೆ ಪಂಡಿತ ಮದನಮೋಹನ ಮಾಳವೀಯರ ಪರಿಚಯವಾಯಿತು, ಮುಂದೆ ಇದು ಸ್ನೇಹವಾಗಿ ಬೆಳೆಯಿತು. ಇದರ ಫಲ ಮಹಾತ್ಮ ಗಾಂಧಿಯವರೊಡನೆ ಭೇಟಿ. ಗಾಂಧೀಜಿ ಇವರನ್ನು 'ಸನಾತನಶಾಸ್ತ್ರೀಜಿ' ಎಂದೂ ಕರೆಯುತ್ತಿದ್ದರಂತೆ.

ಸೀತಾರಾಮಶಾಸ್ತ್ರಿಗಳು ೧೯೨೭ರಲ್ಲಿ 'ಗ್ರಾಮಜೀವನ' ಎಂಬ ಪತ್ರಿಕೆಯ ಸಂಪಾದಕರಾದರು. ಅಂದಿನ ಆಳುವ ಸರ್ಕಾರಕ್ಕೆ ಅಡಿಯಾಳಾಗಿರುವುದು ಸ್ವತಂತ್ರ ಮನೋವೃತ್ತಿಯ ಶಾಸ್ತ್ರಿಗಳಿಗೆ ಒಪ್ಪದಾಯಿತು. ಜೊತೆಗೆ, ಗಾಂಧೀಜಿಯವರ ಪ್ರಭಾವ. ತತ್ಪರಿಣಾಮವಾಗಿ ೧೯೨೮ರ ಮೇ ೨ ರಂದು 'ವೀರಕೇಸರಿ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. 'ವೀರಕೇಸರಿ'ಯ ಗರ್ಜನೆ ಸರ್ಕಾರಕ್ಕೆ ಭಯ ತಂದಿತು ; ಅದರ ಸಂದೇಶ ಜನತೆಯನ್ನು ಮುಟ್ಟಿಯೂ ಮುಟ್ಟಿತು.

ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ದೈನಿಕ 'ವೀರಕೇಸರಿ' ರಾಜಕೀಯ ಜಾಗೃತಿಗಾಗಿ ಪ್ರಧಾನಪಾತ್ರ ವಹಿಸಿತ್ತು. ಸಂಸ್ಥಾನದ ಆಗು–ಹೋಗುಗಳನ್ನು ಪ್ರಸ್ತಾಪಿಸುತ್ತ ಸರ್ಕಾರದ ಲೋಪ-ದೋಷಗಳನ್ನು ತೀವ್ರವಾಗಿ ಖಂಡಿಸುತ್ತಿತ್ತು. ಶಾಸ್ತ್ರಿಗಳು ದಿವಾನ್ ಮಿರ್ಜಾರ ಆತ್ಮೀಯರಾಗಿದ್ದರು ; ಕಡೆಕಡೆಗೆ ಅವರ ಕೋಪತಾಪಗಳಿಗೆ ಗುರಿಯಾಗಿ ಕಷ್ಟ – ನಷ್ಟಗಳನ್ನೂ ಅನುಭವಿಸಬೇಕಾಯಿತು. ವೆಂಕಟಕೃಷ್ಣಯ್ಯನವರ ಗರಡಿಯಲ್ಲಿ ಪಳಗಿದ್ದವರು ಶಾಸ್ತ್ರಿಗಳು. 'ವೀರಕೇಸರಿ' ಸಂಪಾದಕರಾದ ಸೀತಾರಾಮ ಶಾಸ್ತ್ರಿ, ಮುದ್ರಕ ಸಿ. ಅಶ್ವತ್ಥನಾರಾಯಣರಾಯ ಇವರ ಮೇಲೆ ಸರ್ಕಾರ ಸುಮಾರು ೧೯೨೯ರಲ್ಲಿ ರಾಜದ್ರೋಹದ ಮೊಕದ್ದಮೆ ಹೂಡಿತು ಸಂಸ್ಥಾನದಲ್ಲಿ ರಾಜದ್ರೋಹದ ಮೊದಲ ಮೊಕದ್ದಮೆ ಇದು ಎನ್ನಲಾಗಿದೆ. ಸರ್ಕಾರವನ್ನು ಮದ್ದಾನೆಗೆ ಹೋಲಿಸಿ ಲೇಖನ ಬರೆದು ದ್ರೋಹ ಬಗೆದರೆಂಬ ಆಪಾದನೆ; ತತ್ಪರಿಣಾಮ ಶಾಸ್ತ್ರಿ–ರಾವ್ ಇಬ್ಬರಿಗೂ ಒಂಬತ್ತು ತಿಂಗಳ ಕಠಿಣ ಶಿಕ್ಷೆ. ೧೯೩೭ರಲ್ಲಿ ಮೈಸೂರು ಕಾಂಗ್ರೆಸ್ ಸ್ಥಾಪನೆಗೆ ನೇಮಿಸಿದ ಕ್ರಿಯಾಸಮಿತಿಯಲ್ಲಿ ಶಾಸ್ತ್ರಿಗಳು, ತಗಡೂರು ರಾಮಚಂದ್ರರಾಯರು, ಟಿ. ಸಿದ್ದಲಿಂಗಯ್ಯನವರೂ ಸೇರಿದ್ದರು. ಪ್ರಾಂತವೆಲ್ಲ ಸಂಚರಿಸಿ ಅವರು ಬಂಧಿತರಾಗಿದ್ದರು. ಶಿವಪುರ ಅಧಿವೇಶನದಲ್ಲಿ ಶಾಸ್ತ್ರಿಗಳ ಭಾಷಣ ಅಪೂರ್ವವಾದುದು. ಶಾಸ್ತ್ರಿಗಳ ಕಂಠಶ್ರೀ ಯಾವ ಧ್ವನಿವರ್ಧಕಕ್ಕೂ ಕಡಮೆ ಇರಲಿಲ್ಲ. ಮಾತುಗಳು ಚೂಪಾದ ಬಾಣಗಳಂತೆ ಅಧಿಕಾರಶಾಹಿಯನ್ನು ಚುಚ್ಚುತ್ತಿದ್ದವು. ಬೆಂಗಳೂರಿನ ಸುಪ್ರಸಿದ್ಧ ಸುಲ್ತಾನ್‌ಪೇಟೆ ಗಣಪತಿಗಲಭೆ, ಆನಂತರ ಜನತಾ ಚಳವಳಿಗೆ ಶಾಸ್ತ್ರಿಗಳು ನೀಡಿದ ಬೆಂಬಲ ಈಗ ಇತಿಹಾಸದ ಭಾಗವಾಗಿಬಿಟ್ಟಿದೆ.

ಚಿಂತಾಮಣಿ ಮಹಾಲಕ್ಷ್ಮಮ್ಮ ಕೇಸು ನಡೆಯುತ್ತಿದ್ದ ಕಾಲದಲ್ಲಿ 'ವೀರಕೇಸರಿ'ಯ ವರದಿಗಳು ಹಾಗೂ ಲೇಖನಗಳು ಸರ್ಕಾರ ಮತ್ತು ನ್ಯಾಯಾಧೀಶರುಗಳನ್ನು ತತ್ತರಿಸುವಂತೆ ಮಾಡಿದ್ದವು. ಹಿಂದೂ ಮಹಿಳೆಯ ಮೇಲೆ ಮುಸ್ಲಿಂ ಯುವಕನು ಅಭಿಚಾರ ಎಸಗಿದನೆಂಬುದು ಈ ಮೊಕದ್ದಮೆ. ಇದು ಮೈಸೂರು ರಾಜ್ಯದ ಇತಿಹಾಸದಲ್ಲಿಯೇ ವೈಮನಸ್ಯವೇಳುವಂತಹ ಮೊಕದ್ದಮೆಯಾಗಿತ್ತು.

ಮೈಸೂರು ರಾಜ್ಯದಲ್ಲಿನ ಸ್ವಾತಂತ್ರ್ಯ ಸಂಗ್ರಾಮದ ಕಡೆಯ ಮಜಲಿನಲ್ಲಿ ಕೂಡ 'ವೀರಕೇಸರಿ' ತನ್ನದೇ ಆದ ಇತಿಹಾಸ ಸ್ಥಾಪಿಸಿತು. ಅಂದಿನ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿ ಮುದಲಿಯಾರರು 'ವೀರಕೇಸರಿ' ಪತ್ರಿಕೆಯನ್ನು ಮುಟ್ಟುಗೋಲು ಹಾಕುವರೆಂಬ ವದಂತಿ ಸರ್ಕಾರದ ವಕ್ತಾರರಿಂದ ತಿಳಿದುಬಂದಿತು. ರಾತ್ರೋರಾತ್ರಿ ಕನ್ನಡ ಟೈಪುಗಳನ್ನು ದೊಡ್ಡದೊಡ್ಡ ಪೆಟ್ಟಿಗೆಗಳಲ್ಲಿ ತುಂಬಿಕೊಂಡು ಶಾಸ್ತ್ರಿಗಳು ಮದರಾಸು ತಲುಪಿದರು. ಬಹಳ ಕಷ್ಟದಿಂದ ಪತ್ರಿಕೆಯ ಪ್ರಕಟಣೆಯ ಬಗ್ಗೆ 'ಡಿಕ್ಲೇರ್' ಮಾಡಿಕೊಂಡು ಅಲ್ಲಿಂದಲೇ 'ವೀರಕೇಸರಿ' ಸಾಪ್ತಾಹಿಕವಾಗಿ ಬರಲಾರಂಭಿಸಿತು. ಆ ಪತ್ರಿಕೆಯಲ್ಲಿ ಆರ್ಕಾಟರಿಗೆ ಬಹಿರಂಗ ಪತ್ರವನ್ನು ಬರೆದರು. ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಬಹಿರಂಗ ಪತ್ರಗಳನ್ನು ಬರೆದ ಪ್ರಥಮ ಪತ್ರಿಕೆ 'ವೀರಕೇಸರಿ';ಮಹಾರಾಜರವರಿಗೆ ಬಹಿರಂಗ ಪತ್ರಗಳನ್ನು ಬರೆದ ಕೀರ್ತಿಯು 'ವೀರಕೇಸರಿ'ಗೇ ಸಲ್ಲುತ್ತದೆ. ಅನಂತರದಲ್ಲಿ ಗಾಂಧೀ ಮೊಕದ್ದಮೆ ಕಾಲದಲ್ಲಿ 'ವೀರಕೇಸರಿ'ದೈನಿಕವಾಗಿ ಬೆಂಗಳೂರಿನಿಂದ ಮೊಳಗಿತು. ಇಂಥ ನಿರ್ಭೀತ ಪತ್ರಿಕೆಯಿಂದ ಶಾಸ್ತ್ರಿಗಳಿಗೆ ಪ್ರಸಿದ್ಧಿ ದೊರೆಯಿತು ; ಆದರೆ ತಮ್ಮ ಪತ್ರಿಕೆಯನ್ನು ಸ್ವಂತಕಾಲ ಮೇಲೆ ನಿಲ್ಲಿಸುವುದು ಮಾತ್ರ ಅವರಿಗೆ ಸಾಧ್ಯವಾಗಲೇ ಇಲ್ಲ. 'ವೀರಕೇಸರಿ'ಗೆ ಸ್ವಂತ ಮುದ್ರಣಾಲಯವೂ ಇರಲಿಲ್ಲ.

ಮೈಸೂರು ಕಾಂಗ್ರೆಸ್‌ನ ಹುಟ್ಟಿಗೆ ಕಾರಣರಾದವರು ಶಾಸ್ತ್ರಿಗಳು. ಅದರ ಬೆಳವಣಿಗೆಯ ವಿವಿಧ ಮಜಲುಗಳಲ್ಲಿ ಸೆರೆಮನೆ ಸೇರಬೇಕಾಯಿತು ; ಹಲವು ಕಷ್ಟ–ನಷ್ಟಗಳನ್ನು ಅನುಭವಿಸಬೇಕಾಯಿತು. ಕಾಂಗ್ರೆಸ್ ಹಿರಿಯಾಲವಾಗಿ ಬೆಳೆಯಿತು ; ಅದರ ಆಶ್ರಯದಲ್ಲಿ ಬೆಳೆಯುವುದು ಶಾಸ್ತ್ರಿಗಳಂಥವರಿಗೆ ಸಾಧ್ಯವಾಗಲಿಲ್ಲ. ರಾಜಕೀಯದಿಂದ ದೂರವೂ ಉಳಿದರು. ತಾವು ಕಟ್ಟಿ, ಬೆಳೆಸಿದ ಸಂಸ್ಥೆ ತಮ್ಮ ಕಣ್ಣಮುಂದೆಯೇ ದಾರಿ ತಪ್ಪಿದುದನ್ನು ಗಮನಿಸಿದ ಅವರು ತುಂಬ "ಚಡಪಡಿಸಿದರು".

★ ★ ★

ರಾಜಕೀಯ, ಪತ್ರಿಕೋದ್ಯಮ – ಈ ಎರಡು ಕ್ಷೇತ್ರಗಳ ಜೊತೆಗೆ ಶಾಸ್ತ್ರಿಗಳಿಗೆ ಪ್ರಿಯವಾಗಿದ್ದ ಮತ್ತೊಂದು ಕ್ಷೇತ್ರ ಸಾಹಿತ್ಯ. ಶಾಸ್ತ್ರಿಗಳು ಸರಳಗದ್ಯದಲ್ಲಿ ವಾಲ್ಮೀಕಿ ರಾಮಾಯಣವನ್ನು ನಿರೂಪಿಸಿದ್ದಾರೆ ಶ್ರೀಮದ್ಭಾಗವತವನ್ನೂ ಸರಳಗದ್ಯದಲ್ಲಿ ಪ್ರಕಟಿಸಬೇಕೆಂಬುದು ಅವರ ಆಸೆಯಾಗಿದ್ದು, ಅದರ ಪ್ರಥಮಭಾಗ ಅವರು ಕಾಲವಾಗುವ (ಮರಣ ೫–೧–೧೯೭೧) ಕೆಲವು ತಿಂಗಳುಗಳ ಮೊದಲಷ್ಟೇ ಬೆಳಕು ಕಂಡಿತು.

ರಾಮಾಯಣ ಭಾಗವತಗಳನ್ನು ಪ್ರಕಟಿಸುವ ಈ ಕೈಂಕರ್ಯದಲ್ಲಿ ಅವರ ಅಭಿರುಚಿ ಪ್ರಕಟವಾಗುವುದಷ್ಟೇ ಅಲ್ಲದೆ, ಕಿರಿಯ ವಯಸ್ಸಿನಲ್ಲಿ ಪಡೆದ ಶಿಕ್ಷಣದ, ಅವರು ಬೆಳೆದ ಪರಿಸರದ ಪ್ರಭಾವವೂ ಸ್ಪಷ್ಟವಾಗಿ ಪ್ರಕಟಗೊಂಡಿವೆ. ಶಾಸ್ತ್ರಿಗಳ ಕೃತಿರಚನೆ ೬೦. ಇವುಗಳಲ್ಲಿ ಬಹುಪಾಲು ಕಾದಂಬರಿಗಳೇ. ಐತಿಹಾಸಿಕ ಕಾದಂಬರಿಕಾರರೆಂದೇ ಶಾಸ್ತ್ರಿಗಳು ಪ್ರಸಿದ್ಧರು. ಅವರಿಗೆ ತುಂಬ ಕೀರ್ತಿ ತಂದುಕೊಟ್ಟ ಕಾದಂಬರಿ 'ದೌಲತ್'. ಹೈದರಾಲಿಯು ಗತಿಸಿದ ನಂತರ ಟಿಪ್ಪೂಸುಲ್ತಾನನ ಹದಿನೇಳು ವರ್ಷಗಳ ರಾಜಕೀಯ ಜೀವನವೇ ಈ ಕಾದಂಬರಿಯ ಕಥಾವಸ್ತು.

'ಶ್ರೀರಂಗರಾಯ', 'ನಗರದರಾಣಿ', 'ಬಿದನೂರು ರಾಣಿ'–ಇವು ಸಹ ಅವರ ಉತ್ತಮ ಕಾದಂಬರಿಗಳು. ವಿಜಯನಗರ ಸಾಮ್ರಾಜ್ಯದ ವೈಭವದ ಕೊನೆಯ ದಿನಗಳಲ್ಲಿ ಮಹಾಮಂಡಲೇಶ್ವರನಾಗಿ ಶ್ರೀರಂಗಪಟ್ಟಣದಲ್ಲಿ ಆಳುತ್ತಿದ್ದ ಶ್ರೀರಂಗರಾಯನ ಕಥೆ 'ಶ್ರೀರಂಗರಾಯ' ಕಾದಂಬರಿಯಲ್ಲಿದೆ. ಬಿದನೂರಿನ ಇತಿಹಾಸವನ್ನು ಆಧರಿಸಿದ ಕಾದಂಬರಿಗಳು ಉಳಿದುವೆರಡಾಗಿವೆ. ಇತಿಹಾಸವನ್ನು ಆಧರಿಸಿ ಶಾಸ್ತ್ರಿಗಳು ರಚಿಸಿರುವ ಇತರ ಕೆಲವು ಕಾದಂಬರಿಗಳೆಂದರೆ : 'ಗೋಲ್ಕೊಂಡಪತನ', 'ರಾಜಪಂಜರ', 'ಆದಿಲ್ ಷಾಹಿಯ ಕಡೆಯ ದಿನಗಳು', 'ಛತ್ರಪತಿ ಶಿವಾಜಿ', 'ಯವನ ವಿಧ್ವಂಸಿ ಶಿವಾಜಿ'.

'ಚಿತ್ರಕೂಟ', 'ಲಕ್ಷ್ಮಿಯ ಸಂಸಾರ', 'ಬೃಂದಾವನ'–ಇವು ವೀರಕೇಸರಿಯವರ ಸಾಮಾಜಿಕ ಕಾದಂಬರಿಗಳು. 'ಸುವರ್ಣರೇಖೆ', 'ಪಂಡಿತ ಜವಾಹರಲಾಲ ನೆಹ್ರೂ' –ಇತರ ಬಗೆಯ ಕೃತಿಗಳು. ಅವರು ತಮ್ಮ ಕೃತಿಗಳ ಬಗ್ಗೆ ವಿಶೇಷ ಮಮತೆಯನ್ನೇನೂ ತೋರಲಿಲ್ಲ. ". ಕೆಲವು ಮಾತ್ರ ರಸವತ್ತಾಗಿದೆಯೆಂದು ನನ್ನ ಭಾವನೆ. ಎಲ್ಲವೂ ಉತ್ತಮೋತ್ತಮ ಗ್ರಂಥಗಳಾಗಿಲ್ಲವೆಂದಿಲ್ಲ" ಎಂಬ ನಮ್ರತೆಯ ಭಾವವನ್ನೂ ಅವರು ಒಂದೆಡೆ ಮೆರೆದಿದ್ದಾರೆ. ಸದಾ ಮುಕ್ತಮನಸ್ಸಿನ ವಿಮರ್ಶೆಯನ್ನು ಸ್ವಾಗತಿಸುವ ಸ್ವಭಾವ ಅವರದು.

ಕನ್ನಡ ಐತಿಹಾಸಿಕ ಕಾದಂಬರಿಯ ಇತಿಹಾಸದಲ್ಲಿ ಶ್ರೀ ವೀರಕೇಸರಿ ಸೀತಾರಾಮ ಶಾಸ್ತ್ರಿಗಳಿಗೆ ವಿಶಿಷ್ಟವಾದ ಸ್ಥಾನವಿದೆ ಎಂಬುದನ್ನು ಗುರುತಿಸಬಹುದಾಗಿದೆ.

ಶಾಸ್ತ್ರಿಗಳು ತಮ್ಮ ಹತ್ತೊಂಬತ್ತನೆಯ ವಯಸ್ಸಿನಲ್ಲಿ ವಿವಾಹವಾದರು ಶ್ರೀಮತಿ ಸುಬ್ಬಮ್ಮನವರು ಅವರ ಮಡದಿ. ಒಂಬತ್ತು ಮಕ್ಕಳು. ಕನ್ನಡದ ಸುಪ್ರಸಿದ್ಧ ಪತ್ತೇದಾರಿ ಕಾದಂಬರಿಕಾರರಲ್ಲಿ ಒಬ್ಬರಾದ ಕನ್ನಡ ಚಳವಳಿಗಾರ ಮ. ರಾಮಮೂರ್ತಿ ಇವರ ಜ್ಯೇಷ್ಠ ಪುತ್ರರು. ಶಾಸ್ತ್ರಿಗಳ ಮನೆಮಾತು ತೆಲುಗು. ಆದರೆ ಅವರ ಮನೆಗೆ ಭೇಟಿ ನೀಡಿದ ಬಂಧುಗಳ ಜೊತೆ ಮಾತನಾಡುತ್ತಿದ್ದುದು ಕನ್ನಡದಲ್ಲೇ. ಅವರ ಮನೆ ಸಂಪೂರ್ಣವಾಗಿ ಕನ್ನಡಮಯವಾಗಿತ್ತು.

ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿಗಳು ಕಾಲವಾದಾಗ ". ಇದೂ (ಜೀವನ ಪ್ರವಾಹ' ಅವರ ಆತ್ಮಕತೆ) ಕೂಡಿ ಶಾಸ್ತ್ರಿಗಳ ಅಪ್ರಕಟಿತ ಸಾಹಿತ್ಯವೆಲ್ಲ ಬೇಗ ಕನ್ನಡಿಗರ

ಕೈಸೇರಲಿ ಎಂದು ಹಾರೈಸುವುದಕ್ಕಿಂತ ಹೆಚ್ಚಿನದೇನಿದೆ ಈ ಹೊತ್ತು ?" ಎಂಬ ಹಾ. ಮಾ. ನಾಯಕರ (ಜನವರಿ ೧೧, ೧೯೭೧; 'ಕನ್ನಡಪ್ರಭ') ಆಸೆ ಇನ್ನೂ ಆಸೆಯಾಗಿಯೇ ಉಳಿದಿದೆ ಎಂಬುದು ನಮ್ಮ ಸಾಹಿತ್ಯ, ಜೀವನದ ಸ್ಥಿತಿಗತಿಗಳ ಪ್ರತಿಬಿಂಬವಾಗಿದೆ ಎಂದರೆ ಉತ್ಪ್ರೇಕ್ಷೆಯಾಗಲಾರದು.

ಎನ್. ಎಸ್. ಶಾರದಾ ಪ್ರಸಾದ್

ಬಿ. ನಾರಾಯಣಸ್ವಾಮಿ

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆಯ ಶ್ರೀ ಬಿ. ನರಸಿಂಹ ಅಯ್ಯಂಗಾರ್ ಮತ್ತು ಶ್ರೀಮತಿ ವೆಂಕಟಲಕ್ಷಮ್ಮನವರ ಸುಪುತ್ರರಾಗಿ ಜನಿಸಿದರು ಶ್ರೀ ಬಿ. ನಾರಾಯಣಸ್ವಾಮಿ. ಶ್ರೀ ನರಸಿಂಹ ಅಯ್ಯಂಗಾರ್‌ರವರು ಸಬ್‌ರಿಜಿಸ್ಟ್ರಾರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು.

ಇವರಿಗೆ ನಾಲ್ವರು ಪುತ್ರರು ಮತ್ತು ನಾಲ್ವರು ಪುತ್ರಿಯರು. ಇವರಲ್ಲಿ ಶ್ರೀ ನಾರಾಯಣಸ್ವಾಮಿ ಮೊದಲಿಗರು. ಲಕ್ಷ್ಮೀಪುರಂ ಸ್ಕೂಲಿನಲ್ಲಿ ಬಾಲ್ಯದ ವಿದ್ಯಾಭ್ಯಾಸ. ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಪದವೀಧರರಾಗಿ ಮದರಾಸಿನ ಲಾ ಕಾಲೇಜಿನಲ್ಲಿ ಬಿ. ಎಲ್. ಪರೀಕ್ಷೆ ಮಾಡಿದರು. ಇವರ ಜೊತೆಯಲ್ಲಿ ಶ್ರೀ ಎ. ಆರ್ ಬದರೀನಾರಾಯಣ್ ಮತ್ತು ಜಿ. ರಂಗನಾಥನ್ ರವರು ವ್ಯಾಸಂಗ ಮಾಡಿದ ಪ್ರಮುಖರು, ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಶ್ರೀ ನಾರಾಯಣ ಸ್ವಾಮಿಯವರು ವಿವಾಹವಾಗಿದ್ದರು. ಕ್ರಿಕೆಟ್ ಆಟದಲ್ಲಿ ವಿಶೇಷ ಆಸಕ್ತಿ ಹೊಂದಿದ್ದರು.

1934-35 ರಲ್ಲಿ ವಕೀಲಿ ವೃತ್ತಿ ಪ್ರಾರಂಭಿಸಿದ ಶ್ರೀ ನಾರಾಯಣಸ್ವಾಮಿಯವರು 1938 ರಲ್ಲಿ ಕಾಂಗ್ರೆಸ್ ಸೇರಿದರು. ಮಹಾತ್ಮಗಾಂಧಿಯವರ ಪ್ರಭಾವಕ್ಕೆ ಒಳಗಾದ ಲಕ್ಷಾಂತರ ಮಹನೀಯರಲ್ಲಿ ಇವರೂ ಒಬ್ಬರು.

1938 ರಲ್ಲಿ ಶಿವಪುರ ಅಧಿವೇಶನಾನಂತರ ಕಾಂಗ್ರೆಸ್ ಚಟುವಟಿಕೆಗಳನ್ನು ಅಂದಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಹತ್ತಿಕ್ಕಲು ಯೋಚಿಸಿದರು. ಹಳೆಯ ಮೈಸೂರು ಸಂಸ್ಥಾನದ ಎಂಟು ಜಿಲ್ಲೆಯಲ್ಲಿದ್ದ ಪ್ರಮುಖ ವಕೀಲರೂ ಕಾಂಗ್ರೆಸ್ ಧುರೀಣರೂ ಆಗಿದ್ದ ಶ್ರೀಗಳಾದ ಎಚ್. ಸಿ. ದಾಸಪ್ಪ, ಎಸ್. ರಂಗರಾಮಯ್ಯ, ಎಸ್. ನಿಜಲಿಂಗಪ್ಪ, ಟಿ ಸುಬ್ರಹ್ಮಣ್ಯಂ, ಕೆ. ಟಿ. ಭಾಷ್ಯಂ, ಎಚ್. ಸಿದ್ಧಯ್ಯ ಕೋಲಾರದ ಎನ್. ಪಟ್ಟಾಭಿರಾಮನ್, ಎ. ಜಿ. ರಾಮಚಂದ್ರರಾಯರ ವಕೀಲಿ ಸನ್ನದ್ದನ್ನು ನವೀಕರಿಸದೆ ಇದ್ದಾಗ ಸರ್ಕಾರದ ನೀತಿಯನ್ನು ಉಗ್ರವಾಗಿ ಖಂಡಿಸಿ ಹೇಳಿಕೆ ಇತ್ತರು. ಆಗ ಸರ್ಕಾರ ಇವರ ಮೇಲೆ ನಿಗಾ ಇಟ್ಟಿತು.

"ಮೈಸೂರು ಪತ್ರಿಕೆ" ಕಛೇರಿಯ ಮೇಲೆ ಕೆಲವು ವಿದ್ಯಾರ್ಥಿಗಳು ಧಾಳಿ ಮಾಡಿದಾಗ ಶ್ರೀ ಬಿ. ನಾರಾಯಣಸ್ವಾಮಿಯವರೂ ಸೇರಿದ್ದರೆಂದು ಆಪಾದಿಸಿ ಸರ್ಕಾರ ಇವರ ಮೇಲೆ ಮೊಕದ್ದಮೆ ಹೂಡಿತು. ಶಿಕ್ಷೆಯೂ ಆಯಿತು.

ಅನಂತರ ಶ್ರೀ ನಾರಾಯಣಸ್ವಾಮಿಯವರು 1942ರ ಭಾರತ ಬಿಟ್ಟು ತೊಲಗಿ ಚಳುವಳಿ, ಅನಂತರ 1947ರ ಮೈಸೂರು ಚಲೋ ಸತ್ಯಾಗ್ರಗಳಲ್ಲಿ ಭಾಗವಹಿಸಿ ತುರಂಗವಾಸ ಅನುಭವಿಸಿದರು.

ಭಾರತಕ್ಕೆ ಸ್ವಾತಂತ್ರ್ಯ ಬಂದನಂತರ ಶ್ರೀ ನಾರಾಯಣಸ್ವಾಮಿಯವರು ಕೆಲವು ವರ್ಷ ಆಕಾಶವಾಣಿ ಡೈರೆಕ್ಟರ್ ಆಗಿದ್ದರು. ಮೈಸೂರು ಪುರಸಭೆಯ ಅಧ್ಯಕ್ಷ ಉಪಾಧ್ಯಕ್ಷರಾಗಿದ್ದರು. ಮೈಸೂರು ನಗರಾಭಿವೃದ್ಧಿ ಮಂಡಲಿಯ ಅಧ್ಯಕ್ಷರಾಗಿದ್ದರು. ಶ್ರೀ ಕೆ. ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಶ್ರೀ ಬಿ. ನಾರಾಯಣ ಸ್ವಾಮಿಯವರು ಶಾಸನ ಸಭಾ ಸದಸ್ಯರಾಗಿದ್ದರು.

1938ರಲ್ಲಿ ಕಾಂಗ್ರೆಸ್ಸಿಗೆ ಸೇರಿದ್ದ ಶ್ರೀ ಬಿ. ನಾರಾಯಣಸ್ವಾಮಿ ಸತತ ಖಾದಿ ಧಾರಿಗಳಾಗಿದ್ದರು. ಶ್ರೀ ಬಿ. ನಾರಾಯಣಸ್ವಾಮಿಯವರಿಗೆ ಎಂಟು ಮಕ್ಕಳು ಮೊದಲ ನೆಯ ಮಗ ನರಸಿಂಹ ಕೇಂದ್ರ ಆಹಾರ ವಿಜ್ಞಾನ ಸಂಶೋಧನಾಲಯದಲ್ಲಿ ನೌಕರಿ ಯಲ್ಲಿದ್ದ. ಶ್ರೀ ನಾರಾಯಣಸ್ವಾಮಿಯವರು ನಗರಾಭಿವೃದ್ಧಿ ಮಂಡಲಿಯ ಛೇರ್ಮನ್ ಆಗಿದ್ದಾಗ ಒಂದು ನಿವೇಶನಕ್ಕೆ ಅರ್ಜಿ ಸಲ್ಲಿಸಿದ. ಶ್ರೀ ನಾರಾಯಣಸ್ವಾಮಿಯವರು ತಮ್ಮ ಮಗನನ್ನು ಕರೆದು "ನಿನಗೆ ನಿವೇಶನ ಬೇಕಾದರೆ ನಾನು ರಾಜೀನಾಮೆ ಕೊಡ ಬೇಕಾಗುತ್ತದೆ" ಎಂದು ತಿಳಿಸಿದರು ಆಗ ನರಸಿಂಹ ಅರ್ಜಿಯನ್ನು ವಾಪಸ್ ಪಡೆದು ಹರಿದೆಸೆದ

ಶ್ರೀ. ಬಿ. ನಾರಾಯಣಸ್ವಾಮಿ ದೇವ ಪಾರ್ಥಿವ ಅಗ್ರಹಾರದಲ್ಲಿ ಸ್ವಂತ ಮನೆ ಯಲ್ಲಿ ವಾಸವಾಗಿದ್ದರು. ಮನೆತುಂಬಾ ಶಿಥಿಲವಾಗಿತ್ತು. ಇವರ ಸಹಪಾಠಿ ಮತ್ತು ಸುಪ್ರಸಿದ್ಧ ಕಂಟ್ರಾಕ್ಟರ್ ಶ್ರೀ ಬೋರಯ್ಯ ಬಸವಯ್ಯನವರು ಮನೆಯನ್ನು ನವೀಕರಿ ಸಲು ಲಾರಿಯಲ್ಲಿ ಇಟ್ಟಿಗೆ, ಮರಳು, ಸಿಮೆಂಟ್ ಮತ್ತು ಕುಶಲ ಕೆಲಸಗಾರರನ್ನು ಕಳು ಹಿಸಿದರು. ಶ್ರೀ ನಾರಾಯಣಸ್ವಾಮಿಯವರು ಕೂಡಲೆ ಶ್ರೀ ಬಸವಯ್ಯನವರೊಡನೆ ಮಾತಾಡಿ ತಮ್ಮ ಮಿತ್ರತ್ವ ಉಳಿಯಬೇಕಾದರೆ ಈ ಸಾಮಗ್ರಿಗಳನ್ನೂ ಲಾರಿಯನ್ನೂ ವಾಪಸ್ ಕರೆಸಿ ಕೊಳ್ಳಬೇಕೆಂದು ತಿಳಿಸಿದರು. ವಿಧಿಯಿಲ್ಲದೆ ಸಾಮಗ್ರಿ ಮತ್ತು ಲಾರಿ ವಾಪಸ್ ಹೋದವು. ಮತ್ತೊಂದು ಪ್ರಸಂಗದಲ್ಲಿ ಒಬ್ಬ ಕಂಟ್ರಾಕ್ಟರ್ ಶ್ರೀ ನಾರಾಯಣ ಸ್ವಾಮಿಯವರಿಗೆ ಮನೆಯಲ್ಲಿ ಹಣ ಕೊಡಲು ಸಿದ್ಧನಾಗಿ ಬಂದ ವಿಷಯ ತಿಳಿದ ನಾರಾಯಣಸ್ವಾಮಿಯವರು ಆ ಕಂಟ್ರಾಕ್ಟರನ್ನು ಹೀನಾಮಾನವಾಗಿ ನಿಂದಿಸಿ ಆಚೆಗೆ

ಕಳುಹಿಸಿದರು. ನಿಸ್ಪೃಹತೆ, ಪರಿಶುದ್ಧ ಜೀವನ, ಶುದ್ಧಹಸ್ತರಾದ ಶ್ರೀ ಬಿ. ನಾರಾಯಣಸ್ವಾಮಿಯವರು ತಮ್ಮ ಸ್ವಂತ ಮನೆಯನ್ನೂ ವಿಕ್ರಯಿಸಿದರು. 1983 ರಲ್ಲಿ ದಿವಂಗತರಾದರು. ಇವರ ಪತ್ನಿಯವರು 1988ರ ಮಾರ್ಚಿಯಲ್ಲಿ ದಿವಂಗತರಾದರು.

ಎಚ್. ವಿ. ಸುಬ್ಬರಾಮಯ್ಯ

ಇಂಡುವಾಳು ಹೊನ್ನಯ್ಯ

ಯಾವುದೇ ವ್ಯಕ್ತಿ ನಮ್ಮ ಕಣ್ಣಿನಿಂದ ಮರೆಯಾಗಿ ಹೋದರೆ ಸಂಪೂರ್ಣವಾಗಿ ಮರತೇ ಹೋಗುತ್ತಾನೆ. ಆದರೆ ಉತ್ತಮ ಕಾರ್ಯಗಳು ಅವರಿಂದ ಜರುಗಿದ್ದರೆ, ಕಾಲಗರ್ಭದಲ್ಲಿ ಅವರ ಜಡದೇಹ ಲೀನವಾದರೂ. ಜನರ ಮನಸ್ಸಿನಲ್ಲಿ ಅಚ್ಚ ಹಸಿರಾಗಿ ನಿತ್ಯ ನೆಲೆಸಿಯೇ ಇರುತ್ತಾನೆ. ಮನುಷ್ಯ ಸಾಮಾನ್ಯವಾಗಿ ಸುಖದ ಅಪೇಕ್ಷಿ. ಆ ಒಂದು ಬಯಕೆಯಿಂದ, ಧರ್ಮ ಅಧರ್ಮಗಳ ವಿವೇಚನೆ ಇಲ್ಲದೆ, ನ್ಯಾಯ ಅನ್ಯಾಯಗಳ ತರ್ಕ ಮಾಡದೆ, ಕೇವಲ ಸ್ವಾರ್ಥಕ್ಕಾಗಿ ಹೋರಾಡುತ್ತಾನೆ. ತನ್ನ ಅಜುಬಾಜಿನ ಜನರ ಯೋಗಕ್ಷೇಮದತ್ತ ಅವನು ಯಾವತ್ತೂ ಮನ ಹರಿಸುವುದೇ ಇಲ್ಲ. ತನ್ನ ಉದ್ಧಾರದ ಬಗ್ಗೆ ಚಿಂತಿಸುವವ ನಾಡಿನ ಆ ಮೂಲಕ ಜನತೆಯ ಉತ್ಕರ್ಷದತ್ತ ಯಾವತ್ತೂ ಯೋಚಿಸುವವನೇ ಅಲ್ಲ. ಈ ನಾಡಿಗೆ ತಗುಲಿರುವ ಒಂದು ಘೋರ ಶಾಪ ಇದು. ಚಂದ್ರ, ತಾರೆ, ಗ್ರಹಾರಿಕೆಗಳಿಗೆ ತೀರಾ ಹತ್ತಿರವಾಗುತ್ತಿರುವ ಮನುಷ್ಯ, ತನ್ನ ಪಕ್ಕದ ಮನೆಯವನಿಗೆ ಸಂಪೂರ್ಣ ದೂರ ವಾಗುತ್ತಿದ್ದಾನೆ. ಉಳ್ಳವರಿಗೆ ಮತ್ತಷ್ಟು ಕೂಡಿಡುವ ಚಪಲ. ತತ್ಫಲ ಪಾಪಂ ಮಾರ್ಗಗಳತ್ತ ಒಲುವು. ಶ್ರೀಮಂತರು ಶ್ರೀಮಂತರಾಗುತ್ತಲೇ ಇದ್ದಾರೆ. ಬಡವರು ದಿನೇ ದಿನೇ ದರಿದ್ರರಾಗಿ ಕೊನೆಗೆ ಹೇಳ ಹೆಸರಿಲ್ಲದಂತಾಗುತ್ತಿದ್ದಾರೆ. ಉಳ್ಳವರು ಇಲ್ಲದವರ ಮತ್ತು ನೊಂದವರ ವಿಷಯದಲ್ಲಿ ಕನಿಕರ ತೋರಿ ಸಹಾಯ ಹಸ್ತ ನೀಡಿರುವ ಪ್ರಸಂಗಗಳು ಈ ನಾಡಿನಲ್ಲಿ ತೀರ ಅಪರೂಪವೆಂದೇ ಹೇಳಬಹುದು. ಈಗ ಅಲ್ಲೊಮ್ಮೆ ಇಲ್ಲೊಮ್ಮೆ ದಾನ ಮಾಡುತ್ತಿರುವವರಿಗೂ ಹೆಸರಿನ ಪ್ರಕಾಶದ ಮೋಹ ಅಂಟಿದೆ. ದಾನ ಮಾಡಿದರೆ ಲಭಿಸಬಹುದಾದ ಪುಣ್ಯಕ್ಕಿಂತ ಹೆಸರಿನ ಮೋಹವೇ ಬಹಳವಾಗಿದೆ.

ಮಂಡ್ಯ ಜಿಲ್ಲೆ ಈಗ್ಗೆ ಮೂರ್ನಾಲ್ಕು ದಶಕಗಳ ಹಿಂದೆ ಅನೇಕಾನೇಕ ಔದಾರ್ಯವಂತ ವ್ಯಕ್ತಿಗಳನ್ನು ತನ್ನ ಬಸಿರಲ್ಲಿ ಅಡಗಿಸಿಕೊಂಡಿತ್ತು. ಆ ಜನ ನೊಂದವರ ದನಿಯಾದವರು ಪ್ರಚಾರದ ಆಕಾಂಕ್ಷೆಯಿಂದ ತಮ್ಮಲ್ಲಿದ್ದ ಸಂಪತ್ತನ್ನು ಬಡವರಿಗೋಸ್ಕರ ಖರ್ಚು ಮಾಡಿದವರಲ್ಲ—ಜನ ಬೆಂಬಲಗಳಿಸಿ, ಆ ಮೂಲಕ ತಮ್ಮ ಅಂತಸ್ತು ಹೆಚ್ಚಿಸಿಕೊಳ್ಳಲು ಕೀಳು ಮಾರ್ಗ ಹಿಡಿದವರಲ್ಲ. ಅಪ್ರಮಾದ ಸಂಸಾರವನ್ನು ಕಡೆಗಣಿಸಿ, ಸಮಾಜ ಸೇವೆಗೆ ತಮ್ಮನ್ನು ತೊಡಗಿಸಿಕೊಂಡ ದಿವ್ಯ ಚೇತನಗಳು, ಅವರ ನಾಮ ಸ್ಮರಣೆಯೇ

ನಮಗೊಂದು ದಿವ್ಯ ಮಂತ್ರ. ತಾ ಜನಿಸಿದ ನೆಲದ ಋಣ ತೀರಿಸಲು ಅಕ್ಷರಶಃ ತನು, ಮನ, ಧನಗಳನ್ನು ಮೀಸಲಿಟ್ಟು ನಾಡಿನ ಮತ್ತು ಶ್ರೀ ಸಾಮಾನ್ಯನ ಸೇವೆಯಲ್ಲೇ ತೃಪ್ತಿ ಪಡೆದುಕೊಂಡ ಧೀಮಂತ ವ್ಯಕ್ತಿ, ಇಂಡುವಾಳಿನ ಜಮೀನ್ದಾರ್ ಹೊನ್ನಯ್ಯ ನವರು.

ಮಂಡ್ಯ ನಗರದಿಂದ, ಕೇವಲ ನಾಲ್ಕು ಕಿಲೋಮೀಟರುಗಳ ದೂರದಲ್ಲಿರುವ ಇಂಡುವಾಳು ಗ್ರಾಮದ, ಆಗರ್ಭ ಶ್ರೀಮಂತರಾದ ಹೊನ್ನೇಗೌಡ ಮತ್ತು ಸಿದ್ದಮ್ಮ ದಂಪತಿಗಳ ಮುದ್ದಿನ ಮಗನಾಗಿ ಜನಿಸಿದ ಹೊನ್ನಯ್ಯನವರಿಗೆ, ಔಪಚಾರಿಕ ಶಿಕ್ಷಣ ಕೂಡ ಸರಿಯಾಗಿ ದೊರೆಯಲಿಲ್ಲ. ಮಗನಿಗೆ ಶಿಕ್ಷಣ ಕೊಡಿಸುವುದರಲ್ಲಿ ಹೊನ್ನೇ ಗೌಡರು ಎಡವಿದರೂ, ಧೈರ್ಯ, ಗಟ್ಟಿತನ ಮತ್ತು ಎದೆಗಾರಿಕೆಯನ್ನು ಅವನಲ್ಲಿ ಕಸಿ ಮಾಡಿದರು. ಬಡವರನ್ನು ಕಂಡು ಕನಿಕರ ತೋರುವ ಉದಾರ ಗುಣ ತಂದೆಯಿಂದ ಅವರಿಗೆ ರಕ್ತಗತವಾಗಿ ಬಂದಿತ್ತು.

ಯುವಕ ಹೊನ್ನಯ್ಯನವರು ಮಂಡ್ಯ ನಗರದ ಪ್ರತಿಷ್ಠಿತ ರಾದ ಕಾಳನಾಯಕನ ಕೆಂಪೇಗೌಡರ ಹಿರಿಯ ಮಗಳು ಹೊಂಬಾಳಮ್ಮನನ್ನು ಬಾಳಸಂಗಾತಿ ಯಾಗಿ ವರಿಸಿದರು. ಒಂದು ರೀತಿಯಲ್ಲಿ ಹೊನ್ನಯ್ಯನವರ ರಾಜಕೀಯ ಪ್ರವೇಶಕ್ಕೆ ಈ ಸಂಬಂಧ ಉಪಕಾರಿಯಾಯ್ತು. ಅಂದಿನ ದಿನಗಳಲ್ಲಿ ಮಂಡ್ಯದ ಸುತ್ತ ಮುತ್ತಲ ರಾಜಕೀಯ ಕೇವಲ ಮೂರು ಮನೆತನಗಳ ಸ್ವತ್ತಾಗಿತ್ತು. ಒಂದು, ಕಾಳನಾಯಕನ ಕೆಂಪೇಗೌಡರ ಮನೆ, ಎರಡನೆಯದು, ಜೆ. ದೇವಯ್ಯನವರ ಮನೆ, ಮೂರನೆಯದು ; ಎ. ಎಲ್. ಲಿಂಗಣ್ಣಯ್ಯನವರ ಮನೆ.

ಹೊಂಬಾಳಮ್ಮನರವನ್ನು ಮದುವೆಯಾದ ಹೊನ್ನಯ್ಯನವರಿಗೆ ನಾಲ್ಕಾರು ಮಕ್ಕಳಾದರೂ ಅವು ಬದುಕಲಿಲ್ಲ. ಆದರೆ ವಂಶ ಮುಂದುವರಿಯಬೇಕಲ್ಲ ! ದಂಪತಿಗಳಿಬ್ಬರೂ ಕುಳಿತು ಚರ್ಚಿಸಿದರು. ಕೊನೆಗೆ ಹೆಂಡತಿಯ ಒತ್ತಾಯದ ಮೇರೆಗೆ, ಸಮಾಜ ಸುಧಾರಣೆ ಬಯಸುತ್ತಿದ್ದ ಹೊನ್ನಯ್ಯನವರು, ಇಂಡುವಾಳು ಗ್ರಾಮದ ಬಾಲವಿಧವೆ ದೇವಮ್ಮನನ್ನು ಮದುವೆಯಾದರು. ರಸ್ತೆಯ ಕಂಟ್ರಾಕ್ಟ್ ಮಾಡಿಸುತ್ತಾ ನೆಮ್ಮದಿಯಿಂದ ಜೀವನ ಸಾಗಿಸುತ್ತಿದ್ದರು.

ಆಗ ದೇಶದಲ್ಲಿ ಗಾಂಧಿಜಿಯವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಸ್ವರಾಜ್ಯಕ್ಕಾಗಿ ವ್ಯಾಪಕವಾದ ಚಳುವಳಿಯನ್ನು ಹಮ್ಮಿಕೊಂಡಿದ್ದ ಕಾಲ. ಮೈಸೂರು ಸಂಸ್ಥಾನದ ಒಡೆಯರ ಆಳ್ವಿಕೆಗೆ ಮಂಡ್ಯ ಕೂಡ ಒಳಪಟ್ಟಿತ್ತಷ್ಟೆ. ಮಿರ್ಜಾ ಇಸ್ಮಾಯಿಲ್ ಅವರು ದಿವಾನರಾಗಿದ್ದ ಸಂದರ್ಭ. ಮೈಸೂರು ಒಡೆಯರು ಆಂಗ್ಲ ಪ್ರಭುತ್ವಕ್ಕೆ ವಿಧೇಯರಾಗಿದ್ದ ಪರಿಸ್ಥಿತಿ. ಸಮಾಜ ಸೇವೆಯನ್ನು ಹೊನ್ನಯ್ಯನವರು ತಮ್ಮ ಊರಿನಿಂದಲೇ ಆರಂಭಿಸಿದರು. ಇಂಡುವಾಳು ಗ್ರಾಮದ ಪಕ್ಕ 'ಪಿಕಪ್ ನಾಲೆ ಯೊಂದನ್ನು' ತೆಗೆಯಲು ಸರ್ಕಾರ ಬಹಳ ವರ್ಷಗಳಿಂದ ನಿಧಾನ ಮಾಡುತ್ತಲೇ

ಒಂದಿತ್ತು. ಜನಗಳ ಕೋರಿಕೆ ಅವರಿಗೆ ಕೇಳಲೇ ಇಲ್ಲ. ಹೊನ್ನಯ್ಯನವರು ಈ ಜವಾಬ್ದಾರಿ ವಹಿಸಿದರು. ಹೇಗಾದರೂ ಮಾಡಿ ಆ ಪಿಕಪ್‌ನಾಲೆ ಮಾಡಿಸಲೇ ಬೇಕ ಎಂದು ಹಟ ತೊಟ್ಟರು. ಸಮಯ ಕಾಯುತ್ತಾ ಕುಳಿತರು. ಆ ಸಮಯ ಬಂದೇ ಬಂತು. 'ಹೋರಾಟವಿಲ್ಲದೆ ಯಾವ ಕೆಲಸವೂ ಆಗದು' ಎಂದು ನಿರ್ಧಾರಕ್ಕೆ ಬಂದಿದ್ದ ಹೊನ್ನಯ್ಯನವರು, 'ದಿವಾನರು ಬೆಂಗಳೂರಿಗೆ ಹೋಗುವವರಿದ್ದಾರೆ' ಎಂಬ ವಿಚಾರ ತಿಳಿದು, ಸಾವಿರಾರು ಮಂದಿ ರೈತರ ಜೊತೆ ಇಂಡುವಾಳು ಗ್ರಾಮದ ಹತ್ತಿರ ರಸ್ತೆಯಲ್ಲಿ ಕಾಯುತ್ತಾ ನಿಂತರು. ದಿವಾನರ ಕಾರು ಬಂದಕೂಡಲೇ ಅದನ್ನು ತಡೆದು ಗ್ರಾಮಸ್ಥರ ಅಹವಾಲನ್ನು ಮಿರ್ಜಾ ಅವರಿಗೆ ಅರ್ಪಿಸಿದರು. ಕಾರಿನಿಂದಲೇ ಬಾಗಿಲ ಗಾಜು ಸರಿಸಿ ನೋಡಿದ ಮಿರ್ಜಾ, ಹೊನ್ನಯ್ಯನವರ ವರ್ತನೆಗೆ ಕೋಪಗೊಳ್ಳಲಿಲ್ಲ. ಸ್ಥಳದಲ್ಲೇ ಪಿಕಪ್ ನಾಲಾ ವಿಚಾರ ಇತ್ಯರ್ಥ ಆಗಬೇಕೆಂದು ಹಿಡಿದ ಪಟ್ಟು ಬಿಡದ ಹೊನ್ನಯ್ಯನವರ ಮುಂದೆ ಮಣಿದರು. "ಅಸ್ತು" ಎಂದರು. ಅಂದಾದ ಆ ನಾಲೆ ಇಂದಿಗೂ ಕೂಡ ಇಂಡವಾಳಿನ 'ನೇಚರ್ ಪಾರ್ಕ್' ಹತ್ತಿರ 'ಹೊನ್ನೇಗೌಡ ಪಿಕಪ್ ನಾಲಾ ಎಂಬ ಹೆಸರಿನಿಂದ ಸಾವಿರಾರು ಎಕರೆಗೆ ನೀರುಣಿಸುತ್ತಿದೆ.

ಸಮಾಜ ಸೇವೆಯಲ್ಲಿ ತಮ್ಮ ಬದುಕಿನ ಸಾರ್ಥಕ್ಯ ಕಂಡುಕೊಳ್ಳಲು ಪ್ರಯತ್ನಿಸಿದ ಹೊನ್ನಯ್ಯನವರು, ಮೊದಲು ತಮ್ಮ ಗ್ರಾಮದ ಏಳಿಗೆಗೆ ನಿಂತರು. ಮದ್ರಾಸು ಕಣ್ಣಾನೂರು ಹೆದ್ದಾರಿ ಇಂಡುವಾಳು ಗ್ರಾಮದಿಂದ ದೂರದಲ್ಲಿ ಹೊರಗಿತ್ತು. ಆ ರಸ್ತೆ ತಮ್ಮ ಊರ ಸಮೀಪದಲ್ಲಿಯೇ ಹೋಗುವಂತೆ ಮಾಡಿದರು. ತಮ್ಮ ಗ್ರಾಮದ ಹತ್ತಿರ ವಿದ್ದ ಕೆಂಚಯ್ಯನ ಕೊಪ್ಪಲಿನ ಜನರಿಗೆ, ಇಂಡುವಾಳು ಗ್ರಾಮದ ರೈತರ ಮನ ಒಲಿಸಿ, ಕೊಪ್ಪಲ ಜನ ಇಂಡವಾಳು ಗ್ರಾಮದಲ್ಲಿ ನೆಲೆಸಲು ಗ್ರಾಮಸ್ಥರಿಂದ ನಿವೇಶನ ಕೊಡಿಸುವಲ್ಲಿ ಯಶಸ್ವಿಯಾದರು. ಈ ಒಂದು ಘಟನೆಯಿಂದ ಅವರ ಖ್ಯಾತಿ ಸುತ್ತ ಮುತ್ತಲ ಹಳ್ಳಿಗೆ ಹಬ್ಬಿತು.

ಅನಂತರ, ಹೊನ್ನಯ್ಯನವರು ಮಂಡ್ಯ ನಗರದಲ್ಲಿಯೂ ಇದ್ದ ತಮ್ಮ ಮನೆಗೆ ವಾಸಕ್ಕೆ ಬಂದರು. ರಾಜಕೀಯ 'ಓನಾಮ ಗೊತ್ತಿರದ ಹೊನ್ನಯ್ಯನವರಿಗೆ ಎನ್. ಎಸ್. ಸಿಂಗಲಾಚಾರ್ ಎಂಬುವರು ರಾಜಕೀಯ ಮಾರ್ಗದರ್ಶಿಯಾದರು. ಕಂಟ್ರಾಕ್ಟ್ ಕೆಲಸ ಮುಗಿದ ಬಿಡುವಿನ ವೇಳೆಯಲ್ಲಿ ಸಿಂಗಾಚಾರ್ ಅವರ ಜೊತೆ ಮಂಡ್ಯದ ರಾಜಕೀಯ ವಿದ್ಯಮಾನಗಳ ಚರ್ಚೆ. ಬರುಬರುತ್ತಾ ನಾಗರಿಕರ ಕುಂದು ಕೊರತೆಗಳ ಬಗ್ಗೆ ವಿಶೇಷ ಕಾಳಜಿ, ನಿಧಾನವಾಗಿ ರಾಜಕೀಯದತ್ತ ಒಲುವು. ಅಂದಿನ ರಾಜಕೀಯ ಹಿರಿಯ ನಾಯಕರ ಸಖ್ಯ. ಕಾಂಗ್ರೆಸ್ ಪಕ್ಷದ ಸದಸ್ಯರಾಗಿ ನೇರರಾಜಕೀಯ ಪ್ರವೇಶ.

ಈ ವೇಳೆಗೆ ಕೃಷ್ಣರಾಜ ಸಾಗರದಿಂದ ಬೇಸಾಯಕ್ಕೆ ನೀರು ಪೂರೈಸುವ ವಿಷಯ ದಲ್ಲಿ ಸರ್ಕಾರದವರು ರೈತರಿಗೆ ಕೆಲವೊಂದು ಕಟ್ಟುಪಾಡು ವಿಧಿಸಿದರು. 'ಬ್ಲಾಕ್

ಸಿಸ್ಟಂ' ನ ಅನುಸರಣೆ ಮತ್ತು ಒಂದೇ ಕಂತಿನಲ್ಲಿ "ಕಾಂಟ್ರಿಬ್ಯೂಷನ್" ಪಾವತಿ ಮಾಡಬೇಕು, ತಪ್ಪಿದರೆ ಬಡ್ಡಿ ತೆರಬೇಕು ಎಂಬ ನಿಯಮ. ಅದನ್ನು ರೈತ ಪ್ರಮುಖರು ವಿರೋಧಿಸಿದರು. ಹೊಳಲಿನ ಅಣ್ಣೇಗೌಡರು, ಗಾಣದಾಳಿನ ಶಿವಗೇಗೌಡರು. ಲಿಂಗೇಗೌಡರು, ಮಾಕನಹಳ್ಳಿ ಸಿದ್ದೇಗೌಡರು, ಜಿ. ದೇವಯ್ಯನವರು, ಕಂ. ಕೆಂಪೇ ಗೌಡರು, ಹೊಸಗಾನಹಳ್ಳಿ ಪುಟ್ಟಣ್ಣನವರು ಮತ್ತು ಹೊನ್ನಯ್ಯನವರು ಒಂದೆಡೆ ಕಲೆತು ಚರ್ಚಿಸಿದರು. ಇದರ ವಿರುದ್ಧ ಉಗ್ರ ಹೋರಾಟಕ್ಕೆ ಸಜ್ಜಾದರು. ಹೋರಾಟದ ಮುಂಚೂಣಿಯಲ್ಲಿ ಅಂದಿನ ಖ್ಯಾತ ರಾಜಕಾರಣಿ ಎಚ್. ಕೆ. ವೀರಣ್ಣಗೌಡರನ್ನು ಆಯ್ಕೆ ಮಾಡಿಕೊಂಡು, ಅವರು 'ನಾನು ಮಂಡ್ಯ ಜಿಲ್ಲೆಯವನಲ್ಲ' ಎಂದರೂ ಬಿಡದೆ ಒಪ್ಪಿಸಿ, ರೈತರ ಸಭೆಯನ್ನು ಪ್ರತಿ ಹಳ್ಳಿಯಲ್ಲೂ ಏರ್ಪಡಿಸಿ, ಸಮಸ್ಯೆಯ ಸ್ಪಷ್ಟ ಚಿತ್ರಣ ನೀಡಲು ಪ್ರಯತ್ನಿಸಿದರು.

ಸಭೆಯ ನಿಯೋಜನೆಗೆ ಕರಪತ್ರ ಮುದ್ರಿಸಿ ಪ್ರತಿ ಹಳ್ಳಿಗೆ ಹಂಚಬೇಕು. ನಾಯಕರುಗಳ ಓಡಾಟಕ್ಕೆ ಮತ್ತು ಇನ್ನಿತರ ಖರ್ಚುಗಳಿಗೆ ಹಣದ ಸಮಸ್ಯೆ ಎದುರಾಯಿತು. ಅಂದು ಮಂಡ್ಯಜಿಲ್ಲೆ ಆರ್ಥಿಕವಾಗಿ ಈಗಿನಂತಿರಲಿಲ್ಲ. ಮಲೇರಿಯಾ ಕಾರಣ ದಿಂದ ಮನೆ ತಪ್ಪದೆ ಜನ ಹಾಸಿಗೆ ಹಿಡಿದಿದ್ದ ಕಾಲ. ಅಂತಹ ಸಮಯದಲ್ಲಿ ರೈತರಿಂದ ಹಣವಸೂಲಿ ಮಾಡುವುದು ಸಾಧ್ಯವಾಗಲಾರದು ಎಂಬುದನ್ನು ಸೂಕ್ಷ್ಮವಾಗಿ ಅರಿತ ಹೊನ್ನಯ್ಯನವರ ಬಾಯಿಂದ ಮುತ್ತಿನಂತಹ ಮಾತುಗಳು ಬಂದವು. "ರೈತರು ಕಷ್ಟ ದಲ್ಲಿ ರೋವಾಗ ಅವರ ಹತ್ತಿರ ನಾವು ದುಡ್ಡು ಕೇಳೊದು ಬೇಡ. ಇವರಿಗೇನೋ ಸ್ವಾರ್ಥ ಇದೆ ಅಂತ ರೈತರು ತಪ್ಪಾಗಿ ತಿಳಿಯೋದೂ ಬೇಡ. ಊರಿನಲ್ಲಿ ಮನೆ ಕಟ್ಟಿಸಬೇಕು ಅಂತ ಸ್ವಲ್ಪ ಹಣ ಇಟ್ಟಿದ್ದೀನಿ. ಅದನ್ನೇ ಖರ್ಚುಮಾಡಿ ರೈತ ಸಂಘಟನೆ ಮಾಡೋಣ" ಎಂದು ಹಣದ ಗಂಟನ್ನು ಮುಖ್ಯರಿಗೆ ನೀಡಿ ಕಾರ್ಯೋನ್ಮುಖ ರಾಗಲು ಹೇಳಿ, ರೈತಾಪಿ ವರ್ಗದವರ ಮೇಲೆ ತಮಗಿದ್ದ ಅಪಾರ ಕಾಳಜಿಯನ್ನು ಪ್ರಕಟ ಪಡಿಸಿದರು. ಕೇವಲ ಈ ಸಂದರ್ಭ ಮಾತ್ರವಲ್ಲ. ಮುಂದೆ ಕೂಡ ತಮ್ಮ ಮನೆಯ ಹಣ ಖರ್ಚು ಮಾಡಿಕೊಂಡು ಜನಸೇವೆ ಮಾಡಿದ ವ್ಯಕ್ತಿ. ರೈತರ ಕಷ್ಟ ನಿಷ್ಠುರಗಳ ಬಗ್ಗೆ ಕಿಂಚಿತ್ತೂ ಆಲೋಚನೆ ಮಾಡದೆ, ಉದ್ಧಾರ ಮಾಡುವ ನೆಪದಲ್ಲಿ. ಅವರನ್ನು ಶೋಷಣೆ ಮಾಡುತ್ತಾ, ಕತ್ತಲೆಯ ಕೂಪಕ್ಕೆ ತಳ್ಳುತ್ತಾ, ತಾವು ರಾಜಕೀಯ ವಾಗಿ ಮೇಲೇರಲು ಪ್ರಯತ್ನಿಸುತ್ತಾ ಬರುತ್ತಿರುವ ನಮ್ಮ ಇಂದಿನ ಬಹುತೇಕ ರೈತ ನಾಯಕರಿಗೆ ಹೊನ್ನಯ್ಯನವರ ಜೀವಿತ ಆದರ್ಶವಾಗಬೇಕು.

ಹಳ್ಳಿ ಹಳ್ಳಿಗೆ ಪಾದಯಾತ್ರೆ ಹೊರಟರು. ಕೇವಲ ಒಬ್ಬಿಬ್ಬರು ದಿವಾನರನ್ನು ನೋಡಿದರೆ ಏನೇನೂ ಪ್ರಯೋಜನವಾಗದು, ರೈತರ ಬೃಹತ್ ಜಾಥಾವೇ ಹೊರಡ ಬೇಕು ಎನ್ನುವುದು ಹೊನ್ನಯ್ಯನವರ ಮತ್ತು ಪುಟ್ಟಣ್ಣನವರ ಆಶಯ. ಊರೂರು ತಿರುಗಿ ರೈತರ ಮನ ಒಲಿಸಿದರು, ನಾಲ್ಕು ಸಾವಿರ ಮಂದಿ ರೈತರ ಗುಂಪು ಬೆಂಗಳೂರಿಗೆ

ಜಾಥಾ ಹೊರಟಿತು. ಅವರೆಲ್ಲರ ಊಟೋಪಚಾರದ ಖರ್ಚು ಹೊನ್ನಯ್ಯನವರದೆಂದು ಬೇರೆ ಹೇಳಬೇಕಿಲ್ಲ. 1937ನೇ ಇಸವಿ ಜನವರಿ 4ನೇ ದಿನಾಂಕದ ಮಧ್ಯಾಹ್ನ 2 ಘಂಟೆಗೆ ಬೆಂಗಳೂರಿನ ಅಠಾರ ಕಛೇರಿಯ ಹತ್ತಿರ ದಿವಾನರನ್ನು ಭೇಟಿ ಮಾಡಿದರು 'ಪರಿಶೀಲನೆ ಮಾಡುತ್ತೇವೆ' ಎಂದ ದಿವಾನರ ಮಾತಿಗೆ, ಸ್ಥಳದಲ್ಲೇ ರೈತರ ಸಮಸ್ಯೆ ಇತ್ಯರ್ಥವಾಗಬೇಕೆಂಬುದು ಹೊನ್ನಯ್ಯನವರ ಪಟ್ಟು, ದಿವಾನರು ಮಣಿದರು. ಈ ಹಿಂದೆಯೇ ಅವರನ್ನು ಮುಖಾಮುಖಿ ಸಂಧಿಸಿದ್ದ ದಿವಾನರಿಗೆ ಅವರ ವ್ಯಕ್ತಿತ್ವ ಹಿಡಿಸಿತ್ತು. ಮುಂದೆ ಬೆಂಗಳೂರಿನಿಂದ ಮೈಸೂರಿಗೆ ಹೋಗುವ ಸಮಯ ಬಂದಾಗ ಲ್ಲೆಲ್ಲಾ ಮಿರ್ಜಾ ಅವರು ಇಂಡುವಾಳು ಗ್ರಾಮದಲ್ಲಿ ಹೊನ್ನಯ್ಯನವರನ್ನು ಕಂಡು ಮಾತ ನಾಡಿಸಿ ಹೋಗುವಷ್ಟು ಆತ್ಮೀಯತೆ ಬೆಳೆಸಿಕೊಂಡರು. ಈ ಘಟನೆಯ ನಂತರ ಹೊನ್ನಯ್ಯನವರನ್ನು "ಏನಯ್ಯಾ ಸಿಂಹ" ಎಂದೇ ಕರೆಯುತ್ತಿದ್ದರಂತೆ ಮಿರ್ಜಾ ರೈತರ ರ್‍ಯಾಲಿ ಹೊನ್ನಯ್ಯನವರ ಜೀವನದಲ್ಲಿ ಒಂದು ಮೈಲಿಗಲ್ಲು.

ಈ ಮೊದಲು ಕಾಂಗ್ರೆಸ್ ನಿಷ್ಠಾವಂತರಾಗಿದ್ದ ಹೊನ್ನಯ್ಯನವರು 1938 ರ ಏಪ್ರಿಲ್‌ನಲ್ಲಿ ನಡೆದ ಶಿವಪುರದ ಧ್ವಜ ಸತ್ಯಾಗ್ರಹದಲ್ಲಿಯೂ ಭಾಗವಹಿಸಿದ್ದರು. ಮಂಡ್ಯದ ಅವರ ಮನೆಯ ಮುಂದೆ ಯಾವಾಗಲೂ ತ್ರಿವರ್ಣಧ್ವಜ ಹಾರಾಡುತ್ತಿತ್ತು. ಕಾಂಗ್ರೆಸ್ ಸ್ವಯಂ ಸೇವಕರಿಗೆ ನಿತ್ಯ ವರ ಮನೆಯಲ್ಲಿ ದಾಸೋಹ ನಡೆಯುತಿತ್ತು.

ದಿವಾನರ ಸ್ನೇಹ ನಿಕಟವಾದಂತೆ ಇವರ ರಾಜಕೀಯ ಚಟುವಟಿಕೆಗಳೂ ಬದಲಾದವು. ಆಳುವ ವ್ಯಕ್ತಿಗಳ ಕಡೆ ಸೇರಿದರೆ ಅಭಿವೃದ್ಧಿ ಕಾರ್ಯಗಳು ಸಲೀಸೆಂದು ಭಾವಿಸಿದರೋ ಏನೋ ? ಗಾಂಧಿ ಟೋಪಿ ತೆಗೆದು, ಕಾಂಗ್ರೆಸ್‌ನಿಂದ ದೂರಸರಿದರು. ಜೊತೆಗೆ 1940ನೇ ಇಸವಿಯಲ್ಲಿ ನಡೆದ ನ್ಯಾಯ ವಿಧಾಯಕ ಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರ ಕಂಡ ಹಳ್ಳಿಯ ಎಂ. ಕೃಷ್ಣಪ್ಪಗೌಡರ ವಿರುದ್ಧ ಸ್ಪರ್ಧಿಸಿ ಸೋತರು. ಕಾಂಗ್ರೆಸ್ ವಿರೋಧಿ ಎನಿಸಿಕೊಂಡರು. ಆದರೂ ಇವರ ವಿರುದ್ಧ ಕೆಲಸ ಮಾಡಿ ಬರುತ್ತಿದ್ದ, ಕಾಂಗ್ರೆಸ್ ಕಾರ್ಯಕರ್ತರಿಗೆ ಅವರ ಮನೆಯ ಊಟವನ್ನು ತಪ್ಪಿಸಿದವರಲ್ಲ. ಯಾವುದೇ ದ್ವೇಷಾಸೂಯೆಗಳಿಂದ ದೂರವಿದ್ದ ಹೊನ್ನಯ್ಯನವರಿಗೆ, ರಾಜಕೀಯವೆಂಬುದು ಕೇವಲ 'ಹವ್ಯಾಸವಾಗಿತ್ತೇ ಹೊರತು 'ವೃತ್ತಿ'ಯಾಗಿರಲಿಲ್ಲ.

ಆಗರ್ಭ. ಶ್ರೀಮಂತರಾಗಿದ್ದ ಹೊನ್ನಯ್ಯನವರಿಗೆ 'ರಾಜಕೀಯ ಮಾಡಿ ಯಾವುದೇ ಸಂಪತ್ತುಗಳಿಸುವ ಮನವಿರಲಿಲ್ಲ' ಎಂಬುದು ಅವರನ್ನು ಹತ್ತಿರದಿಂದ ಬಲ್ಲ ಎಲ್ಲರೂ ತಿಳಿದುಕೊಂಡಿರುವ ವಿಷಯ. ಅವರು ಪಕ್ಷ ಬದಲಾಯಿಸಲು ಕಾರಣ ಮಿರ್ಜಾ ಅವರಿಂದ ಬಂದ ಪ್ರಲೋಭನೆ. ಇಂಡುವಾಳು ಗ್ರಾಮವನ್ನು 'ಮಾದರಿ ಗ್ರಾಮ' ಮಾಡಲು ಯಾವ ರೀತಿಯ ಸಹಕಾರ ಬೇಕೋ ಅದನ್ನು ಒದಗಿಸುತ್ತೇನೆಂದು ಅವರಿಂದ ಆಶ್ವಾಸನೆ ಬರಲಾಗಿ, ಗ್ರಾಮದ ಏಳಿಗೆಗೋಸ್ಕರ ಪಕ್ಷ ಮರೆತು ಅವರ ಮಾತಿಗೆ ಮನ್ನಣೆ ಇತ್ತರು ಇದರ ಫಲ ಗ್ರಾಮದಲ್ಲಿ 'ಸಹಕಾರ ಸಂಘ'ದ ಸ್ಥಾಪನೆ,

ಶಾಲೆಯ ಆರಂಭ. ಹಲವಾರು ಕುಡಿಯುವ ನೀರಿನ ಭಾವಿಗಳ ನಿರ್ಮಾಣ. ಪ್ರತಿ ಮನೆಯ ಮುಂದೆ ತೆಂಗಿನ ಸಸಿ–ಸರ್ಕಾರದ ವತಿಯಿಂದ.

ಇದೇ ವೇಳೆಗೆ 1939ನೇ ಇಸವಿ ಡಿಸೆಂಬರ್ ತಿಂಗಳಿನಲ್ಲಿ ಮೈಸೂರು ಸಂಸ್ಥಾನಕ್ಕೆ ಸೇರಿದ್ದ ಮಂಡ್ಯಭಾಗದ ಕೆಲವು ತಾಲ್ಲೂಕುಗಳನ್ನು ಒಳಗೊಂಡಂತೆ ಪ್ರತ್ಯೇಕ ಜಿಲ್ಲೆಯಾಯಿತು. ಇದೇ ವೇಳೆಗೆ ಇಂದಿನ ಹಿರಿಯ ರಾಜಕೀಯ ವ್ಯಕ್ತಿ ಕೆ. ವಿ. ಶಂಕರಗೌಡರು, ಕಾನೂನು ಪದವಿ ಪಡೆದು ಮಂಡ್ಯ ನಗರಕ್ಕೆ ಬಂದರು. ಇಲ್ಲಿಂದ ಮನೆತನದ ರಾಜಕೀಯಕ್ಕೆ ಸ್ವಲ್ಪ ತೆರೆ ಬಿತ್ತು. ಶಂಕರಗೌಡರು ಯುವಕರ ತಂಡ ಕಟ್ಟಿಕೊಂಡು ರಚನಾತ್ಮಕ ಕಾರ್ಯಗಳತ್ತ ಗಮನ ಹರಿಸುತ್ತಾ ಬಂದರು. ಕಬ್ಬು ಬೆಳೆಯುತ್ತಿದ್ದ ರೈತರಿಗೆ ಸರಿಯಾದ ಬೆಲೆ ದೊರೆಯುತ್ತಿರಲಿಲ್ಲ. (ಈಗಲೂ ಈ ಹಿಂಸೆ ಇದ್ದದ್ದೇ) ಕಬ್ಬು ಬೆಳೆಗಾರರ ನಾಲ್ಕೈದು ಸಂಘಗಳು ಬೇರೆ ಬೇರೆಯವರ ಅಧ್ಯಕ್ಷತೆಯಲ್ಲಿ ಜರುಗಿದರೂ ಯಾವೊಂದು ಸಂಘವೂ ನೇರ ಕಾರ್ಯರೂಪಕ್ಕೆ ಇಳಿದು ರೈತರ ಪರ ಬರಲಿಲ್ಲ. ಇದೇ ವೇಳೆಗೆ ಸೆರೆವಾಸ (ಧ್ವಜ ಸತ್ಯಾಗ್ರಹ ಸಂಬಂಧ) ಅನುಭವಿಸಿ ಹೊರಬಂದ ರೈತ ನಾಯಕ ಹೊನ್ನಯ್ಯನವರನ್ನು ಶಂಕರಗೌಡರು ತಮ್ಮ ಸ್ವಗ್ರಾಮವಾದ ಕೀಲಾರಕ್ಕೆ ಕರೆಸಿ ಮೆರವಣಿಗೆ ಮಾಡಿಸಿದರು. ಹೊನ್ನಯ್ಯನವರನ್ನು ಸೇರಿಸಿಕೊಂಡು 'ಇರ್‌ವಿನ್ ನಾಲಾ ರೈತ ಸಂಘ' ಸಂಘಟಿಸಿ, ಕಬ್ಬಿಗೆ ನ್ಯಾಯ ಬೆಲೆ ಕೊಡಿಸಿ ರೈತರ ಮತ್ತು ದನಗಳ ವಿಶ್ರಾಂತಿಗೆ ತಕ್ಕ ಏರ್ಪಾಡು ಮಾಡುವಲ್ಲಿ ಶ್ರಮಿಸಿದರು. ಜೈಲಿನಲ್ಲಿದ್ದು ಹಿಂಸೆ ಅನುಭವಿಸಿದ ಈ ಶ್ರೀಮಂತಪುತ್ರ ಹೊನ್ನಯ್ಯನವರ ಬಗ್ಗೆ, ಶಂಕರಗೌಡರ ಅಭಿಮಾನ–ಬಹಳ.

ಇಲ್ಲಿಂದ ಮುಂದೆ ಹೊನ್ನಯ್ಯನವರು ರಾಜಕೀಯವಾಗಿ ಹಿಂದೆ ತಿರುಗಿ ನೋಡುವ ಪರಿಸ್ಥಿತಿ ಬರಲಿಲ್ಲ. ರಾಜಕೀಯ ನಾಯಕರಿಗೆ ಇವರ ನಿಷ್ಠೆ, ತ್ಯಾಗ, ಮತ್ತು ಕಾರ್ಯದಕ್ಷತೆಯ ಅರಿವಿತ್ತು. ಆ ವೇಳೆಗೆ ಸ್ಥಳೀಯ ಸಂಸ್ಥೆಗಳ ಸುಧಾರಣೆ ಬಂತು. ನಗರ ಮತ್ತು ಪುರಸಭೆಗಳ ಅಧ್ಯಕ್ಷರು ಚುನಾಯಿತ ಸದಸ್ಯರಿರಬೇಕೆಂಬ ನಿಯಮದಂತೆ ಮಂಡ್ಯ ನಗರ ಸಭೆಯ ಪ್ರಥಮ ಚುನಾಯಿತ ಅಧ್ಯಕ್ಷರಾಗಿ ಹೊನ್ನಯ್ಯನವರು ಆರಿಸಿ ಬಂದರು. ಇಂತಹ ಮಹತ್ವದ ಪದವಿ ದೊರೆತಿದ್ದರೂ ಅವರು ಎಂದಿಗೂ ಪಕ್ಷಪಾತಿ ಯಾಗಲಿಲ್ಲ. ಮಂಡ್ಯ ನಗರದ ಅನೇಕ ಮುಖಂಡರೆಲ್ಲ ಅವರ ರಕ್ತ ಸಂಬಂಧಿಕರೇ ಆಗಿದ್ದರೂ ಅವರಿಗೆ ನಿವೇಶನ ನೀಡಿದವರಲ್ಲ. ಕೇವಲ ಎರಡು ರೂಪಾಯಿಗಳಿಗೆ ನಗರದ ಆಯಕಟ್ಟಿನ ನಿವೇಶನಗಳನ್ನು ಬಡವರಿಗೆ ನೀಡಿದ್ದಾರೆ. ಅವರ ಕಾಲದಲ್ಲಿ ನಡೆದಷ್ಟು ಜನೋಪಯೋಗಿ ಕಾರ್ಯಗಳು ಇಂದಿಗೂ ನಡೆದಿಲ್ಲ. ಅಂದು ಅವರು ಮನಸ್ಸು ಮಾಡಿದ್ದರೆ ನಗರದ ಶೇಕಡಾ 50 ರಷ್ಟು ನಿವೇಶನಗಳು ಅವರ ಸಂಬಂಧಿಕರವೇ ಆಗುತ್ತಿದ್ದವು. ಆದರೆ, ಸಿರಿವಂತ ಮನೆತನದಲ್ಲಿ ಜನಿಸಿ ಬಂದರೂ ತನ್ನ ಸುತ್ತ ಮುತ್ತಲಿದ್ದ ಬಡವರ ಕಷ್ಟಗಳನ್ನು ನಿತ್ಯ ನೋಡುತ್ತಲಿದ್ದವರು.

ಇವರ ಹೋರಾಟದ ಮತ್ತೊಂದು ಫಲವೆಂದರೆ ; "ರೈತರ ವಿವಿದೋದ್ದೇಶ ಮಾರಾಟ ಸಹಕಾರ ಸಂಘ ? ಅಂದು ಕಂಟ್ರೋಲ್ ಕಾಲ. ಅಗತ್ಯ ವಸ್ತುಗಳು ಸಲೀಸಾಗಿ ಸಿಗುತ್ತಿರಲಿಲ್ಲ. ಅಂತಹ ವಸ್ತುಗಳ ಕೊಳ್ಳುವಿಕೆಗಾಗಿ, ಪೇಟೆ ಬೀದಿಯ ಅಂಗಡಿಯೊಂದರ ಮುಂದೆ ಹಳ್ಳಿಯ ಮಂದಿ ಬೆಳಗಿನ ಜಾವ ನಾಲ್ಕು ಘಂಟೆಯಿಂದಲೇ ಕಾಯುವಂಥ ಪರಿಸ್ಥಿತಿ ಇತ್ತು. ಇದಕ್ಕೆ ಸೂಕ್ತ ಪರಿಹಾರ ಕಂಡುಹಿಡಿಯಲು ಶಂಕರಗೌಡರ ಜೊತೆ ಚರ್ಚೆ ನಡೆಸಿದರು. ಇಡೀ ಮಂಡ್ಯ ತಾಲ್ಲೂಕಿನ ಹಳ್ಳಿ ಹಳ್ಳಿಯನ್ನು ಗೌಡರಜೊತೆಸೇರಿ ಸುತ್ತಿದ್ದರು. ಪ್ರತಿಯೊಬ್ಬರಿಂದ ಹತ್ತು ರೂಪಾಯಿ ಷೇರು ಧನ ಸಂಗ್ರಹಿಸಿದರು. ಅಂದು 75 ಸಾವಿರ ರೂಪಾಯಿಗಳಿಂದ ಆರಂಭವಾದ ರೈತರ ಸೊಸೈಟಿ ಇಂದು 5 ಕೋಟಿಗೂ ಮೀರಿ ಆಸ್ತಿ ಪಾಸ್ತಿಯನ್ನು ಹೊಂದಿದೆ. ಅಂದು ಅವರು ಹಾಕಿದ ಸಸಿ ಇಂದು ಬೃಹತ್ ಹೆಮ್ಮರವಾಗಿ ಬೆಳೆದು ಇಡೀ ಇಂಡಿಯಾ ದೇಶದಲ್ಲಿ ಒಂದು ಮಾದರಿ ಸಹಕಾರ ಸಂಘ ಎಂಬ ಕೀರ್ತಿಗೆ ಭಾಜನವಾಗಿದೆ. ಈ ಮಟ್ಟಕ್ಕೆ ಬರಲು, ಅಂದು ಸೊಸೈಟಿಯ ಪ್ರಥಮ ಅಧ್ಯಕ್ಷರಾಗಿದ್ದ ಹೊನ್ನಯ್ಯನವರ ಸೇವೆ ಅಪಾರ, ಅನುಪಮ.

ಮಂಡ್ಯ ನೀರಾವರಿ ಪ್ರದೇಶವಾಗಿ ಬೆಳೆಯಲು ಹೊನ್ನಯ್ಯನವರು ಬಹಳ ಶ್ರಮಿಸಿದರು. ಅವರ ಕೀರ್ತಿ ಚಿರಕಾಲ ಉಳಿಯಲು ರೈತರ ಸೊಸೈಟಿ ಒಂದೇ ಸಾಕು. "ಮಿರ್ಜಾ ಅವರ ಪ್ರಲೋಭನೆಗೆ ಒಳಗಾಗಿ ಕಾಂಗ್ರೆಸ್ ತೊರೆದು ಮಹಾರಾಜರ ಪರ ಸೇರಿದರು" ಎಂಬ ಆರೋಪ ಇದ್ದರೂ, ವರ್ಷ ಒಂದಕ್ಕೆ ನಾಲ್ಕಾರು ರಾಜಕೀಯ ಪಕ್ಷಗಳನ್ನು ಸ್ವಾರ್ಥ ಪ್ರೇರಿತರಾಗಿ ಬದಲಾಯಿಸುತ್ತಿರುವ, ನಮ್ಮ ಇಂದಿನ 'ಲಫಂಗ.' ರಾಜಕಾರಣಿಗಳಿಗಿಂತ ಹೊನ್ನಯ್ಯನವರು ಎಷ್ಟೋ ಮೇಲು.

ಮೃದು ಹೃದಯಿಗಳಾಗಿದ್ದ ಹೊನ್ನಯ್ಯನವರು ಕಷ್ಟದಲಿರುವವರನ್ನು ಕಂಡರೆ ಎಂಥ ಹಿರಿಯ ತ್ಯಾಗಕ್ಕೂ ಮುಂದಾಗುತ್ತಿದ್ದ ವ್ಯಕ್ತಿ. ತಮ್ಮ ಪರಿಚಿತ ಬಡವನೊಬ್ಬನ ಮಗಳ ಮದುವೆಗೆಂದು ಹೊನ್ನಯ್ಯನವರು ಹೋಗಿದ್ದಾಗ ಅಳಿಯನಿಗೆ ಉಂಗುರ ನೀಡುವುದಾಗಿ ಆ ಬಡವ ವಾಗ್ದಾನ ಮಾಡಿದ್ದು ಅನಿವಾರ್ಯ ತೊಂದರೆಗಳ ಕಾರಣದಿಂದ 'ಮುಂದೆ ಮಾಡಿಸಿ ಕೊಡುವೆ' ಎಂದು ಹೇಳಿದರೂ ಗಂಡು ಕೇಳಲಿಲ್ಲವಂತೆ. ಹೊನ್ನಯ್ಯನವರು ನೇರ ಬಂದವರೇ, ಅವನ ಮುಖಕ್ಕೆ ಉಗಿದು ತಮ್ಮ ಬೆರಳಲ್ಲಿದ್ದ ಎರಡು ತೊಲದ ಚಿನ್ನದ ಉಂಗುರವನ್ನು ತೆಗೆದು ಅವನಿಗೆ ನೀಡಿದರಂತೆ. ಇಂತಹ ಹಲವಾರು ನಿದರ್ಶನಗಳು ಅವರ ಬಗ್ಗೆ ಇವೆ.

ಹೊನ್ನಯ್ಯನವರು ಸದಾ ಸ್ಮಿತ ವದನಿ. ಆಗಬೇಕಾದ ಕೆಲಸಗಳಿಗೆ ಮೀನ ಮೇಷ ಎಣಿಸುತ್ತಿದ್ದವರಲ್ಲ, ತುಂಬಾ ಸಹನೆಯಿಂದ ಜನರ ಕಷ್ಟ, ಸುಖ ವಿಚಾರಿಸುತ್ತಿದ್ದರು. ಆದರೂ ಕೋಪ ಬಂದರೆ ಎಂಥಹ 'ಉಗ್ರವಾತಾರಿಗಳು' ಎಂಬುದಕ್ಕೆ ಒಂದು ಉದಾಹರಣೆ ಮೈಸೂರಿನ ದೊರೆಗಳಾದ ಕೃಷ್ಣರಾಜ ಒಡೆಯರು

ನಿಧನರಾದಾಗ, ಮಂಡ್ಯ ನಗರ ಬಸ್ ನಿಲ್ದಾಣದಲ್ಲಿ ಅನ್ನ ಸಂತರ್ಪಣೆ ನಡೆಸುವ ಏರ್ಪಾಡಾಗಿ ಅದರ ಜವಾಬ್ದಾರಿ ಹೊನ್ನಯ್ಯನವರ ಮೇಲೆ ಬಿದ್ದಿತ್ತು. ಜಿಲ್ಲಾ ಅಧಿಕಾರಿಗಳು ಮೇಲುಸ್ತುವಾರಿಕೆ. ಊಟ ಮಾಡುತ್ತಿದ್ದ ಜನರ ಸಾಲಿನೊಳಗೆ ಬೂಟು ಸಮೇತ ಬಂದಾಗ ಹೊನ್ನಯ್ಯನವರು 'ಬೂಟು ಕಳಚಿ ಬನ್ನಿ' ಅಂದರಂತೆ. ಜಿಲ್ಲಾಧಿಕಾರಿಗಳು ವ್ಯಘ್ರರಾಗಿ ಉಡಾಫೆತನದ ಮಾತನಾಡಿದರು. ಸಿಟ್ಟಿಗೆದ್ದ ಹೊನ್ನಯ್ಯನವರು ಜಿಲ್ಲಾಧಿಕಾರಿ ಎಂಬ ಪರಿವೇ ಇಲ್ಲದೆ ಕುತ್ತಿಗೆ ಹಿಡಿದು ಆಚೆ ನೂಕಿದರಂತೆ. ನೊಂದ ಜನರ ಬಗ್ಗೆ ವಿಪರೀತ ಕಾಳಜಿ ಇದ್ದರೂ ಖಂಡಿತವಾದಿ ಮತ್ತು ತತ್ತ್ವನಿಷ್ಠ. ಅದೇ ಜಿಲ್ಲಾಧಿಕಾರಿ ಮುಂದೆ ಅವರಿಗೆ ಬೆಳ್ಳಿಯ ಲೋಟ ಬಹುಮಾನ ನೀಡಿದರಂತೆ.

ಅಂದಿನ ದಿನಗಳಲ್ಲಿ ಹೊನ್ನಯ್ಯನವರಿಗೆ ಯಾವ ರಾಜಕೀಯ ವಿರೋಧಿಗಳೂ ಇಲ್ಲದಿದ್ದದೂ ಒಂದು ಮುಖ್ಯಅಂಶ. ಕೊನೆಯುವರೆಗೂ ಸಮಾಜ ಸೇವೆಗೆ ನಿಂತುದರಿಂದ ಮನೆಯ ಕಡೆ ಸ್ವಲ್ಪ ತಾತ್ಸಾರ ತೋರಿದರೆಂದೇ ಹೇಳಬಹುದು. ತಾವು ನಿರ್ವಹಿಸುತ್ತಿದ್ದ ಕಂಟ್ರಾಕ್ಟ್ ಕೆಲಸವನ್ನು ಕೊನೆಯುವರೆಗೂ ಬಿಡಲಿಲ್ಲ. ಒಮ್ಮೆ ಆಳುಗಳ ಮೇಲೆ ನಿಂತು ಕೆಲಸ ಮಾಡಿಸುತ್ತಿದ್ದಾಗ ಎದೆ ನೋವೆಂದು ಮಲಗಿದವರು ಮತ್ತೆ ಚೇತರಿಸಿಕೊಳ್ಳಲೇ ಇಲ್ಲ. ಮಂಡ್ಯದ ಜನರಲ್ ಆಸ್ಪತ್ರೆಯಲ್ಲಿ 17-9-1954 ರಂದು ಇಹಲೋಕದ ವ್ಯಾಪಾರ ಮುಗಿಸಿದರು.

ತಮ್ಮ ಬದುಕಿನ ಕೊನೆಯ ಗಳಿಗೆಯವರೆಗೂ ರೈತರ, ಬಡವರ ಏಳಿಗೆಗಾಗಿ ಶ್ರಮಿಸಿದ ಹೊನ್ನಯ್ಯನವರ ಜೀವಿತ ಒಂದು ಅಮರ ಗಾಥೆ. ಸ್ವಾತಂತ್ರ್ಯದ ನಂತರ ಜನಿಸಿರುವ ನಮಗೆ ಸ್ವಾತಂತ್ರ್ಯದ ಅರಿವು ಅಷ್ಟಾಗಿ ಇರಲಾರದು. ಆದರೆ ನಮ್ಮಗಳ ಜೀವನ ಹಸನು ಮಾಡಲು ನಿರಂತರವಾಗಿ ಶ್ರಮಿಸಿದ ಹೊನ್ನಯ್ಯನವರ ಬದುಕು ನಮಗೆ ಸ್ಫೂರ್ತಿ ನೀಡಬೇಕು, ಇಂಥ ಮಹಿಮಾವಂತರು ಜನ್ಮವೆತ್ತಿದ ನೆಲದಲ್ಲಿ "ನಾವೂ ಕೂಡ ಜನಿಸಿದ್ದೇವಲ್ಲ" ಎಂಬುದೇ ಹೆಗ್ಗಳಿಕೆಯ ಅಂಶ. ಇಂಥ ನೂರಾರು ನಾಯಕರು ಈ ನಾಡ ಮಣ್ಣಿಂದ 'ಉದಿಸಿ ಬರಲಿ' ಎಂಬುದೇ ನಮ್ಮ ಪ್ರಾರ್ಥನೆ, ನಿರಂತರ ಬಯಕೆ.

ಎಚ್. ಎಸ್. ಮುದ್ದೇಗೌಡ

ಈ ಸಂಪುಟದ ಲೇಖಕರು

ಹ. ಕ. ರಾಜೇಗೌಡ	ನಂ. 390 ಚೇತನ 80 ಅಡಿ ರಸ್ತೆ ಕುವೆಂಪು ನಗರ ಮೈಸೂರು
ಕೆ. ವಿ. ಶಂಕರ ಗೌಡ	ಲೋಕ ಸಭಾ ಸದಸ್ಯರು ಎ.ಜಿ. ಬಂದೀ ಗೌಡ ಬಡಾವಣೆ ಮಂಡ್ಯ
ಡಾ. ದೇ. ಜವರೇಗೌಡ	ವಿಶ್ರಾಂತ ಕುಲಪತಿ ಮೈಸೂರು ವಿಶ್ವ ವಿದ್ಯಾನಿಲಯಂ ಕಲಾನಿಲಯ ಜಯಲಕ್ಷ್ಮೀ ಪುರಂ ಮೈಸೂರು
ಡಾ. ಹಾ. ಮಾ. ನಾಯಕ	ವಿಶ್ರಾಂತ ಕುಲಪತಿ ಗುಲ್ಬರ್ಗಾ ವಿಶ್ವ ವಿದ್ಯಾನಿಲಯ ಪ್ರಾಧ್ಯಾಪಕರು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು
ಜಿ. ಮಾದೇಗೌಡ	ಶಾಸಕರು ಕಿರುಗಾವಲ ಕ್ಷೇತ್ರ ಎ. ಜಿ. ಬಂದೀಗೌಡ ಬಡಾವಣೆ ಮಂಡ್ಯ
ಪಿ. ಎನ್. ಜವರಪ್ಪಗೌಡ	ಪತ್ರಿಕೋದ್ಯಮಿ ಸುಭಾಷ್ ನಗರ ಮಂಡ್ಯ
ಡಾ. ಜೀ. ಶಂ. ಪರಮಶಿವಯ್ಯ	ನಿರ್ದೇಶಕರು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ ಮೈಸೂರು-570006
ಎಂ. ಆರ್. ಎನ್. ಶಾಸ್ತ್ರೀ	ಸ್ವಾತಂತ್ರ್ಯ ಹೋರಾಟಗಾರರು ನಾಗ ಮಂಗಲ
ಕೆ. ಎಸ್. ಗೀತಾ	ಪ್ರಿಯದರ್ಶಿನಿ 3ನೇ ಮೇನ್ ಗಂಗೇನಹಳ್ಳಿ ಬೆಂಗಳೂರು
ಕೆ. ಯಸ್. ಮಂಜುಳ	ಕೆ.ಆರ್. ರಸ್ತೆ ಸುಭಾಷ್‌ನಗರ ಮಂಡ್ಯ
ಸರಸ್ವತಿ	ಕರಡಹಳ್ಳಿ ನಾಗಮಂಗಲ ತಾಲ್ಲೂಕು

ಎಚ್. ಎಲ್. ನಾಗೇಗೌಡ	ವಿಶ್ರಾಂತ ಲೋಕಸೇವಾ ಸದಸ್ಯರು ನಂ. 8 ಶ್ರೀಪಾದನಿಲಯ ದೇವಸ್ಥಾನ ರಸ್ತೆ ಕುಮಾರ ಕೃಪ ಪಶ್ಚಿಮ ಬೆಂಗಳೂರು.
ಎಂ. ವಿ. ವೆಂಕಟಪ್ಪ	ಮಾಜಿ ವಿಧಾನಪರಿಷತ್ ಸದಸ್ಯರು ಮಳವಳ್ಳಿ
ಬೈ. ಗೋ ರಮೇಶ್	1363, 5ನೇ ಮೇನ್, ಈ ಬ್ಲಾಕ್ ಎರಡನೆ ಹಂತ ರಾಜಾಜಿನಗರ ಬೆಂಗಳೂರು
ಕೆ. ಟಿ. ಚಂದು	ಮಾಜಿ ಪುರಸಭಾಧ್ಯಕ್ಷರು ಮದ್ದೂರು
ಬಿ. ಸೋಮಶೇಖರ್	ಮಾಜಿ ಶಿಕ್ಷಣ ಸಚಿವರು ಪ್ರಾಥಮಿಕ ಶಿಕ್ಷಣ ಮಳವಳ್ಳಿ
ಬಿ. ಜಯಪ್ರಕಾಶಗೌಡ	ಪ್ರಿನ್ಸಿಪಾಲರು ಜನತಾ ಸಂಜೆ ಕಾಲೇಜು ಮಂಡ್ಯ
ಕೌಡ್ಲೆ ಚನ್ನಪ್ಪ	ಸಂಪಾದಕರು ದೇಶಹಿತ ಪತ್ರಿಕೆ ಮಂಡ್ಯ
ಜಿ. ರಂಗಸ್ವಾಮಯ್ಯ	ವಿಶ್ರಾಂತ ಪ್ರಾಧ್ಯಾಪಕರು ಸರಸ್ವತೀಪುರಂ ಮೈಸೂರು
ಸೀತಾರಾಮರಾಮ ಜಾಗೀರ್‌ದಾರ್	ಶಾಸನ ಸಂಶೋಧಕರು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು–
ಡಿ. ಎಸ್. ಜಯಪ್ಪಗೌಡ	ಭಾಷಾಂತರಕಾರರು. ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ ಮೈಸೂರು
ಕೆ. ಜಿ. ನಾರಾಯಣ ಪ್ರಸಾದ್	ಕನ್ನಡ ಅಧ್ಯಾಪಕರು ಉಸ್ಮಾನಿಯಾ ವಿಶ ವಿದ್ಯಾನಿಲಯ ಹೈದರಾಬಾದು ಆಂಧ್ರ ಪ್ರದೇಶ.
ಎಚ್. ಎಂ. ನಾಗರಾಜರಾವ್	ಶಾಸನ ಸಂಶೋಧಕರು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು
ಕೃಷ್ಣವೇಣಿ	ಶಾಸನ ಸಂಶೋಧಕರು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು

ಜಿ. ಜಿ. ಮಂಜುನಾಥನ್	'ಗಂಧಕುಟಿ' 143 ಡಿ, 10ನೇ ಮುಖ್ಯ ರಸ್ತೆ 4ನೆಯ ಅಡ್ಡರಸ್ತೆ, ಕಾಮಾಕ್ಷಿ ಆಸ್ಪತ್ರೆ ರಸ್ತೆ ಕುವೆಂಪು ನಗರ ಮೈಸೂರು-
ವೈ. ಸಿ. ಭಾನುಮತಿ	ಸಂಶೋಧಕರು ಕನ್ನಡ ಅಧ್ಯಯನಸಂಸ್ಥೆ, ಮಾನಸಗಂಗೋತ್ರಿ ಮೈಸೂರು
ಕೆ. ಮೊಹಮದ್ ಷರೀಫ್	ಶಾಸನ ಸಂಶೋಧಕರು. ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು
ಡಾ. ಸೂರ್ಯನಾಥ ಕಾಮತ್	ಸಂಪಾದಕರು ಕರ್ನಾಟಕ ಗೆಸೆಟಿಯರ್ ಕಾವೇರಿಭವನ ಕೆಂಪೇಗೌಡರಸ್ತೆ ಬೆಂಗಳೂರು
ವಿ. ಎನ್. ಶಿವರಾಮು	ಸಂಪಾದಕ ಜಾನಪದಜಗತ್ತು, ಕರ್ನಾಟಕ ಜಾನಪದಪರಿಷತ್ತು ಕುಮಾರಪಾರ್ಕ್ ಪಶ್ಚಿಮ ಬೆಂಗಳೂರು.
ಡಾ. ಸೋಮಶೇಖರಗೌಡ	ಅಧ್ಯಾಪಕರು ಭಾಷಾಶಾಸ್ತ್ರ ವಿಭಾಗ ಕನ್ನಡ ಅಧ್ಯಯನಸಂಸ್ಥೆ ಮಾನಸ ಗಂಗೋತ್ರಿ ಮೈಸೂರು
ಸದಾಶಿವ ಎಣ್ಣೆಹೊಳೆ	ಸಹಾಯಕ ಸಂಶೋಧಕರು ಪ್ರಸಾರಾಂಗ ಮಾನಸಗಂಗೋತ್ರಿ ಮೈಸೂರು
ಎಂ. ಕೆ. ಕೆಂಪೇಗೌಡ	ಕನ್ನಡ ಅಧ್ಯಾಪಕರು ವಿದ್ಯಾವರ್ಧಕ ಕಾಲೇಜು ಮೈಸೂರು.
ಎಚ್. ಬಿಳಿಗೌಡ	ಕನ್ನಡ ಅಧ್ಯಾಪಕರು ಭಾರತೀಕಾಲೇಜು ಕಾಳ ಮುದ್ದನ ದೊಡ್ಡಿ ಮಂಡ್ಯ ಜಿಲ್ಲೆ.
ಜಿ. ವಿ. ದಾಸೇಗೌಡ, (ಜಿವಿಡಿ)	ಕನ್ನಡ ಅಧ್ಯಾಪಕರು ಬಾಲಕರ ಸರ್ಕಾರಿ ಕಾಲೇಜು ಮಂಡ್ಯ.
ಎಚ್. ಕೆ. ವೀರಣ್ಣಗೌಡ	ಮಾಜಿ ಲೋಕೋಪಯೋಗಿ ಸಚಿವರು ತೋಟದ ಮನೆ ಮದ್ದೂರು
ಡಾ. ಪದ್ಮಾಶೇಖರ್	ಕನ್ನಡಅಧ್ಯಾಪಕರು ಪ್ರಥಮ ದರ್ಜೆ ಕಾಲೇಜು ಹುಣಸೂರು,

ಎಚ್. ಎಸ್. ಮುದ್ದೇಗೌಡ	ಅಧ್ಯಾಪಕರು ಪಿ ಇ ಎಸ್ ಸಂಜೆ ಕಾಲೇಜು ಮಂಡ್ಯ.
ಎ. ಸಿ. ಮಾದೇಗೌಡ	ಸ್ವಾತಂತ್ರ್ಯ ಹೋರಾಟಗಾರರು ಸುಭಾಶ್ ನಗರ ಮಂಡ್ಯ.
ನಾಗಚಂದ್ರ	2912 6ನೇ ತಿರುವು ಚಾಮುಂಡಿಪುರಂ ಮೈಸೂರು
ಉಮಾಗಂಗಾಧರಗೌಡ	ಜಿಲ್ಲಾ ಪರಿಷತ್ ಸದಸ್ಯೆ ಕೊಪ್ಪ ಮಂಡ್ಯ ಜಿಲ್ಲೆ.
ಭಾರತೀ ಪುತ್ರ	ಶ್ರೀ ಗುರುವಯ್ಯ ಮುನ್ಸೀಫ್ ನ್ಯಾಯಾಲಯ ನಾಗಮಂಗಲ
ಎಚ್. ಎಸ್. ಕೆ.	ಆರನೆ ಮುಖ್ಯರಸ್ತೆ ಸರಸ್ವತೀಪುರಂ ಮೈಸೂರು.
ನಗುವನ ಹಳ್ಳಿ ಪಿ. ರತ್ನ	ಸಹಾಯಕ ಸಂಶೋಧಕರು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ ಮೈಸೂರು.
ಪದ್ಮಾ ಕೆಂಪೇಗೌಡ	ನಂ. 342 4 5ನೇ ಬೀದಿ, ಸುಭಾಶ್ ನಗರ ಮಂಡ್ಯ.
ಕೆ. ಭೈರವಮೂರ್ತಿ	ಉಪ ಪಧ್ಯಾಪಕರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ಮೈಸೂರು.
46. ಕೆ. ಆರ್. ಶೇಷಗಿರಿ	ಸಂಶೋಧಕರು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ ಮೈಸೂರು.
47. ಎಚ್.ವಿ. ಸುಬ್ಬರಾಮಯ್ಯ	ಸ್ವಾತಂತ್ರ್ಯ ಹೋರಾಟಗಾರರು ಮೈಸೂರು
48. ಎನ್. ಎಸ್. ಶಾರದಪ್ರಸಾದ್	ಭಾಷಾಂತರಸಹಾಯಕರು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ ಮೈಸೂರು


ಸಿಂಗಾರ
ಸಿಂಗಾರಿಗೌಡರ